1991

# ಆಸ್ತಿಕ ಬಂಧುಗಳಲ್ಲಿ ಒಂದು ವಿನಮ್ರ ಮನವಿ

1 ಶ್ರೀ ಸಿದ್ಧಗಂಗಾ ಮಠದಲ್ಲಿ ನಿತ್ಯ ನಾಲ್ಕು ಸಹಸ್ರ ವಿದ್ಯಾರ್ಥಿಗಳಿಗೆ ದಾಸೋಹ ವ್ಯವಸ್ಥೆ ನಡೆಯುತ್ತಿದೆ.

2 ನಾಲ್ಕು ಸಹಸ್ರ ವಿದ್ಯಾರ್ಥಿಗಳು ವಿವಿಧ ಸಮಾಜದಿಂದ ಬಂದವರಾಗಿರುತ್ತಾರೆ. ಜಾತ್ಯತೀತ ಮನೋಧರ್ಮವನ್ನು ರೂಢಿಸಿಕೊಂಡು ಬೆಳೆಯುವ ಮುಕ್ತ ವಾತಾವರಣ ಇಲ್ಲಿನ ವೈಶಿಷ್ಟ್ಯ.

3 ನಿತ್ಯ ಬರುವ ಸಹಸ್ರ ಸಹಸ್ರ ಯಾತ್ರಾರ್ಥಿಗಳಿಗೂ ದಾಸೋಹ ನಡೆಯುತ್ತಿದೆ.

4 **"ಸಿದ್ಧಗಂಗೆಯ ಊಟ ಶಿವಗಂಗೆಯ ನೋಟ"** ಎಂಬುದು ಗಾದೆ ಮಾತಾಗಿದೆ.

5 **" ಪ್ರಸಾದ ತೆಗೆದು ಕೊಂಡು ಹೋಗಿ "**–ಎಂಬುದೇ ಪರಮ ಪೂಜ್ಯ **ಶ್ರೀ ಶ್ರೀ ಗಳವರು** ಕ್ಷೇತ್ರಾರ್ಥಿಗಳಿಗೆಲ್ಲ ಹೇಳುವ ನಿತ್ಯ ಪಂಚಾಕ್ಷರಿ ಮಂತ್ರ

6 ಇಂಥ ದಾಸೋಹ ಮಣಿಹದಲ್ಲಿ ನಿಮ್ಮದೂ ಕಾಣಿಕೆ ಸಲ್ಲಿಸಲು ಅವಕಾಶವಿರುತ್ತದೆ.

7 ದಾಸೋಹಕ್ಕೆ ಧನ-ಧಾನ್ಯ ರೂಪದಲ್ಲಿ ಯಥಾಶಕ್ತಿ ಕಾಣಿಕೆ ಅರ್ಪಿಸಿ ಧನ್ಯರಾಗಲು ಇದೊಂದು ಅಪೂರ್ವ ಅವಕಾಶ.

8 ನೀವು ನೀಡುವ ಒಂದು ಸೇರು ಧಾನ್ಯ, ಒಂದು ರೂಪಾಯಿ ಸಾರ್ಥಕ ವಿನಿಯೋಗಕ್ಕೆ ಮೀಸಲಾಗುತ್ತದೆ.

9 ನೀವೂ ದಾಸೋಹದಲ್ಲಿ ಭಾಗಿಗಳಾಗುವ ಪುಣ್ಯ ಸಂಕಲ್ಪ ಇಂದೇ ಮಾಡುತ್ತೀರಾಗಿ **' ಸಿದ್ಧಗಂಗಾ '** ಆಶಿಸುತ್ತದೆ.

# ಸಿದ್ಧಗಂಗಾ

ಸಂಪುಟ–27. ಸಂಚಿಕೆ–1. ಜನವರಿ–1991.

## ಶ್ರೀ ಸಿದ್ಧಗಂಗಾ ಗುರುಕರುಣ ತ್ರಿವಿಧಿ

ಭಕ್ತಿ ನಿಜವೈರಾಗ್ಯ ಸಂಗಮವೆ ಶ್ರೀಗುರುವೆ
ಲಿಂಗದಂಕುರವೆ ನನ್ನ ತಂದೆ। ಪೊಡಮಡುವೆ
ಸಿದ್ಧಗಂಗಾ ಗುರುವೆ ಕೃಪೆಯಾಗು॥

ಗುರು ತಂದೆ ಗುರು ತಾಯಿ ಸದ್ಭಕ್ತಿ ಸಾರಾಯ
ಮರ್ತ್ಯ ಲೋಕಕೆ ಬಂದ ಶಿವಬೆಳಕೆ। ಪೊಡಮಡುವೆ
ಸಿದ್ಧಗಂಗಾ ಗುರುವೆ ಕೃಪೆಯಾಗು॥

ನಿರ್ಮಾಯ ನಿರ್ಭಾವ ನಿರ್ಗುಣ ಶ್ರೀನಿಲವೆ
ಎನ್ನೆದೆಯ ಜ್ವಲಿಸಿರುವ ಶ್ರೀಗುರುವೆ। ಪೊಡಮಡುವೆ
ಸಿದ್ಧಗಂಗಾ ಗುರುವೆ ಕೃಪೆಯಾಗು॥

—ಹೆಚ್. ವಿ. ವೀರಭದ್ರಯ್ಯ.

| ಲೇಖನ | ಲೇಖಕರು | ಪುಟ |
|---|---|---|
| * ಶ್ರೀವಾಣಿ | | 5 |
| * ಶ್ರೀ ಸಿದ್ಧಲಿಂಗೇಶ್ವರ ವಚನ | | 7 |
| * ಸಂಪಾದಕೀಯ | | 9 |
| * ಮದುದ್ವಾನೇಶ್ವರ ಶತಕಂ | | 11 |
| * ಜನಪದ ಸಾಹಿತ್ಯದಲ್ಲಿ ಬಸವಣ್ಣನವರು | ಪ್ರೊ. ಸಿದ್ದಣ್ಣ ಲಂಗೋಟಿ | 12 |
| * ವಿದ್ಯಾರ್ಥಿ ಜೀವನದ ಬೆಳಕು ಸರಣಿ | ಬಿ. ಎಸ್. ಕೃಷ್ಣಮೂರ್ತಿ. | 17 |
| * ವಾಙ್ಮಯ ತಪಸ್ಸು | ಎಂ. ಮಾಧವಪ್ಪೈ | 18 |
| * ವಿಜ್ಞಾನ ಮತ್ತು ಆಧ್ಯಾತ್ಮ | ಹೆಚ್. ಎಸ್. ನರಸಿಂಹಜೀಯರ್. | 23 |
| * ನಾಡು-ನುಡಿಗಾಗಿ | ಎನ್. ಎಸ್. ಅಶ್ವತ್ಥಲಕ್ಷಮ್ಮ. | 27 |
| * ನೀತಿ ಶೀಲ ಪ್ರಗತಿ (ಚಿಂತನ) | ಜೆ. ಶಾರದಾ ರಾಜಶೇಖರ್ | 28 |
| * ನಗೆ ನೀತಿ-೧ | ಆ॥ ವಿ॥ ಡಾ॥ ಬಸವರಾಜಶಾಸ್ತ್ರಿಗಳು. | 31 |
| * ತೋಟಗಾರಿಕೆ ಉದ್ಯಮ | ಡಿ. ವೆಂಕಟರಾವ್. | 33 |
| * ಜನನ ಬಾಲ್ಯ "ವರತಪಸ್ವಿ" | | 36 |
| * ಎರೇಹುಳುವಿನ ಮಾರಾಟ | ಬಿ. ಸುಬ್ರಾಯ ಅಡಿಗ | 39 |



# ಶ್ರೀ ವಾಣಿ

ಪ್ರಪಂಚ ಯಾರಿಗೋಸ್ಕರ ? ಪ್ರಶ್ನೆಗೆ ಎದುರಾಗುವ ಉತ್ತರ ಪ್ರಪಂಚ ಮಾನವನಿಗಾಗಿ, ಅಂದ ಮೇಲೆ ಪ್ರಪಂಚದ ಬದುಕಿಗೆ ಅರ್ಥಬರುವುದು ಮಾನವನಿಂದ ತಾನೆ ? ಏನುಮಾಡಿದರೆ ಅಂಥ ಅರ್ಥ ಪ್ರಾಪ್ತವಾಗಬಹುದು ? ಉತ್ತರ ಸಿದ್ಧವಾಗಿದೆ- "ಸಕಲ ಜೀವರಿಗೆ ಲೇಸನ್ನು ಬಯಸುವುದು." ಕೇವಲ ಬಯಸುವುದರಿಂದ ಮಾತ್ರವಲ್ಲ ಅರ್ಥವಂತಿಕೆಯಿಂದ ಆಚರಣೆಗೆ ತರುವುದು. ಹಾಗೆ ಆಚರಿಸಿ ಸಂದೇಶ ನೀಡಿ ಹೋಗಿರುವ ಅಸಂಖ್ಯಾತ ಮಹಾನುಭಾವರ ಜೀವನ ನಮ್ಮ ಕಣ್ಣಮುಂದಿದೆ. "ಎಲ್ಲರೊಳಗೊಂದಾಗಿ" ಬಾಳುವ ಕಲೆಯನ್ನು ಕಲಿಸಿಕೊಟ್ಟಿದ್ದಾರೆ. ಎಲ್ಲರಿಗಾಗಿ ನಾನು, ನನಗಾಗಿ ಎಲ್ಲರಲ್ಲ ಎಂಬ ದಿವ್ಯಮಂತ್ರ ನಮ್ಮದಾಗಬೇಕು. ನಮ್ಮ ಹಿರಿಯರು ನಮಗೆ ತುಂಬ ಮಹತ್ವಪೂರ್ಣವಾದ ಐಶ್ವರ್ಯವನ್ನು ಬಿಟ್ಟುಹೋಗಿದ್ದಾರೆ. ಆ ಐಶ್ವರ್ಯ ಬೆಳ್ಳಿ ಬಂಗಾರವಲ್ಲ, ಪದವಿ ಪಟ್ಟಗಳಲ್ಲ, ಭೋಗಲಾಲಸೆಗಳಲ್ಲ, ಅಧಿಕಾರ **ಅಂತಸ್ತುಗಳಲ್ಲ,** ಪರಿಶುದ್ಧ ಶೀಲ ಸಂಪತ್ತು. ನೈತಿಕ ಬಂಡವಾಳ. ಧರ್ಮದ ಮೂಲಧನ ನೈತಿಕತೆ. ಅದರಿಂದ ವಿಮುಖರಾದರೆ ಜೀವನಕ್ಕೆ ಅರ್ಥವಿಲ್ಲ. ಕೆಡಕನ್ನು ಬಿಡಬೇಕು. ಒಳ್ಳೆಯದನ್ನು ಸ್ವೀಕರಿಸಬೇಕು. ಮಾತು, ಮನ, ಕೃತಿಗಳಲ್ಲಿ ಒಳಿತನ್ನು ತುಂಬಿಕೊಳ್ಳಬೇಕು; ಒಳಿತನ್ನೇ ಆಚರಿಸಬೇಕು. ಬದುಕಿನಲ್ಲಿ ಕಲಿಯುವುದು ಬೆಟ್ಟದಷ್ಟಿದೆ. ಎಲ್ಲವನ್ನೂ ಕಲಿಯಲಾಗುವುದು ದುಸ್ತರ. ಆದರೆ ಕಲಿತದ್ದು ಪ್ರಪಂಚದ ಅರ್ಥವಂತಿಕೆಗೆ ಸಹಾಯಕವಾಗಬೇಕು. ಜೀವನದ ಹೋರಾಟದಲ್ಲಿ ಕಳೆದುಕೊಳ್ಳಬೇಕಾದುದು ಬೇಕಾದಷ್ಟಿದೆ; ಗಳಿಸಿಕೊಳ್ಳಬೇಕಾದದೂ ಅಪಾರವಾಗಿದೆ. ಕಳೆದುಕೊಳ್ಳಬೇಕಾದುದು ಯಾವುದು ? ಕಾಮ, ಕ್ರೋಧ, ಮೋಹ, ಮದ, ಮತ್ಸರ, ಲೋಭ ಮುಂತಾದವುಗಳು ಎಂದು ನಮ್ಮ ಪರಂಪರೆ ಸಾರಿ ಸಾರಿ ಹೇಳುತ್ತಲಿದೆ. ಗಳಿಸಿಕೊಳ್ಳಬೇಕಾದುದು ಏನು? ಪ್ರೀತಿ, ಸಹಬಾಳ್ವೆ, ದುಡಿಮೆ, ದೈವಶಕ್ತಿ ಎಂಬುದನ್ನು ಅದೇ ಪರಂಪರೆ ಬದುಕಿ ತೋರಿಸಿದೆ. ಭರತಖಂಡದ ಸಂಸ್ಕೃತಿಯಂತೂ ಜಗತ್ತಿಗೆ ನೀಡಿದ ಅಮೂಲ್ಯ ಕಾಣಿಕೆ ಆಧ್ಯಾತ್ಮಿಕ ಸಂಪತ್ತು. ಅದರ ಅನುಯಾಯಿಗಳಾದ, ವಾರಸುದಾರರಾದ ನಾವಿಂದು ಮಂದಿರ- ಮಸೀದಿಗಳ ಹೆಸರಲ್ಲಿ ಜೀವ ಹತ್ಯೆಗೆ ಧಾವಿಸುತ್ತಿದ್ದೇವೆ. ನಮ್ಮ ಭವಿಷ್ಯ ಜನಾಂಗಕ್ಕೆ ಯಾವ ಆದರ್ಶವನ್ನಿಂದು ಕೊಟ್ಟಿದ್ದೇವೆ ಎಂಬುದರ ಚಿಂತನ ನಡೆಯಬೇಕು "ಕೂಡಲಸಂಗಮ. ದೇವನನ್ನು ಒಲಿಸಲು ಬಂದ ಪ್ರಸಾದಕಾಯ'ವನ್ನು "ಮರ್ತ್ಯವೆಂಬುದನ್ನು ಕರ್ತಾರನ ಕಮ್ಮಟ" ವನ್ನಾಗಿಸಲು ಮೀಸಲಿಡಬೇಕೆ? ಹೊರತು, ವಿನಾಶಕಾರಕ ಕೆಲಸಗಳಿಲ್ಲ. (27-12-90 ರಂದು ಚಿಕ್ಕಬೆಳವಂಗಲದಲ್ಲಿ ನೀಡಿದ ಆಶೀರ್ವಚನದಿಂದ ಸಂಗ್ರಹಿಸಿದ್ದು )

# ಸಿದ್ಧಗಂಗೆ ಜಾತ್ರೆ – ರೈತರುಗಳಿಗೆ ಒಂದು ಮನವಿ

ಮಹಾಶಿವರಾತ್ರಿಯ ಸಂದರ್ಭದಲ್ಲಿ ಸಿದ್ಧಗಂಗೆ ಜಾತ್ರೆ ಸುಮಾರು ಒಂದು ಶತಮಾನದಿಂದ ಅವಿಚ್ಛಿನ್ನವಾಗಿ ನಡೆದು ಬರುತ್ತಿದೆ. ಕರ್ನಾಟಕ ರಾಜ್ಯದ ಜಾತ್ರೆಗಳಲ್ಲಿ ಇದು ವಿಶೇಷ ವೈಶಿಷ್ಟತೆಗಳಿಂದ ಕೂಡಿದೆ. ಸಾಂಸ್ಕೃತಿಕವಾಗಿ, ಧಾರ್ಮಿಕವಾಗಿ, ಸಾಮಾಜಿಕವಾಗಿ ರಾಜ್ಯದ ಜನತೆಯ ಮೇಲೆ ವಿಶೇಷ ಪ್ರಭಾವವನ್ನುಂಟುಮಾಡಿದೆ. ಲಕ್ಷಗಟ್ಟಲೆ ಯಾತ್ರಾರ್ಥಿಗಳು ಈ ಸಂದರ್ಭದಲ್ಲಿ ಭೇಟಿಕೊಡುತ್ತಾರೆ. ಇವರೆಂಗೆಲ್ಲಾ ಈ ಸಂದರ್ಭದಲ್ಲಿ ಶ್ರೀಮಠದಿಂದ ಪ್ರಸಾದ ವ್ಯವಸ್ಥೆ ಮಾಡಲಾಗುತ್ತದೆ. ಇದಕ್ಕಾಗಿ ಕೆಲವಾರು ಪೂರ್ವಸಿದ್ಧತೆಗಳನ್ನು ಮಾಡಿಕೊಳ್ಳಬೇಕಾಗುತ್ತದೆ.

ಜತೆಗೆ ಈ ಸಂದರ್ಭದಲ್ಲಿ ಗ್ರಾಮೀಣ ರೈತಬಾಂಧವರ ತಿಳುವಳಿಕೆಗಾಗಿ ಕಳೆದ 24 ವರ್ಷಗಳಿಂದ ಕೃಷಿ ಮತ್ತು ಕೈಗಾರಿಕಾ ವಸ್ತು ಪ್ರದರ್ಶನ ಏರ್ಪಡಿಸಲಾಗುತ್ತಿದೆ. ನಾಡಿನ ಅಭಿವೃದ್ಧಿ ಕಾರ್ಯಗಳ ಬಗ್ಗೆ ಈ ವಸ್ತುಪ್ರದರ್ಶನ ಜ್ಞಾನದೀವಿಗೆಯಾಗಿದೆ. ಇದರ ಅಂಗವಾಗಿ ಅನೇಕ ಪೂರ್ವಭಾವಿ ಕೆಲಸಗಳನ್ನು ಮಾಡಿಕೊಳ್ಳಬೇಕಾಗುತ್ತದೆ.

ಜಾತ್ರಾಸೌಲಭ್ಯ ಕಾರ್ಯಗಳು ಸಿದ್ಧತೆಯಲ್ಲಿರುವಾಗಲೇ ರೈತರು ತಮ್ಮ ರಾಸುಗಳೊಡಿಂಗೆ ನಿಗಧಿಪಡಿಸಿದ ಮುಂಚೆ ಜಾತ್ರೆಗೆ ಬರುವುದು ಇತ್ತೀಚೀನ ವರ್ಷಗಳಲ್ಲಿ ಸಾಮಾನ್ಯವಾಗಿದೆ. ಇದರಿಂದ ವ್ಯವಸ್ಥಾಪಕರಿಗೆ ಅನೇಕ ಅನಾನುಕೂಲಗಳಾಗುತ್ತವೆ. ಜಾತ್ರೆಯಲ್ಲಿ ದೇವರ ಉತ್ಸವಗಳು, ಕೃಷಿ ಮತ್ತು ಕೈಗಾರಿಕಾ ವಸ್ತು ಪ್ರದರ್ಶನ ಜನಭರಿತವಾಗಿರುವ ಸಂದರ್ಭದಲ್ಲಿ ನೆರವೇರಿದರೆ ಶೋಭೆಯನ್ನುಂಟುಮಾಡಿ ಆಕರ್ಷಣೆಯುವಾಗಿರುತ್ತವೆ. ಜನಗಳಿದ್ದರೆ ಜಾತ್ರೆ.

ಜಾತ್ರಾ ಕಾರ್ಯಕ್ರಮಗಳು ಪ್ರಾರಂಭವಾಗುವ 8–10 ದಿವಸಗಳು ಮೊದಲೇ ರೈತರು ಜಾತ್ರೆಗೆ ಬಂದು ಸೇರಿ ನಂತರ ಖಾಲಿಯಾಗುವದರಿಂದ ರೈತರಿಗಾಗಿ ಪರಮ ಪೂಜ್ಯ ಡಾ|| ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರು ಲಕ್ಷಾಂತರ ರೂಗಳು ಖರ್ಚುಮಾಡಿ ಏರ್ಪಡಿಸಿರುವ ಕೃಷಿ–ಕೈಗಾರಿಕಾ ವಸ್ತು ಪ್ರದರ್ಶನ–ದೇವರ ಉತ್ಸವಗಳಉದ್ದೇಶ್ಯ ಸಾರ್ಥಕವಾಗುತ್ತಿಲ್ಲ. ಆದ್ದರಿಂದ ನಿಗಧಿಪಡಿಸಿರುವಂತೆ ಬಂದು ಇವುಗಳ ಪ್ರಯೋಜನ ಪಡೆಯಲು ಕೋರಲಾಗಿದೆ.

ಈ ಪತ್ರಿಕೆಯಹೊರ ಪುಟದಲ್ಲಿ ಜಾತ್ರೆಯ ಕಾರ್ಯಗಳನ್ನು ಮುದ್ರಿಸಲಾಗಿದೆ. ಇದನ್ನು ಗಮನಿಸಿ, ಅದರಂತೆ ಜಾತ್ರೆ ಪ್ರಾರಂಭವಾಗುವ ಒಂದೆರಡು ದಿನ ಮುನ್ನಾ ಆಗಮಿಸಿ ಕೊನೆಯವರೆಗೂ ಇದ್ದು ಎಲ್ಲಾ ಕಾರ್ಯಗಳಲ್ಲಿ ಭಾಗಿಗಳಾಗಲು ಮನವಿ. ತಾ|| 4-2-1991 ಸೋಮವಾರದ ನಂತರವೇ ರೈತರು ಜಾತ್ರೆಗೆ ಬಂದು ಸೇರುವುದು.

ಜಾತ್ರೆ ವೈಭವಯುತವಾಗಿ ಮುನ್ನಡೆಯಲು ಎಲ್ಲರ ಸಹಾಯ ಸಹಕಾರವನ್ನು ತುಂಬು ಹೃದಯದಿಂದ ಸ್ವಾಗತಿಸುತ್ತೇವೆ.

ಹೆಚ್.ಬಿ. ಗಂಗಾಧರಯ್ಯ,
ಪ್ರಕಾಶಕರು.

# ಶ್ರೀ ಸಿದ್ಧಲಿಂಗೇಶ್ವರ ವಚನ



ಪಟ್ಟಣ ಪಾಳೆಯದೊಳಗೆ ವ್ಯವಹರಿಸುತ್ತಿಪ್ಪ ಸೆಟ್ಟಿಗಾತಿಗೆ
ಒಬ್ಬ ಹುಟ್ಟುಗುರುಡನು ಗಂಡನಾಗಿಪ್ಪನು ನೋಡಾ
ಪಟ್ಟಣ ಬೆಂದು ಪಾಳೆಯುವಳಿದು, ಸೆಟ್ಟಿಕಾತಿಯ ಮನೆವಾರ್ತೆಕೆಟ್ಟು
ಹುಟ್ಟು ಗುರುಡಂಗೆ ಕಣ್ಣು ಬಂದಲ್ಲದೆ
ಮುಂದಣ ಬಟ್ಟೆ ಯಾರಿಗೂ ಕಾಣ ಬಾರದು ನೋಡಾ
ಸೂಕ್ಷ್ಮ ಶಿವತತ್ತ್ವದ ಹಾದಿ ಎಲ್ಲರಿಗೆ ಸಾಧ್ಯವೇ ? ಸಾಧ್ಯವಿಲ್ಲ ಕಾಣಾ
ಶಿವಜ್ಞಾನ ಸಂಪನ್ನರಿಗಲ್ಲದೆ
ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೇ.

ದೇಹದಲ್ಲಿ ಕರಣೇಂದ್ರಿಯಗಳಿವೆ. ಅವು ದೇಹ ಸಂಬಂಧವಾದ ವ್ಯಾಪಾರದಲ್ಲಿ ತೊಡಗಿವೆ. ಅವುಗಳ ಒಡೆತನ ಹುಟ್ಟು ಗುರುಡನಾದ **ಜೀವನ** ಕೈಯಲ್ಲಿದೆ. ಆ ಜೀವನ ದೇಹಭಾವ ಶ್ರೀಗುರುವಿನ ವೇದಾಮಂತ್ರ ಕ್ರಿಯೋಪ ದೇಶದಿಂದ ಪರಿಹಾರವಾಗಿದೆ. ಅದರಿಂದಾಗಿ ದೇಹ ಸಂಬಂಧವಾದ ಸಕಲ ಕರಣೇಂದ್ರಿಯಗಳು ನಿವೃತ್ತಿಯಾಗಿವೆ, ವಿಷಯ ವಾಸನಾಯುಕ್ತವಾದ ಅವುಗಳ ಲೋಕಭಾವವಳಿದು ಜ್ಞಾನ ಭಾವ ಉಂಟಾಗಿದೆ. ಆ ಹುಟ್ಟು ಗುರುಡನಾದ ಜೀವನಿಗೆ ಗುರುವಿನುಪದೇಶದಿಂದ ಸುಜ್ಞಾನ ಉದಯವಾದು ದರಿಂದ ಮೋಕ್ಷ ಮಾರ್ಗ ನಿದರ್ಶನವಾಯಿತಲ್ಲದೆ ಮತ್ತು ಅದರಿಂದಾಗಿ ಲಿಂಗಾಂಗ ಸಂಬಂಧಿಯಾದ ಸಮರಸಜ್ಞಾನ ಕ್ರಿಯಾಚಾರ ಸಂಪತ್ತನ್ನುಳ್ಳ ಶಿವಶರಣನಿಗೆ ಅತಿ ನಿಗೂಢವಾದ ಷಟ್‌ಸ್ಥಲ ಜ್ಞಾನ ಕ್ರಿಯಾಚಾರದ ಪದ್ಧತಿ ಸಾಧ್ಯವಾಗುವುದೇ ಹೊರತು ಉಳಿದ ದ್ವೈತ, ಅದ್ವೈತ, ಹಠ ಕರ್ಮಿಗಳಿಗೆ ಸಾಧ್ಯವಾಗದು ಎನ್ನುತ್ತದೆ ವಚನ.

# ಸಿದ್ಧಗಂಗಾ

ಪ್ರಧಾನ ಸಂಪಾದಕರು
**ಪ॥ ಚನ್ನಪ್ಪ ಎರೇಸೀಮೆ**

* * *

ಸಂಪಾದಕರು
**ಹೆಚ್. ವಿ. ವೀರಭದ್ರಯ್ಯ**

* * *

ಸಹ ಸಂಪಾದಕರು
**ಬಿ. ವೀರಭದ್ರಯ್ಯ**
**ಪಿ. ಎನ್. ಚಂದ್ರಶೇಖರಯ್ಯ**

* * *

ಜಾಹೀರಾತು ವಿಭಾಗ
**ಎಂ. ರೇಣುಕಾರಾಧ್ಯ**

* * *

ವಿತರಣೆ ವಿಭಾಗ
**ಆರ್. ಎಸ್. ಮಲ್ಲೇಶಪ್ಪ**

* * *

ಪ್ರಕಾಶಕರು
**ಹೆಚ್. ಬಿ. ಗಂಗಾಧರಯ್ಯ**
ಹಳೆಯ ವಿದ್ಯಾರ್ಥಿ ಸಂಘದ ಪರವಾಗಿ

* * *

ಮುದ್ರಕರು
**ಶ್ರೀ ಸಿದ್ಧಲಿಂಗೇಶ್ವರಸ್ವಾಮಿ ಮುದ್ರಣಾಲಯ**

* * *

ಪ್ರಕಟಣೆಯ ಸ್ಥಳ
ಶ್ರೀ ಸಿದ್ಧಗಂಗಾಕ್ಷೇತ್ರ

ಚಂದಾ ವಿವರ
ವಾರ್ಷಿಕ ಚಂದಾ 25-00ರೂ
ಆಜೀವ ಸದಸ್ಯತ್ವ 250-00 ರೂ

## ಲೇಖಕರಲ್ಲಿ ಮನವಿ

'ಸಿದ್ಧಗಂಗಾ' ಶ್ರೀ ಸಿದ್ಧಗಂಗಾ ಮಠದಿಂದ ಪ್ರಕಟವಾಗುತ್ತಿರುವ ಮಾಸ ಪತ್ರಿಕೆ. ಶ್ರೀ ಮಠದ ಹಳೆಯ ವಿದ್ಯಾರ್ಥಿ ಸಂಘದ ಹೆಮ್ಮೆಯ ಸೇವಾ ಪುರವಣಿ ಮೇಲಾಗಿ ಶ್ರೀ ಮಠದ ಮುಖವಾಣಿ ಪೂಜ್ಯ ಶ್ರೀ ಶ್ರೀ ಡಾ॥ ಶಿವಕುಮಾರ ಮಹಾಸ್ವಾಮಿಗಳವರ ದಿವ್ಯ ಮಾರ್ಗದರ್ಶನದಲ್ಲಿ ಮುನ್ನಡೆದಿರುವ ಪತ್ರಿಕೆ. ತ್ರಿವಿಧ ದಾಸೋಹ ಸೇವಾ ತತ್ಪರತೆಯಿಂದ ಹೆಜ್ಜೆ ಹಾಕುತ್ತಿದೆ. ಈ ಧ್ಯೇಯ ಸಾಧನೆಗಾಗಿ ನಾಡಿನ ಗಣ್ಯ ಲೇಖಕರಿಂದ ಸಾಹಿತ್ಯ, ಸಂಸ್ಕೃತಿ, ಧರ್ಮ, ವಿಜ್ಞಾನ, ಶಿಕ್ಷಣ, ಇತಿಹಾಸ, ವೈಚಾರಿಕ, ಚಿಂತನ ಮುಂತಾದ ಲೇಖನಗಳನ್ನು ಸ್ವಾಗತಿಸುತ್ತದೆ. ಅಸ್ವೀಕೃತ ಲೇಖನಗಳನ್ನು ಪಡೆಯಲು ಸಾಕಷ್ಟು ಅಂಚೆಸ್ಟಾಂಪುಗಳನ್ನು ಲಗತ್ತಿಸಿರಬೇಕು. ಲೇಖನಗಳಲ್ಲಿ ಸೂಕ್ತ ಬದಲಾವಣೆ ಮಾಡಿ ಕೊಳ್ಳುವ ಅಧಿಕಾರ ಸಂಪಾದಕರಿಗಿದೆ. ಅನುವಾದ, ರೂಪಾಂತರ ಲೇಖನಗಳಿಗೆ ಮೂಲ ಕೃತಿಕಾರರ ಅನುಮತಿ ಪಡೆದಿರಬೇಕು. ಸ್ವೀಕೃತ ಲೇಖನಗಳಿಗೆ ಸೂಕ್ತ ಸಂಭಾವನೆ ಕೊಡಲಾಗುವುದು.

**"ಸಂಪಾದಕರು"**
**'ಸಿದ್ಧಗಂಗಾ' ಕನ್ನಡ ಮಾಸಪತ್ರಿಕೆ**
ಶ್ರೀ ಸಿದ್ಧಗಂಗಾ ಕ್ಷೇತ್ರ-572104
ತುಮಕೂರು ಜಿಲ್ಲೆ.
ಇವರಿಗೆ ಕಳುಹಿಸಿಕೊಡಬೇಕಾಗಿ ಪ್ರಾರ್ಥನೆ

# ಸಂಪಾದಕೀಯ

**ಆತ್ಮಬಲ ನಮಗಿದೆಯೆ ?**

ಸಂಕ್ರಾಂತಿಯ ಆಚರಣೆ ಸಂತೋಷಕ್ಕಾಗಿ ಆದರೆ ನಿಜವಾಗಿಯೂ ಇಂದು ಸಂತೋಷಪಡುವ ಸ್ಥಿತಿಯಲ್ಲಿದ್ದೇವೆಯೇ ಭಾರತೀಯರು ? ಪ್ರಪಂಚದ ಒಂದು ಮೂಲೆಯಲ್ಲಿ ಯುದ್ಧದ ತುತ್ತೂರಿ ಮೊಳಗಿದೆ. ಪರಿಣಾಮವಾಗಿ ಭೀಕರ ಭವಿಷ್ಯ ಕಾದಿದೆ. ಈಗಾಗಲೇ ಮಿತಿಮೀರಿದ ಏರಿದ ಬೆಲೆ, ತೆರಿಗೆಯಹೊರೆ, ಎಲ್ಲೆಯೇ ಇಲ್ಲದ ಭ್ರಷ್ಟಾಚಾರ, ಅ ರಾಜಕತೆಗಳ ತಾಂಡವ, ಹಿಂಸೆಗಳಿಂದ ತತ್ತರಿಸಿ ಹೋಗಿರುವ ಮಧ್ಯಮ ಹಾಗೂ ಸಾಮಾನ್ಯವರ್ಗದ ಜನತೆಗೆ ಸಂಕ್ರಾಂತಿ ಮುದ ತಂದೀತೆ ? ನಡೆಯುವ ಯುದ್ಧದಿಂದ ಮೇಲೆದ್ದು ನಿಲ್ಲುವ ಶಕ್ತಿ ಸಾಮರ್ಥ್ಯ ನಮ್ಮಲ್ಲುಂಟೆ ? ಯಾವುದೇ ಕಾಲವಾಗಲಿ ಯಾರ ಮುಖಂಡತ್ವವೇ ಇರಲಿ ಯುದ್ಧವೆಂಬುದು ಮನುಕುಲಕ್ಕೆ ಒಂದು ಘನ ಘೋರಶಾಪ. ಶತ ಶತಮಾನಗಳ ಚರಿತ್ರೆ ಅದನ್ನು ಒತ್ತಿ ಹೇಳಿದೆ. ಆದರೂ ಯುದ್ಧ ಒಂದಲ್ಲ ಒಂದು ರೂಪದಲ್ಲಿ, ಒಂದಲ್ಲ ಒಂದು ಕಾರಣಕ್ಕಾಗಿ ನಡೆದೇ ಇದೆ. ಯುದ್ಧದಿಂದಾಗುವ ಪರಿಣಾಮವನ್ನು ಊಹಿಸಿಕೊಂಡರೆ ಹೃದಯನಿಂತು ಹೋದಂತಾಗುತ್ತದೆ. ಇಂಥ ಪರಿಸ್ಥಿಯಲ್ಲಿ ಭಾರತೀಯನ ಕರ್ತವ್ಯ ಪ್ರಜ್ಞೆ ಜಾಗೃತವಾಗಬೇಕು. ರಾಷ್ಟ್ರ ಎದುರಿಸಬಹುದಾದ–ಯುದ್ಧ ಪರಿಣಾಮದಿಂದಾಗಬಹುದಾದ ಸಮಸ್ಯೆಗಳೆಲ್ಲವನ್ನೂ ಸಂಕಲ್ಪ ಚಿತ್ತದಿಂದ ಪರಿಹರಿಸಿಕೊಳ್ಳುವ ನಿರ್ಧಾರ ಕೈಗೊಳ್ಳಬೇಕು. ರಾಷ್ಟ್ರದ ಆರ್ಥಿಕ ವ್ಯವಸ್ಥೆಯಲ್ಲಿ ತಲೆದೋರಬಹುದಾದ ಏರು ಪೇರುಗಳನ್ನು ಸಮ ತೂಗಿಸಿಕೊಳ್ಳಲು ದುಡಿಮೆಯ ಅವಧಿಯನ್ನು ಹೆಚ್ಚಿಸಿಕೊಳ್ಳಬೇಕು. ಬರೀ ಅವಧಿ ಹೆಚ್ಚಾದರೆ ಸಾಲದು ಪ್ರಾಮಾಣಿಕ ದುಡಿಮೆ ರಾಷ್ಟ್ರಪ್ರಜ್ಞೆಯಿಂದ ನಡೆಯಬೇಕು. ರಜಾದಿನಗಳು ಕಡಿಮೆಯಾಗಬೇಕು. ಮುಷ್ಕರಗಳು ನಿಲ್ಲಬೇಕು. ಯಾವ ಕಾರ್ಖಾನೆಗಳೂ ಯಾವುದೇ ಕಾರಣಕ್ಕೂ ಮುಚ್ಚಬಾರದು.

ಅನಗತ್ಯ ಕಾರಣಕ್ಕೆ ವಿದ್ಯುತ್ ಸರಬರಾಜು ಬಳಕೆಯಾಗಬಾರದು, ಇಂಧನಕ್ಕಾಗಿ ಹಪಹಪಿಸುವ ಕೃತಕ ಅಭಾವ ಸೃಷ್ಟಿಯಾಗಬಾರದು. ದ್ವಿಚಕ್ರ ವಾಹನಗಳ ಓಡಾಟ ಹೆಚ್ಚಬಾರದು. ಬದಲಾಗಿ ಬೈಸಿಕಲ್ ಬಳಕೆ ಹೆಚ್ಚಾಗಬೇಕು. ಅದರಿಂದ ಪರಿಸರ ಮಾಲಿನ್ಯವೂ ಸಾಧಿಸೀತು. ರಾಜಕೀಯ ಪಕ್ಷಗಳು ಇನ್ನಾದರೂ ಕಲಹ, ಕಚ್ಚಾಟಗಳನ್ನು ಬಿಟ್ಟು ದೇಶದ ಹಿತ ದೃಷ್ಟಿಯಿಂದ ಲೋಕಸಭೆ, ರಾಜ್ಯಸಭೆ, ವಿಧಾನಸಭೆ, ವಿಧಾನ ಪರಿಷತ್‌ಗಳಲ್ಲಿ ಕಾರ್ಯನಿರತವಾಗಬೇಕು. ಕಾಲ ಕಾಲಕ್ಕೆ ನಿಗದಿತವೇಳೆಗೆ ರೂಪಿಸಿದ ಯೋಜನೆಗಳು ಪೂರೈಸಬೇಕು, ವಿನಾಕಾರಣ ವಿಳಂಬ ಸಲ್ಲದು. ಮುಂದಿನ ಜನಾಂಗ ಇಂದಿನವರನ್ನು ಶಪಿಸುವಂತಾಗಬಾರದು. ಮಂತ್ರಿಗಳ, ಶಾಸಕರ, ಅಧಿಕಾರಿಗಳ ಜೀವನ ವಿಧಾನದಲ್ಲಿ ಸುಧಾರಣೆಯಾಗಬೇಕು, ಸರಳ ಜೀವನವಾಗಿ ಮಾರ್ಪಾಡಾಗಬೇಕು. ಸಹಸ್ರಾರುಕೋಟಿ ಸಾಲದ ಹೊರೆ ಹೊತ್ತಿರುವ ಭಾರತೀಯರಿಗೆ ಇಂದು ಭೋಗ-ವೈಭವಗಳ ಬದುಕು ಆದರ್ಶಪೂರ್ಣವಲ್ಲ. ಸ್ವಾವಲಂಬನ ಬರುವವರೆಗೆ ಸಂಯಮದ ಬದುಕು ಬೇಕು. ಕೋಮುಕಲಹ, ಮಂದಿರ-ಮಸೀದಿ, ಅಧಿಕಾರ ಗದ್ದುಗೆಗಳಿಗಾಗಿ ಅಮಾಯಕರ ಬಲಿಯಾಗುವುದನ್ನು ವಿಚಾರವಂತರೆಲ್ಲ ನೈತಿಕ ಧೈರ್ಯ ಸ್ಥೈರ್ಯಗಳಿಂದ ಪ್ರತಿಭಟಿಸಬೇಕು. ಅನೈತಿಕ ಮಾರ್ಗದಿಂದ ಮುಖಂಡರಾಗುವವರನ್ನು ಮೂಲೋತ್ಪಾಟನ ಮಾಡಬೇಕು. ಯುವ ಜನಾಂಗ ಈಗ ದಾರಿತಪ್ಪದಂತೆ-ಈಗಾಗಲೇತಪ್ಪಿಸಾಕಷ್ಟು ಹಾಗಿಯಾಗಿರುವುವೇ ಸಾಕು-ಎಚ್ಚರಿಕೆಯಿಂದ ನೋಡಿಕೊಳ್ಳಬೇಕು. ಇದಕ್ಕೆಲ್ಲ ಸಂಕಲ್ಪಶಕ್ತಿ ಬೇಕು. ಅಂಥ ಆತ್ಮಬಲ ನಮ್ಮದಾಗಬಹುದೆ?

---

ಮಾನವತ್ವದ ಸಂಪಾದನೆ ಜೀವನದಲ್ಲಿ ಮೊದಲ ಹಂತ. ಆ ಹಂತ ಮುಟ್ಟಿದ ಮೇಲೆ ಅದರಲ್ಲೇ ಅವನು ತೃಪ್ತನಾಗಬಾರದು. ಅವನ ಅಂತಿಮ ಗುರಿ ಮಾನವತ್ವ ಮೀರಿ ದೇವತ್ವ ಸಂಪಾದನೆ ಮಾಡುವುದಾಗಿರಬೇಕು. ಜೀವನೇ ಶಿವನಾಗುವುದು, ಬ್ರಹ್ಮವಾಗುವುದು, ಅಂಗವೇ ಲಿಂಗವಾಗುವುದು.

**- ಶಿವಕುಮಾರ ವಾಣಿ.**

## ಶ್ರೀ ಮುದುದ್ದಾನೇಶ್ವರ ಶತಕಂ

(ಮುಂದುವರಿದುದು)

ಕಲ್ಲು ಕುಟಿಕಮನೆನೆದ ಭಾವಕೆ
ಕಲ್ಲೆ ವಿಗ್ರಹವೆನಿಸಿ ವರಗಳ
ಸಲ್ಲಿಸುತ್ತಿರೆ ಕಲ್ಲಿಗನ್ಯವೆನಿಪ್ಪ ಚೇತನವೂ ।
ಎಲ್ಲ ವರಗಳ ಕೊಡುವನಾಗನೆ
ಎಲ್ಲಿ ಕರೆದರು ಓಗೊಡನೆ ದೃಢ
ಶಾಲಿಯಾಗಿರುವಂತೆ ಉದ್ದಾನೇಶ ದಯವಾಗೋ ॥

ಮಣ್ಣ ನಂಬೀ ತನುವುಕುಂದಿತು
ಹೊನ್ನ ನಂಬೀ ಮನವು ಕುಂದಿತು.
ಹೆಣ್ಣು ತನುಮನ ಏಹಪರಂಗಳ ನುಂಗಿರೆವು ಮೂರೂ ।
ತನ್ನ ಸೇವೆಗೆ ಇವಕೆ ನಾನ
ಲ್ಲೆನ್ನೆದುಃಖವು ನಂದಿ ಸೌಖ್ಯಕೆ
ಕಣ್ಣುಬಂದಪುದೆಂದ ಉದ್ದಾನೇಶ ದಯವಾಗೋ ॥

ನರರ ಮನೆಯೊಳು ಸಾಕಲದಿದೆಂ
ದಿರುಳು ಹಗಲೂ ಕಾಡುತಿರುವರು
ಪರಕಿಸಲ್ಕಾನಕಿರದು ಶಾಂತಿಯದೊಂದು ಗೋವ್ಸಾಕೇ ।
ತರಗಸೇಕಿಂದ ಮೃತ ಕರೆವುದು.
ಪರನು ಶಾಂತಿಯ ತಹುದ ಗೋವನು
ಪೊರೆಯಿರೆಂದಾ ಜೀಯ ಉದ್ದಾನೇಶ ದಯವಾಗೋ ॥

ಲೋಕದೊಳು ಸಂಸಾರದಂಗಡಿ
ಯೇಕೆನಲು ಗುರುಶಿಶುವು ಗೋವ್ಗಳ
ನೇಕರ ತಿಥಿಗಳನ್ನು ಸೇವಿಸಿ ಭಾವಶುದ್ಧಿಯಲೀ ।
ಕಾಕುಮತಿಯಳಿದುಳಿದ ನಿಜಸುವಿ
ವೇಕನಿಧಿ ಸಂಗ್ರಹಿಸಲೆನುತರೆ
ಜೋಕೆಯರುಪಿದ ಜೀಯ ಉದ್ದಾನೇಶ ದಯವಾಗೋ ॥

ನೆರಳನತಿಥಿಗೆ ಕೊಡಲುಮನೆಯಿದು
ಕರುಹೆಯಡಿಗೆಯ ಮಾಡಲತಿಥಿಗೆ
ಧರಣಿ ಧಾನ್ಯಕೆ ಪಶುವು ಹೈನಿಗೆ ತರಳನವಸದಕೇ ।
ಸಿರಿಯ ಪಾತ್ರದಿ ದಾನ ಮಾಡಲು
ಹರನು ಕೊಟ್ಟಹವೆಂದು ತಿಳಿಸಿದ
ಶರಣ ಗಾತ್ರನೆ ಜೀಯ ಉದ್ದಾನೇಶ ದಯವಾಗೋ ॥

# ಜನಪದ ಸಾಹಿತ್ಯದಲ್ಲಿ ಬಸವಣ್ಣನವರು

ಪ್ರೊ. ಸಿದ್ದಣ್ಣ ಲಂಗೋಟಿ (ಚಾಂದಕವಠೆ)
ರಾಮದುರ್ಗ, 591123-ಬೆಳಗಾಂ ಜಿಲ್ಲೆ.

ಕಲ್ಯಾಣವೆಂಬ ಪ್ರಣತೆಯಲ್ಲಿ
ಭಕ್ತಿರಸವೆಂಬ ತೈಲವನೆರೆದು
ಆಚಾರವೆಂಬ ಬತ್ತಿಗೆ ಬಸವಣ್ಣನೆಂಬ
ಜ್ಯೋತಿಯ ಮುಟ್ಟಿಸಲು
ತೊಳಗಿ ಬೆಳಗುತ್ತಿದ್ದಿತಯ್ಯಾ ಶಿವನ ಪ್ರಕಾಶ
ಆ ಬೆಳಗಿನೊಳಗೂಪ್ಪುತಿರ್ದರಯ್ಯಾ
ಅಸಂಖ್ಯಾತ ಭಕ್ತಗಣಂಗಳು......

ಎಂದು ನಿರಂಜನ ಶರಣ ಅನುಭಾವಿ ಅಲ್ಲಮ ಪ್ರಭುವು ಜಗಜ್ಯೋತಿ ಬಸವೇಶ್ವರರನ್ನು ಸ್ತುತಿಸುವಲ್ಲಿ ಬಸವಣ್ಣನವರ ವ್ಯಕ್ತಿತ್ವ ಅವರ ಸಾಧನೆಯ ಮಹತ್ವ ಅರಿವಿಗೆ ಬರುತ್ತದೆ. ಅದೇ ರೀತಿಯಾಗಿ

ಮಹಾಮಹಿಮ ಸಂಗನ ಬಸವಣ್ಣನು
ಎನಗೆಯೂ ಗುರು ನಿನಗೆಯೂ ಗುರು
ಜಗವೆಲ್ಲಕ್ಕೆಯೂ ಗುರು ಕಾಣಾ ಗುಹೇಶ್ವರ

ಎಂದು ವಚನ ವಾಣಿಯ ಪ್ರಭೆಯನ್ನು ಬೀರುವಲ್ಲಿ ಕನ್ನಡ ನಾಡಿನಲ್ಲಿ ಹನ್ನೆರಡನೆಯ ಶತಮಾನದಲ್ಲಿ ಜನಿಸಿದ ಬಸವಣ್ಣನವರು ತಮ್ಮ ವಿಶ್ವ ಬಂಧುತ್ವ ವಿಶ್ವಮಾನತ್ವಗಳ ಸುಜ್ಞಾನ–ಸತ್ಕ್ರಿಯ–ಸದ್ಭಾವಗಳಿಂದಲೇ ವಿಶ್ವದ ಗುರು ವಿಶ್ವದ ಮಾರ್ಗದರ್ಶಕರಾದುದು ಗಮನಕ್ಕೆ ಬರುತ್ತದೆ.

ಶತಮಾನಗಳಿಂದ ಭರತ ಭೂಮಿಯಲ್ಲಿ (ಜಂಬೂದ್ವೀಪದಲ್ಲಿ) ಸನಾತನವೆಂದೆನಿಸಿ ಕೊಂಡು ಬಂದ ಶೈವ,ವೈದಿಕ, ಧರ್ಮ-ಮತಗಳು. ವರ್ಣಾಶ್ರಮದ ಜಾತೀಯತೆಯ ಹೊಲೆಗೆಸರಲ್ಲಿ ಸಿಲುಕಿ ಮಾನವ-ಮಾನವರಲ್ಲಿ, ಮೇಲು-ಕೀಳು, ಉಚ್ಚ-ನೀಚ, ಭೇದ-ಭಾವವಣಿಸತೊಡಗಿದಾಗ, ಪಂಡಿತರೆನಿಸಿಕೊಂಡ ಪುರೋಹಿತಶಾಹಿ ಜನರು ಅಜ್ಞ-ಮುಗ್ಧ ಜನರನ್ನು ತಮ್ಮ ಸ್ವಾರ್ಥಕ್ಕಾಗಿ ದೇವರು-ಧರ್ಮದ ಹೆಸರಿನಲ್ಲಿ ಸುಲಿದು ಶೋಷಣೆ ಮಾಡತೊಡಗಿದಾಗ ಯಜ್ಞಯಾಗಾದಿಗಳ ಹೆಸರಿನಲ್ಲಿ ಅಮಾಯಕ ಮುಗ್ಧ ಪ್ರಾಣಿಗಳ ಜೀವ ಬಲಿ ತಗೆದುಕೊಳ್ಳ ತೊಡಗಿದಾಗ ಒಟ್ಟಿನಲ್ಲಿ ಭಾರತದ ಧರ್ಮ-

ಸಮಾಜಾಂಗಣದಲ್ಲಿ ಗಾಢಾಂಧಕಾರ ಮುಸುಗಿದಾಗ ಬಸವಣ್ಣನೆಂಬ ಕ್ರಾಂತಿಕಾರಿ ಜನಿಸಿ ಬಂದು, ಮಂಗಲಮಯ ಬೆಳಕು ಚೆಲ್ಲಿ ಜಗತ್ತಿಗೆ ಹೊಸ ಪಥ-ಹೊಸಮತ ತೋರಿದನು.

ಇಂತಪ್ಪ ಬಸವಣ್ಣನವರನ್ನು ನಮ್ಮ ನಾಡಿನ ಜನಪದವು ತುಂಬು ಹೃದಯ-ದಿಂದ ಸ್ವಾಗತಿಸಿತು. ಸ್ವಾಭಿಮಾನದಿಂದ ತಲೆ ಎತ್ತಿ ನಿಂತಿತು. ಗೌರವಾದಾರ-ಗಳಿಂದ ಸ್ತುತಿಸಿತು. ಓದು-ಬರಹ ಬಾರದ ಈ ಜನಪದರು ಶಾಶ್ವತವಾಗಿ ಬಸವಣ್ಣ-ನನ್ನು ತಮ್ಮ ಬಾಳಿನುಸಿರಾಗಿ ಜೀವದ ಜೀವಾಳವಾಗಿ ಆತ್ಮದ ಚೇತನವಾಗಿ ಅವಿನಾಭಾವವಾಗಿ ಅಪ್ಪಿಕೊಂಡರು, ಒಪ್ಪಿಕೊಂಡರು. ತಮ್ಮ ಸತ್ತ್ವಂತಿಹ ಬದುಕಿಗಿ ಜೀವಂತಿಕೆ ತಂದಿತ್ತ ಬಸವಣ್ಣನವರನ್ನು ಹೃದಯಾಂತಃಕರಣದಿಂದ ಹಾಡಿದರು. ತನು-ಮನ-ಭಾವ ತುಂಬಿ ಜಾಲಾಡಿದರು. ಜನಪದ ಹೃದಯದಿಂದ ಮೂಡಿ ಹೊರ ಹೊಮ್ಮಿದ ಈ ಹಾಡುಗಬ್ಬಗಳೇ ತ್ರಿಪದಿಗಳಾಗಿ ಲಾವಣಿಯಾಗಿ ಹಂತಿಪದ, ಬೀಸು ಕಲ್ಲಿನ ಪದ, ಗೀ ಗೀ ಪದ ಮುಂತಾದ ಪ್ರಕಾರಗಳಲ್ಲಿ ಅಭಿವ್ಯಕ್ತವಾದವು.

ಜಾನಪದ ತ್ರಿಪದಿ ಸಾಹಿತ್ಯದಲ್ಲಿ ನಿರೂಪಿತವಾಗಿರುವ ಬಸವಣ್ಣನವರು ದರ್ಶನವನ್ನು ನಾವಿಲ್ಲಿ ಕಾಣಬಹುದಾಗಿದೆ.

> ಎಲ್ಲ ಬಲ್ಲಿದನಯ್ಯ ಕಲ್ಯಾಣ ಬಸವಯ್ಯ
> ಚೆಲ್ಲಿದನು ತಂದು ಶಿವಬೆಳಕ । ನಾಡೊಳಗೆ
> ಸೊಲ್ಲೆತ್ತಿ ಜನವು ಹಾಡುವುದು ॥

ಎಲ್ಲ ಬಲ್ಲವನಾಗಿದ್ದ ಬಸವಣ್ಣ ಶಿವಬೆಳಕನ್ನು ಪಸರಿಸಿದಾಗ ಜಗತ್ತೆಲ್ಲ ಹೊಸಬೆಳಕಿ-ನಲ್ಲಿ ಬೆಳಗತೊಡಗಿತು. ನಾಡ ಜನತೆಯು ಆನಂದ ಭಕ್ತಿಯಿಂದ ಹಾಡತೊಡಗಿತು.

> ಬಸವಣ್ಣ ನಿನ್ಹೆಸರು ದೆಸೆದೆಸೆಗೆ ಶಿವಮಂತ್ರ
> ಹೊಸಮತಕೆ ಮಂತ್ರ ನಿತ್ಯದಲಿ । ಒಕ್ಕಲಿಗ
> ಹೊಸ ಮಂತ್ರ ಬಸವ ಜಪಿಸುವನು ॥

ಬಸವಣ್ಣ ಜನಿಸಿ ಬಂದು ಹೊಸ ಮತವನ್ನು ಪ್ರಾರಂಭಿಸಿದಾಗ ಆತನ ಹೆಸರೇ ಮಂತ್ರವಾಯಿತು. ಇದರಿಂದ ಜನ-ಮಾನಸದಲ್ಲಿ ಹೊಸಗಾಳಿ ಬೆಳಕು ಮಾಡ-ತೊಡಗಿತು.

ಓದಿದನು ಬಸವಯ್ಯ ವೇದದೊಳಗಿನ ಹುಸಿಯ ಭೇದ ಭೇದವನೆ ಬಿಚ್ಚಿಟ್ಟ।
ಜನಪದಕೆ ತೇಮಂಡ ಜೀವಿ ಬಸವಣ್ಣ ॥

ಬಸವಣ್ಣನವರು ವೇದದೊಳಗಿನ ಹುಸಿಯನ್ನು ವೇದ ಓದುವ ಜನರು ಮಾಡುತ್ತಿದ್ದ ಜಾತಿ ಭೇದವನ್ನು ಸಾಮಾನ್ಯ ಜನರ ಮುಂದೆ ಬಿಡಿಸಿ, ಬಿಡಿಸಿ ಹೇಳಿದರು. ಇದಲ್ಲದೆ ಜಾತಿ ಭೇದವನ್ನು ತೊಡೆದು ಹಾಕಿದರು.

ಹೊಲೆಯ ಮಾಧಿಗರೆಂಬ ಬಳೆಯಾತ ಕಿತ್ತೊಗೆದ ಛಲಲೆ ಬಸವಯ್ಯ ಬಸವರಸ।
ಸಿನ್ಹೆಸರು ನೆಲೆಯಾತು ನಿತ್ಯ ಜನಪದಕೆ ॥
ಹೊಲೆಗಂಡಲ್ಲದೆ ಪಿಂಡದ ನೆಲೆಗಾಶ್ರಯವಿಲ್ಲವೆಂದು ಸಾರಿ ಹೇಳಿ ಕೊಲ್ಲುವನೇ

ಮಾದಿಗ ಹೊಲಸು ತಿಂಬುವವನೆ ಹೊಲೆಯ, ಕುಲವೇನೋ ಅವಂದಿರ ಕುಲವೇನೋ ? ಸಕಲ ಜೀವಾತ್ಮರಿಗೆ ಲೇಸನೆ ಬಯಸುವ ಕೂಡಲ ಸಂಗನ ಶರಣರೇ ಕುಲಜರೆಂದು ಘಂಟಾ ಘೋಷವಾಗಿ ಸಾರಿ ಹೇಳಿದರು. ಇದರಿಂದಾಗಿ ಹೊಲೆಯ ಮಾದಿಗರೆಂಬ ಬಲೆಯನ್ನು ಕಿತ್ತೊಗೆದು ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರಾದವರೆಲ್ಲ ಒಂದೇ ಎಂದು ತಿಳಿಸಿದರು.

ದೈಹಿಕ ಶ್ರಮ ಮಾಡುತ್ತಿದ್ದ ಸನಾತನ ಧರ್ಮಿಯರಿಂದ ಶೂದ್ರ ಪಂಚಮರೆಂದು ಧಾರ್ಮಿಕ ಸಾಮಾಜಿಕವಾಗಿ ದೂರ ತಳ್ಳಲ್ಪಟ್ಟಿದ್ದ. ತುಳಿಯಲ್ಪಟ್ಟಿದ್ದ ದೀನ ದಲಿತರನ್ನು ಅಪ್ಪನು ನಮ್ಮ ಮಾದಾರ ಚನ್ನಯ್ಯ ಬೊಪ್ಪನು ನಮ್ಮ ಡೋಹರ ಕಕ್ಕಯ್ಯ ಎಂದು ಬಸವಣ್ಣನವರು ಅಪ್ಪಿಕೊಂಡರು. ಹಿಂದುಳಿದ ಶೂದ್ರ ಜನಾಂಗಕ್ಕೆ ಗುಡಿ ಗುಂಡಾರಗಳಲ್ಲಿ ಪ್ರವೇಶವಿಲ್ಲವೆಂಬುದನ್ನು ಮನಗಂಡ ಬಸವಣ್ಣನವರು ವಿನೂತನವಾದ ಇಷ್ಟ ಲಿಂಗವನ್ನು ಸರ್ವರಿಗೂ ದಯಪಾಲಿಸಿದರು.

ಅರಿಯುವಕೆ ಕುರುಹೆಂದು ಕರಲಿಂಗ ನೀ ಕೊಟ್ಟಿ ಶರಣೆಂಬು ನುಡಿಯ ಚಲುಮಾಡಿ
ಹೊಸಮತಕೆ ಗುರುಬಸವಲಿಂಗ ನಿಜ ಮಂತ್ರ॥

ನಿಃಶೂನ್ಯ, ನಿರಂಜನ ನಿರಾಕಾರವಾಗಿರುವ ಪರಾತ್ಪರ ಪರವಸ್ತುವನ್ನು ಅರಿಯುವ ಸಲುವಾಗಿ ಇಷ್ಟಲಿಂಗವೆಂಬ ಕುರುಹನ್ನು ಚುಳುಕಾಗಿಸಿ ಬಸವಣ್ಣ ನೀಡಿದಾಗ ಈ ಹೊಸ ಧರ್ಮಕ್ಕೆ ಬಸವಣ್ಣನವರ ಹೆಸರೇ ‘ ಗುರು ಬಸವಲಿಂಗ ” ಎಂದು ಮಂತ್ರವಾಯಿತೆಂದು ಜನಪದರು ತಿಳಿಯಪಡಿಸುತ್ತಾರೆ. ಇದನ್ನು ಇಂದಿಗೂ ಇರುವ ಸಹಸ್ರಗಟ್ಟಲೇ ತಾಡೋಲೆಗಳ ಮೇಲೆ “ ಶ್ರೀ ಗುರು ಬಸವಲಿಂಗಾಯ ನಮಃ” ಎಂದು ಉಲ್ಲೇಖವಾಗಿರುವುದನ್ನು ಕಾಣಬಹುದು.

ಉತ್ತು ಬಿತ್ತುವ ಮಂತ್ರ ಬಿತ್ತಿ ಬೆಳೆಯುವ ಮಂತ್ರ
ಸತ್ಯ ಶಿವಮಂತ್ರ ನಿನ್ಹೆಸರು । ಬಸವಯ್ಯ
ಮರ್ತ್ಯದೊಳು ಮಂತ್ರ ಜೀವನಕೆ ॥

ಬಸವಣ್ಣನವರು ಜನರಿಗೆ ಕೇವಲ ಧರ್ಮ ದೇವರು ಉಪಾಸನೆ ಅಷ್ಟನ್ನೇ ಕಲಿಸಲಿಲ್ಲ. ಅವರಿಗೆ ಕಾಯಕ ದಾಸೋಹಗಳನ್ನು ಕಲಿಸಿದರು. ಕಾಯಕ ಗೌರವ ಕಾಯಕ ದೈವತ್ವ ತಿಳಿಯ ಪಡಿಸಿದರು. ಅದನ್ನು ನಮ್ಮ ಜನಪದರು ಕೊಂಡಾಡಿದ್ದಾರೆ.

ಕಾಯಕವ ಕಲಿಸುದುಕ ನಾಯಕನು ಬಸವಣ್ಣಜೀಯ ಹೊಸ ಮತಕ್ಕೆ ಶಿವಭಕ್ತಿ।
ಸಾರುದಕಿ ರಾಯಜೀವನದ ಹೊಸ ನುಡಿಗೆ ॥

ಇದರಿಂದಾಗಿ :

ಉಂಡು ತೇಗಿತು ಲೋಕ ಕೊಂಡಾಡಿ ಕಾಯಕವ ಕಂಡ ಕಂಡಲ್ಲಿ ದಾಸೋಹ ।
ಕಾಯಕದ ಕಂಡ ಜೀವನದ ಶಿವಮಾತು ॥

ಬಸವಣ್ಣನವರು ಜನಪದ ಜನರಿಗೆ ಭಕ್ತಿ ಮುಕ್ತಿ ಸಾಧನೆಗೆ ಓಂಕಾರ ಪ್ರಣವ ಸ್ವರೂಪರೇ ಆಗಿದ್ದಾರೆ.

ಬಸವ ಭಕ್ತಿಯ ಬೀಜ ಬಸವ ಮುಕ್ತಿಯ ತೇಜ ಬಸವ ಕಾಯಕದ ಗುರುಬೀಜ ।
ಶಿವಮತಕೆ ಬಸವ ಓಂಕಾರ ಶಿವನಾಮ ॥

ಬಸವಣ್ಣನಿಂದಾಗಿ ರಾಜ್ಯದಲ್ಲಿ ಸಿರಿ ಸಂಪತ್ತು ಮಳೆ ಬೆಳೆ ಸ್ವರ್ಗದ ಮೆಟ್ಟಿಲು ಅಂದರೆ ಸಂತೃಪ್ತಿ ನೆಮ್ಮದಿಯ ಬದುಕಿಗೆ ಸೋಪಾನ ಬಸವಣ್ಣ ಎಂಬುದನ್ನು ಹೃದಯಂಗಮವಾಗಿ ಹಾಡಿದ್ದಾರೆ.

ಬಸವ ರಾಜ್ಯದ ಸಿರಿಯು ಬಸವ ಬಡವರ ನಿಧಿಯು
ಬಸವ ಮಳೆ ಬೆಳೆಯು ನಾಡೊಳಗೆ। ನಿಜದೀಪ
ಬಸವನೇ ಸಗ್ಗ ಸೋಪಾನ ॥

ಇಂತಪ್ಪ ಬಸವಣ್ಣನವರನ್ನು ಹಳ್ಳಿಯ ಜನ ಗುರುವೆಂದು, ಅಪ್ಪನೆಂದು, ದೇವರೆಂದು, ಬಸವಾ ಬಸವಾ ಎಂದು ಸದಾಕಾಲ ಸ್ಮರಿಸುತ್ತಾರೆ, ಜಪಗೈಯುತ್ತಾರೆ. ಆತನ ಕರುಣೆಗಾಗಿ ಹಂಬಲಿಸುತ್ತಾರೆ.

ಜನವರಿ–1991

ಶರಣು ಶರಣೆಂಬುವೆವು ಹರಣ ಹಾರುವತನಕ
ಕರುಣಿಸಿರಿ ಶರಣ ಬಸವಯ್ಯ। ನಮಗಿನ್ನು
ಹರಸಿರಿ ಶರಣ ಬಾಳೆಂದು॥

ಆದ ಮುಕ್ತಿಗೆ ಶರಣು ಗೋಧಿಕಲ್ಲಿಗೆ ಶರಣು
ಓಂ ನಾಮದಯ್ಯನಿಗೆ ಶಿವಶರಣು। ಬಸವಣ್ಣ
ನಿಮ್ಮ ಪಾದಕೆ ಶಿವಶರಣು॥

ಬಾಪುರೆ ಬಸವಣ್ಣ ಬಾಪು ಶಿವಮತಮಣಿಯೆ
ಬಾಪು ನಿನ್ನ ಹೆಸರು ಅಮರಾತು। ಜಗದೊಳಗೆ
ಬಾಪು ನಿನಗಾರು ಸರಿಯುಂಟು.

---

## ವೀರಶೈವ ಡೈರೆಕ್ಟರಿ


ವಿಶ್ವವ್ಯಾಪಿ ವಿಶ್ವಧರ್ಮ; ವೀರಶೈವ ಧರ್ಮದಲ್ಲಿಯೇ ಪ್ರಪ್ರಥಮವಾಗಿ ವೀರಶೈವ ಡೈರೆಕ್ಟರಿಯು ಪ್ರಕಟವಾಗಲಿದ್ದು ಅದರಲ್ಲಿ ವೀರಶೈವರ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ಔದ್ಯೋಗಿಕ ಸಂಘ, ಸಂಸ್ಥೆಗಳು, ವೀರಶೈವ ಮಠ, ಮಂದಿರ, ಪುಣ್ಯಕ್ಷೇತ್ರಗಳ ಹಾಗೂ ವೀರಶೈವ ಉದ್ಯಮಿ, ವೈದ್ಯರು, ನ್ಯಾಯವಾದಿಗಳು, ಸಾಹಿತಿ, ಪತ್ರಕರ್ತರು, ಕಲಾವಿದರು, ಇತರೇ ಕ್ಷೇತ್ರಗಳ ಗಣ್ಯರು ಮತ್ತು ವೀರಶೈವ ಆಚಾರ, ವಿಚಾರ, ತತ್ತ್ವಗಳ ಬಗ್ಗೆ ಛಾಯಾಚಿತ್ರ ಸಹಿತ ವಿವರಗಳು ಪ್ರಕಟವಾಗಲಿವೆ. ಈ ಬಗ್ಗೆ ವಿಷಯ ಸಂಗ್ರಹ ಕಾರ್ಯ ಆರಂಭವಾಗಿದೆ. ವೀರಶೈವರಲ್ಲಿಯೇ ಪ್ರಪ್ರಥಮವಾಗಿರುವ ಈ ವೀರಶೈವ ಡೈರೆಕ್ಟರಿ ಸಮಸ್ತ ವೀರಶೈವ ಸಮಾಜದ ಅರಿವು ನೀಡುವದು. ಇದರ ಪ್ರಕಟಣೆಯಲ್ಲಿ ಪ್ರತಿ ವೀರಶೈವ ಮಠಾಧೀಶರು, ಸಂಘ ಸಂಸ್ಥೆಗಳು, ಗಣ್ಯರು ಸರ್ವ ರೀತಿಯ ಸಹಾಯ ಸಹಕಾರ ನೀಡಬೇಕಾಗಿ ವಿನಮ್ರ ಪ್ರಾರ್ಥನೆ. ಈ ಕೆಳಗಿನ ವಿಳಾಸಕ್ಕೆ ವ್ಯವಹರಿಸಿ.

ಶ್ರೀ **ಷಡಕ್ಷರಿ ಶೆಟ್ಟರ,** ಎಂ.ಎ, ಸಂಪಾದಕರು
ವೀರಶೈವ ಡೈರೆಕ್ಟರಿ, ನಂ.3893, ಹೊಸಹುಬ್ಬಳ್ಳಿ ಕಿಲ್ಲೆ, ಸಿ.ಬಿ.ಟಿ. ಹುಬ್ಬಳ್ಳಿ-580 020.

# ವಿದ್ಯಾರ್ಥಿಜೀವನದ ಬೆಳಕು ಸರಣಿ

ಬಿ. ಎಸ್. ಕೃಷ್ಣಮೂರ್ತಿ, ನಂ. 5, ವಿಲಾಸ ರಸ್ತೆ, ಮೈಸೂರು 570,024.

**ವಿದ್ಯಾರ್ಥಿಜೀವನದಲ್ಲಿ ಸಾಧನೆ :** ಬರಿಯ ಓದು ಮಾತ್ರವೇ ಮುಖ್ಯವಲ್ಲ. ದೇಹದ ಆರೋಗ್ಯ, ಅಂಗ ಸಾಧನೆ, ದೇಹದ ಶಕ್ತಿ ಹೆಚ್ಚಿಸುವ ಮಿಶ್ರಾಹಾರಗಳು ಬೇಕು. ಮೇಲಾಗಿ ಕಾಮವಿಕಾರಗಳಿಲ್ಲದ "ಬ್ರಹ್ಮಚರ್ಯ"ವು ಅತ್ಯಾವಶ್ಯಕ. ಕಾಮ ವಿಚಾರಗಳ ಪುಸ್ತಕಗಳನ್ನೋದಬಾರದು. ಚಿಂತಿಸಲೂ ಬಾರದು, ಶುದ್ಧ ಚಾರಿತ್ರ್ಯವುಳ್ಳವರಾಗಿ ನಿಮ್ಮ ಮನಸ್ಸನ್ನು ಹತೋಟಿಯಲ್ಲಿಟ್ಟುಕೊಳ್ಳಬೇಕು.

ವಿದ್ಯಾರ್ಥಿ ಎಂಬುದರ ಅರ್ಥವು ವಿದ್ಯೆ ಅರ್ಥಿಎಂಬೆರಡು ಪದಗಳಸಮ್ಮಿಳನ. ಹಾಗೆಂದರೆ ಪರಿಪಕ್ವವಾದ ವಿದ್ಯೆಯನ್ನು ಕಲಿಯಲು ಆಶೆ ಮತ್ತು ಆತುರವು ಕೂಡಿರುವವನು ಎಂಬರ್ಥ. ಜ್ಞಾನಶೇಖರಣೆಯು ಪ್ರತಿ ಮಾನವನ ಹಕ್ಕು. ಇದನ್ನು ಶುದ್ಧಾಂತಃ ಕರಣಗಳಿಂದ ಪಡೆಯಬೇಕು. ಆಗ ಇದು ವರವಾಗಿ ಒಲಿದು ಬರುತ್ತದೆ.

ವಿದ್ಯಾಭ್ಯಾಸವು ವ್ಯವಸಾಯ ಕ್ರಮದಂತೆ ! ಕರಡು ಭೂಮಿಯನ್ನುನೇಗಿಲಿನಿಂದ ಉತ್ತು, ಮಣ್ಣಿನಲ್ಲಿರುವ ಅನವಶ್ಯಕಗಳಾದ ಕಲ್ಲು ಹೆಂಟೆ, ಮೊದಲಾದ ನಿಷ್ಪ್ರಯೋಜನ ಕರವಸ್ತುಗಳನ್ನು ಆಯ್ದು ಬಿಸಾಡಬೇಕು. ನಂತರ ಗೊಬ್ಬರ, ಗೋಡುಗಳನ್ನು ಉತ್ತಿರುವ ಮಣ್ಣಿನಲ್ಲಿಬೆರಸಿ, ಬೀಜ ಬಿತ್ತಿ, ನೀರೆರೆದು, ಗಿಡ ಬೆಳೆದಾಗ ಕಳೆಕಿತ್ತು ಪೋಷಿಸಿದರೆ ಉತ್ತಮ ಬೆಳೆ ಬರುವುದಿಲ್ಲವೇ ? ಇದರಂತೆ ವಿದ್ಯಾರ್ಥಿಗಳು ಉತ್ತಮ ಗ್ರಂಥಗಳನ್ನು ಆಯ್ದು, ತಾವು ಪ್ರವರ್ಧಮಾನಕ್ಕೆ ಬರಲು ಮತ್ತು ಜೀವನದ ಉತ್ತಮ ಬದುಕು, ಆದಾಯ ಬರುವ ಶ್ರೇಣಿಯ ಪುಸ್ತಕಗಳನ್ನೋದಬೇಕು. ಇದಕ್ಕೆ ಮುಂದಾಲೋಚನೆ. ಕಾರ್ಯಕ್ರಮರೂಪಿಸಿಕೊಂಡು ವಿದ್ಯಾ ವ್ಯವಸಾಯ ಮಾಡಿದರೆ ಅಧಿಕ ಫಲ ಪ್ರಾಪ್ತಿಯಾಗುವುದರಲ್ಲಿ ಸಂಶಯವಿಲ್ಲ.

ಈ ಬಗೆಯ ಅಭ್ಯಾಸವು ಉತ್ತಮ ನಿಯಮಗಳ ಸಾಧನೆಗಳಿಂದ ಮಾತ್ರ ಸಾಧ್ಯ ! ವಿದ್ಯೆಯು ಆತ್ಮೋನ್ನತಿಗೆ ಕಾರಣವಾಗಿರಬೇಕಲ್ಲದೆ ಸಾಂಸ್ಕೃತಿಕ ಹಿನ್ನೆಲೆಯೂ ಕಾರಣವಾಗಿದೆ. ಇದು ಭಾರತೀಯ ಸಂಪ್ರದಾಯ, ಮತ್ತು ಪರಂಪರೆಯನ್ನೊಳಗೊಂಡಿದೆ. ವಿದ್ಯೆ ಅರ್ಥವನ್ನೊದಗಿಸಿ, ಸುಖಜೀವನಕ್ಕೆ ಅಡಿಗಲ್ಲಾಗಿರಬೇಕೇ ವಿನಾ ಅಲಂಕಾರಿಕ ವಿದ್ಯೆಯಾಗಬಾರದು. ವಿದ್ಯೆಯು ಬುದ್ಧಿ, ಮನಸ್ಸು ಮತ್ತು ಶರೀರ ಇವುಗಳ ತ್ರಿವೇಣೀ ಸಂಗಮವಾಗಿದೆ. ಹೀಗಾದರೆ ಜೀವನದಲ್ಲಿ ಧ್ಯೇಯ ಸಾಧನೆಯಾಗಿ ಕಲಿತ ವಿದ್ಯೆಗೆ ಬೆಲೆ ಬರುವುದು.

# ವಾಙ್ಮಯ ತಪಸ್ಸು

## ಮಾತಿರಲಿ, ಮಿತವಿರಲಿ, ಹಿತವಿರಲಿ, ಜ್ಯೋತಿ ಬೆಳಗುತಿರಲಿ

**ಎಂ. ಮಾಧವ ಪೈ,** "ಶ್ರೀನಿವಾಸ", ಡಿ.ವಿ.ಎಸ್. ಪ್ರೌಢಶಾಲೆ ಸಮೀಪ
೧ನೇ ಹಂತ, ವಿನೋಬನಗರ, ಶಿವಮೊಗ್ಗ-577201.

"ಮಾತು ಬಲ್ಲಾತಂಗೆ ಮಾತೊಂದು ಮಾಣಿಕವು! ಮಾತು ತಾನರಿಯದ ಧಮಗೆ ಮಾಣಿಕವು ತೂತುಬಿದ್ದಂತೆ ಸರ್ವಜ್ಞ" ಅರೆರೆ ಇದೇನು! ಮಾತು ಬಲ್ಲವನಿಗೆ ಮಾತು ಒಂದು ಮಾಣಿಕ್ಯವು ಎಂದು ಹೇಳಿ, ಮಾತನ್ನು ಅರಿಯದ ನೀಚನಿಗೆ ಆ ಮಾಣಿಕ್ಯವು ತೂತು ಬಿದ್ದಂತೆ ಎಂದು ಹೇಳುವುದರಲ್ಲಿ ಸರ್ವಜ್ಞನು ಮಾತು ಬಲ್ಲವನು ಮತ್ತು ಮಾತು ಅರಿಯದವನು ಎಂದು ಎರಡು ವಿಭಾಗವನ್ನು ಹೇಳಿದ್ದಾನಲ್ಲ; ಏನಿದು! ಎಂದು ಈ ಮಾತಿನಿಂದ ವಿಸ್ಮಯಭರಿತ ಪ್ರಶ್ನೆಯೊಂದು ಮನಸ್ಸಿನಲ್ಲಿ ಮೂಡುವುದಲ್ಲವೆ? ಜಗತ್ತೇ ಮಾತಿನ ಮೇಲೆ ನಿಂತಿದೆ. ಹಾಗಿರುವಾಗ ಮಾತು ಬಾರದವರು ಯಾರು? ನಿಜ; ಪ್ರತಿಯೊಬ್ಬನೂ ಮಾತನಾಡುತ್ತಾನೆ. ಬದುಕಿನಲ್ಲಿ ಮಾತಿನಷ್ಟು ಸುಲಭ ಯಾವುದೂ ಇಲ್ಲ. ಬೆಳಗ್ಗೆ ಎದ್ದ ಹೊತ್ತಿನಿಂದ ರಾತ್ರಿ ಮಲಗುವ ವರೆಗೆ (ಕೆಲವರು ನಿದ್ರೆಯಲ್ಲಿಯೂ) ಮಾತನಾಡುತ್ತಿರುತ್ತಾರೆ. ಆದರೆ ಆರೀತಿ ಇಡೀ ದಿನ ಮಾತನಾಡಿದುದೆಲ್ಲ ಮಾತೆ? ಎಂಬುದು ಮಾತ್ರ ವಿಚಾರಾರ್ಹ ಕೇವಲ ಬಾಯಿಯಿಂದ, ನಾಲಗೆಯಿಂದ ಕೆಲವು ಶಬ್ದಗಳನ್ನು ಉಚ್ಚರಿಸಿದ್ದಾನೆಂಬಷ್ಟರಲ್ಲೇ ಅದು ಮಾತು ಎನಿಸದು. ಅದು ಕೇವಲ ಒಂದು ಶಬ್ದಗಳ ಜಾಲ ಮಾತ್ರವಾಗಿರುತ್ತದೆ. ವಿವಿಧ ಪ್ರಾಣಿಗಳು ಹೊರ ಹೊಮ್ಮಿಸುವ ಧ್ವನಿಗಳಂತೆ ಶಬ್ದೋಚ್ಚಾರವೂ ಕೇವಲ ಒಂದು ಧ್ವನಿಯನ್ನು ಹೊರಹೊಮ್ಮಿಸಿದ ರೀತಿಯೇ ಹೊರತು ಅದು ಮಾತು ಆಗಿರುರುವುದಿಲ್ಲ ಇಂತಹ ಮಾತುಗಳು ಬಹುಪಾಲು ವ್ಯರ್ಥವೇ ಸರಿ. ಆದರಿಂದ ಶಕ್ತಿಯನ್ನು ಕಳೆದುಕೊಳ್ಳುವುದಾಗುತ್ತದಷ್ಟೇ ಹೊರತು ಇನ್ನಾವ ಸಾಧನೆಯೂ ಆಗುವುದಿಲ್ಲ. ಆದ್ದರಿಂದಲೇ ಕವಿರಾಜ ಮಾರ್ಗಕಾರ. "ಮಾತರಿವರ್ ಕೆಲಬರ್ ಜಗತೀತಳಗತ ಮನುಜರೊಳಗೆ" ಈ ಪೃಥ್ವಿಯ ಮಾನವರಲ್ಲಿ ಮಾತು ಬಲ್ಲವರು ಕೆಲವೇ ಮಂದಿ ಎಂದು ಸಾರಿದ್ದು.

ಹಾಗಿದ್ದರೆ ಮಾತು ಬಲ್ಲವರು ಯಾರು? ಇದನ್ನು ಕವಿರಾಜಮಾರ್ಗಕಾರ ತಿಳಿಯಪಡಿಸಿದ್ದಾನೆ. "ಕುರಿತಂತೆ ಪೆರರ ಬಗೆಯಂ। ತೆರೆದಿರೆ ಪೆರರ್ಗರಿಪಲಾರ್ಪವಂ ಮಾತರಿವಂ. ಉದ್ದೇಶ್ಯಕ್ಕನುಗುಣವಾಗಿ ಪರರ (ಕೇಳುಗರ) ಮನಸ್ಸನ್ನು ತೆರೆದಿರುವಂತೆ ಮಾಡಿ, ಅವರಿಗೆ ಮನವಟ್ಟಾಗುವಂತೆ ಮಾಡಲು ಸಮರ್ಥನಾದವನು ಮಾತ್ರ ಮಾತು ಬಲ್ಲವನು ಎಂದು. ಅದರಲ್ಲಿಯೂ ಕಿರಿದರಲ್ಲಿ ಹಿರಿದರ್ಥವನ್ನು ತಿಳಿಸಬಲ್ಲವನು ಇನ್ನು ನಿಪುಣನು ಎಂದು ಸಾರಿ ಉದ್ದುದ್ದ ಮಾತುಗಳನ್ನಾಡುವುದರಿಂದ ಪ್ರಯೋಜನವಿಲ್ಲ ವೆಂಬುದನ್ನು ತಿಳಿಯಪಡಿಸಿದ್ದಾನೆ.

ಮಾತು ಜಗದ ಬೆಳಕು. ಅದು ಪುನೀತವಾದುದು. ಅದರ ಬಳಕೆ ಸರಿಯಾದ ರೀತಿಯಲ್ಲಾಗಬೇಕು. ಮಾತುಗಳಲ್ಲಿ ರಸವಿರುತ್ತದೆ. ಉತ್ತಮ ಮಾತುಗಳಲ್ಲಿ ಅಮೃತವನ್ನು ಪರಾಜಯಗೊಳಿಸುವಷ್ಟು ಮಾಧುರ್ಯದಿಂದ ತುಂಬಿರುತ್ತದೆ. ಮಾತುಗಳಿಂದ ಸುರಿಸುವ ಆನಂದದ ಮುಂದೆ ಸುಗಂಧಿತ ಕುಸುಮಗಳ ಸೌಗಂಧವೂ ತಲೆದೂಗಬೇಕಾಗುತ್ತದೆ. ಮಾತಿನಿಂದ ಹೊರಹೊಮ್ಮುವ ಧ್ವನಿ ಆಡುವವನಿಗೆ ರಸನೇಂದ್ರಿಯದ ಆರಿಸುವವನಿಗೆ ಶ್ರವಣೇಂದ್ರಿಯದ ವಿಷಯವಾಗಿದ್ದರೂ ಸರ್ವೇಂದ್ರಿಯಗಳೂ ಆಧ್ವನಿ ತಮ್ಮವೇ ಎಂದು ಭಾವಿಸುತ್ತವೆ. ಈ ಮಾತಿನಲ್ಲಿರುವ ಸುಗಂಧವನ್ನು ಮೂಗು ತನ್ನದೆನ್ನುತ್ತಿದ್ದರೆ, ಅದರಲ್ಲಿರುವ ರಸ ತನ್ನದೆಂದು ನಾಲಗೆಯು ಭಾವಿಸುತ್ತದೆ. ಮಾತುಗಳ ರಸಾಸ್ವಾದನೆಯನ್ನು ಮಾಡುವ ಕೇಳುಗರ ಮನಸ್ಸು ತನ್ನ ತಾನೇ ತನುವಿನಿಂದ ಹೊರಬಂದು ಬಿಗಿದಪ್ಪಿ ಆಲಂಗಿಸಿಕೊಳ್ಳಲು ತವಕ ಪಡುತ್ತದೆ. ಸಕಲ ಜ್ಞಾನೇಂದ್ರಿಯಗಳೂ ಈ ಮಾತುಗಳ ಮೇಲೆ ತಮ್ಮ ತಮ್ಮ ಹಕ್ಕುಗಳನ್ನು ಸ್ಥಾಪಿಸಲು ಹೆಣಗುತ್ತವೆ. ಆದ್ದರಿಂದ ಮಾತುಗಳು ಸರ್ವರನ್ನು ಸಮಾನವಾಗಿಯೇ ತೃಪ್ತಿಪಡಿಸುವುವು. ಸೂರ್ಯನೊಬ್ಬನೇ ಸಮಸ್ತ ಜಗತ್ತಿಗೂ ಸಮಾನವಾಗಿ ಪ್ರಕಾಶವನ್ನಿತ್ತು. ಬೆಳಕನ್ನುಂಟು ಮಾಡುವಂತೆ ಮಾತುಗಳು ಮನಸಹಿತ ಸರ್ವೇಂದ್ರಿಯಗಳಿಗೂ ಜ್ಞಾನ ಪ್ರಕಾಶವನ್ನು ಉಂಟುಮಾಡುತ್ತವೆ. ಈ ಮಾತುಗಳ ಅಂತರಾರ್ಥವನ್ನು, ಅವುಗಳ ಭಾವವನ್ನು ಕುರಿತು ವಿಚಾರ ಮಾಡುವವರಿಗೆ ಇವು ಕೇವಲ ಮಾತುಗಳಲ್ಲ, ಮಾತುಗಳ ರೂಪದಲ್ಲಿ ಚಿಂತಾಮಣಿಯೇ ಲಭಿಸಿರುವುದೆಂದು ತೋರುತ್ತದೆ. ಮಾತು ಬರಿ ಮಾತಲ್ಲ, ಅದು ಅಮೃತವರ್ಷಿಣಿವಾಣಿ" ಎಂದು ವಿದ್ವಾಂಸರು ಹೇಳಿರುವುದು ಅರ್ಥವತ್ತಾಗಿದೆ. ಮಾತು ಅಮೃತವನ್ನು ಸ್ರವಿಸುವಂತಿದ್ದರೆ ಮಾತ್ರ ಅದು ಮಾತು ಆಗಿರುತ್ತದೆ, ಹಾಗಾಗದಿದ್ದಲ್ಲಿ ಅದು ಜೊಳ್ಳು ಹರಟೆಯಾಗುತ್ತದೆ. ಅದಕ್ಕೆ ಬಸವಣ್ಣನವರು ಹೇಳಿದ್ದು "ಮಾತು ಬಲ್ಲಾತ ಜಾಣನಲ್ಲ" ಎಂದು ಚಪಲ ಬುದ್ಧಿವಂತಿಕೆಯಿಂದ ಮಾತನಾಡುವವನು ಬರಿಯ ವಾಚಾಳಿಯಾಗಿರುತ್ತಾನೆಯೇ ಹೊರತು ಜಾಣನಲ್ಲ. ಹಾಗೆಯೇ "ಬಣ್ಣವಿಟ್ಟು ನುಡಿದಲ್ಲಿ ಫಲವೇನು? ಚಿನ್ನಗೊಯ್ಕನಾಡುವಂತೆ" ಎಂದು ಬರಿಯ ವಶಿಲೀ ಬಾಜಿಯ ವಾಗಾಡಂಬರವೂ ವ್ಯರ್ಥವಾದುದೆಂದೂ ಅದರಲ್ಲಿ ವಂಚನೆಯು ಅಡಕವಾಗಿರುವುದೆಂದೂ ಸಾರಿದ್ದಾರೆ. ಶ್ರೋತೃಗಳ ಹೃದಯವನ್ನು ಮುಟ್ಟುವಂತೆ ಆಡುವ ಮಾತುಗಳೇ ಮಾತುಗಳು, ಅವು ರಸವನ್ನು ಸುರಿಸುತ್ತವೆಂದು ಸರ್ವಜ್ಞನೂ "ಮಾತು ಬಲ್ಲಾತಂಗೆ ಯೇತವದು ಸುರಿದಂತೆ। ಮಾತಾಡಲರಿಯದಾತಂಗೆ ಬರಿಯೇತ। ನೇತಾಡಿದಂತೆ" ಎಂದು ತಿಳಿಯ ಪಡಿಸಿದ್ದನ್ನು ಅರ್ಥೈಸಿಕೊಂಡಾಗಲೇ ಮಾತಿನ ವೈಶಿಷ್ಟ್ಯ ಮನವರಿಕೆಯಾಗುತ್ತದೆ.

ಪರರ (ಕೇಳುಗರ) ಮನಸ್ಸನ್ನು ತೆರೆದಿರುವಂತೆ ಮಾಡಿ, ಅವರಿಗೆ ಮನದಟ್ಟಾಗುವಂತೆ ಮಾಡಬೇಕಾದುದು ಮಾತಿನ ಹೊಣೆಗಾರಿಕೆಯ ನಿರ್ವಾಹ ಸುಲಭಸಾಧ್ಯವಲ್ಲ, ಯಾವ ಮಾತು ಯಾವಾಗ, ಯಾರಿಗೆ, ಯಾವರೀತಿಯ ಭಾವನೆಯನ್ನ ಪ್ರಚೋದಿ

ಸುತ್ತದೆಯೆನ್ನುವುದರ ಮೇಲೆಯೇ ಮಾತಿನ ಹೊಣೆಗಾರಿಕೆ ಅಡಕವಾಗಿದೆ. ಆದ್ದರಿಂದ ಮಾತನಾಡಬೇಕಾದರೆ ಮೊದಲೇ ಚೆನ್ನಾಗಿ ವಿಚಾರ ಮಾಡಬೇಕು. ಏನೋ ಬಾಯಿಗೆ ಬಂತು ಎಂದು ಮಾತನಾಡಿದರೆ ಆಗಬಾರದೇನೊ ಆಗಿ ಹೋದೀತು ಎಂದು "ಮಾತು ಮನೆಕೆಡಿಸಿತು ತೂತು ಒಲೆ ಕೆಡಿಸಿತು;" "ಮಾತು ಆಡಿದರೆ ಹೋಯ್ತು ಮುತ್ತು ಒಡೆದರೆ ಹೋಯ್ತು" ಎಂಬೀ ಜನಾನುಭವದ ಗಾದೆಗಳೇ ಸಾರುತ್ತವೆ ಮಾತು, ಮಾತು ಬಾಯ ಮಾತುಗಳು ಬೆಳೆಯುತ್ತಾ ಹೋಗುತ್ತವೆ "ಮಾತು ಮಾತಿಗೆ ಓತು ಮಾತು ಕೋಟಿಗಳುಂಟು." ಆದರೆ ಅವುಗಳಿಂದ ಸ್ವಾರಸ್ಯವಿಲ್ಲ. ಅಂತಹ ಮಾತುಗಳಿಂದ ಮನಸ್ಸಿಗೆ ಬೇಸರವಾಗಬಹುದು, ಮನಕೆ ಮುನಿಸುಂಟಾಗಬಹುದು. "ಮಾತಿನಿಂದ ನಗೆನುತಿಯೂ, ಮಾತಿನಿಂದ ಹಗೆ ಹತಿಯೂ ಉಂಟಾಗಬಹುದು. ಕತ್ತಿಯಿಂದುಂಟಾದ ಗಾಯ ಕೊನೆಗೊಮ್ಮೆ ವಾಸಿಯಾಗುತ್ತದೆ, ಆದರೆ ಜಿಹ್ವೆಯಗಾಯ ಮಾತ್ರ ನಿತ್ಯಕ್ಕೂ ಇರುತ್ತದೆಯೆಂಬುದನ್ನು ತಿಳಿದು ಚಿಂತಿಸಿ ಅರಿತು ಮಾತನಾಡುವುದನ್ನು ಅಭ್ಯಾಸ ಮಾಡಬೇಕಾದುದು ಅಗತ್ಯ. ''ಮೆಲ್ಲನೆಯ ಹರಿ ನೀರು ಕಲ್ಲಭೇದಿಸಲಕ್ಕೂ ಸೊಲ್ಲರಿತು ನುಡಿವ ಒಳ್ನುಡಿಯೂ ಬಲ್ಲಂದ। ನಲ್ಲವೆನಿಸುವುದು ಸರ್ವಜ್ಞ'' ಎಂದು ಸರ್ವಜ್ಞನು ತಿಳಿಸಿದಂತೆ ಸೊಲ್ಲನ್ನು ಅರಿತು ನುಡಿಯಬೇಕು. ಮಾತನ್ನು ವಿಚಾರಮಾಡಿ ನುಡಿ-ಯುವ ಜಾಣ್ಮೆ ಎಲ್ಲಕ್ಕೂ ಮಿಗಿಲಾದುದೆಂದೂ ಆತ ತಿಳಿಯಪಡಿಸಿದ್ದಾನೆ. ಕಲ್ಲಮೇಲಿನ ನೀರು ಮೆಲ್ಲನೆಯೆ ಸರಿದಂತೆ। ಸೊಲ್ಲನಾರೈದು ನುಡಿಯುವಾ ಜಾಣ್ಮೆಯು। ಎಲ್ಲಕ್ಕೂ ಮಿಗಿಲು ಸರ್ವಜ್ಞ। ಹಾಗೆಯೇ ಯಾವ ಸಂದರ್ಭದಲ್ಲಿ ಯಾವ ಮಾತನ್ನಾಡಬೇಕು, ಎಂಬುದರ ಗಮನವೂ ಇರಬೇಕಾದುದೂ ಅವಶ್ಯ. ಹೊತ್ತಿಗೊದಗದ ಮಾತು ಸತ್ತವನು ಎದ್ದಂತೆ। ಹೊತ್ತಾಗಿ ನುಡಿದ ಮಾತು ಕೈಜಾರಿನ। ಮುತ್ತಿನಂತಿಹುದು ಸರ್ವಜ್ಞ! ಸಮಯ ಸಂದರ್ಭಗಳಿಗನುಗುಣವಾದ ಮಾತನ್ನು ಆಡದೆ ಇದ್ದರೆ ಅಥವಾ ಆಡಲು ಮರೆತರೆ ಕಬ್ಬಿಣವೂ ಕಾದಾರಿದರೆ ಹೇಗೋ ಹಾಗೆ ನಿಷ್ಪ್ರಯೋಜಕ ಉಪ್ತ ಕಾಲದಲ್ಲಿ ಆಡಬೇಕಾದ ಮಾತನ್ನು ಆಡದೆ ಇದ್ದರೆ ಹಾಗೂ ಆ ಸಂದರ್ಭದಲ್ಲಿ ಆಡ ಬೇಕಾದ ಮಾತಾವುದು ಎಂಬುದನ್ನು ಅರಿಯದೆ ಮಾತಾಡಿದರೆ ಎಲ್ಲವೂ ಕೆಟ್ಟು ಹೋಗುವುದು. ಇರಿಯುವುದಕ್ಕಿಂತ ಮಾತರಿವುದು ಮುಖ್ಯ. ಸಮಯ ಸಂದರ್ಭಕ್ಕೆಷ್ಟು ಉಚಿತವೋ ಅಷ್ಟೇ ಮಾತುಗಳನ್ನು ಬಳಸಬೇಕು. ಒಂದಕ್ಕೊಂಬತ್ತು ನುಡಿದು ನಾಲಿಗೆ ತಪ್ಪಿನುಡಿದರೆ ಮಾರಿಯಾಗಿ ಪರಿಣಮಿಸುವುದು ಎಂದು ತಿಳಿಸಿ ಅರಿತು ಮಾತನಾಡುವುದೆಂಬುದು ಒಂದು ನೇಮ; ವ್ರತ ಎಂಬುದನ್ನು ಮರೆಯದಿರಬೇಕು ಎಂದು ಬಸವಣ್ಣನವರು ತಿಳಿಸಿದ್ದುಂಟು. ಮಾತಿನ ಪಸರದ ವ್ಯವಹಾರದೊಳಗೆ ಸಿಕ್ಕಿ ನೂಕು ತಾಕುಗೊಳ್ಳುತ್ತಿಪ್ಪವಂಗೆ, ಯಾವ ಪುರುಷಾರ್ಥ ಸಾಧಿಸೀತು! ಆದ್ದರಿಂದ ''ಶಬ್ಧ ಸಂಭ್ರಮದಲ್ಲಿ ಹಿಂದುಗಾಣರು, ಮುಂದುಗಾಣರು, ತಮ್ಮ ತಾವರಿಯರು'' ಇದು ಕಾರಣ ಮೂರು ಲೋಕವೆಲ್ಲವೂ ಬರು ಸೂಶಿ ಹೋಯಿತ್ತು ಗುಹೇಶ್ವರ "ಪ್ರಭು-ದೇವರ ಈ ವಚನ ಮನನೀಯ, ಮಾತು ಮಾತಿಗೆ ಮಥನ ಮಾಡುವಾತನೆ ಜಾತ,

ಮಾತಿನ ಮೊದಲ ಸಂಪಾತನೇ ಅಜಾತ" ಎಂದು ವಚನಕಾರರು ಹೇಳಿರುವುದರ ಅಂತರಾರ್ಥವನ್ನು ಮನಗಾಣಬೇಕು.

ಮಾತು ಎಂಬುದು ಅದು ಬರಿಶಬ್ದ ಸಂಭ್ರಮವಲ್ಲ. ಅದು ಪರರ ಬಗೆಯನ್ನು ತೆರೆವಂತೆ ಮಾಡುವ ಶೀಲಿಕೈಜ್ಞಾನ ಜ್ಯೋತಿಯನ್ನು ಬೆಳಗಿಸುವ ಸಾಧನ. ಹೀಗಾಗಿ ಪರರ ಬಗೆಯನ್ನು ತೆರೆವಂತೆ ಮಾಡಲು ಆಡುವ ಮಾತು ಹೇಗಿರಬೇಕು ಎಂಬುದನ್ನು ಮಾತನಾಡುವ ಪ್ರತಿಯೊಬ್ಬರೂ ಪರ್ಯಾಲೋಚಿಸಬೇಕು. "ನುಡಿವನು, ನುಡಿಯಲಂಜುವೆನಯ್ಯಾ" ಎಂದು ವಚನಕಾರರು ಹೇಳಿದಂತೆ ನುಡಿಯಬೇಕಾದರೆ ಎಲ್ಲಿ, ಏನು ಅಚಾತುರ್ಯವಾಗುವುದೋ ಎಂಬ ಅಂಜಿಕೆ ಇರಬೇಕು ಮನಸ್ಸಿಗೂ ಮಾತಿಗೂ ಪರಸ್ಪರ ಸಂಬಂಧವಿದೆಯೆಂಬುದನ್ನು ಗಮನಿಸಬೇಕು. ಆಡುವ ಮಾತು ಬರಿಬಾಯಿಗೆ, ನಾಲಗೆಗೆ ಸಂಬಂಧಿಸಿಲ್ಲ. ಮನಸ್ಸಿಗೂ ಅದಕ್ಕೂ ನೇರಸಂಬಂಧವಿದೆ. ಮಾತು ಮನಸ್ಸಿಗೆ, ಮನಸ್ಸು ಮಾತಿಗೆ ಋಣಿಗಳಾಗಿವೆ. ಮನಸ್ಸೊಂದು ದೆಸೆ, ಮಾತೊಂದು ದೆಸೆ ಆಗಬಾರದು. "ಮನಕ್ಕೆ ನಾಚದ ವಚನ, ವಚನಕ್ಕೆ ನಾಚದ ಮನ" ಆಗಬಾರದು. "ಬಂಜೆ ಬೇನೆಯನ್ನರಿಯದಂತೆ ಒಬ್ಬರೊಂದ ನುಡಿವಿರಿ ಎಂದು ಹೇಳುವಂತಾಗಬಾರದು. ಪ್ರಸೂತಿಗೆ ಮುನ್ನ ಬೇನೆಯನ್ನು ಅನುಭವಿಸಿದರೇನೇ ಸುಂದರ ಶಿಶುವಿಗೆ ಜನನವೀಯಲಾಗುವಂತೆ, ಮಾತಿನ ಹೊರಹೊಮ್ಮುವಿಕೆಯ ಮುನ್ನ ಅದರ ಬೇನೆಯನ್ನು ಅನುಭವಿಸಿ ಮಾತನ್ನು ಪ್ರಸವಿಸಿದರೇನೇ ಅದು ಸರ್ವರ ಮುದ್ದಿಗೆ ಆಸ್ಪದವಾಗುತ್ತದೆ. ಸಕಲರ ಮನಸ್ಸನ್ನು ಬೆಳಗಿಸುತ್ತದೆ. ಇಂತಹ "ಶರಣರು ಮನದೆರೆದು ಮಾತನಾಡಿದರೆ ಲಿಂಗವ ಕಾಣಬಹುದು" ಎಂದಂತೆ ಶಿವಜ್ಯೋತಿ ಪ್ರಕಟವಾಗುವುದು. "ನುಡಿದರೆ ಮುತ್ತಿನ ಹಾರದಂತಿರಬೇಕು. ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು. ನುಡಿದರೆಸ್ಫಟಿಕದ ಸಲಾಕೆಯಂತಿರಬೇಕು. ನುಡಿದರೆ ಲಿಂಗ ಮೆಚ್ಚಿ ಅಹುದಹುದೆನಬೇಕು ಅದು ಬಿಟ್ಟು ಮನಸ್ಸಿಗೇನೋ ಬಂತುಎಂದು ಬಾಯಲ್ಲೇನೋ ಆಡಿದರೆ-" ನುಡಿದೆಂಬಾಯ್ಗೆ ಬಂದವೋಲ್, ನಡೆದು ಮನಸಿಗೆ ಬಂದವೋಲ್ ಸೈಗೆಡೆದೆಂ ದುಃಖ ಸಮುದ್ರದೊಳ್" ಎಂದು ರತ್ನಾಕರವರ್ಣಿ ಹೇಳಿದಂತೆದುಃಖ ಸಾಗರದಲ್ಲಿ ಬೀಳಬೇಕಾಗುತ್ತದೆಯೆಂಬುದನ್ನು ಎಂದೂ ಮರೆಯಬಾರದು. ಮನ ವಚನಗಳೆರಡೂ ಒಂದಾಗಿ ಬೆಸೆದು ಬೆಳಗಬೇಕು.

ಮನಸ್ಸಿಗೂ ವಚನಕ್ಕೂ ನಂಟು ಇರುವುದರಿಂದ ಆಡುವ ಮಾತು ಮನಸ್ಸಿನ ಗುಣಕ್ಕನುಗುಣವಾಗಿ ಹೊರಹೊಮ್ಮುತ್ತದೆ. ಆದ್ದರಿಂದ ಆಡುವ ಮಾತು ಯೋಗ್ಯವಾದುದಾಗಿರಬೇಕಾದರೆ, ಬಾಲಿಶವಾಗಿರದೆ ಪ್ರೌಢತ್ವವುಳ್ಳದ್ದಾಗಿರಬೇಕಾದರೆ ಮನಸ್ಸು ಪರಿಶುದ್ಧವಾಗಿರಬೇಕಾಗುತ್ತದೆ. ಸತ್ತ್ವರಜಸ್ತಮೋಗುಣಗಳು ಮನದ ಗುಣಗಳು. ಈ ಗುಣಗಳಿಗನುಸಾರವಾಗಿ ಮನದ ಸಂಪರ್ಕದಿಂದ ಮಾತುಗಳೂ ಉತ್ತಮ, ಮಧ್ಯಮ ಕನಿಷ್ಟಗಳಾಗಿ ಮಾನವನ ವ್ಯಕ್ತಿತ್ತ್ವದ ದರ್ಶನ ಮಾಡಿಸುತ್ತವೆ. ಮನಸ್ಸಿನ ಪ್ರಸನ್ನತೆ,

ಸೌಮ್ಯಭಾವ, ಮನೋನಿರೋಧ, ಭಾವಸಂಶುದ್ಧಿಗಳನ್ನು ಬೆಳೆಸಿದರೆ ಮಾತ್ರ ಮಾತು ಜ್ಯೋತಿರ್ಲಿಂಗವಾಗಲು ಸಾಧ್ಯ. ಅಂತಹ ಮಾತುಗಳನ್ನಾಡುವವನು ಸರ್ವೋನ್ನತನಾಗುವನು, ಶರಣನೆಂದೆನಿಸುವನು. ಅಂದರೆ ಆತನು ತ್ರಿಗುಣಗಳನ್ನು ಮೀರಿ ನಿಂತವನು.

> ಮಾತಿನಲ್ಲಿ ಕರ್ಕಶ ಮನದಲ್ಲಿ ಘಾತಕತನವುಳ್ಳವನ ಕನಿಷ್ಠನೆಂಬರು
> ಮಾತಿನಲ್ಲಿ ಮಿತಿ ಮನದಲ್ಲಿ ಕತ್ತರಿಯುಳ್ಳವನ ಮಧ್ಯಮನೆಂಬರು.
> ಮಾತಿಲ್ಲಿ ಮೃದು ಮನದಲ್ಲಿ ಪ್ರೀತಿಯುಳ್ಳವನ ಉತ್ತಮನೆಂಬರು ನೋಡಾ
> ಈ ಜಗದವರು.
>
> ಮಾತಿನಲ್ಲಿ ಮಂತ್ರ, ಮನದಲ್ಲಿ ಮಹಾನುಭಾವ, ಆತ್ಮದಲ್ಲಿ ಜ್ಯೋತಿ ಬೆಳಗುತ್ತಿಪ್ಪುದಾಗಿ ಉತ್ತಮನಲ್ಲ, ಮಧ್ಯಮನಲ್ಲ, ಕನಿಷ್ಠನಲ್ಲ ನೋಡಾ ಅಖಂಡೇಶ್ವರಾ ನಿಮ್ಮ ಶರಣನು.

ಇದರಿಂದ ಮನದಲ್ಲಿ ಮಹಾನುಭಾವನಾದವನ ಮಾತಿನಲ್ಲಿ ಮಾತ್ರ ಮಂತ್ರ ಸದೃಶ ನುಡಿಗಳು ಹೊರಹೊಮ್ಮಬಲ್ಲವು ಎಂಬುದು ಸ್ಪಷ್ಟವಾಗುತ್ತದೆ.

---

## ಆಜೀವ ಸದಸ್ಯರುಗಳಲ್ಲಿ ಒಂದು ಮನವಿ.

ಸಿದ್ಧಗಂಗಾ ಪತ್ರಿಕೆಯ ಅನೇಕ ಆಜೀವ ಸದಸ್ಯರುಗಳ ವಿಳಾಸಗಳು ಬದಲಾಗಿರುವುದರಿಂದ ಕಾರ್ಯಾಲಯದಿಂದ ಕಳುಹಿಸಿದ ಸಂಚಿಕೆಗಳು ಕೆಲವು ಸದಸ್ಯರುಗಳಿಗೆ ತಲುಪದೆ ಹಿಂತಿರುಗುತ್ತಿವೆ. ದಯವಿಟ್ಟು ನಿಮ್ಮ ಬದಲಾದ ವಿಳಾಸಗಳನ್ನು ಆಗಿಂದಾಗ್ಗೆ ಪತ್ರಿಕಾ ಕಾರ್ಯಲಯಕ್ಕೆ ಕಳುಹಿಸಿ ಕೊಡುವುದರ ಮುಖೇನ "ಸಿದ್ದಗಂಗಾ" ನಿಮಗೆ ಕ್ರಮವಾಗಿ ತಲುಪಲು ಸಹಕರಿಸಬೇಕಾಗಿ ಪ್ರಾರ್ಥನೆ. ತಮ್ಮ ಸದಸ್ಯತ್ವದ ನಂಬರನ್ನು ತಪ್ಪದೇ ತಿಳಿಸಿರಿ.

ಪ್ರಕಾಶಕರು.

---

# ವಿಜ್ಞಾನ ಮತ್ತು ಆಧ್ಯಾತ್ಮ

**ಹೆಚ್.ಎಸ್. ನರಸಿಂಹ ಜೀಯರ್,**

ಶ್ರೀ ಬಸವೇಶ್ವರ ಇಂಗ್ಲಿಷ್ ಶಾಲೆ, ತುಮಕೂರು-2

ಈಗಿನ ಶಿಕ್ಷಣದಲ್ಲಿ ವೈಜ್ಞಾನಿಕ ಮನೋಭಾವನೆ ಬೆಳವಣಿಗೆ ಬಗ್ಗೆ ಹೆಚ್ಚಿನ ಆದ್ಯತೆ ಕೊಡಲಾಗಿದೆ. ಇದು ಅತ್ಯಾವಶ್ಯಕವೆಂಬ ವಿಚಾರದಲ್ಲಿ ಯಾರ ಭಿನ್ನಾಭಿಪ್ರಾಯವೂ ಇಲ್ಲ. ಆದರೆ ಕೆಲವರು ಧರ್ಮದ, ಆಚಾರವಿಚಾರದ ಹಾಗೂ ಆಧ್ಯಾತ್ಮಿಕತೆ ಬಗ್ಗೆ ಹೆಚ್ಚಿನ ಅರಿವಿಲ್ಲದೆ ಎಲ್ಲವನ್ನೂ ಮೂಢನಂಬಿಕೆಗಳೆಂದೂ, ಗೊಡ್ಡು ಸಂಪ್ರದಾಯಗಳೆಂದೂ ಹೀಗಳೆಯುವ ಪರಿಪಾಠಮಾಡಿಕೊಂಡಿದ್ದಾರೆ. ಇದು ಸರಿಯಲ್ಲ. ಈಗಿರುವ ಎಲ್ಲಾ ನಂಬಿಕೆಗಳೂ ಒಳ್ಳೆಯ ಸಂಪ್ರದಾಯದಿಂದ ಕೂಡಿವೆಯೆಂದೂ ಹೇಳಲಾಗದು. ಅಂಧ ಶ್ರದ್ಧೆಯಿಂದ ಅನೇಕ ಅವೈಜ್ಞಾನಿಕ ವಿಚಾರಗಳೂ ಆಚಾರಗಳೂ ಸೇರಿಕೊಂಡಿವೆ ನಿಜ.

ಆದರೆ ಎಲ್ಲಾ ಆಚಾರ ವಿಚಾರಗಳೂ, ಪದ್ಧತಿಗಳೂ ನಂಬಿಕೆಗಳೂ ಮೂಢರ ನಂಬಿಕೆಗಳಲ್ಲ. ಅನೇಕ ಸತ್ಸಂಪ್ರದಾಯಗಳಿವೆ ಇವೆಲ್ಲಕ್ಕೂ ವೈಜ್ಞಾನಿಕ ಆಧಾರವಿದೆ. ಆಧ್ಯಾತ್ಮದ ಬಗ್ಗೆ ವಿಚಾರಮಾಡಿದಾಗ ಅನೇಕ ವಿದ್ಯಾವಂತರು ಇದನ್ನು ಬೂಸಾ ಸಾಹಿತ್ಯಕ್ಕೇ ಸೇರಿಸ ಹೊರಟಿರುವುದು ಹಾಸ್ಯಾಸ್ಪದವಾಗಿದೆ. ವಿಜ್ಞಾನವೇ ಸರ್ವಸ್ವವೆಂದು ತಿಳಿದು ಹಿಂದಿನ ಸಾಹಿತ್ಯ ಹಾಗೂ ಪದ್ಧತಿಗಳನ್ನೆಲ್ಲಾ ಚುಚ್ಚುಮಾತಿನಿಂದ ಅಲಕ್ಷ್ಯ ಮಾಡುತ್ತಿರುವವರ ಅವಗಾಹನೆಗಾಗಿ, ಪ್ರಪಂಚದ ಅತ್ಯಂತ ಶ್ರೇಷ್ಠ ವ್ಯಕ್ತಿಗಳೂ, ವಿಜ್ಞಾನಿಗಳೂ ಆಧ್ಯಾತ್ಮದ ಬಗ್ಗೆ ಪರಿಪೂರ್ಣವಾಗಿ ಅರಿತು ನುಡಿದಿರುವ ಅವರ ಅನುಭವ ವಾಣಿಯನ್ನು ವಿನಮ್ರತೆಯಿಂದ ಪರಿಚಯ ಮಾಡಿಕೊಡುವುದೇ ಈ ಲೇಖನದ ಉದ್ದೇಶವಾಗಿದೆ. ಇದಕ್ಕಾಗಿ ಅವರ ಹೇಳಿಕೆಗಳನ್ನೇ ಅವರ ಭಾಷೆಯಲ್ಲಿ ಪುನರುಚ್ಚರಿಸಲಾಗಿದೆ.

ಸುಮಾರು ಅರ್ಧ ಶತಮಾನದಿಂದೀಚೆಗೆ ಹೊಸ ಹೊಸ ಆವಿಷ್ಕಾರದಲ್ಲಿ ನಿರತರಾಗಿದ್ದ ಹಾಗೂ ನಿರತರಾಗಿರುವ ಪ್ರಮುಖ ವಿಜ್ಞಾನಿಗಳು ಅದರಲ್ಲೂ ನೋಬೆಲ್ ಪಾರಿತೋಷಕ ವಿಜೇತರೂ ಸಹ, ವಿಜ್ಞಾನ ಮತ್ತು ಆಧ್ಯಾತ್ಮ ವಿಚಾರಗಳೂ ಒಂದಕ್ಕೊಂದು ಹತ್ತಿರ ಬರುತ್ತಿವೆ ಹಾಗೂ ಇವುಗಳ ಸಂಬಂಧ ಹೆಚ್ಚುತ್ತಿದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಮಾನವನ ಪ್ರಗತಿಗೆ ಇವೆರಡೂ ಅತ್ಯಾವಶ್ಯಕವೆಂಬುದು ಅವರ ಖಚಿತ ಅಭಿಮತ. ಅದರಲ್ಲಿಯೂ ಆಧ್ಯಾತ್ಮಕ್ಕೆ ಮೊದಲ ಆದ್ಯತೆ ಎಂದು ಪ್ರತಿಪಾದಿಸಿದ್ದಾರೆ, ಎರಡರ ಸಂಗಮದಿಂದ ಮಾತ್ರ ಮಾನವನು ಉನ್ನತ ಮಟ್ಟಕ್ಕೇರಲು ಸಾಧ್ಯವೆಂದು ತಿಳಿಸಿದ್ದಾರೆ.

ನೋಬೆಲ್ ಪಾರಿತೋಷಕ ಪಡೆದ ವಿಜ್ಞಾನಿ ಡಾ|| ಆರ್. ಮಾಲಿಕನ್‌ರವರು ಈ ರೀತಿ ಹೇಳಿದ್ದಾರೆ. It seens to me that the two great Pillars upon which all human well being and human progress rests are first, the spirit of religion, and second the spirit of science and knowledge. Neither of them can attain its highest effectiveness without the other........"

ಇತ್ತೀಚೆಗೆ ವಿಜ್ಞಾನ ಹಾಗೂ ಆಧ್ಯಾತ್ಮಕತೆ ಇವೆರಡೂ ನಿಕಟವಾಗುತ್ತಿರುವ ಬಗ್ಗೆ J, H, C, ಕ್ರೇಗ್‌ರ್ಟ ಎಂಬ ವಿದ್ವಾಂಸರು "with the development of science, particularly in fundmental in research many of the vedantic theories are becoming scientffically tenable. Even eminent scientists of the stature of Einstein and others are sauguine that the day is not for off when physics and metaphysics will walk hand–in—hand"—ಎಂದು ಅಭಿಪ್ರಾಯ ಸೂಚಿಸಿದ್ದಾರೆ.

ಉದಾಹರಣೆಗೆ, ಋಗ್ವೇದದ ಉಪವೇದ ಆಯುರ್ವೇದದಲ್ಲಿ ಬರುವ ಮಾನವ ಶರೀರಶಾಸ್ತ್ರ (Anatomy)ದ ವಿಷಯದಲ್ಲಿರುವ ಅನೇಕ ವಿಚಾರಗಳು ಪಾಶ್ಚಾತ್ಯರ ಗಮನ ಸೆಳೆದಿವೆ. ಈ ಶಾಸ್ತ್ರದ ಬಗ್ಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತಾ Sir william Hunter ಎಂಬ ವಿದ್ವಾಂಸರು (ವಿಜ್ಞಾನಿ) "These treatises show Profound Knowledge of physiology with special reference to the functioning of muscles, blood-cells, bones proteins and other body building substances. No less astounding is the science of preparing medicine from roots and herbs, which shows most subtle Knowledge of the relation ship between the properties of the medicines on one side and the causes of the diseases the other" ಎಂಬುದಾಗಿ ಪ್ರಶಂಸಿದ್ದಾರೆ. ಇದೇ ವಿಚಾರದಲ್ಲಿ Prof; wilson ರವರು "the method of diagnosis of diseases in the ancient Indian seience of Life (Ayurveda) is in complete accord with modern science of medicine" ಎಂದು ಹೇಳಿದ್ದಾರೆ.

ಈಗಿನ ತಳಿಶಾಸ್ತ್ರ (genetics)ದ ಪ್ರಮುಖ ಅಂಶಗಳೂ, RNA ಮತ್ತು DNA ಮುಂತಾದ ವಿಷಯಗಳೂ ನಮ್ಮ ಪೂರ್ವಜರಿಗೆ ತಿಳಿದಿತ್ತು. ಎಂಬುದಾಗಿ 15-2-83ರ Times of India ಪತ್ರಿಕೆಯಲ್ಲಿ ವರದಿಯಾಗಿದೆ.

ಇತ್ತೀಚಿನ ವಿಜ್ಞಾನದ ಆವಿಷ್ಕಾರಗಳಾದ Theory of creation and evolution; Theory of relativity and The Quantam Theory ಇವುಗಳ ವಿಚಾರವಾಗಿ ಪರಿಶೀಲಿಸಿದ ವಿಜ್ಞಾನಿಗಳು ಆಧ್ಯಾತ್ಮ ಮತ್ತು ವಿಜ್ಞಾನದ ಬಗ್ಗೆ ಸಂಬಂಧವನ್ನು ಗುರ್ತಿಸಿದ್ದಾರೆ. ಸ್ವಾಮಿ ವಿವೇಕಾನಂದರು ಈ ವಿಚಾರವಾಗಿ ತಮ್ಮ ಖಚಿತ ಅಭಿಪ್ರಾಯವನ್ನು ತಿಳಿಸುತ್ತಾ " To-day we find wonderful discoveries of modern science coming upon us like bolts from the blue, opening our eyes to marvels we never dreampt of. But many of these are only re-discoveries of What has been found by our seekers of truth ages ago'' ಎಂದಿದ್ದಾರೆ.

ಕೆಲವರು ಆಧ್ಯಾತ್ಮವು ವೈಜ್ಞಾನಿಕ ತಳಹದಿಯನ್ನು ಹೊಂದಿಲ್ಲ. ವಿಜ್ಞಾನದಂತೆ ಇದರಲ್ಲಿ ವೀಕ್ಷಣೆಗೆ, ಪರಿಶೀಲನೆಗೆ ಹಾಗೂ ಪ್ರಯೋಗಕ್ಕೆ ಅವಕಾಶವಿಲ್ಲ ಎಂದು ಅಭಿಪ್ರಾಯ ಪಡುತ್ತಾರೆ. ಹಾಗೂ ಫಲಿತಾಂಶ ನಿರ್ಣಯವೂ ಸಾಧ್ಯವಿಲ್ಲವೆನ್ನುತ್ತಾರೆ. ಅನೇಕ ವಿದ್ವಾಂಸರು ಆಧ್ಯಾತ್ಮ ವಿಚಾರದಲ್ಲಿ ಪರಿಶೀಲನೆ ನಡೆಯಿಸಿ ಇದಕ್ಕೂ ವೈಜ್ಞಾನಿಕ ಆಧಾರ ವಿದೆ ಎಂದು ಅಭಿಪ್ರಾಯ ಸೂಚಿಸಿದ್ದಾರೆ. ಮ್ಯಾಕ್ಸ್ ಪ್ಲ್ಯಾಂಕ್ (Max Plank) ಎಂಬ ಭೌತಶಾಸ್ತ್ರಜ್ಞನು ಈ ಕೆಳಕಂಡ ರೀತಿ ವಿವರಿಸಿದ್ದಾನೆ.

" To Spirituality Reality is a fact Obtaining prior to any thing else while, to the scientist this Reality is arrived at as a result of prior data gathered through sense-peception and analysed through reason In other words Spirituality starts with the "inner " Univese, while Science starts with the " Outer " Universe, but ultimately both reach the same reality. ಇವೆರಡೂ ಒಂದೇ ಗುರಿಯನ್ನು ತಲುಪುತ್ತವೆ ಎಂದೂ ತನ್ನ ಅನಿಸಿಕೆಯನ್ನು ವ್ಯಕ್ತಪಡಿಸಿದ್ದಾನೆ.

ವಿಜ್ಞಾನದಲ್ಲಿ ಪರಮಾಣು ಪರಿಶೀಲನೆ ಪಟ್ಟಕ್ಕೆ ಬಂದಾಗ ವಿಜ್ಞಾನಿಗಳು ಆಧ್ಯಾತ್ಮದ ಕಡೆಗೆ ವಾಲುತ್ತಾ ಇವೆರಡರ ಸಂಬಂಧ ಗುರ್ತಿಸಿದ್ದಾರೆ ಈ ಬಗ್ಗೆ ವಿಜ್ಞಾನಿಗಳೇ ಹೀಗೆ ಬರೆದಿದ್ದಾರೆ. (Science and Spirituality-by Scientists)

It was only when science Came to the automic level which is the edge of the physical world and matter began to melt into mystery that the scientist found himself face to face with a conscious, intelligent principle underlying all objects, manifestations and events and, yet, also transcending them all. in many other aspects, too, the physical science found it self standing on the threshold to the "Other side" or "beyond" the physical world and having glimpses of the transecndental Reality"

ಈ ರೀತಿ ವಿಜ್ಞಾನಿಗಳೂ ಸಹ ವಿಶ್ವ ಚೈತನ್ಯವನ್ನು ಅತೀತವಾದ ಶಕ್ತಿಯನ್ನು ಗುರ್ತಿಸಿ ಇವರ ಸಹಾಯದಿಂದ ಮುಖ್ಯ ತತ್ವಗಳನ್ನು ವಿವರಿಸಲು ಯೋಚಿಸುತ್ತಿದ್ದಾರೆಂದು ಹೇಳಬಹುದು.



# ನಾಡು–ನುಡಿಗಾಗಿ

" ಭಗಿನಿ " ಎನ್.ಎಸ್. ಅಶ್ವತ್ಥಲಕ್ಷಮ್ಮ, ಎಂ.ಎ, ಗುಬ್ಬಿ.

"ಜಯಭೇರಿ" ಹೊಡೆಯೋಣ
ಬನ್ನಿರೆಲ್ಲಾ ..............।
ನಾವೆಲ್ಲಾ ..............।
ಕನ್ನಡದ ನಾಡಿಗಾಗಿ
ಕನ್ನಡದ ನುಡಿಗಾಗಿ ॥

ತಾಯ್ನುಡಿಯ ದೂಷಿಸುತ
ತಬ್ಬಲಿಗಳಾಗದಿರಿ ।
ತಾಯ್ನಾಡ ದ್ವೇಷಿಸುತ
ಅಲೆಮಾರಿಗಳಾಗದಿರಿ ।
ನನ್ನಣ್ಣ ತಮ್ಮದಿರೇ
ನನ್ನಕ್ಕ ತಂಗಿಯರೇ ॥ ಜಯಭೇರಿ ॥

ಅನ್ಯಭಾಷೆಯ ದ್ವೇಷ
ಎಂದಿಗೂ ಮಾಡದಿರಿ ।
ಮಾತೃಭಾಷೆಯ ನೀವು
ಎಂದೆಂದೂ ಮರೆಯದಿರಿ ।
ನನ್ನಣ್ಣ ತಮ್ಮದಿರ
ನನ್ನಕ್ಕ ತಂಗಿಯರೇ ॥ ಜಯಭೇರಿ ॥

ನಾಡಿನಾ ಏಳಿಗೆಗೇ
ಪಣತೊಟ್ಟು ಹೋರಾಡಿ ।
ನುಡಿಯಾ ಮೇಲ್ಮೆಗೆ
ಮನವಿಟ್ಟು ಮಾತಾಡಿ ।
ನನ್ನಣ್ಣ ತಮ್ಮದಿರೇ
ನನ್ನಕ್ಕ ತಂಗಿಯರೇ ॥ ಜಯಭೇರಿ ॥

ಸಂಸ್ಕೃತಿಯ ಸಿರಿತನವ
ಸತ್ಕೃತಿಯ ಹಿರಿತನವ ।
ಛಲವಿತ್ತು ಮನವಿತ್ತು
ಮೆರೆಸಾಡೆ ಅನುವಾಗಿ ।
ನನ್ನಣ್ಣ ತಮ್ಮದಿರೇ
ನನ್ನಕ್ಕ ತಂಗಿಯರೇ ॥ ಜಯಭೇರಿ ॥

ಕಲಿತನದ ಕೆಚ್ಚಿನಲ್ಲಿ
ಬಲಿದಾನದ ಮೆಚ್ಚಿನಲಿ।
ಬಲವಿತ್ತು ಛಲವಿತ್ತು
ತ್ಯಾಗದಾ ಭಾವದಲಿ ।
ನನ್ನಣ್ಣ ತಮ್ಮದಿರೇ
ನನ್ನಕ್ಕ ತಂಗಿಯರೇ ॥ ಜಯಭೇರಿ ॥

# ನೀತಿ ಶೀಲ ಪ್ರಗತಿ (ಚಿಂತನ)

**ಕೆ. ಶಾರದಾರಾಜಶೇಖರ್,** 847, 4ನೇ ಮೈನ್, ವಿಜಯನಗರ, ಬೆಂಗಳೂರು-40.

ಸಾಂಪ್ರದಾಯಕ ನೀತಿ ಧರ್ಮವನ್ನು ನಾವು ಸೂಕ್ಷ್ಮವಾಗಿ ವಿಚಾರ ಮಾಡಿದಾಗ, ಪ್ರಾಚೀನ ಕಾಲದಿಂದಲೂ ಮಾನವರಲ್ಲಿ ಒಂದು ನೀತಿ ಕ್ರಮ, ನೈತಿಕ ವ್ಯವಸ್ಥೆ ಇದ್ದಿತು ಎಂಬುದಾಗಿ ನಮಗೆ ಭಾಸವಾಗುತ್ತದೆ, ಪ್ರಾಚೀನರಲ್ಲಿ ಅವರದೇ ಆದ ಒಂದು ನೀತಿ ಶಾಸ್ತ್ರವಿದ್ದಿತು. ಅವುಗಳು ಇಂದು ನಮಗೆ ಸಮ್ಮತವಾಗದೆ ಇರಬಹುದು. ನಮ್ಮ ನವೀನ ನ್ಯಾಯ ದೃಷ್ಟಿಯಿಂದ ಸಮಂಜಸವಾಗಿಲ್ಲದೇ ಇರಬಹುದು, ಆದರೂ ಕೂಡ ಅವುಗಳೇ ಈಗಿನ ಪ್ರಚಲಿತ ನೀತಿ ಧ್ಯೇಯಗಳಿಗೆ ಬುನಾದಿ ಎಂದು ಹೇಳಬಹುದು. ಪ್ರಾಚೀನ ಕಾಲದಿಂದಲೂ ಮಾನವನಿಗೆ ಒಂದು ನೀತಿ ಧರ್ಮ ದೃಷ್ಟಿ ಇದ್ದಿತು. ಕಾಡುಮನುಷ್ಯರು ಹಿಂದುಳಿದವರು ಈಗಲೂ ಸಹ ತಮ್ಮದೇ ಆದ ನೀತಿ ಕಟ್ಟಳೆಗಳನ್ನು ಇಟ್ಟುಕೊಂಡಿದ್ದಾರೆ.

ಪೂರ್ವಕಾಲದಿಂದಲೂ ಈಗಿನವರೆಗೂ ಮತ್ತು ಮುಂದಕ್ಕೂ ನೀತಿ ಧರ್ಮದಲ್ಲಿ ಪ್ರಗತಿಶೀಲ ಪರಿವರ್ತನೆ ಆಗುತ್ತಲೇ ಇದೆ.

ಪೂರ್ವಜರು ತಮ್ಮ ಕಾಲದ ನೀತಿ ಧರ್ಮಗಳಾದ ಸಹಗಮನ, ವಿಧವಾಬಹಿ-ಷ್ಕಾರ, ಜಾತಿ ಭೇದ, ಬಹು ಪತ್ನಿತ್ವ, ಅಸ್ಪೃಶ್ಯತೆ, ಶಿಶುಹತ್ಯೆ, ಇವೆಲ್ಲವೂ ಸಮಾಜದ ಧರ್ಮಗಳೇ ಎಂದೆಣಿಸಿದ್ದರು. ಹಿಂದೆ ಯಾವುವು ಒಳ್ಳೆಯ ಧರ್ಮತತ್ತ್ವಗಳು ನೀತಿ ಕ್ರಮಗಳು ಎಂದೆನಿಸಿಕೊಂಡಿದ್ದವೋ ನಾವು ನಮ್ಮ ಆಧುನಿಕ ಆಲೋಚನಾತ್ಮಕ ನೀತಿ ಧರ್ಮದೃಷ್ಟಿಯಿಂದ ಅವಹೇಳನಕರವಾದ ಅಕೃತ್ಯಗಳೆಂದು ಪರಿಗಣಿಸುತ್ತೇವೆ. ಆದ್ದ-ರಿಂದ ನೀತಿ ಪ್ರಗತಿ ನೀತಿ ಸೂಕ್ಷ್ಮದ ಪ್ರಗತಿ ಸಾದನೆಯೆಂದು ಹೇಳುತ್ತೇವೆ. ನೀತಿಯ ಅನೇಕ ಆದರ್ಶಗಳು, ಧ್ಯೇಯಗಳು ಮಾನವರಿಂದ ಸಾಧಿಸಲ್ಪಡದೆ ಇರಬಹುದು ಆದರೆ ನಮ್ಮ ನೀತಿಯ ರೀತಿ ವ್ಯತ್ಯಾಸಗಳು ಆ ಧ್ಯೇಯಗಳ ಹತ್ತಿರಕ್ಕಾದರೂ ನಮ್ಮನ್ನು ಒಯ್ಯುವುದಾದರೆ ಅದೇ ಪ್ರಗತಿ ಶೀಲ ಪರಿವರ್ತನೆ.

ಪ್ರಾಚೀನ ನೀತಿ ಧರ್ಮಗಳು ವ್ಯಕ್ತಿತ್ವವನ್ನು ಗಮನಕ್ಕೆ ತೆಗೆದುಕೊಂಡಿರಲಿಲ್ಲ. ವ್ಯಕ್ತಿಯನ್ನು ನೀತಿ ಪ್ರಪಂಚದಲ್ಲಿ ಏಕಮಾನವಾಗಿ ಪುರಸ್ಕರಿಸಲಿಲ್ಲ ಅವರು ತಮ್ಮ

ಪಂಗಡವನ್ನೇ ಏಕಮಾನವಾಗಿಟ್ಟುಕೊಂಡಿದ್ದರು. ವ್ಯಕ್ತಿಯ ವ್ಯಕ್ತಿತ್ವ ಸಮಾಜ ಜೀವನದಲ್ಲಿ ಮುಳುಗಿತ್ತು. ನೀತಿ ಪ್ರಗತಿ ಸಾಧನೆಯಾದ ಹಾಗೆಲ್ಲಕ್ರಮವಾಗಿ ವ್ಯಕ್ತಿತ್ವಕ್ಕೆ ಮಾನ್ಯತೆ ಸಲ್ಲತೊಡಗಿತು. ಈ ವ್ಯಕ್ತಿತ್ವದ ಮಾನ್ಯತೆಯು ಬಹುಮುಖ್ಯವಾದ ಒಂದು ಘಟ್ಟ- ಮೈಲಿಗಲ್ಲು ಎಂದು ಹೇಳಬಹುದು.

ಈಗಿನ ಮಾನವೀಯ ಹಕ್ಕುಗಳು ಮತ್ತು ಮೂಲಭೂತ ಹಕ್ಕುಗಳು ವ್ಯಕ್ತಿಮಾನ್ಯತೆಯ ಪ್ರತೀಕವೇ ಸರಿ. ಹಿಂದಿನ ಸಾಂಪ್ರದಾಯಿಕ ನೀತಿ ಧರ್ಮಗಳ ವೈಶಿಷ್ಟ್ಯವೆಂದರೆ ಬಾಹ್ಯನಿಯಂತ್ರಣಗಳಿಗೆ ವಿಧೇಯತೆ ಮಾತ್ರ. ಸಮಾಜದಲ್ಲಿನ ಶಿಕ್ಷೆಯ ಹೆದರಿಕೆ, ನರಕ-ಭೀತಿ ಇತ್ಯಾದಿ ಇವುಗಳಿಗೋಸ್ಕರ ನೀತಿ ಧರ್ಮ ಪಾಲನೆ ಮಾಡುವುದು ಒಂದು ತರಹವಾದದ್ದು. ಇಂತಹ ವ್ಯಕ್ತಿಗಳು ನೀತಿವಂತರಾಗಿದ್ದರೆ ಅವರಿಗೆ ನಿಜವಾಗಿಯೂ ಪುರಸ್ಕಾರವಿಲ್ಲ. ತನ್ನ ಅಂತರಾತ್ಮನಿಗೆ ಹೆದರಿ ನೀತಿವಂತನಾಗಿ, ಶೀಲಪರನಾಗಿದ್ದರೆ ಮಾತ್ರಅವನು ಉತ್ಕೃಷ್ಟ ನೀತಿಮಾನವನೆನಿಸಿಕೊಳ್ಳುತ್ತಾನೆ.

ಆಲೋಚನಾತ್ಮಕ ನೀತಿ ಧರ್ಮದಲ್ಲಿ ನಾವು ವ್ಯಕ್ತಿಯನ್ನು ಆತನ ಬಾಹ್ಯಕ್ರಿಯೆಗಳ ಆಧಾರದ ಮೇಲೆ ಅಳೆಯುವುದಿಲ್ಲ. ಆತನ ಅಂತರಂಗದ ಇಂಗಿತಗಳು ಆಂತರಿಕ ಉದ್ದೇಶ ಭಾವಗಳಿಂದ ನೈತಿಕಮಟ್ಟವನ್ನು ನಿರ್ಣಯಿಸುತ್ತೇವೆ- ಆಂತರಿಕ ಧ್ಯೇಯಗಳ ಶುದ್ಧತೆಯಿಂದ ಪರಿಕ್ಷಿಸುತ್ತೇವೆ. ಹೊರಗಿನ ಕ್ರಿಯಾರೂಪವಾದ ನಡತೆಗಿಂತ ವ್ಯಕ್ತಿಯ ಆಂತರಿಕ ವೈಲಕ್ಷಣ್ಯವನ್ನು ಪರಾಮರ್ಶಿಸುದು ಸೂಕ್ತವಲ್ಲವೇ ? ಆಂತರ್ಯ ಶುದ್ಧಿ, ಶ್ರೇಷ್ಠ ಚಿತ್ತವೃತ್ತಿಗಳೇ ನೀತಿಪ್ರಗತಿಯ ಪ್ರತೀಕಗಳು.

ಆಲೋಚನಾತ್ಮಕ ಪ್ರಗತಿಪರ ನೀತಿ ಧರ್ಮ, ಸೌಜನ್ಯಕ್ಷಮೆ, ಸಾವಧಾನ ಚಿತ್ತವೃತ್ತಿ, ಹೃದಯಂಗಮವಾದ ನೈತಿಕಧರ್ಮ, ಸ್ನೇಹಭಾವ, ಅನುಕಂಪ ಇವುಗಳಿಗೆ ಅತಿಬೆಲೆ ಕೊಡುತ್ತದೆ.

ನೀತಿಯ ಪ್ರಗತಿ ಅಂದರೆ ಸೌಜನ್ಯ, ದಯಾಪರತೆ ಸಾಧುಗುಣಗಳಿಗೆ ಪ್ರಾಧಾನ್ಯ ಕೊಡುವುದು, ಇದರಿಂದ ಮಾನವ ಕುಲವೇ ಒಂದು ಸಂಸಾರವೆಂಬ ಪೂರ್ಣಭಾವನೆ ನಂಬಿಕೆ ಉಂಟಾಗುತ್ತದೆ.

# ಕಡಿಮೆ ಹಣ ಖರ್ಚು ಮಾಡಿ

# ಹೆಚ್ಚು ಬಟ್ಟೆಗಳನ್ನು ಒಗೆಯಿರಿ.

- ಇದೀಗ ನೀವು ಸಾಬೂನಿಗೆ ಕಡಿಮೆ ಹಣ ಖರ್ಚು ಮಾಡಿ ಹೆಚ್ಚು ಬಟ್ಟೆಗಳನ್ನು ಒಗೆಯಬಹುದು.
- ಕಸ್ತೂರಿ ನೀಲಂ ಹಾಗೂ ಕಸ್ತೂರಿ ಬಾರ್ ಸೋಪ್ ಉಪಯೋಗಿಸುವುದರಿಂದ ಇದು ಸಾಧ್ಯ.
- ಕಸ್ತೂರಿ ಸಾಬೂನುಗಳು ಬಹು ಉಳಿತಾಯಕರವಾದುದು ಅಲ್ಲದೆ, ಪ್ರತಿ ಬಾರ್ ಸೋಪಿನಿಂದಲೂ ಹೆಚ್ಚು ಬಾರಿ ಒಗೆಯಲು ಸಾಧ್ಯವಾಗುತ್ತದೆ.
- ಇದರಲ್ಲಿ ವಿಶೇಷ ಡಿಟರ್ಜೆಂಟುಗಳು ಮಿಶ್ರಿತವಾಗಿರುವುದರಿಂದ ನಿಮ್ಮ ಉಡುಪುಗಳ ಬಿಳುಪಿಗಿಂತಲೂ ಅತ್ಯಧಿಕ ಉಜ್ವಲವಾಗಿರುತ್ತವೆ.

ಕಸ್ತೂರಿ ಸಾಬೂನುಗಳನ್ನು ಇಂದೇ ಉಪಯೋಗಿಸಿರಿ

**'ಕಸ್ತೂರಿ' ಬಾರ್ ಸೋಪ್**

**'ಕಸ್ತೂರಿ' ನೀಲಂ ಬಾರ್ ಸೋಪ್**

ತಯಾರಕರು :

## ರಾಮಕೃಷ್ಣ ಆಯಿಲ್ ಮಿಲ್, ತುಮಕೂರು

# ನಗೆ–ನೀತಿ–೧

ಆ॥ವಿ॥ಡಾ॥ ಬಸವರಾಜ ಶಾಸ್ತ್ರಿಗಳು,
ಶಾ॥ ಬೃಹನ್ಮಠ. ನಿ॥ಪ್ರ॥ಕ॥ಸಂ॥ ಪಂಡಿತರು, 145/18. ನೆಹ್ರೂ ಕಾಲೋನಿ, ಬಳ್ಳಾರಿ-3

ನಗುವು ಮಾನವನ ಧರ್ಮ, ನಗಿಸುವುದು ತಿಳಿದವರ ಕರ್ತವ್ಯ. "ಯೇನಕೇನ ಪ್ರಕಾರೇಣಸಂತೋಷಂ ಜನಯೇತ್‌ಪ್ರಾಜ್ಞಃ ತದೇವ ಈಶ್ವರ ಪೂಜನಂ" ಇತರರಿಗೆ ಸಂತೋಷವನ್ನುಂಟು ಮಾಡುವುದೇ ಈಶ್ವರ ಪೂಜೆ ಎಂದಾಗ ನಗುವಿನ ಮಹಿಮೆ ಹೇಳಬೇಕೆ ? ನೀತಿ ಜೀವನದ ಜೀವಾಳ, ಹಾಸ್ಯದ ಅನುಭವಪ್ರದರ್ಶನವೇನಗೆ ಎಂದು ಶಾಸ್ತ್ರ ಹೇಳುತ್ತದೆ. ಹಾಸ್ಯರಸನವರಸಗಳಲ್ಲಿ ಒಂದು "ರಸೋವೈಸಃ" ಎಂದಾಗ ರಸವೇದೇವರು ಎಂದಹಾಗಾಯಿತು ಇದು ಸಾಹಿತ್ಯದಲ್ಲಿ ಊಟಕ್ಕೆ ಉಪ್ಪಿನಕಾಯಿ ಇದ್ದಂತೆ. ರಸವೆಂದರೆ ಮನಸ್ಸನ್ನು ಕರಗಿಸುವುದು. ಹಾಸ್ಯವೆಂದರೆ ಒಳ್ಳೆಯ ರೀತಿಯಿಂದ ಮನಸ್ಸನ್ನು ಅರಳಿಸುವುದು. ನೀತಿ ಜೀವನದ ನೆಲೆಗಟ್ಟು. ನೀತಿಯಿಲ್ಲದ ಬಾಳು ಹಾಳಾಗುತ್ತದೆ. ನಗೆಗೆ ಸಂತೋಷವು ಮೂಲಕಾರಣವಾದಂತೆ. ಶೀಲಕ್ಕೆ ನೀತಿಯೇ ಮೂಲ, ಶೀಲ ಸಂಪಾದನೆಯಿಂದಲೇ ಶೂನ್ಯ ಮೋಕ್ಷ, ಸಂಪಾದನೆಯು.

ಸಾಳ್ವನೆಂಬ ಕವಿಯು ತನ್ನ ರಸ ರತ್ನಾಕರದಲ್ಲಿ "ಹಾಸ್ಯಕ್ಕಧೀಶಂ ಗಜಾಸ್ಯಂ" ಎನ್ನುತ್ತಾನೆ. ಪವಿತ್ರ ಶೃಂಗಾರದಿಂದ ಹಾಸ್ಯ ರಸವು ಹುಟ್ಟುತ್ತದೆ. ಹಾಸ್ಯ ರಸವು ಹುಟ್ಟುವುದನ್ನು ಕಾಳಿದಾಸನು ಈ ರೀತಿ ತಿಳಿಸಿರುವನು : "ಒಮ್ಮೆ ಗಣೇಶಚೌತಿಯ ದಿನ ಷಣ್ಮುಖನು ಕೈಲಾಸದಲ್ಲಿ ದೇವತೆಗಳಿಗೆ ಗಣಪತಿ ಹೇಗೆ ಆನೆಮುಖದವನಾದ ಎಂಬ ಕಥೆಯನ್ನು ಹೇಳುತ್ತಿದ್ದನು. ಇದು ನೋಡಿದ ಗಣಪತಿಯು ತನ್ನನ್ನು ಆನೆ ಮುಖದವನೆಂದನಲ್ಲಾ ಎಂದು ಎದ್ದು ಒಂದು ಸಭೆಯಲ್ಲಿ ಎಲ್ಲರ ಎದುರಿಗೆ ಆರು ತಲೆ ಹನ್ನೆರಡು ಕಣ್ಣುಗಳನ್ನು ಎಣಿಸಿದನು. ಆಗ ಸಿಟ್ಟಿಗೆದ್ದ ಷಣ್ಮುಖನು ಗಣಪತಿಯ ಕಿವಿಯನ್ನು ಗಟ್ಟಿಯಾಗಿ ಹಿಂಡಿದನು. ಗಣಪತಿಯು ಘೀಂಕರಿಸಿ ಅತ್ತನು. ತಾಯಿ ಪಾರ್ವತಿಯು ಏ ಗಣಪ ; ಏಕಳುವೆ ? ಎಂದಳು. ಗಣಪತಿಯು ಬೆಂಕಿ ಹುಟ್ಟಿದ ಈ ಷಣ್ಮುಖನು ನನ್ನ ಕಿವಿ ಹಿಂಡಿದನಮ್ಮಾ! ಎಂದನು. ಪಾರ್ವತಿಯು ದೇವತೆಗಳ

ಸೇನಾಧಿಪತಿಯಾದ ಷಣ್ಮುಖನೇ ಏಕೀಚೇಷ್ಟೆ ? ಎಂದಳು. ಆಗ ಷಣ್ಮುಖನು ಅಮ್ಮಾ ಅವನೇ ನನ್ನ ತಲೆಗಳನ್ನು ಕಣ್ಣುಗಳನ್ನು ಎಣಿಸಿದನಮ್ಮಾ ಎಂದನು. ಆಗ ಗಣಪತಿಯು ಅವನೇ ಮೊದಲು ನನ್ನ ಮೂಗನ್ನು ಅಳತೆ ಮಾಡಿದನಮ್ಮಾ ಎಂದನು. ಆಗ ಪಾರ್ವತಿಯು ತನ್ನಿಬ್ಬರ ಮಕ್ಕಳು ಒಬ್ಬನು ಆನೆಯ ಮುಖದವ, ಮತ್ತೊಬ್ಬನು ಆರು ಮುಖದವನು ಎಂದು ನಸು ನಗುತ್ತ ಶಿವನ ಬಳಿಗೆ ಬಂದು ತನ್ನ ಬಲಭಾಗದಲ್ಲಿ ಗಣಪತಿಯನ್ನು ಕುಳ್ಳಿರಿಸಿದಳು. ಇದನ್ನು ಕಂಡ ಶಿವನು ಪಾರ್ವತಿ ಏಕೆ? ನಗೆ? ಎಂದನು. ಪಾರ್ವತಿಯು ನಡೆದ ವಿಷಯ ತಿಳಿಸಿದಳು. ಶಿವನಿಗೂ ಪಾರ್ವತಿಗೂ ಮಗನ ಮೇಲೆ ಪ್ರೀತಿಯಾಗಿ ಏಕ ಕಾಲದಲ್ಲಿ ಗಣಪತಿಗೆ ಮುದ್ದು ಕೊಡಲು ಬಾಗಿದರು. ಇದನ್ನರಿತ ಗಣಪತಿಯು ತಾನೀಗ ಹಿಂದಕ್ಕೆ ಸರಿದರೆ ಹೇಗೆ? ಎಂದು ಸರಿದನು. ಶಿವಪಾರ್ವತಿಯರಿಗೆ ಚುಂಬನವಾಯಿತು. ಆಗ ಗಣಪತಿಯು ಚಪ್ಪಾಳೆಇಟ್ಟು ಪಕಪಕನೆ ನಕ್ಕನು. ಈ ರೀತಿ ನಗುತ್ತಿರುವ ಶಿವಪಾರ್ವತಿ ಸಹಿತ, ನಮ್ಮನ್ನು ಕಾಪಾಡಲಿ ಎಂದಿರುವನು. ಗಣಪತಿಯು.

ನೀತಿ : ಅಣ್ಣತಮ್ಮಂದಿರ ಪ್ರೀತಿ, ತಾಯಿ–ತಂದೆಗಳ ಮಕ್ಕಳ ಪ್ರೇಮ ಸತಿಪತಿ-ಗಳ ಆದರ್ಶ ಪ್ರೀತಿ.

ನಗೆಯಲ್ಲಿ ಇಪ್ಪತ್ತೊಂದು ಬಗೆಗಳಿವೆ:-

1 ಮುಗುಳುನಗೆ 2 ಅರಳುನಗೆ 3 ತುಂಬುನಗೆ 4 ಬಿರುನಗೆ 5 ಹುಚ್ಚುನಗೆ 6 ಹುಚ್ಚಾದನಗೆ 7 ಅಂತಸ್ಥಿತನಗೆ 8 ಕೋಪಗರ್ಭ-ಸ್ಮಿತನಗೆ 9 ವಿಧಿಯವೀಕೃತ ಹಾಸನಗೇ 10 ರೋಡಾಟನಗೆ 11 ಕೊರ-ಚಾಟನಗೆ 12 ನಲ್ನಗೆ 13 ತಣ್ನಗೆ 14 ಹುಸಿನಗೆ 15 ಬಿಸಿನಗೆ 16 ರಸನಗೆ 17 ಬಿರುಸುನಗೆ 18 ಕೆಣಕುನಗೆ 19 ಅಣಕುನಗೆ 20 ಗಹಗಹಿಪನಗೆ 21 ಚುನ್ನವಾಡಿನಗೆ ಹೀಗೆ ಇಪ್ಪತ್ತೊಂದು ಬಗೆಗಳಿದ್ದ ಕಾರಣ ಗಣಪತಿಗೆ 21 ಮೋದಕ (ಕಡುಬು)ಗಳನ್ನು ನೈವೇದ್ಯ ಮಾಡಲಾಗುತ್ತದೆ. ಮೋದ ಎಂದರೆ ಸಂತೋಷ 'ಕ' ಎಂದರೆ ಉಂಟು ಮಾಡುವುದು. "ಕಥೆ" ಎಂದರೆ "ಕ" ಸಂತೋಷವಾಗುವಂತೆ "ಥಾ" ಹೇಳುವುದು. ಇಂಥ 21 ಸಣ್ಣ ಕಥೆಗಳ ದೃಷ್ಟಾಂತಗಳಿಂದ ನಗೆನೀತಿ ರೂಪಿಸಲಾಗುವುದು.

# ತೋಟಗಾರಿಕೆ ಉದ್ಯಮ

ಡಿ. ವೆಂಕಟರಾವ್, ಎಂ.ಎ, ಅರ್ಥಶಾಸ್ತ್ರ ಪ್ರವಾಚಕರು, ಸರ್ಕಾರಿ ಕಲಾ ಕಾಲೇಜ್ ಹಾಸನ.

ಕೃಷಿಯ ಒಂದು ಅಂಗವಾದ ತೋಟಗಾರಿಕೆಯು ರಾಜ್ಯದಲ್ಲಿ ಜನಪ್ರಿಯವಾಗುತ್ತಿರುವ ಉದ್ಯಮ. ನಮ್ಮರಾಜ್ಯದ ಮಣ್ಣು ಮತ್ತು ಹವಾಗುಣ ಸಮೃದ್ಧತೋಟಗಾರಿಕೆಗೆ ಸೂಕ್ತವಾಗಿದೆ. ಆಹಾರ ಸಮಸ್ಯೆಯ ಪರಿಹಾರದಲ್ಲಿ ತೋಟದ ಉತ್ಪನ್ನಗಳಾದ ಹಣ್ಣು, ತರಕಾರಿ, ಸೊಪ್ಪು ಮುಂತಾದವು ವಹಿಸುವ ಪಾತ್ರ ಅಮೂಲ್ಯವಾದವು. ಪೌಷ್ಟಿಕಾಹಾರ ದೃಷ್ಟಿಯಿಂದಲಂತೂ ತೋಟಗಾರಿಕೆಗೆ ಬಹಳ ಮಹತ್ವವಿದೆ.

ರಾಜ್ಯದಲ್ಲಿ ತೋಟಗಾರಿಕೆಗಾಗಿ ಒಂದು ಯೋಜಿತ ಅಭಿವೃದ್ಧಿ ಕಾರ್ಯಕ್ರಮ ಆರಂಭವಾದುದು ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ. ನಂತರದ ಪಂಚವಾರ್ಷಿಕ ಯೋಜನೆಗಳಲ್ಲಿ ಈ ಕ್ಷೇತ್ರ ಗಣನೀಯ ಯಶಸ್ಸನ್ನು ಗಳಿಸುತ್ತಿದೆ. ದ್ವಿತೀಯ ಯೋಜನೆಯ ನಾಲ್ಕನೆ ವರ್ಷದಲ್ಲಿದ್ದ ತೋಟಗಾರಿಕೆ ಕ್ಷೇತ್ರ 354 ಲಕ್ಷ ಹೆಕ್ಟೇರ್‌ಗಳು. ಅಂದರೆ ಒಟ್ಟು ಕೃಷಿ ಕ್ಷೇತ್ರದ ಶೇ. 3.5 ಭಾಗ. 1968–69ರ ವೇಳೆಗೆ 1.75 ಲಕ್ಷ ಹೆಕ್ಟೇರ್ ಹೆಚ್ಚು ಭೂಮಿ ತೋಟಗಾರಿಕೆಗೆ ಒಳಪಟ್ಟು ಒಟ್ಟು ಕ್ಷೇತ್ರ 5.30 ಲಕ್ಷ (ಶೇ. 5.2 ಭಾಗ) ಹೆಕ್ಟೇರ್‌ಗಳಷ್ಟಾಯಿತು. ಸದ್ಯಕ್ಕೆ 6.34 ಲಕ್ಷ ಹೆಕ್ಟೇರ್ (ಒಟ್ಟು ಕ್ಷೇತ್ರದ ಶೇ. 6.3 ಭಾಗ) ಗಳಿಗಿಂತಲೂ ಹೆಚ್ಚು ಭೂಮಿ ತೋಟಗಾರಿಕೆಗೆ ಒಳಪಟ್ಟಿದೆ.

ತೋಟಗಾರಿಕೆ ಬೆಳೆಗಳ ವಿಶೇಷವೆಂದರೆ ಒಮ್ಮೆ ಸಸಿ ನಾಟಿ ಆರೈಕೆಮಾಡಿಕೊಂಡಿದ್ದರೆ. ಹಲವಾರು ವರ್ಷಗಳು ನಿರಂತರವಾಗಿ ಫಲನೀಡುವುದು. ಈ ಜಾತಿಗೆ ಸೇರಿದ ಹಣ್ಣಿನ ಗಿಡಗಳು, ತೆಂಗು, ಅಡಿಕೆ, ಗೋಡಂಬಿ, ಏಲಕ್ಕಿ, ಮೆಣಸು ಮೊದಲಾದ ಬೆಳೆಗಳು ಒಳ್ಳೆಯ ಹದ ಬೆಳೆಗಳು, ರೈತನ ಆರ್ಥಿಕ ಸ್ಥಿತಿ ಸುಧಾರಣೆ ಮಾತ್ರವಲ್ಲದೆ. ಈ ಬೆಳೆಗಳು ಅನೇಕ ಕೈಗಾರಿಕೆಗಳ ಆಹಾರ ವಸ್ತುಗಳೂ ಆಗಿವೆ, ಆ ಮೂಲಕ ಉದ್ಯೋಗಾವಕಾಶವನ್ನೂ ಕಲ್ಪಿಸುತ್ತಿವೆ. ಆದ್ದರಿಂದಲೇ ಕರ್ನಾಟಕದಲ್ಲಿ ತೋಟಗಾರಿಕೆಗೆ ಹೆಚ್ಚಿನ ಗಮನ ಹರಿಸಲಾಗಿದೆ.

ಹಣ್ಣಿನ ತೋಟಗಳು ಮತ್ತು ಅಡಿಕೆ, ತೆಂಗು ಮತ್ತಿತರ ತೋಟಗಳನ್ನು ಬೆಳೆಸಲು ದೀರ್ಘಕಾಲ ಬೇಕಾದರೂ ಬಹಳ ವರ್ಷಗಳಕಾಲ ಫಲ ನೀಡುವುದರಿಂದ ತೋಟಗಾರಿಕೆಯನ್ನು ಅತ್ಯಂತ ಎಚ್ಚರದಿಂದ ಮಾಡಬೇಕು. ಉತ್ತಮ ತಳಿಯ ಪೋಷಣೆಯ ಜೊತೆಗೆ ಸಂರಕ್ಷಣೆಯೂ ಮುಖ್ಯ. ಇವೆಲ್ಲ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ತೋಟಗಾರಿಕೆ ಇಲಾಖೆಯು ಅನೇಕ ಕಾರ್ಯಕ್ರಮಗಳನ್ನು ನಡೆಸುತ್ತದೆ. ಇಲಾಖೆಯು ಅಲ್ಲಲ್ಲಿ ಆರಂಭಿಸಿರುವ ತೋಟಗಾರಿಕೆ ಕ್ಷೇತ್ರಗಳ ಮೂಲಕ ರೈತರಿಗೆ ಅಗತ್ಯವಾದ ಉತ್ತಮ ತಳಿಯ ಸಸಿಗಳನ್ನು ಸುಲಭ ಬೆಲೆಗೆ ಕೊಡುವುದಲ್ಲದೆ. ತೋಟಗಾರಿಕೆಗೆ ಸಂಬಂಧಿಸಿದ ಸಲಹೆ, ಸೂಚನೆಗಳ ಮಾರ್ಗದರ್ಶನವನ್ನೂ ನೀಡುತ್ತದೆ.

ಕರ್ನಾಟಕದಲ್ಲಿ ತೋಟಗಾರಿಕೆ ಉದ್ಯಮವು ಆಧುನೀಕರಣಗೊಂಡಿದ್ದು, ಅವುಗಳ ಪದಾರ್ಥಗಳನ್ನು ವಿದೇಶಗಳಿಗೂ ಹೆಚ್ಚಿನ ಪ್ರಮಾಣದಲ್ಲಿ ರಫ್ತು ಮಾಡಲಾಗುತ್ತಿದೆ. ತೋಟಗಾರಿಕೆ ಬೆಳೆಗಳಲ್ಲಿ ಮುಖ್ಯವಾದವು.

**ಕಾಫಿ:-** ಕರ್ನಾಕದಲ್ಲಿ ಪಶ್ಚಿಮ ಘಟ್ಟದ ಇಳಿಜಾರುಪ್ರದೇಶದಲ್ಲಿ ಕಾಫಿಯನ್ನು ಬೆಳೆಯಲಾಗುತ್ತದೆ. ಚಿಕ್ಕಮಂಗಳೂರು, ಶಿವಮೊಗ್ಗ, ಕೊಡಗು, ಹಾಸನ ಹಾಗೂ ಮೈಸೂರುಗಳಲ್ಲಿ ಸುಮಾರು 5000 ಕಾಫಿ ತೋಟಗಳಿವೆ, ಕೊಡಗು ಜಿಲ್ಲೆಯಲ್ಲಿ ಶೇ. 20 ಕ್ಕಿಂತ ಹೆಚ್ಚು ಭೂಮಿಯಲ್ಲಿ ಕಾಫಿಯನ್ನು ಬೆಳೆಯಲಾಗುತ್ತದೆ ಕೊಡಗು ಮತ್ತು ಚಿಕ್ಕಮಗಳೂರು ಈ ಎರಡು ಪ್ರದೇಶಗಳಲ್ಲೇ ಶೇ. 85 ರಷ್ಟು ಕಾಫಿ ಬೆಳೆಯಲಾಗುತ್ತದೆ. ಭಾರತದಲ್ಲಿ ಅತ್ಯಧಿಕ ಪ್ರಮಾಣದಲ್ಲಿ ಕಾಫಿ ಬೆಳೆಯುವ ರಾಜ್ಯವೆಂದರೆ ಕರ್ನಾಟಕ ದೇಶದ ಒಟ್ಟು ಕಾಫಿ ಉತ್ಪಾದನೆಯಲ್ಲಿ ಶೇ. 75 ರಷ್ಟು ಕಾಫಿಯನ್ನು ನಮ್ಮ ರಾಜ್ಯ ಪೂರೈಸುತ್ತದೆ. ಕಾಫಿ ಉತ್ಪಾದನೆಯಲ್ಲಿ ಏಕಸ್ವಾಮ್ಯವನ್ನು ಪಡೆದಿರುವ ಕರ್ನಾಟಕ ರಾಜ್ಯವು ಭಾರತೀಯ ಕಾಫಿ ಮಂಡಲಿ ಎಂಬ ಒಂದು ಸಮಿತಿಯನ್ನು ಸ್ಥಾಪಿಸಿದೆ. ಈ ಸಮಿತಿಯು ಕಾಫಿ ಉತ್ಪದನೆಯನ್ನು ಹೆಚ್ಚಿಸಲುಹಾಗೂ ಮಾರಾಟ ಮಾಡಲು ಕ್ರಮ ಕೈಗೊಳ್ಳುತ್ತದೆ.

ನಮ್ಮ ರಾಜ್ಯದಲ್ಲಿ ಕಾಫಿ ಬೆಳೆಯು ಸುಮಾರು 1,30,000 ಹೆಕ್ಟೇರ್‌ಗಳಲ್ಲಿದ್ದು ಬರುತ್ತಿರುವ ವಾರ್ಷಿಕ ಉತ್ಪತ್ತಿ 10.000 ಟನ್ನುಗಳು. ಕಾಫಿಯಿಂದ ರಾಜ್ಯಕ್ಕೆ 20 ಕೋಟಿ ರೂಗಳಿಗೂ ಹೆಚ್ಚು ವಿದೇಶಿ ವಿನಿಮಯ ಬರುತ್ತದೆ. ಭಾರತದಲ್ಲಿ ಒಟ್ಟು 31 ಕಾಫಿ ಸಂಗ್ರಹಕಾರರಿದ್ದು, ಅದರಲ್ಲಿ 15 ಜನ ಕರ್ನಾಟಕದಲ್ಲೇ ಇದ್ದಾರೆ. ಕಾಫಿ ತೋಟಗಾರಿಕೆಯಲ್ಲಿ ಕರ್ನಾಟಕದಲ್ಲಿ ಸುಮಾರು 1,65 ಲಕ್ಷ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಕಾಫಿ ಉತ್ಪಾದನೆಯನ್ನು ಹೆಚ್ಚಿಸಲು, ಹೆಚ್ಚು ಇಳುವರಿ ನೀಡುವ ಹೊಸತಳಿಗಳನ್ನು ಕಂಡುಹಿಡಿಯಲು, ಕಾಫಿ ಬೆಳೆಗೆ ತಗಲುವ ರೋಗವನ್ನು ನಿವಾರಿಸಲು ಕರ್ನಾಟಕ ರಾಜ್ಯ ಸರಕಾರ ಬಾಳೆ ಹೊನ್ನೂರಿನಲ್ಲಿ ಕಾಫಿ ಸಂಶೋಧನಾ ಸಂಸ್ಥೆಯನ್ನು ಸ್ಥಾಪಿಸಿದೆ.

**ತೆಂಗು;-** ತೋಟಗಾರಿಕೆ ಕ್ಷೇತ್ರದಲ್ಲಿ ಹೆಚ್ಚುಭಾಗ ತೆಂಗಿನ ಬೆಳೆ. ಇದು ನಮ್ಮಲ್ಲಿ ಮುಖ್ಯವಾದ ಎಣ್ಣೆ ಬೀಜದ ಬೆಳೆಗಳಲ್ಲೊಂದು. ತೆಂಗಿನಮರದ ಪ್ರತಿಯೊಂದುಭಾಗವೂ ಯಾವುದಾದರೊಂದು ಪ್ರಯೋಜನಕ್ಕೆ ಬಂದೇ ಬರುತ್ತದೆ. ಇದರಿಂದಲೇ ಇದಕ್ಕೆ ಕಲ್ಪ ವೃಕ್ಷ ಎಂಬ ಹೆಸರಿದೆ. ಕರ್ನಾಟಕದ ಉತ್ತರಕನ್ನಡ ಮತ್ತು ದಕ್ಷಿಣ ಜಿಲ್ಲೆಗಳಲ್ಲಿ ಈ ಬೆಳೆಯನ್ನು ಹೆಚ್ಚಾಗಿ ಬೆಳೆಯಲಾಗುತ್ತದೆ. ಅಲ್ಲದೆ ಮೈಸೂರು, ನಂಜನಗೂಡು, ತಿಪಟೂರು, ಅರಸೀಕೆರೆಗಳಲ್ಲೂ ಬೆಳೆಯಲಾಗುತ್ತದೆ ಮಂಗಳೂರ್, ಅರಸೀಕೆರೆ, ತಿಪಟೂರ್‌ಗಳಲ್ಲಿ ಕೊಬ್ಬರಿಯಿಂದ ಎಣ್ಣೆಯನ್ನು ತೆಗೆಯುವ ಕಾರ್ಖಾನೆಗಳಿವೆ. ಈ ಎಣ್ಣೆಯು ಹೆಚ್ಚಿನ ಪ್ರಮಾಣದಲ್ಲಿ ವಿದೇಶಗಳಿಗೆ ರಫ್ತಾಗುತ್ತದೆ. ಕರ್ನಾಟಕದಲ್ಲಿರುವ 'ಕಾಯಿರ್ ಬೋರ್ಡ್' ತೆಂಗಿನನಾರಿನ ಉದ್ದಿಮೆಗೆ ಬೇಕಾದ ಸಹಾಯ ಸಹಕಾರಗಳನ್ನು ನೀಡುತ್ತಿದೆ. ಕರ್ನಾಟಕ ರಾಜ್ಯದಲ್ಲಿ ತೆಂಗಿನ ಬೆಳೆಯನ್ನು ಸುಮಾರು 1.40.000 ಹೆಕ್ಟೇರ್‌ಗಳಲ್ಲಿ ಬೆಳೆಯಲಾಗುತ್ತಿದ್ದು ಇದರಿಂದ ಬರುತ್ತಿರುವ ವಾರ್ಷಿಕ ಉತ್ಪತ್ತಿ ಸುಮಾರು 750 ದಶಲಕ್ಷ ತೆಂಗಿನ ಕಾಯಿಗಳು.

**ಅಡಿಕೆ**:- ಇದು ನಮ್ಮ ರಾಜ್ಯದ ಮಲೆನಾಡು ಪ್ರದೇಶದ ಮುಖ್ಯವಾದ ಬೆಳೆಗಳಲ್ಲೊಂದು ಮೈದಾನ ಪ್ರದೇಶವಾದ ತುಮಕೂರು ಜಿಲ್ಲೆಯ ಕೆಲವು ಪ್ರದೇಶಗಳಲ್ಲಿಯೂ ಈ ಬೆಳೆ ಇದೆ. ಆದರೂ ಉತ್ತಮ ಇಳುವರಿ ಮಲೆನಾಡಿನ ಅಡಿಕೆ ತೋಟಗಳಲ್ಲಿ ಮಾತ್ರ ಸಾಧ್ಯ. ಕರ್ನಾಟಕ ಅಡಿಕೆಯ ಉತ್ಪಾದನೆಯಲ್ಲಿ ಮಹತ್ವದ ಸ್ಥಾನ ಪಡೆದಿದ್ದು, ಅದು ದೇಶದ ಒಟ್ಟು ಉತ್ಪಾದನೆಯಲ್ಲಿ ಶೇ 38ರಷ್ಟು ಅಡಿಕೆಯನ್ನು ಪೂರೈಸುತ್ತದೆ. ಕೇರಳದಲ್ಲಿ ಹೆಚ್ಚಿನ ಪ್ರದೇಶದಲ್ಲಿ ಅಡಿಕೆಯನ್ನು ಬೆಳೆಯುತ್ತಿದ್ದರೂ ಅದರ ಪ್ರಮಾಣ ಕರ್ನಾಟಕಕ್ಕಿಂತಲೂ ಕಡಿಮೆ ಇದೆ. ವಿತ್ತಾಳ ಎಂಬಲ್ಲಿ ತೆರೆಯಲಾಗಿರುವ ಕೇಂದ್ರಿಯ ಅಡಿಕೆ ಸಂಶೋಧನಾ ಕೇಂದ್ರವು ಕರ್ನಾಟಕ ಹಾಗೂ ಇತರ ರಾಜ್ಯಗಳಲ್ಲಿ ಪ್ರಾದೇಶಿಕ ಕೇಂದ್ರಗಳನ್ನು ಹೊಂದಿದೆ ಅದು ಅಡಿಕೆ ಬೆಳೆಯ ಉತ್ಪಾದನೆಯನ್ನು ಹೆಚ್ಚಿಸಲು ಕ್ರಮಗಳನ್ನು ಕೈಗೊಳ್ಳುತ್ತದೆಯಲ್ಲದೆ ಅಡಿಕೆಬೆಳೆಗೆ ತಗಲುವ ರೋಗಗಳನ್ನು ತಡೆಯಲು ಕ್ರಮ ಕೈಗೊಳ್ಳುತ್ತದೆ. ಕರ್ನಾಟಕ ರಾಜ್ಯದಲ್ಲಿ ಅಡಿಕೆ ಬೆಳೆಯನ್ನು ಸುಮಾರು 47,000 ಹೆಕ್ಟೇರ್‌ಗಳಲ್ಲಿ ಬೆಳೆಯುತ್ತಿದ್ದು, ವಾರ್ಷಿಕ ಉತ್ಪತ್ತಿ 75,000 ಟನ್‌ಗಳಾಗಿವೆ.

**ಏಲಕ್ಕಿ** :- ಇದು ವರ್ಷದಲ್ಲಿ 60 ಅಂಗುಲಕ್ಕೂ ಹೆಚ್ಚು ಮಳೆ ಬೀಳುವ ಪ್ರದೇಶದ ಬೆಳೆ. ಪ್ರಪಂಚದ ಉತ್ಪಾದನೆಯಲ್ಲಿ ಶೇ 70ರಷ್ಟು ನಮ್ಮ ದೇಶದಲ್ಲಿಯೇ ಆಗುತ್ತಿದೆ. (ವರ್ಷಕ್ಕೆ ಸುಮಾರು 3800 ಟನ್ನುಗಳು) ಈ ಬೆಳೆಯು ಕೇರಳ, ಕರ್ನಾಟಕ ಹಾಗೂ ತಮಿಳುನಾಡು ರಾಜ್ಯಗಳಲ್ಲೇ ವ್ಯಾಪಿಸಿದೆ ಕರ್ನಾಟಕದಲ್ಲಿ ಈ ಬೆಳೆಯನ್ನು ಕೊಡಗು, ಹಾಸನ, ಚಿಕ್ಕಮಗಳೂರು ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಬೆಳೆಯಲಾಗುತ್ತದೆ. ದೇಶದಲ್ಲಿ ಏಲಕ್ಕಿ ಬೆಳೆಯುವ ಪ್ರದೇಶದಲ್ಲಿ $\frac{1}{3}$ ಭಾಗದಷ್ಟು ಕರ್ನಾಟಕದಲ್ಲೇ ಇದೆ ಎನ್ನಲಾಗಿದೆ. ಕರ್ನಾಟಕದಲ್ಲಿ ಏಲಕ್ಕಿ ಉತ್ಪಾದನೆ ಮತ್ತು ಮಾರಾಟವನ್ನು ಸುಧಾರಿಸಲು 1 ಏಲಕ್ಕಿ ಮಂಡಲಿಯನ್ನು ಸ್ಥಾಪಿಸಲಾಗಿದೆ. ನಮ್ಮ ರಾಜ್ಯದಲ್ಲಿರುವ ಏಲಕ್ಕಿ ಬೆಳೆಯ ವಿಸ್ತೀರ್ಣ ಸುಮಾರು 20,000 ಹೆಕ್ಟೇರುಗಳು, ವಾರ್ಷಿಕ ಉತ್ಪಾದನೆ ಸುಮಾರು 350 ಟನ್‌ಗಳು.

ಗೋಡಂಬಿ :- ಇದಕ್ಕೆ ಗೇರುಬೀಜ ಎಂಬ ಹೆಸರೂ ಇದೆ. ಇದರ ಉತ್ಪಾದನೆಯ ದೃಷ್ಟಿಯಿಂದ ಭಾರತವು ಪ್ರಪಂಚದಲ್ಲೇ ಮೊದಲನೆಯ ಸ್ಥಾನ ಪಡೆದಿದೆ. ಈ ಬೆಳೆಯನ್ನು ಮುಖ್ಯವಾಗಿ ಉತ್ತರ ಕನ್ನಡ, ದಕ್ಷಿಣ ಕನ್ನಡ, ಮತ್ತು ಮಲೆನಾಡಿನ ಇತರ ಜಿಲ್ಲೆಗಳಲ್ಲಿ ಬೆಳೆಯಲಾಗುತ್ತಿದೆ. ದೇಶದ ಒಟ್ಟು ಗೋಡಂಬಿ ಉತ್ಪಾದನೆಯ ಶೇ. 8 ರಷ್ಟನ್ನು ಕರ್ನಾಟಕ ರಾಜ್ಯವೇ ಉತ್ಪಾದಿಸುತ್ತದೆ. ರಾಜ್ಯದಲ್ಲಿ ಈ ಬೆಳೆಯನ್ನು ಸುಮಾರು 18,000 ಹೆಕ್ಟೇರುಗಳಲ್ಲಿ ಬೆಳೆಯಲಾಗುತ್ತಿದ್ದು. ವಾರ್ಷಿಕ ಉತ್ಪತ್ತಿ 22,000 ಟನ್‌ಗಳಾಗಿವೆ. ನಮ್ಮ ರಾಜ್ಯದಲ್ಲಿ ಬೆಳೆಯುವ ಗೋಡಂಬಿಯು ಶ್ರೇಷ್ಠವೆನಿಸಿರುವುದರಿಂದ ಅದನ್ನು ಅಮೇರಿಕಾ, ಇಂಗ್ಲೆಂಡ್, ಮುಂತಾದ ರಾಷ್ಟ್ರಗಳಿಗೆ ರಫ್ತು ಮಾಡಲಾಗುತ್ತದೆ. ಹೀಗೆ ದೇಶವಿದೇಶಗಳಲ್ಲಿ ಗೋಡಂಬಿಗೆ ಬೇಡಿಕೆ ಹೆಚ್ಚಾಗಿರುವುದರಿಂದ ಅದರ ಉತ್ಪಾದನೆಯನ್ನು ಹೆಚ್ಚಿಸಲು ಸರಕಾರ ತೀವ್ರ ಕ್ರಮಗಳನ್ನು ಕೈಗೊಳ್ಳುತ್ತಿದೆ

## ಜನನ--ಬಾಲ್ಯ--"ವರತಪಸ್ವಿ"

ಅನಂತ ಕೋಟಿ ಸೂರ್ಯಕಿರಣ ಸುವ್ವಲಾಲಿ--
ಪ್ರಕಾಶ ಭರಿತ ಪ್ರಥಮ ಜಿನೇಶಗೆ ನಮನ ಸುವ್ವಲಾಲಿ--
ರತ್ನಕೀರಿಟ ಕಾಂತಿ ಹರಿಸುತ್ತಾ--ಸುವ್ವಲಾಲಿ
ಲಕ್ಷಲಕ್ಷ ಸುರರು ಬಂದು ನಮಿಸುವ--ನಿನ್ನ ಪಾದಕೆ ಶರಣೆಂದೆ ಸುವ್ವಲಾಲಿ

ಜೈನರ ಆದಿಗುರು ಪ್ರಥಮ ಜಿನೇಶನನ್ನು ಸ್ಮರಿಸುತ್ತ--ವರತಪಸ್ವಿಗಳಂತೆ ಬಾಳಿದ ದಿವ್ಯ ಚೈತನ್ಯ ಎಂದು ಜನಸಾಮಾನ್ಯರಿಂದ ಖ್ಯಾತರಾದ ಶ್ರೀ|| ಮಂಜಯ್ಯಹೆಗ್ಗಡೆ ಅವರ ಬಗ್ಗೆ ಜಾನಪದ ಕಾವ್ಯಲಹರಿ ಬಿತ್ತರಿಸುತ್ತೇನೆ.

ಪರಮ ಭಗವದ್ ಭಕ್ತರಾಗಿ ಬಾಳಿದ ಶ್ರೀ|| ಶ್ರೀ|| ಮಂಜಯ್ಯ ಹೆಗ್ಗಡೆಯವರ ಬಗ್ಗೆ ಬರೆಯುವ ಮೊದಲು ಅನಂತ ಕೋಟಿ ಸೂರ್ಯ ಪ್ರಕಾಶದಿಂದ ಬೆಳಗುವ ಪ್ರಥಮ ಜಿನೇಶನಿಗೆ ವಂದಿಸುತ್ತೇನೆ. ಲಕ್ಷಲಕ್ಷ-ದೇವತೆಗಳು ರತ್ನಕಿರೀಟ ಸಹಿತವಾದ ತಮ್ಮ ತಲೆಯನ್ನು ಯಾರ ಪಾದದಲ್ಲಿ ಶರಣಾಗಿ ನಮಿಸುತ್ತಾರೋ-ಆ ಪ್ರಥಮ ಜಿನೇಶನ ಕಾಂತಿಯುತ ಪಾದಗಳಿಗೆ ನಮಸ್ಕಾರ.

ಇಪ್ಪತ್ನಾಲ್ಕು ತೀರ್ಥಂಕರರು ಸುವ್ವಲಾಲಿ ।
ಒಪ್ಪದಲ್ಲಿ ಹರಿಸಿದ ಶಿಶುವಿದು ಸುವ್ವಲಾಲಿ ॥
ಸತ್ವ ತೇಜಸ್ಸುಭರಿತ ಕಾಂತಿಯುತ ಶಿಶುವೆಂದ್ರೋ--ಸುವ್ವಲಾಲಿ
ಅಪ್ಪಾ-ಅಣ್ಣ ಶೆಟ್ರ-ಪುಣ್ಯಶಿಶುವೆಂದ್ರೋ--ಸುವ್ವಲಾಲಿ

ಪುತ್ತೂರು ತಾಲೂಕಿನ ವಿಟ್ಲದ ಬಳಿ ಇರುವ ಕೇಪ್ಯುಗ್ರಾಮದಲ್ಲಿ ಪದ್ಮಶೆಟ್ಟರ ಮನೆತನ ಹೆಸರಾದದ್ದು. ವಿಟ್ಲದ ಅರಸರಿದಲೂ ಕೆಲವು ಗ್ರಾಮದ ಹಿರಿಯರಿಂದಲೂ- ಈ ಕುಟುಂಬದವರಿಗೆ ಪ್ರಥಮ ಮರ್ಯಾದೆಗಳು ಸಲ್ಲುತ್ತಿದ್ದವು. ಶ್ರೀ ಪದ್ಮಶೆಟ್ಟರಿಗೆ ಜನರೆಲ್ಲಾ ಅಣ್ಣಾಶೆಟ್ಟರೆಂದು ಕರೆಯುತ್ತಿದ್ದರು. ಊರಿನ ಎಲ್ಲಾ ಜನರಿಗೂ--ಇವರು ಹಿರಿಯಣ್ಣನಾಗಿ ನಿಂತು ಅವರ ಕಷ್ಟಸುಖಗಳನ್ನು ವಿಚಾರಿಸಿ ಕೊಳ್ಳುತ್ತಿದ್ದರು. ಪರೋಪಕಾರಿಗಳಾದ ಹಾಗೂ ಊರಿನ ಪ್ರಥಮ ಮರ್ಯಾದೆ ಸಲ್ಲುವ ಇಂಥಾ ಮನೆತನದಲ್ಲಿ ಶ್ರೀ ಅಣ್ಣಶೆಟ್ಟರ-- ಮೊದಲ ಮಗನಾಗಿ ಶ್ರೀ ಮಂಜಯ್ಯಹೆಗ್ಗಡೆಯವರು ಜನಿಸಿದರು. ಸತ್ವ, ತೇಜಸ್ಸಿನಿಂದ ಕಂಗೊಳಿಸುವ-- ಆ ಮಗುವನ್ನು ಕಂಡು ಊರಿನವರು ಹಿಗ್ಗಿ

ಇಪ್ಪತ್ನಾಲ್ಕು - ತೀರ್ಥಂಕರರ ಆಶೀರ್ವಾದದಿಂದ ಹುಟ್ಟಿದ ಶಿಶು - ಅಣ್ಣ ಶೆಟ್ರ-ಪುಣ್ಯದ ಫಲವೇ ತಾನಾಗಿ ಉದಿಸಿ ಬಂದ ಶಿಶು-- ಮುಂದೆ ಬಹಳ ಖ್ಯಾತನಾಗುತ್ತಾನೆ. ನಾಡಿನ ಸುಪ್ರಸಿದ್ಧನಾಗುತ್ತಾನೆ-- ಎಂದು ಹಿರಿಯರು ಹರಸಿದರು.

ತಾಳ್ಮೆ ತಪಸ್ಸು, ದೈವಭಕ್ತಿ ಸುವ್ವಲಾಲಿ--
ತಾಯಿ ಯಿಂದ ಕಲಿತ ಪಾಠಗಳು--ಸುವ್ವಲಾಲಿ ||
ಪರೋಪಕಾರ, ಪರಧರ್ಮ ಸಹಿಷ್ಣುತೆ ಸುವ್ವಲಾಲಿ
ತಂದೆಯಿಂದ ಕಲಿತ ಪಾಠಗಳಾಯ್ತು ಸುವ್ವಲಾಲಿ ||

ಶ್ರೀ ಮಂಜಯ್ಯನವರ ಬಾಲ್ಯಜೀವನ ಸುಂದರ--- ಸುಮಧುರವಾಗಿತ್ತು, ಹೆತ್ತತಾಯಿ ಅನಂತಮತಿ ಅಮ್ಮನಿಗೆ ಬದುಕೇ ಒಂದು ತಪಸ್ಸು, ಆಕೆ ಅಕ್ಷರಾಭ್ಯಾಸವನ್ನು ಬಲ್ಲವ-ರಲ್ಲ. ಆದರೆ ಪತಿಭಕ್ತಿ, ದೈವಭಕ್ತಿ. ಸಂಸಾರದ ಎಲ್ಲಾ ಕೆಲಸವನ್ನು ತಾಳ್ಮೆಯಿಂದ ನಿರ್ವಹಿಸಿ ಕಾಲಕಾಲಕ್ಕೆ ಆಗಬೇಕಾದ ಎಲ್ಲಾ ಹಬ್ಬ, ಹರಿದಿನ, ವ್ರತ, ನೋಹಿ, ನಾನಾ-ಬಗೆಯ ಕೆಲಸಗಳನ್ನು ಸಾಂಗವಾಗಿ ಮಾಡುತಿದ್ದರು. ಅತಿಥಿ ಸತ್ಕಾರ- ಕಷ್ಟದಲ್ಲಿ ಬೇಡಲು ಬಂದ ಹೆಣ್ಣುಮಕ್ಕಳಿಗೆ ಕೈಲಾದ ನೆರವು ನೀಡಿ ಕಳಿಸುವುದು-- ಇದು ಆಕೆಯ ಬದುಕು.

ಮನೆಯೆ ಮೊದಲ ಪಾಠಶಾಲೆ ಎಂಬಂತೇ ತಾಯಿಯ ಸದ್ಗುಣಗಳು ಮಗು ಮಂಜಯ್ಯನ ಮೇಲು ಪರಿಣಾಮ ಮೂಡಿತು. ಮುಂದೆ ಈ ಮಗು ಹಲವರ ಪಾಲಿಗೆ ಪರೋಪಕಾರಿಯಾಗಿ ಪರಹಿತಕ್ಕಾಗಿಯೆ ದುಡಿಯುವ ವ್ಯಕ್ತಿತ್ವ ಬೆಳೆಸಿಕೊಳ್ಳಲು ತಾಯಿಯ ಈ ಸದ್ಗುಣಗಳು ಕಾರಣವಾಯಿತು.

ತಂದೆ ಅಣ್ಣಶೆಟ್ಟರದು ಗೌರವಪೂರ್ಣವಾದ ವ್ಯಕ್ತಿತ್ವ. ಆ ಗ್ರಾಮದಲ್ಲೇ ಅವರು ಜನಪ್ರಿಯರು, ಸಾಹಿತ್ಯ, ಸಂಗೀತ ಆಸ್ವಾದನೆಯಲ್ಲಿ ರಸಿಕರು. ಮಗು ಮಂಜಯ್ಯ-ಬರಿ ಆಸ್ವಾದನೆ ಮಾತ್ರವಲ್ಲದೇ ಲಲಿತಕಲೆಗಳಲ್ಲಿ-- ಪರಿಣಿತಿ ಪಡೆದಿದ್ದಲ್ಲದೆ ಸಾಹಿತಿಗಳಿಗೆ, ವಿದ್ವಾಂಸರಿಗೆ ಆಶ್ರಯದಾತನಾಗಿಯೂ ಮುಂದೆ ಬೆಳಗಲು ತಂದೆಯ ಈ ನಡವಳಿಕೆ ಕಾರಣವಾಯಿತು. ಮುಂದಾಳತ್ವ-- ಹತ್ತು ಜನಕ್ಕೆ ಬೇಕಾದವನಾಗಿ ಬಾಳುವುದು-- ಇದೆಲ್ಲಾ ತಂದೆಯಿಂದ ಬಂದ ಬಳುವಳಿಗಳಾಯಿತು.

ವಿಟ್ಲಾದ ಶಾಲೆಯಲ್ಲಿಸುವ್ವಲಾಲಿ || ಅಕ್ಷರಾಭ್ಯಾಸವಾಯ್ತು ಸುವ್ವಲಾಲಿ
ಸತ್ಯಶ್ರೀಕ್ಷೇತ್ರದಲ್ಲಿ ಸುವ್ವಲಾಲಿ || ಮತ್ತೆ ಮುಂದುವರಿಯಿತೊ--ಸುವ್ವಲಾಲಿ

ಸರಿ- ತಂದೆ ತಾಯಿಗಳಿಂದ ಕಲಿತ ಸದ್ಗುಣಗಳಲ್ಲದೇ ಲೌಕಿಕ ವಿದ್ಯಾಭ್ಯಾಸವೂ ಬೇಕ-

ಲ್ಲವೇ ? ವಿಟ್ಲದ ಶಾಲೆಯಲ್ಲಿ ಆರಂಭದ ಪ್ರಾಥಮಿಕ ಶಾಲೆಯಲ್ಲಿ ನಾಲ್ಕನೆಯ ತರಗತಿಯವರಿಗೆ ಕಲಿತರು. ಬಾಲಕ ಮಂಜಯ್ಯ ಮನೆಯ ಕಣ್ಮಣಿ. ತಾಯಿ-- ಹಾಗೂ ಅಜ್ಜಿಯರ ಕಣ್ಣಿನ ದೀಪಾ-- ಈ ಮುದ್ದು ಮಗುವನ್ನು ವಿದ್ಯಾಭ್ಯಾಸದ ಸಲುವಾಗಿ ದೂರದ ಊರುಗಳಿಗೆ ಕಳಿಸಲು-- ತಾಯಿ ಅಜ್ಜಿಗೆ ಇಷ್ಟವಿಲ್ಲ. ವಿಟ್ಲ ಹಾಗೂ ಧರ್ಮಸ್ಥಳಗಲ್ಲಿ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಅನುಕೂಲವಿರಲಿಲ್ಲ.

ಒಬ್ಬ ಖಾಸಗಿ ಉಪಾಧ್ಯಾಯರನ್ನು ನೇಮಿಸಿ ಇಂಗ್ಲಿಷ್ ಕಲಿಸುವ ವ್ಯವಸ್ಥೆ ಮಾಡಲಾಯಿತು. ಈ ಮಧ್ಯೆ ಒಂದು ಲೌಕಿಕ ವಿಘ್ನ ಬೇರೆ ಪ್ರಾಪ್ತವಾಯಿತು.

ಬಾಲಕರೊಡನಾಡುವಾಗ ಸುವ್ವಲಾಲಿ ||
ಬಾಲ ಮಂಜಯ್ಯ ಮೇಲಿನಿಂದ ಕೆಳಗೆ ಬಿದ್ದ ಸುವ್ವಲಾಲಿ
ಕಾಲು ಉಳುಕಿ ಮೂಳೆ ಸರಿದು ಸುವ್ವಲಾಲಿ-
ಭಾಳ ದಿನಗಲು ವೈದ್ಯಕೆ ನಡೆಯಿತು ಸುವ್ವಲಾಲಿ-

ಬಾಲಕರೊಡನೆ ಆಡುವಾಗ ಎತ್ತರದಿಂದ ಕೆಳಗೆ ಬಿದ್ದ ಮಂಜಯ್ಯನಿಗೆ- ಕಾಲಿನ ಮೂಳೆ ಸರಿದು ಏಳಲಾಗದೆ ಇರುವಷ್ಟು ಹಿಂಸೆಯಾಯ್ತು. ಎರಡು ವರ್ಷಗಳ ಕಾಲ ಮಲಗಿದಲ್ಲಿಯೆ ಔಷದೋಪಚಾರ ನಡೆಯಿತು. ದೇವರ ಕೃಪೆ ದೊಡ್ಡದು, ಬಾಲಕ ಮಂಜಯ್ಯ- ಸಂಪೂರ್ಣ ಗುಣಹೊಂದಿದ. ಬಾಲಕ ಮಂಜಯ್ಯನಲ್ಲಿ ವಿದ್ಯಾಭ್ಯಾಸದ ಹಂಬಲ ತುಡಿಯುತ್ತಿತ್ತು. ಕಡೆಗೆ ಹದಿನಾರನೆಯ ವಯಸ್ಸಿನಲ್ಲಿ ಪುತ್ತೂರಿಗೆ ಹೋಗಿ ಮಾಧ್ಯಮಿಕ ಶಾಲೆಯ ವಿದ್ಯಾಭ್ಯಾಸ ಪೂರೈಸಿದರು.

ಶಾಂತಪ್ಪಶೆಟ್ಟರ ಮನೆಯಲ್ಲಿ ನೆಲಿಸಿ ಸುವ್ವಲಾಲಿ ||
ಶಾಂತವಾಗಿ ವಿದ್ಯೆಕಲಿತರೊ ಸುವ್ವಲಾಲಿ ||
ಸ್ವಂತನಾಗಿ ರೂಡಿಸಿಕೊಂಡ ಚಿತ್ರಕಲೆಯಲ್ಲಿ ಸುವ್ವಲಾಲಿ ||
ಅತ್ಯಂತ ಪ್ರಗತಿ ಸಾಧಿಸಲುತ್ಸಾಹವಿತ್ತು ಸುವ್ವಲಾಲಿ ||

ಶಾಂತಪ್ಪಶೆಟ್ಟರ ಮನೆಯಲ್ಲಿ ಪುತ್ತೂರಿನಲ್ಲಿ ನೆಲೆಸಿ ಮಾಧ್ಯಮಿಕ ಶಾಲೆ ವಿದ್ಯಾಭ್ಯಾಸ ಪೂರೈಸಿದ್ದಾಯ್ತು ಸ್ವಂತವಾಗಿ ಒಲಿದುಬಂದ ಚಿತ್ರಕಲೆಯಲ್ಲಿಯೂ ದಿನದಿನಕ್ಕೆ ಪರಿಣಿತರಾಗುತ್ತಿದ್ದರು ಆದರೂ ಅವರ ಮನಸ್ಸಿನಲ್ಲಿ ಅವ್ಯಕ್ತ ಕಲಾದಾಹಾ - ಈ ಕಲೆಯನ್ನು ಶಾಸ್ತ್ರೋಕ್ತವಾಗಿ ಕಲಿಯಲು ಒಳ್ಳೆ ಗುರುಗಳು ಬೇಕು. ಕಲೆಗೆ ಸೊಗಸಾದ ಪರಿಸರ ಬೇಕು. ಆಗ ಈ ಕಲೆಯನ್ನು ಇನ್ನು ಉನ್ನತವಾಗಿ ಅಭಿವ್ಯಕ್ತಿಸಲು ಸಾಧ್ಯ-- ಇದು ವಿದ್ಯಾರ್ಥಿ ಮಂಜಯ್ಯನ ಆಸೆ. ಈ ಆಸೆಗೆ ನೀರೆರೆವಂತೆ ಹಿಜ್ಜಾರು-- ಹಿರಿಯರು-- ಮುಂಬೈ ಆರ್ಟ್‌ಸ್ಕೂಲ್‌ನಲ್ಲಿ ಸೇರಿ ನಿಯಮಬದ್ಧ ಶಿಕ್ಷಣಾ ಪಡೆ, ನೀನೊಬ್ಬ ಹೊಡ್ಡ ಕಲಾವಿದನಾಗಿ ಹೆಸರು ಗಳಿಸುವೆ" ಎನ್ನುತಿದ್ದರು. (ಸಶೇಷಾ)

ಸಿದ್ಧಗಂಗಾ

## ಎರೆಹುಳುವಿನ ಮಾರಾಟ ( ಆಧಾರಿತ :- ಹಿಂದಿಯಿಂದ )

ಬಿ. ಸುಬ್ರಾಯ ಅಡಿಗ, ನಿವೃತ್ತ ಅಧ್ಯಾಪಕರು. ಸಂಡೂರು. ಬಳ್ಳಾರಿ-ಜಿಲ್ಲೆ.

ಸುಮಾರು ಒಂದು ದಶಕದ ಹಿಂದೆ ಪತ್ರಿಕೆಗಳಲ್ಲಿ ಎರೆಹುಳುಗಳಿಗೆ ಸಂಬಂಧಿಸಿದ ಎರಡು ಸುದ್ದಿಗಳು ಪ್ರಕಟವಾದವು-ಥೈಲ್ಯಾಂಡ್ ಅಮೇರಿಕೆಯಿಂದ ಎರೆಹುಳುಗಳನ್ನು ಆಮದು ಮಾಡಿಕೊಂಡಿತು. ಥೈಲ್ಯಾಂಡಿನಲ್ಲಿ ಹರಡಿದ್ದ ಕಸಕಡ್ಡಿಗಳನ್ನು ಸ್ವಚ್ಛ-ಗೊಳಿಸುವುದೇ ಅವುಗಳ ಕೆಲಸ. 'ರೆಡ್ ರಿಗಲರ್' ಎಂಬ ಎರೆಹುಳು ದಿನಾಲೂ ತನ್ನ ದೇಹದ ಭಾರದಷ್ಟು ಕಸವನ್ನು ಸ್ವಚ್ಛಗೊಳಿಸುತ್ತದಂತೆ.

ಎರಡನೇ ಸುದ್ದಿಯ ಪ್ರಕಾರ ಬೇರೆ ಬೇರೆ ದೇಶಗಳಲ್ಲಿ ಎರೆಹುಳುವನ್ನು ಆಹಾರವಾಗಿ ಬಳಸುವ ಬಗ್ಗೆ ಹೊಸ ಹೊಸ ಪ್ರಯೋಗಗಳು ನಡೆಯುತ್ತಿವೆ.

ಎರೆಹುಳು ಪ್ರಾಕೃತಿಕವಾಗಿ ರೈತ ಜಾತಿಗೆ ಸೇರಿದ ಜೀವಿ. ಇದು ನೆಲವನ್ನು ಉತ್ತು ಹಸನುಗೊಳಿಸುತ್ತದೆ. ಮಳೆ ಬಂದಾಗ, ಅದರ ನೀರು ನೆಲದ ಮೇಲೆ ಹರಿದು ಹೋಗುವ ಬದಲು ಎರೆಹುಳುಗಳು ತಯಾರಿಸಿದ ಬಿಲಗಳೊಳಗೆ ಇಳಿಯುತ್ತದೆ. ಎರೆಹುಳು ಹುಲ್ಲಿನ ಚೂರು, ಎಲೆ ಹಾಗೂ ಸತ್ತ ಹುಳು ಹುಪ್ಪಟೆಗಳನ್ನು ತನ್ನ ಬಿಲದೊಳಗೆ ಎಳೆದೊಯ್ಯುತ್ತದೆ. ಈ ರೀತಿ ನೆಲ ಫಲವತ್ತಾಗುವಂತೆ ಮನುಷ್ಯನಿಗೆ ನೆರವಾಗುತ್ತದೆ ಈ ಕಸಕಡ್ಡಿಯ ಮೇಲೆಯೇ ಅದು ಬದುಕುತ್ತದೆ. ಕಾರಣಾಂತರದಿಂದ ಅದು ಸತ್ತಿತೆಂದರೆ ಸ್ವತಃ ಗೊಬ್ಬರವಾಗುತ್ತದೆ.

### ಎರೆಹುಳು ಇರದಿದ್ದರೆ ಮನುಷ್ಯನೂ ಇಲ್ಲ!

ಎರೆಹುಳುಗಳೇ ಇರದೆ ಹೋದರೆ ಮನುಷ್ಯನ ಅಸ್ತಿತ್ವವೇ ಇಲ್ಲವೆಂದು ಎದೆ-ತಟ್ಟಿ ಸಾರುವ ಕೃಷಿ ವಿಜ್ಞಾನಿಗಳು ಬಹಳಷ್ಟಿದ್ದಾರೆ; ಅವರ ಈ ಹೇಳಿಕೆಗೆ ಕಾರಣ-ವೇನೆಂದರೆ ಮನುಷ್ಯ ಹಾಗೂ ಭೂಮಿಯ ಅಸ್ತಿತ್ವ ವನಸ್ಪತಿಗಳನ್ನವಲಂಬಿಸಿದೆ. ವನಸ್ಪತಿಗೆ ಎರೆಹುಳುವೇ ಆಹಾರ. ಏಕೆಂದರೆ ಅದು ಭೂಮಿಗೆ ಗೊಬ್ಬರಕೊಡುತ್ತದೆ. ಜೀವಂತವಾಗಿದ್ದಾಗಷ್ಟೇ ಅಲ್ಲ-ಸತ್ತಮೇಲೂ ಅದು ಗೊಬ್ಬರವಾಗಿ ನೆಲದೊಳಗೆ ಸೇರಿಹೋಗುತ್ತದೆ. ಹೀಗಾಗಿ ಎರೆಹುಳುವೇ ಇಲ್ಲದಿದ್ದರೆ ಮಾನವ ಜಾತಿಯೇ ಇರದು.

ಆದರೆ ಕೆಲವರು ಈ ಮಾತನ್ನು ಒಪ್ಪುವುದಿಲ್ಲ. ರೈತರಿಗೆ ಎರೆಹುಳು ಸಹಾಯ ಮಾಡುವುದು ನಿಜವಾದರೂ ಅದರ ಮಹತ್ವವನ್ನು ತುಂಬಾ ಹೆಚ್ಚಾಗಿ ವರ್ಣಿಸ-ಲಾಗಿದೆಯೆಂದು ಅವರ ಹೇಳಿಕೆ. ಅವರ ಈ ಹೇಳಿಕೆಗೆ ಆಧಾರವೆಂದರೆ ರೈತ ಗದ್ದೆ ಉಳುವಾಗ ಹೆಚ್ಚಿನ ಎರೆಹುಳುಗಳು ಸತ್ತುಹೋಗುತ್ತವೆ. ಸಾಮಾನ್ಯವಾಗಿ ಒಂದು ಎಕ್ರೆ ನೆಲದಲ್ಲಿ ೧೦ ಲಕ್ಷ ಎರೆಹುಳುಗಳಿರುತ್ತವೆ. ಉತ್ತ ಬಳಿಕ ಮೂರು ಲಕ್ಷ ಹುಳು-ಗಳು ಮಾತ್ರ ಉಳಿದುಕೊಳ್ಳುತ್ತವೆ.

## ನಷ್ಟ ಭರ್ತಿಗಾಗಿ ಆಮದು

ಈ ಹಾನಿಯನ್ನು ತುಂಬಿಕೊಳ್ಳಲು ಏಳು ಲಕ್ಷ ಎರೆಹುಳಗಳನ್ನು ಆಮದು ಮಾಡಿಕೊಳ್ಳಲು ಪ್ರಯತ್ನಿಸಲಾಯಿತು. ಆಮದು ಮಾಡಿಕೊಂಡ ಎರೆ ಹುಳುಗಳು ನೆಲವನ್ನು ಫಲವತ್ತಾಗಿ ಮಾಡಲು ನೆರವಾಗುವುದಾದರೂ ಈ ನೆರವು ಅವುಗಳ ಮೃತ ದೇಹಗಳಿಂದಲೇ ದೊರೆಯುವುದರಿಂದ ತಾತ್ಕಾಲಿಕವಾದುದು. ನೇಗಿಲು ಹಾಗೂ ಇತರ ಯಂತ್ರಗಳ ಗಂಡಾಂತರ ಯಾವಾಗಲೂ ಇರುವಲ್ಲಿ ಎರೆಹುಳುಗಳು ತಮ್ಮ ಮನೆ ಕಟ್ಟಿಕೊಳ್ಳಲು ತಯಾರಾಗವುದಿಲ್ಲ.

ಹೀಗಾಗಿ ಎರೆಹುಳುಗಳು ತನ್ನ ಹೊಲದಲ್ಲಿರಲಿ, ಬಿಡಲಿ- ಆಧುನಿಕ ರೈತ ಆ ಬಗ್ಗೆ ತಲೆಕೆಡಿಕೊಳ್ಳಬೇಕ್ಕಾಗಿಲ್ಲವೆಂದು ವನಸ್ಪತಿ ಶಾಸ್ತ್ರಿಗಳು ಶೋಧ ನಡೆಸಿ ಸಿದ್ಧಪಡಿಸಿದ್ದಾರೆ. ಏಕೆಂದರೆ ರೈತ ಒಂದು ದಿನದಲ್ಲಿ ಮಾಡುವಷ್ಟು ಕೆಲಸವನ್ನು ಮಾಡಲು ೫ಕೋಟಿ ಎರೆಹುಳುಗಳಿಗೆ ೫೦ ವರ್ಷ ತಗಲುವವು.

## ರಹಸ್ಯಮಯ ಜೀವನ

ಎರೆಹುಳುವಿನ ವೈಯಕ್ತಿಕ ಜೀವನ ರಹಸ್ಯಮಯವಾಗಿ ತೋರುವುದು. ಅದು ತನ್ನ ಹೆಚ್ಚಿನವೇಳೆಯನ್ನು ನೆಲದಡಿಯಲ್ಲಿ ಲಂಬಾಕೃತಿಯಲ್ಲಿ ತಯಾರಿಸಲಾದ ತನ್ನ ಬಿಲದಲ್ಲೇ ಕಳೆಯುತ್ತದೆ. ಮತ್ತು ರಾತ್ರಿ ವೇಳೆ ಮಾತ್ರ ಹೊರಬರುತ್ತದೆ. ಆಗಲೂ ಅದರ ಬಾಲ ಬಿಲದೊಳಗೇ ಅಂಟಿಕೊಂಡಿರುತ್ತದೆ; ಮತ್ತು ಅದು ತೊನೆದಾಡುತ್ತ ಹುಳು, ಎಲೆ ಹಾಗೂ ಹುಲುತುಂಡುಗಳನ್ನು ಹುಡುಕುತ್ತ ಇರುವುದು.

ಬೆಳಗಾಗುತ್ತಲೇ ಅದು ಬಿಲದೊಳಗೆ ನುಸುಳಿಕೊಳ್ಳುತ್ತದೆ; ಮತ್ತು ಬಿಲದ ಬಾಯಿಯನ್ನು ಕಸಕಡ್ಡಿಗಳಿಂದ ಮುಚ್ಚಿಬಿಡುತ್ತದೆ. ಒಂದಿಷ್ಟು ತಡವಾಯಿತೆಂದರೆ ಅದು ಸಾವಿನ ಬಾಯಿಗೆ ಬೀಳುತ್ತದೆ. ಬಿಸಿಲಿನಿಂದ ಅದು ಎಚ್ಚರ ತಪ್ಪುತ್ತದೆ. ಎಚ್ಚರ ತಪ್ಪಿದರೆ ಸಾವು ಬಂತೆಂದೇ ಅರ್ಥ. ಬೆಳಗಾಗುತ್ತಲೇ, ಆಹಾರ ಹುಡುಕುತ್ತ ಹೂಂಟ ಹಕ್ಕಿ ಅದನ್ನು ತಿಂದುಹಾಕುತ್ತದೆ.

ಈ ಅಗೆತಗಾರ ಹುಳುಗಳಿಗೆ ಇತರ ಪ್ರಾಣಿಗಳಂತೆಯೇ ನೀರಡಿಕೆ ಉಂಟಾಗುತ್ತದೆ. ನೀರನ್ನು ಹುಡುಕುತ್ತ ಅವು ತಮ್ಮ ಬಿಲದಿಂದ ಹೊರಬಿದ್ದಾಗ ಕೆಲವೊಮ್ಮೆ ಅಕಸ್ಮಾತ್ ಮಳೆ ಬರುವುದುಂಟು. ಅದು ಅವುಗಳ ಬಿಲಗಳ ಅಕ್ಕಪಕ್ಕದ ಕಸಕಡ್ಡಿಗಳನ್ನು ಕೊಚ್ಚಿಕೊಂಡೊಯ್ಯುವುದಲ್ಲದೆ ಎರೆಹುಳುಗಳನ್ನು ಬಹುದೂರ ಒಯ್ದು ಬಿಡುವುದು. ಮಳೆಯ ಬಳಿಕ ಕೋಟ್ಯಾಂತರ ಎರೆಹುಳುಗಳು ಮನೆಕಳೆದುಕೊಳ್ಳುತ್ತವೆ. ಆಗ ಬಿಸಿಲ ಜಳಕ್ಕೆ ಸಿಲುಕಿಯೋ, ಹಕ್ಕಿಗಳ ಬಾಯಿಗೆ ಬಿದ್ದೋ ಅಸುನೀಗುತ್ತವೆ.

ಸಿದ್ಧಗಂಗಾ

ಹಲವು ಮನುಷ್ಯರ ಹಾಗೂ ಪ್ರಾಣಿಗಳ ಕಾಲ ತುಳಿತಕ್ಕೆ ಸಿಲುಕಿ ಸಾಯುತ್ತವೆ. ಕೆಲವು ತುಂಟ ಹುಡುಗರ ಆಟದ ಸಾಧನವಾಗುತ್ತವೆ. ಅವರು ಅವುಗಳ ದೇಹಕ್ಕೆ ಉಪ್ಪು-ಹಾಕಿ ಅವು ಕರಗುವುದನ್ನೇ ಮೋಜಿನಿಂದ ನೋಡುತ್ತಾರೆ. ತಾತ್ಪರ್ಯವೇನೆಂದರೆ ಮನೆ ಕಳೆದುಕೊಂಡ ಎರೆಹುಳುಗಳು ಬದುಕಿ ಉಳಿಯುವುದು ಕಡಿಮೆ.

## ಪ್ರಕೃತಿಯ ವರದಾನ

ಒಂದು ಮಾತ್ರ ನಿಜ........ ಎರೆಹುಳು ಎಂದೂ ಮುಳುಗಿ ಸಾಯುವುದಿಲ್ಲ. ಏಕೆಂದರೆ ಪ್ರಕೃತಿ ಅದಕ್ಕೆ ಶ್ವಾಸಕೋಶ ನೀಡಿಲ್ಲ ಹಾಗೆಯೇ ಕಿವಿಕಣ್ಣುಗಳನ್ನು ಕೊಟ್ಟಿಲ್ಲ. ಆದರೆ ತೆಳ್ಳನೆಯ ಮಿದುಳು ಮಾತ್ರ ಇದಕ್ಕಿದೆ.

ಜೀವಶಾಸ್ತ್ರಗಳು ಎರೆಹುಳುಗಳ ಪರಿವಾರಿಕ ಜೀವನದ ಬಗ್ಗೆ ಮಾಹಿತಿಗಳನ್ನು ಸಂಗ್ರಹಿಸಿದ್ದಾರೆ. ಎರೆಹುಳು ಹೆಣ್ಣು ಅಥವಾ ಗಂಡು ಎಂದಿರದೆ ಎರಡೂ ಆಗಿರುತ್ತದೆ. ಸುಮಾರು ೨೦೦೦ ಜಾತಿಗಳ ಎರೆಹುಳುಗಳಿವೆ. ಇವುಗಳಲ್ಲಿ ಹೆಚ್ಚಿನವು ದೈಹಿಕಸಂ-ಪರ್ಕವಿರದೆಯೇ ಪ್ರಜನನಕ್ರಿಯೆಯನ್ನು ಪೂರ್ಣಗೊಳಿಸುವುದರಲ್ಲಿ ಶಕ್ತವಾಗಿವೆ. ಆದರೂ ಅನೇಕ ಜಾತಿಯ ಎರೆಹುಳುಗಳು ಈ ಸ್ವಾವಲಂಬನೆಯನ್ನು ಕಡೆಗಣಿಸಿ ರತಿಕ್ರೀಡೆ-ಯಲ್ಲಿ ಮಗ್ನವಾಗುತ್ತವೆ.

ಎರೆಹುಳುಗಳ ಉದ್ದವೂ ಹೆಚ್ಚು ಕಡಿಮೆ. ಪೆಸಿಫಿಕ್ ದ್ವೀಪ ಸಮೂಹದ ಎರೆ-ಹುಳುಗಳು ಒಂದಿಂಚು ಉದ್ದವಿದ್ದರೆ ಆಸ್ಟ್ರೇಲಿಯದ ಎರೆಹುಳುಗಳು ಎಂಟಡಿಯವರೆಗೂ ಉದ್ದವಿರುತ್ತವೆ.

ಎರೆಹುಳುಗಳು ಸಾಮಾನ್ಯವಾಗಿ ಶಾಂತಿಪ್ರಿಯ ಜೀವಗಳಾಗಿದ್ದರೂ ಯಾವ ವಸ್ತುವನ್ನಾದರೂ ನಾಶಪಡಿಸಬೇಕೆಂಬ ದೃಢಸಂಕಲ್ಪ ಮಾಡಿದವೆಂದರೆ, ಅವು ಜೀವದ ಹಂಗು ತೊರೆದು ಆ ಕಾರ್ಯಕ್ಕೆ ಘುಮುಕುತ್ತವೆ. ಅತಿ ಸಣ್ಣ ಕಟ್ಟಡದ ಬುನಾದಿಯನ್ನೂ ಟೊಳ್ಳು ಗೊಳಿಸಲು ಅವಕ್ಕೆ ಎಷ್ಟೋ ಶತಮಾನಗಳು ಬೇಕಾಗುತ್ತವೆಂಬುದು ಬೇರೆ ವಿಷಯ.

## ಎರೆಹುಳುಗಳಿಂದ ರುಚಿಕರ ಅಡುಗೆ

ಎರೆಹುಳುಗಳನ್ನು ತಿನ್ನುವುದೆ ? ಈ ಕಲ್ಪನೆಯೇ ನಮಗೆ ಓಕರಿಕೆ ಬರಿಸಬಹುದು. ಆದರೆ ಮನುಷ್ಯ ಮನಸ್ಸುಮಾಡಿದರೆ ಏನನ್ನೂ ಸಾಧಿಸಬಲ್ಲ.
ಪ್ರಪಂಚದ ಎಷ್ಟೋ ಜನಾಂಗಗಳಿಗೆ ಎರೆಹುಳು ರುಚಿಕರ ಆಹಾರವಷ್ಟೇ ಅಲ್ಲ— ಆರೋಗ್ಯಕರ ಭೋಜನವೂ ಆಗಿದೆ.

ಆಫ್ರಿಕೆಯಲ್ಲಿ ಎಲ್ಲ ರೀತಿಯ ಎರೆಹುಳುಗಳನ್ನು ತಿನ್ನಲಾಗುತ್ತದೆ—ಅದೂ ಹಸಿಯಾಗಿಯೇ ! ಅವು ತುಂಬ ಸವಿಯಾಗಿವೆಯೆಂದು ಆ ಜನರ ಹೇಳಿಕೆ.

ಆಸ್ಟ್ರೇಲಿಯಾದ ದೈತ್ಯಾಕಾರದ ಎರೆಹುಳುಗಳನ್ನು ಕೆಲವರು ಹುರಿದು ತಿಂದರು. ಬಲು ಚೆನ್ನಾಗಿದೆಯೆಂದು ಆ ಜನ ಬಾಯಿ ಚಪ್ಪರಿಸಿದರು. ಆರೋಗ್ಯಕರ ಆಹಾರದ ಅಗತ್ಯ ಉಂಟಾದಾಗಲೆಲ್ಲ ಚೀನಿಯರು ಹುರಿದ ಎರೆಹುಳುಗಳನ್ನೇ ತಿನ್ನುತ್ತಾರೆ. ಎರೆಹುಳು ವಿಟಾಮಿನ್ ಡೀಯಿಂದ ತುಂಬಿದೆಯೆಂದು ಅವರ ಹೇಳಿಕೆ.

ಅಮೇರಿಕನ್ನರು ಎರೆಹುಳುಗಳಿಂದ ವಿಧವಿಧದ ತಿನಿಸುಗಳು ತಯಾರಿಸಲು ಯತ್ನಿಸಿದರು. ಲಾಸ್ ಏಂಜಲ್ಸ್‌ದಲ್ಲಿ ಪ್ರತಿವರ್ಷ ಒಂದು ಸ್ಪರ್ಧೆ ನಡೆಯುತ್ತಿದೆ. ಅಲ್ಲಿ ಎರೆಹುಳುಗಳಿಂದ ತಯಾರಿಸಿದ ಅತ್ಯುತ್ತಮ ತಿನಿಸಿಗೆ ಬಹುಮಾನ ಕೊಡಲಾಗುತ್ತದೆ

ಇಷ್ಟಾದರೂ ಎರೆಹುಳುಗಳನ್ನು ಆಹಾರವಾಗಿ ಬಳಸುವ ಬದಲು ಸ್ವಚ್ಛತೆಗಾಗಿ ಬಳಸುವುದೇ ಲೇಸೆಂದು ಇಡೀ ವಿಶ್ವದ ಜೀವಶಾಸ್ತ್ರಗಳ ಹೇಳಿಕೆ.

ಹೆಚ್ಚಿನ ಜನ ಈ ಮಾತಿಗೊಪ್ಪಿದ್ದಾರೆ. ಅಮೇರಿಕೆಯಲ್ಲಿ ಹಲವರು ಈಗ ಎರೆಹುಳುಗಳ ಬೇಸಾಯ ಆರಂಭಿಸಿದ್ದಾರೆ. ಜೇರೀಕನಿಂಘಮ್ ಎಂಬ ಅಮೇರಿಕನನೊಬ್ಬ ಎರೆಹುಳುಗಳ ಕೃಷಿ ಮಾಡಲೆಂದು ಎಲಿಗನೀ ಏರ್‌ಲೈನ್ಸ್‌ದಲ್ಲಿನ ತನ್ನ ಒಳ್ಳೇ ನೌಕರಿಗೇ ರಾಜೀನಾಮೆಯಿತ್ತ. ಎರೆಹುಳುಗಳು ೨-೩ ತಿಂಗಳುಗಳಲ್ಲೇ ತಮ್ಮ ಸಂಖ್ಯೆಯನ್ನು ಇಮ್ಮಡಿಗೊಳಿಸುತ್ತವೆಂದು ಅವನ ಹೇಳಿಕೆ.
ಜೇರೀ ಕನಿಂಘಮ್ ಈಗ ಎರೆಹುಳುಗಳನ್ನು ರಫ್ತು ಮಾಡುತ್ತಿದ್ದಾನೆ. ಎರೆಹುಳುಗಳನ್ನು ತಿನ್ನಬೇಕೆ ! ಬೆಳಸಬೇಕೆ ? _ ಎಂದು ನೀವೇ ನಿರ್ಧರಿಸಿರಿ.

---

## ಕೃಷಿ ಮತ್ತು ಕೈಗಾರಿಕಾ ವಸ್ತು ಪ್ರದರ್ಶನ – 1991.

### ಶ್ರೀ ಸಿದ್ಧಗಂಗಾಮಠ, ತುಮಕೂರು ಜಿಲ್ಲೆ – 572104.

ಈ ವರ್ಷ ಮೇಲ್ಕಂಡ ವಸ್ತು ಪ್ರದರ್ಶನವು ತಾ|| 4.2.1991 ರಿಂದ ಪ್ರಾರಂಭಗೊಂಡು 18.2.1991 ರ ವರೆವಿಗೆ ನಡೆಯುತ್ತದೆ. ಕೇಂದ್ರಸರಕಾರ, ರಾಜ್ಯಸರಕಾರ, ಜಿಲ್ಲಾ ಕೈಗಾರಿಕಾ ಕೇಂದ್ರಗಳು ಖಾಸಗಿ ಕೈಗಾರಿಕೋದ್ಯಮಿಗಳು ಭಾಗವಹಿಸಿ ನಾಡಿನ ಅಭಿವೃದ್ಧಿಯೋಜನೆಗಳ ಮಳಿಗೆಗಳನ್ನು ಪ್ರದರ್ಶಿಸುತ್ತಾರೆ. ಈ ವಸ್ತು ಪ್ರದರ್ಶನದಲ್ಲಿ ಗ್ರಾಮೀಣ ಬಂಧುಗಳಿಗೆ ಹಾಗೂ ನಗರ ಬಂಧುಗಳಿಗೆ ಉಪಯುಕ್ತ ದಿನಬಳಕೆಯ ಗೃಹ ಕೈಗಾರಿಕೆ - ಗಡಿಕೈಗಾರಿಕೆ - ಕರಕುಶಲ ವಸ್ತುಗಳ ಪ್ರದರ್ಶನ ಹಾಗೂ ಮಾರಟಕ್ಕೆ ಸದವಕಾಶವಿರುತ್ತೆ. ವಸ್ತು ಪ್ರದರ್ಶನದಲ್ಲಿ ಮಳಿಗೆಗಳನ್ನು ತೆರೆಯಲಿಚ್ಛಿಸುವವರು ಕೂಡಲೇ ವಸ್ತು ಪ್ರದರ್ಶನದ ಕಾರ್ಯದರ್ಶಿಯವರಲ್ಲಿ ವ್ಯವಹರಿಸಿರಿ.

**ವಸ್ತು ಪ್ರದರ್ಶನ ಸಮಿತಿ.**

ತುಮಕೂರಿಗೆ ಬರುವವರಿದ್ದೀರಾ? ಹಾಗಿದ್ದರೆ, ವೈವಿಧ್ಯಮಯ ಊಟ,
ವಸತಿ, ತಿಂಡಿ ತಿನಿಸುಗಳ ನಮ್ಮ ಈ ಸ್ಥಳಗಳು ಸದಾ ನಿಮ್ಮನ್ನು ಸ್ವಾಗತಿಸುತ್ತಿವೆ.

ಹೋಟೆಲ್
ಶ್ರೀ ನಂಜುಂಡೇಶ್ವರ
ಊಟ, ವಸತಿ ಮತ್ತು
ಉಪಹಾರ ಮಂದಿರ,
ಬಿ.ಹೆಚ್. ರಸ್ತೆ, ತುಮಕೂರು-1
ದೂರವಾಣಿ
8597, 2373, 2577




ಶ್ರೀ ನಂಜುಂಡೇಶ್ವರ
ಬೇಕರಿ
ತುಮಕೂರು ಜಿಲ್ಲೆಯ ಪ್ರಖ್ಯಾತ
ಬೇಕರಿ
ಚಿಕ್ಕಪೇಟೆ ತುಮಕೂರು-1
ದೂರವಾಣಿ : 8077

ಶ್ರೀ ನಂಜುಂಡೇಶ್ವರ ರೆಸ್ಟೋರೆಂಟ್
ತುಮಕೂರಿನಲ್ಲಿ ಉತ್ತರ ಭಾರತದ ಶೈಲಿಯ ಊಟ
ಉಪಹಾರಗಳ ಶ್ರೇಷ್ಠ ದರ್ಜೆಯ ರೆಸ್ಟೋರೆಂಟ್
ಬಿ.ಹೆಚ್. ರಸ್ತೆ, ತುಮಕೂರು-1
ದೂರವಾಣಿ : 2677

ಸಿ.ವಿ. ಮಹದೇವಯ್ಯ
ಮ್ಯಾನೇಜಿಂಗ್ ಪಾರ್ಟನರ್
ಮನೆ ಫೋ. 2477

ಶ್ರೀ ನಂಜುಂಡೇಶ್ವರ ಸ್ವೀಟ್ಸ್
ಎಲ್ಲಾ ವಿಧವಾದ ಸಿಹಿ ಮತ್ತು ಖಾರ ತಿಂಡಿ ಹಾಗೂ
ಬೇಕರಿ ತಿನಿಸುಗಳ ನಗರದ ಏಕೈಕ ಸ್ಥಳ
ಅಶೋಕ ರಸ್ತೆ ತುಮಕೂರು-1
ದೂರವಾಣಿ : 2077

# ಶ್ರೀ ಸಿದ್ಧಲಿಂಗೇಶ್ವರಸ್ವಾಮಿ ರಥೋತ್ಸವಾಹ್ವಾನ ಪತ್ರಿಕಾ

ಶ್ರೀ ಸಿದ್ಧಗಂಗಾ ಕ್ಷೇತ್ರಾಧ್ಯಕ್ಷರು ಶ್ರೀ ಶ್ರೀ ಶಿವಕುಮಾರಸ್ವಾಮಿಗಳು

## ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ೧೯೧೨ಕ್ಕೆ ಸರಿಯಾದ ಶ್ರೀ ಪ್ರಮೋದನಾಮ ಸಂವತ್ಸರದ

| | | |
|---|---|---|
| ಬುಧವಾರ | 6-2-91 | **ವೃಷಭವಾಹನ ಮತ್ತು ಗಜವಾಹನ** |
| ಗುರುವಾರ | 7-2-91 | **ಹುಲಿವಾಹನ ಮತ್ತು ನಂದಿವಾಹನ** |
| ಶುಕ್ರವಾರ | 8-2-91 | ಮುತ್ತಿನಪಾಲಕಿ ಉತ್ಸವ |
| ಶನಿವಾರ | 9-2-91 | ಹಂಸದವಾಹನ ಮತ್ತು ಅಶ್ವವಾಹನ |
| ಭಾನುವಾರ | 10-2-91 | ಸಿಂಹವಾಹನ ಮತ್ತು ರಾವಣವಾಹನ |
| ಸೋಮವಾರ | 11-2-91 | ಬಿಲ್ವವೃಕ್ಷವಾಹನ ಮತ್ತು ನವರಂಗಪಾಲಕಿ ಉತ್ಸವ |
| ಮಂಗಳವಾರ | 12-2-91 | ಮಹಾಶಿವರಾತ್ರಿ ಪೂಜಾದಿಗಳು ಮತ್ತು ಮುತ್ತಿನಪಾಲಕಿ ಉತ್ಸವ |
| ಬುಧವಾರ | 13-2-91 | **ರಥೋತ್ಸವ** ಮತ್ತು **ರುದ್ರಾಕ್ಷಿಮಂಟಪೋತ್ಸವ** |
| ಗುರುವಾರ | 14-2-91 | **ಬೆಳ್ಳಿಪಾಲಕಿ ಉತ್ಸವ** |
| ಶುಕ್ರವಾರ | 15-2.91 | ನವಿಲುವಾಹನ ಮತ್ತು ತೆಪ್ಪೋತ್ಸವ |
| ಶನಿವಾರ | 16-2-91 | ಶೇಷವಾಹನ ಮತ್ತು ಪಂಚಬ್ರಹ್ಮೋತ್ಸವ |

ಮತ್ತು ಮಾಮೂಲಿನಂತೆ 'ಎತ್ತಿನ ಪರಿಷೆಯು' ತಾ|| 11-2-91ನೇ ಸೋಮವಾರ "ದನಗಳ ಪ್ರದರ್ಶನ" ಮತ್ತು ಉತ್ತಮ ರಾಸುಗಳಿಗೆ ಬಹುಮಾನ ವಿನಿಯೋಗವು ನಡೆಯುವಂತೆ ಏರ್ಪಡಿಸಿದೆ. "ಕೃಷಿ ಮತ್ತು ಕೈಗಾರಿಕಾ ವಸ್ತು ಪ್ರದರ್ಶನದಲ್ಲಿ" ಪ್ರತಿದಿವಸವೂ ಸಾಯಂಕಾಲ ಸಾಂಸ್ಕೃತಿಕ ಚಟುವಟಿಕೆಗಳೂ ನಡೆಯುವಂತೆ ಏರ್ಪಾಟು ಮಾಡಲಾಗಿದೆ.

ಸರ್ವರೂ ಸಕಾಲದಲ್ಲಿ ಬಂದು ಉತ್ಸವಗಳಲ್ಲಿ ಭಾಗವಹಿಸಿ ಶ್ರೀ ಸಿದ್ಧಲಿಂಗೇಶ್ವರಸ್ವಾಮಿ ಕೃಪೆಗೆ ಪಾತ್ರರಾಗಬೇಕೆಂದು ಅಪೇಕ್ಷಿಸುತ್ತೇವೆ.

ಶ್ರೀ ಸಿದ್ಧಗಂಗಾ ಮಠ
ತುಮಕೂರು ಜಿಲ್ಲಾ

ಶ್ರೀ ಶಿವಕುಮಾರಸ್ವಾಮಿಗಳು
ಶ್ರೀ ಸಿದ್ಧಗಂಗಾ ಮಠಾಧ್ಯಕ್ಷರು.

ವಿ.ಸೂ: ಜಾತ್ರೆಗೆ ಎತ್ತುಗಳನ್ನು ಹೊಡೆಯುವವರು 3-2-91ನೇ ಭಾನುವಾರ ಕಳೆದ ನಂತರ ಬರಬೇಕು ಮುಂಚಿತವಾಗಿ ಬಂದು ಸೇರಲು ಅವಕಾಶವಿರುವುದಿಲ್ಲ.

ಶ್ರೀ ಸಿದ್ಧಲಿಂಗೇಶ್ವರಸ್ವಾಮಿ ಮುದ್ರಣಾಲಯ. ಶ್ರೀ ಸಿದ್ಧಗಂಗಾಮಠ.

# ಸಿದ್ಧಗಂಗಾ

ಸಂಪುಟ–27. ಸಂಚಿಕೆ–1. ಜನವರಿ–1991.

ಹಣದ ದಾಹ,
ಅಧಿಕಾರದ ದಾಹ,
ಭೋಗ ಜೀನವದ ದಾಹದಿಂದ
ಜಗತ್ತು ಇಂದು ವಿನಾಶದತ್ತ ಧಾವಿಸುತ್ತಿದೆ.
ನೈತಿಕ ದಿವಾಳಿ ತಾಂಡವವಾಡುತ್ತಿದೆ. ಸಜ್ಜನ ಶಕ್ತಿಯು
ನಿಷ್ಕ್ರಿಯತೆಯೂ ಇಂದಿನ ವಿಷಮ ಪರಿಸ್ಥಿತಿಗೆ
ಕೊಂಚಮಟ್ಟಿಗೆ ಕಾರಣವೆನ್ನದೆ ಇರು
ವಂತಿಲ್ಲ. ಈ "ಸ್ಥಾವರಸ್ಥಿತಿ"ಯಿಂದ
'ಜಂಗಮ'ವಾಗುವುದೇ ಎಲ್ಲರ
ಗುರಿಯಾಗಬೇಕು.

ಶ್ರೀ ಶಿವಕುಮಾರಸ್ವಾಮಿಗಳು.

ಪ್ರಕಾಶಕರು:
ಹಳೆಯ ವಿದ್ಯಾರ್ಥಿಗಳ ಸಂಘ.
ಸಿದ್ಧಗಂಗಾ ಕ್ಷೇತ್ರ.

# ಆಸ್ತಿಕ ಬಂಧುಗಳಲ್ಲಿ ಒಂದು ವಿನಮ್ರ ಮನವಿ

1 ಶ್ರೀ ಸಿದ್ಧಗಂಗಾ ಮಠದಲ್ಲಿ ನಿತ್ಯ ನಾಲ್ಕು ಸಹಸ್ರ ವಿದ್ಯಾರ್ಥಿಗಳಿಗೆ ದಾಸೋಹ ವ್ಯವಸ್ಥೆ ನಡೆಯುತ್ತಿದೆ.

2 ನಾಲ್ಕು ಸಹಸ್ರ ವಿದ್ಯಾರ್ಥಿಗಳು ವಿವಿಧ ಸಮಾಜದಿಂದ ಬಂದವರಾಗಿರುತ್ತಾರೆ. ಜಾತ್ಯತೀತ ಮನೋಧರ್ಮವನ್ನು ರೂಢಿಸಿಕೊಂಡು ಬೆಳೆಯುವ ಮುಕ್ತ ವಾತಾವರಣ ಇಲ್ಲಿನ ವೈಶಿಷ್ಟ್ಯ.

3 ನಿತ್ಯ ಬರುವ ಸಹಸ್ರ ಸಹಸ್ರ ಯಾತ್ರಾರ್ಥಿಗಳಿಗೂ ದಾಸೋಹ ನಡೆಯುತ್ತಿದೆ.

4 "**ಸಿದ್ಧಗಂಗೆಯ ಊಟ ಶಿವಗಂಗೆಯ ನೋಟ**" ಎಂಬುದು ಗಾದೆ ಮಾತಾಗಿದೆ.

5 " **ಪ್ರಸಾದ ತೆಗೆದು ಕೊಂಡು ಹೋಗಿ** "–ಎಂಬುದೇ ಪರಮ ಪೂಜ್ಯ **ಶ್ರೀ ಶ್ರೀ ಗಳವರು** ಕ್ಷೇತ್ರಾರ್ಥಿಗಳಿಗೆಲ್ಲ ಹೇಳುವ ನಿತ್ಯ ಪಂಚಾಕ್ಷರಿ ಮಂತ್ರ

6 ಇಂಥ ದಾಸೋಹ ಮಣಿಹದಲ್ಲಿ ನಿಮ್ಮದೂ ಕಾಣಿಕೆ ಸಲ್ಲಿಸಲು ಅವಕಾಶವಿರುತ್ತದೆ.

7 ದಾಸೋಹಕ್ಕೆ ಧನ-ಧಾನ್ಯ ರೂಪದಲ್ಲಿ ಯಥಾಶಕ್ತಿ ಕಾಣಿಕೆ ಅರ್ಪಿಸಿ ಧನ್ಯರಾಗಲು ಇದೊಂದು ಅಪೂರ್ವ ಅವಕಾಶ.

8 ನೀವು ನೀಡುವ ಒಂದು ಸೇರು ಧಾನ್ಯ, ಒಂದು ರೂಪಾಯಿ ಸಾರ್ಥಕ ವಿನಿಯೋಗಕ್ಕೆ ಮೀಸಲಾಗುತ್ತದೆ.

9 ನೀವೂ ದಾಸೋಹದಲ್ಲಿ ಭಾಗಿಗಳಾಗುವ ಪುಣ್ಯ ಸಂಕಲ್ಪ ಇಂದೇ ಮಾಡುತ್ತೀರಾಗಿ **' ಸಿದ್ಧಗಂಗಾ '** ಆಶಿಸುತ್ತದೆ.

# ಸಿದ್ಧಗಂಗಾ

ಸಂಪುಟ–27. ಸಂಚಿಕೆ–1. ಜನವರಿ–1991.

## ಶ್ರೀ ಸಿದ್ಧಗಂಗಾ ಗುರುಕರುಣ ತ್ರಿವಿಧಿ

ಭಕ್ತಿ ನಿಜವೈರಾಗ್ಯ ಸಂಗಮವೆ ಶ್ರೀಗುರುವೆ
ಲಿಂಗದಂಕುರವೆ ನನ್ನ ತಂದೆ। ಪೊಡಮಡುವೆ
ಸಿದ್ಧಗಂಗಾ ಗುರುವೆ ಕೃಪೆಯಾಗು ॥

ಗುರು ತಂದೆ ಗುರು ತಾಯಿ ಸದ್ಭಕ್ತಿ ಸಾರಾಯ
ಮರ್ತ್ಯ ಲೋಕಕೆ ಬಂದ ಶಿವಬೆಳಕೆ। ಪೊಡಮಡುವೆ
ಸಿದ್ಧಗಂಗಾ ಗುರುವೆ ಕೃಪೆಯಾಗು ॥

ನಿರ್ಮಾಯ ನಿರ್ಭಾವ ನಿರ್ಗುಣ ಶ್ರೀನಿಲವೆ
ಎನ್ನೆದೆಯ ಜ್ವಲಿಸಿರುವ ಶ್ರೀಗುರುವೆ। ಪೊಡಮಡುವೆ
ಸಿದ್ಧಗಂಗಾ ಗುರುವೆ ಕೃಪೆಯಾಗು ॥

—ಹೆಚ್. ವಿ. ವೀರಭದ್ರಯ್ಯ.

| ಲೇಖನ | ಲೇಖಕರು | ಪುಟ |
|---|---|---|
| * ಶ್ರೀವಾಣಿ | | 5 |
| * ಶ್ರೀ ಸಿದ್ಧಲಿಂಗೇಶ್ವರ ವಚನ | | 7 |
| * ಸಂಪಾದಕೀಯ | | 9 |
| * ಮದುದ್ವಾನೇಶ್ವರ ಶತಕಂ | | 11 |
| * ಜನಪದ ಸಾಹಿತ್ಯದಲ್ಲಿ ಬಸವಣ್ಣನವರು | ಪ್ರೊ. ಸಿದ್ದಣ್ಣ ಲಂಗೋಟಿ | 12 |
| * ವಿದ್ಯಾರ್ಥಿ ಜೀವನದ ಬೆಳಕು ಸರಣಿ | ಬಿ. ಎಸ್. ಕೃಷ್ಣಮೂರ್ತಿ. | 17 |
| * ವಾಙ್ಮಯ ತಪಸ್ಸು | ಎಂ. ಮಾಧವಪೈ | 18 |
| * ವಿಜ್ಞಾನ ಮತ್ತು ಆಧ್ಯಾತ್ಮ | ಹೆಚ್. ಎಸ್. ನರಸಿಂಹಜೀಯರ್. | 23 |
| * ನಾಡು-ನುಡಿಗಾಗಿ | ಎನ್. ಎಸ್. ಅಶ್ವತ್ಥಲಕ್ಷಮ್ಮ. | 27 |
| * ನೀತಿ ಶೀಲ ಪ್ರಗತಿ (ಚಿಂತನ) | ಜೆ. ಶಾರದಾ ರಾಜಶೇಖರ್ | 28 |
| * ನಗೆ ನೀತಿ-೧ | ಆ॥ ವಿ॥ ಡಾ॥ ಬಸವರಾಜಶಾಸ್ತ್ರಿಗಳು. | 31 |
| * ತೋಟಗಾರಿಕೆ ಉದ್ಯಮ | ಡಿ. ವೆಂಕಟರಾವ್. | 33 |
| * ಜನನ ಬಾಲ್ಯ "ವರತಪಸ್ವಿ" | | 36 |
| * ಎರೇಹುಳುವಿನ ಮಾರಾಟ | ಬಿ. ಸುಬ್ರಾಯ ಅಡಿಗ | 39 |



## ಶ್ರೀ ವಾಣಿ

ಪ್ರಪಂಚ ಯಾರಿಗೋಸ್ಕರ ? ಪ್ರಶ್ನೆಗೆ ಎದುರಾಗುವ ಉತ್ತರ ಪ್ರಪಂಚ ಮಾನವನಿಗಾಗಿ, ಅಂದ ಮೇಲೆ ಪ್ರಪಂಚದ ಬದುಕಿಗೆ ಅರ್ಥಬರುವುದು ಮಾನವನಿಂದ ತಾನೆ ? ಏನುಮಾಡಿದರೆ ಅಂಥ ಅರ್ಥ ಪ್ರಾಪ್ತವಾಗಬಹುದು ? ಉತ್ತರ ಸಿದ್ಧವಾಗಿದೆ- "ಸಕಲ ಜೀವರಿಗೆ ಲೇಸನ್ನು ಬಯಸುವುದು." ಕೇವಲ ಬಯಸುವುದರಿಂದ ಮಾತ್ರವಲ್ಲ ಅರ್ಥವಂತಿಕೆಯಿಂದ ಆಚರಣೆಗೆ ತರುವುದು. ಹಾಗೆ ಆಚರಿಸಿ ಸಂದೇಶ ನೀಡಿ ಹೋಗಿ-ರುವ ಅಸಂಖ್ಯಾತ ಮಹಾನುಭಾವರ ಜೀವನ ನಮ್ಮ ಕಣ್ಣಮುಂದಿದೆ. "ಎಲ್ಲರೊಳ-ಗೊಂದಾಗಿ" ಬಾಳುವ ಕಲೆಯನ್ನು ಕಲಿಸಿಕೊಟ್ಟಿದ್ದಾರೆ. ಎಲ್ಲರಿಗಾಗಿ ನಾನು, ನನಗಾಗಿ ಎಲ್ಲರಲ್ಲ ಎಂಬ ದಿವ್ಯಮಂತ್ರ ನಮ್ಮದಾಗಬೇಕು. ನಮ್ಮ ಹಿರಿಯರು ನಮಗೆ ತುಂಬ ಮಹತ್ವಪೂರ್ಣವಾದ ಐಶ್ವರ್ಯವನ್ನು ಬಿಟ್ಟುಹೋಗಿದ್ದಾರೆ. ಆ ಐಶ್ವರ್ಯ ಬೆಳ್ಳಿ ಬಂಗಾರವಲ್ಲ, ಪದವಿ ಪಟ್ಟಗಳಲ್ಲ, ಭೋಗಲಾಲಸೆಗಳಲ್ಲ, ಅಧಿಕಾರ ಅಂತಸ್ತುಗಳಲ್ಲ, ಪರಿಶುದ್ಧ ಶೀಲ ಸಂಪತ್ತು. ನೈತಿಕ ಬಂಡವಾಳ. ಧರ್ಮದ ಮೂಲಧನ ನೈತಿಕತೆ. ಅದರಿಂದ ವಿಮುಖರಾದರೆ ಜೀವನಕ್ಕೆ ಅರ್ಥವಿಲ್ಲ. ಕೆಡಕನ್ನು ಬಿಡಬೇಕು. ಒಳ್ಳೆಯದನ್ನು ಸ್ವೀಕರಿಸಬೇಕು. ಮಾತು, ಮನ, ಕೃತಿಗಳಲ್ಲಿ ಒಳಿತನ್ನು ತುಂಬಿಕೊಳ್ಳಬೇಕು; ಒಳಿತನ್ನೇ ಆಚರಿಸಬೇಕು. ಬದುಕಿನಲ್ಲಿ ಕಲಿಯುವುದು ಬೆಟ್ಟದಷ್ಟಿದೆ. ಎಲ್ಲವನ್ನೂ ಕಲಿಯಲಾಗು-ವುದು ದುಸ್ತರ. ಆದರೆ ಕಲಿತದ್ದು ಪ್ರಪಂಚದ ಅರ್ಥವಂತಿಕೆಗೆ ಸಹಾಯಕವಾಗಬೇಕು. ಜೀವನದ ಹೋರಾಟದಲ್ಲಿ ಕಳೆದುಕೊಳ್ಳಬೇಕಾದುದು ಬೇಕಾದಷ್ಟಿದೆ; ಗಳಿಸಿಕೊಳ್ಳ-ಬೇಕಾದದ್ದೂ ಅಪಾರವಾಗಿದೆ. ಕಳೆದುಕೊಳ್ಳಬೇಕಾದುದು ಯಾವುದು ? ಕಾಮ, ಕ್ರೋಧ, ಮೋಹ, ಮದ, ಮತ್ಸರ, ಲೋಭ ಮುಂತಾದುವುಗಳು ಎಂದು ನಮ್ಮ ಪರಂಪರೆ ಸಾರಿ ಸಾರಿ ಹೇಳುತ್ತಲಿದೆ. ಗಳಿಸಿಕೊಳ್ಳಬೇಕಾದುದು ಏನು? ಪ್ರೀತಿ, ಸಹಬಾಳ್ವೆ, ದುಡಿಮೆ, ದೈವಶಕ್ತಿ ಎಂಬುದನ್ನು ಅದೇ ಪರಂಪರೆ ಬದುಕಿ ತೋರಿಸಿದೆ. ಭರತಖಂಡದ ಸಂಸ್ಕೃತಿಯಂತೂ ಜಗತ್ತಿಗೆ ನೀಡಿದ ಅಮೂಲ್ಯ ಕಾಣಿಕೆ ಆಧ್ಯಾತ್ಮಿಕ ಸಂಪತ್ತು. ಅದರ ಅನುಯಾಯಿಗಳಾದ, ವಾರಸುದಾರರಾದ ನಾವಿಂದು ಮಂದಿರ- ಮಸೀದಿಗಳ ಹೆಸರಲ್ಲಿ ಜೀವ ಹತ್ಯೆಗೆ ಧಾವಿಸುತ್ತಿದ್ದೇವೆ. ನಮ್ಮ ಭವಿಷ್ಯ ಜನಾಂಗಕ್ಕೆ ಯಾವ ಆದರ್ಶವನ್ನಿಂದು ಕೊಟ್ಟಿದ್ದೇವೆ ಎಂಬುದರ ಚಿಂತನ ನಡೆಯಬೇಕು "ಕೂಡಲಸಂಗಮ. ದೇವನನ್ನು ಒಲಿಸಲು ಬಂದ ಪ್ರಸಾದಕಾಯ'ವನ್ನು "ಮರ್ತ್ಯವೆಂಬುದನ್ನು ಕರ್ತಾರನ ಕಮ್ಮಟ" ವನ್ನಾಗಿಸಲು ಮೀಸಲಿಡಬೇಕೆ? ಹೊರತು, ವಿನಾಶಕಾರಕ ಕೆಲಸಗಳಿಲ್ಲ. (27-12-90 ರಂದು ಚಿಕ್ಕಬೆಳವಂಗಲದಲ್ಲಿ ನೀಡಿದ ಆಶೀರ್ವಚನದಿಂದ ಸಂಗ್ರಹಿಸಿದ್ದು)

## ಸಿದ್ಧಗಂಗೆ ಜಾತ್ರೆ – ರೈತರುಗಳಿಗೆ ಒಂದು ಮನವಿ

ಮಹಾಶಿವರಾತ್ರಿಯ ಸಂದರ್ಭದಲ್ಲಿ ಸಿದ್ಧಗಂಗೆ ಜಾತ್ರೆ ಸುಮಾರು ಒಂದು ಶತಮಾನದಿಂದ ಅವಿಚ್ಛಿನ್ನವಾಗಿ ನಡೆದು ಬರುತ್ತಿದೆ. ಕರ್ನಾಟಕ ರಾಜ್ಯದ ಜಾತ್ರೆಗಳಲ್ಲಿ ಇದು ವಿಶೇಷ ವೈಶಿಷ್ಟತೆಗಳಿಂದ ಕೂಡಿದೆ. ಸಾಂಸ್ಕೃತಿಕವಾಗಿ, ಧಾರ್ಮಿಕವಾಗಿ, ಸಾಮಾಜಿಕವಾಗಿ ರಾಜ್ಯದ ಜನತೆಯ ಮೇಲೆ ವಿಶೇಷ ಪ್ರಭಾವವನ್ನುಂಟುಮಾಡಿದೆ. ಲಕ್ಷಗಟ್ಟಲೆ ಯಾತ್ರಾರ್ಥಿಗಳು ಈ ಸಂದರ್ಭದಲ್ಲಿ ಭೇಟಿಕೊಡುತ್ತಾರೆ. ಇವರಿಗೆಲ್ಲಾ ಈ ಸಂದರ್ಭದಲ್ಲಿ ಶ್ರೀಮಠದಿಂದ ಪ್ರಸಾದ ವ್ಯವಸ್ಥೆ ಮಾಡಲಾಗುತ್ತದೆ. ಇದಕ್ಕಾಗಿ ಕೆಲವಾರು ಪೂರ್ವಸಿದ್ಧತೆಗಳನ್ನು ಮಾಡಿಕೊಳ್ಳಬೇಕಾಗುತ್ತದೆ.

ಜತೆಗೆ ಈ ಸಂದರ್ಭದಲ್ಲಿ ಗ್ರಾಮೀಣ ರೈತಬಾಂಧವರ ತಿಳುವಳಿಕೆಗಾಗಿ ಕಳೆದ 24 ವರ್ಷಗಳಿಂದ ಕೃಷಿ ಮತ್ತು ಕೈಗಾರಿಕಾ ವಸ್ತು ಪ್ರದರ್ಶನ ಏರ್ಪಡಿಸಲಾಗುತ್ತಿದೆ. ನಾಡಿನ ಅಭಿವೃದ್ಧಿ ಕಾರ್ಯಗಳ ಬಗ್ಗೆ ಈ ವಸ್ತುಪ್ರದರ್ಶನ ಜ್ಞಾನದೀವಿಗೆಯಾಗಿದೆ. ಇದರ ಅಂಗವಾಗಿ ಅನೇಕ ಪೂರ್ವಭಾವಿ ಕೆಲಸಗಳನ್ನು ಮಾಡಿಕೊಳ್ಳಬೇಕಾಗುತ್ತದೆ.

ಜಾತ್ರಾಸೌಲಭ್ಯ ಕಾರ್ಯಗಳು ಸಿದ್ಧತೆಯಲ್ಲಿರುವಾಗಲೇ ರೈತರು ತಮ್ಮ ರಾಸುಗಳೊಡಿಂಗೆ ನಿಗಧಿಪಡಿಸಿದ ಮುಂಚೆ ಜಾತ್ರೆಗೆ ಬರುವುದು ಇತ್ತೀಚಿನ ವರ್ಷಗಳಲ್ಲಿ ಸಾಮಾನ್ಯವಾಗಿದೆ. ಇದರಿಂದ ವ್ಯವಸ್ಥಾಪಕರಿಗೆ ಅನೇಕ ಅನಾನುಕೂಲಗಳಾಗುತ್ತವೆ. ಜಾತ್ರೆಯಲ್ಲಿ ದೇವರ ಉತ್ಸವಗಳು, ಕೃಷಿ ಮತ್ತು ಕೈಗಾರಿಕಾ ವಸ್ತು ಪ್ರದರ್ಶನ ಜನಭರಿತವಾಗಿರುವ ಸಂದರ್ಭದಲ್ಲಿ ನೆರವೇರಿದರೆ ಶೋಭೆಯನ್ನುಂಟುಮಾಡಿ ಆಕರ್ಷಣೀಯವಾಗಿರುತ್ತವೆ. ಜನಗಳಿದ್ದರೆ ಜಾತ್ರೆ.
ಜಾತ್ರಾ ಕಾರ್ಯಕ್ರಮಗಳು ಪ್ರಾರಂಭವಾಗುವ 8–10 ದಿವಸಗಳು ಮೊದಲೇ ರೈತರು ಜಾತ್ರೆಗೆ ಬಂದು ಸೇರಿ ನಂತರ ಖಾಲಿಯಾಗುವದರಿಂದ ರೈತರಿಗಾಗಿ ಪರಮ ಪೂಜ್ಯ ಡಾ॥ ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರು ಲಕ್ಷಾಂತರ ರೂಗಳು ಖರ್ಚುಮಾಡಿ ಏರ್ಪಡಿಸಿರುವ ಕೃಷಿ–ಕೈಗಾರಿಕಾ ವಸ್ತು ಪ್ರದರ್ಶನ–ದೇವರ ಉತ್ಸವಗಳಉದ್ದಿಶ್ಯ ಸಾರ್ಥಕವಾಗುತ್ತಿಲ್ಲ. ಆದ್ದರಿಂದ ನಿಗಧಿಪಡಿಸಿರುವಂತೆ ಬಂದು ಇವುಗಳ ಪ್ರಯೋಜನ ಪಡೆಯಲು ಕೋರಲಾಗಿದೆ.
ಈ ಪತ್ರಿಕೆಯ ಹೊರ ಪುಟದಲ್ಲಿ ಜಾತ್ರೆಯ ಕಾರ್ಯಗಳನ್ನು ಮುದ್ರಿಸಲಾಗಿದೆ. ಇದನ್ನು ಗಮನಿಸಿ, ಅದರಂತೆ ಜಾತ್ರೆ ಪ್ರಾರಂಭವಾಗುವ ಒಂದೆರಡು ದಿನ ಮುನ್ನಾ ಆಗಮಿಸಿ ಕೊನೆಯವರೆಗೂ ಇದ್ದು ಎಲ್ಲಾ ಕಾರ್ಯಗಳಲ್ಲಿ ಭಾಗಿಗಳಾಗಲು ಮನವಿ. ತಾ॥ 4-2-1991 ಸೋಮವಾರದ ನಂತರವೇ ರೈತರು ಜಾತ್ರೆಗೆ ಬಂದು ಸೇರುವುದು.

ಜಾತ್ರೆ ವೈಭವಯುತವಾಗಿ ಮುನ್ನಡೆಯಲು ಎಲ್ಲರ ಸಹಾಯ ಸಹಕಾರವನ್ನು ತುಂಬು ಹೃದಯದಿಂದ ಸ್ವಾಗತಿಸುತ್ತೇವೆ.

**ಹೆಚ್. ಬಿ. ಗಂಗಾಧರಯ್ಯ,**
ಪ್ರಕಾಶಕರು.

# ಶ್ರೀ ಸಿದ್ಧಲಿಂಗೇಶ್ವರ ವಚನ



ಪಟ್ಟಣ ಪಾಳೆಯದೊಳಗೆ ವ್ಯವಹರಿಸುತ್ತಿಪ್ಪ ಸೆಟ್ಟಿಗಾತಿಗೆ
ಒಬ್ಬ ಹುಟ್ಟುಗುರುಡನು ಗಂಡನಾಗಿಪ್ಪನು ನೋಡಾ
ಪಟ್ಟಣ ಬೆಂದು ಪಾಳೆಯುವಳಿದು, ಸೆಟ್ಟಿಕಾತಿಯ ಮನೆವಾರ್ತೆಕೆಟ್ಟು
ಹುಟ್ಟು ಗುರುಡಂಗೆ ಕಣ್ಣುಬಂದಲ್ಲದೆ
ಮುಂದಣ ಬಟ್ಟೆ ಯಾರಿಗೂ ಕಾಣ ಬಾರದು ನೋಡಾ
ಸೂಕ್ಷ್ಮಶಿವತತ್ತ್ವದ ಹಾದಿ ಎಲ್ಲರಿಗೆ ಸಾಧ್ಯವೇ ? ಸಾಧ್ಯವಿಲ್ಲ ಕಾಣಾ
ಶಿವಜ್ಞಾನ ಸಂಪನ್ನರಿಗಲ್ಲದೆ
ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೇ.

ದೇಹದಲ್ಲಿ ಕರಣೇಂದ್ರಿಯಗಳಿವೆ. ಅವು ದೇಹ ಸಂಬಂಧವಾದ ವ್ಯಾಪಾರದಲ್ಲಿ ತೊಡಗಿವೆ. ಅವುಗಳ ಒಡೆತನ ಹುಟ್ಟು ಗುರುಡನಾದ **ಜೀವನ** ಕೈಯಲ್ಲಿದೆ. ಆ ಜೀವನ ದೇಹಭಾವ ಶ್ರೀಗುರುವಿನ ವೇದಾಮಂತ್ರ ಕ್ರಿಯೋಪ ದೇಶದಿಂದ ಪರಿಹಾರವಾಗಿದೆ. ಅದರಿಂದಾಗಿ ದೇಹ ಸಂಬಂಧವಾದ ಸಕಲ ಕರಣೇಂದ್ರಿಯಗಳು ನಿವೃತ್ತಿಯಾಗಿವೆ, ವಿಷಯ ವಾಸನಾಯುಕ್ತವಾದ ಅವುಗಳ ಲೋಕಭಾವವಳಿದು ಜ್ಞಾನ ಭಾವ ಉಂಟಾಗಿದೆ. ಆ ಹುಟ್ಟು ಗುರುಡನಾದ ಜೀವನಿಗೆ ಗುರುವಿನುಪದೇಶದಿಂದ ಸುಜ್ಞಾನ ಉದಯವಾದು ದರಿಂದ ಮೋಕ್ಷ ಮಾರ್ಗ ನಿದರ್ಶನವಾಯಿತಲ್ಲದೆ ಮತ್ತು ಅದರಿಂದಾಗಿ ಲಿಂಗಾಂಗ ಸಂಬಂಧಿಯಾದ ಸಮರಸಜ್ಞಾನ ಕ್ರಿಯಾಚಾರ ಸಂಪತ್ತನ್ನುಳ್ಳ ಶಿವಶರಣನಿಗೆ ಅತಿ ನಿಗೂಢವಾದ ಷಟ್‌ಸ್ಥಲ ಜ್ಞಾನ ಕ್ರಿಯಾಚಾರದ ಪದ್ಧತಿ ಸಾಧ್ಯವಾಗುವುದೇ ಹೊರತು ಉಳಿದ ದ್ವೈತ, ಅದ್ವೈತ, ಹಠ ಕರ್ಮಿಗಳಿಗೆ ಸಾಧ್ಯವಾಗದು ಎನ್ನುತ್ತದೆ ವಚನ.

# ಸಿದ್ಧಗಂಗಾ

ಪ್ರಧಾನ ಸಂಪಾದಕರು
**ಪ್ರೊ|| ಚನ್ನಪ್ಪ ಎರೇಸೀಮೆ**

* * *

ಸಂಪಾದಕರು
**ಹೆಚ್. ವಿ. ವೀರಭದ್ರಯ್ಯ**

* * *

ಸಹ ಸಂಪಾದಕರು
**ಬಿ. ವೀರಭದ್ರಯ್ಯ**
**ಪಿ. ಎನ್. ಚಂದ್ರಶೇಖರಯ್ಯ**

* * *

ಜಾಹೀರಾತು ವಿಭಾಗ
**ಎಂ. ರೇಣುಕಾರಾಧ್ಯ**

* * *

ವಿತರಣೆ ವಿಭಾಗ
**ಆರ್. ಎಸ್. ಮಲ್ಲೇಶಪ್ಪ**

* * *

ಪ್ರಕಾಶಕರು
**ಹೆಚ್. ಬಿ. ಗಂಗಾಧರಯ್ಯ**
ಹಳೆಯ ವಿದ್ಯಾರ್ಥಿ ಸಂಘದ ಪರವಾಗಿ

* * *

ಮುದ್ರಕರು
**ಶ್ರೀ ಸಿದ್ಧಲಿಂಗೇಶ್ವರಸ್ವಾಮಿ ಮುದ್ರಣಾಲಯ**

* * *

ಪ್ರಕಟಣೆಯ ಸ್ಥಳ
ಶ್ರೀ ಸಿದ್ಧಗಂಗಾಕ್ಷೇತ್ರ

## ಚಂದಾ ವಿವರ

ವಾರ್ಷಿಕ ಚಂದಾ 25-00ರೂ
ಆಜೀವ ಸದಸ್ಯತ್ವ 250-00 ರೂ

## ಲೇಖಕರಲ್ಲಿ ಮನವಿ

'ಸಿದ್ಧಗಂಗಾ' ಶ್ರೀ ಸಿದ್ಧಗಂ[ಗಾ] ಮಠದಿಂದ ಪ್ರಕಟವಾಗುತ್ತಿರುವ ಮಾ[ಸ] ಪತ್ರಿಕೆ. ಶ್ರೀ ಮಠದ ಹಳೆಯ ವಿದ್ಯಾರ್[ಥಿ] ಸಂಘದ ಹೆಮ್ಮೆಯ ಸೇವಾ ಪುರವ[ಣಿ] ಮೇಲಾಗಿ ಶ್ರೀ ಮಠದ ಮುಖವಾ[ಣಿ] ಪೂಜ್ಯ ಶ್ರೀ ಶ್ರೀ ಡಾ|| ಶಿವಕುಮಾ[ರ] ಮಹಾಸ್ವಾಮಿಗಳವರ ದಿವ್ಯ ಮಾರ್ಗದ[ರ್ಶ]ನದಲ್ಲಿ ಮುನ್ನಡೆದಿರುವ ಪತ್ರಿಕೆ. ತ್ರಿವಿ[ಧ] ದಾಸೋಹ ಸೇವಾ ತತ್ಪರತೆಯಿಂದ ಹೆಜ್ಜೆ ಹಾಕುತ್ತಿದೆ. ಈ ಧ್ಯೇಯ ಸಾಧನೆಗಾ[ಗಿ] ನಾಡಿನ ಗಣ್ಯ ಲೇಖಕರಿಂದ ಸಾಹಿತ್ಯ ಸಂಸ್ಕೃತಿ, ಧರ್ಮ, ವಿಜ್ಞಾನ, ಶಿಕ್ಷಣ ಇತಿಹಾಸ, ವೈಚಾರಿಕ, ಚಿಂತನ ಮುಂತಾ[ದ] ಲೇಖನಗಳನ್ನು ಸ್ವಾಗತಿಸುತ್ತದೆ. ಅಸ್ವೀಕೃ[ತ] ಲೇಖನಗಳನ್ನು ಪಡೆಯಲು ಸಾಕಷ್[ಟು] ಅಂಚೆಸ್ಟಾಂಪುಗಳನ್ನು ಲಗತ್ತಿಸಿರಬೇಕು. ಲೇಖನಗಳಲ್ಲಿ ಸೂಕ್ತ ಬದಲಾವಣೆ ಮಾ[ಡಿ] ಕೊಳ್ಳುವ ಅಧಿಕಾರ ಸಂಪಾದಕರಿಗಿದೆ. ಅನುವಾದ, ರೂಪಾಂತರ ಲೇಖನಗಳಿ[ಗೆ] ಮೂಲ ಕೃತಿಕಾರರ ಅನುಮತಿ ಪಡೆದಿ[ರ]ಬೇಕು. ಸ್ವೀಕೃತ ಲೇಖನಗಳಿಗೆ ಸೂಕ್ತ ಸಂಭಾವನೆ ಕೊಡಲಾಗುವುದು.

**" ಸಂಪಾದಕರು "**
**' ಸಿದ್ಧಗಂಗಾ ' ಕನ್ನಡ ಮಾಸಪತ್ರಿಕೆ**
ಶ್ರೀ ಸಿದ್ಧಗಂಗಾ ಕ್ಷೇತ್ರ-572104
ತುಮಕೂರು ಜಿಲ್ಲೆ.

ಇವರಿಗೆ ಕಳುಹಿಸಿಕೊಡಬೇಕಾಗಿ ಪ್ರಾರ್ಥನೆ

# ಸಂಪಾದಕೀಯ

**ಆತ್ಮಬಲ ಸಮಗಿದೆಯೆ ?**

ಸಂಕ್ರಾಂತಿಯ ಆಚರಣೆ ಸಂತೋಷಕ್ಕಾಗಿ ಆದರೆ ನಿಜವಾಗಿಯೂ ಇಂದು ಸಂತೋಷಪಡುವ ಸ್ಥಿತಿಯಲ್ಲಿದ್ದೇವೆಯೇ ಭಾರತೀಯರು ? ಪ್ರಪಂಚದ ಒಂದು ಮೂಲೆಯಲ್ಲಿ ಯುದ್ಧದ ತುತ್ತೂರಿ ಮೊಳಗಿದೆ. ಪರಿಣಾಮ ವಾಗಿ ಭೀಕರ ಭವಿಷ್ಯ ಕಾದಿದೆ. ಈಗಾಗಲೇ ಮಿತಿಮೀರಿದ ಏರಿದ ಬೆಲೆ, ತೆರಿಗೆಯಹೊರೆ, ಎಲ್ಲೆಯೇ ಇಲ್ಲದ ಭ್ರಷ್ಟಾಚಾರ, ಅ ರಾಜಕತೆಗಳ ತಾಂಡವ, ಹಿಂಸೆಗಳಿಂದ ತತ್ತರಿಸಿ ಹೋಗಿರುವ ಮಧ್ಯಮ ಹಾಗೂ ಸಾಮಾನ್ಯವರ್ಗದ ಜನತೆಗೆ ಸಂಕ್ರಾಂತಿ ಮುದ ತಂದೀತೆ ? ನಡೆಯುವ ಯುದ್ಧದಿಂದ ಮೇಲಿ ದ್ದುನಿಲ್ಲುವ ಶಕ್ತಿ ಸಾಮರ್ಥ್ಯ ನಮ್ಮಲ್ಲುಂಟೆ ? ಯಾವುದೇ ಕಾಲವಾಗಲಿ ಯಾರ ಮುಖಂಡತ್ವವೇ ಇರಲಿ ಯುದ್ಧವೆಂಬುದು ಮನುಕುಲಕ್ಕೆ ಒಂದು ಘನ ಘೋರಶಾಪ. ಶತ ಶತಮಾನಗಳ ಚರಿತ್ರೆ ಅದನ್ನು ಒತ್ತಿ ಹೇಳಿದೆ. ಆದರೂ ಯುದ್ಧ ಒಂದಲ್ಲ ಒಂದು ರೂಪದಲ್ಲಿ, ಒಂದಲ್ಲ ಒಂದು ಕಾರಣ ಕ್ಕಾಗಿ ನಡೆದೇ ಇದೆ. ಯುದ್ಧದಿಂದಾಗುವ ಪರಿಣಾಮವನ್ನು ಊಹಿಸಿ ಕೊಂಡರೆ ಹೃದಯನಿಂತು ಹೋದಂತಾಗುತ್ತದೆ. ಇಂಥ ಪರಿಸ್ಥಿಯಲ್ಲಿ ಭಾರತೀಯನ ಕರ್ತವ್ಯ ಪ್ರಜ್ಞೆ ಜಾಗೃತವಾಗಬೇಕು. ರಾಷ್ಟ್ರ ಎದುರಿಸಬಹು ದಾದ–ಯುದ್ಧ ಪರಿಣಾಮದಿಂದಾಗಬಹುದಾದ ಸಮಸ್ಯೆಗಳೆಲ್ಲವನ್ನೂ ಸಂಕಲ್ಪ ಚಿತ್ತದಿಂದ ಪರಿಹರಿಸಿಕೊಳ್ಳುವ ನಿರ್ಧಾರ ಕೈಗೊಳ್ಳಬೇಕು. ರಾಷ್ಟ್ರದ ಆರ್ಥಿಕ ವ್ಯವಸ್ಥೆಯಲ್ಲಿ ತಲೆದೋರಬಹುದಾದ ಏರು ಪೇರುಗಳನ್ನು ಸಮ ತೂಗಿಸಿ ಕೊಳ್ಳಲು ದುಡಿಮೆಯ ಅವಧಿಯನ್ನು ಹೆಚ್ಚಿಸಿಕೊಳ್ಳಬೇಕು. ಬರೀ ಅವಧಿ ಹೆಚ್ಚಾದರೆ ಸಾಲದು ಪ್ರಾಮಾಣಿಕ ದುಡಿಮೆ ರಾಷ್ಟ್ರಪ್ರಜ್ಞೆಯಿಂದ ನಡೆಯ ಬೇಕು. ರಜಾದಿನಗಳು ಕಡಿಮೆಯಾಗಬೇಕು. ಮುಷ್ಕರಗಳು ನಿಲ್ಲಬೇಕು. ಯಾವ ಕಾರ್ಖಾನೆಗಳೂ ಯಾವುದೇ ಕಾರಣಕ್ಕೂ ಮುಚ್ಚಬಾರದು.

ಅನಗತ್ಯ ಕಾರಣಕ್ಕೆ ವಿದ್ಯುತ್ ಸರಬರಾಜು ಬಳಕೆಯಾಗಬಾರದು, ಇಂಧನ ಕ್ಕಾಗಿ ಹಪಹಪಿಸುವ ಕೃತಕ ಅಭಾವ ಸೃಷ್ಟಿಯಾಗಬಾರದು. ದ್ವಿಚಕ್ರ ವಾಹನಗಳ ಓಡಾಟ ಹೆಚ್ಚಬಾರದು. ಬದಲಾಗಿ ಬೈಸಿಕಲ್ ಬಳಕೆ ಹೆಚ್ಚಾಗಬೇಕು. ಅದರಿಂದ ಪರಿಸರ ಮಾಲಿನ್ಯವೂ ಸಾಧಿಸೀತು. ರಾಜಕೀಯ ಪಕ್ಷಗಳು ಇನ್ನಾದರೂ ಕಲಹ, ಕಚ್ಚಾಟಗಳನ್ನು ಬಿಟ್ಟು ದೇಶದ ಹಿತ ದೃಷ್ಟಿಯಿಂದ ಲೋಕಸಭೆ, ರಾಜ್ಯಸಭೆ, ವಿಧಾನಸಭೆ, ವಿಧಾನ ಪರಿಷತ್‌ಗಳಲ್ಲಿ ಕಾರ್ಯನಿರತವಾಗಬೇಕು. ಕಾಲ ಕಾಲಕ್ಕೆ ನಿಗದಿತವೇಳೆಗೆ ರೂಪಿಸಿದ ಯೋಜನೆಗಳು ಪೂರೈಸಬೇಕು, ವಿನಾಕಾರಣ ವಿಳಂಬ ಸಲ್ಲದು. ಮುಂದಿನ ಜನಾಂಗ ಇಂದಿನವರನ್ನು ಶಪಿಸುವಂತಾಗಬಾರದು. ಮಂತ್ರಿಗಳ, ಶಾಸಕರ, ಅಧಿಕಾರಿಗಳ ಜೀವನ ವಿಧಾನದಲ್ಲಿ ಸುಧಾರಣೆಯಾಗಬೇಕು, ಸರಳ ಜೀವನವಾಗಿ ಮಾರ್ಪಾಡಾಗಬೇಕು. ಸಹಸ್ರಾರುಕೋಟಿ ಸಾಲದ ಹೊರೆ ಹೊತ್ತಿರುವ ಭಾರತೀಯರಿಗೆ ಇಂದು ಭೋಗ-ವೈಭವಗಳ ಬದುಕು ಆದರ್ಶಪೂರ್ಣವಲ್ಲ. ಸ್ವಾವಲಂಬನ ಬರುವವರೆಗೆ ಸಂಯಮದ ಬದುಕು ಬೇಕು. ಕೋಮುಕಲಹ, ಮಂದಿರ-ಮಸೀದಿ, ಅಧಿಕಾರ ಗದ್ದುಗೆಗಳಿಗಾಗಿ ಅಮಾಯಕರ ಬಲಿಯಾಗುವುದನ್ನು ವಿಚಾರವಂತರೆಲ್ಲ ನೈತಿಕ ಧೈರ್ಯ ಸ್ಥೈರ್ಯಗಳಿಂದ ಪ್ರತಿಭಟಿಸಬೇಕು. ಅನೈತಿಕ ಮಾರ್ಗದಿಂದ ಮುಖಂಡರಾಗುವವರನ್ನು ಮೂಲೋತ್ಪಾಟನ ಮಾಡಬೇಕು. ಯುವ ಜನಾಂಗ ಈಗ ದಾರಿತಪ್ಪದಂತೆ-ಈಗಾಗಲೇತಪ್ಪಿಸಾಕಷ್ಟು ಹಾಗಿಯಾಗಿರುವುದೇ ಸಾಕು-ಎಚ್ಚರಿಕೆಯಿಂದ ನೋಡಿಕೊಳ್ಳಬೇಕು. ಇದಕ್ಕೆಲ್ಲ ಸಂಕಲ್ಪಶಕ್ತಿಬೇಕು. ಅಂಥ ಆತ್ಮಬಲ ನಮ್ಮದಾಗಬಹುದೆ?

---

ಮಾನವತ್ವದ ಸಂಪಾದನೆ ಜೀವನದಲ್ಲಿ ಮೊದಲ ಹಂತ. ಆ ಹಂತ ಮುಟ್ಟಿದ ಮೇಲೆ ಅದರಲ್ಲೇ ಅವನು ತೃಪ್ತನಾಗಬಾರದು. ಅವನ ಅಂತಿಮ ಗುರಿ ಮಾನವತ್ವ ಮೀರಿ ದೇವತ್ವ ಸಂಪಾದನೆ ಮಾಡುವುದಾಗಿರಬೇಕು. ಜೀವನೇ ಶಿವನಾಗುವುದು, ಬ್ರಹ್ಮವಾಗುವುದು, ಅಂಗವೇ ಲಿಂಗವಾಗುವುದು.

**- ಶಿವಕುಮಾರ ವಾಣಿ.**

## ಶ್ರೀ ಮದುದ್ದಾನೇಶ್ವರ ಶತಕಂ

(ಮುಂದುವರಿದುದು)

ಕಲ್ಲು ಕುಟಕಮನೆನೆದ ಭಾವಕೆ
ಕಲ್ಲೆ ವಿಗ್ರಹವೆನಿಸಿ ವರಗಳ
ಸಲ್ಲಿಸುತ್ತಿರೆ ಕಲ್ಲಿಗನ್ಯವೆನಿಪ್ಪ ಚೇತನವೂ ।
ಎಲ್ಲ ವರಗಳ ಕೊಡುವನಾಗನೆ
ಎಲ್ಲಿ ಕರೆದರು ಓಗೊಡನೆ ದೃಢ
ಶಾಲಿಯಾಗಿರುವಂತೆ ಉದ್ದಾನೇಶ ದಯವಾಗೋ ॥

ಮಣ್ಣ ನಂಬೀ ತನುವುಕುಂದಿತು
ಹೊನ್ನ ನಂಬೀ ಮನವು ಕುಂದಿತು.
ಹೆಣ್ಣು ತನುಮನ ವಿಹಪರಂಗಳ ನುಂಗಿರೆವು ಮೂರೂ ।
ತನ್ನ ಸೇವೆಗೆ ಇವಕೆ ನಾನ
ಲ್ಲೆನ್ನೆದುಃಖವು ನಂದಿ ಸೌಖ್ಯಕೆ
ಕಣ್ಣು ಬಂದಪುದೆಂದ ಉದ್ದಾನೇಶ ದಯವಾಗೋ ॥

ನರರ ಮನೆಯೊಳು ಸಾಕಲದಿದೆಂ
ದಿರುಳು ಹಗಲೂ ಕಾಡುತಿರುವರು
ಪರಕಿಸಲ್ಕಾನಕಿರದು ಶಾಂತಿಯದೊಂದು ಗೋವ್ಹಾಕೇ ।
ತರಗಸೇಕಿಂದ ಮೃತ ಕರೆವುದು.
ಪರಮ ಶಾಂತಿಯ ತಹುದ ಗೋವನು
ಪೊರೆಯಿರೆಂದಾ ಜೀಯ ಉದ್ದಾನೇಶ ದಯವಾಗೋ ॥

ಲೋಕದೊಳು ಸಂಸಾರದಂಗಡಿ
ಯೇಕೆನಲು ಗುರುಶಿಶುವು ಗೋವ್ಗಳ
ನೇಕರ ತಿಥಿಗಳನ್ನು ಸೇವಿಸಿ ಭಾವಶುದ್ಧಿಯಲೀ ।
ಕಾಕುಮತಿಯಳಿದುಳಿದ ನಿಜಸುವಿ
ವೇಕನಿಧಿ ಸಂಗ್ರಹಿಸಲೆನುತರೆ
ಜೋಕೆಯರುಪಿದ ಜೀಯ ಉದ್ದಾನೇಶ ದಯವಾಗೋ ॥

ನೆರಳನತಿಥಿಗೆ ಕೊಡಲುಮನೆಯಿದು
ಕರುಹೆಯಡಿಗೆಯ ಮಾಡಲತಿಥಿಗೆ
ಧರಣಿ ಧಾನ್ಯಕೆ ಪಶುವು ಪೈನಿಗೆ ತರಳನವಸದಕೇ ।
ಸಿರಿಯ ಪಾತ್ರದಿ ದಾನ ಮಾಡಲು
ಹಣನು ಕೊಟ್ಟಿಹವೆಂದು ತಿಳಿಸಿದ
ಶರಣ ಗಾತ್ರನೆ ಜೀಯ ಉದ್ದಾನೇಶ ದಯವಾಗೋ ॥

# ಜನಪದ ಸಾಹಿತ್ಯದಲ್ಲಿ ಬಸವಣ್ಣನವರು

ಪ್ರೊ. ಸಿದ್ದಣ್ಣ ಲಂಗೋಟಿ (ಚಾಂದಕವಠೆ)
ರಾಮದುರ್ಗ, 591123-ಬೆಳಗಾಂ ಜಿಲ್ಲೆ.

ಕಲ್ಯಾಣವೆಂಬ ಪ್ರಣತೆಯಲ್ಲಿ
ಭಕ್ತಿರಸವೆಂಬ ತೈಲವನೆರೆದು
ಆಚಾರವೆಂಬ ಬತ್ತಿಗೆ ಬಸವಣ್ಣನೆಂಬ
ಜ್ಯೋತಿಯ ಮುಟ್ಟಿಸಲು
ತೊಳಗಿ ಬೆಳಗುತ್ತಿದ್ದಿತಯ್ಯಾ ಶಿವನ ಪ್ರಕಾಶ
ಆ ಬೆಳಗಿನೊಳಗೂಪ್ಪುತಿರ್ದರಯ್ಯಾ
ಅಸಂಖ್ಯಾತ ಭಕ್ತಗಣಂಗಳು.......

ಎಂದು ನಿರಂಜನ ಶರಣ ಅನುಭಾವಿ ಅಲ್ಲಮ ಪ್ರಭುವು ಜಗಜ್ಯೋತಿ ಬಸವೇಶ್ವರರನ್ನು ಸ್ತುತಿಸುವಲ್ಲಿ ಬಸವಣ್ಣನವರ ವ್ಯಕ್ತಿತ್ವ ಅವರ ಸಾಧನೆಯ ಮಹತ್ವ ಅರಿವಿಗೆ ಬರುತ್ತದೆ. ಅದೇ ರೀತಿಯಾಗಿ

ಮಹಾಮಹಿಮ ಸಂಗನ ಬಸವಣ್ಣನು
ಎನಗೆಯೂ ಗುರು ನಿನಗೆಯೂ ಗುರು
ಜಗವೆಲ್ಲಕ್ಕೆಯೂ ಗುರು ಕಾಣಾ ಗುಹೇಶ್ವರ

ಎಂದು ವಚನ ವಾಣಿಯ ಪ್ರಭೆಯನ್ನು ಬೀರುವಲ್ಲಿ ಕನ್ನಡ ನಾಡಿನಲ್ಲಿ ಹನ್ನೆರಡನೆಯ ಶತಮಾನದಲ್ಲಿ ಜನಿಸಿದ ಬಸವಣ್ಣನವರು ತಮ್ಮ ವಿಶ್ವ ಬಂಧುತ್ವ ವಿಶ್ವಮಾನತ್ವಗಳ ಸುಜ್ಞಾನ–ಸತ್ಕ್ರಿಯ–ಸದ್ಭಾವಗಳಿಂದಲೇ ವಿಶ್ವದ ಗುರು ವಿಶ್ವದ ಮಾರ್ಗದರ್ಶಕರಾದುದು ಗಮನಕ್ಕೆ ಬರುತ್ತದೆ.

ಶತಮಾನಗಳಿಂದ ಭರತ ಭೂಮಿಯಲ್ಲಿ (ಜಂಬೂದ್ವೀಪದಲ್ಲಿ) ಸನಾತನವೆಂದೆನಿಸಿ ಕೊಂಡು ಬಂದ ಶೈವ,ವೈದಿಕ, ಧರ್ಮ-ಮತಗಳು. ವರ್ಣಾಶ್ರಮದ ಜಾತೀಯತೆಯ ಹೊಲೆಗೆಸರಲ್ಲಿ ಸಿಲುಕಿ ಮಾನವ-ಮಾನವರಲ್ಲಿ, ಮೇಲು-ಕೀಳು, ಉಚ್ಚ-ನೀಚ, ಭೇದ-ಭಾವವಣಿಸತೊಡಗಿದಾಗ, ಪಂಡಿತರೆನಿಸಿಕೊಂಡ ಪುರೋಹಿತಶಾಹಿ ಜನರು ಅಜ್ಞ-ಮುಗ್ಧ ಜನರನ್ನು ತಮ್ಮ ಸ್ವಾರ್ಥಕ್ಕಾಗಿ ದೇವರು-ಧರ್ಮದ ಹೆಸರಿನಲ್ಲಿ ಸುಲಿದು ಶೋಷಣೆ ಮಾಡತೊಡಗಿದಾಗ ಯಜ್ಞಯಾಗಾದಿಗಳ ಹೆಸರಿನಲ್ಲಿ ಅಮಾಯಕ ಮುಗ್ಧ ಪ್ರಾಣಿಗಳ ಜೀವ ಬಲಿ ತಗೆದುಕೊಳ್ಳ ತೊಡಗಿದಾಗ ಒಟ್ಟಿನಲ್ಲಿ ಭಾರತದ ಧರ್ಮ-

ಸಮಾಜಾಂಗಣದಲ್ಲಿ ಗಾಢಾಂಧಕಾರ ಮುಸುಗಿದಾಗ ಬಸವಣ್ಣನೆಂಬ ಕ್ರಾಂತಿಕಾರಿ ಜನಿಸಿ ಬಂದು, ಮಂಗಲಮಯ ಬೆಳಕು ಚೆಲ್ಲಿ ಜಗತ್ತಿಗೆ ಹೊಸ ಪಥ-ಹೊಸಮತ ತೋರಿದನು.

ಇಂತಪ್ಪ ಬಸವಣ್ಣನವರನ್ನು ನಮ್ಮ ನಾಡಿನ ಜನಪದವು ತುಂಬು ಹೃದಯ-ದಿಂದ ಸ್ವಾಗತಿಸಿತು. ಸ್ವಾಭಿಮಾನದಿಂದ ತಲೆ ಎತ್ತಿ ನಿಂತಿತು. ಗೌರವಾದಾರ-ಗಳಿಂದ ಸ್ತುತಿಸಿತ, ಓದು-ಬರಹ ಬಾರದ ಈ ಜನಪದರು ಶಾಶ್ವತವಾಗಿ ಬಸವಣ್ಣ-ನನ್ನು ತಮ್ಮ ಬಾಳಿನುಸಿರಾಗಿ ಜೀವದ ಜೀವಾಳವಾಗಿ ಆತ್ಮದ ಚೇತನವಾಗಿ ಅವಿನಾಭಾವವಾಗಿ ಅಪ್ಪಿಕೊಂಡರು, ಒಪ್ಪಿಕೊಂಡರು. ತಮ್ಮ ಸತ್ತ್ವಂತಿಹ ಬದುಕಿಗಿ ಜೀವಂತಿಕೆ ತಂದಿತ್ತ ಬಸವಣ್ಣನವರನ್ನು ಹೃದಯಾಂತಃಕರಣದಿಂದ ಹಾಡಿದರು. ತನು-ಮನ-ಭಾವ ತುಂಬಿ ಜಾಲಾಡಿದರು ಜನಪದ ಹೃದಯದಿಂದ ಮೂಡಿ ಹೊರ ಹೊಮ್ಮಿದ ಈ ಹಾಡುಗಬ್ಬಗಳೇ ತ್ರಿಪದಿಗಳಾಗಿ ಲಾವಣಿಯಾಗಿ ಹಂತಿಪದ, ಬೀಸು ಕಲ್ಲಿನ ಪದ, ಗೀ ಗೀ ಪದ ಮುಂತಾದ ಪ್ರಕಾರಗಳಲ್ಲಿ ಅಭಿವ್ಯಕ್ತವಾದವು.

ಜಾನಪದ ತ್ರಿಪದಿ ಸಾಹಿತ್ಯದಲ್ಲಿ ನಿರೂಪಿತವಾಗಿರುವ ಬಸವಣ್ಣನವರು ದರ್ಶನವನ್ನು ನಾವಿಲ್ಲಿ ಕಾಣಬಹುದಾಗಿದೆ.

ಎಲ್ಲ ಬಲ್ಲಿದನಯ್ಯ ಕಲ್ಯಾಣ ಬಸವಯ್ಯ
ಚೆಲ್ಲಿದನು ತಂದು ಶಿವಬೆಳಕ। ನಾಡೊಳಗೆ
ಸೊಲ್ಲೆತ್ತಿ ಜನವು ಹಾಡುವುದು॥

ಎಲ್ಲ ಬಲ್ಲವನಾಗಿದ್ದ ಬಸವಣ್ಣ ಶಿವಬೆಳಕನ್ನು ಪಸರಿಸಿದಾಗ ಜಗತ್ತೆಲ್ಲ ಹೊಸಬೆಳಕಿ-ನಲ್ಲಿ ಬೆಳಗತೊಡಗಿತು. ನಾಡ ಜನತೆಯು ಆನಂದ ಭಕ್ತಿಯಿಂದ ಹಾಡತೊಡಗಿತು.

ಬಸವಣ್ಣ ನಿನ್ಹೆಸರು ದೆಸೆದೆಸೆಗೆ ಶಿವಮಂತ್ರ
ಹೊಸಮತಕೆ ಮಂತ್ರ ನಿತ್ಯದಲಿ। ಒಕ್ಕಲಿಗ
ಹೊಸ ಮಂತ್ರ ಬಸವ ಜಪಿಸುವನು॥

ಬಸವಣ್ಣ ಜನಿಸಿ ಬಂದು ಹೊಸ ಮತವನ್ನು ಪ್ರಾರಂಭಿಸಿದಾಗ ಆತನ ಹೆಸರೇ ಮಂತ್ರವಾಯಿತು. ಇದರಿಂದ ಜನ-ಮಾನಸದಲ್ಲಿ ಹೊಸಗಾಳಿ ಬೆಳಕು ಮಾಡ-ತೊಡಗಿತು.

ಓದಿದನು ಬಸವಯ್ಯ ವೇದದೊಳಗಿನ ಹುಸಿಯ ಭೇದ ಭೇದವನೆ ಬಿಚ್ಚಿಟ್ಟ ।
ಜನಪದಕೆ ತೇಮಂಡ ಜೀವಿ ಬಸವಣ್ಣ ॥

ಬಸವಣ್ಣನವರು ವೇದದೊಳಗಿನ ಹುಸಿಯನ್ನು ವೇದ ಓದುವ ಜನರು ಮಾಡುತ್ತಿದ್ದ ಜಾತಿ ಭೇದವನ್ನು ಸಾಮಾನ್ಯ ಜನರ ಮುಂದೆ ಬಿಡಿಸಿ, ಬಿಡಿಸಿ ಹೇಳಿದರು. ಇದಲ್ಲದೆ ಜಾತಿ ಭೇದವನ್ನು ತೊಡೆದು ಹಾಕಿದರು.

ಹೊಲೆಯ ಮಾದಿಗರೆಂಬ ಬಲೆಯಾತ ಕಿತ್ತೊಗೆದ ಭಲಲೆ ಬಸವಯ್ಯ ಬಸವರಸ।
ಸಿನ್ಹೆಸರು ನೆಲೆಯಾತು ನಿತ್ಯ ಜನಪದಕೆ ॥
ಹೊಲೆಗಂಡಲ್ಲದೆ ಪಿಂಡದ ನೆಲೆಗಾಶ್ರಯವಿಲ್ಲವೆಂದು ಸಾರಿ ಹೇಳಿ ಕೊಲ್ಲುವನೇ

ಮಾದಿಗ ಹೊಲಸು ತಿಂಬುವವನೆ ಹೊಲೆಯ, ಕುಲವೇನೋ ಅವಂದಿರ ಕುಲವೇನೋ? ಸಕಲ ಜೀವಾತ್ಮರಿಗೆ ಲೇಸನೆ ಬಯಸುವ ಕೂಡಲ ಸಂಗನ ಶರಣರೇ ಕುಲಜರೆಂದು ಘಂಟಾ ಘೋಷವಾಗಿ ಸಾರಿ ಹೇಳಿದರು. ಇದರಿಂದಾಗಿ ಹೊಲೆಯ ಮಾದಿಗರೆಂಬ ಬಲೆಯನ್ನು ಕಿತ್ತೊಗೆದು ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರಾದವರೆಲ್ಲ ಒಂದೇ ಎಂದು ತಿಳಿಸಿದರು.

ದೈಹಿಕ ಶ್ರಮ ಮಾಡುತ್ತಿದ್ದ ಸನಾತನ ಧರ್ಮಿಯರಿಂದ ಶೂದ್ರ ಪಂಚಮರೆಂದು ಧಾರ್ಮಿಕ ಸಾಮಾಜಿಕವಾಗಿ ದೂರ ತಳ್ಳಲ್ಪಟ್ಟಿದ್ದ. ತುಳಿಯಲ್ಪಟ್ಟಿದ್ದ ದೀನ ದಲಿತರನ್ನು ಅಪ್ಪನು ನಮ್ಮ ಮಾದಾರ ಚನ್ನಯ್ಯ ಜೊಪ್ಪನು ನಮ್ಮ ಡೋಹರ ಕಕ್ಕಯ್ಯ ಎಂದು ಬಸವಣ್ಣನವರು ಅಪ್ಪಿಕೊಂಡರು. ಹಿಂದುಳಿದ ಶೂದ್ರ ಜನಾಂಗಕ್ಕೆ ಗುಡಿ ಗುಂಡಾರಗಳಲ್ಲಿ ಪ್ರವೇಶವಿಲ್ಲವೆಂಬುದನ್ನು ಮನಗಂಡ ಬಸವಣ್ಣನವರು ವಿನೂತನವಾದ ಇಷ್ಟ ಲಿಂಗವನ್ನು ಸರ್ವರಿಗೂ ದಯಪಾಲಿಸಿದರು.

ಅರಿಯುವಕೆ ಕುರುಹೆಂದು ಕರಲಿಂಗ ನೀ ಕೊಟ್ಟೆ ಶರಣೆಂಬು ನುಡಿಯ ಚೆಲುಮಾಡಿ
ಹೊಸಮತಕೆ ಗುರುಬಸವಲಿಂಗ ನಿಜ ಮಂತ್ರ॥

ನಿಃಶೂನ್ಯ, ನಿರಂಜನ ನಿರಾಕಾರವಾಗಿರುವ ಪರಾತ್ಪರ ಪರವಸ್ತುವನ್ನು ಅರಿಯುವ ಸಲುವಾಗಿ ಇಷ್ಟಲಿಂಗವೆಂಬ ಕುರುಹನ್ನು ಚುಳುಕಾಗಿಸಿ ಬಸವಣ್ಣ ನೀಡಿದಾಗ ಈ ಹೊಸ ಧರ್ಮಕ್ಕೆ ಬಸವಣ್ಣನವರ ಹೆಸರೇ ‘ ಗುರು ಬಸವಲಿಂಗ ” ಎಂದು ಮಂತ್ರವಾಯಿತೆಂದು ಜನಪದರು ತಿಳಿಯಪಡಿಸುತ್ತಾರೆ. ಇದನ್ನು ಇಂದಿಗೂ ಇರುವ ಸಹಸ್ರಗಟ್ಟಲೇ ತಾಡೋಲೆಗಳ ಮೇಲೆ “ ಶ್ರೀ ಗುರು ಬಸವಲಿಂಗಾಯ ನಮಃ” ಎಂದು ಉಲೇಖವಾಗಿರುವುದನ್ನು ಕಾಣಬಹುದು.

ಉತ್ತು ಬಿತ್ತುವ ಮಂತ್ರ ಬಿತ್ತಿ ಬೆಳೆಯುವ ಮಂತ್ರ
ಸತ್ಯ ಶಿವಮಂತ್ರ ನಿನ್ಹೆಸರು । ಬಸವಯ್ಯ
ಮರ್ತ್ಯದೊಳು ಮಂತ್ರ ಜೀವನಕೆ ॥

ಬಸವಣ್ಣನವರು ಜನರಿಗೆ ಕೇವಲ ಧರ್ಮ ದೇವರು ಉಪಾಸನೆ ಅಷ್ಟನ್ನೇ ಕಲಿಸಲಿಲ್ಲ. ಅವರಿಗೆ ಕಾಯಕ ದಾಸೋಹಗಳನ್ನು ಕಲಿಸಿದರು. ಕಾಯಕ ಗೌರವ ಕಾಯಕ ದೈವತ್ವ ತಿಳಿಯ ಪಡಿಸಿದರು. ಅದನ್ನು ನಮ್ಮ ಜನಪದರು ಕೊಂಡಾಡಿದ್ದಾರೆ.

ಕಾಯಕವ ಕಲಿಸುದುಕ ನಾಯಕನು ಬಸವಣ್ಣಜೀಯ ಹೊಸ ಮತಕ್ಕೆ ಶಿವಭಕ್ತಿ।
ಸಾರುದಕೆ ರಾಯಜೀವನದ ಹೊಸ ನುಡಿಗೆ ॥

ಇದರಿಂದಾಗಿ :

ಉಂಡು ತೇಗಿತು ಲೋಕ ಕೊಂಡಾಡಿ ಕಾಯಕವ ಕಂಡ ಕಂಡಲ್ಲಿ ದಾಸೋಹ ।
ಕಾಯಕದ ಕಂಡ ಜೀವನದ ಶಿವಮಾತು ॥

ಬಸವಣ್ಣನವರು ಜನಪದ ಜನರಿಗೆ ಭಕ್ತಿ ಮುಕ್ತಿ ಸಾಧನೆಗೆ ಓಂಕಾರ ಪ್ರಣವ ಸ್ವರೂಪರೇ ಆಗಿದ್ದಾರೆ.

ಬಸವ ಭಕ್ತಿಯ ಬೀಜ ಬಸವ ಮುಕ್ತಿಯ ತೇಜ ಬಸವ ಕಾಯಕದ ಗುರುಬೀಜ ।
ಶಿವಮತಕೆ ಬಸವ ಓಂಕಾರ ಶಿವನಾಮ ॥

ಬಸವಣ್ಣನಿಂದಾಗಿ ರಾಜ್ಯದಲ್ಲಿ ಸಿರಿ ಸಂಪತ್ತು ಮಳೆ ಬೆಳೆ ಸ್ವರ್ಗದ ಮೆಟ್ಟಿಲು ಅಂದರೆ ಸಂತೃಪ್ತಿ ನೆಮ್ಮದಿಯ ಬದುಕಿಗೆ ಸೋಪಾನ ಬಸವಣ್ಣ ಎಂಬುದನ್ನು ಹೃದಯಂಗಮ ವಾಗಿ ಹಾಡಿದ್ದಾರೆ.

ಬಸವ ರಾಜ್ಯದ ಸಿರಿಯು ಬಸವ ಬಡವರ ನಿಧಿಯು
ಬಸವ ಮಳೆ ಬೆಳೆಯು ನಾಡೊಳಗೆ। ನಿಜದೀಪ
ಬಸವನೇ ಸಗ್ಗ ಸೋಪಾನ ॥

ಇಂತಪ್ಪ ಬಸವಣ್ಣನವರನ್ನು ಹಳ್ಳಿಯ ಜನ ಗುರುವೆಂದು, ಅಪ್ಪನೆಂದು, ದೇವ-ರೆಂದು, ಬಸವಾ ಬಸವಾ ಎಂದು ಸದಾಕಾಲ ಸ್ಮರಿಸುತ್ತಾರೆ, ಜಪಗೈಯುತ್ತಾರೆ. ಆತನ ಕರುಣೆಗಾಗಿ ಹಂಬಲಿಸುತ್ತಾರೆ.

ಶರಣು ಶರಣೆಂಬುವೆವು ಹರಣ ಹಾರುವತನಕ
ಕರುಣಿಸಿರಿ ಶರಣ ಬಸವಯ್ಯ। ನಮಗಿನ್ನು
ಹರಸಿರಿ ಶರಣ ಬಾಳೆಂದು॥

ಅದ ಮುಕ್ತಿಗೆ ಶರಣು ಗೋಧಿಕಲ್ಲಿಗೆ ಶರಣು
ಓಂ ನಾಮದಯ್ಯನಿಗೆ ಶಿವಶರಣು। ಬಸವಣ್ಣ
ನಿಮ್ಮ ಪಾದಕೆ ಶಿವಶರಣು॥

ಬಾಪುರೆ ಬಸವಣ್ಣ ಬಾಪು ಶಿವಮತಮಣಿಯೆ
ಬಾಪು ನಿನ್ಹೆಸರು ಅಮರಾತು। ಜಗದೊಳಗೆ
ಬಾಪು ನಿನಗಾರು ಸರಿಯುಂಟು.

---

## ವೀರಶೈವ ಡೈರೆಕ್ಟರಿ

ವಿಶ್ವವ್ಯಾಪಿ ವಿಶ್ವಧರ್ಮ; ವೀರಶೈವ ಧರ್ಮದಲ್ಲಿಯೇ ಪ್ರಪ್ರಥಮವಾಗಿ **ವೀರಶೈವ** ಡೈರೆಕ್ಟರಿಯು ಪ್ರಕಟವಾಗಲಿದ್ದು ಅದರಲ್ಲಿ ವೀರಶೈವರ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ಔದ್ಯೋಗಿಕ ಸಂಘ, ಸಂಸ್ಥೆಗಳು, ವೀರಶೈವ ಮಠ, ಮಂದಿರ, ಪುಣ್ಯಕ್ಷೇತ್ರಗಳ ಹಾಗೂ ವೀರಶೈವ ಉದ್ಯಮಿ, ವೈದ್ಯರು, ನ್ಯಾಯವಾದಿಗಳು, ಸಾಹಿತಿ, ಪತ್ರಕರ್ತರು, ಕಲಾವಿದರು, ಇತರೇ ಕ್ಷೇತ್ರಗಳ ಗಣ್ಯರು ಮತ್ತು ವೀರಶೈವ ಆಚಾರ, ವಿಚಾರ, ತತ್ತ್ವಗಳ ಬಗ್ಗೆ ಛಾಯಾ ಚಿತ್ರ ಸಹಿತ ವಿವರಗಳು ಪ್ರಕಟವಾಗಲಿವೆ. ಈ ಬಗ್ಗೆ ವಿಷಯ ಸಂಗ್ರಹ ಕಾರ್ಯ ಆರಂಭವಾಗಿದೆ. ವೀರಶೈವರಲ್ಲಿಯೇ ಪ್ರಪ್ರಥಮವಾಗಿರುವ ಈ ವೀರಶೈವ ಡೈರೆಕ್ಟರಿ ಸಮಸ್ತ ವೀರಶೈವ ಸಮಾಜದ ಅರಿವು ನೀಡುವದು. ಇದರ ಪ್ರಕಟಣೆಯಲ್ಲಿ ಪ್ರತಿ ವೀರಶೈವ ಮಠಾಧೀಶರು, ಸಂಘ ಸಂಸ್ಥೆಗಳು, ಗಣ್ಯರು ಸರ್ವ ರೀತಿಯ ಸಹಾಯ ಸಹಕಾರ ನೀಡಬೇಕಾಗಿ ವಿನಮ್ರ ಪ್ರಾರ್ಥನೆ. ಈ ಕೆಳಗಿನ ವಿಳಾಸಕ್ಕೆ ವ್ಯವಹರಿಸಿ.

ಶ್ರೀ **ಷಡಕ್ಷರಿ ಶೆಟ್ಟರ,** ಎಂ.ಎ, ಸಂಪಾದಕರು
ವೀರಶೈವ ಡೈರೆಕ್ಟರಿ, ನಂ.3893, ಹೊಸಹುಬ್ಬಳ್ಳಿ ಓಣಿ, ಸಿ.ಬಿ.ಟಿ. ಹುಬ್ಬಳ್ಳಿ-580 020.

# ವಿದ್ಯಾರ್ಥಿಜೀವನದ ಬೆಳಕು ಸರಣಿ

ಬಿ. ಎಸ್. ಕೃಷ್ಣಮೂರ್ತಿ, ನಂ. 5, ವಿಲಾಸ ರಸ್ತೆ, ಮೈಸೂರು 570,024.

**ವಿದ್ಯಾರ್ಥಿಜೀವನದಲ್ಲಿ ಸಾಧನೆ :** ಬರಿಯ ಓದು ಮಾತ್ರವೇ ಮುಖ್ಯವಲ್ಲ. ದೇಹದ ಆರೋಗ್ಯ, ಅಂಗ ಸಾಧನೆ, ದೇಹದ ಶಕ್ತಿ ಹೆಚ್ಚಿಸುವ ಮಿಶ್ರಾಹಾರಗಳು ಬೇಕು. ಮೇಲಾಗಿ ಕಾಮವಿಕಾರಗಳಿಲ್ಲದ "ಬ್ರಹ್ಮಚರ್ಯೆ"ಯು ಅತ್ಯಾವಶ್ಯಕ. ಕಾಮ ವಿಚಾರಗಳ ಪುಸ್ತಕಗಳನ್ನೋದಬಾರದು. ಚಿಂತಿಸಲೂ ಬಾರದು, ಶುದ್ಧ ಚಾರಿತ್ರ್ಯವುಳ್ಳವರಾಗಿ ನಿಮ್ಮ ಮನಸ್ಸನ್ನು ಹತೋಟಿಯಲ್ಲಿಟ್ಟುಕೊಳ್ಳಬೇಕು.

ವಿದ್ಯಾರ್ಥಿ ಎಂಬುದರ ಅರ್ಥವು ವಿದ್ಯೆ ಅರ್ಥಿಎಂಬೆರಡು ಪದಗಳಸಮ್ಮಿಳನ. ಹಾಗೆಂದರೆ ಪರಿಪಕ್ವವಾದ ವಿದ್ಯೆಯನ್ನು ಕಲಿಯಲು ಆಶೆ ಮತ್ತು ಆತುರವು ಕೂಡಿರುವವನು ಎಂಬರ್ಥ. ಜ್ಞಾನಶೇಖರಣೆಯು ಪ್ರತಿ ಮಾನವನ ಹಕ್ಕು. ಇದನ್ನು ಶುದ್ಧಾಂತಃ ಕರಣಗಳಿಂದ ಪಡೆಯಬೇಕು. ಆಗ ಇದು ವರವಾಗಿ ಒಲಿದು ಬರುತ್ತದೆ.

ವಿದ್ಯಾಭ್ಯಾಸವು ವ್ಯವಸಾಯ ಕ್ರಮದಂತೆ ! ಕರಡು ಭೂಮಿಯನ್ನುನೇಗಿಲಿನಿಂದ ಉತ್ತು, ಮಣ್ಣಿನಲ್ಲಿರುವ ಅನವಶ್ಯಕಗಳಾದ ಕಲ್ಲು ಹೆಂಟೆ, ಮೊದಲಾದ ನಿಷ್ಪ್ರಯೋಜನಕರವಸ್ತುಗಳನ್ನು ಆಯ್ದು ಬಿಸಾಡಬೇಕು. ನಂತರ ಗೊಬ್ಬರ, ಗೋಡುಗಳನ್ನು ಉತ್ತಿರುವ ಮಣ್ಣಿನಲ್ಲಿಬೆರಸಿ, ಬೀಜ ಬಿತ್ತಿ, ನೀರೆರೆದು, ಗಿಡ ಬೆಳೆದಾಗ ಕಳೆಕಿತ್ತು ಪೋಷಿಸಿದರೆ ಉತ್ತಮ ಬೆಳೆ ಬರುವುದಿಲ್ಲವೇ ? ಇದರಂತೆ ವಿದ್ಯಾರ್ಥಿಗಳು ಉತ್ತಮ ಗ್ರಂಥಗಳನ್ನು ಆಯ್ದು, ತಾವು ಪ್ರವರ್ಧಮಾನಕ್ಕೆ ಬರಲು ಮತ್ತು ಜೀವನದ ಉತ್ತಮ ಬದುಕು, ಆದಾಯ ಬರುವ ಶ್ರೇಣಿಯ ಪುಸ್ತಕಗಳನ್ನೋದಬೇಕು. ಇದಕ್ಕೆ ಮುಂದಾಲೋಚನೆ. ಕಾರ್ಯಕ್ರಮರೂಪಿಸಿಕೊಂಡು ವಿದ್ಯಾ ವ್ಯವಸಾಯ ಮಾಡಿದರೆ ಅಧಿಕ ಫಲ ಪ್ರಾಪ್ತಿಯಾಗುವುದರಲ್ಲಿ ಸಂಶಯವಿಲ್ಲ.

ಈ ಬಗೆಯ ಅಭ್ಯಾಸವು ಉತ್ತಮ ನಿಯಮಗಳ ಸಾಧನೆಗಳಿಂದ ಮಾತ್ರ ಸಾಧ್ಯ ! ವಿದ್ಯೆಯು ಆತ್ಮೋನ್ನತಿಗೆ ಕಾರಣವಾಗಿರಬೇಕಲ್ಲದೆ ಸಾಂಸ್ಕೃತಿಕ ಹಿನ್ನೆಲೆಯೂ ಕಾರಣವಾಗಿದೆ. ಇದು ಭಾರತೀಯ ಸಂಪ್ರದಾಯ, ಮತ್ತು ಪರಂಪರೆಯನ್ನೊಳಗೊಂಡಿದೆ. ವಿದ್ಯೆ ಅರ್ಥವನ್ನೊದಗಿಸಿ, ಸುಖಜೀವನಕ್ಕೆ ಅಡಿಗಲ್ಲಾಗಿರಬೇಕೇ ವಿನಾ ಅಲಂಕಾರಿಕ ವಿದ್ಯೆಯಾಗಬಾರದು. ವಿದ್ಯೆಯು ಬುದ್ಧಿ, ಮನಸ್ಸು ಮತ್ತು ಶರೀರ ಇವುಗಳ ತ್ರಿವೇಣೀ ಸಂಗಮವಾಗಿದೆ. ಹೀಗಾದರೆ ಜೀವನದಲ್ಲಿ ಧ್ಯೇಯ ಸಾಧನೆಯಾಗಿ ಕಲಿತ ವಿದ್ಯೆಗೆ ಬೆಲೆ ಬರುವುದು.

# ವಾಙ್ಮಯ ತಪಸ್ಸು

## ಮಾತಿರಲಿ, ಮಿತವಿರಲಿ, ಹಿತವಿರಲಿ, ಜ್ಯೋತಿ ಬೆಳಗುತಿರಲಿ

**ಎಂ. ಮಾಧವ ಪೈ,** "ಶ್ರೀನಿವಾಸ", ಡಿ.ವಿ.ಎಸ್. ಪ್ರೌಢಶಾಲೆ ಸಮೀಪ
೧ನೇ ಹಂತ, ವಿನೋಬನಗರ, ಶಿವಮೊಗ್ಗ-577201.

"ಮಾತು ಬಲ್ಲಾತಂಗೆ ಮಾತೊಂದು ಮಾಣಿಕವು! ಮಾತು ತಾನರಿಯದ ಧಮುಗೆ ಮಾಣಿಕವು ತೂತುಬಿದ್ದಂತೆ ಸರ್ವಜ್ಞ" ಆರೆರೆ ಇದೇನು! ಮಾತು ಬಲ್ಲವನಿಗೆ ಮಾತು ಒಂದು ಮಾಣಿಕ್ಯವು ಎಂದು ಹೇಳಿ, ಮಾತನ್ನು ಅರಿಯದ ನೀಚನಿಗೆ ಆ ಮಾಣಿಕ್ಯವು ತೂತು ಬಿದ್ದಂತೆ ಎಂದು ಹೇಳುವುದರಲ್ಲಿ ಸರ್ವಜ್ಞನು ಮಾತು ಬಲ್ಲವನು ಮತ್ತು ಮಾತು ಅರಿಯದವನು ಎಂದು ಎರಡು ವಿಭಾಗವನ್ನು ಹೇಳಿದ್ದಾನಲ್ಲ; ಏನಿದು! ಎಂದು ಈ ಮಾತಿನಿಂದ ವಿಸ್ಮಯಭರಿತ ಪ್ರಶ್ನೆಯೊಂದು ಮನಸ್ಸಿನಲ್ಲಿ ಮೂಡುವುದಲ್ಲವೆ? ಜಗತ್ತೇ ಮಾತಿನ ಮೇಲೆ ನಿಂತಿದೆ. ಹಾಗಿರುವಾಗ ಮಾತು ಬಾರದವರು ಯಾರು? ನಿಜ; ಪ್ರತಿಯೊಬ್ಬನೂ ಮಾತನಾಡುತ್ತಾನೆ. ಬದುಕಿನಲ್ಲಿ ಮಾತಿನಷ್ಟು ಸುಲಭ ಯಾವುದೂ ಇಲ್ಲ. ಬೆಳಗ್ಗೆ ಎದ್ದ ಹೊತ್ತಿನಿಂದ ರಾತ್ರಿ ಮಲಗುವ ವರೆಗೆ (ಕೆಲವರು ನಿದ್ರೆಯಲ್ಲಿಯೂ) ಮಾತನಾಡುತ್ತಿರುತ್ತಾರೆ. ಆದರೆ ಆರೀತಿ ಇಡೀ ದಿನ ಮಾತನಾಡಿದುದೆಲ್ಲ ಮಾತೆ? ಎಂಬುದು ಮಾತ್ರ ವಿಚಾರಾರ್ಹ ಕೇವಲ ಬಾಯಿಯಿಂದ, ನಾಲಗೆಯಿಂದ ಕೆಲವು ಶಬ್ದಗಳನ್ನು ಉಚ್ಚರಿಸಿದ್ದಾನೆಂಬಷ್ಟರಲ್ಲೇ ಅದು ಮಾತು ಎನಿಸದು. ಅದು ಕೇವಲ ಒಂದು ಶಬ್ದಗಳ ಜಾಲ ಮಾತ್ರವಾಗಿರುತ್ತದೆ. ವಿವಿಧ ಪ್ರಾಣಿಗಳು ಹೊರ ಹೊಮ್ಮಿಸುವ ಧ್ವನಿಗಳಂತೆ ಶಬ್ದೋಚ್ಚಾರವೂ ಕೇವಲ ಒಂದು ಧ್ವನಿಯನ್ನು ಹೊರಹೊಮ್ಮಿಸಿದ ರೀತಿಯೇ ಹೊರತು ಅದು ಮಾತು ಆಗಿರುರುವುದಿಲ್ಲ ಇಂತಹ ಮಾತುಗಳು ಬಹುಪಾಲು ವ್ಯರ್ಥವೇ ಸರಿ. ಆದರಿಂದ ಶಕ್ತಿಯನ್ನು ಕಳೆದುಕೊಳ್ಳುವುದಾಗುತ್ತದಷ್ಟೇ ಹೊರತು ಇನ್ನಾವ ಸಾಧನೆಯೂ ಆಗುವುದಿಲ್ಲ. ಆದ್ದರಿಂದಲೇ ಕವಿರಾಜ ಮಾರ್ಗಕಾರ. "ಮಾತರಿವರ್ ಕೆಲಬರ್ ಜಗತೀತಳಗತ ಮನುಜರೊಳಗೆ" ಈ ಪೃಥ್ವಿಯ ಮಾನವರಲ್ಲಿ ಮಾತು ಬಲ್ಲವರು ಕೆಲವೇ ಮಂದಿ ಎಂದು ಸಾರಿದ್ದು.

ಹಾಗಿದ್ದರೆ ಮಾತು ಬಲ್ಲವರು ಯಾರು? ಇದನ್ನು ಕವಿರಾಜಮಾರ್ಗಕಾರ ತಿಳಿಯಪಡಿಸಿದ್ದಾನೆ. "ಕುರಿತಂತೆ ಪೆರರ ಬಗೆಯಂ। ತೆರೆದಿರೆ ಪೆರರ್ಗರಿಪಲಾರ್ಪನಂ ಮಾತರಿವಂ. ಉದ್ದೇಶ್ಯಕ್ಕನುಗುಣವಾಗಿ ಪರರ (ಕೇಳುಗರ) ಮನಸ್ಸನ್ನು ತೆರೆದಿರುವಂತೆ ಮಾಡಿ, ಅವರಿಗೆ ಮನವಟ್ಟಾಗುವಂತೆ ಮಾಡಲು ಸಮರ್ಥನಾದವನು ಮಾತ್ರ ಮಾತು ಬಲ್ಲವನು ಎಂದು. ಅದರಲ್ಲಿಯೂ ಕಿರಿದರಲ್ಲಿ ಹಿರಿದರ್ಥವನ್ನು ತಿಳಿಸಬಲ್ಲವನು ಇನ್ನು ನಿಪುಣನು ಎಂದು ಸಾರಿ ಉದ್ದುದ್ದ ಮಾತುಗಳನ್ನಾಡುವುದರಿಂದ ಪ್ರಯೋಜನವಿಲ್ಲ ವೆಂಬುದನ್ನು ತಿಳಿಯಪಡಿಸಿದ್ದಾನೆ.

ಮಾತು ಜಗದ ಬೆಳಕು. ಅದು ಪುನೀತವಾದುದು. ಅದರ ಬಳಕೆ ಸರಿಯಾದ ರೀತಿಯಲ್ಲಾಗಬೇಕು. ಮಾತುಗಳಲ್ಲಿ ರಸವಿರುತ್ತದೆ. ಉತ್ತಮ ಮಾತುಗಳಲ್ಲಿ ಅಮೃತವನ್ನು ಪರಾಜಯಗೊಳಿಸುವಷ್ಟು ಮಾಧುರ್ಯದಿಂದ ತುಂಬಿರುತ್ತದೆ. ಮಾತುಗಳಿಂದ ಸುರಿಸುವ ಆನಂದದ ಮುಂದೆ ಸುಗಂಧಿತ ಕುಸುಮಗಳ ಸೌರಭವೂ ತಲೆದೂಗಬೇಕಾಗುತ್ತದೆ. ಮಾತಿನಿಂದ ಹೊರಹೊಮ್ಮುವ ಧ್ವನಿ ಆಡುವವನಿಗೆ ರಸನೇಂದ್ರಿಯದ ಆರಿಸುವವನಿಗೆ ಶ್ರವಣೇಂದ್ರಿಯದ ವಿಷಯವಾಗಿದ್ದರೂ ಸರ್ವೇಂದ್ರಿಯಗಳೂ ಆಧ್ವನಿ ತಮ್ಮವೇ ಎಂದು ಭಾವಿಸುತ್ತವೆ. ಈ ಮಾತಿನಲ್ಲಿರುವ ಸುಗಂಧವನ್ನು ಮೂಗು ತನ್ನದೆನ್ನುತ್ತಿದ್ದರೆ, ಅದರಲ್ಲಿರುವ ರಸ ತನ್ನದೆಂದು ನಾಲಗೆಯು ಭಾವಿಸುತ್ತದೆ. ಮಾತುಗಳ ರಸಾಸ್ವಾದನೆಯನ್ನು ಮಾಡುವ ಕೇಳುಗರ ಮನಸ್ಸು ತನ್ನ ತಾನೇ ತನುವಿನಿಂದ ಹೊರಬಂದು ಬಿಗಿದಪ್ಪಿ ಆಲಂಗಿಸಿಕೊಳ್ಳಲು ತವಕ ಪಡುತ್ತದೆ. ಸಕಲ ಜ್ಞಾನೇಂದ್ರಿಯಗಳೂ ಈ ಮಾತುಗಳ ಮೇಲೆ ತಮ್ಮ ತಮ್ಮ ಹಕ್ಕುಗಳನ್ನು ಸ್ಥಾಪಿಸಲು ಹೆಣಗುತ್ತವೆ. ಆದ್ದರಿಂದ ಮಾತುಗಳು ಸರ್ವರನ್ನು ಸಮಾನವಾಗಿಯೇ ತೃಪ್ತಿಪಡಿಸುವುವು. ಸೂರ್ಯನೊಬ್ಬನೇ ಸಮಸ್ತಜಗತ್ತಿಗೂ ಸಮಾನವಾಗಿ ಪ್ರಕಾಶವನ್ನಿತ್ತು. ಬೆಳಕನ್ನುಂಟುಮಾಡುವಂತೆ ಮಾತುಗಳು ಮನಸಹಿತ ಸರ್ವೇಂದ್ರಿಯುಗಳಿಗೂ ಜ್ಞಾನ ಪ್ರಕಾಶವನ್ನು ಉಂಟುಮಾಡುತ್ತವೆ. ಈ ಮಾತುಗಳ ಅಂತರಾರ್ಥವನ್ನು, ಅವುಗಳ ಭಾವವನ್ನು ಕುರಿತು ವಿಚಾರ ಮಾಡುವವರಿಗೆ ಇವು ಕೇವಲ ಮಾತುಗಳಲ್ಲ, ಮಾತುಗಳ ರೂಪದಲ್ಲಿ ಚಿಂತಾಮಣಿಯೇ ಲಭಿಸಿರುವುದೆಂದು ತೋರುತ್ತದೆ. ಮಾತು ಬರಿ ಮಾತಲ್ಲ, ಅದು ಅಮೃತವರ್ಷಿಣಿವಾಣಿ" ಎಂದು ವಿದ್ವಾಂಸರು ಹೇಳಿರುವುದು ಅರ್ಥವತ್ತಾಗಿದೆ. ಮಾತು ಅಮೃತವನ್ನು ಸ್ರವಿಸುವಂತಿದ್ದರೆ ಮಾತ್ರ ಅದು ಮಾತು ಆಗಿರುತ್ತದೆ, ಹಾಗಾಗದಿದ್ದಲ್ಲಿ ಅದು ಜೊಳ್ಳು ಹರಟೆಯಾಗುತ್ತದೆ. ಅದಕ್ಕೆ ಬಸವಣ್ಣನವರು ಹೇಳಿದ್ದು "ಮಾತು ಬಲ್ಲಾತ ಜಾಣನಲ್ಲ" ಎಂದು ಚಪಲ ಬುದ್ಧಿವಂತಿಕೆಯಿಂದ ಮಾತನಾಡುವವನು ಬರಿಯ ವಾಚಾಳಿಯಾಗಿರುತ್ತಾನೆಯೇ ಹೊರತು ಜಾಣನಲ್ಲ: ಹಾಗೆಯೇ "ಬಣ್ಣವಿಟ್ಟು ನುಡಿದಲ್ಲಿ ಫಲವೇನು? ಚಿನ್ನಗೊಯ್ಕನಾಡುವಂತೆ" ಎಂದು ಬರಿಯ ವಶಿಲೀ ಬಾಜಿಯ ವಾಗಾಡಂಬರವೂ ವ್ಯರ್ಥವಾದುದೆಂದೂ ಅದರಲ್ಲಿ ವಂಚನೆಯು ಅಡಕವಾಗಿರುವುದೆಂದೂ ಸಾರಿದ್ದಾರೆ. ಶ್ರೋತೃಗಳ ಹೃದಯವನ್ನು ಮುಟ್ಟುವಂತೆ ಆಡುವ ಮಾತುಗಳೇ ಮಾತುಗಳು, ಅವು ರಸವನ್ನು ಸುರಿಸುತ್ತವೆಂದು ಸರ್ವಜ್ಞನೂ "ಮಾತು ಬಲ್ಲಾತಂಗೆ ಯೇತವದು ಸುರಿದಂತೆ। ಮಾತಾಡಲರಿಯದಾತಂಗೆ ಬರಿಯೇತ। ನೇತಾಡಿದಂತೆ" ಎಂದು ತಿಳಿಯ ಪಡಿಸಿದ್ದನ್ನು ಅರ್ಥೈಸಿಕೊಂಡಾಗಲೇ ಮಾತಿನ ವೈಶಿಷ್ಟ್ಯ ಮನವರಿಕೆಯಾಗುತ್ತದೆ.

ಪರರ (ಕೇಳುಗರ) ಮನಸ್ಸನ್ನು ತೆರೆದಿರುವಂತೆ ಮಾಡಿ, ಅವರಿಗೆ ಮನದಟ್ಟಾಗುವಂತೆ ಮಾಡಬೇಕಾದುದು ಮಾತಿನ ಹೊಣೆಗಾರಿಕೆಯ ನಿರ್ವಹಹ ಸುಲಭಸಾಧ್ಯವಲ್ಲ, ಯಾವ ಮಾತು ಯಾವಾಗ, ಯಾರಿಗೆ, ಯಾವರೀತಿಯ ಭಾವನೆಯನ್ನ ಪ್ರಚೋದಿ

ಸುತ್ತದೆಯೆನ್ನುವುದರ ಮೇಲೆಯೇ ಮಾತಿನ ಹೊಣೆಗಾರಿಕೆ ಅಡಕವಾಗಿದೆ. ಆದ್ದರಿಂದ ಮಾತನಾಡಬೇಕಾದರೆ ಮೊದಲೇ ಚೆನ್ನಾಗಿ ವಿಚಾರ ಮಾಡಬೇಕು. ಏನೋ ಬಾಯಿಗೆ ಬಂತು ಎಂದು ಮಾತನಾಡಿದರೆ ಆಗಬಾರದೇನೊ ಆಗಿ ಹೋದೀತು ಎಂದು "ಮಾತು ಮನೆಕೆಡಿಸಿತು ತೂತು ಒಲೆ ಕೆಡಿಸಿತು;" "ಮಾತು ಆಡಿದರೆ ಹೋಯ್ತು ಮುತ್ತು ಒಡೆದರೆ ಹೋಯ್ತು" ಎಂಬೀ ಜನಾನುಭವದ ಗಾದೆಗಳೇ ಸಾರುತ್ತವೆ ಮಾತು, ಮಾತು ಬಾಯ ಮಾತುಗಳು ಬೆಳೆಯುತ್ತಾ ಹೋಗುತ್ತವೆ "ಮಾತು ಮಾತಿಗೆ ಓತು ಮಾತು ಕೋಟಿಗಳುಂಟು." ಆದರೆ ಅವುಗಳಿಂದ ಸ್ವಾರಸ್ಯವಿಲ್ಲ. ಅಂತಹ ಮಾತುಗಳಿಂದ ಮನಸ್ಸಿಗೆ ಬೇಸರವಾಗಬಹುದು, ಮನಕೆ ಮುನಿಸುಂಟಾಗಬಹುದು. "ಮಾತಿನಿಂದ ನಗೆನುತಿಯೂ, ಮಾತಿನಿಂದ ಹಗೆ ಹತಿಯೂ ಉಂಟಾಗಬಹುದು. ಕತ್ತಿಯಿಂದುಂಟಾದ ಗಾಯ ಕೊನೆಗೊಮ್ಮೆ ವಾಸಿಯಾಗುತ್ತದೆ, ಆದರೆ ಜಿಹ್ವೆಯಗಾಯ ಮಾತ್ರ ನಿತ್ಯಕ್ಕೂ ಇರುತ್ತದೆಯೆಂಬುದನ್ನು ತಿಳಿದು ಚಿಂತಿಸಿ ಅರಿತು ಮಾತನಾಡುವುದನ್ನು ಅಭ್ಯಾಸ ಮಾಡಬೇಕಾದುದು ಅಗತ್ಯ. ''ಮೆಲ್ಲನೆಯ ಹರಿ ನೀರು ಕಲ್ಲಭೇದಿಸಲಕ್ಕೂ ಸೊಲ್ಲರಿತು ನುಡಿವ ಒಳ್ನುಡಿಯೂ ಬಲ್ಲಂದ। ನಲ್ಲವೆನಿಸುವುದು ಸರ್ವಜ್ಞ'' ಎಂದು ಸರ್ವಜ್ಞನು ತಿಳಿಸಿದಂತೆ ಸೊಲ್ಲನ್ನು ಅರಿತು ನುಡಿಯಬೇಕು. ಮಾತನ್ನು ವಿಚಾರಮಾಡಿ ನುಡಿಯುವ ಜಾಣ್ಮೆ ಎಲ್ಲಕ್ಕೂ ಮಿಗಿಲಾದುದೆಂದೂ ಆತ ತಿಳಿಯಪಡಿಸಿದ್ದಾನೆ. ಕಲ್ಲಮೇಲಿನ ನೀರು ಮೆಲ್ಲನೆಯೆ ಸರಿದಂತೆ। ಸೊಲ್ಲನಾರೈದು ನುಡಿಯುವಾ ಜಾಣ್ಮೆಯು। ಎಲ್ಲಕ್ಕೂ ಮಿಗಿಲು ಸರ್ವಜ್ಞ। ಹಾಗೆಯೇ ಯಾವ ಸಂದರ್ಭದಲ್ಲಿ ಯಾವ ಮಾತನ್ನಾಡಬೇಕು, ಎಂಬುದರ ಗಮನವೂ ಇರಬೇಕಾದುದೂ ಅವಶ್ಯ. ಹೊತ್ತಿಗೊದಗದ ಮಾತು ಸತ್ತವನು ಎದ್ದಂತೆ। ಹೊತ್ತಾಗಿ ನುಡಿದ ಮಾತು ಕೈಜಾರಿನ। ಮುತ್ತಿನಂತಿಹುದು ಸರ್ವಜ್ಞ! ಸಮಯ ಸಂದರ್ಭಗಳಿಗನುಗುಣವಾದ ಮಾತನ್ನು ಆಡದೆ ಇದ್ದರೆ ಅಥವಾ ಆಡಲು ಮರೆತರೆ ಕಬ್ಬಿಣವೂ ಕಾದಾರಿದರೆ ಹೇಗೋ ಹಾಗೆ ನಿಷ್ಪ್ರಯೋಜಕ ಕುಪ್ತ ಕಾಲದಲ್ಲಿ ಆಡಬೇಕಾದ ಮಾತನ್ನು ಆಡದೆ ಇದ್ದರೆ ಹಾಗೂ ಆ ಸಂದರ್ಭದಲ್ಲಿ ಆಡಬೇಕಾದ ಮಾತಾವುದು ಎಂಬುದನ್ನು ಅರಿಯದೆ ಮಾತಾಡಿದರೆ ಎಲ್ಲವೂ ಕೆಟ್ಟು ಹೋಗುವುದು. ಇರಿಯುವುದಕ್ಕಿಂತ ಮಾತರಿವುದು ಮುಖ್ಯ. ಸಮಯ ಸಂದರ್ಭಕ್ಕೆಷ್ಟು ಉಚಿತವೋ ಅಷ್ಟೇ ಮಾತುಗಳನ್ನು ಬಳಸಬೇಕು. ಒಂದಕ್ಕೊಂಬತ್ತು ನುಡಿದು ನಾಲಿಗೆ ತಪ್ಪಿನುಡಿದರೆ ಮಾರಿಯಾಗಿ ಪರಿಣಮಿಸುವುದು ಎಂದು ತಿಳಿಸಿ ಅರಿತು ಮಾತನಾಡುವುದೆಂಬುದು ಒಂದು ನೇಮ; ವ್ರತ ಎಂಬುದನ್ನು ಮರೆಯದಿರಬೇಕು ಎಂದು ಬಸವಣ್ಣನವರು ತಿಳಿಸಿದ್ದುಂಟು. ಮಾತಿನ ಪಸರದ ವ್ಯವಹಾರದೊಳಗೆ ಸಿಕ್ಕಿ ನೂಕು ತಾಕುಗೊಳ್ಳುತ್ತಿಪ್ಪವಂಗೆ, ಯಾವ ಪುರುಷಾರ್ಥ ಸಾಧಿಸೀತು! ಆದ್ದರಿಂದ ''ಶಬ್ಧಸಂಭ್ರಮದಲ್ಲಿ ಹಿಂದುಗಾಣರು, ಮುಂದುಗಾಣರು, ತಮ್ಮ ತಾವರಿಯರು'' ಇದು ಕಾರಣ ಮೂರು ಲೋಕವೆಲ್ಲವೂ ಬರು ಸೂಶಿ ಹೋಯಿತ್ತು ಗುಹೇಶ್ವರ "ಪ್ರಭುದೇವರ ಈ ವಚನ ಮನನೀಯ, ಮಾತು ಮಾತಿಗೆ ಮಥನ ಮಾಡುವಾತನೆ ಜಾತ,

ಮಾತಿನ ಮೊದಲ ಕಂಪಾತನೇ ಅಜಾತ" ಎಂದು ವಚನಕಾರರು ಹೇಳಿರುವುದರ ಅಂತರಾರ್ಥವನ್ನು ಮನಗಾಣಬೇಕು.

ಮಾತು ಎಂಬುದು ಅದು ಬರಿಶಬ್ದ ಸಂಭ್ರಮವಲ್ಲ. ಅದು ಪರರ ಬಗೆಯನ್ನು ತೆರೆವಂತೆ ಮಾಡುವ ಶೀಲಿಕೈಜ್ಞಾನ ಜ್ಯೋತಿಯನ್ನು ಬೆಳಗಿಸುವ ಸಾಧನ. ಹೀಗಾಗಿ ಪರರ ಬಗೆಯನ್ನು ತೆರೆವಂತೆ ಮಾಡಲು ಆಡುವ ಮಾತು ಹೇಗಿರಬೇಕು ಎಂಬುದನ್ನು ಮಾತನಾಡುವ ಪ್ರತಿಯೊಬ್ಬರೂ ಪರ್ಯಾಲೋಚಿಸಬೇಕು. "ನುಡಿವನು, ನುಡಿಯಲಂಜುವೇನಯ್ಯಾ" ಎಂದು ವಚನಕಾರರು ಹೇಳಿದಂತೆ ನುಡಿಯಬೇಕಾದರೆ ಎಲ್ಲಿ, ಏನು ಅಚಾತುರ್ಯವಾಗುವುದೋ ಎಂಬ ಅಂಜಿಕೆ ಇರಬೇಕು. ಮನಸ್ಸಿಗೂ ಮಾತಿಗೂ ಪರಸ್ಪರ ಸಂಬಂಧವಿದೆಯೆಂಬುದನ್ನು ಗಮನಿಸಬೇಕು. ಆಡುವ ಮಾತು ಬರಿಬಾಯಿಗೆ, ನಾಲಗೆಗೆ ಸಂಬಂಧಿಸಿಲ್ಲ. ಮನಸ್ಸಿಗೂ ಅದಕ್ಕೂ ನೇರಸಂಬಂಧವಿದೆ. ಮಾತು ಮನಸ್ಸಿಗೆ, ಮನಸ್ಸು ಮಾತಿಗೆ ಋಣಿಗಳಾಗಿವೆ. ಮನಸ್ಸೊಂದು ದೆಸೆ, ಮಾತೊಂದು ದೆಸೆ ಆಗಬಾರದು. "ಮನಕ್ಕೆ ನಾಚದ ವಚನ, ವಚನಕ್ಕೆ ನಾಚದ ಮನ" ಆಗಬಾರದು. "ಬಂಜೆ ಬೇನೆಯನ್ನರಿಯದಂತೆ ಒಬ್ಬರೊಂದ ನುಡಿವರಿ ಎಂದು ಹೇಳುವಂತಾಗಬಾರದು. ಪ್ರಸೂತಿಗೆ ಮುನ್ನ ಬೇನೆಯನ್ನು ಅನುಭವಿಸಿದರೇನೇ ಸುಂದರ ಶಿಶುವಿಗೆ ಜನನವೀಯಲಾಗುವಂತೆ, ಮಾತಿನ ಹೊರಹೊಮ್ಮುವಿಕೆಯ ಮುನ್ನ ಅದರ ಬೇನೆಯನ್ನು ಅನುಭವಿಸಿ ಮಾತನ್ನು ಪ್ರಸವಿಸಿದರೇನೇ ಅದು ಸರ್ವರ ಮುದ್ದಿಗೆ ಆಸ್ಪದವಾಗುತ್ತದೆ. ಸಕಲರ ಮನ್ಸನ್ನು ಬೆಳಗಿಸುತ್ತದೆ. ಇಂತಹ "ಶರಣರು ಮನದೆರೆದು ಮಾತನಾಡಿದರೆ ಲಿಂಗವ ಕಾಣಬಹುದು" ಎಂದಂತೆ ಶಿವಜ್ಯೋತಿ ಪ್ರಕಟವಾಗುವುದು. "ನುಡಿದರೆ ಮುತ್ತಿನ ಹಾರದಂತಿರಬೇಕು. ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು. ನುಡಿದರೆಸ್ಫಟಿಕದ ಸಲಾಕೆಯಂತಿರಬೇಕು.. ನುಡಿದರೆ ಲಿಂಗ ಮೆಚ್ಚಿ ಅಹುದಹುದೆನಬೇಕು ಅದು ಬಿಟ್ಟು ಮನಸ್ಸಿಗೇನೋ ಬಂತುಎಂದು ಬಾಯಲ್ಲೇನೋ ಆಡಿದರೆ-" ನುಡಿದೆಂಬಾಯ್ಗೆ ಬಂದವೋಲ್, ನಡೆದು ಮನಸಿಗೆ ಬಂದವೋಲ್ ಸೈಗೆಡೆದೆಂ ದುಃಖ ಸಮುದ್ರದೋಳ್" ಎಂದು ರತ್ನಾಕರವರ್ಣಿ ಹೇಳಿದಂತೆದುಃಖ ಸಾಗರದಲ್ಲಿ ಬೀಳಬೇಕಾಗುತ್ತದೆಯೆಂಬುದನ್ನು ಎಂದೂ ಮರೆಯಬಾರದು. ಮನ ವಚನಗಳೆರಡೂ ಒಂದಾಗಿ ಬೆಸೆದು ಬೆಳಗಬೇಕು.

ಮನಸ್ಸಿಗೂ ವಚನಕ್ಕೂ ನಂಟು ಇರುವುದರಿಂದ ಆಡುವ ಮಾತು ಮನಸ್ಸಿನ ಗುಣಕ್ಕನುಗುಣವಾಗಿ ಹೊರಹೊಮ್ಮುತ್ತದೆ. ಆದ್ದರಿಂದ ಆಡುವ ಮಾತು ಯೋಗ್ಯವಾದುದಾಗಿರಬೇಕಾದರೆ, ಬಾಲಿಶವಾಗಿರದೆ ಪ್ರೌಢತ್ವವುಳ್ಳದ್ದಾಗಿರಬೇಕಾದರೆ ಮನಸ್ಸು ಪರಿಶುದ್ಧವಾಗಿರಬೇಕಾಗುತ್ತದೆ. ಸತ್ತ್ವರಜಸ್ತಮೋಗುಣಗಳು ಮನದ ಗುಣಗಳು. ಈ ಗುಣಗಳಿಗನುಸಾರವಾಗಿ ಮನದ ಸಂಪರ್ಕದಿಂದ ಮಾತುಗಳೂ ಉತ್ತಮ, ಮಧ್ಯಮ ಕನಿಷ್ಠಗಳಾಗಿ ಮಾನವನ ವ್ಯಕ್ತಿತ್ವದ ದರ್ಶನ ಮಾಡಿಸುತ್ತವೆ. ಮನಸ್ಸಿನ ಪ್ರಸನ್ನತೆ,

ಸೌಮ್ಯಭಾವ, ಮನೋನಿರೋಧ, ಭಾವಸಂಶುದ್ಧಿಗಳನ್ನು ಬೆಳೆಸಿದರೆ ಮಾತ್ರ ಮಾತು ಜ್ಯೋತಿರ್ಲಿಂಗವಾಗಲು ಸಾಧ್ಯ. ಅಂತಹ ಮಾತುಗಳನ್ನಾಡುವವನು ಸರ್ವೋನ್ನತನಾಗುವನು, ಶರಣನೆಂದೆನಿಸುವನು. ಅಂದರೆ ಆತನು ತ್ರಿಗುಣಗಳನ್ನು ಮೀರಿ ನಿಂತವನು.

> ಮಾತಿನಲ್ಲಿ ಕರ್ಕಶ ಮನದಲ್ಲಿ ಘಾತಕತನವುಳ್ಳವನ ಕನಿಷ್ಠನೆಂಬರು
> ಮಾತಿನಲ್ಲಿ ಮಿತಿ ಮನದಲ್ಲಿ ಕತ್ತರಿಯುಳ್ಳವನ ಮಧ್ಯಮನೆಂಬರು.
> ಮಾತಿಲ್ಲಿ ಮೃದು ಮನದಲ್ಲಿ ಪ್ರೀತಿಯುಳ್ಳವನ ಉತ್ತಮನೆಂಬರು ನೋಡಾ ಈ ಜಗದವರು.
>
> ಮಾತಿನಲ್ಲಿ ಮಂತ್ರ, ಮನದಲ್ಲಿ ಮಹಾನುಭಾವ, ಆತ್ಮದಲ್ಲಿ ಜ್ಯೋತಿ ಬೆಳಗುತ್ತಿಪ್ಪುದಾಗಿ ಉತ್ತಮನಲ್ಲ, ಮಧ್ಯಮನಲ್ಲ, ಕನಿಷ್ಠನಲ್ಲ ನೋಡಾ ಅಖಂಡೇಶ್ವರಾ ನಿಮ್ಮ ಶರಣನು.

ಇದರಿಂದ ಮನದಲ್ಲಿ ಮಹಾನುಭಾವನಾದವನ ಮಾತಿನಲ್ಲಿ ಮಾತ್ರ ಮಂತ್ರ ಸದೃಶ ನುಡಿಗಳು ಹೊರಹೊಮ್ಮಬಲ್ಲವು ಎಂಬುದು ಸ್ಪಷ್ಟವಾಗುತ್ತದೆ.

---

## ಆಜೀವ ಸದಸ್ಯರುಗಳಲ್ಲಿ ಒಂದು ಮನವಿ.

ಸಿದ್ಧಗಂಗಾ ಪತ್ರಿಕೆಯ ಅನೇಕ ಆಜೀವ ಸದಸ್ಯರುಗಳ ವಿಳಾಸಗಳು ಬದಲಾಗಿರುವುದರಿಂದ ಕಾರ್ಯಾಲಯದಿಂದ ಕಳುಹಿಸಿದ ಸಂಚಿಕೆಗಳು ಕೆಲವು ಸದಸ್ಯರುಗಳಿಗೆ ತಲುಪದೆ ಹಿಂತಿರುಗುತ್ತಿವೆ. ದಯುವಿಟ್ಟು ನಿಮ್ಮ ಬದಲಾದ ವಿಳಾಸಗಳನ್ನು ಆಗಿಂದಾಗ್ಗೆ ಪತ್ರಿಕಾ ಕಾರ್ಯಲಯಕ್ಕೆ ಕಳುಹಿಸಿ ಕೊಡುವುದರ ಮುಖೇನ "ಸಿದ್ದಗಂಗಾ" ನಿಮಗೆ ಕ್ರಮವಾಗಿ ತಲುಪಲು ಸಹಕರಿಸಬೇಕಾಗಿ ಪ್ರಾರ್ಥನೆ. ತಮ್ಮ ಸದಸ್ಯತ್ವದ ನಂಬರನ್ನು ತಪ್ಪದೇ ತಿಳಿಸಿರಿ.

ಪ್ರಕಾಶಕರು.

---

# ವಿಜ್ಞಾನ ಮತ್ತು ಆಧ್ಯಾತ್ಮ

**ಹೆಚ್.ಎಸ್. ನರಸಿಂಹ ಜೀಯರ್,**
ಶ್ರೀ ಬಸವೇಶ್ವರ ಇಂಗ್ಲಿಷ್ ಶಾಲೆ, ತುಮಕೂರು-2

ಈಗಿನ ಶಿಕ್ಷಣದಲ್ಲಿ ವೈಜ್ಞಾನಿಕ ಮನೋಭಾವನೆ ಬೆಳವಣಿಗೆ ಬಗ್ಗೆ ಹೆಚ್ಚಿನ ಆದ್ಯತೆ ಕೊಡಲಾಗಿದೆ. ಇದು ಅತ್ಯಾವಶ್ಯಕವೆಂಬ ವಿಚಾರದಲ್ಲಿ ಯಾರ ಭಿನ್ನಾಭಿಪ್ರಾಯವೂ ಇಲ್ಲ. ಆದರೆ ಕೆಲವರು ಧರ್ಮದ, ಆಚಾರವಿಚಾರದ ಹಾಗೂ ಆಧ್ಯಾತ್ಮಿಕತೆ ಬಗ್ಗೆ ಹೆಚ್ಚಿನ ಅರಿವಿಲ್ಲದೆ ಎಲ್ಲವನ್ನೂ ಮೂಢನಂಬಿಕೆಗಳೆಂದೂ, ಗೊಡ್ಡು ಸಂಪ್ರದಾಯಗಳೆಂದೂ ಹೀಗಳೆಯುವ ಪರಿಪಾಠಮಾಡಿಕೊಂಡಿದ್ದಾರೆ. ಇದು ಸರಿಯಲ್ಲ. ಈಗಿರುವ ಎಲ್ಲಾ ನಂಬಿಕೆಗಳೂ ಒಳ್ಳೆಯ ಸಂಪ್ರದಾಯದಿಂದ ಕೂಡಿವೆಯೆಂದೂ ಹೇಳಲಾಗದು. ಅಂಧ ಶ್ರದ್ಧೆಯಿಂದ ಅನೇಕ ಅವೈಜ್ಞಾನಿಕ ವಿಚಾರಗಳೂ ಆಚಾರಗಳೂ ಸೇರಿಕೊಂಡಿವೆ ನಿಜ.

ಆದರೆ ಎಲ್ಲಾ ಆಚಾರ ವಿಚಾರಗಳೂ, ಪದ್ಧತಿಗಳೂ ನಂಬಿಕೆಗಳೂ ಮೂಢರ ನಂಬಿಕೆಗಳಲ್ಲ. ಅನೇಕ ಸತ್ಸಂಪ್ರದಾಯಗಳಿವೆ ಇವೆಲ್ಲಕ್ಕೂ ವೈಜ್ಞಾನಿಕ ಆಧಾರವಿದೆ. ಆಧ್ಯಾತ್ಮದ ಬಗ್ಗೆ ವಿಚಾರಮಾಡಿದಾಗ ಅನೇಕ ವಿದ್ಯಾವಂತರು ಇದನ್ನು ಬೂಸಾ ಸಾಹಿತ್ಯಕ್ಕೇ ಸೇರಿಸ ಹೊರಟಿರುವುದು ಹಾಸ್ಯಾಸ್ಪದವಾಗಿದೆ. ವಿಜ್ಞಾನವೇ ಸರ್ವಸ್ವವೆಂದು ತಿಳಿದು ಹಿಂದಿನ ಸಾಹಿತ್ಯ ಹಾಗೂ ಪದ್ಧತಿಗಳನ್ನೆಲ್ಲಾ ಚುಚ್ಚುಮಾತಿನಿಂದ ಅಲಕ್ಷ್ಯ ಮಾಡುತ್ತಿರುವವರ ಅವಗಾಹನೆಗಾಗಿ, ಪ್ರಪಂಚದ ಅತ್ಯಂತ ಶ್ರೇಷ್ಠ ವ್ಯಕ್ತಿಗಳೂ, ವಿಜ್ಞಾನಿಗಳೂ ಆಧ್ಯಾತ್ಮದ ಬಗ್ಗೆ ಪರಿಪೂರ್ಣವಾಗಿ ಅರಿತು ನುಡಿದಿರುವ ಅವರ ಅನುಭವ ವಾಣಿಯನ್ನು ವಿನಮ್ರತೆಯಿಂದ ಪರಿಚಯ ಮಾಡಿಕೊಡುವುದೇ ಈ ಲೇಖನದ ಉದ್ದೇಶವಾಗಿದೆ. ಇದಕ್ಕಾಗಿ ಅವರ ಹೇಳಿಕೆಗಳನ್ನೇ ಅವರ ಭಾಷೆಯಲ್ಲಿ ಪುನರುಚ್ಚರಿಸಲಾಗಿದೆ.

ಸುಮಾರು ಅರ್ಧ ಶತಮಾನದಿಂದೀಚೆಗೆ ಹೊಸ ಹೊಸ ಆವಿಷ್ಕಾರದಲ್ಲಿ ನಿರತರಾಗಿದ್ದ ಹಾಗೂ ನಿರತರಾಗಿರುವ ಪ್ರಮುಖ ವಿಜ್ಞಾನಿಗಳು ಅದರಲ್ಲೂ ನೋಬೆಲ್ ಪಾರಿತೋಷಕ ವಿಜೇತರೂ ಸಹ, ವಿಜ್ಞಾನ ಮತ್ತು ಆಧ್ಯಾತ್ಮ ವಿಚಾರಗಳೂ ಒಂದಕ್ಕೊಂದು ಹತ್ತಿರ ಬರುತ್ತಿವೆ ಹಾಗೂ ಇವುಗಳ ಸಂಬಂಧ ಹೆಚ್ಚುತ್ತಿದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಮಾನವನ ಪ್ರಗತಿಗೆ ಇವೆರಡೂ ಅತ್ಯಾವಶ್ಯಕವೆಂಬುದು ಅವರ ಖಚಿತ ಅಭಿಮತ. ಅದರಲ್ಲಿಯೂ ಆಧ್ಯಾತ್ಮಕ್ಕೆ ಮೊದಲ ಆದ್ಯತೆ ಎಂದು ಪ್ರತಿಪಾದಿಸಿದ್ದಾರೆ, ಎರಡರ ಸಂಗಮದಿಂದ ಮಾತ್ರ ಮಾನವನು ಉನ್ನತ ಮಟ್ಟಕ್ಕೇರಲು ಸಾಧ್ಯವೆಂದು ತಿಳಿಸಿದ್ದಾರೆ.

ನೋಬೆಲ್ ಪಾರಿತೋಷಕ ಪಡೆದ ವಿಜ್ಞಾನಿ ಡಾ॥ ಆರ್. ಮಾಲಿಕನ್‌ರವರು ಈ ರೀತಿ ಹೇಳಿದ್ದಾರೆ. It seens to me that the two great Pillars upon which all human well being and human progress rest are first, the spirit of religion, and second the spirit of science and knowledge. Neither of them can attain its highest effectiveness without the other........."

ಇತ್ತೀಚೆಗೆ ವಿಜ್ಞಾನ ಹಾಗೂ ಆಧ್ಯಾತ್ಮಿಕತೆ ಇವೆರಡೂ ನಿಕಟವಾಗುತ್ತಿರುವ ಬಗ್ಗೆ J, H, C, ಕ್ರೇಗ್‌ಟ್ರೀ ಎಂಬ ವಿದ್ವಾಂಸರು "with the development of science, particularly in fundmental in research man of the vedantic theories are becoming scientffically tenable. Even eminent scientists of the stature of Einstein and others are sauguine that the day is not for off when physics and metaphysics will walk hand–in—hand"—ಎಂದು ಅಭಿಪ್ರಾಯ ಸೂಚಿಸಿದ್ದಾರೆ.

ಉದಾಹರಣೆಗೆ, ಋಗ್ವೇದದ ಉಪವೇದ ಆಯುರ್ವೇದದಲ್ಲಿ ಬರುವ ಮಾನವ ಶರೀರಶಾಸ್ತ್ರ (Anatomy)ದ ವಿಷಯದಲ್ಲಿರುವ ಅನೇಕ ವಿಚಾರಗಳು ಪಾಶ್ಚಾತ್ಯರ ಗಮನ ಸೆಳೆದಿವೆ. ಈ ಶಾಸ್ತ್ರದ ಬಗ್ಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತಾ Sir william Hunter ಎಂಬ ವಿದ್ವಾಂಸರು (ವಿಜ್ಞಾನಿ) "These treatises show Profound Knowledge of physiology with special reference to the functioning of mu$cles, blood-cells, bones proteins and other body building substances. No less astounding is the science of preparing medicine from roots and herbs, which shows most subtle Knowledge of the relation ship between the properties of the medicines on one side and the causes of the diseases the other" ಎಂಬುದಾಗಿ ಪ್ರಶಂಸಿದ್ದಾರೆ. ಇದೇ ವಿಚಾರದಲ್ಲಿ Prof; wilson ರವರು "the method of diagnosis of diseases in the ancient Indian $eience of Life (Ayurveda) is in complete accord with moderr science of medicine" ಎಂದು ಹೇಳಿದ್ದಾರೆ.

ಈಗಿನ ತಳಿಶಾಸ್ತ್ರ (genetics)ದ ಪ್ರಮುಖ ಅಂಶಗಳೂ, RNA ಮತ್ತು DNA ಮುಂತಾದ ವಿಷಯಗಳೂ ನಮ್ಮ ಪೂರ್ವಜರಿಗೆ ತಿಳಿದಿತ್ತು. ಎಂಬುದಾಗಿ 15-2-83ರ Times of India ಪತ್ರಿಕೆಯಲ್ಲಿ ವರದಿಯಾಗಿದೆ.

ಇತ್ತೀಚಿನ ವಿಜ್ಞಾನದ ಆವಿಷ್ಕಾರಗಳಾದ Theory of creation and evolution; Theory of relativity and The Quantam Theory ಇವುಗಳ ವಿಚಾರವಾಗಿ ಪರಿಶೀಲಿಸಿದ ವಿಜ್ಞಾನಿಗಳು ಆಧ್ಯಾತ್ಮ ಮತ್ತು ವಿಜ್ಞಾನದ ಬಗ್ಗೆ ಸಂಬಂಧವನ್ನು ಗುರ್ತಿಸಿದ್ದಾರೆ. ಸ್ವಾಮಿ ವಿವೇಕಾನಂದರು ಈ ವಿಚಾರ-ವಾಗಿ ತಮ್ಮ ಖಚಿತ ಅಭಿಪ್ರಾಯವನ್ನು ತಿಳಿಸುತ್ತಾ " To-day we find wonderful discoveries of modern science coming upon us like bolts from the blue, opening our eyes to marvels we never dreampt of. But many of these are only re-discoveries of What has been found by our seekers of truth ages ago'' ಎಂದಿದ್ದಾರೆ.

ಕೆಲವರು ಆಧ್ಯಾತ್ಮವು ವೈಜ್ಞಾನಿಕ ತಳಹದಿಯನ್ನು ಹೊಂದಿಲ್ಲ. ವಿಜ್ಞಾನ-ದಂತೆ ಇದರಲ್ಲಿ ವೀಕ್ಷಣೆಗೆ, ಪರಿಶೀಲನೆಗೆ ಹಾಗೂ ಪ್ರಯೋಗಕ್ಕೆ ಅವಕಾಶವಿಲ್ಲ ಎಂದು ಅಭಿಪ್ರಾಯ ಪಡುತ್ತಾರೆ. ಹಾಗೂ ಫಲಿತಾಂಶ ನಿರ್ಣಯವೂ ಸಾಧ್ಯವಿಲ್ಲ ವೆನ್ನುತ್ತಾರೆ. ಅನೇಕ ವಿದ್ವಾಂಸರು ಆಧ್ಯಾತ್ಮ ವಿಚಾರದಲ್ಲಿ ಪರಿಶೀಲನೆ ನಡೆಯಿಸಿ ಇದಕ್ಕೂ ವೈಜ್ಞಾನಿಕ ಆಧಾರ ಇದೆ ಎಂದು ಅಭಿಪ್ರಾಯ ಸೂಚಿಸಿದ್ದಾರೆ. ಮ್ಯಾಕ್ಸ್ ಪ್ಲ್ಯಾಂಕ್ (Max Plank) ಎಂಬ ಭೌತಶಾಸ್ತ್ರಜ್ಞನು ಈ ಕೆಳಕಂಡ ರೀತಿ ವಿವರಿಸಿದ್ದಾನೆ.

" To Spirituality Reality is a fact Obtaining prior to any thing else while, to the scientist this Reality is arrived at as a result of prior data gathered through sense-peception and analysed through reason In other words Spirituality starts with the "inner" Univese, while Science starts with the " Outer " Universe, but ultimately both reach the same reality. ಇವೆರಡೂ ಒಂದೇ ಗುರಿಯನ್ನು ತಲುಪುತ್ತವೆ ಎಂದೂ ತನ್ನ ಅನಿಸಿಕೆಯನ್ನು ವ್ಯಕ್ತಪಡಿಸಿದ್ದಾನೆ.

ವಿಜ್ಞಾನದಲ್ಲಿ ಪರಮಾಣು ಪರಿಶೀಲನೆ ಮಟ್ಟಕ್ಕೆ ಬಂದಾಗ ವಿಜ್ಞಾನಿಗಳು ಆಧ್ಯಾತ್ಮದ ಕಡೆಗೆ ವಾಲುತ್ತಾ ಇವೆರಡರ ಸಂಬಂಧ ಗುರ್ತಿಸಿದ್ದಾರೆ ಈ ಬಗ್ಗೆ ವಿಜ್ಞಾನಿಗಳೇ ಹೀಗೆ ಬರೆದಿದ್ದಾರೆ. (Science and Spirituality-by Scientists)

It was only when science Came to the automic level which is the edge of the physical world and matter began to melt into mystery that the scientist found himself face to face with a conscious, intelligent principle underlying all objects, manifestations and events and, yet, also transcending them all. in many other aspects, too, the physical science found it self standing on the threshold to the "Other side" or "beyond" the physical world and having glimpses of the transecndental Reality"

ಈ ರೀತಿ ವಿಜ್ಞಾನಿಗಳೂ ಸಹ ವಿಶ್ವ ಚೈತನ್ಯವನ್ನು ಅತೀತವಾದ ಶಕ್ತಿಯನ್ನು ಗುರ್ತಿಸಿ ಇದರ ಸಹಾಯದಿಂದ ಮುಖ್ಯ ತತ್ವಗಳನ್ನು ವಿವರಿಸಲು ಯೋಚಿಸುತ್ತಿದ್ದಾರೆಂದು ಹೇಳಬಹುದು.



# ನಾಡು–ನುಡಿಗಾಗಿ

" ಭಗಿನಿ " **ಎನ್. ಎಸ್. ಅಶ್ವತ್ಥಲಕ್ಷಮ್ಮ,** ಎಂ.ಎ, ಗುಬ್ಬಿ.

"ಜಯಭೇರಿ" ಹೊಡೆಯೋಣ
ಬನ್ನಿರೆಲ್ಲಾ ..............।
ನಾವೆಲ್ಲಾ ..............।
ಕನ್ನಡದ ನಾಡಿಗಾಗಿ
ಕನ್ನಡದ ನುಡಿಗಾಗಿ ॥

ತಾಯ್ನುಡಿಯ ದೂಷಿಸುತ
ತಬ್ಬಲಿಗಳಾಗದಿರಿ ।
ತಾಯ್ನಾಡ ದ್ವೇಷಿಸುತ
ಅಲೆಮಾರಿಗಳಾಗದಿರಿ ।
ನನ್ನಣ್ಣ ತಮ್ಮದಿರೇ
ನನ್ನಕ್ಕ ತಂಗಿಯರೇ ॥ ಜಯಭೇರಿ ॥

ಅನ್ಯಭಾಷೆಯ ದ್ವೇಷ
ಎಂದಿಗೂ ಮಾಡದಿರಿ
ಮಾತೃಭಾಷೆಯ ನೀವು
ಎಂದೆಂದೂ ಮರೆಯದಿರಿ ।
ನನ್ನಣ್ಣ ತಮ್ಮದಿರ
ನನ್ನಕ್ಕ ತಂಗಿಯರೇ ॥ ಜಯಭೇರಿ ॥

ನಾಡಿನಾ ಒಳಿತಿಗೇ
ಪಣತೊಟ್ಟು ಹೋರಾಡಿ ।
ನುಡಿಯಾ ಮೇಲ್ಮೆಗೆ
ಮನವಿಟ್ಟು ಮಾತಾಡಿ ।
ನನ್ನಣ್ಣ ತಮ್ಮದಿರೇ
ನನ್ನಕ್ಕ ತಂಗಿಯರೇ ॥ ಜಯಭೇರಿ ॥

ಸಂಸ್ಕೃತಿಯ ಸಿರಿತನವ
ಸತ್ಕೃತಿಯ ಹಿರಿತನವ ।
ಛಲವಿತ್ತು ಮನವಿತ್ತು
ಮೆರೆಸಾಡೆ ಅನುವಾಗಿ ।
ನನ್ನಣ್ಣ ತಮ್ಮದಿರೇ
ನನ್ನಕ್ಕ ತಂಗಿಯರೇ ॥ ಜಯಭೇರಿ ॥

ಕಲಿತನದ ಕೆಚ್ಚಿನಲ್ಲಿ
ಬಲಿದಾನದ ಮೆಚ್ಚಿನಲಿ।
ಬಲವಿತ್ತು ಒಲವಿತ್ತು
ತ್ಯಾಗದಾ ಭಾವದಲಿ ।
ನನ್ನಣ್ಣ ತಮ್ಮದಿರೇ
ನನ್ನಕ್ಕ ತಂಗಿಯರೇ ॥ ಜಯಭೇರಿ ॥

# ನೀತಿ ಶೀಲ ಪ್ರಗತಿ (ಚಿಂತನ)

**ಜೆ. ಶಾರದಾರಾಜಶೇಖರ್,** 847, 4ನೇ ಮೈನ್, ವಿಜಯನಗರ, ಬೆಂಗಳೂರು-40,

ಸಾಂಪ್ರದಾಯಕ ನೀತಿ ಧರ್ಮವನ್ನು ನಾವು ಸೂಕ್ಷ್ಮವಾಗಿ ವಿಚಾರ ಮಾಡಿದಾಗ, ಪ್ರಾಚೀನ ಕಾಲದಿಂದಲೂ ಮಾನವರಲ್ಲಿ ಒಂದು ನೀತಿ ಕ್ರಮ, ನೈತಿಕ ವ್ಯವಸ್ಥೆ ಇದ್ದಿತು ಎಂಬುದಾಗಿ ನಮಗೆ ಭಾಸವಾಗುತ್ತದೆ, ಪ್ರಾಚೀನರಲ್ಲಿ ಅವರದೇ ಆದ ಒಂದು ನೀತಿ ಶಾಸ್ತ್ರವಿದ್ದಿತು. ಅವುಗಳು ಇಂದು ನಮಗೆ ಸಮ್ಮತವಾಗದೆ ಇರಬಹುದು, ನಮ್ಮ ನವೀನ ನ್ಯಾಯ ದೃಷ್ಟಿಯಿಂದ ಸಮಂಜಸವಾಗಿಲ್ಲದೇ ಇರಬಹುದು, ಆದರೂ ಕೂಡ ಅವುಗಳೇ ಈಗಿನ ಪ್ರಚಲಿತ ನೀತಿ ಧ್ಯೇಯಗಳಿಗೆ ಬುನಾದಿ ಎಂದು ಹೇಳಬಹುದು. ಪ್ರಾಚೀನ ಕಾಲದಿಂದಲೂ ಮಾನವನಿಗೆ ಒಂದು ನೀತಿ ಧರ್ಮ ದೃಷ್ಟಿ ಇದ್ದಿತು. ಕಾಡುಮನುಷ್ಯರು ಹಿಂದುಳಿದವರು ಈಗಲೂ ಸಹ ತಮ್ಮದೇ ಆದ ನೀತಿ ಕಟ್ಟಳೆಗಳನ್ನು ಇಟ್ಟುಕೊಂಡಿದ್ದಾರೆ.

ಪೂರ್ವಕಾಲದಿಂದಲೂ ಈಗಿನವರೆಗೂ ಮತ್ತು ಮುಂದಕ್ಕೂ ನೀತಿ ಧರ್ಮದಲ್ಲಿ ಪ್ರಗತಿಶೀಲ ಪರಿವರ್ತನೆ ಆಗುತ್ತಲೇ ಇದೆ.

ಪೂರ್ವಜರು ತಮ್ಮ ಕಾಲದ ನೀತಿ ಧರ್ಮಗಳಾದ ಸಹಗಮನ, ವಿಧವಾಬಹಿ-ಷ್ಕಾರ, ಜಾತಿ ಭೇದ, ಬಹು ಪತ್ನಿತ್ವ, ಅಸ್ಪೃಶ್ಯತೆ, ಶಿಶುಹತ್ಯೆ, ಇವೆಲ್ಲವೂ ಸಮಾಜದ ಧರ್ಮಗಳೇ ಎಂದೆಣಿಸಿದ್ದರು. ಹಿಂದೆ ಯಾವುವು ಒಳ್ಳೆಯ ಧರ್ಮತತ್ತ್ವಗಳು ನೀತಿ ಕ್ರಮಗಳು ಎಂದೆನಿಸಿಕೊಂಡಿದ್ದವೋ ನಾವು ನಮ್ಮ ಆಧುನಿಕ ಆಲೋಚನಾತ್ಮಕ ನೀತಿ ಧರ್ಮದೃಷ್ಟಿ ಯಿಂದ ಅವಹೇಳನಕರವಾದ ಅಕೃತ್ಯಗಳೆಂದು ಪರಿಗಣಿಸುತ್ತೇವೆ. ಆದ್ದ-ರಿಂದ ನೀತಿ ಪ್ರಗತಿ ನೀತಿ ಸೂಕ್ಷ್ಮದ ಪ್ರಗತಿ ಸಾದನೆಯೆಂದು ಹೇಳುತ್ತೇವೆ. ನೀತಿಯ ಅನೇಕ ಆದರ್ಶಗಳು, ಧ್ಯೇಯಗಳು ಮಾನವರಿಂದ ಸಾಧಿಸಲ್ಪಡದೆ ಇರಬಹುದು ಆದರೆ ನಮ್ಮ ನೀತಿಯ ರೀತಿ ವ್ಯತ್ಯಾಸಗಳು ಆ ಧ್ಯೇಯಗಳ ಹತ್ತಿರಕ್ಕಾದರೂ ನಮ್ಮನ್ನು ಒಯ್ಯುವುದಾದರೆ ಅದೇ ಪ್ರಗತಿ ಶೀಲ ಪರಿವರ್ತನೆ.

ಪ್ರಾಚೀನ ನೀತಿ ಧರ್ಮಗಳು ವ್ಯಕ್ತಿತ್ವವನ್ನು ಗಮನಕ್ಕೆ ತೆಗೆದುಕೊಂಡಿರಲಿಲ್ಲ. ವ್ಯಕ್ತಿಯನ್ನು ನೀತಿ ಪ್ರಪಂಚದಲ್ಲಿ ಏಕಮಾನವಾಗಿ ಪುರಸ್ಕರಿಸಲಿಲ್ಲ ಅವರು ತಮ್ಮ

ಸಂಗಡವನ್ನೇ ಏಕಮಾನವಾಗಿಟ್ಟುಕೊಂಡಿದ್ದರು. ವ್ಯಕ್ತಿಯ ವ್ಯಕ್ತಿತ್ವ ಸಮಾಜ ಜೀವನದಲ್ಲಿ ಮುಳುಗಿತ್ತು. ನೀತಿ ಪ್ರಗತಿ ಸಾಧನೆಯಾದ ಹಾಗೆಲ್ಲಕ್ರಮವಾಗಿ ವ್ಯಕ್ತಿತ್ವಕ್ಕೆ ಮಾನ್ಯತೆ ಸಲ್ಲತೊಡಗಿತು. ಈ ವ್ಯಕ್ತಿತ್ವದ ಮಾನ್ಯತೆಯು ಬಹುಮುಖ್ಯವಾದ ಒಂದು ಘಟ್ಟ- ಮೈಲಿಗಲ್ಲು ಎಂದು ಹೇಳಬಹುದು.

ಈಗಿನ ಮಾನವೀಯ ಹಕ್ಕುಗಳು ಮತ್ತು ಮೂಲಭೂತ ಹಕ್ಕುಗಳು ವ್ಯಕ್ತಿಮಾನ್ಯತೆಯ ಪ್ರತೀಕವೇ ಸರಿ. ಹಿಂದಿನ ಸಾಂಪ್ರದಾಯಿಕ ನೀತಿ ಧರ್ಮಗಳ ವೈಶಿಷ್ಟ್ಯವೆಂದರೆ ಬಾಹ್ಯನಿಯಂತ್ರಣಗಳಿಗೆ ವಿಧೇಯತೆ ಮಾತ್ರ. ಸಮಾಜದಲ್ಲಿನ ಶಿಕ್ಷೆಯ ಹೆದರಿಕೆ, ನರಕಭೀತಿ ಇತ್ಯಾದಿ ಇವುಗಳಿಗೋಸ್ಕರ ನೀತಿ ಧರ್ಮ ಪಾಲನೆ ಮಾಡುವುದು ಒಂದು ತರಹವಾದದ್ದು. ಇಂತಹ ವ್ಯಕ್ತಿಗಳು ನೀತಿವಂತರಾಗಿದ್ದರೆ ಅವರಿಗೆ ನಿಜವಾಗಿಯೂ ಪುರಸ್ಕಾರವಿಲ್ಲ. ತನ್ನ ಅಂತರಾತ್ಮನಿಗೆ ಹೆದರಿ ನೀತಿವಂತನಾಗಿ, ಶೀಲಪರನಾಗಿದ್ದರೆ ಮಾತ್ರಅವನು ಉತ್ಕೃಷ್ಟ ನೀತಿಮಾನವನೆನಿಸಿಕೊಳ್ಳುತ್ತಾನೆ.

ಆಲೋಚನಾತ್ಮಕ ನೀತಿ ಧರ್ಮದಲ್ಲಿ ನಾವು ವ್ಯಕ್ತಿಯನ್ನು ಆತನ ಬಾಹ್ಯಕ್ರಿಯೆಗಳ ಆಧಾರದ ಮೇಲೆ ಅಳೆಯುವುದಿಲ್ಲ. ಆತನ ಅಂತರಂಗದ ಇಂಗಿತಗಳು ಆಂತರಿಕ ಉದ್ದೇಶ ಭಾವಗಳಿಂದ ನೈತಿಕಮಟ್ಟವನ್ನು ನಿರ್ಣಯಿಸುತ್ತೇವೆ- ಆಂತರಿಕ ಧ್ಯೇಯಗಳ ಶುದ್ಧತೆಯಿಂದ ಪರಿಕ್ಷಿಸುತ್ತೇವೆ. ಹೊರಗಿನ ಕ್ರಿಯಾರೂಪವಾದ ನಡತೆಗಿಂತ ವ್ಯಕ್ತಿಯ ಆಂತರಿಕ ವೈಲಕ್ಷಣ್ಯವನ್ನು ಪರಾಮರ್ಶಿಸುದು ಸೂಕ್ತವಲ್ಲವೇ ? ಅಂತರ್ಯ ಶುದ್ಧಿ, ಶ್ರೇಷ್ಠ ಚಿತ್ತವೃತ್ತಿಗಳೇ ನೀತಿಪ್ರಗತಿಯ ಪ್ರತೀಕಗಳು.

ಆಲೋಚನಾತ್ಮಕ ಪ್ರಗತಿಪರ ನೀತಿ ಧರ್ಮ, ಸೌಜನ್ಯಕ್ಷಮೆ, ಸಾವಧಾನ ಚಿತ್ತವೃತ್ತಿ, ಹೃದಯಂಗಮವಾದ ನೈತಿಕಧರ್ಮ, ಸ್ನೇಹಭಾವ, ಅನುಕಂಪ ಇವುಗಳಿಗೆ ಅತಿಬೆಲೆ ಕೊಡುತ್ತದೆ.

ನೀತಿಯ ಪ್ರಗತಿ ಅಂದರೆ ಸೌಜನ್ಯ, ದಯಾಪರತೆ ಸಾಧುಗುಣಗಳಿಗೆ ಪ್ರಾಧಾನ್ಯ ಕೊಡುವುದು, ಇದರಿಂದ ಮಾನವ ಕುಲವೇ ಒಂದು ಸಂಸಾರವೆಂಬ ಪೂರ್ಣಭಾವನೆ ನಂಬಿಕೆ ಉಂಟಾಗುತ್ತದೆ.

## ಕಡಿಮೆ ಹಣ ಖರ್ಚು ಮಾಡಿ

## ಹೆಚ್ಚು ಬಟ್ಟೆಗಳನ್ನು ಒಗೆಯಿರಿ.

- ಇದೀಗ ನೀವು ಸಾಬೂನಿಗೆ ಕಡಿಮೆ ಹಣ ಖರ್ಚು ಮಾಡಿ ಹೆಚ್ಚು ಬಟ್ಟೆಗಳನ್ನು ಒಗೆಯಬಹುದು.
- ಕಸ್ತೂರಿ ನೀಲಂ ಹಾಗೂ ಕಸ್ತೂರಿ ಬಾರ್ ಸೋಪ್ ಉಪಯೋಗಿಸುವುದರಿಂದ ಇದು ಸಾಧ್ಯ.
- ಕಸ್ತೂರಿ ಸಾಬೂನುಗಳು ಬಹು ಉಳಿತಾಯಕರವಾದುದು ಅಲ್ಲದೆ, ಪ್ರತಿ ಬಾರ್ ಸೋಪಿನಿಂದಲೂ ಹೆಚ್ಚು ಬಾರಿ ಒಗೆಯಲು ಸಾಧ್ಯವಾಗುತ್ತದೆ.
- ಇದರಲ್ಲಿ ವಿಶೇಷ ಡಿಟರ್ಜೆಂಟುಗಳು ಮಿಶ್ರಿತವಾಗಿರುವುದರಿಂದ ನಿಮ್ಮ ಉಡುಪುಗಳ ಬಿಳುಪಿಗಿಂತಲೂ ಅತ್ಯಧಿಕ ಉಜ್ವಲವಾಗಿರುತ್ತವೆ.

**ಕಸ್ತೂರಿ ಸಾಬೂನುಗಳನ್ನು ಇಂದೇ ಉಪಯೋಗಿಸಿರಿ**

**'ಕಸ್ತೂರಿ'**
**ಬಾರ್ ಸೋಪ್**

**'ಕಸ್ತೂರಿ'**
**ನೀಲಂ ಬಾರ್ ಸೋಪ್**

ತಯಾರಕರು :

## ರಾಮಕೃಷ್ಣ ಆಯಿಲ್ ಮಿಲ್, ತುಮಕೂರು

# ನಗೆ–ನೀತಿ–೧

ಆ||ವಿ||ಡಾ|| ಬಸವರಾಜ ಶಾಸ್ತ್ರಿಗಳು,

ತಾ|| ಬಹೃಸ್ಮತ. ನಿ||ಪ್ರಾ||ಕ||ಸಂ|| ಪಂಡಿತರು, 145/18. ನೆಹ್ರೂ ಕಾಲೋನಿ, ಬಳ್ಳಾರಿ-3

ನಗುವು ಮಾನವನ ಧರ್ಮ, ನಗಿಸುವುದು ತಿಳಿದವರ ಕರ್ತವ್ಯ. ‘‘ಯೇನ-ಕೇನ ಪ್ರಕಾರೇಣಸಂತೋಷಂ ಜನಯೇತ್‌ಪ್ರಾಜ್ಞಃ ತದೇವ ಈಶ್ವರ ಪೂಜನಂ’’ ಇತರರಿಗೆ ಸಂತೋಷವನ್ನುಂಟು ಮಾಡುವುದೇ ಈಶ್ವರ ಪೂಜೆ ಎಂದಾಗ ನಗುವಿನ ಮಹಿಮೆ ಹೇಳಬೇಕೆ ? ನೀತಿ ಜೀವನದ ಜೀವಾಳ, ಹಾಸ್ಯದ ಅನುಭವಪ್ರದರ್ಶನ-ವೇನಗೆ ಎಂದು ಶಾಸ್ತ್ರ ಹೇಳುತ್ತದೆ. ಹಾಸ್ಯರಸನವರಸಗಳಲ್ಲಿ ಒಂದು “ರಸೋವೈಸಃ” ಎಂದಾಗ ರಸವೇದೇವರು ಎಂದಹಾಗಾಯಿತು ಇದು ಸಾಹಿತ್ಯದಲ್ಲಿ ಊಟಕ್ಕೆ ಉಪ್ಪಿನಕಾಯಿ ಇದ್ದಂತೆ. ರಸವೆಂದರೆ ಮನಸ್ಸನ್ನು ಕರಗಿಸುವುದು. ಹಾಸ್ಯವೆಂದರೆ ಒಳ್ಳೆಯ ರೀತಿಯಿಂದ ಮನಸ್ಸನ್ನು ಅರಳಿಸುವುದು. ನೀತಿ ಜೀವನದ ನೆಲೆಗಟ್ಟು: ನೀತಿಯಿಲ್ಲದ ಬಾಳು ಹಾಳಾಗುತ್ತದೆ. ನಗೆಗೆ ಸಂತೋಷವು ಮೂಲಕಾರಣವಾ-ದಂತೆ. ಶೀಲಕ್ಕೆ ನೀತಿಯೇ ಮೂಲ, ಶೀಲ ಸಂಪಾದನೆಯಿಂದಲೇ ಶೂನ್ಯ ಮೋಕ್ಷ, ಸಂಪಾದನೆಯು.

ಸಾಳ್ವನೆಂಬ ಕವಿಯು ತನ್ನ ರಸ ರತ್ನಾಕರದಲ್ಲಿ “ಹಾಸ್ಯಕ್ಕಧೀಶಃ ಗಜಾಸ್ಯಂ” ಎನ್ನುತ್ತಾನೆ. ಪವಿತ್ರ ಶೃಂಗಾರದಿಂದ ಹಾಸ್ಯ ರಸವು ಹುಟ್ಟುತ್ತದೆ. ಹಾಸ್ಯ ರಸವು ಹುಟ್ಟುವುದನ್ನು ಕಾಳಿದಾಸನು ಈ ರೀತಿ ತಿಳಿಸಿರುವನು : “ಒಮ್ಮೆ ಗಣೇಶಚೌತಿಯ ದಿನ ಷಣ್ಮುಖನು ಕೈಲಾಸದಲ್ಲಿ ದೇವತೆಗಳಿಗೆ ಗಣಪತಿ ಹೇಗೆ ಆನೆಮುಖದವನಾದ ಎಂಬ ಕಥೆಯನ್ನು ಹೇಳುತ್ತಿದ್ದನು. ಇದು ನೋಡಿದ ಗಣಪತಿಯು ತನ್ನನ್ನು ಆನೆ ಮುಖದವನೆಂದನಲ್ಲಾ ಎಂದು ಎದ್ದು ಒಂದು ಸಭೆಯಲ್ಲಿ ಎಲ್ಲರ ಎದುರಿಗೆ ಆರು ತಲೆ ಹನ್ನೆರಡು ಕಣ್ಣುಗಳನ್ನು ಎಣಿಸಿದನು. ಆಗ ಸಿಟ್ಟಿಗೆದ್ದ ಷಣ್ಮುಖನು ಗಣಪತಿಯ ಕಿವಿಯನ್ನು ಗಟ್ಟಿಯಾಗಿ ಹಿಂಡಿದನು. ಗಣಪತಿಯು ಘೀಂಕರಿಸಿ ಅತ್ತನು. ತಾಯಿ ಪಾರ್ವತಿಯು ಏ ಗಣಪ ; ಏಕಳುವೆ ? ಎಂದಳು. ಗಣಪತಿಯು ಬೆಂಕಿ ಹುಟ್ಟಿದ ಈ ಷಣ್ಮುಖನು ನನ್ನ ಕಿವಿ ಹಿಂಡಿದನಮ್ಮಾ! ಎಂಧನು. ಪಾರ್ವತಿಯು ದೇವತೆಗಳ

ಸೇನಾಧಿಪತಿಯಾದ ಷಣ್ಮುಖನೇ ಏಕೀಚೇಷ್ಟೆ ? ಎಂದಳು. ಆಗ ಷಣ್ಮುಖನು ಅಮ್ಮಾ! ಅವನೇ ನನ್ನ ತಲೆಗಳನ್ನು ಕಣ್ಣುಗಳನ್ನು ಎಣಿಸಿದನಮ್ಮಾ ಎಂದನು. ಆಗ ಗಣಪತಿಯು ಅವನೇ ಮೊದಲು ನನ್ನ ಮೂಗನ್ನು ಅಳತೆ ಮಾಡಿದನಮ್ಮಾ! ಎಂದನು. ಆಗ ಪಾರ್ವತಿಯು ತನ್ನಿಬ್ಬರ ಮಕ್ಕಳು.ಒಬ್ಬನು ಆನೆಯ ಮುಖದವ, ಮತ್ತೊಬ್ಬನು ಆರು ಮುಖದವನು ಎಂದು ನಸು ನಗುತ್ತ ಶಿವನ ಬಳಿಗೆ ಬಂದು ತನ್ನ ಬಲಭಾಗದಲ್ಲಿ ಗಣಪತಿಯನ್ನು ಕುಳ್ಳಿರಿಸಿದಳು. ಇದನ್ನು ಕಂಡ ಶಿವನು ಪಾರ್ವತಿ ಏಕೆ ? ನಗೆ? ಎಂದನು. ಪಾರ್ವತಿಯು ನಡೆದ ವಿಷಯ ತಿಳಿಸಿದಳು. ಶಿವನಿಗೂ ಪಾರ್ವತಿಗೂ ಮಗನ ಮೇಲೆ ಪ್ರೀತಿಯಾಗಿ ಏಕ ಕಾಲದಲ್ಲಿ ಗಣಪತಿಗೆ ಮುದ್ದು ಕೊಡಲು ಬಾಗಿದರು. ಇದನ್ನರಿತ ಗಣಪತಿಯು ತಾನೀಗ ಹಿಂದಕ್ಕೆ ಸರಿದರೆ ಹೇಗೆ ? ಎಂದು ಸರಿದನು. ಶಿವಪಾರ್ವತಿಯರಿಗೆ ಚುಂಬನವಾಯಿತು. ಆಗ ಗಣಪತಿಯು ಚಪ್ಪಾಳೆಇಟ್ಟು ಪಕಪಕನೆ ನಕ್ಕನು. ಈ ರೀತಿ ನಗುತ್ತಿರುವ ಶಿವಪಾರ್ವತಿ ಸಹಿತ, ನಮ್ಮನ್ನು ಕಾಪಾಡಲಿ ಎಂದಿರುವನು. ಗಣಪತಿಯು.

ನೀತಿ: ಅಣ್ಣತಮ್ಮಂದಿರ ಪ್ರೀತಿ, ತಾಯಿ–ತಂದೆಗಳ ಮಕ್ಕಳ ಪ್ರೇಮ ಸತಿಪತಿಗಳ ಆದರ್ಶ ಪ್ರೀತಿ.

ನಗೆಯಲ್ಲಿ ಇಪ್ಪತ್ತೊಂದು ಬಗೆಗಳಿವೆ:-

1 ಮುಗುಳುನಗೆ 2 ಅರಳುನಗೆ 3 ತುಂಬುನಗೆ 4 ಬಿರುನಗೆ 5 ಹುಚ್ಚುನಗೆ 6 ಹುಚ್ಚಾದನಗೆ 7 ಅಂತಸ್ಥಿತನಗೆ 8 ಕೋಪಗರ್ಭಸ್ಮಿತನಗೆ 9 ವಿಧಿಯವೀಕೃತ ಹಾಸನಗೇ 10 ರೋಡಾಟನಗೆ 11 ಕೊರಚಾಟನಗೆ 12 ನಲ್ನಗೆ 13 ತಣ್ನಗೆ 14 ಹುಸಿನಗೆ 15 ಬಿಸಿನಗೆ 16 ರಸನಗೆ 17 ಬಿರುಸುನಗೆ 18 ಕೆಣಕುನಗೆ 19 ಅಣಕುನಗೆ 20 ಗಹಗಹಿಸನಗೆ 21 ಚುನ್ನವಾಡಿನಗೆ ಹೀಗೆ ಇಪ್ಪತ್ತೊಂದು ಬಗೆಗಳಿದ್ದ ಕಾರಣ ಗಣಪತಿಗೆ 21 ಮೋದಕ (ಕಡುಬು)ಗಳನ್ನು ನೈವೇದ್ಯ ಮಾಡಲಾಗುತ್ತದೆ. ಮೋದ ಎಂದರೆ ಸಂತೋಷ 'ಕ' ಎಂದರೆ ಉಂಟು ಮಾಡುವುದು. "ಕಥೆ" ಎಂದರೆ "ಕ" ಸಂತೋಷವಾಗುವಂತೆ "ಥಾ" ಹೇಳುವುದು. ಇಂಥ 21 ಸಣ್ಣ ಕಥೆಗಳ ದೃಷ್ಟಾಂತಗಳಿಂದ ನಗೆನೀತಿ ರೂಪಿಸಲಾಗುವುದು.

# ತೋಟಗಾರಿಕೆ ಉದ್ಯಮ

ಡಿ. ವೆಂಕಟರಾವ್, ಎಂ.ಎ, ಅರ್ಥಶಾಸ್ತ್ರ ಪ್ರವಾಚಕರು, ಸರ್ಕಾರಿ ಕಲಾ ಕಾಲೇಜ್ ಹಾಸನ

ಕೃಷಿಯ ಒಂದು ಅಂಗವಾದ ತೋಟಗಾರಿಕೆಯು ರಾಜ್ಯದಲ್ಲಿ ಜನಪ್ರಿಯವಾಗುತ್ತಿರುವ ಉದ್ಯಮ. ನಮ್ಮರಾಜ್ಯದ ಮಣ್ಣು ಮತ್ತು ಹವಾಗುಣ ಸಮೃದ್ಧ ತೋಟಗಾರಿಕೆಗೆ ಸೂಕ್ತವಾಗಿದೆ. ಆಹಾರ ಸಮಸ್ಯೆಯ ಪರಿಹಾರದಲ್ಲಿ ತೋಟದ ಉತ್ಪನ್ನಗಳಾದ ಹಣ್ಣು, ತರಕಾರಿ, ಸೊಪ್ಪು ಮುಂತಾದವು ವಹಿಸುವ ಪಾತ್ರ ಅಮೂಲ್ಯವಾದವು. ಪೌಷ್ಟಿಕಾಹಾರ ದೃಷ್ಟಿಯಿಂದಲಂತೂ ತೋಟಗಾರಿಕೆಗೆ ಬಹಳ ಮಹತ್ವವಿದೆ.

ರಾಜ್ಯದಲ್ಲಿ ತೋಟಗಾರಿಕೆಗಾಗಿ ಒಂದು ಯೋಜಿತ ಅಭಿವೃದ್ಧಿ ಕಾರ್ಯಕ್ರಮ ಆರಂಭವಾದುದು ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ. ನಂತರದ ಪಂಚವಾರ್ಷಿಕ ಯೋಜನೆಗಳಲ್ಲಿ ಈ ಕ್ಷೇತ್ರ ಗಣನೀಯ ಯಶಸ್ಸನ್ನು ಗಳಿಸುತ್ತಿದೆ. ದ್ವಿತೀಯ ಯೋಜನೆಯ ನಾಲ್ಕನೆ ವರ್ಷದಲ್ಲಿದ್ದ ತೋಟಗಾರಿಕೆ ಕ್ಷೇತ್ರ 354 ಲಕ್ಷ ಹೆಕ್ಟೇರ್‌ಗಳು. ಅಂದರೆ ಒಟ್ಟು ಕೃಷಿ ಕ್ಷೇತ್ರದ ಶೇ. 3.5 ಭಾಗ. 1968-69ರ ವೇಳೆಗೆ 1.75ಲಕ್ಷ ಹೆಕ್ಟೇರ್ ಹೆಚ್ಚು ಭೂಮಿ ತೋಟಗಾರಿಕೆಗೆ ಒಳಪಟ್ಟು ಒಟ್ಟು ಕ್ಷೇತ್ರ 5.30ಲಕ್ಷ (ಶೇ. 5.2 ಭಾಗ) ಹೆಕ್ಟೇರ್‌ಗಳಷ್ಟಾಯಿತು. ಸದ್ಯಕ್ಕೆ 6.34ಲಕ್ಷ ಹೆಕ್ಟೇರ್ (ಒಟ್ಟು ಕ್ಷೇತ್ರದ ಶೇ. 6.3 ಭಾಗ) ಗಳಿಗಿಂತಲೂ ಹೆಚ್ಚು ಭೂಮಿ ತೋಟಗಾರಿಕೆಗೆ ಒಳಪಟ್ಟಿದೆ.

ತೋಟಗಾರಿಕೆ ಬೆಳೆಗಳ ವಿಶೇಷವೆಂದರೆ ಒಮ್ಮೆ ಸಸಿ ನಾಟಿ ಆರೈಕೆಮಾಡಿಕೊಂಡಿದ್ದರೆ. ಹಲವಾರು ವರ್ಷಗಳು ನಿರಂತರವಾಗಿ ಫಲನೀಡುವುದು. ಈ ಜಾತಿಗೆ ಸೇರಿದ ಹಣ್ಣಿನ ಗಿಡಗಳು, ತೆಂಗು, ಅಡಿಕೆ, ಗೋಡಂಬಿ, ಏಲಕ್ಕಿ, ಮೆಣಸು ಮೊದಲಾದ ಬೆಳೆಗಳು ಒಳ್ಳೆಯ ಹದ ಬೆಳೆಗಳು, ರೈತನ ಆರ್ಥಿಕ ಸ್ಥಿತಿ ಸುಧಾರಣೆ ಮಾತ್ರವಲ್ಲದೆ. ಈ ಬೆಳೆಗಳು ಅನೇಕ ಕೈಗಾರಿಕೆಗಳ ಆಹಾರ ವಸ್ತುಗಳೂ ಆಗಿವೆ, ಆ ಮೂಲಕ ಉದ್ಯೋಗಾವಕಾಶವನ್ನೂ ಕಲ್ಪಿಸುತ್ತಿವೆ. ಆದ್ದರಿಂದಲೇ ಕರ್ನಾಟಕದಲ್ಲಿ ತೋಟಗಾರಿಕೆಗೆ ಹೆಚ್ಚಿನ ಗಮನ ಹರಿಸಲಾಗಿದೆ.

ಹಣ್ಣಿನ ತೋಟಗಳು ಮತ್ತು ಅಡಿಕೆ, ತೆಂಗು ಮತ್ತಿತರ ತೋಟಗಳನ್ನು ಬೆಳೆಸಲು ದೀರ್ಘಕಾಲ ಬೇಕಾದರೂ ಬಹಳ ವರ್ಷಗಳಕಾಲ ಫಲ ನೀಡುವುದರಿಂದ ತೋಟಗಾರಿಕೆಯನ್ನು ಅತ್ಯಂತ ಎಚ್ಚರದಿಂದ ಮಾಡಬೇಕು. ಉತ್ತಮ ತಳಿಯ ಪೋಷಣೆಯ ಜೊತೆಗೆ ಸಂರಕ್ಷಣೆಯೂ ಮುಖ್ಯ. ಇವೆಲ್ಲ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ತೋಟಗಾರಿಕೆ ಇಲಾಖೆಯು ಅನೇಕ ಕಾರ್ಯಕ್ರಮಗಳನ್ನು ನಡೆಸುತ್ತದೆ. ಇಲಾಖೆಯು ಅಲ್ಲಲ್ಲಿ ಆರಂಭಿಸಿರುವ ತೋಟಗಾರಿಕೆ ಕ್ಷೇತ್ರಗಳ ಮೂಲಕ ರೈತರಿಗೆ ಅಗತ್ಯವಾದ ಉತ್ತಮ ತಳಿಯ ಸಸಿಗಳನ್ನು ಸುಲಭ ಬೆಲೆಗೆ ಕೊಡುವುದಲ್ಲದೆ. ತೋಟಗಾರಿಕೆಗೆ ಸಂಬಂಧಿಸಿದ ಸಲಹೆ, ಸೂಚನೆಗಳ ಮಾರ್ಗದರ್ಶನವನ್ನೂ ನೀಡುತ್ತದೆ.

ಕರ್ನಾಟಕದಲ್ಲಿ ತೋಟಗಾರಿಕೆ ಉದ್ಯಮವು ಆಧುನೀಕರಣಗೊಂಡಿದ್ದು. ಅವುಗಳ ಪದಾರ್ಥಗಳನ್ನು ವಿದೇಶಗಳಿಗೂ ಹೆಚ್ಚಿನ ಪ್ರಮಾಣದಲ್ಲಿ ರಫ್ತು ಮಾಡ-ಲಾಗುತ್ತಿದೆ. ತೋಟಗಾರಿಕೆ ಬೆಳೆಗಳಲ್ಲಿ ಮುಖ್ಯವಾದವು.

ಕಾಫಿ;- ಕರ್ನಾಟಕದಲ್ಲಿ ಪಶ್ಚಿಮ ಘಟ್ಟದ ಇಳಿಜಾರುಪ್ರದೇಶದಲ್ಲಿ ಕಾಫಿಯನ್ನು ಬೆಳೆಯಲಾಗುತ್ತದೆ. ಚಿಕ್ಕಮಂಗಳೂರು, ಶಿವಮೊಗ್ಗ, ಕೊಡಗು, ಹಾಸನ ಹಾಗೂ ಮೈಸೂರುಗಳಲ್ಲಿ ಸುಮಾರು 5000 ಕಾಫಿ ತೋಟಗಳಿವೆ, ಕೊಡಗು ಜಿಲ್ಲೆಯಲ್ಲಿ ಶೇ. 20 ಕ್ಕಿಂತ ಹೆಚ್ಚು ಭೂಮಿಯಲ್ಲಿ ಕಾಫಿಯನ್ನು ಬೆಳೆಯಲಾಗುತ್ತದೆ. ಕೊಡಗು ಮತ್ತು ಚಿಕ್ಕಮಗಳೂರು ಈ ಎರಡು ಪ್ರದೇಶಗಳಲ್ಲೇ ಶೇ. 85 ರಷ್ಟು ಕಾಫಿ ಬೆಳೆಯಲಾಗುತ್ತದೆ. ಭಾರತದಲ್ಲಿ ಅತ್ಯಧಿಕ ಪ್ರಮಾಣದಲ್ಲಿ ಕಾಫಿ ಬೆಳೆಯುವ ರಾಜ್ಯವೆಂದರೆ ಕರ್ನಾಟಕ. ದೇಶದ ಒಟ್ಟು ಕಾಫಿ ಉತ್ಪಾದನೆಯಲ್ಲಿ ಶೇ. 75 ರಷ್ಟು ಕಾಫಿಯನ್ನು ನಮ್ಮ ರಾಜ್ಯ ಪೂರೈಸುತ್ತದೆ. ಕಾಫಿ ಉತ್ಪಾದನೆಯಲ್ಲಿ ಏಕಸ್ವಾಮ್ಯವನ್ನು ಪಡೆದಿರುವ ಕರ್ನಾಟಕ ರಾಜ್ಯವು ಭಾರತೀಯ ಕಾಫಿ ಮಂಡಲಿ ಎಂಬ ಒಂದು ಸಮಿ-ತಿಯನ್ನು ಸ್ಥಾಪಿಸಿದೆ. ಈ ಸಮಿತಿಯು ಕಾಫಿ ಉತ್ಪಾದನೆಯನ್ನು ಹೆಚ್ಚಿಸಲುಹಾಗೂ ಮಾರಾಟ ಮಾಡಲು ಕ್ರಮ ಕೈಗೊಳ್ಳುತ್ತದೆ.

ನಮ್ಮ ರಾಜ್ಯದಲ್ಲಿ ಕಾಫಿ ಬೆಳೆಯು ಸುಮಾರು 1,30,000 ಹೆಕ್ಟೇರ್‌ಗಳಲ್ಲಿದ್ದು ಬರುತ್ತಿರುವ ವಾರ್ಷಿಕ ಉತ್ಪತ್ತಿ 10.000 ಟನ್ನುಗಳು. ಕಾಫಿಯಿಂದ ರಾಜ್ಯಕ್ಕೆ 20 ಕೋಟಿ ರೂಗಳಿಗೂ ಹೆಚ್ಚು ವಿದೇಶಿ ವಿನಿಮಯ ಬರುತ್ತದೆ. ಭಾರತದಲ್ಲಿ ಒಟ್ಟು 31 ಕಾಫಿ ಸಂಗ್ರಹಕಾರರಿದ್ದು, ಅದರಲ್ಲಿ 15 ಜನ ಕರ್ನಾಟಕದಲ್ಲೇ ಇದ್ದಾರೆ. ಕಾಫಿ ತೋಟಗಾರಿಕೆಯಲ್ಲಿ ಕರ್ನಾಟಕದಲ್ಲಿ ಸುಮಾರು 1,65 ಲಕ್ಷ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಕಾಫಿ ಉತ್ಪಾದನೆಯನ್ನು ಹೆಚ್ಚಿಸಲು, ಹೆಚ್ಚು ಇಳುವರಿ ನೀಡುವ ಹೊಸತಳಿಗಳನ್ನು ಕಂಡುಹಿಡಿಯಲು, ಕಾಫಿ ಬೆಳೆಗೆ ತಗಲುವ ರೋಗವನ್ನು ನಿವಾರಿಸಲು ಕರ್ನಾಟಕ ರಾಜ್ಯಸರಕಾರ ಬಾಳೆ ಹೊನ್ನೂರಿನಲ್ಲಿ ಕಾಫಿ ಸಂಶೋಧನಾ ಸಂಸ್ಥೆಯನ್ನು ಸ್ಥಾಪಿಸಿದೆ.

ತೆಂಗು;- ತೋಟಗಾರಿಕೆ ಕ್ಷೇತ್ರದಲ್ಲಿ ಹೆಚ್ಚುಭಾಗ ತೆಂಗಿನ ಬೆಳೆ. ಇದು ನಮ್ಮಲ್ಲಿ ಮುಖ್ಯವಾದ ಎಣ್ಣೆಬೀಜದ ಬೆಳೆಗಳಲ್ಲೊಂದು. ತೆಂಗಿನಮರದ ಪ್ರತಿಯೊಂದುಭಾಗವೂ ಯಾವುದಾದರೊಂದು ಪ್ರಯೋಜನಕ್ಕೆ ಬಂದೇ ಬರುತ್ತದೆ. ಇದರಿಂದಲೇ ಇದಕ್ಕೆ ಕಲ್ಪ ವೃಕ್ಷ ಎಂಬ ಹೆಸರಿದೆ. ಕರ್ನಾಟಕದ ಉತ್ತರಕನ್ನಡ ಮತ್ತು ದಕ್ಷಿಣ ಜಿಲ್ಲೆಗಳಲ್ಲಿ ಈ ಬೆಳೆಯನ್ನು ಹೆಚ್ಚಾಗಿ ಬೆಳೆಯಲಾಗುತ್ತದೆ. ಅಲ್ಲದೆ ಮೈಸೂರು, ನಂಜನಗೂಡು, ತಿಪಟೂರು, ಅರಸೀಕೆರೆಗಳಲ್ಲೂ ಬೆಳೆಯಲಾಗುತ್ತದೆ ಮಂಗಳೂರ್, ಅರಸೀಕೆರೆ, ತಿಪಟೂರ್‌ಗಳಲ್ಲಿ ಕೊಬ್ಬರಿಯಿಂದ ಎಣ್ಣೆಯನ್ನು ತೆಗೆಯುವ ಕಾರ್ಖಾನೆಗಳಿವೆ. ಈ ಎಣ್ಣೆಯು ಹೆಚ್ಚಿನ ಪ್ರಮಾಣದಲ್ಲಿ ವಿದೇಶಗಳಿಗೆ ರಫ್ತಾಗುತ್ತದೆ. ಕರ್ನಾಟಕದಲ್ಲಿರುವ 'ಕಾಯರ್‌ಬೋರ್ಡ್' ತೆಂಗಿನನಾರಿನ ಉದ್ದಿಮೆಗೆ ಬೇಕಾದ ಸಹಾಯ ಸಹಕಾರಗಳನ್ನು ನೀಡುತ್ತಿದೆ. ಕರ್ನಾಟಕ ರಾಜ್ಯದಲ್ಲಿ ತೆಂಗಿನ ಬೆಳೆಯನ್ನು ಸುಮಾರು 1.40.000 ಹೆಕ್ಟೇರ್‌ಗಳಲ್ಲಿ ಬೆಳೆಯಲಾಗುತ್ತಿದ್ದು ಇದರಿಂದ ಬರುತ್ತಿರುವ ವಾರ್ಷಿಕ ಉತ್ಪತ್ತಿ ಸುಮಾರು 750 ದಶಲಕ್ಷ ತೆಂಗಿನ ಕಾಯಿಗಳು.

**ಅಡಿಕೆ**:- ಇದು ನಮ್ಮ ರಾಜ್ಯದ ಮಲೆನಾಡು ಪ್ರದೇಶದ ಮುಖ್ಯವಾದ ಬೆಳೆಗಳಲ್ಲೊಂದು ಮೈದಾನ ಪ್ರದೇಶವಾದ ತುಮಕೂರು ಜಿಲ್ಲೆಯ ಕೆಲವು ಪ್ರದೇಶಗಳಲ್ಲಿಯೂ ಈ ಬೆಳೆ ಇದೆ. ಆದರೂ ಉತ್ತಮ ಇಳುವರಿ ಮಲೆನಾಡಿನ ಅಡಿಕೆ ತೋಟಗಳಲ್ಲಿ ಮಾತ್ರ ಸಾಧ್ಯ. ಕರ್ನಾಟಕ ಅಡಿಕೆಯ ಉತ್ಪಾದನೆಯಲ್ಲಿ ಮಹತ್ವದ ಸ್ಥಾನ ಪಡೆದಿದ್ದು, ಅದು ದೇಶದ ಒಟ್ಟು ಉತ್ಪಾದನೆಯಲ್ಲಿ ಶೇ 3೦ರಷ್ಟು ಅಡಿಕೆಯನ್ನು ಪೂರೈಸುತ್ತದೆ. ಕೇರಳದಲ್ಲಿ ಹೆಚ್ಚಿನ ಪ್ರದೇಶದಲ್ಲಿ ಅಡಿಕೆಯನ್ನು ಬೆಳೆಯುತ್ತಿದ್ದರೂ ಅದರ ಪ್ರಮಾಣ ಕರ್ನಾಟಕಕ್ಕಿಂತಲೂ ಕಡಿಮೆ ಇದೆ. ವಿತ್ತಾಳ ಎಂಬಲ್ಲಿ ತೆರೆಯಲಾಗಿರುವ ಕೇಂದ್ರೀಯ ಅಡಿಕೆ ಸಂಶೋಧನಾ ಕೇಂದ್ರವು ಕರ್ನಾಟಕ ಹಾಗೂ ಇತರ ರಾಜ್ಯಗಳಲ್ಲಿ ಪ್ರಾದೇಶಿಕ ಕೇಂದ್ರಗಳನ್ನು ಹೊಂದಿದೆ ಇದು ಅಡಿಕೆ ಬೆಳೆಯ ಉತ್ಪಾದನೆಯನ್ನು ಹೆಚ್ಚಿಸಲು ಕ್ರಮಗಳನ್ನು ಕೈಗೊಳ್ಳುತ್ತದೆಯಲ್ಲದೆ ಅಡಿಕೆಬೆಳೆಗೆ ತಗಲುವ ರೋಗಗಳನ್ನು ತಡೆಯಲು ಕ್ರಮ ಕೈಗೊಳ್ಳುತ್ತದೆ. ಕರ್ನಾಟಕ ರಾಜ್ಯದಲ್ಲಿ ಅಡಿಕೆ ಬೆಳೆಯನ್ನು ಸುಮಾರು 47,000 ಹೆಕ್ಟೇರ್‌ಗಳಲ್ಲಿ ಬೆಳೆಯುತ್ತಿದ್ದು, ವಾರ್ಷಿಕ ಉತ್ಪತ್ತಿ 75,000 ಟನ್‌ಗಳಾಗಿವೆ.

**ಏಲಕ್ಕಿ** :- ಇದು ವರ್ಷದಲ್ಲಿ 60 ಅಂಗುಲಕ್ಕೂ ಹೆಚ್ಚು ಮಳೆ ಬೀಳುವ ಪ್ರದೇಶದ ಬೆಳೆ. ಪ್ರಪಂಚದ ಉತ್ಪಾದನೆಯಲ್ಲಿ ಶೇ 70ರಷ್ಟು ನಮ್ಮ ದೇಶದಲ್ಲಿಯೇ ಆಗುತ್ತಿದೆ. (ವರ್ಷಕ್ಕೆ ಸುಮಾರು 3800 ಟನ್ನುಗಳು) ಈ ಬೆಳೆಯು ಕೇರಳ, ಕರ್ನಾಟಕ ಹಾಗೂ ತಮಿಳುನಾಡು ರಾಜ್ಯಗಳಲ್ಲೇ ವ್ಯಾಪಿಸಿದೆ ಕರ್ನಾಟಕದಲ್ಲಿ ಈ ಬೆಳೆಯನ್ನು ಕೊಡಗು, ಹಾಸನ, ಚಿಕ್ಕಮಗಳೂರು ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಬೆಳೆಯಲಾಗುತ್ತದೆ. ದೇಶದಲ್ಲಿ ಏಲಕ್ಕಿ ಬೆಳೆಯುವ ಪ್ರದೇಶದಲ್ಲಿ 1/3 ಭಾಗದಷ್ಟು ಕರ್ನಾಟಕದಲ್ಲೇ ಇದೆ ಎನ್ನಲಾಗಿದೆ. ಕರ್ನಾಟಕದಲ್ಲಿ ಏಲಕ್ಕಿ ಉತ್ಪಾದನೆ ಮತ್ತು ಮಾರಾಟವನ್ನು ಸುಧಾರಿಸಲು 1 ಏಲಕ್ಕಿ ಮಂಡಲಿಯನ್ನು ಸ್ಥಾಪಿಸಲಾಗಿದೆ. ನಮ್ಮ ರಾಜ್ಯದಲ್ಲಿರುವ ಏಲಕ್ಕಿ ಬೆಳೆಯ ವಿಸ್ತೀರ್ಣ ಸುಮಾರು 20,000 ಹೆಕ್ಟೇರುಗಳು, ವಾರ್ಷಿಕ ಉತ್ಪಾದನೆ ಸುಮಾರು 350 ಟನ್‌ಗಳು.

ಗೋಡಂಬಿ :- ಇದಕ್ಕೆ ಗೇರುಬೀಜ ಎಂಬ ಹೆಸರೂ ಇದೆ. ಇದರ ಉತ್ಪಾದನೆಯ ದೃಷ್ಟಿಯಿಂದ ಭಾರತವು ಪ್ರಪಂಚದಲ್ಲೇ ಮೊದಲನೆಯ ಸ್ಥಾನ ಪಡೆದಿದೆ. ಈ ಬೆಳೆಯನ್ನು ಮುಖ್ಯವಾಗಿ ಉತ್ತರ ಕನ್ನಡ, ದಕ್ಷಿಣ ಕನ್ನಡ, ಮತ್ತು ಮಲೆನಾಡಿನ ಇತರ ಜಿಲ್ಲೆಗಳಲ್ಲಿ ಬೆಳೆಯಲಾಗುತ್ತಿದೆ. ದೇಶದ ಒಟ್ಟು ಗೋಡಂಬಿ ಉತ್ಪಾದನೆಯ ಶೇ. 8 ರಷ್ಟನ್ನು ಕರ್ನಾಟಕ ರಾಜ್ಯವೇ ಉತ್ಪಾದಿಸುತ್ತದೆ. ರಾಜ್ಯದಲ್ಲಿ ಈ ಬೆಳೆಯನ್ನು ಸುಮಾರು 18,000 ಹೆಕ್ಟೇರುಗಳಲ್ಲಿ ಬೆಳೆಯಲಾಗುತ್ತಿದ್ದು, ವಾರ್ಷಿಕ ಉತ್ಪತ್ತಿ 22,000 ಟನ್‌ಗಳಾಗಿವೆ. ನಮ್ಮ ರಾಜ್ಯದಲ್ಲಿ ಬೆಳೆಯುವ ಗೋಡಂಬಿಯು ಶ್ರೇಷ್ಠವೆನಿಸಿರುವುದರಿಂದ ಅದನ್ನು ಅಮೇರಿಕಾ, ಇಂಗ್ಲೆಂಡ್, ಮುಂತಾದ ರಾಷ್ಟ್ರಗಳಿಗೆ ರಫ್ತು ಮಾಡಲಾಗುತ್ತದೆ. ಹೀಗೆ ದೇಶವಿದೇಶಗಳಲ್ಲಿ ಗೋಡಂಬಿಗೆ ಬೇಡಿಕೆ ಹೆಚ್ಚಾಗಿರುವುದರಿಂದ ಅದರ ಉತ್ಪಾದನೆಯನ್ನು ಹೆಚ್ಚಿಸಲು ಸರಕಾರ ತೀವ್ರ ಕ್ರಮಗಳನ್ನು ಕೈಗೊಳ್ಳುತ್ತಿದೆ

## ಜನನ--ಬಾಲ್ಯ-"ವರತಪಸ್ವಿ"

ಅನಂತ ಕೋಟಿ ಸೂರ್ಯಕಿರಿಣ ಸುವ್ವಲಾಲಿ--
ಪ್ರಕಾಶ ಭರಿತ ಪ್ರಥಮ ಜಿನೇಶಗೆ ನಮನ ಸುವ್ವಲಾಲಿ--
ರತ್ನಕೀರಿಟ ಕಾಂತಿ ಹರೆಸುತ್ತಾ--ಸುವ್ವಲಾಲಿ
ಲಕ್ಷಲಕ್ಷ ಸುರರು ಬಂದು ನಮಿಸುವ--ನಿನ್ನ ಪಾದಕೆ ಶರಣೆಂದೆ ಸುವ್ವಲಾಲಿ

ಜೈನರ ಆದಿಗುರು ಪ್ರಥಮ ಜಿನೇಶನನ್ನು ಸ್ಮರಿಸುತ್ತ--ವರತಪಸ್ವಿಗಳಂತೆ ಬಾಳಿದ ದಿವ್ಯ ಚೈತನ್ಯ ಎಂದು ಜನಸಾಮಾನ್ಯರಿಂದ ಖ್ಯಾತರಾದ ಶ್ರೀ|| ಮಂಜಯ್ಯಹೆಗ್ಗಡೆ ಅವರ ಬಗ್ಗೆ ಜಾನಪದ ಕಾವ್ಯಲಹರಿ ಬಿತ್ತರಿಸುತ್ತೇನೆ.

ಪರಮ ಭಗವದ್ ಭಕ್ತರಾಗಿ ಬಾಳಿದ ಶ್ರೀ|| ಶ್ರೀ|| ಮಂಜಯ್ಯ ಹೆಗ್ಗಡೆಯವರ ಬಗ್ಗೆ ಬರೆಯುವ ಮೊದಲು ಅನಂತ ಕೋಟಿ ಸೂರ್ಯ ಪ್ರಕಾಶದಿಂದ ಬೆಳಗುವ ಪ್ರಥಮ ಜಿನೇಶನಿಗೆ ವಂದಿಸುತ್ತೇನೆ. ಲಕ್ಷಲಕ್ಷ-ದೇವತೆಗಳು ರತ್ನಕಿರೀಟ ಸಹಿತವಾದ ತಮ್ಮ ತಲೆಯನ್ನು ಯಾರ ಪಾದದಲ್ಲಿ ಶರಣಾಗಿ ನಮಿಸುತ್ತಾರೋ-ಆ ಪ್ರಥಮ ಜಿನೇಶನ ಕಾಂತಿಯುತ ಪಾದಗಳಿಗೆ ನಮಸ್ಕಾರ.

ಇಪ್ಪತ್ನಾಲ್ಕು ತಿರ್ಥಂಕರರು ಸುವ್ವಲಾಲಿ ।
ಒಪ್ಪದಲ್ಲಿ ಹರಿಸಿದ ಶಿಶುವಿದು ಸುವ್ವಲಾಲಿ ॥
ಸತ್ವ ತೇಜಸ್ಸುಭರಿತ ಕಾಂತಿಯುತ ಶಿಶುವೆಂದ್ರೋ--ಸುವ್ವಲಾಲಿ
ಅಪ್ಪಾ-ಅಣ್ಣ ಶೆಟ್ರ-ಪುಣ್ಯಶಿಶುವೆಂದ್ರೋ--ಸುವ್ವಲಾಲಿ

ಪುತ್ತೂರು ತಾಲೂಕಿನ ವಿಟ್ಲದ ಬಳಿ ಇರುವ ಕೇಪ್ಯುಗ್ರಾಮದಲ್ಲಿ ಪದ್ಮಶೆಟ್ಟರ ಮನೆತನ ಹೆಸರಾದದ್ದು. ವಿಟ್ಲದ ಅರಸರಿದಲೂ, ಕೆಲವು ಗ್ರಾಮದ ಹಿರಿಯರಿಂದಲೂ- ಈ ಕುಟುಂಬದವರಿಗೆ ಪ್ರಥಮ ಮರ್ಯಾದೆಗಳು ಸಲ್ಲುತ್ತಿದ್ದವು. ಶ್ರೀ ಪದ್ಮಶೆಟ್ಟರಿಗೆ ಜನರೆಲ್ಲಾ ಅಣ್ಣಾ ಶೆಟ್ಟರೆಂದು ಕರೆಯುತ್ತಿದ್ದರು. ಊರಿನ ಎಲ್ಲಾ ಜನರಿಗೂ--ಇವರು ಹಿರಿಯಣ್ಣನಾಗಿ ನಿಂತು ಅವರ ಕಷ್ಟಸುಖಗಳನ್ನು ವಿಚಾರಿಸಿ ಕೊಳ್ಳುತ್ತಿದ್ದರು. ಪರೋಪಕಾರಿಗಳಾದ ಹಾಗೂ ಊರಿನ ಪ್ರಥಮ ಮರ್ಯಾದೆ ಸಲ್ಲುವ ಇಂಥಾ ಮನೆತನದಲ್ಲಿ ಶ್ರೀ ಅಣ್ಣಶೆಟ್ಟರ-- ಮೊದಲ ಮಗನಾಗಿ ಶ್ರೀ ಮಂಜಯ್ಯ ಹೆಗ್ಗಡೆಯವರು ಜನಿಸಿದರು. ಸತ್ವ, ತೇಜಸ್ಸಿನಿಂದ ಕಂಗೊಳಿಸುವ-- ಆ ಮಗುವನ್ನು ಕಂಡು ಊರಿನವರು ಹಿಗ್ಗಿ

ಇಪ್ಪತ್ನಾಲ್ಕು . ತೀರ್ಥಂಕರರ ಆಶೀರ್ವಾದದಿಂದ ಹುಟ್ಟಿದ ಶಿಶು - ಅಣ್ಣ ಶೆಟ್ರ-ಪುಣ್ಯದ ಫಲವೇ ತಾನಾಗಿ ಉದಿಸಿ ಬಂದ ಶಿಶು-- ಮುಂದೆ ಬಹಳ ಖ್ಯಾತನಾಗುತ್ತಾನೆ. ನಾಡಿನ ಸುಪ್ರಸಿದ್ಧನಾಗುತ್ತಾನೆ-- ಎಂದು ಹಿರಿಯರು ಹರಸಿದರು.

ತಾಳ್ಮೆ ತಪಸ್ಸು, ದೈವಭಕ್ತಿ ಸುವ್ವಲಾಲಿ--
ತಾಯಿ ಯಿಂದ ಕಲಿತ ಪಾಠಗಳು--ಸುವ್ವಲಾಲಿ ॥
ಪರೋಪಕಾರ, ಪರಧರ್ಮ ಸಹಿಷ್ಣುತೆ ಸುವ್ವಲಾಲಿ
ತಂದೆಯಿಂದ ಕಲಿತ ಪಾಠಗಳಾಯ್ತು ಸುವ್ವಲಾಲಿ ॥

ಶ್ರೀ ಮಂಜಯ್ಯನವರ ಬಾಲ್ಯಜೀವನ ಸುಂದರ--- ಸುಮಧುರವಾಗಿತ್ತು, ಹೆತ್ತತಾಯಿ ಅನಂತಮತಿ ಅಮ್ಮನಿಗೆ ಬದುಕೇ ಒಂದು ತಪಸ್ಸು, ಆಕೆ ಅಕ್ಷರಾಭ್ಯಾಸವನ್ನು ಬಲ್ಲವರಲ್ಲ. ಆದರೆ ಪತಿಭಕ್ತಿ, ದೈವಭಕ್ತಿ, ಸಂಸಾರದ ಎಲ್ಲಾ ಕೆಲಸವನ್ನು ತಾಳ್ಮೆಯಿಂದ ನಿರ್ವಹಿಸಿ ಕಾಲಕಾಲಕ್ಕೆ ಆಗಬೇಕಾದ ಎಲ್ಲಾ ಹಬ್ಬ, ಹರಿದಿನ, ವ್ರತ, ನೋಹಿ, ನಾನಾ-ಬಗೆಯ ಕೆಲಸಗಳನ್ನು ಸಾಂಗವಾಗಿ ಮಾಡುತಿದ್ದರು. ಅತಿಥಿ ಸತ್ಕಾರ- ಕಷ್ಟದಲ್ಲಿ ಬೇಡಲು ಬಂದ ಹೆಣ್ಣುಮಕ್ಕಳಿಗೆ ಕೈಲಾದ ನೆರವು ನೀಡಿ ಕಳಿಸುವುದು-- ಇದು ಆಕೆಯ ಬದುಕು.

ಮನೆಯೆ ಮೊದಲ ಪಾಠಶಾಲೆ ಎಂಬಂತೇ ತಾಯಿಯ ಸದ್ಗುಣಗಳು ಮಗು ಮಂಜಯ್ಯನ ಮೇಲು ಪರಿಣಾಮ ಮೂಡಿತು. ಮುಂದೆ ಈ ಮಗು ಹಲವರ ಪಾಲಿಗೆ ಪರೋಪಕಾರಿಯಾಗಿ ಪರಹಿತಕ್ಕಾಗಿಯೆ ದುಡಿಯುವ ವ್ಯಕ್ತಿತ್ವ ಬೆಳೆಸಿಕೊಳ್ಳಲು ತಾಯಿಯ ಈ ಸದ್ಗುಣಗಳು ಕಾರಣವಾಯಿತು.

ತಂದೆ ಅಣ್ಣಶೆಟ್ಟರದು ಗೌರವಪೂರ್ಣವಾದ ವ್ಯಕ್ತಿತ್ವ. ಆ ಗ್ರಾಮದಲ್ಲೇ ಅವರು ಜನಪ್ರಿಯರು, ಸಾಹಿತ್ಯ, ಸಂಗೀತ ಆಸ್ವಾದನೆಯಲ್ಲಿ ರಸಿಕರು. ಮಗು ಮಂಜಯ್ಯ-ಬರಿ ಆಸ್ವಾದನೆ ಮಾತ್ರವಲ್ಲದೇ ಲಲಿತಕಲೆಗಳಲ್ಲಿ-- ಪರಿಣಿತಿ ಪಡೆದಿದ್ದಲ್ಲದೆ ಸಾಹಿತಿಗಳಿಗೆ, ವಿದ್ವಾಂಸರಿಗೆ ಆಶ್ರಯದಾತನಾಗಿಯೂ ಮುಂದೆ ಬೆಳಗಲು ತಂದೆಯ ಈ ನಡವಳಿಕೆ ಕಾರಣವಾಯಿತು. ಮುಂದಾಳತ್ವ-- ಹತ್ತು ಜನಕ್ಕೆ ಬೇಕಾದವನಾಗಿ ಬಾಳುವುದು-- ಇದೆಲ್ಲಾ ತಂದೆಯಿಂದ ಬಂದ ಬಳುವಳಿಗಳಾಯಿತು.

ವಿಟ್ಲಾದ ಶಾಲೆಯಲ್ಲಿಸುವ್ವಲಾಲಿ ॥ ಅಕ್ಷರಾಭ್ಯಾಸವಾಯ್ತು ಸುವ್ವಲಾಲಿ
ಸತ್ಯಶ್ರೀಕ್ಷೇತ್ರದಲ್ಲಿ ಸುವ್ವಲಾಲಿ ॥ ಮತ್ತೆ ಮುಂದುವರಿಯಿತೊ--ಸುವ್ವಲಾಲಿ

ಸರಿ- ತಂದೆ ತಾಯಿಗಳಿಂದ ಕಲಿತ ಸದ್ಗುಣಗಳಲ್ಲದೇ ಲೌಕಿಕ ವಿದ್ಯಾಭ್ಯಾಸವೂ ಬೇಕ-

ಲ್ಲವೇ ? ವಿಟ್ಲದ ಶಾಲೆಯಲ್ಲಿ ಆರಂಭದ ಪ್ರಾಥಮಿಕ ಶಾಲೆಯಲ್ಲಿ ನಾಲ್ಕನೆಯ ತರಗತಿಯವರಿಗೆ ಕಲಿತರು. ಬಾಲಕ ಮಂಜಯ್ಯ ಮನೆಯ ಕಣ್ಮಣಿ, ತಾಯಿ.. ಹಾಗೂ ಅಜ್ಜಿಯರ ಕಣ್ಣಿನ ದೀಪಾ.. ಈ ಮುದ್ದು ಮಗುವನ್ನು ವಿದ್ಯಾಭ್ಯಾಸದ ಸಲುವಾಗಿ ದೂರದ ಊರುಗಳಿಗೆ ಕಳಿಸಲು.. ತಾಯಿ ಅಜ್ಜಿಗೆ ಇಷ್ಟವಿಲ್ಲ. ವಿಟ್ಲ ಹಾಗೂ ಧರ್ಮಸ್ಥಳಗಲ್ಲಿ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಅನುಕೂಲವಿರಲಿಲ್ಲ.

ಒಬ್ಬ ಖಾಸಗಿ ಉಪಾಧ್ಯಾಯರನ್ನು ನೇಮಿಸಿ ಇಂಗ್ಲಿಷ್ ಕಲಿಸುವ ವ್ಯವಸ್ಥೆ ಮಾಡಲಾಯಿತು. ಈ ಮಧ್ಯೆ ಒಂದು ಲೌಕಿಕ ವಿಘ್ನ ಬೇರೆ ಪ್ರಾಪ್ತವಾಯಿತು.

ಬಾಲಕರೊಡನಾಡುವಾಗ ಸುವ್ವಲಾಲಿ ||
ಬಾಲ ಮಂಜಯ್ಯ ಮೇಲಿನಿಂದ ಕೆಳಗೆ ಬಿದ್ದ ಸುವ್ವಲಾಲಿ
ಕಾಲು ಉಳುಕಿ ಮೂಳೆ ಸರಿದು ಸುವ್ವಲಾಲಿ.
ಭಾಳ ದಿನಗಲು ವೈದ್ಯಕೆ ನಡೆಯಿತು ಸುವ್ವಲಾಲಿ.

ಬಾಲಕರೊಡನೆ ಆಡುವಾಗ ಎತ್ತರದಿಂದ ಕೆಳಗೆ ಬಿದ್ದ ಮಂಜಯ್ಯನಿಗೆ. ಕಾಲಿನ ಮೂಳೆ ಸರಿದು ಏಳಲಾಗದೆ ಇರುವಷ್ಟು ಹಿಂಸೆಯಾಯ್ತು. ಎರಡು ವರ್ಷಗಳ ಕಾಲ ಮಲಗಿದಲ್ಲಿಯೆ ಔಷದೋಪಚಾರ ನಡೆಯಿತು. ದೇವರ ಕೃಪೆ ದೊಡ್ಡದು, ಬಾಲಕ ಮಂಜಯ್ಯ. ಸಂಪೂರ್ಣ ಗುಣಹೊಂದಿದ. ಬಾಲಕ ಮಂಜಯ್ಯನಲ್ಲಿ ವಿದ್ಯಾಭ್ಯಾಸದ ಹಂಬಲ ತುಡಿಯುತ್ತಿತ್ತು. ಕಡೆಗೆ ಹದಿನಾರನೆಯ ವಯುಸ್ಸಿನಲ್ಲಿ ಪುತ್ತೂರಿಗೆ ಹೋಗಿ ಮಾಧ್ಯಮಿಕ ಶಾಲೆಯ ವಿದ್ಯಾಭ್ಯಾಸ ಪೂರೈಸಿದರು.

ಶಾಂತಪ್ಪಶೆಟ್ಟರ ಮನೆಯಲ್ಲಿ ನೆಲಿಸಿ ಸುವ್ವಲಾಲಿ ||
ಶಾಂತವಾಗಿ ವಿದ್ಯೆಕಲಿತರೊ ಸುವ್ವಲಾಲಿ ||
ಸ್ವಂತವಾಗಿ ರೂಡಿಸಿಕೊಂಡ ಚಿತ್ರಕಲೆಯಲ್ಲಿ ಸುವ್ವಲಾಲಿ ||
ಅತ್ಯಂತ ಪ್ರಗತಿ ಸಾಧಿಸಲುತ್ಸಾಹವಿತ್ತು ಸುವ್ವಲಾಲಿ ||

ಶಾಂತಪ್ಪಶೆಟ್ಟರ ಮನೆಯಲ್ಲಿ ಪುತ್ತೂರಿನಲ್ಲಿ ನೆಲೆಸಿ ಮಾಧ್ಯಮಿಕ ಶಾಲೆ ವಿದ್ಯಾಭ್ಯಾಸ ಪೂರೈಸಿದ್ದಾಯ್ತು ಸ್ವಂತವಾಗಿ ಒಲಿದುಬಂದ ಚಿತ್ರಕಲೆಯಲ್ಲಿಯೂ ದಿನದಿನಕ್ಕೆ ಪರಿಣಿತರಾಗುತ್ತಿದ್ದರು ಆದರೂ ಅವರ ಮನಸ್ಸಿನಲ್ಲಿ ಅವ್ಯಕ್ತ ಕಲಾದಾಹಾ - ಈ ಕಲೆಯನ್ನು ಶಾಸ್ತ್ರೋಕ್ತವಾಗಿ ಕಲಿಯಲು ಒಳ್ಳೆ ಗುರುಗಳು ಬೇಕು. ಕಲೆಗೆ ಸೊಗಸಾದ ಪರಿಸರ ಬೇಕು. ಆಗ ಈ ಕಲೆಯನ್ನು ಇನ್ನು ಉನ್ನತವಾಗಿ ಅಭಿವ್ಯಕ್ತಿಸಲು ಸಾಧ್ಯ-- ಇದು ವಿದ್ಯಾರ್ಥಿ ಮಂಜಯ್ಯನ ಆಸೆ. ಈ ಆಸೆಗೆ ನೀರೆರೆವಂತೆ ಅಜ್ಜರು.. ಹಿರಿಯರು-- ಮುಂಬೈ ಆರ್ಟ್‌ಸ್ಕೂಲ್‌ನಲ್ಲಿ ಸೇರಿ ನಿಯಮಬದ್ಧ ಶಿಕ್ಷಣಾ ಪಡಿ, ನೀನೊಬ್ಬ ಹೊಡ್ಡ ಕಲಾವಿದನಾಗಿ ಹೆಸರು ಗಳಿಸುವೆ" ಎನ್ನುತಿದ್ದರು. (ಸಶೇಷಾ)

ಸಿದ್ಧಗಂಗಾ

## ಎರೆಹುಳುವಿನ ಮಾರಾಟ ( ಆಧಾರಿತ :- ಹಿಂದಿಯಿಂದ )

ಬಿ. ಸುಬ್ರಾಯ ಅಡಿಗ. ನಿವೃತ್ತ ಅಧ್ಯಾಪಕರು. ಸಂಡೂರು. ಬಳ್ಳಾರಿ-ಜಿಲ್ಲೆ.

ಸುಮಾರು ಒಂದು ದಶಕದ ಹಿಂದೆ ಪತ್ರಿಕೆಗಳಲ್ಲಿ ಎರೆಹುಳುಗಳಿಗೆ ಸಂಬಂಧಿಸಿದ ಎರಡು ಸುದ್ದಿಗಳು ಪ್ರಕಟವಾದವು-ಥೈಲ್ಯಾಂಡ್ ಅಮೇರಿಕೆಯಿಂದ ಎರೆಹುಳುಗಳನ್ನು ಆಮದು ಮಾಡಿಕೊಂಡಿತು. ಥೈಲ್ಯಾಂಡಿನಲ್ಲಿ ಹರಡಿದ್ದ ಕಸಕಡ್ಡಿಗಳನ್ನು ಸ್ವಚ್ಛ-ಗೊಳಿಸುವುದೇ ಅವುಗಳ ಕೆಲಸ. 'ರೆಡ್ ರಿಗಲರ್' ಎಂಬ ಎರೆಹುಳು ದಿನಾಲೂ ತನ್ನ ದೇಹದ ಭಾರದಷ್ಟು ಕಸವನ್ನು ಸ್ವಚ್ಛಗೊಳಿಸುತ್ತದಂತೆ.

ಎರಡನೇ ಸುದ್ದಿಯ ಪ್ರಕಾರ ಬೇರೆ ಬೇರೆ ದೇಶಗಳಲ್ಲಿ ಎರೆಹುಳುವನ್ನು ಆಹಾರವಾಗಿ ಬಳಸುವ ಬಗ್ಗೆ ಹೊಸ ಹೊಸ ಪ್ರಯೋಗಗಳು ನಡೆಯುತ್ತಿವೆ.

ಎರೆಹುಳು ಪ್ರಾಕೃತಿಕವಾಗಿ ರೈತ ಜಾತಿಗೆ ಸೇರಿದ ಜೀವಿ. ಇದು ನೆಲವನ್ನು ಉತ್ತು ಹಸನುಗೊಳಿಸುತ್ತದೆ. ಮಳೆ ಬಂದಾಗ, ಅದರ ನೀರು ನೆಲದ ಮೇಲೆ ಹರಿದು ಹೋಗುವ ಬದಲು ಎರೆಹುಳುಗಳು ತಯಾರಿಸಿದ ಬಿಲಗಳೊಳಗೆ ಇಳಿಯುತ್ತದೆ. ಎರೆಹುಳು ಹುಲ್ಲಿನ ಚೂರು; ಎಲೆ ಹಾಗೂ ಸತ್ತ ಹುಳು ಹುಪ್ಪಟೆಗಳನ್ನು ತನ್ನ ಬಿಲದೊಳಗೆ ಎಳೆದೊಯ್ಯುತ್ತದೆ. ಈ ರೀತಿ ನೆಲ ಫಲವತ್ತಾಗುವಂತೆ ಮನುಷ್ಯನಿಗೆ ನೆರವಾಗುತ್ತದೆ ಈ ಕಸಕಡ್ಡಿಯ ಮೇಲೆಯೇ ಅದು ಬದುಕುತ್ತದೆ. ಕಾರಣಾಂತರದಿಂದ ಅದು ಸತ್ತಿತೆಂದರೆ ಸ್ವತಃ ಗೊಬ್ಬರವಾಗುತ್ತದೆ.

### ಎರೆಹುಳು ಇರದಿದ್ದರೆ ಮನುಷ್ಯನೂ ಇಲ್ಲ!

ಎರೆಹುಳುಗಳೇ ಇರದೆ ಹೋದರೆ ಮನುಷ್ಯನ ಅಸ್ತಿತ್ವವೇ ಇಲ್ಲವೆಂದು ಎದೆ-ತಟ್ಟಿ ಸಾರುವ ಕೃಷಿ ವಿಜ್ಞಾನಿಗಳು ಬಹಳಷ್ಟಿದ್ದಾರೆ; ಅವರ ಈ ಹೇಳಿಕೆಗೆ ಕಾರಣ-ವೇನೆಂದನೆ ಮನುಷ್ಯ ಹಾಗೂ ಭೂಮಿಯ ಅಸ್ತಿತ್ವ ವನಸ್ಪತಿಗಳನ್ನವಲಂಬಿಸಿದೆ. ವನಸ್ಪತಿಗೆ ಎರೆಹುಳುವೇ ಆಹಾರ. ಏಕೆಂದರೆ ಅದು ಭೂಮಿಗೆ ಗೊಬ್ಬರಕೊಡುತ್ತದೆ. ಜೀವಂತವಾಗಿದ್ದಾಗಷ್ಟೇ ಅಲ್ಲ–ಸತ್ತಮೇಲೂ ಅದು ಗೊಬ್ಬರವಾಗಿ ನೆಲದೊಳಗೆ ಸೇರಿಹೋಗುತ್ತದೆ. ಹೀಗಾಗಿ ಎರೆಹುಳುವೇ ಇಲ್ಲದಿದ್ದರೆ ಮಾನವ ಜಾತಿಯೇ ಇರದು.

ಆದರೆ ಕೆಲವರು ಈ ಮಾತನ್ನು ಒಪ್ಪುವುದಿಲ್ಲ. ರೈತರಿಗೆ ಎರೆಹುಳು ಸಹಾಯ ಮಾಡುವುದು ನಿಜವಾದರೂ ಅದರ ಮಹತ್ವವನ್ನು ತುಂಬಾ ಹೆಚ್ಚಾಗಿ ವರ್ಣಿಸ-ಲಾಗಿದೆಯೆಂದು ಅವರ ಹೇಳಿಕೆ. ಅವರ ಈ ಹೇಳಿಕೆಗೆ ಆಧಾರವೆಂದರೆ ರೈತ ಗದ್ದೆ ಉಳುವಾಗ ಹೆಚ್ಚಿನ ಎರೆಹುಳುಗಳು ಸತ್ತುಹೋಗುತ್ತವೆ. ಸಾಮಾನ್ಯವಾಗಿ ಒಂದು ಎಕ್ರೆ ನೆಲದಲ್ಲಿ ೧೦ ಲಕ್ಷ ಎರೆಹುಳುಗಳಿರುತ್ತವೆ. ಉತ್ತ ಬಳಿಕ ಮೂರು ಲಕ್ಷ ಹುಳು-ಗಳು ಮಾತ್ರ ಉಳಿದುಕೊಳ್ಳುತ್ತವೆ.

## ನಷ್ಟ ಭರ್ತಿಗಾಗಿ ಆಮದು

ಈ ಹಾನಿಯನ್ನು ತುಂಬಿಕೊಳ್ಳಲು 'ಏಳು ಲಕ್ಷ ಎರೆಹುಳಗಳನ್ನು ಆಮದು ಮಾಡಿಕೊಳ್ಳಲು ಪ್ರಯತ್ನಿಸಲಾಯಿತು. ಆಮದು ಮಾಡಿಕೊಂಡ ಎರೆ ಹುಳುಗಳು ನೆಲವನ್ನು ಫಲವತ್ತಾಗಿ ಮಾಡಲು ನೆರವಾಗುವುದಾದರೂ ಈ ನೆರವು ಅವುಗಳ ಮೃತ ದೇಹಗಳಿಂದಲೇ ದೊರೆಯುವುದರಿಂದ ತಾತ್ಕಾಲಿಕವಾದುದು. ನೇಗಿಲು ಹಾಗೂ ಇತರ ಯಂತ್ರಗಳ ಗಂಡಾಂತರ ಯಾವಾಗಲೂ ಇರುವಲ್ಲಿ ಎರೆಹುಳುಗಳು ತಮ್ಮ ಮನೆ ಕಟ್ಟಿಕೊಳ್ಳಲು ತಯಾರಾಗವುದಿಲ್ಲ.

ಹೀಗಾಗಿ ಎರೆಹುಳುಗಳು ತನ್ನ ಹೊಲದಲ್ಲಿರಲಿ, ಬಿಡಲಿ- ಆಧುನಿಕ ರೈತ ಆ ಬಗ್ಗೆ ತಲೆಕೆಡಿಕೊಳ್ಳಬೇಕ್ಕಾಗಿಲ್ಲವೆಂದು ವನಸ್ಪತಿ ಶಾಸ್ತ್ರಿಗಳು ಶೋಧ ನಡೆಸಿ ಸಿದ್ಧಪಡಿಸಿದ್ದಾರೆ. ಏಕೆಂದರೆ ರೈತ ಒಂದು ದಿನದಲ್ಲಿ ಮಾಡುವಷ್ಟು ಕೆಲಸವನ್ನು ಮಾಡಲು ೫ಕೋಟಿ ಎರೆಹುಳುಗಳಿಗೆ ೫೦ ವರ್ಷ ತಗಲುವವು.

## ರಹಸ್ಯಮಯ ಜೀವನ

ಎರೆಹುಳುವಿನ ವೈಯಕ್ತಿಕ ಜೀವನ ರಹಸ್ಯಮಯವಾಗಿ ತೋರುವುದು. ಅದು ತನ್ನ ಹೆಚ್ಚನವೇಳೆಯನ್ನು ನೆಲದಡಿಯಲ್ಲಿ ಲಂಬಾಕೃತಿಯಲ್ಲಿ ತಯಾರಿಸಲಾದ ತನ್ನ ಬಿಲದಲ್ಲೇ ಕಳೆಯುತ್ತದೆ. ಮತ್ತು ರಾತ್ರಿ ವೇಳೆ ಮಾತ್ರ ಹೊರಬರುತ್ತದೆ. ಆಗಲೂ ಅದರ ಬಾಲ ಬಿಲದೊಳಗೇ ಅಂಟಿಕೊಂಡಿರುತ್ತದೆ; ಮತ್ತು ಅದು ತೊನೆದಾಡುತ್ತ ಹುಳು, ಎಲೆ ಹಾಗೂ ಹುಲುತುಂಡುಗಳನ್ನು ಹುಡುಕುತ್ತ ಇರುವುದು.

ಬೆಳಗಾಗುತ್ತಲೇ ಅದು ಬಿಲದೊಳಗೆ ನುಸುಳಿಕೊಳ್ಳುತ್ತದೆ; ಮತ್ತು ಬಿಲದ ಬಾಯಿಯನ್ನು ಕಸಕಡ್ಡಿಗಳಿಂದ ಮುಚ್ಚಿಬಿಡುತ್ತದೆ. ಒಂದಿಷ್ಟು ತಡವಾಯಿತೆಂದರೆ ಅದು ಸಾವಿನ ಬಾಯಿಗೆ ಬೀಳುತ್ತದೆ. ಬಿಸಿಲಿನಿಂದ ಅದು ಎಚ್ಚರ ತಪ್ಪುತ್ತದೆ. ಎಚ್ಚರ ತಪ್ಪಿದರೆ ಸಾವು ಬಂತೆಂದೇ ಅರ್ಥ. ಬೆಳಗಾಗುತ್ತಲೇ, ಆಹಾರ ಹುಡುಕುತ್ತ ಹೊರಟ ಹಕ್ಕಿ ಅದನ್ನು ತಿಂದುಹಾಕುತ್ತದೆ.

ಈ ಆಗೆತಗಾರ ಹುಳುಗಳಿಗೆ ಇತರ ಪ್ರಾಣಿಗಳಂತೆಯೇ ನೀರಡಿಕೆ ಉಂಟಾಗುತ್ತದೆ. ನೀರನ್ನು ಹುಡುಕುತ್ತ ಅವು ತಮ್ಮ ಬಿಲದಿಂದ ಹೊರಬಿದ್ದಾಗ ಕೆಲವೊಮ್ಮೆ ಆಕಸ್ಮಾತ್ ಮಳೆ ಬರುವುದುಂಟು. ಅದು ಅವುಗಳ ಬಿಲಗಳ ಅಕ್ಕಪಕ್ಕದ ಕಸಕಡ್ಡಿಗಳನ್ನು ಕೊಚ್ಚಿಕೊಂಡೊಯ್ಯುವುದಲ್ಲದೆ ಎರೆಹುಳುಗಳನ್ನು ಬಹುದೂರ ಒಯ್ದುಬಿಡುವುದು. ಮಳೆಯ ಬಳಿಕ ಕೋಟ್ಯಾಂತರ ಎರೆಹುಳುಗಳು ಮನೆಕಳೆದುಕೊಳ್ಳುತ್ತವೆ. ಆಗ ಬಿಸಿಲ ಜಳಕ್ಕೆ ಸಿಲುಕಿಯೋ, ಹಕ್ಕಿಗಳ ಬಾಯಿಗೆ ಬಿದ್ದೋ ಅಸುನೀಗುತ್ತವೆ.

ಸಿದ್ಧಗಂಗಾ

ಹಲವು ಮನುಷ್ಯರ ಹಾಗೂ ಪ್ರಾಣಿಗಳ ಕಾಲ ತುಳಿತಕ್ಕೆ ಸಿಲುಕಿ ಸಾಯುತ್ತವೆ. ಕೆಲವು ತುಂಟ ಹುಡುಗರ ಆಟದ ಸಾಧನವಾಗುತ್ತವೆ. ಅವರು ಅವುಗಳ ದೇಹಕ್ಕೆ ಉಪ್ಪು ಹಾಕಿ ಅವು ಕರಗುವುದನ್ನೇ ಮೋಜಿನಿಂದ ನೋಡುತ್ತಾರೆ. ತಾತ್ಪರ್ಯವೇನೆಂದರೆ ವ.ನೆ ಕಳೆದ.ಕೊಂಡ ಎರೆಹುಳುಗಳು ಬದುಕಿ ಉಳಿಯುವುದು ಕಡಿಮೆ.

## ಪ್ರಕೃತಿಯ ವರದಾನ

ಒಂದು ಮಾತ್ರ ನಿಜ........ ಎರೆಹುಳು ಎಂದೂ ಮುಳುಗಿ ಸಾಯುವುದಿಲ್ಲ. ಏಕೆಂದರೆ ಪ್ರಕೃತಿ ಅದಕ್ಕೆ ಶ್ವಾಸಕೋಶ ನೀಡಿಲ್ಲ ಹಾಗೆಯೇ ಕಿವಿಕಣ್ಣುಗಳನ್ನು ಕೊಟ್ಟಿಲ್ಲ. ಆದರೆ ತೆಳ್ಳನೆಯ ಮಿದುಳು ಮಾತ್ರ ಇದಕ್ಕಿದೆ.

ಜೀವಶಾಸ್ತ್ರಗಳು ಎರೆಹುಳುಗಳ ಪರಿವಾರಿಕ ಜೀವನದ ಬಗ್ಗೆ ಮಾಹಿತಿಗಳನ್ನು ಸಂಗ್ರಹಿಸಿದ್ದಾರೆ. ಎರೆಹುಳು ಹೆಣ್ಣು ಅಥವಾ ಗಂಡು ಎಂದಿರದೆ ಎರಡೂ ಆಗಿರುತ್ತದೆ. ಸುಮಾರು ೨೦೦೦ ಜಾತಿಗಳ ಎರೆಹುಳುಗಳಿವೆ. ಇವುಗಳಲ್ಲಿ ಹೆಚ್ಚಿನವು ದೈಹಿಕಸಂಪರ್ಕವಿರದೆಯೇ ಪ್ರಜನನಕ್ರಿಯೆಯನ್ನು ಪೂರ್ಣಗೊಳಿಸುವುದರಲ್ಲಿ ಶಕ್ತವಾಗಿವೆ. ಆದರೂ ಅನೇಕ ಜಾತಿಯ ಎರೆಹುಳುಗಳು ಈ ಸ್ವಾವಲಂಬನೆಯನ್ನು ಕಡೆಗಣಿಸಿ ರತಿಕ್ರೀಡೆಯಲ್ಲಿ ಮಗ್ನವಾಗುತ್ತವೆ.

ಎರೆಹುಳುಗಳ ಉದ್ದವೂ ಹೆಚ್ಚು ಕಡಿಮೆ. ಪೆಸಿಫಿಕ್ ದ್ವೀಪ ಸಮೂಹದ ಎರೆಹುಳುಗಳು ಒಂದಿಂಚು ಉದ್ದವಿದ್ದರೆ ಆಸ್ಟ್ರೇಲಿಯದ ಎರೆಹುಳುಗಳು ಎಂಟಡಿಯವರೆಗೂ ಉದ್ದವಿರುತ್ತವೆ.

ಎರೆಹುಳುಗಳು ಸಾಮಾನ್ಯವಾಗಿ ಶಾಂತಿಪ್ರಿಯ ಜೀವಗಳಾಗಿದ್ದರೂ ಯಾವ ವಸ್ತುವನ್ನಾದರೂ ನಾಶಪಡಿಸಬೇಕೆಂಬ ದೃಢಸಂಕಲ್ಪ ಮಾಡಿದವೆಂದರೆ, ಅವು ಜೀವದ ಹಂಗು ತೊರೆದು ಆ ಕಾರ್ಯಕ್ಕೆ ಧುಮುಕುತ್ತವೆ. ಅತಿ ಸಣ್ಣ ಕಟ್ಟಡದ ಬುನಾದಿಯನ್ನೂ ಟೊಳ್ಳು ಗೊಳಿಸಲು ಅವಕ್ಕೆ ಎಷ್ಟೋ ಶತಮಾನಗಳು ಬೇಕಾಗುತ್ತವೆಂಬುದು ಬೇರೆ ವಿಷಯ.

## ಎರೆಹುಳುಗಳಿಂದ ರುಚಿಕರ ಅಡುಗೆ

ಎರೆಹುಳುಗಳನ್ನು ತಿನ್ನುವುದೆ? ಈ ಕಲ್ಪನೆಯೇ ನಮಗೆ ಓಕರಿಕೆ ಬರಿಸಬಹುದು. ಆದರೆ ಮನುಷ್ಯ ಮನಸ್ಸುಮಾಡಿದರೆ ಏನನ್ನೂ ಸಾಧಿಸಬಲ್ಲ.
ಪ್ರಪಂಚದ ಎಷ್ಟೋ ಜನಾಂಗಗಳಿಗೆ ಎರೆಹುಳು ರುಚಿಕರ ಆಹಾರವಷ್ಟೇ ಅಲ್ಲ— ಆರೋಗ್ಯಕರ ಭೋಜನವೂ ಆಗಿದೆ.

ಆಫ್ರಿಕೆಯಲ್ಲಿ ಎಲ್ಲ ರೀತಿಯ ಎರೆಹುಳುಗಳನ್ನು ತಿನ್ನಲಾಗುತ್ತದೆ—ಅದೂ ಹಸಿಯಾಗಿಯೇ ! ಅವು ತುಂಬ ಸವಿಯಾಗಿವೆಯೆಂದು ಆ ಜನರ ಹೇಳಿಕೆ.

ಆಸ್ಟ್ರೇಲಿಯಾದ ದೈತ್ಯಾಕಾರದ ಎರೆಹುಳುಗಳನ್ನು ಕೆಲವರು ಹುರಿದು ತಿಂದರು. ಬಲು ಚೆನ್ನಾಗಿದೆಯೆಂದು ಆ ಜನ ಬಾಯಿ ಚಪ್ಪರಿಸಿದರು. ಆರೋಗ್ಯಕರ ಆಹಾರದ ಅಗತ್ಯ ಉಂಟಾದಾಗಲೆಲ್ಲ ಚೀನಿಯರು ಹುರಿದ ಎರೆಹುಳುಗಳನ್ನೇ ತಿನ್ನುತ್ತಾರೆ. ಎರೆಹುಳು ವಿಟಾಮಿನ್ ಡೀಯಿಂದ ತುಂಬಿದೆಯೆಂದು ಅವರ ಹೇಳಿಕೆ.

ಅಮೇರಿಕನ್ನರು ಎರಹುಳುಗಳಿಂದ ವಿಧವಿಧದ ತಿನಿಸುಗಳು ತಯಾರಿಸಲು ಯತ್ನಿಸಿದರು. ಲಾಸ್ ಏಂಜಲ್ಸ್‌ದಲ್ಲಿ ಪ್ರತಿವರ್ಷ ಒಂದು ಸ್ಪರ್ಧೆ ನಡೆಯುತ್ತಿದೆ. ಅಲ್ಲಿ ಎರೆಹುಳುಗಳಿಂದ ತಯಾರಿಸಿದ ಅತ್ಯುತ್ತಮ ತಿನಿಸಿಗೆ ಬಹುಮಾನ ಕೊಡಲಾಗುತ್ತದೆ

ಇಷ್ಟಾದರೂ ಎರೆಹುಳುಗಳನ್ನು ಆಹಾರವಾಗಿ ಬಳಸುವ ಬದಲು ಸ್ವಚ್ಛತೆಗಾಗಿ ಬಳಸುವುದೇ ಲೇಸೆಂದು ಇಡೀ ವಿಶ್ವದ ಜೀವಶಾಸ್ತ್ರಗಳ ಹೇಳಿಕೆ.

ಹೆಚ್ಚಿನ ಜನ ಈ ಮಾತಿಗೊಪ್ಪಿದ್ದಾರೆ. ಅಮೇರಿಕೆಯಲ್ಲಿ ಹಲವರು ಈಗ ಎರೆಹುಳುಗಳ ಬೇಸಾಯ ಆರಂಭಿಸಿದ್ದಾರೆ. ಜೇರೀಕನಿಂಘಮ್ ಎಂಬ ಅಮೇರಿಕನನೊಬ್ಬ ಎರೆಹುಳುಗಳ ಕೃಷಿ ಮಾಡಲೆಂದು ಎಲಿಗನೀ ಏರ್‌ಲೈನ್ಸ್‌ದಲ್ಲಿನ ತನ್ನ ಒಳ್ಳೇ ನೌಕರಿಗೇ ರಾಜೀನಾಮೆಯಿತ್ತ. ಎರೆಹುಳುಗಳು ೨-೩ ತಿಂಗಳುಗಳಲ್ಲೇ ತಮ್ಮ ಸಂಖ್ಯೆಯನ್ನು ಇಮ್ಮಡಿಗೊಳಿಸುತ್ತವೆಂದು ಅವನ ಹೇಳಿಕೆ.
ಜೇರೀ ಕನಿಂಘಮ್ ಈಗ ಎರೆಹುಳುಗಳನ್ನು ರಫ್ತು ಮಾಡುತ್ತಿದ್ದಾನೆ. ಎರೆಹುಳುಗಳನ್ನು ತಿನ್ನಬೇಕೆ ! ಬೆಳಸಬೇಕೆ ? ಎಂದು ನೀವೇ ನಿರ್ಧರಿಸಿರಿ.


---

## ಕೃಷಿ ಮತ್ತು ಕೈಗಾರಿಕಾ ವಸ್ತು ಪ್ರದರ್ಶನ – 1991.

### ಶ್ರೀ ಸಿದ್ಧಗಂಗಾಮಠ, ತುಮಕೂರು ಜಿಲ್ಲೆ – 572104.

ಈ ವರ್ಷ ಮೇಲ್ಕಂಡ ವಸ್ತು ಪ್ರದರ್ಶನವು ತಾ|| 4.2.1991 ರಿಂದ ಪ್ರಾರಂಭಗೊಂಡು 18.2.1991 ರ ವರೆವಿಗೆ ನಡೆಯುತ್ತದೆ. ಕೇಂದ್ರಸರಕಾರ, ರಾಜ್ಯಸರಕಾರ, ಜಿಲ್ಲಾ ಕೈಗಾರಿಕಾ ಕೇಂದ್ರಗಳು ಖಾಸಗಿ ಕೈಗಾರಿಕೋದ್ಯಮಿಗಳು ಭಾಗವಹಿಸಿ ನಾಡಿನ ಅಭಿವೃದ್ಧಿಯೋಜನೆಗಳ ಮಳಿಗೆಗಳನ್ನು ಪ್ರದರ್ಶಿಸುತ್ತಾರೆ. ಈ ವಸ್ತು ಪ್ರದರ್ಶನದಲ್ಲಿ ಗ್ರಾಮೀಣ ಬಂಧುಗಳಿಗೆ ಹಾಗೂ ನಗರ ಬಂಧುಗಳಿಗೆ ಉಪಯುಕ್ತ ದಿನಬಳಕೆಯ ಗೃಹ ಕೈಗಾರಿಕೆ - ಗುಡಿಕೈಗಾರಿಕೆ - ಕರಕುಶಲ ವಸ್ತುಗಳ ಪ್ರದರ್ಶನ ಹಾಗೂ ಮಾರಟಕ್ಕೆ ಸದವಕಾಶವಿರುತ್ತೆ. ವಸ್ತು ಪ್ರದರ್ಶನದಲ್ಲಿ ಮಳಿಗೆಗಳನ್ನು ತೆರೆಯಲಿಚ್ಛಿಸುವವರು ಕೂಡಲೇ ವಸ್ತು ಪ್ರದರ್ಶನದ ಕಾರ್ಯದರ್ಶಿಯವರಲ್ಲಿ ವ್ಯವಹರಿಸಿರಿ.

**ವಸ್ತು ಪ್ರದರ್ಶನ ಸಮಿತಿ.**


ತುಮಕೂರಿಗೆ ಬರುವವರಿದ್ದೀರಾ? ಹಾಗಿದ್ದರೆ ವೈವಿಧ್ಯಮಯ ಊಟ
ವಸತಿ, ತಿಂಡಿ ತಿನಿಸುಗಳ ನಮ್ಮ ಈ ಸ್ಥಳಗಳು ಸದಾ ನಿಮ್ಮನ್ನು ಸ್ವಾಗತಿಸುತ್ತಿವೆ.
ಹೋಟೆಲ್
ಶ್ರೀ ನಂಜುಂಡೇಶ್ವರ
ಊಟ, ವಸತಿ ಮತ್ತು
ಉಪಹಾರ ಮಂದಿರ,
ಬಿ.ಹೆಚ್. ರಸ್ತೆ, ತುಮಕೂರು-1
ದೂರವಾಣಿ
8597, 2373, 2577
SRI
Hotel Shree Nanjundeswara
ಶ್ರೀ ನಂಜುಂಡೇಶ್ವರ
ಬೇಕರಿ
ತುಮಕೂರು ಜಿಲ್ಲೆಯ ಪ್ರಖ್ಯಾತ
ಬೇಕರಿ
ಚಿಕ್ಕಪೇಟೆ ತುಮಕೂರು-1
ದೂರವಾಣಿ : 8077
BAKERY
ಶ್ರೀ ನಂಜುಂಡೇಶ್ವರ ರೆಸ್ಟೋರೆಂಟ್
ತುಮಕೂರಿನಲ್ಲಿ ಉತ್ತರ ಭಾರತದ ಶೈಲಿಯ ಊಟ
ಉಪಹಾರಗಳ ಶ್ರೇಷ್ಠ ದರ್ಜೆಯ ರೆಸ್ಟೋರೆಂಟ್
ಬಿ.ಹೆಚ್. ರಸ್ತೆ, ತುಮಕೂರು-1
ದೂರವಾಣಿ : 2677
ಸಿ.ವಿ. ಮಹದೇವಯ್ಯ
ಮ್ಯಾನೇಜಿಂಗ್ ಪಾರ್ಟನರ್
2477
ಶ್ರೀ ನಂಜುಂಡೇಶ್ವರ ಸ್ವೀಟ್ಸ್
ಎಲ್ಲಾ ವಿಧವಾದ ಸಿಹಿ ಮತ್ತು ಖಾರ ತಿಂಡಿ ಹಾಗೂ
ಬೇಕರಿ ತಿನಿಸುಗಳ ನಗರದ ಏಕೈಕ ಸ್ಥಳ
ಅಶೋಕ ರಸ್ತೆ ತುಮಕೂರು-1
ದೂರವಾಣಿ : 2077

# ಶ್ರೀ ಸಿದ್ಧಲಿಂಗೇಶ್ವರಸ್ವಾಮಿ ರಥೋತ್ಸವಾಹ್ವಾನ ಪತ್ರಿಕ

ಶ್ರೀ ಸಿದ್ಧಗಂಗಾ ಕ್ಷೇತ್ರಾಧ್ಯಕ್ಷರು ಶ್ರೀ ಶ್ರೀ ಶಿವಕುಮಾರಸ್ವಾಮಿಗಳು

**ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ೧೯೧೨ಕ್ಕೆ ಸರಿಯಾದ**
**ಶ್ರೀ ಪ್ರಮೋದನಾಮ ಸಂವತ್ಸರದ**

| | | |
|---|---|---|
| ಬುಧವಾರ | 6-2-91 | **ವೃಷಭವಾಹನ ಮತ್ತು ಗಜವಾಹನ** |
| ಗುರುವಾರ | 7-2-91 | **ಹುಲಿವಾಹನ ಮತ್ತು ನಂದಿವಾಹನ** |
| ಶುಕ್ರವಾರ | 8-2-91 | ಮುತ್ತಿನಪಾಲಕಿ ಉತ್ಸವ |
| ಶನಿವಾರ | 9-2-91 | ಹುತ್ತದವಾಹನ ಮತ್ತು ಅಶ್ವವಾಹನ |
| ಭಾನುವಾರ | 10-2-91 | ಸಿಂಹವಾಹನ ಮತ್ತು ರಾವಣವಾಹನ |
| ಸೋಮವಾರ | 11-2-91 | ಬಿಲ್ವವೃಕ್ಷವಾಹನ ಮತ್ತು ನವರಂಗಪಾಲಕಿ ಉತ್ಸವ |
| ಮಂಗಳವಾರ | 12-2-91 | ಮಹಾಶಿವರಾತ್ರಿ ಪೂಜಾದಿಗಳು ಮತ್ತು ಮುತ್ತಿನಪಾಲಕಿ ಉತ್ಸವ |
| ಬುಧವಾರ | 13-2-91 | **ರಥೋತ್ಸವ** ಮತ್ತು **ರುದ್ರಾಕ್ಷಿಮಂಟಪೋತ್ಸ** |
| ಗುರುವಾರ | 14-2-91 | **ಬೆಳ್ಳಿಪಾಲಕಿ ಉತ್ಸವ** |
| ಶುಕ್ರವಾರ | 15-2.91 | ನವಿಲುವಾಹನ ಮತ್ತು ತೆಪ್ಪೋತ್ಸವ |
| ಶನಿವಾರ | 16-2.91 | ಶೇಷವಾಹನ ಮತ್ತು ಪಂಚಬ್ರಹ್ಮೋತ್ಸವ |

ಮತ್ತು ಮಾಮೂಲಿನಂತೆ 'ಎತ್ತಿನ ಪರಿಷೆಯು' ತಾ|| 11-2-91ನೇ ಸೋಮವಾರ
"ದನಗಳ ಪ್ರದರ್ಶನ" ಮತ್ತು ಉತ್ತಮ ರಾಸುಗಳಿಗೆ ಬಹುಮಾನ ವಿನಿಯೋಗವು
ನಡೆಯುವಂತೆ ಏರ್ಪಡಿಸಿದೆ. "ಕೃಷಿ ಮತ್ತು ಕೈಗಾರಿಕಾ ವಸ್ತು ಪ್ರದರ್ಶನದಲ್ಲಿ"
ಪ್ರತಿದಿವಸವೂ ಸಾಯಂಕಾಲ ಸಾಂಸ್ಕೃತಿಕ ಚಟುವಟಿಕೆಗಳೂ
ನಡೆಯುವಂತೆ ಏರ್ಪಾಟು ಮಾಡಲಾಗಿದೆ.

ಸರ್ವರೂ ಸಕಾಲದಲ್ಲಿ ಬಂದು ಉತ್ಸವಗಳಲ್ಲಿ ಭಾಗವಹಿಸಿ ಶ್ರೀ ಸಿದ್ಧಲಿಂಗೇಶ್ವರಸ್ವಾಮಿ ಕೃಪೆ
ಪಾತ್ರರಾಗಬೇಕೆಂದು ಅಪೇಕ್ಷಿಸುತ್ತೇವೆ.

ಶ್ರೀ ಸಿದ್ಧಗಂಗಾ ಮಠ
ತುಮಕೂರು ಜಿಲ್ಲಾ

ಶ್ರೀ ಶಿವಕುಮಾರಸ್ವಾಮಿಗಳು
ಶ್ರೀ ಸಿದ್ಧಗಂಗಾ ಮಠಾಧ್ಯಕ್ಷರು.

ವಿ.ಸೂ: ಜಾತ್ರೆಗೆ ಎತ್ತುಗಳನ್ನು ಹೊಡೆಯುವವರು 3-2-91ನೇ ಭಾನುವಾರ ಕಳೆದ ನಂತರ ಬರಬೇಕು
ಮುಂಚಿತವಾಗಿ ಬಂದು ಸೇರಲು ಅವಕಾಶವಿರುವುದಿಲ್ಲ.

ಶ್ರೀ ಸಿದ್ಧಲಿಂಗೇಶ್ವರಸ್ವಾಮಿ ಮುದ್ರಣಾಲಯ, ಶ್ರೀ ಸಿದ್ಧಗಂಗಾಮಠ.

# ಸಿದ್ಧಗಂಗಾ

ಸಂಪುಟ–27. ಸಂಚಿಕೆ–2. ಫೆಬ್ರವರಿ–1991.

ಧರ್ಮ ದೇವಾಲಯಗಳಲ್ಲಿ ಇಲ್ಲ, ಧರ್ಮ ಗ್ರಂಥಗಳಲ್ಲಿ
ಇಲ್ಲ, ಧರ್ಮ ಗುರುಗಳ ಬಳಿ ಇಲ್ಲ, ಪ್ರಾಮಾಣಿಕ
ದುಡಿಮೆಯಲ್ಲಿದೆ, ದಯಾರ್ದ್ರ ಹೃದಯ
ಗಳಲ್ಲಿದೆ. ಸಚ್ಚಿಂತನೆ, ಸದಾಚಾರ
ಸದ್ವರ್ತನೆ, ಸತ್ಯ ವಾಕ್ಯಗಳಲ್ಲಿದೆ.
ಮಾನವೀಯತೆಯಿಂದ
ಬಾಳುವುದರಲ್ಲಿದೆ.

– ಶ್ರೀ ಶಿವಕುಮಾರಸ್ವಾಮಿಗಳು.

ಪ್ರಕಾಶಕರು:
ಹಳೆಯ ವಿದ್ಯಾರ್ಥಿಗಳ ಸಂಘ.
ಸಿದ್ಧಗಂಗಾ ಕ್ಷೇತ್ರ.

## ಆಸ್ತಿಕ ಬಂಧುಗಳಲ್ಲಿ ಒಂದು ವಿನಮ್ರ ಮನವಿ

1 ಶ್ರೀ ಸಿದ್ಧಗಂಗಾ ಮಠದಲ್ಲಿ ನಿತ್ಯ ನಾಲ್ಕು ಸಹಸ್ರ ವಿದ್ಯಾರ್ಥಿಗಳಿಗೆ ದಾಸೋಹ ವ್ಯವಸ್ಥೆ ನಡೆಯುತ್ತಿದೆ.

2 ನಾಲ್ಕು ಸಹಸ್ರ ವಿದ್ಯಾರ್ಥಿಗಳು ವಿವಿಧ ಸಮಾಜದಿಂದ ಬಂದವರಾಗಿರುತ್ತಾರೆ. ಜಾತ್ಯತೀತ ಮನೋಧರ್ಮವನ್ನು ರೂಢಿಸಿಕೊಂಡು ಬೆಳೆಯುವ ಮುಕ್ತ ವಾತಾವರಣ ಇಲ್ಲಿನ ವೈಶಿಷ್ಟ್ಯ.

3 ನಿತ್ಯ ಬರುವ ಸಹಸ್ರ ಸಹಸ್ರ ಯಾತ್ರಾರ್ಥಿಗಳಿಗೂ ದಾಸೋಹ ನಡೆಯುತ್ತಿದೆ.

4 **"ಸಿದ್ಧಗಂಗೆಯ ಊಟ ಶಿವಗಂಗೆಯ ನೋಟ"** ಎಂಬುದು ಗಾದೆ ಮಾತಾಗಿದೆ.

5 **" ಪ್ರಸಾದ ತೆಗೆದುಕೊಂಡು ಹೋಗಿ "** ಎಂಬುದೇ ಪರಮ ಪೂಜ್ಯ **ಶ್ರೀ ಶ್ರೀಗಳವರು** ಕ್ಷೇತ್ರಾರ್ಥಿಗಳಿಗೆಲ್ಲ ಹೇಳುವ ನಿತ್ಯ ಪಂಚಾಕ್ಷರಿ ಮಂತ್ರ

6 ಇಂಥ ದಾಸೋಹ ಮಣಿಹದಲ್ಲಿ ನಿಮ್ಮದೂ ಕಾಣಿಕೆ ಸಲ್ಲಿಸಲು ಅವಕಾಶವಿರುತ್ತದೆ.

7 ದಾಸೋಹಕ್ಕೆ ಧನ-ಧಾನ್ಯ ರೂಪದಲ್ಲಿ ಯಥಾಶಕ್ತಿ ಕಾಣಿಕೆ ಅರ್ಪಿಸಿ ಧನ್ಯರಾಗಲು ಇದೊಂದು ಅಪೂರ್ವ ಅವಕಾಶ.

8 ನೀವು ನೀಡುವ ಒಂದು ಸೇರು ಧಾನ್ಯ, ಒಂದು ರೂಪಾಯಿ ಸಾರ್ಥಕ ವಿನಿಯೋಗಕ್ಕೆ ಮೀಸಲಾಗುತ್ತದೆ.

9 ನೀವೂ ದಾಸೋಹದಲ್ಲಿ ಭಾಗಿಗಳಾಗುವ ಪುಣ್ಯ ಸಂಕಲ್ಪ ವನ್ನೇ ಮಾಡುತ್ತೀರಾಗಿ **' ಸಿದ್ಧಗಂಗಾ '** ಆಶಿಸುತ್ತದೆ.

# ಸಿದ್ಧಗಂಗಾ

ಸಂಪುಟ–27. ಸಂಚಿಕೆ–2. ಫೆಬ್ರುವರಿ–1991.

## ಶ್ರೀ ಸಿದ್ಧಗಂಗಾ ಗುರುಕರುಣ ತ್ರಿವಿಧಿ

'ಹೂವಿಂಗೆ ಪರಿಮಳ ಶೃಂಗಾರ' ವಾದಂತೆ
ಶಿವಧರ್ಮ ಶಿವಕ್ರಿಯೆಗೆ ಶೃಂಗಾರ। ನೀನಾದೆ
ಸಿದ್ಧಗಂಗಾ ಗುರುವೆ ಕೃಪೆಯಾಗು ॥

ಮಲಗಿರುವ ಮಗುವಿನ ನಗುಮುಖ ಹೊಳೆವಂತೆ
ಚೆಲುವು ಚಿಮ್ಮುತಲಿರುವ ಶ್ರೀಗುರುವೆ। ಪೊಡಮಡುವೆ
ಸಿದ್ಧಗಂಗಾ ಗುರುವೆ ಕೃಪೆಯಾಗು ॥

ಮಳೆಬಂದು ಹೊಳೆತುಂಬಿ ಜುಳು ಜುಳಗೆ ಹರಿವಂತೆ
ನಳನಳಿಸಿ ನಗುತಿರುವ ಜಯಲಿಂಗ। ಪೊಡಮಡುವೆ
ಸಿದ್ಧಗಂಗಾ ಗುರುವೆ ಕೃಪೆಯಾಗು ॥

—ಹೆಚ್. ವಿ. ವೀರಭದ್ರಯ್ಯ.

| ಲೇಖನ | ಲೇಖಕರು | ಪುಟ |
| --- | --- | --- |


* ಶ್ರೀವಾಣಿ 5
* ಶ್ರೀ ಸಿದ್ಧಲಿಂಗೇಶ್ವರ ವಚನ 7
* ಏನಾದರೂ ಜನ ತಿಳಿಯಲಿಲ್ಲಾ — ಹೆಚ್.ವಿ. ವೀರಭದ್ರಯ್ಯ 8
* ಸಂಪಾದಕೀಯ 9
* ಬಸವ ತತ್ತ್ವ ವಚನಾಮೃತ — ಶ್ರೀ ಮೋಟಗಿ ಮಲ್ಲಿಕಾರ್ಜುನ 11
* ಶಿವಶರಣರ ವಚನಗಳ ಉಗಮ ಭಾಗ-5 — ಎನ್. ಚನ್ನಬಸಪ್ಪ ಗಮುಕಿ 19
* ಶ್ರೀ ಮದುದ್ಘಾನೇಶ್ವರ ಶತಕಂ 24
* ಮಾನವೀಯ ಮನದ ಬೆಳಕೇ — ಸೊ ದಾ. ವಿರೂಪಾಕ್ಷಗೌಡ 25
* ವಾಙ್ಮಯಃ ತಪಸ್ಸು — ಎಂ. ಮಾಧನಪ್ಪೆ 26
* ಶರೀಘರ ಶಿವಯೋಗ ಸಂಧಾನ — ಶ್ರೀ ಶೈಲ ಜತ್ತಿ. 31
* ವಿದ್ಯಾರ್ಥಿ ಜೀವನದ ಬೆಳಕು ಸರಣಿ-6 — ಬಿ.ಎಸ್. ಕೃಷ್ಣಮೂರ್ತಿ 35
* ವಿಜ್ಞಾನ ಮತ್ತು ಆಧ್ಯಾತ್ಮ — ಹೆಚ್. ಎಸ್. ನರಸಿಂಹಜೀಯರ್. 37
* ಕ್ಷೇತ್ರವಾರ್ತೆ 40



# ಶ್ರೀವಾಣಿ

## ಪೂಜೆ

ಜಗತ್ತಿನ ಎಲ್ಲ ಧರ್ಮಗಳಲ್ಲಿಯೂ ಪೂಜೆ, ಪ್ರಾರ್ಥನೆ, ಧ್ಯಾನ, ಆರಾಧನೆ, ಉಪಾಸನೆಗಳು ಒಂದಲ್ಲ ಒಂದು ರೂಪದಲ್ಲಿ ಆಚರಣೆಯಲ್ಲಿವೆ. ಇವೆಲ್ಲ ಏತಕ್ಕೆ ? ಕೃತಜ್ಞತಾ ಸಮರ್ಪಣೆಗಾಗಿ, ಚಿತ್ತ ಶುದ್ಧಿಗಾಗಿ, ಮಾನವನಾಗಿ ಬದುಕುವ ಅವಕಾಶವನ್ನು ಕಲ್ಪಿಸಿಕೊಟ್ಟ ದೇವರಿಗೆ ಭಕ್ತಿಯಿಂದ ತಲೆಬಾಗುವುದಕ್ಕಾಗಿ. ಪೂಜೆ ಮೂರು ವಿಧವಾಗಿ ನಡೆಯುವಂಥದು. ಅರ್ಚನ; ಎಂದರೆ ತನುವಿನಿಂದ ಮಾಡುವಂಥದು-Worshipping. ಪ್ರಾರ್ಥನೆ; ಮಾತಿನಿಂದ ಮಾಡುವಂಥದು-Praying, ಧ್ಯಾನ; ಮನಸ್ಸಿನಿಂದ ಮಾಡುವಂಥದು-Meditating. ಅಲ್ಲದೆ ಪೂಜಿಸುವುದರಲ್ಲಿಯೂ ಆರು ವಿಶೇಷಗಳನ್ನು ಕಾಣಬಹುದು. 1. ದೇವಪೂಜೆ; ನಿರಾಕಾರದ ಉಪಾಸನೆ. ಉದಾಹರಣೆಗೆ ಲಿಂಗಪೂಜೆ. 2 ದೇವತಾ ಪೂಜೆ ಅಥವಾ ಅವತಾರ ಪೂಜೆ. ಎಂದರೆ ರಾಮ, ಕೃಷ್ಣ, ಶಿವ, ಬುದ್ಧ, ಇತ್ಯಾದಿ ಅವತಾರಗಳ ಪೂಜೆ. 3. ವಿಭೂತಿ ಪೂಜೆ. ಎಂದರೆ ಮನುಷ್ಯರಾಗಿ ಜನ್ಮತಾಳಿ ವಿಶೇಷ ರೀತಿಯಲ್ಲಿ, ಪ್ರೀತಿ, ಸಹಾನುಭೂತಿ, ಪರೋಪಕಾರಿ, ದಯಾಳುಗಳಾಗಿ ಸಕಲ ಜೀವರಿಗೂ ಲೇಸನ್ನೇ ಬಯಸಿ ದೇವಮಾನವರಾದ ಬುದ್ಧ, ಬಸವ, ಕ್ರಿಸ್ತರಂಥವರನ್ನು ಪೂಜಿಸುವುದು. 4. ಪಿತೃಪೂಜೆ, ಎಂದರೆ ಜನ್ಮಕೊಟ್ಟ ತಂದೆ ತಾಯಿಗಳನ್ನು, ಹಿರಿಯರನ್ನು ಪೂಜಿಸುವುದು. 5. ಪ್ರಾಣಿಪೂಜೆ. ಉದಾಹರಣೆಗೆ ಎತ್ತು ನಂದಿಯ ಸಂಕೇತವೆಂದು ಹಸು ಗೋಮಾತೆ, ವೇದಮಾತೆಯೆಂದು, ಆನೆ ವಿಘ್ನೇಶ್ವರನ ಸಂಬಂಧಿಯೆಂದು ಪೂಜಿಸುವ ಸಂಪ್ರದಾಯ. 6. ಭೂತಪೂಜೆ. ನೀರನ್ನು, ನೆಲವನ್ನು, ಮರವನ್ನು ಪೂಜಿಸುವ ವಿಧಾನ, ಇವುಗಳಲ್ಲದೆ ಕ್ಷುದ್ರ ದೇವತೆಗಳ ಉಪಾಸನೆಯೂ ಉಂಟು. ಇವುಗಳಲ್ಲೆಲ್ಲಾ ನಿರಾಕಾರದ ಪೂಜೆಯೇ- ಇಷ್ಟಲಿಂಗದ ಪೂಜೆಯೇ-ಸರ್ವ-ಶ್ರೇಷ್ಠವಾದುದು ಲಿಂಗಕ್ಕೆ ಆಕಾರವಿಲ್ಲ ಗಗನದಂತೆ ವಿಸ್ತಾರ, ಸಾಗರದಂತೆ ಆಳ. ಲಿಂಗವೆಂಬುದು ಅನಂತದ ಹೆಸರು, ಅದಕ್ಕೆ ಮುಖ ನಖಗಳಿಲ್ಲ. ಸರ್ವತೋಮುಖ ಅದು. ಅದಕ್ಕೆ ಕುಲವಿಲ್ಲ. ಲಿಂಗಪೂಜೆಗೆ ಯಾವ ಭೇದವೂ ಇಲ್ಲ. ಉಚ್ಚ ನೀಚ, ಹೆಣ್ಣುಗಂಡು, ವರ್ಣ ಯಾವುದೂ ಇಲ್ಲ. ಅಂತಹ ಲಿಂಗದ ಇಷ್ಟಲಿಂಗದ ಪೂಜೆಯೇ ಸರ್ವಶ್ರೇಷ್ಠವಾದುದು.

( 22-5-90 ರಂದು ಚೀಮಂಗಲದಲ್ಲಿ ಮಾಡಿದ ಆಶೀರ್ವಚನದಿಂದ ಸಂಗ್ರಹಿಸಿದ್ದು)

# ಸಿದ್ಧಗಂಗಾ

ಪ್ರಧಾನ ಸಂಪಾದಕರು
**ಪ॥ ಚನ್ನಪ್ಪ ಎರೇಸೀಮೆ**

* * *

ಸಂಪಾದಕರು
**ಹೆಚ್. ವಿ. ವೀರಭದ್ರಯ್ಯ**

* * *

ಸಹ ಸಂಪಾದಕರು
**ಬಿ. ವೀರಭದ್ರಯ್ಯ**
**ಪಿ. ಎಸ್. ಚಂದ್ರಶೇಖರಯ್ಯ**

* * *

ಜಾಹೀರಾತು ವಿಭಾಗ
**ಎಂ. ರೇಣುಕಾರಾಧ್ಯ**

* * *

ವಿತರಣೆ ವಿಭಾಗ
**ಆರ್. ಎಸ್. ಮಲ್ಲೇಶಪ್ಪ**

* * *

ಪ್ರಕಾಶಕರು
**ಹೆಚ್. ಬಿ. ಗಂಗಾಧರಯ್ಯ**
ಹಳೆಯ ವಿದ್ಯಾರ್ಥಿ ಸಂಘದ ಪರವಾಗಿ

* * *

ಮುದ್ರಕರು
**ಶ್ರೀ ಸಿದ್ಧಲಿಂಗೇಶ್ವರಸ್ವಾಮಿ ಮುದ್ರಣಾಲಯ**

* * *

ಪ್ರಕಟಣೆಯ ಸ್ಥಳ
**ಶ್ರೀ ಸಿದ್ಧಗಂಗಾಕ್ಷೇತ್ರ**

ಚಂದಾ ವಿವರ

ವಾರ್ಷಿಕ ಚಂದಾ 25-00ರೂ
ಆಜೀವ ಸದಸ್ಯತ್ವ 250-00 ರೂ

## ಲೇಖಕರಲ್ಲಿ ಮನವಿ

'ಸಿದ್ಧಗಂಗಾ' ಶ್ರೀ ಸಿದ್ಧಗಂಗಾ ಮಠದಿಂದ ಪ್ರಕಟವಾಗುತ್ತಿರುವ ಮಾಸ ಪತ್ರಿಕೆ. ಶ್ರೀ ಮಠದ ಹಳೆಯ ವಿದ್ಯಾರ್ಥಿ ಸಂಘದ ಹೆಮ್ಮೆಯ ಸೇವಾ ಪುರವಣಿ. ಮೇಲಾಗಿ ಶ್ರೀ ಮಠದ ಮುಖವಾಣಿ. ಪೂಜ್ಯ ಶ್ರೀ ಶ್ರೀ ಡಾ॥ ಶಿವಕುಮಾರ ಮಹಾಸ್ವಾಮಿಗಳವರ ದಿವ್ಯ ಮಾರ್ಗದರ್ಶನದಲ್ಲಿ ಮುನ್ನಡೆದಿರುವ ಪತ್ರಿಕೆ. ತ್ರಿವಿಧ ದಾಸೋಹ ಸೇವಾ ತತ್ಪರತೆಯಿಂದ ಹೆಜ್ಜೆ. ಹಾಕುತ್ತಿದೆ. ಈ ಧ್ಯೇಯ ಸಾಧನೆಗಾಗಿ ನಾಡಿನ ಗಣ್ಯ ಲೇಖಕರಿಂದ ಸಾಹಿತ್ಯ, ಸಂಸ್ಕೃತಿ, ಧರ್ಮ, ವಿಜ್ಞಾನ, ಶಿಕ್ಷಣ. ಇತಿಹಾಸ, ವೈಚಾರಿಕ, ಚಿಂತನ ಮುಂತಾದ ಲೇಖನಗಳನ್ನು ಸ್ವಾಗತಿಸುತ್ತದೆ ಅಸ್ವೀಕೃತ ಲೇಖನಗಳನ್ನು ಪಡೆಯಲು ಸಾಕಷ್ಟು ಅಂಚೆಸ್ಟಾಂಪುಗಳನ್ನು ಲಗತ್ತಿಸಿರಬೇಕು. ಲೇಖನಗಳಲ್ಲಿ ಸೂಕ್ತ ಬದಲಾವಣೆ ಮಾಡಿಕೊಳ್ಳುವ ಅಧಿಕಾರ ಸಂಪಾದಕರಿಗಿದೆ. ಅನುವಾದ, ರೂಪಾಂತರ ಲೇಖನಗಳಿಗೆ ಮೂಲ ಕೃತಿಕಾರರ ಅನುಮತಿ ಪಡೆದಿರಬೇಕು. ಸ್ವೀಕೃತ ಲೇಖನಗಳಿಗೆ ಸೂಕ್ತ ಸಂಭಾವನೆ ಕೊಡಲಾಗುವುದು.

"ಸಂಪಾದಕರು"
'ಸಿದ್ಧಗಂಗಾ' ಕನ್ನಡ ಮಾಸಪತ್ರಿಕೆ
ಶ್ರೀ ಸಿದ್ಧಗಂಗಾ ಕ್ಷೇತ್ರ-572104
ತುಮಕೂರು ಜಿಲ್ಲೆ.

ಇವರಿಗೆ ಕಳುಹಿಸಿಕೊಡಬೇಕಾಗಿ ಪ್ರಾರ್ಥನೆ

# ಶ್ರೀ ಸಿದ್ಧಲಿಂಗೇಶ್ವರ ವಚನ



ನೆಲ್ಲುದ ಮರನೇರಿ ಇಳಿಯಲರಿಯದೆ
ತ್ರೈಜಗವೆಲ್ಲ ತಲ್ಲಣಿಸುತ್ತಿದೆ ನೋಡಾ
ಅಲ್ಲಿಯ ಫಲವ ಬಯಸಿದ ಹಿರಿಯರೆಲ್ಲ ಹಳ್ಳದಲ್ಲಿ ಕೆಡೆದರೆ
ಇದಕಂಡು ಹೇಸಿ ಕಡೆಗೆ ತೊಲಗಿದೆನು ಕಾಣಾ
ಮಹಾಲಿಂಗ ಗುರು ಶಿವಸಿದ್ದೇಶ್ವರ ಪ್ರಭುವೇ.

ದೇಹಭಾವವೆಂಬ ವೃಕ್ಷವನೇರಿದ ಮೂರು ಲೋಕದ ಆತ್ಮರುಗಳು ಶ್ರೀಗುರುವಿನ ವೇಧಾ, ಮಂತ್ರ, ಕ್ರಿಯೋಪ ದೇಶದಿಂದ ಲಿಂಗಾಂಗಿಗಳಾಗದೆ, ಷಟ್‌ಸ್ಥಲ ಜ್ಞಾನ ಕ್ರಿಯಾಚಾರಿಗಳಾಗದೆ, ಲಿಂಗದಲ್ಲಿ ಏಕತ್ವವನ್ನು ಸಾಧಿಸಲರಿಯದೆ ಭವ ಭವಗಳಲ್ಲಿ ತೊಳಲಿ ಬಳಲುತಿದ್ದಾರೆ. ಆ ದೇಹ ಭಾವದ ಸುಖದ ಭೋಗವನ್ನಪೇಕ್ಷಿಸಿದವರೆಲ್ಲ ಭವಕೂಪದಲ್ಲಿ ಬೀಳುವುದನ್ನು ಸುಜ್ಞಾನದ ಕಣ್ಣಿನಿಂದರಿದು ಲಿಂಗಾಂಗ ಸಂಬಂಧಿಯಾದ ಶರಣನು ತನಗಿದು ಯೋಗ್ಯವಲ್ಲೆಂದು ಜಿಗುಪ್ಸೆಯಾಗಿ ಕಡೆಗೆ ತೊಲಗಿದನು ಎನ್ನುತ್ತದೆ ವಚನ.

## ಏನಾದರೂ ಜನ ತಿಳಿಯಲಿಲ್ಲ !

ಯಾವ ಮಾತುಗಳಿಂದ ಬಿಡಿಸಿ ಹೇಳಲಿನಾನು ।
ನನ್ನ ಗುರುಗಳಿಗಾದ ಎದೆಯ ನೋವಾ।
ಸಾವಿರದ ಮಕ್ಕಳನು ಸಾಕಿಸಲಹಿದರಲ್ಲಾ ।
ತಂದೆತಾಯಿಗಳಿದನು ತಿಳಿಯಲಿಲ್ಲಾ ।
ತಬ್ಬಲಿ ಮಕ್ಕಳನು ತಬ್ಬಿಸಲಹಿದರಲ್ಲಾ ।
ಹಬ್ಬ ಹುಣ್ಣಿಮೆ ಮಾಡಿ ಪೊರೆದರಲ್ಲಾ ।
ತಿಂದುಂಡ ಜನಗಳೆ ತಿರುಗಿ ಬಿದ್ದರಲ್ಲಾ ।
ಕಂಡು ಕಂಡೇ ಎರಡಬಗೆದರಲ್ಲಾ ।
ನಂಬಿದ ಜನಗಳೆ ನಯವಂಚಕರಾದರಲ್ಲಾ ।
ನಿಷ್ಠೆ ನಿಯತ್ತುಗಳ ತೊರೆದರಲ್ಲಾ ।
ಕೈ ಹಿಡಿದು ಕರೆತಂದ ಹೂವೆ ಹಾವಾಯಿತಲ್ಲಾ ।
ಸಾಕಿಸಲಹಿದ ಗುರುತ ನೆನೆಯಲಿಲ್ಲಾ ।
ಪರಮ ಪವಿತ್ರ ಪರಂಪರೆ ಕಾಯಲು ।
ನಿಂದೆನೂರಾರನು ಪಡೆದರಲ್ಲಾ ।
ಮುಚ್ಚಿಡಿದ ಬಂದವರ ಮೆಚ್ಚಿನುಡಿಸಿದರಲ್ಲಾ ।
ತುಚ್ಛ ಜನಗಳಿದನು ತಿಳಿಯಲಿಲ್ಲಾ ।
ಕಲ್ಲೊಗೆದ ಜನರಿಗೆ ಬೆಲ್ಲ ನೀಡಿದರಲ್ಲಾ ।
ಬಲ್ಲ ಜನಗಳಿದನು ತಿಳಿಸಲಿಲ್ಲಾ ।
ವಿಷ ಉಣಿಸಿದರಿಗೆ ಷಡ್ರಸವ ನೀಡಿದರಲ್ಲಾ ।
ತುಸವಾದರೂ ಜನ ತಿಳಿಯಲಿಲ್ಲಾ ।
ದೇಶ ಕೋಶವ ತಿರುಗಿ ಲೇಸನೊರೆದರಲ್ಲಾ ।
ಏನಾದರೇನು ಜನ ತಿಳಿಯಲಿಲ್ಲಾ ।

ಹೆಚ್. ವಿ. ವೀರಭದ್ರಯ್ಯ,
ಸಿದ್ಧಗಂಗಾ

# ಸಂಪಾದಕೀಯ

## ವಸ್ತುಪ್ರದರ್ಶನ

ನೂರು ವರ್ಣನೆಗಳಿಗಿಂತ ಒಂದು ಉದಾಹರಣೆ ಮೇಲು ಎನ್ನುವ ಮಾತೊಂದಿದೆ. ಕೇಳಿದ್ದು ಮನಸ್ಸಿಗೆ ಮುಟ್ಟುವುದು ಕಷ್ಟ; ನೋಡಿದ್ದು ಹಾಗಲ್ಲ. ಮನಸ್ಸನ್ನು ತುಂಬುತ್ತದೆ; ಪ್ರತಿ ಕ್ರಿಯೆಗಳನ್ನು ಉಂಟುಮಾಡುತ್ತದೆ. ಅದಕ್ಕಾಗಿಯೇ ಶಿಕ್ಷಣ ಕ್ಷೇತ್ರದಲ್ಲಿ ಥಿಯರಿಗಿಂತ ಪ್ರಾಕ್ಟಿಕಲ್ ತರಗತಿಗಳಿಗೆ ಹೆಚ್ಚು ಮಹತ್ವಕೊಡುತ್ತ ಬಂದಿರುವುದು. ವಸ್ತುವನ್ನು ಕುರಿತು ಎಷ್ಟೇ ವಿಧವಾಗಿ, ಪರಿಣಾಮಕಾರಿಯಾಗಿ, ವಿವರಣೆ ಕೊಡುವುದಕ್ಕಿಂತ ವಸ್ತುವನ್ನೇ ಮುಂದಿಟ್ಟಾಗ ಆಗುವ ಅನುಭವವೇ ಬೇರೆ. ಇದನ್ನರಿತ ತಜ್ಞರು ವಸ್ತುಪ್ರದರ್ಶನವನ್ನು ರೂಢಿಗೆ ತಂದರು. ವಸ್ತುಪ್ರದರ್ಶನಗಳನ್ನು ಏರ್ಪಡಿಸುವುದರ ಮೂಲೋದ್ದೇಶ ಪ್ರಾತ್ಯಕ್ಷಿಕ ಶಿಕ್ಷಣ ನೀಡುವುದೇ ಆಗಿದೆ. ಇದರಿಂದ ಒಂದು ಜನಾಂಗದ ಇತಿಹಾಸವನ್ನು ಸಂಸ್ಕೃತಿಯನ್ನು, ನಾಗರೀಕತೆಯನ್ನು ತಿಳಿಯಲು ಸಹಾಯಕವಾಗುತ್ತದೆ. ಹರಪ್ಪ ಮೊಹೆಂಜದಾರೋ ಸಂಸ್ಕೃತಿಯನ್ನು ತಿಳಿಯಲು ಅಂದಿನ ಜೀವನ ಕ್ರಮವನ್ನು ತಿಳಿಯಲು ಅದಕ್ಕೆ ಸಂಬಂಧಿಸಿದ ವಸ್ತು ವಿಶೇಷಗಳು 'ಉತ್ಖನನ'ದಲ್ಲಿ ದೊರೆತದ್ದರಿಂದ ಸಾಧ್ಯವಾಯಿತಲ್ಲವೆ? ವಸ್ತುಸಂಗ್ರಹಾಲಯಗಳಿಂದ ಚಾರಿತ್ರಿಕ ಪ್ರಜ್ಞೆ ವಿಕಾಸವಾಗುವಂತೆ ವಸ್ತುಪ್ರದರ್ಶನಗಳಿಂದಲೂ ಆಗುತ್ತದೆ. ಸುಪ್ರಸಿದ್ಧ ಸಾಲಾರ್‌ಜಂಗ್ ವಸ್ತುಸಂಗ್ರಹಾಲಯ, ವಿಶ್ವೇಶ್ವರಯ್ಯ ವಸ್ತು ಸಂಗ್ರಹಾಲಯಗಳಿಂದ ಆಗುತ್ತಿರುವ ಶಿಕ್ಷಣ ಪ್ರಸಾರ ಮೌನ ಸೇವೆಯಲ್ಲವೆ? ವಸ್ತುಪ್ರದರ್ಶನಗಳು ಕರ್ನಾಟಕ ರಾಜ್ಯದಲ್ಲಿ ತುಂಬ ವಿರಳವೆಂದೇ ಹೇಳಬೇಕು. ಅದರಲ್ಲೂ ಖಾಸಗಿಯಾಗಿ ವಸ್ತುಪ್ರದರ್ಶನಗಳ ವ್ಯವಸ್ಥೆಯಂತೂ ಅತಿ ಅಪರೂಪ ಏಕೈಕ ಉದಾಹರಣೆ ಮಾತ್ರ. ದಸರಾ ಸಂದರ್ಭದಲ್ಲಿ ಮೈಸೂರಿನಲ್ಲಿ ಏರ್ಪಡುವ ವಸ್ತುಪ್ರದರ್ಶನ, ಹಾಸನದ ಹಾಸನಾಂಬ ಜಾತ್ರೆ ಸಂದರ್ಭದಲ್ಲಿ ವ್ಯವಸ್ಥೆಯಾಗುವ ವಸ್ತುಪ್ರದರ್ಶನ ಪೂರ್ಣ ರಾಜ್ಯ ಸರ್ಕಾರದವತಿಯಿಂದ ನಡೆಯುವಂಥವು. ಅವುಗಳಿಂದ ರಾಜ್ಯದ ಜನತೆಗೆ ವಿಶೇಷವಾಗಿ ನಗರದ ಪಟ್ಟಣದ ಜನತೆಗೆ ಪ್ರಯೋಜನವಾಗುತ್ತಿದೆ ಎಂಬುದಾಗಿ ವಿಚಾರವಂತರೆಲ್ಲ ಅಭಿಪ್ರಾಯಪಡುತ್ತಾರೆ. ಗ್ರಾಮೀಣ ಜನತೆಯ ದೃಷ್ಟಿಯಿಂದ ವ್ಯವಸ್ಥೆ ವಸ್ತುಪ್ರದರ್ಶನ ಅದೂ ಕೃಷಿ ಮತ್ತು ಕೈಗಾರಿಕಾ

ವಸ್ತುಪ್ರದರ್ಶನವೆಂದರೆ ಶ್ರೀ ಸಿದ್ಧಗಂಗಾ ಮಠದಲ್ಲಿ ಶಿವರಾತ್ರಿ ಸಂದರ್ಭದಲ್ಲಿ ಜಾತ್ರಾ ವೇಳೆಯಲ್ಲಿ ಏರ್ಪಡಿಸುವ ವಸ್ತುಪ್ರದರ್ಶನ ಒಂದೇ ಎಂದು ರಾಜ್ಯದ ಸಚಿವರು, ಗಣ್ಯರು, ತಜ್ಞರು ಹೇಳುತ್ತಿರುವುದು ಹೊಸ ಮಾತಾಗಿಲ್ಲ. ಸಿದ್ಧಗಂಗಾ ಮಠ ಕಳೆದ 27 ವರ್ಷಗಳಿಂದ ವಸ್ತುಪ್ರದರ್ಶನವನ್ನು ನಡೆಸಿಕೊಂಡು ಬರುತ್ತಿದೆ. ಕೇಂದ್ರ, ರಾಜ್ಯ ಸರ್ಕಾರಗಳ ಸಹಾಯ, ಖಾಸಗಿ ಉದ್ಯಮಿಗಳ ನೆರವು, ಅಭಿಮಾನಿಗಳ ಪ್ರೋತ್ಸಾಹ, ಜಿಲ್ಲಾಪರಿಷತ್, ಮಂಡಲ ಪಂಚಾಯಿತಿಗಳ ಸಹಕಾರವನ್ನು ಪಡೆದುಕೊಂಡು ಅನಕ್ಷರಸ್ಥ ಜನತೆಯ ಉಪಯೋಗಕ್ಕಾಗಿ ಶ್ರಮಿಸುತ್ತಿರುವುದು ಜನ ಜನಿತವಾದುದು. ವಸ್ತುಪ್ರದರ್ಶನ ಶಿಕ್ಷಣದ ಪ್ರಮುಖ ಮುಖ. ಶಿಕ್ಷಣವಂತರನ್ನಾಗಿಸುವ ಪರಿಣಾಮಕಾರಿ ಮಾರ್ಗ. ನಮ್ಮನ್ನಾಳುವ ಸರ್ಕಾರದ ಯೋಜನೆಗಳು ಯಾವುವು? ಅವುಗಳ ರೀತಿ ರಿವಾಜುಗಳೆಂತು? ಅವುಗಳಿಂದಾಗುತ್ತಿರುವ ಲಾಭ ಯಾರಿಗೆ? ಎಷ್ಟು? ಅಂತಹ ಯೋಜನೆಗಳಿಗೆ ಖರ್ಚಾಗುವ ಹಣವೆಷ್ಟು? ಒಂದು ರೀತಿಯಾದರೆ ಯಾವ ಮಾರ್ಗವನ್ನು ಅನುಸರಿಸಿದರೆ ಪ್ರಗತಿ ಸಾಧಿಸಬಹುದು? ನಮ್ಮ ಕೃಷಿ, ಉದ್ಯಮಗಳಲ್ಲಿರುವ ನ್ಯೂನತೆಗಳು ಏನು? ಅವುಗಳ ಪರಿಹಾರ ಹೇಗೆ? ಎಂಬುದನ್ನು ವಸ್ತುಪ್ರದರ್ಶನದಲ್ಲಿ ತಿಳಿದುಕೊಳ್ಳಲು ಸಾಕಷ್ಟು ಅವಕಾಶಗಳು ಲಭ್ಯವಿರುತ್ತದೆ. 'ಗಾಳಿ ಬಂದಾಗ ತೂರಿಕೋ' ಎಂಬ ಗಾದೆ ಮಾತೊಂದಿದೆ ಅವಕಾಶ ಲಭ್ಯವಾದಾಗ ಸದುಪಯೋಗ ಮಾಡಿಕೊಳ್ಳುವ ಪ್ರವೃತ್ತಿ ಜನತೆಯಲ್ಲಿ ಮೂಡಬೇಕು. ವಸ್ತುಪ್ರದರ್ಶನಗಳಿಗೆ ಭೇಟಿಕೊಟ್ಟಾಗ ಅಲ್ಲಿನ ಮಳಿಗೆಗಳ ಪೂರ್ಣಪರಿಚಯ ಮಾಡಿಕೊಳ್ಳಬೇಕು. ಕೃಷಿ, ಪಶುಪಾಲನೆ, ರೇಷ್ಮೆ, ನೀರಾವರಿ, ಅರಣ್ಯ, ಯಂತ್ರೋಪಕರಣಗಳ ಬಗ್ಗೆ ಸಂಬಂಧಿಸಿದ ಸಿಬ್ಬಂದಿ ವರ್ಗದವರಿಂದ ಮಾಹಿತಿ ಪಡೆಯಬೇಕು. ಅದರಿಂದ ಪ್ರಗತಿ ಪಥದಲ್ಲಿ ಮುನ್ನಡೆಯುವ ಅರಿವುಂಟು ಮಾಡಿಕೊಳ್ಳಬೇಕು. ಅದು ಬಿಟ್ಟು ಹುರಿಗಾಳು, ಮೆಣಸಿನಕಾಯಿ ಬೋಂಡಾ, ಚುರಿಮುರಿ ತಿನ್ನುತ್ತ ವ್ಯರ್ಥ ಮಾತು ಕತೆಯಲ್ಲಿ ಸುತ್ತಾಡುವಂತಾಗಬಾರದು. ವಸ್ತುಪ್ರದರ್ಶನವನ್ನು ಏರ್ಪಡಿಸಿದವರ, ಸಹಕರಿಸಿದವರ, ಪ್ರೋತ್ಸಾಹಿಸಿದವರ ಶ್ರಮ, ಸೇವಾ ಮನೋಧರ್ಮವನ್ನು ಸೂಕ್ತವಾಗಿ ಗೌರವಿಸುವಂತೆ ಜನತೆ ಸಹಕರಿಸುವುದು ತನ್ನ ಸಂಸ್ಕೃತಿಯನ್ನೇ ಪ್ರದರ್ಶಿಸಿಕೊಂಡಂತಾಗುತ್ತದೆ.

ಲೋಕವನ್ನು ಬೆಳಗಲು ಒಬ್ಬ ಸೂರ್ಯಬೇಕು; ಅನಕ್ಷರಸ್ಥ ಜನತೆಯನ್ನು ಸುಶಿಕ್ಷಿತರನ್ನಾಗಿ ಮಾಡಲು ವಸ್ತುಪ್ರದರ್ಶನದಂತಹ ಒಂದು ಪ್ರಯತ್ನ ಸಾಕು.

## ಬಸವ ತತ್ತ್ವ ರತ್ನಾಕರ ವಚನಾಮೃತ

ಕೃತಿಸೃಷ್ಟಿ

ೞ॥ "ಕನ್ನಡ ಕವಿ ಕಾಳಿದಾಸ" **ಶ್ರೀ ನೋಟಗಿ ಮಲ್ಲಿಕಾರ್ಜುನ,** ಅಥಣಿ, ಬೆಳಗಾವಿ ಜಿಲ್ಲೆ.

ವಿಶಾಲ ಫಲಕಮೆನಲೊಪ್ಪಿರ್ದ ಎನ್ನೆದೆಯ ಹಸವಾದ ಮೃದುಭೂಮಿಯೊಳ್ ಪರಶಿವನ ನಾದ ಬ್ರಹ್ಮವಾಗಿಪ್ಪ ಪ್ರಣವಾಕ್ಷರ ಮಂತ್ರಮಯ ತತ್ತ್ವ ಶ್ಲೋಕ ಶಬ್ದ-ಚಿತ್ರಂಗಳಾ ಲಿಪಿ, ಕಪ್ಪು ಕೇಸರಿಯೋಲ್ ರೋಮರಾಜಿಯಿಂದೊಪ್ಪಿ ಕಂಗೊಳಿಸಿತಯ್ ಶಿವಸುಖವಾಂತ ಮಮ ಸ್ವಪ್ನಸೃಷ್ಟಿಯೊಳ್ ! ಅದೇನದ್ಭುತಮಂ ಪೇಳ್ವೆನಯ್ ! ಬಸವ ತತ್ತ್ವ ರತ್ನಂಗಳೆಲ್ಲ ಅಲ್ಲಿ ಸಾಲುಗೊಂಡ ಸಸಿಯವೋಲ್ ಎಸೆಯುತಿರಲಾಗ "ಬಸವ ತತ್ತ್ವರತ್ನಾಕರ" ಬೆಳೆದು ಬಂದ ಫಲಮಿದಯ್ !ಬಸವ ಕೃಪೆಯಿಂ ಮಿಗೆ "ಕನ್ನಡ ಕವಿಕಾಳಿದಾಸಂ" ನೀಡಿದಪನಲ್ತೆ ಪೆರತುಂಟೆ ? ಶಿಶುವಿನಾ ಅಕ್ಕರೆಯ ನುಡಿಗೇಳ್ವಂತೆ, ಬಿಡದೆನ್ನ ಕೃತಿಜ್ಞಾನ ಲಾಭಮುಂ ಪಡೆವುದು ಸಕ್ಕದ ಕನ್ನಡನಾಡವರ್ಗಳ್!

### ಷಟ್‌ಸ್ಥಲ ರಹಸ್ಯ ? ಭಕ್ತಸ್ಥಲ–೧

**1. ಪಿಂಡಸ್ಥಲ**

"ಶಿವನೊಳಡಗಿದ ಶಕ್ತಿಯಂತಿದಿತ್ತು ;
ಕವಿಯೊಳಡಗಿದ ಕಾವ್ಯದಂತಿದಿತ್ತು ;
ಕಾಯದೊಳಡಗಿದ ಗಾನದಂತಿದ್ದಿತ್ತು ;
ಕಾಯದೊಳಡಗಿದ ಆತ್ಮದಂತಿದ್ದಿತ್ತು ;
ಮಂತ್ರದೊಳಡಗಿದ ಮಹಿಮೆಯಂತಿದಿತ್ತು ;
ಚಿತ್ರಕಾರನೊಳಡಗಿದ ಚಿತ್ರದಂತಿದ್ದಿತ್ತು ;
ಶಿಲ್ಪಕಾರನೊಳಡಗಿದ ಮೂರ್ತಿಯಂತಿದ್ದಿತ್ತು ;
ನುಡಿಯೊಳಡಗಿದ ಅರ್ಥದಂತಿದ್ದಿತ್ತು ;
ಶರಣನೊಳಡಗಿದ ಭಕ್ತಿಯಂತಿದ್ದಿತ್ತು ;
ಪರಮಾತ್ಮನೊಳಡಗಿದ ಬ್ರಹ್ಮಾಂಡದಂತಿದ್ದಿತ್ತು ;
ಚಂದನದೊಳಡಗಿದ ಸೌಗಂಧದಂತಿದ್ದಿತ್ತು ;
ತಂದೆ ಶ್ರೀಶೈಲ ಮಲ್ಲಿಕಾರ್ಜುನ ನಿಮ್ಮ ನಿಲವು. "

2. **ಪಿಂಡಜ್ಞಾನ ಸ್ಥಲ:**

"ಮನೆಯ ಹೊಸ್ತಿಲ ಮೇಲಣ ದೀಪವು,
ಮನೆಯ ಒಳಹೊರಗೂ ಬೆಳಗಿ ಪ್ರಕಾಶಿಸುತಿಪ್ಪಂತೆ ;
ಸ್ಫಟಿಕದ ಘಟದೊಳಗಣ ಜ್ಯೋತಿ,
ಒಳಹೊರಗೊಂದಾಗಿ ತಾನೆ ಬೆಳಗುತಿರ್ಪಂತೆ ;
ಆದಿ ಅನಾದಿಯಾಗಿಪ್ಪ ಸ್ವಯಂಭು ನೀನೆ,
ಎನ್ನ ಹೃದಯ ಮಂದಿರದಿ ಆತ್ಮ ಜ್ಯೋತಿಯಾಗಿ
ಬೆಳಗುತ್ತಿದ್ದಿಯಲ್ಲಾ ! ಶ್ರೀಶೈಲ ಮಲ್ಲಿಕಾರ್ಜುನ"

3. **ಸಂಸಾರ ಹೇಯು ಸ್ಥಲ :**

"ಧರೆ ಧನ ಕನಕ ವಸ್ತು ಗೃಹಂಗಳೆಲ್ಲ,
ಕರವಿಡಿದ ಸತಿಸುತಾದಿ ಬಂಧು ಬಳಗವೆಲ್ಲ,
ಮರಹಿನಿಂದಿದೆಲ್ಲವೂ ಎನ್ನದೆಂದು
ಮೈಮರೆದಿರ್ದೆನಯ್ಯಾ !
ಕರೆದು ಕೈವಿಡಿದೆತ್ತಿಕೊಳ್ಳಾ ಎನ್ನ ತಂದೆ
ಶ್ರೀಶೈಲ ಮಲ್ಲಿಕಾರ್ಜುನ ! "

4. **ಗುರು ಕಾರುಣ್ಯ ಸ್ಥಲ**

"ಶ್ರೀಗುರುವೆ ನಿಮ್ಮೊಲುಮೆಯಿಂದ ಭಕ್ತಿಜ್ಞಾನ ಎನಗುಂಟಾಯಿತ್ತು.
ಶ್ರೀಗುರುವೆ ನಿಮ್ಮೊಲುಮೆಯಿಂದ ಹೃದಯ ಶಾಂತಿಭರಿತವಾಯಿತ್ತು.
ಶ್ರೀಗುರುವೆ ನಿಮ್ಮೊಲುಮೆಯಿಂದ ವಿಷವು ಅಮೃತವಾಯಿತ್ತು.
ಶ್ರೀಗುರುವೆ ನಿಮ್ಮೊಲುಮೆಯಿಂದ ಹೃದಯ ಶಾಂತಿ ಭರಿತವಾಯಿತ್ತು.
ಶ್ರೀಗುರುವೆ ನಿಮ್ಮೊಲುಮೆಯಿಂದ ಹಿಂದಣ ಜನ್ಮದರಿವಾಯಿತ್ತು.
ಶ್ರೀಗುರುವೆ ನಿಮ್ಮೊಲುಮೆಯಿಂದ ವಿಮರ್ಶಕಲಾಶಕ್ತಿ ಪ್ರಾಪ್ತವಾಯಿತ್ತು.
ಶ್ರೀಗುರುವೆ ನಿಮ್ಮೊಲುಮೆಯಿಂದ ಕಾವ್ಯಶಕ್ತಿ ಕನ್ಯೆ ಕರವಿಡಿದು ಶುಭಕರವಾಯಿ
ಶ್ರೀಗುರುವೆ ನಿಮ್ಮೊಲುಮೆಯಿಂದ ಶರಣ ಬಸವಾದಿ ಪ್ರಮಥರ ಸಂಗವಾಯಿ
ಶ್ರೀಗುರುವೆ ನಿಮ್ಮೊಲುಮೆಯಿಂದ ಭವದ ಬಳ್ಳಿ ಕಳಚಿ ಬಿದ್ದಿತ್ತು ನೋಡಾ
ಶ್ರೀಗುರುರಾಜ " ಮುರುಘ ಶಿವಯೋಗಿ " ನೀವೆ ಕರುಣಿಸಿದರಾಗಿ ! ತವದಿವ್
ಶ್ರೀಪಾದ ಕಂಡೆನಯ್ಯಾ ಮತ್‌ಸ್ವಾಮಿ ಶ್ರೀಶೈಲಮಲ್ಲಿಕಾರ್ಜುನ ! "

5. ವಿಭೂತಿಸ್ಥಲ

"ಘೋರ ಪಾಪವೆಂತು ಕಳೆವುದೆಂದು ಚಿಂತಿಸಬೇಡ !
ಕ್ರೂರ ಕಟುಕನ ಕತ್ತಿಯಾದಡೇನು,
ಪರುಷದ ಸೋಂಕಿನಿಂದೆ ಸುವರ್ಣವಾಗದೇನಯ್ಯಾ ?
ಹರಭಕ್ತಿಯಿಂ ಲಲಾಟದಲಿ ವಿಭೂತಿಯ ಧರಿಸಲೊಡನೆ
ಪಾಪ ಪಲ್ಲಟವಾಗದೇನಯ್ಯಾ ?
ಅಗ್ನಿಗಿಕ್ಕಿದ ಚಿನ್ನ ಕಾಳಿಕೆಯ ಕಳೆದುಕೊಂಡು
ಹೊಳೆಯುವಂತಾಯಿತ್ತು ಕಾಣಾ ! ಶ್ರೀ ಶೈಲ ಮಲ್ಲಿಕಾರ್ಜುನ."

6. ರುದ್ರಾಕ್ಷಿ ಸ್ಥಲ

"ಪರಮತತ್ತ್ವ ಚಿಂತಾಮಣಿಗಳೆನಿಸಿರ್ಪ,
ಪರಶಿವನ ಜ್ಞಾನಚಕ್ಷುವಿನಲ್ಲಿ ಉದಯವಾದ,
(ಶಿವಾಕ್ಷ)ರುದ್ರಾಕ್ಷಗಳನು ಸರಗೊಳಿಸಿ,
ಭಸಿತ ಭೂಷಣನಾದ ಭಕ್ತನು ಭಕ್ತಿದ್ವಾರದಲ್ಲಿ
ವಿಧಾನವಿಡಿದು ಧರಿಸಿ ಕಂಗೊಳಿಸಿ,
ಲಿಂಗಾಂಗ ಸಾಮರಸ್ಯ ಸುಖವನ್ನೈದಿ ಮುಕ್ತ್ಯಂಗನೆಯ ಕೂಡಿ,
ಬೆಳಗುತಿರ್ದನು ಕಾಣಾ ! ಶ್ರೀ ಶೈಲ ಮಲ್ಲಿಕಾರ್ಜುನ."

7. ಪಂಚಾಕ್ಷರಿ ಸ್ಥಲ

"ಅರಣ್ಯ ಅಂಜುವುದು ಸೂರ್ಯನ ಪ್ರಖರತೆಗೆ ;
ಕತ್ತಲೆ ಅಂಜುವುದು ಮಹಾಜ್ಯೋತಿ ಪ್ರಭೆಗೆ ;
ಭವಿತನ ಅಂಜುವುದು ಭಕ್ತನ ದಿವ್ಯ ಶಕ್ತಿಗೆ ;
ಆನೆ ಅಂಜುವುದು ಸಿಂಹದ ನಖವೆಂದು- ಅಂಕುಶಕ್ಕೆ ;
ಪರ್ವತ ಅಂಜುವುದು ಇಂದ್ರನ ವಜ್ರಾಯುಧಕ್ಕೆ ;
ಪಂಚ ಮಹಾ ಪಾತಕ ಅಂಜುವುದು 'ಓಂ ನಮಃ ಶಿವಾಯ'
ಪಂಚಾಕ್ಷರ (ಪ್ರಣವ ಕೂಡಿ ಷಡಕ್ಷರ) ಮಂತ್ರಕ್ಕೆ ;
ಕಾಣಾ ! ಶ್ರೀ ಶೈಲ ಮಲ್ಲಿಕಾರ್ಜುನ."

8. ಲಿಂಗಧಾರಣ ಸ್ಥಲ

"ಲಿಂಗ-ಭಸ್ಮಧಾರಿಗಳಲ್ಲದವರ ಮುಖ ಹೊಲ್ಲ ನೋಡಾ !
ಲಿಂಗವಂತರಿಲ್ಲದ ಊರು ಕೇರಿಗಳು ಹಾಳು ನೋಡಾ !
ಲಿಂಗದೇವರಿಲ್ಲದ ನಿಲಯ ನೆಲವು ನರವಿಂಧ್ಯ ನೋಡಾ !
ಲಿಂಗಭೋಗೋಪ ಭೋಗಿಯಾಗಿಪ್ಪ ನಮ್ಮ ಶರಣನಿರ್ದ
ಶಾಂತಿ ಸ್ಥಲವೇ ಕೈಲಾಸವಾಗಿಪ್ಪುದು ಕಾಣಾ ! ಶ್ರೀ ಶೈಲ ಮಲ್ಲಿಕಾರ್ಜುನ."

9. ತಾಮರಸ ನಿರಸನ ಸ್ಥಲ

"ಇಷ್ಟಲಿಂಗವ ಧರಿಸಿ ಪೂರ್ವ ಗುಣವಳಿದು ಗುರುಕರ ಜಾತನಾದ ಬಳಿಕ
ಪ್ರಪಂಚ ಬಂಧು ಬಳಗ ತನ್ನವರೆಂಬ
ಮಾಯಾ ಮೋಹ ಧರಿಸಲಾಗದು ನೋಡಾ !
ತಪ್ಪಿ ನಂಟ ಭಕ್ತಿಯ ಗೆಯ್ದಡೆ, ನಾಯಕ ನರಕ
ತಪ್ಪದು ಕಾಣಾ ! ಶ್ರೀ ಶೈಲ ಮಲ್ಲಿಕಾರ್ಜುನ."

10. ಮಾಹೇಶ್ವರ ಸ್ಥಲ

"ವೇದಾಗಮವನೋದಿದವಂಗೆ, ವೇದಾಗಮವನೊರೆದು
ಆಚಾರ್ಯ ಬ್ರಾಹ್ಮಣನೆನಿಸಿಕೊಂಬುದೆ ಉದ್ದೇಶವಾಯಿತ್ತು.
ಶಾಸ್ತ್ರಪುರಾಣವನೋದಿದವಂಗೆ, ಶಾಸ್ತ್ರಪುರಾಣವನೊರೆದು
ಶಾಸ್ತ್ರಿಯೆನಿಸಿಕೊಂಬುದೆ ಧ್ಯೇಯವಾಯಿತ್ತು.
ಸಂಶೋಧನ ಮಾಳ್ಪವಂಗೆ, ಶೋಧನೆಯೆ ಪ್ರಾಣವಾಗಿ
ಮಹಾಸಂಶೋಧಕನೆನಿಸಿಕೊಂಬುದೆ ಗುರಿಯಾಯಿತ್ತು,
ವಿಮರ್ಶೆ ಮಾಳ್ಪವಂಗೆ, ತನ್ನ ವಿಮರ್ಶಕೃತಿಯೆ ಹಿರಿದಾಗಿ ತೋರಿ
ತಾನೆ ವಿಮರ್ಶ ವಿಚಕ್ಷಣನೆನಿಸಿಕೊಂಬ ಹವಣಾಯಿತ್ತು.
ಇಂತು ವೇದಾಗಮವನರಿದು-ಶಿವಾನುಭವ ವೇದ್ಯವಾಗದವಂಗೆ
ಶಿವಪದವೆಂತಹುದಯ್ಯಾ ?

ಶಾಸ್ತ್ರಪುರಾಣವ ತಿಳಿದು–ಭಕ್ತಿನೆಲೆಗೊಳ್ಳದವಂಗೆ ಮುಕ್ತಿಯೆಂತಹುದಯ್ಯಾ
ಸಂಶೋಧನೆಗೆಯ್ದು ಆತ್ಮಶೋಧನೆಯಿಲ್ಲದವಂಗೆ ಮೋಕ್ಷವೆಂತಹುದಯ್ಯಾ ?
ವಿಮರ್ಶೆ ಮಾಡಿ-ತನ್ನ ಆತ್ಮದರ್ಶನವಿಲ್ಲದವಂಗೆ ಕೈವಲ್ಯವೆಂತಹುದಯ್ಯಾ ?
ಇಂತಿವರೆಲ್ಲರ ಜ್ಞಾನ-ಆತ್ಮನಿರದ ದೇಹದಂತೆ ಹೆಣನರೂಪಾಗಿ,
ಶಿವಭಕ್ತಿ-ಅನುಭವ ರಹಿತ, ಅಪೂರ್ಣ ಜ್ಞಾನವೆನಿಸಿ ಭವದ ಬಳ್ಳಿಗೆ
ಬೀಜವಾಯಿತ್ತುಕಾಣಾ ! ಶ್ರೀ ಶೈಲ ಮಲ್ಲಿಕಾರ್ಜುನ."

---

ಸೂಚನೆ:– ಪ್ರಕೃತಿ ಕೃತಿರತ್ನವಾದ "ಬಸವ ತತ್ವ ರತ್ನಾಕರ" 'ವಚನ ಕಾವ್ಯ ಸುಧಾಸಾಗರ' "ಕನ್ನಡಕವಿಕಾಳಿದಾಸ"ರ ಐವತ್ತು ವರ್ಷಗಳ ದೀರ್ಘ ತಪಸ್ಸಿನ ಫಲವಾಗಿ ಶ್ರೀ ಬಸವಾದಿ ಪ್ರಮಥರ ಪುಣ್ಯ ಕೃಪೆಯಿಂದ ಹೊರಬಂದ ಅಪ್ರಕಟಿತ ಗ್ರಂಥರತ್ನವಿದು. ದಿ॥ 15-1-1975 ರಂದು ಮೈಸೂರು ಪ್ರಾಚ್ಯ ವಿದ್ಯಾ ಸಂಶೋಧನಾಲಯದ ನಿರ್ದೇಶಕರಾದ ಡಿ. ಎಚ್. ದೇವೀರಪ್ಪನವರು ಎಂ. ಎ. ಇವರು ಈ ಗ್ರಂಥರತ್ನಕ್ಕೆ ತಮ್ಮ ಅಮೂಲ್ಯವಾದ ಸುಂದರ "ಮುನ್ನುಡಿ" ಯನ್ನು ಬರೆದಿದ್ದಾರೆ. ಇದೀಗ ಈ "ಬಸವತತ್ವ ರತ್ನಾಕರ" ಕೃತಿರತ್ನ ಕನ್ನಡನಾಡಿನ ಪ್ರಸಿದ್ಧ, ಪ್ರಬುದ್ಧ ಧಾರ್ಮಿಕ ಪತ್ರಿಕೆಯಾದ "ಸಿದ್ಧಗಂಗಾ" ಮಾಸಿಕ ಪತ್ರಿಕೆಯಲ್ಲಿ ಧಾರವಾಹಿಯಾಗಿ ಪ್ರಕಟವಾಗುತ್ತಲಿರುವುದು ತುಂಬಾ ಸಂತೋಷದ ಸಂಗತಿ

## ೩. ಪ್ರಸಾದಿ ಸ್ಥಲ

11. "ಇಚ್ಛಿಸಿ ಬಂದ ಪದಾರ್ಥದ ಪೂರ್ವಾಶ್ರಯವಂ ಕಳೆದು,
ತನ್ನಕಾಯಮಂ ಸ್ಪರ್ಶಿಸಲೀಯದೆ,
ಲಿಂಗಾರ್ಪಿತವಂ ಗೆಯ್ಯುವಾತ ಪ್ರಸಾದಿ.
ಕಲ್ಪಿಸಿ ಬಂದ ಪದಾರ್ಥದ ಪೂರ್ವಾಶ್ರಯವ ಕಳೆದು,
ತನ್ನ ಭಾವಮಂ ಸ್ಪರ್ಶಿಸಲೀಯದೆ,
ಲಿಂಗಾರ್ಪಿತವಂ ಗೆಯ್ಯುವಾತ ಪ್ರಸಾದಿ.
ಭಾವಿಸಿ ಬಂದ ಪದಾರ್ಥದ ಪೂರ್ವಾಶ್ರಯವ ಕಳೆದು,
ತನ್ನ ಮನವಂ ಸ್ಪರ್ಶಿಸಲೀಯದೆ,
ಲಿಂಗಾರ್ಪಿತವಂ ಗೆಯ್ಯುವಾತ ಪ್ರಸಾದಿ.
ಇಂತೀ ಅರ್ಪಿತ-ಅವಧಾನದ ರಹಸ್ಯವಂ
ಅರಿಯ ಬಲ್ಲಾತ, ಶ್ರೀಶೈಲ ಮಲ್ಲಿಕಾರ್ಜುನನಲ್ಲಿ ಅಚ್ಚ ಪ್ರಸಾದಿ."

## ೪. ಪ್ರಾಣಲಿಂಗಿ ಸ್ಥಲ.

12. "ಶಿವಾನುಭವ ಶಿವಾನುಭವವೆಂದೆಂಬರು
ಶಿವಾನುಭವದ ನೆಲೆಕಲೆಯನರಿಯರು,
ಪುಸ್ತಕಂಗಳನೋದಿ ವಚನಂಗಳ ಹಾಡಿ,
ಜನಮನ ರಂಜನೆಯಂ ಮಾಡಿ ಮಂಗಳಪಾಡಿ,
ಶಿವಾನುಭವಿಗಳೆಂದು ಹೇಳಿಕೊಳ್ಳುವರ ಕಂಡು,
ನಾ ನಗುತಿರ್ದೆನಯ್ಯಾ !
ಭವರೋಗಿಗಳಿಗೆಂತಪ್ಪುದಯ್ಯಾ ಶಿವಾನುಭವ ?
ಕೇವಲ ಓದುವ ಕೇಳುವ ಚಟವುಳ್ಳವರ ಕಂಡು
ಆನು ಬೇಸರಗೊಂಡಿರ್ದೆನಯ್ಯಾ !
ಅನುಭವವೆಂಬುದೊಂದು ದೊಡ್ಡ ಸಂಪತ್ತು ಕಾಣಿರಯ್ಯಾ !
ಅರುವಿನ ತೃಪ್ತಿಗೆ ಅನುಭಾವವೇ ಆಶ್ರಯ,
ಅನುಭವವಿಲ್ಲದ ಭಕ್ತಿ ಅನುವಿಂಗೆ ಬಾರದಯ್ಯಾ !
ಇಂತಪ್ಪ ಶಿವಭಕ್ತಿ-ಶಿವಾಚಾರ-ಶಿವಾನುಭವ ಪಥವನರಿಯದೆ,
ಬರಿಯ ಶಾಸ್ತ್ರಂಗಳ ಹೇಳಿ ಕೇಳಿ ಕೆಡದಿರಿಂಭೋ !
ನಮ್ಮ ಶ್ರೀಶೈಲಮಲ್ಲಿಕಾರ್ಜುನನ ಶರಣರ ಸಂಗವೇ
ಶಿವಾನುಭವವೆಂದರಿತು ಬಾಳಿ ಭೋ !"

## ೫. ಶ್ರೀ ಶರಣ ಸ್ಥಲ.

13. "ಆದಿಯಲ್ಲಿ ಶಿವಬೀಜವಲ್ಲದವರಿಗೆ ಶಿವಜ್ಞಾನ ವೇದ್ಯವಾಗದು ನೋಡಾ !
ಶಿವಭಕ್ತಿ ಲಿಂಗಸ್ಥಲ ಅಳವಡದಾಗಿ, ಜಂಗಮಸ್ಥಲ ಅಳವಡದಾಗಿ,
ಪಾದೋದಕ ಪ್ರಸಾದ ಸ್ಥಲ ಅಳವಡದಾಗಿ,
ಇಂತಪ್ಪ ಕರ್ಮಿಗಳಿಗೆ ಶರಣರ ಅನುಭಾವ ನೆಲೆಗೊಳ್ಳದು ನೋಡಾ !
ಇಂತಿವರೆಲ್ಲ ನಾಯಕ ನರಕಕ್ಕೊಳಗಾದರು ಕಾಣಾ ! ಶ್ರೀಶೈಲಮಲ್ಲಿಕಾ-
ರ್ಜುನ ! "

14 ೬ ಐಕ್ಯಸ್ಥಲ

"ಬಯಲ ರೂಪ ಮಾಡಬಲ್ಲಡಾತನ ಶರಣನೆಂಬೆ.
ಆ ರೂಪ ಬಯಲ ಮಾಡಬಲ್ಲಡಾತನ ಲಿಂಗಾನುಭಾವಿಯೆಂಬೆ.
ಬಯಲ ರೂಪ ಮಾಡಲರಿಯ ದಿರ್ದಡಾತನ ಶರಣನೆನ್ನಲಾಗದು.
ಆ ರೂಪ ಬಯಲ ಮಾಡಲರಿಯದಿರ್ದಡಾತನ ಲಿಂಗಾನುಭಾವಿಯೆನ್ನಲಾಗದು.
ಈ ಉಭಯವೊಂದಾದಡೆ ಶ್ರೀಶೈಲಮಲ್ಲಿಕಾರ್ಜುನ ಲಿಂಗದಲ್ಲಿ
ಸಂದಿಲ್ಲದೆ ಕೂಡಿಕೊಂಡು ತಾನೆ ತಾನಾಗಿರ್ದ ನೋಡಾ!"

ಇಂತು ಶ್ರೀಗುರುಕಾರುಣ್ಯದಿಂ "ಕನ್ನಡಕವಿ ಕಾಳಿದಾಸಂ" ಭಕ್ತಸ್ಥಲಾಂತರ್ಗತವಾದ ಪಿಂಡಸ್ಥಲದಾದಿಯಿಂ ಐಕ್ಯಸ್ಥಲವಾಂತ ವಚನಂಗಳಂ ತಿಳುಪಿ, ಇನ್ನು ಮುಂದೆ ಭಕ್ತಸ್ಥಲದಾದಿಯಿಂ ಐಕ್ಯಸ್ಥಲಾಂತರ್ಗತಮಾದ, ಷಟ್‌ಸ್ಥಲಾತ್ಮಕ ವಚನಂಗಳಂ ಭಕ್ತಿಯಿಂ ಪೇಳುತಿರ್ದಪಂ, ಸದ್ಭಕ್ತರಾಲಿಸಿ ಕರುಣದಿಂ ಕವಿರಾಜನಂ ಉದ್ಧರಿಪುದು.

---

**ಆಜೀವ ಸದಸ್ಯರುಗಳಲ್ಲಿ ಒಂದು ಮನವಿ.**

ಸಿದ್ಧಗಂಗಾ ಪತ್ರಿಕೆಯ ಅನೇಕ ಆಜೀವ ಸದಸ್ಯರುಗಳ ವಿಳಾಸಗಳು ಬದಲಾಗಿರುವುದರಿಂದ ಕಾರ್ಯಾಲಯದಿಂದ ಕಳುಹಿಸಿದ ಸಂಚಿಕೆಗಳು ಕೆಲವು ಸದಸ್ಯರುಗಳಿಗೆ ತಲುಪದೆ ಹಿಂತಿರುಗುತ್ತಿವೆ. ದಯವಿಟ್ಟು ನಿಮ್ಮ ಬದಲಾದ ವಿಳಾಸಗಳನ್ನು ಆಗಿಂದಾಗ್ಗೆ ಪತ್ರಿಕಾ ಕಾರ್ಯಲಯಕ್ಕೆ ಕಳುಹಿಸಿ ಕೊಡುವುದರ ಮುಖೇನ "ಸಿದ್ಧಗಂಗಾ" ನಿಮಗೆ ಕ್ರಮವಾಗಿ ತಲುಪಲು ಸಹಕರಿಸಬೇಕಾಗಿ ಪ್ರಾರ್ಥನೆ. **ತಮ್ಮ ಸದಸ್ಯತ್ವದ ನಂಬರನ್ನು ತಪ್ಪದೇ ತಿಳಿಸಿರಿ.**

ಪ್ರಕಾಶಕರು.

---

## ಕಡಿಮೆ ಹಣ ಖರ್ಚು ಮಾಡಿ
## ಹೆಚ್ಚು ಬಟ್ಟೆಗಳನ್ನು ಒಗೆಯಿರಿ.

- ಇದೀಗ ನೀವು ಸಾಬೂನಿಗೆ ಕಡಿಮೆ ಹಣ ಖರ್ಚು ಮಾಡಿ ಹೆಚ್ಚು ಬಟ್ಟೆಗಳನ್ನು ಒಗೆಯಬಹುದು.
- ಕಸ್ತೂರಿ ನೀಲಂ ಹಾಗೂ ಕಸ್ತೂರಿ ಬಾರ್ ಸೋಪ್ ಉಪಯೋಗಿಸುವುದರಿಂದ ಇದು ಸಾಧ್ಯ.
- ಕಸ್ತೂರಿ ಸಾಬೂನುಗಳು ಬಹು ಉಳಿತಾಯಕರವಾದುದು ಅಲ್ಲದೆ, ಪ್ರತಿ ಬಾರ್ ಸೋಪಿನಿಂದಲೂ ಹೆಚ್ಚು ಬಾರಿ ಒಗೆಯಲು ಸಾಧ್ಯವಾಗುತ್ತದೆ.
- ಇದರಲ್ಲಿ ವಿಶೇಷ ಡಿಟರ್ಜೆಂಟುಗಳು ಮಿಶ್ರಿತವಾಗಿರುವುದ ರಿಂದ ನಿಮ್ಮ ಉಡುಪುಗಳ ಬಿಳುಪಿಗಿಂತಲೂ ಅತ್ಯಧಿಕ ಉಜ್ವಲವಾಗಿರುತ್ತವೆ.

ಕಸ್ತೂರಿ ಸಾ ಬೂ ನು ಗ ಳ ನ್ನು ಇ ಂ ದೇ ಉ ಪ ಯೋ ಗಿ ಸಿ ರಿ

**'ಕಸ್ತೂರಿ'**
**ಬಾರ್ ಸೋಪ್**

**'ಕಸ್ತೂರಿ'**
**ನೀಲಂ ಬಾರ್ ಸೋಪ್**

ತಯಾರಕರು :

ರಾಮಕೃಷ್ಣ ಆಯಿಲ್ ಮಿಲ್, ತುಮಕೂರು

# ಶಿವಶರಣರ ವಚನಗಳ ಉಗಮ ಭಾಗ-5.

ಎಸ್. ಚನ್ನಬಸಪ್ಪ. ಗಮಕಿ. ೫೪೩, ೫ನೇ ಅಡ್ಡರಸ್ತೆ, ೮ನೇ ಮುಖ್ಯರಸ್ತೆ. ಮಹಾಲಕ್ಷ್ಮಿಲೇಔಟ್. ಬೆಂಗಳೂರು-೮೬.

ಅಲ್ಲಮಪ್ರಭು ಮತ್ತು ಸಿದ್ದರಾಮಯ್ಯನವರ ಸಂವಾದ ಮುಂದುವರಿದದ್ದು; ಕ್ರಿಯೆಶುದ್ಧವಾದಲ್ಲಿ ಭಾವಶುದ್ಧವಾಗಿ ಕಪಿಲ ಸಿದ್ಧಮಲ್ಲಿಕಾರ್ಜುನ ಅಲ್ಲಿ ಉಳಿಯುತ್ತಾನೆ, ಅಂದ ಮಾತಿಗೆ ಪ್ರಭು ಆ ಮಾತನ್ನು ನಾನು ಒಪ್ಪುತ್ತೇನೆ. ಆದರೆ "ರಾಗವಡಗಿ ತಾಮಸ ನಿಲ್ಲಬೇಕು. ಅಹಂಕಾರದ ಗಿರಿಯುಡುಗಿ ಮಾತಿನ ಬಣವೆಯ ಮೆದೆಯನ್ನು ಸುಡಬೇಕು". ಪ್ರಭುವೆನಿನ್ನಲ್ಲಿ ರಾಗವಡಗಿದೆ, ತಾಮಸನಿಂದಿದೆ, ಭೂಮಿ ಒಂದೇ ಆದರೂ ಬೆಳೆಯುವ ವೃಕ್ಷ ಹಲವುಪರಿ. ಉದಕ ಒಂದೇ ಆದರೂ ಅವುಗಳ ಸಾರ ಸಂಪದ ಬೇರೆ ಬೇರೆ, ಹಾಗೆ ಮಲ್ಲಿಕಾರ್ಜುನನಲ್ಲಿ ನನ್ನ ಮನಸ್ಸು ನಿಂತಿರುವುದರಿಂದ ಹೊರಗಡೆಯಲ್ಲಿ ತೋರುವ ರಾಗ ವಿರಾಗಗಳಿಗೆ ಅಂಟದೆ ನಿರ್ಲಿಪ್ತತೆಯಿಂದ ಈ ಕರ್ಮಗಳನ್ನು ಮಾಡುತ್ತಿದ್ದೇನೆ."

"ನೀನು ಹಾಗೆ ತಿಳಿದಿದ್ದೀಯೆ ಆದರೆ ಈ ಸಾಕಾರ ನಿಷ್ಠೆ ನಿನ್ನಸುತ್ತ ದೇಹ ಭಾವವನ್ನು ಕಟ್ಟುತ್ತಿದೆ. ಭೂತಂಗಳೊಳಗನುಕಂಪೆ ಜೀವಭಾವವನ್ನು ಬೆಳೆಸುತ್ತಿದೆ. ಇದು ಅಳಿಯದ ಹೊರತು ಭಕ್ತಿ ಅಳವಡುವುದಿಲ್ಲ ಸಿದ್ದರಾಮಯ್ಯ.

**ವಚನ-೫೧.**

ದೇಹ ಭಾವವಳಿದಲ್ಲದೆ ಜೀವಭಾವವಳಿಯದು
ಜೀವ ಭಾವವಳಿದಲ್ಲದೆ ಭಕ್ತಿ ಭಾವವಳವಡದು
ಭಕ್ತಿ ಭಾವವಳವಟ್ಟಲ್ಲದೆ ಅರಿವುತಲೆದೋರದು
ಅರಿವು ತಲೆದೋರಿದಲ್ಲದೆ ಕುರುಹುನಷ್ಟವಾಗದು
ಕುರುಹುನಿಷ್ಟವಾದಲ್ಲದೆ ಮಾಯೆ ಹಿಂಗದು
ಇದು ಕಾರಣ ಕಾಯದ ಜೀವದ ಹೊಲಿಗೆಯಳಿವ
ಭೇದವ ತಿಳಿಯ ಬಲ್ಲರೆ ಗುಹೇಶ್ವರಲಿಂಗದರಿವು
ಸಾಧ್ಯವಪ್ಪದು ಕಾಣಾ ಸಿದ್ಧರಾಮಯ್ಯ.

ಇದಕ್ಕೆ ಸಿದ್ಧರಾಮ ವಿನೀತನಾಗಿ ಹೇಳಿದ

" ನಿಜ, ಇದು ಬಹಳ ತೊಡಕಾದ ಪ್ರಶ್ನೆ. ನಿಮ್ಮ ದಯೆಯಿಂದ ಕಾಯದ ಜೀವದ ಹೊಲಿಗೆಯ ಭೇದವನ್ನು ತಿಳಿಯಬೇಕಾಗಿದೆ ಎಂದಾಗ ಪ್ರಭುಮೆಚ್ಚಿ ನುಡಿದ-ಇದು ಕೇವಲ ತರ್ಕದ ವಿಚಾರಕ್ಕೆ ನಿಲುಕುವುದಿಲ್ಲ. ವಿಚಾರದ ಬಲೆಯಿಂದ ಹೊರಗೆ ಬರಬೇಕು, ಅಲ್ಲದೆ ಮುಂದುವರಿದು ನುಡಿದ.

**ವಚನ :-**೫೨

ತೆರೆಹಿಲ್ಲದ ಘನವ ಮನಬಳಕೊಂಡು
ಕಲೆಯಿಲ್ಲದೆ ಮನವ ಘನ ಬಳಕೊಂಡು,
ತನಗೆಕಾ ಕಾತರವಾದ ಬಳಿಕ, ಮರಳಿ ಇನ್ನು ಇಂ
ಬು ಗೊಡಲುಂಟೆ ? ಗುಹೇಶ್ವರಲೀಲೆ ಮಾಬನ್ನಿಕ್ಕೆರಿ
ಉರಿಯೊಳಗಣ ಕರ್ಪೂರದಂತಿರಬೇಕು.

ಇದನ್ನು ಪರಿಭಾವಿಸು ಸಿದ್ಧರಾಮಯ್ಯ ದೀಪದ ಪಕ್ಕದಲ್ಲಿದ್ದರೂ ಆ ಬೆಳಕನ್ನು ನೀನು ಕಂಡಿಲ್ಲ ಸಿದ್ಧರಾಮಯ್ಯ ಆಯತ ಲಿಂಗವಿಡಿದು ಸ್ವಾಯತಲಿಂಗವನ್ನು ಕಂಡವನು ಬಸವಣ್ಣ ಎಂದು ವಿವರಿಸುತ್ತಾ ಹೇಳಿದ.

**ವಚನ :-** ೫೩

ಅಂಗದಲ್ಲಿ ಆಚಾರವ ಸ್ವಾಯತವ ಮಾಡಿಕೊಂಡನು
ಆಚಾರದಲ್ಲಿ ಪ್ರಾಣವ ಸ್ವಾಯತವ ಮಾಡಿಕೊಂಡನು
ಪ್ರಾಣದಲ್ಲಿ ಲಿಂಗವ ಸ್ವಾಯತ ಮಾಡಿಕೊಂಡನು
ಅಂಗದಲ್ಲಿ ಜಂಗಮವ ಸ್ವಾಯತವ ಮಾಡಿಕೊಂಡನು
ಜಂಗಮದಲ್ಲಿ ಪ್ರಸಾದವ ಸ್ವಾಯತವ ಮಾಡಿಕೊಂಡನು
ಪ್ರಸಾದದಲ್ಲಿ ನಿತ್ಯವ ಸ್ವಾಯತವ ಮಾಡಿಕೊಂಡನು
ನಿತ್ಯದಲ್ಲಿ ದಾಸೋಹವ ಸ್ವಾಯತವ ಮಾಡಿಕೊಂಡನು
ದಾಸೋಹದಲ್ಲಿ ತನ್ನ ಮರೆದು ನಿಶ್ಚಿಂತ ನಿವಾಸಿಯಾಗೈದಾನೆ
ನಮ್ಮ ಗುಹೇಶ್ವರ ಲಿಂಗದಲ್ಲಿ ಸಂಗನ ಬಸವಣ್ಣನ ಶ್ರೀ ಪಾದಕ್ಕೆ
ಶರಣೆಂದು ಧನ್ಯರಾಗಬೇಕು ನಡೆಯಾ ಸಿದ್ಧರಾಮಯ್ಯ

ಈ ನಿಲವನ್ನು ಪ್ರಭುದೇವರು ಸಿದ್ಧರಾಮನಿಗೆ ವಿವರಿಸಿದ ಮೇಲೆ ಬಸವಣ್ಣನನ್ನು ಕಾಣಬೇಕೆಂಬ ಕುತೂಹಲ ಸಿದ್ಧರಾಮನಲ್ಲಿ ಉಂಟಾಯಿತು.

ಮುಂದೆ ಹೀಗೆ ಕಲ್ಯಾಣದ ಕಡೆಗೆ ಬಸವಣ್ಣನನ್ನು ಕಾಣಲು ಪ್ರಭುದೇವರು ಮತ್ತು ಸಿದ್ಧರಾಮಯ್ಯ ಹೊರಟಾಗ ದಾರಿಯಲ್ಲಿ ಅಲ್ಲಲ್ಲಿ ಶರಣರು) ವಚನಗಳನ್ನು ಹಾಡುತ್ತಿದ್ದುದನ್ನು ಕೇಳ ತೊಡಗಿದರು.

**ವಚನ :-** ೫೪

ಹುತ್ತವ ಬಡಿದರೆ ಹಾವುಸಾಯಬಲ್ಲುದೇ ಅಯ್ಯಾ?
ಅಘೋರ ತಪವ ಮಾಡಿದೊಡೇನು ?
ಅಂತರಂಗ ಆತ್ಮಶುದ್ಧಿಯಿಲ್ಲದವರ ನೆಂತು ನಂಬುವನಯ್ಯಾ
ಕೂಡಲಸಂಗಮದೇವ? ಈ ವಚನ ಮುಗಿಯುತ್ತಿದ್ದಂತೆ ಮತ್ತೊಂದುವಚನ

ವಚನ-೫೫

ವ್ಯಾಧ ನೊಂದು ಮೊಲವ ತಂದರೆ ಸಲುವ ಹಾಗಕ್ಕೆ ಬೆಲೆಗೈವರಯ್ಯ
ನೆಲನಾಳ್ದನ ಹೆಣನೆಂದರೆ ಒಂಹಡಕೆಗೆ ಕೊಂಬರಿಲ್ಲ ನೋಡಯ್ಯ
ಮೊಲಕಿಂತ ಕರಕಷ್ಟ ನರನಬಾಳುವೆ; ಸಲೆನಂಬೋ!
ನಮ್ಮ ಕೂಡಲ ಸಂಗಮ ದೇವನ.

ಅಲ್ಲಿ ಕೇಳುತಿದ್ದ ಜನ ತಲೆ ದೂಗುತ್ತಿದ್ದರು. ಸಿದ್ಧರಾಮುನಿಗೂ ಕೇಳಿ ಆನಂದ ವಾಯಿತು. ಅಷ್ಟರಲ್ಲೇ ಭಕ್ತಿಮಂಟಪವಲ್ಲಿನ ಮ-ತ್ತೊಂದು ಹಾಡುಕೇಳಿತು.

ವಚನ-೫೬

ಮನವೇ ಸರ್ಪ, ತನುವೇ ಹೇಳಿಗೆ,
ಹಾವಿನೊಡತಣ ಹೃದುವಾಳಿಗೆ।
ಇನ್ನಾವಾಗ ಕೊಂದಿಹರೆಂದರಿಯೆ।
ಇನ್ನಾವಾಗ ತಿಂದಹಂರೆದರಿಯೆ।
ನಿಚ್ಚಕ್ಕೆ ನಿಮ್ಮ ಪೂಜಿಸಬಲ್ಲೊಡೆ।
ಅದೇ ಗಾರುಡ ಕೂಡಲ ಸಂಗಮ ದೇವಾ,,

ಈ ವಚನಗಳನ್ನು ಕೇಳುತ್ತ ಆನಂದಂದಿಂದ ಮುಂದೆ ಸಾಗಿದರು'

ಅಲ್ಲಮ ಪ್ರಭು ಮಹಾಮನೆಯನ್ನು ಸೇರುತ್ತಿದ್ದಾಗ ಅಲ್ಲಿಯೇ ಗೌಪ್ಯವಾಗಿ ಅಡಗಿದ್ದ ಶರಣ ಶಂಕರದೇವನನ್ನು ಗುರ್ತಿಸಿ ಬಸವಣ್ಣನಿಗೆ ತೋರುತ್ತ ‹‹ ಬಸವಣ್ಣ ಇದು ನಿನ್ನ ಜಂಗಮ ಭಂಡಾರದಲ್ಲಿರು ಅನರ್ಘ್ಯವಾದರತ್ನ ಜನರ ಕಣ್ಣಿಗೆ ಬೀಳು ವಂತಹ ಆಡಂಬರ ಭಕ್ತಿ ಇವನದಲ ಈತನನ್ನು ಮರುಳುಶಂಕರದೇವ ಎಂದು ಜಂಗಮರು ಕರೆಯುತ್ತಾರೆ.

ವಚನ-೫೭

ಬೀದಿಯಲ್ಲಿ ಬಿದ್ದ ಮಾಣಿಕ್ಯವ
ಹೂಳಿರ್ಧ ನಿಧಿಯನಾರಿಗೊಕಾಣ ಬಾರದು ನೋಡಾ
ಮರಣವುಳ್ಳವಗೆ ಮರುಜವಣೆ ಸಿಕ್ಕುವುದೆ ?
ಪಾಪಿಯ ಕಣ್ಣಿಂಗೆ ಪರುಷ ಕಲ್ಲಾಗಿದ್ದಂತೆ
ಇಪ್ಪರಯ್ಯ ಶಿವಶರಣರು.

ನಮ್ಮ ಗುಹೇಶ್ವರನ ಶರಣ ಮರುಳು ಶಂಕರದೇವರು ನಿಲವು ನೋಡಾ ಸಂಗನ ಬ ವಣ್ಣ। ಆಗ ಅಲ್ಲಿದ್ದ ಶರಣ ಸಮೂಹ ಮರುಳುಶಂಕರ ದೇವರ ಪಾದಕ್ಕೆ ನಮೋ ನಮೋ ಎಂದರು.

ಮುಂದೆ ಚನ್ನ ಬಸವಣ್ಣನವರ ಜೊತೆಯಲ್ಲಿ ಬರುತ್ತಿದ್ದ ಪ್ರಭು. ದೇವರಿಗೆ ಮಹಾಮನೆಯವರೆಗೂ ಸೇರಿದ ಶರಣರ ಗುಂಪು ಕಣ್ಣಿಗೆ ಬಿತ್ತು. ಚನ್ನಬಸವಣ್ಣ ಅವರನ್ನೆಲ್ಲಾ ಪ್ರಭುವಿಗೆ ಪರಿಚಯಿಸುತ್ತಾ ಮುಂದೆ ಸಾಗಿದೆ.

ನುಲಿಯ ಚಂದಯ್ಯ, ಮೇದರ ಕೇತಯ್ಯ, ಆಯ್ದಕ್ಕಿ ಮಾರಯ್ಯ, ಘಟ್ಟ-ವಾಳಯ್ಯ, ಬಲೆಶಾಂತಯ್ಯ, ಕಿಲಾರದಭೀಮಣ್ಣ, ತುರುಗಾಹಿರಾಮಣ್ಣ, ತಳವಾರ ಕಾಮಿದೇವ, ಇವರ ಪರಿಚಯ ಮಾಡಿಕೊಳ್ಳುತ್ತ ಮುಂದೆ ಹರಳಯ್ಯ ಅಲ್ಲದೆ ಧೂಳಯ್ಯನವರನ್ನು ಕಂಡಾಗ ಅವರು ತಮ್ಮ ಪರಿಚಯವನ್ನು ತಮ್ಮ ವಚನ ಒಂದರಿಂದ ಪರಿಚಯಮಾಡಿಕೊಂಡರು.

ವಚನ-೫೮

ಅರಿದು ಚುಚ್ಚುವರೆಲ್ಲರು ದನದಟ್ಟಿ,
ಮರೆದು ಚುಚ್ಚುವರೆಲ್ಲರೂಧನದಟ್ಟಿ
ನಾ ಚುಚ್ಚುವುದೆಲ್ಲವು ಸತ್ತ ಜೀವ ದನದಟ್ಟಿ
ಅಟ್ಟೆಯ ಕೊಯಿದು ಮೆಟ್ಟಿಸಿದೆ ಸಕ್ಕರೆಲ್ಲರಿಗೂ,
ಎನ್ನ ಬಟ್ಟ ಬಯಲ ತೋರಬೇಕೆಂದು.

ನಿಮ್ಮ ಬಟ್ಟೆಯಲ್ಲಿ ನೀವೇ ಹೋಗಿ ಎನ್ನ ಬಟ್ಟೆ ಕಾಮಧೂಮ ಧೂಳೇಶ್ವರನ ಬಟ್ಟೆಯೇ ಸಾಕು.- ಎಂದು ಹಾಡಿ ಪರಿಚಯಿಸಿಕೊಂಡ.

ನಂತರ ಚನ್ನಬಸವಣ್ಣ ಪಕ್ಕದಲ್ಲಿದ್ದ ಹೆಂಡದಮಾರಯ್ಯನ ಸರದಿ ಈಗ ಎಂದಾಗ ಈಗ ನಾನು ಮಾರುತ್ತಿರುವ ಹೆಂಡ ಬೇರೆ ಬಗೆಯದು ಎನ್ನುತ್ತಾ-

ವಚನ -೫೯

ನಾ ಮಾರಬಂದ ಸುಧೆಯ ಕೊಂಬವರಾರೂ ಇಲ್ಲ.
ಒಳಗಣ ಇಂದ್ರಿಯಕ್ಕೆ ಹೊರಗಣ ಭಾಜನಕ್ಕೆ
ಉಂಡುದಣಿದು ಕಂಡುದಣಿದು ಸಂದೇಹವ ಬಿಟ್ಟುದಣಿದು;
ಕಂಡುದ ಕಾಣದೆ ಸಂದೇಹದಲ್ಲಿ ಮರೆಯದೆ,ಆನಂದವೆಂಬುದ
ಆಲಿಂಗನವ ಮಾಡಿ ಆ ಕಣ್ಣ ಮುಚ್ಚಿ
ಮತ್ತಮಾ ಕಣ್ಣಂ ತೆರೆದು ನೋಡಲಾಗಿ ಧರ್ಮೇಶ್ವರ
ಲಿಂಗವು ಕಾಣಬಂದಿತ್ತು-ಅಂದಾಗ ಪ್ರಭುದೇವರೇ
ತಮ್ಮ ಮೆಚ್ಚುಗೆ ತೋರಿದರು.

ಪ್ರಭುದೇವರು ಮುಂದೆ ಸಾಗಿ ಪೀಠವನ್ನಲಂಕರಿಸಿದ ಮೇಲೆ ಕಿನ್ನರಿ ಬೊಮ್ಮ-ಣ್ಣನವರು ಕಿನ್ನರಿ ಬಾರಿಸುತ್ತ ಪ್ರಭುವಿನ ಒಂದು ವಚನವನ್ನು ಹಾಡಿದರು.

ವಚನ-೬೦

ಅರಗಿನ ದೇಗುಲದಲ್ಲಿ ಒಂದು ಉರಿಯ ಲಿಂಗವ ಕಂಡೆ,
ಮತ್ತೆ ದೇವರ ಪೂಜಿಸುವವರಾರೂ ಇಲ್ಲ
ಉತ್ತರಾಪಥದ ದರ್ಶನಾದಿಗಳಿಗೆ ಸುತ್ತಿಮುತ್ತಿದ ಮಾಯೆ
ಎತ್ತಲಿಕೆ ಹೋಯಿತ್ತು. ಮರನೊಳಗಣ ಕಿಚ್ಚು ಮರನ
ಸುಟ್ಟುದ ಕಂಡೆ ಗುಹೇಶ್ವರನೆಂಬ ಲಿಂಗದಲ್ಲಿಯೇ ನಿಂದಿತ್ತು.-
ಎಂದು ಹಾಡಿ ಮೆಚ್ಚುಗೆ ಪಡೆದನು ಕಿನ್ನರಿ ಬೊಮ್ಮಣ್ಣ.

ಇಂದು ಸಿದ್ಧರಾಮದೇವರೊಡನೆ ಮಹಾಮನೆಯನ್ನು ಸಮೀಪಿಸುತ್ತಿರುವಾಗ ಒಂದು ಭಾವನೆ ನನ್ನ ಮನಸ್ಸಿನಲ್ಲಿ ಸುಳಿಯಿತು. ಆ ನನ್ನ ಭಾವನೆಯನ್ನು ನಿಮ್ಮೆಲ್ಲರ ಮುಂದೆ ನಿವೇದಿಸಲು ಇಚ್ಛಿಸುತ್ತೇನೆ." ಎಂದು ಪ್ರಭು ಈ ವಚನವನ್ನು ಹೇಳತೊಡಗಿದರು.

ವಚನ-೬೧

ಕಲ್ಯಾಣವೆಂಬ ಪ್ರಣತೆಯಲ್ಲಿ ಭಕ್ತಿರಸವೆಂಬ ತೈಲವನೆರೆದು
ಆಚಾರವೆಂಬ ಬತ್ತಿಗೆ ಬಸವಣ್ಣನೆಂಬ ಜ್ಯೋತಿಯ ಮುಟ್ಟಿಸಲು
ತೊಳಗಿ ಬೆಳಗುತ್ತಿರ್ದುದಯ್ಯಾ ಶಿವನ ಪ್ರಕಾಶ !

ಆ ಬೆಳಗಿನೊಳಗೊಪ್ಪುತಿರ್ದರಯ್ಯಾ ಅಸಂಖ್ಯಾತ ಭಕ್ತ ಮಹಾಗಣಂಗಳು ! ಶಿವಭಕ್ತರಿದ್ದ ಕ್ಷೇತ್ರ ಅವಿಮುಕ್ತ ಕ್ಷೇತ್ರವೆಂಬುದು ಹುಸಿಯೇ ? ಶಿವಭಕ್ತರಿದ್ದ ದೇಶವು ಪಾವನವೆಂಬುದು ಹುಸಿಯೇ ? ಗುಹೇಶ್ವರ ಲಿಂಗದಲ್ಲಿ ಎನ್ನ ಪರಮಾರಾಧ್ಯ ಸಂಗನ ಬಸವಣ್ಣನ ಕಂಡು ಬದುಕಿದೆಕಾಣಾ ಸಿದ್ಧರಾಮಯ್ಯ.

ಈ ವಚನವನ್ನು ಕೇಳಿ ಶರಣರಲ್ಲಿಸಂತೊಷದ ಅಲೆಗಳು ಎದ್ದುವು. ಈ ಜ್ಯೋತಿಯು ಬೆಳಗುವುದಕ್ಕೆ ನಾವು ಸಹಾಯಕರಾಗಬೇಕು. -ನಿಮ್ಮನಿಮ್ಮ ಕಾಯಕದಲ್ಲಿ ನಿರತರಾಗಿ "ತೋಂಟನಲ್ಲಿಜಾಗರವಿದ್ದು ಸಸಿಯ ಸಲಹಿದೆನು" ಎಂದು ಎಲ್ಲರೂ ತನುವೆಂಬ ತೋಂಟದಲ್ಲಿ ಜಾಗರಾಗಿದ್ದು ಸಸಿಯನ್ನು ಸಲಹಿದರೆ ಅವು ಹೆಮ್ಮರವಾಗಿ ಬೆಳೆದು ಅಮೃತಫಲವನ್ನು ಕೊಡಲು ಸಮರ್ಥವಾಗುತ್ತವೆ. ಇದರಿಂದ ಬಸವಣ್ಣನ ಆಶೆಯೂ ಈಡೇರುತ್ತದೆ, ಎಂದು ಹೇಳಿ ಗೋಷ್ಠಿಯನ್ನು ಮುಕ್ತಾಯಗೊಳಿಸಿದರು:

# ಶ್ರೀ ಮದುದ್ದಾನ ಶತಕಂ

ಲೋಕದೊಳು ಸಂಸಾರದಂಗಡಿ
ಯೇಕೆನಲು ಗುರುಶಿಶುವು ಗೋವ್ಗಳ
ನೇಕರತಿಥಿಗಳನ್ನು ಸೇವಿಸಿ ಭಾವಶುದ್ಧಿಯಲೀ।
ಕಾಕು ಮತಿಯುಳಿದುಳಿದ ನಿಜ ಸುವಿವೇಕ
ನಿಧಿ ಸಂಗ್ರಹಿಸಲೆನುತತಿ
ಜೋಕೆಯರುಪಿದ ಜೀಯಉದ್ದಾನೇಶ ದಯವಾಗೋ॥

ನೆರಳನತಿಥಿಗೆ ಕೊಡಲು ಮನೆಯಿದು
ತರುಣಿಯಡಿಗೆಯ ಮಾಡಲತಿಥಿಗೆ
ಧರಣಿಧಾನ್ಯಕೆ ಪಶುವುಹೈನಿಗೆ ತರಳನವಸರಕೇ
ಸಿರಿಯು ಪಾತ್ರದಿ ದಾನಮಾಡಲು
ಹರನು ಕೊಟ್ಟಹನೆಂದು ತಿಳಿಸಿದ
ಶರಣಗಾತ್ರನೆ ಜೀಯ ಉದ್ದಾನೇಶ ದಯವಾಗೋ

ಲೋಕದರಮನೆಯೊಳಗೆ ದೇವರ
ಚಾಕರರು ನಾವೆಮಗೆ ಪ್ರಕೃತಿ
ನೇಕ ಸಂಬಳ ಸಾಕೆನುವಂತೆ ದೊರೆಯುವುದೂ।
ಸಾಕು ಸಾಲದ ರಾಜ ಜೀತಕ
ನೇಕ ಪರಿಮಿಗಿಲದರೊಳೀಜಗ
ಸಾಕಿಸಲಹುತ್ತಿರುವ ಉದ್ದಾನೇಶ ದಯವಾಗೋ॥

ಐದು ಭೂತಗಳೇ ಖಜಾನೆಗ
ಳೈದು ತತ್ತ್ವವೆ ಪಂಚಲೋಹದಿ
ದೈದು ಮುಖದೊಳು ಹೊತ್ತು ತಂದದ ನಾರಕಾಣದೊರಾಗೆ।
ಹೊದ್ದು ಮಲಗಿರೆ ಬುದ್ಧಿಗೆಟ್ಟರೆ
ನಿದ್ದೆಯೊಳಗಿರಲೊದ್ದು ಮುದ್ದಿಸಿ
ಗುದ್ದಿಕೊಡುತಿಹ ಸಿದ್ಧಉದ್ದಾನೇಶ ದಯವಾಗೋ॥

ರಾಜದುಷ್ಟರ ದಂಡಿಸುವ ಪರಿ
ಯೀಜಗದ ಬಹು ವಿಷಯ ಚಪಲತೆಗೆ
ರಾಜ ಭೋಗವನಿತ್ತು ಚಟಗಳು ಬಲಿತು ಬೇರೂರೇ।
ಮಾಜಿಸಿರಿ ಬಡತನ ವಿಚಿತ್ರದ
ಸೂಜಿಯಿಂ ಕ್ಷಣ ಕ್ಷಣವು ಹಿಂಸಿಪ
ರಾಜ ರಾಜನೆ ಜೀಯ ಉದ್ದಾನೇಶ ದಯವಾಗೋ॥

(ಮುಂದುವರಿವುದು)

## ಮಾನವೀಯ ಮನದ ಬೆಳಕೇ

ಪೊ. ದಾ. ವಿರುಪಾಕ್ಷಗೌಡ "ಬಸವಪ್ರಿಯ", ಕಿಷ್ಕಿಂದಾಶ್ರಮ ಪಕ್ಕ, ಅಮರಾವತಿ, ಹೊಸಪೇಟೆ-ಅಂಚೆ
583201. ಬಳ್ಳಾರಿ-ಜಿಲ್ಲೆ.

ಮನದ ಬೆಳಕೇ....
ನೀನೇಕೆ ... ಬರಿದೇ ಇರುವೆ
ನೀಡು ನಿನ್ನಾತ್ಮ ಬೆಳಕ
ನೀನಾಗು ವಿಶ್ವತ್ವದ ಬೆತ್‌ಬೆಳಗು
ಮನದ ಬೆಳಕೇ ....
ನೀನೆಲ್ಲಿ ಅಡಗಿರುವೆ ಮನ 'ಅಪ್ಪು'ವಿನಲಿ
ನಿನಗೇಕಿಲ್ಲ ಆಕಾರದ ಸಾಕಾರ
ನೀನಾಗು ಮಾನವೀಯತ್ವದ ಹೃದಯರಾಗ
ಮನದ ಬೆಳಕೇ ....
ನಿನಗರಿವಿರಲಾರದೇ ದೇವಸ್ವರೂಪದ ಚಿದ್‌ರೂಪ
ನಿನ್ನ ನ್ಯಾಯ ನೀತಿ ರೀತಿ ಶೃತಿತನ
ನಿನಗಾಣ ಬರದಿಹುದೇ ಸಮತಾಶೀಲ ಸ್ಮೃತಿತನ
ಮನದ ಬೆಳಕೇ ....
ನೀನೇಕೆ 'ಕಳೆ' ಏರುತಿರುವೇ ಜಾತಿ ಜೀವಿತಕ್ಕೆ
ನಿನ್ನೀ ನಿರ್ವಿಕಾರ ನಿರಾಕೃತಿಗೇಕೆ ಜಾತಿಯ ಮೂಗುತಿ
ನೀನಲ್ಲವೇ ಜಾತ್ಯಾತೀತ ಮಾನವೀಯತ್ವದ ಪ್ರಾಣ ಮೂಗೂತಿ

---

## "ಶಿಕ್ಷಣ"

ಲೇಖಕ;- ಎಂ. ಆರ್. ಬೈಲಪ್ಪ ಶ್ರೀ ಕ್ಷೇತ್ರದ ಹಿರಿಯ ವಿದ್ಯಾರ್ಥಿ, ಶಿಕ್ಷಕರು, ನ್ಯಾಷನಲ್
ಪ್ರೌಢಶಾಲೆ, ಹೊಸೂರು, ಕೋಲಾರ ಜಿಲ್ಲೆ.

ಕುಳಿತಿದ್ದ ನಾನು ಏಕಾಂಗಿಯಲಿ ಯೋಚನೆ ಮಾಡುತ
ಮಾನವ ಮಾನವ ನಗುವ ಬಗೆ ಹೇಗೆಂದು ಚಿಂತಿಸುತ
ಉಪಯೋಗವಾಗಿದೆ ವಿಜ್ಞಾನದಿಂ ಸಂಶಯವಿಲ್ಲದೆ
ಕಾಣುತಿದೆ ಒಂದು ಮುಖ್ಯ ಕೊರತೆ ಅನುಮಾನವಿಲ್ಲದೆ
ನೆಮ್ಮದಿ ಇಲ್ಲವೀ ಆಧುನಿಕ ಜೀವನದಿ
ಸಮಯ ವ್ಯರ್ಥವಾಗುತಿದೆ ನಮ್ಮ ಜೀವನದಿ
ಮಾನವತೆ ಇಲ್ಲದ ಜೀವನ ಕಾಣುತಿದೆ
ಮಾನವಗೆ ಮಾನವೀಯತೆ ಕಲಿಸುವ
ಶಿಕ್ಷಣ ಅಗತ್ಯವೀ ಎಮಗೆ.

(ಮುಂದುವರಿದಿದೆ)

# ವಾಙ್ಮಯ ತಪಸ್ಸು

**"ಮಾತಿರಲಿ, ಮಿತವಿರಲಿ, ಹಿತವಿರಲಿ, ಜ್ಯೋತಿ ಬೆಳಗುತಿರಲಿ"**

**ಲೇಖಕರು.– ಎಂ. ಮಾಧವ ಪೈ,** ಡಿ.ವಿ.ಎಸ್. ಪ್ರೌಢಶಾಲೆ ಸಮೀಪ,
ವಿನೋಬನಗರ, ಶಿವಮೊಗ್ಗ-577201.

ಗೀತೆಯಲ್ಲಿ ಮೂರು ತಪಸ್ಸುಗಳನ್ನು ಸಾತ್ತ್ವಿಕ ತಪಸ್ಸುಗಳೆಂದು ಗುರುತಿಸಿದೆ. ಕಾಯಿಕ, ವಾಚಿಕ ಮತ್ತು ಮಾನಸಿಕ ಈ ಮೂರರಲ್ಲಿ ವಾಚಿಕ ತಪಸ್ಸು ಸೇರಿರುವುದು ಗಮನಾರ್ಹ. ಮಾತಿನಲ್ಲಿ ಸಿದ್ಧಿ ಪಡೆಯಲು ಸಾಧನೆ ಬೇಕು. ಇದಕ್ಕಾಗಿ ನಾವು ಬೇಕಾದ ಶಕ್ತಿಯನ್ನು ಸಂಗ್ರಹಿಸಬೇಕು. ಅಂದರೆ ಈ ಶಕ್ತಿ ಸಾಧನೆಗೆ ದೈಹಿಕ ಶ್ರಮ ಪಡಬೇಕಾದ್ದಿಲ್ಲ. ಆದರೆ ಮಾನಸಿಕ ಸಮತೋಲನ ಅತ್ಯಾವಶ್ಯಕ. ಪ್ರತಿದಿನ, ಪ್ರತಿಕ್ಷಣ ನಾವು ಆಡುವ ಮಾತುಗಳಿಂದ ಶಕ್ತಿಯನ್ನು ಸಂಗ್ರಹಿಸುತ್ತಿಲ್ಲ. ಬರಿದೆ ಶ್ವಾಸವ್ಯಯ ಮಾಡುತ್ತಿರುತ್ತೇವೆಯಷ್ಟೆ. ಅದೇ ಮಾತುಗಳನ್ನು ಸ್ವಲ್ಪ ಶ್ರಮವಹಿಸಿದರೆ ಒಂದು ತಪಸ್ಸಿಗೆ ಪರಿವರ್ತಿಸಬಹುದು. ಇದು ಬಹು ಸುಲಭವಾದ ತಪಸ್ಸು ಇದಕ್ಕಾಗಿ ದೇಹದಂಡನೆ ಮಾಡಬೇಕಾಗಿಲ್ಲ. ವೈರಾಗ್ಯ ತಾಳಿ ದೂರ ಹೋಗಬೇಕಾದ್ದಿಲ್ಲ ಯಾರೂ ಬೇಕಾದರೂ ಇದನ್ನು ಸಾಧಿಸಬಹುದು. ಮಾತನ್ನು ತಪಸ್ಸಾಗಿ ಪರಿವರ್ತಿಸಬೇಕಾದರೆ ಏನು ಮಾಡಬೇಕು ಎಂಬುದನ್ನ ಗೀತಾಕಾರ ಹೀಗೆ ಬೋಧಿಸಿದ್ದಾನೆ.

> ಅನುದ್ವೇಗಕರಂ ವಾಕ್ಯಂ ಸತ್ಯಂಪ್ರಿಯಹಿತಂಚಯತ್ ।
> ಸ್ವಾಧ್ಯಾಯಾಭ್ಯಸನಂ ಚೈವ ವಾಙ್ಮಯಂ ತಪ ಉಚ್ಯತೇ ॥ ೧೭–೧೫ ॥

-ಉದ್ವೇಗವಿಲ್ಲದ ಸತ್ಯವೂ ಪ್ರಿಯವೂ ಹಿತವೂ ಆದ ಮಾತು ಮತ್ತು ತಮ್ಮ ಶಾಖೆಯ ಅಧ್ಯಯನ ಇವನ್ನು ವಾಙ್ಮಯ ತಪಸ್ಸು ಎಂದು ಹೇಳುತ್ತಾರೆ. ಇದರ ಪ್ರಕಾರ ಮಾತಿನಲ್ಲಿ ಉದ್ವೇಗ ಇರಕೂಡದು. ನಾವು ಮಾತನಾಡುವಾಗ ಅಲ್ಲಿ ಕೋಪವಿರಬಾರದು, ಮದಮಾತ್ಸರ್ಯಗಳಿರಬಾರದು, ಕ್ರೌರ್ಯವಿರಬಾರದು. ಆಲೋಚಿಸಿದರೆ ಮಾತಿನಷ್ಟು ಕೋಮಲವಾದುದೂ ಸುಲಭವಾದುದೂ ಯಾವುದೂ ಇಲ್ಲ. ಆದರೆ ,, ಕತ್ತಿಯಲಾದಾಗಾಯ ಮತ್ತಿರದೆ ಮಾಯುವುದು, ಸುತ್ತಲಾಡುತಿಹ ಜಿಹ್ವೆಯ ಗಾಯತಾ। ನಿತ್ಯಕೂ ಇಹುದು ಸರ್ವಜ್ಞ" ಎಂಬಂತೆ ಎಂದೂ ವಾಸಿಯಾಗದ ಭಯಾನಕ ಗಾಯವನ್ನು ಮಾಡಬಲ್ಲ ಶಕ್ತಿಯುನ್ನು ಅದು ಹೊಂದಿರುತ್ತದೆ ಮಾತು ಹಾವು ಚೇಳಿನ ವಿಷಕ್ಕಿಂತ ಹೆಚ್ಚು ಪ್ರಣಾಂತಿಕ ವಿಷವನ್ನು ಕಾರಬಹುದು. ಅದೇ ಮಾತಿನಿಂದ ಅಮೃತವನ್ನು ಹರಿಸಬಹುದು. ದುಃಖೀ ಜೀವಿಯುನ್ನು ಸಾಂತ್ವನಗೊಳಿಸಿ ಹರ್ಷಿತಗೊಳಿಸಿ

ಸೌಖ್ಯದೌನ್ನತ್ಯಕ್ಕೇರಿಸಬಹುದು. ಅದಕ್ಕಾಗಿ ವಾಙ್ಮಯ ತಪಸ್ಸಿನಲ್ಲಿ ಉದ್ವೇಗಕ್ಕೆಂದೂ ಅವಕಾಶವಿರಬಾರದು. ಅದು ಮೃದುವಾಗಿರಬೇಕು, ಮಧುರವಾಗಿರಬೇಕು. ಮದಭರಿತವಾಗಿರದೆ ಮಧುಭರಿತವಾಗಿರಬೇಕು, ವಿನಯಯುಕ್ತವಾಗಿರಬೇಕು, ಇದನ್ನೇ ಬಸವಣ್ಣನವರು "ಅಯ್ಯಾ ಎಂದಡೆ ಸ್ವರ್ಗ, ಎಲವೊ ಎಂದಡೆ ನರಕ ಎಂಬ ಮಾತಿನಲ್ಲಿ ಸ್ಪಷ್ಟಪಡಿಸಿದ್ದಾರೆ. ಉದ್ವೇಗಕ್ಕೆ ಕಾರಣ ಆಶೆ. ಆಶೆ, ಆಕಾಂಕ್ಷೆ ಕ್ರೋಧಗಳಿಂದ ಕೂಡಿದ ಮಾತುಗಳಿಂದ ಭವದಲ್ಲಿ ನರಳಬೇಕಾಗುತ್ತದೆ-ಮಾತುಗಂಟುಕತನದಿಂದೆಷ್ಟು ಮಾತನಾಡಿದಡೇನು ? ಕಾಮಿನಿಯರ ಕಾಲದೆಸೆಯಲ್ಲಿ ಸಿಕ್ಕಿ ಕ್ರೋಧದ ದಳ್ಳುರಿಯಲ್ಲಿ ಬೆಂದು ಆಶೆ ಎಂಬ ಪಾಶ ಕೊರಳಲ್ಲಿ ಸುತ್ತಿ, ಅದೇಕೋ ಅದೇತರ ಮಾತೆಂದ ನಂಬಿಗರ ಚೌಡಯ್ಯ"

ಮಾತು ಉದ್ವೇಗರಹಿತವಾಗಿದ್ದರಷ್ಟೇ ಸಾಲದು. ಅದು ಪ್ರಿಯವೂ ಹಿತವೂ ಆಗಿರಬೇಕು. ಹಾಗೆಂದು ಬರಿ ಕಲ್ಪನೆಯ, ರಂಗುರಂಗಿನ ಬರುಸಟೆಗನ ನುಡಿಗಳಾಗಿ ಕೇಳುಗನಿಗೆ ನಗಿಸುವಂತಾಗಬೇಕೆಂದಲ್ಲ. ಸುಳ್ಳು ವಂಚನೆಯ ಹುಸಿಯ ಬೆಡಗಿನ, ಠಾಕುಠೀಖಿನ ಹಾಸ್ಯ, ಅಣಕ, ಬೈಗುಳ, ವಿಡಂಬನದ ಮಾತುಗಳು ಕೇಳುಗನಿಗೆ ಹರ್ಷವನ್ನಿತ್ತು ಪ್ರಿಯವಾಗಿಸಬಹುದು. ಆದರೆ ಈ ರೀತಿಯ ಮಾತುಗಳನ್ನು ನುಡಿಯುವುದು ತಪಸ್ಸಾಗದು.

ಮಾತು ಯಾವಾಗಲೂ ಮಧುರವಾದುದಾಗಿರಬೇಕು. ಲೋಕವನ್ನೇ ಜಯಿಸುವ ಶಕ್ತಿ ಇರುವುದು ಮಧುರ ಮಾತುಗಳಿಗೆ ಮಾತ್ರ. ಕೆಲವೊಮ್ಮೆ ಕ್ರೋಧ ಉಕ್ಕಿಬಂದಾಗ ಕಠೋರ ಮಾತುಗಳ ಪ್ರಯೋಗವಾಗುತ್ತದೆ. ಇದರಿಂದ ತಾತ್ಕಾಲಿಕ ಫಲ ದೊರಕಬಹುದು ಬಲಪ್ರಯೋಗಕ್ಕಿಂತ ಹೃದಯ ಪರಿವರ್ತನೆಯೇ ಶಾಶ್ವತ ಪರಿಣಾಮ ಬೀರುವುದೆಂಬುದನ್ನು ಮರೆಯಬಾರದು. ಆದ್ದರಿಂದ ಕ್ರೋಧ ಉಕ್ಕಿ ಬಂದಾಗ ಬಾಯಿಯನ್ನು ತೆರೆಯಲೇಬಾರದು. ಆಗ ಬಾಯಿ ತೆರೆಯುವುದಕ್ಕಿಂತ ಕತ್ತಿ ಸೆಳೆಯುವುದು ಲೇಸು ಎಂದು ಹೇಳುವ ಮಾತಿನ ಒಳಾರ್ಥವನ್ನು ಅರ್ಥೈಸಿಕೊಳ್ಳುವುದು ಒಳಿತು. ಚಿಂತಿಸಿ ಚಿಂತಿಸಿ ಮಧುರವಾದ ಮತ್ತು ಪರಿಣಾಮದಲ್ಲಿ ಹಿತಕಾರಿಯಾದ ಮಾತುಗಳನ್ನಾಡುವುದು ಸದಾಶ್ರೇಯಸ್ಕರ. ಸಿಹಿಮಾತು ಮತ್ತು ಕಹಿಮಾತುಗಳೆರಡು ಯಾವ ಪರಿಶ್ರಮವಿಲ್ಲದೇನೆ ಭಾಗ್ಯ- ಅಭಾಗ್ಯಗಳನ್ನು ಸುಖ ದುಃಖಗಳನ್ನು ಮಿತ್ರಾಮಿತ್ರರನ್ನು ಆನಂದ-ವ್ಯಥೆಗಳನ್ನು ಆಮಂತ್ರಿಸುವಂತಹವುಗಳಾಗಿದೆಯೆಂಬುದು ಎಷ್ಟು ಸತ್ಯವಾದುದು. ಯಾವುದೇ ಮಾತನ್ನು ನಾವು ಆಡದೆ ಇರುವಿಕೆಯಿಂದ ಹೊಟ್ಟೆ ಉಬ್ಬಿಬರುವುದಿಲ್ಲ ಅಥವಾ ಆಡುವುದರಿಂದೇನೂ ರಾಶಿ ಸುರಿಯುವುದಿಲ್ಲ. ಅದ್ದರಿಂದೆ ಸಮಯ ಆಸಮಯವನ್ನು ವಿವೇಚಿಸಿ, ಪವಿತ್ರ ಭಾವನೆಯ ಬುದ್ಧಿಯಿಂದ ಆಲೋಚಿಸಿಯೆ ಯಥಾಯೋಗ್ಯ ವಚನಗಳನ್ನಾಡುವುದಕ್ಕೆ ಶ್ರಮಿಸಬೇಕು. ಇದು ತಪಸ್ಸಾಧನೆಯ ರೀತಿ.

ಮಾತು ಪ್ರಿಯವೂ ಹಿತವೂ ಆಗಿರುವುದರ ಜೊತೆಗೆ ಅದ, ಸತ್ಯವಾದುದಾಗಿರಬೇಕು. ಯಾವಾಗಲೂ ಸತ್ಯವಾದುದನ್ನೇ ನುಡಿಯಬೇಕು. ಅಂದರೆ ಯಥಾರ್ಥ ಭಾಷಣ-ವಾಗಬೇಕು; ಅರ್ಥಾತ್ ಮನಸ್ಸು ಮತ್ತು ಇಂದ್ರಿಯಗಳ ಮೂಲಕ ಎಂತಹ ಅನುಭವವನ್ನು ಅನುಭವ ಪಡೆಯಲಾಗಿದೆಯೋ ಅದೇ ರೀತಿಯಲ್ಲಿ ಹೇಳುವುದು ಇಂದಿನ ಯುಗದಲ್ಲಿ ಇದೇ ಒಂದು ಮಹಾ ತಪಸ್ಸು. ಆಡಿದ ಪ್ರಿಯವೂ ಹಿತವೂ ಸತ್ಯವೂ ಆದ ಮಾತುಗಳಿಂದ ಕೇಳುಗನ ಸಂಶಯ ಪರಿಹಾರವಾಗಬೇಕು. ಆತ ಸಂಶಯದಿಂದ ಮುಕ್ತನಾಗಬೇಕು. ಅದು ಆತನಿಗೆ ಒಂದು ಭರವಸೆಯನ್ನು ಮೂಡಿಸುವಂತಾಗಬೇಕು, ಸಂಶಯದ ಬಹುದೊಡ್ಡ ಭಾರವನ್ನು ಇಳಿಸುವ ಶಕ್ತಿ-ಯಿರುವುದು ಪ್ರಿಯವೂ ಹಿತವೂ ಆದ ಮಾತಿಗೆ ಮಾತ್ರ. ಮಹಾಭಾರತದ ಶಾಂತಿ ಪರ್ವದಲ್ಲಿ ಹೀಗೆ ಹೇಳಿದೆ– "ಯಾವಾಗಲೂ ಪ್ರಿಯವಾಕ್ಯವನ್ನೇ ನುಡಿಯುವುದರಿಂದ ಒಳ್ಳೆ ಜ್ಞಾನೋದಯವಾಗುವುದು. ತಾನು ನುಡಿಯಬೇಕಾದ ಮಾತನ್ನು ಯೋಗ್ಯ ರೀತಿಯಲ್ಲಿ ನಿರ್ಧರಿಸಿಕೊಂಡು, ಧರ್ಮಸೂಕ್ಷ್ಮವನ್ನು ವಿಮರ್ಶಿಸಿ, ಸತ್ಯವಾಗಿಯೂ ಇತರರಿಗೆ ಹಾನಿಯಿಲ್ಲದುದಾಗಿಯೂ ಮತ್ತೊಬ್ಬರ ದೋಷವನ್ನು ಪ್ರಕಟಿಸದುದಾಗಿಯೂ ಇರುವ ಮಾತುಗಳನ್ನೇ ಆಡಬೇಕು. ಮಾತಿನಲ್ಲಿ ವಂಚನೆ ಇರಬಾರದು. ಕ್ರೌರ್ಯ-ವಿರಬಾದು. ಆದರಿಂದ ಯಾರಿಗೂ ಹಾನಿಯಿರಬಾರದು. ಪರರ ದೋಷವನ್ನು ಉದ್ಘಾ-ಟಿಸಬಾರದು. ಇಂತಹ ಮಾತುಗಳನ್ನೇ ನುಡಿಯಬೇಕು. ಪ್ರಪಂಚವೆಲ್ಲ ಮಾತಿನಲ್ಲಿಯೇ ನೆಲೆಗೊಂಡಿರುವುದು." ಇಂತಹ ಮಾತುಗಳನ್ನು ಕೇಳುವುದರಿಂದ ಆನಂದ ಉಂಟಾ-ಗುವುದು ಮಾತ್ರವಲ್ಲ, ಅದರಿಂದ ಜೀವನಕ್ಕೆ ಸಹಾಯವಾಗುವುದು. ಆದಕ್ಕೆ ನಮ್ಮಲ್ಲಿ "ಸತ್ಯಂ ಬ್ರೂಯಾತ್'' ಎಂದು ಹೇಳಿರುವುದು. "ಬೆಲ್ಲ ಇಲ್ಲದಿದ್ದರೂ ಬೆಲ್ಲದಂತಹ ಮಾತಿರಬೇಕು'' ಎಂಬುದರ ಅಂತರಾರ್ಥ 'ಸತ್ಯವ ನುಡಿವುದೇ ದೇವಲೋಕ'ವಲ್ಲವೆ.

ಇದು ವಾಙ್ಮಯ ತಪಸ್ಸನ್ನು ಸಾಧಿಸುವ ಪರಿ. ಇದನ್ನು ಸಾಧಿಸಿದರೆ ಶಬ್ದಬ್ರ-ಹ್ಮದ ಸಾಕ್ಷಾತ್ಕಾರವಾಗುತ್ತದೆ. ಪರಶಿವನ ಜೋಕೆ ಅರಿವಾಗುತ್ತದೆ, ಜ್ಯೋತಿರ್ಲಿಂಗದ ದರುಶನವಾಗುತ್ತದೆ. ಬರಿದೆ ಮಾತುಗಳನ್ನಾಡುತ್ತಾ ಕೇವಲ ಭೂಭಾರಕರಾಗುತ್ತೇವೆ. "ಮಾತಿನ ಪಸರದ ವ್ಯವಹಾರದೊಳಗೆ ಸಿಕ್ಕಿ ನೊಕು ತಾಕುಗೊಳ್ಳುತ್ತೇವಷ್ಟೇ ವಿನಾ ಫಲ ದೊರಕದು. "ಕೊರಳುದ್ದಕ್ಕೆ ಹೂಳಿಸಿಕೊಂಡು, ಮುಗಿಲುದ್ದಕ್ಕೆ ನೆಗೆದಹೆನೆಂ-ಬವನ ಹಾಂಗೆ ಶಿವನ ಜೋಕೆಯನರಿಯದೆ ಮಾತನಾಡುವ ಮಾತೆಲ್ಲವೂ ಮಾತಿನ ಮೂಲೆಯಲ್ಲದೆ ಅಲ್ಲಿ ನಿಜವಿಲ್ಲ. ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ ಅವರೆಲ್ಲಾ ಭೂಭಾರಕರಾದರು."

ಮಾತನಾಡುವ ಮಾತಿನ ಮಹತ್ತ್ವವನ್ನರಿತು ಆದರ ಬಳಸುವಿಕೆಯನ್ನು ಸಾಧಿಸಿದ ಮಾತ್ರಕ್ಕೆ ವಾಙ್ಮಯ ತಪಸ್ಸಿನ ಫಲ ಪ್ರಾಪ್ತಿಯಾಗದು. ನುಡಿಯುವುದು ಎಷ್ಟು ಮುಖ್ಯವೋ ಆ ನುಡಿಗೆ ತಕ್ಕಂತೆ ನಡೆಯುವುದು ಅಷ್ಟೇ ಮುಖ್ಯ ನುಡಿಯೊಂದು

ನಡೆಯೊಂದು ಆಗಬಾರದು. ನುಡಿನಡೆಗಳೆರಡೂ ಒಂದೇಯಾಗಿರಬೇಕು. ಆಗಲೇ ತಿಳಿದಂತೆ 'ಮಾತೆಂಬುದು ಜ್ಯೋತಿರ್ಲಿಂಗ' ಇದರ ಸಾಕ್ಷ್ಯಾತ್ಕಾರವೇ ನುಡಿಯ ಲಕ್ಷ್ಯ ಈ ಲಕ್ಷ್ಯ ಸಾಧ್ಯವಾಗಬೇಕಾದರೆ ನುಡಿಯಷ್ಟೇ ನಡೆಯೂ ಅವಶ್ಯ. "ದಿಟವ ನುಡಿವುದು ನುಡಿದಂತೆ ನಡೆವುದು." "ನುಡಿಗೆ ತಕ್ಕ ನಡೆಯ ಕಂಡೊಡೆ ಕೂಡಲ ಸಂಗಮನೊಳಗಿರ್ಪನಯ್ಯಾ;" "ನುಡಿದು ಹುಸಿವ ನಡೆದು ತಪ್ಪುವ ಪ್ರಪಂಚಿಯನೊಲ್ಲ ಕೂಡಲ ಸಂಗಮದೇವ" ಎಂದು ಬಸವಣ್ಣನವರು ನುಡಿನಡೆಗಳೆರಡೂ ಒಂದೇಯಾಗಿರಬೇಕೆಂದೂ, ಅವು ಒಂದೇಯಾಗಿರುವುದರಿಂದ ಉಂಟಾಗುವ ಪರಿಣಾಮವನ್ನು ಹೃದಯಂಗಮವಾಗಿ ಚಿತ್ರಿಸಿದ್ದಾರೆ.

ನುಡಿ ಮತ್ತು ನಡೆ ಇವು ಪರಸ್ಪರ ಒಂದಕ್ಕೊಂದು ಪೂರಕ. ಒಂದೇ ನಾಣ್ಯದ ಎರಡು ಮುಖಗಳು. ಒಂದು ಶ್ರೇಷ್ಠ ಮತ್ತೊಂದು ಕನಿಷ್ಠವಾಗಿರದೆ. ಒಂದು ಗುರು ಮತ್ತೊಂದು ಲಘುವಾಗಿರದೆ ಎರಡೂ ಸಮಾನ. ಒಂದೇ ತಕ್ಕಡಿಯ ಎರಡು ತಟ್ಟೆಗಳಂತೆ ಇವು. ಒಂದು ಸರಿ ಇದ್ದು ಇನ್ನೊಂದು ಅದರಂತೆ ಇಲ್ಲದಿದ್ದರೆ ಅದಕ್ಕೆ ಬೆಲೆಯೇ ಇಲ್ಲ. ಎರಡೂ ಸ್ವಚ್ಛ, ಸ್ಪಷ್ಟವಾಗಿದ್ದು ಪರಸ್ಪರ ಬೆಸೆದುಕೊಂಡಿರಬೇಕು. ಒಂದು ಮೇಲೆ ಇನ್ನೊಂದು ಕೆಳಗಿಳಿದರೆ ಅಸಮ ತೂಕವಾಗಿ ನುಡಿಯಲ್ಲಿ ಎಚ್ಚೆತ್ತು ನಡೆಯಲ್ಲಿ ತಪ್ಪಿದಡೆ। ಹಿಡಿದಿರ್ದಲಿಂಗ ಹೊಡಮರಳಿ ಕಚ್ಚುವ ಹೆಡೆನಾಗ ನೋಡ ಸರ್ವಜ್ಞ॥ ಎಂಬಂತೆ, ಅಥವಾ ಬಸವಣ್ಣನವರು "ನುಡಿಯಲ್ಲಿ ಎಚ್ಚೆತ್ತು ನಡೆಯಲ್ಲಿ ತಪ್ಪಿದರೆ ಹಿಡಿದಿರ್ದಲಿಂಗ ಘಟಸರ್ಪದಂತೆ" ಆಗಿ ಬದುಕಿಗೆ ಕಲಂಕದ ವಿಷವನ್ನೇರಿಸುತ್ತದೆ. ನಮ್ಮೊಳಗೆ ಶಿವಸಾನ್ನಿಧ್ಯವಿರಬೇಕಾದರೆ ನುಡಿ ನಡೆಗಳೆರಡೂ ಒಂದೇ ಪರಿಯಾಗಿರಬೇಕು "ಎನ್ನ ನಡೆಯೊಂದು ಪರಿ, ಎನ್ನ ನುಡಿಯೊಂದುಪರಿ, ಎನ್ನೊಳಗೇನೂ ಶುದ್ಧವಿಲ್ಲ ನೋಡಯ್ಯಾ "ಎಂದು ಸದಾ ಚಿಂತಿಸಿ, ವ್ಯಸನಿಸಿ, ಹಾಗಾಗದಂತೆ ಪರಿಶ್ರಮಿಸಿ ನುಡಿಗೆ ತಕ್ಕ ನಡೆಯ ಕಾಣುವಂತೆ ವರ್ತಿಸಬೇಕು. ಏಕೆಂದರೆ "ನುಡಿದು ಹುಸಿಯುದಿದ್ದರೆ ನೇಮ" ವಾಗುತ್ತದೆ, ಅಲ್ಲದೆ "ಸ್ವಾಮಿ ಭೃತ್ಯ ಸಂಬಂಧಕ್ಕೆ ಆವುದು ಪದವೆಂದರೆ ದಿಟವ ನುಡಿವುದು, ನುಡಿದಂತೆ ನಡೆವುದು. ನುಡಿದು ಹುಸಿವ, ನಡೆದು ತಪ್ಪುವ ಪ್ರಪಂಚಿಯನೊಲ್ಲ ಕೂಡಲ ಸಂಗಮದೇವ" ಎಂಬುದನ್ನು ಸದಾ ಗಮನದಲ್ಲಿಟ್ಟುಕೊಂಡಿರಬೇಕು. ಲೌಕಿಕ–ಆಧ್ಯಾತ್ಮಿಕ ಕ್ಷೇತ್ರಗಳೆರಡರಲ್ಲೂ ,ಸ್ವಾಮಿ-ಭೃತ್ಯ' ಸಂಬಂಧಕ್ಕೆ ಈ ನುಡಿ ಹಿಡಿದ ಕನ್ನಡಿಯಾಗಿದೆ.

ನುಡಿದಂತೆ ನಡೆಯಬೇಕಾಗಿರುವುದು ಎಷ್ಟು ಮುಖ್ಯವೋ ನಡೆಗೆ ತಕ್ಕಂತೆಯೇ ನುಡಿಯೂ ಇರಬೇಕಾದುದೂ ಅಷ್ಟೇ ಮುಖ್ಯ. "ನಡೆಯಕಂಡಾ ನಂಬಿ, ನುಡಿಯಲ್ಲಿ ಉಪಚಾರ" ಆಗಬಾರದು. ನಮ್ಮ ಛಲ ಹೀಗಿರಬೇಕ.- "ಭಕ್ತಿಸುಭಾಷೆಯ ನುಡಿಯ ನುಡಿವೆ. ನುಡಿದಂತೆ ನಡೆವೆ, ನಡೆಯೊಳಗೆ ನುಡಿಯ ಪೂರೈಸುವೆ ಮೇಲೆ ತೂಗುವ ತ್ರಾಸು ಕಟ್ಟಳೆ ನಿಮ್ಮ ಕೈಯಲ್ಲಿ. ಒಂದು ಜವೆಕೊರತೆಯಾದರೆ ಎನ್ನನದ್ದಿ

ನೀನೆದ್ದು ಹೋಗು ಕೂಡಲಸಂಗಮದೇವಾ'' ಎಂಬ ಛಲದಿಂದ ನಡೆ-ನುಡಿಗಳಲ್ಲಿ ಸಾಮರಸ್ಯ ಏಕತೆ ಇರುವಂತೆ ಸಾಧನೆ ಮಾಡಬೇಕಾಗಿದೆ. ಇದು ಬಲು ಕಠಿಣ ಎಷ್ಟೋ ಬಾರಿ ನಾವು ಏನೋ ನುಡಿದುಬಿಡುತ್ತೇವೆ ಆದರೆ ಅದರಂತೆ ನಡೆಯಲಾಗದೆ ಹೋ-ಗುತ್ತೇವೆ. ಅಂತಹ ಸಂದರ್ಭದಲ್ಲಿ ನಾವು ಆಡಿದ ಆ ನುಡಿಯೇ ನಮಗೆ ಕೇಡನ್ನುಂಟು ಮಾಡುವುದರಲ್ಲಿ ಯಾವ ಸಂಶಯವೂ ಇಲ್ಲ. ಆದಕ್ಕಾಗಿಯೇ ಬಸವಣ್ಣನವರು "ಎನ್ನ ನುಡಿಯೇ ಎನಗೆ ನಂಜಾಯಿತ್ತು. ಎನ್ನ ನಾಲಗೆ ಎನ್ನ ಕೊಂದಿತ್ತು" ಎಂದು ಹೇಳಿ ನಮ್ಮ ಕೇಡಿಗೆ ನಮ್ಮ ಹಾನಿಗೆ ನಮ್ಮ ನಾಶಕ್ಕೆ ನಮ್ಮ ನುಡಿಯೇ ಕಾರಣವಾಗುತ್ತ-ದೆಯೆಂದು ಎಚ್ಚರಿಸಿದ್ದಾರೆ. ಇದರಿಂದಾಗಿ ನಮ್ಮ ಆಚಾರ ವಿಚಾರ ಒಂದೇಯಾಗಿ-ರಬೇಕೆಂಬುದನ್ನು ತಿಳಿಯಪಡಿಸಿದ್ದಾರೆ. ಇದಕ್ಕಾಗಿ ಸ್ವಾಧ್ಯಾಯಾಭ್ಯಸನ ಮಾಡ-ಬೇಕೆಂದು ಹೇಳಲ್ಪಟ್ಟಿದು.

ವಾಙ್ಮಯ ತಪಸ್ಸಿನ ಮೊದಲಹಂತ ಹಿತ, ಮಿತವಾದ ಸರ್ವರ ಹೃದಯವನ್ನು ಸೂರೆಗೊಳ್ಳುವ ನುಡಿಗಳನ್ನಾಡುವ ಅಭ್ಯಾಸ. ಕೇವಲ ನುಡಿದರೆ ಸಾಲದು, ಅದರಂತೆ ನಡೆಯುವುದು ಎರಡನೆಯ ಮಜಲು. ಈ ಎರಡು ಮಜಲುಗಳನ್ನು ದಾಟಿದ ಮೇಲೆ ಬರುವ ಮೂರನೆಯ ಮಜಲು ಭಕ್ತಿ ಸೋಪಾನವನ್ನು ಅಡಿಗಡಿಗೆ ಭಗವ ದ್ಧ್ಯಾನವನ್ನು ಬಿಡದೆ ಏರಿದರೆ ಆತನಿಗೆ ಬಯಸಿದ ಪದವಿ ನಿಶ್ಚಿತ. « ನುಡಿಯಲ್ಲಿ ಕರ್ಕಶವಿಲ್ಲದೆ, ನಡೆಯಲ್ಲಿ ಬೀಸರವೋಗದೆ, ಹಿಡಿದ ಭಕ್ತಿಯ ಕಡೆತನಕ ಬಿಡದೆ, ಬಡತನ ಎಡರು ಕಂಟಕ ಬಂದಲ್ಲಿ ಚಿಂತೆಯಿಂದ ಕಾಂತಿ ಗುಂದದೆ, ಅಡಿಗಡಿಗೆ ಶಿವ ನೆಂಬ ನುಡಿಯ ಮರೆಯದೆ ಇರ್ಪಸದ್ಭಕ್ತಂಗೆ ಬೇಡಿದ ಪದವ ಕೊಡುವ ನಮ್ಮ ಅಖಂಡೇಶ್ವರ. » ಆದಕ್ಕಾಗಿ « ನುಡಿಯಲ್ಲಿ ಎಡನು, ನಡೆಯಲ್ಲಿ ಎರಡು ನಡೆಯನು" ಎಂಬುವನಂತಾಗಿ " ನುಡಿಯಂತೆ ನಡೆಯ ವಿಸ್ತರಿಸುವ, ನಡೆಯಂತೆ ನುಡಿಯ ವಿಸ್ತ ರಿಸುವ " ಪರಿಪಾಠ ಬೆಳೆಸಿಕೊಳ್ಳುವ ದೃಢತೆ ಇರಬೇಕು. ಅಂದರೆ " ನುಡಿದರೆ ಗುರುವಾಗಿ ನುಡಿಯಬೇಕು, ನಡೆದರೆ ಪರವಾಗಿ..... ಕೂಡಲ ಚೆನ್ನ ಬಸವಣ್ಣ." ಹೀಗೆ "ನಡೆಯೊಳಗೆ ನುಡಿ ತುಂಬಿ, ನುಡಿಯೊಳಗೆ ನಡೆ ತುಂಬಿ, ನಡೆ ನುಡಿ ಎರಡನು ಪರಿಪೂರ್ಣ ತುಂಬಿ ಲಿಂಗದ ಕೂಡಬಲ್ಲಾತನೆ ಶರಣ ನೋಡಾ ಅಖಂಡೇಶ್ವರಾ" ಎಂಬಂತೆ ವಾಙ್ಮಯ ತಪಸ್ಸು ಸಿದ್ಧಿ ಸಾಧಿಸುವ ಪರಿ ಇದು. ಈ ಪರಿಯ ಮಾತು, ವಚನಗಳನ್ನು ನುಡಿದವರು, ಸಾಧಿಸಿದವರು, ಸಿದ್ಧಿ ಪಡೆದವರು ಅದ್ಯರು. ಅಂತ ಹವರ ವಚನಗಳು - « ಹಾಲ ತೊರೆಗೆ ಬೆಲ್ಲದ ಕೆಸರು, ಸಕ್ಕರೆಯ ಮಳಲು, ತವ ರಾಜದ ನೊರೆ ತೆರೆಯಂತೆ » ಬದುಕಿಗೆ ಸ್ವಾಂತನ, ನೆಮ್ಮದಿ, ಸುಖ ಶಾಂತಿ ಹರ್ಷ ಗಳನ್ನು ನೀಡಿ ಉದ್ಧರಿಸುವಂತಹವುಗಳು. ಅವು ಅವರು ಸಾಧಿಸಿದ ವಾಙ್ಮಯ ತಪಸ್ಸಿನ ಸುಕೃತ ಫಲಗಳು. ನೂರೆಂಬ ಜ್ಯೋತಿರ್ಲಿಂಗವನ್ನು ಬೆಳಗಿಸಿದವುಗಳು. ಆದ್ದರಿಂದಲೇ ದೇವರ ದಾಸಿಮಯ್ಯ ಬೇಡಿಕೊಂಡದ್ದು ಅದನ್ನೇ - "ಕರಿಯನಿತ್ತಡೆ ಒಲ್ಲೆ, ಸಿರಿಯ ನಿತ್ತಡೆ ಒಲ್ಲೆ, ಹಿರಿದಪ್ಪ ರಾಜ್ಯವನ್ನಿತ್ತೊಡೆ ಒಲ್ಲೆ. ನಿಮ್ಮ ಶರಣರ ಸೂಳ್ನುಡಿಯ ಅರೆಗಳಿಗೆಯಿತ್ತೊಡೆ ನಿಮ್ಮನಿತ್ತೆ ಕಾಣ ರಾಮನಾಥಾ".

# ಶರೀಫರ ಶಿವಯೋಗ ಸಂಧಾನ

ಲೇಖಕರು;- ಶ್ರೀಶೈಲ. ಜತ್ತಿ. ವಿಜಯಾಬ್ಯಾಂಕ್ ಮುಖ್ಯ ಶಾಖೆ, ಧಾರವಾಡ-1

ಶಿಶುವಿನವಾಳ ಧಾರವಾಡ ಜಿಲ್ಲೆಯ ಒಂದು ಹಳ್ಳಿ. ಶ್ರೀ ಶರೀಫ ಶಿವಯೋಗಿಗಳಿಂದ ಶಿಶುವಿನವಾಳ ಗ್ರಾಮ ನಾಡಿಗೆಲ್ಲ ಪರಿಚಯಿಸಲ್ಪಟ್ಟಿದೆ. ಶರೀಫರು 19ನೆಯ ಶತಮಾನದಲ್ಲಿ ಬಾಳಿ ಬದುಕಿದವರು. ಬ್ರಿಟೀಷರ ಆಳ್ವಿಕೆಯ ರುಚಿಯನ್ನು ಉಂಡವರು.

ವೃತ್ತಿಯಲ್ಲಿ ಮಾಸ್ತರರೆ, ಪ್ರವೃತ್ತಿಯಲ್ಲಿ ಆಧ್ಯಾತ್ಮ ವೃತ್ತಿ ಎಂಬ ಎರಡು ಜೀವನ ಚಕ್ರ ನಡೆಸಿದವರು. ಪ್ರವೃತ್ತಿಯು ಫಲಶ್ರುವಾದಾಗ ವೃತ್ತಿಯನ್ನು ತೊರೆಯ ಧರ್ಮಚಿಂತನೆಗಾಗಿ ತನು, ಮನ ಧನವನ್ನು ಮುಡುಪಾಗಿಟ್ಟವರು. ಶರೀಫರು ಹುಟ್ಟಿದ್ದು ಮುಸಲ್ಮಾನ ಕುಟುಂಬದಲ್ಲಿ ಶಿಷ್ಯತ್ವ ಪಡೆದದ್ದು ಬ್ರಾಹ್ಮಣರಾದ ಕಳಸದ ಗೋವಿಂದ ಭಟ್ಟರಲ್ಲಿ. ಆಚರಿಸಿದ್ದು ಶಿವಯೋಗ ಸಾಧನೆ ಶರೀಫರು ನವಿಲುಗುಂದದ ನಾಗಲಿಂಗಜ್ಜ ಗರಗದ ಮಡಿವಾಳೇಶ್ವರರ ಸಮಕಾಲೀನರು ಮಾತ್ರವಲ್ಲ ಸ್ನೇಹಿತರು. ಧಾರವಾಡ ಜಿಲ್ಲೆಯ ತುಂಬ ಈ ಮೂವರ ಪ್ರಭಾವ ಸಾಕಷ್ಟು ಇದ್ದುದು ಈಗಲೂ ಕಾಣಬಹುದು.

ಮನುಷ್ಯ ಹುಟ್ಟನಿಂದಿಲೇ ಮಹಾತ್ಮನಾದ ಒಂದೇ ಒಂದು ಉದಾಹರಣೆಯು ಮನುಕುಲದ ಪ್ರಾರಂಭದಿಂದ ಹುಡುಕಿದರೂ ಸಿಗುವುದಿಲ್ಲ. ಆದಿಯಲ್ಲಿ ಸಪ್ತರ್ಷಿಗಳಾದ ವಸಿಷ್ಟ, ಅರ್ತಿ, ವಾಮದೇವ, ವಿಶ್ವಾಮಿತ್ರ, ಮುಂತಾದವರು ವಿವಿಧಜಾತಿಗಳಲ್ಲಿ ಹುಟ್ಟಿದವರು.

ಏಸು, ಮುಹಮ್ಮದ್, ಬುದ್ಧ, ಮಹಾವೀರ, ಬಸವಣ್ಣ. ಇವರೆಲ್ಲ ಯಾರು ತಮ್ಮ ಹುಟ್ಟನಿಂದ ಮಹಾನುಭಾವಿಗಳಾಗಿರಲಿಲ್ಲ. ಶತಶತಮಾನಗಳ ಇತಿಹಾಸವನ್ನು ಅವಲೋಕಿಸಿದಾಗ 12ನೇ ಶತಮಾನದಲ್ಲಿ ಬಾಳಿಬದುಕಿದ್ದ ತತ್ಕಾಲಿನ ವ್ಯವಸ್ಥೆಯ ವಿರುದ್ಧ ಸಿಡಿದೆದ್ದು ವಚನ ಕ್ರಾಂತಿಯಿಂಗೈದು ಸಮಾನತೆಯ ಕಹಳೆಯನ್ನೂದಿ ಜನಜಾಗೃತಿ ಮಾಡಿ ಅಂದಿನ ವ್ಯವಸ್ಥೆಯ ರಕ್ತ ಪಿಪಾಸುಗಳಿಗೆ ರಕ್ತದರ್ಪಣೆಯ ಮಾಡಿ! ಇಂದು ನಮಗೆಲ್ಲ ಪ್ರಾತಸ್ಮರಣೀಯರಾದ ಬಸವಾದಿಶರಣರು ಹುಟ್ಟನಿಂದ ಮಹಾನುಭಾವಿಗಳಾಗಿರಲಿಲ್ಲ.

14, 15, 16 ನೇ ಶತಮಾನದಲ್ಲಿ ಬಾಳಿಬದುಕಿದ ಪಂಪ, ರನ್ನ, ಹರಿಹರ, ರಾಘವಾಂಕರು, 18, 19ನೆಯ ಶತಮಾನದಲ್ಲಿ ಬದುಕಿದ ನಿಜಗುಣ, ಸರ್ಪಭೂಷಣ ಮಹಲಿಂಗರಂಗ ಹಾಗೂ ಹಾಗೂ ಯಡಿಯೂರು ಸಿದ್ಧಲಿಂಗ ಯತಿಗಳು ತಮ್ಮ ಹುಟ್ಟನಿಂದಲೇ ಹಿರಿಯರಾಗಿರಲಿಲ್ಲ ಅವರು ಮಾಡಿದ ತಪಸ್ಸು ಅವರು ನಡೆಸಿದ ಜೀವನ ಅವರ ಸದ್ಗುಣಗಳನ್ನು ಅವರನ್ನು ಮಹಾತ್ಮರನ್ನಾಗಿಸಿದವು.

ಅದೇ ರೀತಿ 20ನೇ ಶತಕದಲ್ಲಿ ಬಾಳಿ ಬದುಕಿದ ಶ್ರೀ ಮದಥಣಿಯ ಮುರು-ಘೇಂದ್ರರು, ಗುರುಬಸವಾರ್ಯರು. ಮುರುಘೊಡದ ಮಹಂತಜ್ಜನ ಧಾರವಾಡದ ಮೃತ್ಯುಂಜಯಪ್ಪಗಳು ಮಹಾತ್ಮರು. ಅವರ ನಡೆ ಶುದ್ಧ, ಶರಣರು ನುಡಿದುದೇ ವೇದ ನಡೆದುದೇ ದಾರಿ, ನಿದ್ರಿಸಿದರೆ ಶಿವಯೋಗ ಜಾಗ್ರದಲ್ಲಿದ್ದರೆ ಶಿವರಾತ್ರಿ ಎಂದು ಹೇಳಬಹುದು. ಶರೀಫ ಶಿವಯೋಗಿಗಳ ಶಿವಯೋಗಾನುಸಂಧಾನವನ್ನು ಕುರಿತು ಹೇಳ ಹೊರಟ ನಾನು ಶರಣ ವೃಂದದ ವಿಶಾಲ ತೋಟದಲ್ಲಿ ವಿಹರಿಸುತ್ತ ಹೊರಟ್ಟಿದ್ದೆ. ಶರೀಫರು ನಡೆಸಿದ ಜೀವನ ಕಡುಬಡತನದ್ದು ವೃತ್ತಿಯಲ್ಲಿ ಮಾಸ್ತರಿಕೆ ಮಾಡಿದರು. ಜೀವನ ಸಾಗಿಸುವುದೇ ಕಷ್ಟದ ಕೆಲಸ. ಬಡತನದಲ್ಲಿ ಬೆಂದು ಹಳ್ಳಿಯ ಜೀವನದ ನಡೆ ನುಡಿಯೊಂದಿಗೆ ಹಾಸುಹೊಕ್ಕಾಗಿತ್ತು. ಆವರ ಬಾಳು ಅಂತೆಯೇ ಅವರು ತಮ್ಮ ಅನುಭವದ ನುಡಿಗಡಣವನ್ನು ಕೂಡಿ ಹಳ್ಳಿಯ ಬಡವರ ಭಾಷೆಯಲ್ಲಿ ಹೇಳಿದ್ದಾರೆ. ಉತ್ತರ ಭಾರತದಲ್ಲಿ ಕಬೀರದಾಸರು ಆಗಿ ಹೋದಂತೆ ದಕ್ಷಿಣದಲ್ಲಿ ಶರೀಫ ಶಿವಯೋಗಿಗಳು ಅವರ ಪ್ರತಿಗೀತೆಗಳಲ್ಲಿ ಆಧ್ಯಾತ್ಮದ ಆಳವಾದ ಅನುಭವವನ್ನು ಪ್ರತಿ ದಿನದ ಬಾಳುವೆಯ ಆಗುಹೋಗುಗಳಿಗೆ ಹೋಲಿಸಿ ಬೆರಸಿ ಹಾಲಿನಲ್ಲಿ ಸಕ್ಕರೆಯನ್ನು ಬೆರಸಿದಂತೆ ಕಾಣಬಹುದು.

ನಿಜವಾದ ಯೋಗಿಗೆ ಸಮಾಜ ವ್ಯವಸ್ಥೆಯ ಸೋಂಕು ತಟ್ಟುವುದೇ ಇಲ್ಲ ಮನುಕುಲವನ್ನು ಉದ್ಧರಿಸಲು ಏಕಮೇವ ಪ್ರಮೋದ್ದೇಶದಿಂದ ನಮ್ಮೊಂದಿಗೆ ಹುಟ್ಟಲೇ ಬೇಕಾದಾಗ ಈ ಧರೆಗೆ ಬಂದ ಉನ್ನತಾತ್ಮರಿವರು. ಹುಟ್ಟುವಾಗ ಯಾರಾದರೊಬ್ಬರ ಉದರದಲ್ಲಿ ಜನಿಸಲೇ ಬೇಕಾದಾಗ ಹುಟ್ಟಲೇಬೇಕು ಅಂದಾಯ್ತು. ಒಂದು ಜಾತಿಗೆ ಸೇರಿದ ಕುಟುಂಬದಲ್ಲಿ ಹುಟ್ಟಲೇಬೇಕು ಹುಟ್ಟಿದರು. ಶರೀಫರ ಹಾಡುಗಳು ಮೇಲುನೋಟಕ್ಕೆ ಹಳ್ಳಿಯ ಅತೀ ಪದಗಳಂತೆ ಕಂಡರೂ ಅವುಗಳಲ್ಲಿ ಆಧ್ಯಾತ್ಮದ ಅಳವಾದ ಚಿಂತನೆಯು ಅಡಗಿದೆ. ಗದ್ಯದಲ್ಲಿ ಒಂದು ಪುಸ್ತಕವಾಗುವ ವಿಷಯವನ್ನು ಅವರು ತಮ್ಮ ಒಂದೊಂದು ಗೀತೆಯಲ್ಲಿ ಬರೆದಿರುವರು. ಮನಸ್ಸು, ಬುದ್ಧಿ, ಚಿತ್ತ, ಅಹಂಕಾರಗಳು ಯಾವ ರೀತಿ ಮನುಷ್ಯನ ಬಂಧ ಹಾಗೂ ಮೋಕ್ಷಗಳಿಗೆ ಕಾರಣವಾಗುವುವು ಎಂಬ ಅಂಶಗಳನ್ನು ಸೊಗಸಾಗಿ ವಿವರಿಸಿದ್ದಾರೆ. ಎಂಥಾ ಮೋಜಿನ ಕುದುರಿ ಹತ್ತಿದ ಮೇಲೆ ತಿರುಗುವದು. ಹನ್ನೊಂದು ಪೇಲಿ. ಸಾರಿ ನಾನು ಹೇಳುತ್ತೇನೆ. ದುಗ್ಗಟ್ಯಾಗ ಕಟ್ಟಿರಿ ಹಚ್ಚ ಸಟ್ಟವ ಹಾಕಲಿಬೇಕು. ಕಂಕಿಹುಲ್ಲು ಮೇಯಿಸಿ ನಿಚ್ಚಳ ನೀರು ಕುಡಿಸಬೇಕು. ಪಾಂಡವರ ಪಾಗಾದಾಗ ಕುದುರೆ ಇವೆಲ್ಲವನ್ನು ಮನಸ್ಸಿನಿನ್ನೂ ಕುರಿತಾಗ ಹೇಳಿದ್ದಾರೆ. ಮನಸ್ಸು ಎಂಬ ಚಂಚಲತೆಗೆ ಹೆಸರಾದ ಕುದುರೆಗೆ ಹೋಲಿಸಿದ್ದಾರೆ. ಅಂತಹ ಮನಸ್ಸಿಗೆ ಕಡಿವಾಣ ಹಾಕಬೇಕು. ಪ್ರಾಣ-ಹಾಯಮೆಂಬ ಕಂಕಿಹುಲ್ಲ ಮೇಯಿಸಿ ಅದ್ಭುತಪಾನವೆಂಬ ನಿಚ್ಚಳ ನೀರು ಕುಡಿಸಬೇಕು. ರೂಪ, ರಸ, ಗಂಧ, ಸ್ಪರ್ಶ ಎಂಬ, ಪಂಚತತ್ವಗಳೆಂಬ ಪಂಚಪಾಂಡವ ಎಂಬೀ

ಪಂಚತತ್ವಗಳ ಅಧೀನವಲ್ಲಿರುವ ಮನಸ್ಸನ್ನು ಗೂಡವ ಕಿತ್ತು ಗುರು ಗೋವಿಂದ ನೊಡನೆ ತಾನೇ ತಾನಾಗಿತ್ತು ಎಂದರೆ ಜೀವಾತ್ಮನು ಇಂದ್ರಿಯಗಳ ಬಂಧನದಿಂದ ಬಿಡಿಸಿಕೊಂಡು ಪರಮಾತ್ಮನಲ್ಲಿ ಲೀನ ಹೊಂದಿದವನು ಎಂಬ ಮಾತನ್ನು ಎಷ್ಟು ಸೊಗಸಾದ ಉಪಮೆಯದೊಂದಿಗೆ ವಿವರಿಸಿದ್ದಾರೆ.

ದುಷ್ಟ ಬುದ್ಧಿಯ ಜನರು ಮಾಡುವ ವ್ಯಭಿಚಾರವನ್ನೇ ಉದಾಹರಣೆಯನ್ನಾಗಿ ಸಿಕೊಂಡು "ಹಗಲಿರುಳೆನ್ನದೆ ಸಾಧು ಸತ್ಪುರುಷರ ಸಂಗದೊಳಗೆ ಮಳ್ಳಿಯ ತೆರೆದಳ ಮಾತನಾಡದೆ ಜನರೆಲ್ಲ ಕಳ್ಳರೊಳಗೆ ಸುಳಿದಳ್ಳ ಕಾಳ್ಳದೊಳು ಉಳ್ಯಾಡಿ ಬೇಸತ್ತು ಒಟ್ಟಾರೆ ಎನಿಸದೆ ಆರು, ಮೂರು ಪುರುಷರ ದಾರಿ ತಪ್ಪಿದರೋಡಿ ಕಣ್ಣಿಟ್ಟವರನ್ನು ಬಿಡದೆ ನಾ ವಾರಿಗಿಯುರೊಳ್ಳಿ ನೀರಿದಳೆನಿಸಿವೆ. ಪಾಟ ಪಟಣದೊಳು ಗಣಗಣ ತಿರುಗುತ್ತಾ ಕೋಟಿ ಕೊಟ್ಟಳದೊಳು ನೀವಾಗಿ ಶಿಶುನಾಳೇಶನೂರು ಬೆಟ್ಟವತೋರಿ ಎಂಬ ಹಾಡಿನಲ್ಲಿ ಮಾನವನ ಉನ್ನತಿ ಅವನಲೆಗಳಿಗೆ ಮುಖ್ಯಸಾಧನವಾಗುವ ಕಾಮ-ಪಾಶನೆ ಹಾಗು ಕಾಮಿಸ್ತ್ರೀಯು ಯಾವ ರೀತಿಯಾಗಿ ಪರಪುರುಷನ ಸಂಗವನ್ನು ಮಾಡುವಳೋ ಅದೇ ರೀತಿಯ ಕಾಮನೆ ಪರಮಾತ್ಮನನ್ನು ಕೊಡುವಳ್ಳಿ ತೋರಿಸ-ಬೇಕಾದ ಅಗತ್ಯವನ್ನು ಮನಭೂಗುವಂತೆ ಹೇಳಿದ್ದಾರೆ. ಆಧ್ಯಾತ್ಮದ ಉತ್ತುಂಗ ಶಿಖರವನ್ನೇರಿದ ಸಾಧಕರಿಗೆ ಹೇಳಿದ ಮಾತು ತೋರಿಕೆಗೆ ಅಶ್ಲೀಲವಾಗಿ ಕಂಡುಬಂ-ದರೆ ಸೋಜಿಗವೇನಿಲ್ಲ. ಶ್ಲೀಲ ಅಶ್ಲೀಲ ಮಾಪನಾಸಕ್ತಿ ಕುಂಟಿತಗೊಂಡು ಕಾಮಾಂಧ ಕಾರದ ಮಬ್ಬಿನಲ್ಲಿ ಕೊರಗುವವರಿಗೆ ಶರೀಫರ ಈ ಹಾಡು ಅಶ್ಲೀಲದಂತೆ ತೋರಬ-ಹುದು. ಈ ಹಾಡಿನಲ್ಲಿ ಶರಣರು ಹಾಡಿದ ಶರಣಸತಿ ಲಿಂಗಪತಿ ಎಂಬ ಉಕ್ತಿಯ ಸಾರ್ಥಕವನ್ನು ಕಾಣಬಹುದು. ಶ್ರೀ ಶೈಲ ಮಲ್ಲಿಕಾರ್ಜುನನಿಗೆ ಮನಸೋತ ಮಹಾ-ದೇವಿಯಕ್ಕ ಲೋಕದ ಗಂಡರನೊಯ್ದು ಒಲೆಯೊಳಗಿಕ್ಕು ಎಂದು ಹಾಡಿನ ವಚನದಲ್ಲಿ ಇದೇ ಅರ್ಥವನ್ನು ಕಾಣಬಹುದಾಗಿದೆ.

"ಬಿದ್ದಿಯ ಬೇಮುದುಕಿ ಬಿದ್ದಿಯಬೇ ಸದ್ಯಕೀಗ ಹುಲಗೊಳ ಸಂತಿ ಗದ್ದಲ. ದೊಳಗ್ಯಾಕ ನಿಂತಿ" ಎಂಬ ಹಾಡಿನಲ್ಲಿ ಮಾನವ ಜನುಮಕ್ಕೆ ಬಂದ ಜೀವಾತ್ಮನಿಗೆ ಎಚ್ಚರಿಂತಂತೇ ಘಂಟೆಯನ್ನು ಬಾರಿಸಲು. ಹುಲಗೂರು ಎಂಬ ಹಳ್ಳಿಯ ಸಂತೆಯನ್ನು ಉದಾಹರಿಸಿದ್ದಾರೆ. ಈ ಹಾಡಿನಲ್ಲಿ ಇರುವೆ ಎಂಬಂತೆ ಲಕ್ಷ ಜೀವದಾಲು ಮಾನವ ಜನ್ಮಕ್ಕೆ ಬಂದ ಜೀವಾತ್ಮ ಮುದುಕಿಯಾದರೆ ಜೀವನವೇ ಹುಲಗೂರು ಸಂತೆ-ಯಾಗಿದೆ. ತಲೆಯ ಮೇಲಿನ ಬುಟ್ಟಿ ಎಂದರೆ ಜನುಮ ಜನುಮದಲ್ಲಿ ಮಾಡಿದ ಪಾಪ, ಪುಣ್ಯಗಳ, ಕರ್ಮದ ಬುತ್ತಿ ಉಟ್ಟರ ದಾನ ರೊಕ್ಕ ಜೋಕೆ ಎಂದರೆ ಆದಾರ ಸ್ವಾಧಿಷ್ಠಾನದಲ್ಲಿ ಪ್ರಾರಂಭವಾಗುವ ವೀರ್ಯ ಶಕ್ತಿ. ಕೆಟ್ಟ ಘಂಟೆಯ ಚಾಡಿಯರು ಪಂಚೇಂದ್ರಿಯಗಳೇ, ಅರಿಷಡ್ವರ್ಗಗಳು, ಶಿಶುನಾಳಧೀಶನೇ ಬ್ರಹ್ಮ ಕೆಸರು-ಭವಪಾಶ ತರವಲ್ಲ ತಂಗೀ ನಿನ್ನ ತಂಬೂರಿ ಅದ ತಿದ್ದಿ ನುಡಿಸಲು —— ಎಂಬ ಹಾಡಿನಲ್ಲಿ

ಈ ದೇಹವೇ ತಂಬೂರಿ ಸರಸಸಂಗತಿ ಎಂದರೆ ಶಿವಯೋಗಾನುಸಂಧಾನದ ಕುರುಹು ಎಂದರೆ ಮಾರ್ಗ, ತಂಬೂರಿಯನ್ನು ಯಾವರೀತಿಯಲ್ಲಿ ತಿದ್ದಿ ನುಡಿಸಿದಾಗ ಮಾತ್ರ ಮಧುರನಾದವನ್ನು ನೀಡುವಂತೆಯೇ ಪ್ರಾಣಾಯಾಮವನ್ನು ತಿದ್ದಿ ತೀಡಿ ಮಾಡಿದರೆ ನಾದಬಿಂದು ಕಲಾತೀತನಾದ ಪರಶಿವನ ದರುಶನವಾಗುವದು.

ಅಗ್ಗದೇವಿಯ ತಂದು ಅಂಗಿಯ ಹೊಲಿಸಿದರೆ ಬಗಲ ಬೆವರಿನ ವಾಸನೆಗೆ ರಾತ್ರಿ ಮಲಗಿ ನಿದ್ರಿಸುವಾಗ ಅಂಗಿಯಾಗ, ಹೆಗ್ಗಣ ಕೊಂಡೊಯ್ದು ಹೆಗ್ಗಣ ಗುದ್ದಿನೊಳಗೆ ಒಯ್ದು ಒಗೆಯಿತೆಂಬ ಹಾಡಿನಲ್ಲಿ ಎಂತಹ ಸೊಗಸಾದ ಉಪಮೇಯ, ಎಂತಹ ಹಳ್ಳಿ ಗಾಂಪನಿಗೂ ಅರ್ಥವಾಗುವಂತೆ ವಿವರಿಸಿದ್ದಾರೆ. ಈ ಹಾಡಿನಲ್ಲಿ ಜೀವಾತ್ಮನು ಯಾವ ರೀತಿಯಾಗಿ ಕರ್ಮದ ಭಾಂಡದಲ್ಲಿ ಬೀಳುವನು ಎಂಬುದನ್ನು ತೋರಿಸಿದ್ದಾರೆ. ಇಲ್ಲಿ ಅಗ್ಗಾದರವಿ ಎಂದರೆ ಪಂಚೇಂದ್ರಿಯಗಳು ಅಂಗಿ ಎಂದರೆ ದೇಹ ಹೆಗ್ಗಣ ಎಂದರೆ ಮೃತ್ಯು ಆರುಗೇಣಿನ ಕವಚ ಎಂದರೆ ಅರಿಷಡ್ವರ್ಗಗಳಿಂದ ತುಂಬಿದ ಶರೀರ. ಬಗಲಬೆವರಿನ ವಾಸನೆ ಎಂದರೆ ವಿಷಯವಾಸನೆ. ನಿದ್ದೆ ಮಾಡುವಾಗ ಎಂದರೆ ಜೀವನಕ್ಕೆ ಅಂಟಿಕೊಳ್ಳುವಿಕೆ ಹೆಗ್ಗಣ ಗುದ್ದು ಎಂದರೆ ಕರ್ಮದ ಕೋಟಲೆ ಅದೇ ರೀತಿಯಲ್ಲಿ ಮೋಹದ ಹೆಂಡನೆ ತೀರಿದ ಮ್ಯಾಲ ಮಾನವ ಮನೆಯ ಹಂಗಿನ್ಯಾಕೆ ಎಂದರೆ ಮೋಹದ ಹೆಂಡನೆ ಎಂದರೆ ದೇಹಾಭಿಮಾನ, ದೇಹವೇ ಮಾನವನ ಮನೆ.

ಈ ದೇಹ ಸಾವು ನೋವಿಗೆ ಹಾರುವ ಬೀಗನಿದ್ದಂತೆ. ಸೋರುತಿಹುದು ಮನೆಯ ಮಾಳಿಗೆ ಎಂಬ ಹಾಡಿನಲ್ಲಿ ಎಂತಹ ಮಹೋನ್ನತ ಅರ್ಥವನ್ನಡಗಿಸಿದ್ದಾರೆ. ಸೋರುವ ಮನೆ ಎಂದರೆ ಇಂದ್ರಿಯಗಳು.ಸೋರುತ್ತಿರುವ ಮನೆ ಅದರಲ್ಲಿ ಮಾಳಿಗೆ ಎಂದರೆ ಮನಸ್ಸು ತಲೆಯಿಂದ ಪ್ರಾರಂಭವಾಗುವಂತಹದು. ಕಂತೆಹುಲ್ಲು ಕಸವೆಂದರೆ ಆಗುವ ಮಾಯಾ-ಕಾರ್ಮಿಕ ಮಲಗಳು ಪಂಚೇಂದ್ರಿಯಗಳು, ಹರಕು ಜಂತಿ ಮುರುಕು ತೊಲೆಯ ಹರಕು ಜಂತಿ ಎಂದರೆ ಚಂಚಲ ಮನಸ್ಸು ಮುರಕು ತೊಲೆ ಭ್ರಮಣಿಗೊಂಡ ಬುದ್ಧಿ ವಿಕಾರ ಹೊಂದಿದ ಮನಸ್ಸಿನೊಂದಿಗೆ ಮುಕ್ತಾಯ ಹೊಂದುವದೆಂತು? ಎಂದು ಸವಾಲು ಹಾಕಿದ್ದಾರೆ ಶರೀಫ ಶಿವಯೋಗಿಗಳು. ಇನ್ನು ಅನೇಕ ರೀತಿಯ ಹಾಡುಗಳಲ್ಲಿ ಶರೀಫರು ತಾವು ಒಂದು ಅಧ್ಯಾತ್ಮದ ಉತ್ತುಂಗ ಶಿಖರದಲ್ಲಿ ನಿಂತು ಕೊಳಚೆಯಲ್ಲಿ ಹೊರಳಾ-ಡುತ್ತಿರುವ ಜಗದ ಜನರಿಗಾಗಿ ನೀತಿಯ ನೆಲೆಗಟ್ಟಿನ ಮೇಲೆ ನಿಂತು ಶರಣರು ನೀಡಿದ ಶ್ರವಣ, ಮನನ, ನಿಧಿಧ್ಯಾಸ, ಧ್ಯಾನ, ಧಾರಣ ಸಮಾಧಿಯೆಂಬ ಅಷ್ಟಾಂಗಯೋಗ ಪ್ರತಿಪಾದನೆಯನ್ನು ಪಾಮರನಿಗೂ ಅರ್ಥವಾಗುವ ರೀತಿಯಲ್ಲಿ ವಿವರಿಸಿದ್ದಾರೆ. ಮೊದಲೇ ಮಾಸ್ತರಿಕೆ ಮಾಡಿದ ಜೀವ ಅದು. ಮಕ್ಕಳಿಗೆ ತಿಳಿಯುವಂತೆ ಜಗದ ಜನರಿಗೆ ಜೀವನದ ಉದ್ದೇಶ ಸಾಧನೆಗಳನ್ನು ತಮ್ಮ ಹಾಡುಗಳ ಮುಖಾಂತರ ಕಲಿಸಿದ್ದಾರೆ.

# ವಿದ್ಯಾರ್ಥಿ ಜೀವನದ ಬೆಳಕು ಸರಣಿ:- ಲೇಖನ ೬

ಲೇಖಕ:- ಬಿ. ಎಸ್. ಕೃಷ್ಣಮೂರ್ತಿ. ನಂ, 5 ಸೀತಾವಿಲಾಸರಸ್ತೆ, ಮೈಸೂರು 570024

ವಿದ್ಯಾರ್ಥಿ ಜೀವನದಲ್ಲಿ ಜ್ಞಾನ ಶೇಖರಣೆಯ ಗುರಿ:- ವಿದ್ಯಾರ್ಥಿಗಳು ತಮ್ಮ ಯಶಸ್ಸಿಗೆ ಜ್ಞಾನವನ್ನು ಶ್ರೀಮಂತನನ್ನಾಗಿಸಲು ಪ್ರಯತ್ನಿಸಬೇಕು. ಪ್ರಯತ್ನ ಮಾಡದೆ ಯಾವ ಇಚ್ಛೆಯೂ ಸಿದ್ಧಿಸುವುದಿಲ್ಲ. ಜ್ಞಾನವೆಂಬ ಮಧುವನ್ನು ಪಾನ ಮಾಡಿದಷ್ಟು ಅದರ ದಾಹ ಹಿಂಗುವುದಿಲ್ಲ, ಅದೇ ಬಾಳಿನ ಬೆಳಕು. ಆದರೆ ಇತ್ತೀಚಿನ ದಿನಗಳಲ್ಲಿ ಜ್ಞಾನ ಬೆಳೆದಿದ್ದರೂ ನೈತಿಕ ಮಟ್ಟವು ಏರಿಲ್ಲ- ಜ್ಞಾನವೇ ಜೀವನದ ಸುಖವನ್ನು ಹೆಚ್ಚಿಸುವ ನಿಧಿ. ವಿದ್ಯಾರ್ಥಿಗಳು ತಾವು ಅಜ್ಞಾನಿಗಳೆಂದು ಭಾವಿಸುವುದೇ ಜ್ಞಾನದ ಪ್ರಥಮ ಸೋಪಾನ ! ದೇವರು ಇರುವನೆಂದು ತಿಳಿಯುವ ಭಯವೇ ಜ್ಞಾನದ ಆರಂಭ. ಜ್ಞಾನ ಶೇಖರಣೆಯ ಹಾದಿಯಲ್ಲಿ ನಾನು ಯಾರ ಬಗೆಗೆ ಮಾತನಾಡುತ್ತೇನೆ; ಯಾರ ಎದುರು ಮಾತನಾಡುತ್ತೇನೆ; ಹೇಗೆ ಮಾತನಾಡುತ್ತೇನೆ; ನಾನು ಎಲ್ಲಿ ಮಾತನಾಡುತ್ತೇನೆ ಎಂಬುದನ್ನು ತಿಳಿದಿರಬೇಕು. ಜ್ಞಾನಿಗಳು ದರಿದ್ರ ಬಂದರೆ ಚಿಂತಿಸುವುದಿಲ್ಲ ಅದಕ್ಕಾಗಿ ಪರಿತಪಿಸುವುದಿಲ್ಲ. ವಿದ್ಯಾರ್ಥಿ ಸುಜ್ಞಾನವನ್ನೂ ಬುದ್ಧಿಯನ್ನೂ ಭದ್ರವಾಗಿಟ್ಟುಕೊಂಡು ಅವುಗಳ ಮೇಲೆ ನಿಮ್ಮದೃಷ್ಟಿ ತಪ್ಪದೆ ಇರಲಿ., ಅವು ನಿನ್ನ ಬಗೆಗೆ ಜೀವವೂ, ಕೊರಳಿಗೆ ಭೂಷಣವೂ ಆಗಿರುತ್ತವೆ.

ನೀವು ಜ್ಞಾನವನ್ನು ವೃದ್ಧಿಪಡಿಸುವ ಪುಸ್ತಕಗಳನ್ನು ಆಯ್ದು ಓದಿ ಸಾರವನ್ನು ಸವಿಯಬೇಕು ಜ್ಞಾನವು ಏನುಮಾಡುತ್ತದೆ ಎನ್ನುವುದಕ್ಕಿಂತ ಅದು ಎಂತಹದು ಎಂಬುದನ್ನು ಕೇಳಿದರೆ ಸಾಕು. ಜ್ಞಾನಕ್ಕೆ ಸಮನಾದ ಪವಿತ್ರ ವಸ್ತು ಬೇರೊಂದಿಲ್ಲ. ಜ್ಞಾನದ ಅನ್ವೇಷಣೆಯಲ್ಲಿ ದೂರ ಹೋದಷ್ಟೂ ದೊರೆತ ಜ್ಞಾನವು ಅದರ ಪ್ರಮಾಣವನ್ನು ಕಡಿಮೆ ಗೊಳಿಸುತ್ತದೆ. ವಿದ್ಯಾರ್ಥಿಯು ಅಜ್ಞಾನವನ್ನು ಹಿಮ್ಮೆಟ್ಟಿಸಬೇಕು. ಏಕೆಂದರೆ ಅಜ್ಞಾನವು ಕಲೆಯ ಶತೃ. ಅಜ್ಞಾನಿಗಳ ಅಧಿಕ ಸ್ನೇಹಕ್ಕಿಂತ ಸುಜ್ಞಾನಿಗಳಕೂಡ ಜಗಳವೇ ಲೇಸು. ಅಜ್ಞಾನಿಯಾಗಿರುವುದು ಮಾನವನ ವಿಶೇಷ ಹಕ್ಕಲ್ಲ; ತಾನು ಅಜ್ಞಾನಿಯೆಂಬುದನ್ನು ತಿಳಿಯುವುದು ಅವನ ವಿಶೇಷಾಧಿಕಾರ.

ಜ್ಞಾನದ ಬೆಳಕು ಹೊರಗಡೆಯಿಂದ ಹತ್ತಿಸಬಲ್ಲ ಮತ್ತು ಸರಿಮಾಡಬಲ್ಲ ಲ್ಯಾಟೀನಿನ (Lantern)ಬೆಳಕಲ್ಲ. ಅದು ಸ್ವಯಂಪ್ರಭೆ ಬೀರುವ ಮಿಂಚಿನ ಹುಳದ ಜೀವಕ್ರಿಯೆಯ ಫಲವಾದ ಬೆಳಕು. ಜ್ಞಾನಿಗೆ ಬಂದ ದಾರಿದ್ರ್ಯಕ್ಕಿಂತ ಅಜ್ಞಾನಿಗೆ ಬಂದ ಐಶ್ವರ್ಯ ಸಮಾಜಕ್ಕೆ ಹೆಚ್ಚು ಹಾನಿಕರ ಜ್ಞಾನವು ಎಲ್ಲಾ ಬಗೆಯ ಪುಸ್ತಕಗಳ ಓದಿನಿಂದ ಲಭ್ಯವಾಗುತ್ತದೆ. ಆ ಜ್ಞಾನವೇ ಶಕ್ತಿ !

ಜ್ಞಾನವೇ ಎಲ್ಲಾ ಸುಧಾರಣಾ ಆಂದೋಲನದ ಸಫಲತೆಗೆ ಕಾರಣ ಸರ್ವಜ್ಞನು 'ಜ್ಞಾನದಿಂದಲೇ ಇಹವು; ಜ್ಞಾನದಿಂದಲೇ ಪರವು; ಜ್ಞಾನವಿಲ್ಲದಿರೇ ಸಕಲವೂ ತನಗಿದುಹಾನಿಕಾಣಯ್ಯ' ಎಂದು ಅಂದಿರುತ್ತಾನೆ. ಜ್ಞಾನವೆಂಬುದು ಮೂಲತಃ ದರ್ಶನ್ನ ಪ್ರತ್ಯಕ್ಷವಾಗಿದೆ. ಗೀತೆಯು ಜ್ಞಾನವನ್ನು ಕೇವಲ ಅನುಭವಾತ್ಮಕವಲ್ಲ ಎಂದು ಹೇಳಿದೆ. ಜ್ಞಾನವುಳ್ಳವನದೇ ನಿಜವಾದ ಜೀವನ. ಜ್ಞಾನವೇ ಬಾಳಿನ ನಂದಾದೀಪ. ಸುಜ್ಞಾನ ಸೌರಭದ ಗಂಧವನ್ನು ಆ ಘ್ರಾಣಿಸದವನ ವಿದ್ಯೆ ಎಷ್ಟೇ ಅತುಳವಿದ್ದರೂ ಅದು ನಿರರ್ಥಕ. ಜ್ಞಾನಕ್ಕಿಂತ ಮಿಗಿಲಾದ ಸುಖವಿಲ್ಲ. ಪರಮಾತ್ಮನು ಮನುಷ್ಯನಿಗೆ ಬುದ್ಧಿ ಕೊಟ್ಟಿರುವುದು, ತಿಳುವಳಿಕೆ ನೀಡಿರುವುದು, ಜ್ಞಾನಾರ್ಜನೆಗಾಗಿ. ಅದರ ಸದುಪಯೋಗ ಮಾಡಿಕೊಂಡಾಗ ಮಾನವನು ಮಹಾತ್ಮನಾದಾನು! ದೇವರ ಭಯವೇ ಜ್ಞಾನದ ಮೂಲ ಜ್ಞಾನದ ಭಂಡಾರ ಅನಂತ ಸಾಗರವಿದ್ದಂತೆ. ಮಾನವ ತನಗೆ ಶಕ್ತಿಯಿದ್ದಷ್ಟು ಕೊಡಗಳಲ್ಲಿ ತುಂಬಿಕೊಳ್ಳಬಹುದು.

ಸರ್ವಜ್ಞನು ಜ್ಞಾನದಿಂದಲಿ ಇಹವು, ಜ್ಞಾನದಿಂದಲಿ ಪರವು, ಜ್ಞಾನವಿಲ್ಲದ ಸಕಲವೂ ತನಗೆ ಹಾನಿಕಾಣಯ್ಯ ಎಂದು ಅಂದಿರುವನು. ಜ್ಞಾನವು ಎಂದಿಗೂ ಇದ್ದದ್ದೇ. ಮನುಷ್ಯ ಅದನ್ನು ಗಮನಿಸುವುದು ಯಾವಾಗಲೋ ಒಮ್ಮೆ. ಅಜ್ಞಾನ, ಅಶಿಸ್ತು, ಮನುಷ್ಯನ ತೊಂದರೆಗಳಿಗೆ ಕಾರಣ. ಜ್ಞಾನವು ಒಂದು ಕಾಡು ಪಶುವಿನಂತೆ.॥ ಪಳಗಿಸುವ ಮೊದಲು ಅದನ್ನು ಬೇಟೆಯಾಡಿ ಹಿಡಿಯಬೇಕಾಗುತ್ತದೆ.

ಜ್ಞಾನವೆಂಬುದು ಮಹಾನಿಧಿ ! ಅದು ಜಗತ್ತಿನ ಎಲ್ಲಾ ಸಂಪತ್ತುಗಳಿಗಿಂತಲೂ ಮಿಗಿಲಾದುದು, ಅದನ್ನು ಯಾರೂ ಕೊಳ್ಳೆಹೊಡೆಯಲು ಸಾಧ್ಯವಿಲ್ಲ. ಜ್ಞಾನದಿಂದಲೇ ಸಕಲವೂ ಸಾಧ್ಯ. ನಿಜವಾದ ಜ್ಞಾನಿಯೂ ಕರ್ಮಫಲವನ್ನು ಅಪೇಕ್ಷಿಸುವುದಿಲ್ಲ. ಜ್ಞಾನ ನ್ಯಾಯಶೀಲ ಎನ್ನುವುದಕ್ಕಿಂತ ಹೆಚ್ಚಿನ ಪ್ರಶಂಸೆ ಇನ್ನಿಲ್ಲ. ಜ್ಞಾನವು ನಾವು ಅಧ್ಯಯನ ಮಾಡಿದಷ್ಟೂ ವೃದ್ಧಿಯಾಗುತ್ತದೆ. ನಾವು ತಪಸ್ಸು ಮಾಡಿದಷ್ಟೂ ನಮ್ಮ ಅಜ್ಞಾನದ ಅರಿವಾಗುತ್ತದೆ. ದೇವರನ್ನು ಅರ್ಥಮಾಡಿಕೊಳ್ಳುವುದೇ ಜ್ಞಾನ.

ಸೂಚನೆ:- ಈ ಜ್ಞಾನದ ಮಹಿಮೆಯ ನುಡಿಗಳು ಸರ್ವರ ಉಪಯೋಗಕ್ಕಾಗಿ ಗ್ರಂಥಗಳಿಂದ ಆರಿಸಿ ತೆಗೆದಿದ್ದು.

# ವಿಜ್ಞಾನ ಮತ್ತು ಆಧ್ಯಾತ್ಮ - 3

ಲೇಖಕರು : **ಶ್ರೀ ಹೆಚ್.ಎಸ್. ನರಸಿಂಹಜೀಯರ್,** ಮುಖ್ಯೋಪಾಧ್ಯಾಯರು.
ಶ್ರೀ ಬಸವೇಶ್ವರ ಆಂಗ್ಲ ಪಾಠಶಾಲೆ, ತುಮಕೂರು.

ಇತ್ತೀಚೆಗೆ ಕೆಲವು ಆಧ್ಯಾತ್ಮವಿಚಾರಗಳ ಬಗ್ಗೆ ವಿಜ್ಞಾನಿಗಳು ಕುತೂಹಲದಿಂದ ಸಂಶೋಧನೆ ಮಾಡುತ್ತಿದ್ದಾರೆ. ಹೆಚ್ಚಾಗಿ ಪಾಶ್ಚಾತ್ಯ ವಿಜ್ಞಾನಿಗಳೇ ತುಂಬಾ ಆಸಕ್ತರಾಗಿದ್ದಾರೆ. ಭಾರತದಲ್ಲಿ ಕೆಲವರು ಇವೆಲ್ಲ ಮೂಢನಂಬಿಕೆಗಳೆಂದೂ ವಿಚಾರ ಮಾಡಲೂ ಯೋಗ್ಯವಲ್ಲವೆಂದೂ ಭಾವಿಸಿದ್ದಾಗ್ಯೂ ಪ್ರಮುಖ ವಿಜ್ಞಾನಿಗಳು ಬೇರೆ ಬೇರೆ ದೇಶಗಳಲ್ಲಿ ಕುತೂಹಲದಿಂದ ಪರಿಶೋಧನೆ. ಮಾಡುತ್ತಿದ್ದಾರೆ.

ಇಂತಹ ಒಂದು ವಿಚಾರವೆಂದರೆ ಮನುಷ್ಯನ ಭೌತಶರೀರ ಮತ್ತು ಸೂಕ್ಷ್ಮ ಶರೀರ. ಆಧ್ಯಾತ್ಮದಲ್ಲಿ ಇವೆರಡರ ಅಸ್ತಿತ್ವವನ್ನೂ ಹೇಳಲಾಗಿದೆ. ಪುರಾತನ ಕಾಲದಿಂದಲೂ ಯೋಗಿಗಳಿಗೆ ಗೋಚರಿಸಿದ ಈ ವಿಚಾರ ಪ್ರಚಲಿತವಾಗಿದೆ. ಎಲುಬು, ರಕ್ತ, ಮಾಂಸ, ನರವ್ಯೂಹಗಳಿಂದ ಕೂಡಿದ ಮನುಷ್ಯ ಶರೀರವೇ ಭೌತ ಶರೀರ, ಇದರಲ್ಲಿ ಚೈತನ್ಯಮಯವಾದ ಮತ್ತೊಂದು ಸೂಕ್ಷ್ಮಶರೀರವಿದೆ ಎಂಬ ನಂಬಿಕೆ ಇದೆ

ರಷ್ಯಾದೇಶದ ವಿಜ್ಞಾನಿಗಳು ಈ ಬಗ್ಗೆ ಆಸಕ್ತಿವಹಿಸಿ ಮನುಷ್ಯನ ದೇಹ. ದಲ್ಲಿರಬಹುದಾದ ಸೂಕ್ಷ್ಮಾತಿ ಸೂಕ್ಷ್ಮರೂಪದಿಂದಿರುವ ಈ ಚೈತನ್ಯ ಶರೀರವನ್ನು ಗುರುತಿಸಲು ದಕ್ಷಿಣ ರಷ್ಯಾದ ಕ್ಯೂಬಾನ್ ಪ್ರಾಂತ್ಯದ ಕಸೋದರ್ ಎಂಬಲ್ಲಿ ಸಂಶೋಧನೆ 1939ರ ವೇಳೆಗೆ ಪ್ರಾರಂಭವಾಗಿತ್ತು. ಈ ಚೈತನ್ಯ ಶರೀರವನ್ನು ಗುರುತಿಸುವ ಉಪಕರಣಗಳನ್ನು ಸಜ್ಜುಗೊಳಿಸಲು ತಜ್ಞರನ್ನು ಹುಡುಕುತ್ತಿದ್ದರು. ಆಗ ತಾಂತ್ರಿಕ ತಜ್ಞನಾದ ಸಮ್ಯೋನ್ ಡೆವಿಡೊವಿಚ್ ಕೀರ್‌ಲಿಯನ್ ಎಂಬುವನು ಸಹಾಯಕನಾದನು. ಇವನ ಹೆಂಡತಿ ವೆಲೊಟಾಯಿನ್ ಅಧ್ಯಾಪಕಿ. ಈ ದಂಪತಿಗಳು ಸಸ್ಯ ಜೀವನದ ಸೂಕ್ಷ್ಮಪರಿಶೀಲನೆಗಾಗಿ ಒಂದು ಸೂಕ್ಷ್ಮದರ್ಶಕ ತಯಾರಿಸಿದ್ದರು. ಅವರು ಈಗ ಶಕ್ತಿಶಾಲಿಯಾದ ಎಲೆಕ್ಟ್ರಾನ್ ಮೈಕ್ರೋಸ್ಕೋಪನ್ನು ಒಳಗೊಂಡ ಒಂದು ಪರಿಷ್ಕೃತ ಉಪಕರಣ ತಯಾರಿಸಿದ್ದಾರೆ.

ಅಯಸ್ಕಾಂತವು ಕಬ್ಬಿಣದ ರಜಗಳನ್ನು ತನ್ನೆಡೆಗೆ ಸೆಳೆಯುತ್ತದೆ. ಜೀವಂತ ಮನುಷ್ಯನ ಶರೀರವು ಹೊರಸೂಸುವ ವಿಕಿರಣದ ಪರಿಧಿಯನ್ನು ಅದಕ್ಕೆ ಹೋಲಿಸಬಹುದು. ಅಯಸ್ಕಾಂತದ ಸುತ್ತಲೂ ಇರುವ ಕಾಂತ ಶಕ್ತಿಯೂ ನಮ್ಮ ಕಣ್ಣಿಗೆ ಗೋಚರಿಸದಿದ್ದರೂ ಕಬ್ಬಿಣದ ರಜಗಳನ್ನು ತನ್ನೆಡೆಗೆ ಎಳೆಯುತ್ತದೆ. ಈ ಶಕ್ತಿಯನ್ನು ಕುರಿತ ಅರಿವು, ಕಲ್ಪನೆ ನಮಗಾಗುತ್ತದೆ. ಇದೇ ರೀತಿ ಮನುಷ್ಯನ ದೇಹದಿಂದ ಹೊರ ಹೊಮ್ಮುವ ಒಂದು ವಿಶಿಷ್ಟ ಚೈತನ್ಯವು ವಿದ್ಯುತ್ತಿನ ಪ್ರವಾಹವನ್ನು ಪ್ರಭಾವ

ಗೊಳಿಸುವುದೆಂದು ತಜ್ಞರು ಹೇಳುತ್ತಾರೆ. ದೇಹದಿಂದ ಹೊರ ಹೊಮ್ಮುವ ಆ ಚೈತನ್ಯ ಅಥವಾ ಪ್ರಭಾವಲಯದ ಫೋಟೋ ತೆಗೆಯಲು ನಮ್ಮ ದೇಹವನ್ನು ಅಥವಾ ಯಾವುದಾದರೊಂದು ಅಂಗವನ್ನು ಅಧಿಕ ಆವರ್ತನದ ವಿದ್ಯುತ್ ಪ್ರವಾಹ ಕ್ಷೇತ್ರದ ಸಮೀಪವಿರಿಸಬೇಕು. ಆಗ ಹೊರಹೊಮ್ಮುವ ಚೈತನ್ಯವು ವಿದ್ಯುತ್ ಕ್ಷೇತ್ರದ ಮೇಲೆ ತನ್ನ ಪ್ರಭಾವವನ್ನು ಬೀರುತ್ತದೆ. ಆಗ ಅವುಗಳ ಬಣ್ಣವೂ ಬದಲಿಸುತ್ತದೆ. ಕೀರ್ ಲಿಯನ್ ಸಿದ್ಧಪಡಿಸಿದ ಪರಿಷ್ಕೃತ ಉಪಕರಣದಿಂದ ಅವುಗಳ ಸ್ಥಿತ್ಯಂತರ, ಗತಿ ವೈಚಿತ್ರ್ಯ, ವರ್ಣ ವೈವಿಧ್ಯಗಳನ್ನು ಕಾಣಬಹುದು ಕೀರ್‌ಲಿಯನ್ ಉಪಕರಣ ವಿದ್ಯುತ್ ಅಲ್ಲದ ಚೈತನ್ಯವನ್ನು, "ಒಂದು ರೀತಿಯ ವಿದ್ಯುತ್ತಾಗಿ ಪರಿವರ್ತಿಸಿ ನಮ್ಮ ದೃಷ್ಟಿಗೆ ಗೋಚರಿಸುವಂತೆ ಮಾಡುತ್ತದೆ.

" the Kirlian device apparently converts a non electrical phenomena to an electrical one to make it visible."

ಸೂರ್ಯಗ್ರಹಣಕಾಲದಲ್ಲಿ ಸೂರ್ಯ ಮಂಡಲವನ್ನು ಚಂದ್ರ ಬಿಂಬ ಮರೆಮಾಡಿ ಮುಸುಕುಗೊಳಿಸುವಂತೆ ನಮ್ಮ ದೇಹವನ್ನೆಲ್ಲಾ ಸೂಕ್ಷ್ಮವಾಗಿ ಬೆಳಗುತ್ತಿರುವ ಅ ಅತ್ಯಂತ ಸೂಕ್ಷ್ಮವಾದ ಚೈತನ್ಯಮಯ ಶರೀರವನ್ನು ನಮ್ಮ ಸ್ಥೂಲದೇಹವು ಮರೆ ಯಾಗಿಸಿದೆ, ಎಂಬುದನ್ನು ಸೋವಿಯತ್ ವಿಜ್ಞಾನಿಗಳು 'ಕೀರ್‌ಲಿಯನ್ ಉಪ ಕರಣದ ಮೂಲಕ ಪ್ರತ್ಯಕ್ಷವಾಗಿ ಕಂಡರು. ನಾವು ಜೀವವಿರುವವುಗಳೆನ್ನುವ ಸಸ್ಯ, ಪ್ರಾಣಿ, ಮನುಷ್ಯ-ಈ ಎಲ್ಲ ಚೇತನ ವಸ್ತುಗಳೂ ನಮ್ಮ ಇಂದ್ರಿಯಗಳಿಗೆ ಗೋಚರವಾಗುವ, ಅಣು ಪರಮಾಣುಗಳಿಂದ ರಚಿತವಾದ ಸ್ಥೂಲ ಆಕಾರ ಮತ್ತು ದೇಹಗಳಿಂದ ಕೂಡಿವೆ. ಇವುಗಳ ಹಿನ್ನೆಲೆಯಲ್ಲಿ ಚೈತನ್ಯ ಶಾಲಿಯಾದ ಇನ್ನೊಂದು ಸೂಕ್ಷ್ಮ ಶರೀರವಿದೆ ಎಂಬುದನ್ನು ಅವರು ಕಂಡರು ಅದನ್ನು ಅವರು "ದಿ ಬಯಲಾ- ಜಿಕಲ್ ಪ್ಲಾಸ್ಮ ಬಾಡಿ" ಎಂದು ಕರೆದರು.

"All living things-plants, animal and human-not only have a physical body made of a atoms and molecules but also counter part body of energy they called it. The Biological plasma Body !

ಇದನ್ನು ಬೇರೆಬೇರೆ ದೇಶಗಳಲ್ಲಿ ನಾನಾ ಹೆಸರುಗಳಿಂದ ಅತೀಂದ್ರಿಯಾನುಭ- ವಿಗಳು ನಿರ್ದೇಶಿಸುತ್ತಿದ್ದಾರೆ. ಆ ಕೆಲವು ಹೆಸರುಗಳು ಇಂತಿವೆ. 'Energy body,' 'Secondary body, Astral body, Etherc body, Fluidic body counter part body, Pre-physical body.

ಸೂಕ್ಷ್ಮ ದೇಹದ ಅಥವಾ ಶಕ್ತಿದೇಹದ ರೋಮಾಂಚಕಾರಿ ದೃಶ್ಯವನ್ನು ವೀಕ್ಷಿ- ಸಿದ ಸೋವಿಯತ್ ದೇಶದ ಪ್ರಿಸೀಡಿಯಂ ಆಪ್ ದಿ ಅಕ್ಯಾಡೆಮಿ ಆಪ್ ಸೈಯನ್ಸ- ಸ್‌ನ ಮೇಧಾವಿಗಳಾದ ಸಂಶೋಧಕ ವಿಜ್ಞಾನಿಗಳು ಈ ರೀತಿ ಹೇಳಿದ್ದಾರೆ.

"ಇದು ವಿವರಿಸಲಸಾಧ್ಯವಾದುದು !ವಿದ್ಯುತ್ ಜ್ವಾಲೆಗಳಂತೆ ಜಗಜಗಿಸುತ್ತದೆ.! ಜ್ವಾಲೆಯು ಅಗ್ರಭಾಗ ನೀಲಿ, ಕಿತ್ತಳೆ ಬಣ್ಣಗಳಿಂದ ಹೊಳೆಯುತ್ತದೆ. ಆ ಜ್ವಾಲೆಯ ಕೆಲವು ಭಾಗಗಳು ಸ್ಥಾಯಿಯಾಗಿ ನಿರಂತರ ಬೆಳಕನ್ನು ಕಾರುತ್ತವೆ. ಇನ್ನು ಕೆಲವು ಬೆಳಕುಗಳು ಮೂಡಿ ಮಾಯವಾಗುವ ತಾರಿಕೆಗಳಂತೆ ಗೋಚರಿಸಿ ಕಣ್ಮರೆಯಾಗುತ್ತವೆ. ನಿಜವಾಗಿಯೂ ಅದ್ಭುತ ! ಆಶ್ಚರ್ಯಕರ ! ಈ ರಹಸ್ಯ ಪೂರ್ಣವಾದ ತೇಜೋಮಯ ಜಗತ್ತು !!!

ಈ ಉಪಕರಣಗಳ ಮೂಲಕ ಆ ಚೈತನ್ಯಮಯ ದೇಹದಿಂದ ಹೊರಹೊಮ್ಮುವ ಪ್ರಭೆಯ ವಿವಿಧ ವರ್ಣಗಳನ್ನು ಅಧ್ಯಯನ ಮಾಡಲಾಯಿತು. ವ್ಯಕ್ತಿಯು ಭಾವೋದ್ವೇಗಗಳಿಗೆ ಸಿಲುಕಿದಾಗ ಸಂತಪ್ತನಾದಾಗ, ಆವರ್ಣಗಳಲ್ಲಿ ವ್ಯತ್ಯಾಸ ಕಂಡುಬಂದಿತು. ಆದರ ಬಣ್ಣಗಳನ್ನು ನೋಡಿ ವ್ಯಕ್ತಿಯ ಆರೋಗ್ಯವನ್ನು ಗುರುತಿಸಬಹುದು. ಮಾತ್ರವಲ್ಲ ಮುಂದೆ ರೋಗಗಳು ಬರುವ ಸಾಧ್ಯತೆಯನ್ನು ಕಂಡುಕೊಳ್ಳಬಹುದು ಎಂಬುದನ್ನು ತಜ್ಞರು ಪ್ರಯೋಗಗಳ ಮೂಲಕ ಕಂಡುಕೊಂಡರು.

ದೀರ್ಘಕಾಲ ಕೀರ್‌ಲಿಯನ್ ಉಪಕರಣಗಳ ಮೂಲಕ ಸಂಶೋಧನೆ ಮಾಡಿದ ಸೋವಿಯತ್ ವಿಜ್ಞಾನಿಗಳು ಸಾವಿನ ಸಮಯದಲ್ಲೂ ಉಂಟಾಗುವ ಸೂಕ್ಷ್ಮಬದಲಾವಣೆಗಳ ಚಿತ್ರಗಳನ್ನು ತೆಗೆದಿದ್ದರು. ಸಸ್ಯ ಮತ್ತು ಪ್ರಾಣಿಗಳು ಸಾವಿನ ಅಂಚನ್ನು ಸಮೀಪಿಸಿದಾಗ ಚೈತನ್ಯಮಯ ಶರೀರದ ಜ್ವಾಲೆಗಳು ಸ್ಥೂಲ ಶರೀರವನ್ನು ಬಿಟ್ಟು ಆಕಾಶದಲ್ಲಿ ಮಾಯವಾದುದನ್ನು ಆವರು ಕಂಡರು. ಸಂಪೂರ್ಣ ಸತ್ತುಹೋದ ಸಸ್ಯ ಅಥವಾ ಪ್ರಾಣಿಗಳಲ್ಲಿ ಈ ಚೈತನ್ಯಮಯ ಶರೀರದ ಸುಳಿವೇ ಇರಲಿಲ್ಲ.

ಈ ಅದ್ಭುತ ಸಂಶೋಧನೆಗಳು ಭಾರತ ದೇಶದ ಋಷಿಗಳು, ಸಂತರು ತಿಳಿಸಿದ ಸ್ಥೂಲ ಶರೀರ ಹಾಗೂ ಸೂಕ್ಷ್ಮಶರೀರದ ವಿಚಾರಗಳು ಸತ್ಯವೆಂದು ವಿಶ್ವಕ್ಕೇ ಸಾರುತ್ತಿವೆ, ಹೀಗಿದ್ದರೂ ಭಾರತದಲ್ಲಿ ಆಂಗ್ಲ ವಿದ್ಯಾಭ್ಯಾಸ ಮಾಡಿದ ಕೆಲವು ವ್ಯಕ್ತಿಗಳು ಈ ಹಳೆಯ ಸಿದ್ಧಾಂತಗಳನ್ನೆಲ್ಲಾ "ಮೂಢ ನಂಬಿಕೆಯ ಕಂತೆ" "ಪಾಮರರನ್ನು ವಂಚಿಸುವ ಸಂಚು" --ಎಂದು ನಂಬಿರುವುದು ಹಸ್ಯಾಸ್ಪದವೆನಿಸುತ್ತದೆ. ಇಂದ್ರಿಯಾತೀತ ವಾದ ಯಾವುದೇ ಜ್ಞಾನವನ್ನು ಖಂಡಿಸುವುದೇ ವೈಜ್ಞಾನಿಕ ಮನೋವೃತಿ ಎಂದು ಭಾವಿಸುವವರು ಇತ್ತೀಚೆಗೆ ಈ ಕ್ಷೇತ್ರದಲ್ಲಿ ಆಗಿರುವ ಹಾಗೂ ಆಗುತ್ತಿರುವ ಸಂಶೋಧನೆಗಳನ್ನು ಆಳವಾಗಿ ಅಭ್ಯಾಸಮಾಡಿ ಸಾಮಾನ್ಯ ಜನರ ಮನಸ್ಸಿನಲ್ಲಿರುವ ತಪ್ಪು ಕಲ್ಪನೆಯನ್ನು ಹೊಡೆದೋಡಿಸಲು ಪ್ರಯತ್ನ ಮಾಡುವುದು ಒಳ್ಳೆಯದಲ್ಲವೆ.

# ಶ್ರೀ ಕ್ಷೇತ್ರವಾರ್ತೆ

## 27ನೇ ಸಿದ್ಧಗಂಗಾ ಕೃಷಿ ಮತ್ತು ಕೈಗಾರಿಕಾ ಪ್ರದರ್ಶನ ಉದ್ಘಾಟನೆ.

ಶ್ರೀ ಮಠದಲ್ಲಿ ಮಹಾಶಿವರಾತ್ರಿ ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿಯ ಜಾತ್ರೆಯ ಅಂಗವಾಗಿ ಏರ್ಪಡಿಸಿದ್ದ 27ನೇ ವಸ್ತುಪ್ರದರ್ಶನವನ್ನು ಕೃಷಿ ಮತ್ತು ತೋಟಗಾರಿಕೆ ಸಚಿವ ಶ್ರೀ ಜಿ. ಪುಟ್ಟಸ್ವಾಮಿಗೌಡರು ಫೆಬ್ರವರಿ 6 ರಂದು ಉದ್ಘಾಟಿಸಿದರು. ವಸ್ತು ಪ್ರದರ್ಶನದ ಮಾಹಿತಿ ಪೂರ್ಣವಾಗಿದ್ದು ರಾಜ್ಯ/ರಾಷ್ಟ್ರದ ಅಭಿವೃದ್ಧಿಯನ್ನು ಜನತೆಗೆ ತಿಳಿಯಪಡಿಸುವ ವಿಚಾರವಂತಿಕೆಯಿಂದ ಕೂಡಿದೆ ಎಂದು ಅಭಿಪ್ರಾಯ ಪಟ್ಟರು.

27 ವರ್ಷಗಳಿಂದ ರೈತರಿಗಾಗಿಯೇ ಈ ಬೋಧಪ್ರದವಾದ ವಸ್ತುಪ್ರದರ್ಶನ ನಡೆಸುತ್ತಿರುವಂತಹ ಸ್ವಾಮೀಜಿಯವರ ಕಾರ್ಯ ಶ್ಲಾಘನೀಯ. ನನ್ನ ದೃಷ್ಟಿಯಲ್ಲಿ ಶ್ರೀ ಸ್ವಾಮೀಜಿಯವರು ಪ್ರತ್ಯಕ್ಷ ದೇವರು ಎಂದರು.

ಜಾತ್ಯಾತೀತ ಸಮಾಜ ನಿರ್ಮಾಣ ಮಾಡುವಂತಹ, ಜ್ಞಾನಜ್ಯೋತಿ ಬೆಳಗುವಂತಹ ಅನ್ನದಾನದಂತಹ ಸಾರ್ವತ್ರಿಕ ಧ್ಯೇಯ ಇರುವ ಇಂಥಹ ಸ್ವಾಮೀಜಿ ಜಗತ್ತಿನಲ್ಲಿ ಬೇರೆ ಎಲ್ಲೂ ಇಲ್ಲ. ಸ್ವಚ್ಛ ಪ್ರಗತಿಪರ ಸಮಾಜ ನಿರ್ಮಾಣ ಮಾಡುವಲ್ಲಿ ಸ್ವಾಮೀ-ಜಿಯವರ ಮಹಾ ವ್ಯಕ್ತಿತ್ವದ ಮಣಿಹ ಪ್ರಭಾವ ಬೀರುತ್ತದೆಂದು ನುಡಿದರು.

ಮುಖ್ಯ ಅತಿಥಿಯಾಗಿ ಮಾತನಾಡಿದ ಸಂಸತ್ ಸದಸ್ಯ ಶ್ರೀ ಜಿ. ಎಸ್. ಬಸವರಾಜು ಇಂತಹ ಬೋಧಪ್ರದವಾದ ಬೃಹತ್ ವಸ್ತುಪ್ರದರ್ಶನ ರೈತರಿಗಾಗಿ ಜಾತ್ರೆಗಳಲ್ಲಿ ಏರ್ಪ-ಡಿಸುತ್ತಿರುವುದು ರಾಜ್ಯದಲ್ಲಿ ಶ್ರೀ ಸಿದ್ಧಗಂಗೆಯಲ್ಲಿ ಎಂದರು. ನಿರಂತರವಾಗಿ ಇದು ವ್ಯವಸ್ಥಿತವಾಗಿ ನಡೆದು ಬರುತ್ತಿರುವುದು ಶ್ರೀ ಶ್ರೀ ಗಳವರ ತತ್ತ್ವ ನಿಷ್ಠೆಯ ಸೇವಾ ಕುರುಹಾಗಿದೆ. ಇದು ಶಾಶ್ವತವಾಗಿ ಮುನ್ನಡೆಯಲು ಪ್ರತಿವರ್ಷ ಸರಕಾರ ಬಜೆಟ್‌ನಲ್ಲಿ ಹಣ ಮೀಸಲಿಡಬೇಕೆಂದು ಅವರು ಸಲಹೆ ಮಾಡಿದರು.

ಶಾಸಕ ಶ್ರೀ ಷಫಿ ಅಹಮದ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ತ್ರಿವಿಧ ದಾಸೋಹ ಮೂರ್ತಿಗಳಾದ ಪೂಜ್ಯ ಡಾ|| ಶ್ರೀ ಶ್ರೀ ಶಿವಕುಮಾರಸ್ವಾಮಿಗಳವರು ಆಶೀರ್ವಚನ ನೀಡಿ ಇಂದು ಸಮಾಜದಲ್ಲಿ ನೈತಿಕ ಪತನನಾಗುತ್ತಿರುವುದಕ್ಕೆ ತೀವ್ರ ವಿಷಾದ ವ್ಯಕ್ತಪಡಿಸಿದರು.

ರಾಷ್ಟ್ರದಲ್ಲಿ ಏಳು ಯೋಜನೆಗಳು ರೂಪಿತವಾದರೂ ಬಡವರ ಉದ್ಧಾರವಾಗಿಲ್ಲ, ಹಳ್ಳಿಗಳಲ್ಲಿ ಜನಜೀವನ ಶೋಚನೀಯವಾಗಿದೆ. ಮಹಾತ್ಮಗಾಂಧಿಯವರ ಧ್ಯೆಯೋ-ದ್ದೇಶಗಳು ಇನ್ನೂ ಕೈಗೂಡಿಲ್ಲ ಎಂದು ದುಃಖಿಸಿದರು. ಬಡವ ಇಂದಿಗೂ ಬಡವ-ನಾಗಿದ್ದಾನೆ. ಗಾಂಧೀಜಿಯ ಕನಸು ನನಸಾಗಬೇಕು ಎಂದು ಆಶಿಸಿದರು. ಇಂದಿನ ಪೀಳಿಗೆಯ ಜನರಲ್ಲಿ ಮಾನವೀಯ ಮೌಲ್ಯಗಳು ಕಣ್ಮರೆಯಾಗಿದ್ದು ನೈತಿಕ ಪತನ-ವಾಗಿರುವುದು ವೇದ್ಯವಾಗಿದೆ.

ರೈತಜನರಲ್ಲಿ ಸ್ವಯಂ ಸ್ಫೂರ್ತಿಬಂದು ಅವರು ಎಲ್ಲ ಉತ್ಸಾಹ ಮೈಗೂಡಿಸಿ ಕೊಳ್ಳಬೇಕು. ಕರ್ಮದ ಗುಲಾಮರಾಗಿರುವುದನ್ನು ಬಿಟ್ಟು ಕರ್ಮಾಸುರನ ವಧೆಯಾಗಿ ಅದರ ಬಂಧನದಿಂದ ಹೊರಬರಬೇಕು. ಮೂಢನಂಬಿಕೆಗಳನ್ನು ತೊರೆದು ವೈಜ್ಞಾನಿಕ ಮನೋಭಾವ ಬೆಳೆಸಿಕೊಳ್ಳಲು ವಸ್ತು ಪ್ರದರ್ಶನ ನೆರವಾಗುತ್ತದೆ. ಇದರ ಸದುಪ-ಯೋಗ ಮಾಡಿಕೊಂಡರೆ ಸಾರ್ಥಕ ಎಂದು ಕರೆಯಿತ್ತರು.

## ವಸ್ತುಪ್ರದರ್ಶನ–1991 ಮುಕ್ತಾಯ

15 ದಿನಗಳ ಕೃಷಿ ಮತ್ತು ಕೈಗಾರಿಕ ವಸ್ತುಪ್ರದರ್ಶನ ಫೆಬ್ರವರಿ 18 ರಂದು ಮುಕ್ತಾಯಗೊಂಡಿತು.

ವಸ್ತುಪ್ರದರ್ಶನದಲ್ಲಿ ಭಾಗವಹಿಸಿದ್ದ ಅರಣ್ಯ ಇಲಾಖೆ, ಕೃಷಿ ಇಲಾಖೆ, ಆರೋಗ್ಯ ಇಲಾಖೆಗಳಿಗೆ ಪ್ರಥಮ ಪಾರಿತೋಷಕ ಬಹುಮಾನವನ್ನು ಸಮಾರಂಭದಲ್ಲಿ ವಿಧಾನ ಪರಿಷತ್ ಸದಸ್ಯ ಶ್ರೀ ಟಿ. ಹೆಚ್. ನಾರಾಯಣಸ್ವಾಮಿ ವಿತರಿಸಿದರು.

ಸಮಾರೋಪ ಭಾಷಣ ಮಾಡಿದ ಮಾಜಿ ಸಚಿವ ಲಕ್ಷ್ಮೀನರಸಿಂಹಯ್ಯನವರು ತಿಳುವಳಿಕೆ ಮತ್ತು ಪ್ರಚಾರ ಮಾಧ್ಯಮಕ್ಕೆ ವಸ್ತುಪ್ರದರ್ಶನಗಳು ಪ್ರಭಾವ ಬೀರು-ತ್ತವೆ ಎಂದರು.

ಮುಖ್ಯ ಅತಿಥಿಯಾಗಿ ತುಮಕೂರಿನ ಖ್ಯಾತ ಕೈಗಾರಿಕೋದ್ಯಮಿ, ನಗರ ಕಾಂಗ್ರೆಸ್ ಅಧ್ಯಕ್ಷ ಎನ್. ಆರ್. ಜಗದೀಶ್ ಮಾತನಾಡಿ ಶ್ರೀ ಶ್ರೀ ಗಳವರು ತಮ್ಮ ಸೇವಾ ಮಣಿಹವನ್ನು ಅನೌಪಚಾರಿಕ ಶಿಕ್ಷಣ ಮಾಧ್ಯಮವಾಗಿ ವಸ್ತುಪ್ರದರ್ಶನದ ಮೂಲಕ ಲಕ್ಷಾಂತರ ಮಂದಿಗೆ ತಿಳುವಳಿಕೆ ನೀಡುತ್ತಿದ್ದಾರೆ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಪೂಜ್ಯ ಶ್ರೀ ಶ್ರೀ ಗಳವರು ಗ್ರಾಮೀಣ ಜನತೆ ಇಂಥಹ ವಸ್ತುಪ್ರದರ್ಶನಗಳ ಲಾಭ ಪಡೆಯಬೇಕೆಂದು ಸಲಹೆ ಮಾಡಿದರು.

ಫೆಬ್ರವರಿ 14 ರಂದು ಬೆಳ್ಳಿಪಲ್ಲಕ್ಕಿ ಉತ್ಸವವನ್ನು ರಾತ್ರಿ ಲಕ್ಷಕ್ಕೂ ಹೆಚ್ಚು ಜನ ವೀಕ್ಷಿಸಿದರು.

## ಪೂಜ್ಯ ಶ್ರೀ ಶ್ರೀ ಗಳವರ ಅಮೃತ ಮಹೋತ್ಸವ ಮತ್ತು ಶಾಲೆಯ ರಜತ ಮಹೋತ್ಸವ ಆಚರಣೆ.

ಫೆಬ್ರವರಿ 2 ಶನಿವಾರ ಸಿದ್ಧಗಂಗಾ ಗ್ರಾಮಾಂತರ ಪ್ರೌಢಶಾಲೆ, ಪುರುಷ ನಹಳ್ಳಿ, ದೊಡ್ಡಬಳ್ಳಾಪುರ ತಾ॥, ಬೆಂಗಳೂರು ಜಿಲ್ಲೆ ,- ಇದರ ಆಶ್ರಯದಲ್ಲಿ ಮೇಲಿನ ಮಹೋತ್ಸವಗಳು ವಿಜೃಂಭಣೆಯಿಂದ ನೆರವೇರಿದವು.

ಅಮೃತ ಮಹೋತ್ಸವ ಸಮಾರಂಭ ಪರಮಪೂಜ್ಯ ತ್ರಿವಿಧ ದಾಸೋಹ ಮೂರ್ತಿಗಳಾದ ಡಾ॥ ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ದಿವ್ಯ ನೇತೃತ್ವದಲ್ಲಿ ಬೆಂಗಳೂರು ಬೇಲಿ ಮಠಾಧ್ಯಕ್ಷರಾದ ಪೂಜ್ಯ ಶ್ರೀ ಶ್ರೀ ಶಿವರುದ್ರಮಹಾಸ್ವಾಮಿಗಳು ಅಧ್ಯಕ್ಷತೆ ವಹಿಸಿದ್ದರು. ಪೂಜ್ಯ ಶ್ರೀ ಶ್ರೀ ಸಿದ್ಧಲಿಂಗಸ್ವಾಮಿಗಳು, ಉತ್ತರಾಧಿ-ಕಾರಿಗಳು, ಶ್ರೀ ಸಿದ್ಧಗಂಗಾ ಮಠ ಇವರು ಉದ್ಘಾಟನೆ ಮಾಡಿದರು. ಈ ಸಂದ-ರ್ಭದಲ್ಲಿ ಗ್ರಂಥ ಬಿಡುಗಡೆಯನ್ನು ಶ್ರೀ ಮತಿ ಕೆ. ಎಸ್. ನಾಗರತ್ನಮ್ಮ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಇವರು ಮಾಡಿದರು.

ಮುಖ್ಯ ಅತಿಥಿಗಳಾಗಿ ಕೃಷಿ ಸಚಿವರಾದ ಜಿ. ಪುಟ್ಟಸ್ವಾಮಿಗೌಡರು ಮತ್ತು ಮತ್ತು ಬೆಂಗಳೂರು ಜಿಲ್ಲಾ ಪರಿಷತ್ ಅಧ್ಯಕ್ಷರಾಡ ಪಿ. ನಾರಾಯಣಪ್ಪಸ್ವಾಮಿ-ಯವರು ಆಗಮಿಸಿದ್ದರು.

25 ವರ್ಷಗಳ ಸೇವೆ ಸಲ್ಲಿಸಿದ ಶ್ರೀ ಸಿದ್ಧಗಂಗಾ ವಿದ್ಯಾ ಸಂಸ್ಥೆಯ ವ್ಯಾಪ್ತಿಗೆ ಸೇರಿದ ಶಾಲೆಯ ಬೆಳ್ಳಿ ಹಬ್ಬದ ಸಮಾರಂಭ ಪೂಜ್ಯ ಶ್ರೀ ಶ್ರೀ ಗಳವರ ದಿವ್ಯ ನೇತೃತ್ವದಲ್ಲಿ ನಡೆಯಿತು. ಶ್ರೀ ಸಿ. ಎಸ್. ನಾಡಗೌಡರು, ರಾಜ್ಯ ಕಾರ್ಮಿಕ ಖಾತೆ ಸಚಿವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಶ್ರೀ ವಿ. ಕೃಷ್ಣರಾವ್ ಲೋಕಸಭಾ ಸದಸ್ಯರು ಸಮಾರಂಭವನ್ನು ಉದ್ಘಾಟಿಸಿದರು. ಶಾಲಾ ವಸ್ತುಪ್ರದರ್ಶನದ ಉದ್ಘಾ-ಟನೆಯನ್ನು ಮಾಡಿದವರು ಶ್ರೀ ಅಂಜನಮೂರ್ತಿ, ಶಾಸಕರು, ನೆಲಮಂಗಲ ಕ್ಷೇತ್ರ ಶ್ರೀ ಕೆ ಶಾಂತಯ್ಯ, ನಿರ್ದೇಶಕರು, ಪ್ರಾಥಮಿಕ ಶಿಕ್ಷಣ, ರಜತೋತ್ಸವ ಭಾಷಣಮಾಡಿದರು.

ಶ್ರೀ ಎಂ. ವಿ. ಸಿದ್ಧಲಿಂಗ ಮೂರ್ತಿ, ನಿರ್ದೇಶಕರು ಶ್ರೀ ಸಿದ್ಧಗಂಗಾ ವಿದ್ಯಾ ಸಂಸ್ಥೆ, ಶ್ರೀ ಸಚ್ಚಿದಾನಂದ ಸ್ವಾಮಿ, ಮಾಜಿ ರಾಜ್ಯಸಭಾ ಸದಸ್ಯರು, ಶ್ರೀ ಆರ್. ದಯಾ-ನಂದಸ್ವಾಮಿ, ನ್ಯಾಯವಾದಿಗಳು ಶ್ರೀ ಸಿ. ಡಿ. ಸತ್ಯನಾರಾಯಣಗೌಡ, ಜಿ. ಪಿ ಬಸವರಾಜು, ಸಲಹೆಗಾರರು, ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಂಸ್ಥೆ, ಬೆಂಗಳೂರು ಇವರುಗಳು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

ಶ್ರೀ ಆರ್. ಎಲ್ ಜಾಲಪ್ಪ, ಮಾಜಿ ಗೃಹಸಚಿವರು, ಶಾಸಕರು ದೊಡ್ಡ-ಬಳ್ಳಾಪುರ, ಸಮಾರೋಪ ಭಾಷಣ ಮಾಡಿದರು.

**ಶ್ರೀ ದರ್ಶನ ಮಂಟಪ :** ಶ್ರೀ ಮಠದಲ್ಲಿ ಪರಮಪೂಜ್ಯರ ಬಹುಮುಖ ಸೇವೆಯನ್ನು ಕುರಿತಂತೆ ಪ್ರದರ್ಶನವನ್ನು ಜಾತ್ರೆಯ ಸಂದರ್ಭದಲ್ಲಿ ಯಾತ್ರಾರ್ಥಿಗಳಿಗಾಗಿ ತೆರೆಯಲಾಗಿತ್ತು. ಸುಮಾರು ಇಪ್ಪತ್ತು ಸಹಸ್ರಮಂದಿ ಭೇಟಿನೀಡಿದ್ದರು.

## ಶ್ರೀ ಮಠದಲ್ಲಿ ಸಂಸ್ಕೃತ ದಿನಾಚಾರಣೆ

ಸಂಸ್ಕೃತ ಭಾಷೆಯು ಎಲ್ಲ ಭಾರತೀಯ ಭಾಷೆಗಳಿಗೂ ಉಪಕಾರ ಮಾಡಿದೆ. ಪಾಶ್ಚಿಮಾತ್ಯರೂ ಸಹ ಅಥರ್ವಣ ವೇದದಲ್ಲಿರುವ ವಿಚಾರಗಳನ್ನು ಮನಗಂಡು ವೈಜ್ಞಾನಿಕವಾಗಿ ಮುನ್ನಡೆದಿದ್ದಾರೆ. ಸಂಸ್ಕೃತ ಮಾತೃಭಾಷೆಯಲ್ಲ, ಭಾರತೀಯ ಸಂಸ್ಕೃತಿಯನ್ನು ಸಂರಕ್ಷಿಸಿಕೊಂಡು ಬಂದಿರುವ ಜೀವಂತ ಭಾಷೆ ಎಂದು ಮಾಜಿ ಮುಖ್ಯಮಂತ್ರಿ ರಾಮಕೃಷ್ಣ ಹೆಗ್ಗಡೆಯವರು ಹೇಳಿದರು. ಅವರು ಮುಂದುವರಿದು ಇಂತಹ ಶ್ರೀ ಶ್ರೀ ಶಿವಕುಮಾರ ಸ್ವಾಮಿಗಳವರಂತಹವರು ಈ ದೇಶದಲ್ಲಿ ಎಷ್ಟು ಮಂದಿ ಇದ್ದಾರೆ. ಅವರ ಮಧ್ಯೆ ಇರುವ ನಾವೇ ಧನ್ಯರು.

ಅವರು ಸಿದ್ಧಗಂಗಾ ಮಠದಲ್ಲಿ ಸಂಸ್ಕೃತ ದಿನಾಚರಣೆಯಲ್ಲಿಮಾತನಾಡುತ್ತಿದ್ದರು.

ವಿದ್ಯಾರ್ಥಿಗಳನ್ನು ಉದ್ದೇಶಿಸಿ ಇಂತಹ ಆದರ್ಶ ವಾತಾವರಣದಲ್ಲಿ ಬೆಳೆಯು-ತ್ತಿರುವ ನಿಮ್ಮ ಬದುಕು ಶಿಸ್ತು-ಸಂಯಮಗಳಿಂದ ಕೂಡಿರಬೇಕು. ಶಿಸ್ತಿಲ್ಲದ ಜೀವನ ನಿರರ್ಥಕ ಎಂದರು.

ಇತ್ತೀಚೆಗೆ ಭಾರತೀಯರ ಬದುಕಿನಲ್ಲಿ ಶಿಸ್ತು ಕಣ್ಮರೆಯಾಗುತ್ತಿರುವುದರ ಬಗ್ಗೆ ಅವರು ವಿಷಾದಿಸಿದರು.

ಶ್ರೀ ಸಿದ್ಧಗಂಗಾ ಮಠ ಸಮಾಜಕ್ಕೆ ಅರ್ಪಿಸಿರುವ ಸೇವೆ ಅಪಾರವಾದುದು, ಆದರೆ ಇಂತಹ ಸಂಸ್ಥೆಗಳಿಗೆ ದುಷ್ಟಶಕ್ತಿಗಳ ಉಪಟಳ ಮೇಲಿಂದ ಮೇಲೆ ಒದಗು-ತ್ತಿದ್ದುದ್ದನ್ನು ಪ್ರಸ್ತಾಪಿಸಿದ ಮಾಜಿ ಸಚಿವ ಲಕ್ಷ್ಮೀನರಸಿಂಹಯ್ಯನವರು ಅಂತಹ ಉಪಟಳಗಳಿಗೆ ವಿಚಾರವಂತ ಜನತೆ ಸೂಕ್ತವಾಗಿ ಉತ್ತರಿಸುತ್ತಾ ಬಂದಿದೆ ಎಂದರು

### ಉಪಕಾರ ಸ್ಮರಣೆ

ಭರತಖಂಡ ಜಗತ್ತಿಗೆ ಮಹಾಬೆಳಕು, ಆಧ್ಯಾತ್ಮಿಕ ಸಂಪತ್ತು, ಆ ಸಂಪತ್ತು ನಿಕ್ಷೇಪವಾದದ್ದು ಸಂಸ್ಕೃತ ಭಾಷೆಯಲ್ಲಿ. ಅಂಥ ಭಾಷೆಯ ಅಭ್ಯಾಸದಿಂದ ಜೀವನ ಸುಸಂಸ್ಕೃತವಾಗುತ್ತದೆ. ಆತ್ಮವಿಶ್ವಾಸ ಮೂಡಿ ಬರುತ್ತದೆ ಎನ್ನುತ್ತಾ ಡಾ|| ಶ್ರೀ ಶಿವಕುಮಾರಸ್ವಾಮೀಜಿಯವರು, ರಾಮಕೃಷ್ಣ ಹೆಗ್ಗಡೆಯವರು ಸಂಸ್ಥೆ ಕಷ್ಟದಲ್ಲಿದ್ದಾಗ ಮಾಡಿದ ಉಪಕಾರವನ್ನು ಸ್ಮರಿಸಿ ಅವರು ಅಂತಹ ದಿನಗಳಲ್ಲಿ ತಮ್ಮಲ್ಲಿ ಆತ್ಮ ವಿಶ್ವಾಸವನ್ನು ಮೂಡಿಸಿದರು ಎಂದರು.

ಸಮಾರಂಭವನ್ನು ಉದ್ಘಾಟಿಸಿದ ಮಠದ ಕಿರಿಯ ಸ್ವಾಮಿಗಳು ಸಂಸ್ಕೃತ ಸಂಪದ್ಭರಿತವಾದ ಭಾಷೆ. ಭಾರತೀಯ ಧರ್ಮ, ತತ್ವಗಳನ್ನು ಪ್ರತಿಬಿಂಬಿಸುತ್ತಿರುವ ದರ್ಪಣ ಎಂದು ಸಮಾರೋಪ ಸಮಾರಂಭದಲ್ಲಿ ನುಡಿದರು.

ವಿದ್ವಾನ್ ಕೆ. ಎಂ. ರೇವಣಸಿದ್ದಯ್ಯ ಉಪನ್ಯಾಸ ನೀಡಿದರು.

ಸಂಸ್ಕೃತ ಕಾಲೇಜಿನ ಪ್ರಾಂಶುಪಾಲ ಎಸ್. ಪಿ. ಶಿವಶಂಕರ್ ಸ್ವಾಗತಿಸಿದರು, ಸಂಸ್ಕೃತ ಕಾಲೇಜಿನ ವರದಿಯನ್ನು ಎಸ್. ಷಡಕ್ಷರಯ್ಯನವರು ಮಂಡಿಸಿದರು, ಕೆ. ಬಸವರಾಜು ವಂದಿಸಿದರು.

ಫೆಬ್ರವರಿ-1991

# ಸಿದ್ಧಗಂಗಾ ಉಚಿತ ವೈದ್ಯಕೀಯ ಕೇಂದ್ರದ ಉದ್ಘಾಟನೆ

ಕೆ. ಎಸ್ ನಾಗರತ್ನಮ್ಮ
ಸಚಿವೆಯರು, ಆರೋಗ್ಯ ಮತ್ತು ಕುಟುಂಬಕಲ್ಯಾಣ ಇಲಾಖೆ.

ಸಿದ್ಧಗಂಗಾ ಸಂಸ್ಥೆಯವರು ಗ್ರಾಮಾಂತರದವರಿಗೆ ಮಾತ್ರ ಪ್ರವೇಶ ಸೀಮಿತವಾಗಿರುವ ವೈದ್ಯಕೀಯ ಕಾಲೇಜು ನಡೆಸುವುದಾದಲ್ಲಿ ಅದರ ಮಂಜೂರಾತಿಗೆ ಸಚಿವ ಸಂಪುಟದಲ್ಲಿ ಒತ್ತಾಯ ತರುವುದಾಗಿ ರಾಜ್ಯದ ಆರೋಗ್ಯ ಮತ್ತು ಕುಟುಂಬಕಲ್ಯಾಣ ಮಂತ್ರಿ ಶ್ರೀಮತಿ ಕೆ ಎಸ್. ನಾಗರತ್ನಮ್ಮ ಅವರು ಭರವಸೆ ನೀಡಿದರು.

ಅವರು ಡಿ|| 31 ರಂದು ಸಿದ್ಧಗಂಗೆಯಲ್ಲಿ 'ಶ್ರೀ ಸಿದ್ಧಗಂಗಾ ಉಚಿತ ವೈದ್ಯಕೀಯ ಕೇಂದ್ರ'ದ ನೂತನ ಕಟ್ಟಡದ ಉದ್ಘಾಟನೆ ನೆರವೇರಿಸಿ ಮಾತನಾಡುತ್ತಾ, ಸಿದ್ಧಗಂಗಾ ಮಠಾಧೀಶರ ಬೇಡಿಕೆ ಪ್ರಸ್ತಾಪಿಸಿ ಮೇಲ್ಕಂಡ ಭರವಸೆ ನೀಡಿದರು.

ಇತ್ತೀಚಿನ ಸಚಿವ ಸಂಪುಟದ ಸಭೆಯಲ್ಲಿ ಹೊಸ ವೈದ್ಯ ಕಾಲೇಜಿನ ಮಂಜೂರಾತಿಯ ಬಗ್ಗೆ ಪರಿಶೀಲಿಸಿ, ಗ್ರಾಮಾಂತರ ವಿದ್ಯಾರ್ಥಿಗಳಿಗೆ ಸೀಮಿತವಾದಂತಹ ವೈದ್ಯ ಕಾಲೇಜಿಗೆ ಮಾತ್ರ ಮಂಜೂರಾತಿ ಕೊಡಬಹುದು ಎಂಬ ನೀತಿ ರೂಪಿಸಲಾಯಿತು ಎಂದು ಹೇಳಿದರು.

ನಾನು ಚಿಕ್ಕಂದಿನಿಂದಲೂ ಮಠಕ್ಕೆ ಬರುತ್ತಿದ್ದೇನೆ. ಈ ಮಠದ ವಾತಾವರಣದಲ್ಲಿ ಇದ್ದರೆ ಯಾವುದೇ ರೋಗ ರುಜಿನಗಳೂ ಬರುವ ಸಂಭವವೇ ಇಲ್ಲ ಎಂದು ಸಚಿವರು, ಮಠದ ವಾತಾವರಣ ಮತ್ತು ಶ್ರೀಗಳ ಸೇವೆಯನ್ನು ಪ್ರಶಂಸಿಸಿದರು.

## ಮಂಜೂರು ಮಾಡಲಿ

ಸಿದ್ಧಗಂಗಾ ಮಠಾಧೀಶ ಶ್ರೀ ಶಿವಕುಮಾರಸ್ವಾಮಿಗಳು ಮಾತನಾಡಿ, ರಾಜ್ಯದಲ್ಲಿ ಜನಸಂಖ್ಯೆಗನುಗುಣವಾಗಿ ವೈದ್ಯರ ಸಂಖ್ಯೆ ಇಲ್ಲ ವೈದ್ಯರ ಕೊರತೆ ಇದ್ದೇ ಇದೆ. ಆದ್ದರಿಂದ ಹೊಸದಾಗಿ ವೈದ್ಯ ಕಾಲೇಜು ಮಂಜೂರು ಮಾಡುವುದು ತಪ್ಪೇನಲ್ಲ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಗಳಾಗಿದ್ದಾಗಲೇ ವೈದ್ಯ ಕಾಲೇಜು ಮಂಜೂರಾಗುವ ಸಂಭವವಿತ್ತು. ಕಾರಣಾಂತರದಿಂದ ಆಗಲಿಲ್ಲ. ಈಗಲಾದರೂ ಸರ್ಕಾರ ಮಂಜೂರು ಮಾಡಲಿ ಎಂದರು. ಆದ್ದರಿಂದ ಅದನ್ನು ಸರ್ಕಾರವೇ ವಹಿಸಿಕೊಳ್ಳಬೇಕು ಎಂದರು.

ಕೆ. ಎಂ. ರೇವಣಸಿದ್ದಯ್ಯ ಸ್ವಾಗತಿಸಿದರು. ಜಿ. ನಂಜಪ್ಪ ವರದಿ ವಾಚಿಸಿದರು. ಎಸ್. ಪಿ. ಶಿವಶಂಕರ್ ವಂದಿಸಿದರು.

## ದೇವತಾ ಕಾರ್ಯಗಳಿಗೆ ಜನರ ನಿರ್ಲಕ್ಷ್ಯ : ಸ್ವಾಮೀಜಿ ವಿಷಾದ

ಜಾತ್ರೆಯ ಹಾಗೂ ದೇವತಾ ಕಾರ್ಯಗಳನ್ನು ಇಂದಿನ ಜನ ಗಂಭೀರವಾಗಿ ಪರಿಗಣಿಸುತ್ತಿಲ್ಲ ಎಂದು ಸಿದ್ಧಗಂಗಾ ಮಠದ ಮಠಾಧ್ಯಕ್ಷ ಡಾ॥ ಶ್ರೀ ಶ್ರೀ ಶಿವಕುಮಾರ ಸ್ವಾಮೀಜಿ ವಿಷಾದ ವ್ಯಕ್ತಪಡಿಸಿದರು.

### ದಿನಾಂಕ : 9-2-91 ರಂದು ನಡೆದ ದನಗಳ ಪ್ರದರ್ಶನ ಹಾಗೂ ಬಹುಮಾನ ವಿತರಣಾ ಸಮಾರಂಭ :

ದಿನಾಂಕ 9-2-91 ರಂದು ಮಠದಲ್ಲಿ ನಡೆದ ಜಾತ್ರೆ ಹಾಗೂ ದನಗಳ ಪ್ರದರ್ಶನ ಮತ್ತು ಬಹುಮಾನ ವಿತರಣಾ ಸಮಾರಂಭದಲ್ಲಿ ಮಾತನಾಡಿದ ಅವರು. ಹಿಂದೆ ಜನ ಜಾತ್ರೆಯ ಕಾರ್ಯಕ್ರಮಗಳನ್ನು ಸರಿಯಾಗಿ ತಿಳಿದುಕೊಂಡು ಸಹಕರಿಸುತ್ತಿದ್ದರು. ಆದರೆ ಇತ್ತೀಚಿನ ದಿನಗಳಲ್ಲಿ ಜಾತ್ರೆಗೆ ಮುಂಚೆಯೇ ಜಾನುವಾರಗಳನ್ನು ತರುತ್ತಾರೆ. ದೇವತಾಕಾರ್ಯಗಳು ಆರಂಭವಾಗುವ ಮುನ್ನವೇ ಸ್ಥಳ ಖಾಲಿ ಮಾಡುತ್ತಾರೆ ಎಂದರು. ಜಾತ್ರೆ ಸುಮುಹೂರ್ತಕ್ಕೆ ಸೇರಿದ್ದಾದ್ದರಿಂದ ಅವುಗಳನ್ನು ಹಿಂದು ಮುಂದು ಮಾಡುವಂತಿಲ್ಲ. ಹಿಂದಿನವರು ಇವುಗಳನ್ನು ಗಂಭೀರವಾಗಿ ಪರಿಗಣಿಸಿ ಸಹಕರಿಸುತ್ತಿದ್ದರು ಎಂದು ಅವರು ಹೇಳಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಶಾಸಕ ಕೆ. ಲಕ್ಕಪ್ಪನವರು ಜಾತ್ರೆಯಲ್ಲಿ ಆಕಸ್ಮಿಕ ಸಾವನಪ್ಪುವ ಜಾನುವಾರುಗಳಿಗೆ ವಿಮೆ ಸೌಲಭ್ಯ ಒದಗಿಸಿರುವ ಶ್ರೀ ಶ್ರೀಗಳವರನ್ನು ಶ್ಲಾಘಿಸಿದರು.

ತುಮಕೂರು ಜಿಲ್ಲಾ ಉಪವಿಭಾಗಾಧಿಕಾರಿ ಶ್ರೀಮತಿ ಎಂ.ವಿ. ಸಾವಿತ್ರಮ್ಮನವರು ಬಹುಮಾನಗಳನ್ನು ವಿತರಿಸಿದರು. ತುಮಕೂರು ಜಿಲ್ಲಾ ಪಶುಸಂಗೋಪನೆ ಮತ್ತು ಪಶುವೈದ್ಯ ಇಲಾಖೆ ಉಪನಿರ್ದೇಶಕ ಡಾ॥ ರಾಜಗೋಪಾಲ್ ಮಾತನಾಡಿದರು.

### ಶ್ರೀ ಸಿದ್ಧಲಿಂಗೇಶ್ವರ ಮಹಾ ರಥೋತ್ಸವ

ದಿನಾಂಕ 13-2-1991 ರಂದು ಸುಪ್ರಸಿದ್ಧ ಶ್ರೀ ಸಿದ್ಧಲಿಂಗೇಶ್ವರ ಮಹಾ ರಥೋತ್ಸವ ಸಕಲ ಗೌರವ ಮತ್ತು ವೈಭವ ಪೂರ್ಣವಾಗಿ ಶ್ರೀ ಕ್ಷೇತ್ರದಲ್ಲಿ ನಡೆಯಿತು. ರಾಜ್ಯದ ಎಲ್ಲೆಡೆಯಿಂದ ಆಗಮಿಸಿದ್ದ ಸಹಸ್ರಾರು ಭಕ್ತಾದಿಗಳು ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿಗೆ ಭಕ್ತಿಕಾಣಿಕೆಯನ್ನು ಅರ್ಪಿಸಿದರು. ಇದೇ ಸಂದರ್ಭದಲ್ಲಿ ಶಿವರಾತ್ರಿಯ ಮಹಾ ಜಾಗರಣೆಯ ನಿಮಿತ್ತ ಅಸಂಖ್ಯ ಭಕ್ತಾದಿಗಳು ಶ್ರೀ ಕ್ಷೇತ್ರದಲ್ಲಿ ಸಮಾವೇಶಗೊಂಡು, ಶಿವಕಥಾ ಕಾಲಕ್ಷೇಪ ಜಗಜ್ಯೋತಿ ಬಸವೇಶ್ವರ ನಾಟಕ ಹಾಗೂ ಶ್ರೀ ಸಿದ್ಧಲಿಂಗೇಶ್ವರ ಮಹಾ ಸ್ವಾಮಿ ಅಖಂಡ ಮಹಾ ಶಿವರಾತ್ರಿ ಪೂಜಾದಿ ಮಂಗಳ ಕಾರ್ಯಗಳಲ್ಲಿ ಇಡೀ ರಾತ್ರಿ ಭಾಗವಹಿಸಿ ಉತ್ಸವಕ್ಕೆ ವಿಶೇಷ ಶೋಭೆಯನ್ನುಂಟು ಮಾಡಿದರು.

ಪರಮ ಪೂಜ್ಯ ಶ್ರೀ ಶ್ರೀ ಶಿವಕುಮಾರಸ್ವಾಮಿಗಳವರು ಭಕ್ತಾದಿಗಳಿಗೆಲ್ಲ ದಾಸೋಹ ವ್ಯವಸ್ಥೆಯನ್ನು ಮಾಡಿದ್ದು, ವಿಶೇಷ ಸ್ತುತ್ಯಾರ್ಹವಾದುದು. ಗ್ರಾಮಾಂತರ ಜನತೆ ರಥೋತ್ಸವದಲ್ಲಿ ಭಾಗಿಗಳಾಗಿ ಜಾತ್ರೆಗೆ ಆಕರ್ಷಣೆಯನ್ನುಂಟು ಮಾಡಿತು. ಸಾರಿಗೆ ಇಲಾಖೆಯುವರು ಈ ಜಾತ್ರೆ ಅವಧಿಯಲ್ಲಿ ಎಕ್ಸ್‌ಪ್ರೆಸ್ ರೈಲುಗಳನ್ನು ನಿಲುಗಡೆ ಮಾಡಿದ್ದರು. ರಕ್ಷಣಾ ವ್ಯವಸ್ಥೆಯನ್ನು ಸಹ ಮಾಡಲಾಗಿತ್ತು.

## ಸುಪ್ರಸಿದ್ಧ ಬೆಳ್ಳಿಪಲ್ಲಕ್ಕಿ ಮಹೋತ್ಸವ

ದಿನಾಂಕ 14-2-91 ರಂದು ಶ್ರೀಕ್ಷೇತ್ರದಲ್ಲಿ ಶ್ರೀ ಸಿದ್ಧಲಿಂಗೇಶ್ವರ ಜಾತ್ರೆಯ ಅಂಗವಾಗಿ ಸುಪ್ರಸಿದ್ದ ಬೆಳ್ಳಿಪಲ್ಲಕ್ಕಿ ಮಹೋತ್ಸವವು ಅತ್ಯಂತ ವೈಭವ ಪೂರ್ಣವಾಗಿ ಜರುಗಿತು. ರಾತ್ರಿ 12-45 ಕ್ಕೆ ಪ್ರಾರಂಭವಾಗಿ ಉತ್ಸವವು ಮಂಗಳವಾದ್ಯ, ವೀರಗಾಸೆ, ವೀರಭದ್ರ ನೃತ್ಯ, ನಂದೀಧ್ವಜ, ಕುಣಿತ, ಕರಡಿ ಮಜಲು ಮುಂತಾದ ಜಾನಪದ ಧಾರ್ಮಿಕ ಕಲಾ ತಂಡಗಳ ಪ್ರದರ್ಶನದೊಂದಿಗೆ ನೆರೆದಿದ್ದ ಲಕ್ಷಾಂತರ ಭಕ್ತಾದಿಗಳ ಮನಸ್ಸಿಗೆ ಸಂತೋಷವನ್ನುಂಟುಮಾಡಿತು. ಇದರ ಅಂಗವಾಗಿ ಏರ್ಪಡಿಸಿದ್ದ ಬಾಣ ಬಿರುಸುಗಳ ಮದ್ದಿನ ಪ್ರದರ್ಶನ, ಯಕ್ಷಲೋಕವನ್ನು ಧರೆಗೆ ಅವತರಿಸಿದಂತೆ ಕಾಣಬಂದಿತು. ಭಕ್ತಾದಿಗಳು ಅಧಿದೇವತೆಗೆ ಜಯಘೋಷ ಮಾಡುವುದರ ಮೂಲಕ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು. ಲಕ್ಷಾಂತರ ಜನ ಸಮುದಾಯ ಪರಮ ಪೂಜ್ಯರು ಏರ್ಪಡಿಸಿದ್ದ ದಾಸೋಹದಲ್ಲಿ ಪ್ರಸಾದವನ್ನು ಸ್ವೀಕರಿಸಿ ಕೃತಜ್ಞತೆಗಳನ್ನು ವ್ಯಕ್ತಪಡಿಸಿದರು.

ಉತ್ಸವದ ಸೇವಾಕರ್ತರಾದ ಮಾನ್ಯ ಶ್ರೀ ಟಿ.ಕೆ. ನಂಜುಂಡಪ್ಪನವರು ಪರಮ ಪೂಜ್ಯ ಶ್ರೀ ಶ್ರೀ ಶಿವಕುಮಾರ ಸ್ವಾಮಿಗಳವರಿಗೆ, ವಿವಿಧ ಮಠಗಳಿಂದ ದಯ ಮಾಡಿಸಿದ್ದ ಹರಗುರು ಚರಮೂರ್ತಿಗಳಿಗೂ ಪುಷ್ಪಹಾರವನ್ನರ್ಪಿಸಿ ಶರಣು ಸಮರ್ಪಿಸಿದರು.

ರಕ್ಷಣಾ ವ್ಯವಸ್ಥೆಯನ್ನು ಅತ್ಯಂತ ಅಚ್ಚುಕಟ್ಟಾಗಿ ನೆರವೇರಿಸಿದ ಪೋಲಿಸ್ ಇಲಾಖೆಯುವರ ಸೇವೆ ಶ್ಲಾಘನೀಯವಾಗಿತ್ತು. ಹಾಗೇಯೇ ಭಕ್ತಾದಿಗಳಿಗೆ ತುಮಕೂರು, ಬೆಂಗಳೂರು ಸ್ಥಳಗಳಿಗೆ ಸಾರಿಗೆ ಸಂಪರ್ಕವನ್ನು ಏರ್ಪಡಿಸಿ ಸಹಕರಿಸಿದ್ದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರು ವಂದನಾರ್ಹರು.

ದಿನಾಂಕ 15-2-91 ರಂದು ತೆಪ್ಪೋತ್ಸವವು ವಿಶೇಷ ಆಕರ್ಷಣೆಯಿಂದ ವೈಭವಯುತವಾಗಿ ನಡೆಯಿತು.

ವರದಿ : **ಹೆಚ್.ಬಿ. ಗಂಗಾಧರಯ್ಯ.**

ಸ್ಥಾಪನೆ : 1915 ತಂತಿ : "ಹ್ಯಾಪಿಮೂನ್"

ಶಾಸ್ತ್ರೋಕ್ತವಾಗಿ ತಯಾರಿಸಿದ ಸುಗಂಧ ಸಾಮಗ್ರಿಗಳು

ಪ್ರಖ್ಯಾತವಾದ
- ಪರಿಮಳದಶಾಂಗ
- ದೂಪದ ಕೊಡ
- ವಿಭೂತಿ
- ಹವನ ಸಾಮಗ್ರಿಗಳ


ತಯಾರಕರು




ಶಿವಪೂಜಾ
ಸಾಮಗ್ರಿಗಳು ದೊರೆಯುತ್ತದೆ.

ಫೋನ್ : ಅಂಗಡಿ — 28009 ಮನೆ — 224623.

ವೈ. ಬಸಪ್ಪ, 206, ಅವೆನ್ಯೂ ರೋಡ್, ಬೆಂಗಳೂರು-560 002




ಶ್ರೀ ಸಿದ್ಧಲಿಂಗೇಶ್ವರಸ್ವಾಮಿ ಮುದ್ರಣಾಲಯ, ಶ್ರೀ ಸಿದ್ಧಗಂಗಾ ಮಠ,

# ಸಿದ್ಧಗಂಗಾ

ಸಂಪುಟ–27. ಸಂಚಿಕೆ–3. ಮಾರ್ಚ್–1991.

ಬೇವು ಬೆಲ್ಲ ಸವಿಯು ಬೇಕು ಎಂಬ ಮಾತಿನಲ್ಲಿ ಅಮೂಲ್ಯವಾದ
ಜೀವನ ಸಂದೇಶವಿದೆ. ಕಷ್ಟ ಸುಖಗಳನ್ನು ಅನುಭವಿಸಿ
ದಾಗಲೇ ಮಾನವ ಶಕ್ತಿ ಸಂಪನ್ನವಾಗುವುದು. ಬೇವು
ಕಹಿಯಾದರೂ ಆರೋಗ್ಯವರ್ಧಕ. ಅಧರಕ್ಕೆ
ಕಹಿಯಾದರೂ ಉದರಕ್ಕೆ ಸಿಹಿ. ಕಷ್ಟ
ಸಂಕಷ್ಟಗಳು ಬರುವುದು ವ್ಯಕ್ತಿಯನ್ನು
ಪ್ರಕಾಶಗೊಳಿಸುವುದಕ್ಕಾಗಿಯೇ. ಕಷ್ಟ
ಸುಖಗಳೆರಡನ್ನೂ ಸಮದೃಷ್ಟಿಯಿಂದ
ನೋಡುವ ಪ್ರವೃತ್ತಿ ಬೆಳೆಸಿ
ಕೊಂಡಾಗ ಜೀವನ
ಒಂದು ಕಲೆ ಎಂದು
ಅರಿವಾಗುತ್ತದೆ.

– ಶ್ರೀ ಶ್ರೀ ಶಿವಕುಮಾರಸ್ವಾಮಿಗಳು.

ಪ್ರಕಾಶಕರು:
ಹಳೆಯ ವಿದ್ಯಾರ್ಥಿಗಳ ಸಂಘ.
ಸಿದ್ಧಗಂಗಾ ಕ್ಷೇತ್ರ.



ಸಿದ್ಧಗಂಗಾ ತಾಂತ್ರಿಕ ಕಾಲೇಜಿನ ರಜತ ಮಹೋತ್ಸವ ಮಾರ್ಚಿ 1–2 ರಂದು ನಡೆಯಿತು. ರಾಜ್ಯ ಪಾಲರಾದ ಶ್ರೀಖುರ್ಷಿದ್ ಆಲಂ ಖಾನ್‌ರವರ ಪರವಾಗಿ ರಾಜ್ಯ ಶಿಕ್ಷಣ ಸಚಿವ ಶ್ರೀ ವೀರಪ್ಪ ಮೊಯಿ ಬೆಳ್ಳಿ ಹಬ್ಬದ ಉದ್ಘಾಟನೆ ನೆರವೇರಿಸಿದರು. ಚಿತ್ರದಲ್ಲಿ ಪೂಜ್ಯ ಡಾ॥ ಶ್ರೀ ಶ್ರೀ ಶಿವಕುಮಾರ ಮಹಾ ಸ್ವಾಮಿಗಳು ಮತ್ತು ಕಿರಿಯ ಶ್ರೀ ಸಿದ್ಧಲಿಂಗ ಸ್ವಾಮಿಗಳು, ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಎಸ್. ಆರ್. ಬೊಮ್ಮಾಯಿಯವರನ್ನು ಕಾಣಬಹುದು.



ಬೆಳ್ಳಿ ಹಬ್ಬದ ಮುಕ್ತಾಯ ಸಮಾರಂಭದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವೆ ಶ್ರೀಮತಿ ಕೆ. ಎಸ್. ನಾಗರತ್ನಮ್ಮನವರು ವಿದ್ಯಾರ್ಥಿನಿ ನಿಲಯದ ಸೌಲಭ್ಯ ಕೇಂದ್ರ ಕಟ್ಟಡದ ಶಂಕುಸ್ಥಾಪನೆ ನೆರವೇರಿಸಿ ಮಾತನಾಡುತ್ತಿರುವುದು. ಚಿತ್ರದಲ್ಲಿ ಸಮಾರೋಪ ಭಾಷಣ ಮಾಡಿದ ಮಾಜಿ ಮುಖ್ಯ ಮಂತ್ರಿ, ಸಂಸತ್ ಸದಸ್ಯರಾದ ಶ್ರೀ ಆರ್. ಗುಂಡೂರಾವ್ ಮತ್ತು ಉಭಯ ಶ್ರೀ ಶ್ರೀ ಗಳವರನ್ನು ಕಾಣಬಹುದು.

# ಸಿದ್ಧಗಂಗಾ

ಸಂಪುಟ–27. ಸಂಚಿಕೆ–3. ಮಾರ್ಚಿ–1991.

## ಶ್ರೀ ಸಿದ್ಧಗಂಗಾ ಗುರುಕರುಣ ತ್ರಿವಿಧಿ

ಮನ್ನಿಪುದು ಗುರುರಾಯ ಎನ್ನ ಅಪರಾಧಗಳ
ಇನ್ನುಂಟೆ ನಿನ್ನಂತೆ ಕ್ಷಮೆ ಕಡಲು। ಪೊಡಮಡುವೆ
ಸಿದ್ಧಗಂಗಾ ಗುರುವೆ ಕೃಪೆಯಾಗು॥

ದಾಸೋಹ ದೀವಿಗೆಯ ಕತ್ತಲೆಗೆ ನೀಮುಡಿಸಿ
ಈಶಜ್ಞಾನದ ಬೆಳಕ ಚೆಲ್ಲಿರುವೆ। ನನ್ನತಂದೆ
ಸಿದ್ಧಗಂಗಾ ಗುರುವೆ ಕೃಪೆಯಾಗು॥

'ದಿವ್ಯ ಗಂಭೀರವೆ ಪರಮಾತ್ಮಲಿಂಗವೆ'
ಕಾವ್ಯ ಕಾರಣ ಕಿರಣ ತೇಜವೆ। ಪೊಡಮಡುವೆ
ಸಿದ್ಧಗಂಗಾ ಗುರುವೆ ಕೃಪೆಯಾಗು॥

—ಹೆಚ್. ವಿ. ವೀರಭದ್ರಯ್ಯ.

| ಲೇಖನ | ಲೇಖಕರು | ಪುಟ |
|---|---|---|
| * ಶ್ರೀವಾಣಿ | | 5 |
| * ಶ್ರೀ ಸಿದ್ಧಲಿಂಗೇಶ್ವರ ವಚನ | | 7 |
| * ಸಂಪಾದಕೀಯ | | 8 |
| * ಜ್ಯೋತಿಯಾಗಿ ಬಾ | ಜೆ. ಬಿ. ಲಿಂಗರಾಜು | 10 |
| * ಬಸವ ತತ್ತ್ವ ರತ್ನಾಕರ.2 | ಶ್ರೀ ಮೋಟಗಿ ಮಲ್ಲಿಕಾರ್ಜುನ | 11 |
| * ಮಾನವ ಪ್ರೇಮ (ಚಿಂತನ) | ಜಿ ಶಾರದ ರಾಜಶೇಖರ್ | 19 |
| * ವಿಜ್ಞಾನ ಮತ್ತು ಆಧ್ಯಾತ್ಮ | ಹೆಚ್. ಎಸ್. ನರಸಿಂಹ ಜೀಯರ್ | 22 |
| * ಸಿದ್ಧಗಂಗಾ ಮಠದ ಪ್ರತಿಭೆ | ಟಿ. ಗೋವಿಂದರಾಜು | 25 |
| * ವಿದ್ಯಾರ್ಥಿನಿಲಯ | ಅ.ಬ. ಚನ್ನಬಸಪ್ಪ | 26 |
| * ಶ್ರೀಮದುದ್ದಾನೇಶ್ವರ ಶತಕಂ | | 29 |
| * ರಫ್ತು ಅಭಿವೃದ್ಧಿಯಲ್ಲಿ ಮಾರಾಟ ಸಂಶೋಧನೆಯ ಪಾತ್ರ- | ಡಿ. ವೆಂಕಟರಾವ್ | 30 |
| * ವಿದ್ಯಾರ್ಥಿ ಜೀವನದ ಬೆಳಕು ಸರಣಿ, ಲೇಖನ-೨ | ಬಿ.ಎಸ್. ಕೃಷ್ಣಮೂರ್ತಿ | 34 |
| * ಈ ಅಂಗಡಿಯಲ್ಲಿ ಏನೂ ಮಾರುವುದಿಲ್ಲ ! | ಬಿ. ಸುಬ್ರಾಯ ಅಡಿಗ | 35 |
| * ನಾರಿಗೆ | ಶ್ರೀಮತಿ ಮಂದಾಕಿನೀದೇವಿ | 39 |
| * ಬೇವು ಒಂದು ಪ್ರಾಕೃತಿಕ ಕೀಟನಾಶಕ | | 41 |
| * ಶಿಕ್ಷಣ | ಎಂ.ಆರ್. ಬೈಲಪ್ಪ, | 43 |
| * ಭವಿಷ್ಯಕ್ಕಾಗಿ ಆಹಾರ | ಜಿ.ಆರ್. ರಂಗಸ್ವಾಮಯ್ಯ | 44 |
| * ಸಿದ್ಧಗಂಗಾ ತಾಂತ್ರಿಕ ಕಾಲೇಜು ರಜತ ಮಹೋತ್ಸವ | ಹೆಚ್.ಬಿ. ಗಂಗಾಧರಯ್ಯ | 47 |



## ಶ್ರೀವಾಣಿ

ಗುರು ಪೀಠಗಳಿಗೂ ಸಮಾಜಕ್ಕೂ ಅನ್ಯೋನ್ಯ ಸಂಬಂಧವಿದೆ. ಬಾಂಧವ್ಯ ಬಳ್ಳಿವರಿದಿದೆ. ವೀರಶೈವ ಧರ್ಮದಲ್ಲಿ ಗುರು ಲಿಂಗ ಜಂಗಮ ಪರಮ ಮೌಲ್ಯಗಳು. ಕೇವಲ ಮೌಲ್ಯಗಳಲ್ಲ ಆತ್ಮ ಸಾಧನೆಯ ಉತ್ತುಂಗ ಶಿಖರಗಳು. ತತ್ವಪಾಲನೆಗಾಗಿ ಮಠಾಧಿಪತಿಗಳು ಅವುಗಳ ಆಡಳಿತ ಸೂತ್ರಗಳನ್ನು ವಹಿಸಿಕೊಂಡು ಬಂದರು. ವಿಶ್ವದ ಬೇರೆ ಕಡೆಗಳಲ್ಲಿ ಸಂಸ್ಕೃತಿಯ ಉದಯವಾದದ್ದಕ್ಕೂ ಭರತಖಂಡದಲ್ಲಿ ಅದು ಅರಳಿದ್ದಕ್ಕೂ ವ್ಯತ್ಯಾಸವಿದೆ. ನಗರಗಳಗಲ್ಲಿ ಅದರ ಉದಯ ಬೇರೆಕಡೆಗಳಲ್ಲಿ ಯಾದರೆ ಭರತಖಂಡದಲ್ಲಿ ಋಷ್ಯಾಶ್ರಮಗಳಲ್ಲಿ, ಪ್ರಶಾಂತ ಪರಿಸರದಲ್ಲಿ ಸಂಸ್ಕೃತಿ ಸಂಭವಿಸಿತು. ಅಲ್ಲಿಂದ ಎಲ್ಲೆಡೆಗೆ ಹರಿಯಿತು. ಆತ್ಮ ತತ್ವಕ್ಕೆ ಶರಣ ಸಿದ್ಧಾಂತ ಕೊಟ್ಟಿರುವ ಮಹತ್ವ ಸಹನ ಗಂಭೀರವಾಗಿರುವಂತೆಯೇ ಕ್ರಿಯಾಶೀಲವೂ ಆಗಿದೆ. ವೀರಶೈವ ಮಠಗಳು ಕೇವಲ ಲಿಂಗಪೂಜೆ, ಗುರುಭಕ್ತಿ, ಜಂಗಮ ಸೇವೆಗಳಲ್ಲಿಯೇ ಮುಕ್ತವಾಗದೆ ಲೋಕಸಂಗ್ರಹ ಮಣಿಹದಲ್ಲಿಯೂ ತೊಡಗಿದ್ದು ವಿಶಿಷ್ಟವಾದದ್ದು. ಲೋಕವನ್ನು ಗೌರವಿಸುತ್ತ, ಮಿಥ್ಯೆಯೆಂದು ಭಾವಿಸದೆ, ಸತ್ಯವೆಂದೇ ನಂಬಿ 'ಕರ್ತಾರನ ಕಮ್ಮಟ'ವನ್ನು ಅರ್ಥಪೂರ್ಣ ಮಾಡುತ್ತ ಬಂದಿದೆ. ವೀರಶೈವ ಮಠಗಳ ಸೇವೆ ಒಂದು ಸಮಾಜಕ್ಕೆ ಮಾತ್ರ ಸೀಮಿತವಾಗದೆ ಸರ್ವಸಮಾಜಗಳಿಗೂ ಲಭ್ಯವಾಗುತ್ತ ಬಂದಿದೆ. ಮಠಗಳು ವಿದ್ಯಾ ಕೇಂದ್ರಗಳಾಗಿ, ನ್ಯಾಯಾಲಯಗಳಾಗಿ, ಆರೋಗ್ಯ ಮಂದಿರಗಳಾಗಿ, ಆಡಳಿತ ಸಂಸ್ಥೆಗಳಾಗಿ, ಕಾರ್ಯನಿರ್ವಹಿಸುತ್ತ ಬಂದಿವೆ. ಧರ್ಮಸಂಸ್ಥೆಗಳ ಜೀವನದಿಂದ ಮಾನವೀಯ ಭಾವನೆಗಳ ವಿಕಾಸವಾಗಬೇಕು. ಅಮಾನವೀಯವಾದ ಚಟುವಟಿಕೆಗಳ ಕೇಂದ್ರಗಳಾಗಬಾರದು ಅವು. ಮಠಾಧಿಪತಿಗಳ ವ್ಯಕ್ತಿತ್ವವೂ, ಚಾರಿತ್ರ್ಯವೂ ಪರಿಶುದ್ಧವಾಗಿದ್ದಲ್ಲಿ ಮಠಗಳ ಬಗ್ಗೆ ಜನತೆಯಲ್ಲಿ ಪೂಜ್ಯಭಾವನೆ ಮೂಡಿ ಬರುತ್ತದೆ. ಆ ಪವಿತ್ರ ಪರಂಪರೆಯ ಪ್ರಕಾಶದಲ್ಲಿ ಜನಸಾಮಾನ್ಯರ ಜೀವನ ಹಸನಾಗುತ್ತದೆ. ಸಮಷ್ಟಿಯ ಅಭಿವೃದ್ಧಿಗಾಗಿ ಶ್ರಮಿಸುವ ಸಂಸ್ಥೆಗಳಿಗೆ ಎಲ್ಲ ಕಾಲದಲ್ಲೂ ಭಕ್ತಿ ವಿಶ್ವಾಸ ಗೌರವಗಳನ್ನು ಜನತೆ ಸಲ್ಲಿಸುತ್ತಲೇ ಬಂದಿದ್ದಾರೆ.

**ಸಿದ್ಧಗಂಗಾ ಮಾಸ ಪತ್ರಿಕೆ**
**ಶ್ರೀ ಸಿದ್ಧಗಂಗಾ ಮಠ-572104**
ತುಮಕೂರು ಜಿಲ್ಲೆ

ಪ್ರಧಾನ ಸಂಪಾದಕರು
**ಪ್ರಾ॥ ಚನ್ನಪ್ಪ ಎರೇಸೀಮೆ**

* * *

ಸಂಪಾದಕರು
**ಹೆಚ್. ವಿ. ವೀರಭದ್ರಯ್ಯ**

* * *

ಸಹ ಸಂಪಾದಕರು
ಬಿ. ವೀರಭದ್ರಯ್ಯ
ಸಿ. ಎಸ್. ಚಂದ್ರಶೇಖರಯ್ಯ

* * *

ಜಾಹೀರಾತು ವಿಭಾಗ
**ಎಂ. ರೇಣುಕಾರಾಧ್ಯ**

* * *

ವಿತರಣೆ ವಿಭಾಗ
**ಆರ್. ಎಸ್. ಮಲ್ಲೇಶಪ್ಪ**

* * *

ಪ್ರಕಾಶಕರು
**ಹೆಚ್. ಬಿ. ಗಂಗಾಧರಯ್ಯ**
ಹಳೆಯ ವಿದ್ಯಾರ್ಥಿ ಸಂಘದ ಪರವಾಗಿ

* * *

ಮುದ್ರಕರು
ಶ್ರೀ ಸಿದ್ಧಲಿಂಗೇಶ್ವರಸ್ವಾಮಿ
ಮುದ್ರಣಾಲಯ

* * *

ಪ್ರಕಟಣೆಯ ಸ್ಥಳ
ಶ್ರೀ ಸಿದ್ಧಗಂಗಾಕ್ಷೇತ್ರ

ಚಂದಾ ವಿವರ
ವಾರ್ಷಿಕ ಚಂದಾ 25-00ರೂ
ಆಜೀವ ಸದಸ್ಯತ್ವ 250-00 ರೂ


## ಲೇಖಕರಲ್ಲಿ ಮನವಿ

'ಸಿದ್ಧಗಂಗಾ' ಶ್ರೀ ಸಿದ್ಧಗಂಗಾ ಮಠದಿಂದ ಪ್ರಕಟವಾಗುತ್ತಿರುವ ಮಾಸ ಪತ್ರಿಕೆ. ಶ್ರೀ ಮಠದ ಹಳೆಯ ವಿದ್ಯಾರ್ಥಿ ಸಂಘದ ಹೆಮ್ಮೆಯ ಸೇವಾ ಪುರವಣಿ. ಮೇಲಾಗಿ ಶ್ರೀ ಮಠದ ಮುಖವಾಣಿ. ಪೂಜ್ಯ ಶ್ರೀ ಶ್ರೀ ಡಾ॥ ಶಿವಕುಮಾರ ಮಹಾಸ್ವಾಮಿಗಳವರ ದಿವ್ಯ ಮಾರ್ಗದರ್ಶನದಲ್ಲಿ ಮುನ್ನಡೆದಿರುವ ಪತ್ರಿಕೆ. ತ್ರಿವಿಧ ದಾಸೋಹ ಸೇವಾ ತತ್ಪರತೆಯಿಂದ ಹೆಜ್ಜೆ ಹಾಕುತ್ತಿದೆ. ಈ ಧ್ಯೇಯ ಸಾಧನೆಗಾಗಿ ನಾಡಿನ ಗಣ್ಯ ಲೇಖಕರಿಂದ ಸಾಹಿತ್ಯ, ಸಂಸ್ಕೃತಿ, ಧರ್ಮ, ವಿಜ್ಞಾನ, ಶಿಕ್ಷಣ. ಇತಿಹಾಸ, ವೈಚಾರಿಕ, ಚಿಂತನ ಮುಂತಾದ ಲೇಖನಗಳನ್ನು ಸ್ವಾಗತಿಸುತ್ತದೆ ಅಸ್ವೀಕೃತ ಲೇಖನಗಳನ್ನು ಪಡೆಯಲು ಸಾಕಷ್ಟು ಅಂಚೆಸ್ಟಾಂಪುಗಳನ್ನು ಲಗತ್ತಿಸಿರಬೇಕು. ಲೇಖನಗಳಲ್ಲಿ ಸೂಕ್ತ ಬದಲಾವಣೆ ಮಾಡಿಕೊಳ್ಳುವ ಅಧಿಕಾರ ಸಂಪಾದಕರಿಗಿದೆ. ಅನುವಾದ, ರೂಪಾಂತರ ಲೇಖನಗಳಿಗೆ ಮೂಲ ಕೃತಿಕಾರರ ಅನುಮತಿ ಪಡೆದಿರಬೇಕು. ಸ್ವೀಕೃತ ಲೇಖನಗಳಿಗೆ ಸೂಕ್ತ ಸಂಭಾವನೆ ಕೊಡಲಾಗುವುದು.

---


"ಸಂಪಾದಕರು"
'ಸಿದ್ಧಗಂಗಾ' ಕನ್ನಡ ಮಾಸಪತ್ರಿಕೆ
ಶ್ರೀ ಸಿದ್ಧಗಂಗಾ ಕ್ಷೇತ್ರ-572104
ತುಮಕೂರು ಜಿಲ್ಲೆ.


ಇವರಿಗೆ ಕಳುಹಿಸಿಕೊಡಬೇಕಾಗಿ ಪ್ರಾರ್ಥನೆ

# ಶ್ರೀ ಸಿದ್ಧಲಿಂಗೇಶ್ವರ ವಚನ



ತನುವೆಂಬುದೊಂದು ಹುತ್ತಕ್ಕೆ ಒಂಬತ್ತು ಬಾಗಿಲು
ತಾಮಸವೆಂಬ ಸರ್ಪಂಗೆ ತಲೆ ಹದಿನಾಲ್ಕು, ಒಡಲಾರು
ಬಾಲವ ಬ್ರಹ್ಮರಂಧ್ರ ಲೋಕಕ್ಕಿಟ್ಟು. ಶಿರವ ಹರಿದ್ವಾರದಲ್ಲಿರಿಸಿ,
ಕರಣೇಂದ್ರಿಯಂಗಳೆಂಬ ಕಾಳಕೂಟವಿಷವನೆ ಉಗುಳುತ್ತಿದೆ ನೋಡಾ
ಆವಿಷವು ಶಿವಶರಣರಲ್ಲದವರ ಸುಡುವುದ ಕಂಡೆನು ಕಾಣಾ
ಮಹಾಲಿಂಗ ಗುರುಶಿವಸಿದ್ದೇಶ್ವರ ಪ್ರಭುವೇ.

ಪಂಚ ಭೂತಗಳಿಂದೊಡಗೂಡಿರುವ ದೇಹವೆಂಬುದು ಒಂದು ಹುತ್ತ. ಅದರಲ್ಲಿ ಈಡಾ, ಪಿಂಗಳ ಮುಂತಾದ ಒಂಬತ್ತು ಬಾಗಿಲುಗಳು. ಅಂತಹ ದೇಹವೆಂಬ ಹುತ್ತದೊಳಗೆ ಅಜ್ಞಾನವೆಂಬ ಕಾಳೋರಗ. ಹದಿನಾಲ್ಕು ಇಂದ್ರಿಯಗಳೆ ಶಿರಸ್ಸು. ಅರಿಷಡ್ವರ್ಗಗಳೆ ಒಡಲು. ಆ ಕಾಳೋರಗ ಅಧಃ ಕುಂಡಲಿಯಲ್ಲಿ ನಾಭಿಸ್ಥಾನದಲ್ಲಿ ಏಳುಸುತ್ತುಗಳಾಗಿ ಮಲಗಿ, ಬಾಲವನ್ನು ಬ್ರಹ್ಮರಂಧ್ರಕ್ಕೆ ಎತ್ತಿ, ಶಿರವನ್ನು ಶಿವನಿ ಸ್ಥಾನದಲ್ಲಿಟ್ಟು, ಕರಣೇಂದ್ರಿಯಗಳ ಮೂಲಕ ವಿಷಯ ವಿಕಾರಗಳೆಂಬ ಕಾಳಕೂಟ ವಿಷವನ್ನು ಉಗುಳುತ್ತಿದೆ. ಆ ವಿಷವನ್ನು ಶಿವಶರಣನು ಜ್ಞಾನದಕಣ್ಣಿಂದ ನೋಡುತ್ತ-ಶಿವಶರಣರಲ್ಲದೆ ಉಳಿದವರನ್ನು ತಾಪತ್ರಯ ಅಗ್ನಿಯ ರೂಪದಲ್ಲಿ ಸುಡುತ್ತಿರುವುದನ್ನು ಉದಾಹರಿಸುತ್ತ ಅದನ್ನು ತಿರಸ್ಕರಿಸಿದನು.

# ಸಂಪಾದಕೀಯ

## ಎಸ್. ಐ. ಟಿ.-ಬೆಳ್ಳಿಹಬ್ಬ 1963-1991

ಸಿದ್ಧಗಂಗಾ ತಾಂತ್ರಿಕ ಮಹಾವಿದ್ಯಾಲಯ. ಎಸ್. ಐ. ಟಿ. ಎಂದೇ ಪ್ರಸಿದ್ಧ ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆಯ ಹೆಮ್ಮೆಯ ಶಿಕ್ಷಣ ಸಂಸ್ಥೆ, ಶ್ರೀ ವಿದ್ಯಾಸಂಸ್ಥೆಯ ಆಶ್ರಯದಲ್ಲಿ ನಡೆಯುತ್ತಿರುವ ನೂರು ಶಿಕ್ಷಣ ಸಂಸ್ಥೆಗಳಲ್ಲಿ ಮಕುಟ ಪ್ರಾಯವಾದುದು. ತುಮಕೂರು ನಗರದ ಕೀರ್ತಿಯನ್ನು ಗರಿಗೆದರಿ ಪ್ರಸರಿಸಿದ ರತ್ನಮಂಗಳ ಕಲಶ. ಗ್ರಾಮೀಣ ಪ್ರತಿಭೆಗಳು ವಿಕಾಸವಾಗಲು ಉದಯವಾದ ಹಿನ್ನೆಲೆ. ಸರ್ಕಾರ ತಾಂತ್ರಿಕ ಕಾಲೇಜುಗಳಲ್ಲಿ ಪ್ರವೇಶಾವಕಾಶ ದೊರೆಯದೆ ನಿರಾಶರಾಗುವ ಸನ್ನಿವೇಶ ಕಲ್ಪಿತವಾದಾಗ ‘ ಹರ ಕರುಣೋದಯ’ ದಂತೆ ‘ ಗುರುಕರುಣೋದಯದ ’ ಶ್ರೀ ರಕ್ಷೆ ಯಿಂದ ಸೇವಾ ಜೀವನಕ್ಕೆ ದೀಕ್ಷೆ ತೊಟ್ಟುನಿಂತದ್ದು. ತುಮಕೂರಿನ ಶಿಕ್ಷಣಾಭಿ-ಮಾನಿಗಳ ಒತ್ತಾಸೆ, ಉದಾರ ದಾನಿಗಳಾದ ಲೋಕಸೇವಾನಿರತ ಶ್ರೀ ಜಿ. ಎ.ಂ ಸಿದ್ದ ರಾಮಣ್ಣ, ಶ್ರೀ ಟಿ. ಎನ್. ಕೆಂಪಹೊನ್ನಯ್ಯ, ಶ್ರೀ ಎಂ. ವಿ. ಶಿವಪ್ಪ. ಶ್ರೀ ಎ. ಕೆ. ಪಾರ್ಶ್ವನಾಥ್, ಶ್ರೀ ಜಿ ಸಿ. ನಂಜುಂಡಯ್ಯ, ಡಾ|| ಟಿ. ಎಸ್. ಮಲ್ಲಿಕಾರ್ಜುನಯ್ಯ ಮತ್ತಿತರ ಹಿರಿಯರ ಸಕ್ರಿಯ ಸಹಕಾರ, ನಗರದ ವರ್ತಕರ ತುಂಬು ಸಹಕಾರ, ವಿಶ್ವ ವಿದ್ಯಾನಿಲಯ, ಸರ್ಕಾರದ ಸಲಹೆ, ಮಾರ್ಗದರ್ಶಗಳ ಪೂರ್ಣ ಬೆಳಕಿನಲ್ಲಿ ಎಸ್.ಐ.ಟಿ. ಅರಳಲು ಆರಂಭ. ಪ್ರಾರಂಭದಲ್ಲಿ ಶ್ರೀ ಸಿದ್ಧಗಂಗಾ ಪ್ರೌಢಶಾಲೆ ಕಟ್ಟಡದಲ್ಲಿ ಕಾರ್ಯಾರಂಭ, ಹಂತ ಹಂತವಾಗಿ ಪ್ರಗತಿಯ ಮುನ್ನೋಟ, ಮುನ್ನಡೆಗೆ ತ್ರಿಕರಣ ಶುದ್ಧಿಯ ದುಡಿತ, ಪ್ರಾಚಾರ್ಯರಾಗಿ ಸೇವಾರಂಭ ಮಾಡಿದ ಶ್ರೀ ಜಿ. ಎಸ್. ಶಿವಣ್ಣ ನವರ ಪ್ರಾಮಾಣಿಕ ದಕ್ಷತೆಯಿಂದಾಗಿ ಸಂಸ್ಥೆ ಅಭಿವೃದ್ಧಿ ಪಥಗಾಮಿಯಾಯಿತು. ಶ್ರೀ ಶಿವಣ್ಣನವರಿಗೆ ಸಹಕಾರ ನೀಡುತ್ತ ಸಂಸ್ಥೆಯ ಪ್ರಗತಿಯನ್ನೇ ಪ್ರಧಾನವನ್ನಾ-ಗಿಟ್ಟುಕೊಂಡು ಶ್ರೀ ಎಂ. ಚಿಕ್ಕಣ್ಣಯ್ಯಪ್ಪನವರ ಜನಾನುರಾಗ, ಅಧಿಕಾರಿವರ್ಗದಲ್ಲಿ ಗಳಿಸಿದ ಸ್ನೇಹ ವಿಶ್ವಾಸಗಳು ಸಂಸ್ಥೆಯ ಬೆಳವಣಿಗೆಗೆ ಬಲ ನೀಡಿತು. ಪ್ರಾಚಾರ್ಯ-ರಾಗಿಯೂ ಸೇವೆ ಸಲ್ಲಿಸಿದ ಶ್ರೀ ಚಿಕ್ಕಣ್ಣಯಪ್ಪನವರು ಎಸ್ ಐ.ಟಿ.ಯ ಬೆಳವಣಿಗೆ ಯಲ್ಲಿ ತಮ್ಮನ್ನು ತೊಡಗಿಸಿಕೊಂಡದ್ದು ವಿಶೇಷ. ಅನಂತರ ಪಾಚಾರ್ಯರಾಗಿ ಬಂದ ಶ್ರೀ ಕರಕರೆಡ್ಡಿಯವರು ಅಪರೂಪದ ವ್ಯಕ್ತಿ. ಸರಳತೆ, ಸಜ್ಜನಿಕೆ, ನಿಯಮ ನಿಷ್ಠೆಗೆ ಮತ್ತೊಂದು ಹೆಸರು. ಸಂಸ್ಥೆಯ ಬೆಳವಣಿಗೆಯಲ್ಲಿ ಎಲೆಮರೆಯ ಹೂವಾಗಿ ಅರಳಿದರು. ಶ್ರೀ ಕುಮಾರಸ್ವಾಮಿಯವರು ಸಂಭಾವಿತ ಆಡಳಿತಗಾರರೆಂದೇ ಹೆಸರಾದವರು. ಇದೀಗ ಪಾಚಾರ್ಯರಾಗಿ ಸೇವೆ ಸಲ್ಲಿಸುತ್ತಿರುವ ಶ್ರೀ ಜಿ. ಪರಮೇಶ್ವ ರಪ್ಪನವರು ದಕ್ಷತೆಗೆ, ಸಮಯೋಚಿತ ನಿರ್ಧಾರ ತೆಗೆದು ಕೊಳ್ಳುವ ಮನೋಧರ್ಮಕ್ಕೆ

ಉದಾಹರಣೆ. ದಿನಾಂಕ 1.3.91 ಮತ್ತು 2.3.91 ರಂದು ಬೆಳ್ಳಿ ಹಬ್ಬವನ್ನು ನಗರದ ವಿಶಿಷ್ಟ ಹಬ್ಬವೆನ್ನುವಂತೆ ಆಚರಿಸಲಾಯಿತು. ರಾಜ್ಯದ ರಾಜ್ಯಪಾಲರು, ಶಿಕ್ಷಣ ಸಚಿವರು, ಆರೋಗ್ಯ ಸಚಿವರು, ಬೆಂಗಳೂರು, ಮಂಗಳೂರು, ಗುಲ್ಬರ್ಗ, ಕುವೆಂಪು ವಿಶ್ವವಿದ್ಯಾಲಯಗಳ ಕುಲಪತಿಗಳು, ತಾಂತ್ರಿಕ ಶಿಕ್ಷಣದ ನಿರ್ದೇಶಕರು, ಕೇಂದ್ರ ಸಂಪುಟದ ಮಾಜಿ ಸಚಿವರುಗಳು ಸಮಾರಂಭದಲ್ಲಿ ಭಾಗಿಗಳಾಗಿ ವಿಶೇಷ ಶೋಭೆಯನ್ನುತಂದರು . ಶ್ರೀ ಸಂಸ್ಥೆಯಲ್ಲಿ ಅಧ್ಯಯನ ಮಾಡಿದ ಎಲ್ಲ ವಿದ್ಯಾರ್ಥಿಗಳಿಗೆ ನೆನಪಿನ ಉಡುಗೊರೆಯನ್ನು ಕೊಟ್ಟದ್ದು ಅವಿಸ್ಮರಣೀಯವಾಗಿತ್ತು. ದೇಶ ವಿದೇಶಗಳಲ್ಲಿ ಸೇವೆಸಲ್ಲಿಸುತ್ತಿರುವ ಎಸ್. ಐ. ಟಿ. ಯ ವಿದ್ಯಾರ್ಥಿಗಳು ತಮ್ಮ ಬದುಕನ್ನು ರೂಪಿಸಿದ ಸಂಸ್ಥೆಯ ಬೆಳ್ಳಿಹಬ್ಬದಲ್ಲಿ ಬೆರೆತು ಸಂತೋಷಿಸಿದರು. ಸಂಸ್ಥೆಯ ಕೀರ್ತಿಗೆ ಪಾತ್ರರಾದ ಪ್ರಾಧ್ಯಾಪಕರು ಹಾಗೂ ಸಿಬ್ಬಂದಿ ವರ್ಗದವರಿಗೆ ಶ್ರೀ ಸಿದ್ಧಂಗಾ ವಿದ್ಯಾ ಸಂಸ್ಥೆಯ ಆಡಳಿತ ಮಂಡಳಿ ನೆನಪಿನ ಉಡುಗೊರೆಯನ್ನು ಕೊಟ್ಟು ಗೌರವಿಸಿತು. ಪ್ರಾಚಾರ್ಯರಾಗಿ ಸೇವೆಸಲ್ಲಿಸಿದೆಲ್ಲ ಮಹನೀಯರನ್ನು ಸನ್ಮಾನಿಸಿತು. ತಮ್ಮ ಜೀವನಕ್ಕೆ ಸ್ಫೂರ್ತಿನೀಡಿ ಬೆಳಕಿನೆಡೆಗೆ ನಡೆಯುವಂತೆ ಆಶೀರ್ವದಿಸಿದ ಸಂಸ್ಥೆಯ ಅಧ್ಯಕ್ಷರಾದ ಪರಮಪೂಜ್ಯ ಶ್ರೀ ಶ್ರೀ ಡಾ|| ಶಿವಕುಮಾರಸ್ವಾಮಿಗಳವರಿಗೆ ವಿದ್ಯಾರ್ಥಿಗಳು ರಜತ ಫಲಕವನ್ನರ್ಪಿಸುವುದರ ಮೂಲಕ ಕೃತಜ್ಞತೆಗಳನ್ನು ಸಮರ್ಪಿಸಿದರು.

ಶ್ರೀ ಸಿದ್ಧಗಂಗಾ ವಿಶ್ವವಿದ್ಯಾಲಯ ಅನತಿ ಕಾಲದಲ್ಲಿಯೇ ಅಸ್ತಿತ್ವಕ್ಕೆ ಬರುವ ಸಂದರ್ಭ ಸನ್ನಿಹಿತವಾಗುತ್ತಿದೆಯೆಂದು ಸಮಾರಂಭಕ್ಕೆ ಆಗಮಿಸಿದ್ದ ಎಲ್ಲ ಗಣ್ಯ ಅತಿಥಿಗೂ ಹಾರೈಸಿದರು.



# " ಜ್ಯೋತಿಯಾಗಿ ಬಾ "

ಜೆ. ಬಿ. ಲಿಂಗರಾಜು, ಬಿ.ಎ., ಜ್ಯೋತಿಮಲ್ಲಾಪುರ.

ಮರಳಿ ಬಾ ಬೆಳಗಿಸು ಜಗದ ಜ್ಯೋತಿಯ
ಮಹಾಯೋಗಿ ಮಹಾತ್ಯಾಗಿ ಜಗಜ್ಯೋತಿಯೆ ।

ಶಿವಾನುಭವ ಮಂಟಪದ ಮಹಾಕಿರಣ ಬಾ
ಶಿವನನಾರಾಧಿಸಿದ ಮಹಾಶರಣ ಬಾ
ವಚನ ವಾಙ್ಮಯಗಳ ಪ್ರಭೆಯ ಚೆಲ್ಲುಬಾ
ಮಾನವಗೆ ನೀತಿಮಯ ಸುಧೆಯ ಸೊಲ್ಲುಬಾ॥

ತಪೋಭೂಮಿ ಭಾರತದಿ ಜನ್ಮತಳೆದು ಬಾ
ಜ್ಯೋತಿಯಲ್ಲೊದಗಿದ ಜ್ಯೋತಿಯಾಗಿಬಾ
ನಾಡಿನಿರುಳಕಳೆದು ಕಲ್ಯಾಣವೆನಿಸುಬಾ
ಆಚಾರಧರ್ಮಸಾರ ಧಾರೆ ಹರಿಸುಬಾ ॥

ಜ್ಞಾನದಾನಗೈದು ಜಗವ ಉದ್ಧರಿಸುಬಾ
ಕಾಯಕದ ಕೈಲಾಸವೆನಿಸು ಉದ್ಭವಿಸುಬಾ
ನೀತಿ ನೆಲೆಯ ಬೋಧಿಸಿ ಗುರುವೆ ನಿಲ್ಲುಬಾ
ಭೇದಭಾವ ಛೇದಿಸುವ ವರವ ಚೆಲ್ಲುಬಾ ॥

ಜ್ಞಾನಗಂಗೆ ಧರೆಗೆ ಹರಿಸಿ ಬೆಳಗುತಬಾ
ಕೂಡಲ ಸಂಗಮದಿ ಜಂಗಮನೆ ಬಾ
ಶಿವನ ಶಿರದಿ ಮುಡಿಸಿದ ಹೂವಾಗಿಬಾ
ಮಾನವರೆದೆಯೊಳು ಚೇತನವನು ತಾ ॥

ಹೊಮ್ಮಿಸುತ ಹೊಸಕಳೆಯ ಧರ್ಮಸಾರುಬಾ
ಜಗದ ಮನೆಯೊಳವ ತರಿಸಿ ಜ್ಯೋತಿಯಾಗಿಬಾ
ಚಿಮ್ಮಿಸುತ ಚೇತನವ ಪೂರ್ಣಗೊಳಿಸುಬಾ
ಯುಗದ ಕೊಳೆಯ ಕನಿಕರಿಸಿ ಕೊಲ್ವಖ್ಯಾತಿಬಾ ॥

# ಬಸವ ತತ್ತ್ವ ರತ್ನಾಕರ — 2

## ಷಟ್‌ಸ್ಥಲಾತ್ಮಕ ವಚನಗಳು

— ಶ್ರೀ ಮೋಟಗಿ ಮಲ್ಲಿಕಾರ್ಜುನ "ಕನ್ನಡ ಕವಿ ಕಾಳಿದಾಸ" ಅಥಣಿ, (ಬೆಳಗಾವಿ ಜಿಲ್ಲೆ.)

### ಅನಾದಿ ಶರಣ ಬಸವಣ್ಣ ಉದಯ – 15.

ಆದಿ ಆಧಾರವಿಲ್ಲದಂದು ಸುರಾಳ ನಿರಾಳವಿಲ್ಲದಂದು,
ಶೂನ್ಯ ನಿಶ್ಶೂನ್ಯವಿಲ್ಲದಂದು ನಾದಬಿಂದು ಕಳೆಗಳಿಲ್ಲದಂದು,
ಆಕಾಶ ಪ್ರಕಾಶಗಳಿಲ್ಲದಂದು ಸಚರಾಚರವೆಲ್ಲ ರಚನೆಗೆ ಬಾರದಂದು,
ಶ್ರೀ ಶೈಲ ಮಲ್ಲಿಕಾರ್ಜುನಾ, ನಿಮ್ಮ ಶರಣ ಬಸವಣ್ಣ ಉದಯವಾದನಂದು."

### ಮಹಾಲಿಂಗ ವೃಕ್ಷ ಉತ್ಪತ್ತಿ - 16

ಪರಶಿವ ಮಹಾಮಂತ್ರಮೂರ್ತಿ ಬಸವರಾಜ ಮಹಾದೇವ ನೋಡಾ,
ಪರಶಿವ ತತ್ತ್ವವೆಂದಡುಂ ಒಂದೆ ! ಬಸವತತ್ತ್ವವೆಂದಡುಂ ಒಂದೆ ! ನೋಡಾ.
ಇಂತಿವು ಒಂದೆ ನಾಣ್ಯದ ಎರಡು ಮುಖಗಳಿದ್ದಂತೆ ನೋಡಾ !
ಬಸವ ತತ್ತ್ವವೆಂದಡೆ ಶಿವಸಮುದ್ರವಿದ್ದಂತೆ ನೋಡಾ !
ಆ ಶಿವಸಮುದ್ರದೊಳಗಣ ಅನರ್ಘ್ಯ ರತ್ನಂಗಳೆಲ್ಲ ಪ್ರಮಥಗಣ ನೋಡಾ.
ಈ ರತ್ನಂಗಳರಾಶಿಯಲ್ಲಿ ಅನರ್ಘ್ಯ ರಹಸ್ಯ ರತ್ನಂಗಳೂ ಉಂಟು ನೋಡಾ.
ಇಂತಪ್ಪ ಅನಾದಿ ಶರಣ ಬಸವೇಶ್ವರ ಮಹಾತ್ಮ್ಯೆಗೆ ಆದಿ ಅಂತ್ಯವಿಲ್ಲ ನೋಡಾ.
ಬಸವೇಶ ಬ್ರಹ್ಮಾಂಡ ಸೃಷ್ಟಿ ಲೀಲೆ ಅನಂತಾನಂತರೂಹುದಳೆದು
'ಮಹಾಲಿಂಗ ವೃಕ್ಷವಾಗಿ ಅನಾದ್ಯನಂತವಾಗಿ ಬೆಳೆದು ನಿಂದಿತ್ತು.
ಕಾಣಾ, ಶ್ರೀ ಶೈಲ ಮಲ್ಲಿಕಾರ್ಜುನ ! "

### ಮಹಾಲಿಂಗ ಲೀಲೆ – 17

"ಶರಣನ ಮೂರ್ತಿಯಿಂದಲಾದ ಸದಾಶಿವ.
ಆ ಸದಾಶಿವನ ಮೂರ್ತಿಯಿಂದಲಾದ ಶಿವ.
ಆ ಶಿವನ ಮೂರ್ತಿಯಿಂದಲಾದ ರುದ್ರ
ಆ ರುದ್ರನ ಮೂರ್ತಿಯಿಂದಲಾದ ವಿಷ್ಣು.
ಆ ವಿಷ್ಣುವಿನ ಮೂರ್ತಿಯಿಂದಲಾದ ಬ್ರಹ್ಮ.
ಆ ಬ್ರಹ್ಮನ ಮೂರ್ತಿಯಿಂದಲಾದವು ಸಕಲ ಜಗತ್ತುಗಳೆಲ್ಲಾ !
ಇವರೆಲ್ಲ ನಮ್ಮ ಶ್ರೀ ಶೈಲ ಮಲ್ಲಿಕಾರ್ಜುನನ ಕರಸ್ಥಲದ ಹಂಗಿನಲ್ಲಿ ಬೆಳೆದರು."

## ಷಟ್‌ಸ್ಥಲ ತತ್ತ್ವ ಉತ್ಪತ್ತಿ - 18

"ಪ್ರಪ್ರಥಮದಲ್ಲಿ ಪರವಸ್ತು ಅನಿರ್ವಚನೀಯವಾಗಿದ್ದಿತ್ತು.
ಆ ಅನಿರ್ವಚನೀಯವಾಗಿದ್ದ ಪರವಸ್ತು ತನ್ನ ಲೀಲೆಯಿಂದ
ತಾನೆ ಪರಬ್ರಹ್ಮವೆಂಬ ಹೆಸರಾಯಿತ್ತು.
ಆ ಪರಬ್ರಹ್ಮವೆಂಬ ಹೆಸರು ಹೊಂದಿ ಕುಳವಾಯಿತ್ತು.
ಆ ಕುಳದಿಂದ ಆತ್ಮನೆಂಬ ಲಿಂಗಸ್ಥಲವಾಯಿತ್ತು.
ಆ ಸ್ಥಳ ಕುಳದೊಳಗೆ ಹೊಂದಿ (ಕೂಡಿ) ಸ್ಥಳ ಕುಳವೆಂಬರಡಿಲ್ಲದೆ ನಿಂದಿತ್ತು.

ಅದು ಹೇಗೆಂದಡೆ:

ವಾಙ್ಮನಕಗೋಚರವಾದ ಪರಬ್ರಹ್ಮದಿಂದ ಭಾವವಾಯಿತ್ತು.
ಭಾವದಿಂದ ಜ್ಞಾನವಾಯಿತ್ತು. ಜ್ಞಾನದಿಂದ ಮನವಾಯಿತ್ತು.
ಮನದಿಂದ ಬುದ್ಧಿಯಾಯಿತ್ತು, ಬುದ್ಧಿಯಿಂದ ಚಿತ್ತಾಯಿತ್ತು.
ಚಿತ್ತದಿಂಡ ಅಹಂಕಾರವಾಯಿತ್ತು.
ಇಂತೀ ಅಹಂಕಾರ ಚಿತ್ತ ಬುದ್ಧಿ ಮನ ಜ್ಞಾನ ಭಾವವೆಂದಾರಾದವು.
ಈ ಆರೂ ಕೆಟ್ಟಲ್ಲದೆ ವಾಙ್ಮನಕ್ಕ ಗೋಚರವಾದ ಪರಬ್ರಹ್ಮವಾಗಬಾರದು,
ಇವ ಕೆಡಿಸುವಡಕ್ಕೆ ಆರು ಸ್ಥಲವಾದವು.

ಅವಾವವೆಂದಡೆ:

ಅಹಂಕಾರವಡಗಿದಾಗ ಭಕ್ತಿಸ್ಥಲವಾಯಿತ್ತು.
ಚಿತ್ತದ ಗುಣ ಕೆಟ್ಟಾಗ ಮಾಹೇಶ್ವರ ಸ್ಥಲವಾಯಿತ್ತು.
ಬುದ್ಧಿಯ ಗುಣ ತೊರೆದಾಗ ಪ್ರಸಾದಿ ಸ್ಥಲವಾಯಿತ್ತು.
ಮನೋಗುಣವಳಿದಾಗ ಪ್ರಾಣಲಿಂಗಿ ಸ್ಥಲವಾಯಿತ್ತು.
ಜೀವನ ಗುಣಸಂದಾಗ ಶರಣ ಸ್ಥಲವಾಯಿತ್ತು.
ಭಾವ ನಿರ್ಭಾವವಾದಾಗ ಐಕ್ಯಸ್ಥಲವಾಯಿತ್ತು.
ಇಂತೀ ಷಟ್‌ಸ್ಥಲವಾಗಿ ವಾಙ್ಮನಕ್ಕಗೋಚರವಾದ ಬ್ರಹ್ಮವೆ ಆತ್ಮನು.
ಆ ಆತ್ಮನಿಂದ ಆಕಾಶ ಹುಟ್ಟಿತ್ತು.
ಆ ಆಕಾಶದಿಂದ ವಾಯು ಹುಟ್ಟಿತ್ತು.
ಆ ವಾಯುವಿನಿಂದ ಅಗ್ನಿ ಹುಟ್ಟಿತ್ತು.
ಆ ಅಗ್ನಿಯಿಂದ ಅಪ್ಪು ಹುಟ್ಟಿತ್ತು.
ಆ ಅಪ್ಪುವಿನಿಂದ ಪೃಥ್ವಿ ಹುಟ್ಟಿತ್ತು.

ಇಂತೀ ಕುಳ ಸ್ಥಳವಾಗಿ ಸ್ಥಳಕುಳವಾದ ವಿವರವೆಂತೆಂದಡೆ:

ಪೃಥ್ವಿ ಅಪ್ಪುವಿನೊಳಡಗಿ, ಅಪ್ಪು ಅಗ್ನಿಯೊಳಡಗಿ,

ಅಗ್ನಿ ವಾಯುವಿನೊಳಡಗಿ, ವಾಯು ಆಕಾಶದೊಳಡಗಿ,
ಆಕಾಶ ಆತ್ಮನೊಳಡಗಿತ್ತು; ಆತ್ಮ ಪರಶಿವನಲ್ಲಿ ಅಡಗಿತ್ತು.

ಇಂತೀ ಷಡಂಗವಡಗಿದ ಪರಿಯೆಂತೆಂದಡೆ :

ಪೃಥ್ವಿ ಭವೇತ್ ಜಲೇ ಮಗ್ನಾಜಲಂ ಗ್ರಸ್ತಂ ಮಹಾಗ್ನಿನಾ ।
ವಾಯೋರಸ್ತಮಿತಂ ತೇಜೋವ್ಯೋಮ್ನಿ ವಾತೋ ವಿಲೀಯತೇ ।
ವ್ಯೋಮಮಾತ್ಮನಿ ವಿಲೀನಂ ಸ್ಯಾತ್ ಆತ್ಮಾಪರಶಿವೇ ಪದೇ ॥ ಎಂದುದಾಗಿ,
ಆತ್ಮನು ಪರಬ್ರಹ್ಮದೊಳಡಗಿ ನಿಂದಿತ್ತು ಶ್ರೀ ಶೈಲ ಮಲ್ಲಿಕಾರ್ಜುನ. ”

## ಪ್ರಭುವಾಣಿ–19

“ಬಸವಾ ! ‘ನೀ ಮಾಡಲಾಗಿ ಆನಾದೆನು’ ಎಂಬಾ ಅಲ್ಲಮಪ್ರಭು ಅಮೃತವಾಣಿ:
“ ಧರೆಯಾಕಾಶ ತಾರಾಮಂಡಲ ಸಪ್ತ ಸಮುದ್ರಗಳಿಲ್ಲದಂದು,
ಒಂದು ಮಹಾ ವೃಕ್ಷವಿದ್ದಿತ್ತಯ್ಯಾ.
ಆ ವೃಕ್ಷವ ಕಂಡು ನಾನು “ ಓಂ ನಮಃ ಶಿವಾಯ ” ಎನುತಿದ್ದೆನು.
ಆ ವೃಕ್ಷದಿಂದ ಷಡು ಸಾದಾಖ್ಯಂಗಳು ಪುಟ್ಟಿದವು.
ಆ ಷಡು ಸಾದಾಖ್ಯಂಗಳ ನೆಳಲಲ್ಲಿ ಕುಳ್ಳಿರ್ದು.

ನಾನು ಬಸವಾ ಬಸವಾ ಬಸವಾ ಎನುತಿರ್ದೆನು ಕಾಣಾ ಗುಹೇಶ್ವರಾ.”
ಇಂತೆಂದುದಾಗಿ ಅನಾದಿ ಶರಣ ಬಸವರಾಜದೇವರ ಅಪಾರ ಅನಂತ ಮಹಾತ್ಮ್ಯೆಯಂ ಆ ಸಹಸ್ರ ನಾಲಗೆಯಾ ಆದಿ ಶೇಷಂಗೆ ಬಣ್ಣಿಸಲಸದಳವಾಗಿರಲ್ಕೆ ಇನ್ನು ಆನೆಂತು ವರ್ಣಿಪುದು ಹೇಳಾ ? ಶ್ರೀ ಶೈಲ ಮಲ್ಲಿಕಾರ್ಜುನ ! ”

## ಬಸವ ಮಂತ್ರ ಮಹಾತ್ಮ್ಯೆ – 20

“ ಅಯ್ಯಾ! ಅನಾದಿ ಶರಣ ಬಸವಣ್ಣ ಮಹಾಮಂತ್ರಮೂರ್ತಿಯಾಗಿರ್ದ ನೋಡಾ! “ ಓಂ ನಮಃ ಶಿವಾಯ ” “ ಶಿವಮಂತ್ರ ” ವಿದು ಸಪ್ತಕೋಟಿ ಮಂತ್ರಂಗಳಿಗೂ ಅಧಿಕಮೆನಿಸಿ ಸಕಲ ಸುಖ ಸಿದ್ಧಿಪ್ರದಾಯಕವೆನಿಸಿರ್ಪುದು ನೋಡಾ !

## ಶಿವ ಮಂತ್ರ ಮಹಿಮೆ

ಕಂದ|| ಸಲೆ ಸಪ್ತಕೋಟಿ ಮಂತ್ರಂ ।
ಗಳಿಗಧಿಕಮೆನೆ ಮಿಗೆ ಕಂಗೊಳಿಪ ಶಿವಮಂತ್ರಂ ||
ಒಲವಿನಲಿ ಶರಣನನಿಶಂ ।
ನಲಿನಲಿದು ನುತಿಸುತಿರಲಿಳೆಯೊಳ್ ಬೆಳಗುವದಯ್

(– " ಕನ್ನಡ ಕವಿ ಕಾಳಿದಾಸ " ಕೃತ " ಶಿವಾನುಭವದರ್ಪಣ " ಪ.೧೪)

ಇಂತೆಂದುದಾಗಿ ಶಿವಮಂತ್ರದಿಂದಧಿಕ ಮಂತ್ರವಿಲ್ಲೆಂಬ ಸಕಲ ಶ್ರುತಿವಾಣಿ ಸಾರ್ವಕಾಲಿಕ (ತ್ರಿಕಾಲ) ನಿಜಕ್ಕೂ ಸತ್ಯ ನೋಡಾ.

ಇಂತಪ್ಪ ಮಂತ್ರ ಮೂರ್ತಿ ಆ ಶಿವನಂ ಸೃಷ್ಟಿಸಿ, ಆ ಪರಶಿವನ ಮಹಿಮೆಯಾ 'ಓಂ ನಮಃ ಶಿವಾಯ' ಎಂಬ ಶಿವಮಂತ್ರ ಮಹಾತ್ಮೆಯಂ ತೋರಿ ಶಿವ ಸರ್ವೋತ್ತಮತ್ತ್ವಮಂ ಸಾರಿ ನಿಂದಾತ ಪರಶಿವ ಸಾಕಾರಮೂರ್ತಿ ಬಸವರಾಜ ದೇವರು ನೋಡಾ !

ಇಂತಪ್ಪ 'ಓಂ ನಮಃ ಶಿವಾಯ' ಶಿವಮಂತ್ರದಾ ಶಿವತತ್ತ್ವರತ್ನಂಗಳೆಲ್ಲವೂ ಈ ಅನಾದಿ ಶರಣ ಬಸವತತ್ತ್ವಸಾಗರದೊಳ್ ಹುದುಗಿರ್ದವು ನೋಡಾ !

'ಓಂ ನಮಃ ಶಿವಾಯ' ಈ ಶಿವಮಂತ್ರರಹಸ್ಯಾರ್ಥವನೆಲ್ಲವಂ ಒಳಗೊಂಡಿಪ್ಪಾ 'ಶ್ರೀ ಗುರು ಗುರುಬಸವಲಿಂಗಾಯ ನಮಃ' 'ಬಸವ ಮಂತ್ರ' ಮಹಾತ್ಮೈ ನೋಡಾ !

---

**ವಿ.ಸೂಚನೆ:-** ದಿ-20-9-1990ರಂದು "ಬಸವಾವತಾರಿ" ಪರಮಪೂಜ್ಯ ಡಾ|| ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳು, ಸಿದ್ಧಗಂಗಾ ಅವರ ಕೃಪಾಶೀರ್ವಾದವಾಗಿ "ಕನ್ನಡ ಕವಿ ಕಾಳಿದಾಸರ ಸಾಹಿತ್ಯ ಸೇವೆಯನ್ನು ಗುರುತಿಸಿ ಕಳಿಸಲಾದ 180 ರೂ ಬೆಳಗಾವಿ ವಿಜಯಬ್ಯಾಂಕಿನ ಡ್ರಾಫ್ಟನ್ನು ತುಂಬುಹೃದಯದಿಂದ ಸ್ವೀಕರಿಸಲಾಗಿದೆ. ಪರಮ ಪೂಜ್ಯ ಶ್ರೀಗಳವರು 'ವಿಶ್ವಧರ್ಮ ಸಂಸ್ಥೆಯ ನಿರ್ಮಾಪಕರಾಗಿ ಹಲವಾರು ವಿದ್ಯಾಸಂಸ್ಥೆಗಳನ್ನು ನಡೆಯಿಸುತ್ತಾ ಸರ್ವಧರ್ಮಸಮನ್ವಯಾತ್ಮಕ ದೃಷ್ಟಿಯಿಂದ ನಿತ್ಯವೂ ಹತ್ತಾರು ಸಾವಿರ ಸಂಖ್ಯೆಯಲ್ಲಿ ವಿದ್ಯಾರ್ಥಿ ವೃಂದವನ್ನು ಮಾತೃ ವಾತ್ಸಲ್ಯ ಪೂರಿತ ಹೃದಯರಾಗಿ ಕಾಪಾಡುತ್ತ ಬಂದಿರುವುದು ನಮ್ಮ ನಾಡು ಹಾಗೂ ಭಾರತ ಮಾತ್ರವಲ್ಲ ಇಡಿಯ ವಿಶ್ವದ ಭಾಗ್ಯವೆಂದೇ ಹೇಳಬೇಕು. ಶ್ರೀ ಶ್ರೀ ಗಳವರು ಕೈಗೊಂಡ ಈ ಮಹಾಮಣಿಹವು ಪೂರ್ತಿಯಾಗಲೆಂದೂ, ಮನುಕುಲಕೆ ಆ ವಿಭೂತಿಗಳ ಕೃಪೆಯಿಂದ ಸುಖ ಸಮೃದ್ಧಿಯುಂಟಾಗಲೆಂದೂ ಹಾರೈಸಿ ಪೂಜ್ಯರ ಪಾದಕಮಲಗಳಲ್ಲಿ ಅನಂತ ಕೋಟಿ ಪ್ರಣಾಮಗಳನ್ನು ಸಲ್ಲಿಸಲಾಗಿದೆ.

‘ ಶ್ರೀ ಗುರು ಬಸವಲಿಂಗಾಯ ನಮಃ ’ ವ್ಯಾಖ್ಯೆ ಇಂತು:

ಶ್ರೀ—ಷಡ್ಗುಣೈಶ್ವರ್ಯಯುಕ್ತವಾದ ಸಂಪತ್ಕರವನುಳ್ಳಂಥ
ಗುರು—ಪರಮಪೂಜ್ಯ ಪ್ರಭು ಮುಕ್ತಿಪ್ರದಾಯಕನಾದಂಥ
ಬಸವ—‘ಬ’ ಕಾರವೆ ಭವಹರ ಗುರು, ‘ಸ’ಕಾರವೆ ಸಕಲ ಚೈತನಾತ್ಮಕ ಲಿಂಗವು
‘ವ’ ಕಾರವೆ ವಚಿಸುವುದಕ್ಕೆ ಕಾರಣವಾದ ಮಹಾನುಭಾವ ಮೂರ್ತಿಯಪ್ಪ
ಜಂಗಮವು. ಇಂತೀ ‘ ಗುರು ಲಿಂಗ ಜಂಗಮ ’ ಸ್ವರೂಪವಾದ
ಲಿಂಗ—ಲಯಗಮನಂಗಳಿಗಾಲಯವಾದ ಮಹಾಲಿಂಗವು’
ಅಯ—ಅಂತಪ್ಪ ಇಷ್ಟಸ್ವರೂಪವಾದಾತನೇ ಬಸವೇಶ್ವರನು.
ಅಂತಹ ಸಂಗನ ಬಸವೇಶ್ವರ ಸ್ವಾಮಿಗಳೆಂಬ ಮಹಾಜ್ಞಾನ ಗುರುತತ್ವಕ್ಕೋಸ್ಕರ,
ನಮಃ—ಸಹಜಭಕ್ತಿಭಾವಾನಂದಯುಕ್ತ ನಮಸ್ಕಾರವು.

॥ ‘ಶ್ರೀ ಗುರುಬಸವಲಿಂಗಾಯ ನಮಃ’ ॥

ಶ್ರೀ—ಐಶ್ವರಸ್ಯ ಸಮಗ್ರಸ್ಯ ವೀರ್ಯಸ್ಯಯಂಶಸಃ ಶ್ರಿಯಃ।
ಜ್ಞಾನ ವೈರಾಗ್ಯಯೋಶ್ಚೈವಷಣ್ಣಾಂಭಗಇತೀರಿತಃ ॥
**ಗುರು**—ಗುಕಾರಸ್ತ್ವರೂಪಂಚ ರುಕಾರೋ ಮಮರೂಪಕಃ।
ಉಭಯೋಸ್ಸಂಗ ಸೌಖ್ಯಂಚಗುರೋರ್ವರ್ಣಂಜಪೇತ್ಸುಧೀಃ ॥
**ಗುಕಾರಸ್ತ್ರೈಲವರ್ತಂ** ಚರುಕಾರಂ ಜ್ವಲನಸ್ಮೃತಃ।
ದ್ವಯೋರ್ಯೋಗ ಪ್ರಭಾವೇಣ ಸ್ವಯಂಜ್ಯೋತಿರ್ಗುರು ಸ್ಮೃತಃ ॥
ನಮುಕ್ತಿರ್ನಚ ಧರ್ಮಶ್ಚನ ಪುಣ್ಯಂಚನ ಪಾಪಕಂ।
ನಕರ್ಮ ಜನ್ಮನಶ್ಚೈವ ಗುರುಪಾದ ನಿರೀಕ್ಷಣಾತ್ ॥
ಗುರುದೇವೋ ಮಹಾದೇವೋ ಗುರುದೇವಸ್ಸದಾಶಿವಃ।
ಗುರುದೈವಾತ್ಪರಂ ನಾಸ್ತಿತಸ್ಮೈ ಶ್ರೀ ಗುರುವೇ ನಮಃ ॥
ಅವಾಚ್ಯಾತ್ಮ ಸ್ವರೂಪಾಯ ಶಿವಭಾವ ಪ್ರದಾಯಿನೇ।
ನಮಸ್ಸದ್ಗುರುನಾಥಾಯ ಷಟ್‌ಸ್ಥಲ ಬ್ರಹ್ಮಮೂರ್ತಯೇ ॥
ಧ್ಯಾನಮೂಲಂ ಗುರೋ ಮೂರ್ತಿಃ ಪೂಜಾಮೂಲಂ ಗುರೋಃಪದಂ।
ಮಂತ್ರಮೂಲಂ ಗುರೋರ್ವಾಕ್ಯಂ ಮುಕ್ತಿಮೂಲಂ ಗುರೋಃ ಕೃಪಾ ॥

**ಬಸವ**—ಬಕಾರೋ ಗುರುರೂಪಂ ಚ ಸಕಾರೋ ಲಿಂಗರೂಪಕಃ ।
ವಕಾರೋ ಚರ ರೂಪಂಚ ತ್ರಿವಿಧಂ ಬಸವಾಕ್ಷರಂ ॥
ಬಕಾರೋ ನಾದರೂಪಂ ಚ ಸಕಾರೋ ಬಿಂದು ರೂಪಕಃ ।
ಕಲಾರೂಪಂ ವಕಾರಶ್ಚ ತ್ರಿವಿಧಂ ಬಸವಾಹ್ವಯಂ ॥
ಬಕಾರೋ ಸತ್ವರೂಪಂ ಚ ಸಕಾರೋ ಚಿತ್ಸ್ವರೂಪಕಃ ।
ಆನಂದತ್ವಂ ವಕಾರಶ್ಚ ತ್ರಿವಿಧಂ ಲಕ್ಷಣಂ ಶಿವೇ ॥ ಎಂಬುದೀಗ,
**ಲಿಂಗ**—ಲಿಕಾರೋ ಲಯಸಂಪ್ರೋಕ್ತೋಗಕಾರಃ ಸೃಷ್ಟಿರೇವಚ।
ಲಯನಾದ್ಗಮನಾಚ್ಚೈವ ಲಿಂಗಾಕಾರ ಇಹೋಚ್ಯತೇ ॥
ಲೀಯತೇ ಗಮ್ಯತೇಯತ್ರ ಏತಸ್ಸರ್ವಂ ಚಾರಚರಂ ।
ತದೇತಲ್ಲಿಂಗ ಮಿತ್ಯಾಹುರ್ಲಿಂಗತತ್ತ್ವ ಪರಾಯಣಾಃ ॥
ಆಕಾಶಂ ಲಿಂಗಮಿತ್ಯಾಹುಃ ಪೃಥ್ವೀತ ಸ್ಯಾದಿ ಪೀಠಿಕಾ ।
ಆಲಯಂ ಸರ್ವಭೂತಾನಾಂ ಲಿಂಗಾಕಾರ ಇಹೋಚ್ಯತೇ ॥
ಲಿಂಗಮಧ್ಯೇ ಜಗತಿ ಸರ್ವಂ ತ್ರೈಲೋಕ್ಯಂ ಸಚರಾಚರಂ ।
ಲಿಂಗಬಾಹ್ಯಾತ್ ಪರಂ ನಾಸ್ತಿತಸ್ಮಾತ್ ಲಿಂಗಂಪ್ರಪೂಜಯಲತ್॥ ಎಂಬುದೀಗ
**ಅಯ**—ಇಷ್ಟ ಸ್ವರೂಪವಾದಾತನೇ ಸಂಗನ ಬಸವೇಶ್ವರನು. ಅಂತಪ್ಪ ಸಂಗನ ಬಸವೇಶ್ವರ ಸ್ವಾಮಿಗಳೆಂಬ ಮಹಾಜ್ಞಾನ ಗುರು ತತ್ತ್ವಕ್ಕೋಸ್ಕರ, **ನಮಃ**—ನಮಸ್ಕಾರವೆಂದು ಈ ಶಾಸ್ತ್ರದ ಪ್ರಥಮ ಪ್ರಾರಂಭದಲ್ಲಿ ಪ್ರಮಥಾಚಾರ್ಯರು ಸಹಜ ಭಕ್ತಿ ಭಾವಾನಂದದಿಂ ಗುರು ನಮಸ್ಕಾರವ ಮಾಡಿ ಉದ್ಧರಿಸಿ ನಿರೂಪಿಸಿರ್ಪರು ಎಂಬುದೀಗ ಶ್ರೀ ಗುರುಬಸವಲಿಂಗಾಯ ನಮಃ ಎಂಬ ಬಸವ ಮಂತ್ರ ಮಹಾತ್ಮ್ಯೆಯ ವಿಶೇಷಾರ್ಥ. ಇಂತು ಮಹಾಜ್ಞಾನ ಗುರು ತತ್ತ್ವಸ್ವರೂಪ ನಾಗಿಪ್ಪ ಬಸವ ಮಂತ್ರ ಮಹಾತ್ಮ್ಯೆ ಯಿದುಕಾಣಾ ಶ್ರೀ ಶೈಲ ಮಲ್ಲಿಕಾರ್ಜುನ !

## ಶ್ರೀ ಗುರುಬಸವ ಲಿಂಗ ಲೀಲೆ!

(ಕಾವ್ಯ ಕಾಮಧೇನು)

ನ. ವೃ॥ "ಶರಣ ಮಧ್ಯೇ ಲಿಂಗ ಸಕಳಂ" ಲಿಂಗಮಧ್ಯೇ ಜಗತ್ ಸರ್ವಂ
ಶರಣ ಗುರುಃಲಿಂಗ ಜಂಗಮ ಭರಿತಂ ಚರಣ ಜಳ ಪ್ರಸಾದ ಹೃದಯಂ ॥
ಶರಣ ಬ್ರಹ್ಮಾಂಡಗತಂ ಸೃಷ್ಟಿಯುತ್ಪತ್ತಿಲಯ ಕಾರಣ ಪುರುಷಂ ।
ಶರಣ ನಿರಂಜನ ಬಸವಂ ಅನಾದಿ ಶರಣ ಪರಶಿವಂ ಪ್ರಭುವಂ ॥

—"ಧರ್ಮಜ್ಞ" ಕವಿಕೃತ "ಶ್ರೀ ಬಸವರಾಜ ದರ್ಶನಂ"
(ಮಹಾಛಂದಸ್ಸಿನ ಕಾವ್ಯ)

(ಲಿಂಗವು ತನ್ನ ಗರ್ಭದಲ್ಲಿ ಚರಾಚರಾತ್ಮಕವಾದ ಸಕಲ ವಿಶ್ವವನ್ನೇ ಇರಿಸಿಕೊಂಡಿದ್ದು ಶಿವಸ್ವರೂಪವಾಗಿ ಪೂರ್ಣವೆನಿಸಿದೆ. ಆದರೆ ಇಂತಹ ಮಹಾಲಿಂಗವನ್ನೇ ತನ್ನ ಹೃತ್ಕಮಲ ಮಧ್ಯದಲ್ಲಿರಿಸಿಕೊಂಡ ಅನಾದಿ ಶರಣ ಬಸವೇಶ್ವರನು ಗುರುಲಿಂಗ ಜಂಗಮ ಸ್ವರೂಪನೂ ಪ್ರಸಾದ ಹೃದಯನೂ ಬ್ರಹ್ಮಾಂಡವನ್ನೇ ವ್ಯಾಪಿಸಿದವನೂ ಸಕಲ ಸೃಷ್ಟಿಯುತ್ಪತ್ತಿಲಯ ಕಾರಣ ಪುರುಷನೂ ಎನಿಸಿ ಪರಶಿವಜ್ಞಾನ ಜ್ಯೋತಿ ಯೆನಿಸಿದ್ದಾನೆ.)

1. ಸೂಚನೆ:- 'ಶ್ರೀ ಗುರು ಬಸವಲಿಂಗಾಯ ನಮಃ' ಎಂಬ ಮಂತ್ರಾರ್ಥವನ್ನು ವಿವರಿಸುವಲ್ಲಿ- ಶ್ರೀ ಎಂ. ಎಂ. ಕಲಬುರ್ಗಿ ಅವರಿಂದ ಸಂಪಾದಿತವಾದ 'ಬಸವಣ್ಣನವರ ಲೇಕಿನ ವಚನಗಳು (ಸಂಪುಟ-೧) ಎಂಬೀಗ್ರಂಥದ ಸಹಾಯ್ಯವನ್ನು ನಾವು ಪಡೆದುಕೊಂಡುದಕ್ಕಾಗಿ ಅವರಿಗೆ ನಮ್ಮ ಕೃತಜ್ಞತೆಯ ವಂದನೆಗಳು.

---

2, ದಿ-20-9-1990ರಂದು ಇಲ್ಲಿನ 'ಅನುಪಮ ಪ್ರಕಾಶನದವರಿಂದ ಗ್ರಂಥಗಳ ಬಿಡುಗಡೆ ಸಮಾರಂಭ ಹಾಗೂ ನಾಡಿನ ಗಣ್ಯರಿಗೆ ಸನ್ಮಾನ ನಡೆಯಿತು. ದಿವ್ಯಸನ್ನಿಧಿ ' ಅಲ್ಲಮಪ್ರಭುವಪರಾವತಾರಿ ' ಡಾ॥ ಜ. ಚ. ನಿ. ನೇತೃತ್ವ : ಶ್ರೀಶೈಲ ಸಾರಂಗಮಠದ ಶ್ರೀ ಪರಮ ಶಿವರಾಜ ದೇಶಿಕೇಂದ್ರ ಮಹಾಸ್ವಾಮಿಗಳವರು ವಹಿಸಿದ್ದರು. ಡಾ॥ ಜಿ. ಎಸ್, ಸಿದ್ಧಲಿಂಗಯ್ಯನವರ ಅಧ್ಯಕ್ಷತೆಯಲ್ಲಿ; ಡಾ॥ ಆರ್ ಸಿ. ಹಿರೇಮಠ ಅವರು ಉದ್ಘಾಟಕರಾಗಿಯೂ, ಮುಖ್ಯ ಅತಿಥಿಗಳಾಗಿ ಡಾ॥ ಸಿದ್ಧಯ್ಯಪುರಾಣಿಕ, "ಕನ್ನಡ ಕವಿ ಕಾಳಿದಾಸ" ಶ್ರೀ ಮೋಟಗಿ ಮಲ್ಲಿಕಾರ್ಜುನರೂ ಆಗಮಿಸಿದ್ದರು. ಗ್ರಂಥಗಳ ಬಿಡುಗಡೆ ಶ್ರೀ ಮಹಾದೇವ ಬಣಕಾರ, ಶ್ರೀಮತಿ ಶಾಂತಾದೇವಿ ಮಾಳವಾಡ, ಶ್ರೀ ಎಸ್. ಎಂ. ವೀರಭದ್ರಯ್ಯ, ಸಿದ್ಧರಾಜ ಪೂಜಾರಿ ಮೊದಲಾದವರು ಬಿಡುಗಡೆ ಮಾಡಿದರು. ಡಾ॥ ಜ. ಚ. ನಿ. ಅವರ 'ಜೀವನ ಸಿದ್ಧಾಂತ' ಗ್ರಂಥ ರತ್ನಗಳನ್ನು ಆನೆಯ ಮೇಲಿರಿಸಿ ಉತ್ಸವವು ಶ್ರೀ ಶಿವಯೋಗಿಗಳವರ ಗಚ್ಚಿನ ಮಠದಿಂದ ಕವಿಸಾಹಿತಿಗಳನ್ನು ಅನೇಕ ಕಾರು ಜೀಪು ಮೊದಲಾದ ವಾಹನಗಳಲ್ಲಿ ಕೂಡ್ರಿಸಿಕೊಂಡು ಒಳ್ಳೇ ವೈಭವದಿಂದ ಹೊರಟು ಎಸ್. ಎಂ. ಎಸ್. ಕಾಲೇಜದ ಕಲ್ಯಾಣಮಂಟಪಕ್ಕೆ ಬರಲಾಯಿತು. ಅಲ್ಲಿಯೇ ಕಾರ್ಯಕ್ರಮ ನಡೆಯಿತು ಡಾ॥ ಆರ್. ಸಿ, ಹಿರೇಮಠ ಮತ್ತು ಸಿದ್ಧಯ್ಯ ಪುರಾಣಿಕ "ಕನ್ನಡ ಕವಿ ಕಾಳಿದಾಸ" ಮೊದಲಾದ ಗಣ್ಯಸಾಹಿತಿ ಕವಿಕಲಾವಿದರೆಲ್ಲರಿಗೂ ಶಾಲು ಹೊದಿಸಿ ಸತ್ಕರಿಸಲಾಯಿತು. ಪೂಜ್ಯ ಡಾ॥ ಜ. ಚ ನಿ. ಅವರ ಎರಡು ದಿವಸಗಳ ವಾಸ್ತವ್ಯ ನಮ್ಮಲ್ಲಿಯೇ ಆಯಿತು. ಡಾ॥ ಜ. ಚ. ನಿ. ಅವರ ಕೃತಿರತ್ನ ಪ್ರತಿಸ್ವಾತಂತ್ರದ ವಚನಕಾವ್ಯ 'ಮಾದೇವಿ' "ಕನ್ನಡ ಕವಿಕಾಳಿದಾಸ'' ರಿಂದ ಸಂಗ್ರಹಿಸಲಾದ ಈ ಸಂಪಾದನಾ ಕೃತಿಕುಸುಮ ಪೂಜ್ಯ ಜ. ಚ. ನಿ. ಅವರಿಂದಲೇ ಪ್ರಕಾಶಿತವಾಗಿ ಇಷ್ಟರಲ್ಲಿಯೇ ಹೊರಬರಲಿದೆ. ಶ್ರೀಗಳವರ ಶಿವಧರ್ಮ ಸಾಹಿತ್ಯ ಸೇವೆ ಅಪಾರ! ಅನುಪಮ! ಅನಂತ! ಅವರ್ಣನೀಯ! ಶ್ರೀ ಶ್ರೀ ಗಳವರು ಇನ್ನೂ ನೂರುಕಾಲ ನಮ್ಮೊಳಿದ್ದು ಮಾನವ ಕುಲಕೋಟಿಯನ್ನು ಉದ್ಧರಿಸುವಂತಾಗಲೆಂದು ಶ್ರೀ ಬಸವಾದಿ ಪ್ರಮಥರಲ್ಲಿ ಭಕ್ತಿಯಿಂದ ಪ್ರಾರ್ಥಿಸುತ್ತೇನೆ ವಂದನೆಗಳೊಂದಿಗೆ.

# ಕಡಿಮೆ ಹಣ ಖರ್ಚು ಮಾಡಿ

# ಹೆಚ್ಚು ಬಟ್ಟೆಗಳನ್ನು ಒಗೆಯಿರಿ.

- ಇದೀಗ ನೀವು ಸಾಬೂನಿಗೆ ಕಡಿಮೆ ಹಣ ಖರ್ಚು ಮಾಡಿ ಹೆಚ್ಚು ಬಟ್ಟೆಗಳನ್ನು ಒಗೆಯಬಹುದು.
- ಕಸ್ತೂರಿ ನೀಲಂ ಹಾಗೂ ಕಸ್ತೂರಿ ಬಾರ್ ಸೋಪ್ ಉಪಯೋಗಿಸುವುದರಿಂದ ಇದು ಸಾಧ್ಯ.
- ಕಸ್ತೂರಿ ಸಾಬೂನುಗಳು ಬಹು ಉಳಿತಾಯಕರವಾದುದು ಅಲ್ಲದೆ, ಪ್ರತಿ ಬಾರ್ ಸೋಪಿನಿಂದಲೂ ಹೆಚ್ಚು ಬಾರಿ ಒಗೆಯಲು ಸಾಧ್ಯವಾಗುತ್ತದೆ.
- ಇದರಲ್ಲಿ ವಿಶೇಷ ಡಿಟರ್ಜೆಂಟುಗಳು ಮಿಶ್ರಿತವಾಗಿರುವುದರಿಂದ ನಿಮ್ಮ ಉಡುಪುಗಳು ಬಿಳುಪಿಗಿಂತಲೂ ಅತ್ಯಧಿಕ ಉಜ್ವಲವಾಗಿರುತ್ತವೆ.

ಕಸ್ತೂರಿ ಸಾಬೂನುಗಳನ್ನು ಇಂದೇ ಉಪಯೋಗಿಸಿರಿ

‘ಕಸ್ತೂರಿ’ ಬಾರ್ ಸೋಪ್

‘ಕಸ್ತೂರಿ’ ನೀಲಂ ಬಾರ್ ಸೋಪ್

ತಯಾರಕರು :

ರಾಮಕೃಷ್ಣ ಆಯಿಲ್ ಮಿಲ್, ತುಮಕೂರು

# ಮಾನವ ಪ್ರೇಮ ( ಚಿಂತನ )

ಜಿ.ಶಾರದಾರಾಜಶೇಖರ್ : 847, 4ನೇ ಮುಖ್ಯರಸ್ತೆ, ವಿಜಯನಗರ, ಬೆಂಗಳೂರು-40

ಜಗತ್ತನ್ನೆಲ್ಲ ಗೆದ್ದು ಆತ್ಮವನ್ನೇ ಕಳೆದುಕೊಂಡರೆ, ನಮ್ಮ ದೃಢಕಲ್ಪನೆಗಳನ್ನೇ ಬಲಿಕೊಟ್ಟ ಜಗತ್ತಿನೊಂದಿಗೆ ಶಾಂತಿಯನ್ನು ಕೊಂಡರೆ ಅದರಿಂದ ಪ್ರಯೋಜನ ವಿಲ್ಲ-ವೆಂದು ಏಸು ಹೇಳುತ್ತಾನೆ. ಆಂತರಿಕ ಶಥ್ಯತೆ, ಆಧ್ಯಾತ್ಮಿಕ ನಿಚ್ಚಳ ಇವು ಮುಖ್ಯ, ಪಾಶ್ಚಾತ್ಯ ಧರ್ಮದ ಹೆಚ್ಚಳವೇನೆಂದರೆ ವ್ಯಕ್ತಿಯು ಇತರರಿಗೆ ಮಾಡುವ ಸೇವೆಯಲ್ಲಿ ತನ್ನ ಮುಕ್ತಿಯನ್ನು ಗಳಿಸಿಕೊಳ್ಳುತ್ತಾನೆ. ದೈವದೊಂದಿಗೆ ನಿಕಟಸಂಪರ್ಕ ಪಡೆಯಲು ಏಕಾಂತ ವಾಸಕ್ಕೆ ಹೊಂಟರೆ ಸಾಲದು. ಧರ್ಮವು ಜೀವನಾತೀತವಾದುದು ಮಾತ್ರವಲ್ಲ ಜೀವನವನ್ನು ಪರಿವರ್ತನ ಗೊಳಿಸಬಲ್ಲದು. ದುಃಖಾರ್ತರಾದ ಜನರಸೇವೆ ಮಾಡುವುದೇ ನಿಜವಾದ ಪೂಜೆ, ಧರ್ಮವು ಪ್ರತಿಯೊಬ್ಬ ಮನುಷ್ಯನ ಆತ್ಮವೂ ಅಪಾರವಾದ ಮೌಲ್ಯ-ವುಳ್ಳದ್ದು ಎಂದು ಸಮರ್ಥಿಸುತ್ತದೆ. ಎಲ್ಲರೂ ಸಮಎನ್ನುವ ಆನಂದಾತಿರೇಕದ ಅರಿವು ಮನುಷ್ಯರ ನಡುವೆ ಇರುವ ಭೇದ ಭಾವನೆಯನ್ನು ಮುರಿಯುತ್ತದೆ.

ನಿಜವಾದ ಧರ್ಮದಲ್ಲಿ ಇಡೀ ಮಾನವ ಜನಾಂಗವೇ ಒಂದು ಎಂಬ ಸಾಕ್ಷಾತ್ಕಾರದ ಕಲ್ಪನೆಯಿದೆ, ಅಧ್ಯಾತ್ಮಿಕ ಸಮಾಜವನ್ನು ಕಟ್ಟಲು ಧರ್ಮ ನೆರವಾಗುತ್ತದೆ. ರಾಷ್ಟ್ರ-ಖಂಡ, ದೇಶ, ಎಂದು ಬಿಡಿಸಿಲ್ಲಲಾರದು ಎಲ್ಲ ಮಾನವ ಕೋಟಿಯೂ ಇದರಲ್ಲಿ ಸೇರಬೇಕು.

ಈ ಮಾನವ ಪ್ರೇಮದಿಂದ ನಾವು ಇತರರ ನಂಬಿಕೆಗಳನ್ನು ಗೌರವಿಸಬೇಕು. ಈ ದೃಷ್ಟಿಯಲ್ಲಿ ಪೌರ್ವಾತ್ಯ ಮತಗಳು ಪಾಶ್ಚಾತ್ಯ ಮತಗಳಿಗಿಂತ ಉತ್ತಮ ವಾದುದಾಗಿವೆ. ಉಳಿದವರ ಮೇಲೆ ನಮ್ಮ ಭಾವನೆಗಳನ್ನೂ ನೀತಿಯ ನೆಲೆಗಳನ್ನು ಹೇರ ಬೇಕೆಂದು ಸಾಮಾನ್ಯ ಬಯಕೆ, ಈ ಮನೋಧರ್ಮಕ್ಕೆ ನಮ್ಮೆಲ್ಲರ ಸಹಾನುಭೂತಿಇದೆ, ಪ್ರಾಮಾ-ಣಿಕ ಕಲ್ಪನೆಯನ್ನು ತತ್ರಾಪಿ ಆ ಕಲ್ಪನೆ ಆಧ್ಯಾತ್ಮಿಕ ಪ್ರವೃತ್ತಿಗಳಿಗೆ ಸಂಬಂಧಿಸಿದಾಗ ನಾವು ತಿರಸ್ಕಾರ ಬುದ್ಧಿಯಿಂದ ಕಾಣುವುದಕ್ಕಿಂತ ಹೇಯವಾದುದು ಮತ್ತೊಂದಿಲ್ಲ, ನಾವು ಶಬ್ದಗಳಿಗೆ ದಾಸರಲ್ಲ.

ಎಲ್ಲ ದೇವಸ್ಥಾನ, ಮಸೀದಿ, ಚರ್ಚುಗಳಲ್ಲಿ ಸದ್ಭಾವನೆಯುಳ್ಳ ಎಲ್ಲ ಜನರಿಗೂ ಆಹ್ವಾನವಿರುವ ಭಗವಂತನಲ್ಲಿ ಶ್ರದ್ಧೆ ಮತ್ತು ಮಾನವನಲ್ಲಿ ಪ್ರೇಮ ಇವೇ ಪರಸ್ಪರ ಮೈತ್ರಿಗೆ, ಸೇವೆಗೆ ಅಗತ್ಯಗುಣಗಳೆನ್ನುವ, ಇಡೀ ಮಾನವ ಕೋಟಿಯೇ ಬರಿದು ಹೆಸರಿ-ಲ್ಲದಿದ್ದರೂ ಒಂದೇ ಚೈತನ್ಯದಿಂದ ಬದ್ಧವಾದಕಾಲ ಬಂದೀತು.

ಮನುಷ್ಯ ಎಂದೂ ಪ್ರೀತಿಸಬೇಕು. ತನಗೆ ದುಃಖವನ್ನುಂಟುಮಾಡಿದವನ ವಿಚಾರದಲ್ಲಿ

ೂಡ ನಿಷ್ಠುರನಾಗಿರಬಾರದು, ನಾವು ಪ್ರೀತಿಸುವಾಗ ಎಷ್ಟು ಪತಿತವಾದರೂ ಸಹ ರನ್ನು ಅವಹೇಳನ ಮಾಡುವ ಹಕ್ಕು ನಮಗಿಲ್ಲ. ನಾವು ಪ್ರೀತಿಸಿದರೆ ಅವರು ಯಾವುದನ್ನು ಮಾಡಿದರೂ ಅದು ಪ್ರಿಯವೇ, ಬಡವರನ್ನು, ದುರ್ದೈವಿಗಳನ್ನು ತಮ್ಮವರೆಂದು ಣದವರು, ತಪ್ಪಿತಸ್ಥರನ್ನು ನಿಂದಿಸುವರು, ದುರಾಚಾರಿಗಳನ್ನು ಕಡೆಗಣ್ಣಿನಿಂದ ಡು ಅವರ ಅಪರಾಧಗಳನ್ನು ವ್ಯಂಗವಾಗಿ ನೋಡುವವರು ನಿಜವಾಗಿ ಪ್ರೀತಿಸುವವರಲ್ಲ. ಗಲೇ ಪೆಟ್ಟುತಿಂದವರನ್ನು ಮತ್ತೆ ಹೊಡೆದು, ಬಿದ್ದವರನ್ನು ಮತ್ತೆ ತುಳಿದರೆ ಅದು ಪಾಷಂಡಿಗಳ ಧರ್ಮ. ಸಭ್ಯರಾದವರು ನಮ್ಮಲ್ಲಿ ಅತ್ಯಂತ ಹೀನರೆನಿಸಿ ಕೊಂಡವರ ವಿಚಾರದಲ್ಲೂ ಸಹನೆ ತೋರಿಸುತ್ತಾರೆ. ನಮ್ಮ ತಪ್ಪುಗಳನ್ನೆಲ್ಲಾ ಮನ್ನಿಸುವಷ್ಟು ನಮ್ಮನ್ನು ಗೌರವಿಸುತ್ತಾರೆ. ನಮ್ಮ ತಪ್ಪನ್ನು ಮುಚ್ಚಲು ನೂರಾರು ಕಾರಣಗಳನ್ನು ಕಲ್ಪಿಸುತ್ತಾರೆ. ಇದು ಕರ್ತವ್ಯ ದೃಷ್ಟಿಯಿಂದಲ್ಲ, ಅವರ ಸ್ವಾಭಾವಿಕ ಪ್ರೇಮದ ಫಲ ಮ್ಮ ಸಣ್ಣತನವನ್ನಾಗಲಿ ತಪ್ಪುಗಳನ್ನಾಗಲಿ ನೆನಪಿನಲ್ಲಿಟ್ಟುಕೊಳ್ಳದೆ ತಮ್ಮ ಪ್ರೀತಿಯನ್ನು ಮಗೆ ಧಾರಾಳವಾಗಿ ಕೊಟ್ಟು ನಮ್ಮಿಂದ ಏನನ್ನೂ ಪ್ರತಿಯಾಗಿ ನಿರೀಕ್ಷಿಸದೆ ಇರುತ್ತಾರೆ.

ಎಚ್ಚರ ತಪ್ಪಿದ ಒಂದು ಕೆಲಸ ಒಮ್ಮೊಮ್ಮೆ ಬಾಳನ್ನೇ ಹಾಳು ಮಾಡಬಲ್ಲದು. ಹುಚ್ಚುಕೆಲಸ ಒಮ್ಮೊಮ್ಮೆ ಮನೆತನವನ್ನು ಅವಮಾನಕ್ಕೆ ಗುರಿಮಾಡಬಲ್ಲದು ಎಂದು ಅವರು ಬಲ್ಲರು, ಹೀಗೆ ಉದಾರ ಚರಿತರು ದೊರೆಯದಿದ್ದರೆ ಜರ್ಜರಿತ ಜೀವಿಗಳು ಸೊರಗಿ ಸಾಯಬೇಕಷ್ಟೆ. ಪ್ರೀತಿಯ ವಿಚಾರದಲ್ಲಿ ಯಾರುಯಾರು ಏನೇನು ಹೇಳಿದ್ದಾರೊ ಎಲ್ಲವನ್ನೂ ಬಾಯಿಪಾಠಮಾಡಿ ಹೇಳುವುದು ಸುಲಭ, ನಮ್ಮ ಸಹಜೀವಿಗಳನ್ನು ಪ್ರೀತಿಸುವುದು ಅಷ್ಟು ಸುಲಭವಲ್ಲ, ಅವರೊಂದಿಗೆ ಸಮಾಧಾನಕರವಾದ ಸಂಬಂಧಗಳನ್ನು ಇಟ್ಟುಕೊಳ್ಳುವುದು ಕಷ್ಟ. ಪ್ರೀತಿಗೆ ಬೇಕಾದುದು ಕಲ್ಪನೆಯ ಅನ್ವೀಕ್ಷಕ ದೃಷ್ಟಿ, ಕಲ್ಪನಾಶಕ್ತಿ ಇಲ್ಲದಿದ್ದವರಿಗೆ ಅದನ್ನು ಕೊಡುವುದು ಸಾಧ್ಯವಿಲ್ಲ.

ಆತ್ಮದ ಏಕಾಂತದಲ್ಲಿ ನಾವು ಬೆಳೆಸಿಕೊಳ್ಳಬೇಕಾದ ಕಾಲ್ಪನಿಕ ಅಂತಃಕರಣ ಪ್ರೀತಿ ತಾನೇ ತಪಿಸಿ, ಪರರ ದುಃಖಕ್ಕಾಗಿ ತಪಿಸುವ ಅಂತಃಕರಣ ಅದು. ಈ ಅಂತಃಕರಣದ ಪ್ರಕಾಶದಿಂದ ನಾವು ರಿಕ್ತರಾಗಿದ್ದರೆ ನಾವು ಮನುಷ್ಯರೆ ಅಲ್ಲ, ನಿಜವಾದ ಪ್ರೀತಿಯು ಇಡೀ ವಿಶ್ವವನ್ನೇ ತನ್ನ ಊರೆಂದು ಇಡೀಮಾನವ ಜನಾಂಗವೇ ತನ್ನ ಜನರೆಂದು ಬಗೆಯುತ್ತದೆ. ಇಂಥ ಪ್ರೀತಿ ದೂರದ ಆದರ್ಶ, ವರ್ಣೀಯನನ್ನು ಅವನ ಬಂಧನದಿಂದ ಬಿಡಿಸಿ ಸ್ವತಂತ್ರನನ್ನಾಗಿ ಮಾಡುವಷ್ಟು ನಾವು ಅವನನ್ನು ನೆರೆಯವನಂತೆ ಪ್ರೀತಿಸುವುದಿಲ್ಲ. ನಮ್ಮ ಮಗಳು ಆಪತ್ತಿಗೆ ಸಿಕ್ಕಂತೆಯೆ ಬಡಪನ ಮಗಳು ಆಪತ್ತಿಗೆ ಸಿಕ್ಕರೆ ಅಷ್ಟು ನಾವು ಪರಿತಪಿಸುವುದಿಲ್ಲ, ಪ್ರೀತಿಎಂದರೆ ನಮ್ಮ ಆತ್ಮವನ್ನೇ ಬಿಟ್ಟುಕೊಡುವುದು ನಮ್ಮ ಸ್ಥಾನಮಾನಗಳನ್ನು ಬಿಡುವುದು, ಬೇರೆಯವನ ಕಣ್ಣಿಂದ ನೋಡುವುದು,ಅವನ ಹೃದಯದಿಂದ ಅನುಭವಿಸಿ, ಅವನ ಮನಸ್ಸಿನಿಂದ ಅರಿಯುವುದು.

ಸಿದ್ಧಗಂಗಾ

ಮನುಷ್ಯ ಕೇವಲ ಚಿಂತನಾ ಜೀವಿ ಎಂದು ಬಗೆದರೆ ಪ್ರಯೋಜನವಿಲ್ಲ. ಅವನ ಬುದ್ಧಿಶಕ್ತಿಯೇ ಅವನ ಸರ್ವಸ್ವವಲ್ಲ, ಬುದ್ಧಿಯಿಂದ ಮೂಡಿ ಬಂದ ಭಾವನೆ ಮನುಷ್ಯನ ಜೀವನದ ಒಳಪದರಗಳಲ್ಲಿ ಹೊಕ್ಕು ಅವನ ಜಾಗ್ರತ, ಮತ್ತು ಸುಪ್ತ ಚೇತನಗಳನ್ನು ಆಡಿಸಬೇಕು, ಮಾತು ಭಾವನೆ ಜೀವಂತವಾಗಬೇಕು.

ಸೃಷ್ಟಿ ಎನ್ನುವುದು ಮನುಷ್ಯ ತನ್ನ ವಿಚಿತ್ರ ಗೂಢ ಆತ್ಮನನ್ನೂ, ಅದರ ನಿಜವಾದ ಪ್ರವೃತ್ತಿಯನ್ನು ಅರಿಯಲು ಮಾಡುವ ಒಂದೇ ಪ್ರಯತ್ನ ಅದುವೆ ಮಾನವ ಪ್ರೇಮ.



## ಆಜೀವ ಸದಸ್ಯರುಗಳಲ್ಲಿ ಒಂದು ಮನವಿ.

ಸಿದ್ಧಗಂಗಾ ಪತ್ರಿಕೆಯ ಅನೇಕ ಆಜೀವ ಸದಸ್ಯರುಗಳ ವಿಳಾಸಗಳು ಬದಲಾಗಿರುವುದರಿಂದ ಕಾರ್ಯಾಲಯದಿಂದ ಕಳುಹಿಸಿದ ಸಂಚಿಕೆಗಳು ಕೆಲವು ಸದಸ್ಯರುಗಳಿಗೆ ತಲುಪದೆ ಹಿಂತಿರುಗುತ್ತಿವೆ. ದಯವಿಟ್ಟು ನಿಮ್ಮ ಬದಲಾದ ವಿಳಾಸಗಳನ್ನು ಆಗಿಂದಾಗ್ಗೆ ಪತ್ರಿಕಾ ಕಾರ್ಯಲಯಕ್ಕೆ ಕಳುಹಿಸಿ ಕೊಡುವುದರ ಮುಖೇನ "ಸಿದ್ಧಗಂಗಾ" ನಿಮಗೆ ಕ್ರಮವಾಗಿ ತಲುಪಲು ಸಹಕರಿಸಬೇಕಾಗಿ ಪ್ರಾರ್ಥನೆ. **ತಮ್ಮ ಸದಸ್ಯತ್ವದ ನಂಬರನ್ನು ತಪ್ಪದೇ ತಿಳಿಸಿರಿ.**

ಪ್ರಕಾಶಕರು.

# ವಿಜ್ಞಾನ ಮತ್ತು ಆಧ್ಯಾತ್ಮ

ಎಚ್. ಎಸ್. ನರಸಿಂಹ ಜೀಯರ್
ಶ್ರೀ ಬಸವೇಶ್ವರ ಆಂಗ್ಲ ಶಾಲೆ, ತುಮಕೂರು - 2

ಡಾ॥ ಎಲಿಜಬೆತ್ ಕುಬ್ಲರ್ ರಾಸ್ ಎಂಬುವರು ಮಾನವ ಜೀವನ ಅಂತ್ಯವಾದ ಮೇಲೆ ಮತ್ತೆ ಜೀವನವಿದೆ ಎಂದಿದ್ದಾರೆ. ಅವರ ವಾಣಿಯಲ್ಲಿಯೇ ಹೇಳುವುದಾದರೆ "It is not a matter of belief or opinion, I know beyond a shadow of doubt that there is life after death" ಎಂದಿದ್ದಾರೆ. ಇಷ್ಟೊಂದು ಖಚಿತವಾಗಿ ಅವರು ಹೇಳಬೇಕಾದರೆ ಅದರಿಗೆ ಇದರ ಸತ್ಯ ಹೊಳೆದಿರಬೇಕು. ನಮ್ಮ ದೇಶದ ಆಧ್ಯಾತ್ಮ ಜೀವಿಗಳೆಲ್ಲರೂ ಇದೇ ಅಭಿಪ್ರಾಯ ಹೊಂದಿದ್ದಾರೆ. ವೇದ, ಶೃತಿ ಹಾಗೂ ಸ್ಮೃತಿಗಳೂ ಇದನ್ನೇಸಾರಿವೆ. ಇದಕ್ಕೇನಾದರೂ ವೈಜ್ಞಾನಿಕ ಆಧಾರ ಇದೆಯೆ? ಈ ವಿಚಾರದಲ್ಲಿ ಸಂಶೋಧನೆ ನಡೆದಿದೆಯೆ? ಇದಕ್ಕೆ ಸಬಂಧಿಸಿದಂತೆ ನಡೆದಿರುವ ಇತ್ತೀಚಿನ ಘಟನೆಯನ್ನು ಪರಿಶೀಲಿಸೋಣ.

ಈ ಘಟನೆಯು ಕಾಲ್ಪನಿಕವಲ್ಲ. ಇದರ ವಿವರಗಳು 1975ನೆಯ ಇಸವಿ ಮೇ ತಿಂಗಳಿನ "ರೀಡರ್ಸ್ ಡೈಜೆಸ್ಟ್" ನಲ್ಲಿ ಪ್ರಕಟವಾಗಿದೆ. ಈ ಪತ್ರಿಕೆಯು ಅಮೇರಿಕಾದಿಂದ ಪ್ರಕಟವಾಗುವ ಮಾಸಪತ್ರಿಕೆ. ಸಹಸ್ರಾರು ಜನರು ತಮ್ಮ ಕಣ್ಣಿನಿಂದ ನೋಡಿ, ಉಪಕೃತರಾದ ಘಟನೆ ಇದು. ಬ್ರೆಜಿಲ್ ದೇಶದ ಒಬ್ಬ ಬಡ ರೈತ. ಈತ ಸಾಮಾನ್ಯ ಹಳ್ಳಿಗ. ಇವನೊಬ್ಬ ಮಹಾ ಸರ್ಜನ್ ಆಗಿ ಪರಿವರ್ತನೆಗೊಂಡ. ಈತನು ಯಾವ ವೈದ್ಯಕೀಯವ್ಯಾಸಂಗ ಮಾಡಿದವನಲ್ಲ. ಯಾವತರಬೇತಿಯನ್ನು ಪಡೆದವನಲ್ಲ. ಆಧುನಿಕ ಉಪಕರಣಗಳ ಸಹಾಯವಿಲ್ಲದೆ ಕೇವಲ ಅಡಿಗೆಯಮನೆಯ ಚಾಕುವಿನಿಂದಲೇ ಅಸಂಖ್ಯ ಆಪರೇಷನ್ ಮಾಡಿದ. ಇವನಿಂದ ಅನೇಕ ಕುರುಡರು ಕಣ್ಣು ಪಡೆದರು, ಕುಂಟರು ಕಾಲುಗಳನ್ನು ಪಡೆದರು. ದೇಹದೊಳಗಿನ ಗೆಡ್ಡೆಗಳನ್ನೂ, ಗ್ರಂಥಿಗಳನ್ನು ಕ್ಷಣಾರ್ಧದಲ್ಲಿ ಕೊಯ್ದು ಹಾಕುತ್ತಿದ್ದ. ರಿಯೋಡಿ ಜನ್ಯೆರೋ ಪ್ರದೇಶದ ಡಾಕ್ಟರರೂ ಪೌಲೋ ವಿಶ್ವವಿದ್ಯಾಲಯದ ಮತ್ತು ಮೆಡಿಕಲ್ ಆಕ್ಯಾಡೆಮಿಯ ವೈದ್ಯರುಗಳೂ ಅವನ ಶಸ್ತ್ರ ಚಿಕಿತ್ಸಾ ವಿಧಾನವನ್ನು ಪ್ರತ್ಯಕ್ಷವಾಗಿ ಪರಿಶೀಲಿಸಿ ಮೂಕವಿಸ್ಮಿತರಾದರು. ಹೆಚ್ಚು ಓದು ಬರಹ ಬಾರದ ಈತ ಸರಸರನೆ ಔಷಧ ಸೂಚಿಸುವ ಚೀಟಿಗಳನ್ನೂ ಬರೆದು ಕೊಡುತ್ತಿದ್ದ. ಅವನು ಮಾಡಿದ ಎಲ್ಲಾ ಶಸ್ತ್ರಚಿಕಿತ್ಸೆಗಳೂ ಯಶಸ್ವಿಯಾದುದನ್ನು ಕಂಡು ವೈದ್ಯರ ತಂಡದವರು ಆಶ್ಚರ್ಯ ಚಕಿತರಾದರು. ಅಮೆರಿಕಾದ ಪ್ರಸಿದ್ಧ ಡಾ॥ ಪುರಾಹಿಚ್ ಎಂಬುವರು ಸ್ವತಃ ತಾವೇ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡುದೇ ಅಲ್ಲದೆ ಫೋಟೋ

ಗಳನ್ನು ತೆಗೆದಿರಿಸಿಕೊಂಡು ಅವನ ಸಾಮರ್ಥ್ಯಕ್ಕೆ ಸಾಕ್ಷಿಯಾದರು. ಅವನು ಮಾಡಿದ ನೂರಾರು ಶಸ್ತ್ರ ಚಿಕಿತ್ಸೆಗಳು ಅವರಿಗೆ ಒಗಟೇ ಆಗಿತ್ತು.

ಆತನ ಹೆಸರು ಜಿ. ಅರ್ರಿಗೋ. ಬಡ ಹಳ್ಳಿಗನಾದರೂ ಇತರರ ದುಃಖ ಸಂಕಟಗಳಿಗೆ ಮರುಗುವ ಮನೋಭಾವವುಳ್ಳವನು. ಇದೊಂದೇ ಅವನ ಸೇವೆಗೆ ಪ್ರೇರಕಶಕ್ತಿ. ಈತನ ಚಿಕಿತ್ಸಾಲಯದ ಹೆಸರು "ನಜರೇತಿನ ಯೇಸು ಸ್ವಾಮಿಯ ಆಧ್ಯಾತ್ಮಿಕ ಕೇಂದ್ರ" ಎಂದು. 1955 ನೆಯ ಇಸವಿಯಿಂದ 1971 ನೆಯ ಇಸವಿಯವರೆಗೆ ಈ ಶಸ್ತ್ರಚಿಕಿತ್ಸೆ ಕಾಯಕ ನಡೆಸುತ್ತಿದ್ದ. ಪ್ರತಿದಿನ ಬೆಳಿಗ್ಗೆ 6 ಗಂಟೆಗೆ ತನ್ನ ಆಧ್ಯಾತ್ಮಿಕ ಕೇಂದ್ರದಲ್ಲಿ ಹಾಜರಾಗುತ್ತಿದ್ದ. ಆತ ಪ್ರಾರ್ಥನೆ ಸಲ್ಲಿಸಿ ಅಣಿಯಾಗುವಾಗ ಅವನು ಹಳ್ಳಿಯ ರೈತನಾಗದೆ ಪ್ರಸಿದ್ಧ ತಜ್ಞ ಡಾಕ್ಟರಾಗುತ್ತಿದ್ದ ಜರ್ಮನ್ ಭಾಷೆಯನ್ನು ಸ್ವಲ್ಪವೂ ಅರಿಯದ ಈತ ಜರ್ಮನ್ ಮಿಶ್ರಿತ ಪೋರ್ಚುಗೀಸ್ ಭಾಷೆಯಲ್ಲಿ ನಿರರ್ಗಳವಾಗಿ ಮಾತನಾಡುತ್ತಿದ್ದ. ಸರಕಾರದ ಅನುಮತಿ ಇಲ್ಲದೆ ಔಷಧಿ ನೀಡುವುದನ್ನು, ಶಸ್ತ್ರ ಚಿಕಿತ್ಸೆ ಮಾಡುವುದನ್ನು ಕ್ರೈಸ್ತ ಸಂಪ್ರದಾಯದ ಧರ್ಮಗುರುಗಳು ವಿರೋಧಿಸಿ ಅವನನ್ನು ಜೈಲಿಗೆ ಹಾಕಿಸಿದರು. ಇತನಲ್ಲಿ ಉದ್ಯೋಗಕ್ಕೆ ಬೇಕಾದ ಅನುಮತಿಯೊಂದಿರಲಿಲ್ಲವೇ ವಿನಹ ಮತ್ಯಾವ ದೋಷವೂ ಇವನಲ್ಲಿ ಕಂಡುಬರಲಿಲ್ಲ. ಎಲ್ಲಾ ಚಿಕಿತ್ಸೆಗಳೂ ಫಲಕಾರಿಯಾಗಿದ್ದವು. ಇವನು ಜೈಲಿನಲ್ಲಿದ್ದಾಗ ಇವನಿಂದ ಉಪಕಾರ ಹೊಂದಿದ ಸಹಸ್ರಾರು ಜನರು ಎಂಟು ಲಕ್ಷದ ನಲವತ್ತು ಸಾವಿರ ಡಾಲರ್ ಸಂಗ್ರಹಿಸಿ ಅವನಿಗೆ ಕಳುಹಿಸಿದರು. ಆದನ್ನು ತಿರಸ್ಕರಿಸಿದ. ಏಕೆಂದರೆ ಯಾವ ಚಿಕಿತ್ಸೆಗೂ ಇವನು ಹಣ ಪಡೆಯುತ್ತಿರಲಿಲ್ಲ.

ಈತನು 1971 ನೆಯ ಜನವರಿ 11 ನೇ ದಿನಾಂಕ ರಸ್ತೆಯ ಅಪಘಾತ ಒಂದರಲ್ಲಿ ಅಸುನೀಗಿದ. ಈತನ ಅಂತಿಮ ಯಾತ್ರೆಯಲ್ಲಿ ಸಹಸ್ರ ಜನಪಾಲ್ಗೊಂಡು ಇವನಿಗೆ ಶ್ರದ್ಧಾಂಜಲಿ ಅರ್ಪಿಸಿದರು

ಈ ಅದ್ಭುತ ಶಕ್ತಿಯ ರಹಸ್ಯವೇನು ? ಎಂಬುದಾಗಿ ಅವನನ್ನು ಕೇಳಿದಾಗ ಅವನ ಉತ್ತರ ಈ ರೀತಿ ಇತ್ತು. "ರಾತ್ರಿ ಹೊತ್ತು ವೈದ್ಯಕೀಯ ಉಡುಪನ್ನು ಧರಿಸಿದ್ಧ ವ್ಯಕ್ತಿಯೊಬ್ಬನು ಆಗಾಗ ನನಗೆ ಕಾಣಿಸಿಕೊಳ್ಳುತ್ತಿದ್ದ." ಆತ ಇತರ ಕೆಲವು ತಜ್ಞ ಡಾಕ್ಟರ್‌ರೊಂದಿಗೆ ಚರ್ಚಿಸುತ್ತಾ ಅಸಾಧ್ಯವೆಂದು ತೋರಿದ ರೋಗ-ಗಳನ್ನು ಗುಣಪಡಿಸಲು ಶಸ್ತ್ರ ಚಿಕಿತ್ಸೆಗೆ ಸಜ್ಜಾಗುತ್ತಿದ್ದ. ಕೊನೆಗೆ ಆ ಡಾಕ್ಟರ್ ತಾನು ಯಾರೆಂಬುದನ್ನೂ ತಿಳಿಸಿದ.— "ನನ್ನ ಹೆಸರು ಡಾ॥ ಫ್ರಿಟ್ಸ್ ಎಂದು ಎರಡನೆ ಮಹಾಯುದ್ದದ ಸಮಯ, ಸರ್ಜನ್ ಆಗಿ ಸೇವೆ ಸಲ್ಲಿಸುತ್ತಿರುವಾಗಲೇ ಮಡಿದ ನನಗೆ ಸಂಕಟಗ್ರಸ್ಥರಾದ ರೋಗಿಗಳ ಸೇವೆ ಮಾಡಬೇಕೆಂಬ ತೀವ್ರ ಹಂಬಲವಿದೆ. ನನಗೆ ದೇಹವಿಲ್ಲದಿದ್ದರೂ ವ್ಯಕ್ತಿತ್ವ, ಸ್ಮೃತಿ, ದಕ್ಷತೆಗಳನ್ನು ನಾನು

ಕಳೆದುಕೊಂಡಿಲ್ಲ. ಹಾಗಾಗಿ ನಾನು ನಿನ್ನ ದೇಹದ ಮೂಲಕ ರೋಗಿಗಳಿಗೆ ಶಸ್ತ್ರ ಚಿಕಿತ್ಸೆ ಮತ್ತು ಔಷಧ ಸೇವನೆಗೆ ನಿರ್ದೇಶನ ನೀಡುವೆ"— ಎಂಬುದಾಗಿ ತಿಳಿಸಿ ತಾನುಯಾರೆಂಬುದನ್ನ ತನ್ನ ಉದ್ದೇಶವೇನೆಂಬುದನ್ನೂ ಪ್ರಕಟಿಸಿದ" ಎಂಬುದಾಗಿ ಆರ್ಹಿಗೊ ತಿಳಿಸಿದ. ಡಾ|| ಫ್ರಿಟ್ಸ್‌ನ ವ್ಯಕ್ತಿತ್ವ ಈ ಆರ್ಹಿಗೋನಲ್ಲಿ ಆವಾಹಿತನಾದಾಗ ತಾನು ಯಾರು ಏನು ಮಾಡುತ್ತಿದ್ದೇನೆಂಬ ಅರಿವು ಅವನಿಗಿರುತ್ತಿರಲಿಲ್ಲ. ನಡೆ, ನುಡಿ, ಆಚಾರ ಹಾಗೂ ವಿಚಾರಗಳಲ್ಲೂ ಪೂರ್ಣ ರೀತಿಯ ಬದಲಾವಣೆ ಆರ್ಹಿಗೋನಲ್ಲಿ ಕಂಡು ಬರುತ್ತಿತ್ತು.

ಈ ಘಟನೆ ಆಕಸ್ಮಿಕ ಘಟನೆ ಎಂದು ಯಾರು ತಳ್ಳಿಹಾಕುವಂತಿಲ್ಲ. ಅನೇಕ ವೈದ್ಯಕೀಯ ತಂಡದವರನ್ನೆ ಬೆರಗುಗೊಳಿಸಿದ ಜೀವಂತ ಒಗಟು. ಇಂತಹ ಅನೇಕ ಘಟನೆಗಳು ಆಗಾಗ್ಗೆ ವಿಶ್ವದ ಅನೇಕ ಕಡೆ ನಡೆಯುತ್ತಲೇ ಇವೆ. ಇವೆಲ್ಲ ಆಕಸ್ಮಿಕ ಘಟನೆಗಳಲ್ಲ. ಇವುಗಳನ್ನೆಲ್ಲಾ ಪರಿಶೀಲಿಸಿಯೇ ಡಾ|| ಎ. ಕೆ. ದಾಸ್‌ರವರು ಖಚಿತವಾಗಿ "ಜೀವನ ಅಂತ್ಯವಾದ ಮೇಲೆ ಮತ್ತೆ ಜೀವನವಿದೆ" ಎಂದು ತಿಳಿಸಿದ್ದಾರೆ. ವಿಜ್ಞಾನದಲ್ಲಿ ಇಂಹ ಘಟನೆಗಳಿಗೆ ಸದ್ಯಕ್ಕೆ ಉತ್ತರವಿಲ್ಲದಿದ್ದರೂ ಆಧ್ಯಾತ್ಮದಲ್ಲಿ ಉತ್ತರವಿದೆ.

ಇಂತಹ ವಿಚಾರಗಳ ಬಗ್ಗೆ ವಿಜ್ಞಾನ ಇನ್ನೂ ಹೆಚ್ಚು ಹೆಚ್ಚು ಅರಿಯಬೇಕಾಗಿದೆ ಎಂದು ಜೆ. ಜಿ. ಫುಲ್ಲರ್‌ರವರು ಈ ರೀತಿ ಹೇಳಿದ್ದಾರೆ. "Science has much more to learn specially in area of Para-normal which has not been scratehed yet"

ಆದ್ದರಿಂದ ವಿಜ್ಞಾನವು ಇನ್ನೂ ಶೋಧನೆ ಮಾಡದೆ ಇರುವ ಅನೇಕ ವಿಚಾರಗಳು ವಿಶ್ವದಲ್ಲಿ ಅಡಗಿವೆ ಎಂಬುದನ್ನು ನಾವೆಲ್ಲರೂ ಅರಿಯಬೇಕು. ಆಧ್ಯಾತ್ಮ ವಿಚಾರಗಳಲ್ಲಿ ಇಂತಹ ಕೆಲವು ಸಮಸ್ಯೆಗಳಿಗೆ ಉತ್ತರವನ್ನು ಕಾಣಬಹುದಾಗಿದೆ. ಸರ್ವರೂ ಸರ್ವ ವಿಷಯಗಳಲ್ಲಿಯೂ ಸರ್ವಜ್ಞರಾಗಿರುವುದು ಅಸಾಧ್ಯವೇ ಸರಿ. ಪ್ರಯುಕ್ತ ನಮಗೆ ತಿಳಿಯದ ವಿಚಾರಗಳಲ್ಲಿ ಅನಾವಶ್ಯಕ ಟೀಕೆ ಮಾಡದೆ ನಾವೆಲ್ಲರೂ ತತ್ವಜ್ಞಾನಿಯಾದ ಕನ್‌ಫ್ಯೂಶಿಯಸ್ ಹೇಳಿರುವ ಬುದ್ಧಿಮಾತನ್ನು ಅರಿತು ಅದರಂತೆ ನಡೆಯುವುದು ಒಳ್ಳೆಯ ತನವಲ್ಲವೇ ? ಅವನು ಈ ರೀತಿ ಹೇಳಿದ್ದಾನೆ.

"Admit that you do not know what you do not Know and that is Knowledge"

— Confusius.

ಕೃತಜ್ಞತೆ :- ಶ್ರೀ ಜಗದಾತ್ಮನಂದರ "ಬದುಕಲು ಕಲಿಯಿರಿ"

# ಸಿದ್ಧಗಂಗಾ ಮಠದ ಪ್ರತಿಭೆ

ಗೋವಿಂದರಾಜು, ಟಿ. ಮಾಕೇನಹಳ್ಳಿ,
ವರಸೀಪುರ ಅಂಚೆ, ನೆಲಮಂಗಲ ತಾಲ್ಲೂಕು, ಬೆಂಗಳೂರು ಜಿಲ್ಲೆ.

ಜೀವನ ಜ್ಯೋತಿಯ ಬಾಳಲಿ ಬೆಳಗುತ
ನಮಿಸಿರಿ ಶಿವನ ಪಾದಕ್ಕೆ
ಒಮ್ಮನಸಿಂದಲಿ ಸರ್ವರು ಬಾಳುತ
ಸಿದ್ಧಗಂಗೆಯ ಕೀರುತಿ ಚೆಲ್ಲಿರಿ ಲೋಕಕ್ಕೆ
ಅರಳಿದ ಹೂವನು ಮಾಲೆಯ ವರ್ಣದಿ
ಅರ್ಪಿಸಿ ಶಿವನ ಲಿಂಗಕ್ಕೆ
ಪ್ರಗತಿಯ ಪಥವನು ಪಾವನಗೊಳಿಸಲು
ಶಿವಧ್ಯಾನದಿ ಧಾವಿಸಿ ಮಾರ್ಗಕ್ಕೆ
ಸಕಲಾವತಾರದಿ ಲೋಕವ ರಕ್ಷಿಪ
ಶಿವನ ತೀರ್ಥವ ಸೇವಿಸಿ ದಾಹಕ್ಕೆ
ಶಿಕ್ಷಣ ದಾರಿಯು ಶಿವನೆಲೆಯಲ್ಲಿಯೆ
ಪ್ರಗತಿಯ ಹೆಚ್ಚಿಸಿ ನಿಲಯಕ್ಕೆ
ಸತ್ಯದಿ ಸ್ವಾಮಿಯ ನಿತ್ಯವು ಸ್ಮರಿಸುತ
ಮುಕ್ತಿಯ ಬಯಸಿರಿ ಜೀವಕ್ಕೆ
ಕೀರುತಿ ಮಾತಿಗೆ ಸ್ಫೂರುತಿಯಿಂದಲಿ
ಸತ್ಯದಿ ಎರಗಿರಿ ಶಿವಕುಮಾರ ಸ್ವಾಮಿಯ ಚರಣಕ್ಕೆ

# ವಿದ್ಯಾರ್ಥಿ ನಿಲಯ

ಬಿ. ಬಿ. ಚನ್ನಬಸಪ್ಪ, ಬಸವ ಪ್ರಸಾದ, ಶಂಖರ ಮಠ, ಕ್ರಾಸ್ ಕಿಲ್ಲೆ, ಮೈಸೂರು.

## ಪ್ರಬಂಧ

ಮಾನವನಿಗೆ ಮಾತ್ರ ನಿಲಯವೆ? ಮೃಗ ಪಕ್ಷಿಗಳಿಗೂ ಬೇಕು. ಬಹಳ ಆಳವಾಗಿ ಆಲೋಚಿಸಿದರೆ ಸಸ್ಯಗಳಿಗೂ ಬೇಕು. ಹುಲಿ, ಸಿಂಹ, ಚಿರತೆಗಳಿಗೆ ಕಾಡುಗಳಲ್ಲಿ ಸಾಮಾನ್ಯವಾಗಿ ಗುಹೆಗಳು – ಆನೆಗಳಿಗೆ ಬಿದುರಿನ ನೀರಿವ ಆಶ್ರಯದ ತಾಣಗಳು ಇನ್ನಿತರ ಮೃಗಗಳಿಗೆ ಬಂಡೆಯು ಮತ್ತು ಕೊರಚಿನ ಪ್ರದೇಶಗಳು – ಪಕ್ಷಿಗಳಿಗೆ ಗೂಡುಗಳು – ಸಾಕು ಪ್ರಾಣಿಗಳಿಗೆ ಮೃಗಾಲಯ ಮತ್ತು ಒಡೆಯನ ಮನೆ ಮೊದಲಾದುವುಗಳು ನಿಲಯಗಳು ಎಂದು ಹೇಳಬಹುದು!

ಮಾನವ ತನ್ನ ಬದುಕಿನ ಕಾಲವನ್ನು, ಕೌಮಾರ, ಬ್ರಹ್ಮಚಾರಿ, ಗೃಹಸ್ತ, ವಾನಪ್ರಸ್ತ, ಸನ್ಯಾಸಿಗಳಾಗಿ ವಿಭಾಗಿಸಿಕೊಂಡಿರುವನು ಕೌಮಾರ ಮಾತಾ ಪಿತೃಗಳ ಆರೈಕೆ, ಬ್ರಹ್ಮಚರ್ಯಾಶ್ರಮವೆಯು ವಿದ್ಯಾರ್ಥಿಯು ಅಶ್ರಮ.

ಈ ವಿಧ್ಯಾರ್ಥಿಯ ಆಶ್ರಮವೇ ಬಹಳ ಪ್ರಾಮುಖ್ಯ. ಮುಂದಿನ ಬದುಕಿಗೆ ತಳಹದಿಯು. ಆ ಕಾಲದ ಆತನ ನಿಲುವೇ ದಾರಿಯ ದೀಪ. ಇಲ್ಲಿ ಸಲ್ಲುವ ವಿದ್ಯಾರ್ಥಿಯು ಅಲ್ಲಿಯೂ ಅಂದರೆ ಮುಂದಿನ ಜೀವನದಲ್ಲಿಯೂ ಸಲ್ಲುತ್ತಾನೆ - ಮಾನವ ಅನ್ನಿಸಿಕೊಳ್ಳುವನು. ಸಲ್ಲದಿದ್ದರೆ ಮಾನವರೂ ದನ, ಪಶುಅನ್ನಿಸಿಕೊಳ್ಳುವನು "ವಿದ್ಯಾವಿಹೀನಂ ಪಶು" ಎಂಬುದಾಗಿ ಪ್ರಾಜ್ಞರು ಟಿಸ್ಸೆ ಒತ್ತಿದ್ದಾರೆ. ಇದು ಸತ್ಯ. ನಮ್ಮ ಈಗಿನ ಸ್ವತಂತ್ರ ಭರತ ಭೂಮಿಯಲ್ಲಿ ಸುಮಾರು 85/– ಕೋಟಿ ಜನರಿರುವರು. ನಾಗರೀಕ ದೇಶಗಳಲ್ಲಿ ಇದೂ ಕೂಡ ಒಂದಾಗಿದೆ.

"ವಿದ್ಯಾದತಿ, ವಿನಯಂ। ವಿನಯಂ, ಪಾತ್ರತಾಂ।
ಪಾತ್ರತಾಂ, ಧನ ಸಮುಚ್ಛವೈ॥

ನಮ್ಮ ಈಗಿನ 85 / ಕೋಟಿ ಅದರಲ್ಲಿ ಮೊದಲಾಗಿ ಬ್ರಹ್ಮಚರ್ಯಾಶ್ರವಿಗಳು (ವಿದ್ಯಾರ್ಥಿಗಳು) ತಿಳಿಯಲೇಬೇಕು. ಒಬ್ಬಾತನು ಸುಖವಾಗಿರುವುದನ್ನು ನೋಡಿ ಸಂತೋಷಪಡಬಹುದು. ಕೆಟ್ಟು ಬೀದಿಪಾಲು ಆಗುವುದನ್ನು ನೋಡಿ ಸಹಿಸಲಾಗುವುದಿಲ್ಲ

ಪಂಪ, ಜನ್ನ – ರನ್ನ ; ಹರಿಹರ – ರಾಘವಾಂಕ; ವಾಲ್ಮೀಕಿ ವ್ಯಾಸರು ಇವರೇ ಮೊದಲಾದವರುಗಳಿಗೆ ವಿದ್ಯಾರ್ಥಿನಿಲಯಗಳು ಯಾವುದಾಗಿದ್ದವು ? ಗುರುಕುಲಾಶ್ರ

ನುಗಳು – ಗುರುಗಳ ವಾಣಿ – ಒಳ್ಳೆಯ ಪರಿಸರ ಇವು ಅವರುಗಳ ಉನ್ನತಿಗೆ ಪೂರಕ ವಾಗಿದ್ದೆ ! ಆ ವಾತಾವರಣದಿಂದ ಗುರುಗಳ ಆಶೀರ್ವಾದವಂ ಪಡೆದು ಹೊರ ಬಂದವ ರಲ್ಲಿ, ಯಾರೂ ಕಳಪೆಯಾಗಲಿಲ್ಲ. ಅವರುಗಳ ನಿಲಯಗಳು ಅವೇ ಆಗಿದ್ದವು. ಈಗ

ಸ್ವತಂತ್ರ ಭಾರತವಲ್ಲವೆ ? ಯಾವುದಕ್ಕೆ ಸ್ವಾತಂತ್ರ ? ಮುಖ್ಯವಾಗಿ ರಾಜಕೀಯಕ್ಕೆ. ವಿದ್ಯಾರ್ಥಿ ನಿಲಯಗಳಿಗೆ ಸ್ವಾತಂತ್ರ ಹೇಗಿರಬೇಕು ? ಇದು ಬಹಳ ಜಟಿಲವಾದ ಪ್ರಶ್ನೆ !

ವಿದ್ಯಾರ್ಥಿ ನಿಲಯಗಳೆ ಸರಸ್ವತಿಯ ನಿಲಯಗಳು. ಸದಾ ಅಲ್ಲಿ ಸರಸ್ವತಿ ಯನ್ನು ಆರಾಧಿಸಬೇಕು. ಆರಾಧಿಸುವ ನಿಲಯ ಯಾವ ವಾತಾವರಣದಲ್ಲಿರಬೇಕು ?

ಪ್ರಶಾಂತವಾದ ವಾತಾವರಣ. ಊರ ಜಂಜಡಕ್ಕೆ ದೂರ. ಸುತ್ತಲೂ ಪ್ರಕೃತಿಯ ದೃಶ್ಯ. ಸಾರ್ವಜನಿಕರ ವಾಹನಗಳ ಶಬ್ದ ಇರಬಾರದು. ಸಂಬಂಧಪಟ್ಟ ವಾಹನಗಳು ಮಾತ್ರ ಪ್ರವೇಶಕ್ಕೆ ರಹದಾರಿ. ಕಾರ್ಖಾನೆಗಳ ಗೊಂದಲ ಕನಸಾಗಿರ ಬೇಕು. ಸಮೀಪದಲ್ಲಿ ಹೋಟೆಲು, ಸಿನಿಮಾ ಮತ್ತು ಅಂಗಡಿಗಳು ಏಕೆ ?

ಸುಮಾರು 70 ವರ್ಷಗಳ ಹಿಂದೆ ನಾನು ಕಂಡ ದೃಶ್ಯ ನನ್ನ ಹೃದ ಯದಲ್ಲಿ ಹಚ್ಚ ಹಸಿರಾಗಿರುವುದು. ಸುಮಾರು ಸಾಯಂಕಾಲ 6½ ಗಂಟೆ ಸಮಯ ಇರಬಹುದು. ಈಗ ರಂಜಿಸುತ್ತಿರುವ ಮಹಾರಾಜ ಕಾಲೇಜಿನ ಸಮೀಪ ಹೋಗು ತ್ತಿದ್ದೆ. ಆ ಹಾಸ್ಟಲಿನ ಕಡೆ ತಿರುಗಿ ನೋಡಿದೆ. ಪ್ರತಿಯೊಂದು ರೂಮಿನಲ್ಲಿ ದೀಪ ವಿದ್ಯಾರ್ಥಿಯು ಕುರ್ಚಿಯಲ್ಲಿ ಕುಳಿತು ವ್ಯಾಸಂಗಿಯಾಗಿರುವನು. ನಿಶ್ಯಬ್ದ ಕೆಲ ರೂಮಿನಲ್ಲಿ 2 - 3 ಮಂದಿ ವ್ಯಾಸಂಗಿಗಳು ಅವರಪಾಠಗಳಲ್ಲಿ ಕಂಡು ಬರುತ್ತಿರುವ ತೊಡರುಗಳ ವಿಚಾರವಾಗಿ ವ್ಯಾಖ್ಯಾನಮಾಡುವ ವಾಡಿಕೆ ಮಾರನೆಯ ದಿನ ನಮ್ಮ ರೂಮಿನ ಸಹಪಾಠಿಯಿಂದ ತಿಳಿಯಬಂದಿತು.

ಮನೆಯಲ್ಲಿ ಮಾತಾ ಪಿತೃಗಳ ಮೇಲ್ವಿಚಾರಣೆ ನಿಲಯದ ಮೇಲ್ವಿಚಾರ ಕರು ಆ ಕಾಲಕ್ಕೆ ಮಾತಾ ಪಿತೃಗಳ ನಿಲುವನ್ನು ಪಡೆದು ಆ ಮಕ್ಕಳನ್ನು ನೋಡಿಕೊಳ್ಳುವರು. ಈ ಸಂಗತಿಗೆ ನಿದರ್ಶನ ಕೊಡುವುದಾದರೆ ಬೆಂಗಳೂರಿನಲ್ಲಿ ಕೈಲಾಸವಾಸಿಗಳಾದ ಶ್ರೀ ಮತ್ತು ಶ್ರೀಮತಿ ನೆಶ್ಯದ ಅಂಗಡಿ ಸಿದ್ಧರಾಮಣ್ಣ ದಂಪತಿಗಳು ತಮ್ಮ ಮನೆಯಲ್ಲಿಯೇ ವಿದ್ಯಾರ್ಥಿಗಳಿಗೆ ಪ್ರಸಾದವನ್ನು ನೀಡುತ್ತಿ ದುದುರ ಶ್ಲಾಘನೀಯ. ಕೈ|| ಗು|| ಮರಿಮಲ್ಲಪ್ಪನವರೂ ಕೂಡ ತಮ್ಮ ಸ್ವಂತ ಮನೆಯಲ್ಲಿಯೇ ವಿದ್ಯಾರ್ಥಿಗಳಿಗೆ ಊಟದ ಏರ್ಪಾಡು. ಹೀಗೆ ನೋಡುತ್ತಾ ಹೋದರೆ ಎಲೆಮರೆ ಕಾಯಿಯಂತೆ ಅನೇಕ ಮಹನೀಯರುಗಳು ನಾಡಿನ ನಾನಾ ಭಾಗಗಳಲ್ಲಿ ಕಂಡುಬರುವರು

ಈಗ ಕೆಲ ಮಠಗಳು ಈ ವಿಚಾರದಲ್ಲಿ ಬಾವುಟವನ್ನು ದಿಗಂತದ ಅತಿ ಎತ್ತರಕ್ಕೆ ಏರಿಸಿ ಇಡೀ ಭರತ ಖಂಡದವರು ದರುಶನಗೈಯುತ್ತಿರುವರು. ತುಮಕೂರು ಜಿಲ್ಲೆಯ ಸಿದ್ಧಗಂಗಾ ಬೆಟ್ಟದ ಪ್ರದೇಶವೆಲ್ಲವೂ ಶ್ರೀ ಶ್ರೀ ಶಿವಕುಮಾರ ಸ್ವಾಮಿಜೀಯವರ ನಿಷ್ಠೆಯ ಶಕ್ತಿಯಿಂದ ವಿದ್ಯಾರ್ಥಿಗಳ ನಿಲಯಗಳಲ್ಲದೆ ವಿದ್ಯಾಪೀಠಗಳಾಗಿ ರಂಜಿಸುತ್ತಿರುವುದು. ಪೂರ್ವದ ಋಷ್ಯಾಶ್ರಮದ ದೃಶ್ಯವನ್ನು ತರುತ್ತಿರುವುವು. ಸಹಸ್ರಾರು ವಿದ್ಯಾರ್ಥಿಗಳು ಸರಸ್ವತಿಯನ್ನು ಆರಾಧಿಸುತ್ತಿರುವರು.

ಮೈಸೂರಿನಲ್ಲಿ ಒಂದಾನೊಂದು ಕಾಲದಲ್ಲಿ ಆನೆಗಳ ಲಾಯ, ಹಸುಗಳ ಕರುಹಟ್ಟಿಗಳು ಅಸನ - ವಸನ ಜ್ಞಾನಗಳಿಟಾಣ (ವಿದ್ಯಾರ್ಥಿ ನಿಲಯ) ಗಳಾಗಿ 50-60 ಸಹಸ್ರ ವಿದ್ಯಾರ್ಥಿಗಳು ಈ ಸೌಲಭ್ಯಗಳನ್ನು ಪಡೆಯುತ್ತಿರುವರು. ಶ್ರೀ ಸಿದ್ಧಿ ಸಿದ್ಧಗಂಗಾ ಕ್ಷೇತ್ರದಲ್ಲಿ ಶ್ರೀ ಶಿವಕುಮಾರ ಸ್ವಾಮಿಗಳು – ಮೈಸೂರಿನಲ್ಲಿ ಕೈ॥ ಶ್ರೀ ಡಾ॥ ಶಿವರಾತ್ರಿ ಸ್ವಾಮಿಜೀಯವರು ಸುತ್ತೂರು ಮಠದಿಂದ ಮೈಸೂರಿಗೆದಯಮಾಡಿಸಿ ತಮ್ಮ ಲಿಂಗದ ಕರಡಿಗೆ, ಉಂಗುರಗಳನ್ನು ವಿಕ್ರಯಿಸಿ ಆರಂಭಿಸಿದ ವಿದ್ಯಾರ್ಥಿ ನಿಲಯ ಆಲದಮರದಂತೆ ಬಿಳಲಿನಂತೆ ಬೃಹದಾಕಾರವಾಗಿ ಬೆಳೆದು ತನ್ನದೇ ಆದ ವಿಶ್ವವಿದ್ಯಾಲಯ (University) ಆಗುವ ಸಂಭವವಿದೆ.

ಚಿತ್ರದುರ್ಗದ ಸಿರಿಗೆರೆ ನೋಡಿದರೆ ಸಾಕು ಅದು ವಿದ್ಯಾರ್ಥಿಗಳ ಸಿರಿಯ ಬೀಡಾಗಿದೆ. ಅದೊಂದು ಸರಸ್ವತಿಯ ದೇಗುಲಗಳ ಊರೇ ಆಗಿಹೋಗಿದೆ.

ಉತ್ತರ ಕರ್ನಾಟಕದ ಕಡೆ ನೋಡಿದರೆ ಮೂರು ಸಾವಿರಮಠದ ಶ್ರೀಗಳವರು, ಶ್ರೀ ಮೃತ್ಯುಂಜಯ ಸ್ವಾಮಿಯವರು, ಶಾರದೆಯ ಅವತಾರ ಪುರುಷರಾಗಿ ವಿದ್ಯಾರ್ಥಿಗಳಿಗೆ ಸಕಲ ಸೌಲಭ್ಯವನ್ನು ನೀಡುತ್ತಿರುವರು.

ಇವೆಲ್ಲವು ತಲೆ ಎತ್ತುವುದಕ್ಕೆ ಮೊದಲೇ ಚಿತ್ರದುರ್ಗದ ಶೂನ್ಯ ಸಿಂಹಾಸದ ಪರಂಪರೆಗೆ ಸೇರಿದ ಶ್ರೀ ಶ್ರೀ ಮುರಗಿಯವರ ವಿದ್ಯಾರ್ಥಿಗಳಾಗಿ ಈಗಲೂ ನಡೆಯುತ್ತಿರುವ ಶ್ರೀ ಮುರುಘರಾಜೇಂದ್ರ ಜಯದೇವ ಹಾಸ್ಟಲು- ಕಾಶೀಕ್ಷೇತ್ರದಲ್ಲಿರುವ ವಿದ್ಯಾರ್ಥಿಗಳ ಛತ್ರ ರಂಜಿಸುತ್ತಿರುವುವು.

ಕೊನೆಯಲ್ಲಿ ಮರೆತು ಹೋಗಿತ್ತು. ಮೈಸೂರು ಮಹಾರಾಜ ಸಂಸ್ಕೃತ ಕಾಲೇಜಿಗೆ ಇತರ ಮತದವರಿಗೆ ಅವಕಾಶವಿಲ್ಲವೆಂದು ಪ್ರಭುಗಳಿಂದ ಆಜ್ಞೆಯಾಗಲು, ಶ್ರೀ ಹೊಸಮಠದವರು ಜಾಗವನ್ನೂ, ಕೈ॥ ಗುರುಕಾರ್ ಅತ್ತಿಬಸಪ್ಪನವರು ಸಂಸ್ಕೃತ ಪಾಠಶಾಲೆಯ ಕಟ್ಟಡವನ್ನು ಕಟ್ಟಿಸಿದರು ವಿದ್ಯಾರ್ಥಿಗಳಿಗೋಸ್ಕರ. ಶತಮಾನವಾಯಿತು. ಈಗಲೂ ನಡೆದುಕೊಂಡು ಬರುತ್ತಿದೆ.!

# ಶ್ರೀ ಮದುದ್ಧಾನೇಶ್ವರ ಶತಕವು (ಮುಂದುವರೆದುದು)

ಲೋಕದೊಳು ಸಂಸಾರದಂಗಡಿ
ಯೇಕೆನಲು ಗುರುಶಿಶುವು ಗೋವ್ಗಳ
ನೇಕರತಿಥಿಗಳನ್ನು ಸೇವಿಸಿ ಭಾವಶುದ್ಧಿಯಲೀ ।
ಕಾಕುಮತಿಯಳಿದುಳಿದ ನಿಜಸುವಿ
ವೇಕನಿಧಿ ಸಂಗ್ರಹಿಸಲೆನುತರೆ
ಜೋಕೆಯರುಪಿದ ಜೀಯ ಉದ್ಧಾನೇಶದಯವಾಗೋ ॥

ನೆರಳಿನತಿಥಿಗೆ ಕೊಡಲು ಮನೆಯಿದು
ಕರುಣೆಯಡಿಗೆಯ ಮಾಡಲತಿಥಿಗೆ
ಧರಣಿಧಾನ್ಯಕೆ ಪಶುವು ಹೈನಿಗೆ ತರಳನವಸರಕೇ ।
ಸಿರಿಯು ಪಾತ್ರದಿ ದ್ಯಾನಮಾಡಲು
ಹರನು ಕೊಟ್ಟಹನೆಂದು ತಿಳಿಸಿದ
ಶರಣ ಗಾತ್ರನೆ ಜೀಯ ಉದ್ಧಾನೇಶದಯವಾಗೋ ॥

ಲೋಕದರಮನೆಯೊಳಗೆ ದೇವರ
ಚಾಕರರು ನಾವೆಮಗೆ ಪ್ರಕೃತಿಯ
ನೇಕಸಂಬಳಸಾಕು ಸಾಕೆನುವಂತೆ ದೊರೆಯುವುದೂ
ಸಾಕು ಸಾಲದ ರಾಜಜೀತಕ
ನೇಕ ಪರಿಮಿಗಿಲದದೊಳೀಜಗ
ಸಾಕಿ ಸಲಹುತ್ತಿರುವ ಉದ್ಧಾನೇಶ ದಯವಾಗೋ ॥

ಐದು ಭೂತಗಳೀ ಖಜಾನೆಗ
ಳೈದುತತ್ವವೆ ಪಂಚಲೋಹದಿ
ದೈದು ಮುಖದೊಳು ಹೊತ್ತುತಂದದನಾರು ಕಾಣದೆಲೂ ।
ಹೊದ್ದು ಮಲಗಿರೆ ಬುದ್ಧಿಗೆಟ್ಟರೆ
ನಿದ್ದೆಯೊಳಗಿರಲೊದ್ದಿ ಮುದ್ದಿಸಿ
ಗುದ್ದಿಕೊಡುತಿಹ ಸಿದ್ಧ ಉದ್ಧಾನೇಶದಯವಾಗೋ ॥

ರಾಜದುಷ್ಟರ ದಂಡಿಸುವಪರಿ
ಯೀಜಗದ ಬಹುವಿಷಯ ಚಪಲಗೆ
ರಾಜಭೋಗವ ನಿತ್ತು ಚಟಗಳು ಬಲಿತುಬೇರೂರೇ ।
ಮಾಜಿ ಸಿರಿಬಡತನ ವಿಚಿತ್ರದ
ಸೂಜಿಯಿರಿಪಕ್ಷಣ ಕ್ಷಣವು ಹಿಂಸಿಪ
ರಾಜರಾಜನೆ ಜೀಯ ಉದ್ಧಾನೇಶದಯವಾಗೋ ॥

# ರಫ್ತು ಅಭಿವೃದ್ಧಿಯಲ್ಲಿ ಮಾರಾಟ ಸಂಶೋಧನೆಯ ಪಾತ್ರ

ಡಿ. ವೆಂಕಟರಾವ್, ಎಂ.ಎ., ರೀಡರ್, ಸರ್ಕಾರಿ ಕಲಾಕಾಲೇಜ್, ಹಾಸನ.

ಭಾರತದಂತಹ ಅಭಿವೃದ್ಧಿ ಶೀಲ ರಾಷ್ಟ್ರಗಳ ಆರ್ಥಿಕ ಪುನರ್ನಿರ್ಮಾಣದಲ್ಲಿ ರಫ್ತು ವ್ಯಾಪಾರವು ಮಹತ್ವಪೂರ್ಣಸ್ಥಾನವನ್ನು ಪಡೆದುಕೊಂಡಿದೆ. ನಮ್ಮ ದೇಶದ ಸರ್ವತೋಮುಖ ಪ್ರಗತಿಯ ಸಾಧನೆಯಾಗಬೇಕಾದರೆ ವಿದೇಶಿವಿನಿಮಯ ತುಂಬಾ ಆಗತ್ಯ. ಈ ಅಗತ್ಯವನ್ನು ಸಾಧಿಸಲು ನಮಗಿರುವ ಏಕೈಕ ಮಾರ್ಗವೆಂದರೆ ರಫ್ತು ವ್ಯಾಪಾರ. ಒಂದು ದೇಶದ ಆರ್ಥಿಕ ಪುರೋಭಿವೃದ್ಧಿ ಸಾಧನೆಯ ದೃಷ್ಟಿಯಿಂದ ರಫ್ತುವ್ಯಾಪಾರದ ಪಾತ್ರ ಅಪಾರ ಆದ್ದರಿಂದಲೇ ಇತ್ತೀಚಿನ ವರ್ಷಗಳಲ್ಲಿ ಭಾರತ ದಲ್ಲಿ ರಫ್ತು ಮಾರುಕಟ್ಟೆಯ ವ್ಯಾಪ್ತಿಯನ್ನು ವಿಸ್ತರಿಸಲು ಸತತವಾಗಿ ಶ್ರಮಿಸ ಲಾಗುತ್ತಿದೆ, ಇದರ ಫಲವಾಗಿ ನಮ್ಮ ದೇಶದ ರಫ್ತುವ್ಯಾಪಾರದಲ್ಲಿ ಗಮನಾರ್ಹ ಪ್ರಮಾಣದ ಹೆಚ್ಚಳವಾಗಿದ್ದರೂ ತೃಪ್ತಿಕರ ಗುರಿಯನ್ನು ಮುಟ್ಟಿಲ್ಲ. ಈ ದಿಸೆ ಯಲ್ಲಿ ನಾವು ಇನ್ನೂ ಬಹುದೂರ ಸಾಗಬೇಕಾಗಿದೆ.

ಇದು ಪೈಪೋಟಿಯ ಯುಗ. ಇದರಿಂದಾಗಿ ಇಂದು ಸರಕುಗಳನ್ನು ಸ್ಥಳೀಯ ಅಂತರ್ದೇಶಿಯ ಮಾರುಕಟ್ಟೆಯಲ್ಲಿ ಮಾರಾಟ ಮಾಡುವುದೇ ಕಷ್ಟವಾಗಿದೆ. ಪರಿಸ್ಥಿತಿ ಹೀಗಿರುವಾಗ ಇನ್ನು ನಮ್ಮ ಸರಕುಗಳನ್ನು ದೂರದ, ಮುಂದುವರಿದ ರಾಷ್ಟ್ರಗಳ ಸ್ಪರ್ಧಾತ್ಮಕ ಮಾರುಕಟ್ಟೆಗಳಲ್ಲಿ ಮಾರಾಟಮಾಡುವುದು ಎಷ್ಟೊಂದು ದುಸ್ತರ ಎಂದು ಬೇರೆ ಹೇಳಬೇಕಾಗಿಲ್ಲ. ನಮ್ಮ ರಫ್ತುವ್ಯಾಪಾರದ ಪ್ರಮಾಣ ವನ್ನು ಹೆಚ್ಚಿಸಿ, ಅದರ ವ್ಯಾಪ್ತಿಯನ್ನು ವಿಸ್ತರಿಸಿದಾಗ ಮಾತ್ರ ನಾವು ಅಂತರ ರಾಷ್ಟ್ರೀಯ ಮಾರುಕಟ್ಟೆಯಲ್ಲಿ ದಿನೇ ದಿನೇ ಹೆಚ್ಚುತ್ತಿರುವ ತೀವ್ರ ಸ್ಪರ್ಧೆಯನ್ನು ಎದುರಿಸಬಲ್ಲೆವು, ಇದಕ್ಕಾಗಿ ನಾವು ದೇಶದ ಒಳಗೂ ಹೊರಗೂ ರಫ್ತುವ್ಯಾಪಾರ ಅಭಿವೃದ್ಧಿಗೆ ಅನುಕೂಲಕರವಾದ ವಾತಾವರಣವನ್ನು ನಿರ್ಮಿಸಬೇಕಲ್ಲದೆ, ಅಗತ್ಯ ವಾದ ಪೂರ್ವ ಸಿದ್ಧತೆಗಳನ್ನೂ ಮಾಡಿಕೊಳ್ಳಬೇಕು.

## ವಿದೇಶಿ ಮಾರು ಕಟ್ಟೆಗಳ ಬಗ್ಗೆ ಅಧ್ಯಯನ

ವಿದೇಶಿ ಮಾರುಕಟ್ಟೆಗಳಿಗೆ ನಮ್ಮ ಸರಕುಗಳನ್ನು ರಫ್ತುಮಾಡುವುದಕ್ಕೆ ಮೊದಲು, ಆ ದೇಶಗಳ ಮಾರುಕಟ್ಟೆಗಳ ಸ್ಥಿತಿ–ಗತಿಗಳ ಬಗ್ಗೆ ಆಳವಾದ ಅಧ್ಯ ಯನ ನಡೆಸುವುದು ಒಳಿತು. ಅಂದರೆ ಆ ದೇಶಗಳ ಗಿರಾಕಿಗಳ ಅಗತ್ಯಗಳ ಮತ್ತು ಬೇಡಿಕೆಗಳ ಬಗ್ಗೆ ಚೆನ್ನಾಗಿ ತಿಳಿಯಬೇಕು ಹಾಗೂ ಆ ದೇಶಗಳ ಮಾರುಕಟ್ಟೆಗಳಲ್ಲಿ ನಮ್ಮ ಸರಕುಗಳನ್ನೂ ಮಾರಾಟ ಮಾಡಬಹುದಾದ ಸಾಧ್ಯತೆಗಳ ಬಗೆಗೂ,

ಆ ಮಾರುಕಟ್ಟೆಗಳಲ್ಲಿ ನಾವು ಎದುರಿಸಬೇಕಾಗಬಹುದಾದ ಸಮಸ್ಯೆಗಳ ಬಗೆಗೂ ಅರಿಯಬೇಕು, ನಾವು ನಮ್ಮ ಸರಕುಗಳನ್ನು ವಿದೇಶಿ ಮಾರುಕಟ್ಟೆಗಳಿಗೆ ಬಿಟ್ಟನಂತರ ವಿದೇಶಿಗಿರಾಕಿಗಳು ನಮ್ಮ ಸರಕುಗಳ ಬಗ್ಗೆ ತಳೆಯುವ ಅಭಿಪ್ರಾಯ, ಪ್ರತಿ ಕ್ರಿಯೆ-ಗಳನ್ನು ಎಚ್ಚರಿಕೆಯಿಂದ ಗಮನಿಸಬೇಕು, ಒಟ್ಟಿನಲ್ಲಿ ವಿದೇಶಿ ಮಾರುಕಟ್ಟೆಗಳ ಬಗ್ಗೆ ಸ್ಥೂಲ ಪರಿಚಯ, ಆ ಮಾರುಕಟ್ಟೆಗಳಲ್ಲಿ ವ್ಯವಹರಿಸುವ ವಿಧಾನ, ರೀತಿ-ನೀತಿಗಳ ಬಗ್ಗೆ ಪರಿಶ್ರಮ--ಇವು ರಫ್ತು ವ್ಯಾಪಾರವನ್ನು ಅಭಿವೃದ್ಧಿ ಪಡಿಸುವ ಮುಖ್ಯ ಸಾಧನಗಳಾಗಿವೆ.

**ಮಾರಟ ಸಂಶೋಧನೆ:–**

ರಫ್ತು ವ್ಯಾಪಾರದ ಅಭಿವೃದ್ಧಿಯಲ್ಲಿ ಮಾರಟ ಸಂಶೋಧನೆಯ ನೆರವು ಪ್ರಮುಖ ಪಾತ್ರವಹಿಸುತ್ತದೆ. ರಫ್ತುವ್ಯಾಪಾರದಲ್ಲಿ ಗಿರಾಕಿಗೆ ಮುಖ್ಯ ಸ್ಥಾನವಿರುವುದರಿಂದ ನಮ್ಮ ವಿದೇಶಿವ್ಯಾಪಾರ ಕಾರ್ಯಕ್ರಮವು ಗಿರಾಕಿಯನ್ನೇ ಪ್ರಧಾನವಾಗಿಟ್ಟುಕೊಳ್ಳಬೇಕಾದುದು ಅಗತ್ಯ. ವಿದೇಶಿ ಗಿರಾಕಿಗಳು ವಿವಿಧ ದೇಶಗಳ ಬಗೆಬಗೆಯ ಸರಕುಗಳನ್ನು ಅವಲೋಕಿಸಿ, ತಮಗೆ ಇಷ್ಟವೆನಿಸಿದ ಸರಕನ್ನೇ ಆರಿಸಿಕೊಳ್ಳಬಹುದಾದ್ದರಿಂದ ನಾವು ಅವರ ಅಗತ್ಯಗಳನ್ನು, ಬೇಡಿಕೆಗಳನ್ನು ಎಲ್ಲ ದೃಷ್ಟಿಯಿಂದಲೂ ಸಮಗ್ರವಾಗಿ, ವಿವೇಚನಾಪೂರ್ಣವಾಗಿ ಪರಿಶೀಲಿಸಬೇಕು. ಇದರ ಬಗ್ಗೆ ಸ್ಪಷ್ಟನೆಯನ್ನ ದೊರಕಿಸಿಕೊಳ್ಳಲು, ಆಯಾ ದೇಶಗಳಲ್ಲಿ ತಜ್ಞ, ಅಭ್ಯಾಸ ಪೂರ್ಣಮಾರುಕಟ್ಟೆ ಸಮೀಕ್ಷೆಗಳನ್ನು ನಡೆಸಬೇಕು. ಇಂತಹ ಸಮೀಕ್ಷೆಗಳಿಂದ ವಿದೇಶಿ ಗಿರಾಕಿಗಳ ನಿತ್ಯಸೇವನಾ ವಿಧಾನಗಳು, ಒಲವಿನ ಪ್ರವೃತ್ತಿಗಳು, ಬೇಕು ಬೇಡಗಳು ಇವೇ ಮುಂತಾದ ಅತ್ಯಾವಶ್ಯಕ ಮಾಹಿತಿಯನ್ನು ಸಂಗ್ರಹಿಸಬಹುದು. ಅಲ್ಲದೆ, ಯಾವ ಯಾವ ದೇಶದ ಮಾರುಕಟ್ಟೆಯಲ್ಲಿ ನಮ್ಮ ದೇಶದ ಯಾವ ಯಾವ ಸರಕಿಗೆ ಬೇಡಿಕೆ ಇದೆ, ಯಾವ ಯಾವ ವಿದೇಶಿ ಮಾರುಕಟ್ಟೆಯಲ್ಲಿ ನಮ್ಮ ದೇಶದ ಸರಕುಗಳ ಮಾರಾಟವನ್ನು ಹೆಚ್ಚಿಸುವ ಸಾಧ್ಯತೆಗಳಿವೆ, ಕೆಲವೊಂದು ವಿದೇಶಿ ಮಾರುಕಟ್ಟೆಗಳಲ್ಲಿ ನಮ್ಮ ಉತ್ಪನ್ನಗಳಿಗೆ ಬೇಡಿಕೆ ಕಡಿಮೆಯಾಗಿದ್ದರೆ ಅದಕ್ಕೆ ಕಾರಣಗಳೇನು, ಅಂತಹ ಮಾರುಕಟ್ಟೆಗಳಲ್ಲಿ ನಮ್ಮ ವ್ಯಾಪಾರ ಕುದುರಿಸಿಕೊಳ್ಳಲು ನಾವು ಕೈಗೊಳ್ಳಬೇಕಾದ ಕ್ರಮಗಳು ಯಾವುವು, ಅನುಸರಿಬಹುದಾದ ನೂತನ ಮಾರಾಟ ತಂತ್ರಗಳಾವುವು – ಇವೇ ಮುಂತಾದ ಅತಿ ಮುಖ್ಯ ವಿಷಯಗಳ ಮೇಲೆ ಮಾರಾಟ ಸಮೀಕ್ಷೆಗಳು ನಿಚ್ಚಳ ಬೆಳಕು ಚೆಲ್ಲುತ್ತವೆ.

ಮಾರಾಟ ಸಮೀಕ್ಷೆಗಳು ಹೊಸ ಮಾರುಕಟ್ಟೆಗಳನ್ನು ಕಂಡು ಹಿಡಿಯುವಿಕೆಗೂ ನೆರವಾಗುತ್ತವೆ. ಗಿರಾಕಿಗಳ ಆಸೆ, ಅಭಿಲಾಷೆಗಳು ಸದಾಕಾಲವೂ ಎಂದಿನಂತೆಯೇ ಇರುವುದಿಲ್ಲ. ಕಾಲದಿಂದಕಾಲಕ್ಕೆ ಅವರ ಅಭಿರುಚಿಗಳು ಬದಲಾಗುತ್ತವೆ. ಇಂತಹ ಬದಲಾವಣೆಗಳನ್ನು ಅತಿ ಎಚ್ಚರದಿಂದ ಗಮನಿಸಿ, ಅದಕ್ಕನುಗುಣವಾಗಿ ನಮ್ಮ ಉತ್ಪಾದನಾ, ತಯಾರಿಕಾ ವಿಧಾನಗಳನ್ನು ಪರಿಷ್ಕರಿಸಿಕೊಳ್ಳಬೇಕು. ಆದ್ದರಿಂದ ಮಾರಾಟ ಸಂಶೋಧನೆಯು ಈ ಅಂಶಗಳಿಗೆ ಸಂಬಂಧಿಸಿರಬೇಕು.

ವಿದೇಶಿ ವ್ಯಾಪಾರಕ್ಕೆ ತಗುಲುವ ವೆಚ್ಚ ಅಧಿಕವಾದುದರಿಂದ ನಾವು ಹೆಚ್ಚಿನ ಎಚ್ಚರ ವಹಿಸುವುದು ಅಗತ್ಯ. ಅಂದರೆ ವಿದೇಶಿ ವ್ಯಾಪಾರದಲ್ಲಿ ನಮ್ಮ ಪರಿಮಿತ ಆರ್ಥಿಕ ಸಂಪನ್ಮೂಲಗಳ ಅಪವ್ಯಯಗಳನ್ನು ತಪ್ಪಿಸಬೇಕು, ಇದಕ್ಕಾಗಿ ತಜ್ಞ ಮಾರುಕಟ್ಟೆ ಸಮೀಕ್ಷೆಗಳ ಆಧಾರದ ಮೇಲೆ, ವಿವಿಧ ವಿದೇಶಿಮಾರುಕಟ್ಟೆಗಳ ಆಮದು ಮಾಡಿ-ಕೊಳ್ಳುವ ಸತ್ವ-ಸಾಮರ್ಥ್ಯಗಳನ್ನು ಅಳೆದು, ಅರಿಯಬೇಕು. ಯಾವ ಯಾವ ಮಾರುಕಟ್ಟೆಗಳಲ್ಲಿ ನಮ್ಮ ಉತ್ಪನ್ನಗಳ ಮಾರಾಟವನ್ನು ಹೆಚ್ಚಿಸುವ ಅವಕಾಶಗಳು, ಸಾಧ್ಯತೆಗಳು ಕಂಡುಬರುತ್ತವೆಯೋ, ಅಂತಹ ಮಾರುಕಟ್ಟೆಗಳಲ್ಲಿ ನಮ್ಮ ಮಾರಾಟ ವ್ಯವಹಾರವನ್ನು ಹೆಚ್ಚಿಸಲು ವಿಶೇಷವಾಗಿ ಪ್ರಯತ್ನಿಸಬೇಕು. ಇಂತಹ ವಾಸ್ತವಿಕ ವ್ಯವಹಾರಿಕ ತಳಹದಿಯ ಮೇಲೆ ನಮ್ಮ ರಫ್ತು ವ್ಯಾಪಾರವನ್ನು ವಿಸ್ತರಿಸಿದಲ್ಲಿ ಆರ್ಥಿಕ ಸಂಪನ್ಮೂಲಗಳ ವೃಥಾವ್ಯಯ ತಪ್ಪುತ್ತದೆ

ನಮ್ಮ ರಫ್ತು ಮಾರುಕಟ್ಟೆಯು ಕೇವಲ ವಿದೇಶಿ ಮಾರುಕಟ್ಟೆಯ ವಿಸ್ತರಣೆ ಎಂದು ಭಾವಿಸಬಾರದು, ವಿದೇಶಿ ಗ್ರಾಹಕರ ವಿಶಿಷ್ಟ ಅಗತ್ಯಗಳಿಗೆ, ಬೇಡಿಕೆಗಳಿಗೆ ಅನುಗುಣವಾಗಿಯೇ ನಮ್ಮ ಸರಕು ಸಾಮಗ್ರಿಗಳು ತಯಾರಾಗಬೇಕು. ವಿದೇಶಗಳಿಗೆ ರಫ್ತಾಗುವ ಸರಕುಗಳ ಗುಣಮಟ್ಟ, ವಿನ್ಯಾಸ, ಹಂಚಿಕೆ ವ್ಯವಸ್ಥೆ, ವಿದೇಶ ಮಾರುಕಟ್ಟೆಗಳಲ್ಲಿನ ತೀವ್ರ ಸ್ಪರ್ಧೆ ಇವೇ ಮುಂತಾದ ಅಂಶಗಳ ಬಗ್ಗೆ ಹೆಚ್ಚಿನ ಗಮನ ನೀಡಬೇಕು. ಈ ದಿಸೆಯಲ್ಲಿ ಮಾರಾಟ ಸಂಶೋಧನೆ ಉಪಯುಕ್ತ ಸೇವೆ ಸಲ್ಲಿಸಬಹುದು.

ಇತ್ತೀಚಿಗೆ ನಮ್ಮ ರಫ್ತು ವ್ಯಾಪಾರವನ್ನು ಹೆಚ್ಚಿಸಲು ಸ್ತುತ್ಯಾರ್ಹ ಪ್ರಯತ್ನ ನಡೆಸಲಾಗಿದೆ ಯಾದರೂ, ಮಾರಾಟ ಸಂಶೋಧನೆಗೆ ಹೆಚ್ಚಿನ ಪ್ರಾಶಸ್ತ್ಯ ದೊರೆತಿಲ್ಲ. ಭಾರತ ಸರಕಾರದ ವಿದೇಶಿ ವ್ಯಾಪಾರ ಸಮಿತಿ, ರಫ್ತು ಅಭಿವೃದ್ಧಿ ಮಂಡಲಿಗಳು ಈದಿಸೆಯಲ್ಲಿ ಅಷ್ಟಿಷ್ಟು ಕಾರ್ಯ ನಿರ್ವಹಿಸುತ್ತಿವೆಯಾದರೂ, ಇನ್ನೂ ಹೆಚ್ಚಿನ ಪ್ರಯತ್ನ, ವ್ಯಾಪಕವಾದ ಮಾರಾಟ ಸಂಶೋಧನಾ ಕಾರ್ಯಕ್ರಮಗಳು ಅಗತ್ಯವೆನಿಸಿವೆ. ರಫ್ತು ವ್ಯಾಪಾರ ಕ್ಷೇತ್ರದಲ್ಲಿ ಸತತವಾದ ಹಾಗೂ ಸುವ್ಯವಸ್ಥಿತ ಮಾರಾಟ ಸಂಶೋಧನೆಗೆ

ಅನುಕೂಲವಾಗುವಂತೆ, ರಫ್ತು ಮಾರುಕಟ್ಟೆ ಸಂಶೋಧನಾ ಸಂಸ್ಥೆಯೊಂದನ್ನು ಸ್ಥಾಪಿಸಿದಲ್ಲಿ ಹೆಚ್ಚಿನ ಪ್ರಯೋಜನ ಹೊಂದಬಹುದು. ವಿದೇಶಿ ವ್ಯಾಪಾರ ಸಮಿತಿಯ ಆಶ್ರದಲ್ಲಿ ಸ್ಥಾಪಿಸಬಹುದಾದ ಈ ಸಂಸ್ಥೆಯಲ್ಲಿ ಖಾಸಗಿ ರಫ್ತು ವ್ಯಾಪಾರ ಸಂಸ್ಥೆಗಳ ಪ್ರತಿನಿಧಿಗಳು, ಮಾರಾಟ ತಜ್ಞರೂ ಇರಬೇಕು ಜಗತ್ತಿನ ಪ್ರಮುಖ ವ್ಯಾಪಾರ ಕೇಂದ್ರಗಳಲ್ಲೆಲ್ಲ ಈ ಸಂಸ್ಥೆಯ ಶಾಖೆಗಳನ್ನು ತೆರೆದು, ಆ ದೇಶಗಳಲ್ಲಿರುವ ಭಾರತದ ರಾಯಭಾರ ಕಛೇರಿಗಳ ಆರ್ಥಿಕ ಶಾಖೆಗಳ ನೆರವಿನೊಂದಿಗೆ ಮಾರುಕಟ್ಟೆ ಸಮೀಕ್ಷೆ ನಡೆಸಿ, ಕಾಲ ಕಾಲಕ್ಕೆ ತಜ್ಞ, ಸಮೀಕ್ಷಾವರದಿಗಳನ್ನು ಸಿದ್ಧಪಡಿಸಿ, ಅವುಗಳನ್ನು ಎಲ್ಲ ರಫ್ತು ವ್ಯಾಪಾರೋದ್ಯಮಿಗಳಿಗೂ ಕ್ರಮವಾಗಿ ಕಳಿಸಿಕೊಡಬೇಕು. ಈ ಸಂಸ್ಥೆಯ ವತಿಯಿಂದಲೇ ಒಂದು ಸಲಹಾ ವಿಭಾಗವನ್ನು ರಚಿಸಿಕೊಂಡು' ರಫ್ತಿಗಾಗಿ ಸರಕುಗಳನ್ನು ತಯಾರಿಸುವ ಸಂಸ್ಥೆಗಳಿಗೆ, ಉದ್ಯಮಿಗಳಿಗೆ ಸೂಕ್ತ - ಸಲಹೆ - ಸೂಚನೆಗಳನ್ನು ನೀಡುವ ವ್ಯವಸ್ಥೆ ಮಾಡಬೇಕು, ಈ ಸಂಸ್ಥೆ ನಡೆಸುವ ಮಾರಾಟ ಸಂಶೋಧನಾ ಕಾರ್ಯಕ್ರಮಗಳ ಆಧಾರದ ಮೇಲೆ, ಸರ್ಕಾರವು ತನ್ನ ರಫ್ತು ವ್ಯಾಪಾರ ನೀತಿಯನ್ನು ರೂಪಿಸಿಕೊಳ್ಳಬೇಕು. ಜೊತೆಗೆ ರಫ್ತು, ವ್ಯಾಪಾರದಲ್ಲಿ ತೊಡಗಿರುವ ಖಾಸಗಿ ಸಂಸ್ಥೆಗಳಿಗೂ, ಉದ್ಯಮಿಗಳಿಗೂ ಸೂಕ್ತ ನಿರ್ದೇಶನಗಳನ್ನು ಕೊಡಬೇಕು. ಮಾರಾಟ ಸಂಶೋಧನೆಯ ಮಹತ್ವವನ್ನು ಲಕ್ಷಿಸಿ, ಇಂತಹ ಒಂದು ಸಾಂಸ್ಥಿಕ ವ್ಯವಸ್ಥೆಯನ್ನು ರೂಪಿಸುವುದು ಇಂದಿನ ದಿನಗಳಲ್ಲಿ ಅತ್ಯಗತ್ಯವಾಗಿದೆ. ರಫ್ತು ವ್ಯಾಪಾರದ ಅಭಿವೃದ್ಧಿಯಲ್ಲಿ ರಾಷ್ಟ್ರೀಯ ಮಾರಾಟ ಮಹಾಮಂಡಳಿಯ ಜವಾಬ್ದಾರಿ ಹೆಚ್ಚಿನದಾಗಿದೆ. ಆದ್ದರಿಂದ ಅದು ಮಾರಾಟ ಸಂಶೋಧನಾತ್ಮಕ ಸಮೀಕ್ಷೆಗಳನ್ನು ಆಗಿಂದಾಗ್ಗೆ ನಡೆಸುತ್ತಿರಬೇಕು. ವಿದೇಶಿ ಮಾರುಕಟ್ಟೆಗಳ ಬಗ್ಗೆ ಆಳವಾದ, ಅಭ್ಯಾಸ ಪೂರ್ಣ ಸಂಶೋಧನೆ ನಡೆಸಿ, ತನ್ನ ರಫ್ತು ಮಾರುಕಟ್ಟೆಯ ವ್ಯಾಪ್ತಿಯನ್ನು ವಿಸ್ತರಿಸಲು ಸತತವಾಗಿ ಶ್ರಮಿಸಬೇಕು. ವಿದೇಶಗಳಿಗೆ ರಫ್ತು ಮಾಡುವ ಸರಕುಗಳ ಗುಣಮಟ್ಟವನ್ನು ಕಾಪಾಡಿಕೊಳ್ಳುವ ದೃಷ್ಟಿಯಿಂದ ಮಹಾಮಂಡಳಿಯು ಗುಣ ನಿಯಂತ್ರಣ ವಿಭಾಗವೊಂದನ್ನು ರಚಿಸಿಕೊಳ್ಳಬೇಕು.

ಎಚ್.ಆರ್. ಡೆಲೆನ್ಸ್ ಪ್ರಕಾರ "ಸೇನಾಪತಿಗೆ ಸಮರ ಜ್ಞಾನ ಎಷ್ಟು ಅಗತ್ಯವೋ ವ್ಯಾಪಾರಿಗೆ, ಮಾರಾಟ ಸಂಶೋಧನೆ ಅಷ್ಟು ಅಗತ್ಯ, ಅಷ್ಟು ಉಪಯುಕ್ತ." ಆದ್ದರಿಂದ ಮಾರಾಟ ಸಂಶೋಧನೆಗಳನ್ನು ನಡೆಸಿದಲ್ಲದೆ ನಮ್ಮ ರಫ್ತು ವ್ಯಾಪಾರವು ನಿರೀಕ್ಷಿಸಿದಷ್ಟು ಮಟ್ಟಿಗೆ ಅಭಿವೃದ್ಧಿ ಹೊಂದುವುದು' ಸಾಧ್ಯವಿಲ್ಲ ಎಂಬುದನ್ನು ನಾವು ಸದಾ ನೆನಪಿನಲ್ಲಿಡಬೇಕು.

## ವಿದ್ಯಾರ್ಥಿ ಜೀವನದ ಬೆಳಕು ಸರಣಿ, ಲೇಖನ :-೨

ಲೇ|| ಬಿ.ಎಸ್. ಕೃಷ್ಣಮೂರ್ತಿ, ನಂ. 5, ಸೀತಾವಿಲಾಸರಸ್ತೆ, ಮೈಸೂರು–570 024

**ವಿದ್ಯಾರ್ಥಿಯ ಯಶಸ್ಸಿನ ಗುಟ್ಟು**:– ವಿದ್ಯಾರ್ಥಿಯ ಯಶಸ್ಸು ತಾನು ಕೈಕೊಳ್ಳುವ ಕಾರ್ಯ ಮತ್ತು ಆಚರಣೆಗಳಲ್ಲಿವೆ. ( Døn't Postpone till tomorrow what you should do tø day) ಎಂಬಂತೆ ಇಂದು ಮಾಡಬೇಕಾದ ಕಾರ್ಯವನ್ನು ಇಂದೇ ಮಾಡಿ ಮುಗಿಸು. ಏಕೆಂದರೆ ( Tomorrow may not come to your expectation) ನೀನು ನೆನಸಿಕೊಂಡಿರುವಂತೆ ನಿನ್ನ ಪಾಲಿಗೆ ನಾಳೆ ಬರದಿದ್ದೀತು! ಈ ವಾಕ್ಯವನ್ನು ಎಂದಿಗೂ ಸುಳ್ಳು ಮಾಡುವಂತಿಲ್ಲ. ನಾಳೆಯೇನೋ ಬರುತ್ತದೆ, ನಿಜ! ಆದರೆ ಇಂದು ನೀನು ನೆನಸಿ ಮಾಡಬೇಕೆಂದಿದ್ದ ಕಾರ್ಯ ನೀನು ಎಣಿಸಿದ್ದಂತೆ ಅಷ್ಟು ಪರಿಣಾಮಕಾರಿಯಾಗಿ ಬರಲಾರದು.

ನಾಳೆಯೆಂಬುದು ಹಾಳು! ಆದ್ದರಿಂದ ಇದರ ಗೂಢಾರ್ಥವನ್ನು ತಿಳಿದು, ಅಂದಂದಿನ ಕಾರ್ಯಗಳನ್ನು ನಿಲ್ಲಿಸದೆ ಅಂದಂದೇ ಮಾಡಿ ಮುಗಿಸು. ಕೆಲವರನ್ನು ಏನಾದರೂ ಕೇಳಿದರೆ ನಾಳೆಯಾಗಲಿ, ಕೊಡುತ್ತೇನೆ ಅನ್ನುವರು. ಅವರ ಅರ್ಥದಲ್ಲಿ ಕೇಳಿದ್ದನ್ನು ಕೊಡಲು ಇಷ್ಟವಿಲ್ಲದಿರಬಹುದು ಅಥವಾ ಕೊಟ್ಟರೆ ಅವರಿಂದ ಹಿಂತಿರುಗಿ ಬರುವುದಿಲ್ಲವೆಂಬ ಅನುಮಾನವೂ ಇದ್ದೀತು! ಏನೇ ಇರಲಿ, ನೆನಸಿಕೊಂಡಿದ್ದನ್ನು ಅಂದಿನ ದಿನವೇ ಮಾಡುವುದು ಹಿತಕರ. ಕಾರ್ಯ ಸಾಧನೆಗೆ ಮನಸ್ಸಿಗೆ ಹೊಳೆದ ತಕ್ಷಣ ಮಾಡಿದರೆ ಯಶಸ್ಸು ಖಂಡಿತ. ಕಾಲವನ್ನು ಅಪವ್ಯಯಮಾಡಬಾರದು. ವ್ಯರ್ಥವಾಗಿ ಕಾಲಹರಣ ಮಾಡಿದರೆ ಸಾಧಿಸಬೇಕಾಗಿದ್ದ ಕಾರ್ಯ ನಿಂತು ಕಳೆದು ಹೋದ ಕಾಲ ಹಿಂತಿರುಗಿ ಬರುವುದಿಲ್ಲ.

ಕಾಲ ಅಮೂಲ್ಯವಾದುದು. ಜೀವನದಲ್ಲಿ ಹೆಚ್ಚು ವೇಳೆ ಸಕಾಲದಲ್ಲಿ ಮಾಡದಿರುವುದೇ ಆಗಿದೆ. ಬಹಳ ಮಟ್ಟಿಗೆ ಆಲಸ್ಯ, ಸೋಮಾರಿತನ, ಧೋರಣೆ ಇವುಗಳು ಮನುಷ್ಯನಿಗೆ ಶತೃಗಳು, ಕಾಲವನ್ನು ಅಪವ್ಯಯ ಮಾಡದೆ ಯೋಚಿಸಿ ಕಾರ್ಯಗಳನ್ನು ಮಾಡಿದರೆ ಜಯವು ತಾನಾಗಿ ಸಿದ್ಧಿಸಿಜನರ ಮನರಂಜನೆ, ಸ್ನಾನ ಅಲಂಕಾ ಊಟ, ನಿದ್ದೆ, ಕಾಡಹರಟೆ ಇವುಗಳಲ್ಲಿ ಬಹಳ ವೇಳೆ ಕಳೆದು ಹೋಗುತ್ತದೆ.ಉಳಿದಿರುವ ವೇಳೆಯನ್ನಾದರೂ ಸದುಪಯೋಗ ಪಡಿಸಿಕೊಳ್ಳುವುದು ಉಚಿತ ಮಾರ್ಗ.

ಯಶಸ್ಸು ಸುಮ್ಮನೆ ಬರುವುದಿಲ್ಲ. ಇದಕ್ಕೆ ದೃಢವಾದ ಪ್ರಯತ್ನ, ನಿಶ್ಚಲವಾದ ಮನಸ್ಸು ಇರಲೇಬೇಕು. ಆಗಲೇ ಇಚ್ಛೆ ನೆರವೇರುವುದು.

# ಈ ಅಂಗಡಿಯಲ್ಲಿ ಏನೂ ಮಾರುವುದಿಲ್ಲ!

ಬಿ. ಸುಬ್ರಾಯ ಅಡಿಗ, ನಿವೃತ್ತ ಅಧ್ಯಾಪಕರು. ಸಂಡೂರು. ಬಳ್ಳಾರಿ-ಜಿಲ್ಲೆ.

ಸಾಮಾನುಗಳೇ ಇರದ ಅಂಗಡಿಗಳನ್ನು ನೀವು ಕಂಡಿರಬಹುದು. ಸಾಹುಕಾರರು ಹಾಗೂ ಅವರ ಗುಮಾಸ್ತರು ಲೆಕ್ಕದ ಪುಸ್ತಕಗಳನ್ನು ತೆರೆದು ತಮ್ಮ ಕೆಲಸ ಮಾಡು ತ್ತಿರುತ್ತಾರೆ. ಇಂಥ ಅಂಗಡಿಗಳಲ್ಲಿ ಗಿರಾಕಿಗಳು ಹೆಚ್ಚಾಗಿ ಕಾಣಸಿಗುವುದಿಲ್ಲ. ಈ ಅಂಗ ಡಿಗಳಲ್ಲಿ ಸಾಮಾನುಗಳು 'ಹೋಲ್ ಸೇಲ್' (ಥೋಕ್) ಆಗಿ ಮಾರಾಟವಾಗುತ್ತವೆ. ಆದರೆ ಸಾಮಾನುಗಳು ಬೇರೆಲ್ಲೋ ಗೋದಾಮುಗಳಲ್ಲಿರುತ್ತವೆ. ಗಿರಾಕಿ ಬಂದಾಗ ಅವನಿಂದ ಹಣಪಡೆದು ಗೋದಾಮಿನ ಮ್ಯಾನೇಜರನ ಹೆಸರಿಗೆ ಚೀಟಿ ಬರೆದು ಕೊಡು ತ್ತಾರೆ. ಆದರೆ ನಾವೀಗ ಪ್ರಸ್ತಾಪಿಸಲಿರುವ ಅಂಗಡಿಯಲ್ಲಿ ಯಾವುದೇ ಮಾರಾಟ ನಡೆಯುವುದಿಲ್ಲ. ಈ ಅಂಗಡಿ ಯಾವುದೇ ಗೋದಾಮು ಹೊಂದಿಲ್ಲ. ಹೀಗಿದ್ದರೂ ಇಲ್ಲಿ ಹಲವಾರು ಮಾರಾಟಗಾರರು (ಸೇಲ್ ಮೆನ್) ಕೆಲಸ ಮಾಡುತ್ತಾರೆ. ಇವರ ಬಳಿ ಬಿಲ್‌ಪುಸ್ತಕ ಹಾಗೂ ಕ್ಯಾಶ್‌ಮೆಮೋ ಇರುತ್ತವೆ. ಇಷ್ಟಾದರೂ ಯಾವ ಸಾಮಾನನ್ನು ಇಲ್ಲಿ ಮಾಡಲಾಗುವುದಿಲ್ಲ!

ಇದು ಪ್ರಪಂಚದಲ್ಲೇ ಅತಿ ವಿಚಿತ್ರ ಅಂಗಡಿಯಾಗಿದ್ದು ಪ್ರಾಯೋಗಿಕವಾಗಿ ಆರಂಭಿಸಲಾಯಿತು. ಪೂರ್ವ ಲಂಡನಿನಲ್ಲಿರುವ ಈ ಅಂಗಡಿಯ ಕೀರ್ತಿ ಇಂಗ್ಲೆಂಡಿನ ಮೇರೆಯನ್ನು ದಾಟಿ ವಿಶ್ವಾದ್ಯಂತ ಹರಡಿದೆ. ಇದು ಎಷ್ಟೊಂದು ಕೀರ್ತಿ ಪಡೆಯಿ ತೆಂದರೆ ಅಮೇರಿಕ, ಜರ್ಮನಿ, ಭಾರತ, ಪಾಕ್ತಿಸ್ತಾನ, ಫ್ರಾನ್ಸ್, ಟರ್ಕಿ, ಆಸ್ಟ್ರೇಲಿಯಾ, ಹಾಗೂ ನ್ಯೂಜಿಲ್ಯಾಂಡ್ ಸರಕಾರಗಳು ತಮ್ಮ ಪ್ರತಿನಿಧಿಗಳನ್ನು ಕಳುಹಿಸಿ ಈ ಅಂಗಡಿಯ ಕಾರ್ಯಪ್ರಣಾಳಿಯನ್ನರಿಯಲು ಪ್ರಯತ್ನಿಸಿದವು.

ಪೂರ್ವ ಲಂಡನ್ನಿನ ಈ ಅಂಗಡಿಯನ್ನು ಸರಾಫರ ಒಂದು ಸಂಸ್ಥೆ ನಡೆಸುತ್ತಿದೆ. ಈ ಅಂಗಡಿಯಲ್ಲಿ ದುಡಿಯುವ ನೌಕರರು ತಮ್ಮ ತಮ್ಮ ವಿಭಾಗಗಳ ಗಿರಾಕಿಗಳಿಗೆ ಸರಿಯಾದ ಸಲಹೆ ಕೊಡುತ್ತಾರೆ. ಗಿರಾಕಿಗಳು ಬಯಸುವ ವಸ್ತುಗಳು ಯಾವ ದೇಶದ ಯಾವ ಅಂಗಡಿಗಳಲ್ಲಿ ಸರಿಯಾದ ಬೆಲೆಗೆ ದೊರೆಯುವುದೆಂಬ ಮಾಹಿತಿ ನೀಡುತ್ತಾರೆ.

ಇಂದು ಎಲ್ಲೆಡೆಯಲ್ಲೂ ಅಪ್ರಾಮಾಣಿಕತೆ, ವಂಚನೆ, ದುಬಾರಿಬೆಲೆ, ಕಡಿಮೆ ತೂಕ, ಕಲಬೆರಕೆ-ಮೊದಲಾದ ದೂರುಗಳು ಕೇಳಿಬರುತ್ತಿವೆ. ಅಪ್ರಾಮಾಣಿಕತೆ ಹಾಗೂ ವಂಚನೆ - ಎಲ್ಲೆಡೆಯಲ್ಲೂ ಇವೆ. ಅವುಗಳ ಅನುಪಾತ ಮಾತ್ರ ಹೆಚ್ಚು ಕಡಿಮೆ ಇದ್ದೀತು. ಹಾಲು, ಮೊಸರು, ಬೆಣ್ಣೆ, ತುಪ್ಪ ಮೊದಲಾದವು ಕಲಬೆರಕೆಯಿಲ್ಲದೆಯೂ ಸಿಗಬಹುದು. ಆದರೆ ಕಾರು, ಹಡಗು, ವಿಮಾನ, ಯಂತ್ರ, ಪ್ರೆಸ್ ಮೊದಲಾದವುಗಳ ಖರೀದಿಯಲ್ಲಿ ಜನ ಸಾಮಾನ್ಯವಾಗಿ ಮೋಸಹೋಗುತ್ತಾರೆ. ಖೋಟಾ ವಸ್ತುಗಳ ಆಧಿಕ್ಯತದಿಂದಾಗಿ ಸಾಚಾ ವಸ್ತುಗಳ ಬಗೆಗೇ ಸಂದೇಹ ಮೂಡುತ್ತದೆ. ಪ್ರತಿಯೊಂದು ವಸ್ತುವಿನಲ್ಲೂ ಕಲಬೆರಕೆ ಕಂಡುಬರುತ್ತದೆ.

ಯುರೋಪಿನಲ್ಲಿ - ಅದರಲ್ಲೂ ಮುಖ್ಯವಾಗಿ ಇಟಲಿಯಲ್ಲಿ ಕಲಾಕೃತಿಗಳ ಮಾರಾಟದಲ್ಲಿ ದೊಡ್ಡ ಪ್ರಮಾಣದ ವಂಚನೆ ನಡೆಯುತ್ತದೆ ಎಷ್ಟೋ ಸಲ ಖೋಟಾ ನೋಟುಗಳನ್ನು ಮಾರುಕಟ್ಟೆಯಲ್ಲಿ ಚಲಾಯಿಸಿ ಬಿಡುತ್ತಾರೆ.

ಈ ಅಂಗಡಿ ಗಿರಾಕಿಗಳನ್ನು ಮರೆ ಮೋಸಗಳಿಂದ ಪಾರುಮಾಡಲೆಂದು ಅಸ್ತಿತ್ವಕ್ಕೆ ಬಂತು. ಇಲ್ಲಿ ಗಿರಾಕಿಗಳಿಗೆ ಮರೆ ಮೋಸವಿಲ್ಲದ ಅಂಗಡಿಗಳ ವಿಳಾಸಗಳನ್ನೊದಗಿಸಲಾಗುತ್ತದೆ ಗಿರಾಕಿಗಳಿಗೆ ಅಂಥ ಅಂಗಡಿಗಳಲ್ಲಿ ಕೊಂಡ ವಸ್ತುಗಳು ತೃಪ್ತಿಕರ ಎನಿಸದಿದ್ದರೆ, ಅವರು ಮಾಡಿದ ಎಲ್ಲ ವೆಚ್ಚವನ್ನು ಮರಳಿಸಲಾಗುತ್ತದೆ. ಅಂದರೆ ಸಾಮಾನುಗಳ ಬೆಲೆ, ದಾರಿಖರ್ಚು ಎಲ್ಲವೂ ಅವರಿಗೆ ಸಿಗುತ್ತದೆ.

೧೯೭೩ರಲ್ಲಿ ಪ್ರಾರಂಭವಾದ ಈ ಅಂಗಡಿ ಒಂದು ವರ್ಷದೊಳಗೇ 20 ಸಾವಿರಕ್ಕಿಂತಲೂ ಹೆಚ್ಚು ಗಿರಾಕಿಗಳನ್ನು ಹೊಂದಿತು. ಅವರೆಲ್ಲರೂ ಮೊದಲು ಈ ಅಂಗಡಿಯ ಸಲಹೆ ಪಡೆದರು ಕಾನೂನು ಕೊಳ್ಳುವುದಕ್ಕಷ್ಟೇ ಅಲ್ಲ- ನೀರು; ವಿದ್ಯುತ್, ಟೆಲಿಫೋನು, ಮಕ್ಕಳ ಶಾಲಾಫೀಜು ಕೊಡುವಿಕೆ ಮೊದಲಾದ ದೈನಂದಿನದ ಸಮಸ್ಯೆಗಳಲ್ಲೂ ಜನ ಈ ಅಂಗಡಿಯ ನೆರವು ಪಡೆದಿದ್ದಾರೆ.

ಗಿರಾಕಿಗಳಿಗೆ ಈ ರೀತಿಯ ಸಲಹೆ ನೀಡಲು ಇವರು ಪಡೆಯುವ ಫೀ ಅತ್ಯಲ್ಪ. ಆದರೆ ಇವರು ಸೂಚಿಸುವ ಕಂಪನಿ, ಫರ್ಮ್ ಅಥವಾ ವ್ಯಾಪಾರಿ ಸಂಸ್ಥೆಗಳಿಂದ ಇವರು ಸಾಕಷ್ಟು ಕಮಿಶನ್ ಪಡೆಯುತ್ತಾರೆ. “ಲಂಡನ್ ಟೈಮ್ಸ್' ದಪ್ರತಿನಿಧಿ ಈ 30 ಸಾವಿರ ಗಿರಾಕಿಗಳ ಪೈಕಿ 100 ಗಿರಾಕಿಗಳನ್ನಾರಿಸಿ ಅವರ ಅನುಭವಗಳನ್ನು ಕೇಳಿದ. ಪ್ರಯೊಬ್ಬನೂ ಈ ಅಂಗಡಿಯ ಸಲಹೆಯಿಂದ ತೃಪ್ತನಾಗಿದ್ದನೆಂದು ತಿಳಿದು ಬಂತು. ಈ ಏಜೆನ್ಸಿಯ ಮೂಲಕ ಎಷ್ಟೋ ವ್ಯಾಪಾರಿ ಸಂಸ್ಥೆಗಳ ಸಾಮಾನುಗಳ ಮಾದರಿಯನ್ನು ನೋಡುವ ಅವಕಾಶ ದೊರೆಯುತ್ತದೆ. ಇದು ನಿಜಕ್ಕೂ ಲಾಭದಾಯಕ.

ಕಟ್ಟಕಡೆಗೆ ಈ ಅಂಗಡಿಯ ಸಂಪರ್ಕ ಪಡೆಯುವ ಗಿರಾಕಿಗಳ ಸಮಸ್ಯೆಗಳ ಕೆಲ ಉದಾಹರಣೆಗಳನ್ನೂ ನೋಡಿರಿ.

"ನನ್ನ ಸೋದರ ರಷ್ಯಕ್ಕೆ ಹೋಗಿದ್ದಾನೆ. ಇಂದು ಅವನು ಸತ್ತಿದ್ದಾನೆಂದು ತಂತಿ ಬಂದಿದೆ. ನಾನೇನು ಮಾಡಲಿ,

" ನನ್ನ ಭಾರತೀಯ ಪತಿ ನನಗೆ ವಿಚ್ಛೇದನವಿತ್ತು ನನ್ನ ಮಗುವಿನೊಂದಿಗೆ ಬಹುಶಃ ಭಾರತಕ್ಕೆ ಹೋಗಿರಬೇಕು. ನಾನು ನನ್ನ ಮಗುವನ್ನೆಂತು ಪಡೆಯಲಿ!

"ನಾನೊಂದು ರೇಶ್ಮೆ ಜಮುಖಾನೆ ಕೊಳ್ಳಬೇಕಾಗಿದೆ. ನ್ಯಾಯವಾದ ಬೆಲೆಗೆ ಅಂತಹ ಈ ಕಾಸೀ ಜಮುಖಾನೆ ಎಲ್ಲಿ ಸಿಗುವುದು ?

ಈ ಬೂಟ್‌ನ್ನು ನಾನು 'ಬರ್ನ್ ಫಟ್‌ವೇರ್' ದಿಂದ ಕೊಂಡಿರುವೆ. ಮರುದಿನವೇ ಹರಿದುಹೋಯಿತು. ಫರ್ಮ ಇದನ್ನು ವಾಪಾಸು ತೆಗೆದುಕೊಳ್ಳುತ್ತಿಲ್ಲ. ಏನು ಮಾಡಲಿ ?

" ನಾನು ರೆಡಿಮೇಡ್ ಬಟ್ಟೆ (ಸಿದ್ಧಉಡುಪು) ಗಳನ್ನು ರಫ್ತು ಮಾಡಬಯಸುತ್ತೇನೆ. ಯಾವ ದೇಶವನ್ನು ನಂಬಹುದು ?

"ನಾನು ವಿಮಾನ ನಿರ್ಮಾಣದ ದೊಡ್ಡ ಕಾರ್ಖಾನೆ ತೆರೆಯಬೇಕೆಂದಿರುವೆ ನನ್ನ ಬಳಿ ಸಾಕಷ್ಟು ಬಂಡವಾಳವಿದೆ. ಆದರೆ ಈ ಬಗ್ಗೆ ಏನು ಮಾಡಬೇಕೆಂದು ನಾನರಿಯೆ" ?

" ನಾನು ಇತ್ತೀಚೆಗೆ ಭಾರತದಿಂದ ಮರಳಿದ್ದೇನೆ. ನನ್ನ ಮನೆಗೆ ಫೋನ್ ಹಾಕಿಸಿರಿ ?

" ನಾನು ಪಾಕಿಸ್ಥಾನದಿಂದ ಬಂದಿರುವೆ. ಇಲ್ಲಿ ನೌಕರಿ ಮಾಡುತ್ತಿದ್ದೇನೆ. ನನಗೆ ಮನೆ, ಕಾರು, ಫರ್ನಿಚರ್, ಫೋನ್, ರೇಡಿಯೋ, ಟಿಲಿವಿಜನ್—ಮೊದಲಾದವನ್ನು ಕಂತುಗಳಲ್ಲಿ ಕೊಡಿಸಿರಿ"

ಇಂಥ ಸಾವಿರಾರು ಪ್ರಶ್ನೆಗಳನ್ನು ಈ ಅಂಗಡಿ ಎದುರಿಸಬೇಕಾಗುತ್ತದೆ. ಆದರೆ ಯಾರೊಬ್ಬರೂ ನಿರಾಶರಾಗಿ ಮರಳುವುದಿಲ್ಲ!

(ಹಿಂದಿಯಿಂದ)

COMFORTABLE
LUXURIOUS &
PEACEFUL
**STAY**
AT
# KENCHAMBA LODGE




SUBEDAR CHATRAM ROAD CROSS
NEAR KAPALI THEATRE
GANDHINAGAR
BANGALORE-9

Ph. 27082 GRAM : KENCHMLODG

# ನಾರಿಗೆ

ಶ್ರೀಮತಿ ಮಂದಾಕಿನೀದೇವಿ,
ಜೀವನಜ್ಯೋತಿ, ಕಲ್ಯಾಣನಗರ, ಧಾರವಾಡ-580007

ಮುನ್ನಡೆದು ನೀ ನಾರಿ ಬರಬಾರದೆ ?
ಈರೆರಡು ಗೋಡೆಗಳ ಬಿಡಬಾರದೆ ?
ಮನ-ಬಂಧ ತಡೆದಡಿಯು ಇಡಬಾರದೆ ?
ಮನೆಯಿಂದ ಯುಗದೆಡೆಗೆ ನಡೆ ಬಾರದೆ ?........

ಪತಿ ನಿನ್ನ ಪಥ-ಬೆಳಕಿನಂತಾಗಿದೆ
ಸತಿಗೆ ಯುಗ-ಹಿತ ಬೇಡದಂತಾಗಿದೆ
ಪತಿ ಪ್ರೇಮವೇ ಕ್ಷೇಮವೆಂತಾಗಿದೆ
ಕೃತಯುಗದ ಸ್ಥಿತಿ ಕಾಣದಂತಾಗಿದೆ........

ಶಿಶು ನಿನ್ನದೊಂದಲ್ಲ ಸಂಸಾರಕೆ
ಕೃಶದೇಹಿ ಶಿಶು ಕೋಟಿ-ಕೂಸಾಗಿದೆ ?
ಜನ 'ಜಗದ ಜನನಿ' ಎಂದಿಹರೇತಕೆ ?
ಮನ ನಲುಮೆ-ಒಲುಮೆ ಹೊಂದಿಹುದೇತಕೆ ?........

ನಿನ್ನ ಪತಿ ಪರಮೇಶನೆಂತಾಗಿದೆ
ನಿನ್ನ ಚ್ಯುತಿ ಕೈಲಾಸದಂತಾಗಿದೆ
ಪತಿಯು ಪತಿ ಜಗಪತಿಯು ಮರೆವಾಗಿದೆ
ಪತಿ ಸಹಿತ ಮುಕುತಿಯದು ಹೊರೆಯಾಗಿದೆ........

ನಿನ್ನದೆನ್ನಲು ಧರ್ಮಕದ ಸಲ್ಲದು
ನಿನ್ನತನ ಜನಗಣಕೆ ಬಾ ಸಲ್ಲಿಸು
ಯುಗಪತಿಯು ಮನ ಸುಳಿವ ಮನೆ ಆವುದು ?.......
ಯುಗ-ಪಥಿಕರಲಿ ನಿನ್ನ ಪಥವಾವುದು ?

ಛಲವಾದ ಹಟಮಾರಿಯೆಂತಾಗಿದೆ
ಹಟಮಾರಿತನ ಕುಹಕದಿಂದಾಗಿದೆ
ಕಟು ಜೀವನವು ಕಪಟದಿಂದಾಗಿದೆ
ವಿಕರಾಳ ಕರ್ಮ ನಿನ್ನನ್ನು ನುಂಗಿದೆ !........

ನಸೆ-ಮೋಹಗಳ ರಕ್ಷಕಳು ಆಗಿಹೆ
ನಸು ನಗುತ ಮನೆ ಶುನಕ ನೀನಾಗಿಹೆ
ರಸದೂಟ ಸುಖಭೋಗ ಶುಲಕಾಗಿದೆ
ಕಸಿಕೂಟವದು ನಿನಗೆ ಹುಲುಸಾಗಿದೆ........
ಕೈಂಕರ್ಯ-ಸೇವೆ ಅತಿ ಮೊನ್ನಚಾಗಿದೆ
ಶಂಕರನ ಮನೆ ನಿನ್ನ ಮನಸಾಗಿದೆ
ಆಂತು ಗತಿಗೇಡಿ ಮನ ಮುನಿಸಾಗಿದೆ
ಭ್ರಾಂತಿ ಬಿಡು ಬಾ ಮುಂದೆ ಸೊಗಸಾಗಿದೆ!........
ಚಿರವಲ್ಲವದು ದೇಹ-ವ್ಯಾಮೋಹವು
ಸ್ಥಿರವಲ್ಲವದು ಸಿರಿಯ ಸುಖ-ಭೋಗವು
ಚಿರವಾಗೆ ಚಿತ್ತ-ಭಿತ್ತಿ ಲಕ್ಷವು
ಪರಮಾತ್ಮ ಪರಮಪತಿ ಚಿರಸಾಕ್ಷವು........
ಹುನೆ ಧರ್ಮದಂಗಾರದಲ್ಲಿ ಬೆಂದಿಹೆ !
ಹುನೆ ಚರ್ಮಸಿಂಗಾರದಲಿ ಮಿಂದಿಹೆ !
ಮಸೆದಾಲಗದ ಮೇಲೆ ಸುಖ ಸೊಂಕುದೆ ?
ಸದೆ ತುಂಬಿದಾಲಾಪ ಇಂಪಾದುದೆ ?........
ನಾರಿ ನಿನ್ನ ಧೀರತನವೇನಾಯಿತು ?
ನಾರಿ ನಿನ್ನ ವೀರರಸವೇನಾಯಿತು ?
ನಾರಿ ನಿನ್ನ ಹಿರಿಮೆಯದು ಏನಾಯಿತು ?
ನಾರಿ ನಿನ್ನ ಗರಿಮೆಯದು ಏನಾಯಿತು ?
ಜ್ಞಾನವದು ಹೀನತನ ಕೇಡಾಯಿತು !
ಪ್ರಾಣಪಣ ಹೇಡಿತನಕೀಡಾಯಿತು !
ದಾನಿತನ ಡಾಂಭಿಕದ ತಾಣಾಯಿತು !
ನಾರಿ, ನಿನ್ನ ಮೌಲ್ಯ ಕಾಂಬಾಣಾಯಿತು !........
ನಿನ್ನ ಲೋಚನ ಜ್ಯೋತಿಯಿಂ ಬೆಳಗಲಿ
ನಿನ್ನ ವಚನವು ಜ್ಞಾನದಿಂ ಮೊಳಗಲಿ
ನಿನ್ನ ರೂಪವು ತೇಜವಂ ತಳೆಯಲಿ
ನಿನ್ನ ಮನದೊಳು ಸಾಹಸಂ ಮೊಳೆಯಲಿ
ಧರ್ಮ ಶೋಧಕ ನಿನ್ನ ಮನಸಾಗಲಿ
ಧರ್ಮ-ಸಾಧಕ ನಿನ್ನ ಕಣಸಾಗಲಿ
ಕರ್ಮ-ರತ ಧರ್ಮ-ಪಥ ನಿನ್ನದಾಗಲಿ
ನಿನ್ನ ಪಥ ಪರಮ ಧರ್ಮವು ಸೇರಲಿ.

## ಬೇವು-ಒಂದು ಪ್ರಾಕೃತಿಕ ಕೀಟನಾಶಕ

ಹೈದರಾಬಾದ್‌ನಲ್ಲಿ ಪ್ರಯೋಗಶಾಲೆಯೊಂದರಲ್ಲಿ ವಿಜ್ಞಾನಿಗಳು ಬೇವಿನಿಂದ ಸುರಕ್ಷಿತವಾದ ಪ್ರಾಕೃತಿಕ ಕೀಟನಾಶಕವೊಂದನ್ನು ರೂಪಿಸಿದ್ದಾರೆ.. ಇದರ ಹೆಸರು "ವೈಪಾಸಾಯ್ಡ್" ಎಂದು. ಇದನ್ನು ಸಸ್ಯಗಳಿಗೆ ವಿಶೇಷತಃ ತರಕಾರಿ ಹಾಗೂ ಹಣ್ಣಿನ ಗಿಡಗಳಿಗೆ ಬೀಳುವ ಕ್ರಿಮಿ-ಕೀಟಗಳನ್ನು ನಿಯಂತ್ರಿಸಲು ಸುರಕ್ಷಿತವಾಗಿ ಬಳಸಬಹುದಾಗಿದೆ. ಇದರಲ್ಲಿ ರಸಾಯನಿಕ ಕೀಟನಾಶಕಗಳಲ್ಲಿರುವ ಮಾನವನಿಗೆ ಹಾನಿಯನ್ನುಂಟುಮಾಡುವ ನಂಜು ಪದಾರ್ಥಗಳು ಇರುವುದಿಲ್ಲ.

ಈ ಕೀಟನಾಶಕ ಬಿಳಿಯ ಹುಳು, ಕಾಯಿ-ಹಣ್ಣು ಕೊರೆಯುವ ಹುಳು, ಹೊಗೆಸೊಪ್ಪಿನ ಕಂಬಳಿಹುಳು, ಓರಿಯಂಟಲ್ ಆರ್ಮಿಹುಳುಗಳನ್ನು ಪ್ರಭಾವ ಯುತವಾಗಿ ನಿಯಂತ್ರಿಸಬಲ್ಲದು. ಈ ಔಷಧಿಯಿಂದ ಹುಳುಗಳು ಸಾಯುವುದಿಲ್ಲ ವಾದರೂ ಇವು ಸಸ್ಯ ಬೆಳೆಗಳಿಗೆ ಹಾನಿಯನ್ನುಂಟುಮಾಡುವ ಸಾಧ್ಯವಾಗುವುದಿಲ್ಲ ಹೀಗಾಗಿ ತಾವಾಗಿಯೆ ಇವು ಸತ್ತುಹೋಗುತ್ತವೆ.

ಹೈದರಾಬಾದ್‌ನ ಪ್ರಾದೇಶಿಕ ಸಂಶೋಧನಾ ಪ್ರಯೋಗಶಾಲೆಯ ಹೇಳಿಕೆಯ ಪ್ರಕಾರ ಈ ಕೀಟನಾಶಕ ಇನ್ನೂ ಪ್ರಯೋಗದ ಹಂತದಲ್ಲಿದೆ. ಇದು ಮಾರುಕಟ್ಟೆಗೆ ಬರುವ ದಿನಗಳು ದೂರವಿಲ್ಲ.

ಬೇವು ಬರ್ಮಾ, ಭಾರತ, ಮಲಯಾ ಹಾಗೂ ಶ್ರೀಲಂಕಾದ ಸ್ಥಳೀಯ ವೃಕ್ಷವಾಗಿದೆ. ಇದನ್ನು ಇತ್ತೀಚಿಗೆ ಇಂಡೋನೇಶಿಯ; ಥಾಯ್‌ಲೇಂಡ್ ಹಾಗೂ ಟೊಗೊ ದೇಶಗಳಲ್ಲೂ ಬೆಳೆಸಲಾಗುತ್ತಿದೆ. ಫಿಲಿಪ್ಪೈನ್ಸ್-ಜರ್ಮನಿ ಈ ಸಂಯುಕ್ತ ಕೃಷಿ ಸಂರಕ್ಷಣ ಕಾರ್ಯಕ್ರಮದ ಅಂಗವಾಗಿ ಬೇವನ್ನು ೧೯೮೨ ರಿಂದ ಫಿಲಿಫೈನ್ಸ್‌ನಲ್ಲಿ ವ್ಯಾಪಕವಾಗಿ ಬೆಳೆಸಲಾಗುತ್ತಿದೆ. ಇದರ ಔಷಧೀಯ ಗುಣಗಳನ್ನು ನಾವು ಆದಷ್ಟು ಬೇಗ ಬಳಸಿಕೊಂಡು ಸದುಪಯೋಗ ಪಡಿಸಿಕೊಳ್ಳಬೇಕಾಗಿದೆ.

### ಮೂಲಂಗಿ - ಉತ್ತಮ ತರಕಾರಿ

ಮೂಲಂಗಿಯ ಎಲ್ಲಾ ಭಾಗಗಳೂ ಉಪಯುಕ್ತ. ಇದು ಹಸಿವನ್ನು ಹೆಚ್ಚಿಸುವ, ರಕ್ತಶುದ್ಧಿ ಮಾಡುವ, ಅಪಾನ ವಾಯು ನಿವಾರಕ, ಹೃದಯಹಾಗೂ ಪಿತ್ತಜನಕಾಂಗಗಳಿಗೆ ಉಪಯುಕ್ತವೆನಿಸಿದೆ. ಹೋಮಿಯೋಪತಿಯಲ್ಲಿ ತಲೆನೋವು, ನಿದ್ರಾಹೀನತೆ, ಅತಿಸಾರ ಮುಂತಾದ ರೋಗಗಳಿಗೆ ಮೂಲಂಗಿ ಅಂಶವುಳ್ಳ ಔಷಧಿಯನ್ನು ಬಳಸಲಾಗುತ್ತದೆ. ಮೂಲಂಗಿ ಹಾಗೂ ಇದರ ಎಲೆಗಳು ಮೂತ್ರ ವರ್ಧಕ. ಇದರಲ್ಲಿ ಸಿ ಅನ್ನಾಂಗ, ವಿವಿಧ ಖನಿಜಾಂಶಗಳು ಹೇರಳವಾಗಿವೆ; ಕಬ್ಬಿಣದ ಅಂಶ, ಎ ಅನ್ನಾಂಗ ರಿಬೋಫ್ಲೇವಿನ್, ನಿಕೋಟಿನಿಕ್ ಆಮ್ಲಗಳೂ ಇವೆ.

ಸಿದ್ಧಗಂಗಾ

ಮೂಲಂಗಿಯಿಂದ ಉತ್ತಮ ರಸವನ್ನು ತಯಾರಿಸಬಹುದು. ಮೂಲಂ ಯನ್ನು ಚೆನ್ನಾಗಿ ತೊಳೆದು, ತುರಿದು ಶುದ್ಧವಾದ ತೆಳುವಾದ ಬಟ್ಟೆಯಲ್ಲಿ ಹಾ ಹಿಸುಕಿ ರಸವನ್ನು ತೆಗೆಯಬೇಕು. ಹತ್ತು ಕಿಲೋ ರಸಕ್ಕೆ 20 ಗ್ರಾಂ ಸೈಟ್ರಿಕ ಆಮ್ಲ, 20 ಗ್ರಾಂ ಉಪ್ಪು, 600 ಗ್ರಾಂ ಸಕ್ಕರೆ ಬೆರೆಸಿ ಸುಮಾರಾಗಿ ಕಾಯಿ ಪಾಕ ತಯಾರಿಸಿ ಬಟ್ಟೆಯಲ್ಲಿ ಸೋಸಿ ಮತ್ತೆ ಕಾಯಿಸಬೇಕು. 90° ಶಾಖ ವರೆಗೆ ಕಾಯಿಸಿ ಕ್ರಿಮಿ ಶುದ್ಧೀಕರಿಸಿದ ಬಾಟ್ಲಿಗಳಿಗೆ ತುಂಬಿ ಕಾರ್ಕ್ ಹಾ ಭದ್ರಗೊಳಿಸಬೇಕು. ಬಳಿಕ 60° ಶಾಖವಿರುವ ನೀರಿನಲ್ಲಿ ಈ ಬಾಟ್ಲಿಗಳನ 10 ನಿಮಿಷಗಳ ವರೆಗೆ ಮುಳುಗಿಸಿಟ್ಟು ತೆಗೆದು ಗಾಳಿಯಲ್ಲಿ ಒಣಗಿಸಿ ಸಂಗ್ರ ಸಿಡಬೇಕು. ಇದನ್ನು ಒಂದು ವರ್ಷದವರೆಗೂ ಇಡಬಹುದು.

ರಸ ಹಿಂಡಿದ ಬಳಿಕ ಉಳಿದ ಚರಟವನ್ನು ಹಿಟ್ಟಿಗೆ ಬೆರೆಸಿ ರೊಟ್ಟಿ ತಯ ರಿಸಬಹುದು. ಮೂಲಂಗಿ ಸೊಪ್ಪಿನಿಂದಲೂ ಪಲ್ಯ ತಯಾರಿಸಬಹುದು, ಸಲಾ ರೂಪದಲ್ಲಿ ತಿನ್ನಬಹುದು. ಈ ಸೊಪ್ಪು ಮತ್ತು ಹೂವಿನಲ್ಲೂ ಮೇಲೆ ತಿಳಿಸಿ ಖನಿಜಾಂಶಗಳೂ, ಅನ್ನಸತ್ವಗಳಿವೆ. ಪ್ರೋಟೀನ್ ಅಂಶ ಸೊಪ್ಪು ಹಾಗ ಹೂವಿನಲ್ಲೇ ಜಾಸ್ತಿ.

## ೪. ಮೆಣಸಿನ ಕಾಯಿಯ ಹೊಸ ತಳಿಗಳು

ಬೆಂಗಳೂರಿನ ಭಾರತೀಯ ತೋಟಗಾರಿಕಾ ಬೆಳೆಗಳ ಸಂಶೋಧನಾ ಸಂಸ್ಥೆ ಸೆಲೆಕ್ಷನ್-೨ ಎಂಬ ಮೆಣಸಿನಕಾಯಿ ತಳಿಯನ್ನು ರೂಪಿಸಿದೆ. ಇದು ೧೫೦ ದಿನಗ ಕುಯಿಲಿಗೆ ಬಂದು ಹೆ/ಳ ರಿಂದ ೫ ಟನ್ ಒಣ ಮೆಣಸಿನ ಕಾಯಿ ಇಳುವರಿ ನೀ ಬಲ್ಲದು.

ಜವಹರ್‌ಲಾಲ್ ನೆಹರು ವಿಶ್ವವಿದ್ಯಾಲಯವು ' ಜವಹರ್ ಮಿರ್ಚ್-೨೧ ಎಂಬ ತಳಿಯನ್ನು ರೂಪಿಸಿದ್ದು, ಏಳುವರೆ ಟನ್ ಇಳುವರಿ ನೀಡಬಲ್ಲದು: ಒಣಗಿ ದಾಗ ಹೆ/ ಎರಡೂವರೆ ಟನ್‌ಗಿಂತ ಹೆಚ್ಚು ಮೆಣಸಿನ ಕಾಯಿ ಲಭ್ಯವಾಗುತ್ತ ಇವೆರಡೂ ತಳಿಗಳನ್ನು ದೇಶದ ವಿವಿಧ ಪ್ರದೇಶಲ್ಲಿ ಬೆಳೆಯಬಹುದು. (ಐ.ಸಿ.ಎ.ಆ

## ೫. ರಾಷ್ಟ್ರೀಯ ಕಳೆ ವಿಜ್ಞಾನ ಕೇಂದ್ರ

ಹಿಂದೆ ಕಳೆ ಸಸ್ಯಗಳು ಸಮಸ್ಯೆಯಾಗಿರಲಿಲ್ಲ. ಜನಸಂಖ್ಯೆ ಹೆಚ್ಚಾದಂತೆ ದ ಧಾನ್ಯಗಳನ್ನು ಬೆಳೆಸಲು ಕೃಷಿಪ್ರದೇಶ ವಿಸ್ತರಿಸಿದಂತೆ ಬೆಳೆಗೆ ಬೀಳುವ ಕಳೆಗಳ ನಿಯಂತ್ರಿಸುವುದು ಅನಿವಾರ್ಯವಾಯಿತು. ಇಂದು ನಾವು ಬಹುತೇಕ ಕಳೆಗಳ ನಿಯಂತ್ರಿಸಿದ್ದೇವೆ. ಕಾಂಗ್ರೆಸ್ ಕಳೆ ಎಂದು ಕರೆಯಲಾಗುವ ಪಾರ್ಥೇನಿ

ಅನ್ನು ನಿಯಂತ್ರಿಸಲು ಇನ್ನೂ ಸಾಧ್ಯವಾಗಿಲ್ಲ. ಜೈವಿಕ ವಿಧಾನಗಳಿಂದ ಇದನ್ನು ನಿಯಂತ್ರಿಸ ಬಹುದೆಂದು ತಿಳಿದು ಬಂದಿದೆ. ಸಾರ್ವಜನಿಕ ಚಳುವಳಿಯಂತೆ ಈ ಕಳೆ-ಯ ನಿಯಂತ್ರಣ ಕಾರ್ಯ ಸಾಧ್ಯವಾದರೆ ಇದನ್ನು ನಿಯಂತ್ರಿಸ ಬಹುದಾಗಿದೆ. ಸರ್ಕಾರ, ಇಲಾಖೆಗಳು, ಸಂಘ ಸಂಸ್ಥೆಗಳು, ಪಂಚಾಯಿತಿಗಳು ಈ ಕಾರ್ಯವನ್ನು ಕೈಗೆತ್ತಿಕೊಳ್ಳಬಹುದು. ಕಳೆ ನಿಯಂತ್ರಣದ ಸಮಸ್ಯೆಗಳ ಅಧ್ಯಯನ ಹಾಗೂ ಪರಿಹಾರೋಪಾಯಗಳನ್ನು ಸೂಚಿಸಲು ಭಾರತೀಯ ಕೃಷಿ ಸಂಶೋಧನಾ ಸಂಸ್ಥೆಯು ಜಬಲ್‌ಪುರದಲ್ಲಿನ ಜವಹರ್‌ಲಾಲ್ ಕೃಷಿ ವಿಶ್ವವಿದ್ಯಾಲಯದಲ್ಲಿ ರಾಷ್ಟ್ರೀಯ ಕಳೆ ವಿಜ್ಞಾನ ಕೇಂದ್ರವೊಂದನ್ನು ಇತ್ತೀಚೆಗೆ ಸ್ಥಾಪಿಸಿದೆ. ಇಂದು ನಮ್ಮ ದೇಶದಲ್ಲಿ ಬೆಳೆಗಳಲ್ಲಿ ಶೇ ೧೦ ರಷ್ಟು ಪ್ರದೇಶ ಕಳೆಯಿಂದ ಆವರಿಸಿದೆ ಎಂಬುದನ್ನು ನಾವು ಮರೆಯಬಾರದು.

---

## "ಶಿಕ್ಷಣ"

ಎಂ. ಆರ್. ಜೈಲಪ್ಪ, ಶ್ರೀ ಕ್ಷೇತ್ರದ ಹಳೆಯ ವಿದ್ಯಾರ್ಥಿ.

ಕುಳಿತಿದ್ದೆ ನಾನು ಏಕಾಂಗಿಯಲಿ ಯೋಚನೆಮಾಡುತ
ಮಾನವ ಮಾನವನಾಗುವ ಬಗೆ ಹೇಗೆಂದು ಚಿಂತಿಸುತ
ಉಪಯೋಗವಾಗಿದೆ ವಿಜ್ಞಾನದಿಂ ಸಂಶಯವಿಲ್ಲದೆ
ಕಾಣುತಿದೆ ಒಂದು ಮುಖ್ಯ ಕೊರತೆ ಅನುಮಾನವಿಲ್ಲದೆ
ನೆಮ್ಮದಿ ಇಲ್ಲವೀ ಆಧುನಿಕ ಜೀವನದಿ
ಸಮಯ ವ್ಯರ್ಥವಾಗುತಿದೆ ನಮ್ಮ ಜೀವನದಿ
ಮಾನವತೆ ಇಲ್ಲದ ಜೀವನ ಕಾಣುತಿದೆ
ಮಾನವಗೆ ಮಾನವೀಯತೆ ಕಲಿಸುವ
ಶಿಕ್ಷಣ ಅಗತ್ಯವೀ ಎಮಗೆ.

# ಭವಿಷ್ಯಕ್ಕಾಗಿ ಆಹಾರ

ಜಿ. ಆರ್. ರಂಗಸ್ವಾಮಯ್ಯ. ಭಾರತೀಯ ಕೃಷಿ ಸಂಶೋಧನ ಸಂಸ್ಥೆ, ಹೊಸದೆಹಲಿ - 1.

ವಿಶ್ವಾದ್ಯಂತ ಅಕ್ಟೋಬರ್ ೧೬ ರಂದು ವಿಶ್ವ ಆಹಾರ ದಿನವನ್ನು ಆಚರಿಸಲಾಗುತ್ತದೆ. "ಭವಿಷ್ಯಕ್ಕಾಗಿ ಆಹಾರ" ಎಂಬುದು ಈ ವರ್ಷದ ವಿಷಯವಾಗಿದೆ. ವಿಶ್ವ ಆಹಾರ ಸಮಸ್ಯೆ ಇದನ್ನು ಬಗೆಹರಿಸಲು ಕೈಗೊಳ್ಳಬೇಕಾದ ಕ್ರಮಗಳು, ಬಡತನ, ಹಸಿವು ಹಾಗೂ ನ್ಯೂನ ಪೋಷಣೆಯನ್ನು ನಿವಾರಿಸುವಲ್ಲಿ ವಿಶ್ವದ ಸರ್ಕಾರಗಳು, ಸಂಘ ಸಂಸ್ಥೆಗಳು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸಾರ್ವಜನಿಕ ಜನಜಾಗೃತಿ ಮಾಡುವ ಬಗ್ಗೆ ಈ ವರ್ಷ ವಿಶ್ವ ಆಹಾರ ಹಾಗೂ ಕೃಷಿ ಸಂಸ್ಥೆಯು ಗಮನ ಸೆಳೆದಿದೆ.

ವಿಶ್ವದಲ್ಲಿ ಈ ವರ್ಷ ಸುಮಾರು ೫೧ ದಶಲಕ್ಷ ಜನರು ಸಾಯುತ್ತಾರೆ. ಇವರಲ್ಲಿ ಮೂರನೆ ಒಂದು ಭಾಗ ಹಸಿವಿನಿಂದ, ನ್ಯೂನ ಪೋಷಣೆಯಿಂದ ಆರೋಗ್ಯಕರ ಜೀವನ ನಡೆಸಲಾಗದೆ ಸಾಯುತ್ತಾರೆ ಒಂದು ಅಂದಾಜಿನ ಪ್ರಕಾರ ವಿಶ್ವದಲ್ಲಿ ೫೦ ಕೋಟಿ ಜನರಿಗೆ ಸರಿಯಾದ ಆಹಾರ ಇಲ್ಲವಾಗಿದೆ. ಇದರಲ್ಲಿ ಬಹುಪಾಲು ಹಳ್ಳಿಗಾಡಿನಲ್ಲಿರುವಂಥವರು.

ವಿಶ್ವದಲ್ಲಿ ಪ್ರತಿ ನಿಮಿಷಕ್ಕೂ ಯುದ್ಧೋಪಕರಣಗಳು ಎರಡು ದಶಲಕ್ಷ ಅಮೇರಿಕನ್ ಡಾಲರ್‌ಗಳನ್ನು ನುಂಗುತ್ತವೆ ಈ ಮೊತ್ತ ಅಭಿವೃದ್ಧಿಶೀಲ ದೇಶಗಳಲ್ಲೇ ಹೆಚ್ಚಾಗಿದೆ. ೧೬೯೦ ರಿಂದೀಚೆಗೆ ಸೇನಾ ರಂಗದ ಖರ್ಚು ಈ ದೇಶಗಳಲ್ಲಿ ದ್ವಿಗುಣಗೊಂಡಿದೆ

೧೯೮೯ ರ ಕೊನೆಯಲ್ಲಿ ತೃತೀಯ ವಿಶ್ವದ ಸಾಲದ ಮೊತ್ತ ೧, ೨೯೦ ಸಾವಿರ ದಶಲಕ್ಷ ಅಮೇರಿಕನ್ ಡಾಲರ್‌ಗಳಷ್ಟಿತ್ತು. ಅಂದರೆ ಅವರಿಗೆ ಬೇಕಾದ ಆಹಾರವನ್ನು ಆಮದು ಮಾಡಿಕೊಳ್ಳುವ ಚೈತನ್ಯ ಇಲ್ಲವಾಗಿದೆ ಪ್ರಾಕೃತಿಕ ಸಂಪನ್ಮೂಲಗಳನ್ನು ಮಿತಿಮೀರಿ ಬಳಸಿಕೊಳ್ಳದೆ ವಿಧಿಯಿಲ್ಲವಾಗಿದೆ. ಸಂಪನ್ಮೂಲಗಳ ಸಂರಕ್ಷಣೆ ಈ ದೇಶ ಶ್ರೀಮಂತಿಕೆ ಎನಿಸೀತು.

ಬರ್ಲಿನ್ ಗೋಡೆ ಕುಸಿಯುತ್ತಿರುವಾಗ ಉಳ್ಳವರು-ಇಲ್ಲದವರ ನಡುವಿನ ಗೋಡೆ ಮೇಲೇಳುತ್ತಿದೆ. ನಾವಿರುವ ಭೂಮಿಯನ್ನು ಈಗಾಗಲೇ ಮಿತಿಮೀರಿ ಬಳಸಿಕೊಂಡಿವೆ. ಮುಂದಿನ ಪೀಳಿಗೆಯ ಅಧಿಕಾರವನ್ನು ಕಿತ್ತುಕೊಳ್ಳುತ್ತಿದ್ದೇವೆ. ಓಜೋನ್ ಪದರ ಹರಿಯುತ್ತಿದೆ, ಜಲ, ವಾಯು ಮಾಲಿನ್ಯವಾಗಿದೆ, ರಾಸಾಯನಿಕ ನಂಜು ಪದಾರ್ಥಗಳು ಕೈಗಾರಿಕೀಕರಣದಿಂದಾಗಿ ಹೆಚ್ಚಿವೆ. ಈ ಶತಮಾನದಲ್ಲೆ ಈ ಮಾಲಿನ್ಯ ಐವತ್ತು ಪಟ್ಟು ಹೆಚ್ಚಿದೆ. ಅಭಿವೃದ್ಧಿಶೀಲ ದೇಶಗಳಲ್ಲಿ ಸರಿಯಾದ ಯೋಜನೆಗಳಿಲ್ಲದೆ ನೆಲ, ಜಲ ಹಾಳಾಗುತ್ತಾ ಹೋಗುತ್ತಿದೆ. ಕೇವಲ ಬದುಕಿ ಉಳಿಯುವುದಕ್ಕಾಗಿ ಗೇಣುದ್ದದ ಹೊಟ್ಟೆಗಾಗಿ ಇದೆಲ್ಲ ಆಗುತ್ತಿದೆ. ಮುಂದಿನ ಪೀಳಿಗೆಗೆ ಅನ್ಯಾಯವಾಗುತ್ತಿದೆ.

ಯೂರೋಪ್ ಒಂದರಲ್ಲೇ ೧೧೯ ದೇಶಿ ಜಾನುವಾರುಗಳಲ್ಲಿ ೯ ಕಾಣೆಯಾಗಿವೆ, ೪೪ ಅಪರೂಪವಾಗಿವೆ; ೨೪೦ ಕುದುರೆ, ದನ, ಹಂದಿ, ಕುರಿ ಹಾಗೂ ಮೇಕೆಯ ತಳಿಗಳು ಅಪಾಯದ ಹಂತದಲ್ಲಿವೆ. ಇದೇ ಪರಿಸ್ಥಿತಿ ಬಹಳಷ್ಟು ಸ್ಥಳೀಯ ದವಸ-ಧಾನ್ಯಗಳ ತಳಿಗಳದ್ದಾಗಿದೆ.

ಸಮಶೀತೋಷ್ಣ ವಲಯದ ಕಾಡುಗಳಲ್ಲಿ ೮೦,೦೦೦ ಜಾತಿಯ ಖಾದ್ಯ ಯೋಗ್ಯ ಮರ-ಗಿಡಗಳಲ್ಲಿ ಒಂದನ್ನು ಕೃಷಿ ಮಾಡುತ್ತಿಲ್ಲ. ಇವುಗಳಲ್ಲಿ ನೂರಾರು ತಳಿಗಳು ಅಪರೂಪವಾಗಿವೆ. ಒಂದು ಅಂದಾಜಿನ ಪ್ರಕಾರ ೧೯೮೦ ರಲ್ಲಿ ವರ್ಷಕ್ಕೆ ೧೧.೩ ದಶಲಕ್ಷ ಹೆಕ್ಟೇರ್ ಕಾಡುಗಳಲ್ಲಿ ಕಾಣೆಯಾಗುತ್ತಿದ್ದರೆ ೧೯೯೦ ರಲ್ಲಿ ೧೭ ದಶಲಕ್ಷ ಹೆಕ್ಟೇರುಗಳಷ್ಟು ಕಾಡುಗಳು ಕಾಣೆಯಾಗುತ್ತಿವೆ.

ಆಫ್ರಿಕಾದಲ್ಲಿ ಪ್ರತಿವರ್ಷ ೩೭,೦೦೦ ಚದುರ ಕಿ. ಮೀ, ಕಾಡುಗಳು ನಾಶವಾಗುತ್ತಿವೆ. ಮರುಭೂಮಿಗಳು ವಿಸ್ತರಿಸುತ್ತಿವೆ.

ಈ ಎಲ್ಲ ಎದೆಗೆಡಿಸುವ ಅಂಕಿ-ಅಂಶಗಳತ್ತ ವಿಶ್ವದ ಗಮನ ಸೆಳೆಯಲಾಗಿದೆ. ಭೂಮಿಯ ಸಂಪನ್ಮೂಲಗಳ ಸದುಪಯೋಗ ಆಗಬೇಕು. ಜನಜೀವನದ ಗುಣಮಟ್ಟವನ್ನು ಸುಧಾರಿಸಲು ಪರಿಸರವನ್ನು ಹದಗೆಡಿಸದಂತೆ ಇದನ್ನು ಬುದ್ಧಿವಂತಿಕೆಯಿಂದ ಬಳಸಿಕೊಳ್ಳಬೇಕು; ಮುಂದಿನ ಪೀಳಿಗೆಯ ಕ್ಷೇಮಕ್ಕಾದರೂ ನಾವು ಅರ್ಹರಾಗಬೇಕು. ಇದಕ್ಕಾಗಿ ಸರ್ಕಾರಗಳು, ಸಂಘ-ಸಂಸ್ಥೆಗಳು ನೈತಿಕ, ಸಾಮಾಜಿಕ ಹಾಗೂ ರಾಜಕೀಯ ಹೊಣೆಗಳನ್ನು ಹೊತ್ತು ಮುನ್ನಡೆಯಬೇಕು

---

## ಸಂತಾಪ

ದಿನಾಂಕ **15-3-91** ರಂದು ಶ್ರೀ ಸಿದ್ಧಗಂಗಾ ತಾಂತ್ರಿಕ ವಿದ್ಯಾಲಯ (ಎಸ್.ಐ.ಟಿ) ದಲ್ಲಿ ಪ್ರಾಧ್ಯಾಪಕರಾಗಿ ಸೇವೆಸಲ್ಲಿಸುತ್ತಿದ್ದ ಮಾನ್ಯ ಶ್ರೀ ಜಿ, ಎಸ್. ಕುಮಾರಸ್ವಾಮಿಯವರು ಹೃದಯಾಘಾತದಿಂದ ನಿಧನರಾದುದನ್ನು ತಿಳಿದು 'ಸಿದ್ಧಗಂಗಾ' ಕ್ಕೆ ಅತೀವ ದುಃಖವಾಯಿತು. ಶ್ರೀಯುತರು ಎಸ್. ಐ. ಟಿಯ ಪ್ರಾಚಾರ್ಯರಾಗಿಯೂ ಸೇವೆ ಸಲ್ಲಿಸಿದ್ದರು. ಮೆಕ್ಯಾನಿಕಲ್ ಇಂಜನಿಯರಿಂಗ್ ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸುತ್ತ, ಸ್ನೇಹಕ್ಕೆ, ವಿದ್ವತ್ತಿಗೆ, ವಿದ್ಯಾರ್ಥಿಗಳ ಪ್ರೀತಿಗೆ ಪಾತ್ರರಾಗಿದ್ದರು. ಶ್ರೀಯುತರು ಓರ್ವ ಪುತ್ರ, ಮತ್ತು ಈರ್ವರು ಪುತ್ರಿಯರು ಪತ್ನಿ ಹಾಗೂ ಅಪಾರ ಬಂಧುವರ್ಗದವರನ್ನು ಅಗಲಿದ್ದಾರೆ. ಅಗಲಿದ ಶ್ರೀಯುತರ ಆತ್ಮಕ್ಕೆ ಬಸವಾದಿ ಪ್ರಮಥರು ಶಾಂತಿಯನ್ನು ದಯಪಾಲಿಸಲೆಂದು ಪ್ರಾರ್ಥಿಸುತ್ತ, ದಿವಂಗತರ ಕುಟುಂಬ ವರ್ಗದವರಿಗೆ ದುಃಖವನ್ನು ಸಹಿಸುವ ಧೈರ್ಯವನ್ನು ನೀಡಲೆಂದು ಕೋರುತ್ತ 'ಸಿದ್ಧಗಂಗಾ' ಸಂತಾಪವನ್ನು ವ್ಯಕ್ತಪಡಿಸುತ್ತದೆ.

## ಸಿದ್ಧಗಂಗಾ ಮಾಸಿಕ ಪತ್ರಿಕೆಯು ಒಡೆತನ ಮತ್ತು ಇತರ ವಿವರಗಳ ಸಂಬಂಧಪಟ್ಟ ಮಾಹಿತಿ

### ಫಾರಂ ೪

| | | |
|---|---|---|
| ೧ | ಪ್ರಕಟಣೆಯ ಸ್ಥಳ: | ಶ್ರೀ ಸಿದ್ಧಗಂಗಾ ಮಠ |
| ೨ | ಪ್ರಕಟವಾಗುವ ಅವಧಿ: | ಮಾಸಿಕ |
| ೩ | ಮುದ್ರಣ ಭಾಷೆ: | ಕನ್ನಡ |
| ೪ | ಮುದ್ರಕರ ಹೆಸರು: | ಶ್ರೀ ಶ್ರೀ ಶಿವಕುಮಾರ ಸ್ವಾಮಿಗಳು |
| | ರಾಷ್ಟ್ರೀಯತೆ: | ಭಾರತೀಯ |
| | ವಿಳಾಸ: | ಶ್ರೀ ಸಿದ್ಧಗಂಗಾ ಮಠ<br>ತುಮಕೂರು ಜಿಲ್ಲಾ (ಕರ್ನಾಟಕ) |
| ೫ | ಪ್ರಕಾಶಕರ ಹೆಸರು: | ಹೆಚ್. ಬಿ. ಗಂಗಾಧರಯ್ಯ |
| | ರಾಷ್ಟ್ರೀಯತೆ: | ಭಾರತೀಯ |
| | ವಿಳಾಸ: | ಶ್ರೀ ಸಿದ್ಧಗಂಗಾ ಮಠ<br>ತುಮಕೂರು ಜಿಲ್ಲಾ (ಕರ್ನಾಟಕ) |
| ೬ | ಸಂಪಾದಕರು: | ಶ್ರೀ ಪಂ|| ಚನ್ನಪ್ಪ ಎರೇಸೀಮೆ |
| | ರಾಷ್ಟ್ರೀಯತೆ: | ಭಾರತೀಯ |
| | ವಿಳಾಸ: | ಶ್ರೀ ಸಿದ್ಧಗಂಗಾ ಮಠ<br>ತುಮಕೂರು ಜಿಲ್ಲಾ (ಕರ್ನಾಟಕ) |
| ೭ | ಪತ್ರಿಕೆಯ ಮಾಲೀಕರು: | ಶ್ರೀ ಶ್ರೀ ಶಿವಕುಮಾರ ಸ್ವಾಮಿಗಳು,<br>ಶ್ರೀ ಸಿದ್ಧಗಂಗಾ ಮಠ,<br>ತುಮಕೂರು ಜಿಲ್ಲಾ (ಕರ್ನಾಟಕ) |
| ೮ | ನೊಂದಣಿ ಸಂಖ್ಯೆ: | K. R. N. Q. ೯. |

**ನಾನು ಹೆಚ್. ಬಿ. ಗಂಗಾಧರಯ್ಯ, ಮೇಲಿನ ಅಂಶಗಳೆಲ್ಲ ಸತ್ಯ ಎಂದು ನನ್ನ ಜ್ಞಾನ ಮತ್ತು ನಂಬಿಕೆಗಳಿಂದ ದೃಢಪಡಿಸುತ್ತೇನೆ.**

೧ ಮಾರ್ಚಿ 1991 (ಸಹಿ) ಹೆಚ್. ಬಿ. ಗಂಗಾಧರಯ್ಯ,

ಸಿದ್ಧಗಂಗಾ ಮಠ. ಪ್ರಕಾಶಕರು.

# ಸಿದ್ಧಗಂಗಾ ತಾಂತ್ರಿಕ ಕಾಲೇಜು ರಜತ ಮಹೋತ್ಸವ

ವರದಿ.- ಹೆಚ್. ಬಿ. ಗಂಗಾಧರಯ್ಯ

ಶ್ರೀ ಸಿದ್ಧಗಂಗಾ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಪರಮಪೂಜ್ಯ ಡಾ॥ ಶ್ರೀ ಶ್ರೀ ಶಿವಕುಮಾರ ಸ್ವಾಮಿಗಳವರು ತ್ರಿವಿಧ ದಾಸೋಹಮೂರ್ತಿಗಳು, ಘನ ವಿದ್ವಾಂಸರು ಮತ್ತು ಹೆಸರಾಂತ ಶಿಕ್ಷಣ ತಜ್ಞರು.

1963 ರಲ್ಲಿ ಸಿದ್ದಗಂಗಾ ತಾಂತ್ರಿಕ ಕಾಲೇಜು ಪ್ರಾರಂಭವಾಯಿತು. ಆಗ ಇಂಜಿನಿಯರಿಂಗ್ ಶಿಕ್ಷಣಕ್ಕೆ ಬೇಡಿಕೆ ಅಧಿಕವಾಗಿತ್ತು. ಇದು ಪಟ್ಟಣಪ್ರದೇಶದ ವಿದ್ಯಾರ್ಥಿಗಳಿಗೆ ಮಾತ್ರ ಲಭ್ಯವಾಗಿ ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳಿಗೆ ಅವಕಾಶ ವಿಲ್ಲದೆ ಹೋಗಿತ್ತು. ಈ ಅಸಮಾನತೆಯನ್ನು ನೀಗಲು ಜಿಲ್ಲಾಕೇಂದ್ರವಾದ ತುಮಕೂರಿನಲ್ಲಿ ಶ್ರೀ ಶ್ರೀ ಗಳವರು ಮೇಲಿನ ತಾಂತ್ರಿಕ ಕಾಲೇಜನ್ನು ತೆರೆಯಲು ಮುಂದಾದರು ಇದರ ಸರ್ವತೋಮುಖ ಬೆಳವಣಿಗೆಗೆ ಅನೇಕ ಉದಾರ ವ್ಯಕ್ತಿಗಳು ಮತ್ತು ಸಂಘ ಸಂಸ್ಥೆಗಳು ನೆರವಾಗಿವೆ, ಶ್ರೀ ಶ್ರೀ ಗಳವರ ಸ್ಫೂರ್ತಿ, ಆಶೀರ್ವಾದ, ದೂರದೃಷ್ಟಿ, ಅಸಾಧಾರಣ ಪ್ರತಿಭೆ, ಸಾಮರ್ಥ್ಯ ಉದಾರಭಾವನೆ ಕಠಿಣ ಪರಿಶ್ರಮದ ಫಲವಾಗಿ ಎಸ್.ಐ.ಟಿ. ಇಂದಿನ ಸ್ವರೂಪಕ್ಕೆ ಬೆಳೆದಿದೆ. ಇಡೀ ರಾಷ್ಟ್ರದಲ್ಲಿಯೇ ಪ್ರಥಮ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಒಂದು ಎಂದು ಶ್ಲಾಘನೆಗೆ ಪಾತ್ರವಾಗಿದೆ.

1980 ರಲ್ಲಿ ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದಿಂದ ಪಡೆಯಲಾದ ಕಂಪ್ಯೂಟರೀಕರಣಗೊಳಿಸಿದ ಅಭಿಮತದ ಪ್ರಕಾರ ಎಸ್.ಐ.ಟಿ. ರಾಜ್ಯದ ಖಾಸಗಿ ವ್ಯವಸ್ಥಾಪನೆಯ ಅನುದಾನ ಪಡೆಯದ ಇಂಜಿನಿಯರಿಂಗ್ ಕಾಲೇಜುಗಳ ಪೈಕಿ ಅತ್ಯುತ್ತಮವಾದ ಕಾಲೇಜು ಎಂಬುದಾಗಿ ಸ್ಥಾನ ನಿರ್ಣಯ ಮಾಡಲಾಗಿದೆ. ಸಂಸ್ಥೆಯು 60 ಎಕರೆಗಳಿಗೂ ಹೆಚ್ಚು ವಿಸ್ತಾರವಾದ ಅಭಿವೃದ್ಧಿ ಹೊಂದಿದ ಕ್ಯಾಂಪಸ್ ಒಳಗೊಂಡಿದೆ, ಪರಿಶುದ್ಧವಾದ ಪ್ರಯೋಗಾಲಯಗಳು, ಕಾರ್ಯಾಗಾರಗಳು ಮತ್ತು ಗ್ರಂಥಾಲಯಗಳನ್ನು ಸಂಸ್ಥೆ ಹೊಂದಿದೆ. ಕಂಪ್ಯೂಟರ್ ಕೇಂದ್ರವು ವಿದ್ಯಾರ್ಥಿಗಳ ಅವಶ್ಯಕತೆಗಳನ್ನು ಪೂರೈಸಲು ಸುಸಜ್ಜಿತವಾಗಿದೆ. ಸ್ನಾತಕೋತ್ತರ ಶಿಕ್ಷಣವನ್ನು ಪ್ರಾರಂಭಿಸಲು ಪೂರಕ ಪ್ರಸ್ತಾವನೆಗಳು ಸಾಗುತ್ತಿವೆ. ಈ ದಿಸೆಯಲ್ಲಿ ಎ ಐ ಸಿ ಟಿ ಇ ನವದೆಹಲಿ, ಇವರ ಅಂಗೀಕಾರಕ್ಕಾಗಿ ಉತ್ಸುಕತೆಯಿಂದ ನಿರೀಕ್ಷಿಸುತ್ತಿದೆ. 25 ವರ್ಷಗಳ ವಿಶಿಷ್ಟ ಸೇವೆ ಮತ್ತು ನೆನಪಿಗಾಗಿ ಎಸ್.ಐ.ಟಿ. ತನ್ನ ಬೆಳ್ಳಿಹಬ್ಬವನ್ನು 1991 ಮಾರ್ಚ್ 1-2 ಆಚರಿಸಿತು.

ಪರಮಪೂಜ್ಯ ಡಾ॥ ಶ್ರೀ ಶ್ರೀ ಶಿವಕುಮಾರ ಸ್ವಾಮಿಗಳವರು ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ,

ಶಿಕ್ಷಣ ಆಜನ್ಮ ಸಿದ್ಧ ಹಕ್ಕು. ಇದರಿಂದ ವಂಚಿತರಾದವರಿಗೆ ಒದಗಿಸುವುದು ಮುಖ್ಯ ಕರ್ತವ್ಯ. ತಾಂತ್ರಿಕ ಜ್ಞಾನ ಮತ್ತು ಅನುಭವ ಸಮಾಜದ ಅಭಿವೃದ್ಧಿಗೆ ರಾಷ್ಟ್ರದ ಏಳಿಗೆಗೆ ಕಾರಣವಾಗಬೇಕೆಂದು ಹೇಳಿದರು.

ವಿದ್ಯಾವಂತರು' ವಿದ್ಯಾಹೀನರ ಉಳ್ಳವರ ಇಲ್ಲದವರ ನೆರವಿಗೆ, ಅವರ ಅಭಿವೃದ್ಧಿಗೆ ಶ್ರಮಿಸಿ ಸಮಾಜದ ಋಣವನ್ನು ಕೃತಜ್ಞತೆಯಿಂದ ಸಲ್ಲಿಸುವುದು ಆದ್ಯ ಕರ್ತವ್ಯ ಎಂದು ನುಡಿದ ಶ್ರೀಗಳು ಉತ್ತಮ ಶೀಲ, ಶಿಸ್ತು, ಸಂಯಮಗಳಿಲ್ಲದ ವಿದ್ಯೆ ರಾಷ್ಟ್ರ ಪ್ರೇಮವಿಲ್ಲದ ಬಾಳು ನಿರರ್ಥಕವೆಂದು ಜನತೆಯನ್ನು ಎಚ್ಚರಿಸಿದರಲ್ಲದೆ ನ್ಯಾಯಯುತ ಸೌಲಭ್ಯವಂಚಿತ ಬಡ ಜನರ ಮೇಲೆ ಉಳ್ಳವರ ಮುಖ್ಯ ಕರ್ತವ್ಯವೆಂದರು.

ದೇಶದ ತಾಂತ್ರಿಕ ಶಿಕ್ಷಣದ ಕೊರತೆಯನ್ನು ನೀಗಿಸಲು ದಿಟ್ಟ ಹೆಜ್ಜೆ ಇಟ್ಟ ಸಿದ್ಧಗಂಗಾ ಶ್ರೀ ಶ್ರೀ ಗಳವರು ತಾಂತ್ರಿಕ ಜ್ಞಾನದೊಂದಿಗೆ ಎಂಜಿನಿಯರುಗಳು ರಾಷ್ಟ್ರಭಕ್ತಿಯನ್ನು ತುಂಬಿ ರಾಷ್ಟ್ರದ ಉತ್ತಮ ರೂವಾರಿಗಳಾಗಲು ಪಟ್ಟ ಶ್ರಮ ಅತ್ಯಂತ ಶ್ಲಾಘನೀಯ ಎಂದು ರಾಜ್ಯದ ಶಿಕ್ಷಣ ಸಚಿವ ವೀರಪ್ಪಮೊಯ್ಲಿ ಅವರು ಹೇಳಿದರು.

ನಮ್ಮ ದೇಶ ತಾಂತ್ರಿಕತೆಯಲ್ಲಿ ವಿದೇಶಿ ಜ್ಞಾನವನ್ನು ಎರವಲು ಪಡೆಯುತ್ತಿರುವುದು ವಿಪರ್ಯಾಸ ಎಂದ ಅವರು ಈ ಲೋಪ ತುಂಬಲು ಸಿದ್ಧಗಂಗಾ ತಾಂತ್ರಿಕ ಕಾಲೇಜು ಶ್ರಮಿಸಬೇಕಾಗಿದೆ ಎಂದರು. ಉತ್ತಮ ತಾಂತ್ರಿಕ ಕಾಲೇಜುಗಳಿಗೆ ಸ್ವಾಯತ್ತತೆ ನೀಡಲು ಸರ್ಕಾರ ಆಲೋಚಿಸುತ್ತಿದ್ದು 'ಸಿದ್ಧಗಂಗಾ' ತಾಂತ್ರಿಕ ಕಾಲೇಜು ಸ್ವಾಯತ್ತತೆ ಪಡೆಯುವ ನಂಬಿಕೆ ತಮಗಿದೆ ಎಂದು ಮೊಯ್ಲಿ ನುಡಿದರು.

ಬೆಳ್ಳಿಹಬ್ಬದ ಸ್ಮರಣ ಸಂಚಿಕೆಯನ್ನು ಬಿಡುಗಡೆಮಾಡಿದ ಸಂಸತ್ ಸದಸ್ಯ ಬಸವರಾಜ ಪಾಟೀಲ್ ಅನ್ವರಿಯವರು ನಮ್ಮ ಯುವಕರಿಗೆ ಕೇವಲ ತಾಂತ್ರಿಕ ಶಿಕ್ಷಣ ನೀಡಿದರೆ ಸಾಲದು ಅವರು ಸ್ವಾವಲಂಬಿಗಳಾಗುವ ಶಿಕ್ಷಣ ನೀಡುವ ಅಗತ್ಯವಿದ್ದು ಇದು ಸರಕಾರದ ಹೊಣೆ ಮತ್ತು ಕರ್ತವ್ಯವೂ ಹೌದೆಂದರು.

ಕೇಂದ್ರದ ಮಾಜಿ ಸಚಿವರಾದ ಶ್ರೀ ಎಸ್. ಗುರುಪಾದಸ್ವಾಮಿ, ರಾಜ್ಯದ ಮಾಜಿ ಮುಖ್ಯ ಮಂತ್ರಿಗಳಾದ ಶ್ರೀ ರಾಮಕೃಷ್ಣ ಹೆಗ್ಗಡೆ, ಶ್ರೀ ಎಸ್.ಆರ್. ಬೊಮ್ಮಾಯಿ ಕೃಷಿ ಮತ್ತು ತೋಟಗಾರಿಕೆ ಸಚಿವರಾದ ಶ್ರೀ ಜಿ. ಪುಟ್ಟಸ್ವಾಮಿಗೌಡ, ಮಾಜಿಸಚಿವರಾದ ಶ್ರೀ ಎಸ್. ರೇವಣ್ಣ, ಶ್ರೀ ಲಕ್ಷ್ಮಿನರಸಿಂಹಯ್ಯ, ಲೋಕಸಭಾ ಸದಸ್ಯರಾದ

ಶ್ರೀ ಜಿ. ಎಸ್. ಬಸವರಾಜು, ಶಾಸಕರಾದ ಶ್ರೀ ಶಫಿ ಅಹಮದ್, ವಿಧಾನಪರಿಷತ್ ಸದಸ್ಯರಾದ ಶ್ರೀ ಟಿ. ಹೆಚ್. ನಾರಾಯಣ ಸ್ವಾಮಿ ಮತ್ತು ಪುಣೆಯ ಭಾರತ್ ಫೋರ್ಜ್ ಸಂಸ್ಥೆಯ ಶ್ರೀ ನೀಲಕಾಂತ ಕಲ್ಯಾಣಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

ಮುಕ್ತಾಯ ಸಮಾರಂಭದ ಅಧ್ಯಕ್ಷತೆಯನ್ನು ಬೆಂಗಳೂರು ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಡಾ|| ಶ್ರೀ ಕೆ. ಹನುಮಂತಪ್ಪ ವಹಿಸಿದ್ದರು.


ಸಮಾರೋಪ ಬಾಷಣ ಮಾಡಿದ ಮಾಜಿ ಮುಖ್ಯಮಂತ್ರಿ ಹಾಗೂ ಸಂಸತ್ ಸದಸ್ಯ ಶ್ರೀ ಆರ್. ಗುಂಡೂರಾವ್ ಪ್ರತಿಭಾ ಪಲಾಯನ ತಪ್ಪಬೇಕು ಎಂದರಲ್ಲದೆ ಈ ದೇಶದಲ್ಲಿ ದಕ್ಷತೆಯಿಂದ ಕೆಲಸ ಮಾಡುವವರಿಗೆ ಪ್ರತಿಫಲ ಸಿಗಬೇಕು ಎಂದು ಆಶಿಸಿದರು. ಉತ್ತಮ ಕೆಲಸ ಮಾಡುತ್ತಿರುವ ಸಿದ್ಧಗಂಗಾ ಶಿಕ್ಷಣ ಸಂಸ್ಥೆಗೆ ವೈದ್ಯಕೀಯ ಕಾಲೇಜು ನೀಡಬೇಕೆಂದು ಸರ್ಕಾರದ ಗಮನ ಸೆಳೆದರು.


ಈಗ ಕೊಲ್ಲಿಯುದ್ಧ ಮುಗಿದಿರುವುದರಿಂದ ಭಾರತದಲ್ಲಿ ಎಂಜಿನಿಯರ್‌ಗಳ ನಿರುದ್ಯೋಗ ಸಮಸ್ಯೆ ಪರಿಹಾರವಾಗುವುದೆಂದು ಚಟಾಕಿ ಹಾರಿಸಿದರು.

ಸಮಾರಂಭದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವೆ ಶ್ರೀಮತಿ ಕೆ. ಎಸ್. ನಾಗರತ್ನಮ್ಮನವರು ವಿದ್ಯಾರ್ಥಿನಿ ನಿಲಯದ ಸೌಲಭ್ಯ ಕೇಂದ್ರ ಕಟ್ಟಡದ ಶಂಕು ಸ್ಥಾಪನೆ ನೆರವೇರಿಸಿದರು.


ಕೊನೆಯಲ್ಲಿ ಪೂಜ್ಯ ಶ್ರೀ ಶ್ರೀಗಳವರು ಆಶೀರ್ವಚನ ನೀಡಿ ವಿಜ್ಞಾನ ಧರ್ಮ ಎರಡೂ ಒಂದಕ್ಕೊಂದು ಪೂರಕವಾದರೆ ಭವಿಷ್ಯ ಆಶಾದಾಯಕವಾಗಿರುತ್ತದೆಂದು ಹೇಳಿದರು.

ವಿಜ್ಞಾನ ಮತ್ತು ತಂತ್ರಜ್ಞಾನದ ಮುನ್ನಡೆ ಮನುಕುಲಕ್ಕೆ ವಿನಾಶಕಾರಿಯಾಗಿರುವುದರ ಬಗ್ಗೆ ವಿಷಾದ ವ್ಯಕ್ತಪಡಿಸಿದರು. ಮಾನವ ಜೀವನವನ್ನು ಸುಖಮಯ ಮಾಡಬೇಕಾದ ವಿಜ್ಞಾನ ಇಂದು ವಿನಾಶ ಕಾರ್ಯದಲ್ಲಿ ಸಾಗಿದ್ದು ಜಗತ್ತನ್ನು ಧ್ವಂಸ ಗೊಳಿಸುವತ್ತ ಸಾಗಿದೆ. ಇತ್ತೀಚಿಗೆ ನಡೆದ ಕೊಲ್ಲಿಯುದ್ಧದಲ್ಲಿ ಇವು ಸಾಬೀತಾಗಿದೆ ಎಂದು ವಿವರಿಸಿದರು. ವಿಜ್ಞಾನ ಮತ್ತು ತಂತ್ರಜ್ಞಾನ ಆಧ್ಯಾತ್ಮಿಕತೆಯನ್ನು ಒಳಗೊಂಡು ಸಮಗ್ರವಾದರೆ ಮಾತ್ರ ವಿನಾಶದ ಹಾದಿಯನ್ನು ಬದಲಿಸಲು ಸಾಧ್ಯ ಎಂದು ಅಭಿಪ್ರಾಯ ಪಟ್ಟರು.


ತುಮಕೂರಿಗೆ ಬರುವವರಿದ್ದೀರಾ? ಹಾಗಿದ್ದರೆ,
ವಸತಿ, ತಿಂಡಿ ತಿನಿಸುಗಳ ನಮ್ಮ ಈ ಸ್ಥಳಗಳು ಸದಾ ನಿಮ್ಮನ್ನು ಸ್ವಾಗತಿಸುತ್ತವೆ.
ಹೋಟೆಲ್
ಶ್ರೀ ನಂಜುಂಡೇಶ್ವರ
ಊಟ, ವಸತಿ ಮತ್ತು
ಉಪಹಾರ ಮಂದಿರ,
ಬಿ.ಹೆಚ್. ರಸ್ತೆ, ತುಮಕೂರು.
ದೂರವಾಣಿ
8597, 2373, 2577
Hotel Shree Nanjundeswara
ಶ್ರೀ ನಂಜುಂಡೇಶ್ವರ
ಬೇಕರಿ
ತುಮಕೂರು ಜಿಲ್ಲೆಯ ಪ್ರಖ್ಯಾತ
ಬೇಕರಿ
ಚಿಕ್ಕಪೇಟೆ ತುಮಕೂರು.
ದೂರವಾಣಿ : 8077
ಶ್ರೀ ನಂಜುಂಡೇಶ್ವರ ರೆಸ್ಟೋರೆಂಟ್
ತುಮಕೂರಿನಲ್ಲಿ ಉತ್ತರ ಭಾರತದ ಶೈಲಿಯ ಊಟ
ಉಪಹಾರಗಳ ಶ್ರೇಷ್ಠ ದರ್ಜೆಯ ರೆಸ್ಟೋರೆಂಟ್
ಬಿ.ಹೆಚ್. ರಸ್ತೆ, ತುಮಕೂರು.
ದೂರವಾಣಿ : 2677
ಶ್ರೀ ನಂಜುಂಡೇಶ್ವರ ಸ್ವೀಟ್ಸ್
ಎಲ್ಲಾ ವಿಧವಾದ ಸಿಹಿ ಮತ್ತು ಖಾರ ತಿಂಡಿ ಹಾಗೂ
ಬೇಕರಿ ತಿನಿಸುಗಳ ನಗರದ ಏಕೈಕ ಸ್ಥಳ
ಅಶೋಕ ರಸ್ತೆ ತುಮಕೂರು.
ದೂರವಾಣಿ : 2077



ಶ್ರೀ ಮಠದಲ್ಲಿ ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿ ಜಾತ್ರೆ ಅಂಗವಾಗಿ ಫೆಬ್ರವರಿಯಲ್ಲಿ ಏರ್ಪಡಿಸಿದ್ದ 27 ನೇ ಕೃಷಿ ಮತ್ತು ಕೈಗಾರಿಕಾ ವಸ್ತು ಪ್ರದರ್ಶನದ ಉದ್ಘಾಟನಾ ಸಮಾರಂಭದಲ್ಲಿ ಪೂಜ್ಯ ಶ್ರೀ ಶ್ರೀ ಗಳವರು ಆಶೀರ್ವಚನ ನೀಡುತ್ತಿರುವುದು. ಚಿತ್ರದಲ್ಲಿ ತೋಟಗಾರಿಕೆ ಸಚಿವ ಶ್ರೀ ಜಿ. ಪುಟ್ಟಸ್ವಾಮಿ ಗೌಡರು, ಸಂಸತ್ ಸದಸ್ಯರಾದ ಶ್ರೀ ಜಿ. ಎಸ್. ಬಸವರಾಜು, ಶಾಸಕ ಶ್ರೀ ಷಫಿ ಅಹಮದ್ ಕಾಣಬಹುದು.



ವಸ್ತು ಪ್ರದರ್ಶನದ ಮುಕ್ತಾಯ ಸಮಾರಂಭದಲ್ಲಿ ವಿಧಾನ ಪರಿಷತ್ ಸದಸ್ಯ ಶ್ರೀ ಟಿ. ಹೆಚ್. ನಾರಾಯಣ ಸ್ವಾಮಿ ಯವರು ಬಹುಮಾನ ವಿತರಣೆ ಮಾಡುತ್ತಿರುವುದು. ಚಿತ್ರದಲ್ಲಿ ಪೂಜ್ಯ ಶ್ರೀ ಶ್ರೀ ಗಳವರು ಮತ್ತು ಮಾಜಿ ಸಚಿವರಾದ ಶ್ರೀ ಲಕ್ಷ್ಮಿನರಸಿಂಹಯ್ಯನವರನ್ನು ಕಾಣಬಹುದು.



ಸ್ಥಾಪನ : 1915
ತಂತಿ : "ಹ್ಯಾಪಿಮೂನ್"
ಶಾಸ್ತ್ರೋಕ್ತವಾಗಿ ತಯಾರಿಸಿದ ಸುಗಂಧ ಸಾಮುಗ್ರಿಗಳು
ಪ್ರಖ್ಯಾತವಾದ
● ಪರಿಮಳದಶಾಂಗ
● ದೂಪದ ಕೊಡ
● ವಿಭೂತಿ
● ಹವನ ಸಾಮುಗ್ರಿಗಳ
ತಯಾರಕರು
MYSORE LILLY BATHI
Y. BASAPPA
206, AVENUE ROAD
HAPPY-MOON SPECIAL BATHI
ಶಿವಪೂಜಾ
ಸಾಮುಗ್ರಿಗಳು ದೊರೆಯುತ್ತದೆ.
ಫೋನ್ : ಅಂಗಡಿ — 28009 ಮನೆ — 224623.
Y. BASAPPA PERFUMER BANGALORE-2
ವೈ. ಬಸಪ್ಪ, 206 ಅವೆನ್ಯೂ ರೋಡ್, ಬೆಂಗಳೂರು-560 002

[illegible] ರವರಿಗೆ ಅರ್ಪಣೆ.

# ಸಿದ್ಧಗಂಗಾ

ಸಂಪುಟ–27 ಸಂಚಿಕೆ–4 ಏಪ್ರಿಲ್–1991

ಮತ (ವೋಟು) ಅತ್ಯಂತ ಪವಿತ್ರವಾದ ರತ್ನ; ಬೆಲೆ ಕಟ್ಟಲಾಗದ ಮಾಣಿಕ್ಯ. ಪ್ರಜಾಪ್ರಭುತ್ವದಲ್ಲಿ ಪ್ರಜೆಗೆ ಪ್ರಾಪ್ತವಾಗಿರುವ ಅಮೂಲ್ಯ ಭಾಗ್ಯ. ಅದನ್ನು ಸತ್ಪಾತ್ರರಿಗೆ ನೀಡಿದಾಗ ಮಾತ್ರ ಅದಕ್ಕೆ ಶೋಭೆ ಸಲ್ಲುತ್ತದೆ. ರಾಷ್ಟ್ರಕ್ಕೆ ಯೋಗ್ಯ ಸೇವೆಯನ್ನು ಸಲ್ಲಿಸಿದಂತಾಗುತ್ತದೆ. ರಾಷ್ಟ್ರದ ನೀತಿಯನ್ನು ರೂಪಿಸಲು, ಪ್ರಗತಿಯನ್ನು ನಿರೀಕ್ಷಿಸಲು, ಭವಿಷ್ಯವನ್ನು ನಿರ್ಮಾಣಮಾಡಲು ಇರುವ ಏಕೈಕ ಸಂಜೀವಿನಿ ವೋಟು. ಅಂಥ ಪವಿತ್ರವಾದ ಮತವನ್ನು ಭ್ರಷ್ಟರಿಗೆ, ಅನೈತಿಕ ಮಾರ್ಗಾನುಯಾಯಿಗಳಿಗೆ, ಸ್ವಾರ್ಥಿಗಳಿಗೆ, ಹಣಕ್ಕೆ, ಆಮಿಷಕ್ಕೆ ಮಾರಿಕೊಳ್ಳುವುದು ದೇಶದ್ರೋಹ, ಧರ್ಮದ್ರೋಹ, ದೈವದ್ರೋಹ, ಅದಕ್ಕಿಂತ ಘೋರವಾದ ಪಾಪ ಮತ್ತೊಂದಿರಲಾರದು.

— ಶ್ರೀ ಶ್ರೀ ಶಿವಕುಮಾರಸ್ವಾಮಿಗಳು.

ಪ್ರಕಾಶಕರು:
ಹಳೆಯ ವಿದ್ಯಾರ್ಥಿಗಳ ಸಂಘ
ಸಿದ್ಧಗಂಗಾ ಕ್ಷೇತ್ರ.

॥ ಗುರು ಬಸವಲಿಂಗಾಯನಮಃ ॥

## ಶ್ರೀ ಸಿದ್ಧಗಂಗಾಮಠ, ತುಮಕೂರು ಜಿಲ್ಲೆ.

# ಶ್ರೀ ಶ್ರೀಗಳವರ ಜನ್ಮ ದಿನಾಚರಣೆ ಸಮಾರಂಭ.

**ದಿನಾಂಕ : 28-4-91** ನೇ ಭಾನುವಾರ - ಪ್ರಾತಃ ಕಾಲ 10 ಘಂಟೆಗೆ

**ಪರಮ ಪೂಜ್ಯ ತ್ರಿವಿಧ ದಾಸೋಹ ಮೂರ್ತಿ ಶಿವಯೋಗಿ**

**ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರ 84 ನೇ**

**ಜನ್ಮ ದಿನಾಚರಣೆ ಮಹೋತ್ಸವಕ್ಕೆ**

**ತಮಗೆಲ್ಲ ಸುಸ್ವಾಗತ.**

ಸಮಾರಂಭದ ಅಧ್ಯಕ್ಷತೆ : ಪರಮ ಪೂಜ್ಯ ಜಗದ್ಗುರು ಶ್ರೀ ತೋಂಟದಾರ್ಯ
**ಶ್ರೀ ಶ್ರೀ ಸಿದ್ಧಲಿಂಗಮಹಾಸ್ವಾಮಿಗಳು,**
ಡಂಬಳ-ಗದಗ, ಧಾರವಾಡ ಜಿಲ್ಲೆ.

ಉದ್ಘಾಟನೆ : **ಶ್ರೀ ವೀರೇಂದ್ರ ಹೆಗ್ಗಡೆ,**
ಧರ್ಮಾಧಿಕಾರಿಗಳು, ಧರ್ಮಸ್ಥಳ.

ಮುಖ್ಯ ಅತಿಥಿಗಳು : **ಶ್ರೀಮತಿ ಕೆ. ಎಸ್. ನಾಗರತ್ನಮ್ಮ,**
ಆರೋಗ್ಯ ಸಚಿವೆ, ಕರ್ನಾಟಕ ಸರ್ಕಾರ.

**ಶ್ರೀ ಮಲ್ಲಿಕಾರ್ಜುನ ಪ್ರಸನ್ನ,**
ಸಣ್ಣ ನೀರಾವರಿ ರಾಜ್ಯ ಸಚಿವರು, ಕರ್ನಾಟಕ ಸರ್ಕಾರ

ಸನ್ಮಾನ : **ಪದ್ಮಶ್ರೀ ಡಾ॥ ಎಂ. ಸಿ. ಮೋದಿ,**
**ಪದ್ಮಶ್ರೀ ಆರ್. ಎಂ. ಬಿ. ಆರಾಧ್ಯ,**
**ಡಾ॥ ಶ್ರೀ ದೇ. ಜವರೇಗೌಡ,**
**ಶ್ರೀ ಹೆಚ್.ಎಂ. ಗಂಗಾಧರಯ್ಯ,**
[redacted],
**ಇವರುಗಳಿಗೆ.**

ಅನೇಕ ಅನುಭಾವಿ ವಿದ್ವಾಂಸರುಗಳಿಂದ ಉಪನ್ಯಾಸ.
ಶ್ರೀಮಠದ ಭಕ್ತಾದಿಗಳಿಗೆ, ಅಭಿಮಾನಿಗಳಿಗೆ, ಹಿತೈಷಿಗಳಿಗೆ, ಹಳೆಯ ವಿದ್ಯಾರ್ಥಿಗಳಿಗೆ
ಹೃತ್ಪೂರ್ವಕ ಆಹ್ವಾನ.

ಬನ್ನಿ, ಈ ಗುರುವಂದನ ಕಾರ್ಯಕ್ರಮದಲ್ಲಿ ಭಾಗಿಗಳಾಗಿ, ತಮಗೆ ಸುಸ್ವಾಗತ.

# ಸಿದ್ಧಗಂಗಾ

ಸಂಪುಟ–27. ಸಂಚಿಕೆ–4. ಏಪ್ರಿಲ್ – 1991.

## ಶ್ರೀ ಸಿದ್ಧಗಂಗಾ ಗುರುಕರುಣ ತ್ರಿವಿಧಿ

ಸತ್ಯ ಲೋಕದ ಶಿವನೆ ಮರ್ತ್ಯಲೋಕದ ಬೆಳಕೆ
ಮರ್ತ್ಯ ಸತ್ಯವ ಬೆಸೆದ ನಿಜಗುಣವೇ। ಪೊರಸುರುವೆ
ಸಿದ್ಧಗಂಗಾ ಗುರುವೆ ಕೃಪೆಯಾಗು॥

ಕಾಯ ಕರಣಗಳೆಲ್ಲ ಕಾಯಕದಿ ಒಡಬೆರೆದು
ತಾಯಿ ಭಾವದಿ ಜಗವ ಪೊರೆದಿರು। ನನ್ನತಂದೆ
ಸಿದ್ಧಗಂಗಾ ಗುರುವೆ ಕೃಪೆಯಾಗು॥

ಧನ್ಯ ಕನ್ನಡನಾಡು ಧನ್ಯ ಶರಣರಬೀಡು
ಧನ್ಯವಾಯಿತು ಮರ್ತ್ಯ ತಪ ಶ್ರಮದಿ। ನನ್ನತಂದೆ
ಸಿದ್ಧಗಂಗಾ ಗುರುವೆ ಕೃಪೆಯಾಗು॥

—ಹೆಚ್. ವಿ. ವೀರಭದ್ರಯ್ಯ.

| ಲೇಖನ | ಲೇಖಕರು | ಪುಟ |
|---|---|---|


* ಶ್ರೀವಾಣಿ 5

* ಶ್ರೀ ಸಿದ್ಧಲಿಂಗೇಶ್ವರ ವಚನ 7

* ಸಂಪಾದಕೀಯ 8

* ಬಸವಣ್ಣನವರ ದೃಷ್ಟಿಯಲ್ಲಿ ಮಹಿಳೆ 11
ಜೆ ಶಾರದ ರಾಜಶೇಖರ್

* ವಚನಗಳಲ್ಲಿ ಪ್ರತಿಪಾದಿತ ಷಟ್‌ಸ್ಥಲ ವಿವೇಚನೆ 13
ಎಸ್. ಎಸ್. ಭೂಸರೆಡ್ಡಿ.

* ದಲಿತೋದ್ಧಾರಕ ಸಂವಿಧಾನ ಶಿಲ್ಪಿ ಅಂಬೇಡ್ಕರ 20
ಶ್ರೀಕರ್ಕಿ ಸುಬ್ರಾಯ ಭಟ್ಟ

* ಬೆಳಕು 24
ಸಿದ್ಧರಾಜು ಐವಾರ್

* ಜ್ಞಾನಕ್ಕೆ ಜಾತಿಯ ಬಂಧನವಿಲ್ಲ 26
ಪ. ರಾಮಕೃಷ್ಣ ಶಾಸ್ತ್ರಿ

* ರಾಜಕೀಯ ವಿಫಲತೆಗೆ ಧರ್ಮ ನಿರಪೇಕ್ಷತೆಯೇ ಕಾರಣ 29
ಕೃಪೆ : ವೇದಪ್ರಕಾಶ

* ವಿದ್ಯಾರ್ಥಿ ಜೀವನದ ಬೆಳಕು ಸರಣಿ, 31
ಬಿ.ಎಸ್. ಕೃಷ್ಣಮೂರ್ತಿ

* ಶ್ರೀಮದುದ್ದಾನೇಶ್ವರ ಶತಕಂ 33


* ಮನುಷ್ಯತ್ವದಿಂದ ದೇವತ್ವದೆಡೆಗೆ 35
ಶ್ರೀಶೈ ಜತ್ತಿ

* ನಾಳಿನ ವಿಮಾನ-ಅಸ್ತ್ರೇ 40
ಬಿ. ಸುಬ್ರಾಯ ಅಡಿಗ

* ಕಮ್ಮಾರ ತಮ್ಮಣ್ಣ 42
ಎಂ. ಆರ್. ಬೈಲಪ್ಪ

* ಸಿದ್ಧಗಂಗಾ ಕಮ್ಮಟದಲ್ಲಿ ಅರಳಿದ ಪದ್ಮಶ್ರೀ
ಆರ್. ಎಂ. ಬಿ. ಆರಾಧ್ಯರು

# ಶ್ರೀವಾಣಿ



## ಅರಮನೆಯಲ್ಲ ಛತ್ರ

ಒಮ್ಮೆ ಒಬ್ಬ ಸಾಧು ಪ್ರಯಾಣ ಮಾಡುತ್ತ ದೊಡ್ಡದೊಂದು ರಾಜಧಾನಿಗೆ ಬಂದ. ಅಲ್ಲಿ ಅರಮನೆಯನ್ನು ವಿಚಾರಿಸಿಕೊಂಡು ನಡೆದ. ಅರಮನೆ ತಲುಪಿದ ಮೇಲೆ ಒಳಗೆ ಪ್ರವೇಶಿಸಿ ವಿಶಾಲವಾದ ಹಜಾರದಲ್ಲಿ ಕುಳಿತುಕೊಂಡ. ಬಹಳ ಸಮಯವಾದರೂ ಏಳಲೇ ಇಲ್ಲ. ಸಾಯಂಕಾಲವಾಗುತ್ತ ಬಂದಿತು. ಕಾವಲುಗಾರರು ಅಲ್ಲಿಂದ ಏಳುವಂತೆ ತಿಳಿಸಿದರು. ಸಾಧು ಆ ದಿನ ಅಲ್ಲಿಯೇ ಉಳಿದು ಮರುದಿನ ಮುಂದಕ್ಕೆ ತೆರಳುವುದಾಗಿ ಹೇಳಿದ. ಕಾವಲುಗಾರರು ಕೋಪಿಸಿಕೊಂಡು ದಾರಿ-ಹೋಕರೆಲ್ಲ ಬಂದು ತಂಗಲು ಇದು ಛತ್ರವಲ್ಲ ಎಂದರು. ಸಾಧು ಇದು ಛತ್ರವೆಂದೇ ಸಾಧಿಸಿದ. ಕೊನೆಗೆ ಕಾವಲುಗಾರರಿಗೆ ಅವರ ರಾಜನನ್ನೇ ಕರೆದುತರಲು ತಿಳಿಸಿದ. ಬೇರೆ ಉಪಾಯ ಕಾಣದೆ ಕಾವಲುಗಾರರು ರಾಜನಲ್ಲಿಗೆ ಬಂದು ವಿನಂತಿಸಿಕೊಂಡರು. ರಾಜ ಯೋಗ್ಯನಾಗಿದ್ದ. ಸಾಧುವಿನ ಬಳಿಗೆ ಬಂದ. ಶಾಂತ ರೀತಿಯಲ್ಲಿಯೇ ಅರಿಕೆ ಮಾಡಿಕೊಂಡ, ಇದು ಛತ್ರವಲ್ಲ ಅರಮನೆ ಎಂಬುದಾಗಿ. ಪ್ರತಿಯಾಗಿ ಸಾಧು ಕೇಳಿದ- ರಾಜ, ನಿನಗಿಂತ ಮೊದಲು ಯಾರಿದ್ದರು? ನನ್ನ ತಂದೆ, ಅವರಿಗಿಂತ ಮೊದಲು ಯಾರಿದ್ದರು? ನನ್ನ ತಂದೆಯ ತಂದೆ ಅಂದರೆ ನನ್ನ ತಾತ, ಸರಿ ನೀನಾದಮೇಲೆ ಇಲ್ಲಿಗೆ ಯಾರು ಬರುತ್ತಾರೆ? ನನ್ನ ಮಗ, ಅವನ ನಂತರ? ನನ್ನ ಮಗನ ಮಗ, ಅಂದರೆ ನನ್ನ ಮೊಮ್ಮಗ, ಅಂದಮೇಲೆ ಇಲ್ಲಿ ಯಾರೂ ಶಾಶ್ವತವಾಗಿ ಇರಲಾರೆಂದರ್ಥವಲ್ಲವೆ? ನೀನೂ ಕೂಡಾತಾನೆ? ಅಂದಾಗ ಕೆಲವು ದಿನ ಮಾತ್ರ ಕೆಲವರು ಇದ್ದು ಹೋಗುವ ಸ್ಥಳ ಛತ್ರವಲ್ಲದೆ ಮತ್ತೇನು? ಎಂದು ಸಾಧು ಕೇಳಿದಾಗ ರಾಜನು ಪ್ರೀತನಾಗಿ ನಮಸ್ಕರಿಸಿದ ಸಾಧುವಿಗೆ. ಹಾಗೆಯೇ ಜಗತ್ತೇ ಒಂದು ಛತ್ರ. ಇಲ್ಲಿಗೆ ಬಂದು ನಾಲ್ಕು ದಿನ ಇದ್ದು ಹೋಗುವ ಎಲ್ಲರೂ ಪಥಿಕರು ಎಂದು ಅರ್ಥವಾಗುತ್ತದೆ ತಾನೆ. ಈ ಛತ್ರದಲ್ಲಿ ಇರುವಷ್ಟು ದಿನ ಸಾರ್ಥಕವಾದ ಬದುಕನ್ನು ಬಾಳುವುದೇ ನಾವು ಮಾಡಬೇಕಾದ ಪೂಜೆ.

"7-4-91 ರಂದು ಮಾದನಾಯ್ಕನಹಳ್ಳಿ ಬಸವಜಯಂತಿ ಸಮಾರಂಭದಲ್ಲಿ ನೀಡಿದ ಆಶೀರ್ವಚನದಿಂದ ಸಂಗ್ರಹ

**ಸಿದ್ಧಗಂಗಾ ಮಾಸ ಪತ್ರಿಕೆ**
**ಶ್ರೀ ಸಿದ್ಧಗಂಗಾ ಮಠ-572104**
ತುಮಕೂರು ಜಿಲ್ಲೆ

ಪ್ರಧಾನ ಸಂಪಾದಕರು
**ಪ್ರಾ॥ ಚನ್ನಪ್ಪ ಎರೇಸೀಮೆ**

* * *

ಸಂಪಾದಕರು
**ಹೆಚ್. ವಿ. ವೀರಭದ್ರಯ್ಯ**

* * *

ಸಹ ಸಂಪಾದಕರು
**ಬಿ. ವೀರಭದ್ರಯ್ಯ**
**ಪಿ. ಎನ್. ಚಂದ್ರಶೇಖರಯ್ಯ**

* * *

ಜಾಹೀರಾತು ವಿಭಾಗ
**ಎಂ. ರೇಣುಕಾರಾಧ್ಯ**

* * *

ವಿತರಣೆ ವಿಭಾಗ
**ಆರ್. ಎಸ್. ಮಲ್ಲೇಶಪ್ಪ**

* * *

ಪ್ರಕಾಶಕರು
**ಹೆಚ್. ಬಿ. ಗಂಗಾಧರಯ್ಯ**
ಹಳೆಯ ವಿದ್ಯಾರ್ಥಿ ಸಂಘದ ಪರವಾಗಿ

* * *

ಮುದ್ರಕರು
**ಶ್ರೀ ಸಿದ್ಧಲಿಂಗೇಶ್ವರಸ್ವಾಮಿ ಮುದ್ರಣಾಲಯ**

* * *

ಪ್ರಕಟಣೆಯ ಸ್ಥಳ
**ಶ್ರೀ ಸಿದ್ಧಗಂಗಾಕ್ಷೇತ್ರ**

**ಚಂದಾ ವಿವರ**
ವಾರ್ಷಿಕ ಚಂದಾ 25-00ರೂ
ಆಜೀವ ಸದಸ್ಯತ್ವ 250-00 ರೂ


## ಲೇಖಕರಲ್ಲಿ ಮನವಿ

'ಸಿದ್ಧಗಂಗಾ' ಶ್ರೀ ಸಿದ್ಧಗಂಗಾ ಮಠದಿಂದ ಪ್ರಕಟವಾಗುತ್ತಿರುವ ಮಾಸ ಪತ್ರಿಕೆ. ಶ್ರೀ ಮಠದ ಹಳೆಯ ವಿದ್ಯಾರ್ಥಿ ಸಂಘದ ಹೆಮ್ಮೆಯ ಸೇವಾ ಪುರವಣಿ. ಮೇಲಾಗಿ ಶ್ರೀ ಮಠದ ಮುಖವಾಣಿ. ಪೂಜ್ಯ ಶ್ರೀ ಶ್ರೀ ಡಾ॥ ಶಿವಕುಮಾರ ಮಹಾಸ್ವಾಮಿಗಳವರ ದಿವ್ಯ ಮಾರ್ಗದರ್ಶನದಲ್ಲಿ ಮುನ್ನಡೆದಿರುವ ಪತ್ರಿಕೆ. ತ್ರಿವಿಧ ದಾಸೋಹ ಸೇವಾ ತತ್ಪರತೆಯಿಂದ ಹೆಜ್ಜೆ ಹಾಕುತ್ತಿದೆ. ಈ ಧ್ಯೇಯ ಸಾಧನೆಗಾಗಿ ನಾಡಿನ ಗಣ್ಯ ಲೇಖಕರಿಂದ ಸಾಹಿತ್ಯ, ಸಂಸ್ಕೃತಿ, ಧರ್ಮ, ವಿಜ್ಞಾನ, ಶಿಕ್ಷಣ. ಇತಿಹಾಸ, ವೈಚಾರಿಕ, ಚಿಂತನ ಮುಂತಾದ ಲೇಖನಗಳನ್ನು ಸ್ವಾಗತಿಸುತ್ತದೆ ಅಸ್ವೀಕೃತ ಲೇಖನಗಳನ್ನು ಪಡೆಯಲು ಸಾಕಷ್ಟು ಅಂಚೆಸ್ಟಾಂಪುಗಳನ್ನು ಲಗತ್ತಿಸಿರಬೇಕು. ಲೇಖನಗಳಲ್ಲಿ ಸೂಕ್ತ ಬದಲಾವಣೆ ಮಾಡಿಕೊಳ್ಳುವ ಅಧಿಕಾರ ಸಂಪಾದಕರಿಗಿದೆ. ಅನುವಾದ, ರೂಪಾಂತರ ಲೇಖನಗಳಿಗೆ ಮೂಲ ಕೃತಿಕಾರರ ಅನುಮತಿ ಪಡೆದಿರಬೇಕು ಸ್ವೀಕೃತ ಲೇಖನಗಳಿಗೆ ಸೂಕ್ತ ಸಂಭಾವನೆ ಕೊಡಲಾಗುವುದು.

**"ಸಂಪಾದಕರು"**
**'ಸಿದ್ಧಗಂಗಾ' ಕನ್ನಡ ಮಾಸಪತ್ರಿಕೆ**
ಶ್ರೀ ಸಿದ್ಧಗಂಗಾ ಕ್ಷೇತ್ರ-572104
ತುಮಕೂರು ಜಿಲ್ಲೆ.

ಇವರಿಗೆ ಕಳುಹಿಸಿಕೊಡಬೇಕಾಗಿ ಪ್ರಾರ್ಥನೆ

# ಶ್ರೀ ಸಿದ್ಧಲಿಂಗೇಶ್ವರ ವಚನ



ಕಟ್ಟರಸನ ಕಳ್ಳರು ಬಂದು ಮುತ್ತಲು
ಪಟ್ಟಣ ಬೆದರಿತ್ತು ನೋಡಾ
ಪಟ್ಟಣದ ತಳವಾರರು ದುಷ್ಟರನೆಬ್ಬಟ್ಟಲು
ಬೆದರಿಕೆ ಬಿಟ್ಟೋಡಿತ್ತು ನೋಡಾ
ಕಾಯ ಪಟ್ಟಣ ಕಳವಳವಡಗಿತ್ತಿದನೇನೆಂಬೆನಯ್ಯಾ
ಮಹಾಲಿಂಗ ಗುರು ಶಿವಸಿದ್ದೇಶ್ವರ ಪ್ರಭುವೇ.

ದೇಹವೆಂಬ ನಗರಕ್ಕೆ ಜೀವನೆಂಬ ರಾಜ. ಅವನನ್ನು ಅರಿಷಡ್ವರ್ಗ-ಗಳೆಂಬ ಕಳ್ಳರು ಮುತ್ತಲು ಸಕಲ ಕರಣಗಳು ತಮ್ಮ ತಮ್ಮ ಪ್ರಪಂಚದ ಕಡೆಗೆ ವಿಸ್ತಾರವಾದವು. ಅಂತಹ ದೇಹ ಸಂಬಂಧಿಯಾದ ಜೀವತ್ರಯ ಗಳೆಂಬ ಬಾರುಕರಿಗೆ ಸುಜ್ಞಾನೋದಯವಾಗಿ ಅರಿಷಡ್ವರ್ಗಗಳ ವರ್ತನೆ ಯನ್ನು ನಷ್ಟಮಾಡಿ ಸತ್ಕ್ರಿಯಾ ಸಮ್ಯಕ್ ಜ್ಞಾನವಿಡಿದಾಚರಿಸಿ ಮುಂದೆ ಕಾಲ ಕಾಮಾದಿಗಳ ಭಯವನ್ನು ಕಳೆದುಕೊಂಡು ಶ್ರೀ ಗುರುವಿನ ಮಂತ್ರೋಪದೇಶದಿಂದ ಅಂಗತ್ರಯದಲ್ಲಿ ಲಿಂಗತ್ರಯವ ಸಂಬಂಧಿಸಿ ಸಕಲ ಕರಣೇಂದ್ರಿಯ ಗಳು ಲಿಂಗಮುಖವಾಗಿ, ಜೀವನ ಜೀವ ಭಾವವಳಿದು, ಭವಭೀತಿ ಬಿಟ್ಟು ಲಿಂಗದಲ್ಲಿ ಏಕತ್ವ ಹೊಂದಿತು. ಹೀಗೆ ಸರ್ವಾಂಗ ಲಿಂಗ ಸಂಬಂಧಿ ಶರಣನ ಸಕಲ ಕರಣೇಂದ್ರಿಯಗಳು ಲಿಂಗಕರಣಗಳಾಗಿ ಜೀವನ ಜೀವ ಭಾವದ ಭ್ರಾಂತಿನ ವ್ಯಾಕುಲ ಕಳೆದು ಮಂತ್ರಲಿಂಗಸ್ವರೂಪವ ಪಡೆದನು.

## ಸಿದ್ಧಗಂಗೆ ಮಹಾತ್ಮೆ

ಸಿದ್ಧರಾಜ್ ಐವಾರ್, 15/ಬಿ, ಎರಡನೇ ತಿರುವು ಸಿದ್ಧಗಂಗಾ ಬಡಾವಣೆ, ತುಮಕೂರು-2

ದೇವಾ ನೀನಿರುವುದು ಸತ್ಯವಾದರೆ
ಸಿದ್ಧಗಂಗೆ ಕ್ಷೇತ್ರವಲ್ಲವೆ?
ಸಿದ್ಧಲಿಂಗೇಶ್ವರ ಪ್ರಭು ನೀ ಕಲ್ಲಾದರೂ
ಧರ್ಮ ಶ್ರೀ ಕ್ಷೇತ್ರದಲ್ಲಿಲ್ಲವೇ? ॥ ಪಲ್ಲವಿ ॥

ಹಡೆದವರು ನಮ್ಮ ಸಾಕಿದರೇನು
ಶಿವಕುಮಾರ ಸ್ವಾಮ್ಗೆ ನಾವ್ ಮಕ್ಕಳಲ್ಲವೇ?
ಬುದ್ಧಿ ಬರುವ ಗಳಿಗೆಗೂ
ವಿದ್ಯೆ-ವಸತಿ ನೀಡಿ
ಕೆಲಸಕ್ಕೆ ಬಾರದ ಬಂಡೆಯನ್ನು
ಸುಂದರ ಮೂರ್ತಿಯಾಗಿ ಪರಿವರ್ತಿಸುವ
ಮತ್ತೊಂದು ಕ್ಷೇತ್ರವಿರುವುದೇ
॥ ೧॥

ಬರಗಾಲ-ಬಡತನ ಬಂದರೂ
ದಾಸೋಹ-ವಿದ್ಯಾದಾನ ನಿಲ್ಲದು
ಸತ್ಯವಿದೆಯೆನ್ನಲು
ಶ್ರೀ ಮಠವೇ ಸಾಕ್ಷಿಯಲ್ಲವೇ ॥ ೨ ॥

ಸತ್ಯ ಧರ್ಮವಿರುವುದನ
ಕಲಿಕಾಲದಲೂ ಕಾಣುತಿಹೆ
ನಾನಿಂದು ಬೆಳಕಿನ ಕೊನರನ್ನ
ಆ ದಿವ್ಯ ಮಂದಿರವೇ–
ಶ್ರೀ ಸಿದ್ಧಗಂಗಾ ಕ್ಷೇತ್ರ ॥ ೩ ॥

# ಸಂಪಾದಕೀಯ

**ಚುನಾವಣೆ.**

ಮುಖವಾಡಗಳು ಮತ್ತೆ ಬರುತ್ತವೆ. ಶ್ರೀ ಸಾಮಾನ್ಯನಿಗೆ ಗೌರವದ ಗೌರೀ ಶಂಕರವನ್ನು ತೋರಿಸುತ್ತವೆ. ಮಾತಿನ ಮಲ್ಲಿಗೆಯ ಮಳೆಗರೆಯುತ್ತವೆ. ಹಿರಿಯರು ರಾಕ್ಷಸರನ್ನು ಕಾಮರೂಪಿಗಳೆಂದು ಕರೆಯುತ್ತಿದ್ದರು. ಬೇಕೆನಿಸಿದಾಗ ಬೇಕಾದ ಆಕರ್ಷಕ ರೂಪಧರಿಸುವವರನ್ನು ಕಾಮರೂಪಿಗಳೆಂದು ಹೆಸರಿಸಿದ ಪೂರ್ವಿಕರಿಗೆ ಇಂದಿನ ರಾಜಕಾರಣಿಗಳ ಹಗಲುವೇಷದ ಪರಿಚಯ ಇದ್ದಿತೋ ಏನೋ. ಇವರ ಮುಂದೆ ರಾಜಾಸ್ಥಾನದ ಯಾವ ವಂದಿ ಮಾಗಧರೂ ನಿಲ್ಲಲಾರರು. ಹೊಗಳು ಭಟ್ಟರ ಪ್ರಶಸ್ತಿ ಇವರಿಗೇ ಸಲ್ಲಬೇಕು. ಸುಳ್ಳು ಇವರ ಮನೆದೇವರು. ದೇಶ, ಜನ, ಇವರಿಗೆ ತೃಣ. ಹಿರಿದದ್ದೇ ಲಾಭ-ಇವರ ಸಂತಾನ ಶನಿಸಂತಾನ. ರಕ್ತ ಬೀಜಾಸುರನ ಪರಂ ಪರೆಗೆ ನೈಜ ವಾರಸುದಾರರು ನಮ್ಮ ದೇಶದಲ್ಲಿ ಹರಿದ ಕಾವಿಕಪಿನಿಯನ್ನು ಹೊಲಿದು ತೊಟ್ಟುಕೊಂಡು ಸಾರ್ವಜನಿಕ ಸಂಪತ್ತನ್ನು ರಕ್ಷಿಸಿಕೊಂಡು ಬಂದ ಚಿತ್ರದುರ್ಗದ ಬೃಹನ್ಮಠದ ಶಿವಯೋಗಿ ಜಯದೇವ ಜಗದ್ಗುರುಗಳಂಥ ವಿರಕ್ತ ಸ್ವಾಮಿಗಳುಂಟು; ದೇಶ ಭಕ್ತಿಗೆ ಉದಾಹರಣೆಯಾಗಿ ಪ್ರಕಾಶಿಸಿದ್ದುಂಟು. ತಮ್ಮ ಚಿನ್ನದ ಕರಡಿಗೆಯನ್ನು ಅಡವಿಟ್ಟು ವಿದ್ಯಾರ್ಥಿಗಳನ್ನು ಅನ್ನವಿಟ್ಟು ಸಲಹಿದ ಸುತ್ತೂರು ಪೂಜ್ಯ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳಂಥವರುಂಟು, ಸಾರ್ವಜನಿಕ ಕಲ್ಯಾಣಕ್ಕೆ ತಮ್ಮನ್ನೂ ಅರ್ಪಿಸಿ ಕೊಂಡ ಮಾನವರತ್ನಗಳಿವರು, ಜಾತಿಯ ವಿದ್ಯಾರ್ಥಿನಿಲಯಗಳಿಗೆ ಸರ್ಕಾರವೇ ಪ್ರೋತ್ಸಾಹಿಸುತ್ತಿದ್ದ ದಿನಗಳಲ್ಲಿ ಜಾತ್ಯತೀತವಾದ ವಿದ್ಯಾರ್ಥಿನಿಲಯ ತೆರೆದು, ಕೇವಲ ಮೇಲು ವರ್ಗದವರಿಗೆ ಮೀಸಲಾಗಿದ್ದ ಸಂಸ್ಕೃತ ವೇದಾಭ್ಯಾಸವನ್ನು ಸರ್ವ ಜಾತಿ ಕುಲ ಕೋಮುಗಳಿಗೆ ಒದಗಿಸುವ ಅವಕಾಶ ಕಲ್ಪಿಸಿಕೊಟ್ಟ ಸಿದ್ಧಗಂಗೆಯ ಶಿವಯೋಗಿ ಪೂಜ್ಯ ಶ್ರೀ ಉದ್ದಾನ ಸ್ವಾಮಿಗಳಂಥವರುಂಟು. ಇವರೆಲ್ಲ ದೇಶಭಕ್ತರಾಗಿದ್ದರು. ಇಂದೂ ದೇಶಭಕ್ತರಿದ್ದಾರೆ ಮುಖವಾಡ ಧರಿಸಿ ಬರುತ್ತಿದ್ದಾರೆ ಮನೆ ಮನೆಯ ಮುಂದೆ ಬಣ್ಣದ ಮಾತಿನ ಅಣ್ಣಗಳು ಇವರೆಲ್ಲ. ನಿನ್ನೆ ಮೊನ್ನೆ ಸಾವಿರಾರು ರೂಪಾಯಿಗಳ ಸಾಲಗಾರರಾಗಿದ್ದ ಇವರು ಇಂದು ಲಕ್ಷಾಧಿಪತಿಗಳು. ಎಲ್ಲಿಂದ ಬಂತು ಇವರಿಗೆ ಸಂಪತ್ತು. ನೈತಿಕ ದಿವಾಳಿಯ ದೀಪಾವಳಿಯಲ್ಲಿ ಬಾಣ ಬಿರುಸು ಮತಾಪು ಹಚ್ಚುತ್ತಿರುವ ಈ ಕಥಾನಾಯಕರರೆಲ್ಲರ "ಭೂತ"ವೆಂಥದು ? ಗಾಂಧಿಯನ್ನು ಕೊಂದೆನೆಂದು ಒಬ್ಬ ಘೋಡ್ಸೆಯನ್ನು ಚರಿತ್ರೆ ದಾಖಲು ಮಾಡಿತು. ಆದರೆ ನಿತ್ಯ ಅಂಗುಲಂಗುಲವಾಗಿ ಗಾಂಧಿಯ ಆತ್ಮವನ್ನು ಕೊಲ್ಲುತ್ತಿರುವ ಈ ಗಾಂಧಿ ಭಕ್ತರನ್ನು ದಾಖಲಿಸುವುದೆಂತು ? ಯಾವ ಇತಿಹಾಸಜ್ಞನಿಗೆ ಸಾಧ್ಯವಾದೀತು ? ಇವರ ತತ್ವ

ನಿಷ್ಠೆ ಯಾವುದಕ್ಕೆ? ದೇಶ ಇವರಿಗೆ ಮುಖ್ಯವಾಗಿದೆಯೆ ಡೊಂಬರಾಟದ ಚಾಣಾಕ್ಷರಿವರಲ್ಲವೆ ? ಪಕ್ಷಗಳ ಹೆಸರು ಬೇರೆ ಇವರಿಗೆ ? ಅವೂ ಆಕರ್ಷಕ ಅಕ್ಷರಗಳ ಒಕ್ಕೂಟದಲ್ಲಿ. ಬಸವಣ್ಣನವರು ಅಂದು ಒಂದು ಮಾತು ಹೇಳಿದರು " ಹೆಂಡದ ಮಡಕೆಯ ಹೊರಗೆ ತೊಳೆದಂತೆ " ಎಂದು. ಈ ನಾಯಕರುಗಳು ಇಂದು ಇದಕ್ಕಿಂತ ಬೇರೆ ಏನನ್ನು ಮಾಡಿದ್ದಾರೆ ಒಳಗಿನ ವಾಸನೆ ಹೋಗಿದೆಯೆ ? ಭ್ರಷ್ಟಾಚಾರವೇ ಜೀವನದ ರಾಷ್ಟ್ರೀಯ ಮಾರ್ಗವಾಗುವಂತೆ ನಡೆದು ತೋರಿಸುತ್ತಿರುವ ಇವರಿಗೆ ಹತ್ತನೆಯ ಲೋಕಸಭೆಯ ಈ ಚುನಾವಣಾ ಯಜ್ಞದಲ್ಲಿ ಭಾರತೀಯ ಎಂತಹ ಆಹುತಿಯನ್ನು ಕೊಡಬೇಕು ? ಯಾವ ಹವಿಸ್ಸನ್ನು ಯಜ್ಞಕುಂಡಕ್ಕೆ ಅರ್ಪಿಸಬೇಕು ? ಭಾರತೀಯ ಮತದಾರನೀಗ ಸಾರ್ವಭೌಮ ಅವನ ಕೈಯಲ್ಲೀಗ ಜಲಿಕಟ್ಟಲಾಗದ ದಿವ್ಯಾಸ್ತ್ರ. ಅದು ಸರಿಯಾಗಿ ಬಳಕೆಯಾದರೆ ಮಾತ್ರ ಲೋಕ ಕಲ್ಯಾಣ. ಇಲ್ಲದಿರೆ " ಮೋಹಿನಿ ಭಸ್ಮಾಸುರ "ನ ಕಥೆಯು ಪುನರಾವತಾರ. ಭಾರತದ ಕಲ್ಯಾಣವೆಂದರೆ ಲೋಕದ ಕಲ್ಯಾಣವೆಂದೇ ಅರ್ಥ.

ಚುನಾವಣೆ ಚುಂಬಕಗಾಳಿಯಾಗಿ ಬೀಸುತ್ತಿದೆ ಭಾರತದ ದಶದಿಕ್ಕುಗಳಲ್ಲಿ. ಅದಕ್ಕೀಗ ಬೇಕಾಗಿರುವುದು ದೇಶಕಲ್ಯಾಣದ ಚಿಂತೆ ಹೊತ್ತ ಲಾಲ್‌ಬಹದ್ದೂರ್ ಶಾಸ್ತ್ರಿಗಳಂಥ ಮಹಾನಾಯಕರೇ ಹೊರತು ಮುಖವಾಡಗಳ ವೇಷಧಾರಿಗಳಲ್ಲ.

---

ಒಡೆಯರಾಡುವ ಮಾತು ಕಡೆಯ ಪರಿಯಂತರ ಕೇಳಿ, ಇದಿರುವೋಗಿ
ಕಿಂಕರನಾಗಿ ನಡುಗುತ್ತ ಬಿನ್ನಹವ ಮಾಡುವ ಸದ್ಭಕ್ತನ ತೋರಯ್ಯ.
ಒಡೆಯರಾಡುವ ಮಾತ ಕಂಡು, ಕರೆವಲ್ಲಿ ಕೆಡೆ ಮೆಟ್ಟಿ ಬಾಯಿ ಘನ
ವೆಂದು ಆಡುವವನ ತೋರದಿರಯ್ಯ! ಅವನ ಸಂಗದಲಿ ಇರಿಸದಿರಯ್ಯ!
ಅವನ ಸಹಪಂಕ್ತಿಯಲ್ಲಿ ಕುಳ್ಳಿರಿಸದಿರಯ್ಯ, ಕೂಡಲ ಸಂಗಮ
ದೇವಯ್ಯ ನಿಮ್ಮ ಬೇಡುವುದೊಂದೇ ವರವ.

– ಬಸವಣ್ಣ.

# ಬಸವಣ್ಣನವರ ದೃಷ್ಟಿಯಲ್ಲಿ ಮಹಿಳೆ

ಜಿ. ಶಾರದ ರಾಜಶೇಖರ್, 847, 4ನೇ ಮುಖ್ಯ ರಸ್ತೆ, ವಿಜಯನಗರ, ಬೆಂಗಳೂರು - 40

ಹನ್ನೆರಡನೆಯ ಶತಮಾನದಲ್ಲಿ ಕರ್ನಾಟಕದಲ್ಲಿ ಬಸವಣ್ಣನವರ ನೇತೃತ್ವದಲ್ಲಿ ನಡೆದ ಒಂದು ಮಾನವೀಯಕ್ರಾಂತಿ ಮಾನವ-ಮಾನವರಲ್ಲಿ ಇದ್ದ ತಾರತಮ್ಯಗಳನ್ನು ಹೋಗಲಾಡಿಸಲು ಶ್ರಮಿಸಿದ್ದೇ ಅಲ್ಲದೆ ಗಂಡಿನ ಕೇವಲ ಒಂದು ಚಿರಾಸ್ತಿಯಂತಿದ್ದ ಹೆಣ್ಣಿನ ಸ್ಥಾನಮಾನಗಳನ್ನು ಮೇಲೆತ್ತಲು ಮಹಾ ಕಾರ್ಯವು ನಡೆಯಿತು. ಹೆಣ್ಣನ್ನು ಮಾಯೆ ಎಂದು, ಭೋಗದ ವಸ್ತುವೆಂದು ಕೀಳಾಗಿ ಕಾಣುವ ಸಂಕುಚಿತ ದೃಷ್ಟಿ ತೊಲಗಿ ಅವಳಲ್ಲಿ ಮಹತ್ವವನ್ನು ಗುರುತಿಸಿದ ಕಾರ್ಯ ನಡೆಯಿತು ಹೆಣ್ಣು ಪುರುಷರಿಗಿಂತ ಕೀಳಲ್ಲ, ತನ್ನ ಶುದ್ಧ ಚರಿತ್ರೆಯ ಶ್ರದ್ಧಾಸಕ್ತಿಯ ಆಚರಣೆಗಳಿಂದ ಪುರುಷರನ್ನು ಮೀರಿ ನಿಲ್ಲಬಲ್ಲ ಶಕ್ತಿ ಆಕೆಯಲ್ಲಿದೆ ಎಂಬುದಕ್ಕೆ ಬಸವಯುಗದ ಅನೇಕ ಶರಣೆಯರ ಪಾವನ ಚರಿತ್ರೆಗಳು ಸಾಕ್ಷಿಯನ್ನು ನುಡಿಯುತ್ತಿವೆ.

ಬಸವಣ್ಣನವರು ನಡೆಸಿದ ಅನೇಕ ಆಂದೋಲನದಲ್ಲಿ ಸ್ತ್ರೀಯನ್ನು ಸಮಾನತೆಯ ಸಹಭಾಗಿಯೆಂದು ಭಾವಿಸಿ ಪ್ರತಿಯೊಂದು ಕಾರ್ಯದಲ್ಲಿ ಮಹಿಳೆಯರನ್ನು ತೊಡಗಿಸಿದರು.

ಬ್ರಾಹ್ಮಣ ಧರ್ಮದಲ್ಲಿ ಸ್ತ್ರೀ ಶೂದ್ರ ಸ್ಥಾನದಲ್ಲಿದ್ದಳು. ಅಕೆಗೆ ದೀಕ್ಷೆಯ ಹಕ್ಕಿರಲಿಲ್ಲ, ಪೂಜೆಯ ವಿಧಿಗಳಲ್ಲಿ ಭಾಗವಹಿಸಲು ಅರ್ಹಳಾಗಿರಲಿಲ್ಲ. ಈ ವಿಷಯ ಬಸವಣ್ಣನವರ ಮನಕ್ಕೆ ಅತೀವ ವೇದನೆಯನ್ನುಂಟುಮಾಡಿತು. ಈ ಬೇಧ ಭಾವವನ್ನು ತೊಡೆದು ಹಾಕಲು ಮುಂದಾದರು. ಅದನ್ನು ಕಾರ್ಯರೂಪಕ್ಕೂ ತಂದರು. ಬಸವಣ್ಣನವರ ಪ್ರಕಾರ ಸ್ತ್ರೀ ಮಹಾದೇವಿ, ಆಕೆ ಯಾವ ಪಾತ್ರವನ್ನಾಡಲು ಯೋಗ್ಯತೆ ಉಳ್ಳವಳು. ಪುರುಷನಂತೆ ಆಕೆಯೂ ಇಷ್ಟ ಲಿಂಗವನ್ನು ಧರಿಸಿ ಪೂಜೆ ಮಾಡಲು ಅರ್ಹಳು, ತನ್ನ ಅಭಿಪ್ರಾಯವನ್ನು ಹೊಂದಿರಲೂ ಅದನ್ನು ಅಭಿವ್ಯಕ್ತ ಗೊಳಿಸಲು ಸ್ವಾತಂತ್ರವಿದೆ. ಯಾರ ಜೊತೆಗಾದರೂ ಸರಿ ಯಾವ ವಿಷಯದಲ್ಲಾದರೂ ಚರ್ಚೆಗೆ ನಿಲ್ಲಲು ಆಕೆಗೆ ಅವಕಾಶ ಮಾತ್ರವೆ ಅಲ್ಲದೆ ಯೋಗ್ಯತೆಯೂ ಇದೆ ಎಂದು ಪ್ರತಿಪಾದಿಸಿ ಅನುಭವ ಮಂಟಪದಲ್ಲಿ ಆಕೆಗೆ ಭಾಗವಹಿಸಲು ಅನುವು ಮಾಡಿ,ಕೊಟ್ಟರು. 'ಹೆಣ್ಣು ಮಾಯೆಯಲ್ಲ' ಎಂಬುದು ಶರಣರ ಒಟ್ಟಿನ ಅಭಿಪ್ರಾಯ.

ಸಂಪ್ರದಾಯದ ಪ್ರಕಾರ ಹೆಣ್ಣು, ಮಣ್ಣು ಹೊನ್ನು ಈ ಮೂರು ದುಃಖಕ್ಕೆ ಮೂಲ ಆದರೆ ಶರಣರ ಪ್ರಕಾರ ಈ ಮೂರಕ್ಕೂ ಮಾನವನ ಮನ್ಸಸಿನ ಆಸೆಯೇ ಮೂಲ, ಅವು ದೊರಕದಿದ್ದಾಗ ದುಃಖಕ್ಕೆ ಕಾರಣ ಎಂದರು. ಇನ್ನೂ ಮುಂದೆಯೋಚಿಸಿ ಹೆಣ್ಣು-ಗಂಡೆಂಬುದು ಹೊರಗಿನ ರೂಪವೇ ಹೊರತು ಆದರೊಳಗಿನ ಆತ್ಮ ಯಾವುದೂ ಅಲ್ಲವೆಂಬುದು ಶರಣರ ಸ್ಪಷ್ಟ ಅಭಿಪ್ರಾಯ.

ಜೊತೆಗೆ ಹೆಣ್ಣು ಇಹ ಜೀವನಕ್ಕೆ ಅತ್ಯಗತ್ಯವಾದ ಸಹಜೀವಿ ಎಂಬುದನ್ನು ಮನಃಪೂರ್ವಕವಾಗಿ ಒಪ್ಪಿಕೊಂಡಿದ್ದರು. ಬಸವಣ್ಣನವರು ಈ ಆದರ್ಶದ ನೆಲೆ, ಸೆಲೆ, "ಸತಿ ಪತಿಗಳು ಒಂದಾದ ಭಕ್ತಿ ಹಿತವಪ್ಪುವುದು ಶಿವಂಗೆ" ಎಂಬ ದೇವರ ದಾಸಿಮಯ್ಯನ ವಚನದಂತೆ ಅನೇಕ ಮಹಿಳೆಯರು ಪತಿಯ ಕಾಯಕ ದೀವಿಗೆಯಲ್ಲಿ ಬತ್ತಿಯಾಗಿಉರಿದು, ಎಣ್ಣೆಯಾಗಿ ತೇದರು, ಪ್ರಕಾಶವಾಗಿ ಹೊಮ್ಮಿದರು. ಮಾನವ ಸಹಜ ದೌರ್ಬಲ್ಯಕ್ಕೆ ಸಿಕ್ಕಿ ಅಧಃಪತನದತ್ತ ಸಾಗಬಹುದಾದ ಗಂಡನನ್ನು ಸಕಾಲದಲ್ಲಿ ಎಚ್ಚರಿಸಿ ಮುಕ್ತಿ ಪಥದತ್ತ ಕೊಂಡೊಯ್ದ ಶರಣೆಯರು ಅನೇಕರಿದ್ದಾರೆ, ಅನೇಕ ಮಹಿಳೆಯರಿಗೆ ಬಸವಣ್ಣನವರು ಉತ್ತೇಜನ ನೀಡಿದುದರ ಫಲವಾಗಿ ವಚನ ಕಾರ್ತಿಯರಾಗಿ ಅನೇಕ ವಚನಗಳನ್ನು ರಚಿಸಿದರು. ತಮ್ಮ ಜೀವನಾನುಭವದ ವಿಷಯಗಳನ್ನೇ ವಸ್ತುವಾಗಿಟ್ಟುಕೊಂಡು ಸುಂದರ ವಚನಗಳನ್ನು ರಚಿಸಿದ್ದಾರೆ.

"ಯತ್ರನಾರ್ಯಾಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ"

ಎಂಬ ಆದರ್ಶವಾಣಿಯನ್ನು ಕಾರ್ಯರೂಪಕ್ಕೆ ತಂದವರು ಭಕ್ತಿ ಭಂಡಾರಿ ಬಸವಣ್ಣನವರು. ಬಸವಣ್ಣನರ ನೇತೃತ್ವದಲ್ಲಿ ನಡೆದ ಈ ಮಹಾಕ್ರಾಂತಿ ಕನ್ನಡ ನಾಡಿನ ಚರಿತ್ರೆಯಲ್ಲಿ ಹೊಸ ಮನ್ವಂತರವನ್ನು ಸೃಷ್ಟಿಸಿತು. ವ್ಯಕ್ತಿಯ ವಿಕಾಸಕ್ಕೆ ನಾಂದಿಯಾಯಿತು.

'ಪರವಧುವನ್ನು ಮಹಾದೇವಿಯೆಂದು ಕಾಂಬೆ'
'ಹೆಣ್ಣು ಪ್ರತ್ಯಕ್ಷ ಕಪಿಲಸಿದ್ಧಮಲ್ಲಿಕಾರ್ಜುನ'

ಎಂಬ ಶರಣರವಾಣಿಯು ಆದರ್ಶ ಸ್ತ್ರೀಯರ ಉದ್ಧಾರಕ್ಕೆ ನಾಂದಿಯಾಯಿತು. ಹೆಣ್ಣಿನ ಬಾಳಲ್ಲಿ ಕವಿದಿದ್ದ ಅಂಧಕಾರವನ್ನು ಹೋಗಲಾಡಿಸಿ ಜ್ಞಾನ ಹಾಗೂ ಆಧ್ಯಾತ್ಮಿಕ ಜ್ಯೋತಿಯನ್ನು ಬೆಳಗಿಸಿದರು.

# ವಚನಗಳಲ್ಲಿ ಪ್ರತಿಪಾದಿತ ಷಟ್‌ಸ್ಥಲ ವಿವೇಚನೆ

ಪ್ರೊ : ಎಸ್. ಎಸ್. ಭೂಸರೆಡ್ಡಿ, ಲಕ್ಷ್ಮೀನಗರ, ಧಾರವಾಡ–೪

ಜಾಗತಿಕ ದಾರ್ಶನಿಕ ಸಿದ್ಧಾಂತಗಳಲ್ಲಿ ವೀರಶೈವ ಸಿದ್ಧಾಂತಕ್ಕೆ ತನ್ನದೇ ಆದ ವೈಶಿಷ್ಟ್ಯತೆಯಿದೆ ನಿತಾಂತ ವೈಚಾರಿಕ ಪ್ರಜ್ಞೆಯನ್ನು ಅರಳಿಸಿಕೊಂಡು ವ್ಯವಹರಿಕ ವೈಜ್ಞಾನಿಕ ಹಿನ್ನೆಲೆಯಲ್ಲಿ ಭದ್ರವಾದ ನೀತಿಯ ತಳಹದಿಯ ಮೇಲೆ ಸೃಷ್ಟಿತತ್ತ್ವದ ಪ್ರಾಮಾಣಿಕ ಆಧಾರದ ಮೇಲೆ ತಮ್ಮ ನಿಲುವುಯನ್ನು ವಿಶ್ಲೇಷಿಸಿದ ಶರಣರು ವೀರಶೈವ ಸಿದ್ಧಾಂತಕ್ಕೆ ಅಪ್ರತಿಮ ಕೊಡುಗೆ ನೀಡಿದ್ದಾರೆ. ಭಾರತೀಯ ಧರ್ಮಗಳಲ್ಲಿ ವೀರಶೈವ ಧರ್ಮಕ್ಕೆ ಇಂದೇನಾದರೂ ಮನ್ನಣೆಯಿದ್ದರೆ ಶರಣರು ರೂಪಿಸಿದ ಮೂಲಕ ಸಿದ್ಧಾಂತವೇ ಕಾರಣವೆನ್ನಬಹುದು. ಒಂದು ಪರಿಪೂರ್ಣ ಧರ್ಮವು ಹೇಗಿರಬೇಕೆಂಬುದಕ್ಕೆ ವೀರಶೈವ ಧರ್ಮವು ಹೆಜ್ಜೆಹೆಜ್ಜೆಗೆ ತೋರಬೇಕಾಗಿದೆ. ಸಮಸ್ತ ಮಾನವ ಕುಲವನ್ನು ತನ್ನೆದುರಿಗಿಟ್ಟುಕೊಂಡು ಬರಬಹುದಾದ ಸಂದೇಹ ಸಂದೋಹಗಳನ್ನು ನಿಸ್ಸಂಕೋಚವಾಗಿ ಪರಿಹಾರಮಾಡಿದ ಈ ಧರ್ಮ ನಿಜವಾದ ಅರ್ಥದಲ್ಲಿ ವಿಶ್ವಧರ್ಮವೇ ಆಗಿದೆ. ಮಾನವ ಚೇತನದ ಪ್ರೇರಕ ಮಹಾಶಕ್ತಿ ಆತನ ಹೃದಯ, ಈ ಹೃದಯಸ್ಥಾನವನ್ನು ಕೇಂದ್ರಶಕ್ತಿಯನ್ನಾಗಿ ಮಾರ್ಪಡಿಸಿ, ತನ್ಮೂಲಕ ಆತ್ಮೋದ್ಧಾರದೊಡನೆ ಲೋಕೋದ್ಧಾರಮಾಡಿದ ಹಿರಿಮೆ ಈ ಧರ್ಮಕ್ಕೆ ಸಲ್ಲುತ್ತದೆ. ಅವರು ಗುಡಿಗುಂಡಾರಗಳಲ್ಲಿ ದೇವರನ್ನು ಹುಡುಕಲಿಲ್ಲ. “ಕಾಲೇ ಕಂಭ ದೇಹವೇ ದೇಗುಲ ಶಿರವೇ ಹೊನ್ನ ಕಳಸವಯ್ಯಾ” ಎಂದು ದೇವರನ್ನು ತಮ್ಮಲ್ಲಿಯೇ ಕಂಡವರು. ಏಕದೇವೋಪಾಸನೆಯ ಮೂಲಕ ಪ್ರತಿಯೊಬ್ಬ ವ್ಯಕ್ತಿಯಲ್ಲಿರುವ ಆಂತರಿಕ ಮಹಾ ಶಕ್ತಿಯನ್ನು ತೋರಿದವರು. ‘ಮರಣವೇ ಮಹಾನವಮಿ’ ಎಂದವರು. ಲೋಕದಲಿದ್ದುಕೊಂಡು ಸರ್ವ ಭೋಗೋಪಭೋಗಗಳನ್ನು ತೋರಿಸಿಕೊಟ್ಟ ಶರಣರು ನಿಜವಾಗಿಯೂ ಮಹಾದರ್ಶನಿಕರು. ತಾವು ಕಂಡುಂಡ ಬಾಳಿನ ರಸನಿಮಿಷಗಳನ್ನು ವಚನ ಸಾಹಿತ್ಯಕ್ಕೆ ಮಹಾಸಾಗರದಲ್ಲಿ ತೇಲಿಬಿಟ್ಟದ್ದಾರೆ, ಅವು ಸಾಹಿತ್ಯಕ್ಕೆ ಸಾಹಿತ್ಯ ತತ್ತ್ವಕ್ಕೆ ತತ್ತ್ವ.

ಈ ದೆಸೆಯಲ್ಲಿ ವೀರಶೈವ ಸಿದ್ಧಾಂತವು ಮಾನವನು ಮಹಾಮಾನವನಾಗುವ, ದೇವಮಾನವನಾಗುವ ಬಗೆಯನ್ನು ನಿರೂಪಿಸುವ ದೃಷ್ಟಿಯಿಂದ ‘ಅಷ್ಟಾವರಣವೇ ಅಂಗವಾಗಿ, ಪಂಚಚಾರವೇ ಪ್ರಾಣವಾಗಿ, ಷಟ್‌ಸ್ಥಲವೇ ಆತ್ಮಸ್ವರೂಪ’ ವೆಂದು ನಿರೂಪಿಸಿದ್ದಾರೆ. ಹನ್ನೆರಡನೆಯ ಶತಮಾನದ ಬಸವಾದಿ ಶರಣರು ಈ ತತ್ತ್ವದ ತಳಹದಿಯ ಮೇಲೆಯೇ ಸಾಮಾನ್ಯ ಜನರಿಗೂ ತಿಳಿಯಬೇಕೆಂಬ ಹಿರಿದಾದ ಹಂಬಲದಿಂದ ಷಟ್‌ಸ್ಥಲ ಕ್ರಮದಲ್ಲಿಯೇ ವಚನ ರಚನೆ ಮಾಡಿದುದು ಐತಿಹಾಸಿಕ ಸತ್ಯ; ಶರಣರ ಈ ವಚನಗಳಿಗೆ ಷಟ್‌ಸ್ಥಲದ ವಚನಗಳೆಂದೇ ಕರೆದಿರುವುದು ಅರ್ಥಪೂರ್ಣ-

ವಾಗಿದೆ. ಇಂದಿಗೂ ಶರಣರವಚನಗಳನ್ನು ಷಟ್‌ಸ್ಥಲ ಕ್ರಮದಲ್ಲಿಯೇ ಜೋಡಿಸಿ, ಸಂಪಾದನೆ ಮಾಡುವ ಕಾರ್ಯ ಅವ್ಯಾಹತವಾಗಿ ಸಾಗಿದೆ. ಇದರಿಂದ ವೀರಶೈವರು ಷಟ್‌ಸ್ಥಲಕ್ಕೆ ಎಷ್ಟೊಂದು ಮಹತ್ವಕೊಟ್ಟಿದ್ದಾರೆ ಎಂಬುದು ಗೋಚರವಾಗುತ್ತದೆ. ಆದುದರಿಂದ ಷಟ್‌ಸ್ಥಲದ ವಿವೇಚನೆಯನ್ನು ಸಾಧ್ಯವಾದಷ್ಟಗೆ ವಚನಗಳ ಮುಖಾಂತರ ಪ್ರಸ್ತುತ ಪಡಿಸುವುದೇ ಈ ಲೇಖನದ ಉದ್ದೇಶವಾಗಿದೆ.

ಈಗಾಗಲೇ ಸರ್ವವಿದಿತವಾದಂತೆ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ, ಇವೇ ಅರು ಸ್ಥಲಗಳು. ಇವುಗಳನ್ನೇ ಬಸವಾದಿ ಪ್ರಮಥರು ಪಾರಿಭಾಷಿಕ ಈ ಅರ್ಥದಲ್ಲಿ ಷಟ್‌ಸ್ಥಲಗಳೆಂದು ಕರೆದಿದ್ದಾರೆ. ಅಂಗವು ಲಿಂಗವಾಗುವುದೇ ಲಿಂಗಾಂಗ ಸಾಮರಸ್ಯ. ಈ ಸಾಧನೆಗೆ ಷಟ್‌ಸ್ಥಲಗಳೇ ಸೋಪಾನಗಳು. ಭಕ್ತ, ಮಹೇಶ, ಪ್ರಸಾದಿ ಸ್ಥಲಗಳು ಕ್ರಿಯಾತ್ಮಕವಾಗಿದ್ದರೆ, ಪಾಣಲಿಂಗಿ, ಶರಣ, ಐಕ್ಯ ಜ್ಞಾನಾತ್ಮಕವಾಗಿವೆ. ಪ್ರಥಮ ಸ್ಥಲವಾದ ಭಕ್ತಸ್ಥಲದ ಲಕ್ಷಣಗಳನ್ನು ವಚನಗಳ ಮೂಲಕವಾಗಿಯೇ ನೋಡೋಣ. ಭಕ್ತಿಯ ಮುಖ್ಯ ಲಕ್ಷಣವೆಂದರೆ ಶ್ರದ್ಧಾಭಕ್ತಿಯಿಂದ ಆಚಾರಲಿಂಗವಾಗುವುದು. ಚನ್ನಬಸವಣ್ಣನವರು ಸದ್ಭಕ್ತನು ಹೇಗಿರಬೇಕೆಂಬುದನ್ನು ಹೇಳಿದ್ದಾರೆ: ನೋಡಿ ಈ ವಚನದಲ್ಲಿ-

"ಕಾಮಬೇಡ ಪರಸ್ತ್ರೀಯರಲ್ಲಿ,
ಕ್ರೋಧಬೇಡ ಗುರುವಿನಲ್ಲಿ,
ಲೋಭಬೇಡ ತನುಮನದಲ್ಲಿ,
ಮೋಹಬೇಡ ಸಂಸಾರದಲ್ಲಿ.
ಮದಬೇಡ ಶಿವಭಕ್ತರಲ್ಲಿ,
ಮತ್ಸರಬೇಡ ಸಕಲ ಪ್ರಾಣಿಗಳಲ್ಲಿ;
ಇಂತೀ ಷಡ್ವಿಧಗುಣವನರಿದು ಮೆರೆಯಬಲ್ಲಡೆ;
ಆತನೆ ಸದ್ಭಕ್ತ ಕಾಣಾ ಕೂಡಲ ಚೆನ್ನಸಂಗಮದೇವಾ!"

ಇದೊಂದು ಅದಯ್ಯನ ಈ ವಚನವಂತೂ ಭಕ್ತನಾದವನಿರಬೇಕಾದ ಲಕ್ಷಣಗಳನ್ನು ಬಹುವ್ಯವಸ್ಥಿತವಾಗಿ ನಿರೂಪಿಸುತ್ತದೆ.

"ತನುವಿನಲ್ಲಿ ನಿರ್ಮೋಹ, ಮನದಲ್ಲಿ ನಿರಹಂಕಾರ,
ಪ್ರಾಣದಲ್ಲಿ ನಿರ್ಭಯ, ಚಿತ್ತದಲ್ಲಿ ನಿರಪೇಕ್ಷೆ,
ವಿಷಯಂಗಳಲ್ಲಿ ಉದಾಸೀನ, ಭಾವದಲ್ಲಿ ದಿಗಂಬರ,
ಜ್ಞಾನದಲ್ಲಿ ಪರಮಾನಂದ ನೆಲೆಗೊಂಡ ಬಳಿಕ,
ಸೌರಾಷ್ಟ್ರ ಸೋಮೇಶ್ವರ ಲಿಂಗವು ಬೇರಿಲ್ಲ ಕಾಣಿರೋ"

ಮಾನವನು ಅನೇಕ ದೌರ್ಬಲ್ಯಗಳಿಗೆ ಬಲಿಯಾಗುವುದು ಸಹಜವೇ. ಈ ಎಲ್ಲ ಅವಗುಣಗಳನ್ನು ಬೇರು ಸಹಿತ ಕಿತ್ತೊಗೆದಾಗಲೇ ಆತನು ಭಕ್ತಸ್ಥಲಕ್ಕೆ ಸೇರಲು ಅರ್ಹನಾಗುತ್ತಾನೆ. ಬಸವಣ್ಣನವರು ಅತ್ಯಂತ ಮನೋಹರವಾಗಿ ಬೆಳೆಯುವ ದಾರಿಯನ್ನು ತೋರಿದ್ದಾರೆ–

"ಬೆಳೆದ ಭೂಮಿಯಲ್ಲೊಂದು ಪ್ರಳಯದ ಕಸಹುಟ್ಟೆ
ತಿಳಿಯಲೀಯದು, ಎಚ್ಚರಲೀಯದು.
ಎನ್ನವಗುಣವೆಂಬ ಕಸನಕಿತ್ತು ಸಲಹಯ್ಯಾ, ಲಿಂಗತಂದೆ;
ಸುಳಿದೆಗೆದು ಬೆಳೆವೆನು ಕೂಡಲ ಸಂಗಮದೇವಾ"

ಭಕ್ತಿರಸವನ್ನು ಮನದಣಿಯೇ ಮಿಾಯಿಸಿದ ಬಸವಣ್ಣ ಭಕ್ತಸ್ಥಲಕ್ಕೆ ಪ್ರಥಮಾ ಚಾರಿ; ಜ್ವಲಂತ ನಿದರ್ಶನ. ಅಂತೆಯೇ ಆತನು ಭಕ್ತಿಭಂಡಾರಿ. ಆಡಂಬರದ ಭಕ್ತಿಯನ್ನು ಆಯ್ದಕ್ಕಿ ಲಕ್ಕಮ್ಮ ಈ ರೀತಿ ವ್ಯಕ್ತ ಮಾಡಿದ್ದಾಳೆ:

"ಗರ್ವದಿಂದ ಮಾಡುವ ಭಕ್ತಿ ದ್ರವ್ಯದ ಕೇಡು.
ನಡೆಯಿಲ್ಲದ ನುಡಿ ಅರಿವಿಂಗೆ ಹಾನಿ,
ಕೊಡದೆ ತ್ಯಾಗಿ ಎನಿಸಿಕೊಂಬುದು ಮುಡಿಯಿಲ್ಲದ ಶ್ರೀಂಗಾರ
ದೃಢವಿಲ್ಲದ ಭಕ್ತಿ ಅಡಿ ಒಡೆದ ಕುಂಭದಲ್ಲಿ ಸುಜಲವ ತುಂಬಿದಂತೆ.
ಮಾರಯ್ಯ ಪ್ರಿಯ ಅಮರೇಶ್ವರ ಲಿಂಗವ ಮುಟ್ಟದ ಭಕ್ತಿ"

ಭಕ್ತ ಸ್ಥಲಕ್ಕೇರುವುದು ಸುಲಭದ ಮಾತೇನಲ್ಲ. ಎಂಬುದಕ್ಕೆ ಬಸವಣ್ಣ ನವರ ವಚನವೇಸಾಕ್ಷಿ

"ಭಕ್ತಿಯೆಂಬುಂದ ಮಾಡಬಾರದು,
ಕರಗಸದಂತೆ ಹೋಗುತ್ತ ಕೊಯ್ವುದು ಬರುತ್ತ ಕೊಯ್ವುದು
ಘಟಸರ್ಪನಲ್ಲಿ ಕೈದುಡುಕಿದಡೆ ಹಿಡಿವುದಮಾಣ್ಬುದೆ ಕೂಡಲಸಂಗಮದೇವಾ"

ಒಟ್ಟಿನಲ್ಲಿ ಶರಣರ ದೃಷಿಯಲ್ಲಿ ಭಕ್ತಿಗೆ ವಿಶಿಷ್ಟ ಸ್ಥಾನವಿದೆ. ಭಕ್ತಿಯೇ ಶಕ್ತಿ. ಶಕ್ತಿಯೇ ಮುಕ್ತಿ. ಅಂತೆಯೇ ಭಕ್ತಿ ಪಂಚಮ ಪುರುಷಾರ್ಥವೆನಿಸಿಕೊಂಡಿದೆ. ಇದು ಶರಣರ ಪ್ರಗತಿಯ ದ್ಯೋತಕ. ಭಕ್ತಿಯೆಂಬುದು ತೋರುಂಬುವ ಲಾಭವಲ್ಲ. ಅಜ್ಞಾನ, ಕಂದಾಚಾರ ಮೂಢ ನಂಬಿಕೆಗಳನ್ನು ದೂರೀಕರಿಸಿ, ಶಾಸ್ತ್ರೀಯವಾಗಿ ಧರ್ಮ ತತ್ವದ ತಳಹದಿಯ ಮೇಲೆ ಶರಣರು ಭಕ್ತಸ್ಥಲವನ್ನು ಭದ್ರವಾಗಿರಿಸಿದ್ದಾರೆ.

ಎರಡನೆಯ ಸ್ಥಲವಾದ ಮಹೇಶ್ವರ ಸ್ಥಲದಲ್ಲಿ ನಿಷ್ಠೆಗೆ, ಛಲಕ್ಕೆ ಹೆಚ್ಚಿನ ಪ್ರಾಧಾನ್ಯತೆಯಿದೆ. ನೀತಿ - ನಿಯಮಗಳನ್ನು ಅನುಷ್ಠಾನಕ್ಕೆ ತರಬೇಕೆಂಬ ಉತ್ಕಟ ಇಚ್ಛೆ ಇದರಲ್ಲಿ ವ್ಯಕ್ತವಾಗಿದೆ. ಧೈರ್ಯ ಸ್ಥೈರ್ಯಗಳಿಗೆ ಹೆಚ್ಚಿನ ಒತ್ತು ಕೊಡಲಾಗಿದೆ. ವ್ಯವಹಾರಿಕವಾಗಿ ವಿಚಾರ ಮಾಡಿದರೂಕೂಡ ಮಹೇಶ್ವರ ಸ್ಥಲದ ಮಹತ್ವವೆಷ್ಟಿದೆಯೆಂಬುದು ತಿಳಿಯುತ್ತದೆ. ಭಕ್ತ ಹಾಗೂ ಮಹೇಶ್ವರ ಸ್ಥಲಗಳು ಸ್ಥೂಲ ಶರೀರಕ್ಕೆ ಸಂಬಂಧಿಸಿವೆ. ಇದಕ್ಕೆ ತ್ಯಾಗಾಂಗವೆಂದು ಕರೆಯಲಾಗಿದೆ. ಬಸವಣ್ಣನವರ ವಚನವೊಂದು ಮಹೇಶ್ವರಸ್ಥಲದ ಲಕ್ಷಣವನ್ನು ಚೆನ್ನಾಗಿ ವಿಶ್ಲೇಷಿಸಿದೆ-

" ಛಲಬೇಕು ಶರಣಂಗೆ ಪರಧನವನೊಲ್ಲೆನೆಂಬ;
ಛಲಬೇಕು ಶರಣಂಗೆ ಪರಸತಿಯನೊಲ್ಲೆನೆಂಬ
ಛಲಬೇಕು ಶರಣಂಗೆ ಪರದೈವವನೊಲ್ಲೆನೆಂಬ
ಛಲಬೇಕು ಶರಣಂಗೆ ಲಿಂಗ ಜಂಗಮ ಒಂದೆ ಎಂಬ
ಛಲಬೇಕು ಶರಣಂಗೆ ಪ್ರಸಾದ ದಿಟವೆಂಬ
ಛಲವಿಲ್ಲದವರ ಮೆಚ್ಚ ಕೂಡಲಸಂಗಮದೇವ

ಈ ಸ್ಥಲದಲ್ಲಿ ಏಕದೇವೋಪಾಸನೆಯ ತತ್ವಕ್ಕೆ ಪ್ರಾಮುಖ್ಯತೆಯಿದೆ. ಶರಣರು ತಮ್ಮ ಹೃದಯದ ಕಿಟಕಿಗಳನ್ನು ತೆರೆದ ಪುಸ್ತಕದಂತೆ ತೆರೆದಿಟ್ಟು, ತಮಗೆ ಒಪ್ಪಿಗೆಯಾದ ತತ್ವವನ್ನು ಹೆಕ್ಕಿಕೊಂಡಿದ್ದಾರೆ. ಏಕದೇವೋಪಾಸನೆಯ ತತ್ವವನ್ನು ಬಹುಮಟ್ಟಿಗೆ ದೇವರಲ್ಲಿ ನಂಬುಗೆಯುಳ್ಳ ಧರ್ಮಗಳು ಒಪ್ಪಿಕೊಂಡಿರುವುದು ಪ್ರಜ್ಞಾಜಗತ್ತಿಗೆ ಗೊತ್ತಿದ್ದ ವಿಷಯವೇ ಆಗಿದೆ. ಈ ಮೌಲಿಕ ವಿಚಾರಧಾರೆಗೆ ಶರಣರು ಅನುಭವ ಪ್ರಾಮಾಣ್ಯತೆಯನ್ನು ಮೇಳೈಸಿಕೊಂಡು, ಮೈಗೂಡಿಸಿಕೊಂಡು ಏಕದೇವೋಪಾಸನೆಯ ತತ್ವವನ್ನು ಮಹೇಶ್ವರ ಸ್ಥಲದಲ್ಲಿ ಚಿರಸ್ಥಾಯಿಯಾಗಿ ನೆಲೆಗೊಳಿಸಿದ್ದಾರೆ. ಇಲ್ಲಿ ಅಂಬಿಗರ ಚೌಡಯ್ಯನ ವಚನವೊಂದನ್ನು ನೋಡಬಹುದು

" ನಿಜಗಂಡನ ಸಂಗವನೊಲ್ಲದೆ
ಬೋಜಗರ ಸಂಗವಮಾಡುವ
ಬಾಜೇರಿ ತೊತ್ತಿಗೆ ಎಲ್ಲಿಯದೋ ನಿಜ ಮುತ್ತೈದಿತನ ?
ತ್ರಿಜಗವಂದಿತ ಲಿಂಗವ
ಕರಕಮಲದಲ್ಲಿ ಹಿಡಿದುಕೊಂಡು, ಮತ್ತೆ
ಅನ್ಯ ದೈವಕ್ಕೆರಗಿದರೆ
ನಾಯಕ ನರಕವೆಂದಾತ ನಮ್ಮ
ದಿಟ್ಟಾದಿದಿಟ್ಟ, ವಿರೋಧಿವೀರ ಅಂಬಿಗರ ಚೌಡಯ್ಯ "

"ಪರಮ ಪತಿವ್ರತೆಗೆ ಗಂಡನೊಬ್ಬನೇ ಕಾಣಿರೋ" ಎಂಬ ಬಸವಣ್ಣನವರ ವಚನದಂತೆ ನಂಬುಗೆಗೆ, ವಿಶ್ವಾಸಕ್ಕೆ ಹೆಚ್ಚಿನ ಮಹತ್ವವಿದೆ. ಈ ಮಾತಿಗೆ ಸತ್ಯಕ್ಕನ ವಚನ ನೋಡಿ -

"ತಲೆಯ ಮೇಲೆ ತಲೆಯುಂಟೆ ? ಹಣೆಯಲ್ಲಿ ಕಣ್ಣುಂಟೆ ?
ಗಳದಲ್ಲಿ ವಿಷವುಂಟೆ ? ದೇವರೆಂಬವರಿಗೆಂಟೊಡಲುಂಟೆ ?
ತಂದೆಯಿಲ್ಲದವರುಂಟೆ, ತಾಯಿಯಿಲ್ಲದವರುಂಟೆ ?
ಎಲವೊ, ನಿನ್ನ ಹಣೆಯಲ್ಲಿ ನೇಸರುಮೂಡದೆ,
ಶಂಭುಜಕ್ಕೇಶ್ವರನಲ್ಲದೆ ಉಳಿದದೈವಂಗಳುಂಟೆ ? "

ನಿಷ್ಠೆ ಗಟ್ಟಿಗೊಂಡಾಗಲೇ ಮಹೇಶ್ವರನ ಸಾಕ್ಷಾತ್ಕಾರ ಸಾಧ್ಯ ಎನ್ನುತ್ತಾರೆ ಬಸವಣ್ಣನವರು.

"ನಿಷ್ಠೆಯಿಂದ ಲಿಂಗವ ಪೂಜಿಸಿ
ಮತ್ತೊಂದು ಪಥವನರಿಯದ ಶರಣರು
ಸರ್ಪನ ಹೆಡೆಯ ಮಾಣಿಕದಂತಿಪ್ಪರು ಭೂಷಣರಾಗಿ
ದರ್ಪಣದೊಳಗಣ ಪ್ರತಿಬಿಂಬದಂತೆ ಹಿಂಗದಿಪ್ಪರು.
ಕೂಡಲಸಂಗಮದೇವಾ ನಿಮ್ಮ ಶರಣರು "

ನಿಜಲಿಂಗ ಚಿಕ್ಕಯ್ಯನು ಅರಿವನ್ನು ಬರಮಾಡಿಕೊಂಡ ಮನೋಹರವಾದ ವಚನವನ್ನು ಈ ಸಂದರ್ಭದಲ್ಲಿ ಸ್ಮರಿಸಿದರೆ – ವಿಷಯ ಇನ್ನಷ್ಟು ಸ್ಪಷ್ಟವಾದೀತು.

"ಮನವ ಮಂಚಮಾಡಿ ಚಿತ್ತದಿ ಪಚ್ಚಡಿಸುವೆ ಬಾರಯ್ಯಾ,
ಎನ್ನಶಿವಲಿಂಗವೇ ಬಾರಯ್ಯಾ,
ಎನ್ನ ಭಕ್ತವತ್ಸಲನೆ ಬಾರಯ್ಯಾ,
ಎನ್ನ ಭಕ್ತದೇಹಿಕ ದೇವನೆ ಬಾರಯ್ಯಾ,
ಎನ್ನ ಅಂತರಂಗದೊಳಿರು ಬಾರಯ್ಯಾ,
ಎನ್ನ ಬಹಿರಂಗದೊಳಿರುಬಾರಯ್ಯ,
ಓಂ ನಮಃ ಶಿವಾಯ ಎಂದು ಕರೆವೆನು ಉಳಿಯುಮೇಶ್ವರಾ "

ವೀರವಿರಾಗಿಣಿ, ಅನುಪಮ ಅನುಭಾವಿ ಅಕ್ಕಮಹಾದೇವಿಯು ಮಹೇಶ್ವರ ಸ್ಥಲದ ಕಟ್ಟುನಿಟ್ಟುಗಳನ್ನು ಅಚ್ಚುಕಟ್ಟಾಗಿ ನಿವೇದಿಸಿದ ವಚನ ಬಹುಗಮನಾರ್ಹವಾಗಿದೆ.

"ನಿಷ್ಠೆ ನಿಬ್ಬೆರಗು ಗಟ್ಟಿಗೊಂಡಡೆ
ಏಕೋ ಭಾವದಲ್ಲಿ ಸೊಮ್ಮು ಸಂಬಂಧ;

ಆಚಾರ ವಿಚಾರ ವಿಸರ್ಜನ ದ್ವಿಭಾವ ಬುದ್ಧಿಲಯವಾದಡೆ ಆತ ಮಾಹೇಶ್ವರ;
ಗುರುಮುಖದಲ್ಲಿ ಸರ್ವಶುದ್ಧನಾಗಿ ಪಂಚಭೂತದ ಹಂಗ ಅಡಗಿದಡೆ ಆತ ಮಾಹೇಶ್ವರ……

ಮಹೇಶ್ವರ ಸ್ಥಲಕ್ಕೆ ಸಾಕ್ಷಿಯಾದ ಮಡಿವಾಳಮಾಚಿದೇವನನ್ನು ಕುರಿತಾಗಿ ಬಸವಣ್ಣನವರು ನಿರೂಪಿಸಿದ ವಚನವನ್ನು ಇಲ್ಲಿ ಸ್ಮರಿಸಬಹುದು—

"ಎನ್ನ ಕಾಯವ ಶುದ್ಧವ ಮಾಡಿದಾತ ಮಡಿವಾಳ,
ಎನ್ನ ಮನವ ನಿರ್ಮಲವ ಮಾಡಿದಾತ ಮಡಿವಾಳ,
ಎನ್ನಂತರಂಗವ ಬೆಳಗಿದಾತ ಮಡಿವಾಳ,
ಎನ್ನ ಬಹಿರಂಗವ ಬೆಳಗಿದಾತ ಮಡಿವಾಳ,
ಕೂಡಲಸಂಗಮದೇವಾ,
ಎನ್ನ ನಿಮಗೆ ಯೋಗ್ಯವ ಮಾಡಿದಾತ ಮಡಿವಾಳ"

ಪ್ರಸಾದಿಯ ಮುಖ್ಯ ಲಕ್ಷಣವೆಂದರೆ ಸರ್ವವನ್ನು ಶಿವನಿಗೆ ಸಮರ್ಪಿಸುವುದು. ಈ ಸರ್ವಾರ್ಪಣ ಭಾವಕ್ಕೆ ಲಿಂಗಭೋಗೋಪಭೋಗಿ ಎಂದೂ ಕರೆಯುತ್ತಾರೆ. ಇಲ್ಲಿ ಅಹಂಕಾರದ ನಿರಸನವಿದೆ. ಪ್ರಸಾದದ ಪ್ರಸನ್ನತೆಯಿದೆ. ಇದರಿಂದ ದಾಸೋಹಂಭಾವ ಮೂಡುತ್ತದೆ. ಅದುದರಿಂದ ಬಸವಣ್ಣನವರು "ಮಾಡಬೇಕು ಮಾಡದಂತಿರಬೇಕು; ಮಾಡುವ ಮಾಟದಲ್ಲಿ ತಾನಿಲ್ಲದಂತಿರಬೇಕು" ಎಂದು ಉಗ್ಗಡಿಸಿರುವುದನ್ನು ಇಲ್ಲಿ ಸ್ಮರಿಸಬಹುದು. ಸತ್ಯಶುದ್ಧ ಕಾಯಕದಿಂದ ಬಂದ ಗಳಿಕೆಯನ್ನು ಕೇವಲ ತನಗಾಗಿ ಮಾತ್ರವಲ್ಲ ಲೋಕಹಿತಕ್ಕಾಗಿ ಬಳಸಬೇಕೆಂಬ ಉದಾತ್ತ ತತ್ತ್ವ ಅಡಕವಾಗಿದೆ. ಸತ್ಕ್ರಿಯಾಚರಣೆಯ ಮಹತ್ತ್ವವನ್ನು ವೈರಾಗ್ಯನಿಧಿ ಅಲ್ಲಮಪ್ರಭುವಿನ ವಚನದಿಂದ ತಿಳಿಯೋಣ :

"ಕ್ರಿಯಾಮಥನವಿಲ್ಲದೆ ಕಾಣಬಂದುದೇ ಇಕ್ಷುವಿನೊಳಗಣ ಮಧುರ?
ಕ್ರಿಯಾಮಥನವಿಲ್ಲದೆ ಕಾಣಬಂದುದೇ ತಿಲದೊಳಗಣ ತೈಲ?
ಕ್ರಿಯಾಮಥನವಿಲ್ಲದೆ ಕಾಣಬಂದುದೇ ಕ್ಷೀರದೊಳಗಣ ತುಪ್ಪ?
ಕ್ರಿಯಾಮಥನವಿಲ್ಲದೆ ಕಾಣಬಂದುದೇ ಕಾಷ್ಠದೊಳಗಣ ಅಗ್ನಿ?
ಇದು ಕಾರಣ ನಮ್ಮ ಗುಹೇಶ್ವರಲಿಂಗವ ತನ್ನೊಳರಿದೆನೆಂಬ ಮಹಾಂತಂಗೆ
ಸತ್ಕ್ರಿಯಾಚರಣೆಯೇ ಸಾಧನ ಕಾಣಿಭೋ"

ಸಾಧಕನಿಗೆ ವಿಶ್ವಾಸಶ್ರದ್ಧೆಗಳೊಂದಿಗೆ ಸಕ್ರಿಯೆಯೂ ಮೇಳೈಸಿರಬೇಕು. ಅಂತರಂಗದಲ್ಲೆ ಅರಿವಾದರೂ ಬಹಿರಂಗದಲ್ಲಿ ಕ್ರಿಯೆಯಿಲ್ಲದಿದ್ದರೆ ನಿರರ್ಥಕವೇ ಸರಿ. — ಎಂದು ಮಹಾನುಭಾವಿ ಬಸವಣ್ಣನವರು ತಿಳಿಹೇಳಿದ್ದಾರೆ-

ಕ್ರಿಯಾಜ್ಞಾನ ಸಂಬಂಧವೆಂದು ನುಡಿವರು,
ಕ್ರಿಯಾಜ್ಞಾನ ಸಂಬಂಧವೆಂತಿರ್ಪುದೆಂದರಿಯರು,
ಕ್ರೀಯಲ್ಲಿ ಅಂಗಲಿಂಗಕ್ಕೆ ಸಂಬಂಧವನರಿಯರು,
ಜ್ಞಾನದಲ್ಲಿ ಲಿಂಗಜಂಗಮ ಸಂಬಂಧವನರಿಯರು,
ಕ್ರೀಯಲ್ಲಿ ಅರ್ಪಿತಪ್ರಸಾದ ಸಂಬಂಧವನರಿದು,
ಜ್ಞಾನದಲ್ಲಿ ತೃಪ್ತಿ ಪರಿಣಾಮವನರಿದು, ಕ್ರೀಯೊಳಗಿದ್ದು,
ಜ್ಞಾನಸಂಪನ್ನನಾಗಿರಬಲ್ಲ ಶರಣಂಗೆ




# " ದಲಿತೋದ್ಧಾರಕ ಸಂವಿಧಾನ ಶಿಲ್ಪಿ ಅಂಬೇಡ್ಕರ "

ಶ್ರೀಕರ್ಕಿ ಸುಬ್ರಾಯ ಭಟ್ಟ, ಸಹಶಿಕ್ಷಕರು, ಹಿಂದೂ ಹೈಸ್ಕೂಲ್, ಕಾರವಾರ, ಉ. ಕ.

ನೀವು ನಿಮ್ಮ ಉದ್ಧಾರಕನನ್ನು ಅಂಬೇಡ್ಕರರಲ್ಲಿ ಕಂಡುಕೊಂಡಿದ್ದೀರಿ. ನಿಮ್ಮ ಶತಶತಮಾನಗಳ ದಾಸ್ಯಸಂಕೋಲೆಯನ್ನು ಅವರು ಮುರಿದೊಗೆಯುವರೆಂಬ ಬಗ್ಗೆ ಭರವಸೆ ನನಗೆ ಇದೆ. ಅವರು ಅಖಿಲ ಭಾರತ ಖ್ಯಾತಿಯ ಪ್ರಥಮದರ್ಜೆ ನಾಯಕ ಶಿರೋಮಣಿಯಾಗಿ ರಾರಾಜಿಸುವ ದಿನ ಬಂದೇ ಬರುತ್ತದೆ ಎಂದು ನನ್ನ ಆತ್ಮ ನುಡಿಯುತ್ತಿದೆ " ಎಂದು ಇಂದಿಗೆ 70 ವರ್ಷದ ಹಿಂದೆ ಸಾಹುಮಹಾರಾಜರು ಅಸ್ಪೃಶ್ಯರ ಮಹಾಸಭೆಯೊಂದನ್ನು ಉದ್ದೇಶಿಸಿ ಮುಕ್ತಕಂಠದಿಂದ ಘೋಷಿಸಿದ್ದು ಕೆಲವೇ ದಿನದಲ್ಲಿ ಶತಸಿದ್ಧವಾಗ ಮೂರ್ಪಟ್ಟಿತ್ತು. ದಲಿತ ಕುಲದಲ್ಲಿ ಜನಿಸಿದ ದಲಿತೋದ್ಧಾರಕ ಅಂಬೇಡ್ಕರ ಕೆಲವೇ ದಿನದಲ್ಲಿ ಭಾರತಮಾತೆಯ ಮಡಿಲಲ್ಲಿ ತುಂಬಿಕೊಂಡಿದ್ದ ಕಲಂಕವನ್ನು ಹೊಡೆದೋಡಿಸುವಲ್ಲಿ ಹಾಗೂ ಜಗತ್ ಪ್ರಸಿದ್ಧ ವ್ಯಕ್ತಿಯಾಗಿ ನಿಲ್ಲುವಲ್ಲಿ ಯಶಸ್ವಿಯಾದರು.

" ಯದಾಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ " ಎನ್ನುವ ಗೀತ ಶ್ಲೋಕದಲ್ಲಿ ಕೃಷ್ಣನು ಅಧರ್ಮ ಹೆಚ್ಚಿದಾಗ ದುಷ್ಟರು ಹೆಚ್ಚಿದಾಗ ನಾನು ಜನಸಿ ಬರುತ್ತೇನೆ ಎಂದು ಹೇಳಿದ್ದಾನೆ.

ಶತಶತಮಾನಗಳಿಂದ ತುಳಿತಕ್ಕೊಳಗಾಗಿ, ಜನ್ಮದಿಂದಲೂ ಹಿಂಸೆಯನ್ನು ಅನುಭವಿಸುತ್ತಾ ಕೀಳುಪ್ರಾಣಿಗಳಿಗಿಂತ ಕಡೆಯಾಗಿ, ಮೇಲುವರ್ಗದವರ ಎಂಜಲು ಕೂಳನ್ನು ತಿಂದು, ಅವರು ಉಟ್ಟು ಎಸೆದ ಬಟ್ಟೆಗಳನ್ನು ಧರಿಸಿ, ಭಾರತೀಯರಾಗಿದ್ದರೂ, ಹಿಂದೂಗಳೇ ಆಗಿದ್ದರೂ, ಭಾರತೀಯ ಜನಸಮೂಹದಲ್ಲಿ ಶೇಕಡಾ 20 ರಷ್ಟು ಜನಸಂಖ್ಯೆ ಹೊಂದಿದ್ದರೂ ಉಳಿದವರಿಗಿಂತ ಬೇರೆಯಾಗಿ ಊರ ಹೊರಗಿನ ಪ್ರದೇಶದಲ್ಲಿ ಕೊಳಕುನಾರುವ ಜಾಗದಲ್ಲಿ ವಾಸಮಾಡುತ್ತಾ, ಹರಕು ಮುರುಕು ಮನೆಯಲ್ಲಿ ಜೀವನಸಾಗಿಸುತ್ತ ಮೇಲು ವರ್ಗದವರ ಅಡಿಗೆ ಮುಡಿಚಾಚಿ ಅವರೆದುರು ಅಂಗೈಚಾಚಿ ಬಾಳನ್ನು ಸಾಗಿಸುವ ಜನರ ಉದ್ಧಾರಕ್ಕಾಗಿ; ಸಂವಿಧಾನವನ್ನು ರಚಿಸುವ ರೂವಾರಿಯಾಗಿ, ಸಮಾನತಾ ಧರ್ಮವನ್ನು ರಕ್ಷಿಸುವದಕ್ಕಾಗಿ ಆಧುನಿಕ ಮನುವಾಗಿ, ದಲಿತರ ಬಾಳಿಗೆ ಬೆಳಕನ್ನು ನೀಡುವ ಸೂರ್ಯನಾಗಿ, ದಲಿತರ ನಾಲಿಗೆಯಾಗಿ, ಶಕ್ತಿಯಾಗಿ, ಬೆಳಕನ್ನು ನೀಡುವ ಜ್ಯೋತಿಯಾಗಿ ಅವರಿಗೆ ಬಾಳನ್ನು ನೀಡಿ ಸಮಾನವಾಗಿ ಬದುಕಲು ಅವಕಾಶ ಕಲ್ಪಿಸುವುದಕ್ಕಾಗಿ ಜನಸಿ ಬಂದವರೇ ಡಾ|| ಬಾಬಾಸಾಹೇಬ ಅಂಬೇಡ್ಕರ.

ಕೆಸರಿನ ಕೊಳದಲ್ಲಿ ಕಮಲ, ಮಳ್ಳಿನ ಗಿಡದಲ್ಲಿ ಹೂವು ಜನಿಸುವಂತೆ ಅನೇಕ ಶತಮಾನಗಳಿಂದ ತುಳಿತಕ್ಕೊಳಗಾದ ಮಹಾರಾಷ್ಟ್ರದ ಮಹಾರ್ ಎಂಬ ಅಸ್ಪೃಶ್ಯ ಜಾತಿಯ ರಾಮಜಿ ಹಾಗೂ ಭೀಮಾಬಾಯಿಯ 14ನೇ ಮಗನಾಗಿ (ಇಂದಿಗೆ 100 ವರ್ಷದ ಹಿಂದೆ ಅಂದರೆ) 1891 ಏಪ್ರಿಲ್ 14 ರಂದು ಅಂಬೇಡ್ಕರರ ಜನನವಾಯಿತು.

ಭೀಮಜಿಯು ಪ್ರಾಥಮಿಕ ವಿದ್ಯಾಭ್ಯಾಸವು ಸಾತಾರದ ಶಾಲೆಯಲ್ಲಿ ಮುಗಿಸಿ ನಂತರ ಅಂದಿನ ದಿನದಲ್ಲಿ ಅಸ್ಪೃಶ್ಯರಿಗೆ ಅಸಾಮಾನ್ಯವಾದ ವಿದ್ಯೆಯನ್ನು ತನ್ನದಾಗಿಸಿಕೊಂಡರು ಅಂಬೇಡ್ಕರ. ಹೋದೆಡೆಯಲ್ಲೆಲ್ಲ ನೀನು ಹೊಲೆಯ, ನೀನು ಪಂಚಮ, ನೀನು ಅಸ್ಪೃಶ್ಯ, ನಿನಗೆ ಸಂಸ್ಕೃತ ಕಲಿಕೆ ಸಲ್ಲ, ಮುಂತಾದ ಹೀನ ನುಡಿಗಳನ್ನು ಸಹಿಸಿಕೊಂಡೂ 1907 ರಲ್ಲಿ ಮೆಟ್ರಿಕ್ ಪರೀಕ್ಷೆಯನ್ನೂ, 1912 ರಲ್ಲಿ ಬಿ.ಎ. ಪದವಿಯನ್ನೂ 1915ರಲ್ಲಿ ಎಂ.ಎ. ಪದವಿಯನ್ನೂ 'ಪುರಾತನ ಭಾರತದ ವಾಣಿಜ್ಯ' ಎಂಬ ಪ್ರಬಂಧ ಬರೆಯುವುದರ ಮೂಲಕವೂ 'ಭಾರತದ ರಾಷ್ಟ್ರೀಯ ಆದಾಯ ಒಂದು ಐತಿಹಾಸಿಕ ಹಾಗೂ ವಿವರಣಾತ್ಮಕ ಅಧ್ಯಯನ' ಎಂಬ ಪ್ರಬಂಧ ಬರೆದು ಪಿ.ಎಚ್.ಡಿ. ಪದವಿಯನ್ನು ಕೊಲಂಬಿಯಾ ವಿಶ್ವವಿದ್ಯಾಲಯದಿಂದ ಪಡೆದರು. ಲಂಡನ್‌ನ 'ಗ್ರೇಸ್ ಇನ್' ಕಾಲೇಜಿನಲ್ಲಿ ನ್ಯಾಯಶಾಸ್ತ್ರ ಅಧ್ಯಯನವನ್ನು ಹಾಗೂ 'ಸ್ಕೂಲ್ ಆಫ್ ಇಕೊನೋಮಿಕ್ಸ್' ದಲ್ಲಿ ಅರ್ಥಶಾಸ್ತ್ರವನ್ನು ಅಧ್ಯಯನಮಾಡಿದರು. ಹಾಗೂ ತಮ್ಮ ಹಟದಲ್ಲಿ ಆಸೆಯಲ್ಲಿ ಒಂದಾದ ಡಿ.ಎಸ್.ಸಿ. ಪದವಿಯನ್ನು ಪಡೆದು ಕೊಂಡರು. ಹೀಗೆ ದೇಶ ವಿದೇಶದಲ್ಲಿ ಓದಿ ಆಳಜ್ಞಾನವನ್ನು ಪಡೆದುಕೊಂಡ ಅಂಬೇಡ್ಕರರು ತಮ್ಮವರ ಒಳಿತಿಗಾಗಿ ಹಗಲಿರುಳೆನ್ನದೆ ಶ್ರಮಿಸಿದರು.

ತಮ್ಮವರಿಗಾಗಿ "ಬಹಿಷ್ಕೃತ ಹಿತಕಾರಿಣಿಸಭಾ" ಎಂಬ ಸಂಸ್ಥೆಯನ್ನು ಸ್ಥಾಪಿಸಿದರು ಹಾಗೂ ತಮ್ಮವರನ್ನು ಜಾಗೃತ ಗೊಳಿಸಲು "ಬಹಿಷ್ಕೃತಭಾರತ" ಎಂಬ ಮರಾಠಿ ಪಾಕ್ಷಿಕ ಪತ್ರಿಕೆಯನ್ನು ಹೊರಡಿಸಿದರು. ತಮ್ಮವರೆಲ್ಲರನ್ನು ಒಗ್ಗೂಡಿಸಿ ಅವರಿಗೆ ಸ್ವಾಭಿಮಾನ ಬೆಳೆಸಿಕೊಳ್ಳಲು ಸಮಾನವಾಗಿ ಬದುಕಲು ಕರೆಕೊಟ್ಟ ಸಮಾನತೆಗಾಗಿ ಹಲವಾರು ಚಳುವಳಿ ಸಂಘಟಿಸಿದರು. ಅದರಲ್ಲಿ 'ಮಹದ್' ನಗರದ ಚಳುವಳಿ ಗಾಂಧಿಯವರ ದಂಡೀ ಸತ್ಯಾಗ್ರಹಕ್ಕೆ ಸಮಾನವಾದ ಚಳುವಳಿಯಾಗಿತ್ತು.

ಅಂಬೇಡ್ಕರರ ಪ್ರತಿಯೊಂದು ಭಾಷಣವೂ ಕೂಡ ದೀನ ದಲಿತರ ನೋವು ಸಂಕಟದ ವೇದನೆಯ ಮೂರ್ತ ಸ್ವರೂಪವಾಗಿತ್ತು. ಅವರು "ಬಲಿಕೊಡಲು ಆಡನ್ನು ಮಾತ್ರ ಉಪಯೋಗಿರುತ್ತಾರೆಯೇ ಹೊರತು ಸಿಂಹಗಳನ್ನಲ್ಲ" ಎಂದು ನಂಬಿದ್ದು ಪ್ರತಿಯೊಬ್ಬರು ಸಿಂಹದಂತಾಗಲು ಕರೆಕೊಟ್ಟರು.

"ಯಾವುದೇ ಒಂದು ನಿರ್ಣಯಕ್ಕೆ ಕಾಯದೆಯ ಬೆಂಬಲ ಇರಲೇಬೇಕು ಇಲ್ಲದಿದ್ದರೆ ಅದು ಭರವಸೆಯೇ ಹೊರತು ಆಚರಣೆ ಬರಲಾರದು" ಎಂದು ಹೇಳಿ ದಲಿತರ ಸಮಾನತೆಗೆ ಕಾಯಿದೆಯ ಬೆಂಬಲ ದೊರಕಿಸಲು ಶ್ರಮಿಸಿದರು. ಕೀರ್ತಿಯು ಬೆನ್ನಟ್ಟದ ಅಂಬೇಡ್ಕರರಿಗೆ ಅವರ ಕೆಲಸದಿಂದ ಕೀರ್ತಿಯೇ ಬೆನ್ನಟ್ಟಿ ಬರುವಂತಾಯಿತು.

ಅಂಬೇಡ್ಕರರು ಕೇವಲ ಅವರ ಜನಾಂಗದ ಒಳಿತಿಗಾಗಿ ಅಷ್ಟೇ ಶ್ರಮಿಸಲಿಲ್ಲ. ಇಡೀ ಭಾರತದ ಸ್ವತಂತ್ರ ಸರ್ಕಾರಕ್ಕೆ ನಿರ್ದೇಶನ ನೀಡುವ ಸಂವಿಧಾನವನ್ನು ರಚಿಸಿದರು. ಶಿಲ್ಪಿಯೊಬ್ಬ ಹಗಲಿರುಳೆನ್ನದೆ ಸುಂದರ ಶಿಲ್ಪವನ್ನು ನಿರ್ಮಿಸಲು ಹೆಣಗುವಂತೆ, ಶಿಲ್ಪಿ ಬೇರೆ ಬೇರೆ ಕೋನದಿಂದ ಸುಂದರತೆಯನ್ನು ವೀಕ್ಷಿಸಿ ಶಿಲ್ಪರಚಿಸುವಂತೆ,' ಅಂಬೇಡ್ಕರರು ಬೇರೆ ಬೇರೆ ದೇಶದ ಸಂವಿಧಾನವನ್ನು ಅಧ್ಯಯನಮಾಡಿ ಭಾರತದ ಸುದೀರ್ಘ ಸಂವಿಧಾನದ ಕರಡು ತಯಾರಿಸಿದರು.

"ಇಂದು ಪ್ರತ್ಯೇಕ ರಾಷ್ಟ್ರಕ್ಕಾಗಿ ಚಳುವಳಿ ನಡೆಸುತ್ತಿರುವ ಮುಸ್ಲಿಂ ಲೀಗ್ ಒಂದಲ್ಲ ಒಂದು ದಿನ ಈ ಸತ್ಯವನ್ನು ಮನಗಂಡು ಅಖಂಡ ಭಾರತವೇ ನಮಗೆ ಹಿತಕರ ಹಾಗೂ ಶ್ರೇಷ್ಠ. ಅನ್ಯತಾ ಶರಣಂ ನಾಸ್ತಿ ಎಂಬುದನ್ನು ಅರಿಯಬಹುದು. ಎಂಬುದು ನನ್ನ ಮಟ್ಟಿಗೆ ಅಸಂದಿಗ್ಧ"

"ನಾವು ಯಾವದೇ ವಿರೋಧಿಶಕ್ತಿ ತಲೆ ಎತ್ತಿದಾಗ ಏಕದೇಹಿಯಾಗಿ ಮೇಲೆದ್ದು ಬರುತ್ತೇವೆ"

ಹೀಗೆ ಘೋಷಿಸಿದ ಅಂಬೇಡ್ಕರ ಸಂವಿಧಾನವನ್ನು ರಚಿಸುವ ಮುಖ್ಯ ವಾಸ್ತು ಶಿಲ್ಪಿಯಾಗಿ ನೇಮಿತರಾದರು [1947 ಅಗಸ್ಟ್ 29]

ಸಂವಿಧಾನವನ್ನು ರಚಿಸಲು ಏಳು ಸದಸ್ಯರ ಮಂಡಳಿ ನಿಯೋಜಿತವಾಗಿದ್ದರೂ ಕೂಡ ಸಂವಿಧಾನವನ್ನು ರಚಿಸಿದ ಸಂಪೂರ್ಣ ಹೆಗ್ಗಳಿಕೆ ಸಲ್ಲುವದು ಅಂಬೇಡ್ಕರರಿಗೆ ಏಕೆಂದರೆ ರಾಜ್ಯಾಂಗರಚನೆಯ ಸಭೆಯ ಸದಸ್ಯರಲ್ಲಿ ಒಬ್ಬ ರಾಜೀನಾಮೆ ನೀಡಿದ್ದ ಇನ್ನೊಬ್ಬ ಅಮೇರಿಕಾಕ್ಕೆ ಹೋಗಿದ್ದ. ಇನ್ನುಳಿದವರು ಪ್ರಾಂತೀಯ ರಾಜಕೀಯದಲ್ಲಿ ಮಗ್ನರಾಗಿದ್ದು ದೆಹಲಿಯಿಂದ ಹೊರಗಿದ್ದು ಅನಾರೋಗ್ಯದಿಂದಲೂ, ನಿರಾಸಕ್ತಿಯಿಂದಲೂ ಅವರೆಲ್ಲ ಭಾಗಿಯಾಗದೆ ಇರುವುದರಿಂದ ಅವರ ಸಂಪೂರ್ಣ ಜವಾಬ್ದಾರಿ ಅಂಬೇಡ್ಕರರ ಮೇಲೆ ಬಿತ್ತು.

1948 ರ ಫೆಬ್ರವರಿ ತಿಂಗಳಲ್ಲಿ ರಾಜ್ಯಾಂಗ ಸಭೆಯ ಅಧ್ಯಕ್ಷರಿಗೆ ಈ ಸಂವಿಧಾನದ ಕರಡುಪ್ರತಿ ಒಪ್ಪಿಸಿದ ಅಂಬೇಡ್ಕರರು ಆರು ತಿಂಗಳವರೆಗೆ ಸಾರ್ವಜನಿಕ ಅಭಿಪ್ರಾಯ ಸಂಗ್ರಹಣೆಗಾಗಿ ಅವಧಿ ನೀಡಿ 1948 ರ ನವೆಂಬರ ತಿಂಗಳಿನಲ್ಲಿ (4 ನೇ ತಾ||) ಸಂವಿಧಾನ ರಚನಾ ಸಭೆಯಲ್ಲಿ 395 ಪರಿಚ್ಛೇಧ ಹಾಗೂ 8 ನಿಬಂಧನೆ ಹೊಂದಿದ ಸಂವಿಧಾನವನ್ನು ಮಂಡಿಸಿದರು.

ಅಮೇರಿಕಾ ಹಾಗೂ ಇಂಗ್ಲೆಂಡಿನ ಸಂವಿಧಾನದ ಹಲವಾರು ಅಂಶಗಳನ್ನು ಹೊಂದಿದ ಭಾರತದ ಸಂವಿಧಾನವು ಈ ಎರಡು ಸಂವಿಧಾನಗಳ ಸುಂದರ ಸಮ್ಮಿಲನ ವಾಗಿದೆ. ಹಂಸಕ್ಷೀರ ನ್ಯಾಯದಂತೆ ಈ ಸಂವಿಧಾನದಲ್ಲಿ ಕೇವಲ ಒಳ್ಳೆಯ ಅಂಶ ವನ್ನಷ್ಟೇ ಆಯ್ಕೆ ಮಾಡಿಕೊಳ್ಳಲಾಗಿದ್ದು ವ್ಯವಸ್ಥಿತವಾಗಿ ಈ ಸಂವಿಧಾನವನ್ನು ನಿರ್ಮಿಸಲಾಗಿದೆ ಎಂದು ಹೇಳಿದ ಅಂಬೇಡ್ಕರರು ಜನರಿಗೆ ಸಂಕುಚಿತ ಮನೋಭಾವ ಜಾತೀಯತೆಯ ನೀತಿಯನ್ನು ಅಜ್ಞಾನವನ್ನು ಹೋಗಲಾಡಿಸುವದಕ್ಕೆ ಕರೆಕೊಟ್ಟರು

ಈ ಸಂದರ್ಭದಲ್ಲಿಯೇ ಅಂಬೇಡ್ಕರರು ಸಂವಿಧಾನವನ್ನು ಕುರಿತು " ಸಂವಿಧಾ-ನದ ಕೆಲಸಕಾರ್ಯ ತಪ್ಪಾದರೆ ಅದು ಕೆಟ್ಟ ಸಂವಿಧಾನವೆಂದು ಅರ್ಥವಲ್ಲ ಕಾರ್ಯಗತ ಮಾಡುವವರು ಅಧಮರು ಎಂದು ಅರ್ಥ " ಎಂದು ವಿವರಿಸಿದರು

1948 ರ ನವೆಂಬರ 26 ರ ಸಂವಿಧಾನ ಒಪ್ಪಿಗೆಯ ಕೊನೆಯ ಭಾಷಣದಲ್ಲಿ "ವ್ಯಕ್ತಿ ಸ್ವಾತಂತ್ರ್ಯವನ್ನು ಬಲಿಕೊಟ್ಟು ಕೃತಜ್ಞನಾಗಬಾರದು. ಯಾವ ಹೆಣ್ಣೂ ಶೀಲವನ್ನು ಬಿಟ್ಟು ಕೃತಜ್ಞಳಾಗಲಾರಳು ಯಾವನೊಬ್ಬ ತನ್ನ ಸ್ವಾತಂತ್ರ್ಯ ಬಲಿ ಕೊಟ್ಟು ಕೃತಜ್ಞತೆ ತೋರಬಾರದು." ಎಂದು ಪ್ರಜಾ ಪ್ರಭುತ್ವವನ್ನು ಉಳಿಸಿಕೊ-ಳ್ಳಲು ಕರೆಕೊಟ್ಟರು.

" ಕರ್ಮಣ್ಯೇವ ಅಧಿಕಾರಸ್ಯೆ ಮಾ ಫಲೇಷು ತದಾಚನ " ಎಂಬಂತೆ ಗಂಧದ ಕೊರಡು ತನ್ನನ್ನು ತಾನೇ ಸವೆಸಿಕೊಂಡು ಸುಗಂಧ ನೀಡುವಂತೆ. ದೀಪವು ತನ್ನನ್ನೆ ತಾನು ದಹಿಸಿಕೊಂಡು ಬೇರೆಯವರಿಗೆ ಬೆಳಕನ್ನು ನೀಡುವಂತೆ ತನ್ನವರನ್ನೆಲ್ಲ ಕಳೆದು ಕೊಂಡು ತನ್ನ ದೇಶಕ್ಕಾಗಿ ಅಹರ್ನಿಶಿದುಡಿದು, ಸ್ವತಂತ್ರ ಭಾರತಕ್ಕೆ ರಾಜ್ಯಾಂಗದ ಕೈಪಿಡಿಯನ್ನು ನೀಡಿದ ಅಂಬೇಡ್ಕರರು ಆಧುನಿಕ ಭಾರತದ ಮನು ಭಾರತದ ಮ್ಯಾಡಿಸನ್.

ಅಂಧಕಾರದಲ್ಲಿ ಜನಿಸಿದರೂ ಸ್ವ ಪ್ರತಿಭೆಯಿಂದ ಒಂದೊಂದೆ ಮೆಟ್ಟಲನ್ನು ಏರಿ ಕೀರ್ತಿಯ ಶಿಖರವನ್ನು ತಲುಪಿದ ಅಂಬೇಡ್ಕರ ಜ್ಞಾನದೇಗುಲದ ಬೀಗಮುದ್ರೆ ಒಡೆದು ಒಳಪ್ರವೇಶಿಸಿದ ಅಂಬೇಡ್ಕರ್

ಡಿಸೆಂಬರ್ 5 ರ 11.15 ಕ್ಕೆ ಭಜನೆಮಾಡುತ್ತ ಮಾಡುತ್ತ ದೇಹತ್ಯಾಗ ಮಾಡಿದರೂ ಇಂದು ಅವರ ಕೆಲಸ ಕಾರ್ಯದಿಂದ ಚಿರಂಜೀವಿಗಳಾಗಿದ್ದಾರೆ, " ಭಾರತ ರತ್ನ " ಅಂಬೇಡ್ಕರ ಜನಿಸಿ ಶತಮಾನ ಗತಿಸಿದರೂ ಭಾರತ ಮಾತೆಯ ಮಡಿಲಮಗುವಾದ ಅಂಬೇಡ್ಕರ ಸಂವಿಧಾನದ ರೂವಾರಿ ದೀನ ದಲಿತರ ಕೈವಾರಿ,

ಇವರ ಅವಿರತ ಶ್ರಮದ ಫಲ, ಅಹರ್ನಿಶಿ ದುಡಿತ ವಿವಿಧ ದೇಶಗಳ ಜ್ಞಾನವನ್ನು ಒಂದೆಡೆ ಸೇರಿಸಿದ ಪರಿ ಬಡವರ, ದಲಿತರ, ಭಾರತದ ಏಳ್ಗೆಗಾಗಿ ಶ್ರಮಿಸಿದ ರೀತಿಯಿಂದಾಗಿ ಅವರು ಅಮರರಾಗಿದ್ದಾರೆ.

"ಸೂರ್ಯ ತೇಜವನ್ನು ಮಾಡುವುದು ಸುಲಭವೇ ? ಹೀನ ಜಾತಿಯಲ್ಲಿ ಜನಿಸಿದ್ದರೂ ಕೂಡ ಮಾನವ ಗುಣಗಳ ಸಾಕಾರ ಮೂರ್ತಿಯಾದ ಅಂಬೇಡ್ಕರರು ತಮ್ಮ ಸೇವೆಯಿಂದಾಗಿ ಹಲವಾರು ವಿಶ್ವವಿದ್ಯಾಲಯದಿಂದ ಪದವಿಪಡೆದರು, ಜನರಿಂದ ಸಂವಿಧಾನಶಿಲ್ಪಿ, ಆಧುನಿಕಮನು ಭಾರತದ ಮ್ಯಾಡಿಸನ್ ಎಂಬ ಬಿರುದು ಪಡೆದರು.

---

## ಬೆ ಳ ಕು

ಸಿದ್ಧರಾಜು ಐವಾನ್ ತುಮಕೂರು-2

ನಾ-<br>
ನೊಂದು ಬೆಂದು<br>
ನಡೆ ನಡೆದು<br>
ದಾರಿಕಾಣದೇ<br>
ಕಲ್ಲು ಮುಳ್ಳುಗಳ ತುಳಿಯುತ<br>
ಸಾವಿಲ್ಲದ ನೋವು ಅನುಭವಿಸುತ್ತಾ<br>
ಇರಲು,<br>
ದೂರದಿಂದಲೇ<br>
ಕಂಡೆ ನೊಂದು<br>
ದಿವ್ಯ ಜ್ಯೋತಿಯನ್ನ<br>
ಕಾಣುತಿಹುದೇ<br>
ನೊಂದ ಜೀವಿಗೆ<br>
ನೆಮ್ಮದಿ ತರುವ ಆಶಾಕಿರಣ<br>
ನಿಷೆಯಲ್ಲೂ ಉಷೆಯ ಹರಿಸುವ<br>
ವರ್ಷ ದಿಂದ ವರ್ಷವೂ<br>
ಬೆಳಕು ಮೂಡಿಸುವ<br>
ಆ ನಂದಾ ದೀಪವೇ<br>
" ಶ್ರೀ ಸಿದ್ಧಗಂಗಾ ಕ್ಷೇತ್ರ "

## ಕಡಿಮೆ ಹಣ ಖರ್ಚು ಮಾಡಿ
## ಹೆಚ್ಚು ಬಟ್ಟೆಗಳನ್ನು ಒಗೆಯಿರಿ.

- ಇದೀಗ ನೀವು ಸಾಬೂನಿಗೆ ಕಡಿಮೆ ಹಣ ಖರ್ಚು ಮಾಡಿ ಹೆಚ್ಚು ಬಟ್ಟೆಗಳನ್ನು ಒಗೆಯಬಹುದು.
- ಕಸ್ತೂರಿ ನೀಲಂ ಹಾಗೂ ಕಸ್ತೂರಿ ಬಾರ್ ಸೋಪ್ ಉಪಯೋಗಿಸುವುದರಿಂದ ಇದು ಸಾಧ್ಯ.
- ಕಸ್ತೂರಿ ಸಾಬೂನುಗಳು ಬಹು ಉಳಿತಾಯಕರವಾದುದು ಅಲ್ಲದೆ, ಪ್ರತಿ ಬಾರ್ ಸೋಪಿನಿಂದಲೂ ಹೆಚ್ಚು ಬಾರಿ ಒಗೆಯಲು ಸಾಧ್ಯವಾಗುತ್ತದೆ.
- ಇದರಲ್ಲಿ ವಿಶೇಷ ಡಿಟರ್ಜೆಂಟುಗಳು ಮಿಶ್ರಿತವಾಗಿರುವುದರಿಂದ ನಿಮ್ಮ ಉಡುಪುಗಳು ಬಿಳುಪಿಗಿಂತಲೂ ಅತ್ಯಧಿಕ ಉಜ್ವಲವಾಗಿರುತ್ತವೆ.

ಕಸ್ತೂರಿ ಸಾಬೂನುಗಳನ್ನು ಇಂದೇ ಉಪಯೋಗಿಸಿರಿ

**'ಕಸ್ತೂರಿ'**
**ಬಾರ್ ಸೋಪ್**

**'ಕಸ್ತೂರಿ'**
**ನೀಲಂ ಬಾರ್ ಸೋಪ್**

ಯಾರಕರು :

ರಾಮಕೃಷ್ಣ ಆಯಿಲ್ ಮಿಲ್, ತುಮಕೂರು

# ಜ್ಞಾನಕ್ಕೆ ಜಾತಿಯ ಬಂಧನವಿಲ್ಲ

ಪ. ರಾಮಕೃಷ್ಣ ಶಾಸ್ತ್ರಿ, ಶಿವಶಕ್ತಿ ನಿಲಯು, ಅಂಚೆ ; ಪೆರ್ಲ ಮಚ್ಚಿನ - 574 295 (ದ.ಕ.)

ಬಹು ಹಿಂದಿನ ಕತೆ. ಕಠಿಣ ತಪಶ್ಚರ್ಯೆಯಿಂದ ಮಹಾ ಸಾಧಕನೆನಿಸಿದ ಮಹರ್ಷಿಯೊಬ್ಬನು ಘೋರಾರಣ್ಯದಲ್ಲಿ ಬ್ರಾಹ್ಮಣ ವಟುಗಳಿಗೆ ವೇದಪಾಠ ಬೋಧಿಸಿಕೊಡಿದ್ದ. ಆಮಹರ್ಷಿಗೆ ಇಬ್ಬರು ಹೆಂಡತಿಯರು. ಒಬ್ಬಳು ಬ್ರಾಹ್ಮಣ ಕನ್ಯೆಯಾದರೆ ಮತ್ತೊಬ್ಬಳು ಶೂದ್ರ ಜಾತಿಯವಳು. ಅವಳ ಹೆಸರು ಇತೆರಾ. ಪರಮ ಸುಂದರಿಯಾದ ಶೂದ್ರ ತರುಣಿಯನ್ನು ಮಡದಿಯಾಗಿ ಮಹರ್ಷಿಯು ಆಶ್ರಮದ ಹೊರಗಿನ ಒಂದು ಪರ್ಣಶಾಲೆಯಲ್ಲಿ ತಂದಿರಿಸಿಕೊಂಡಿದ್ದ. ಅವನಿಗೆ ಅವಳಲ್ಲಿ ಒಬ್ಬ ಮಗನೂ ಬ್ರಾಹ್ಮಣ ಕನ್ಯೆಯಲ್ಲಿ ಒಬ್ಬ ಮಗನೂ ಜನಿಸಿದ್ದರು.

ಮಹರ್ಷಿಯ ಇಬ್ಬರು ಮಗಂದಿರು ಬೆಳೆದು ದೊಡ್ಡವರಾದರು. ಅವರನ್ನು ಯೋಗ್ಯ ವಿದ್ಯಾಭ್ಯಾಸಕ್ಕಾಗಿ ಗುರುಕುಲಕ್ಕೆ ಕಳುಹಿಸಬೇಕಾದ ವಯಸ್ಸಿಗೆ ಬಂದರು ಆ ಕಾಲದಲ್ಲಿ ಪ್ರತಿನಿತ್ಯ ಋಷಿಮುನಿಗಳು ಯಾಗಕುಂಡದಲ್ಲಿ ಯಾಗ ಮಾಡುತ್ತಿದ್ದರು ಬಳಿಕ ಯಾಗಕುಂಡದ ಸುತ್ತಲೂ ವಿದ್ಯಾರ್ಥಿಗಳನ್ನು ಕುಳ್ಳಿರಿಸಿ ಅವರಿಗೆ ವಿದ್ಯಾದಾನ ಮಾಡುವುದು ಪದ್ಧತಿಯೂ ಆಗಿತ್ತು. ಮಹರ್ಷಿಯ ಬ್ರಾಹ್ಮಣ ಪತ್ನಿ ತನ್ನ ಮಗನನ್ನು ಯಾಗಶಾಲೆಗೆ ಕರೆತಂದು ಶಿಕ್ಷಣ ಪಡೆಯಲು ಯಾಗ ಕುಂಡದೆದುರು ಅವನನ್ನು ಕೂರಿಸಿದಳು. ಇತೆರಾ ಇದನ್ನು ಕಂಡು ಲಗುಬಗೆಯಿಂದ ತನ್ನ ಮಗನನ್ನು ಯಾಗಶಾಲೆಯ ಬಳಿ ಕರೆದುಕೊಂಡು ಬಂದಳು.

ಅದನ್ನು ಕಂಡು ಮಹರ್ಷಿಯು ಶೂದ್ರ ಸ್ತ್ರೀಯು ಯಾಗಶಾಲೆಯೊಳಗೆ ಬಂದು ಅಪವಿತ್ರಗೊಳಿಸುತ್ತಾಳೆಂದು ಅರಿತು ಅವಳು ಯಾಗಶಾಲೆಯೊಳಗೆ ಬರುವುದೇ ಬೇಡವೆಂದು ತಿಳಿಸಿದ, ಆಗ ಇತೆರಾ ತನ್ನ ಮಗನನ್ನು ವಿದ್ಯೆ ಕಲಿಯಲು ಕರೆತಂದಿರುವುದಾಗಿ ತಿಳಿಸಿದಳು. ಆದರೆ ಮಹರ್ಷಿಯು "ಶೂದ್ರ ಸ್ತ್ರೀಗೆ ನನ್ನಿಂದ ಜನಿಸಿದ ಮಗನಾದವು ಅವನಿಗೆ ವಿದ್ಯೆ ಕಲಿಸಲು ನನ್ನಿಂದ ಸಾಧ್ಯವಿಲ್ಲ. ಅವನನ್ನು ಇಲ್ಲಿಂದ ಓಡಿಸಿ" ಎಂದು ಶಿಷ್ಯರಿಗೆ ಹೇಳಿದ.

ಸುಕುಮಾರನಾದ ಇತೆರಾಳ ಮಗನಿಗೆ ಅದರಿಂದ ಉತ್ಸಾಹಭಂಗವಾಯಿತು ಎಲ್ಲರಂತೆ ತಾನೂ ವಿದ್ಯೆಕಲಿಯಬೇಕೆಂಬ ಶ್ರದ್ಧೆ ಅವನಲ್ಲಿ ಉಕ್ಕುತ್ತಿತ್ತು. ಆದರೆ ತಂದೆಯಾಡಿದ ಮಾತುಗಳಿಂದ ಅವನ ಮನಸ್ಸೆಂಬ ಹೂವನ್ನು ಕಾಲಿನ ಕೆಳಗೆ ಹಾಕಿ ಹೊಸಕಿದಂತಾಯಿತು. ಅವನು ಗಳಗಳನೆ ಅಳುತ್ತಾ ತಾಯಿಯ ಕೊರಳನ್ನು

ಬಳಸಿ ಹಿಡಿದು, "ಅಮ್ಮಾ ನನ್ನ ಅಪ್ಪ ತಪೋನಿಧಿಯಾದ ಮಹರ್ಷಿಗಳಾದರೂ ಶೂದ್ರ ಸ್ತ್ರೀಯ ಗರ್ಭದಿಂದ ಜನಿಸುವುದೇ ಅಪರಾಧವಲ್ಲವೇ ಅಮ್ಮಾ ? ಈ ಅಪರಾಧವಿಂದಾಗಿ ಜೀವನವಿಡೀ ನಾನು ವಿದ್ಯೆ ಕಲಿಯದೆ ಅನಾಗರಿಕನಾಗಿ ಬಾಳಲೇಬೇಕೇನಮ್ಮಾ" ಎಂದು ಕಲ್ಲೂ ಕರಗುವಂತೆ ಕೇಳಿದ.

ಇತೆರಾಗೆ ದುಃಖ ಉಮ್ಮಳಿಸಿ ಬಂತು. ಆದರೆ ಮಗನ ಯಾವ ಪ್ರಶ್ನೆಗೂ ಆಕೆ ಉತ್ತರಿಸದೆ ಮೌನವಾಗಿದ್ದು ಬಿಟ್ಟಳು. ಆದರೂ ಅವಳನ್ನು ಮೌನವಾಗಿಯೇ ಉಳಿಯಲು ಬಿಡಲಿಲ್ಲ – ಅಂದು ನಡೆದ ಗಾಯದ ಮೇಲೆ ಬರೆ ಎಳೆಯುವಂತಹ ಇನ್ನೊಂದು ಘಟನೆ.

ಮರುದಿನ ಯಾಗಕ್ಕಾಗಿ ಆರಣಿಗಳನ್ನು ಸಂಗ್ರಹಿಸಿ ತರಲು ಇತೆರಾ ಮಗನ ವಯಸ್ಸಿನ ವಟುಗಳೆಲ್ಲರೂ ಅರಣ್ಯಕ್ಕೆ ಹೊರಟರು. ಅವನೂ ನಡೆದುದನ್ನು ಮರೆತು ಉತ್ಸಾಹದಿಂದ ಅವರನ್ನು ಹಿಂಬಾಲಿಸಿ ಹೊರಟ. ಎಲ್ಲರಿಗಿಂತ ಹೆಚ್ಚು ಸಮಿಧೆಗಳನ್ನು ಕಡಿದು ಸಂಗ್ರಹಿಸಿದ. ಅದನ್ನು ಕಂಡು ಅವರೆಲ್ಲ ಅವನನ್ನು ಗೇಲಿ ಮಾಡಿ ನಗಲಾರಂಭಿಸಿದರು. "ಯಾಕೆ ನಗುತ್ತಿದ್ದೀರಾ ?" ಆತ ಅಸಹನೆಯಿಂದ ಕೇಳಿದ. "ಬೇರೇನಿಲ್ಲ; ನೀನು ಸುಮ್ಮನೆ ಶ್ರಮಪಡುತ್ತಿರುವೆ. ಎಷ್ಟು ಒದ್ದಾಡಿ ಸಮಿಧೆ ಸಂಗ್ರಹಿಸಿದರೂ ನಿರರ್ಥಕ ಬನ್ನಿ" ಎಂದರು ಜೊತೆಯವರು. "ಯಾಕೆ, ನಾನು ನಿಮಗಿಂತ ಹೆಚ್ಚು ಸಂಗ್ರಹಿಸಿಲ್ಲವೆ ?" ಎಂದು ಆತ ಕೇಳಿದ.

ಇರಬಹುದು. ಆದನ್ನು ಹೊತ್ತುಕೊಂಡುಯಾಗಶಾಲೆಗೆ ಹೋಗಬಹುದು ಆದರೆ ಅಲ್ಲಿ ಯಾಗಶಾಲೆಗೆ ಪ್ರವೇಶಿಸಲು ನಿನ್ನನ್ನು ಬಿಡುತ್ತಾರೆಯೆ ? ಈ ಸಮಿಧೆಗಳನ್ನು ಬಳಸಿ ನಾಳೆ ಯಾಗ ಮಾಡುತ್ತಾರೆಯೆ ? ಇಲ್ಲವೆಂದಮೇಲೆ ಶ್ರಮ ನಿರರ್ಥಕ ಅಲ್ಲವೆ ?" ಎಂದು ಅವರೆಂದರು.

"ಯಾಕೆ ?" ಅವನು ಅಮಾಯಕನಂತೆ ಕೇಳಿದ. ಗಹಗಹಿಸಿ ನಕ್ಕರು ಎಲ್ಲರೂ. "ಯಾಕೆ ಅಂದರೆ ನೀನು ಶೂದ್ರಸ್ತ್ರೀಯಮಗ; ಅಪವಿತ್ರ! ನೀನು ಮುಟ್ಟಿದ ಸಮಿಧೆ ಏತಕ್ಕೂ ಬೇಡ"

ಹುಡುಗನಲ್ಲಿದ್ದ ಸ್ವಾಭಿಮಾನ ಭುಗಿಲೆದ್ದಿತು. ನೂರು ಸುತ್ತಿಗೆಯಿಂದ ನೆತ್ತಿಗೆ ಬಡಿದಂತಾಯಿತು. ಸಮಿಧೆಯನ್ನು ಅಲ್ಲೇ ಎಸೆದು ತಾಯಿಯ ಬಳಿಗೆ ಓಡಿ ಬಂದ "ಅಮ್ಮಾ, ಈ ಜಾತಿ ಹೀನತೆ ಹೊತ್ತು ಸಾಯುವವರೆಗೂ ಇರಬೇಕೆ ? ಎಂದು ಮೈಯಲುಗಿಸಿ ಕೇಳಿದ.

" ಮಗೂ, ನೀನು ಅಂತಹ ನಿರ್ಭಾಗ್ಯನಲ್ಲವಪ್ಪಾ. ನಿನ್ನ ತಂದೆ ಅಖಂಡ ಜ್ಞಾನನಿಧಿ. ಅವರು ನಿನಗೆ ವಿದ್ಯೆಯನ್ನೂ ಬೋಧಿಸಲು ನಿರಾಕರಿಸಿದರೇನಾಯಿತು ಬಿಡು. ನಾನು ಶೂದ್ರಳಾದರೇನಂತೆ, ಭೂಮಿಕನ್ಯೆ ಅಲ್ಲವೆ? ನಿನ್ನನ್ನು ವಿದ್ಯಾವಂತನನ್ನಾಗಿ ಮಾಡಲು ಆ ತಾಯಿಯೊಂದಿಗೇ ಕೋರಿಕೊಳ್ಳುತ್ತೇನೆ. ಜ್ಞಾನಾನಿಧಿಯಾದ ಧರಿತ್ರಿಯು ತನ್ನ ಪ್ರೇಮ, ದಯೆಗಳ ಧಾರಾಮೃತದಿಂದ ನಿನ್ನನ್ನು ಉದ್ಧರಿಸುತ್ತಾಳೆ ಖಂಡಿತ" ಎಂದು ಇತರೇ ನಾನಾ ಬಗೆಯಿಂದ ನೊಂದ ಮಗನಿಗೆ ಸಾಂತ್ವನ ಹೇಳಿದಳು. ಬಳಿಕ ಅಖಂಡ ಭಕ್ತಿಯಿಂದ ಪೃಥ್ವಿಯನ್ನು ಸುತ್ತಿಸಿದಳು. "ಅಮ್ಮಾ ನೀನೊಲಿಯದಿದ್ದರೆ ನಾವಿಬ್ಬರೂ ಪ್ರಾಣತ್ಯಾಗ ಮಾಡಿಕೊಳ್ಳುತ್ತೇವೆ, ಆ ಪಾತಕ ನಿನಗೆ" ಎಂದಳು.

ಆ ಸ್ತುತಿಯಿಂದ ಸಂಪ್ರೀತಳಾದ ಭೂತಾಯಿಯು ಪ್ರತ್ಯಕ್ಷಳಾಗಿ, "ಇತರೇ, ಚಿಂತಿಸಬೇಡ. ಲೋಕದ ಸಮಸ್ತ ಜ್ಞಾನವನ್ನು ನನ್ನ ಒಡಲಲ್ಲಿ ಹುದುಗಿಸಿಕೊಂಡಿದ್ದೇನೆ. ಈ ಜ್ಞಾನಾಮೃತವನ್ನು ನಿನ್ನ ಮಗನಿಗೆ ಧಾರೆಯೆರೆದು ಸಕಲ ವಿದ್ಯೆಗಳಲ್ಲೂ ಅವನನ್ನು ಪರಿಣತನನ್ನಾಗಿ ಮಾಡುತ್ತೇನೆ. ಅವನನ್ನು ನನ್ನ ವಶಕ್ಕೆ ಕೊಡು" ಎಂದಳು. ಇತರೇ ಆ ಭೂಮಿತಾಯಿಯ ತೆರೆದ ವಿಶಾಲ ಒಡಲೊಳಗೆ ಮಗನನ್ನು ಹೊಗಿಸಿಬಿಟ್ಟಳು. ಅಲ್ಪಾವಧಿಯಲ್ಲಿ ಅವನು ವಿದ್ಯಾಪಾರಂಗತನಾಗಿ ತಾಯಿಯ ಬಳಿಗೆ ಬಂದು ಅವಳನ್ನು ಸಂತೋಷ ಪಡಿಸಿದ.

ಹೀಗೆ ಜ್ಞಾನವೆಂಬುದು ಜಾತಿಯ ಸೊತ್ತಲ್ಲ; ಅದನ್ನು ಗಳಿಸುವ ಶ್ರದ್ಧಾ ಭಕ್ತಿಗಳಿದ್ದರೆ ಯಾರಿಗೂ ಅದು ಒಲಿಯುತ್ತದೆ ಎಂಬ ಮಹತ್ವದ ನೀತಿಯನ್ನು ಸಾರಿದ ಆ ಬಾಲಕ ಅನಂತರ ಎಲ್ಲರಿಂದ ಮಾನ್ಯತೆ ಪಡೆದ; ಗೌರವಾನ್ವಿತನಾದ. ಮುಂದೆ ಋಗ್ವೇದದ "ಐತರೇಯ ಬ್ರಾಹ್ಮಣ" ವನ್ನು ರಚಿಸಿದ ಅವನನ್ನು ಎಲ್ಲರೂ ಐತರೇಯ ಋಷಿಯೆಂದೇ ಕರೆದರು.

---

**ಆಜೀವ ಸದಸ್ಯರುಗಳಲ್ಲಿ ಒಂದು ಮನವಿ.**

ಸಿದ್ಧಗಂಗಾ ಪತ್ರಿಕೆಯ ಅನೇಕ ಆಜೀವ ಸದಸ್ಯರುಗಳ ವಿಳಾಸಗಳು ಬದಲಾಗಿರುವುದರಿಂದ ಕಾರ್ಯಾಲಯದಿಂದ ಕಳುಹಿಸಿದ ಸಂಚಿಕೆಗಳು ಕೆಲವು ಸದಸ್ಯರುಗಳಿಗೆ ತಲುಪದೆ ಹಿಂತಿರುಗುತ್ತಿವೆ. ದಯವಿಟ್ಟು ನಿಮ್ಮ ಬದಲಾದ ವಿಳಾಸಗಳನ್ನು ಆಗಿಂದಾಗ್ಗೆ ಪತ್ರಿಕಾ ಕಾರ್ಯಾಲಯಕ್ಕೆ ಕಳುಹಿಸಿ ಕೊಡುವುದರ ಮುಖೇನ "ಸಿದ್ಧಗಂಗಾ" ನಿಮಗೆ ಕ್ರಮವಾಗಿ ತಲುಪಲು ಸಹಕರಿಸಬೇಕಾಗಿ ಪ್ರಾರ್ಥನೆ. **ತಮ್ಮ ಸದಸ್ಯತ್ವದ ನಂಬರನ್ನು ತಪ್ಪದೇ ತಿಳಿಸಿರಿ.**

ಪ್ರಕಾಶಕರು.

---

# ರಾಜಕೀಯ ವಿಫಲತೆಗೆ ಧರ್ಮ ನಿರಪೇಕ್ಷತೆಯೇ ಕಾರಣ

ಇಲ್ಲಿ ಧರ್ಮ ಧರ್ಮವೆಂದೊಡನೆ ಹಿಂದೂ ಧರ್ಮ, ಕ್ರೈಸ್ತಧರ್ಮ, ಮಹಮ್ಮದೀಯ ಅಂದರೆ ಮುಸಲ್ಮಾನ ಧರ್ಮ, ಜೈನಧರ್ಮ, ಸಿಖ್ಖಧರ್ಮ ಇತ್ಯಾದಿ ಯಾವುದೇ ಒಂದು ಜಾತಿಯ, ಗುಂಪಿನ, ವರ್ಗದ ಸಮುದಾಯದ ಸೀಮಿತದೊಳಗೆ ಅಂಟಿಕೊಂಡಿದೆ – ಎಂಬ ಭ್ರಮಾತ್ಮಕ ಕಲ್ಪನೆಯೇ, ಧರ್ಮದ ವಿಷಯದಲ್ಲಿ ತಿಳಿದುಕೊಂಡ ಸಂಕುಚಿತ ಭಾವನೆಯೇ ಬಹುಜನರ ಮಸ್ತಿಷ್ಕದಲ್ಲಿ ತುಂಬಿಕೊಂಡಿದೆ. ಧರ್ಮವು ಸರ್ವಕಾಲಿಕವೂ ತ್ರಿಕಾಲಾಬಾಧಿತವೂ ಆಗಿರುವ ಸರ್ವವ್ಯಾಪಕತತ್ವ. ವೇದಾದಿ ಸಮಸ್ತಸತ್ ಶಾಸ್ತ್ರಗಳಲ್ಲಿ ವರ್ಣಿಸಲ್ಪಟ್ಟಿರುವ ಧರ್ಮದ ವ್ಯಾಪಕತೆಯನ್ನು ಗಂಭೀರತೆಯನ್ನು ಆಳವಾಗಿ ಅಧ್ಯಯನ ಮಾಡಿದಾಗ ಮಾನವ ಸಮುದಾಯದ ಸರ್ವತೋಮುಖ ಅಭ್ಯುದಯ ಅಂದರೆ ಇಹಕ್ಕೂ ಪರಕ್ಕೂ ಸಾಧನವಾಗಿ ಪಥ ಪ್ರದರ್ಶನ ಮಾಡುವ ಪರಮ ವೈಜ್ಞಾನಿಕವೂ ದಾರ್ಶನಿಕವೂ ಆದ ಪವಿತ್ರ ತತ್ವವೇ ಆಗಿದೆ ಎಂದು ತಿಳಿಯಬಹುದು. ಅದಲ್ಲದೆ ಸಮಗ್ರ ಮಾನವ ಜನಾಂಗವು ಯಾವುದನ್ನು ಧಾರಣೆ ಮಾಡಿಕೊಂಡು ಸರಿಯಾದ ರೀತಿಯಲ್ಲಿ ಯೋಗ್ಯವಾದ ರೀತಿಯಲ್ಲಿ ಸರ್ವರ ಹಿತವನ್ನೇ ಬಯಸುತ್ತಾ ಸರ್ವಕಲ್ಯಾಣಕ್ಕಾಗಿ ಮಾಡುವ ಕರ್ತವ್ಯ ಕರ್ಮಗಳೇ ಧರ್ಮ ಎಂಬ ಹೆಸರಿನಿಂದ ಕರೆಯಲಾಗಿದೆ. ಇದನ್ನು ನಿರ್ದಿಷ್ಟವಾದ ಸರ್ವರಿಗೂ ಅನ್ವಯವಾಗುವ ಯಾವುದೇ ಜಾತಿ-ಮತ ಪಂಥದ ಅಥವಾ ಸಮುದಾಯದವರಿಗೆ ಅಥವಾ ಯಾವುದೇ ದೇಶದವರಿಗೆ ಏನೊಂದೂ ಬಾಧಕ ಬಾರದ ರೀತಿಯಲ್ಲಿ ಆತ್ಮನ ಉತ್ಕೃಷ್ಟವಾದ ಏಳಿಗೆಗಾಗಿ ಹತ್ತು ಲಕ್ಷಣಗಳಿಂದ ಕೂಡಿ ಬೋಧಿಸಲ್ಪಟ್ಟಿದೆ. ಇದು ಬಡವ ಬಲ್ಲಿದನೆಂಬ ಭೇದವಿಲ್ಲದೆ ಸಾಮಾನ್ಯ ಪ್ರಜೆಗಳಿಂದ ಹಿಡಿದು, ರಾಜಗದ್ದುಗೆಯಲ್ಲಿ ಮೇರೆದಾಡುವ ಮಹೋನ್ನತ ಪದವಿಯ ರಾಷ್ಟ್ರನಾಯಕರಿಗೂ ಅನ್ವಯಿಸುವುದಾಗಿದೆ. ಇಂಥಾ ವಿಶಾಲ ವ್ಯಾಪಕತೆಯನ್ನುಳ್ಳ ಧರ್ಮವನ್ನು ಯಾವನು ಕಡೆಗಣಿಸುತ್ತಾನೋ ಆತನಿಗೆ ಇಹವು ಇಲ್ಲ ಪರವು ಇಲ್ಲ. ಧರ್ಮಕ್ಕೆ ಪ್ರಧಾನ ಸ್ಥಾನವನ್ನು ಕೊಟ್ಟಿರುವ ನಮ್ಮ ಭಾರತ ವರ್ಷದಲ್ಲಿ ಭಾರತೀಯರೆ ಆದ ನಾವು ಧರ್ಮದ ಸರ್ವ ವ್ಯಾಪಕತೆಯನ್ನು ತಿಳಿಯದೆ ಅದರ ಕಡೆಗೆ ವಿಮುಖರಾಗಿ ಸ್ವಾರ್ಥ ಲೋಲುಪತೆಯಿಂದ ಸಂಕುಚಿತವಾದ ತಮ್ಮ ತಮ್ಮ ಮತ ಸಂಪ್ರದಾಯಗಳಿಗೆ ಅನ್ವಯವಾಗುವಂತೆ ಅರ್ಥವಿಸಿಕೊಂಡು ಅದರ ಗೌರವ ಗರಿಮಗಳನ್ನೇ ಮೂಲೆ ಪಾಲಾಗಿ ಮಾಡಿ ಅದನ್ನು ಎತ್ತಿ ಹಿಡಿಯುವ ಅಥವಾ ರಕ್ಷಿಸುವ ಗೋಜಿಗೆ ಹೋಗದೆ ಇಷ್ಟಬಂದ ರೀತಿಯಲ್ಲಿ ನಡೆದುಕೊಳ್ಳುವ ಈ ನೀಚ ಭಾವನೆಯೇ ನಮ್ಮನ್ನೂ ನಮ್ಮ ಭಾರತವನ್ನೂ ಅಧೋಗತಿಗಿಳಿಯುವಂತೆ ಮಾಡಿದೆ.

ಇನ್ನಾದರೂ ಶ್ರೀಸಾಮಾನ್ಯರಿಂದ ಎಲ್ಲಾ ರಾಷ್ಟ್ರನಾಯಕರೂ ಸಹ ಧರ್ಮ ನಿರಪೇಕ್ಷ್ಷತಾಭಾವನೆಯನ್ನು ಬದಿಗೊತ್ತಿ ವೈಯಕ್ತಿಕವಾಗಿಯೂ ಸಾಮಾಜಿಕವಾಗಿಯೂ ರಾಷ್ಟ್ರೀಯವಾಗಿಯೂ ಐಕತಾಭಾವನೆಯಿಂದ ವ್ಯವಸ್ಥಾಬದ್ಧವಾಗಿ ಧರ್ಮವನ್ನು ಪುನರ್‌ಸ್ಥಾಪಿಸುವುದು ಅತೀ ಅಗತ್ಯ.

ಎಷ್ಟರ ತನಕ ವ್ಯಕ್ತಿಯಾಗಲಿ, ಸಮಾಜವಾಗಲಿ, ರಾಷ್ಟ್ರವಾಗಲಿ, ಈ ಸಾರ್ವಭೌಮ ಧರ್ಮವನ್ನು ಎತ್ತಿ ಹಿಡಿಯುವುದಿಲ್ಲವೋ ಆದರ ಆಧಾರದಲ್ಲಿಯೇ ರಾಷ್ಟ್ರದ ನಿರ್ಮಾಣವನ್ನು ರೂಪಿಸುವುದಿಲ್ಲವೋ ಅಷ್ಟರ ತನಕ ಯಾವ ಪ್ರಜೆಗೂ ಹಿತವಾಗದು. ಈ ಧರ್ಮವನ್ನು ಕಡೆಗಣಿಸಿದ ಯಾವರಾಷ್ಟ್ರವೂ ಶಾಂತಿಯಿಂದ ನೆಮ್ಮದಿಯಾಗಿ ಬಾಳಿಲ್ಲ. ಅಶಾಂತಿ ತುಂಬಿ ಪ್ರಜೆಗಳು ದುಃಖಿತರಾಗಿ ಪಡುವ ಕಷ್ಟವನ್ನು ಧರ್ಮವಿಮುಖವಾದ ಕೆಲವೇ ರಾಕ್ಷಸೀ ಶಕ್ತಿಗಳೇ ದುರುಪಯೋಗದಿಂದ ರಾಜ್ಯಭಾರ ಮಾಡುತ್ತಿರುವ ವಿಷಯ ಪತ್ರಿಕೆಗಳಲ್ಲಿ ದಿನ ಬೆಳಗಾದರೆ ಸುದ್ಧಿ ಸಮಾಚಾರವನ್ನು ನಾವು ನೋಡುತ್ತಿದ್ದೇವೆ. ನಮ್ಮ ನೆರೆಯ ರಾಷ್ಟ್ರವಾದ ಪಾಕಿಸ್ಥಾನವು ಇಸ್ಲಾಮಿನ ತತ್ವದ ಮೇಲೆ ತನ್ನ ರಾಜ್ಯವನ್ನು ಕಟ್ಟುವುದಾಗಿ ಘೋಷಿಸುತ್ತಿದೆ. ಆದರೆ ಬೇರೆ ಬೇರೆ ರಾಷ್ಟ್ರದ ತತ್ವಗಳು ಧರ್ಮದ ಸಾರ್ವಭೌಮತೆಯನ್ನು ಹೊಂದಿಕೊಂಡಿಲ್ಲ. ಕೇವಲ ಭಾರತೀಯದರ್ಶನ ಶಾಸ್ತ್ರಗಳೇ ಧರ್ಮದ ಸರ್ವವ್ಯಾಪಕತೆಯನ್ನು ಎತ್ತಿ ಹಿಡಿದು ಬೆಳಗಿಸುತ್ತಾ ಬಂದಿವೆ.

ಇನ್ನಾದರು ನಮ್ಮ ರಾಷ್ಟ್ರನಾಯಕರು ತಮ್ಮ ತಮ್ಮೊಳಗಿರುವ ಎಲ್ಲಾ ಭೇಧ ಭಾವಗಳನ್ನು, ತಮ್ಮ ಗದ್ದುಗೆಯ ಪಟ್ಟಭದ್ರ ಶಕ್ತಿಗಳಿಗಾಗಿ ನಡೆಸುವ ಹೊಡೆದಾಟಗಳನ್ನೂ ಭೋಗವಿಲಾಸತೆಯನ್ನು ಬದಿಗೊತ್ತಿ ಪೂರ್ಣ ತ್ಯಾಗ ಭಾವನೆಯಿಂದ ಕಂಗೊಳಿಸುವ ಧರ್ಮದ ತಳಹದಿಯಲ್ಲಿ ರಾಷ್ಟ್ರವನ್ನು ಕಟ್ಟಬಾರದೆಕೋ ತಿಳಿಯದು. ರಾಷ್ಟ್ರೀಯ ಶಿಥಿಲತೆ ದಿನದಿಂದ ದಿನಕ್ಕೆ ಜನಸೇವೆಯನ್ನು ಅವನತಿಯ ಕಡೆಗೆ ಕೊಂಡೊಯ್ಯುತ್ತಿದೆ. ಇನ್ನಾದರೂ ನಾವು ಕಣ್ಣು ಬಿಡಬೇಡವೇ ? ಪ್ರಜಾ ಸಂಮೂಹವು ಇದರ ಸತ್ಯಾಸತ್ಯವನ್ನು ಎಷ್ಟು ಬೇಗ ಅರಿತುಕೊಳ್ಳುವುದೋ ಅಂದೆ ನಮ್ಮ ಭಾರತದ ಉನ್ನತಿ ಹಾಗೂ ಪ್ರಜೆಗಳ ಕಲ್ಯಾಣವಾದೀತು. ಎಂದು ತಿಳಿದು ಧರ್ಮ ನೀರಪೇಕ್ಷತೆಯನ್ನು ಆದಷ್ಟು ಬೇಗ ತ್ಯಜಿಸೋಣ. ರಾಷ್ಟ್ರವನ್ನು ಸುಭದ್ರವಾಗಿ ಬೆಳಗಿಸೋಣ.

ಕೃಪೆ:- **ವೇದಪ್ರಕಾಶ**

# ವಿದ್ಯಾರ್ಥಿಜೀವನದ ಬೆಳಕು ಸರಣಿ

ಬಿ. ಎಸ್. ಕೃಷ್ಣಮೂರ್ತಿ, ನಂ. 5, ಸೀತಾವಿಲಾಸ ರಸ್ತೆ, ಮೈಸೂರು - 570 024

## ವ್ಯಾಸಂಗ ಸಮಯದಲ್ಲಿ ಅರಿತಿರಬೇಕಾದ ನೀತಿಗಳು :

ಶಿಷ್ಯವೃತ್ತಿಯು ಜೀವಿತದಲ್ಲಿ ಪರ್ವಕಾಲ. ಇದರ ಫಲ ಮುಂದೆ ಗೃಹಸ್ಥಾಶ್ರಮ ವಹಿಸುವ ಕಾಲದಲ್ಲಿ ತಿಳಿಯಬರುತ್ತದೆ, ಹೀಗಾಗಿ ಆ ಫಲವನ್ನು ಉಣ್ಣಲು ವಿದ್ಯಾರ್ಥಿಯಾಗಿರುವಾಗಲೇ ರೂಪಿಸಿಕೊಳ್ಳಬೇಕು.

ಶಾಲಾಕಾಲೇಜು ಅಧ್ಯಾಪಕರನ್ನು ವಿಧೇಯತೆಯಿಂದ ಗೌರವಿಸಿ, ಭಕ್ತಿ, ಪ್ರೀತಿಗಳಿಂದ ನಡೆದು ಆದರ್ಶ ವಿದ್ಯಾರ್ಥಿಗಳೆಂಬ ಕೀರ್ತಿ ಪಡೆಯಬೇಕು ತಾವು ಕಲಿಯುವ ಶಾಲಾ ಕಾಲೇಜುಗಳು ಪವಿತ್ರ ಮಂದಿಗರಳೆಂದು ತಿಳಿಯಬೇಕು, ನಿಮ್ಮ ವ್ಯಾಸಂಗ ಸಾಧನೆಗಳೆಲ್ಲಾ ಈ ಮಂದಿರಗಳಲ್ಲಿ ನಡೆಯಬೇಕಾಗಿರುವುದರಿಂದ ಯಾತ್ರಾ ಸ್ಥಳಗಳೆಂಬ ಗೌರವದಿಂದ ಕಾಣಬೇಕು.

ಸುಗುಣಗಳನ್ನು ಕಲಿಯುವ ಆಸಕ್ತಿಯನ್ನು ಬಿಡಬಾರದು ನಿಮ್ಮ ತಾಯ್ತಂದೆಗಳಾಗಲಿ, ಪೋಷಕರಾಗಲಿ ನಿಮ್ಮನ್ನು ಶಾಲಾ, ಕಾಲೇಜುಗಳಲ್ಲಿ ಸರಿಯಾಗಿ ಕಲಿಕೆಯಲ್ಲಿ ಶ್ರದ್ಧೆಯಿಂದ ನಿಗಾವಹಿಸಿ ಇರುವಿರೆಂದು ತಿಳಿದಿರುವುದರಿಂದಲೂ, ನೀವು ಸನ್ಮಾರ್ಗದಲ್ಲಿ ನಡೆಯುತ್ತಿರುವಿರಿ ಎಂದು ಭಾವಿಸಿರುತ್ತಾರೆ. ನಿಮ್ಮಲ್ಲಿ ದೋಷಗಳಿಲ್ಲವೆಂಬ ನಂಬಿಕೆ ಇಟ್ಟು ಅವರ ಪಾಡಿಗೆಅವರು ನೆಮ್ಮದಿಯಿಂದ ಇರುತ್ತಾರೆ. ಆದ್ದರಿಂದ ಆ ನಂಬಿಕೆಗಳಿಗೆ ವ್ಯತಿರಿಕ್ತವಾಗಿ ಹೋಗದೆ ವ್ಯಾಸಂಗದಲ್ಲಿ ಕ್ರಿಯಾಶಾಲಿಯಾಗಿರಬೇಕಾದ್ದು ನಿಮ್ಮ ಕರ್ತವ್ಯ.

ನಿಮ್ಮ ಹಿರಿಯರ ನಂಬಿಕೆಗಳಿಗೆ ವ್ಯತಿರಿಕ್ತವಾಗಿ ನಡೆದು, ದುರ್ಮಾರ್ಗಿಗಳೆಂದು ಅನ್ನಿಸಿಕೊಳ್ಳದ ರೀತಿಯಲ್ಲಿ ಸತ್ಕುಲ ಪ್ರಸೂತರಾಗಿರುವುದು ಉತ್ತಮ ಮಾರ್ಗ.

ನಿಮ್ಮ ಶಾಲಾಕಾಲೇಜುಗಳಲ್ಲಿ ನಡೆಸುವ ಸಭೆಗಳು, ಡ್ರಿಲ್ ಮತ್ತು ಕೂಟಗಳಲ್ಲಿ ಭಾಗವಹಿಸಿ ಅಲ್ಲಿ ನಡೆಸುವ ಕಾರ್ಯಗಳಲ್ಲಿ ಭಾಗಿಯಾಗಬೇಕಲ್ಲದೆ ಅವುಗಳ ಪ್ರಯೋಜನಗಳನ್ನು ಪಡೆಯಿರಿ. ದೇಶದಲ್ಲಿ ಮುಂದೆ ನೆಡೆಯಬಹುದಾದ ಆಗುಹೋಗುಗಳ ವಿಚಾರ ಚಿಂತಿಸಿ, ನಿಮ್ಮ ಕಾಣಿಕೆ ಸಲ್ಲಿಸುವ ಮನೋಭಾವ ಹೊಂದಿರಿ ನೀವು ಎಂದಿಗೂ ಸಮಾಜ ಘಾತುಕ ಕೃತ್ಯಗಳಿಗೆ ಎಡೆಕೊಡಬೇಡಿರಿ. ಶ್ರದ್ಧೆ, ಆಸಕ್ತಿ ಶಿಸ್ತುಗಳಿಂದ ನಿಮ್ಮ ಭವಿಷ್ಯವನ್ನು ಸುಖಮಯವಾಗಿರುವಂತೆ ಜೀವನ ನೆಡೆಸುವ ಕ್ರಮವಹಿಸಿ.

ಮಾನವ ಸ್ವಭಾವ ಚಂಚಲ. ಅದನ್ನು ಸುಳ್ಳು ಮಾಡುವ ಕ್ರಮ ಮತ್ತು ಆತ್ಮ ಶಕ್ತಿಯನ್ನು ಬೆಳೆಸಿಕೊಳ್ಳಿ ವಿದ್ಯಾಭ್ಯಾಸ ಮುಂದುವರಿದಂತೆ ಮನಸ್ಸು ಪರಿಪಕ್ವವಾಗಬೇಕು. ಅದು ಯಾವ ಕಾರಣದಿಂದಾದರೂ ಹಿಮ್ಮೆಟ್ಟಿದರೆ ಮನಸ್ಸು ದುಶ್ಚಟಗಳಿಗೆ ಕಾರಣವಾಗುತ್ತದೆ. ಹತೋಟಿ ತಪ್ಪಿದರಂತೂ ಮೇಲೇರಿ ಬರಲಾಗದೆ ಕೊರಕಿನಲ್ಲಿ ಬಿದ್ದಂತೆ! ಇದರಿಂದ ನಿಮ್ಮ ಶ್ರೇಯಸ್ಸಿಗೆ ಕುಂದಕವಲ್ಲವೆ? ಹಾಗೆ ಅಧೋಗತಿಗೆ ಬೀಳುವ ಮೊದಲೆ ವಿವೇಕ ತಂದುಕೊಂಡು, ಸರಿಯಾದ ಮಾರ್ಗ ಹಿಡಿಯುವುದೇ ಲೇಸಲ್ಲವೆ?

ವಿದ್ಯಾರ್ಥಿ ದೆಸೆ ಮಾನವ ಜೀವನದ ಪ್ರಥಮ ಸೋಪಾನ. ಇದನ್ನೇರಿ ಮುಂದೆ ಮುಂದೆ ಸಾಗದಿದ್ದರೆ ಕತ್ತರಿಯಲ್ಲಿ ಸಿಕ್ಕಿದ ಅಡಿಕೆಯ ರೀತಿ ಒದ್ದಾಡಬೇಕಾಗುವುದು. ಆಗ ಮುಂದಿನ ನಿಮ್ಮ ಸುಖದ ಕನಸು ಕಾಣುವ ನಿಮ್ಮ ಸಂಪತ್ತು, ಸುಖ, ಸಂತೋಷ, ಶ್ರೇಯಸ್ಸು ಇವೆಲ್ಲಕ್ಕೂ ಸಂಚಕಾರ ಬರುವುದು ಖಂಡಿತ! ಆದ್ದರಿಂದ ನಿಮ್ಮ ಬದುಕಿಗೆ ಕೊಡಲಿ ಪೆಟ್ಟು ಬೀಳದಂತೆ ಎಚ್ಚರ ವಹಿಸಿರಿ. ನಿಮ್ಮ ಬಾಳಿನ ಗುರಿ ತೊಡಕಿಲ್ಲದೆ ಸಮಂಜಸವೂ, ನ್ಯಾಯವೂ ಆಗಿರಲು ನೋಡಿಕೊಳ್ಳಿರಿ. ನಿಮಗೆ ಮಾತ್ರವಲ್ಲದೆ ನಿಮ್ಮ ವಂಶದ ಪೀಳಿಗೆಗೆ ಸಹ ಸಾಧನವಾಗುವ ಕ್ರಮವನ್ನು ಅನುಸರಿಸುವುದು ಶ್ರೇಯಸ್ಕರ.

ವಿದ್ಯಾರ್ಥಿಗಳಾಗಿರುವ ನೀವು ಮುಂದಿನ ಪ್ರಜೆಗಳಾದ ಕಾರಣ ನಿಮ್ಮ ಶಿಕ್ಷಣ ಮುಂದುವರಿದಂತೆ ಮನೋವಿಕಾಸವೂ ಕುದುರಬೇಕು. ಸ್ವಾಭಿಮಾನ ಹಿಡಿದೆತ್ತಿ ಸ್ವಜನ ಹಾಗೂ ಪರಜನರ ಹಿತಾಸಕ್ತಿಯನ್ನು ಗಮನಿಸಲು ತವಕವಿರಲಿ. ಇದರಿಂದ ಜನರ ವಿಶ್ವಾಸ, ಪ್ರೇಮ, ಸ್ನೇಹವೃದ್ಧಿ, ಅಭಿಮಾನಗಳು ಹೆಚ್ಚುವುವು. ಎಲ್ಲರ ಏಳಿಗೆಗಾಗಿ ಶ್ರಮಿಸಿ ಕಷ್ಟಸುಖಗಳತ್ತ ಸಮನಾಗಿ ಬೆರೆತು ಜೀವನ ಸಾರ್ಥಕ್ಯ ಹೊಂದುವುದು ನಾಗರೀಕನ ಲಕ್ಷಣ.

ವಿದ್ಯಾರ್ಥಿ ದೆಸೆ ಅಪರಂಜಿ ಚಿನ್ನದಂತೆ ಎಂಬುದಾಗಿ ಮಹನೀಯರು ಅಭಿಪ್ರಾಯಪಡುತ್ತಾರೆ. ಈ ಮಾತನ್ನು ನೀವು ಶಾಶ್ವತಗೊಳಿಸಲು ಯತ್ನಿಸಿರಿ. ಉತ್ತಮ ಮೌಲ್ಯವುಳ್ಳ ಜೀವನದ ಆದರ್ಶಗಳನ್ನು ಅನುಸರಿಸಿ ನಡೆದರೆ ನಿಮ್ಮ ಬಾಳು ಹಸನಾಗುತ್ತದೆ. ವಿದ್ಯಾವಿನಯ ಸಂಪನ್ನರೆಂಬುವ ಕೀರ್ತಿ ನಿಮ್ಮ ಪಾಲಿಗೆ ಬಂದಿರುವಾಗ ಅದನ್ನೇಕೆ ಕಳೆದುಕೊಳ್ಳಬೇಕು? ದೈವ ಭಕ್ತಿ, ಸದ್ಧರ್ಮಾಚರಣೆ ಪಾಲಿಸಿದರೆ ಕಲಿತ ವಿದ್ಯೆ ಸಾರ್ಥವಾದೀತು!

# ಶ್ರೀಮದುದಾನೇಶ್ವರ ಶತಕಮ್

ಹೊಗಲು ಜಾರಾಲಯುವ ಕಾಮವು
ಹೊಗಲು ದೇವಾಲಯುವ ಪ್ರೇಮವು
ಬಗೆಗೆ ತೋರುವದಾಗಿ ದುಷ್ಟಕೃತಘ್ನಸಂಘದೊಳೂ ।
ಹೊಗದೆ ಸದ್ಗುಣ ಶುಚಿಕೃತಜ್ಞತೆ
ಬಗೆದು ಸನ್ಮಾರ್ಗದೊಳು ನಡೆಯಲು
ನಗುತ ಪಾಲಿಪಜೀಯ ಉದ್ದಾನೇಶದಯವಾಗೋ ॥

ದುಷ್ಟ ಕಾರ್ಯವ ಮಾಳ್ಪಶಕ್ತಿಯೆ
ಶಿಷ್ಟ ಕಾರ್ಯವ ನೆಸಗಬಲ್ಲುದು
ದುಷ್ಟಕಾರ್ಯದೆ ಪಶುಕೆ ಸುಕೃತದೆ ದೇವತಾಜನ್ಮಾ ।
ಸ್ಪಷ್ಟತರ ಸುಖದುಃಖಗಳೆ ಫಲ
ವಿಷ್ಟಕೂಳ ಹವಾಸ ಕಾರಣ
ಶಿಷ್ಟರೊಳಗಿರುಸುತ್ತೆ ಉದ್ದಾನೇಶ ದಯವಾಗೋ ॥

ತನುವು ಶಾಶ್ವತವಲ್ಲವಾರಿಗು
ಧನಕನಕ ಸಿರಿ ಪಶುವು ಮನೆಯೊಳು
ಮನದ ಸಿರಿಸುತ ಒಳಗ ಮಸಣದೆ ನೆಲನದಲ್ಲಲ್ಲೇ ।
ಘನದಿನಂಬಿದ ತನುವುಗುಳಿಯೊಳು
ಮನದ ಪುಣ್ಯವು ಪಾಪಜತೆಯೊಳು
ಚಿನುಮಯಾತ್ಮಕಜೀಯ ಉದ್ದಾನೇಶದಯವಾಗೋ ॥

ಪಾಪದಾಬಿರುಗಾಳಿಯಿಂ ಭವ
ತಾಪದಾ ನರಕಾಬ್ಧಿ ಸೇರಿದೆ
ತಾಪಸುಳಿದಾರಿದ್ರ್ಯಮಡು ಜನಿಮರಣದಲೆಯೊಳಿಹೇ
ಕೋಪಷುತ್ತೃಷೆಮೊಸಳೆ ಬಾಧೆವಿ
ಕಲ್ಪದಿಂಗತಿಗಾಣದಿದೆಂ
ದಾಪದುದ್ದರ ಜೀಯ ಉದ್ದಾನೇಶದಯವಾಗೋ ॥

ರಾಮಭೀಮರು ನಮ್ಮಜನತೆಯುವ
ರೀಮಹಾಭೂತಂಗಳೀರವಿ
ಸೋಮಗ್ರಹಗಣವೆಲ್ಲವಂದಿನ ವಲ್ಲದಿನ್ನಿಲ್ಲಾ
ಧರ್ಮದಿಂದವರಂದೆ ಮುಕ್ತರು
ಕರ್ಮದೊಳು ನಾವಿನ್ನು ಬದ್ಧರು
ವಾಮದೇವನೆ ಜೀಯ ಉದ್ಧಾನೇಶದಯವಾಗೋ ॥

ತುಮಕೂರಿಗೆ ಬರುವವರಿದ್ದೀರಾ? ಹಾಗಿದ್ದರೆ ವೈವಿಧ್ಯಮಯ ಊಟ,
ವಸತಿ, ತಿಂಡಿ ತಿನಿಸುಗಳ ನಮ್ಮ ಈ ಸ್ಥಳಗಳು ಸದಾ ನಿಮ್ಮನ್ನು ಸ್ವಾಗತಿಸುತ್ತಿವೆ.

**ಹೋಟೆಲ್**
**ಶ್ರೀ ನಂಜುಂಡೇಶ್ವರ**
ಊಟ, ವಸತಿ ಮತ್ತು
ಉಪಹಾರ ಮಂದಿರ,
ಬಿ.ಹೆಚ್. ರಸ್ತೆ, ತುಮಕೂರು.
ದೂರವಾಣಿ
**8597, 2373, 2577**




**ಶ್ರೀ ನಂಜುಂಡೇಶ್ವರ**
**ಬೇಕರಿ**
ತುಮಕೂರು ಜಿಲ್ಲೆಯ ಪ್ರಖ್ಯಾತ
ಬೇಕರಿ
ಚಿಕ್ಕಪೇಟೆ ತುಮಕೂರು.
ದೂರವಾಣಿ : **8077**

**ಶ್ರೀ ನಂಜುಂಡೇಶ್ವರ ರೆಸ್ಟೋರೆಂಟ್**
ತುಮಕೂರಿನಲ್ಲಿ ಉತ್ತರ ಭಾರತದ ಶೈಲಿಯ ಊಟ
ಉಪಹಾರಗಳ ಶ್ರೇಷ್ಠ ದರ್ಜೆಯ ರೆಸ್ಟೋರೆಂಟ್
ಬಿ.ಹೆಚ್. ರಸ್ತೆ, ತುಮಕೂರು.
ದೂರವಾಣಿ : **2677**

**ಸಿ.ವಿ. ಮಹದೇವಯ್ಯ**
ಮ್ಯಾನೇಜಿಂಗ್ ಪಾರ್ಟನರ್
2477

**ಶ್ರೀ ನಂಜುಂಡೇಶ್ವರ ಸ್ವೀಟ್ಸ್**
ಎಲ್ಲಾ ವಿಧವಾದ ಸಿಹಿ ಮತ್ತು ಖಾರ ತಿಂಡಿ ಹಾಗೂ
ಬೇಕರಿ ತಿನಿಸುಗಳ ನಗರದ ಏಕೈಕ ಸ್ಥಳ
ಅಶೋಕ ರಸ್ತೆ ತುಮಕೂರು.
ದೂರವಾಣಿ : **2077**

# ಮನುಷ್ಯತ್ವದಿಂದ ದೇವತ್ವದೆಡೆಗೆ

ಶ್ರೀಶೈಲ ಜತ್ತಿ, ವಿಜಯಾ ಬ್ಯಾಂಕ್ ಮುಖ್ಯ ಶಾಖೆ, ಧಾರವಾಡ - 580 001

ಮನುಷ್ಯನು ಬುದ್ಧಿಯಿರುವ ಪ್ರಾಣಿಯು. ಮನುಷ್ಯನು ಮೂಲತಃ ಪ್ರಾಣಿಯಾದರೂ ಆತನಲ್ಲಿರುವ ಬುದ್ಧಿಯ ಬಲದಿಂದ ಆತನು ಪ್ರಾಣಿಗಳಿಗಿಂತ ಭಿನ್ನನಾಗಿದ್ದಾನೆ, ಚಿಂಪಾಂಜಿಯು ಹೊರತಾಗಿ ಮನುಷ್ಯನೇ ಎರಡು ಕಾಲುಗಳುಳ್ಳ ಪ್ರಾಣಿಯಾಗಿದ್ದಾನೆ.

ಮನುಷ್ಯ ಮೂಲದಲ್ಲಿ ಏನಿದ್ದನೆನ್ನುವುದಕ್ಕಿಂತ ಈಗ ಹೇಗಿದ್ದಾನೆ ಎಂಬುದು ಬಹಳ ಮುಖ್ಯವಾಗಿದೆ ದೈಹಿಕವಾಗಿ ಆತನಲ್ಲಿ ಬಹಳ ಬದಲಾವಣೆಯಾದದ್ದು ಸತ್ಯ. ಅದರಂತೆಯೆ ಆತ ಬೌದ್ಧಿಕವಾಗಿ ಅಗಾಧವಾದ ಬದಲಾವಣೆ ಹೊಂದಿದ್ದಾನೆ.

ಜಗತ್ತಿನಲ್ಲಿ ಮೊದಲು ಮಾನವನು ಹುಟ್ಟಿರಲಿಲ್ಲ. ಕೋಟಿಗಟ್ಟಲೆ ವರುಷಗಳು ಉತ್ಕ್ರಾಂತಿಯನಂತರ ಮನುಷ್ಯ ಜನ್ಮತಳೆದನು. ಈ ಜಗತ್ತಿನಲ್ಲಿ ಆದಿಯಲ್ಲಿ ಏನೂ ಇರಲಿಲ್ಲ, ಏನೂ ಇರಲಿಲ್ಲವೆಂದರೆ ಎನಾದರೂ ಇರಲೇ ಬೇಕಲ್ಲವೆ? ಅದುವೇ ಶೂನ್ಯ. ಆ ಶೂನ್ಯವೇ ಇರುವಿಕೆ ಆ ಇಲ್ಲವೇ ಪರಮಾತ್ಮ ಆ ಇಲ್ಲದಲ್ಲಿಯೂ ಎಲ್ಲವೂ ಅಡಗಿದೆ. ಆದುದರಿಂದಲೇ ಶೂನ್ಯಕ್ಕೆ ಅಲ್ಲಮ ಅಲ್ಲಾ ಎಂಬ ಪದಗಳು ಬಂದವುಗಳಾಗಿವೆ ಈ ಇಲ್ಲ ಅಲ್ಲಗಳು ಇದ್ದು ತೋರುವ ನಮ್ಮ ತಲೆಗೆ ಹೋಗಬೇಕಾದರೆ, ತಲೆಯನ್ನು ಒರೆಗೆ ಹಚ್ಚಿ ನೋಡೋಣ. ತಲೆ ಎಂದರೆ ಪ್ರತಿಯೊಂದು ಪ್ರಾಣಿಗೆ ಮೊದಲಿಗಿರುವ ಅಂಗವಾದರೂ ಅದರೊಳಗಣ ಹೊರಣ ಮಾತ್ರ ವಿಭಿನ್ನ ಪ್ರಾಣಿಗಳಲ್ಲಿ ಬೇರೆ ಬೇರೆಯಾಗಿದೆ.

ಮನುಷ್ಯ ಹಾಗೂ ಮಾನವ ಎಂಬ ಶಬ್ದಗಳು ಸೂಕ್ಷ್ಮವಾಗಿ ಭಿನ್ನವಾಗಿವೆ ಆದರೂ ಅದನ್ನು ಎಷ್ಟೋಸಲ ಒಂದೇ ಅರ್ಥದಲ್ಲಿ ಉಪಯೋಗಿಸುತ್ತೇವೆ. ಉಷ್ಣ ರಕ್ತವುಳ್ಳ ಪ್ರಾಣಿಗಳ ಪೈಕಿ ಮನಷ್ಯ ಎಂಬ ಪ್ರಾಣಿಯನ್ನು ವಿಂಗಡಿಸಿ ಹೇಳುವ ಶಬ್ದ ಮನುಷ್ಯ ಎಂಬುದು. ಮನುಷ್ಯ ಪ್ರಾಣಿಗಳಿಗೆ ಹತ್ತಿರದವನಾಗಿದ್ದಾನೆ. ಆದರೆ ಮಾನವನು ಮನುಷ್ಯನಿಂದ ಬಹುದೂರ ಸಾಗಿದವನು. ಮಾನವನು ತನ್ನ ಪ್ರಾರಂಭದಲ್ಲಿ ಮನುಷ್ಯನಾಗಿದ್ದನು. ಮನುಷ್ಯ ಹೋಗಿ ಮಾನವನಾಗಲು ಆತನಿಗೆ ಯುಗಯುಗಾಂತರಗಳೇ ಬೇಕಾದವು. ಇಷ್ಟಾದರೂ ಎಲ್ಲಾ ಮನಷ್ಯ ಪ್ರಾಣಿಗಳೂ ಮಾನವರಾಗಲು ಇನ್ನೂ ಮನುಷ್ಯ ಶಬ್ದದೊಂದಿಗೆ ಪ್ರಾಣಿ ಎಂಬ ಶಬ್ದವನ್ನು ಇಟ್ಟುಕೊಂಡೇ ಇದ್ದಾರೆ.

" ಸರ್ವರಧಿಕಾರಿಗಳಪ್ಪರುಮಗನೇ ಮುಕ್ತಿಯ ಹೊಂದಲಿಕೆ ಕುರುಡನಿರಲಿ, ಕುಂಟನಿರಲಿ, ದಾಸವೇಶಿಯಿರಲಿ ಸರ್ವಧಿಕಾರಿಗಳಪ್ಪರು " ಎಂದು ನಿಜಗುಣರ ಮಾತಿನಲ್ಲಿ ವ್ಯಕ್ತಿ ಹೇಗೇ ಇದ್ದರೂ ಸೈ ಆತ ಮಾನವನಾಗಿದ್ದರೆ ಸಾಕು ಎಂಬ ಅರ್ಥವಿದೆ ಮನುಷ್ಯನಿಂದ ಮಾನವ ಮಾನವನಿಂದ ದೇವ ಈ ರೀತಿಯ ಏರುವಿಕೆ ಇರುವಂತೆಯೇ ಮನುಷ್ಯನಿಂದ ದಾನವ ಎಂಬ ಸೀದಾ ಇಳಿಕೆಯ ಕ್ರಮ ಒಂದಿದೆ. ಏರಿಕೆಯ ಕ್ರಮ ಯಾವಾಗಲು ಪರಿಶ್ರಮಉಳ್ಳದ್ದಾಗಿದೆ. ಇಳಿಕೆಯ ಕ್ರಮಕ್ಕೆ ಪರಿಶ್ರಮ ಬೇಕಾಗಿಲ್ಲ.

ಮೂಲತಃ ಮನುಷ್ಯ ಪ್ರಾಣಿಯಲ್ಲಿದ್ದ ಕಾಮ, ಕ್ರೋಧ, ಲೋಭ, ಮದ ಮೋಹ, ಮತ್ಸರಗಳನ್ನು ಇದ್ದಂತೆಯೇ ಉಳಿಸಿಕೊಂಡು ಬೆಳಸಿಕೊಂಡು ಹೋದರಾಯಿತು. ನಮಗೆ ಗೊತ್ತಿಲ್ಲದಂತೆಯೇ ದಾನವತೆಯ ಪಟ್ಟ ಬಂದೇ ಇರುತ್ತದೆ. ಅದಕ್ಕಾಗಿ ಪ್ರಯತ್ನ ಬೇಕಾಗಿಲ್ಲ

ಆದರೆ ಮನಷ್ಯನು ಪಡೆದ ಯುಗಯುಗಾಂತರಗಳ ಪಯಣದ ಸಂಸ್ಕಾರದ ಬಲದಿಂಧ ಮಾನವತ್ವವನ್ನು ಪಡೆದಿದ್ದಾನೆ. ಮಾನವತೆ ಎಲ್ಲರಲ್ಲಿ ಬಂದಿದೆ ಎಂದು ಹೇಳಲಿಕ್ಕಾಗದು. ಇಳಿಕೆಯ ಕ್ರಮದ ಅಪವಾದವಿರುವುದರಿಂದಾಗಿ ಅಂತಹ ಮಾನವತೆ ಇದ್ದಾಗಮಾತ್ರ ದೇವತ್ವವನ್ನು ಪಡೆಯುವ ಪ್ರಶ್ನೆ ಉದ್ಭವಿಸುವದು. ಕುಸ್ತಿಕಣಕ್ಕೆ ಇಳಿಯ ಬೇಕಾದರೇನೆ ಕನಿಷ್ಟ ಪೈಲವಾನನಾಗಿರಬೇಕು. ಕಣದಲ್ಲಿಳಿದಮಾತ್ರಕ್ಕೆ ಗೆಲ್ಲುವ ಗ್ಯಾರಂಟಿ ಇಲ್ಲ. ಅದರಂತೆಯೆ ಪ್ರತಿಯೊಬ್ಬ ಮಾನವನೂ ದೇವತ್ವ ಹೊಂದಿಯೇ ತೀರುವನೆಂಬ ಗ್ಯಾರಂಟಿಯೂ ಇಲ್ಲ. ಆದರೆ ದೇವತ್ವ ಹೊಂದಲು ಮೊದಲು ಮಾನವನಾಗಬೇಕು.. ದೇವತ್ವ ಪಡೆಯುವ ಗ್ಯಾರಂಟಿ ಇಲ್ಲವೆಂದಮೇಲೆ ಮನುಷ್ಯ ಹೋಗಿ ಮಾನವನಾಗುವ ಅವಶ್ಯಕತೆಯೇನು? ಎಂದು ಕೇಳಬಹುದು ಏಕೆಂದರೆ ಒಮ್ಮೆ ಅರ್ಹತೆ ಪಡೆದುಕೊಂಡು ಕುಳಿತರೆ ದೇವನಾಗಲು ಬಂದೇ ಬರುತ್ತದೆ. ಅರ್ಹತೆಯೇ ಬಾರದಿದ್ದರೆ ಕೇವಲ ಪ್ರೇಕ್ಷಕರ ಗ್ಯಾಲರಿಯಲ್ಲಿ ಜಾಗ ದೊರೆಯುಬಹುದು. ಅದೂ ಹಣಕೊಟ್ಟುಕೊಂಡರೆ ಕೊನೆಯ ಪಕ್ಷ ಪ್ರೇಕ್ಷಕನಾದರೂ ಆಡ್ಡಿಯಿಲ್ಲ. ಮುಂದೆ ಎಂದಾದರೊಮ್ಮೆ ಹುದ್ದರಿ ಯಾಗಬಹುದು.

ದೇವತ್ವ ಪಡೆಯುವ ಮೈದಾನ ಬಹಳ ವಿಶಾಲವಾಗಿದೆ. ಅಲ್ಲಿ ಎಷ್ಟು ತಾಲೀಮೂ ಮಾಡಿದರೂ ಕಡಿಮೆಯೇ. ತಾಲೀಮೂ ಮಾಡಲು ಕನಿಷ್ಠ ದೇಹದಾರಢ್ಯ ಬೇಕಾಗುತ್ತದೆ. ತಿಂದ ಆಹಾರ ಸರಿಯಾಗಿ ಪಚನವಾಗುವಂತೆಯೇ ಮಾನಸಿಕ ಕ್ರಿಯೆಯೂ ಇದೆ.

ಸ್ಥೂಲ ದೇಹ ಕಣ್ಣಿಗೆ ಕಾಣುವುದಾದರೆ-ಸೂಕ್ಷ್ಮ ಹಾಗೂ ಕಾರಣ ಶರೀರಗಳು ಕಣ್ಣಿಗೆ ಕಾಣದಿದ್ದರೂ ಸೂಕ್ಷ್ಮ ರೀತಿಯಿಂದ ಇವೆ. ಅವು ಮನಸ್ಸಿನೊಂದಿಗೆ

ಜೋಡಿಸಲ್ಪಟ್ಟವೆ. ಮನಸ್ಸು ಆರೋಗ್ಯವಾಗಿರಬೇಕು. ಮನಸ್ಸಿನ ಆರೋಗ್ಯಕ್ಕೆಟ್ಟರೆ
ಮನೋರೋಗ ಬರುವುದು ರೋಗ ಹೆಚ್ಚಾದರೆ ಹುಚ್ಚು ಹಿಡಿಯುವುದು
ಆರೋಗ್ಯವಂತ ದೇಹದಲ್ಲಿ ಆರೋಗ್ಯವಂತ ಮನಸ್ಸಿದೆ. ಆರೋಗ್ಯವಂತ ಮನಸ್ಸಿದ್ದರೆ
ದೇಹವು ಆರೋಗ್ಯವಾಗಿರುತ್ತದೆ. ಅಂದರೆ ಮನಸ್ಸು ಹಾಗು ದೇಹಗಳೆರಡೂ
ಏಕ ಕಾಲಕ್ಕೆ ಆರೋಗ್ಯದಿಂದಿರಬೇಕು. ಇರುತ್ತವೆ. ಎರಡಲ್ಲಿ ಒಂದು ಅನಾರೋಗ್ಯ
ವಾದರೆ ಇನ್ನೊಂದು ತಾನೇ ಅನಾರೋಗ್ಯ ಹೊಂದಿರುವುದು, ಅವರಿಗೂ ಆರಾಮ
ಇದ್ದಾಗ ಮಾನವನು ಅದರ ನೆನಪು ಮಾಡಬಹುದು. ಹಾಗಾದರೆ ಅವೆರಡೂ
ಆರಾಮವಾಗಿರಬೇಕಾದರೆ ಏನು ಮಾಡಬೇಕು. ಅವು ತಮಷ್ಟಕ್ಕೆ ಆರಾಮವಾಗ
ಲಾರವು, ಏಕೆಂದರೆ ಅವು ಇರತಕ್ಕ ಪರಿಸರವು ಮಲಿನವಿರುತ್ತಿದೆ. ಅದು ಅಲ್ಲದೆ
ಮನಸ್ಸು ಜನ್ಮ ಜನ್ಮಾಂತರದ ಸಂಸ್ಕಾರಗಳನ್ನು ಹೊತ್ತು ತಂದಿರುತ್ತದೆ. ಪುಣ್ಯ-ಪಾಪ
ಗಳ ಜಮಾ-ಖರ್ಚು ಹೊಂದಿವೆ. ಶರೀರವು ಹಾಲಿ ಜನ್ಮದ ಜಾಡ್ಯವನ್ನು ಮಾತ್ರ
ಹೊಂದಿರುತ್ತದೆ. ಅದೂ ಅಲ್ಲದೆ ಶರೀರದ ಜಿಡ್ಡಿಗೆ ಮನವೇ ಆಕರವಾಗಿದೆ. ಹೀಗಾಗಿ
ದೇಹವನ್ನು ಶುಚಿರ್ಭೂತಗೊಳಿಸಿದರಾಯಿತು. ಆದರೆ ಮನಸ್ಸಿನ ಕೊಳೆ ತೊಳೆಯು
ವದು ಬಹಳ ಕಠಿಣವಿದೆ. ತೊಳೆಯುವುದು ಎಂದರೆ ಮನಸ್ಸಿಗಂಟಿದ್ದ ಕಳೆ ಕೀಳ
ಬೇಕು. ಕೀಳುವುದೆಂದರೆ ಕೀಳುವುದಿಲ್ಲ. ಖಾಲಿ ಸೀಸೆಯಲ್ಲಿ ಕೂಡಾ ವಾಯುವಿರ
ವಂತೆ ಖಾಲಿಮನಸ್ಸು ಇರಲಾರದು. ಅದರಲ್ಲಿ ಏನಾದರೂ ತುಂಬಿದಾಗ ಮಾತ್ರವೊದಲಲ್ಲಿ
ಜಿಡ್ಡು ಬಿಡುವುದು ಆದರೆ ಮನಸ್ಸು ಎಂಬುದನ್ನು ತುಂಬುವೆವೊ ಅದಕ್ಕೆ ಹಿಡಿದುಕೊಳ್ಳುವುದು
ಸುಗುಣಗಳನ್ನು ತುಂಬಿದರೆ ಅದೇ ಸುಗುಣಗಳನ್ನು ತುಂಬಿದರೆ ಅದನ್ನೇ ಹಿಡಿದುಕೊಳ್ಳುವುದು.
ಮನಸ್ಸಿನಮೇಲೆಮತ್ತೆ ಅಧಿಕಾರಿಗಳಿದ್ದಾರೆ ಮನಸ್ಸು ಅಂಗಾಂಗಳೆಂಬ ಸೇನಾ ಪಡೆಯ
ಮುಖ್ಯಸ್ಥನಿದ್ದಂತೆ ಸೇನಾಪಡೆಯ ಮುಖ್ಯಸ್ಥನ ಮೇಲೆ ರಕ್ಷಣಾಮಂತ್ರಿ ಮುಖ್ಯ
ಮಂತ್ರಿಗಳಿರುವಂತೆ ಬುದ್ಧಿ ಹಾಗು ವಿವೇಕರಿಬ್ಬರಿದ್ದಾರೆ. ಅವರ ಅಧೀನದಲ್ಲಿ
ಚಿತ್ತು ಎಂಬ ಟೇಪ್‌ರಿಕಾರ್ಡ್ ಇದೆ. ಅವರು ಆ ಚಿತ್ತಿನಲ್ಲಿ ಮಾಡಿದ ಪೂರ್ವ
ನಿದರ್ಶನಗಳನ್ನು ನೋಡಿಕೊಂಡು ಮನಸ್ಸಿಗೆ ಆಜ್ಞೆ ಕೊಡುತ್ತಿರುತ್ತಾರೆ. ಅವೆರಡೂ
ಅಂಗಗಳು ಆತ್ಮನೆಂಬ ರಾಜನ ಆಧೀನರಾಗಿದ್ದಾರೆ.

ಆಧೀನತೆಯ ಅರ್ಥ ಬಹಳ ನಾಜೂಕಾಗಿದೆ. ಆತ್ಮನು ರಾಜನಾದರೆ ಬದ್ದಿ
ಹಾಗೂ ವಿವೇಕರು ಆಪ್ತ ಮಂತ್ರಿಗಳು ಮನಸ್ಸು ದಂಡಾಧಿಕಾರಿ, ಅವಯವಗಳು
ಸೇನಾಬಲ ಇವೆಲ್ಲವೂ ಒಬ್ಬರಿಗೊಬ್ಬರು ವಿದೇಯರಾಗಿದ್ದು ರಾಜನ ಆಜ್ಞಾನುವರ್ತಿ
ಗಳಾಗಿ ಕೆಲಸ ಮಾಡಬೇಕು. ಆದರೆ ಬಲವನ್ನು ಹೊಂದಿದ ಮನಸ್ಸು ಒಬ್ಬರಿ
ಗೊಬ್ಬರಿಗೆ ವಿಧೇಯತೆಯನ್ನು ಬಿಟ್ಟು ಒಳಸಂಚು ನಡೆಸಿ ರಾಜನನ್ನೇ ಬಂಧನ
ದಲ್ಲಿ ನೂಕಬಹುದಾಗಿದೆ. ಹೀಗಾದಾಗ ಆಜ್ಞೆ ನೀಡಬೇಕಾದ ಅರಸನು ದುಷ್ಟರ
ಕೈಗೊಂಬೆಯಾಗಿ ಬಂಧನದಲ್ಲಿದ್ದುಕೊಂಡು ಮನಸ್ಸು ಹೊರಡಿಸುವ ಖೋಟಾ

ಆಜ್ಞೆಗಳಿಗೆ ಸಹಿಮಾಡುವ ಪ್ರಸಂಗ ಬರುತ್ತದೆ. ಇದೇ ರೀತಿ ಮುಂದುವರಿದರೆ ಮನಸ್ಸಿನ ದುರಾಡಳಿತದಿಂದ ನಾಶವಾಗಬೇಕಾಗುತ್ತದೆ.

ಆದುದರಿಂದ ಇಲ್ಲಿ ರಾಜನಾದ ಆತ್ಮನು ತನ್ನ ಅಧಿಕಾರದ ವ್ಯಾಪ್ತಿಯನ್ನು ಅರಿತುಕೊಂಡು ಬುದ್ಧಿ ಹಾಗೂ ವಿವೇಕರಿಗೆ ಪರಮಾಧಿಕಾರ ನೀಡಿ ಮನಸ್ಸನ್ನು ಯಾವಾಗಲು ಹದ್ದುಬಸ್ತಿನಲ್ಲಿಡಬೇಕು. ಇಲ್ಲವಾದರೆ ಮನಸ್ಸು ಆತ್ಮನಿಗೆ ದ್ರೋಹ ವೆಸಗಿ ಆತ್ಮನನ್ನು ದುಸ್ಥಿತಿ ಮಾಡುವುದಲ್ಲದೆ ತಾನೂ ನಾಶಹೊಂದುವುದು.

ಇಲ್ಲಿ ಬುದ್ಧಿ ಹಾಗೂ ವಿವೇಕವನ್ನು ಮಂತ್ರಗಳಿಗೆ ಮನಸ್ಸನ್ನು ದಂಡನಾಯಕನಿಗೆ ಆತ್ಮನನ್ನು ಅರಸನಿಗೆ ಹೋಲಿಸುವುದರಲ್ಲಿ ವಿಶೇಷತೆಯಿದೆ. ಬುದ್ಧಿ ಹಾಗು ವಿವೇಕಗಳು ಆತ್ಮನ ಹಾಗು ಇಂದ್ರಿಯಗಳ ನಡುವಿನ ಜೋಡಣೆಯ ಸಂಪಳಿಯಿದ್ದಂತೆ ಆತ್ಮ ಹಾಗೂ ಇಂದ್ರಿಯಗಳಿಗೆ ನೇರ ಸಂಬಂಧವಿಲ್ಲ ಅದಕ್ಕೆ ನಡುವೆ ಮನಸ್ಸಿಗೆ ರಾಜನ ಸತ್ತೆಯನ್ನು ದಂಡನಾಯಕನ ಸೇನಾಬಲದ ಬಲದಿಂದ ಜಾರಿಗೊಳಿಸಬೇಕಾಗುತ್ತದೆ. ಬುದ್ಧಿ ಹಾಗೂ ವಿವೇಕಗಳಿಗೆ ಸೇನೆಯ ಅಧಿಕಾರವಿಲ್ಲ. ಅವು ಏನಿದ್ದರೂ ದಂಡಾಧಿಪತಿಯ ಅಧಿಕಾರ ಬಲದಿಂದ ರಾಜನ ಸತ್ತೆಯನ್ನು ಜಾರಿಗೊಳಿಸಬೇಕು ಹೀಗಾಗಿ ಇಂದ್ರಿಯಗಳೆಂಬ ಸೇನಾಬಲಕ್ಕೆ ಮನಸ್ಸು ಪ್ರಭುವಾಗಿರುತ್ತದೆ. ಆದುದರಿಂದಲೇ ನಾವು ನಿತ್ಯ ಕಾರ್ಯದಲ್ಲಿ ಬುದ್ಧಿ ಹಾಗೂ ವಿವೇಕರ ಸೂಚನೆಗಳನ್ನು ಮೀರಿ ಮನಸ್ಸಿನ ಅಧಿಕಾರ ಚಲಾಯಿಸಿ ಎಷ್ಟೋ ಸಲ ಯುದ್ಧ ಮಾಡಿ ಎಷ್ಟೋ ಇಂದ್ರಿಯಗಳನ್ನು ಕಳೆದುಕೊಳ್ಳುತ್ತೇವೆ.

ಮೂಲತಃ ರಾಜಸತ್ತೆಯಿಂದಲೇ ಎಲ್ಲರಿಗೂ ಸತ್ತಾ ದೊರಕಿರುವುದು. ಸತ್ತೆಯು ಒಮ್ಮೆ ದೊರಕಿದ ಮೇಲೆ ಕೂಡಲೆ ಸತ್ತೆಯನ್ನು ಕಿತ್ತುಕೊಳ್ಳಲು ಬರುವದಿಲ್ಲ. ಹೋರಾಡಿ ಮನಸ್ಸು ತನಗೆ ಸಿಕ್ಕ ಅಧಿಕಾರದ ದುರುಪಯೋಗ ಮಾಡಿಕೊಳ್ಳಲು ಸಂಭದವೇ ಜಾಸ್ತಿ ಇಂದ್ರಿಯಾಳೆಂಬ ಸೇನೆಗೆ ಆತ್ಮನೇ ರಾಜ. ಮನಸ್ಸು ಸೇನಾಪತಿಯಾಗಿರುವದರಿಂದ ಇಂದ್ರಿಯಗಳಿಗೆ ಆತ್ಮನ ಭೆಟ್ಟಿಯಿರುವದಿಲ್ಲ. ಅವು ಏನಿದ್ದರೂ ತಮ್ಮ ಅಧಿಕರತ ಅಧಿಕಾರಿಯಾದ ಮನಸ್ಸಿಗೆ ಹೊರ ಹೋಗಬೇಕು. ಸೇನೆಯು ಸೇನಾಧಿಪತಿಯ ಹಿಡಿತದಲ್ಲಿರುವದರಿಂದಾಗಿ ಆತ್ಮನೆಂಬರಸನು ಮನಸ್ಸೆಂಬ ಸೇನಾಧಿಪತಿಯ ಮೇಲೆ ಪ್ರಭಾವಿ ಹಿಡಿತವನ್ನಿಟ್ಟುಕೊಳ್ಳುವದು ಅತ್ಯಾವಶ್ಯಕವಿದೆ. ಅಂಥ ಹಿಡಿತವನ್ನಿಟ್ಟುಕೊಳ್ಳಲು ಬುದ್ಧಿ ಹಾಗೂ ವಿವೇಕರೆಂಬ ಮಂತ್ರಿಗಳಿಗೆ ವ್ಯಾಪರ ಅಧಿಕಾರ ನೀಡಿ ಮನಸ್ಸನ್ನು ನಿಯಂತ್ರಿಸಬೇಕು, ಇಷ್ಟಕ್ಕೆ ಆತ್ಮನ ಕೆಲಸ ಮುಗಿಯಲ್ಲಿಲ್ಲ

ಯಾವ ರೀತಿ ರಾಜನಾದವನು ಮಹಾರಾಜನಿಗೆ ತಕ್ಕ ರಾಜ್ಯ ಯೋಗಕ್ಷೇಮವನ್ನು ತಿಳಿಸುತ್ತ ಮಹಾರಾಜನಿಗೆ ವಿಧೇಯನಾಗಿರುವನೋ ಅದೇ ತರವಾಗಿ ಆತ್ಮನೆಂಬ

ರಾಜನು ಪರಮಾತ್ಮನೆಂಬ ಮಹಾರಾಜನಿಗೆ ವಿಧೇಯನಾಗಿದ್ದುಕೊಂಡು ಆತನ ಸಾರ್ವಭೌಮ ಅಧಿಕಾರವನ್ನು ಮಾನ್ಯ ಮಾಡುತ್ತ ಇರಬೇಕು. ಅದನ್ನು ಬಿಟ್ಟು ಹೇಗೊ ರಾಜಾಧಿಕಾರವಿದೆಯೆಂದು ಪರಮಾತ್ಮನನ್ನೇ ವಿರೋಧಿಸಿ ಬದುಕಲೆಣಿಸ ಬಾರದು ಅದು .ಸಾಧ್ಯವೂ ಇಲ್ಲ.

ಹೀಗೆ ಮನಸ್ಸು ತನ್ನ ಕೆಲಸವನ್ನು ಸರಿಯಾಗಿ, ಯಥಾವತ್ತಾಗಿ ನಿರ್ವಹಿಸಿ ತೊಡಗಿತೆಂದರೆ ಸಾಕು ಮನುಷ್ಯ ಮಾನವನಾಗಿರುತ್ತಾನೆ. ಮನಸ್ಸನ್ನು ಸತ್ಕಾರ್ಯ ಗಳಲ್ಲಿ ತೊಡಗಿಸಬೇಕು. ಸುವಾಸನೆ ಬರಬೇಕಾದರೆ ಸುಗಂಧವನ್ನ ಉಪಯೋಗಿಸು ವಂತೆ ಮನಸ್ಸಿಗೆ ನಿರ್ಮಲವಾದ ವಿಚಾರಗಳನ್ನು ಹಚ್ಚಬೇಕು, ಆದುದರಿಂದಲೇ ಶ್ರೀ ನಿಜಗುಣ ಶಿವಯೋಗಿಗಳು ತಮ್ಮ ಕೈವಲ್ಯ ಕಲ್ಪವಲ್ಲರಿಯ ಮೊದಲ ಪದ್ಯದಲ್ಲಿಯೇ ಶ್ರೀಗುರುವಚನೋಪದೇಶವನಾಲಿಸಿದಾಗಳಹುದು ನರರಿಗೆ ಮುಕ್ತಿ ಎಂದು ಹೇಳಿವ್ರು. ಅಂತಹ ಗುರುಗಳು ಯಾವದನ್ನು ಮಾಡಬಾರದು ಯಾದದನ್ನು ಮಾಡ ಬೇಕು ಎಂಬುದನ್ನು ತಿಳಿಸಿ ಹೇಳುವರು.

ಮಾ ॥ ಶ್ರೀ ಗುರವಚನೋಪದೇಶವನಾಲಿಸಿ ।
ದಾಗಳಹುದು ನರರಿಗೆ ಮುಕ್ತಿ ॥ ಪಲ್ಲವಿ ॥
ದುರಿತಕರ್ಮವನೊಲ್ಲದಿರು ಪುಣ್ಯವನೆ ಮಾಡು ।
ಹರನಡಿವಿಡಿ ಶಾಂತರೊಡನಾಡು ।
ಕರುಣವಿರಲಿ ಜೀವರೊಳು ನೀತಿವಿದನಾಗು ।
ಪೊರೆ ಪೊರ್ದಿದರನೆಂದುಬೆಸಸುವ ॥ ೧ ॥
ನಿಂದಿಸಿನುಡಿಯದಿರಾನು ಮನಸಿಗೆ ।
ಬಂದಂತೆ ನಡೆಯದಿರಿಹದಲ್ಲಿ ।
ಕುಂದುವಡೆಯದಿರು ಕಾಮಾದಿಗಳನುಜಯಿ ।
ಸೆಂದು ಕೈವಿಡಿದನುಗ್ರಹಿಸುವ ॥ ೨ ॥
ಭವಮಾಲೆಗಲಸು ಪುಸಿಯದಿರೆಡರು ಬಂದು ।
ಕವಿಯಲಂಜದಿರು ಸಂಪದ ದೊಳುತವೆ ಮುದವಳಿದಿರು ತತ್ವ ಸಂತತಿಯನು ।
ವಿವರಿಸಿ ನೋಡೆಂದು ತಿಳಿಪುವ ॥ ೩ ॥
ಬಳಸದಿರದ್ವೈತವನು ಬಾಹ್ಯದಲಿ ನಿಂ ।
ನೊಳಗೇಕೋಭಾವನೆಯೊಡಗೊಡು ।
ತಿಳಿದು ಸಮಯ ನಿಷ್ಠಗಲಿ ವೇದವಿಧಿಭಕ್ತಿ ।
ಗಳನಗಲದಿರೆಂದುಸುರುವ ॥ ೪ ॥
ಆರುನಾನೆಂದು ವಿಚಾರಿಸು ವಿಷಮುಸಂ ।
ಸಾರವಿದನುಕನಸೆಂದರಿ ।
ಮಾರ ಮರ್ದನ ಶಂಭುಲಿಂಗವ ನೊಲಿಸಿಗಂಭೀರಸುಖದೊಳಿರೆಂದರುಪುವ ॥

ಈ ರೀತಿ ಮಾರ್ಗದರ್ಶನವನ್ನು ನೀಡುವ ಗುರುವಿಗೆ ಶರಣಾಗತರಾಗಬೇಕು.

ಮನಸ್ಸನ್ನು ದೇವರ ಕಡೆಗೆ ಹೊರಳಿಸಬೇಕು ಈ ಕಾರ್ಯಕ್ಕೆ ಪ್ರಯತ್ನ ಅತ್ಯ ವಶ್ಯವಾಗಿದೆ. ಮನಸ್ಸನ್ನು ದೇವರ ಧ್ಯಾನದ ಕಡೆಗೆ ಹೊರಳಿಸಿದರ ಮನಸ್ಸಿನಲ್ಲಿ

ಬಂಡಾಯದ ಅಲೆಗಳೇಳುವದಿಲ್ಲ ಮನಸ್ಸನ್ನು ಒಂದು ಹಂತಕ್ಕೆ ತಂದುನಿಲ್ಲಿಸಿದವನಿಗೆ ಮುಮುಕ್ಷು ಎನ್ನುವರು. "ಮುಮುಕ್ಷು" ಎಂದರೆ ಮೋಕ್ಷವನ್ನು ಬಯಸುವಾತ.

ಮಾನವತ್ವದಿಂದ ದೇವತ್ವಕ್ಕೆ ಹೋಗುವದಾರಿ ದುರ್ಗಮವಾಗಿದೆ. ದೇವತ್ವದ ಸ್ಥರಕ್ಕೇರ ಬೇಕಾದರೆ ಮಾನವತ್ವದ ಸ್ಥರವನ್ನು ದಾಟಿ ಹೋಗಬೇಕು. ಭೂಮಿಯ ಕಕ್ಷೆಯಿಂದ ಬಾಹ್ಯಾಕಾಶಕ್ಕೆ ನೆಗೆಯಬೇಕಾದರೆ ನೌಕೆಗೆ ಯಾವರೀತಿ ಬಲವಾದ ಸ್ಫೋಟದ ಆವಶ್ಯವಿದೆಯೋ ಅದೇರೀತಿ, ಮಾನವತ್ವದಿಂದ ದೇವತ್ವಕ್ಕೆ ನೆಗೆಯಲು "ಗುರುಕಾರುಣ್ಯ" ವೆಂಬ ಆಸ್ಫೋಟನೆಯು ಅವಶ್ಯಕತೆಯಿದೆ. ಅಂತರಿಕ್ಷನೌಕೆಗೆ ಭೂಮಿಯ ಗುರುತ್ವಾಕರ್ಷಣೆಯ ಹಿಂದೆಎಳೆತವಿರುವಂತೆಯೇ ಮಾನವನಿಗೆ (ಮನುಷ್ಯನಲ್ಲಿ) ಸ್ಥೂಲ, ಸೂಕ್ಷ್ಮ, ಕಾರಣ, ಶರೀರಗಳು ಗುರುತ್ವಾಕರ್ಷಣೆ ಜಗ್ಗುತ್ತಿರುತ್ತದೆ. ಆದುದರಿಂದ ಅದನ್ನು ತಪ್ಪಿಸಲು ಗುರುಕಾರುಣ್ಯ" ವೆಂಬ ಸ್ಫೋಟ ಅತೀ ಅವಶ್ಯವಿದೆ. ಗುರುಕಾರುಣ್ಯ ವಿನಹ ದೇವತ್ವದ ಕಕ್ಷೆಗೆ ನೆಗೆಯುವದು ಸಾಧ್ಯವಾಗುವದಿಲ್ಲ. ಸ್ಥೂಲ, ಸೂಕ್ಷ್ಮ, ಕಾರಣ ಶರೀರಗಳ ಪರದೆಯನ್ನು ಹರಿದು ಭೂಮಿ, ಅಪ್ಪು, ತೇಜ, ವಾಯು, ಅಗ್ನಿ, ಆಕಾಶ, ಸೂರ್ಯ ತತ್ವಗಳ ಹಂಗನ್ನು ಅಷ್ಟಮಹಾಸಿದ್ಧಿಗಳ ಬಲದಿಂದ ಹರಿದು ಸೂರ್ಯ ಮಾರ್ಗದಿಂದಲೇ ದೇವತ್ವದ ಕಕ್ಷೆಗೆ ಅಂದರೆ ಪರಮಾತ್ಮನೆಡೆಗೆ ಗುರುವು ಒಮ್ಮೆ ಬಲವಾಗಿ ನೂಕಿದರಾಯಿತು ಮುಂದೆ ತನ್ನಷ್ಟಕ್ಕೆ ತಾನೇ ದಡ ಸೇರಬಹುದು,

ಸ್ವ ಪ್ರಯತ್ನದಿಂದ ಪರಮಾತ್ಮನ ಸಾಮಿಪ್ಯ ಪಡೆಯಬಹುದು. ಆಗಲೂ ನಿತ್ಯಾನಿತ್ಯ ವಿವೇಕದಿಂದ ಪರಮಾತ್ಮನಲ್ಲಿ ನಿತ್ಯ ಲೀನವಾಗುವ ಕಲೆಯನ್ನು ಕರಗತ ಮಾಡಿಕೊಂಡು ಯಾವಾಗ ಬೇಕಾದಾಗ ಖಾಯಮ್ ಕರಿಸಿ ಲೀನವಾಗಲು ಬರುವದು.

ವಿಚಿತ್ರವೆಂದರೆ ಎಲ್ಲವನ್ನೂ ದೇಹವಿರುವಾಗಲೇ ಮಾಡಬೇಕು. ಏಕೆಂದರೆ ದೇಹ ಬಿದ್ದಮೇಲೆ ಜೀವಾತ್ಮನು ತನ್ನಿಂದ ತಾನೇ ಪರಮಾತ್ಮನನ್ನು ಸೇರಲಾರದು. ಅದಕ್ಕೆ ಕಾರಣ ಸ್ಪಷ್ಟವಾಗಿದೆ ಕರ್ಮಾದಿ ಪಾಪ ಪುಣ್ಯಗಳೆಂಬನೆಂಬ ಆಕಾಶ ನೌಕೆಯನ್ನು ಮತ್ತೆ ಭೂಮಿಗೇ ತಂದು ಕುಪ್ಪಳಿಸುತ್ತದೆ. ದೇಹವು ಪಂಚಮಹಾ ಭೂತಗಳಿಂದ ತಯಾರಾಗಿರುವುದರಿಂದ ಜಡವಾಗಿದೆ. ಅದನ್ನು ಅವುಗಳಿಗೆ ಕೊಡಲೇ ಬೇಕಾಗುವುದು. ಸಶರೀರ ಮುಕ್ತಿ ಯಾರಿಗೂ ಸಾಧ್ಯವಿಲ್ಲ ಅದೂ ಅಲ್ಲದೆ ದೇಹಕ್ಕೆ ಅವಸಾನ ನಿಶ್ಚಿತವಿದೆ. ಅದೇಆತ್ಮವು ಅವಿನಾಶಿಯಾಗಿದ್ದು ದೇಹಗಳಲ್ಲಿ ವಾಸಿಸಿ ಪಾಪ ಪುಣ್ಯಗಳ ಹಂಗು ಹರಿದು ಹಗುರವಾದರೆ ಪರಮಾತ್ಮನೊಂದಿಗೆ ಲೀನವಾಗುವದು.

ಅದುದರಿಂದ ದೇಹವಿರುವಾಗ, ಬುದ್ಧಿ, ವಿವೇಕರ ಸೇವೆ ಲಭ್ಯವಿರುವಾಗ, ಇದ್ದ ದೇಹ ಸದೃಢವಿದ್ದಾಗ ಪರಮಾತ್ಮನೊಂದಿಗೆ ಲೀನ ಹೊಂದುವ ತಾಲೀಮು ಮಾಡುತ್ತಲಿರಬೇಕು. ಪ್ರತಿನಿತ್ಯವೂ ತಾಲೀಮು ಮಾಡುತ್ತಿರಬೇಕು. ಅಂದರೆ ಮಾತ್ರ ಯಾವಾಗಬೇಕಾದರೂ ಕೊನೆಯ ಘಳಿಗೆಯಲ್ಲಿ ಥಕ್ಕನೆ ಪರಮಾತ್ಮನೊಂದಿಗೆ ಲೀನ ಹೊಂದಲು ಬರುತ್ತದೆ. ಇದರಲ್ಲಿ ಕೂದಲೆಳೆ ಕೊಂಕಿದರೆ ಮುಗಿಯಿತು. ಮತ್ತೆ ಅ, ಆ, ಇ, ಈ ಕಲಿಯಬೇಕಾಗುತ್ತದೆ.

# ನಾಳಿನ ವಿಮಾನ–ಆಸ್ಪ್ರೇ

ಬಿ. ಸುಬ್ರಾಯ ಅಡಿಗ, ನಿವೃತ್ತ ಶಿಕ್ಷಕರು, ಸಂಡೂರು, ಬಳ್ಳಾರಿ ಜಿಲ್ಲೆ.

ಮುಂದಿನ ವರ್ಷಗಳಲ್ಲಿ ತಾಂತ್ರಿಕ ದೃಷ್ಟಿಯಿಂದ ವಿಕಸಿತವಾದ ದೇಶಗಳಲ್ಲಿ ನಾಗರಿಕ ಹಾಗೂ ಸಾಮಾಜಿಕಮಹತ್ವದವಿಮಾನಗಳು ಹೆಲಿಕಾಪ್ಟರ್‌ದಂತೆ ಕಡಿಮೆ ಜಾಗದಲ್ಲಿ ಇಳಿಯಲೂ, ಆರಂಭದಲ್ಲಿ ಸುತ್ತುವ ಜಂಜಡವಿಲ್ಲದೆ ನೇರಾಗಿ ಆಕಾಶಕ್ಕೆ ನೆಗೆಯಲೂ ಅನುಕೂಲವಾಗುವಂತೆ ನಿರ್ಮಾಣವಾಗಲಿವೆ. ಅಮೇರಿಕೆ ಯಲ್ಲಿ ನಿರ್ಮಿತವಾದ ಈ ಹೊಸಯಾನಕ್ಕೆ 'ಆಸ್ಪ್ರೇ' ಎಂದು ಹೆಸರು. ಹಾರುವ ಮೊದಲು ಇವು ಹೆಲಿಕಾಪ್ಟರಿನಂತೆ ಮೇಲೇರುವುವು. ಆ ಬಳಿಕ ಇವುಗಳ ರೆಕ್ಕೆಗಳ ಮೇಲಿರುವ ರೋಟರ್ ತಾವಾಗಿಯೇ ೯೦ ಡಿಗ್ರಿ ಕೋನದಲ್ಲಿ ಬಾಗುವುವು. ಮರು ಕ್ಷಣವೇ ಈ ವಿಮಾನಗಳು ಆಕಾಶದಲ್ಲಿ ಸುತ್ತತೊಡಗುವುವು.

ಹೆಲಿಕಾಪ್ಟರ್ ಹಾಗೂ ವಿಮಾನ— ಈ ಎರಡರ ಗುಣಗಳುಳ್ಳ ಯಾನ ಗಳನ್ನು ನಿರ್ಮಿಸಬೇಕೆಂದು ಮೊತ್ತಮೊದಲು ೧೮೪೦ ರ ಸುಮಾರಿಗೆ ಸರ್‌ಜಾರ್ಜ್ ಕೇಲೇ ಯೋಚಿಸಿದ್ದರು. ಅಂದಿನಿಂದಲೇ ಈ ಕನಸನ್ನು ನನಸಾಗಿಸಲು ತಂತ್ರಜ್ಞರೂ ಇಂಜಿನೀಯರರೂ ನಿರಂತರ ಪ್ರಯತ್ನಿಸುತ್ತಿದ್ದರು. ಆದರೆ ಅವರಿಗೆ ಇತ್ತೀಚೆಗಷ್ಟೆ "ಆಸ್ಪ್ರೇ" ಯ ರೂಪದಲ್ಲಿ ಸಫಲತೆ ಸಿಕ್ಕಿತು. ಅಮೇರಿಕೆಯ "ಬೋಯಿಂಗ್ ಬರ್ಟಾಲ್" ಹಾಗೂ "ಬೆಲ್ ಟೆಕ್ಸಾಟ್ರಾನ್" ಎಂಬೆರಡು ಕಂಪೆನಿಗಳು ಆಸ್ಪ್ರೇ ನಿರ್ಮಾಣದಲ್ಲಿ ತೊಡಗಿವೆ. ೧೯೯೧ ರವೇಳೆ ಅಮೇರಿಕೆಯ ಸೇನೆ ಈ ವಿಮಾನ ವನ್ನು ಬಳಸಲಾರಂಭಿಸುವುದು.

ಕಳೆದ ೩೦ ವರ್ಷಗಳ ನಿರಂತರ ಪರಿಶ್ರಮದ ಫಲವೇ ಆಸ್ಪ್ರೇ. ಇದರ ನಿರ್ಮಾಣಕ್ಕೆ ಬಳಸಲಾದ ಮಿಶ್ರವಸ್ತುಗಳಲ್ಲಿ ೨೦% ಫೈಬರ್‌ಗ್ಲಾಸ್, ೨೦% ರಷ್ಟು ಲೋಹ ಹಾಗೂ ೬೦% ರಷ್ಟು ಇಪಾಕ್ಸೀ ಗ್ರೆಫಾಯ್ಡ್ ಇದೆ. ಆಸ್ಪ್ರೇ ನಿರ್ಮಾಣದಲ್ಲಿ ಅತ್ಯಾಧುನಿಕ ಕಂಪ್ಯೂಟರ್ ಪ್ರಣಾಳಿಗಳನ್ನು ಬಳಸಿಕೊಳ್ಳಲಾಗಿದೆ. ವಿಮಾನದೊ ಳಗೆ ಕುಳಿತ ಚಾಲಕನಿಗೆ ಅಗತ್ಯದ ಸೂಚನೆಗಳನ್ನು ನೀಡಲು ಅಂಕಗಳ ಸಂಕೇ ತಗಳನ್ನು ಉಪಯೋಗಿಸಲಾಗಿದೆ. ಈ ವಿಮಾನಕ್ಕೆ ಎರಡು ಇಂಜಿನ್‌ಗಳಿವೆ. ಕಾರ ಣಾಂತರದಿಂದ ಒಂದು ಇಂಜಿನ್ ಕೆಟ್ಟುಹೋಯಿತೆಂದರೆ ಎರಡನೇ ಇಂಜಿನ್ ತಕ್ಷಣ ಕೆಲಸ ಮಾಡತೊಡಗುತ್ತದೆ.

ಅಮೇರಿಕೆಯ ಭೂಸೇನೆ ತನ್ನ ಎಫ್–೧೬ ವಿಮಾನಗಳ ಇಂಜಿನ್‌ಗಳನ್ನು ಅವುಗಳ ನಿರ್ದಿಷ್ಟ ಸ್ಥಾನಗಳಿಗೆ ತಲುಪಿಸಲು ಈ ವಿಮಾನಗಳನ್ನು ಬಳಸಿಕೊಳ್ಳಲು

ಬಯಸುತ್ತದೆ. ಅಗತ್ಯವಿದ್ದರೆ ಈ ವಿಮಾನ ನೀರಲ್ಲೂ ಇಳಿಯಬಹುದು. ಎಂತಲೇ ಅಮೇರಿಕೆಯ ನೌಕಾಪಡೆ ಜಲಾಂತರ್ಗಾಮಿಗಳನ್ನು ಭೇದಿಸಲೂ ದಾರಿತಪ್ಪಿದ ಸೈನಿಕರನ್ನು ಹುಡುಕಲೂ ಈ ವಿಮಾನವನ್ನು ಬಳಸಬಯಸುತ್ತದೆ. ಆಸ್ಪ್ರೇಯನ್ನು ನಾಗರಿಕ ಹಾರಾಟಕ್ಕೆ ಯೋಗ್ಯವಾಗುವಂತೆ ಮಾಡಬೇಕಾದರೆ ಇನ್ನೂ ಕೆಲವು ಬದಲಾವಣೆಗಳು ಅಗತ್ಯ.

ಕಾಲ ಕಳೆದಂತೆ, ಮಹಾನಗರಗಳ ನಡುವೆ ಪ್ರವಾಸ ಮಾಡಲು ಇಂಥ ವಿಮಾನಗಳನ್ನು ಬಳಸಿ ವಿಮಾನ ನಿಲ್ದಾದಲ್ಲುಂಟಾಗುವ ಜನ ಸಂದಣಿಯನ್ನು ತಗ್ಗಿಸಬಹುದು. ಆಗ ಅಂತರರಾಷ್ಟ್ರೀಯ ಹಾರಾಟಗಳಿಗೆ ಹೆಚ್ಚು ಹೆಚ್ಚು ಸೌಕರ್ಯ ಒದಗಿಸಬಹುದು. ಈ ಯಾನದಿಂದ ಹೆಲಿಕಾಪ್ಟರ್‌ಗಿಂತ ಕಡಿಮೆ ಶಬ್ದ ಹೊರಡುವುದು. ಇದಕ್ಕೆ ಲಂಡನ್ನಿನ ನವನಿರ್ಮಿತ ಡಾಕ್‌ಲ್ಯಾಂಡ್ ವಿಮಾನ ನಿಲ್ದಾಣದಲ್ಲಿ ಇಳಿಯಲೂ, ಅಲ್ಲಿಂದ ಹಾರಾಟ ನಡೆಸಲೂ ಅನುಕೂಲವಾಗುವುದು. "ಡೀ ಹೆವಿಲ್ಯಾಂಡ್ ಡೇಸ್ ೭ " ಎಂಬ ವಿಮಾನಕ್ಕೆ ಮಾತ್ರ ಇಲ್ಲಿ ಇಳಿಯಲು ಅನುಮತಿಯಿದೆ. ಅಮೇರಿಕೆಯ 'ನಾಸಾ' ಸಂಸ್ಥೆ ನಡೆಸಿದ ಸರ್ವೇ ಪ್ರಕಾರ ಈ ವಿಮಾನಕ್ಕೆ ಉಜ್ವಲ ಭವಿಷ್ಯವಿದೆ. ಎಲ್ಲ ರೀತಿಯಿಂದಲೂ ಇದು ನಮಗೆ ಅನುಕೂಲವೆನಿಸಬಹುದು.

(ಹಿಂದಿಯಿಂದ)

---

## " ಕಮ್ಮಾರ ತಮ್ಮಣ್ಣ "

ಎಂ. ಆರ್. ಬೈಲಪ್ಪ, ಶ್ರೀ ಕ್ಷೇತ್ರದ ಹಳೆಯ ವಿದ್ಯಾರ್ಥಿ

ಓ! ಓ! ಪಟಪಟನೆ ಸದ್ದು ಮಾಡುತಿರುವ ಕಮ್ಮಾರ ತಮ್ಮಣ್ಣ
ಆವ ನಮ್ಮ ಹಳ್ಳಿಯಲಿ ಕೆಲವರಿಗೆ ಅಣ್ಣ
ಕಾಣುತಿದೆ ಅವನ ಬೆನ್ನು ಹರಿದ ಅಂಗಿಯಿಂದ
ಹೊಡೆಯುತ್ತಿರುವ ಕಾದ ಕಬ್ಬಿಣದಿಂತದೇಕಮನದಿಂದ
ಇಂದೇಕೆ ಕೆಲಸಮಾಡುವನು ದೀವಳಿಗೆ ಹಬ್ಬ
ಅವನಾಚರಿಸುವುದೊಂದೇ ಯುಗಾದಿಯ ಹಬ್ಬ
ಗೀತೆಯನು ಓದಿದ ಅದೃಷ್ಟ ತಾನಲ್ಲ
ಅದರ ತತ್ವವಂ ಪಾಲಿಸದ ಮೂರ್ಖ ಅವನಲ್ಲ
ಕರ್ಮಯೋಗದ ರಹಸ್ಯ ಓದಿಲ್ಲ ಅವನು
ಸಹೃದಯರಿಗೆ ಚಿಂತನ ಶೀಲ ತಾನು.

COMFORTABLE
LUXURIOUS &
PEACEFUL

**STAY**


**AT**

# KENCHAMBA LODGE




SUBEDAR CHATRAM ROAD CROSS
NEAR KAPALI THEATRE
GANDHINAGAR
BANGALORE-9

Ph. 27082 GRAM : KENCHMLODG



ಸಿದ್ಧಗಂಗಾ ಕಮ್ಮಟದಲ್ಲಿ 1939 ರಿಂದ 1944ರವರೆಗೆ ವೇದ-ಸಂಸ್ಕೃತ ಮತ್ತು ಪ್ರೌಢ ಶಿಕ್ಷಣ ಪಡೆದ ಶ್ರೀ ಆರ್.ಎಂ.ಬಿ. ಆರಾಧ್ಯರಿಗೆ ತಾ|| 23-3-1991 ದೆಹಲಿಯಲ್ಲಿ ರಾಷ್ಟ್ರಪತಿ ಶ್ರೀ ಆರ್. ವೆಂಕಟರಾಮನ್ ಅವರು ಪದ್ಮಶ್ರೀ ಪ್ರಶಸ್ತಿ ಪದಕ ಮತ್ತು ಸನ್ನದ್ದನ್ನು ನೀಡಿ ಗೌರವಿಸುತ್ತಿರುವುದು.

# ಸಿದ್ಧಗಂಗಾ ಕಮ್ಮಟದಲ್ಲಿ ಅರಳಿದ ಪದ್ಮಶ್ರೀ ಆರ್. ಎಂ. ಬಿ. ಆರಾಧ್ಯ.

ಪ್ರಶಸ್ತಿ ಸನ್ಮಾನಗಳು ಪ್ರಾಪ್ತವಾದಾಗ ಸಮಾಜ, ಲೋಕ ವ್ಯಕ್ತಿಯ ಕಡೆಗೆ ಕಣ್ಣರಳಿಸುವುದು ಸಹಜ. ಆದರೆ ಅದರ ಹಿಂದೆ ವ್ಯಕ್ತಿ ನಡೆಸಿದ ಸಾಧನೆ, ಮಾಡಿದ ಸೇವೆ, ಬಾಳಿದರೀತಿಯನ್ನು ಗಮನಿಸಿದಾಗ ಪ್ರಶಸ್ತಿಗಳು ಲಭ್ಯವಾದದ್ದರ ಔಚಿತ್ಯ ಅರ್ಥವಾಗುತ್ತದೆ. ಪ್ರಶಸ್ತಿಯಿಂದ ವ್ಯಕ್ತಿಯ ಜವಾಬ್ದಾರಿ ಇನ್ನೂ ಹೆಚ್ಚಾಗುತ್ತದೆ. ತಾನು ನಡೆದು ಬಂದ ದಾರಿಯ ಸಿಂಹಾವಲೋಕನ ಒಂದು ಕಡೆಗಾದರೆ ನಡೆಯಬೇಕಾಗಿರುವ ಮುಂದಿನ ಮಾರ್ಗದ ರೂಪ ರೇಷೆಗಳನ್ನು ರೂಪಿಸಿಕೊಳ್ಳಬೇಕಾಗುತ್ತದೆ. ಒಂದುಕಡೆಗೆ ಸಂತೃಪ್ತಿ ಬಂದರೆ ಮತ್ತೊಂದು ಕಡೆಗೆ ಹೊಣೆಗಾರಿಕೆ ಕೈಬೀಸಿ ಕರೆಯುತ್ತದೆ. ಮನುಷ್ಯ ಸಂಘಜೀವಿ ಒಬ್ಬಂಟಿಯಾಗಿ ಬಾಳಲಾರ. ಸಂಘದ ಸಂಪರ್ಕದಿಂದ ಸುಸಂಸ್ಕೃತನಾಗುತ್ತಾ ನಡೆಯುತ್ತಾನೆ. ಒದಗಿದ ಅವಕಾಶಗಳನ್ನು ಸದುಪಯೋಗಪಡಿಸಿಕೊಂಡು ವಿಕಾಸಪಥದಲ್ಲಿ ಹೆಜ್ಜೆಹಾಕುವವರು ಸಾವಿರಕ್ಕೆ ಒಬ್ಬರೋ ಲಕ್ಷಕ್ಕೆ ಒಬ್ಬರೋ ಎನ್ನಬೇಕಾಗುತ್ತದೆ. ಜೀವನ ತನಗೊಬ್ಬನಿಗೆ ಮಾತ್ರವಲ್ಲ ತನ್ನ ಸಹ ಜೀವಿಗಳಿಗೂ ಇದೆ ಎಂಬ ಭಾವನೆ ಅಂಕುರವಾದಾಗ ನಿಸ್ವಾರ್ಥ ಮಾರ್ಗದಲ್ಲಿ, ಸೇವಾ ಪಥದಲ್ಲಿ ಮುಂದುವರಿಯುತ್ತಾನೆ. ಅದಕ್ಕೆ ಪ್ರೇರಕವಾದ ಮೂಲ ಪರಿಸರವನ್ನು ಮನದುಂಬಿ ಸ್ಮರಿಸುತ್ತಾನೆ ಬಾಲ್ಯದಲ್ಲಿ ತನಗೆ ದೊರಕಿದ ಅವಕಾಶಗಳನ್ನು ಕುರಿತು ಚಿಂತನ ಮಂಥನ ಮಾಡುತ್ತಾನೆ. ಕೃತಜ್ಞತಾ ಭಾವನೆಯಿಂದ ಸ್ಮರಿಸಿಕೊಳ್ಳುವ ಹೃದಯವಂತಿಕೆಯನ್ನು ವ್ಯಕ್ತಮಾಡುತ್ತಾನೆ. ಇಂತಹ ಶ್ರೀ ಆರ್.ಎಂ.ಬಿ. ಆರಾಧ್ಯರನ್ನು ಕುರಿತು ಎರಡು ಮಾತನ್ನು ಇಲ್ಲಿ ಬರೆಯುತ್ತಿದ್ದೇನೆ.

ಸಿದ್ಧಗಂಗಾಮಠ ಬಸವತತ್ವಗಳ ಪ್ರಯೋಗಶಾಲೆ. ಶರಣ ಸಿದ್ಧಾಂತದ ಶಿವಕಮ್ಮಟ. ಇಲ್ಲಿತಯಾರಾದ ನಾಣ್ಯಗಳಿಂದು ರಾಷ್ಟ್ರಸೇವೆಯಲ್ಲಿ ಸದ್ದಿಲ್ಲದ ಸೇವೆಯನ್ನು ಮಾಡುತ್ತಿರುವುದು ಸಂತೋಷದ ಸ್ಮರಣೆ. ಪೂಜ್ಯ ಶ್ರೀಗಳವರ ದಿವ್ಯ ವ್ಯಕ್ತಿತ್ವದಿಂದ ಸ್ಫೂರ್ತಿ ಪಡೆದೇ ಸೇವಾ ಜೀವನದಲ್ಲಿ ನಡೆಯುತ್ತಿರುವುದು ಲೋಕವಿದಿತವಾದ ಸಂಗತಿ. ಹೀಗೆ ಸೇವಾದೀಕ್ಷೆಯನ್ನು ಸ್ವಪ್ರೇರಣೆಯಿಂದ ವಿದ್ಯುಕ್ತವಾಗಿ ಸ್ವೀಕರಿಸಿದವರು ಶ್ರೀ ಆರ್. ಎಂ. ಬಿ. ಆರಾಧ್ಯರು. ಗೊಟ್ಟಿಗೆರೆಯಿಂದ ಶ್ರೀ ಸಿದ್ಧಗಂಗಾಮಠಕ್ಕೆ ಪ್ರೌಢಶಿಕ್ಷಣಕ್ಕೆ ಬಂದರು. ಪೂಜ್ಯ ಶ್ರೀ ಉದ್ಧಾನ ಶಿವಯೋಗಿಗಳ ಹಾಗೂ ಪೂಜ್ಯ ಶ್ರೀ ಶಿವಕುಮಾರ ಸ್ವಾಮಿಗಳ ಮಂಗಳ ದೃಷ್ಟಿಗೆ ಪಾತ್ರರಾಗಿ ವೇದ ಸಂಸ್ಕೃತ ಅಧ್ಯಯನ ಮುಗಿಸಿ ಹುಟ್ಟಿದೂರಿಗೆ ತೆರಳಿ ಶಿಕ್ಷಕರಾಗಿ ವೃತ್ತಿ ಜೀವನ ಆರಂಭಿಸಿದರು. ದುಡಿಮೆಯನ್ನು ದೇವರೆಂದು ಆರಾಧಿಸಿದ ಆರಾಧ್ಯರು ಮೆಟ್ಟಿಲಾಗಿ ಮೇಲೇರುತ್ತ ನಡೆದರು.

ನಿಸ್ವಾರ್ಥ ಮನೋಧರ್ಮಿಗಳಿಗೆ ದುಡಿಮೆ ಲೋಕ ಹಿತಕ್ಕಾಗಿ ಎಂಬುದು ಬಹುಬೇಗ ಹೊಳೆದು ಬಿಡುತ್ತದೆ. ಶ್ರೀ ಮಠದ ಪರಿಸರದಲ್ಲಿ ಸುಪ್ತವಾಗಿ ಅಡಗಿಕುಳಿತ ಸಂಸ್ಕಾರ ಗಾಂಧೀಜಿಯವರ ಪ್ರಭಾವಕ್ಕೆ ಒಳಗಾಗುವಂತೆಮಾಡಿತು. ಆರಾಧ್ಯರ ಶರಣ ಧರ್ಮ ಚತುರ್ ವರ್ಣಾತೀತವಾದುದು. ಲೋಕದ ಸಕಲಜೀವಿಗಳಿಗೂ ಲೇಸನ್ನೆ

ಬಯಸುವಂಥದು. ಅಂಥ ಧರ್ಮದ ಹಿನ್ನೆಲೆ ಪರಂಪರೆಯಿಂದ ಬಂದ ಶ್ರೀ ಆರಾಧ್ಯರಿಗೆ ಗಾಂಧೀಜಿಯವರ ಹರಿಜನೋದ್ಧಾರ ಚಳುವಳಿ ತುಂಬಾ ಪ್ರಿಯವಾಯಿತು. ಪರಿಣಾಮವಾಗಿ ಹರಿಜನ ಸೇವೆಯಲ್ಲಿ ತೊಡಗುವಂತಾಯಿತು. ಯಾರನ್ನು ಬಸವಾದಿ ಶರಣರು "ಮಹಾಮಾಹೇಶ್ವರ" ರೆಂದು ಗೌರವಿಸಿ ಅವರೊಂದಿಗೆ ಬಾಳಿದರೋ ಅಂಥ ಸಂಸ್ಕೃತಿಯಿಂದ ಬಂದ ರುದ್ರಾರಾಧ್ಯಾ ಮುದ್ದು ಬಸವರಾಧ್ಯರಿಗೆ ಹರಿಜನರ ಸೇವೆಯೆಂಬುದು ಗುರುಲಿಂಗಜಂಗಮಾರಾಧನೆಯೇ ಎನಿಸಿದ್ದು ಆಶ್ಚರ್ಯವೇನಲ್ಲ. ಸೇವೆಯನ್ನೇ ಜೀವನ ಶ್ರದ್ಧೆಯನ್ನಾಗಿ ಅಪ್ಪಿಕೊಂಡ ಆರಾಧ್ಯರಿಗೆ ಸೇವಾರ್ಪಣೆಗೆ ಒದಗಿ ಬಂದ ಅವಕಾಶಗಳು ಹಲವು ಹನ್ನೊಂದು. ಪದ್ಮಶ್ರೀ ಡಾ|| ಎಂ. ಸಿ. ಮೋದಿಯವರ ಉಚಿತ ನೇತ್ರ ಚಿಕಿತ್ಸಾ ಶಿಬಿರಗಳು, ಭಾರತೀಯ ವಿದ್ಯಾ ಸಂಸ್ಕೃತಿ ವಿದ್ಯಾಪೀಠ, ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, ಎಸ್. ಜೆ. ಎಂ. ವಿದ್ಯಾಪೀಠ, ಭಾರತ ಸೇವಕ ಸಮಾಜ, ಭಾರತ ರೆಡ್‌ಕ್ರಾಸ್ ಸಂಸ್ಥೆ' ಕಿದ್ವಾಯಿಯ್ ಕ್ಯಾನ್ಸರ್ ಸಂಸ್ಥೆ, ಕರ್ನಾಟಕದ ಅಂಧರ ಕ್ಷೇಮಾಭ್ಯುದಯ ಸಂಸ್ಥೆ ಅಕ್ಕಮಹಾದೇವಿ ಸಮಾಜ, ಭಾರತದ ಸ್ಕೌಟ್ಸ್ ಮತ್ತು ಗೈಡ್ಸ್, ಮುಂತಾಗಿ ವಿಭಿನ್ನ ಕ್ಷೇತ್ರಗಳಲ್ಲಿ ಅಧ್ಯಕ್ಷರಾಗಿ, ಕಾರ್ಯದರ್ಶಿಗಳಾಗಿ ಸೇವಾ ಪ್ರತಿಗಳಾಗಿಸದ್ದಿಲ್ಲದೆ ವಿನಮ್ರ ಸೇವೆಗೆ ಉದಾಹರಣೆಯಾಗಿದ್ದಾರೆ ಆರಾಧ್ಯರು. ಜೊತೆಗೆ ಶಿಕ್ಷಕರಾಗಿ, ಸಾರಿಗೆ ಸಂಸ್ಥೆಯ ಸ್ಥಾಪಕರಾಗಿ, ಇಂಜಿನಿಯರಿಂಗ್ ಕಂಟ್ರ್ಯಾಕ್ಟರಾಗಿ, ನಿವೇಶನಾಭಿವೃದ್ಧಿ ಉದ್ದಿಮೆದಾರರಾಗಿ ನಾಡಿನ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ತಮ್ಮ ತನು ಮನ ಧನಗಳನ್ನು ತೊಡಗಿಸಿ ಸಮರ್ಪಣಾ ಭಾವದಿಂದ ದುಡಿಯುತ್ತಿರುವ ಆರಾಧ್ಯರು ಪ್ರಶಸ್ತಿ, ಸನ್ಮಾನಗಳನ್ನೂ ಪಡೆಯಬೇಕೆಂದು ಸೇವೆ ಸಲ್ಲಿಸಿದವರಲ್ಲ. ಸಿದ್ಧಗಂಗಾಮಠದ ಪ್ರಸಾದದಿಂದ ತನುತುಂಬಿ, ಶ್ರೀ ಶ್ರೀ ಗಳವರ ಆಶೀರ್ವಾದದಿಂದ ಮನ ತುಂಬಿ, ಬಸವಧರ್ಮಸಿದ್ಧಾಂತದಿಂದ ಬದುಕು ತುಂಬಿ ಸೇವೆ ಮಾಡುತ್ತಾ ಬಂದಿದ್ದಾರೆ. 'ಗುರುಪಥ' ದಲ್ಲಿ ನಡೆದು 'ಶಿವಪಥ' ದತ್ತ ಸಮಾಜ, ದೇಶಗಳ ಸೇವೆಯಾಗಿದೆ. ಅಂಥವರಿಗೆ ರಾಜ್ಯ ಪ್ರಶಸ್ತಿ ಲಭ್ಯವಾದ ಸಂದರ್ಭದಲ್ಲಿ ಆನೇಕ ಸಂಘ ಸಂಸ್ಥೆಗಳೂ ಮಠಮಾನ್ಯಗಳು ಸತ್ಕರಿಸಿ ಗೌರವಿಸಿ ಸತ್ಪರಂಪರೆಯನ್ನು ಹೃದಯತುಂಬಿ ಕೊಂಡಾಡಿವೆ. ಇದೀಗ ಆರಾಧ್ಯರಿಗೆ ಭಾರತಸರ್ಕಾರ 'ಪದ್ಮ ಶ್ರೀ' ಪ್ರಶಸ್ತಿ ಪ್ರಧಾನಮಾಡಿ ಗೌರವಿಸಿದೆ. ನಿಸ್ವಾರ್ಥ ಸೇವೆಗೆ ಸಂದ ಎತ್ತರದ ಗೌರವ ಶ್ರೀ ಆರ್. ಎಂ. ಬಿ. ಆರಾಧ್ಯರಿಗೆ ಬಂದ ಈ ಸಂದರ್ಭದಲ್ಲಿ ಸಿದ್ಧಗಂಗಾ ಹೃತ್ಪೂರ್ವಕ ಶುಭಾಶಯಗಳನ್ನು ಅಭಿನಂದನಾಪೂರ್ವಕವಾಗಿ ಸಲ್ಲಿಸುತ್ತಿದೆ. ಶ್ರೀ ಆರ್. ಎಂ. ಬಿ. ಆರಾಧ್ಯರು ಶ್ರೀ ಸಿದ್ಧಗಂಗಾ ಮಠದ ಹಳೆಯ ವಿದ್ಯಾರ್ಥಿಗಳು ಎಂಬುದನ್ನು ಸ್ಮರಿಸುತ್ತ ಶ್ರೀಯುತರಿಗೆ ಸಂದಗೌರವ ಇಡೀ ಹಳೆಯ ವಿದ್ಯಾರ್ಥಿಗಳಿಗೇ ಸಂದಂತಾಗಿದೆ ಎಂದು ಹೆಮ್ಮೆತಾಳುತ್ತ, ಸಿದ್ಧಗಂಗಾ ಕಮ್ಮಟದಲ್ಲಿ ಅರಳಿದ 'ಪದ್ಮಶ್ರೀ ಆರಾಧ್ಯರಿಗೆ ಮತ್ತು ಅವರ ಕುಟುಂಬವರ್ಗದವರಿಗೆ ಬಸವಾದಿ ಶರಣರು ಹಾಗೂ ಶ್ರೀ ಶ್ರೀ ಸಿದ್ಧಗಂಗಾ ಶ್ರೀ ಗುರು ಪರಂಪರೆ ಸಕಲ ಸನ್ಮಂಗಳವನ್ನುಂಟು ಮಾಡಲೆಂದು ಹಾರೈಸುತ್ತದೆ ' ಸಿದ್ಧಗಂಗಾ '

# ಗ್ರಾಮಾಂತರ ಬಸವ ಜಯಂತಿ - 251 ರಿಂದ 257

ಆತ್ಮೀಯ ಶರಣ ಬಂಧು,

ಬಹಳ ದಿನಗಳಿಂದ ಬರೆಯಲಾಗಲಿಲ್ಲ. ಪರಮಪೂಜ್ಯ ಸಿದ್ಧಗಂಗೆಯ "ಅಪ್ಪ"ಗಳ ಅನೇಕ ಸಾಧನೆಗಳಲ್ಲೊಂದಾದ ಗ್ರಾಮಾಂತರ ಬಸವ ಜಯಂತಿ ಮಣಿಹ ಒಂದು ಮಹತ್ವದ ಸಾಧನೆಯೆಂಬುದನ್ನು ಇದೀಗ ಶಿಕ್ಷಣವೆತ್ತರು, ಸಮಾಜ ವಿಜ್ಞಾನಿಗಳು, ಸಂಸ್ಕೃತಿ ಪ್ರಸಾರಕರು, ಮಾನವ ಕಲ್ಯಾಣಾಕಾಂಕ್ಷಿಗಳು ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಿದ್ದಾರೆಂಬುದನ್ನೂ ನಿಮಗೆ ತಿಳಿಸಲು ಸಂತೋಷವಾಗುತ್ತದೆ.

1979ರಲ್ಲಿ ಪ್ರಾರಂಭವಾದ ಗ್ರಾಮಾಂತರ ಬಸವಜಯಂತಿ ಇದೀಗ ಹದಿಮೂರನೆ ವರ್ಷಕ್ಕೆ ಪಾದಾರ್ಪಣೆಮಾಡಿ ಮುನ್ನಡೆದಿದೆ. ಪರಿವರ್ತನೆಯ ಪರಿಮಳದ ಒಳನೋಟವನ್ನು ತೋರಿಸುತ್ತಾ ನಡೆದಿದೆ. ಬಸವತತ್ವವನ್ನು ಅರ್ಥಮಾಡಿಕೊಳ್ಳಬೇಕೆಂಬ ಹಂಬಲ ಇಂದು ಎಲ್ಲರಿಗಿಂತ ಮಣ್ಣಿನ ಮಕ್ಕಳಲ್ಲಿ ತೀವ್ರವಾಗಿರುವುದು ಸಂತೋಷಕರವಾದುದು.

ಪರಮಪೂಜ್ಯರು ರೂಪಿಸಿರುವ ಈ ಬಸವ ಯಾತ್ರೆಯಲ್ಲಿ ಧರ್ಮಗುರುಗಳು ವಿದ್ವಾಂಸರು, ಸಾಮಾಜಿಕತಜ್ಞರು, ರಾಜಕಾರಣಿಗಳು. ಶಿಕ್ಷಣಪಟುಗಳು ಆಸಕ್ತಿಯಿಂದ ಭಾಗವಹಿಸುತ್ತಿದ್ದಾರೆ. ಆದರಲ್ಲೂ ನಾಟಕ ಮಾಧ್ಯಮವನ್ನು ಹೃದಯಾರೆ ಸ್ವಾಗತಿಸುತ್ತಾರೆ.

1991ರ ಫೆಬ್ರವರಿ 12 ರಿಂದ ಪ್ರಾರಂಭವಾದ ಪ್ರಸ್ತುತ ಬಸವಯಾತ್ರೆ ನಿರಂತರವಾಗಿ ಹತ್ತು ಪುಣ್ಯ ಗ್ರಾಮಗಳಲ್ಲಿ ಕಾರ್ಯಕ್ರಮ ಜರುಗಿಸಿದೆ. ದಿನಾಂಕ 4-3-91 ರಂದು ಬೆಂಗಳೂರು ಜಿಲ್ಲೆ ಚನ್ನಪಟ್ಟಣ ತಾಲ್ಲೂಕು ಗುಡಿಸರಗೂರಿನಲ್ಲಿ ನಡೆದ ಸಮಾರಂಭದಲ್ಲಿ ಕನಕಪುರ ದೇಗುಲ ಮಠದ ಶ್ರೀಗಳು, ಮರಳೆ ಗವಿಮಠದ ಶ್ರೀಗಳು, ರಾಜಾಪುರದ ಮಠದ ಶ್ರೀಗಳು, ಬೇವೂರು ಶ್ರೀಗಳು ಭಾಗವಹಿಸಿ ಬಸವ ತತ್ವಗಳ ಪರಿಚಯ ಮಾಡಿಕೊಟ್ಟರು. ರಾತ್ರಿ ಪ್ರದರ್ಶಿತವಾದ ನಾಟಕವನ್ನು ವೀಕ್ಷಿಸುವ ಸಲುವಾಗಿ ಜನ ಜಾತ್ರೆಯನ್ನು ನಿರೀಕ್ಷಿಸಿದ್ದ ಕಾರ್ಯಕರ್ತರು ಅಲ್ಲಲ್ಲಿ ಟಿ.ವಿ. ಗಳನ್ನು ಅಳವಡಿಸಿದ್ದು ಸೂಕ್ತವಾಗಿತ್ತು. ಪರಮ ಪೂಜ್ಯಶ್ರೀ ಶ್ರೀಗಳವರು "ಬಸವಣ್ಣ ನಮಗೆ ಜೀವನ ಕಲೆಯನ್ನು ಕಲಿಸಿಕೊಟ್ಟ ಮಹಾನುಭಾವ" ಎಂದು ಆಶೀರ್ವಚನ ನೀಡಿದರು.

ಏಪ್ರಿಲ್- 1991

ದಿನಾಂಕ 6-3-91 ರಂದು ಕುಣಿಗಲ್ ತಾಲ್ಲೂಕು ಬೆಟ್ಟಳ್ಳಿ ಮಠದಲ್ಲಿ ಜಯಂತಿ ಯೋಜಿತವಾದಾಗ ಸಮಾವೇಶಿತವಾದ ಜನಸಮುದಾಯ ವಿಶೇಷವಾಗಿದ್ದು ಶ್ರೀಮಠದ ಪೂಜ್ಯ ಶ್ರೀ ಶ್ರೀ ನೀಲಕಂಠಶಿವಾಚಾರ್ಯಸ್ವಾಮಿಗಳವರ ಹೃದಯ ತುಂಬಿ ಬರುವಂತಾಯಿತು. ಉರಿಗದ್ದಿಗೇಶ್ವರನ ಕೃಪೆಯಿಂದ ಮಳೆಕಾಣಿಸಿಕೊಳ್ಳದೆ ನಿರಾಂತಕ ವಾಗಿ ನಾಟಕ ಪ್ರದರ್ಶಿತವಾಯಿತು. ಸಮಾರಂಭದಲ್ಲಿ ಅಂಕನಹಳ್ಳಿ ಶ್ರೀಗಳು, ಪ್ರೊ॥ ಬಿ. ವೀರಭದ್ರಯ್ಯನವರು ಮಾತನಾಡಿದರು. ಪರಮ ಪೂಜ್ಯ ಶ್ರೀ ಶ್ರೀ ಸಿದ್ಧ ಗಂಗೆಯ 'ಅಪ್ಪ' ಗಳು ಆಶೀರ್ವಚನ ನೀಡುತ್ತ "ಬಸವಣ್ಣನಿಂದ ನಾವು ಕಲಿಯ ಬೇಕಾಗಿರುವ ಮಹೋನ್ನತ ಗುಣವೆಂದರೆ ಪ್ರಾಮಾಣಿಕವಾದ ಮಾನವೀಯತೆ" ಎಂದು ನುಡಿದರು.

ದಿನಾಂಕ 9-3-91 ರಂದು ಹೊಳೆನರಸೀಪುರ ತಾಲ್ಲೂಕು ಟಿ.ಮಾಯಗೌಡನ ಹಳ್ಳಿಯಲ್ಲಿ ಬಸವಜಯಂತಿ ಆಚರಣೆ. ಎಲ್ಲಿಲ್ಲದಷ್ಟು ಭಕ್ತಾದಿಗಳು,

ಮಾಯಗೌಡನಹಳ್ಳಿ ಶ್ರೀ ಮಠದ ಪೂಜ್ಯ ಶ್ರೀ ಚಂದ್ರಶೇಖರ ಸ್ವಾಮಿಗಳ ಕ್ರತು ಶಕ್ತಿಯ ಜೀವಂತ ಉದಾಹರಣೆ ಆ ಸಮಾರಂಭ. ಸಚಿವರಾದ ಜಿ. ಪುಟ್ಟಸ್ವಾಮಿ ಗೌಡರು ಸಕ್ರಿಯ ಭಾಗಿಗಳಾಗಿ ಬೆರೆತದ್ದು ಮತ್ತಷ್ಟು ಶೋಭೆ ಎನಿಸಿತು. ಬೆಟ್ಟದ ಪುರದ ಶ್ರೀಗಳು, ಬೇವೂರು ಶ್ರೀಗಳು, ಶ್ರೀರಾಮ ಸಹಕಾರಿ ಸಕ್ಕರೆ ಕಾರ್ಖಾನೆ ಅಧ್ಯಕ್ಷರಾದ ಶ್ರೀ ಚನ್ನಬಸಪ್ಪನವರು, ಶ್ರೀ ಹೆಚ್. ವಿ. ವೀರಭದ್ರಯ್ಯನವರು ಮಾತನಾಡಿ ಬಸವಣ್ಣನವರ ಜೀವನದ ವಿವಿಧ ಮುಖಗಳ ಪರಿಚಯ ಮಾಡಿ ಕೊಟ್ಟರು. ಅಧ್ಯಕ್ಷಸ್ಥಾನದಿಂದ ಸಿದ್ಧಗಂಗಾ ಪರಮಪೂಜ್ಯ ಶ್ರೀ ಶ್ರೀಗಳವರು ಆಶೀ ರ್ವಚನ ನೀಡುತ್ತ 'ಬಸವಣ್ಣನವರಂಥ ಹೃದಯವಂತ ಮಹಾಸುಧಾರಕ ಮತ್ತೊಬ್ಬ ನನ್ನು ಕಾಣುವುದು ವಿರಳ' ಎಂದು ನುಡಿದರು.

23-3-91 ರಂದು ಚಿಕ್ಕಮಗಳೂರು ದೊಡ್ಡಕುರುಬರ ಹಳ್ಳಿ ಜಾಬಾಲಿ ಪುರ ಮಠದ, ಬಸವಮಂದಿರದಲ್ಲಿ ನಡೆದ ಬಸವಜಯಂತಿ ಅವಿಸ್ಮರಣೆಯವಾಗಿತ್ತು. ವ್ಯವಸ್ಥಿತವಾಗಿತ್ತು. ಪೂಜ್ಯ ಚಂದ್ರಶೇಖರಸ್ವಾಮಿಗಳ ಬಸವ ಭಕ್ತಿಯ ನಿಷ್ಠೆ ಎಲ್ಲ ಚಟುವಟಿಕೆಗಳಲ್ಲಿ ಅರಳಿದ್ದು ಭಾಸವಾಗುತ್ತಿತ್ತು. ಜೊತೆಗೆ ಬಸವಧರ್ಮೀಯರಾದ ಶ್ರೀ ಎ. ಎಂ. ಬಸವೇಗೌಡರ ಸಹಕಾರ ಸಹಭಾಗಿತ್ವದಿಂದ ಕಾರ್ಯಕ್ರಮಕ್ಕೆ ವಿಶೇಷ ಕಳೆ ಕೂಡಿಬಂದಿತ್ತು. ಡಾ॥ ಸಾ. ಶಿ. ಮರುಳಯ್ಯನವರು ಉಪನ್ಯಾಸ ಮಾಡುತ್ತ ಸಿದ್ಧಗಂಗೆಯ ಸ್ವಾಮಿಗಳಂಥ ಪರಮಪೂಜ್ಯರಿಂದ ಬಸವ ತತ್ವ ಪ್ರಚಾರಕ್ಕೆ ಬರುತ್ತಿ ರುವುದು ನಾಡಿನ, ಸಮಾಜದ ಪರಮ ಪುಣ್ಯೋದಯವೆಂದರು. ಶ್ರೀ ಎ.ಎಂ. ಬಸವೇ ಗೌಡರು, ಪ್ರೊ॥ ವಿ. ಪಿ. ಸಂಗಮದ, ಶ್ರೀ ಕಾಳೇಗೌಡರು, ಶ್ರೀಮತಿ ಯಶೋದ,

ಶಾಸಕರಾದ ಶ್ರೀ ನಗೀರ್ ಅಹಮ್ಮದ್, ಶ್ರೀ ಬೊಮ್ಮಲಿಂಗಯ್ಯನವರು ಮಾತನಾ ದರು. ಪ್ರಸ್ತುತ ಸಮಾರಂಭವನ್ನು ಸಚಿವ ಶ್ರೀಮಲ್ಲಿಕಾರ್ಜುನ ಪ್ರಸನ್ನ ಉದ್ಘಾಟಿಸಿದ ಸಂತಸಕ್ಕೆಡೆಮಾಡಿತು. 'ಜಗಜ್ಯೋತಿ ಬಸವೇಶ್ವರ' ನಾಟಕವನ್ನು ನೋಡಿದ ಬಸ ತತ್ವಪ್ರೇಮಿಗಳಿಗೆ ಅಪಾರ ಆನಂದವಾಯಿತು. ತಮಗಾದ ಸಂತೋಷವನ್ನು ವರ ಗಾರರೊಂದಿಗೆ ವ್ಯಕ್ತಪಡಿಸಿದರು. ಬಸವ ಬಂಧು ಬಾಣೂರು ಚೆನ್ನಪ್ಪನವರು ದೀರ್ಘ ಪತ್ರಬರೆದು ನಾಟಕವನ್ನು ಮೆಚ್ಚಿಕೊಂಡುದರ ಜೊತೆಗೆ ಪರಮ ಪೂಜ್ಯರ ಮಣಿಹ ಕೃತಜ್ಞತೆ ಸಲ್ಲಿಸಿದ್ದಾರೆ. ನಾಟಕದ ಬಗ್ಗೆ ತಮ್ಮ ಅನಿಸಿಕೆಗಳನ್ನು ಸೂಚಿಸಿದ್ದಾರೆ

ಪರಮ ಪೂಜ್ಯ ಶ್ರೀ ಶ್ರೀಗಳು ಆಶೀರ್ವಚನನೀಡುತ್ತ "ಬಸವಣ್ಣ ಪವಾ ಪುರುಷನೆನ್ನುತ್ತಾರೆ. ಆದರೆ ಅಣ್ಣ ಮಾಡಿದ ಪವಾಡ ಬಹು ಅರ್ಥಪೂರ್ಣವಾದುದ ಮಾನವ ಮಾನವರನ್ನು ಪ್ರೀತಿಸುವಂಥದು. ಧರ್ಮದ ಹೆಸರಿನಲ್ಲಿ ಮನುಷ್ಯನನ ಅಗೌರವಿಸುವಂಥದಲ್ಲ ಬಸವಣ್ಣನ ಧರ್ಮ. ಶರಣು ಎಂದು ಹೇಳಿದ ಹರಳಯ ನಂಥವರಿಗೆ ಶರಣು ಶರಣಾರ್ಥಿ ಎಂದ ಸೌಜನ್ಯ ಪೂರ್ಣ ವಿನಯಶೀಲ ಧರ್ಮ ಎಂದ

ಉತ್ತರ ಕೊಡಗು ಕೊಡ್ಲಿಪೇಟೆಯ ಕಿರಿಕೊಡ್ಲಿಮಠದಲ್ಲಿ ದಿನಾಂಕ 27-3-9 ರಂದು ಜಯಂತಿ ಆಚರಣೆ ನಡೆದ ಸಭೆಯಲ್ಲಿ ಪೂಜ್ಯ ಶ್ರೀ ಮುಮ್ಮಡಿ ನಿರ್ವಾಣ ಸ್ವಾಮಿಗಳು, ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮಿಗಳು, ಶ್ರೀ ಶಿವಲಿಂಗ ಸ್ವಾಮಿಗಳು ಶ್ರೀ ತೆಂಕಲುಗೋಡು ಸ್ವಾಮಿಗಳು, ಶ್ರೀ ಶಿವರುದ್ರಸ್ವಾಮಿಗಳು, ಶ್ರೀ ನೀಲಕಂ ಶಿವಾಚಾರ್ಯ ಸ್ವಾಮಿಗಳು, ಶ್ರೀ ಚಂದ್ರಶೇಖರ ಸ್ವಾಮಿಗಳು, ಪ್ರೊ|| ವಿ.ವಿ. ಸಂಗಮದ ಪ್ರೊ|| ಬಿ. ವೀರಭದ್ರಯ್ಯನವರು ಉಪನ್ಯಾಸ ನೀಡಿದರು. ಪರಮ ಪೂಜ್ಯ ಸಿದ್ಧಗಂಗಾ ಶ್ರೀಗಳು ಆಶೀರ್ವಚನ ನೀಡುತ್ತ 'ಬಸವಣ್ಣನ ವ್ಯಕ್ತಿತ್ವಕ್ಕೆ ಮಾರು ಹೋದ ಮಹಾತ್ ಗಾಂಧೀಜಿಯವರು 1924ರಲ್ಲಿ ಬೆಳಗಾಂನಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ನುಡಿ ಮಾತುಗಳನ್ನು ಉಲ್ಲೇಖಿಸುತ್ತ " ಪ್ರತಿಯೊಬ್ಬ ವ್ಯಕ್ತಿಗೂ ಅವಕಾಶ ಕಲ್ಪಿಸಿ ಕೊಟ್ಟು ಅವನಲ್ಲಿ ಸುಪ್ತವಾಗಿರುವ ವ್ಯಕ್ತಿತ್ವ ವಿಕಾಸವಾಗುವುದಕ್ಕೆ ಅನುಕೂಲ ಮಾಡಿಕೊಡ ಬೇಕು" ಎಂಬ ಐನ್‌ಸ್ಟೈನನ ಸತ್ಯವಾಣಿಯನ್ನು ಉದಾಹರಿಸಿ ಬಸವಣ್ಣ ಮಾಡಿದ್ದನ್ನೆ ಅನಂತರದ ಮಹನೀಯರು ಪ್ರತಿಪಾದಿಸಿದ್ದಾರೆಂದು ಸಮರ್ಥನೆ ಮಾಡಿದರು. ಮಂಜು ಬೀಳುತ್ತಿದ್ದರೂ ನಾಟಕ ಮುಗಿದಾಗ ಪ್ರೇಕ್ಷಕರು ಕುಳಿತೇ ಇದ್ದ ದೃಶ್ಯ ಬಸವ ನಿಷ್ಠೆಯ ಉದಾಹರಣೆಯಾಗಿತ್ತು. ಶ್ರೀ ಮಠದ ಪೂಜ್ಯ ಶ್ರೀ ಸದಾಶಿವಸ್ವಾಮಿ ಗಳವರ ನೇತೃತ್ವದಲ್ಲಿ ವ್ಯವಸ್ಥೆ ಒಪ್ಪವಾಗಿತ್ತು


30-3-91 ರಂದು ಬೆಂಗಳೂರು ಜಿಲ್ಲೆ ಹೊಸಕೋಟೆಯಲ್ಲಿ ಬಸವ ಜಯಂತಿ ನಡೆದ ಸಮಾರಂಭದಲ್ಲಿ ರಾಜಪುರದ ಶ್ರೀಗಳು, ಕೊಳದ ಮಠದ ಶ್ರೀಗಳು, ಬೇಲಿ ಮಠದ ಶ್ರೀಗಳು, ನೆಲಮಂಗಲದ ಶ್ರೀಗಳು ಮಾತನಾಡಿದರು. ಪದ್ಮಶ್ರೀ ಗಳಿಸಿದ

ಮಾನ್ಯ ಶ್ರೀ ಆರ್. ಎಂ. ಬಿ. ಆರಾಧ್ಯರನ್ನು ಸನ್ಮಾನಿಸಿದರು. ಕಾರ್ಯಕ್ರಮ ರೂಪಿಸಿದ ಕರ್ನಾಟಕ ಗೃಹಮಂಡಳಿ ಕಾರ್ಯದರ್ಶಿಗಳಾದ ಶ್ರೀ ಸಿ. ಸೋಮಶೇಖರ್ ವರು ಸಿದ್ಧಗಂಗಾ ಶ್ರೀ ಮಠದ ಸೇವಾಮಣಿಹಕ್ಕೆ ಇಟ್ಟ ಮಹೋನ್ನತ ಕಳಶ ಪ್ರಮಾಂತರ ಬಸವಜಯಂತಿ ಯೋಜನೆ ಎಂದರು. ಪರಮ ಪೂಜ್ಯ ಶ್ರೀ ಶ್ರೀ ಳವರು ಆಶೀರ್ವಚನ ನೀಡುತ್ತ, 'ಬಸವಣ್ಣ ಸಮಗ್ರ ಕ್ರಾಂತಿಯ ಮೂಲಪುರುಷ' ಎಂದು ಮುಂದುವರಿದು ಮನುಷ್ಯನೆಂದರೆ ಕೇವಲ ದೇಹದಲ್ಲಿ ಆತ್ಮನೊಡಗೂಡಿದ ಖಂಡ ಶಿಲ್ಪ. ಆತ್ಮನಿಗಾಗಿಯೇ ದೇಹ. ಬರಿದೇಹಕ್ಕೆ ಬಸವಣ್ಣನವ ಂದಿರುವಂತೆ 'ಒಂದಡಕೆ'ಯ ಬೆಲೆಯಿಲ್ಲ. ಆತ್ಮಜ್ಞಾನದ ಬೆಳಕಿನಲ್ಲಿ ಲೋಕ ಜೀವನವನ್ನು ಅರ್ಥಪೂರ್ಣವನ್ನಾಗಿ ಮಾಡಿಕೊಳ್ಳುವ ಕಲೆಯನ್ನು ಬಸವಾದಿ ಶರಣರು ಚರಿಸಿ ತೋರಿಸಿದ್ದಾರೆ 'ಅದು ನಮಗೆ ದಾರಿ ದೀಪವಾಗಬೇಕು" ಎಂದು ನುಡಿದರು. ನಾಟಕವನ್ನು ನೋಡಿದ ನಗರದ ಜನತೆ ತಮ್ಮ ಸಂತೋಷವನ್ನು ಪರಸ್ಪರ ಹೇಳಿ ಕೊಳ್ಳುತ್ತಿರುವುದನ್ನು ವರದಿಗಾರ ಕೇಳಿಸಿಕೊಂಡಾಗ ಪರಮ ಪೂಜ್ಯರ ಯೋಜನೆ ಸಾರ್ಥಕವಾಗುತ್ತಿರುವುದಕ್ಕೆ ಒಳಗೊಳಗೇ ಹಿಗ್ಗಿದ.

---

## ಅಭಿನಂದನೆ

ಶ್ರೀ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗೇಶ್ವರ ಸಂಸ್ಕೃತ ಮತ್ತು ವೇದ ಮಹಾ ವಿದ್ಯಾಲಯದ ಪ್ರಾಧ್ಯಾಪಕರಾದ ಮಾನ್ಯ ಶ್ರೀ ವಿದ್ವಾನ್ ಎಂ. **ಮಲ್ಲವೀರಯ್ಯನವರಿಗೆ** ಮತ್ತು ಜ್ಯೋತಿಷ್ಯ ವಿದ್ವಾನ್ ಮಾನ್ಯ **ಶ್ರೀ ಶಂಕರ ಶಾಸ್ತ್ರಿಗಳವರಿಗೆ** ರಾಜ್ಯ ಸರ್ಕಾರ ಸಂಸ್ಕೃತ ಮತ್ತು ವೇದ ವಿದ್ವಾಂಸರಿಗೆ ನೀಡಿದ ಪ್ರಶಸ್ತಿಯನ್ನು ನೀಡಿ ಗೌರವಿಸಿರುವುದಕ್ಕಾಗಿ "**ಸಿದ್ಧಗಂಗಾ**" ತುಂಬು ಹೃದಯದ ಅಭಿನಂದನೆಗಳನ್ನು ಸಲ್ಲಿಸಲು ಸಂತೋಷಿಸುತ್ತದೆ.



## ದಾನಿಗಳಿಗೊಂದು ಸದವಕಾಶ

### ಶ್ರೀ ಮಠದ ಸಮಸ್ತ ಭಕ್ತಾದಿಗಳಿಗಾಗಿ

* ಪ್ರತಿ ತಿಂಗಳು ಯಥಾ ಶಕ್ತಿ ನಿಮ್ಮ ಕಾಣಿಕೆ ಕಳಿಸಿರಿ.
* ಮನಿಯಾರ್ಡರು ದ್ವಾರಾ ಕಳುಹಿಸಬಹುದು.
* ಮೊದಲ ಬಾರಿ ಶ್ರೀಗಳವರಿಂದ ಪತ್ರ ಬರುತ್ತದೆ.
* ಪ್ರತಿ ತಿಂಗಳು ಶ್ರೀಗಳವರೇ ಹಣಪಡೆದು ಸಹಿಮಾಡಿದ ಕೂಪನ್ ಬರುತ್ತದೆ.
* ಯಥಾಶಕ್ತಿ ಕಾಣಿಕೆ ಕಳುಹಿಸುವುದು ಯಾರಿಗೂ ಹೊರೆಯಾಗಲಾರದು.
* ಪ್ರತಿಯೊಬ್ಬರ ಒಂದೊಂದು ಕಾಣಿಕೆಯೂ ಹಲವು ಸಹಸ್ರಗಳೇ ಆಗಿ ಶ್ರೀಗಳವರ ಪುಣ್ಯಕಾರ್ಯಕ್ಕೆ ಸಹಕಾರಿಯಾದೀತು.

### ಪ್ರತಿ ಶತ ಒಂದು ರೂ. ಯೋಜನೆ

(ಶ್ರೀ ಮಠದ ಎಲ್ಲಾ ಹಳೆಯ ವಿದ್ಯಾರ್ಥಿಗಳು ಮತ್ತು ಆ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವವರಿಗೆ)

* ನಿಮಗೆ ಪ್ರತಿ ಮಾಹೆ ನಿರ್ದಿಷ್ಟ ಆದಾಯ ಉಂಟು.
* ಅದರಲ್ಲಿ ಪ್ರತಿಶತ ಒಂದು ರೂ. (*one percent*) ಶ್ರೀ ಮಠಕ್ಕೆ ಕಳುಹಿಸಬಹುದು.
* ಒಬ್ಬೊಬ್ಬರೇ ಕಳುಹಿಸಬಹುದು ಅಥವಾ ಹಲವರು ಒಟ್ಟಾಗಿ ಕಳುಹಿಸಬಹುದು.
* ಚೆಕ್, ಡ್ರಾಫ್ಟ್ ಅಥವಾ ಎಂ.ಓ ಕಳುಹಿಸಬಹುದು.
* ಶ್ರೀ ಶ್ರೀಗಳವರ ಹೆಸರಿಗೇ ಕಳುಹಿಸಬೇಕು.
* ಈ ನಿಧಿ ಸತ್ಪಾತ್ರಕ್ಕೆ ಸಲ್ಲುತ್ತದೆ.

ಜೀವನದಲ್ಲಿ ದಾನ ಮಾಡುವವರು ಇಷ್ಟು ಉತ್ಕೃಷ್ಟ ದಾನವನ್ನು ಮಾಡಲು ಹಿಂಜರಿಯಬಾರದು. ಇದಕ್ಕೂ ಶ್ರೇಷ್ಠ ಪಾತ್ರತ್ವ ನಿಮ್ಮ ದಾನಕ್ಕೆ ಅನ್ಯತ್ರ ದೊರೆಯದು, ಇದು ಸುಸಮಯ, ಅಪರೂಪದ ಅವಕಾಶ. ಈ ತಿಂಗಳಿನಿಂದಲೇ ಕಾರ್ಯರೂಪಕ್ಕೆ ತನ್ನಿ. ಇಂದೇ ಕಳಿಸಿರಿ. ಜ್ಞಾನ ದೀವಿಗೆಯಾಗಿ ಶ್ರೀ ಸಿದ್ಧಗಂಗಾ ಮಠ ನಾಡಿಗೆ ಬೆಳಕನ್ನು ಚೆಲ್ಲುತ್ತಿದೆ.

* ಪುಣ್ಯ ಕಾರ್ಯಕ್ಕಾಗಿ ಉದಾರ ನೆರವು ನೀಡಿರಿ.

ಇತಿ,<br>
ಭಕ್ತ ಮಂಡಳಿ.

ತಂತಿ :

ಶಾಸ್ತ್ರೋಕ್ತವಾಗಿ ತಯಾರಿಸಿದ ಸುಗಂಧ ಸಾಮಗ್ರಿಗಳು

ಪ್ರಖ್ಯಾತವಾದ

- ಪರಿಮಳದಶಾಂಗ
- ದೂಪದ ಕೊಡ
- ವಿಭೂತಿ
- ಹವನ ಸಾಮಗ್ರಿಗಳ ತಯಾರಕರು




ಶಿವಪೂಜಾ ಸಾಮಗ್ರಿಗಳು ದೊರೆಯುತ್ತದೆ.

Y. BASAPPA PERFUMER BANGALORE-2

ಫೋನ್ : ಅಂಗಡಿ — 28009 ಮನೆ — 224623.

ವೈ. ಬಸಪ್ಪ, 206, ಅವೆನ್ಯೂ ರೋಡ್, ಬೆಂಗಳೂರು-560 002

# ಸಿದ್ಧಗಂಗಾ

ಸಂಪುಟ–27.   ಸಂಚಿಕೆ–5.   ಮೇ–1991.



ಶ್ರೀ ಸಿದ್ಧಗಂಗಾ ಶ್ರೀ ಶ್ರೀ ಗಳವರ "ಜೀವನದರ್ಶನ" ಸಂಶೋಧನೆಗೆ ಅರ್ಹವಾಗಿದೆ ಎಂದು ಅವರ 84 ನೇ ಜನ್ಮದಿನೋತ್ಸವವನ್ನು ಧರ್ಮಸ್ಥಳದ ಪೂಜ್ಯ ಶ್ರೀ ವಿರೇಂದ್ರ ಹೆಗ್ಗಡೆಯವರು ಅಧ್ಯಕ್ಷತೆ ವಹಿಸಿದ್ದ ಗದಗ, ಡಂಬಳ ಮಠದ ಜಗದ್ಗುರು ತೋಂಟದಾರ್ಯ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರ ಸಮ್ಮುಖದಲ್ಲಿ ಉದ್ಘಾಟನೆಮಾಡುತ್ತಾ ನುಡಿದರು.

ಪ್ರಕಾಶಕರು:
ಹಳೆಯ ವಿದ್ಯಾರ್ಥಿಗಳ ಸಂಘ
ಸಿದ್ಧಗಂಗಾ ಕ್ಷೇತ್ರ.

ತ್ರಿವಿಧದಾಸೋಹ ಮೂರ್ತಿಗಳಾದ ಶಿವಯೋಗಿ ಪರಮ ಪೂಜ್ಯ ಡಾ॥ ಶ್ರೀ ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರ 84 ನೇ ಜನ್ಮದಿನೋತ್ಸವದಂದು ಸನ್ಮಾನಿತರಾದ ನಾಡಿನ ಗಣ್ಯರು. (ವರದಿ 39 ಪ್ರ



ಕುರುಡರ ಬಾಳಿಗೆ "ಕರುಣಾಳು ಬೆಳಕಾಗಿ" ಬಂದಿರುವ ಪದ್ಮಭೂಷಣ ಡಾ॥ ಶ್ರೀ ಎಂ. ಸಿ. ಮೋದಿಯವ
ವಿಶ್ವದಾಖಲಾತಿ "ಗಿನ್ನಿಸ್" ಗ್ರಂಥದಲ್ಲಿ ತಮ್ಮ ಶುಭ ನಾಮವನ್ನು ಶಾಸನ ಗೊಳಿಸಿದ ಶುದ್ಧ ಭಾರತೀಯ



ಸಿದ್ಧಗಂಗಾ ಜ್ಯೋತಿ ಮುಟ್ಟಿ ಜ್ಯೋತಿಯಾದ ಶ್ರೀ ಆರ್. ಎಂ. ಬಿ. ಆರಾಧ್ಯರು ಸಿದ್ಧಗಂಗಾ
ಮಠದ ಹಳೆಯ ವಿದ್ಯಾರ್ಥಿಗಳು, ಶ್ರೀ ಮಠದ ಶಿಷ್ಯ ಸಾಗರದಲ್ಲಿ ಪದ್ಮಶ್ರೀ ಪ್ರಶಸ್ತಿ ಪಡೆದ– ಅನರ್ಘ್ಯ ರತ್ನ

# ಸಿದ್ಧಗಂಗಾ

ಸಂಪುಟ–27. ಸಂಚಿಕೆ–5. ಮೇ – 1991.

## ಶ್ರೀ ಸಿದ್ಧಗಂಗಾ ಗುರುಕರುಣ ತ್ರಿವಿಧಿ

"ಶಿವ ಶಿವಾ ಬಸವಣ್ಣ ಬಂದಿಹನು ಎದ್ದೇಳಿ"
"ಭಯವಿಲ್ಲ ಭಯವಿಲ್ಲ" ಅನುಸರಿಸಿ । ಎನುತಿರುವ
ಸಿದ್ಧಗಂಗಾ ಗುರುವೆ ಕೃಪೆಯಾಗು ॥

"ಬಸವಣ್ಣ ಕಲ್ಯಾಣ ಬಸವಣ್ಣನಾ ಹುಚ್ಚು
ಏನುಸವಿಬೆಳಗೆ" ನುತ ಸಂಚರಿಪೆ । ನನ್ನತಂದೆ
ಸಿದ್ಧಗಂಗಾ ಗುರುವೆ ಕೃಪೆಯಾಗು ॥

ಬಸವಣ್ಣ ಕಾಯಕ ತವ ಜಿಹ್ವೆಯನು ತುಂಬಿ
ಸ್ವಾನುಭಾವವನುಂಡ ತಣಿದಿರುವ । ನನ್ನತಂದೆ
ಸಿದ್ಧಗಂಗಾ ಗುರುವೆ ಕೃಪೆಯಾಗು ॥

—ಹೆಚ್. ವಿ. ವೀರಭದ್ರಯ್ಯ.

| ಲೇಖನ | ಲೇಖಕರು | ಪುಟ |
|---|---|---|


* ಶ್ರೀವಾಣಿ 5

* ಶ್ರೀ ಸಿದ್ಧಲಿಂಗೇಶ್ವರ ವಚನ 7

* ಸಂಪಾದಕೀಯ 8

* ಸಿದ್ಧಗಂಗೆಯ ಬೆಳಕು 11
ಪ್ರೊ॥ ಜಿ. ಎಸ್. ಸಿದ್ಧಲಿಂಗಯ್ಯ

* ಆಧುನಿಕ ಚಿಂತಕ ಬಸವಣ್ಣ ಕೃಪೆ : ಶರಣ ಧರ್ಮ 17

* ವಿಜ್ಞಾನ ಮತ್ತು ಆಧ್ಯಾತ್ಮ ಎಚ್. ಎಸ್.ನರಸಿಂಹಜೀಯರ್ 20

* ಬಸವ ರತ್ನಾಕರ ಮೋಟಗಿ ಮಲ್ಲಿಕಾರ್ಜುನ 23

* ವಚನಗಳಲ್ಲಿ ಪ್ರತಿಪಾದಿತ ಷಟ್‌ಸ್ಥಲ ಒಂದು ವಿವೇಚನೆ 30
ಪ್ರೊ. ಎಸ್. ಎಸ್. ಭೂಸರೆಡ್ಡಿ

ಡಾ॥ ಶ್ರೀ ಶ್ರೀ ಶಿವಕುಮಾರ ಸ್ವಾಮಿಃಗಳವರ ಜನ್ಮದಿನೋತ್ಸವದ ವರದಿ 39
ಹೆಚ್. ಬಿ. ಗಂಗಾಧರಯ್ಯ

* ಗ್ರಾಮಾಂತರ ಬಸವ ಜಯಂತಿ 46
ಹೆಚ್. ವಿ. ವೀರಭದ್ರಯ್ಯ

**ಕೋತಿಗಳ ಕೃತಜ್ಞತೆ.**

ಇದು ಕಂಡದ್ದಲ್ಲ; ಕೇಳಿದ್ದು. ಚಿತ್ರದುರ್ಗದ ಭಕ್ತರೊಬ್ಬರು ಮಠಕ್ಕೆ ಬಂದಿದ್ದರು. 1988 ನೆ ಏಪ್ರಿಲ್ ತಿಂಗಳು. ಸಂಸ್ಥೆಯ ಪ್ರಕರಣದ ಬಗ್ಗೆ ಮಾತನಾಡುತ್ತ ಒಂದು ಪ್ರಸಂಗ ಹೇಳಿದರು. ಚಿತ್ರದುರ್ಗದಲ್ಲಿ ಹತ್ತು ಹನ್ನೊಂದು ವರ್ಷದ ಹುಡುಗನೊಬ್ಬ ಕಾಯಿ ಚೂರು (ತೆಂಗಿನ ಕಾಯಿಯ ಚಿಕ್ಕ ಪುಟ್ಟ ಚೂರು) ಮಾರುವ ಕೆಲಸ ಮಾಡುತ್ತಿದ್ದ. ಬೆಳಗಿನಿಂದ ಸಂಜೆ ಐದು ಘಂಟೆಯವರೆಗೆ ಕಾಯಿಚೂರು ಮಾರಾಟ ಮಾಡುತ್ತಿದ್ದ. ಅದರಿಂದ ಬರುತ್ತಿದ್ದ ಮೂರು ನಾಲ್ಕು ರೂಪಾಯಿಗಳು ಅವನ ಮರುದಿನದ ವ್ಯಾಪಾರಕ್ಕೆ ಬಂಡವಾಳವಾಗುತ್ತಿದ್ದವು. ಮಾರಾಟವಾಗದೆ ಉಳಿದ ಕಾಯಿಚೂರುಗಳನ್ನು ಮನೆಗೆ ಹಿಂತೆಗೆದುಕೊಂಡು ಹೋಗುತ್ತಿರಲಿಲ್ಲ. ಮೇಲುದುರ್ಗದ ಮೇಲಿರುವ ಒಂದು ಕೋಡುಗಲ್ಲಿನ ಮೇಲೆ ಹೋಗಿ ಕೂರುತ್ತಿದ್ದ. ಅಲ್ಲಿ ಕೋತಿಗಳ ಸಂಚಾರ ಜಾಸ್ತಿ. ಹುಡುಗ ಹೋಗಿ ಕೂರುತ್ತಲೇ ಕೋತಿಗಳು ಬಳಿಗೆ ಬರುತ್ತಿದ್ದವು. ತನ್ನಲ್ಲಿ ಉಳಿದಿದ್ದ ಕಾಯಿಚೂರುಗಳನ್ನು ಒಂದೊಂದಾಗಿ ಒಂದೊಂದಕ್ಕೆ ಕೊಡುತ್ತ ಬರುತ್ತಿದ್ದ, ತುಂಬಾ ದಿನಗಳು ಇದು ನಡೆದು ಬರುತ್ತಿತ್ತು. ಹುಡುಗನ ಮನೆಯವರು ತುಂಬಾ ಬಡವರಾದರೂ ಅವನ ಈ ವರ್ತನೆಗಾಗಿ ಕೋಪಿಸುಕೊಳ್ಳುವುದಾಗಲಿ, ನೊಂದುಕೊಳ್ಳುವುದಾಗಲಿ ಮಾಡುತ್ತಿರಲಿಲ್ಲ. ಹೀಗಿರುವಾಗ ಒಂದು ದಿನ ಹುಡುಗ ಎಂದಿನಂತೆ ಸಂಜೆ ಕೋಡುಗಲ್ಲಿನ ಮೇಲೆ ಕುಳಿತು ಕಾಯಿಚೂರು ನೀಡಿಯಾದ ಮೇಲೆ ಇಳಿದು ಬರುವುದಕ್ಕಾಗಿ ಏಳುವಾಗ ಕಾಲುಜಾರಿ ಬೀಳುವುದರಲ್ಲಿದ್ದಾನೆ. ಕೆಳಗೆ ಬಿದ್ದರೆ ನುಚ್ಚುನೂರಾಗುವಷ್ಟು ಆಳವಾದ ಪ್ರಪಾತ. ಮೇಲೆ ನಿಂತು ಕೆಳಗೆ ನೋಡಿದರೆ ತಲೆ ಸುತ್ತು ಬರುತ್ತದೆ. ರಕ್ತದ ಒತ್ತಡ ಹೆಚ್ಚಾಗುತ್ತದೆ. ಅಂತಹ ಭೀಕರ ಅಂತ್ಯಕ್ಷಣ ಹುಡುಗನ ಬಾಳಿಗೆ ಬಂದಿತು. ಇನ್ನೇನು ಬಿದ್ದೇಬಿಟ್ಟ ಎನ್ನುತ್ತಿರುವಾಗಲೇ ಕೋತಿಗಳ ವಿಲಕ್ಷಣ ಕಿರುಚಾಟ ಕೇಳಿ ದುರ್ಗದ ಮೇಲೆ ಸಂಜೆಹೊತ್ತು ವಾಯುಸಂಚಾರಕ್ಕೆ ಬಂದ ಮಧ್ಯವಯಸ್ಕರಿಬ್ಬರು ಅತ್ತ ನೋಡುತ್ತಾರೆ. ಪವಾಡವೊಂದು ಕಣ್ಣೆದುರಿನಲ್ಲಿ ನಡೆಯುತ್ತಿದೆ. ಹುಡುಗನ ಕಾಲ ಬಳಿ ಸುತ್ತಮುತ್ತ ಸುಮಾರು ಮೂವತ್ತು ನಲವತ್ತು ಕೋತಿಗಳು ಮುತ್ತಿಕೊಂಡು ಅವನನ್ನು ಹಿಡಿದಿವೆ ಒಂದೊಂದು ಕೈಯಲ್ಲಿ. ಮತ್ತೊಂದು ಕೈಯನ್ನು ಆಸರೆಯಾಗಿ ಕೋಡುಗಲ್ಲನ್ನು ಭದ್ರವಾಗಿ ಹಿಡಿದು ಅತ್ಯಂತ ಜೋಪಾನವಾಗಿ ಹುಡುಗನಿಗೆ ಸ್ವಲ್ಪವೂ ಅಪಾಯವಾಗದಂತೆ ಮೆಲ್ಲಮೆಲ್ಲಗೆ ಕೆಳಮಟ್ಟದವರೆಗೆ ಇಳಿಸಿಕೊಳ್ಳುತ್ತವೆ. ನಡೆದದ್ದು ಏನು ? ಕಣ್ಣೀರು ಸುರಿಸುತ್ತ ಸ್ವಾಮಿ ಕೋತಿಗಳಿಂದ ಬದುಕಿ ಬಂದೆ. ಒಂದು ಚೂರು ಕಾಯಿ ಪ್ರಾಣ ಉಳಿಸಿತು ಎಂದ ಹುಡುಗ. ಪ್ರಾಣಿಗಳಲ್ಲಿರುವ ಈ ಕೃತಜ್ಞತೆ ಆಧುನಿಕ ಜನಾಂಗದಲ್ಲಿ ಮರೆಯಾಗುತ್ತಿರುವುದಕ್ಕೆ ಮರುಕ ವ್ಯಕ್ತಪಡಿಸಿದರು ಆ ಭಕ್ತರು.

(ಪ್ರಾಸಂಗಿಕವಾಗಿ ದರ್ಶನಾರ್ಥಿಗಳಿಗೆ ಹೇಳಿದ್ದು)

**ಸಿದ್ಧಗಂಗಾ ಮಾಸ ಪತ್ರಿಕೆ**
**ಶ್ರೀ ಸಿದ್ಧಗಂಗಾ ಮಠ-572104**
ತುಮಕೂರು ಜಿಲ್ಲೆ

ಪ್ರಧಾನ ಸಂಪಾದಕರು
**ಪ|| ಚನ್ನಪ್ಪ ಎರೇಸೀಮೆ**

* * *

ಸಂಪಾದಕರು
**ಹೆಚ್. ವಿ. ವೀರಭದ್ರಯ್ಯ**

* * *

ಸಹ ಸಂಪಾದಕರು
**ಬಿ. ವೀರಭದ್ರಯ್ಯ**
**ಪಿ. ಎನ್. ಚಂದ್ರಶೇಖರಯ್ಯ**

* * *

ಜಾಹೀರಾತು ವಿಭಾಗ
**ಎಂ. ರೇಣುಕಾರಾಧ್ಯ**

* * *

ವಿತರಣೆ ವಿಭಾಗ
**ಆರ್. ಎಸ್. ಮಲ್ಲೇಶಪ್ಪ**

* * *

ಪ್ರಕಾಶಕರು
**ಹೆಚ್. ಬಿ. ಗಂಗಾಧರಯ್ಯ**
ಹಳೆಯ ವಿದ್ಯಾರ್ಥಿ ಸಂಘದ ಪರವಾಗಿ

* * *

ಮುದ್ರಕರು
**ಶ್ರೀ ಸಿದ್ಧಲಿಂಗೇಶ್ವರಸ್ವಾಮಿ ಮುದ್ರಣಾಲಯ**

* * *

ಪ್ರಕಟಣೆಯ ಸ್ಥಳ
**ಶ್ರೀ ಸಿದ್ಧಗಂಗಾಕ್ಷೇತ್ರ**

ಚಂದಾ ವಿವರ
ವಾರ್ಷಿಕ ಚಂದಾ 25-00ರೂ
ಆಜೀವ ಸದಸ್ಯತ್ವ 250-00 ರೂ


## ಲೇಖಕರಲ್ಲಿ ಮನವಿ

'ಸಿದ್ಧಗಂಗಾ' ಶ್ರೀ ಸಿದ್ಧಗಂಗಾ ಮಠದಿಂದ ಪ್ರಕಟವಾಗುತ್ತಿರುವ ಮಾಸ ಪತ್ರಿಕೆ. ಶ್ರೀ ಮಠದ ಹಳೆಯ ವಿದ್ಯಾರ್ಥಿ ಸಂಘದ ಹೆಮ್ಮೆಯ ಸೇವಾ ಪುರವಣಿ. ಮೇಲಾಗಿ ಶ್ರೀ ಮಠದ ಮುಖವಾಣಿ. ಪೂಜ್ಯ ಶ್ರೀ ಶ್ರೀ ಡಾ|| ಶಿವಕುಮಾರ ಮಹಾಸ್ವಾಮಿಗಳವರ ದಿವ್ಯ ಮಾರ್ಗದರ್ಶನದಲ್ಲಿ ಮುನ್ನಡೆದಿರುವ ಪತ್ರಿಕೆ. ತ್ರಿವಿಧ ದಾಸೋಹ ಸೇವಾ ತತ್ಪರತೆಯಿಂದ ಹೆಜ್ಜೆ. ಹಾಕುತ್ತಿದೆ. ಈ ಧ್ಯೇಯ ಸಾಧನೆಗಾಗಿ ನಾಡಿನ ಗಣ್ಯ ಲೇಖಕರಿಂದ ಸಾಹಿತ್ಯ, ಸಂಸ್ಕೃತಿ, ಧರ್ಮ, ವಿಜ್ಞಾನ, ಶಿಕ್ಷಣ. ಇತಿಹಾಸ, ವೈಚಾರಿಕ, ಚಿಂತನ ಮುಂತಾದ ಲೇಖನಗಳನ್ನು ಸ್ವಾಗತಿಸುತ್ತದೆ ಅಸ್ವೀಕೃತ ಲೇಖನಗಳನ್ನು ಪಡೆಯಲು ಸಾಕಷ್ಟು ಅಂಚೆಸ್ಟಾಂಪುಗಳನ್ನು ಲಗತ್ತಿಸಿರಬೇಕು. ಲೇಖನಗಳಲ್ಲಿ ಸೂಕ್ತ ಬದಲಾವಣೆ ಮಾಡಿಕೊಳ್ಳುವ ಅಧಿಕಾರ ಸಂಪಾದಕರಿಗಿದೆ. ಅನುವಾದ, ರೂಪಾಂತರ ಲೇಖನಗಳಿಗೆ ಮೂಲ ಕೃತಿಕಾರರ ಅನುಮತಿ ಪಡೆದಿರಬೇಕು. ಸ್ವೀಕೃತ ಲೇಖನಗಳಿಗೆ ಸೂಕ್ತ ಸಂಭಾವನೆ ಕೊಡಲಾಗುವುದು.

---

"ಸಂಪಾದಕರು"
'ಸಿದ್ಧಗಂಗಾ' ಕನ್ನಡ ಮಾಸಪತ್ರಿಕೆ
ಶ್ರೀ ಸಿದ್ಧಗಂಗಾ ಕ್ಷೇತ್ರ-572104
ತುಮಕೂರು ಜಿಲ್ಲೆ.

ಇವರಿಗೆ ಕಳುಹಿಸಿಕೊಡಬೇಕಾಗಿ ಪ್ರಾರ್ಥನೆ

# ಶ್ರೀ ಸಿದ್ಧಲಿಂಗೇಶ್ವರ ವಚನ



ಊರೊಳಗೆ ಉದಕ ತುಂಬಿ ಬಾಗಿಲೆಲ್ಲಾ ಕೆಸರಾದವು ನೋಡಾ
ಮನೆಯೊಳಗೆ ಕಸ ಹೆಚ್ಚಿ ಸಸಿಯ ನೇಳಲೀಯದು ನೋಡಿರೇ
ಊರೊಳಗಣ ಉದಕವ ಹೊರಡಿಸಿ,
ಬಾಗಿಲೊಳಗಣ ಕಸವತೆಗೆದು,
ಸಸಿಯು ಸಲಹಿಕೊಂಬುದ ನೀನೊಲಿದು ಕರುಣಿಸಯ್ಯ
ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೇ.

ಪಂಚಭೂತ ಯುಕ್ತವಾದ ದೇಹವೇ ಊರು. ಅದರೊಳಗೆ ಮನಸ್ಸಿನ ವರ್ತನೆ ವಿಷಯರಸಪೂರ್ಣವಾಗಿರುವುವೇ ಉದಕ. ಅದರಿಂದ ಪಂಚೇಂದ್ರಿಯಗಳು ತುಂಬಿ ಕೆಸರಾಗಿವೆ. ಹಾಗಾಗಿ ಊರಮಧ್ಯದಲ್ಲಿ ಅಜ್ಞಾನದವಗುಣವೆಂಬ ಸದೆ ಬೆಳೆದು ಸದ್ವಿವೇಕ ವೃಕ್ಷಸ್ವರೂಪವಾದ ಇಷ್ಟಲಿಂಗದ ಸತ್ಕ್ರಿಯ ಸಮ್ಯಕ್‌ಜ್ಞಾನಗಳೆಂಬ ಕೊನರು ಕುಡಿಯಿಡಲು ಅವಕಾಶವಾಗುತ್ತಿಲ್ಲ ಮನಸ್ಸನ್ನು ಆವರಿಸಿರುವ ವಿಷಯರಸವನ್ನೂ, ವೈದ್ಯೋಪಚಾರದ ಮೂಲಕ ಉದಾತ್ತಗೊಳಿಸಿ ಪ್ರಾಣಲಿಂಗಕ್ಕೆ ಅಭಿಷೇಕಮಾಡಬೇಕು. ಪಂಚೇಂದ್ರಿಯಗಳ ಅಜ್ಞಾನದ ವರ್ತನೆಯೆಂಬ ಕೆಸರನ್ನು ಸುಜ್ಞಾನದಿಂದ ನುಡಿಸಬೇಕು. ದೇಹ ಸಂಬಂಧವಾದ ಅಜ್ಞಾನದ ಅವಗುಣವನ್ನು ಮಂತ್ರಸ್ಮರಣೆಯಿಂದ ನಿವೃತ್ತಿ ಗೊಳಿಸಬೇಕು. ಅಂಥ ಕೆಸರನ್ನು ತೆಗೆದು ಸದ್ವಿವೇಕ ವೃಕ್ಷ ಸ್ವರೂಪವಾದ ಇಷ್ಟಲಿಂಗಕ್ಕೆ ಅಷ್ಟವಿಧಾರ್ಚನೆ, ಷೋಡಶೋಪಚಾರ, ಅರ್ಚನ, ಅರ್ಪಣ ಗಳನ್ನರ್ಪಿಸಿ ಶುದ್ಧ ಬುದ್ಧಿಯನ್ನು ಕೃಪೆಮಾಡು ಎಂದು ಶ್ರೀ ಗುರುವನ್ನು ಶಿಷ್ಯನು ಬಿನ್ನವಿಸಿ ಕೊಳ್ಳುತ್ತಿದ್ದಾನೆ.

# ಸಂಪಾದಕೀಯ.

## ಬಸವ ಜಯಂತಿ

ಇದು ಜಯಂತಿಗಳ ಯುಗ ಲೆಕ್ಕವಿಲ್ಲದಷ್ಟು ಜಯಂತಿಗಳು. ದಿನಬೆಳಗಾದರೆ ಒಂದಲ್ಲ ಒಂದು ಜಯಂತಿ. ಹಾಡಿ ಹೊಗಳಿದ್ದು. ಮಾತಿನ ಮಾಲಾರ್ಪಣೆಯ ದಂಥೆಯಲ್ಲಿ ಮಹಾಪುರುಷರ ಬಾಡಿದ ಮುಖಕಾಣಲೇ ಇಲ್ಲ, ಕಂಡರೂ ಕಾಣ ದಂತೆ ಬಾಳುವ ಕಲೆ ಇಂದಿನದು. ಒಳಹೊರಗೆ ತಾಳಮೇಳವಿಲ್ಲದಂಥ ಬದುಕು. ಮಹಾಪುರುಷರ ಸ್ಮರಣೆ ಪವಿತ್ರವಾದುದೇ. ಸಂಸ್ಕೃತಿಯ ಲಕ್ಷಣವೇ ಸರಿ. ಆದರೆ ಕೇವಲ ಸ್ಮರಣೆಯೊಂದೇ ಸಾಲದು. ಅವರು ನಡೆದು ತೋರಿಸಿದ ಹಾದಿಯಲ್ಲಿ ಹೆಜ್ಜೆ ಇಡಬೇಕು. ತಪ್ಪು ಒಪ್ಪುಗಳ ಅನಾವರಣವಾಗಬೇಕು, "ಅನಾವರಣವಾದ ಮೇಲೆ ಸಿದ್ಧವಾಗಬೇಕು ಶಿಕ್ಷೆಗೆ, ಅಂಥ ಧೈರ್ಯ ಎಲ್ಲಿದೆ ? ಯಾರಲ್ಲಿ ಕಾಣುತ್ತಿದೆ ? ದೇಶವ ನ್ನಾಳುವ ನಾಯಕರು ಹೇಗಿದ್ದಾರೆ ? ಯಾರಿಗಿದ್ದಾರೆ ? ಬಸವಣ್ಣ ದೀನದಲಿತರ ಕಲ್ಯಾಣಕ್ಕಾಗಿ ತನಗಿದ್ದ ಮಂತ್ರಿ ಪದವಿಯನ್ನೇ ಬಿಟ್ಟು ಬಂದ. ಇಂದಿನವರು ತಮ್ಮ ಅಧಿಕಾರಕ್ಕಾಗಿ ನಾಚಿಕೆ ಬಿಟ್ಟು ನರ್ತನ ಮಾಡುತ್ತಿದ್ದಾರೆ, ಬಾಯಲ್ಲಿ ಬಡ ವರ ಉದ್ಧಾರ ಆಗಿದೆಯೆ ? ಜನನಾಯಕರು ಎನಿಸಿಕೊಂಡಿರುವ ಇವರಿಗೆ ಬಸವಣ್ಣ ಅನುಸರಿಸಿದ ಆಡಳಿತ ಸೂತ್ರಗಳ ರೂಪುರೇಷೆಯಾದರೂ ಗೊತ್ತಿದೆಯೇ ? ಇವರು ಸಾರಿ ಸಾರಿ ಘೋಷಿಸುತ್ತಿರುವ ಸಮಾನತೆ ಎಂಬ ಮಾತು ಕೃತಿರೂಪಕ್ಕಿಳಿದಿದೆಯೇ ? ಇನ್ನು ಬಸವಣ್ಣನ ಅನುಯಾಯಿಗಳು ಮಾಡುತ್ತಿರುವು ದಾದರೂ ಏನು ? ಜಯಂತಿ ದಿನ ಫೋಟೋ ಪೂಜಿಸಿ, ಪಾಯಸ ಸವಿದು, ವಚನ ಹಾಡಿ, ಮೆರವಣಿಗೆ ಮಾಡಿ ತೃಪ್ತರಾಗುವುದು ತಾನೆ ? ಬಸವಧರ್ಮೀಯರಲ್ಲಿಯೇ ಇಂದು ಏನೆಂಥ ಉಬ್ಬುತಗ್ಗುಗಳಿವೆ ? "ಉಂಬಲ್ಲಿ ಉಡುವಲ್ಲಿ ಕುಲವಳಿದರೂ" "ಕೊಂಬಲ್ಲಿ ಕೊಡುವಲ್ಲಿ ಕುಲವನರಸ'ದಿದ್ದರೂ ಒಳಪಂಗಡಗಳ ವ್ಯವಸ್ಥಿತ ಒಳದಾರಿ ಗಳು ಅದೆಷ್ಟೊಂದಿವೆ ! ಇದು ಬಸವಣ್ಣ ಸಾರಿದ ಧರ್ಮ ಮಾರ್ಗವೇ ? ಬಸವಣ್ಣ ಮುಚ್ಚು ಮರೆಯಿಲ್ಲನಂತೆ ಬಾಳಿದ ಮಾನವತಾವಾದಿ. ಆದರೆ ನಾವೆಂಥವರು ? ವ್ಯವಹಾರಕ್ಕೆ ಬಸವಣ್ಣ ಅಂದರೆ ಸ್ವಾರ್ಥ ಸಾಧನೆಗೆ ಬಸವಣ್ಣ. ಇನ್ನುಳಿದುದಕ್ಕೆ ನಾವು ನಾವೇ. ಬಸವಣ್ಣ ಹೃದಯವಂತ ಪುಣ್ಯಮೂರ್ತಿ. ಸದುವಿನಯ, ಮೃದು ನುಡಿಗಳೇ ಆತನ ದಿವ್ಯ ಸಂಪತ್ತು. ಭಕ್ತನಾಗಬಯಸಿದವನೇ ಹೊರತು ಜಂಗಮನಾಗಲಾಶಿಸಲಿಲ್ಲ. ಭಕ್ತಿಯನ್ನು ಪೃಥ್ವಿಯೆಂದು ತುಂಬು ಗೌರವದಿಂದ ಆರಾಧಿಸಿದ; ಆನಂದದಿಂದ ಬದುಕಿದ, 'ಕರ್ತಾರನ ಕಮ್ಮಟ" ವೆಂದು ಕರೆದ. ಬಸವಣ್ಣನ ಪ್ರಗತಿಶೀಲ ಮನೋಧರ್ಮ ತುಂಬ ತೀಕ್ಷ್ಣವಾದುದು, ಮೌಢ್ಯವನ್ನು

ಕೇವಲ ಮೂದಲಿಸಲಿಲ್ಲ. ಮುಖವೆತ್ತಿ ಮಾತಾಡಿದ. ಬಸವಜಯಂತಿ ಹಬ್ಬವಾದರೆ ಸಾಲದು. ಆತ್ಮಾವಲೋಕನದ ಕನ್ನಡಿಯಾಗಬೇಕು. ಬಸವಣ್ಣ ಆಭರಣವಾದರೆ ಸಾಲದು. ಆತ್ಮಪರೀಕ್ಷೆಯು ಸಾಧನವಾಗಬೇಕು. ಬಸವಣ್ಣನ ವಚನಗಳ ಒಂದೊಂದು ಮಾತೂ ನಮ್ಮನ್ನು ತಿದ್ದುವ 'ಪ್ರಸಾದ'ವಾಗಬೇಕು. ಬಸವಣ್ಣ, ಬಸವಜಯಂತಿಗಳು ಅರ್ಥಪೂರ್ಣವಾಗಬೇಕಾದರೆ ಬಸವಣ್ಣನ ಸಮಾಜದವರೆಂದು ಹೇಳಿಕೊಳ್ಳುವ ಜನಾಂಗದ ರೀತಿನೀತಿಗಳು 'ಅನ್ಯರಿಗೆ ಅಸಹ್ಯಪಡ'ದಂತಿರಬೇಕು. ಬಸವಣ್ಣನಂಥ ಮಹಾಮಾನವತಾವಾದಿಯ ಪರಂಪರೆಯುಳ್ಳ ಸಮಾಜದ ಸಂಘ ಸಂಸ್ಥೆಗಳು ಮಠಮಾನ್ಯಗಳು ತಮ್ಮ ಸೇವಾ ಜೀವನವನ್ನು ಲೋಕಕಲ್ಯಾಣಕ್ಕೆ ಅರ್ಪಿಸುವಲ್ಲಿ ಇನ್ನಷ್ಟು ಶ್ರಮಿಸಬೇಕು. ಸಮಾಜದಲ್ಲಿರುವ ದೀನದಲಿತರನ್ನು ನೆಮ್ಮದಿಯಿಂದ ಬಾಳುವಂತೆ ಯೋಜನೆಗಳನ್ನು ರೂಪಿಸಬೇಕು. ಕರ್ನಾಟಕದ ಹೆಮ್ಮೆಯ ಪರಂಪರೆಗೆ ಅಪಾರ ಕೊಡುಗೆಯನ್ನು ಕೊಟ್ಟಿರುವ ಬಸವಣ್ಣನ ಧರ್ಮ ದವರು 'ಬಸವ ಜಯಂತಿ' ಅರ್ಥಪೂರ್ಣವಾಗುವಂತೆ ಮುಂಬರುವ ಚುನಾವಣೆಗಳಲ್ಲಿ 'ಶುದ್ಧಚಾರಿತ್ರ"ವುಳ್ಳವರಿಗೆ ಮಾತ್ರ ಬೆಂಬಲಿಸಬೇಕು

---

## ಆಜೀವ ಸದಸ್ಯರುಗಳಲ್ಲಿ ಒಂದು ಮನವಿ.

ಸಿದ್ಧಗಂಗಾ ಪತ್ರಿಕೆಯ ಅನೇಕ ಆಜೀವ ಸದಸ್ಯರುಗಳ ವಿಳಾಸಗಳು ಬದಲಾಗಿರುವುದರಿಂದ ಕಾರ್ಯಾಲಯದಿಂದ ಕಳುಹಿಸಿದ ಸಂಚಿಕೆಗಳು ಕೆಲವು ಸದಸ್ಯರುಗಳಿಗೆ ತಲುಪದೆ ಹಿಂತಿರುಗುತ್ತಿವೆ. ದಯವಿಟ್ಟು ನಿಮ್ಮ ಬದಲಾದ ವಿಳಾಸಗಳನ್ನು ಆಗಿಂದಾಗ್ಗೆ ಪತ್ರಿಕಾ ಕಾರ್ಯಾಲಯಕ್ಕೆ ಕಳುಹಿಸಿ ಕೊಡುವುದರ ಮುಖೇನ "ಸಿದ್ಧಗಂಗಾ" ನಿಮಗೆ ಕ್ರಮವಾಗಿ ತಲುಪಲು ಸಹಕರಿಸಬೇಕಾಗಿ ಪ್ರಾರ್ಥನೆ. **ತಮ್ಮ ಸದಸ್ಯತ್ವದ ನಂಬರನ್ನು ತಪ್ಪದೇ ತಿಳಿಸಿರಿ.**

ಪ್ರಕಾಶಕರು.

---

ಅನಗತ್ಯ ಕಾರಣಕ್ಕೆ ವಿದ್ಯುತ್ ಸರಬರಾಜು ಬಳಕೆಯಾಗಬಾರದು, ಇಂಧನ ಕ್ಕಾಗಿ ಹಪಹಪಿಸುವ ಕೃತಕ ಅಭಾವ ಸೃಷ್ಟಿಯಾಗಬಾರದು. ದ್ವಿಚಕ್ರ ವಾಹನಗಳ ಓಡಾಟ ಹೆಚ್ಚಬಾರದು. ಬದಲಾಗಿ ಬೈಸಿಕಲ್ ಬಳಕೆ ಹೆಚ್ಚಾಗಬೇಕು. ಅದರಿಂದ ಪರಿಸರ ಮಾಲಿನ್ಯವೂ ಸಾಧಿಸೀತು. ರಾಜಕೀಯ ಪಕ್ಷಗಳು ಇನ್ನಾದರೂ ಕಲಹ, ಕಚ್ಚಾಟಗಳನ್ನು ಬಿಟ್ಟು ದೇಶದ ಹಿತ ದೃಷ್ಟಿಯಿಂದ ಲೋಕಸಭೆ, ರಾಜ್ಯಸಭೆ, ವಿಧಾನಸಭೆ, ವಿಧಾನ ಪರಿಷತ್‌ಗಳಲ್ಲಿ ಕಾರ್ಯನಿರತವಾಗಬೇಕು. ಕಾಲ ಕಾಲಕ್ಕೆ ನಿಗದಿತವೇಳೆಗೆ ರೂಪಿಸಿದ ಯೋಜನೆಗಳು ಪೂರೈಸಬೇಕು, ವಿನಾಕಾರಣ ವಿಳಂಬ ಸಲ್ಲದು. ಮುಂದಿನ ಜನಾಂಗ ಇಂದಿನವರನ್ನು ಶಪಿಸುವಂತಾಗಬಾರದು. ಮಂತ್ರಿಗಳ, ಶಾಸಕರ, ಅಧಿಕಾರಿಗಳ ಜೀವನ ವಿಧಾನದಲ್ಲಿ ಸುಧಾರಣೆಯಾಗಬೇಕು, ಸರಳ ಜೀವನವಾಗಿ ಮಾರ್ಪಾಡಾಗಬೇಕು. ಸಹಸ್ರಾರುಕೋಟಿ ಸಾಲದ ಹೊರೆ ಹೊತ್ತಿರುವ ಭಾರತೀಯರಿಗೆ ಇಂದು ಭೋಗ-ವೈಭವಗಳ ಬದುಕು ಆದರ್ಶಪೂರ್ಣವಲ್ಲ. ಸ್ವಾವಲಂಬನ ಬರುವವರೆಗೆ ಸಂಯಮದ ಬದುಕು ಬೇಕು. ಕೋಮುಕಲಹ, ಮಂದಿರ-ಮಸೀದಿ, ಅಧಿಕಾರ ಗದ್ದುಗೆಗಳಿಗಾಗಿ ಅಮಾಯಕರ ಬಲಿಯಾಗುವುದನ್ನು ವಿಚಾರವಂತರೆಲ್ಲ ನೈತಿಕ ಧೈರ್ಯ ಸ್ಥೈರ್ಯಗಳಿಂದ ಪ್ರತಿಭಟಿಸಬೇಕು. ಅನೈತಿಕ ಮಾರ್ಗದಿಂದ ಮುಖಂಡರಾಗುವವರನ್ನು ಮೂಲೋತ್ಪಾಟನ ಮಾಡಬೇಕು. ಯುವ ಜನಾಂಗ ಈಗ ದಾರಿತಪ್ಪದಂತೆ-ಈಗಾಗಲೇತಪ್ಪಿಸಾಕಷ್ಟು ಹಾಗಿಯಾಗಿರುವುದೇ ಸಾಕು-ಎಚ್ಚರಿಕೆಯಿಂದ ನೋಡಿಕೊಳ್ಳಬೇಕು. ಇದಕ್ಕೆಲ್ಲ ಸಂಕಲ್ಪಶಕ್ತಿಬೇಕು. ಅಂಥ ಆತ್ಮಬಲ ನಮ್ಮದಾಗಬಹುದೆ?

---

ಮಾನವತ್ವದ ಸಂಪಾದನೆ ಜೀವನದಲ್ಲಿ ಮೊದಲ ಹಂತ. ಆ ಹಂತ ಮುಟ್ಟಿದ ಮೇಲೆ ಅದರಲ್ಲೇ ಅವನು ತೃಪ್ತನಾಗಬಾರದು. ಅವನ ಅಂತಿಮ ಗುರಿ ಮಾನವತ್ವ ಮೀರಿ ದೇವತ್ವ ಸಂಪಾದನೆ ಮಾಡುವುದಾಗಿರಬೇಕು. ಜೀವನೇ ಶಿವನಾಗುವುದು, ಬ್ರಹ್ಮವಾಗುವುದು, ಅಂಗವೇ ಲಿಂಗವಾಗುವುದು.

**- ಶಿವಕುಮಾರ ವಾಣಿ.**

## ಶ್ರೀ ಸುದುದ್ದಾನೇಶ್ವರ ಶತಕಂ

(ಮುಂದುವರಿದುದು)

ಕಲ್ಲು ಕುಟಕಮನೆನೆದ ಭಾವಕೆ
ಕಲ್ಲೆ ವಿಗ್ರಹವೆನಿಸಿ ವರಗಳ
ಸಲ್ಲಿಸುತ್ತಿರೆ ಕಲ್ಲಿಗನ್ಯವೆನಿಪ್ಪ ಚೇತನವೂ ।
ಎಲ್ಲ ವರಗಳ ಕೊಡುವನಾಗನೆ
ಎಲ್ಲಿ ಕರೆದರು ಓಗೊಡನೆ ದೃಢ
ಶಾಲಿಯಾಗಿರುವಂತೆ ಉದ್ದಾನೇಶ ದಯವಾಗೋ ॥

ಮಣ್ಣ ನಂಬೀ ತನುವುಕುಂದಿತು
ಹೊನ್ನ ನಂಬೀ ಮನವು ಕುಂದಿತು.
ಹೆಣ್ಣು ತನುಮನ ವಿಹಪರಂಗಳ ನುಂಗಿರೆವು ಮೂರೂ !
ತನ್ನ ಸೇವೆಗೆ ಇವಕೆ ನಾನ
ಲ್ಲೆನ್ನೆದುಃಖವು ನಂದಿ ಸೌಖ್ಯಕೆ
ಕಣ್ಣುಬಂದಪುದೆಂದ ಉದ್ದಾನೇಶ ದಯವಾಗೋ ॥

ನರರ ಮನೆಯೊಳು ಸಾಕಲದಿದೆಂ
ದಿರುಳು ಹಗಲೂ ಕಾಡುತಿರುವರು
ಪರಕಿಸಲ್ಮಾನಕಿರದು ಶಾಂತಿಯದೊಂದು ಗೋವ್ವಾಕೇ ।
ತರಗಸೇಕಿಂದ ಪ್ಸೃತ ಕರೆವುದು.
ಪರನು ಶಾಂತಿಯ ತಹುದ ಗೋವನು
ಪೊರೆಯಿರೆಂದಾ ಜೀಯ ಉದ್ದಾನೇಶ ದಯವಾಗೋ ॥

ಲೋಕದೊಳು ಸಂಸಾರದಂಗಡಿ
ಯೇಕೆನಲು ಗುರುಶಿಶುವು ಗೋವ್ಗಳ
ನೇಕರ ತಿಥಿಗಳನ್ನು ಸೇವಿಸಿ ಭಾವಶುದ್ಧಿಯಲೀ ।
ಶಾಕುಮತಿಯುಳಿದುಳಿದ ನಿಜಸುವಿ
ವೇಕನಿಧಿ ಸಂಗ್ರಹಿಸಲೆನುತರೆ
ಜೋಕೆಯರುಪಿದ ಜೀಯ ಉದ್ದಾನೇಶ ದಯವಾಗೋ ॥

ನೆರಳನತಿಥಿಗೆ ಕೊಡಲುಮನೆಯಿದು
ಕರುಹೆಯಡಿಗೆಯ ಮಾಡಲತಿಥಿಗೆ
ಧರಣಿ ಧಾನ್ಯಕೆ ಪಶುವು ಹೈನಿಗೆ ತರಳನವಸದಕೇ ।
ಸಿರಿಯು ಪಾತ್ರದಿ ದಾನ ಮಾಡಲು
ಹರನು ಕೊಟ್ಟಿಹವೆಂದು ತಿಳಿಸಿದ
ಶರಣ ಗಾತ್ರನೆ ಜೀಯ ಉದ್ದಾನೇಶ ದಯವಾಗೋ ॥

ದಂತೆ ಮುಖ್ಯ ಅಂಶಗಳ ಪ್ರಸ್ತಾಪ ಮಾಡಿದಮೇಲೆ ಬಸವಣ್ಣನವರ ವ್ಯಕ್ತಿತ್ವವನ್ನು ಕುರಿತು ತಮ್ಮದೇ ಆದ ವಿಶಿಷ್ಟ ಶೈಲಿಯಲ್ಲಿ ತಮ್ಮ ಜೀವನ ದರ್ಶನವನ್ನು ಮನಮುಟ್ಟುವಂತೆ ತೆರೆದಿಟ್ಟರು. ಬಸವಣ್ಣನವರ ಪೂರ್ಣಕ್ರಾಂತಿಯ ಸಂದೇಶದ ಪವಾಡ ಸ್ಥಿತಿಯನ್ನು ವರ್ಣಿಸುವಾಗ ಆ ತನ್ಮಯತೆ ನಿಜವಾಗಿ ಸ್ಮರಣೀಯವಾದುದು.

ಈ ಘಟನೆಯನ್ನು ನೆನಪು ಮಾಡಿಕೊಳ್ಳಲು ಅನೇಕ ಕಾರಣಗಳಿವೆ. ಅಂದು ಪ್ರಬಂಧಗಳ ಮಂಡನೆಯಾಗುವಾಗ ಸಭೆಯಲ್ಲಿ ಅಲ್ಲೊಬ್ಬರು ಇಲ್ಲೊಬ್ಬರು ಆಕಳಿಸುವುದನ್ನು ತೂಕಡಿಸುವುದನ್ನು ನೋಡಿದ್ದೆ. ಆಕಳಿಕೆಯಲ್ಲಿ ಮುಚ್ಚಿದ ಕಣ್ಣು ಮುಚ್ಚಿತ್ತು. ಆದರೆ ಆ ವ್ಯಕ್ತಿತ್ವದ ಎಚ್ಚರದ ಹಾಗೂ ಜಾಗರದ ಸ್ಥಿತಿ ನಿಜವಾಗಿ ನನ್ನನ್ನು ಬೆರಗುಗೊಳಿಸಿತು.

ಬೆಳಗಿನ ಜಾವ ಸುಮಾರು ಮೂರು ಘಂಟೆಗೆ ಆರಂಭವಾಗುವ ದಿನಚರಿ ಸ್ವಾಮೀಜಿಯದೆಂದು ಬಲ್ಲೆ. ಬೆಳಗಿನ ಜಾವ ಏಳುತ್ತಿದ್ದಂತೆಯೆ ಪ್ರಾತಃ ವಿಧಿಗಳಾದ ಮೇಲೆ ಯೋಗಾಸನಗಳನ್ನು ಮುಗಿಸಿ. ಪೂಜೆಗೆ ಹೊರಟರೆಂದರೆ ಮುಗಿಯಿತು ರಿಹರನ ಪುಷ್ಪರಗಳೆ ಸೊಗಸನ್ನು ಮತ್ತೆ ಬಸವರಾಜದೇವರ ರಗಳೆಯಲ್ಲಿ ಬರುವ ಸವಣ್ಣನವರ ಪೂಜಾ ವೈಖರಿಯ ವಿಶಿಷ್ಟತೆಯನ್ನು ಅರಿಯ ಬೇಕೆನ್ನಿಸಿದ್ದವರು ಸ್ವಾಮೀಜಿಯವರ ಶಿವಪೂಜಾ ತತ್ಪರತೆಯನ್ನು ಒಮ್ಮೆ ನೋಡಬೇಕು. ಆನಂದ ಮಯರಾಗಿ ಶಿವಪೂಜೆ ನಿರತರಾಗಿ ಪೂಜೆ ದಿನದ ಕಾರ್ಯದ ಒಂದು ಪವಿತ್ರಭಾಗ ಮುಗಿಸುವ ವೇಳೆಗೆ ಸರಿಯಾಗಿ ಬಟ್ಟಲಿನಲ್ಲಿ ಹಾಲಿನಲ್ಲಿ ಬೆರೆಸಿಟ್ಟ ಬೇವಿನರಸ ಸಿದ್ಧವಾಗಿರುತ್ತದೆ. ಬೇವಿನ ಚಕ್ಕೆಯನ್ನು ಚೆನ್ನಾಗಿ ಕುದಿಸಿದ ನೀರಿಗೆ ಹಾಲು ಬೆರಸಿದರೆ ಗುಲಾಬಿ ವರ್ಣಕ್ಕೆ ತಿರುಗುವುದು. ಅದನ್ನು ನೋಡಿದ ಭಕ್ತರೊಬ್ಬರು ಇದೇನೊ ವಿಶೇಷ ರೀತಿಯ ಸಿಹಿಯಾದ ಪೇಯವಾಗಿರಬೇಕೆಂದು ಅಡಿಗೆಯವನನ್ನು ಆರಂಗ ಕೇಳಿ ಸ್ವಲ್ಪ ಗುಟುಕರಿಸುತ್ತಿದ್ದಂತೆ ಮುಖವೆಲ್ಲ ಹುಳ್ಳಗಾಗಿ ಹೋಯಿತಂತೆ. ಬೇವಿನ ರಸವನ್ನು ಸವಿದಾಗ ಒಂದು ಲೋಟ ಆ ರಸವನ್ನು ಸೇವಿಸಿದಮೇಲೆ ಸೈಂಧ್ರಲವಣ ಮಿಶ್ರಿತವಾದ (ಹುಳಿ ಕಾರಗಳಿಂದ ದೂರವಾದ) ಅಲ್ಪಾಹಾರವನ್ನು ಸ್ವೀಕರಿಸಿದಮೇಲೆ ಪೀನವನ್ನು ಧರಿಸಿ ಹಣೆಯ ತ್ರಿಸ್ಕಂದ್ರ ಮರೆಯಾಗದಂತೆ ಕಾವಿಯ ಪೇಟವನ್ನು ಧರಿಸಿದರೆ ದಿನದಕೆಲಸಕ್ಕೆ ಸಿದ್ಧವಾದಂತೆಯೇ. ನೇರ ಕಛೇರಿಗೆ ಬಂದು ಕುಳಿತು ಕೊಳ್ಳುತ್ತಾರೆ. ಅಷ್ಟು ಹೊತ್ತಿಗೆ ಸುಮಾರು ಬೆಳಗಿನಜಾವ ಐದೂವರೆ ಅಥವಾ ಆರು ಘಂಟೆ ಅಲ್ಲಿಂದ ತಮ್ಮನ್ನು ನೋಡಲು ಬಂದವರಿಗೆ ದರ್ಶನ ಆಶೀರ್ವಾದಗಳು ಭಕ್ತಾದಿಗಳು ಕಾಲೇಜುಗಳ ವ್ಯವಹಾರಕ್ಕೆ ಸಂಬಂಧಿಸಿದ ವಿಧವಿಧವಾದ ರೀತಿಯ ವಿದ್ಯಾರ್ಥಿಗಳು ಪೋಷಕರು ಆಡಳಿತಗಾರರು ಮತ್ತು ಸಂದರ್ಶಕರು ಮಧ್ಯೆ ಮಧ್ಯೆ ಆಡಳಿತಾತ್ಮಕ ಸಮಸ್ಯೆಗಳು ಅವುಗಳಿಗೆ ಪರಿಹಾರ ಚಕ್ಕುಗಳಿಗೆ ಸಹಿ ಸಲಹೆ ಸೂಚನೆಗಳು.

ಸಿದ್ಧಗಂಗೆ ಸ್ವಾಮೀಜಿ ಇಂದು ಮಹಾನ್ ಸಂಸ್ಥೆಯಾಗಿದ್ದಾರೆ. ಅದಕ್ಕಿಂತಲೂ ಮುಖ್ಯವಾಗಿ ಮಾರ್ಗದರ್ಶಕ ಸತ್ವವಾಗಿದ್ದಾರೆ.

ಸುಮಾರು ಆರುದಶಕಗಳ ಹಿಂದೆ ಇದ್ದ ಸಿದ್ಧಗಂಗೆಯನ್ನು ಕಂಡವರು ಈಗಿನ ಸಿದ್ಧಗಂಗೆಯ ಕ್ಷೇತ್ರವನ್ನು ನೋಡಿದರೆ ತಟ್ಟನೆ ನಂಬಲಾಗದು. ಈಗಿನ ಸಿದ್ಧಗಂಗಾ ಕ್ಷೇತ್ರ ಒಂದುಪವಾಡದಂತೆ ತೋರಿದರೆ ಬೆರಗಾಗಬೇಕಿಲ್ಲ.

ಉದ್ದಾನಶಿವಯೋಗಿಗಳ ಆಶೀರ್ವಾದ ಬಲದಿಂದ ಬಂದ ರುದ್ರಾಕ್ಷಿಸರ ಹಾಗೂ ಜೋಳಿಗೆಯನ್ನು ಪಡೆದ ಶ್ರೀ ಶಿವಣ್ಣನವರು, ಶ್ರೀಮನ್ನಿರಂಜನ ಪ್ರಣವ ಸ್ವರೂಪಿ ಡಾ|| ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳಾದದ್ದು ಬೇರೆಯಲ್ಲ. ಇಂದಿನ ಶ್ರೀ ಸಿದ್ಧಗಂಗಾ ಕ್ಷೇತ್ರ ಬೇರೆಯಲ್ಲ. ಇಲ್ಲಿರುವ ಕಟ್ಟಡಗಳು ಮೇಲೇಳುವಾಗ ಪೂಜ್ಯ ಸ್ವಾಮೀಜಿಯವರು ತಾವೂ ಇತರರ ಜೊತೆಕಲ್ಲು ಇಟ್ಟಿಗೆಗಳನ್ನು ಹೊತ್ತಿದ್ದಾರೆ. ಹೊಲವನ್ನು ಉತ್ತಿದ್ದಾರೆ, ಕಳೆ ಕಿತ್ತಿದ್ದಾರೆ, ಬೆಳೆ ಬೆಳೆದಿದ್ದಾರೆ. ಈಗ ಕಾಣುವ ಸಿದ್ಧಗಂಗಾ ಕ್ಷೇತ್ರದ ಅಂಗುಲಂಗುಲದಲ್ಲಿಯೂ ಡಾ|| ಶಿವಕುಮಾರ ಮಹಾಸ್ವಾಮೀಜಿಗಳವರ ಶ್ರಮದ ಹಾಗೂ ತಪಸ್ಸಿನ ಫಲವನ್ನು ಕಾಣಬಹುದಾಗಿದೆ.

ಶ್ರೀ ಮಠದಲ್ಲಿ ನಡೆಯುವ ದಾಸೋಹ ಒಂದು ಐತಿಹಾಸಿಕ ಸಂಗತಿಯಾಗಿದೆ. ಎಷ್ಟೋ ದಶಕಗಳ ವರ್ಷಗಳ ಹಿಂದೆ ಹೊತ್ತಿಸಿದ ದಾಸೋಹದ ಅಡಿಗೆಮನೆಯ ಒಲೆಯಲ್ಲಿ ಸದಾ ಬೆಂಕಿ ಆರಿಲ್ಲ. ಅದು ನಿರಂತರವಾಗಿ ಉರಿದು ಜನರ ಹಸಿವಿನ ಬೆಂಕಿಯನ್ನು ತಣಿಸಿದೆ. ಇಲ್ಲಿಯ ದಾಸೋಹದ್ದೇ ವಿಶಿಷ್ಟತೆ. ಸಾರುಮಾಡುವ ದೊಡ್ಡಪಾತ್ರೆಯೊಳಕ್ಕೆ ಮತ್ತೆ ಮತ್ತೆ ನೀರು, ಹುಳಿ, ಕಾರ, ಉಪ್ಪು ಕಾಳುಗಳು ಸೊಪ್ಪು ತರಕಾರಿಗಳು ಸೇರುತ್ತಲೇ ಇರುತ್ತವೆ. ಉರಿಯುವ ಬೆಂಕಿ ಇದನ್ನು ಕುದಿಸುತ್ತಲೇ ಇರುತ್ತದೆ. ಪಕ್ಕದ ಇನ್ನೊಂದು ಕೊಪ್ಪರಿಗೆಯಲ್ಲಿ ಮುದ್ದೆಯ ಎಸರು ಕುದಿಯುತ್ತಲೇ ಇರುತ್ತದೆ. ಬಂದ ಭಕ್ತಾದಿಗಳು ದೊಡ್ಡಸೌಟುಗಳನ್ನು ಹಿಡಿದು ಉರಿಯುವ ಜೋಡೊಲೆಗಳ ಪಕ್ಕದಲ್ಲಿ ನಿಂತು ಸಾರನ್ನು ಬೆರೆಸುತ್ತಲೇ ಇರುತ್ತಾರೆ. ಪಕ್ಕದ ಕುದಿಯುವ ಮುದ್ದೆಎಸರಿನಲ್ಲಿ ಕವೆಗೋಲನಿಟ್ಟು ಮುದ್ದೆಯಾದ ಹಿಟ್ಟನ್ನು ತಿರುಗಿಸುತ್ತಾ ತಿರುಗಿಸುತ್ತಾ ಹದದ ಕೆಂಪು ಬರುತ್ತಿದ್ದಂತೆ ಪಕ್ಕಕ್ಕೆ ಆ ಬಿಸಿ ಬಿಸಿ ಹಿಟ್ಟನ್ನು ತೊಳೆದ ಕಲ್ಲುಚಪ್ಪಡಿಗಳ ಮೇಲೆ ಸುರಿಯುತ್ತಿದ್ದಂತೆ ಪಕ್ಕದ ಬೋಗುಣಿಯಲ್ಲಿ ಕೈಯೊದ್ದೆ ಮಾಡಿಕೊಳ್ಳುತ್ತಾ ಮುದ್ದೆಗಳನ್ನುಂಡೆ ಉಂಡೆಗಳಾಗಿ ಮಾಡಿ ಪಕ್ಕದಲ್ಲಿ ಸುರಿಯುತ್ತ ಹೋಗುತ್ತಾರೆ. ಮಠದವರಾರು ಅಡಿಗೆಯವರಾರು ದಾಸೊಹಕ್ಕೆ ಬಂದವರಾರು ಎಂಬ ಭೇದವಿಲ್ಲ. ಹಿರಿಯ ಅಡಿಗೆಯವನು ಮಾತ್ರ ಉಪ್ಪು ಕಾರ ಹುಳಿ ಹೆಚ್ಚು ಕಡಿಮೆಯಾಗದಂತೆ ಎಚ್ಚರ ವಹಿಸಲು ನಿಂತಿರುತ್ತಾನೆ. ಹಾಗೆ

ಮುದ್ದೆ ಕೂಡ ಗಂಟುಗೊಳ್ಳದ ಹಾಗೆ, ಹದಮೀರದ ಹಾಗೆ, ಉಂಡೆಗೊಳ್ಳದಹಾಗೆ ನಡೆಯುವುದನ್ನು ಕಣ್ಣಂಚಿನಲ್ಲೆ ನಿರ್ವಹಿಸುತ್ತಿರುತ್ತಾನೆ, ನೀವು ಸ್ವಾಮೀಜಿಯವರನ್ನು ದರ್ಶನ ಮಾಡಿದರೆಸ್ನಿ ಅವರ ಮೊದಲಮಾತು ನಿಮ್ಮ ಪ್ರಸಾದವಾಯಿತೆ ? ಮತ್ತೆ ಮತ್ತೆ ಕ್ಷೇತ್ರಕ್ಕೆ ಬರುವ ಭಕ್ತಾದಿಗಳೆಲ್ಲರ ನೆನಪು ಇಟ್ಟು ಹೆಸರೆತ್ತಿ ಮಾತನಾಡು ವುದು ಸ್ವಾಮೀಜಿಯವರ ಕ್ರಮ. ಹೊಸದಾಗಿ ಬಂದವರನ್ನು ತಟ್ಟನೆ ಗುರುತಿಸಿ ನೀವು ಎತ್ತಕಡೆಯವರು ಮಳೆ ಬೆಳೆ ಹೇಗಿದೆ ಎನ್ನುವ ಆ ಅಕ್ಕರೆಯನ್ನು ಗಮನಿಸ ಬೇಕು. ಇಡೀ ಜಗತ್ತನ್ನೇ ಪ್ರೀತಿಸುವಂತ ದೊಡ್ಡ ಹೃದಯ ಅದು

ಇಂದು ಶ್ರೀ ಕ್ಷೇತ್ರ ವಿದ್ಯೆಗಾಗಿ ಮಾಡಿರುವ ಸೇವೆ ಬಹುಮುಖವಾದುದು. ಅಲ್ಲಿರುವ ಸಂಸ್ಕೃತ ಶಾಲೆ ಈಗ ಸಂಸ್ಕೃತದ ಕಾಲೇಜಾಗಿ ಸಂಸ್ಕೃತ ಜ್ಞಾನದ ಮುಕ್ತ ವಿಶ್ವ ವಿದ್ಯಾಲಯದಂತಿದೆ. ಪ್ರೌಢಶಾಲೆಗಳು, ಕಾಲೇಜುಗಳು ಶಿಕ್ಷಣದ ಕಾಲೇಜುಗಳು ಇಂಜಿನಿಯರಿಂಗ್ ಕಾಲೇಜು ಹೀಗೆ ಬಹುರೂಪದಲ್ಲಿ ಹರಡಿಕೊಂಡಿರುವ ಶಿಕ್ಷಣಸಂಸ್ಥೆ ಗಳು ಇಂದು ಒಂದು ವಿಶ್ವವಿದ್ಯಾಲಯ ವಾಗಿ ನಿಲ್ಲಬಲ್ಲಷ್ಟು ಗಟ್ಟಿ ನೆಲಗಟ್ಟನ್ನು ಪಡೆದಿವೆ.

ಒಂದು ಕಡೆ ಅನ್ನದಾನ ಇನ್ನೊಂದುಕಡೆ ವಿದ್ಯಾದಾನ ಎರಡನ್ನೂ ನಡೆ ಸುತ್ತಿರುವ ಶ್ರೀಗಳವರು ಅದಕ್ಕಿಂತ ಹೆಚ್ಚಿನ ಮಹತ್ವದ ಕಾರ್ಯವೊಂದನ್ನು ಈಗ್ಗೆ ಹತ್ತುವರ್ಷಗಳಿಗೆ ಹಿಂದೆಯೇ ಕಾರ್ಯ ರೂಪಕ್ಕೆ ತರಲು ಯೋಚಿಸಿದರು. ಅದೇ ಗ್ರಾಮಾಂತರ ಬಸವಜಯಂತಿ ಕಾರ್ಯಕ್ರಮ. ಬಸವಣ್ಣನವರ ಬದುಕಿನ ಎತ್ತರಕ್ಕೆ ಮಾರುಹೋದ ಶ್ರೀಗಳವರು ಅಂಥ ವ್ಯಕ್ತಿತ್ವದ ಪರಿಚಯವನ್ನು ಗ್ರಾಮಾಂತರದ ಜನ ಸಾಮಾನ್ಯರೆಲ್ಲರಿಗೂ ಮಾಡಿಕೊಡುವ ಪ್ರಯತ್ನ ಮಾಡಿದ್ದು ಮಹತ್ತರವಾದದ್ದು ಈ ಬಸವ ಜಯಂತಿಯ ಸ್ಥೂಲ ರೂಪರೇಷೆಗಳನ್ನು ಗಮನಿಸಿದರೆ ಈಯೋಜನೆಯ ಹಿಂದಿರುವ ಶ್ರೀಗಳವರ ಮಹಾದರ್ಶನ ಯಾರನ್ನಾದರೂ ಅಚ್ಚರಿಗೊಳಿಸುತ್ತದೆ. ಯಾರಾದರೂ ಭಕ್ತರು ಶಿವಪೂಜೆಗೆ ಕರೆದರೆ ಅದೂ ಗ್ರಾಮಾಂತರ ಪ್ರದೇಶದಿಂದ ಭಕ್ತರು ಕರೆದರೂ ಸದಾ ಓಗೊಡುವ, ಶ್ರೀಗಳವರು ಅಂದು ಬೆಳಗಿನಿಂದ ಬಸವ ಣ್ಣನವರ ಬಗ್ಗೆ ಚೆನ್ನಾಗಿ ಬಲ್ಲವರೂ ಹಾಗೆಯೇ ಜನರ ಮನಸ್ಸಿಗೆ ಮುಟ್ಟುವಂತೆ ಆವಿಚಾರಗಳನ್ನು ಮಂಡಿಸಬಲ್ಲವರೂ ಆದ ಸಾಹಿತಿ ವಿದ್ವಜ್ಜನರನ್ನು ಆಹ್ವಾನಿಸಿ ಬಸವಣ್ಣನವರ ಬದುಕಿನ ವಿವಿಧ ಮುಖಗಳ ಪರಿಚಯ ಅನುವು ಮಾಡಿಕೊಡು ತ್ತಾರೆ. ಅಷ್ಟೇ ಅಲ್ಲ ಆ ಸಂದರ್ಭದಲ್ಲಿ ಮುಖ್ಯವಾಗಿ ಡಾ|| ತಿಪ್ಪೇರುದ್ರಸ್ವಾಮಿ ಯವರು ಬರೆದಿರುವ "ಕರ್ತಾರನ ಕಮ್ಮಟ" ಎಂಬ ಬಸವಣ್ಣನವರ ಬದುಕನ್ನು ಕುರಿತ ಬೃಹತ್ ಗ್ರಂಥವನ್ನು ಅತ್ಯಂತ ಸುಲಭ ಬೆಲೆಗೆ ಅಂದರೆ 25 ರೂಪಾಯಿ ಗಳಿಗೆ ಮಾರಾಟ ಮಾಡುವ ವ್ಯವಸ್ಥೆಯನ್ನು ಮಾಡಿದ್ದಾರೆ. ಅದಕ್ಕಿಂತ ಮುಖ್ಯ ವಾದದ್ದು ಎಂದರೆ ಅಂದು ರಾತ್ರಿ ಬಸವಣ್ಣನವರ ಬದುಕನ್ನು ಕುರಿತ ನಾಟಕ

ಪ್ರದರ್ಶನ. ಈ ಪ್ರದರ್ಶನಕ್ಕಾಗಿ ಶ್ರೀ ಮಠವೇ ಒಂದು ನಟವರ್ಗವನ್ನು ರೂಪಿಸಿದೆ. ರಂಗ ಪರಿಕರಗಳನ್ನು ಸಿದ್ಧಪಡಿಸಿದೆ. ಮತ್ತೆ ಒಂದು ಅರ್ಥದಲ್ಲಿ ಇದನ್ನು ಶ್ರೀ ಸಿದ್ಧಲಿಂಗೇಶ್ವರ ನಾಟಕಮಂಡಳಿ ಎಂದರೂ ಆದೀತು. ಆಶ್ಚರ್ಯ ಎಂದರೆ ಬೆಳಗಿನಿಂದ ಬಸವಣ್ಣನವರನ್ನು ಕುರಿತ ವಿಚಾರ ಗೋಷ್ಠಿಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡ ಶ್ರೀಗಳವರು ರಾತ್ರಿ 10 ಗಂಟೆಗೆ ಆರಂಭವಾಗಿ ಬೆಳಕು ಹರಿಯುವವರೆಗೂ ನಡೆಯುವ ಈ ನಾಟಕವನ್ನು ತಾವೇ ಮುಂದೆಕುಳಿತು ನೋಡುವುದು. ಅಷ್ಟೇ ಅಲ್ಲ ನಾಟಕ ಮುಗಿದಾದಮೇಲೆ ಅಭಿನಯವನ್ನು ಕುರಿತು ಬೇರೆಯವರು ಹೇಳಿದ ಅಭಿಪ್ರಾಯ ಹಾಗೂ ವಿಮರ್ಶೆಗಳ ಹಿನ್ನೆಲೆಯಲ್ಲಿ ತಮಗೂ ಗೋಚರವಾದ ಕೆಲವು ಮಾರ್ಪಾಡುಗಳು ಹಾಗೂ ಬದಲಾವಣೆಗಳನ್ನು ಕುರಿತು ನಿರ್ದೇಶನ ನೀಡಿ ಮತ್ತೆ ಅಂದಿನ ದಿನಚರಿಯನ್ನು ಪ್ರಾರಂಭಿಸುವರು.

ಇಡೀದಿನ ಹೀಗೆ ಒಂದಲ್ಲ ಒಂದು ಸಮಾಜ ಹಿತಕಾರ್ಯದಲ್ಲಿ ಮನಸ್ಸನ್ನು ತೊಡಗಿಸಿಕೊಂಡಿರುವಾಗ ಈ ವ್ಯಕ್ತಿತ್ವಕ್ಕೆ ಬಿಡುವೆಲ್ಲಿ?

ಶಿವಯೋಗಿಯ ಶರೀರಂ ವೃಥಾ ಸವೆಯಲಾಗದು ಎಂಬುದು ಈ ಬದುಕಿನ ಧ್ಯೇಯ ವಿದ್ದಂತಿದೆ. ಕಾಯಕವೇ ಕೈಲಾಸ ಎಂಬ ಮಾತನ್ನು ಉಸಿರಾಡುವ ಈ ಜೀವಕ್ಕೆ ಇಡೀ ಬದುಕೆ ಒಂದು ಪೂಜೆಯಂತಿರುವುದನ್ನು ಕಂಡಾಗ ಮನಸ್ಸು ಗೌರವಪೂರ್ವಕವಾಗಿ ನಮನ ಬಯಸುತ್ತದೆ.

ಈಗ ಎಂಬತ್ತ ನಾಲ್ಕನೆಯ ವರ್ಷಕ್ಕೆ ಕಾಲಿಟ್ಟಿರುವ ಈ ಎತ್ತರದ ಜೀವವನ್ನು ನೋಡುವಾಗ ಹೆಮ್ಮೆಯಾಗುತ್ತದೆ. ಅವರು ಅಲ್ಲಮಪ್ರಭುವೂ ಅಲ್ಲ ಬಸವಣ್ಣನು ಅಲ್ಲ, ಸಿದ್ಧರಾಮನೂ ಅಲ್ಲ, ಸಿದ್ಧಗಂಗೆಯ ಬೆಳಕು ಶ್ರೀ ಶಿವಕುಮಾರ ಮಹಾಸ್ವಾಮಿಗಳೆಂದೇ ಜನರ ಹೃದಯದಲ್ಲಿ ರಾರಾಜಿಸುತ್ತಿರುವ ಅಪೂರ್ವಚೇತನ.

ಮಹಾಪುರುಷರೆಂದರೆ ಪವಾಡಪುರುಷರೆಂದೇ ಭ್ರಮಿಸುವ ಜನರೆದುರಿಗೆ ಶ್ರೀ ಶಿವಕುಮಾರ ಮಹಾ ಸ್ವಾಮಿಗಳೇ ಒಂದು ಪವಾಡವಾಗಿ ಕಾಣುತ್ತಾರೆ. ಅವರ ವಿದ್ವತ್ತು, ಸಾಮಾಜಿಕ ಸೇವೆ, ತತ್ವಗಳನ್ನು ಕುರಿತು ಡಾ॥ ಮಾಸ್ತಿ ವೆಂಕಟೇಶ ಅಯ್ಯಂಗಾರ್, ಸಿದ್ಧವನ ಹಳ್ಳಿ ನಿಜಲಿಂಗಪ್ಪ, ಆರ್.ಆರ್. ದಿವಾಕರ್, ಡಾ॥ ರಂ. ಶ್ರೀ ಮುಗಳಿ, ವಿ.ವಿ. ಗಿರಿ, ಎಸ್.ಎಸ್. ಮಾಳವಾಡ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಮೊರಾರ್ಜಿ ದೇಸಾಯಿ ಇಂಥವರು ಹೇಳುವ ಮಾತುಗಳನ್ನು ಗಮನಿಸಿದರೆ ಸರಳವೆಂಬಂತೆ ಕಾಣುವ ಶ್ರೀಗಳವರ ವ್ಯಕ್ತಿತ್ವದ ಸಂಕೀರ್ಣತೆ ಹಾಗೂ ಎತ್ತರದ ಅರಿವಾದೀತೇನೋ.

ಮೇ.1991

ಅವರೇ ಒಮ್ಮೆ ಶರೀರ ಧರ್ಮದ ಬಗ್ಗೆ ಹೇಳಿರುವ ಈ ಮಾತುಗಳನ್ನು ಗಮನಿಸಿ;

ಜೀವನದ ಸಾರ್ಥಕತೆಯನ್ನು ಪರಿಶುದ್ಧ ಕಾಯಕದಿಂದಲೇ ಪಡೆಯಬೇಕು. ನಮ್ಮ ಧರ್ಮಗ್ರಂಥಗಳು ಕಾಯಕ ರಹಿತ ಬಾಳಿಗೂ ಮಹತ್ವವನ್ನು ಕೊಟ್ಟೇಇಲ್ಲ. ಅಂಥ ಕಾಯಕಶೀಲ ರೈತನ ಬಗೆಗೆ ಪ್ರತಿಯೊಬ್ಬ ಇನ್ನಿತರ ಕಾಯಕದವರು ಅಪಾರ ಗೌರವವನ್ನು ತಾಳಬೇಕು. ನಾವು ಏನೆಲ್ಲವನ್ನೂ ಉತ್ಪಾದಿಸಬಹುದು. ಆದರೆ ಅನ್ನದ ಉತ್ಪಾದನೆ ಕುಂಠಿತವಾದಾಗ ಉಳಿದೆಲ್ಲ ಉತ್ಪಾದನೆಗಳಿಗೇನು ಬೆಲೆ? ಸುಖ ಜೀವನದ ಅರ್ಥ ಬೇಸಾಯಗಾರನಿಗೆ ಮಾತ್ರ ಗೊತ್ತು. ಹಳ್ಳಿ ಭೋಗ ಜೀವನ ಕೇಳಿಲ್ಲ. ಅಧಿಕಾರ ಸಂಪತ್ತು ಮತ್ತು ಜೀವನದ ದಾಹಗಳು ಮಾನವ ನನ್ನು ದಾನವನನ್ನಾಗಿ ಮಾಡುವ ಪರಿಸ್ಥಿತಿ ಹಳ್ಳಿಗಳಲ್ಲಿಲ್ಲ. ಪ್ರಾಚೀನ ಕಾಲದಲ್ಲಿ ಸೇವೆಯೇ ಅರ್ಥವ್ಯವಸ್ಥೆಯಾಗಿತ್ತು. ವಸ್ತುಗಳು ವಿನಿಮಯಕ್ಕೆ ಮಾಧ್ಯಮವಾಗಿದ್ದವು. ಕಾರಣ ಗ್ರಾಮ ಜೀವನ ಪ್ರಾಚೀನ ಧರ್ಮವನ್ನು ಮರೆಯದೆ ಕರ್ತವ್ಯಪ್ರಜ್ಞೆ ಕ್ರಿಯಾ-ಶೀಲತೆಯನ್ನು ಬೆಳೆಸಿಕೊಳ್ಳಬೇಕು.

ಶರೀರವನ್ನು ಕುರಿತು ಹೇಳುತ್ತಿರುವ ಮಾತುಗಳ ಶಕ್ತಿ ವಿಶಿಷ್ಟಾದ್ವೈತದ ವಿಶ್ಲೇಷಣೆಯನ್ನು ನಡೆಸುವ ಆ ಮಾತುಗಳು ಧ್ವನಿಸುವ ಒಡಲಿನ ಮಾಹಿತಿ ಶ್ರೀಗಳವರ ಬದುಕಿನ ದರ್ಶನ ಎಂದರೂ ಸರಿಯೇ. ಉದ್ದಾನ ಶಿವಯೋಗಿಗಳು ಕಂಡ ಕನಸನ್ನು ನನಸನ್ನಾಗಿ ಮಾಡಿ ಸಿದ್ಧಗಂಗೆಯನ್ನು ಶ್ರೀ ಸಿದ್ಧಗಂಗಾ ಕ್ಷೇತ್ರವಾಗಿ ಮಾಡಿ ಇದನ್ನು ಅನ್ನದಾಸೋಹ ಹಾಗೂ ಜ್ಞಾನದಾಸೋಹಗಳ ಮೂಲಸೆಲೆಯಾಗಿ ಮಾಡಿದ ಶ್ರೀ ಶ್ರೀ ಗಳವರು ನೂರಾರು ವರ್ಷ ಬಾಳಲಿ ಅವರ ತಪಸ್ಸಿನ ಹಾಗೂ ದರ್ಶನದ ಫಲ ಕನ್ನಡಿಗರಿಗೆ ಪಾತ್ರವಾಗಲಿ ಎಂದು ಪ್ರಾರ್ಥಿಸೋಣ.

---

**ಆಜೀವ ಸದಸ್ಯರುಗಳಲ್ಲಿ ಒಂದು ಮನವಿ.**

ಸಿದ್ಧಗಂಗಾ ಪತ್ರಿಕೆಯ ಅನೇಕ ಆಜೀವ ಸದಸ್ಯರುಗಳ ವಿಳಾಸಗಳು ಬದಲಾಗಿರುವುದರಿಂದ ಕಾರ್ಯಾಲಯದಿಂದ ಕಳುಹಿಸಿದ ಸಂಚಿಕೆಗಳು ಕೆಲವು ಸದಸ್ಯರುಗಳಿಗೆ ತಲುಪದೆ ಹಿಂತಿರುಗುತ್ತಿವೆ. ದಯವಿಟ್ಟು ನಿಮ್ಮ ಬದಲಾದ ವಿಳಾಸಗಳನ್ನು ಆಗಿಂದಾಗ್ಗೆ ಪತ್ರಿಕಾ ಕಾರ್ಯಾಲಯಕ್ಕೆ ಕಳುಹಿಸಿ ಕೊಡುವುದರ ಮುಖೇನ "ಸಿದ್ದಗಂಗಾ" ನಿಮಗೆ ಕ್ರಮವಾಗಿ ತಲುಪಲು ಸಹಕರಿಸಬೇಕಾಗಿ ಪ್ರಾರ್ಥನೆ. **ತಮ್ಮ ಸದಸ್ಯತ್ವದ ನಂಬರನ್ನು ತಪ್ಪದೇ ತಿಳಿಸಿರಿ.**

ಪ್ರಕಾಶಕರು.

---

# ಆಧುನಿಕ ಚಿಂತಕ ಬಸವಣ್ಣ

ಕೃಪೆ: ಶರಣ ಧರ್ಮ

ದೇಹಾರವ ಮಾಡುವ ಅಣ್ಣಗಳಿರಾ, ಅಣ್ಣಗಳಿರಾ,
ಒಂದು ತುತ್ತು ಆಹಾರವನಿಕ್ಕಿರಯ್ಯಾ,
ದೇಹಾರಕ್ಕೆ ಆಹಾರವೇ ನಿಚ್ಚಣಿಕೆ,
ದೇಹಾರವ ಮಾಡುತ್ತೆ ಆಹಾರವನಿಕ್ಕದಿರ್ದೊಡೆ,
ಆಹಾರವಿಲ್ಲೆಂದನಂಬಿಗರ ಚೌಡಯ್ಯ,

**— ಅಂಬಿಗರಚೌಡಯ್ಯ**

**ಕನ್ನಡದ ಗ್ರಾಮೀಣ ಮಹಿಳೆ ತನ್ನೊಂದು ಪದದಲ್ಲಿ ಈ ರೀತಿ ವರ್ಣನೆ ಮಾಡಿದ್ದಾಳೆ**

"ಬಸವಣ್ಣ ಬರುವಾಗ ಬಿಸಿಲು ಬೆಳದಿಂಗಳು
ದುಂಡು ಮಲ್ಲಿಗೆ ಅರಳ್ಯಾವ"
ಯಾಲಕ್ಕಿ ಗೊನಿ ಬಾಗಿ ಹಾಲು ಸುರಿದಾವ!

ಬಸವಣ್ಣನವರು ಜನಿಸುವುದಕ್ಕಿಂತ ಮೊದಲು ಭಾರತವು, ವೈದಿಕರ, ಪುರೋಹಿತರ ಪೂಜಾರಿಗಳ ಹಿಡಿತದಲ್ಲಿ ಸಿಕ್ಕು ಬಿಸಿಲಿನ ಬೇಗೆಯಿಂದ ಒದ್ದಾಡುತ್ತಿತ್ತು. ಧರ್ಮದ, ದೇವರ ಹೆಸರಿನಲ್ಲಿ ಗೊಳ್ಳೆ ಹೊಡೆಯುವ ರಕ್ತ ಬೀಜಾಸುರರ ಶೋಷಣೆ ತಡೆಗಟ್ಟಲೆಂದೆ ಮೊದಲು ಬಸವಣ್ಣ 'ದೇವನೊಬ್ಬ ನಾಮ ಹಲವು' ಎಂದು ಸಾರಿದರು. ಇದರಿಂದ ಕೋಟ್ಯಾನುಕೋಟಿ ದೇವರುಗಳ ಆರಾಧನೆ ನಡೆಸಿ ಉತ್ಸವ, ಪೂಜೆ, ಯಜ್ಞ, ಹೋಮಗಳನ್ನು ನಡೆಸುವ ಕಾರ್ಯಗಳಿಗೆ ಕೊನೆ ಹೇಳಲಾಯಿತು. ಇಡೀ ಜಗತ್ತನ್ನೇ ಬೆಂಗಃಗೊಳಿಸುವ ಅತ್ಯಂತ ಸರಳರೂಪಪದಲ್ಲಿ ವಿಶ್ವದಾಕಾರವನ್ನು ಸಮಸ್ತ ಜೀವರಾಶಿಗಳನ್ನು ಪೂಜಿಸುವ "ಇಷ್ಟಲಿಂಗ"ವೆಂಬ ಸಾಧನವನ್ನು ಜನತೆಗೆ ನೀಡಿದರು. ಧಾರ್ಮಿಕವಾಗಿ ವಂಚಿತರಾದ ದಲಿತ-ದುರ್ಬಲರು, ಸ್ತ್ರೀಕುಲವು ಇಷ್ಟಲಿಂಗವ ಧರಿಸಿ ಸಮಾನತೆಯನ್ನು ಸಾಧಿಸಿದರು. ಇದರೊಂದಿಗೆ 'ಕಾಯಕ'ವೆಂಬ ಮಂತ್ರವ ನೀಡಿ, ಪ್ರತಿಯೊಬ್ಬರಿಗೂ ದುಡಿದುತಿನ್ನುವ ಪದ್ಧತಿಯನ್ನು ಜಗತ್ತಿಗೆ ಕಲಿಸಿಕೊಟ್ಟ ಮಹಾಮಾನವ ಬಸವಣ್ಣ.

ಸಿದ್ಧಾಂತವನ್ನು ಬೋಧಿಸುತ್ತಾ ವಿಷಮ ಸಮಾಜವನ್ನು ರಚಿಸಿ, ಜಾತಿ ಸೂತಕ, ತಿಥಿ, ಮುಹೂರ್ತ, ಶಕುನ, ಕರ್ಮ ಜೋತಿಷ್ಯ, ರಮಲ ವಿದ್ಯೆಯಂತಹ ಹಲವಾರು ಮೌಢ್ಯ ವಿಚಾರಗಳನ್ನು ಜನತೆಯ ಮುಂದಿಟ್ಟು ತಮ್ಮ ಬದುಕನ್ನು ಸಾಗಿಸುತ್ತಿರುವ ಪುರೋಹಿತವರ್ಗಕ್ಕೆ ಅಗಾಧವಾದ ಪೆಟ್ಟು ಬಿತ್ತು. "ಕರ್ಣದಲ್ಲಿ ಜನಿಸಿದವರುಂಟೆ?" ಎಂಬ ಪ್ರಶ್ನೆಯನ್ನು ಬಸವಣ್ಣನವರು ಕೇಳಿ ಇಡೀ ವ್ಯವಸ್ಥೆಯನ್ನು ಅಲುಗಾಡಿಸಿದ್ಧಾರೆ. ದಲಿತರ ಕಂದಾಚರಣೆ ಮೌಢ್ಯವನ್ನೇ ಅಸ್ತ್ರವನ್ನಾಗಿಸಿಕೊಂಡು ಉಚ್ಚಕುಲದ ಜನತೆ, ಪುರೋಹಿತರು ದಲಿತರನ್ನು ದುರ್ಬಲರನ್ನು ತಮ್ಮ ಕೆಲಸಕ್ಕೆ ಪಶುಗಳಂತೆ ದುಡಿಸಿಕೊಳ್ಳುತ್ತಿದ್ದರು. ಬಡತನಕ್ಕೆ ಹಿಂದಿನ ಜನ್ಮದ ಪಾಪವೆ ಕಾರಣ ಮುಂದಿನ ಜನ್ಮದಲ್ಲಿ ಮತ್ತೆ ಒಳ್ಳೆಯದನ್ನು ಕಾಣಬೇಕಾದರೆ ಈ ಜನ್ಮದಲ್ಲಿ ನಿಷ್ಠೆಯಿಂದ ದುಡಿಯಬೇಕು ಎನ್ನುವುದು ಅವರ ಬೋಧೆಯಾಗಿತ್ತು. ವೇದಶಾಸ್ತ್ರ ಸ್ಮೃತಿಗಳ ಹುರುಳಿಲ್ಲದ ತತ್ವಗಳಿಂದ ಬೇಸತ್ತ ಬಸವಣ್ಣನವರು

ಶಾಸ್ತ್ರ ಘನವೆಂಬೆನೆ? ಕರ್ಮವ ಭಜಿಸುತ್ತಿದೆ
ವೇದ ಘನವೆಂಬೆನೆ? ಪ್ರಾಣಿವಧೆಯ ಹೇಳುತ್ತಿದೆ
ಸ್ಮೃತಿಘನವೆಂಬೆನೆ? ಮುಂದಿಟ್ಟರಸುತ್ತಿದೆ

ಎಂದು ನಿಷ್ಠುರವಾಗಿ ವೇದ, ಶಾಸ್ತ್ರಗಳ ದ್ವಂದ್ವ ನೀತಿಯನ್ನು ಲೋಪಗಳನ್ನು ಖಂಡಿಸಿದ್ದಾರೆ, ಬಸವಣ್ಣನವರು ತಮ್ಮ ಸುತ್ತಲಿನ ಸಮಾಜವನ್ನು ನೋಡುವ ಪರಿ ರೀತಿ ಅತ್ಯಂತ ಆಧುನಿಕ ವಿಚಾರಗಳಿಂದ ಕೂಡಿತ್ತು. ಪ್ರತಿಯೊಂದು ವಿಚಾರವನ್ನು ಶರಣರ ಮುಂದೆ ಮಂಡಿಸಿ ಸತ್ಯಾಸತ್ಯತೆಯ ಆಧಾರದ ಮೇಲೆ ಚಿಂತಿಸಿ, ಚರ್ಚಿಸಿ ಪರಿಹಾರವನ್ನು ಕಂಡುಕೊಳ್ಳುತ್ತಿದ್ದರು.

ವರ್ಣಾಶ್ರಮವು ಮೂಲತಃವಾಗಿ ಒಳ್ಳೆಯ ಕಾರ್ಯಕ್ಕೆ ಬಂದಿದ್ದರೂ ಮುಂದೆ ಅದು ಸಮಾಜಕ್ಕೆ ಬಿಡಿಸಲಾರದ ಘಾತುಕವಾದ ರೋಗವಾಗಿ ಪರಿಣಮಿಸಿತು. ವರ್ಣಾಶ್ರಮದ ಬೇಗೆಗೆ ಮನುಷ್ಯರು ತಮ್ಮ ಅಸ್ತಿತ್ವವನ್ನೇ ಕಳೆದುಕೊಳ್ಳುವ ಕಾಲ ಬಂದೊದಗಿತ್ತು. ಜಾತಿ ಕುಲವೆಂಬವುಗಳೇ ಆಯಾ ವೃತ್ತಿಯ ಮೇಲೆ ಬಂದವು.

ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ
ಹಾಸನಿಕ್ಕಿ ಸಾಲಿಗನಾದ ವೇದವನ್ನೋದಿ ಹಾರುವನಾದ

ಎಂದು ಬಸವಣ್ಣನವರು, ಜಾತಿಗಳು ಕೇವಲ ಅವರವರ ಉದ್ಯೋಗದ ಮೇಲೆ ಬಂದಿವೆ ಹೊರತು ಹುಟ್ಟಿನಿಂದಲ್ಲ ಎಂದು ಸಾರಿದರು.

ಬಸವಣ್ಣನವರು ಬ್ರಾಹ್ಮಣರಾಗಿ ಜನಿಸಿದ್ದರೂ ಅವರ ಆಧುನಿಕ ವಿಚಾರಗಳಿಂದ, ಬದುಕಿನ ಮೌಲ್ಯಗಳಕಡೆ ಗಮನ ಹರಿಸಿ, ತುಳಿತಕ್ಕೆ ಒಳಗಾದ ಜನಾಂಗಕ್ಕೆ ನ್ಯಾಯ ಒದಗಿಸಿಕೊಟ್ಟ ಧೀಮಂತ ನಾಯಕ. ಬಸವಣ್ಣನವರು ಸದಾ ತಮ್ಮನ್ನು ಸಮಾಜದ ಅತ್ಯಂತ ಕಿರಿಯ ವ್ಯಕ್ತಿ ಎಂದು ತಿಳಿದಿದ್ದಾರೆ.

ಅಪ್ಪನು ನಮ್ಮ ಮಾದಾರ ಚೆನ್ನಯ್ಯ
ಬೊಪ್ಪನು ನಮ್ಮ ಡೋಹಾರ ಕಕ್ಕಯ್ಯ
ಚಿಕ್ಕಯ್ಯ ನಮ್ಮಯ್ಯ ಕಾಣಯ್ಯ
ಅಣ್ಣನು ನಮ್ಮ ಕಿನ್ನರಿ ಬ್ರಹ್ಮಯ್ಯ

ಎಂದು ಹೇಳುತ್ತಾ ಶೋಷಣೆಗೆ ಒಳಗಿ ಉಸಿರು ಬಿಡಲು ಬಾರದ ಜನಾಂಗವನ್ನು ಅಪ್ಪ, ಬೊಪ್ಪ, ಅಣ್ಣ ಎಂದು ಸಂಭೋದಿಸಿ ವರ್ಣಾಶ್ರಮವನ್ನು ದೃಢ ಸಂಕಲ್ಪದಿಟ್ಟ ಹೆಜ್ಜೆಯು ವೈದಿಕರನ್ನು ನಡುಗಿಸಿತು, ಜಾತಿವಾದಿಗಳು ಹೆದರಿದರು. ಸಮಾನತೆಯ ಕನಸು ಕಂಡ ಬಸವಣ್ಣ ಸನಾತನಿಗಳ, ವೈದಿಕರ ಶೋಷಣೆಯ ಅಂತ್ಯ ಬಯಸಿದರು.

ದೇವ ಸಹಿತ ಮನೆಗೆ ಬಂದರೆ
ಕಾಯಕವಾವುವುದೆಂದು ಬೆಸಗೊಂಡರೆ
ನಿಮ್ಮಾಣೆ, ನಿಮ್ಮ ಪುರಾತರಾಣೆ, ತಲೆದಂಡ
ತಲೆದಂಡ, ಕೂಡಲಸಂಗಮದೇವಾ
ಭಕ್ತರ ಕುಲವನರಸಿದರೆ ನಿಮ್ಮ ರಾಣಿವಾಸದಾಣೆ

ಭಕ್ತರ ಕಾಯಕ, ಕುಲವನ್ನು ಏಕೆ ಕೇಳಬೇಕೆನ್ನುವುದು ಅವರ ವಿಚಾರ, ವರ್ಣ ಸಮರವನ್ನು ಸಾರಿದ ಬಸವಣ್ಣ ವರ್ಗ ಸಮರವನ್ನು ಸಾರಿದ. ಬಟ್ಟೆ ಮಡಿ ಮಾಡುವ ಮಡಿವಾಳನ ಕಾಯಕಕ್ಕೆ ಸಿಗುವ ಗೌರವ ದೋಣಿ ನಡೆಸುವ ಅಂಬಿಗನ ಕಾಯಕಕ್ಕೆ ಇದೆ. ಪ್ರಧಾನಿಯಾದ ತಮ್ಮ ಕಾಯಕಕ್ಕೆ ದೊರೆಯುವ ಮನ್ನಣೆ : ಸಮಗಾರ ಹರಳಯ್ಯನ ಕಾಯಕಕ್ಕೆ ಸಮಾನ ಎಂದು ಅರಿವು ಮಾಡಿಕೊಟ್ಟರು. ಕಾಯಕವು ಬಸವಣ್ಣನವರ ದೃಷ್ಟಿಯಲ್ಲಿ ಲಿಂಗಪೂಜೆಗಿಂತ. ದೇವರ ದರ್ಶನಕ್ಕಿಂತ ಮಹತ್ವವಾಗಿದೆ.

# ವಿಜ್ಞಾನ ಮತ್ತು ಆಧ್ಯಾತ್ಮ

ಶ್ರೀ ಎಚ್. ಎಸ್. ನರಸಿಂಹಜೀಯರ್, ಶ್ರೀ ಬಸವೇಶ್ವರ ಇಂಗ್ಲಿಷ್ ಶಾಲೆ, ತುಮಕೂರು-2

ಭೂಮಿಯ ಮೇಲೆ ಸೃಷ್ಟಿಯಾದ ಜೀವಿಗಳ ಚರಿತ್ರೆಯನ್ನು ಒಂದು ನೂರು ವರ್ಷಗಳ ಕಾಲವೆಂದು ನಾವು ಪರಿಗಣಿಸಿದಲ್ಲಿ, ಮಾನವನ ಇತಿಹಾಸವು ಇದರಲ್ಲಿ ಕೇವಲ ಒಂದು ನೂರು ನಿಮಿಷಗಳಷ್ಟು ಮಾತ್ರ. ವಿಜ್ಞಾನದ ಬೆಳವಣಿಗೆಯು ಇದರಲ್ಲಿ ಒಂದೆರಡು ಸೆಕೆಂಡುಗಳಷ್ಟು ಕಾಲದ್ದು, ಈ ಅಲ್ಪ ಅವಧಿಯಲ್ಲಿಯೇ ವಿಜ ಪ್ರಕೃತಿಯ ಅನೇಕ ರಹಸ್ಯಗಳನ್ನು ಹೊರಗೆಳೆದು ಮಾನವನ ಜೀವನದ ಸುಖ ಸಂಪತ್ತುಗಳಿಗೆ ಅಮೂಲ್ಯವಾದ ಕೊಡುಗೆಗಳನ್ನು ಕೊಟ್ಟಿದೆ. ಈ ಯುಗವನ್ನು 'Heroic-Age of inventions,' 'Age of the Atom,' Space Age, Jet age, Computer revolution-ಎಂದೆಲ್ಲಾ ಹೊಗಳಿದ್ದಾರೆ. ಇದನ್ನು ಯಾರೂ ಅಲ್ಲಗಳೆಯುವಂತಿಲ್ಲ.

'ಹಸಿರುಕ್ರಾಂತಿ' ಮತ್ತು 'ಬಿಳಿಕ್ರಾಂತಿ' ಯಿಂದ ಅಗಾಧವಾಗಿ ಬೆಳೆಯುತ್ತಿರುವ ನಮ್ಮ ಜನಸಂಖ್ಯೆಗೆ ಅತ್ಯವಶ್ಯಕವಾದ ಆಹಾರ ಒದಗಿಸಿದೆ. ಕಡಿಮೆ ಇಂಧನ ಶಕ್ತಿಯಿಂದ ಅತಿ ಬೇಗ ರುಚಿರುಚಿಯಾದ ಭಕ್ಷ್ಯ ಭೋಜ್ಯಗಳನ್ನು ತಯಾರಿಸುವ ವಿಧಾನ ತಿಳಿದಿದೆ. ಮಾನವನ ಅವಶ್ಯಕತೆ ಹಾಗು ಆಂಕಾಕ್ಷೆಗಳಿಗನುಗುಣವಾದಂತಹ ಉಡುಪು ದೊರೆಯುತ್ತಿದೆ. ಅನುಕೂಲಕ್ಕೆ ತಕ್ಕಂತೆ ಬೇಸಿಗೆಯನ್ನು ತಂಪುಮಾಡಬಲ್ಲ ಚಳಿಕಾಲದಲ್ಲಿ ಬಿಸಿಹವೆ ಕೊಡಬಲ್ಲ ನಾನಾ ವಿಧಾನಗಳು ವಿಜ್ಞಾನದ ಅವಿಷ್ಕಾರದಲ್ಲಿ ಸೇರಿವೆ. ಮನರಂಜನೆಗಾಗಿ ರೇಡಿಯೋ, ಟಿ.ವಿ. ಹಾಗೂ ಅನೇಕ ಸಂಗೀತ ಸಾಧನಗಳು ಇವೆ. ನಿಯಂತ್ರಿಸಬಲ್ಲ ಔಷಧೋಪಚಾರಗಳು ಒದಗಿವೆ. ಪ್ರಪಂಚದ ಯಾವ ಮೂಲೆಗಾದರೂ ಕ್ಷಣಮಾತ್ರದಲ್ಲಿ ಮಾತನಾಡಬಲ್ಲ ಯಂತ್ರಗಳು, ಹಾರಾಡಿ ಹೋಗಬಲ್ಲ ವಿಮಾನಗಳೂ ಲಭಿಸಿವೆ. ಕ್ಲಿಷ್ಟಕರವಾದ ವಾತಾವರಣದಲ್ಲಿ ಮಾಡಬೇಕಾದ ಕಾರ್ಯಗಳನ್ನು ವ್ಯವಸ್ಥಿತವಾಗಿ ಹಾಗೂ ಕರಾರುವಾಕ್ಕಾಗಿ ಮಾಡಬಲ್ಲ ರೋಬಟ್ ಮಾನವನ ಸೃಷ್ಟಿಯಾಗಿದೆ. ಒಟ್ಟಿನಲ್ಲಿ ಹೇಳುವುದಾದರೆ ಮಾನವನ ಆರೋಗ್ಯ, ಐಶ್ವರ್ಯ ಹಾಗೂ ಕ್ಷೇಮ ಲಾಭಗಳಿಗೆ ಅವಶ್ಯಕವಾದಂತಹ ಅನೇಕ ಹೊಸ ಹೊಸ ಆವಿಷ್ಕಾರಗಳನ್ನು ಈಗಿನ ಪ್ರಪಂಚ ಕಂಡಿದೆ. ಈ ಕೊಡುಗೆಗಳ ಬಗ್ಗೆ ಪ್ರಪಂಚದಾದ್ಯಂತ 'Fantastic', marveilous, ಹಾಗೂ incredible ಎಂದು ಹೊಗಳಲಾಗಿದೆ. ವಿಜ್ಞಾನಿಗಳನ್ನು ಅತಿಮಾನವರೆಂದು ಹೊಗಳಲಾಗುತ್ತಿದೆ. Science which only three centuries ago was on 'tap' is now

" on top.' Science has proved to the hilt that knowledge is power" ಎಂಬ ಶ್ಲಾಘನೆಗೆ ಅರ್ಹತೆ ಪಡೆದಿದೆ.

ವಿಜ್ಞಾನದಿಂದ ಮತ್ತೊಂದು ಉಪಕಾರ ಮಾನವನಿಗೆ ದೊರೆತಿದೆ. ವಿಜ್ಞಾನದ ಬೆಳವಣಿಗೆಯಿಂದ ಭೌತಿಕವಾದ (materialism) ಹೆಚ್ಚಿ ಪ್ರತಿಯೊಂದು ವಿಚಾರವನ್ನೂ, ಸನ್ನಿವೇಶವನ್ನೂ ಚಿಕಿತ್ಸಕ ಬುದ್ಧಿಯಿಂದ ಪರಿಶೀಲಿಸುವ ಶಕ್ತಿ ವಿದ್ಯಾವಂತರಲ್ಲಿ ಮೂಡಿತು. ಈ ಲೌಕಿಕವಾದದಿಂದ ಧರ್ಮದ ಹೆಸರಿನಲ್ಲಿ ನಡೆಯುತ್ತಿದ್ದ ಹಾಗೂ ನಡೆಯುತ್ತಿರುವ ಅರ್ಥಹೀನ ಆಚಾರ ವಿಚಾರಗಳನ್ನೂ, ಮೂಢನಂಬಿಕೆಗಳನ್ನೂ ಒರೆಗಲ್ಲಿಗೆ ಹಚ್ಚಿ ಜೇಡರ ಬಲೆಯಂತೆ ಹರಡಿದ್ದ ಢಂಭಾಚಾರ, ಮತಾಂಧತೆಯನ್ನು ದೂರಮಾಡಲು ಸಹಾಯವಾಗಿದೆ. ಅಮಾನುಷ ಪದ್ಧತಿಗಳಾದ ಬೆತ್ತಲೆಸೇವೆ, ದೇವದಾಸಿ ಪದ್ಧತಿ. ಅಸ್ಪೃಶ್ಯತೆ ಮುಂತಾದ ಅಮಾನುಷ ಕೃತ್ಯಗಳನ್ನು ಖಂಡಿಸುವಂತಹ ಮನೋಭಾವ ಬೆಳವಣಿಗೆಗೆ ವಿಜ್ಞಾನ ತುಂಬಾ ಸಹಾಯಮಾಡಿದೆ. ಇದನ್ನು ಯಾರೂ ಅಲ್ಲಗಳೆಯುವಂತಿಲ್ಲ. ಎಲ್ಲ ಧರ್ಮಗಳ ನಿಜವಾದ ತತ್ವಗಳೇನು ಎಂಬುದನ್ನು ವಿಮರ್ಶಿಸಿ ತಿಳಿಯಲು ಹಾಗೂ ಮಾನವ ವರ್ಗವೆಲ್ಲಾ ಒಂದೇ ಎಂಬ ವಿಶ್ವಭ್ರಾತೃತ್ವ ಮೂಡಿಸುವಲ್ಲಿ ವಿಜ್ಞಾನದ ಕೊಡುಗೆ ಸಾಮಾನ್ಯವೇನಲ್ಲ.

ಹಿರಿಯ ಮಾನವತಾವಾದಿಗಳು ವಿಜ್ಞಾನದ ಕೊಡುಗೆಯನ್ನು ಹೀಗೆ ಹೊಗಳಿದ್ದಾರೆ. " This birth of a Cosmopolitan faith tended to eliminate the disseeting components of the various religions such as customs, beliefs etc, which must have had relevancee to the different times and societies for whom they were originally intended but which were out moded and even harmful to modern society it also brougat to light the greet contribution that every religion had made to human civilization as the supreme source of its ethical, artistical, cultural and spiritual glory "

This tide of reform of religion gathered strength, it brought a new awakening in the west as well as in the East. ................ They largely contrib-

uted to generating a new trend of building one world order in the most rational philosophy which canensure man Continuity of life and Civilization.

ಒಂದೇ ವಾಕ್ಯದಲ್ಲಿ ಹೇಳುವುದಾದರೆ

" This trend wasmost helpful in rationalising religion." ಧರ್ಮದ ಹೆಸರಿನಲ್ಲಿ ಮಾನವ ಅವನತಿ ಹೊಂದುತ್ತಿದ್ದಾಗ ಅವನನ್ನು ಕೈ ಎತ್ತಿ ಹಿಡಿದು ಎಚ್ಚರಿಸಿದ ಆಪದ್ಬಂಧು ವಿಜ್ಞಾನವಲ್ಲವೇ ?

## " ಶ್ರೀ ಬಸವೇಶ್ವರ ಮತ್ತು ಡಾ. ಅಂಬೇಡ್ಕರ "

(ತುಲನಾತ್ಮಕ ವಿವೇಚನೆ)

ಈ ವಿಷಯವನ್ನು ಕುರಿತು ಬರೆಯಲ್ಪಟ್ಟ ಹಸ್ತಪ್ರತಿಗಳನ್ನು ಈ ಬಹುಮಾನ ಯೋಜನೆಯ ಅಂಗವಾಗಿ ಆವ್ಹಾನಿಸಲಾಗಿದೆ. ಸ್ಪರ್ಧೆಯಲ್ಲಿ ಭಾಗವಹಿಸಲಿಚ್ಛಿಸುವ ಲೇಖಕರು ಕೆಳಗೆ ಕಾಣಿಸಿದ ಕರಾರುಗಳಿಗೆ ಅನುಗುಣವಾಗಿ ಹಸ್ತಪ್ರತಿಗಳನ್ನು ಸಿದ್ಧಪಡಿಸಿ 31 ನೇ ಡಿಶಂಬರ್ 1991 ರೊಳಗಾಗಿ ಕಳಿಸಿಕೊಡಬೇಕು.

ಹಸ್ತಪ್ರತಿ (ಬೆರಳಚ್ಚುಪ್ರತಿ) ಎಲ್ಲಿಯೂ ಪ್ರಕಟವಾಗಿರಬಾರದು. ಹಾಳೆಯ ಒಂದೇಮಗ್ಗಲು ಬರೆದಿರಬೇಕು ಹಸ್ತಪ್ರತಿ ಅಜಮಾಸು 100 ಪುಟಗಳಿಗೆ ಮೀರ ಕೂಡದು. ಹಸ್ತಪ್ರತಿಗಳನ್ನು ಪರೀಕ್ಷಿಸಲು ನಿರ್ಣಾಯಕ ಮಂಡಳಿಯೊಂದಿದು ಅದರ ಆದರ ತೀರ್ಪು ಕೊನೆಯದು. ನಿರ್ಣಾಯಕ ಮಂಡಳಿಯು ಅತ್ಯುತ್ತಮವೆಂದು ಪರಿಗಣಿಸಿದ ಹಸ್ತಪ್ರತಿಗೆ 2000 (ಎರಡುಸಾವಿರ) ರೂಪಾಯಿ ಬಹುಮಾನ ನೀಡಲಾಗುವುದು. ಬಹುಮಾನಕ್ಕೆ ಅರ್ಹವಾದ ಅತ್ಯುತ್ತಮ ಹಸ್ತಪ್ರತಿಯನ್ನು ಮುದ್ರಿಸಿ ಪ್ರಕಟಿಸುವ (ಪ್ರಥಮ ಮುದ್ರಣ) ಹಕ್ಕು ಶ್ರೀ ಬಸವಲಿಂಗ ಪಟ್ಟದ್ದೇವರು, ಹಿರೇಮಠ ಸಂಸ್ಥಾನ, ಭಾಲ್ಕಿ, ಜಿಲ್ಲಾ ; ಬೀದರ-ಇವರಿಗೆ ಸೇರುವದು. ಪ್ರಕಟವಾದ ಗ್ರಂಥದ 100 ಪ್ರತಿಗಳನ್ನು ಲೇಖಕನಿಗೆ ಕೊಡಲಾಗುವದು, ಬಹುಮಾನ ಸ್ಪರ್ಧೆಗಾಗಿ ಸಲ್ಲಿಸುವ ಹಸ್ತಪ್ರತಿಗಳನ್ನು ಮರಳಿ ಕಳಿಸುವದಿಲ್ಲ. ಆದ್ದರಿಂದ ಲೇಖಕರು ಸ್ಥಳಪ್ರತಿಯನ್ನು ತಮ್ಮಲ್ಲಿ ಇಟ್ಟುಕೊಳ್ಳಬೇಕು.

**ಹಸ್ತಪ್ರತಿಯನ್ನು ಕಳಿಸುವ ವಿಳಾಸ; ಶ್ರೀ ಬಸವಲಿಂಗಪಟ್ಟದ್ದೇವರು**

ಅಧ್ಯಕ್ಷರು

**ಶ್ರೀ ಘ. ಲಿಂ. ಚ. ಚೆನ್ನಬಸವ ಪಟ್ಟದ್ದೇವರು**

ದತ್ತಿ ಸಾಹಿತ್ಯ ಬಹುಮಾನ ಯೋಜನೆ ಹಿರೇಮಠ

ಸಂಸ್ಥಾನ ಪೋ ಬಾಲ್ಕಿ ಜಿ. ಬೀದರ

## ಲಿಂಗ ಸಾಹಿತ್ಯ

### ಭಸ್ಮ ಜ್ಯೋತಿ

ಕಂದ|| ಶಿವಶರಣನ ಪಣೆಯೊಳೆಸೆವ ।
ಧವಳಮಯಃ ಶುದ್ಧ ಭಸ್ಮದುರೆ ಮೂದಳಗಳ್||
ಕವಿದ ತ್ರಿಮಲವ ಕಳೆಯಲ್ ।
ಶಿವಭಕ್ತಿ ಜ್ಞಾನ ವಿರತಿಯೆನೆ ಕಂಗೊಳಿಕುವು||

" ಕನ್ನಡ ಕವಿಕಾಳಿದಾಸ" ಕೃತ " ಶಿವಾನುಭವದರ್ಪಣ " ಪ-12

* ಶುಭದಾಯಕವಾದ ಶಿವ ಚಿಹ್ನಾಂಕಿತವಾದ
ಸದ್ ಭಕ್ತನಾ ಪಣೆಯೊಳೆಸೆಯುತಿರ್ಪಾ

ಧವಳವರ್ಣದಿಂ ಶುದ್ಧವಾಗಿಪ್ಪ ವಿಭೂತಿಯಾ ಮೂದಳಗಳ್
ಮಲತ್ರಯಂಗಳನು ಕಳೆದು ಬೆಳಗುತಿಪ್ಪುದರ ಕುರುಹು ನೋಡಾ!

'ಆಣವಮಲ' ವೆನಿಸಿರ್ದ 'ಅಪರಿಪೂರ್ಣತ್ವ, ವನು
ಕಳೆದು ಹೊಳೆವು ದೊಂದೆಸಳು !
'ಕಾರ್ಮಿಕಮಲ' ವೆನಿಸಿರ್ಪ 'ಅಲ್ಪಕರ್ತೃತ್ವ' ವನು
ಕಳೆದು ಬೆಳಗುವ ದೊಂದೆಸಳು !
'ಮಾಯಾಮಲ' ವೆನಿಪ 'ಅಲ್ಪಜ್ಞತ್ವ' ವನು
ಕಳೆದು ಪ್ರಕಾಶಿಪು ದೊಂದೆಸಳು !

ಇಂತೀ ತ್ರಿವಿಧಮಲ ರಹಿತನಾಗಿ ಶಿವಭಕ್ತಿ - ಜ್ಞಾನ - ವಿರತಿ
ಸಂಪನ್ನನಾಗಿ ಕಂಗೊಳಿಪ ಶರಣ
ಮೂದಳಾಂಕಿತ ಭಸ್ಮಫಣಿ ಜ್ಯೋತಿಯಿಂದ ಪ್ರಕಾಶಿಸುತಿರ್ದನು
ಕಾಣಾ, ಶ್ರೀ ಶೈಲ ಮಲ್ಲಿಕಾರ್ಜುನ !

## ರುದ್ರಾಕ್ಷ ಮಹಿಮೆ [32]

ಹ. ವೃ। ಪರಮ ಶಿವದೀಕ್ಷಾಸಂಪನ್ನಂ ಶಿವಾಕ್ಷಗಳಂಗದೊಳ್।
ಧರಿಸಿಹ ಶಿವಾಚಾರ ಪ್ರಾಬಲ್ಯದಿಂದಿಳೆಯೊಳ್ ಸದಾ॥
ಸುರಿಯುವ ಶಿವಾದ್ವೈತ ಜ್ಞಾನ ಪ್ರಕಾಶವೆ ನಿಂದಿರಲ್ ।
ಕಿರಣಮಯ ರುದ್ರಾಕ್ಷಾಂಗಂ ಶಂಕರಂಗನು ಕೂಲನುಮ್॥

" ಧರ್ಮಜ್ಞ " ಕವಿಕೃತ " ಶಿವಾನುಭವದರ್ಪಣ " ಪ, 13

" ಶಿವದೀಕ್ಷಾಸಂಪನ್ನನಾಗಿಪ್ಪ ಮಹಾಶರಣನು
ಶಿವಾಕ್ಷಗಳಂಗದೊಳ್ ಧರಿಸಿದವನಾಗಿರ್ದು
ಶಿವಾಚಾರ ಪ್ರಾಬಲ್ಯದಿಂದಿಳೆಯೊಳ್ ನಿರುತ
ಶಿವಾದ್ವೈತ ಜ್ಞಾನಪ್ರಕಾಶಮಂ ಸುರಿಯುತಿರ್ದನು ನೋಡಾ!

ರುದ್ರಾಕ್ಷಮಾಲಾಲಂಕೃತನಾದ ಶರಣನು ಶಿವನ
ಲೋಕ ರಕ್ಷಣಾ ಕಾರ್ಯದಲ್ಲಿ ಸಹ ಚರನಾಗಿರ್ಪನು ನೋಡಾ
ಇಂತಪ್ಪ ರುದ್ರಾಕ್ಷಂಗಳು – ರುದ್ರದೇವನಾಅ ಕ್ಷೀ (ಕಣ್ಣು) ಗಳೆ
ಶರಣನಂಗದ ಮೇಲೆ ಕಂಗೊಳಿಸುತಿರ್ದು ವೀರ - ರುದ್ರ
ಸಂಕೇತಗಳಾಗಿ ಜಗದ್ರಕ್ಷಣೆಗೆ ಕಾರಣ ವಾಗಿಪ್ಪುವು
ಕಾಣಾ, ಶ್ರೀ ಶೈಲ ಮಲ್ಲಿಕಾರ್ಜುನ ! "

## ಶಿವ ಮಂತ್ರಮಹಿಮೆ [33]

### ಪಂಚಾಕ್ಷರಿ ಮಂತ್ರ ಮಹಿಮೆ :

ಕಂದ ॥ ಸಲೆ ಸಪ್ತಕೋಟಿ ಮಂತ್ರಂ।
ಗಳಿಗಧಿಕಮೆನೆ ಮಿಗೆ ಕಂಗೊಳಿಪ ಶಿವಮಂತ್ರಂ ॥
ಒಲವಿನಲಿ ಶರಣನನಿಶಂ।
ನಲಿನಲಿದು ನುತಿಸುತಿರಲಿಳೆಯೊಳ್ ಬೆಳಗುವುದಯ್ ॥

"ಕನ್ನಡಕವಿಕಾಳಿದಾಸ" ಕೃತ "ಶಿವಾನುಭವ ದರ್ಪಣ" ಪ॥ 4

"ಏಳುಕೋಟಿ ಸುಮಂತ್ರಂಗಳ್ಗೆ ಅನಾದಿಯೆನಿಸಿರ್ಪ
'ನಮಃ ಶಿವಾಯ' ಪಂಚಾಕ್ಷರ ಶಿವಮಂತ್ರಮಿದು
ಫಾಲನೇತ್ರನ ಪಂಚಮುಖ ಕಮಲಮೆನುವವೋಲ್
ಐದುಅಕ್ಷರಗಳಿಂದ ಕಂಗೊಳಿಸುತ್ತಿದ್ದಿತು ನೋಡಾ.
ಶಿವಯೋಗಿ ಹೃದಯ ಕಾಸಾರ ಹಂಸವಾಗಿ
ಪರಶಿವ ಸಂಪದಮೆನಲು ದಿವ್ಯಾಭರಣವಾಗಿ
ಕಾಲಮೃತ್ಯುವಿಗೆ ಮಹಾಕಾಲನಾಗಿ ಮಹಾಲಿಂಗಪೂರಿತವಾಗಿ
ಪಂಚಾಕ್ಷರ ಶಿವಮಂತ್ರಮಿದು ಅಮೃತಪ್ರಾಯವಾಗಿಪ್ಪುದು
ಕಾಣಾ, ಶ್ರೀಶೈಲಮಲ್ಲಿಕಾರ್ಜುನ."

## ಷಡಕ್ಷರ ಮಂತ್ರ ಪ್ರಭಾವ : –34

"ನಮಃಶಿವಾಯ, ಪಂಚಾಕ್ಷರ ಮಂತ್ರಮಹಿಮೆಯೋಲ್,
ಓಂ ನಮಃಶಿವಾಯ, ಷಡಕ್ಷರ ಮಂತ್ರಮಹಿಮೆಯಿರ್ಪುದು ನೋಡಾ !
ವೀರಶೈವಾಚಾರ ಸಂಪದಮೆನೆ ಷಟ್‌ಸ್ಥಲ ದ್ಯೋತಕ ವಾಗಿಪ್ಪುದು ನೋಡಾ !
ಸಪ್ತಕೋಟಿ ಮಂತ್ರಂಗಳ್ಗೆ ಮಿಗಿಲೆನಿಸಿರ್ದ ಉಭಯ ಮಂತ್ರಗಳಿವು
ಶಿವಪದ ಫಲಪ್ರದವಾಗಿ ಮೂಲೋಕ ಪೂಜ್ಯಮೆನಲು
ಶಿವಮಂತ್ರವಾಗಿ ಶರಣಹೃದಯ ಪ್ರಾಣವಾಗಿರ್ಪುವು
ಕೇಳಾ, ಶ್ರೀಶೈಲಮಲ್ಲಿಕಾರ್ಜುನ."

## ಪಾದೋದಕ ಪ್ರಭಾವ-35

ಶಿ. ವೃ॥ ಶಿವೋಹಂ ತತ್ತ್ವಜ್ಞಾನಿಯೆನಿಪ ಮಹಾಜಂಗಮನೊಳಿ - ।
ರ್ಪುವಾ ಜ್ಞಾನಾಗ್ನಿಜ್ಯೋತಿ ಬೆರೆದು ಬರಲ್ ಪಾದಜಲದೊಳ್ ॥
ಶಿವಾಂಶಂ ಸರ್ವಾಂಗಕ್ಕೆ ಬಳೆಯುವ ಭಕ್ತಂಗೆ ನಿರುತಮ್
ಪವಿತ್ರಂ ಧೀವೃದ್ಧಿಂಗತಮೆನಿಸುತಂ ನೀಳ್ಗೆ ಸುಖಮುಮ್ ॥

– "ಧರ್ಮಜ್ಞಕವಿ" ಕೃತ "ಶಿವಾನುಭವದರ್ಪಣ ಪ. 15

"ಶಿವನೇ ತಾನಾಗಿಪ್ಪ ಮಹಾಜಂಗಮನೊಳಿರ್ದ ಜ್ಞಾನಾಗ್ನಿ ಜ್ಯೋತಿಯು
ಪಾದಾಂಗುಷ್ಟಮುಖವಾಗಿ ಜಲದಲ್ಲಿ ಬೆರೆದು ಬರುವುದರಿಂದ,

ಈ ದ್ರವರೂಪ ಮಾದ ಶಿವಾಂಶವನು ಸರ್ವಾಂಗಕ್ಕೆ ಬಳೆಯುವ ಭಕ್ತನಿಗೆ
ಜ್ಞಾನಾನುಭವವುಂತಾಗಿ ಸ್ವಸ್ವರೂಪ ಸಾಕ್ಷಾತ್ಕಾರಕ್ಕೆ
ಅನುಕೂಲವನ್ನುಂಟುಮಾಡಿಕೊಡುವುದಲ್ಲದೆ
ನಿಜ ಸುಖಶಾಂತಿಪ್ರದಾಯಕ ವಾಗಿದೆ.
ಈ ಪಾದೋದಕ ಪ್ರಭಾವವಿಂತಿರ್ಪುದು
ಕಾಣಾ, ಶ್ರೀಶೈಲಮಲ್ಲಿಕಾರ್ಜುನ. ”

ಟೀ : ವಿಶ್ವದ ಶ್ರೇಷ್ಠತತ್ತ್ವ ಪ್ರತಿಪಾದನಾ ಧರ್ಮಗ್ರಂಥಗಳಲ್ಲಿ- ವೀರಶೈವ ಶಿವಶರಣರ ಅನುಭಾ ಪ್ರಧಾನವಾದ ವಚನವಾಙ್ಮಯದಲ್ಲಿ ವಿವರಿಸಲಾದ ಪರತತ್ತ್ವ ವಿವೇಚನೆಯು ಅತ್ಯುನ್ನತ ಮಟ್ ದ್ದಾಗಿ ಅತ್ಯಂತ ಶ್ರೇಷ್ಠವೆನಿಸಿದೆ. ಈ ಬಗೆಯ ಸುಲಭ ಆತ್ಮಸಾಕ್ಷಾತ್ಕಾರದ ಷಟ್‌ಸ್ಥಲಾತ್ಮ ಪರಶಿವ ಪದದ ಸುಜ್ಞಾನ ಸುಭೋಧೆಯು ಜಗತ್ತಿನ ಯಾವ ಧರ್ಮಗ್ರಂಥಗಳಲ್ಲಿಯೂ ಹೇ ಲ್ಪಟ್ಟಿಲ್ಲ. ಈ ದೃಷ್ಟಿಯಿಂದ ( ವೀರಶೈವ ) ಲಿಂಗಾಯತ ಧರ್ಮವು ವಿಶ್ವಧರ್ಮವೆನಿಸಿದೆ.

## ಪ್ರಸಾದಮಹಿಮೆ [36]

ಚಂ.ಮಾ.ವೃ ॥ ವರಗುರು ಮುಂದೆ ತಂದಿರಿಪ ಭಕ್ತನ ಪೂರ್ಣ ವಿಶುದ್ಧ ವಸ್ತುವಮ್ ।
ಕರುಣದಿ ಕಂಡು ಸೇವಿಸುತೆ ಶೇಷವ ಭಕ್ತನಿಗರ್ಪಿಸಲ್ ಕೃಪಾ ॥
ಭರದಿ ಮಹಾಪ್ರಸಾದ ಮಯವಾಗಿರೆ ಭಕ್ತಗೆ ಶಾಂತಿಹರ್ಷಮುಮ್ ।
ಕರೆಯುವುದಾಗಿ ಸಂತತಸುಖಂ ಧರಣೀತಲದೊಳ್ ಸುಧಾರಸಮ್ ॥

"ಕನ್ನಡಕವಿಕಾಳಿದಾಸ" ಕೃತ "ಶಿವಾನುಭವದರ್ಪಣ" ಪ. 16

"ಭಕ್ತನು ಮುಂದೆ ತಂದಿರಿಸಲಾದ ವಿಶುದ್ಧ ವಸ್ತುವನು
ಪರಮ ಶ್ರೀಗುರುವು ಕರುಣದಿಂದ ನೋಡಿ ಸೇವಿಸಿ,
ಶೇಷವನು ಆಭಕ್ತಂಗೆ ಆನಂದದಿಂದ ಕೊಡುವುನಾಗಿ
ಅದುವೆ ಮಹಾಪ್ರಸಾದವಾಗಿ ಶಾಂತಿಹರ್ಷವನು
ನೀಡುವುದಾಗಿ ಪೃಥ್ವಿಯ ಮೇಲೆ ಸರ್ವರಿಗೂ ಅಮೃತಪ್ರಾಯವಾಗಿ
ಇಂತು ಪ್ರಸಾದ ಮಹಿಮೆ ಕಾಣಾ, ಶ್ರೀ ಶೈಲಮಲ್ಲಿಕಾರ್ಜುನ.

## ಲಿಂಗಭಕ್ತಿ

ಕಂದ ॥ ಭಕ್ತಗೆ ಜನಿಸಿಹ ಭೂಮಿಯೆ ।
ಮುಕ್ತಮೆನಲ್ ಲಿಂಗಭಕ್ತಿಯಿಂ ಶಿವಭಕ್ತಮ್ ॥

ಮುಕ್ತಿಯ ಸಾಧಿಸೆ ನುಡಿಯುವ ।
ಉಕ್ತಿಯೆ ಮಹಮಂತ್ರವಾಗೆ ಜಗಪಾವನವಯ್ ॥

"ಧರ್ಮಜ್ಞಕವಿ" ಕೃತ "ಶಿವಾನುಭವ ದರ್ಪಣ" ಪದ್ಯ - 17

ಶಿವಭಕ್ತಿ ಶಿವಜ್ಞಾನ ಶಿವಮಹಿಮೆಯಂ ಜಗಕೆ ತೋರಲೆಂದು
ಶಿವಶರಣ ಕರುಣೆದಳೆದು ಭುವಿಗೆ ಬರ್ಪನು ನೋಡಾ !
'ಶರಣಸತಿ ಲಿಂಗಪತಿ' ಭಾವದುಂಬಿ ಶಿವಶರಣ ಇಷ್ಟಲಿಂಗ ಭಕ್ತಿ-
ರತಿಯಲ್ಲಿ ಭಕ್ತಿಯೋಗಿಯಾರ್ದನು ನೋಡಾ.
ಸಕಳಾರ್ಥ ಶಿವಪದ ಸಿದ್ಧಿಯಿಂ ಮಹಾನುಭಾವಿ ಶಿವಶರಣ
ಮನುಕುಲಕೆ ಮುಕ್ತಿಪಥ ತೋರ್ಪನು ನೋಡಾ
ಇಂತಪ್ಪ ಹರಶರಣರ ಉಕ್ತಿಯೆ ಮಹಾಮಂತ್ರವಾಗಿ
ಜಗಪಾವನವಪ್ಪುದು ಕಾಣಾ, ಶ್ರೀಶೈಲ್ಲಮಲ್ಲಿಕಾರ್ಜುನ !

## ಇಷ್ಟಲಿಂಗವೇ ಶ್ರೇಷ್ಠ

[38]

ಚಂ.ಮಾ.ವೃ॥ ಗುರುಕೃಪೆಯಿಂದೆ ತಾಂಪಡೆದ ಮುಕ್ತಿಸುಖಾನ್ವಯದಿಷ್ಟಲಿಂಗಮುಮ್
ಶರಣನೆ ಭಕ್ತಿಯಿಂ ಭಜಿಸುತಂ ನೆರೆನಂಬುಗೆಯಾಂತು ನಿತ್ಯದೊಳ್ ॥
ಹೊರಗಿನ ಬೇರೆಲೋಕದ ಜಡಾತ್ಮಕಲಿಂಗವ ನಂಬನೆಂದಿಗುಮ್ ।
ನೆರೆಯೊಳುರೆ ಪ್ರವಾಹನುಳಿದಾ ಬರಿಬಾವಿಯತೋಡಲಾಗದಯ್ ॥

"ಕನ್ನಡಕವಿಕಾಳಿದಾಸ" ಕೃತ "ಶಿವಾನುಭವದರ್ಪಣ" ಪ - 11

"ಮನೆಯಮುಂದೆಹಾಲುಹೊಳೆ ಹರಿಯುತ್ತಿರಲು, ಬೇರೆ
ಬಾವಿಯ ತೋಡಿ ಬರಿದೆಬಳಲಲೇಕೆ ?
ಬೇಡಿದವರಗಳನೀವಕರಕಮಲ ದಿಷ್ಟಲಿಂಗವಿರಲು, ಧರೆಯ
ಸ್ಥಾವರಲಿಂಗಗಳಿಗೆರಗಿ ವ್ಯಥೆಗೇಡಿ ಯಾಗಲೇಕೆ ?
ಪರಮ ಪತಿವ್ರತೆಗೆ ಗಂಡನ್ಬೊಬ್ಬನೇ ನೋಡಾ !
ಶರಣ ಸತಿಗೆ ಲಿಂಗಪತಿಯೋರ್ವನೇ ನೋಡಾ !
ಇಂತಪ್ಪಶರಣಲಿಂಗಾಂಗ ಸಾಮರಸ್ಯ ಸುಖಾಬ್ಧಿಯೊಳ್ ಮುಳುಗೇಳ್ದು
ಸಂತತಂ ಪರಶಿವಲೀಲಾ ವಿಲಾಸಿಯಾಗಿರ್ದನು
ಕಾಣಾ, ಶ್ರೀ ಶೈಲ ಮಲ್ಲಿಕಾರ್ಜುನ "

## ಇಷ್ಟಲಿಂಗದ ನಿಜಸ್ವರೂಪ

[ 39 ]

ವೃ. ವೃ॥ ಸಹಸ್ರ ದಳ ಪದ್ಮ ಕರ್ಣಿಕೆಯ ಮಧ್ಯದೊಳ್ ರಂಜಿಪಾ ।
ಮಹಾ ಸುಖ ಸುಶಾಂತಿ ಸಂಪದ ಸಮೇತ ಚಿದ್ಬಿಂದುವೇ ॥
ಸಹಾಯುಮಯ ದಿಷ್ಟಲಿಂಗಮೆನಿಸಲ್ ಮಹಾಸ್ವಾಮಿಯಿಂ ।
ಮಹೋನ್ನತಿಗೆ ಸಾಧನಂ ಸಮರಸೈಕ್ಯ ತತ್ತ್ವಾಕರಂ ॥

**"ಧರ್ಮಜ್ಞ ಕವಿ" ಕೃತ "ಶಿವಾನುಭಾವದರ್ಪಣ" ಪ. 10**

"ಪರಮ ಶಿಷ್ಯನಾ ಶಿರೋಭಾಗದಲ್ಲಿ ಶೋಭಿಸುತಿರ್ದ
ಸಹಸ್ರದಳ ಪದ್ಮಕರ್ಣಿಕೆಯ ಮಧ್ಯದಲ್ಲಿ ಬೆಳಗುತಿರ್ಪಾ
ಚಿದ್ಬಿಂದು ಕಲಾಜ್ಯೋತಿ ಸ್ವರೂಪದಿಷ್ಟ ಲಿಂಗಮಂ
ಮಹಾಗುರುಸ್ವಾಮಿಯು ಆಶಿಷ್ಯಂಗೆ ಕರುಣದಿಂ ನೀಡಿ
ಮಹಾಸುಖಶಾಂತಿದಾಯಕವಾದ ಲಿಂಗಾಂಗ ಸಾಮರಸ್ಯ-
ಜ್ಞಾನವನು ಅನುಗ್ರಹಿಸುವನು ನೋಡಾ.
ಇಂತಪ್ಪ ನಿಜಸ್ವರೂಪ ಮಾದಿಷ್ಟುಲಿಂಗಮಂ ಶಿಷ್ಯನಿಗೆ ನೀಡಿ
ಕೈವಲ್ಯ ಸುಖದೊಳಿರಿಸಿ ಉದ್ಧರಿಪ ಸದ್ಗುರು ಕರುಣಾಮೂರ್ತಿಯಲ್ತೆ
ಹೇಳಾ ? ಶ್ರೀ ಶೈಲ ಮಲ್ಲಿಕಾರ್ಜುನ!"

## ಶ್ರೀ ಗುರುವಿನ ಲಕ್ಷಣ

[ 40 ]

ಮ.ಸ.ವೃ॥ ಸಲೆ ನಿನ್ನಂಗಕ್ಕೆ ಕೂಡಿರ್ಪ ಮರವೆಯು ತಮಸ್ಸಂ ಸ್ವಧೀಯೋಗತೇಜಃ ।
ಕಲಿತಂ ನಿತ್ಯಂ ಪ್ರಮೋದಾಮಿತ ವರಗುರು ಕಾರುಣ್ಯದಿಂ ನಾಶಗೆಯ್ದಾ ॥
ಮಲಿನಂ ದೂಡಿ ಪ್ರಭಾವಂ ಸುರಿದು ಕೊಡಲುರೆ ಜ್ಞಾನ ತತ್ತ್ವ ಪ್ರಬೋಧಾ ॥
ಮಿಳಿತಂ ಶ್ರೇಷ್ಠಂಶ್ರುತಂ ಶ್ರೀ ಗುರುವು ತಿಳಿಯಿವಂ ಶಾಶ್ವತಂ ದೇವರೂಪಂ ।

**" ಕನ್ನಡ ಕವಿ ಕಾಳಿದಾಸ " ಕೃತ ಶಿವಾನುಭಾವ ದರ್ಪಣ ಪ. 7**

"ಪರಮ ದೈವ ಸ್ವರೂಪನಾಗಿಪ್ಪ ಮಹಾಜ್ಞಾನಿಯಾಗಿಪ್ಪ
ಶಿವಯೋಗಿಯೆ ಸದ್ಗುರುವೆನಿಪನು ನೋಡಾ
ಇಂತಪ್ಪ ಶ್ರೀ ಗುರುವು ಶಿವಜ್ಞಾನಯೋಗ ತೇಜಸ್ತೇಜೋರೂಪನಾಗಿ
ಶಿಷ್ಯನ ಅಜ್ಞಾನ ತಮವನು ಕಳೆದು ಸುಜ್ಞಾನ ಬೆಳಕನು ಕರೆವನೋಡಾ
ಪರುಷ ಮುಟ್ಟಲೊಡನೆ ಕಬ್ಬುನವು ಸುವರ್ಣಮಪ್ಪಂತೆ
ರವಿ ಆಗಮಿಸಲೊಡನೆ ಕತ್ತಲೆಯಳಿದು ಬೆಳಕು ಬರ್ಪಂತೆ
ಶ್ರೀ ಗುರು ಅನುಗ್ರಹಿಸಲೊಡನೆ ಶಿಷ್ಯ ಸುಜ್ಞಾನಿಯಪ್ಪನು ನೋಡಾ
ಇಂತಪ್ಪ ಶಿವಜ್ಞಾನಿ ಪರಶಿವರೂಪಿ ಶ್ರಿ ಗುರುವು ಶ್ರೇಷ್ಠ ಕೈವಲ್ಯಪದ-
ವೀವನಿದು ಸತ್ಯಕಾಣಾ, ಶ್ರೀ ಶೈಲ ಮಲ್ಲಿಕಾರ್ಜುನ !"

---

ವಿಶೇಷ ಟೀಪು :-

## ಸುಬೋಧಾಮೃತ

" ಮೊದಲು ಆತ್ಮ ಪ್ರೇಮ ಮೂಡಬೇಕು. ಅದರಲ್ಲಿ ಸಮಾಜ ಪ್ರೇಮ ಇರಬೇಕು. ಆ ಮೂಲಕ ವಿಶ್ವಪ್ರೇಮ. ಇದಕ್ಕಾಗಿ ತನು ಮನ ಭಾವಗಳ ಶುದ್ಧಿಯನ್ನು ಸಂಪಾದಿಸಬೇಕು, "

"ಪರಲೋಕ ಎಂದರೆ ಆತ್ಮಲೋಕ. ಶ್ರೇಷ್ಠವಾದ ಲೋಕವೆಂದರೆ ಇದುವೇಆಗಿದೆ. ಎಲ್ಲಿ ಆತ್ಮ ವಿವೇಕ ಆತ್ಮಶಾಂತಿ ಆತ್ಮಸುಖ ಇರುತ್ತದೆಯೋ ಅದುವೇ ಪರಲೋಕ. "
"ನಮ್ಮ ಮನಸ್ಸೆಂಬ ಜ್ಯೋತಿಗೆ ಕಟ್ಟಿದ ಮಂಕನ್ನು ಸರಿಪಡಿಸುವ ಕಡ್ಡಿ, ಮಹಾತ್ಮರ ಚರಿತ್ರೆಯ ಶ್ರವಣ ಇದರಿಂದ ನಮ್ಮ ಆತ್ಮ ಜ್ಯೋತಿ ಪ್ರಜ್ವಲಿಸುತ್ತದೆ. "

**ಚಿತ್ರದುರ್ಗದ ಪೂಜ್ಯ ಶ್ರೀ ಜಗದ್ಗುರು ಮಲ್ಲಿಕಾರ್ಜುನ ಮಹಾಸ್ವಾಮಿಗಳು.**

" ಕುಳಿತು ಊಟ ಮಾಡಬಾರದು, ದುಡಿದು ಉಣ್ಣಬೇಕು. ದುಡಿಮೆ, ದುಡಿಮೆ ದುಡಿಮೆಯೊಂದೇ ರಾಷ್ಟ್ರನಿರ್ಮಾಣದ ಮಹಾ ಮಂತ್ರವಾಗಬೇಕು. ಹಾಗಾದಾಗಲೇ ಭಾರತದ ಭವಿಷ್ಯ ಅರಳೀತು. "

"ಅಲ್ಪಶ್ರಮ, ಅಧಿಕಲಾಭದ ಮನೋಧರ್ಮವನ್ನು ಬೆಳೆಸಿಕೊಳ್ಳುತ್ತಿರುವ ಯುವ ಜನಾಂಗದ ಪ್ರವೃತ್ತಿ ರಾಷ್ಟ್ರಪ್ರಗತಿಗೆ ಆಶಾದಾಯಕವಾದುದಲ್ಲ, ನಿಷ್ಕ್ರಿಯತೆ, ಆಲಸ್ಯಗಳು ಪ್ರಗತಿಯ ಮಹಾಕಂಟಕಗಳು. '

"ನಾವು ಮಾತಾಡಬಾರದು, ನಮ್ಮ ಕೆಲಸಗಳು ಮಾತನಾಡಬೇಕು. ಅದು ವ್ಯಕ್ತಿತ್ವಕ್ಕೆ ಶೋಭೆ ಆದರೆ ಇಂದು ನಾವು ಬರೀ ಮಾತಾಡುತ್ತಿದ್ದೇವೆ. ಕೆಲಸಗಳು ಮೂಕಸ್ಥಿತಿ ಯಲ್ಲಿವೆ ಅಥವಾ ಕೇವಲ ಸೊನ್ನೆಗಳಾಗಿವೆ. "

**ಸಿದ್ಧಗಂಗಾಧಿಪತಿ ಪೂಜ್ಯ ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳು.**

# ವಚನಗಳಲ್ಲಿ ಪ್ರತಿಪಾದಿತ ಷಟ್‌ಸ್ಥಲ ಒಂದು ವಿವೇಚನೆ.

ಪ್ರೊ. ಎಸ್. ಎಸ್, ಭೂಸರೆಡ್ಡಿ, ಲಕ್ಷ್ಮೀನಗರ, ಧಾರವಾಡ - 4

ಕ್ರಿಯೆಯೇ ತನು, ಜ್ಞಾನವೇ ಪ್ರಾಣ,
ತನು ಲಿಂಗವಾಗಿ, ಪ್ರಾಣ ಜಂಗಮವಾಗಿ,
ತನುವ ಸಯಮಾಡಿ, ಪ್ರಾಣವ ಲಿಂಗಜಂಗಮಕರ್ಪಿಸಿ,
ನಿರಂತರ ಸಾವಧಾನಿಯಾಗಿರಬಲ್ಲ ಪ್ರಸಾದಿಗಳ
ಎನಗೊಮ್ಮೆ ತೋರಿ ಸಲಹಾ ಕೂಡಲಸಂಗಮದೇವಾ "

ಎಂದು ಬೇಡಿಕೊಳ್ಳುವುದನ್ನು ನೋಡಬಹುದು. ಚನ್ನಬಸವಣ್ಣನವರು ಪ್ರಸಾದಿಯ ಲಕ್ಷಣವನ್ನು

" ಅನರ್ಪಿತವ ಸಮನಿಸದೆ
ಬಂದುದ ಕಾಯದ ಕರ್ಣದ ಕೈಯಲ್ಲಿ ಕೊಟ್ಟು
ಲಿಂಗಸಹಿತ ಭೋಗಿಸುವಲ್ಲಿ ಪ್ರಸಾದಿ.
——————————————
——————————————

ಎಂದಿದ್ದಾರೆ. ಮನದ ಮಲಿನತೆಯನ್ನು ಕಳೆದು, ಸೂತಕ ಪಾತಕಗಳನ್ನು ನಷ್ಟಮಾಡಿ ಪ್ರಾವಿತ್ರ್ಯತೆಯು ತಾನೇ ತಾನಾಗಿ ಬೆಳಗುವ ಈ ಸ್ಥಲದ ಮಹತ್ತ್ವವನ್ನು ಬಸವಣ್ಣನವರ ವಚನ ತಿಳಿಯಪಡಿಸುತ್ತದೆ.

" ಹೊಲೆಯುಂಟೇ ಲಿಂಗವಿದ್ದೆಡೆಯಲ್ಲಿ ?
ಕುಲವುಂಟೇ ಜಂಗಮವಿದ್ದೆಡೆಯಲ್ಲಿ ?
ಎಂಜಲುಂಟೇ ಪ್ರಸಾದವಿದ್ದೆಡೆಯಲ್ಲಿ ?
ಅಪವಿತ್ರದ ನುಡಿಯ ನುಡಿವ ಸೂತಕವೆ ಪಾತಕ.
ನಿಷ್ಕಳಂಕ, ನಿಜೈಕ್ಯ, ತ್ರಿವಿಧ ನಿರ್ಣಯ
ಕೂಡಲಸಂಗಮದೇವ ನಿಮ್ಮ ಶರಣರಿಗಿಲ್ಲದಿಲ್ಲ "

ಪ್ರಸಾದಿ ತತ್ತ್ವದ ಘನತೆಯೆನ್ನು ಇನ್ನಷ್ಟು ಸ್ಪಷ್ಟ ಪಡಿಸಿದ ಅವರದೇ ಇನ್ನೊಂದು ವಚನ:- " ನಿಮ್ಮ ಶ್ರೀಪಾದವ ಮುಟ್ಟಿ ಕರ್ಮ ಹರಿಯಿತ್ತು,
ನಿಮ್ಮ ಪ್ರಸಾದಿಂದ ಭವಗೆಟ್ಟೆ ನೋಡಯ್ಯ
ಮನ ಪರುಷ, ದೃಷ್ಟಿ ಪರುಷ, ಭಾವ ಪರುಷ,
ಲಿಂಗ ಗಣಂಗಳು ಕೂಡಲಸಂಗಮ ದೇವ
ನಿಮ್ಮ ಶರಣರನುಭಾವದಿಂದ ನಾನು ಸುಖಿಯಾದೆನು "

ಮಡಿವಾಳ ಮಾಚಿದೇವನ ಈ ವಚನ ಪ್ರಸಾದಿ ತತ್ವದ ಪ್ರತೀಕದಂತಿದೆ

"ಅಂಗವೆ ಲಿಂಗವಾಗಿ, ಲಿಂಗವೆ ಪ್ರಾಣವಾಗಿ,
ಜಂಗಮವೆ ಸಂಗವಾಗಿ, ಸಂಗವೆ ಸುಸಂಗವಾಗಿ,
ಪ್ರಾಣವೆ ಪ್ರಸಾದವಾಗಿ, ಪ್ರಸಾದವೆ ಪ್ರಾಣವಾಗಿ,
ಇಂತೀ ತ್ರಿವಿಧದಲ್ಲಿ ಸಂಪನ್ನನಾದ ಸಮತಾಪ್ರಸಾದಿ,
ಸನ್ನಿಹಿತಪ್ರಸಾದಿ, ಸಮಾಧಾನ ಪ್ರಸಾದಿ ಕಲಿದೇವಯ್ಯಾ,
ಚೆನ್ನಬಸವಣ್ಣನ ಪ್ರಸಾದವ ಕೊಂಡು
ನಾನು ಬದುಕಿದೆನು ಕಾಣಾ ಪ್ರಭುವೆ"

ತನುಮನಧನವನ್ನು ಅರ್ಪಿಸಿದ ಮೇಲೆ ನನ್ನದೆಂಬ ಭಾವ ಅಡಗಿ ಅರ್ಪಿಸಿದುದೆಲ್ಲ ಶಿವನ ಪ್ರಸಾದ ಎನ್ನುತ್ತಾರೆ ಷಣ್ಮುಖ ಶಿವಯೋಗಿಗಳು. -

"ಮಾಡುವ ತನುವು ನೀವೇಯಾದಿರಾಗಿ
ನೀಡುವ ದ್ರವ್ಯವು ನೀವೇಯಾದಿರಾಗಿ,
ಕೊಡುವ ಮನವು ನೀವೇಯಾದಿರಾಗಿ,
ಅಖಂಡೇಶ್ವರಾ ನಾನೂ ಇಲ್ಲ, ನೀನೂ ಇಲ್ಲ, ಏನೇನೂ ಇಲ್ಲ"

"ಪೂಜೆಯ ಮಾಡಿರೋ ನಿಮ್ಮೊಳು ಪ್ರಾಣಲಿಂಗದ ಪೂಜೆಯ ಮಾಡಿರೋ" ಎಂಬ ಮುಪ್ಪಿನ ಷಡಕ್ಷರಿಗಳ ಕಾವ್ಯವಾಣಿಯಿಂದ ಪ್ರಾಣಲಿಂಗಿಯ ಸ್ವರೂಪ, ಲಕ್ಷಣ ತಿಳಿದುಬರುತ್ತದೆ. ಇಲ್ಲಿ ಭಕ್ತನ ಮನಸ್ಸು ಊರ್ಧ್ವಮುಖಿ(ಅಂತರ್ಮುಖಿ) ಯಾಗಿರುತ್ತದೆ. ಅಂಗಕ್ಕೆ ಚೈತನ್ಯ ಸ್ವರೂಪವಾದುದು ಪ್ರಾಣ. ಪ್ರಾಣಯಿದ್ದರೆ ಮಾತ್ರ ಈ ಅಂಗಕ್ಕೆ ಬೆಲೆಯಿದೆ. ಅಂಗಬೇರೆಯಲ್ಲ ಲಿಂಗಬೇರೆಯಲ್ಲ. ಎಂಬ ಭಾವವಿಲ್ಲಿ ಬಲಿಯುತ್ತದೆ. ಹೊರಗಿನ ಬಾಹ್ಯಪ್ರಜ್ಞೆ ತಪ್ಪಿ ಸ್ಥಿತಪ್ರಜ್ಞೆ ಮೂಡುತ್ತದೆ. ಇಷ್ಟ ಲಿಂಗದ ಪೂಜೆ ಪ್ರಾಣಲಿಂಗದ ಪೂಜೆಯಾಗುತ್ತದೆ. ಅವಧಾನ ಭಕ್ತಿ ಬೆಳೆಯುತ್ತದೆ.

ಮೋಳಿಗೆಯ ಮಾರಯ್ಯಗಳ ಪ್ರಾಣಲಿಂಗಿಸ್ಥಲದ ಸ್ವರೂಪವನ್ನು ಇಲ್ಲಿ ಹೇಳಿದ್ದಾರೆ :

"ಕ್ರೀಶುದ್ಧವಾದವಂಗೆ ಭಾವಶುದ್ಧ,
ಭಾವಶುದ್ಧವಾದವಂಗೆ ಆತ್ಮಶುದ್ಧ
ಆತ್ಮಶುದ್ಧವಾದವಂಗೆ ಅರಿವು ಕರಿಗೊಂಡು
ನಿಂದ ನಿಜವೆ ಪ್ರಾಣಲಿಂಗ ಸಂಬಂಧ ನಿಃಕಳಂಕಮಲ್ಲಿಕಾರ್ಜುನಾ"

ವ್ಯೋಮಮೂರುತಿ ವೀರವಿರಾಗಿ ಅನುಭವಮಂಟಪದ ಅಧ್ಯಕ್ಷ ಅಲ್ಲಮಪ್ರಭುದೇವರು ಮೇ

ಪ್ರಾಣಲಿಂಗಸ್ಥಲದ ಎತ್ತರವನ್ನು ಹೀಗೆ ಎತ್ತಿ ಹಿಡಿದಿದ್ದಾರೆ:

"ಮನವೇ ಲಿಂಗವಾದ ಬಳಿಕ ನೆನೆಹುದಿನ್ನಾರನಯ್ಯಾ
ಭಾವವೇ ಐಕ್ಯವಾದ ಬಳಿಕ ಬಯಸುವುದಿನ್ನಾರನಯ್ಯಾ
ಭ್ರಮೆಯಳಿದು ನಿಜವು ಸಾಧ್ಯವಾದ ಬಳಿಕ
ಅರಿವುದಿನ್ನಾರನಯ್ಯಾ ಗುಹೇಶ್ವರಾ"

ಪ್ರಾಣಲಿಂಗಿ ಸ್ಥಾನವ ಹಿರಿಮೆಯನ್ನನು ಮಹಾದೇವಿಯಕ್ಕನಂತೂ ಕಾವ್ಯಮಯ ವಾಗಿ ಹೇಳಿದ್ದಾಳೆ:

"ಕಾಣುತ್ತ ಕಾಣುತ್ತ ಕಂಗಳ ಮುಚ್ಚಿದೆ ನೋಡವ್ವಾ;
ಕೇಳುತ್ತ ಕೇಳುತ್ತ ಮೈಮರೆದೊರಗಿದೆ ನೋಡವ್ವಾ;
ಹಾಸಿದ ಹಾಸಿಗೆಯು ಹಂಗಿಲ್ಲದೆ ಹೋಯಿತ್ತು ಕೇಳವ್ವಾ;
ಚನ್ನಮಲ್ಲಿಕಾರ್ಜುನ. ದೇವರ ದೇವನ ಕೂಡುವ ಕೂಟವ
ನಾನೇನೆಂದರಿಯದೆ ಮರೆದೆ ಕಾಣವ್ವಾ"

ಎಡೆಯೂರ ಸಿದ್ಧಲಿಂಗೇಶ್ವರ ಶಿವಯೋಗಿಗಳು ಪ್ರಾಣಲಿಂಗಿಯ ಮಹತ್ವವನ್ನು ಮನೋಹರವಾಗಿ ಪ್ರತಿಪಾದಿಸಿದ್ದಾರೆ.

"ಕಾಯ ಲಿಂಗಾರ್ಪಿತವಾದ ಬಳಿಕ ಕರ್ಮತ್ರಯಂಗಳು ಇರಲಾಗದು ನೋಡಾ.
ಜೀವಲಿಂಗಾರ್ಪಿತವಾದ ಬಳಿಕ ಸಂಸಾರವ್ಯಾಪ್ತಿಯಾದ ಜೀವನ ಗುಣ ಇರಲಾಗದು,
ಅದು ಅರ್ಪಿತವಲ್ಲ ನೋಡಾ
ಕರಣಂಗಳು ಲಿಂಗಾರ್ಪಿತವಾದ ಬಳಿಕ ಕರಣಂಗಳೆಲ್ಲವು ಲಿಂಗ ಕಿರಣಂಗಳಾಗಿ,
ಆ ಲಿಂಗಕಿರಣವೇ ಹರಣವಾಗಿರಬೇಕು ನೋಡಾ
ಕಾಯದ ಜೀವದ ಕರಣದ ಗುಣವ ಕಳೆಯದೆ ಲಿಂಗಾರ್ಪಿತ ಪ್ರಸಾದಿಗಳೆಂಬ
ಪ್ರಪಂಚಗಳ ಮೆಚ್ಚನು ಕಾಣಾ ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೆ"

ಬಸವಣ್ಣನವರು ಆಡಂಬರದ ಮಾತಿನ ಮಲ್ಲರನ್ನು ಚೆನ್ನಾಗಿ ಛೇಡಿಸಿದ್ದಾರೆ ಈ ವಚನದಲ್ಲಿ:

"ಹತ್ತುಸಾವಿರ ಗೀತವಹಾಡಿ ಅರ್ಥವಿಟ್ಟಲ್ಲಿ ಫಲವೇನು
ಮುಟ್ಟುವತೆರನನರಿಯದನ್ನಕ್ಕ?
ಕಟ್ಟಿದರೇನು; ಬಿಟ್ಟರೇನು,
ಮನವು ಲಿಂಗದಲ್ಲಿ ಮುಟ್ಟದನ್ನಕ್ಕ?
ಮಾತಿನಲಿ ಒಲಿಸಿ ಮಹತ್ತಪ್ಪ ಲಿಂಗವ ಕಂಡಿಹೆನೆಂಬ
ಪಾತಕರ ಮೆಚ್ಚ ನಮ್ಮ ಕೂಡಲಸಂಗಮದೇವ"

ಷಣ್ಮುಖ ಶಿವಯೋಗಿಗಳು ಪ್ರಾಣಲಿಂಗಿ ಸ್ಥಲದ ವಸ್ತುನಿಷ್ಠತೆಯನ್ನು ಯಥಾರ್ಥವಾಗಿ ನಮ್ಮ ಮುಂದೆ ಬಚ್ಚಿಟ್ಟಿದ್ದಾರೆ –

" ಪ್ರಾಣಲಿಂಗ ಸಂಬಂಧಿಗಳೆಂದು ನುಡಿವವರು ಅನೇಕರುಂಟು
ಪ್ರಾಣಲಿಂಗದ ಕಳೆಯನಾರೂ ಅರಿಯರಲ್ಲಾ
ಪ್ರಾಣಲಿಂಗ ಕಳೆ ಎಂತೆಂದಡೆ,
ಆಧಾರದಲ್ಲಿ ಎಳೆಯ ಸೂರ್ಯನಂತೆ
ಬೆಳಗುತಿರ್ಪುದು ನೋಡಾ ಪ್ರಾಣಲಿಂಗವು
ಸ್ವಾಧಿಷ್ಠಾನದಲ್ಲಿ ಪೂರ್ಣಚಂದ್ರನಂತೆ
ಬೆಳಗುತಿರ್ಪುದು ನೋಡಾ ಪ್ರಾಣಲಿಂಗವು
ಮಣಿಪೂರಕದಲ್ಲಿ ಮಿಂಚಿನ ಲತೆಯಂತೆ
ಬೆಳಗುತಿರ್ಪುದು ನೋಡಾ ಪ್ರಾಣಲಿಂಗವು
ಅನಾಹತದಲ್ಲಿ ಸ್ಪಟಿಕದ ಶಲಾಕೆಯಂತೆ
ಬೆಳಗುತಿರ್ಪುದು ನೋಡಾ ಪ್ರಾಣಲಿಂಗವು
ವಿಶುದ್ಧಿಯಲ್ಲಿ ಮೌಕ್ತಿಕದ ಗೊಂಚಲದಂತೆ
ಬೆಳಗುತಿರ್ಪುದು ನೋಡಾ ಪ್ರಾಣಲಿಂಗವು
ಅಜ್ಞೆಯಲ್ಲಿ ರತ್ನದ ದೀಪ್ತಿಯಂತೆ
ಬೆಳಗುತಿರ್ಪುದು ನೋಡಾ ಪ್ರಾಣಲಿಂಗವು
ಬ್ರಹ್ಮರಂಧ್ರದಲ್ಲಿ ಸ್ವಯಂಜ್ಯೋತಿಯಂತೆ
ಬೆಳಗುತಿರ್ಪುದು ನೋಡಾ ಪ್ರಾಣಲಿಂಗವು
ಶಿಖೆಯಲ್ಲಿ ಶುದ್ಧ ತಾರೆಯಂತೆ
ಬೆಳಗುತಿರ್ಪುದು ನೋಡಾ ಪ್ರಾಣಲಿಂಗವು
ಪಶ್ಚಿಮದಲ್ಲಿ ಉಳುಕನಕ್ಷತ್ರದಂತೆ
ಬೆಳಗುತಿರ್ಪುದು ನೋಡಾ ಪ್ರಾಣಲಿಂಗವು
ಇಂತಪ್ಪ ಪ್ರಾಣಲಿಂಗದ ಕಳೆಯನರಿಯದೆ,
ಪ್ರಾಣನ ಸಂಯೋಗಿಸಿ, ಪ್ರಳಯದ ಗೆಲಲರಿಯದೆ,
ಮಾತಿನ ಮಾಲೆಯ ನುಡಿದು, ನೀತಿಶಾಸ್ತ್ರ ಘಾತಕದ ಕಥೆಗಳ ಕಲಿತು,
ಓತು ಎಲ್ಲರೊಡನೆ ಹೇಳಿ, ಚಾತುರ್ಯನೆನೆಸಿಕೊಂಡು
ಒಡಲ ಹೊರೆವ ಉದರ ಘಾತಕರ
ಪ್ರಾಣಲಿಂಗ ಸಂಬಂಧಿಗಳೆಂತಿಂಬೆವಯ್ಯಾ, ಅಖಂಡೇಶ್ವರಾ ? "

ಪ್ರಾಣಲಿಂಗಿಯ ಸಾಮರಸ್ಯದ ಅರಿವನ್ನು ಚನ್ನಬಸವಣ್ಣನವರು ಇಲ್ಲಿ ತೋರಿಸಿದ್ದಾರೆ.

"ಅಂಗದದಿಂದ ಲಿಂಗಸುಖ, ಲಿಂಗದಿಂದ ಅಂಗಸುಖ,
ಅಂಗಲಿಂಗಸಂಗದಿಂದ ಪರಮಸುಖ ನೋಡಯ್ಯ
ಅಂಗಲಿಂಗಸಂಗಸುಖವನು, ಕೂಡಲಚನ್ನಸಂಗಯ್ಯನಲ್ಲಿ
ಲಿಂಗೈಕ್ಯನೇ ಬಲ್ಲ"

ಮಹಾನುಭಾವಿ ಬಸವಣ್ಣನವರು "ಅರಿದಡೆ ಶರಣ ಮರೆದಡೆ ಮಾನವ" ಎಂದು ಸೂತ್ರರೂಪವಾಗಿ ಶರಣಸ್ಥಲದ ಲಕ್ಷಣವನ್ನು ಅರ್ಥಪೂರ್ಣವಾಗಿ ನಿವೇದಿಸಿದ್ದಾರೆ. ಶರಣಸತಿ ಲಿಂಗ ಪತಿ ಎಂಬ ಭಾವವಿಲ್ಲಿದೆ. "ಶಿವನಿಗಿಂತ ಶಿವಶರಣರೇ ಶ್ರೇಷ್ಠರು" ಎನ್ನುವ ಅನುಭಾವಿಗಳ ಮಾತಿನಲ್ಲಿ ಅರ್ಥವಿದೆ. ಶರಣ ಸ್ಥಲದ ಭಕ್ತನ ನಿಲುವು ಪರವಸ್ತುವಿನಲ್ಲಿ ಸರ್ವಸಮರ್ಪಣಭಾವವನ್ನು ಹೊಂದಿರುವುದೇ ಆಗಿದೆ

ಷಣ್ಮುಖ ಶಿವಯೋಗಿಗಳು ಶರಣನ ನಿಲುವನ್ನು ಈ ರೀತಿ ನಿರೂಪಿಸಿದ್ದಾರೆ.

'ನಡೆಯೊಳಗೆ ನುಡಿ ತುಂಬಿ, ನುಡಿಯೊಳಗೆ ನಡೆ ತುಂಬಿ,
ನಡೆನುಡಿ ಎರಡನು ಪರಿಪೂರ್ಣ ತುಂಬಿ,
ಲಿಂಗವ ಕೂಡ ಬಲ್ಲಾತನೇ ಶರಣ ನೋಡಾ ಅಖಂಡೇಶ್ವರಾ

ಬಸವಣ್ಣನವರು ಶರಣನ ಇರವನ್ನು ಇಲ್ಲಿ ತೋರಿದ್ದಾರೆ –

"ಶರಣ ನಿದ್ರೆಗೈದಡೆ ಜಪ ಕಾಣಿರೋ,
ಶರಣನೆದ್ದು ಕುಳಿತಡೆ ಶಿವರಾತ್ರಿ ಕಾಣಿರೋ
ಶರಣ ನಡೆದುದೇ ಪಾವನ ಕಾಣಿರೋ
ಶರಣ ನುಡಿದುದೇ ಶಿವತತ್ತ್ವ ಕಾಣಿರೋ
ಕೂಡಲ ಸಂಗನ ಶರಣನ ಕಾಯವೇ ಕೈಲಾಸ ಕಾಣಿರೋ."

ಎಂದು ಬಣ್ಣಿಸಿದರೆ ಶಿವಯೋಗಿ ಸಿದ್ಧರಾಮನು ಮತ್ತೊಂದು ರೀತಿಯಲ್ಲಿ ವಿವರಿಸಿದ್ದಾನೆ.

"ಶರಣನ ಜಾಗ್ರತಿಯೆ ಶಿವರಾತ್ರಿ ಕಂಡಾ ಮನವೆ
ಶರಣನ ನಿದ್ರೆಯ ಶಿವಯೋಗ ಸಮಾಧಿ ಕಂಡಾ ಮನವೆ
ಶರಣನ ನುಡಿಯೆ ಶ್ರೀರುದ್ರ ಪಂಚಬ್ರಹ್ಮೋಪನಿಷತ್ತು ಕಂಡಾಮನವೆ
ಶರಣನ ನಡೆಯೆ ಮುಕ್ತಿಸೋಪಾನ ಕಂಡಾ ಮನವೆ
ಶರಣನ ಭೋಜನವೆ ಕಪಿಲಸಿದ್ಧ ಮಲ್ಲಿಕಾರ್ಜುನನರ್ಪಣ ಕಂಡಾ ಮನವೆ

ಅಲ್ಲಮಪ್ರಭುದೇವರು ಶರಣರ ಸುಳುಹಿನ ಸೊಗಸನ್ನು ಈ ವಚನದಲ್ಲಿ ಬಿಂಬಿಸಿದ್ದಾರೆ.

'ಕಂಡುದೆಲ್ಲಪಾವನ, ಕೇಳುತ್ತಿಲ್ಲ ಪರಮಬೋಧೆ
ಮುಟ್ಟಿತ್ತೆಲ್ಲ ಪರುಷದ ಸೋಂಕು
ಒಡನೆ ನುಡಿದವರೆಲ್ಲರೂ ಸದ್ಯೋನ್ಮುಕ್ತರು
ಸುಳಿದ ಸುಳುಹೆಲ್ಲ ಜಗತ್ಪಾವನ ಮೆಟ್ಟಿದ ಧರೆಯೆಲ್ಲವೂ ಅವಿಮುಕ್ತಕ್ಷೇತ್ರ
ಸೋಂಕಿದ ಜಲ್ಲವೆಲ್ಲವೂ ಪುಣ್ಯತೀರ್ಥಂಗಳು
ಶರಣೆಂದು ಭಕ್ತಿಯ ಮಾಡಿದವರೆಲ್ಲರೂ ಸಾಯುಜ್ಯರು.
ಗುಹೇಶ್ವರನ ಶರಣನ ಸುಳುಹಿನ ಸೊಗಸನುಪಮಿಸಬಾರದು"

•

ಶರಣನ ವಿಶಿಷ್ಟತೆಯನ್ನು ಮಾರ್ಮಿಕವಾಗಿ ಚಿತ್ರಿಸಿದ ಅದಯ್ಯನ ಈ ವಚನ ಉದ್ಬೋಧಕವಾಗಿದೆ –

"ಹರವಿರ್ದು ಹರಣವಿಲ್ಲ, ಹರಣಲಿಂಗದಲ್ಲಿ ನಿರಿಯಾಣವಾಯಿತ್ತಾಗಿ
ಮನವಿರ್ದು ಮನವಿಲ್ಲ, ಮನವು ಮಹದಲ್ಲಿ ಲೀಯವಾಯಿತ್ತಾಗಿ
ಜೀವವಿರ್ದು ಜೀವವಿಲ್ಲ, ಜೀವಸಜ್ಜೀವವಾಗಿ ಪರಮನಲ್ಲ ಐಕ್ಯವಾಯಿತ್ತಾಗಿ
ಭಾವವಿರ್ದು ಭಾವವಿಲ್ಲ, ನಿರ್ಭಾವದಲ್ಲಿ ನಿಂದಿತ್ತಾಗಿ
ಕರಣಂಗಳಿರ್ದು ಕರಣಂಗಳಿಲ್ಲ, ಕರಣಂಗಳು ಲಿಂಗದ ಕಿರಣಂಗಳನೈದಿದವಾಗಿ
ಇಂತು ಸರ್ವವಿರ್ದು ಸರ್ವವಿಲ್ಲ, ಇದು ಕಾರಣ ಸೌರಾಷ್ಟ್ರಸೋಮೇಶ್ವರಾ,
ನಿಮ್ಮ ಶರಣರು ಉಪವಾಸಿಗಳು, ಬಳಸಿ ಬ್ರಹ್ಮಚಾರಿಗಳು

ಶರಣರ ಅಸಾಮಾನ್ಯ ವ್ಯಕ್ತಿತ್ವವನ್ನು ಬಸವಣ್ಣನವರು ಪ್ರಸ್ತಾಪಿಸಿದ ವಚನ ಹೀಗಿದೆ:

'ಕೆರೆಹಳ್ಳ ಬಾವಿಗಳು ಮೈದೆಗೆದರೆ
ಗುಳ್ಳೆ ಗೊರಜೆ ಚಿಪ್ಪುಗಳು ಕಾಣಬಹುದು;
ವಾರಿಧಿ ಮೈದೆಗೆದರೆ ರತ್ನಂಗಳು ಕಾಣಬಹುದು
ಕೂಡಲಸಂಗನ ಶರಣರು ಮನದೆರೆದು ಮಾತನಾಡಿದರೆ
ಲಿಂಗವೇ ಕಾಣಬಹುದು'

ಹುಟ್ಟಿದವರೆಲ್ಲರೂ ಶರಣರಾಗಲು ಸಾಧ್ಯವಿಲ್ಲ ಎಂಬಮಾತು ಬಸವಣ್ಣನವರ ವಚನ ದಿಂದ ಅರಿಯಬಹುದು :

'ತೆರಹಿಲ್ಲದ ನಡೆ, ತೆರಹಿಲ್ಲದ ನುಡಿ,
ತೆರಹಿಲ್ಲದ ಸಂಭಾಷಣೆಯ ಸುಖವು,

ತೆರಹಿಲ್ಲದ ನಂಬುಗೆ ಸ್ವಾನುಭಾವಸುಖ
ತೆರಹಿಲ್ಲದ ಮಹಿಮೆ ತೆರಹಿಲ್ಲದವಿಚಾರ
ಕೂಡಲಸಂಗಮದೇವಾ, ನಿಮ್ಮ ಶರಣಂಗೆ'

ಇಂಥ ಶರಣರ ಹಿರಿಮೆಯನ್ನು ಷಟ್‌ಸ್ಥಲ ಚಕ್ರವರ್ತಿ ಅವಿರಳಜ್ಞಾನಿ ಚನ್ನಬಸವಣ್ಣನವರು ಎತ್ತಿ ಹಿಡಿದಿದ್ದಾರೆ.

"ಬಟ್ಟಬಯಲೆಲ್ಲ ಗಟ್ಟಿಗೊಂಡಡೆ ಸ್ವರ್ಗಮರ್ತ್ಯಪಾತಾಳಕ್ಕೆ ಠಾವಿನ್ನೆಲ್ಲಿಯದೊ ?
ಮೇಘದ ಜಲವೆಲ್ಲ ನಿರ್ಮಳ ಮುತ್ತಾದರೆ ಸಪ್ತಸಾಗರಕೆ ಉದಕವಿನ್ನೆಲ್ಲಿಯದಯ್ಯಾ ?
ಕಷ್ಟಜೀವಿ ಮಾನವರೆಲ್ಲ ನೆಟ್ಟನೆ ಶಿವಜ್ಞಾನಿಗಳಾದರೆ ಭವದಬೆಳೆ ಇನ್ನೆಲ್ಲಿಯದಯ್ಯಾ ?
ಇದು ಕಾರಣಕೂಡಲಚನ್ನಸಂಗಯ್ಯನಲ್ಲಿ ಲಕ್ಷಕ್ಕೊಬ್ಬ ಭಕ್ತ ಕೋಟಿಗೊಬ್ಬಶರಣ"

ಷಟಸ್ಥಲದ ಕೊನೆಯ ಮೆಟ್ಟಲೇ ಐಕ್ಯಸ್ಥಲ. ಜೀವಾತ್ಮನು ಪರಮಾತ್ಮನಲ್ಲಿ ಒಂದಾಗಿ ಅಮೃತ ಫಲ ಪಡೆಯುವುದು. ಲಿಂಗಾಂಗ ಸಾಮರಸ್ಯದ ಕೊನೆಯ ಮೆಟ್ಟಲಕ್ಕೇರಿದ ಶರಣನ ಸಹಜ ಸ್ಥಿತಿಯನ್ನು ವಚನಗಳ ಮುಖಾಂತರ ಇಲ್ಲಿ ತಿಳಿಯಬಹುದು. ಎಡೆಯೂರ ಸಿದ್ಧಲಿಂಗೇಶ್ವರರ ವಚನವೊಂದು ಹೀಗಿದೆ :

"ಗಾಳಿ ಗಂಧವನಪ್ಪಿದಂತೆ, ಬಯಲು ಬಯಲನಪ್ಪಿದಂತೆ
ಬೆಳಗು ಬೆಳಗನಪ್ಪಿ ಮಹಾಬೆಳಗಾದಂತೆ ಶರಣ ಲಿಂಗವನಪ್ಪಿ
ಮಹಾಲಿಂಗವೇ ತಾನು ತಾನಾಗಿ ನಿರ್ವಯಲಾದನು ನೋಡಾ
ಗುರುಶಿವ ಸಿದ್ಧೇಶ್ವರ ಪ್ರಭುವೇ'

ಸಾವಿಲ್ಲದ ಕೇಡಿಲ್ಲದ ಚೆಲುವನನ್ನು ಕಂಡ ಅನಿರ್ವಚನೀಯ ಅನುಭಾವವನ್ನು ಅಕ್ಕಮಹಾದೇವಿ ಮನೋಜ್ಞವಾಗಿ ವರ್ಣಿಸಿದ್ದಾಳೆ :

"ಲಿಂಗವೆನ್ನ ಲಿಂಗೈಕ್ಯವೆನ್ನೆ
ಸಂಗವೆನ್ನ ಸಮರಸವೆನ್ನೆ
ಆಯಿತ್ತೆನ್ನೆ ಆಗದೆನ್ನೆ
ನೀನೆನ್ನ ನಾನೆನ್ನೆ, ಚನ್ನಮಲ್ಲಿಕಾರ್ಜುನನನಲ್ಲಿ ಲಿಂಗೈಕ್ಯವಾದ ಬಳಿಕ
ಏನೂ ಎನ್ನೆ'

ಶಿವಯೋಗಿ ಸಿದ್ಧರಾಮನ ಈ ವಚನ ಕೈಲಾಸದ ಕಲ್ಪನೆಯನ್ನು ಹೊಡೆದು ಹಾಕಿದೆ:

"ಕೈಲಾಸ ಕೈಲಾಸವೆಂದು ಬಡಿದಾಡುವ
ಅಣ್ಣಗಳಿರಾ ಕೇಳಿರಯ್ಯಾ

ಕೈಲಾಸವೆಂಬುದೊಂದು ಹಾಳುಬೆಟ್ಟ
ಅಲ್ಲಿರುವ ಮುನಿಗಳೆಲ್ಲರೂ ಜೀವಗಳ್ಳರು
ಅಲ್ಲಿರ್ದ ಚಂದ್ರಶೇಖರನು ಬಹುಹೆಸ್ಥ
ಇದರಾಡಂಬರವೇಕಯ್ಯಾ,
ಎನ್ನ ಪುರಾತರಿಗೆ ಸದಾಚಾರದಿಂದ ವರ್ತಿಸಿ
ಲಿಂಗಾಂಗ ಸಾಮರಸ್ಯವ ತಿಳಿದು
ನಿಮ್ಮ ಪಾದಪದ್ಮದೊಳು ಬಯಲಾದ
ಪದವೇ ಕೈಲಾಸವಯ್ಯಾ
ಕಪಿಲಸಿದ್ಧ ಮಲ್ಲಿಕಾರ್ಜುನ"

ಆದುದರಿಂದಲೆ ಶರಣರಿಗೆ ಸಾವಿಲ್ಲ ಎಂಬ ಮಾತನ್ನು ಬಸವಣ್ಣನವರು ಹೀಗೆ ಸ್ಪಷ್ಟೀಕರಿಸಿದ್ದಾರೆ.

"ಎಮ್ಮವರಿಗೆ ಸಾವಿಲ್ಲ ಎಮ್ಮವರು ಸಾವರಿಯರು
ಸಾವೆಂಬುದು ಸಯವಲ್ಲ ಲಿಂಗದಲ್ಲಿ ಉದಯವಾದ ಲಿಂಗೈಕ್ಯರಿಗೆ
ಆ ಲಿಂಗದಲ್ಲಿಯಲ್ಲದೆ ಬೇರೆ ಮತ್ತೊಂದೆಡೆಯಿಲ್ಲ.
ಕೂಡಲಸಂಗಮದೇವರ ಶರಣ ಸೊಡ್ಡಳಬಾಚರಸರು
ನಿಜಲಿಂಗದೊಡಲೊಳಗೆ ಬಗಿದು ಹೊಕ್ಕಡೆ
ಉಪಮಿಸಬಲ್ಲವರ ಕಾಣೆನು"

ಐಕ್ಯಸ್ಥಾನದ ನಿಲುಮೆಯನ್ನು ಮಹಾಶರಣೆ ಸತ್ಯಕ್ಕ ಬಹು ಸೊಗಸಾಗಿ ವಿಶ್ಲೇಷಿಸಿದ್ದಾಳೆ.

"ಉದಕದೊಳಗಣ ಎಚ್ಚನಂತೆ ಲಿಂಗೈಕ್ಯವು
ವಾಯುನುಂಡಿದ ಪರಿಮಳದಂತೆ ಲಿಂಗೈಕ್ಯವು
ಉರಿಯೊಳಡಗಿದ ಕರ್ಪೂರದಂತೆ ಲಿಂಗೈಕ್ಯವು
ಅರಿವು ನುಂಗಿದ ಮರಹಿನಂತೆ ಲಿಂಗೈಕ್ಯವು
ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾಸಹ ಎಂದುದಾಗಿ,
ವಾಙ್ಮನಕ್ಕೆ ಅಗೋಚರವಾದ ಮಹಾಶರಣನ ಒಳಕೊಂಡು
ಥಳಥಳಿಸಿ ಬೆಳಬೆಳಗಿ ಹೊಳೆವುತ್ತ
ನಿಶ್ಶಬ್ದಬ್ರಹ್ಮವಾಗಿರ್ದನಯ್ಯಾ ನಮ್ಮ ಶಂಭುಜಕ್ಕೇಶ್ವರನು

ಪುಣ್ಯದ ಪುತ್ಥಳಿಯಾದ ಅಕ್ಕನಾಗಮ್ಮನು ಷಟ್‌ಸ್ಥಲದ ಪ್ರತಿನಿಧಿಯಾಗಿ ಬಾಳಿ ಬೆ
ಗಿದ ಶರಣರ ಸಾಂಕೇತಿಕ ಸ್ಥಲವನ್ನು ನಿರ್ದೇಶಿಸಿದ ಈ ವಚನ ಅರ್ಥಪೂರ್ಣವಾಗಿದೆ.

ಗುರುಸಂಬಂಧಿ ಗುರುಭಕ್ತಯ್ಯನು
ಲಿಂಗಸಂಬಂಧಿ ಪ್ರಭುದೇವರು
ಜಂಗಮ ಸಂಬಂಧಿ ಸಿದ್ಧರಾಮನು
ಪ್ರಸಾದಸಂಬಂಧಿ ಮರುಳಶಂಕರದೇವರು
ಪ್ರಾಣಲಿಂಗ ಸಂಬಂಧಿ ಅನಿಮಿಷದೇವರು
ಶರಣಸಂಬಂಧಿ ಘಟ್ಟಿವಾಳಯ್ಯನು
ಐಕ್ಯಸಂಬಂಧಿ ಅಜಗಣ್ಣಯ್ಯನು
ಸರ್ವಾಚಾರಸಂಬಂಧಿ ಚನ್ನಬಸವಣ್ಣನು
ಇಂತಿವರ ಸಂಬಂಧ ಎನ್ನ ಸರ್ವಾಂಗದಲ್ಲಿ ನಿಂದು
ಬಸವಣ್ಣಪ್ರಿಯ ಚನ್ನಸಂಗಯ್ಯನ
ಹೃದಯಕಮಲದಲ್ಲಿ ನಿಜವಾಸಿಯಾಗಿದ್ದೆನು.



## ಪರಮ ಪೂಜ್ಯ, ತ್ರಿವಿಧ ದಾಸೋಹಿ, ಶಿವಯೋಗಿ ಡಾ|| ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರ 84 ನೇ ಜನ್ಮದಿನೋತ್ಸವದ ಸಂಕ್ಷಿಪ್ತ ವರದಿ.

- ಶ್ರೀ ಹೆಚ್. ಬಿ. ಗಂಗಾಧರಯ್ಯ.

ದಿನಾಂಕ 28-4-91ರಂದು ಪರಮ ಪೂಜ್ಯ ಶ್ರೀ ಶ್ರೀ ಡಾ|| ಶಿವಕುಮಾರ ಮಹಾಸ್ವಾಮಿಗಳವರ 84 ನೇ ಜನ್ಮ ದಿನೋತ್ಸವ ಶ್ರೀ ಮಠದಲ್ಲಿ ಅಭೂತ ಪೂರ್ಣವಾಗಿ " **ಗುರು ವಂದನ** " ಸಮಾರಂಭವಾಗಿ ಆಚರಿಸಲಾಯಿತು. ಕನ್ನಡನಾಡಿನ ಉದ್ದಗಲದಿಂದ ಆಗಮಿಸಿದ ಭಕ್ತ ಕೋಟಿಗೆ ದಿವ್ಯವಾದ ಹಬ್ಬವಾಗಿ ಪರಿಣಮಿಸಿದ ಗುರುಗಳ ಜನ್ಮದಿನೋತ್ಸವ ಅವಿಸ್ಮರಣೀಯುವಾಯಿತು. 1-4-1991 ಕ್ಕೆ 83 ವರ್ಷಗಳನ್ನು ಮುಗಿಸಿ 84ಕ್ಕೆ ಪಾದಾರ್ಪಣ ಮಾಡಿದ ಪೂಜ್ಯ ಶ್ರೀ ಗಳವರ ಹುಟ್ಟುಹಬ್ಬ ವ್ಯಕ್ತಿ ಪೂಜೆಯೆನಿಸಿದೆ. ಸಾರ್ಥಕ ಸೇವಾ ತಪಸ್ವಿಯ ವಂದನಾ ಸಮಾರಂಭವಾದದ್ದು ಅರ್ಥಪೂರ್ಣವಾಯಿತು.

ಹತ್ತು ಗಂಟೆಗೆ ಸರಿಯಾಗಿ ಹಳೇಮಠದಿಂದ ಪ್ರಾರಂಭವಾದ ಉತ್ಸವ ಮಂಗಳ ವಾದ್ಯ, ಪೂರ್ಣ ಕುಂಭ, ಕಲಶಕನ್ನಡಿಗಳ ಸಮೇತ, ವೀರಗಾಸೆ, ಶ್ರೀ ಹೆಚ್.ಎಸ್. ನೀಲಕಂಠಯ್ಯನವರ ವೀರಭದ್ರನೃತ್ಯ, ಧರ್ಮಲಾಂಛನಗಳೊಂದಿಗೆ ವಿವಿಧ ಮಠಗಳಿಂದ ಆಗಮಿಸಿದ್ದ ಮಠಾಧೀಶ್ವರ ಜೊತೆಯಲ್ಲಿ ಮುಖ್ಯ ಅತಿಥಿಗಳನ್ನೊಳಗೊಂಡು ಭಕ್ತ ಕೋಟಿಯ ಜಯಘೋಷದ ಮಧ್ಯೆ ಬೃಹತ್ ಜನಸ್ತೋಮದಿಂದ ಕಿಕ್ಕಿರಿದು ತುಂಬಿದ್ದ ಶ್ರೀ ಉದ್ದಾನ ಶಿವಯೋಗಿ ಶ್ರೀ ಸಭಾಂಗಣಕ್ಕೆ ಬಂದಾಗ ಹನ್ನೆರಡನೆಯ ಶತಮಾನದ ಕಲ್ಯಾಣ ಎದ್ದು ಬಂದಂತೆ ಭಾಸವಾಗುತ್ತಿತ್ತು.

ವೇಳೆಗೆ ಸರಿಯಾಗಿ ಸಭಾ ಕಾರ್ಯಕ್ರಮಗಳು ಪ್ರಾರಂಭವಾದುವು. ಶ್ರೀಮಠದ ಸಂಸ್ಕೃತ ಮತ್ತು ವೇದ ವಿದ್ವಾಂಸರಿಂದ ವೇದಘೋಷವಾದ ನಂತರ ವಿದ್ಯಾರ್ಥಿಗಳಾದ ಶ್ರೀ ರವಿಚಂದ್ರ ಹಾಗೂ ಶ್ರೀ ನಂದೀಶರಿಂದ ವಿದ್ವಾನ್ ಶ್ರೀ ಕೆ.ಎನ್. ವೆಂಕಟರಾಮಯ್ಯನವರ ಮಾರ್ಗದರ್ಶನದಲ್ಲಿ ಪ್ರಾರ್ಥನೆ ವಚನ ಗೀತೆ "ಧರಣಿಯ ಮೇಲೊಂದು ಪಿರಿದಪ್ಪ ಅಂಗಡಿಯನಿಕ್ಕಿ ಹರವ ಕುಳ್ಳಿರ್ದನಮ್ಮ ಮಹಾದೇವಶೆಟ್ಟಿ" ಎಂಬುದರೊಂದಿಗೆ ಪ್ರಾರಂಭವಾಯಿತು ಶ್ರೀ ಮಠದ ಹಳೆಯ ವಿದ್ಯಾರ್ಥಿ ವಿದ್ವಾನ್ ಕೆ ಎಂ. ರೇವಣ್ಣ ಸಿದ್ದಯ್ಯನವರಿಂದ ಸ್ವಾಗತ ಪರಿಚಯಗಳಾದ ಮೇಲೆ ಶ್ರೀ ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀ ವೀರೇಂದ್ರ ಹೆಗ್ಗಡೆಯವರಿಂದ ಜ್ಯೋತಿ ಬೆಳಗಿಸುವುದರ ಮೂಲಕ ಸಭಾ ಕಾರ್ಯಕ್ರಮಗಳು ಉದ್ಘಾಟಿತವಾದುವು ಶ್ರೀ ಸಿದ್ಧಗಂಗಾ ವಿದ್ಯಾ ಸಂಸ್ಥೆಯಸಹ-ಕಾರ್ಯ

ದರ್ಶಿಗಳಾದ ಶ್ರೀ ಟಿ.ಕೆ. ನಂಜುಂಡಪ್ಪನವರಿಂದ ವಿವಿಧ ಪೂಜ್ಯರಿಂದ, ಗಣ್ಯರಿಂದ ಬಂದಿ ಸಂದೇಶ ವಾಚನವಾಯಿತು. ಅನಂತರ ಶ್ರೀ ಮಠದ ಕಿರಿಯ ಸ್ವಾಮಿಗಳಾದ ಪೂಜ್ಯ ಶ್ರೀ ಸಿದ್ಧಲಿಂಗಸ್ವಾಮಿಗಳ ಭಕ್ತಿ ಸಮರ್ಪಣಾ ನುಡಿಗಳಾದ ಮೇಲೆ ಪೂಜ್ಯರು ಪರಮಪೂಜ್ಯ ಶ್ರೀ ಶ್ರೀ ಗಳವರಿಗೆ ಸಮಾರಂಭದ ಪ್ರಾಣ ಚೈತನ್ಯ ಮಹಾಮೂರ್ತಿಗಳಿಗೆ ಮಾಲಾರ್ಪಣೆ ಮಾಡಿ ಮಣಿದರು ಅಲ್ಲಿಂದ ಭಕ್ತ ಕೋಟಿಯಿಂದ ಮಾಲಾರ್ಪಣೆ ಸ್ವಾಮಿಗಳಿಗೆ ಪ್ರಾರಂಭವಾಗಿ ಒಂದು ಘಂಟೆಯ ತನಕ ನಿರಂತರವಾಗಿ ನಡೆದು 'ಪುಷ್ಪ ಪರ್ವತ'ದ ಮಧ್ಯೆ ಶ್ರೀಗಳ' ದಿವ್ಯ ತೇಜೋರೂಪ ಕಂಡ ಭಕ್ತ ಸ್ತೋಮ ಧನ್ಯತೆಯನ್ನನುಭವಿಸಿತು. ಇದೇ ಸಂದರ್ಭದಲ್ಲಿ ನಾಡಿನ ಪ್ರಖ್ಯಾತ ಗಾಯಕಿ ಕಸ್ತೂರಿ ಶಂಕರ್‌ರವರು ಭಕ್ತಿ ಗೀತೆ ಹಾಗೂ ವಚನ ಸಂಗೀತವನ್ನು ನೀಡಿ ಸಮಾ- ರಂಭಕ್ಕೆ ಶೋಭೆಯನ್ನು ತಂದದ್ದು ಮಹತ್ವ ಪೂರ್ಣವೆನಿಸಿತು.

"ಸಿದ್ಧಗಂಗಾ ಮಠದಿಂದ ಆಗುತ್ತಿರುವ ಸಾಮಾಜಿಕ ಕೆಲಸ ಗ್ರಾಮೀಣ ಜನತೆಯ ಮೇಲೆ ಆಗುತ್ತಿರುವ ಪರಿಣಾಮ ಕೋಮು ಸಾಮರಸ್ಯ ಮತ್ತು ವಿದ್ಯಾಭಿವೃದ್ಧಿ ಹಾಗೂ ಆರ್ಥಿಕ ಪ್ರಗತಿ ಎಷ್ಟರ ಮಟ್ಟಿಗೆ ಆಗುತ್ತಿದೆ ಎಂಬ ಬಗ್ಗೆ ಸಂಶೋಧನೆಗಳಾಗಬೇಕು ಎಂದು ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆಯವರು ಅಭಿಪ್ರಾಯಪಟ್ಟರು. ಶಿವಕುಮಾರಸ್ವಾಮಿಗಳಿಗೆ ಭಕ್ತಿ ಸಮರ್ಪಣೆ ಮಾಡುವ ಮೂಲಕ ಅಸಂಖ್ಯಾತ ಭಕ್ತಾದಿಗಳು ಈಗಾಗಲೇ ಜನ್ಮದಿನೋತ್ಸವವನ್ನೂ ಉದ್ಘಾಟಿಸಿದ್ದಾರೆ. ಆದ್ದರಿಂದ ತಾವು ಸಾಂಪ್ರದಾಯಿಕವಾಗಿ ಕಾರ್ಯಕ್ರಮವನ್ನು ಉದ್ಘಾಟಿಸುತ್ತಿರುವುದಾಗಿ ಅವರು ನುಡಿದರು. ಇಂದು ಭಕ್ತಾದಿಗಳು ಆಚರಿಸುತ್ತಿರುವ ಜನ್ಮದಿನೋತ್ಸವದ ಮೂಲಕ ಶ್ರೀಗಳ ಮೇಲಿನ ಹೊಣೆಯನ್ನು ಜ್ಞಾಪಿಸುವ ಕೆಲಸ ಮಾಡಲಾಗುತ್ತಿದೆ ಎಂದರು. ಗುರು ಪೀಠಗಳು ಹೇಗಿರಬೇಕು ಎಂತಹ ಕೆಲಸಗಳನ್ನು ಮಾಡಬೇಕು ಎಂಬುದಕ್ಕೆ ಡಾ|| ಶಿವಕುಮಾರಸ್ವಾಮಿಗಳು ಸಾಕ್ಷಿ ಎಂದು ಹೆಗ್ಗಡೆಯವರು ಸಿದ್ಧಗಂಗಾ ಕ್ಷೇತ್ರದ ಸಾಮಾಜಿಕ ಕಾರ್ಯಗಳ ಬಗ್ಗೆ ಸಂಶೋಧನೆಯಾಗಬೇಕು ಎಂದರು. ಸಿದ್ಧಗಂಗೆಯಲ್ಲಿ ನಿತ್ಯ ಕುಂಭಮೇಳ ನಡೆಯುತ್ತಿದೆ ಎಂದ ಅವರು ಅನ್ನದಾಸೋಹ, ಜ್ಞಾನದಾಸೋಹ ಪ್ರತಿನಿತ್ಯ ಆಗುತ್ತಿರುವುದನ್ನು ಗಮನಿಸಿದರೆ ಬದುಕಿನಲ್ಲಿ ಪಾಲಿಸಬೇಕಾದ ಆದರ್ಶಗಳನ್ನು ಇಲ್ಲಿ ಕಲಿಸಲಾಗುತ್ತದೆ ಎಂದರು.

ಸಿದ್ಧಗಂಗೆಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಕೇವಲ ಡಿಗ್ರಿ ದೊರೆಯುತ್ತಿಲ್ಲವೆಂದ ಅವರು ಜೀವನ ಮೌಲ್ಯಗಳನ್ನು ತಿಳಿಹೇಳುವ ಶಿಕ್ಷಣ ಇಲ್ಲಿ ನೀಡಲಾಗುತ್ತಿದ್ದು ಬದುಕಿನ ಡಿಗ್ರಿಯನ್ನುಕೊಡಲಾಗುತ್ತಿದೆ ಎಂದರು. ಜನತೆಗೆ ಉತ್ತಮ ಜೀವನ ನಡೆಸಲು ಮಾರ್ಗದರ್ಶನ ನೀಡಬೇಕಾದ್ದು ಪೀಠಾಧಿಪತಿಗಳ ಕೆಲಸವೆಂದ ಹೆಗ್ಗಡೆಯವರು ಈ ನಿಟ್ಟಿನಲ್ಲಿ ಉತ್ತರ ಭಾರತದಲ್ಲಿ ಸಾಧುಸಂತರು ಸಂಘಟಿತರಾಗುತ್ತಿರುವ ಬಗ್ಗೆ ತಮ್ಮ ಸಮ್ಮತಿ ಸೂಚಿಸಿದರು.

ಸಿದ್ಧಗಂಗಾ ಶ್ರೀಗಳು ಗುರುಪೀಠಗಳು ಹೇಗಿರಬೇಕು, ಅವುಗಳ ಕೆಲಸವೇ ನು ಎಂಬ ಬಗ್ಗೆ ಮತ್ತು ತ್ಯಾಗ, ಅಹಿಂಸೆಗಳ ಬಗ್ಗೆ ಜನತೆಗೆ ಮಾರ್ಗದರ್ಶನ ನೀಡುತ್ತಿರುವ ಮತ್ತೊಬ್ಬ ಬಾಹುಬಲಿ ಎಂದು ವರ್ಣಿಸಿದರು. ಶ್ರೀಗಳ ಮಾರ್ಗದ ರ್ಶನದಂತೆ ನಡೆದರೆ ಜೀವನದ ಮೌಲ್ಯಗಳನ್ನು ಅರಿತು ಉನ್ನತಿ ಸಾಧಿಸಬಹು ದೆಂದರು. ಸಿದ್ಧಗಂಗೆಯಲ್ಲಿ ವಿದ್ಯಾರ್ಜನೆ ಹೊಂದಿ ಹೋದವರು ತಾವು ಉನ್ನತ ಹುದ್ದೆಗೇರಿದಾಗ ಸಿದ್ಧಗಂಗೆಯ ಅಭಿವೃದ್ಧಿಗಾಗಿ ಶ್ರಮಿಸಬೇಕು ಎಂದ ಹೆಗ್ಗಡೆ ಯವರು ಈ ಕೆಲಸ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾಲೇಜು, ದೇವಸ್ಥಾನ, ಹಾಸ್ಟೆಲ್ ಸ್ಥಾಪನೆ ಮತ್ತು ಅಭಿವೃದ್ಧಿಗಾಗಿ ವಿನಿಯೋಗಿಸುತ್ತಾರೆ ಎಂದು ಜ್ಞಾನದಾಸೋಹ ಮಾಡುತ್ತಿರುವ ಸಿದ್ಧಗಂಗಾಕ್ಷೇತ್ರದಿಂದ ಎಷ್ಟು ಜನರು ಅಕ್ಷರಸ್ಥರಾಗಿದ್ದಾರೆ ಎಂಬ ಬಗ್ಗೆ ಸಂಶೋಧನೆ ನಡೆಸಿದರೆ ದಕ್ಷಿಣಕನ್ನಡ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಸರ್ಕಾ ರ ನೀಡುತ್ತಿರುವ ಹಣವನ್ನೂ ಇಲ್ಲಿ ಖರ್ಚುಮಾಡಿದರೆ ಹೆಚ್ಚಿನ ಜನರನ್ನು ಸಾಕ್ಷ ರಸ್ಥರನ್ನಾಗಿ ಮಾಡಬಹುದು ಎಂದರು.

ಮಾನವರಲ್ಲಿ ಸ್ವಾರ್ಥಪರತೆ ಹೆಚ್ಚಾಗುತ್ತಿರುವುದರಿಂದ ಸಾಮಾಜದಲ್ಲಿ ನೈತಿಕ ಅಧಃಪತನವಾಗುತ್ತಿದೆ ಎಂದ ಹೆಗ್ಗಡೆಯವರು ಸ್ವಾರ್ಥಪರತೆ ಸಂಕುಚಿತ ಮನೋಭಾವನೆಯನ್ನು ಹೋಗಲಾಡಿಸಲು ಧಾರ್ಮಿಕ ಸಂಸ್ಥೆಗಳಿಂದ ಮಾತ್ರ ಸಾಧ್ಯ ವಾದ್ದರಿಂದ ಮಠಾಧಿಪತಿಗಳು ಈ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಿ ಉತ್ತಮ ಜೀವನ ನಡೆಸುವ ಪ್ರಜ್ಞೆ ಬೆಳೆಸಬೇಕು ಎಂದರು. ಮಠಾಧಿಪತಿಗಳ ಪೀಠ ಸುಖೀ ಜೀವನ ನಡೆಸುವ ಒಂದು ಪೀಠ ಎಂಬ ಭಾವನೆ ಜನತೆಯಲ್ಲಿದೆ ಎಂದ ಹೆಗ್ಗಡೆಯವರು ಪಾಲಕಿಯಲ್ಲಿ ಗುರುಗಳನ್ನು ಒಂದು ದಿನ ಹೊತ್ತು ಮೆರವಣಿಗೆ ಮಾಡಿ ಅವರ ಮೇಲೆ ಮುನ್ನೂರರವತ್ತೈದು ದಿನಗಳೂ ತಮ್ಮ ಹೊರೆಯನ್ನು ಹಾಕುತ್ತಾರೆ ಎಂದರು. ಆದ್ದರಿಂದ ಗುರುಪೀಠ ಜನರಿಂದ ಹೊರಿಸಿಕೊಳ್ಳುವ ಪೀಠವಲ್ಲ ಜನರನ್ನು ಹೊರುವ ಪೀಠವೆಂದರು.

ಸಿದ್ಧಗಂಗಾಶ್ರೀ ಪರಮ ಪೂಜ್ಯ ಶ್ರೀ ಶ್ರೀ ಡಾ|| ಶಿವಕುಮಾರ ಮಹಾ ಸ್ವಾಮಿಗಳವರು ಆಶೀರ್ವಚನ ನೀಡಿ ಮಾತನಾಡುತ್ತ ತಮ್ಮ ಸಾಧನೆಯ ಬಗ್ಗೆ ತಮ್ಮ ಅಂತರಂಗ ಪ್ರಶ್ನಿಸುತ್ತಿದೆ ಎಂದ ಅವರು ಅಂತರಂಗದ ಪ್ರಶ್ನೆಗೆ ಉತ್ತರಿಸುವಶಕ್ತಿ- ಯನ್ನು ತಾವು ಪಡೆದಿಲ್ಲವೆಂದರು.

ಸಿದ್ಧಗಂಗಾ ಮಠದ ಬೆಳವಣಿಗೆ ಕೇವಲ ತಮ್ಮಿಂದ ಆಗಿಲ್ಲವೆಂದ ಅವರು ಈ ಬೆಳವಣಿಗೆಯ ಹಿಂದೆ ಹಲವರ ಸೇವೆ ಇದೆಯೆಂದರು.

ಇಂದಿನ ಸಾಮಾಜಿಕ ವ್ಯವಸ್ಥೆ ಅವನತಿಯತ್ತ ಹೋಗಲು ಸಮಾಜದ ಎಲ್ಲರೂ ಹೊಣೆಗಾರರು ಎಂದ ಪೂಜ್ಯರು ಇದರಲ್ಲಿ ಹೆಚ್ಚಿನ ಪಾತ್ರ ರಾಜಕಾರಣಿಗಳದು

ಎಂದರು. ಉತ್ತಮ ಜೀವನದ ಕಲೆಯ ಬಗ್ಗೆ ಮಾರ್ಗದರ್ಶನ ನೀಡಬೇಕಾದ್ದು ಧರ್ಮದ ಮುಖ್ಯ ಉದ್ದೇಶವಾಗಿರಬೇಕು ಎಂದ ಅವರು ಆದರೆ ಗುರು ಪೀಠಗಳು ಎಷ್ಟರಮಟ್ಟಿಗೆ ಜನತೆಗೆ ಜೀವನ ಮೌಲ್ಯಗಳ ಬಗ್ಗೆ ಮತ್ತು ಉತ್ತಮ ಜೀವನ ನಡೆಸುವುದರ ಬಗ್ಗೆ ಮಾರ್ಗದರ್ಶನ ಮಾಡಿವೆ ಎಂದು ಯೋಚಿಸಿದಾಗ ಧಾರ್ಮಿಕ ಸಂಸ್ಥೆಗಳು ತಲೆ ತಗ್ಗಿಸಬೇಕಾಗುತ್ತದೆ ಎಂದರು. ಸಮಾಜವನ್ನು ತಿದ್ದುವ ಕೆಲಸ ಮಠಾಧೀಶರಿಂದ ಆಗಿಲ್ಲವೆಂದು ವಿಷಾದಿಸಿದರು. ಮುಂದುವರಿದು ಮಠಾಧಿಪತಿಗಳು ರಾಜಕೀಯ ಪ್ರವೇಶ ಮಾಡುವುದನ್ನು ವಿರೋಧಿಸಿದ ಪೂಜ್ಯಶ್ರೀಗಳು ಮಠಾಧಿಪತಿಗಳು ಮಾರ್ಗದರ್ಶಕರಾಗಿರಬೇಕೆ ಹೊರತು ತಾವೇ ನೇರ ರಾಜಕೀಯ ಪ್ರವೇಶ ಮಾಡಬಾರದು ಎಂದರು. ರಾಜಕಾರಣ ಸಮಾಜ ಮತ್ತು ಆರ್ಥಿಕ ವ್ಯವಸ್ಥೆ ಬದಲಾವಣೆಯಾಗಬೇಕಾದರೆ ಅದು ಆಧ್ಯಾತ್ಮಿಕ ಹಿನ್ನಲೆಯಿಂದ ಮಾತ್ರಸಾಧ್ಯವೆಂದರು ಮಾತೃ ವಾತ್ಸಲ್ಯ. ಶಿಕ್ಷಕನ ಶಿಕ್ಷಕ ವೃತ್ತಿ ಚಾರಿತ್ರ್ಯ ಪಾಂಡಿತ್ಯ ಇವುಗಳು ಮಾತ್ರ ಜಗತ್ತನ್ನು ವಿನಾಶದಿಂದ ಪಾರುಮಾಡಬಲ್ಲವು ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಡಂಬಳ ಗದಗದ ಶ್ರೀ ತೋಂಟದಾರ್ಯ ಸಂಸ್ಥಾನ ಮಠದ ಪೂಜ್ಯರಾದ ಜಗದ್ಗುರು ಶ್ರೀ ತೋಂಟದಾರ್ಯ ಸಿದ್ಧಲಿಂಗ ಮಹಾಸ್ವಾಮಿಗಳವರು ಮಾತನಾಡುತ್ತ ಹಿಮಾಲಯಕ್ಕೆ ಹೋಲಿಕೆ ಹಿಮಾಲಯವೆ ಎಂಬಂತೆ ಶಿವಕುಮಾರಸ್ವಾಮಿಗಳಿಗೆ ಹೋಲಿಕೆ ಶಿವಕುಮಾರ ಸ್ವಾಮಿಗಳೇ ಎಂದರು. ಮುಂದುವರಿದು ಹರಿಹರಕವಿ ಬಸವರಾಜ ದೇವರ ರಗಳೆಯಲ್ಲಿ ಬಸವಣ್ಣನವರಬಗ್ಗೆ ಹೇಳಿರುವ ಮಾತುಗಳಲ್ಲಿ ಶಿವಕುಮಾರಸ್ವಾಮಿಗಳಿಗೆ ಅನ್ವರ್ಥಕವಾಗುತ್ತವೆ ಎಂದರು. ಸನ್ಮಾನಿತರ ಬಗ್ಗೆ ಪ್ರಶಂಸೆ ಮಾತುಗಳನ್ನಾಡಿದರು.

ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಆರೋಗ್ಯ ಸಚಿವೆ ಶ್ರೀ ಮತಿ ನಾಗರತ್ನಮ್ಮನವರು ಶ್ರೀ ಮಠದ ಪೂಜ್ಯ ಶ್ರೀ ಉದ್ದಾನಸ್ವಾಮಿಗಳು ಕಾಮಧೇನುವಾದರೆ ಪೂಜ್ಯ ಶ್ರೀ ಶ್ರೀ ಶಿವಕುಮಾರಸ್ವಾಮಿಗಳು ಕಲ್ಪವೃಕ್ಷವಾಗಿದ್ದಾರೆ ಎಂದರು. ಮತ್ತೊಬ್ಬ ಮುಖ್ಯ ಅತಿಥಿಗಳಾದ ಸಣ್ಣ ನೀರಾವರಿ ಇಲಾಖೆ ರಾಜ್ಯ ಸಚಿವರಾದ ಶ್ರೀ ಕೆ. ಎಸ್. ಮಲ್ಲಿಕಾರ್ಜುನ ಪ್ರಸನ್ನರವರು ಬಸವಣ್ಣನವರ ಜನ್ಮದಿನ ಆಚರಿಸುವಂತೆ ಶಿವಕುಮಾರಸ್ವಾಮೀಜಿಯವರ ಜನ್ಮದಿನವನ್ನೂ ಆಚರಿಸುವಂತಾಗಬೇಕು ಎಂದು ಆಶಿಸಿದರು.

ಸಿದ್ಧಗಂಗಾ ಶ್ರೀಗಳ 84 ನೆ ಜನ್ಮದಿನೋತ್ಸವದ ಸುಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿ ಗಣ್ಯರಾದ ಪದ್ಮಭೂಷಣ ಡಾ|| ಎಂ. ಸಿ. ಮೋದಿ ಡಾ|| ದೇ. ಜವರೇಗೌಡ, ಪದ್ಮಶ್ರೀ ಆರ್. ಎಂ. ಬಿ. ಆರಾಧ್ಯ, ಶ್ರೀ ಹೆಚ್. ಎಂ. ಗಂಗಾಧರಯ್ಯ ಶ್ರೀಮತಿ ಕಸ್ತೂರಿ ಶಂಕರ್ ಅವರುಗಳಿಗೆ ಶಾಲು ಹೊದಿಸಿ, ನೆನಪಿನ ಉಡುಗರೆಗಳನ್ನೂ ಕೊಟ್ಟು ಪ ಮ ಪೂಜ್ಯ ಶ್ರೀ ಶ್ರೀ ಗಳು ಆಶೀರ್ವದಿಸಿದರು,

ಕಾರ್ಯಕ್ರಮವನ್ನು ಜಾನಪದತಜ್ಞ, ಶ್ರೀ ಗೊ. ರು. ಚೆನ್ನಬಸಪ್ಪನವರು ನಿರೂಪಿಸಿದರು. ಶ್ರೀ ಹೆಚ್. ವಿ ವೀರಭದ್ರಯ್ಯನವರು ಶರಣು ಸಮರ್ಪಣೆ ಮಾಡಿದರು.

ಇದೇ ಸಂದರ್ಭದಲ್ಲಿ ಬಸವತತ್ವ ಗೋಷ್ಠಿಯನ್ನು ಏರ್ಪಡಿಸಲಾಗಿತ್ತು. ಬೆಂಗಳೂರು ಬೇಲಿಮಠದ ಅಧ್ಯಕ್ಷರಾದ ಪೂಜ್ಯ ಶ್ರೀ ಶಿವರುದ್ರಸ್ವಾಮಿಗಳು ಅಧ್ಯಕ್ಷತೆ ವಹಿಸಿದ್ದರು. ಡಾ|| ದೇ. ಜವರೇಗೌಡರು ಉಪನ್ಯಾಸಮಾಡುತ್ತ ಬಸವಣ್ಣನವರಂತಹ ಸಮಾಜಸುಧಾರಕ ಜಗತ್ತಿನಲ್ಲಿ ಬರಲೇಇಲ್ಲ. ಅವನ ಮಾರ್ಗನುಯಾಯಿಗಳು ಅವರ ತತ್ವಗಳನ್ನು ಆಚರಿಸುವ ಸೈಜನಿಷ್ಠೆ ತೋರಲಿಲ್ಲ. ಮಹಾ ಮಾನತಾವಾದಿಯಾದ ಬಸವಣ್ಣನವರ ಧರ್ಮ ಮೌಢ್ಯಗಳಿಂದ ಮುಕ್ತವಾದ ನಿರ್ಮಲ ಧರ್ಮವೆಂದರು. ಮತ್ತೊಮ್ಮೆ ಅತಿಥಿಗಳಾದ ಶ್ರೀ ಜಿ. ಎಸ್. ಸಿದ್ಧಲಿಂಗಯ್ಯನವರು ಮಾತನಾಡುತ್ತ ಬಸವಣ್ಣನವರ ವಚನಗಳು ಜಗತ್ತಿನ ಇತರ ಭಾಷೆಗಳಿಗೆ ಅನುವಾದವಾಗಬೇಕಾದ ಅಗತ್ಯವನ್ನು ಒತ್ತಿ ಹೇಳುತ್ತ ಸಿದ್ಧಗಂಗೆಯ ಸ್ವಾಮಿಗಳು ನಾಟಕ ಮಾಧ್ಯಮದ ಮೂಲಕ ಗ್ರಾಮಾಂತರ ಬಸವ ಜಯಂತಿ ನಡೆಸುತ್ತಿರುವುದನ್ನು ವಿನೂತನ ಪ್ರಯೋಗವೆಂದು ಮೆಚ್ಚಿಗೆಯ ನುಡಿಗಳನ್ನಾಡಿದರು.

ಬೇಲಿಮಠದ ಶ್ರೀಗಳವರು ಅಧ್ಯಕ್ಷಭಾಷಣ ಮಾಡುತ್ತಾ ಹುಟ್ಟು ಹೋರಾಟಗಾರನಾದ ಬಸವಣ್ಣ ಅಮೂಲ್ಯ ಚಿಂತಕ, ವಿಚಾರದ ಮಹಾಗಣಿ ಸಂಪ್ರದಾಯದ ಸಂಕೋಲೆಗಳನ್ನು ಮುರಿದ ಮುತ್ಸದ್ದಿ, ವೈದಿಕರ ಹಿಡಿತದಿಂದ ಸಮಾಜವನ್ನು ವಿಮೋಚನೆಗೊಳಿಸಿದ ಮಹಾತ್ಮ, ಇಷ್ಟಲಿಂಗದ ಮಹಾಮಾಧ್ಯಮದ ಮೂಲಕ ಮನುಕುಲವನ್ನು ಬೆಸೆದ ಮಹಾಂತ ಎನ್ನುತ್ತ ಸಿದ್ಧಗಂಗೆಯ 'ಅಪ್ಪ'ಗಳು ಬಸವತತ್ತ್ವ ಪ್ರಸಾರದಲ್ಲಿ ಆಂದೋಳನವನ್ನೇ ನಡೆಸಿರುವ ಮೇರು ಸದೃಶರು ಎಂಬುದಾಗಿ ನುಡಿದರು.

## ಶ್ರದ್ಧಾಂಜಲಿ

ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮಾಜಿ ಪ್ರಧಾನಿ ರಾಜೀವ್ ಗಾಂಧಿಯವರ ಕಗ್ಗೊಲೆ ಅಮಾನುಷ ಕೃತ್ಯವಾಗಿದೆ. ಭಾರತದ ಹಿರಿಮೆ ಸಂಸ್ಕೃತಿ ಮತ್ತು ಆದರ್ಶಮೌಲ್ಯಗಳಿಗೆ ಈ ಘಟನೆಯಿಂದ ತೀವ್ರ ಆಘಾತವಾಗಿದೆ. ಇಂಥಹ ಹೇಡಿತನದ ಮಹಾದುರಂತವನ್ನು ಎಲ್ಲಾ ಭಾರತೀಯರು ಖಂಡಿಸುತ್ತಾರೆ.

ಅವರ ಅಕಾಲ ಮೃತ್ಯುವಿನಿಂದ ರಾಷ್ಟ್ರಕ್ಕೆ ತುಂಬಲಾಗದ ಹಾನಿ ಉಂಟಾಗಿದೆ.

ದಯಾಮಯನಾದ ಪರಮಾತ್ಮ ಅವರ ಆತ್ಮಕ್ಕೆ ಚಿರಶಾಂತಿಯನ್ನು ನೀಡಲೆಂದು "ಸಿದ್ಧಗಂಗಾ" ಹಾರೈಸುತ್ತದೆ.

# ಗ್ರಾಮಾಂತರ ಬಸವ ಜಯಂತಿ

ಹೆಚ್. ವಿ. ವೀರಭದ್ರಯ್ಯ

ಆತ್ಮೀಯ ಶರಣಬಂಧು,

ಹೊಸಕೋಟೆಯಿಂದ ಬಸವಯಾತ್ರೆಯ ಪಯಣ ಹಾಸನ ಜಿಲ್ಲೆ ಅರಕಲಗೂಡು ತಾಲ್ಲೂಕು ಕೊಳ್ಳಂಗಿ ಗ್ರಾಮದತ್ತ ನಡೆಯಿತು ದ್ರಾಕ್ಷಿತೋಟಗಳ ಸುಂದರನಾಡಿನಿಂದ ಕಾಫಿ ಏಲಕ್ಕಿಗಳ ಮಲೆನಾಡಿಗೆ ದಿನಾಂಕ 2-4-91 ರಂದು ಕೊಳ್ಳಂಗಿಗೆ ಪರಮಪೂಜ್ಯರು ಆಗಮಿಸಿದಾಗ ಅದ್ಭುತ ಸ್ವಾಗತ ಸಂಭ್ರಮ. ನೂರಾರು ಕುಂಭ ಕಲಶಗಳು - ಸುತ್ತ ಹತ್ತಾರು ಹಳ್ಳಿಗಳ ಮುಗ್ಧ ಬಂಧು ಭಗಿನಿಯರ ಜನಸ್ತೋಮ. ಸಮಾರಂಭಕ್ಕೆ ಕಳೆತಂದುಕೊಟ್ಟ ಹರಗುರುಚರಮೂರ್ತಿಗಳ ಅಧಿಕಸಂಖ್ಯೆ. ಮನೆ ಮನೆಯಮುಂದೆ ಬಸವಣ್ಣನವರ ಭಾವಚಿತ್ರ; ಅದಕ್ಕೆ ಪುಷ್ಪಾಲಂಕಾರ, ದೀಪಾಲಂಕಾರ, ಗಂಧ ಕರ್ಪೂರಗಳ ಅರ್ಪಣೆ.

ಸಮಾರಂಭ ನಿಯಮಿತವೇಳೆಗೆ ಪ್ರಾರಂಭವಾದಾಗ ಜನಸಾಗರ ಅಲೆಅಲೆಯಾಗಿ ಚಲಿಸುತ್ತಾ ಬಂದು ಸಹಕರಿಸಿತು. ಮಾಯಗೌಡನಹಳ್ಳಿ ಪೂಜ್ಯ ಶ್ರೀ ಶ್ರೀ ಚಂದ್ರಶೇಖರಸ್ವಾಮಿಗಳು ಸಭೆಯನ್ನು ಉದ್ಘಾಟಿಸಿ ಮಾತನಾಡುತ್ತಾ ಬಸವಣ್ಣನವರ ತತ್ತ್ವ ಪ್ರಸಾರದಲ್ಲಿ ಸಿದ್ಧಗಂಗೆಯ ಸ್ವಾಮಿಗಳು ಅದ್ಭುತ ಕ್ರಾಂತಿಯನ್ನೇ ನಡೆಸಿದ್ದಾರೆ. ಜೀವನಕ್ಕೆ ಚೈತನ್ಯಗಂಗೆಯನ್ನೇ ಹರಿಸಿದ್ದಾರೆ. ಗ್ರಾಮೀಣ ಬಂಧುಗಳ ಹೃದಯಕ್ಕೆ ಪವಿತ್ರ ಮೌಲ್ಯಗಳ ಬೆಳಕನ್ನು ನೀಡುತ್ತಿದ್ದಾರೆ ಎಂದರು. ಪೂಜ್ಯರಾದ ಬೇಬಿಬೆಟ್ಟದ ಶ್ರೀಗಳು, ಕಲ್ಮಠದ ಶ್ರೀಗಳು ಹಾಗೂ ಶಾಸಕರಾದ ಶ್ರೀ ರಾಮಸ್ವಾಮಿಗಳು ಉಪನ್ಯಾಸ ನೀಡಿ ಸಿದ್ಧಗಂಗಾ ಶ್ರೀ ಗಳ ಮತ್ತು ಬಸವಾದಿ ಪ್ರಮಥರ ಜೀವನ ಸಂದೇಶವನ್ನು ಜನತೆಗೆ ಪರಿಚಯಿಸಿದರು. ಮಧ್ಯಾಹ್ನದ ಸಭೆಯಲ್ಲಿ ಮಾತನಾಡಿದ ಶ್ರೀ ಬಿ. ವೀರಭದ್ರಯ್ಯನವರು ಬಸವಣ್ಣ ಮನುಕುಲದ ಮಂಗಳ ಮಾಂಗಲ್ಯ, ಕ್ರಾಂತಿದೀಪ, ಅನುಭಾವದ ಹರಿಕಾರ, ಮಾನವತಾ ಮಹಾಮೇರು ಅಂಥ ಮಹಾನುಭಾವಿಯ ಸಂದೇಶವನ್ನು ಸಾರುತ್ತ ಹೊರಟಿರುವ ಸಿದ್ಧಗಂಗಾ ಶ್ರೀ ಗಳವರು ಮಠಮಾನ್ಯಗಳಿಗೆಲ್ಲ ಆದರ್ಶವಾಗಿದ್ದಾರೆ ಎಂದರು. ಶ್ರೀ ಹೆಚ್. ವಿ. ವೀರಭದ್ರಯ್ಯನವರು ಉಪನ್ಯಾಸ ನೀಡಿದರು. ಮಳೆಯ ಪ್ರಯುಕ್ತ ಅಂದು ನಾಟಕ ನಡೆಯಲಿಲ್ಲವಾಗಿ ಗ್ರಾಮಬಂಧುಗಳ ಬಿನ್ನಹದ ಮೇರೆಗೆ ಮತ್ತೆ 13. 4.91 ರಂದು ನಾಟಕ ನಡೆದಾಗ ಸುಮಾರು ಮೂವತ್ತೈದು ಸಹಸ್ರ ಜನ ಬಸವದರ್ಶನ ಮಾಡಿ–ಕೊಂಡು ತೃಪ್ತರಾದರು.

ದೊಡ್ಡಗಂಗವಾಡಿಯ ಹಿರಿಯರು ಹನ್ನೆರಡನೆ ಶತಮಾನದಲ್ಲಿ ಬಸವಣ್ಣನವರು ಮಾಗಡಿ ತಾಲ್ಲೂಕು ಕಲ್ಯಕ್ಕೆ ಬಂದಿದ್ದಾಗ ತಮ್ಮೂರಿಗೆ ಆಹ್ವಾನಿಸಿ ಬಿನ್ನಹ ಮಾಡಿದ್ದರಂತೆ. ಅಷ್ಟರಲ್ಲಿ ಕಲ್ಯಾಣದಲ್ಲಿ ಕ್ರಾಂತಿಯುಂಟಾಗಿ ಬಸವಣ್ಣನವರು ದೊಡ್ಡಗಂಗ

ವಾಡಿಗೆ ಬರಲಾಗದೆ ಹಿಂತಿರುಗಿದರಂತೆ. ಆದಾದ ಎಂಟುನೂರಾಐವತ್ತು ವರ್ಷಗಳ ನಂತರ ಪರಮ ಪೂಜ್ಯ ಸಿದ್ದಗಂಗಾ ಶ್ರೀ ಗಳಾದ ಶ್ರೀ ಶ್ರೀ ಡಾ|| ಶಿವಕುಮಾರ ಸ್ವಾಮಿ ಗಳ ರೂಪದಲ್ಲಿ ದೊಡ್ಡಗಂಗವಾಡಿಗೆ ಬಂದಿದ್ದಾರೆಂದು ಭಕ್ತಿನುಡಿಗಳನ್ನಾಡಿದರು ದಿನಾಂಕ 5. 4. 91 ರಂದು ಬಸವಜಯಂತಿ ಸಂದರ್ಭದಲ್ಲಿ.

ಸಮಾರಂಭದಲ್ಲಿ ಉಪನ್ಯಾಸಮಾಡಿದ ಜೇವೂರು ಮಠದ ಪೂಜ್ಯ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮಿಗಳು ಬಸವಣ್ಣ ಜೀವನದ್ರಷ್ಟಾರ, ಕ್ರಾಂತಿಕಲಾವಿದ, ದಯೆಯ ಪೂರ್ಣಕುಂಭ, ದೀನದಲಿತರ ಮಂಗಳ ಧ್ವನಿ ಎಂದು ನುಡಿದರು, ಮತ್ತೋರ್ವ ಶ್ರೀ ಗಳಾದ ಬೆಟ್ಟಳ್ಳಿ ಮಠದ ಪೂಜ್ಯ ಶ್ರೀ ನೀಲಕಂಠಶಿವಾಚಾರ್ಯ ಸ್ವಾಮಿಗಳು ಭಾವೈ ಕ್ಯತೆಯ ಪವಿತ್ರರೂವಾರಿ ಬಸವಣ್ಣ, ಸದ್ಗುಣಗಳನ್ನೇ ಬಿತ್ತಿಬೆಳೆದ ಕೂಡಲಸಂಗನ ಆರಾಧ್ಯ ಭಕ್ತಿ, ಲೋಕ ಪೂಜ್ಯ ಬಸವಣ್ಣನವರ ದಿವ್ಯ ಜೀವನ ಸಂದೇಶದ ಹರಿಕಾರರಾಗಿ ಸಿದ್ಧಗಂಗೆಯ ಪೂಜ್ಯರು ಹಗಲಿರುಳು ಶ್ರಮಿಸುತ್ತಿರುವುದನ್ನು ಸಮಾಜ ಅರ್ಥಮಾಡಿ ಕೊಂಡು ನಡೆಯಬೇಕೆಂದರು. ಇನ್ನೋರ್ವ ಶ್ರೀ ಸ್ವಾಮಿಗಳಾದ ಅಂಕನಹಳ್ಳಿ ಮಠದ ಪೂಜ್ಯ ಶ್ರೀ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳು ಮಾತನಾಡುತ್ತ ಸಿದ್ಧಗಂಗೆಯ ಪೂಜ್ಯ ಶ್ರೀ ಶಿವಕುಮಾರ ಸ್ವಾಮಿಗಳು ಪ್ರತ್ಯಕ್ಷದೇವರಾಗಿದ್ದಾರೆ ಅವರು ತೋರಿದ ದಾರಿಯಲ್ಲಿ ನಡೆಯುವುದಷ್ಟೆ ನಮ್ಮ ಕೆಲಸ ಎಂದು ಭಕ್ತಿಗೌರವಗಳನ್ನು ವ್ಯಕ್ತಮಾಡಿದರು.

ವಿದ್ವಾನ್ ಶ್ರೀ ಜಿ. ವಿ. ಶಿವಸ್ವಾಮಿಯವರು ಉಪನ್ಯಾಸ ಮಾಡುತ್ತ ಬಸವಣ್ಣ ನವರ ಸಾಹಿತ್ಯ ವ್ಯವಸಾಯದ ಪರಿಚಯಮಾಡಿಕೊಟ್ಟರು. ಜನಪದರು ಬಸವಣ್ಣ ನನ್ನು ಎದೆಗಪ್ಪಿಕೊಂಡು ಹೃದಯ ತುಂಬಿ ಹಾಡಿದ ರೀತಿಯನ್ನು ಶ್ರೀ ಹೆಚ್. ವಿ. ವೀರಭದ್ರಯ್ಯನವರು ಪರಿಚಯಿಸಿದರು.

ಪರಮ ಪೂಜ್ಯ ಶ್ರೀ ಶ್ರೀ ಗಳು ಅಧ್ಯಕ್ಷಪೀಠದಿಂದ ಆಶೀರ್ವಚನ ನೀಡುತ್ತ ಬಸವಣ್ಣನಂಥ ಮಂಗಳ ಮೂರ್ತಿಯನ್ನು ಜಗತ್ತು ಕಂಡದ್ದೇ ಒಂದು ದೊಡ್ಡ ವಿಸ್ಮಯ ಮಾನವೀಯ ಮಹಾಶಿಲ್ಪವಾದ ಬಸವಣ್ಣ ದೀನರಿಗಾಗಿ ದಲಿತರಿಗಾಗಿ ಹೋರಾಟ ಮಾಡಿದರೀತಿ ಸಾರ್ವಕಾಲಿಕ ತೋರುಗಂಭ, ಜೀವನವನ್ನು ಕಲೆಯನ್ನಾಗಿ ರೂಪಿಸಿದ ರೂವಾರಿ ಎಂದು ಆಶೀರ್ವಚನ ನೀಡಿದರು.

ನಾಟಕ ನಡೆವ ಮುನ್ನ ಮಳೆಕಾಣಿಸಿಕೊಂಡು ಬಸವಣ್ಣನಿಗೆ ಶರಣು ಮಾಡಿ ಹಿಂತಿರುಗಿತು. ಬೆಳಗಿನತನಕ ನಾಟಕ ನೋಡಿದ ಗಂಗವಾಡಿಯ ಬಂಧು ಗಳು ತೃಪ್ತಿಯ ಮೃದುಮಾತುಗಳಿಂದ ಕಲಾವಿದರಿಗೆ ತಮ್ಮ ಸಂತೋಷವನ್ನು ವ್ಯಕ್ತಪಡಿಸುತ್ತಿದ್ದರು.

ಆಧುನಿಕ "ಮನಸ್ಸು" ತುಂಬ ಸಂಕೀರ್ಣವಾದುದು. ಲೋಕ ವ್ಯವಹಾರದ "ಸೀಗೆಮಳೆ" ಯಲ್ಲಿ ಅದು ಮಗ್ನವಾಗುವುದೇ ಹೆಚ್ಚು. ಅದರಲ್ಲೂ ಬೆಂಗಳೂರಿ ನಂಥ ಜಗತ್ತಿನ ಹದಿಮೂರನೆ ಬೃಹತ್‌ನಗರವಾಸಿಯಾದ 'ಮನಸ್ಸು' ಗಳಿಗೆ ಬಸವ ಣ್ಣನವರ ಸರಳ ಜೀವನದ ವಿಧಿವಿಧಾನಗಳು ರುಚಿಸುವುದು ದುಸ್ತರ. ಪ್ರವಾಹಕ್ಕೆ ಎದುರು ಈಜುವ ಸಾಹಸ. ಆದರೆ ಪರಮ ಪೂಜ್ಯರ ಒಳದೃಷ್ಟಿಗೆ ಕಾಣುವುದೇ

ಬೇರೆ. ಸಂತೆಯ ಮಧ್ಯದಲ್ಲೂ ಶಿವಪೂಜೆ ಶಿವಯೋಗ ನಡೆಯಬೇಕೆಂಬುದೇ ಶರಣ ಸಿದ್ಧಾಂತವೆಂಬುದನ್ನ ಬಲ್ಲವರು. ಧರ್ಮ, ಮೋಕ್ಷ ಮುಂತಾದುವೆಲ್ಲ ಜೀವನ ವಿಮುಖವಾಗಬಾರದು. ಜೀವನದಿಂದಲೇ ಎದ್ದು ಬರಬೇಕು ಜೀವನವನ್ನು ಹದಗೊ ಳಿಸಬೇಕು ಎಂಬ ಪರಿಪೂರ್ಣ ನೋಟ ಹಳ್ಳಿ - ಹಳ್ಳಿಗಳ ಭಿನ್ನ ಭೇದವಿಲ್ಲ ಬಸವ ತತ್ತ್ವ ಪ್ರಸಾರಕ್ಕೆ ಎಂಬಂತೆ ಬೆಂಗಳೂರು ದಕ್ಷಿಣ ದಾಸನಪುರ ಹೋಬಳಿ ಮಾದ ನಾಯ್ಕನಹಳ್ಳಿಯಲ್ಲಿ ದಿನಾಂಕ 7-4-91 ರಂದು ಬಸವಜಯಂತಿ. ಅತ್ಯದ್ಭುತವಾದ ವ್ಯವಸ್ಥೆ ಭಕ್ತಿಉತ್ಸಾಹಗಳ ಪ್ರತಿರೂಪ. ರಾಷ್ಟ್ರೀಯ ಹೆದ್ದಾರಿ ನಾಲ್ಕರ ಪಕ್ಕದಲ್ಲಿ ವ್ಯವಸ್ಥೆಗೊಂಡ ಸಭಾಂಗಣ ಕಣ್ಣೆದುರಿಗೆ ಸಾಲ ಸಾಲು ವಾಹನಗಳ ಸಾಗಾಟ ಹಲವ ಹನ್ನೊಂದು ವ್ಯಾಪಾರಗಳ ಮನೋಧರ್ಮಿಗಳ ಮಧ್ಯೆ ಕೇಳಿಬಂದ ವಚನದಲ್ಲಿ ನಾಮಾ ಮೃತ ತುಂಬಿ' ಎಂಬ ಅಣ್ಣನವರ ವಚನ. 'ಹೂವ ಚೆಲ್ಲಿರೇ ಸ್ವಾಮಿ ಬರುವ ಹಾದಿಗೆ ಹೂವ ಚೆಲ್ಲಿರೆ' ಎಂಬ ಸೋದರಿ ಜಗದಾಂಗ ಅವರ ಮಧುರಕಂಠದ ಭಕ್ತಿ ಗೀತೆ. ಸಿದ್ಧಗಂಗಾಮಠದ ಕಿರಿಯ ಸ್ವಾಮಿಗಳಾದ ಪೂಜ್ಯ ಶ್ರೀ ಸಿದ್ಧಲಿಂಗ ಸ್ವಾಮಿಗಳಿಂದ ಸಮಾರಂಭದ ಉದ್ಘಾಟನೆ, ಬಂಡೇಮಠದ ಪೂಜ್ಯ ಶ್ರೀ ಶಿವರುದ್ರ ಸ್ವಾಮಿಗಳಿಂದ ಆಶೀರ್ವಚನ, ನೆಲಮಂಗಲದ ಪೂಜ್ಯ ಶ್ರೀಗಳಿಂದ ಆಶೀರ್ವಚನ ಶ್ರೀ ಹೆಚ್. ವಿ. ವೀರಭದ್ರಯ್ಯನವರಿಂದ ಉಪನ್ಯಾಸಗಳಾಗಿ ಬಸವ ಸಂದೇಶದ ಹಲವು ಮುಖಗಳ ಪರಿಚಯ ಸಭೆಗಾಯಿತು. ಮಧ್ಯಾಹ್ನದ ಸಭೆಯಲ್ಲಿ ಮಾತನಾಡಿದ ಬೇಲಿ ಮಠದ ಪೂಜ್ಯ ಶ್ರೀ ಶಿವರುದ್ರಸ್ವಾಮಿಗಳು ಬಸವಣ್ಣ ಮಂತ್ರ ಪುರುಷ' ಆತ ಬಿತ್ತಿದ್ದು ಕಾಯಕ ದಾಸೋಹಗಳನ್ನು, ಗುರುಲಿಂಗ ಜಂಗಮದಂಥ ಫಲವನ್ನು ಎನ್ನುತ್ತ 'ಉತ್ತು ಬಿತ್ತುವ ಮಂತ್ರ ಬಿತ್ತಿ ಬೆಳೆಯುವ ಮಂತ್ರ' ಬಸವಣ್ಣ ಬೋಧಿಸಿದ್ದು ಅದನ್ನೆ ಸಿದ್ಧಗಂಗಾ ಪೂಜ್ಯಪಾದರು ಕಣ್ಣೆದುರು ಆಚರಿಸಿ ತೋರಿಸುತ್ತ ನಡೆದಿದ್ದಾರೆ ಎಂದು ಉಪನ್ಯಾಸಮಾಡಿದರು.

ಬಸವಣ್ಣ ಬಡವರ ಬಂಧು, ಅಸ್ಪೃಶ್ಯರ ಸೂರ್ಯ, ಸ್ತ್ರೀಯರ ಭಾಗ್ಯ, ದುಃಖಿ ಗಳ ಭರವಸೆ, ವರ್ಣಾಶ್ರಮ ಧರ್ಮಿಗಳ ವಿರೋಧಿ, ಮಾನವಕುಲದ ಮಂಗಳದೀಪ ಎಂದು ಪರಮ ಪೂಜ್ಯ ಶ್ರೀ ಶ್ರೀ ಗಳು ಆಶೀರ್ವಚನ ನೀಡಿದರು.


ಸಮಾರಂಭದಲ್ಲಿ ಪುಟ್ಟ ಮಕ್ಕಳು ಕುಮಾರಿ ಶಶಿಕಲಾ, ಕುಮಾರಿ ಸುಧಾ ಬಸವಣ್ಣನವರನ್ನು ಕುರಿತು ಮಾತನಾಡಿದ್ದು ಸಭಿಕರ ಮೆಚ್ಚುಗೆಯನ್ನು ಗಳಿಸಿತು.

ರಾತ್ರಿ ಜಗಜ್ಯೋತಿ ಬಸವೇಶ್ವರ ನಾಟಕ ಪ್ರದರ್ಶಿತವಾದಾಗ ಬಾಂಬೆ ಬೆಂಗಳೂರು ಮಧ್ಯೆ ಸಂಚರಿಸುವ ಲಾರಿಗಳ ಡ್ರೈವರ್‌ಗಳು ಸಿಖ್‌ಧರ್ಮಿಗಳು ನಿಂತು ನೋಡುವಂತೆ ಅಭಿನಯಿಸಲ್ಪಟ್ಟಿತು. ಭಾಷೆ ಅಡ್ಡಿಯಾಗಲಿಲ್ಲ. ಸಿಖ್ ಬಂಧುಗಳಿಗೆ 'ಬಹೂತ್ ಅಚ್ಚಾ ಹೈ' ಎಂದು ಮಾತಾಡಿಕೊಂಡು ಬಿಚ್ಚಿಹೋಗುತ್ತಿದ್ದ ರುಮಾಲನ್ನು ಬಿಗಿದು ಕಟ್ಟಿಕೊಳ್ಳುತ್ತಿರುವಾಗ ಪೂಜ್ಯ ಸ್ವಾಮಿಗಳ ಕಾರು ಬಂದುದನ್ನು ಕಂಡು ಸರಿದು ದಾರಿಬಿಟ್ಟರು.

ಬರೆಯುತ್ತೇನೆ.



ಡಾ॥ ದೇ. ಜವರೇಗೌಡರು ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿ ಸಲ್ಲಿಸಿದ ಸೇವೆ ಸ್ಮರಣೀಯ. ಬಸವಣ್ಣನವರು ಜಗತ್ತಿನಲ್ಲಿ " ಸಮಗ್ರ ಕ್ರಾಂತಿಯ ಮೂಲ ಪುರುಷ " ಎಂಬ ಇವರ ಅಮೂಲ್ಯ ಗ್ರಂಥ ಮೇರು ಕೃತಿಯಾಗಿದೆ.



ವಿದ್ಯಾಪ್ರಸಾರದಲ್ಲಿ ಅದ್ಭುತ ಸೇವೆ ಸಲ್ಲಿಸುತ್ತಿರುವ ಶ್ರೀ ಹೆಚ್. ಎಂ. ಗಂಗಾಧರಯ್ಯನವರು. ಸಿದ್ಧಗಂಗಾ ಪೂಜ್ಯ ಶ್ರೀ ಶ್ರೀ ಗಳವರ ಆಶೀರ್ವಾದದಿಂದ ತಮ್ಮ ಸಿದ್ಧಾರ್ಥ ವಿದ್ಯಾಸಂಸ್ಥೆ ಅಭಿವೃದ್ಧಿ ಪಥದಲ್ಲಿ ಮುನ್ನಡೆಯುತ್ತಿದೆ ಎಂದು ಹೆಮ್ಮೆಯಿಂದ ಸ್ಮರಿಸುತ್ತಾರೆ.

"SIDDAGANGA" MONTHLY Reg. No. KRNC-9



# ಆಮಂತ್ರಣ

ಶ್ರೀ ಸಿದ್ಧಗಂಗಾ ಮಠಾಧ್ಯಕ್ಷರಾದ ತ್ರಿವಿಧದಾಸೋಹ ಮೂರ್ತಿಗಳಾದ
ಶಿವಯೋಗಿ ಪರಮಪೂಜ್ಯ

**ಡಾ|| ಶ್ರೀ ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರ**

## ವಜ್ರಮಹೋತ್ಸವ ಆಚರಣೆಯ ಸಂಬಂಧವಾಗಿ

**ರಾಜ್ಯ ಮಟ್ಟದ ಭಕ್ತಾದಿಗಳ ಸಭೆಯನ್ನು ಕರೆಯಲಾಗಿದೆ.**

ದಿನಾಂಕ : 9 ಜೂನ್ 1991 ಭಾನುವಾರ ಬೆಳಿಗ್ಗೆ 10 ಘಂಟೆ.

ಸಭೆ ನಡೆಯುವ ಸ್ಥಳ : **ಶ್ರೀ ಸಿದ್ಧಗಂಗಾ ಮಠ.**

ಅಧ್ಯಕ್ಷತೆ : **ಸನ್ಮಾನ್ಯ ಶ್ರೀ ಪುಟ್ಟಸ್ವಾಮಿಗೌಡರು,**
ಕೃಷಿ ಮತ್ತು ತೋಟಗಾರಿಕೆ ಸಚಿವರು, ಕರ್ನಾಟಕ ರಾಜ್ಯ.

ನಾಡಿನ ಭಕ್ತಾದಿಗಳು, ಅಭಿಮಾನಿಗಳು, ಹಿತೈಷಿಗಳು ಮತ್ತು ಹಳೆಯ ವಿದ್ಯಾರ್ಥಿಗಳು ಈ ಸಭೆಗೆ ಆಗಮಿಸಿ ಸಲಹೆ ಸಹಕಾರಗಳನ್ನಿತ್ತು ಮುಂದೆ ರೂಪಿತವಾಗುವ ಯೋಜನೆಗಳು ಜಯಪ್ರದವಾಗುವಂತೆ ನೆರವಾಗಬೇಕೆಂದು ಪ್ರಾರ್ಥಿಸುತ್ತೇವೆ.


ಆಮಂತ್ರಕ ಭಕ್ತರ ಪರವಾಗಿ,

ನೇತ್ರದಾನಿ ಪದ್ಮಭೂಷಣ ಡಾ|| ಎಂ. ಸಿ. ಮೋದಿ.

ಶ್ರೀ ಸಿದ್ಧಲಿಂಗೇಶ್ವರಸ್ವಾಮಿ ಮುದ್ರಣಾಲಯ, ಶ್ರೀ ಸಿದ್ಧಗಂಗಾಮಠ.

# ಸಿದ್ಧಗಂಗಾ

ಸಂಪುಟ–27. ಸಂಚಿಕೆ–6. ಜೂನ್–1991.




ತಾ: 9-6-91 ರಂದು ಶ್ರೀ ಮಠದಲ್ಲಿ ನಡೆದ ಡಾ|| ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ಪೀಠಾರೋಹಣ ಪೂರ್ವಸಿದ್ಧತಾ ಸಮಾರಂಭದಲ್ಲಿ ಪ್ರಖ್ಯಾತ ನೇತ್ರದಾನಿ ಡಾ|| ಎಂ. ಸಿ. ಮೋದಿಯವರು ಮಾತನಾಡುತ್ತಾ ಶ್ರೀ ಶ್ರೀಗಳವರ ಕಾರ್ಯವನ್ನು ಇಡೀ ಜಗತ್ತಿನಲ್ಲಿ ಯಾರೂ ಮಾಡಿಲ್ಲ. ಈ ಯೋಜಿತ ಮಹೋತ್ಸವ ಯಶಸ್ವಿಯಾಗಲು ಸರ್ವರ ನೆರವು ಸಹಕಾರವನ್ನು ಸಭೆಯಲ್ಲಿ ಕೋರಿ ಮಾತನಾಡುತ್ತಿರುವುದು.

ಪ್ರಕಾಶಕರು:
ಹಳೆಯ ವಿದ್ಯಾರ್ಥಿಗಳ ಸಂಘ,
ಸಿದ್ಧಗಂಗಾ ಕ್ಷೇತ್ರ.



ವಜ್ರಮಹೋತ್ಸವ ಕಾರ್ಯದರ್ಶಿಗಳಾದ ನಿವೃತ್ತ ಐ. ಪಿ. ಎಸ್. ಅಧಿಕಾರಿಗಳಾ
ಶ್ರೀ ಎಸ್. ಎಸ್. ಹಸಬಿಯವರು, ಅಧ್ಯಕ್ಷರಾದ ಪದ್ಮಶ್ರೀ ಡಾ|| ಎಂ. ಸಿ. ಮೋ
ಯವರು, ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸಿದ್ದ ರಾಜ್ಯದ ಕೃಷಿ ಮತ್ತು ತೋಟಗಾರಿ
ಸಚಿವರಾದ ಮಾನ್ಯ ಶ್ರೀ ಎಚ್. ಪುಟ್ಟಸ್ವಾಮಿಗೌಡರು ಹಾಗೂ ಶ್ರೀ ಮಠ
ಕಿರಿಯ ಶ್ರೀ ಶ್ರೀ ಸಿದ್ಧಲಿಂಗಸ್ವಾಮಿಗಳವರುಗಳು ಉಪಸ್ಥಿತರಿರುತ್ತಾರೆ.



ಸಮಾರಂಭದ ಅಧ್ಯಕ್ಷರಾದ ರಾಜ್ಯದ ಕೃಷಿ ಮತ್ತು ತೋಟಗಾರಿಕೆ ಸಚಿವರಾದ
ಶ್ರೀ ಹೆಚ್. ಪುಟ್ಟಸ್ವಾಮಿ ಗೌಡರು ಶ್ರೀ ಶ್ರೀ ಗಳವರ ಮಾನವೀಯ ಸೇವೆ ನಾಡಿಗೆ
ಸಲ್ಲುತ್ತಿರುವುದು ಪುಣ್ಯ ಎಂದು ಶ್ಲಾಘಿಸಿ ಸಭೆಯನ್ನುದ್ದೇಶಿಸಿ ಮಾತನಾಡುತ್ತಿರುವುದು

# ಸಿದ್ಧಗಂಗಾ

ಸಂಪುಟ–27.    ಸಂಚಿಕೆ–6.    ಜೂನ್ – 1991.

## ಶ್ರೀ ಸಿದ್ಧಗಂಗಾ ಗುರುಕರುಣ ತ್ರಿವಿಧಿ.

" ಕೈ ಗಡಗಕಾಂಬುದಕೆ ಕನ್ನಡಿಯ ಹಂಗೇಕೆ "
ಅನ್ಯರ ನೆರವೇಕೆ ದರುಶನಕೆ । ನನ್ನತಂದೆ
ಸಿದ್ಧಗಂಗಾ ಗುರುವೆ ಕೃಪೆಯಾಗು ॥

" ತಾಯಿ ಬಳ್ಳಿಗೆ ಕಾಯಿದಿಮ್ಮಿತ್ತೆ " ಎಲೆ ತಂದೆ
ಸಹಸ್ರ ಸಹಸ್ರ ಮಕ್ಕಳು ಹೊರೆಯೆ ನಿನಗೆ । ಗುರುವೆ
ಸಿದ್ಧಗಂಗಾ ಗುರುವೆ ಕೃಪೆಯಾಗು ॥

ಅನುಭಾವದರವಟಿಗೆ ತೆರೆದ ಮಂಗಳ ಮೂರ್ತಿ
ತನಿಬೆಳಗ ಚೆಲ್ಲಿದ ಶಿವರೂಪ । ನನ್ನತಂದೆ
ಸಿದ್ಧಗಂಗಾ ಗುರುವೆ ಕೃಪೆಯಾಗು ॥

—ಹೆಚ್. ವಿ. ವೀರಭದ್ರಯ್ಯ.

| ಲೇಖನ | ಲೇಖಕರು | ಪುಟ |
|---|---|---|


* ಶ್ರೀವಾಣಿ 5

* ಶ್ರೀ ಸಿದ್ಧಲಿಂಗೇಶ್ವರ ವಚನ 7

* ಸಂಪಾದಕೀಯ 8

* ಶಿವಶರಣರ ವಚನಗಳ ಉಗಮ ಭಾಗ-6
ಶ್ರೀ ಎನ್. ಚನ್ನಬಸಪ್ಪ

* ಸರ್ವೋದಯದ ಸಿದ್ಧಾಂತ-ಸಿದ್ಧಿ 15
ಶ್ರೀ ಶದ್ಧಲಸೆ ವಿಘ್ನೇಶ್ವರ ಶರ್ಮಾ.

* ಶಿವ ಸಹಸ್ರನಾಮದ ವೈಶಿಷ್ಟ್ಯವೇನು? 21
ಶ್ರೀ ಪ. ರಾಮಕೃಷ್ಣ ಶಾಸ್ತ್ರಿ

* ಅರ್ಥರಹಿತ ನಡವಳಿಕೆಗಳು 25
ಶ್ರೀ ರಸಿಕ ಪುತ್ತಿಗೆ

* ಶಿಕ್ಷಣ ಮತ್ತು ಪಾತು 30
ಶ್ರೀ ಕರ್ಕಿ ಸುಬ್ರಾಯ ಭಟ್ಟ

* ವರತಪಸ್ವಿ 32
ಎಚ್. ಜಿ. ರಾಧಾದೇವಿ

* ವಿದ್ಯಾರ್ಥಿ ಜೀವನದ ಬೆಳಕು ಸರಣಿ ಲೇಖನ-೯ 34
ಶ್ರೀ ಬಿ.ಎಸ್. ಕೃಷ್ಣಮೂರ್ತಿ

* ಭಿಕ್ಷುಕರ ಹಳ್ಳಿ-ಇನ್ನಾದರೂ ಬದಲಾದಿತೇ? ಶ್ರೀ ಬಿ. ಸುಬ್ರಾಯ ಅಡಿಗ 37

* ಗ್ರಾಮಾಂತರ ಬಸವ ಜಯಂತಿ - 263 39
ಶ್ರೀ ಹೆಚ್. ವಿ. ವೀರಭದ್ರಯ್ಯ

* ಕ್ಷೇತ್ರ ವಾರ್ತೆ ಶ್ರೀ ಹೆಚ್. ಬಿ. ಗಂಗಾಧರಯ್ಯ 43

# ಶ್ರೀವಾಣಿ

## ಪ್ರಸಾದದ ಮಹತ್ವ

ಭೀಷ್ಮರು ಶರಮಂಚದಮೇಲೆ ಮಲಗಿದ್ದಾರೆ. ಕುರುಕ್ಷೇತ್ರ ಯುದ್ಧದಲ್ಲಿ ಪಾಂಡವರು ವಿಜಯ ಸಂಪಾದಿಸಿಯಾಗಿದೆ. ಧರ್ಮರಾಜ ತನ್ನ ಸಹೋದರರೊಂದಿಗೆ ಹಾಗೂ ಧರ್ಮಪತ್ನಿ ದ್ರೌಪದಿಯೊಂದಿಗೆ ಭೀಷ್ಮರ ದರ್ಶನಕ್ಕೆ ಬರುತ್ತಾನೆ, ಭೀಷ್ಮರಿಗೆ ನಮಸ್ಕರಿಸಿ ತಮಗೆ ಆಶೀರ್ವಚನ ಬೇಡುತ್ತ ಧರ್ಮೋಪದೇಶ ಅಪೇಕ್ಷಿಸುತ್ತಾನೆ. ದ್ರೌಪದಿ ನಕ್ಕುಬಿಡುತ್ತಾಳೆ. ಧರ್ಮರಾಯನಿಗೆ ಮತ್ತುಳಿದವರಿಗೆ ವಿಪರೀತ ಕೋಪ ಬರುತ್ತದೆ. ಕುರುವೃದ್ಧ ಪೂಜ್ಯ ಭೀಷ್ಮರ ಬಗ್ಗೆ ಅಗೌರವದಿಂದ ನಡೆದುಕೊಂಡದ್ದಕ್ಕಾಗಿ ದ್ರೌಪದಿಯನ್ನು ಪ್ರಶ್ನಿಸುತ್ತಾನೆ. ನಕ್ಕದ್ದು ಏಕೆ? ಎಂದು. ಅದಕ್ಕೆ ದ್ರೌಪದಿ ಉತ್ತರಿಸುತ್ತಾಳೆ-ಹಿಂದೆ ರಾಜ ಸಭೆಯಲ್ಲಿ ತನ್ನ ವಸ್ತ್ರಾಪಹರಣ ನಡೆದಾಗ ಅಲ್ಲಿಯೇ ಕುಳಿತಿದ್ದ ಈ ವಯೋವೃದ್ಧರು ಮಾಡಿದ್ದಾದರೂ ಏನು? ಓರ್ವ ಹೆಣ್ಣಿನ ಮರ್ಯಾದೆ ಹರಣವಾಗುತ್ತಿರುವುದನ್ನು ಕಂಡು ನಿಷ್ಕ್ರಿಯರಾಗಿ ಕುಳಿತ್ತಿದ್ದವರು ಧರ್ಮದ ಉಪದೇಶ ಮಾಡಲು ಎಷ್ಟರಮಟ್ಟಿಗೆ ಅರ್ಹರಾದಾರು? ಎಂಬುದೇ ನನ್ನ ವಿಚಾರ. ಅದಕ್ಕಾಗಿಯೇ ನಕ್ಕದ್ದು ಎಂದು ದಿಟ್ಟವಾಗಿಯೇ ಉತ್ತರ ಕೊಡುತ್ತಾಳೆ. ಎಲ್ಲರೂ ಅವಾಕ್ಕಾಗುತ್ತಾರೆ. ದ್ರೌಪದಿಯ ಮಾತು ಸರಿಯಾಗಿದೆಯಲ್ಲ ಎಂದೂ ಅನ್ನಿಸುತ್ತದೆ. ಭೀಷ್ಮರೂ ಕೇಳಿಸಿಕೊಳ್ಳುತ್ತಾರೆ. ಅವರೇನೂ ಸಿಟ್ಟಾಗುವುದಿಲ್ಲ. ಭೂಮಿ ತೂಕದ ವ್ಯಕ್ತಿತ್ವ ಅವರದು. ಧರ್ಮ ಸೂಕ್ಷ್ಮವನ್ನು ಬಲ್ಲ ಪ್ರಾಜ್ಞರು ಬೇರೆ. ದ್ರೌಪದಿಯನ್ನು ಮುಂದಕ್ಕೆ ಬರುವಂತೆ ಕರೆಯುತ್ತಾರೆ. 'ಬಾ ತಾಯಿ, ನಿನ್ನ ಮಾತುಗಳಿಂದ ನನಗೇನೂ ಕೋಪವಿಲ್ಲ ನಿಜವನ್ನೇ ನುಡಿದಿದ್ದೀಯೆ ನೀನು ನಿನ್ನ ನೋವು ಏನು? ಎಷ್ಟೊಂದು ಗಂಭೀರ ಎಂಬುದನ್ನು ಬಲ್ಲೆ. ಅಂದು ನಿನ್ನ ವಸ್ತ್ರಾಪಹರಣವಾಗುವಾಗ ನಾನು ಪರಾನ್ನ ಜೀವಿಯಾಗಿದ್ದೆ. ಕೌರವನ ಅನ್ನ ಸಂಬಂಧಿಯಾಗಿದ್ದೆ. ಆದರೆ ಇಂದು ಆ ಸಂಬಂಧದಿಂದ ಮುಕ್ತನಾಗಿದ್ದೇನೆ. ಸ್ವತಂತ್ರನಾಗಿದ್ದೇನೆ. ತಾಯಿ ಯಾರ ಸಂಬಂಧವಾದ ಆಹಾರವನ್ನು ನಾವು ಸ್ವೀಕರಿಸುತ್ತೇವೆಯೋ ಆ ಸಂಬಂಧವಾದ ಬುದ್ಧಿ ಭಾವಗಳು ನಮ್ಮಲ್ಲಿ ಉಂಟಾಗುತ್ತವೆ. ಅಂದು ಧರ್ಮದ ರಕ್ಷಣೆ ಮಾಡುವಲ್ಲಿ ನಾನು ಅಸಹಾಯಕನಾಗಿದ್ದೆ. ಇಂದು ಹಾಗಲ್ಲ. ಸ್ವತಂತ್ರನಾಗಿದ್ದೇನೆ. ಧರ್ಮೋಪದೇಶ ಮಾಡುವ ನೈತಿಕ ಜವಾಬ್ದಾರಿಯುಳ್ಳವ-ಎಂದು ವಿವರಿಸುತ್ತಾರೆ ಭೀಷ್ಮ. ಪ್ರಸಾದದ ಮಹತ್ವ ಇದರಿಂದ ವ್ಯಕ್ತವಾಗುತ್ತದಲ್ಲವೆ? ಶರಣರು ಇಂಥ ಮಹತ್ವವನ್ನು ಮನಗಂಡೇ ಪದಾರ್ಥ ಭಾವದಿಂದ ಮುಕ್ತರಾಗಿ ಪ್ರಸಾದ ಭಾವದಿಂದ ಜೀವನವನ್ನೆಲ್ಲ ಸ್ವೀಕರಿಸಿದ್ದು. ಪದಾರ್ಥ ಭಾವ ಅಳಿಯಬೇಕಾದರೆ ನಾವು ಸ್ವೀಕರಿಸುವ ಒಂದೊಂದು ತುತ್ತೂ ಶಿವನ ಪ್ರಸಾದ ವೆಂಬ ಭಾವನೆ ಬಂದಾಗ ಸಾಧ್ಯ.

## ಸಿದ್ಧಗಂಗಾ ಮಾಸ ಪತ್ರಿಕೆ
ಶ್ರೀ ಸಿದ್ಧಗಂಗಾ ಮಠ-572104
ತುಮಕೂರು ಜಿಲ್ಲೆ

ಪ್ರಧಾನ ಸಂಪಾದಕರು
**ಪ್ರೊ|| ಚನ್ನಪ್ಪ ಎರೇಸೀಮೆ**

* * *

ಸಂಪಾದಕರು
**ಹೆಚ್. ವಿ. ವೀರಭದ್ರಯ್ಯ**

* * *

ಸಹ ಸಂಪಾದಕರು
**ಬಿ. ವೀರಭದ್ರಯ್ಯ**
**ಪಿ. ಎಸ್. ಚಂದ್ರಶೇಖರಯ್ಯ**

* * *

ಜಾಹೀರಾತು ವಿಭಾಗ
**ಎಂ. ರೇಣುಕಾರಾಧ್ಯ**

* * *

ವಿತರಣೆ ವಿಭಾಗ
**ಆರ್. ಎಸ್. ಮಲ್ಲೇಶಪ್ಪ**

* * *

ಪ್ರಕಾಶಕರು
**ಹೆಚ್. ಬಿ. ಗಂಗಾಧರಯ್ಯ**
ಹಳೆಯ ವಿದ್ಯಾರ್ಥಿ ಸಂಘದ ಪರವಾಗಿ

* * *

ಮುದ್ರಕರು
**ಶ್ರೀ ಸಿದ್ಧಲಿಂಗೇಶ್ವರಸ್ವಾಮಿ ಮುದ್ರಣಾಲಯ**

* * *

ಪ್ರಕಟಣೆಯ ಸ್ಥಳ
ಶ್ರೀ ಸಿದ್ಧಗಂಗಾಕ್ಷೇತ್ರ


### ಚಂದಾ ವಿವರ

ವಾರ್ಷಿಕ ಚಂದಾ 25-00ರೂ
ಆಜೀವ ಸದಸ್ಯತ್ವ 250-00 ರೂ

## ಲೇಖಕರಲ್ಲಿ ಮನವಿ

'ಸಿದ್ಧಗಂಗಾ' ಶ್ರೀ ಸಿದ್ಧಗಂಗಾ ಮಠದಿಂದ ಪ್ರಕಟವಾಗುತ್ತಿರುವ ಮಾಸ ಪತ್ರಿಕೆ. ಶ್ರೀ ಮಠದ ಹಳೆಯ ವಿದ್ಯಾರ್ಥಿ ಸಂಘದ ಹೆಮ್ಮೆಯ ಸೇವಾ ಪುರವಣಿ. ಮೇಲಾಗಿ ಶ್ರೀ ಮಠದ ಮುಖವಾಣಿ. ಪೂಜ್ಯ ಶ್ರೀ ಶ್ರೀ ಡಾ|| ಶಿವಕುಮಾರ ಮಹಾಸ್ವಾಮಿಗಳವರ ದಿವ್ಯ ಮಾರ್ಗದರ್ಶನದಲ್ಲಿ ಮುನ್ನಡೆದಿರುವ ಪತ್ರಿಕೆ. ತ್ರಿವಿಧ ದಾಸೋಹ ಸೇವಾ ತತ್ಪರತೆಯಿಂದ ಹೆಜ್ಜೆ ಹಾಕುತ್ತಿದೆ. ಈ ಧ್ಯೇಯ ಸಾಧನೆಗಾಗಿ ನಾಡಿನ ಗಣ್ಯ ಲೇಖಕರಿಂದ ಸಾಹಿತ್ಯ, ಸಂಸ್ಕೃತಿ, ಧರ್ಮ, ವಿಜ್ಞಾನ, ಶಿಕ್ಷಣ, ಇತಿಹಾಸ, ವೈಚಾರಿಕ, ಚಿಂತನ ಮುಂತಾದ ಲೇಖನಗಳನ್ನು ಸ್ವಾಗತಿಸುತ್ತದೆ ಅಸ್ವೀಕೃತ ಲೇಖನಗಳನ್ನು ಪಡೆಯಲು ಸಾಕಷ್ಟು ಅಂಚೆಸ್ಟಾಂಪುಗಳನ್ನು ಲಗತ್ತಿಸಿರಬೇಕು. ಲೇಖನಗಳಲ್ಲಿ ಸೂಕ್ತ ಬದಲಾವಣೆ ಮಾಡಿಕೊಳ್ಳುವ ಅಧಿಕಾರ ಸಂಪಾದಕರಿಗಿದೆ. ಅನುವಾದ, ರೂಪಾಂತರ ಲೇಖನಗಳಿಗೆ ಮೂಲ ಕೃತಿಕಾರರ ಅನುಮತಿ ಪಡೆದಿರಬೇಕು. ಸ್ವೀಕೃತ ಲೇಖನಗಳಿಗೆ ಸೂಕ್ತ ಸಂಭಾವನೆ ಕೊಡಲಾಗುವುದು.

---

**" ಸಂಪಾದಕರು "**
**'ಸಿದ್ಧಗಂಗಾ' ಕನ್ನಡ ಮಾಸಪತ್ರಿಕೆ**
ಶ್ರೀ ಸಿದ್ಧಗಂಗಾ ಕ್ಷೇತ್ರ-572104
ತುಮಕೂರು ಜಿಲ್ಲೆ.

ಇವರಿಗೆ ಕಳುಹಿಸಿಕೊಡಬೇಕಾಗಿ ಪ್ರಾರ್ಥನೆ

# ಶ್ರೀ ಸಿದ್ಧಲಿಂಗೇಶ್ವರ ವಚನ



ಕಸನೀರತರುವ ದಾಸಿಗೊಂದು ಶಿಶು ಹುಟ್ಟಿತ್ತು ನೋಡಾ.
ಶಿಶುಯೆದ್ದು ತಾಯನಪ್ಪಲು ಕಸನೀರರತು ಹೋಯಿತ್ತು
ಮಹಾಲಿಂಗ ಗುರು ಶಿವಸಿದ್ದೇಶ್ವರ ಪ್ರಭುವೇ.

ದೇಹ ಇಂದ್ರಿಯ ವ್ಯಾಪಾರ ದೊಡನೆ ಕೂಡಿವರ್ತಿಸುವ ಅವಿದ್ಯಾ ಶಕ್ತಿಗೆ ಸದ್ವಿವೇಕಸ್ವರೂಪದ ಚಿತ್ಪುತ್ರನುದಯವಾಗಿ ಆಯಾಯ ದೇಹ ಇಂದ್ರಿಯಗಳ ಶಕ್ತಿಯನ್ನು ಅವಗ್ರಹಿಸಿದಾಗ ಮಾಯೆ ನಿರಸನ ವಾಗಿ ಚಿದ್ವಿದ್ಯಾಸ್ವರೂಪವಾದಲ್ಲಿ ದೇಹ ಇಂದ್ರಿಯ ವ್ಯಾಪಾರಗಳು ನಷ್ಟವಾಗಿರ್ಪುವು ಎನ್ನುತ್ತದೆ ವಚನ

# ಸಂಪಾದಕೀಯ

## ಚುನಾವಣಾ ಫಲಿತಾಂಶ

ಹತ್ತನೇ ಲೋಕಸಭೆಯ ಚುನಾವಣೆ ಮುಗಿದಿದೆ, ಫಲಿತಾಂಶ ಹೊರಬಿದ್ದಿದೆ. ಭಾರತೀಯ ಮತದಾರನ ಅಂತರಂಗ ಹೇಗಿದೆ ಎಂಬುದು ಪ್ರಕಟಗೊಂಡಿದೆ. ಚುನಾವಣೆಯ ವಿಶ್ಲೇಷಣೆಗಳೂ ವಿಸ್ಮಯಗೊಳ್ಳುವಂತಹ ಫಲಿತಾಂಶ ಕಾಣಬಂದಿದೆ. ನಿಶ್ಚಿತ ಅಂದರೆ ಸರ್ಕಾರವನ್ನು ಸಂಪೂರ್ಣ ತನ್ನ ಪಕ್ಷದ ಬೆಂಬಲದಿಂದಲೇ ರೂಪಿಸಿಕೊಳ್ಳುವಂತ ಬಹುಮತವನ್ನು ಯಾವಪಕ್ಷವೂ ಪಡೆದಿಲ್ಲ. ಇನ್ನೊಂದು ಅಥವಾ ಇನ್ನಿತರ ಪಕ್ಷಗಳ ಬೆಂಬಲದಿಂದಲೇ ಸರ್ಕಾರ ಅಸ್ತಿತ್ವಕ್ಕೆ ಬರಬೇಕಾಗಿದೆ. ಅಂತೂ ಅನಿಶ್ಚಿತ ವ್ಯವಸ್ಥೆಯೇ ಮುಂದುವರಿದಂತಾಯಿತು. ಚುನಾವಣೆಗೆ ಮುಂಚೆ ಹೇಳಿಕೊಳ್ಳುತ್ತಿದ್ದ ಎಲ್ಲ ರಾಜಕೀಯ ಪ್ರಮುಖರ ಹೇಳಿಕೆಗಳೂ ಇಂದು ತಿರುವು ಮುರುವಾಗಿವೆ. ಕೆಲವು ಪ್ರಮುಖರಂತೂ ಭಾರೀ ಪರಾಭವನ್ನೇ ಕಂಡಿದ್ದಾರೆ. ಕೆಲವರ ಸೋಲಿನಿಂದ ಲೋಕಸಭೆಗೇ ನಷ್ಟವಾಗಿದೆ ಎನದೇ ವಿಧಿಯಿಲ್ಲ. ಆದರೆ ಮತದಾರನ ತೀರ್ಪನ್ನು ಒಪ್ಪದೇ ವಿಧಿಯಿಲ್ಲ. ಚಿತ್ರ ಜಗತ್ತಿನ ಕೆಲವರು ಲೋಕ ಸಭೆಯನ್ನು ಪ್ರವೇಶಿಸುತ್ತಿದ್ದಾರೆ. ಅನುಭವ ಶ್ರೀ ಮತಿಂಕೆಯುಳ್ಳವರ ಸಾಹಚರ್ಯ ಅವರಿಗೆ ಮಾರ್ಗದರ್ಶನ ಮಾಡಬೇಕಾಗಿದೆ. ಮುಂದಿನ ನಾಯಕರು ಯಾರೇ ಆಗಲಿ. ಯಾವ ಪಕ್ಷವೇ ಸರ್ಕಾರ ರಚಿಸಲು ಇನ್ನಾದರೂ ಪಕ್ಷ, ವ್ಯಕ್ತಿ ಪ್ರದೇಶ ಪ್ರಾಶಸ್ತ್ಯಕ್ಕಿಂತ ದೇಶದ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಗೆದ್ದ ವ್ಯಕ್ತಿಗಳು ಸಂವಿಧಾನಾತ್ಮಕವಾಗಿ ಕೆಲಸಮಾಡಬೇಕಾಗಿದೆ. ಈಗಾಗಲೇ ಹಲವಾರು ಸಮಸ್ಯೆಗಳ ಸುಳಿಯಲ್ಲಿ ದೇಶ ಅಭಿವೃದ್ಧಿಸಾಧಿಸುವಲ್ಲಿ ಕುಂಟುತ್ತಿದೆ. ಬಡತನ ನಿವಾರಣೆ, ನಿರುದ್ಯೋಗ ಸಮಸ್ಯೆ, ಜನಸಂಖ್ಯಾಸ್ಫೋಟ, ಋಣಭಾರ ಮುಂತಾದುವುಗಳಿಂದ ತತ್ತರಿಸುತ್ತಿದೆ. ಸ್ವಾರ್ಥ ಮುಕ್ತರಾಗದ ಹೊರತು ಆಯ್ಕೆಗೊಂಡಿರುವ ಜನಪ್ರನಿಧಿಗಳು ದೇಶದ ಅಭಿವೃದ್ಧಿಗೆ ದುಡಿಯಲಾರರು. ಪಕ್ಷಗಳ ಪರಸ್ಪರ ದೋಷಾರೋಪಣೆ, ದೂಷಣೆ ನಿಲ್ಲಬೇಕು. ಭ್ರಷ್ಟಾಚಾರ ಬಯಲಿಗೆಳೆಯುತ್ತೇವೆ ಎಂದು ಸಮಿತಿ, ಉಪಸಮಿತಿ, ಆಯೋಗ,ತನಿಖಾ ದಳಗಳನ್ನು ನೇಮಿಸುವುದರಲ್ಲೇ ಲೋಕ ಸಭೆಯ ಕಲಾಪಗಳು ಮುಗಿಯುವಂತಾಗಬಾರದು. ಮೂಲಭೂತ ಸಮಸ್ಯೆಗಳ ಪರಿಹಾರಕ್ಕೆ' ಮನಸ್ಸಾಕ್ಷಿ'ಯಾಗಿ ದುಡಿಯಬೇಕು. ಚುನಾವಣೆಗೆ ವೆಚ್ಚಮಾಡಿದ ಸಂಪತ್ತನ್ನು ಮರಳಿ ಪಡೆಯುವ 'ಮಹಾಮಣಿಹ'ದಲ್ಲಿ ಮಗ್ನರಾಗಬಾರದು. ಹನ್ನೊಂದನೆಯ ಲೋಕಸಭಾ ಚುನಾವಣೆ ಐದು ವರ್ಷ ತುಂಬಿದ ಮೇಲೆಯೇ ಬರುವಂತಾದರೂ ಈ ಚುನಾಯಿತರಾಗಿರುವ ಎಲ್ಲ ಸದಸ್ಯರು, ಎಲ್ಲ ಪಕ್ಷಗಳು ಸಂಯಮದಿಂದ ದೇಶಕ್ಕೆ ಉಪಕಾರ ಮಾಡುವಂತಾಗಲಿ ಎಂದು 'ಸಿದ್ಧಗಂಗಾ' ಹಾರೈಸುತ್ತದೆ.

# ಘನ ಮಹಿಮ ಗುರುದೇವ

ನೆ. ರಾ. ಶೇಷಾಚಲಂ
ಎಸ್.ಐ.ಟಿ, ತುಮಕೂರು.



ಶ್ರೀ ಉದ್ದಾನ ಶಿವಯೋಗಿ ಕರಕಮಲ ಸಂಜಾತ
ಶ್ರೀ ಶಿವಕುಮಾರ ಗುರುದೇವ ಶರಣು ಶರಣು.
ತುಂಬಿಹುದು ಗುರುಮಠವು ಪರಿಪರಿಯಜನರಿಂ
ಅಕ್ಕರೆಯಿಂ ವಿದ್ಯೆಯಿಂ ಕಲಿಯುತಿಹರ್ ವಿದ್ಯಾರ್ಥಿವೃಂದಂ.
ಸಂಸ್ಕೃತ ಆಂಗ್ಲ ಕನ್ನಡಮೆ ಮೊದಲಾಗಿ
ವೇದ ವಿದ್ಯೆಯಿಂ ಅತಿಶಯದಿ ಕಲಿಸುತಿರ್ಪರ್
ವಿದ್ಯೆಯಲಿ ಪಾಂಡಿತ್ಯ ಪಟ್ಟವಂ ಪಡೆದು
ಮೆರೆದಿಹರು ವಿದ್ಯಾ ನಿಧಿಗಳು
ಕರ್ನಾಟಕಾಂದ್ರ ದೂರ ದೇಶಂಗಳೊಳ್
ಜಾತಿ ಮತ ಭೇದ ವಿನಿತಿಲ್ಲ ಇಲ್ಲಿ
ವಸತಿ ಭೋಜನವು ದೊರೆಯುತಿಹುದಿಲ್ಲಿ.
ಶತಮಾನದಿಂ ನಡೆದು ಬರುತಿದೆ ಘನಕಾರ್ಯಂ
ವೃದ್ಧಿಸಿದೆ ಅತಿಶಯದಿ ಶ್ರೀ ಶಿವಕುಮಾರ ದಯೆಯಿಂ

## ದಾನಿಗಳಿಗೊಂದು ಸದವಕಾಶ

### ಶ್ರೀ ಮಠದ ಸಮಸ್ತ ಭಕ್ತಾದಿಗಳಿಗಾಗಿ

* ಪ್ರತಿ ತಿಂಗಳು ಯಥಾ ಶಕ್ತಿ ನಿಮ್ಮ ಕಾಣಿಕೆ ಕಳಿಸಿರಿ.
* ಮನಿಯಾರ್ಡರು ದ್ವಾರಾ ಕಳುಹಿಸಬಹುದು.
* ಮೊದಲ ಬಾರಿ ಶ್ರೀಗಳವರಿಂದ ಪತ್ರ ಬರುತ್ತದೆ.
* ಪ್ರತಿ ತಿಂಗಳು ಶ್ರೀಗಳವರೇ ಹಣಪಡೆದು ಸಹಿಮಾಡಿದ ಕೂಪನ್ ಬರುತ್ತದೆ.
* ಯಥಾಶಕ್ತಿ ಕಾಣಿಕೆ ಕಳುಹಿಸುವುದು ಯಾರಿಗೂ ಹೊರೆಯಾಗಲಾರದು.
* ಪ್ರತಿಯೊಬ್ಬರ ಒಂದೊಂದು ಕಾಣಿಕೆಯೂ ಹಲವು ಸಹಸ್ರಗಳೇ ಆಗಿ ಶ್ರೀಗಳವರ ಪುಣ್ಯಕಾರ್ಯಕ್ಕೆ ಸಹಕಾರಿಯಾದೀತು.

### ಪ್ರತಿ ಶತ ಒಂದು ರೂ. ಯೋಜನೆ

(ಶ್ರೀ ಮಠದ ಎಲ್ಲಾ ಹಳೆಯ ವಿದ್ಯಾರ್ಥಿಗಳು ಮತ್ತು ಆ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವವರಿಗೆ)

* ನಿಮಗೆ ಪ್ರತಿ ಮಾಹೆ ನಿರ್ದಿಷ್ಟ ಆದಾಯ ಉಂಟು.
* ಅದರಲ್ಲಿ ಪ್ರತಿಶತ ಒಂದು ರೂ. (*one percent*) ಶ್ರೀ ಮಠಕ್ಕೆ ಕಳುಹಿಸಬಹುದು.
* ಒಬ್ಬೊಬ್ಬರೇ ಕಳುಹಿಸಬಹುದು ಅಥವಾ ಹಲವರು ಒಟ್ಟಾಗಿ ಕಳುಹಿಸಬಹುದು.
* ಚೆಕ್, ಡ್ರಾಫ್ಟ್ ಅಥವಾ ಎಂ.ಓ. ಕಳುಹಿಸಬಹುದು.
* ಶ್ರೀ ಶ್ರೀಗಳವರ ಹೆಸರಿಗೇ ಕಳುಹಿಸಬೇಕು.
* ಈ ನಿಧಿ ಸತ್ಪಾತ್ರಕ್ಕೆ ಸಲ್ಲುತ್ತದೆ.

ಜೀವನದಲ್ಲಿ ದಾನ ಮಾಡುವವರು ಇಷ್ಟು ಉತ್ಕೃಷ್ಟ ದಾನವನ್ನು ಮಾಡಲು ಹಿಂಜರಿಯಬಾರದು. ಇದಕ್ಕೂ ಶ್ರೇಷ್ಠ ಪಾತ್ರತ್ವ ನಿಮ್ಮ ದಾನಕ್ಕೆ ಅನ್ಯತ್ರ ದೊರೆಯದು. ಇದು ಸುಸಮಯ, ಅಪರೂಪದ ಅವಕಾಶ. ಈ ತಿಂಗಳಿನಿಂದಲೇ ಕಾರ್ಯರೂಪಕ್ಕೆ ತನ್ನಿ. ಇಂದೇ ಕಳಿಸಿರಿ. ಜ್ಞಾನ ದೀವಿಗೆಯಾಗಿ ಶ್ರೀ ಸಿದ್ಧಗಂಗಾ ಮಠ ನಾಡಿಗೆ ಬೆಳಕನ್ನು ಚೆಲ್ಲುತ್ತಿದೆ.

* ಪುಣ್ಯ ಕಾರ್ಯಕ್ಕಾಗಿ ಉದಾರ ನೆರವು ನೀಡಿರಿ.

ಇತಿ,
ಭಕ್ತ ಮಂಡಳಿ.

# ಶಿವಶರಣರ ವಚನಗಳ ಉಗಮ ಭಾಗ - 6

ಎಸ್. ಚನ್ನಬಸಪ್ಪ, ಗಮಕಿ, 543, 5 ನೇ ಅಡ್ಡರಸ್ತೆ, 8 ನೇ ಮುಖ್ಯರಸ್ತೆ, ಮಹಾಲಕ್ಷ್ಮೀ ಲೇಔಟ್, ಬೆಂಗಳೂರು 86

ಕಲ್ಯಾಣದ ಮಹಾಮನೆಗೆ ಬಸವಣ್ಣನವರ ದರ್ಶನಕ್ಕಾಗಿ ಬರುತ್ತಿದ್ದ ಜಂಗಮರನ್ನು ಚನ್ನಬಸವಣ್ಣ ಅಪ್ಪಣ್ಣ ಮೊದಲಾದವರು ಆದರದಿಂದ ಸ್ವಾಗತಿಸಿ ಸತ್ಕರಿಸುತ್ತಿದ್ದರು. ಮಹಾಮನೆಯಲ್ಲಿ ಹಿಂದೆಯೇ ಬಂದು ಉಳಿದಿದ್ದ ಜಂಗಮನೊಬ್ಬ "ಹೊಸದಾಗಿ ಬಂದ ಜಂಗಮರ ಸೇವೆಯಲ್ಲಿ ನಮ್ಮನ್ನೆಲ್ಲಾ ಮರೆತು ಉಪೇಕ್ಷಿಸುತ್ತಿದ್ದಾರೆ ಎಂದು ಕೋಪಗೊಂಡು ಗಲಾಟೆಮಾಡುತ್ತಿದ್ದ. ಪ್ರಭುದೇವರಿಗೆ ಅದು ಕೇಳಿಸಿತು. ಪ್ರಭು ಆತನ ನಿಯಮವೇನೆಂದು ಕೇಳಿದಾಗ ಪೂಜೆಯ ನಂತರ ಲಿಂಗಕ್ಕೆ ಕೆನೆಹಾಲನ್ನು ಅರ್ಪಿಸುವನೇಮವೆಂದು ಇಂದು ಅದಕ್ಕೆ ಕೊರತೆಯಾಯಿತೆಂಬುದನ್ನು ತಿಳಿಸಿದ. ಆಗ ಪ್ರಭು "ಬಸವಣ್ಣನ ಮಹಾಮನೆಯ ಹಾಲನ್ನು ಲಿಂಗಕ್ಕೆ ತೋರಿಸಿ ಹೊಟ್ಟೆಗೆ ತುಂಬುವುದು ಪೂಜೆ ಪ್ರಸಾದ ಎಂದು ಭಾವಿಸಿದಿರೇನು ? ಲಿಂಗಕ್ಕೆ ಬೇಕಾದುದು ಹಾಲಿನ ನೇಮವಲ್ಲ ನಿಮ್ಮ ನಿಷ್ಠೆಯ ನಿಯಮ ಬೇಕು ಎನ್ನುವ ಸಂದರ್ಭದಲ್ಲಿ :-

**ವಚನ–62**

ಹಾಲನೇಮವ ಹಿಡಿದಾತ ಬೆಕ್ಕಾಗಿ ಹುಟ್ಟುವ,
ಕಡಲೆಯ ನೇಮವ ಹಿಡಿದಾತ ಕುದುರೆಯಾಗಿ ಹುಟ್ಟುವ,
ಅಗ್ಘಣಿಯ ನೇಮವ ಹಿಡಿದಾತ ಕಪ್ಪೆಯಾಗಿ ಹುಟ್ಟುವ,
ಪುಷ್ಪದ ನೇಮವ ಹಿಡಿದಾತ ತುಂಬಿಯಾಗಿ ಹುಟ್ಟುವ,
ಇವು ಷಟ್ಸ್ಥಲಕ್ಕೆ ಹೊರಗು ಭಕ್ತಿನಿಷ್ಠೆಯಿಲ್ಲದವರ ಕಂಡು ಮೆಚ್ಚ ಗುಹೇಶ್ವರ.

ಆದ್ದರಿಂದ ಭಕ್ತಿನಿಷ್ಠೆಯನೇಮಹಿಡಿಯಿರಿ. ಪ್ರಭುವಿನ ಈ ಮಾತು ಮುಗಿಯುತ್ತಿದ್ದಂತೆ ತಲೆಯನ್ನು ಮೇಲೆತ್ತದೆ ಅಲ್ಲಿಂದ ಜಾರಿದ ಜಂಗಮ

ಆಗ ಅಲ್ಲಮ ಪ್ರಭು ಮುಗುಳು ನಗುತ್ತಾ ಸುತ್ತಲೂ ಇದ್ದ ಜಂಗಮರನ್ನು ನೋಡಿ ಈ ವಚನ ಹೇಳಿದ

**ವಚನ – 63**

ಲೋಕದವರ ನೊಂದು ಭೂತ ಹಿಡಿದರೆ,
ಆ ಭೂತ ದಿಜ್ಞೆಯಲ್ಲಿ ನುಡಿವುತ್ತಿಪ್ಪರು.
ಲಾಂಛನಧಾರಿ ವೇಷವ ಧರಿಸಿ,
ಆಶೆಯಿಂದ ಘಾಸಿಯಾಗಲೇಕಯ್ಯ ?
ಆನೆಯ ಚೋಹವ ತೊಟ್ಟು ನಾಯಾಗಿ ಬೊಗಳುವ
ಮಾನವರ ನೇನೆಂಬೆ ಗುಹೇಶ್ವರಾ

ಆಗ ಬಸವಣ್ಣ ಲಾಂಛನವ ಕಂಡು ನಂಬುವೆ, ಶಿವಭಕ್ತರಾದ ಕಾರಣ, " ಜಂಗಮರೇ ಲಿಂಗ" ಎಂದು ಮನಸ್ಸು ನಂಬುತ್ತದೆ- ಎಂದಾಗ ಸಿಕ್ಕ ಸಿಕ್ಕವರಿಗೆ ದೀಕ್ಷೆ ಕೊಡಬಾರದು ಆದ್ದರಿಂದಲೇ ಅವರಲ್ಲಿ ದೌರ್ಬಲ್ಯಗಳು ಕಾಣಿಸಿಕೊಳ್ಳುತ್ತವೆ - ಎಂದು ಹೇಳಿ ನೀನೇ ಹೇಳಿರುವ ಮಾತುಗಳು ನೆನಪಿಗೆ ಬರುತ್ತಿವೆ ಬಸವಣ್ಣ – ನಿನ್ನದೆ ವಚನ : 64

ಕುಂಬಳ ಕಾಯಿಗೆ ಕಬ್ಬುನದ ಕಟ್ಟಕೊಟ್ಟರೆ
ಕೊಳೆವುದಲ್ಲದೆ ಬಲುಹಾಗ ಬಲ್ಲದೆ?
ಅಳಿಮನದವಂಗೆ ಶಿವದೀಕ್ಷೆಯ ಕೊಟ್ಟರೆ
ಭಕ್ತಿ ಎಂತಹುದೋಮುನ್ನಿನಂತೆ?
ಕೂಡಲ ಸಂಗಯ್ಯಾ ಮನ ನನ ಹೀಮೀಸಲ ಕಾಯ್ದಿರಿಸಿದಂತೆ -

ಹೀಗೆಂದು ಹೇಳಿದ್ದೀಯ ಅಲ್ಲದೆ ಹೇಳಿರುವೆ: ವಚನ – 65

ಸಗಣಿಯ ಬೆನಕಂಗೆ ಸಂಪಿಗೆಯರಳಲ್ಲಿ ಪೂಜಿಸಿದರೆ
ರಂಜನೆಯಲ್ಲದೆ ಅದರ ಗಂಜಳ ಬಿಡದಣ್ಣಾ !
ಮಣ್ಣ ಪುತ್ಥಳಿಯ ವಾಣದೆ ಜಲದಲ್ಲಿ ತೊಳೆದರೆ ನಿಚ್ಚ ನಿಚ್ಚಕ್ಕೆ
ಕೆಸರಹುದಲ್ಲದೆ ಅದರಚ್ಚುಗ ಬಿಡದಣ್ಣಾ !
ಲೋಕದ ಮಾನವಂಗೆ ಶಿವದೀಕ್ಷೆಯ ಕೊಟ್ಟರೆ
ಕೆಟ್ಟವನೇಕೆ ಶಿವಭಕ್ತನಹನು ಕೂಡಲ ಸಂಗಮ ದೇವಾ ?

ಎನ್ನುತ್ತಾ ಕೆಟ್ಟವನೇಕೆ ಶಿವಭಕ್ತನಹನು ? ಎಂಬುದನ್ನು ಜ್ಞಾಪಿಸಿಕೋ ಎಂದರು.

ಪ್ರಭುದೇವರು ಒಮ್ಮೆ ಬಸವಣ್ಣನವರನ್ನು ಕುರಿತು ನೀನು " ಜಗತ್ ಸಂಸಾರವನ್ನು ಕಟ್ಟಿಕೊಂಡಿದ್ದೀಯ, ಆದರ ಯಜಮಾನನಾಗಿ ಆ ಹೊರೆಯನ್ನು ಹೊರಲೇಬೇಕು ಎಂದಾಗ " ನಾನು ಯಜಮಾನನಲ್ಲ ಪ್ರಭುವೇ ತೊತ್ತು ಕೆಲಸವ ಮಾಡುವವನು, " ಎಂದಾಗ ನಿನ್ನ ವಚನಬಂದನ್ನು ನೋಡಿ ನಾನು ಮನ ಸೋತೆ ಎಂದು ಹೇಳುತ್ತ ಈ ವಚನವನ್ನು ಹೇಳತೊಡಗಿದ: ವಚನ–66

ಕೈಯೆ ಬೋಹರಿಗೆ, ಮಂಡೆಯ ಮೇಲೆ ಸಿಂಬಿ,
ಸಿಂಬಕನ ಮನೆಯ ಮಗ ನಾನಯ್ಯಾ
ಕೂಡಲ ಸಂಗಮದೇವಯ್ಯ,
ಮಂಚದ ಕೋಡೇರಿ ಬಂದ ತೊತ್ತಿನ ಮಗ ನಾನಯ್ಯಾ ಎಂದಿರುವೆ.

ಆದ್ದರಿಂದ ಜಗತ್ತಿನ ಕೊಳೆಯನ್ನು ಹೊತ್ತುಹಾಕುವ ಜಗದ ಜಲಗಾರ ಎಂದು ಹೊಗಳಿದ ಪ್ರಭುದೇವ.

ನಂತರ ಸಕಲೇಶ ಮಾದರಸ ಹೇಳಿದ ಒಮ್ಮೆ ಒಂದು ರಾತ್ರಿ ಮಹಾಮನೆಗೆ ಕಳ್ಳರು ಬಂದು ಹಸುಗಳನ್ನು ಕದ್ದು ಹೊಡೆದುಕ್ಕೊಂಡು ಹೋದಾಗ-ಕರುಗಳು ಏನಾದವು ಅಪ್ಪಣ್ಣ ಹಾಲುಣ್ಣುವ ಕರುಗಳ ತಬ್ಬಲಿಯಾದುವಲ್ಲಾ ಎಂದು ಈ ವಚನವನ್ನು ನುಡಿದ :

ವಚನ.68

ಆ ಕಳ ಕಳ್ಳರು ಕೊಂಡೊಯ್ಯರೆನ್ನದಿರಿಂಭೋ, ನಿನ್ನ ಧರ್ಮ।
ಬೊಬ್ಬಿಡದಿರಿಂಭೋ ನಿಮ್ಮ ಧರ್ಮ।
ಅರಿಡದಿರಿಂಭೋ ನಿಮ್ಮ ಧರ್ಮ।
ಅಲ್ಲಿ-ಉಂಬರೆ ಸಂಗ ಇಲ್ಲಿ ಉಂಬರೆಸಂಗ॥

ಕೂಡಲ ಸಂಗಮದೇವಾ ಏಕೋಭಾವ! ಎಂಬ ವಚನ ಹಾಡಿದುದನ್ನು ಪ್ರಭುವಿಗೆ ಹೇಳಿ ಅದನ್ನು ಕದ್ದವರು ಉತ್ತಮರೇ ಹೊಟ್ಟೆಗಿಚ್ಚಿಗಾಗಿ ಎಂದು ಹೇಳಿ ಆಗ ಆ ಕರುಗಳನ್ನು ಅವುಗಳ ತಾಯಿಯ ಬಳಿಗೆ ಹೊಡೆಸಿದರು ಎಂದು ಪ್ರಭುವಿಗೆ ತಿಳಿಸಿದರು. ಅಲ್ಲದೆ ಹೇಳಿದರು ಹೆಚ್ಚಾಗಿ ಕಟ್ಟಿಕೊಂಡಿರೀವವ ನಾನೇ ಕಳ್ಳ ಎಂದು ಅಲ್ಲದೆ ಹಿಂದೊಮ್ಮೆ ತಾಯಿಯವರ ಓಲೆಗಳಿಗೆ ಕಳ್ಳ ಕೈ ಹಾಕಿದಾಗ ಕಳ್ಳನಮನೆಗೊಬ್ಬ ಬಲುಗಳ್ಳ ಬಂದರೆ ಕೂಡಲ ಸಂಗಮನಲ್ಲದೆ ಬೇರಾರೂ ಅಲ್ಲ ; ಎಂದರು ಎಂಬ ಪ್ರಸಂಗವನ್ನು ಅಪ್ಪಣ್ಣ ಹೇಳಿದ.

ಒಮ್ಮೆ ಶರಣರ ಗೋಷ್ಟಿಯಲ್ಲಿ ಬಸವಣ್ಣ ಇಷ್ಟಲಿಂಗದ ಮಹಿಮೆಯನ್ನು ತಿಳಿಸುತ್ತಾ ಇಷ್ಟಲಿಂಗ ಧಾರ್ಮಿಕ, ಸಾಮಾಜಿಕ ಸಮತೆಯ ಎಲ್ಲಾ ಹಂತಗಳಲ್ಲಿಯೂ ಸಾಕಾರ ನಿರಾಕಾರಗಳೆರಡರ ಶಕ್ತಿಯುತವಾದ ಸಂಕೇತವಾಗಿ ಅದು ರೂಪುಗೊಂಡು ನಮ್ಮ ಕರಸ್ಥಳಕ್ಕೆ ಬಂದಿದೆ ಎಂದು ಹೇಳಿ ಈ ವಚನವನ್ನು ಹಾಡಿದ. **ವಚನ-68**

ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ ;
ಪಾತಾಳದಿಂದತ್ತತ್ತ ನಿಮ್ಮ ಶ್ರೀ ಚರಣ,
ಬ್ರಹ್ಮಾಂಡದಿಂದತ್ತತ್ತ ನಿಮ್ಮ ಶ್ರೀ ಮುಕುಟ।
ಅಗಮ್ಯ ಅಗೋಚರ ಅಪ್ರತಿಮ ಲಿಂಗವೇ
ಕೂಡಲ ಸಂಗಮ ದೇವಯ್ಯಾ ಎನ್ನ ಕರಸ್ಥಳಕ್ಕೆ ಬಂದು ಚುಳುಕಾದಿರಯ್ಯಾ

ಒಮ್ಮೆ ಅಸೂಯಾ ಪರರಾದ ಅಪ್ಪಣ್ಣ ದೀಕ್ಷಿತ ಮತ್ತು ಕೃಷ್ಣರಸ ಬಿಜ್ಜಳನ ಆಸ್ಥಾನದಲ್ಲಿ ಚಾಡಿ ಹೇಳತೊಡಗಿದರು' "ಶರಣರು ಜಂಗಮರು ಎಂಬ ಹೆಸರಿನಿಂದ ಎಷ್ಟು ಜನ ವೇಷಧಾರಿಗಳಿಗೆ ಕೀಳರಿಗೆ ಕೊಳಕರಿಗೆ ಅಸಂಸ್ಕೃತರಿಗೆ, ಪುಂಡರಿಗೆ ಪೋಕರಿಗಳಿಗೆ ಅನ್ನಹಾಕುತ್ತಿದ್ದೀರಿ ಎಂದು ಮಹಾಸ್ವಾಮಿಗಳು ಕೇಳುತ್ತಿದ್ದಾರೆ ಒಂದೇ ಮಾತಿನಲ್ಲಿ ತನ್ನ ಮನಸ್ಸಿನ ವಿಷವನ್ನೆಲ್ಲಾ ಹೊರಹಾಕಿದ ಕೃಷ್ಣರಸ ಆಗ ಬಸವಣ್ಣ ಬಹಳ ಎತ್ತರದಲ್ಲಿದ್ದೇವೆಂದು ನೀವುತಿಳಿದ್ದೀರಿ ಆದರೆ ಸತ್ಯದ ನಿಲವನ್ನು ಅರಿಯದೆ ಹೋಗಿದ್ದೀರಿ ಎಂದು ಈ ವಚನವನ್ನು ಹೇಳಿದರು. **ವಚನ-69**

ಆನೆಯ ನೇರಿಕೊಂಡು ಹೋದಿರೆ ನೀವು
ಕುದುರೆಯ ನೇರಿಕೊಂಡು ಹೋದಿರೆ ನೀವು,
ಕುಂಕುಮ ಕಸ್ತೂರಿಯ ಪೂಸಿಕೊಂಡು ಹೋದಿರೆ ಅಣ್ಣಾ।
ಸತ್ಯದ ನಿಲವನರಿಯದೆ ಹೋದಿರಲ್ಲಾ।

ಸದ್ಗುಣವೆಂಬ ಫಲವ ಬಿತ್ತಿ ಬೆಳೆಯದೆ ಹೋದಿರಲ್ಲಾ
ಅಹಂಕಾರವೆಂಬ ಸದ ಮದಗಜವೇರಿ ವಿಧಿಗೆ ಗುರಿಯಾಗಿ ನೀವು ಹೋದಿರಲ್ಲಾ
ನಮ್ಮ ಕೂಡಲ ಸಂಗಮ ದೇವರನರಿಯದೆ ನರಕಕ್ಕೆ ಭಾಜನವಾದಿರಲ್ಲಾ !

ಎಂದಾಗ ಮಂಚಣ್ಣ ಈ ಮಾತಿನ ಮೋಡಿ ಹಾಕಬೇಡಿ ಎಂದಾಗ ಮೋಡಿ ಹಾಕುವ ಹಾವಾಡಿಗ ನಾನಲ್ಲ, ಶರಣರನ್ನು ನೀವು ತಿರಸ್ಕರಿಸುತ್ತಿದ್ದೀರಿ, ಪರಿಹಾಸ್ಯ ಮಾಡುತ್ತಿದ್ದೀರಿ "ಹಾವಿನ ಹೆಡೆಗಳ ಕೊಂಡು ಕೆನ್ನೆಯ ತುರಿಸುವಂತೆ ನಿಮ್ಮಪಾಡಿಗೆನೀವು ಸುಮ್ಮನಿರಿ ಎಂದು ಮಾತ್ರ ಹೇಳುತ್ತಿದ್ದೇನೆ ಎಂದು ಹೇಳಿ ಈವಚನವನ್ನು ನುಡಿದರು.

**ವಚನ – 70**

ಕೋಣನ ಹೇರಿಂಗೆ ಕುನ್ನಿ ಬುಸುಗುಡುತ್ತ ಬಡೆವಂತೆ
ತಾವು ನಂಬರು ನಂಬುವವರ ನಂಬಲೀಯರು ;
ತಾವು ಮಾಡರು. ಮಾಡುವವರ ಮಾಡಲೀಯರು ;
ಮಾಡುವ ಭಕ್ತರ ಕಂಡು ಸೈರಿಸಲಾರದವರ
ಕೂಗಿಡೆ ಕೂಗಿಡೆ ನರಕದಲ್ಲಿಕ್ಕುವ ಕೂಡಲ ಸಂಗಮದೇವಾ !

ದಾಸೋಹಕ್ಕೆ ರಾಜ್ಯದ ಬೊಕ್ಕಸದ ಹಣ ಉಪಯೋಗಿಸುವನೆಂದು ತಿಳಿದು ಅಸೂಯೆಯಿಂದ ಕೂಡಿದ ಜನಕ್ಕೆ ಹೇಳಿದ ಮಾತು ಬಸವಣ್ಣನವರು.

ಭವಿಯಾದ ಬಿಜ್ಜಳನ ಕೈಕೆಳಗೆ ಕೆಲಸ ಮಾಡುತ್ತಿರುವ ಬಸವಣ್ಣನನ್ನು ತಾವು ಮಾಡುತ್ತಿರುವುದು ತಪ್ಪೆಂದು ಹೇಳತೊಡಗಿದಾಗ – ಜನತೆಯ ಸೇವೆಗೆ ಇದೊಂದು ಅವಕಾಶ ಎಂದು ಮಾಡುತ್ತಿದ್ದೇನೆ ಅದು ಸಾಧ್ಯವಿಲ್ಲವೆಂದು ಕಂಡುಬಂದ ದಿನ ಅದನ್ನು ಬಿಟ್ಟು ಹೊರಬರುತ್ತೇನೆ ಎಂಬುದಾಗಿ ಹೇಳಿ; **ವಚನ – 71**

ಹೊತ್ತಾರೆ ಎದ್ದು ಕಣ್ಣ ಹೊಸೆವುತ್ತಾ ಎನ್ನೊಡಲಿಂಗೆ ಎನ್ನೊಡವೆಗೆ,
ಎನ್ನ ಮಡದಿ ಮಕ್ಕಳಿಗೆಂದು ಕುದಿದೆನಾದರೆ ಎನ್ನ ಮನಕ್ಕೆ ಮನವೇ ಸಾಕ್ಷಿ ಎಂದು ನಾನು ಹಿಂದೆಯೇ ಹೇಳಿದ್ದೇನೆ.

" ನಿಮ್ಮ ನಿಲವಿಂಗೆ ಕುದಿವೆನಲ್ಲದೆ ಎನ್ನೊಡಲವಸರಕ್ಕೆ
ಕುದಿದೆನಾದೊಡೆ ತಲೆದಂಡಾ ಕೂಡಲ ಸಂಗಮ ದೇವ ಎಂಬುದು ನನ್ನ ಭಾಷೆ
ಎಂದು ಬಸವಣ್ಣ ವಿವರಿಸಿದರು.

# ಸರ್ವೋದಯದ ಸಿದ್ಧಾಂತ - ಸಿದ್ಧಿ

ಶ್ರೀ ತದ್ದಲಸೆ ವಿಘ್ನೇಶ್ವರ ಶರ್ಮಾ, ಅಂಚೆ : ಹುಣ್ಸೇಕೊಪ್ಪ, ಶಿರಸಿ. (ಉತ್ತರ ಕನ್ನಡ)

"ಸರ್ವೇಜನಾ : ಸುಖಿನೋ ಭವಂತು" ಎನ್ನುವುದೇ ಸರ್ವೋದಯದ ಅಂತರಾತ್ಮ. ಸರ್ವರೂ ಸುಖಿಗಳಾಗಿ ಬಾಳುವುದು, ತಮ್ಮ ತಮ್ಮ ಉದ್ಯೋಗಗಳನ್ನು ಪ್ರಾಮಾಣಿಕವಾಗಿ ನಿರ್ವಹಿಸಿ, ಜ್ಯೇಷ್ಠ - ಕನಿಷ್ಠ ಎಂಬ ಭಾವನೆ ಅಳಿದು ಎಲ್ಲರೂ ಸಮಾನರು, ಸಹೋದರರು ಎಂಬ ವಿಚಾರ ಅರಳಿಸಿ ಆತ್ಮ ಗೌರವದಿಂದ ಬಾಳುವುದೇ ಸರ್ವೋದಯದ ಮೂಲ ಸಿದ್ಧಾಂತವಾಗಿದೆ. ಆದರ ಸೆರೆಯಲ್ಲಿ ಅಲೆಯಲ್ಲಿ ಸೇರತಕ್ಕವರಲ್ಲ "ಸಹಬಾಳು - ಸಮಪಾಲು" ಎಂಬ ತತ್ವವನ್ನು ಒಪ್ಪಿಕೊಳ್ಳಬೇಕಾಗುತ್ತದೆ. ನಮ್ಮ ಉಪನಿಷತ್ತಿನಲ್ಲಿ ಹೇಳಿದಹಾಗೆ "ಸಮಾನಾ ಹೃದಯಾನಿವ :, ಸಮಾನಮಸ್ತುವೊ ಮನ :" ಅಂದರೆ ಮಾನವ ಜನಾಂಗವೆಲ್ಲ ಒಂದು, ಎಲ್ಲರ ಹೃದಯ ಮನಸ್ಸುಗಳೆಲ್ಲ ಒಂದೇ ತೆರನಾದದ್ದು ಆಗಬೇಕೆಂಬುದೇ ಅದರ ಅಭಿಪ್ರಾಯ.

ಸರ್ವೋದಯ ಎಂಬ ಶಬ್ದದಲ್ಲಿಯೇ ಅದರ ತತ್ವಾದರ್ಶಗಳಿವೆ. ಕೇವಲ ಆರ್ಥಿಕ ಹಾಗೂ ಸಾಮಾಜಿಕ ಸಮಾನತೆಗಳನ್ನಷ್ಟೇ ಸಾಧಿಸುವುದು ಇದರ ದೃಷ್ಟಿಯಲ್ಲ. ಬಾಳಿನ ಸಮಗ್ರ ಅಭ್ಯುದಯದ ಗುರಿಯ ಜೊತೆಗೆ ಅಧ್ಯಾತ್ಮಿಕ ಮುನ್ನಡೆಯ ವರೆಗಿನ ಎಲ್ಲ ಅಂಶಗಳೂ ಸಂಗತಿಗಳೂ ಈ ಸರ್ವೋದಯದಲ್ಲಿ ಸೇರಿಕೊಳ್ಳುತ್ತವೆ. ಸಮಾಜದ ಕಟ್ಟಕಡೆಯ ವ್ಯಕ್ತಿಯನ್ನು ಗುರುತಿಸಿ ಅವನಿಗೂ ಪ್ರಪ್ರಥಮ ಆವಶ್ಯಕತೆಯನ್ನು ತಿಳಿಯುವ ಪೂರೈಸುವ ವಿಶಿಷ್ಟ ಸಂಸ್ಕೃತಿ ಈ ಸರ್ವೋದಯದ್ದಾಗಿದೆ. ಸಮಾಜವೇ ಒಂದು ದೇವರು, ಇದರ ಆರಾಧನೆಯಲ್ಲಿ ಎಲ್ಲರೂ ಸಮಾನರು. ಉಚ್ಚ - ನೀಚ ತಾರತಮ್ಯತೆಗೆ ಇಲ್ಲಿ ಅಸ್ಪದವೇ ಇಲ್ಲ. ಭಂಗಿಯ ಕೆಲಸ ಮಾಡತಕ್ಕವನೂ ದೇವರ ಪೂಜೆ ಮಾಡತಕ್ಕವನೂ ಅವರವರ ಸಮರ್ಪಕ ಕಾರ್ಯ ನಿರ್ವಹಣೆಯಿಂದ ಸಮಾನರು ಎಲ್ಲವೂ ಸಮಾಜ ಸೇವೆ, ಈಶ ಸೇವೆ ಎಂಬ ಭಾವನೆಯೇ ಇಲ್ಲಿ ಮುಖ್ಯಧರ್ಮ. ಸಮಾಜದ ಎಲ್ಲ ವರ್ಗದ ಜನರನ್ನು ಒಂದೇ ಸೂತ್ರದಲ್ಲಿ ಒಂದಾಗಿಸುವುದೇ ಸರ್ವೋದಯದ ದೊಡ್ಡ ಆದರ್ಶವಾಗಿದೆ. ಜೀವನದ ವ್ಯವಹಾರ ವ್ಯವಸ್ಥೆಗಳನ್ನು ವೃತ್ತಿ ಪ್ರವೃತ್ತಿಗಳನ್ನು, ಆಸೆ - ಆಕಾಂಕ್ಷೆಗಳನ್ನು ವಿಭಾಗಿಸಿ ಅದು ನೋಡುವುದಿಲ್ಲ. ಅವೆಲ್ಲವನ್ನೂ ಏಕೀಕರಿಸಿ ಬದುಕಿನ ಮೌಲ್ಯಗಳನ್ನು ಅಳವಡಿಸಿ ವಿಶಾಲ ತಳಹದಿಯ ಮೇಲೆ ಈ ಸರ್ವೋದಯ ಸಿದ್ಧಾಂತ ಬೆಳೆ--- ದಿದ್ದಾಗಿದೆ. ವಿಕಾಸಶೀಲ ಜೀವನಚಕ್ರವನ್ನು ರೂಪಿಸುವುದೇ ಅದರ ಮುಖ್ಯ ಗುರಿಯಾಗಿದೆ.

**ಮೂಲಭೂತ ಸಿದ್ಧಾಂತ :**

ಸರ್ವೋದಯದಲ್ಲಿ ಮೂಲಭೂತವಾದ ಮೂರು ಸಿದ್ಧಾಂತಗಳು ಅತ್ಯಂತ ಮಹತ್ವದವುಗಳಾಗಿವೆ. ಆಹಾರ-ಆಶ್ರಯ-ಆಚ್ಛಾದನ. ಇವುಗಳನ್ನು ಪ್ರತಿಯೊಬ್ಬನಿಗೂ

ಅವಶ್ಯಕತೆಯಿರುವಷ್ಟು ಒದಗಿಸದಿದ್ದರೆ ವಿಕಾಸಶೀಲ ಸಮಾಜದ ನಿರ್ಮಾಣವೇ ಆಗುವುದಿಲ್ಲ. ಪ್ರತಿಯೊಬ್ಬ ವ್ಯಕ್ತಿಗೂ ಇವು ದೊರೆಯಬೇಕಾದ್ದು ಅಗತ್ಯ. ಕೆಲವರಿಗೇ ಇವು ಅತಿಯಾಗಿ ದೊರೆತು ಉಳಿದವರಿಗೆ ಅವರ ಪರಿಮಿತಿಯಷ್ಟೂ ದೊರೆಯದಿದ್ದರೆ ಸರ್ವೋದಯಕ್ಕೆ ಅರ್ಥವೇ ಇಲ್ಲದಂತಾಗುತ್ತದೆ. ನಿರಂತರ ಶೋಷಣೆ ನಡೆಸಿ ಅತಿಯಾದ ಸಂಪತ್ತು ಒಂದೆಡೆಗೆ ಸೇರುವುದರಿಂದ ಅನ್ಯರ ಬದುಕನ್ನು, ಅಸ್ತಿತ್ವವನ್ನು ಅಲಕ್ಷಿಸಿದಂತಾಗುತ್ತದೆ. ಅದರ ಕನಿಷ್ಠ ಅವಶ್ಯಕತೆಗಳೂ ಪೂರೈಸದಿದ್ದರೆ ಸಾಮಾಜಿಕ ಸುಸ್ಥಿತಿ ಹೇಗೆ ಬೆಳೆದೀತು ? ವ್ಯಕ್ತಿ – ವ್ಯಕ್ತಿಗಳಲ್ಲಿ ಮೈತ್ರಿ – ಮಧುರಭಾವ ಹೇಗೆ ಬಂದೀತು ?

ಭೋಗ ಜೀವನವನ್ನು ಸಂಪೂರ್ಣ ನಿರಾಕರಿಸುವುದೇ ಸರ್ವೋದಯದ ಒಂದು ಅಂಗವಾಗಿದೆ. ತನಗೆ ಅವಶ್ಯಕವೆನ್ನಿಸುವಷ್ಟು ಮಾತ್ರ ಪಡೆಯಬೇಕು, ಅದೂ ಸಹ ಅನ್ಯರಿಗೆ ಶೋಷಣೆ ಆಗದಂತೆಯೂ ನೋಡಬೇಕು. ಸಂಪತ್ತನ್ನು ಕೂಡಿಸುವಾಗ ಪ್ರಾಮಾಣಿಕತೆ ಹಾಗೂ ಅದು ತನ್ನದು ಎಂಬ ಭಾವನೆಯಿರಿಸಿಕೊಂಡು ನಂತರ ಅದರ ಬಳಕೆಯಲ್ಲಿ ತಾನೊಬ್ಬ ಅದರ ಧರ್ಮದರ್ಶಿ ಇದ್ದಂತೆ ವರ್ತಿಸಬೇಕಾದುದು ಮುಖ್ಯ ಧರ್ಮವಾಗಿದೆ. ಯಾಕೆಂದರೆ ತಾನು ಕೂಡಿಸಿದ ಸಂಪತ್ತಿನಲ್ಲಿ ಅನೇಕರ ಸಹಕಾರ-ಸಹಾನುಭೂತಿ ಸೇರಿ ಅವರ ಋಣವೂ ಕೂಡಿರುತ್ತದೆ. ನಮ್ಮ ವೃತ್ತಿಯನ್ನು ಸಮಾಜ ಮನ್ನಿಸದಿದ್ದರೆ ಈ ಸಂಪತ್ತಿನ ಶೇಖರಣೆ ಆಗುತ್ತಿರಲಿಲ್ಲ. ಹಾಗಾಗಿ ಅದು ಸಮಾಜದ ಸಹಾನುಭೂತಿಯಿಂದ ಆದದ್ದೆಂದು ತಿಳಿಯಬೇಕು. ಅಲ್ಲಿ ಸೇರುವ ಸಂಪತ್ತಿನಲ್ಲಿ ಸಮಾಜದ ಪಾಲೂ ಅಪ್ರತ್ಯಕ್ಷವಾಗಿ ಇರುತ್ತದೆ. ಅದಕ್ಕಾಗಿ ಅದರಲ್ಲಿಯ ಕೆಲವು ಅಂಶವನ್ನು ಸಾಮಾಜಿಕ ಸುಧಾರಣೆಯ ಕಾರ್ಯಕ್ಕಾಗಿಯೇ ಬಳಕೆಯಾಗುವುದು ಸರ್ವೋದಯಕ್ಕೊಂದು ಸರಿಯಾದ ನೆಲ-ಬಲ ದೊರೆತಂತಾಗುತ್ತದೆ.

**ಸರಳ ಜೀವನ :-**

ಈ ಸರ್ವೋದಯದ ಸ್ವರೂಪ ಸಿದ್ಧಾಂತವನ್ನು ದರ್ಶನ ಮಾಡಿದವರಲ್ಲಿ ಗಾಂಧೀಜಿ, ವಿನೋಬಾ, ಜಯಪ್ರಕಾಶ್ ಇವರು ಮುಖ್ಯ ವ್ಯಕ್ತಿಗಳು. ಸಾಮಾಜಿಕ ಸ್ಥಿತ್ಯಂತರಗಳನ್ನು ನಿರೀಕ್ಷಿಸಿ ದೇಶದ ಪುನರುತ್ಥಾನಕ್ಕೆ ಸರ್ವೋದಯವೊಂದೇ ತಾರಕವೆಂದು ಸಾರಿ ಹೇಳಿದವರು. ಆದರೆ ಅದು ಎಷ್ಟರ ಮಟ್ಟಿಗೆ ಕಾರ್ಯರೂಪಕ್ಕೆ ಬರಬೇಕಾಗಿತ್ತೋ ಬಂದೇ ಇಲ್ಲ. ಸ್ವಾತಂತ್ರ್ಯೋತ್ತರದಲ್ಲಿ ನವ ಸಮಾಜದ ನಿರ್ಮಾಣಕ್ಕೆ ಸರ್ವೋದಯದ ಹೊರತು ಅನ್ಯ ಸಿದ್ಧಾಂತಗಳು ಮುನ್ನಡೆ ಸಾಧಿಸಲಾರವು ಎಂದೇ ಈ ದ್ರಷ್ಟಾರರ ಅಭಿಪ್ರಾಯ. ನಮ್ಮ ದೇಶದ ಪರಿಸ್ಥಿತಿಯೇ ಒಂದು ವಿಶಿಷ್ಟ ರೀತಿಯದು. ಹಲವು ಹತ್ತು ಮತ ಪಂಥಗಳು, ಉಚ್ಚ-ನೀಚ ತಾರತಮ್ಯತೆಗಳು,

ಬಡವ - ಶ್ರೀಮಂತರೆಂಬ ಭೇದಗಳು, ಅಜ್ಞಾನ - ಅನಕ್ಷರತೆ, ಜಾತಿ – ವರ್ಗಗಳ ವಿಭಿನ್ನ ಸಂಘರ್ಷಗಳಲ್ಲಿ ವಿಕಾಸಶೀಲ ಸುಖೀ ಸಮಾಜ ನಿರ್ಮಿಸುವುದು ಸಣ್ಣ ಸಂಗತಿಯಾಗಿಲ್ಲ. ಹಾಗಾಗಿ ಈ ದೇಶಪ್ರೇಮಿ ಮಹನೀಯರು ಸರ್ವೋದಯವನ್ನು ಗುರುತಿಸಿದರು ಹಾಗೂ ಗ್ರಾಮ ಸ್ವರಾಜ್ಯಗಳ ಮೂಲಕ ರಚನಾತ್ಮಕ ಸಾಧನೆಯಿಂದ ಸರ್ವೋದಯದ ಸಿದ್ಧಿ - ಸಾಧ್ಯವೆಂದು ಹೇಳಿದರು.

ನಾವು ವಿಲಾಸೀ ಜೀವನಕ್ಕೆ ಕಡಿವಾಣ ಹಾಕುವುದರಿಂದ ಸರಳ ಜೀವನ ತಾನಾಗಿ ಮೂಡಿಕೊಳ್ಳುತ್ತದೆ, ಅತಿಯಾದ ಸಂಗ್ರಹ ಪ್ರವೃತ್ತಿ—ತಾನು ತನ್ನದು ಎಂಬ ಅನಪೇಕ್ಷಿತ ಮಹತ್ವಾಕಾಂಕ್ಷೆ, ಇಲ್ಲಿ ನಷ್ಟವಾಗುತ್ತದೆ. ಸರ್ವೋದಯಕ್ಕೆ ಮುಖ್ಯ ಭೂಮಿಕೆಯೇ ಇದು. ಅತಿಯಾದ ಸಂಗ್ರಹ ಶೋಷಣೆ ಮಾಡಿಯಾದರೂ ಹೆಚ್ಚು ಹಣ ಸಂಪಾದಿಸುವುದು, ಇವು ಸಾಮಾಜಿಕವಾಗಿ ವಿರಸ—ವಿಷಮತೆಗೆ ದಾರಿ ಮಾಡುತ್ತದೆ. ಒಬ್ಬರಿಗೆ ಉಣುವುದಕ್ಕೇ ಇಲ್ಲದಿರುವುದು, ಇನ್ನೊಬ್ಬರು ಅಜೀರ್ಣವಾಗುವಷ್ಟು ಉಂಡು ಚೆಲ್ಲುವುದು, ಒಬ್ಬರಿಗೆ ಮೈಗೆ ಮುಚ್ಚುವಷ್ಟೂ ಬಟ್ಟೆ ಇಲ್ಲದಿರುವುದು, ಇನ್ನೊಬ್ಬರು ದುಬಾರಿ ಬಟ್ಟೆಗಳನ್ನು ಹೆಚ್ಚು ಹೆಚ್ಚು ಧರಿಸುವುದು. ಈ ರೀತಿಯ ಏರು - ಪೇರುಗಳಿಂದ ಸಾಮಾಜಿಕ ಶಾಂತಿ - ಸುವ್ಯವಸ್ಥೆಯ ಸಮತೋಲ ತಪ್ಪುವ ಭಯವಿರುತ್ತದೆ. ಈ ಅಪಾಯವನ್ನು ಗ್ರಹಿಸಿ ಸಾಮಾಜಿಕ ನ್ಯಾಯಕ್ಕೆ ಬದ್ಧರಾಗಬೇಕಾದುದು ಅತಿ ಅವಶ್ಯವೆನಿಸಿದೆ. ಸರಳ ಜೀವನ, ರುಜು ಮಾರ್ಗಗಳು ವ್ಯಕ್ತಿಯ ಹಿರಿಮೆಯನ್ನು ಹೆಚ್ಚಿಸಿ ಸಾಮಾಜಿಕ ಶಾಂತಿ – ಸುಧಾರಣೆಗೆ ಸಹಾಯಕವೆಂಬುದನ್ನು ತಿಳಿಯಬೇಕು. ದುಬಾರೀ ಜೀವನ ನಮ್ಮ ಹಾಗೂ ರಾಷ್ಟ್ರದ ಘನತೆಯನ್ನೇನೂ ಹೆಚ್ಚಿಸುವುದಿಲ್ಲ.

**ಆತ್ಮಶಕ್ತಿ, ಜೀವನ ಶ್ರದ್ಧೆ :**

ಈ ಸರ್ವೋದಯದಲ್ಲಿ ಶರೀರ ಶ್ರಮ, ವಿಕೇಂದ್ರೀಕರಣ, ಅಪರಿಗ್ರಹ, ಸ್ವಾವಲಂಬನೆ ಇವೇ ಮುಖ್ಯ ಸೂತ್ರಗಳು, ತತ್ವಗಳೂ ಆಗಿವೆ. ವ್ಯಕ್ತಿಯ ಜೀವನದಲ್ಲಿ ಆತ್ಮಶಕ್ತಿಯ ಬಲದಷ್ಟೇ ಸರ್ವೋದಯಕ್ಕೂ ಹೆಚ್ಚಿನ ಆತ್ಮಶ್ರೀ ಬೆಳೆಯಬೇಕಾದರೆ ಇವೆಲ್ಲ ತತ್ವಗಳು ಸರಿಯಾಗಿ ಅನುಷ್ಠಾನ ಗೊಳ್ಳಬೇಕಾಗುತ್ತದೆ. ಶರೀರದ ಯಾವ ಅಂಗವೂ ಕಡೆಯದೆನ್ನಿಸುವುದೇ ಇಲ್ಲ. ಅದಕ್ಕೆ ಏನಾದರೂ ಸಣ್ಣ ತೊಂದರೆಯಾದರೂ ಶರೀರದ ಸ್ವಾಸ್ಥ್ಯ ಶ್ರಮ ನಿರ್ವಹಣೆ ಕುಂಠಿತಗೊಳ್ಳುತ್ತದೆ. ಅದರಂತೆ ಸರ್ವೋದಯದಲ್ಲೂ ಯಾವ ಸಂಗತಿಯನ್ನೂ ಅಲಕ್ಷಿಸುವ ಹಾಗೇ ಇಲ್ಲ. ಶರೀರ ಶ್ರಮ ನಡೆಯದಿದ್ದರೆ ಉತ್ಪಾದನೆ ತಗ್ಗುತ್ತದೆ. ಆಗ ಅನ್ಯರ ಶ್ರಮದಿಂದ ಸಿದ್ಧವಾದ ಸೊತ್ತನ್ನೇ ಬಳಸಿಕೊಂಡು ಸಾಮಾಜಿಕ ಋಣವನ್ನು ಹೆಚ್ಚಿಸಿಕೊಂಡಂತಾಗುತ್ತದೆ. ದುಡಿದೇ ಜೀವಿಸಬೇಕಾದದ್ದು ನಮ್ಮ ಧರ್ಮ. ದುಡಿಯದೇ ಉಂಣುವವನು ಬದಕಲೂ ಅನರ್ಹ ಎಂಬುದಾಗಿ ನಮ್ಮ ಉಪನಿಷತ್ತು ಸಹ ಹೇಳುತ್ತದೆ. ಈ ಕಾರಣದಿಂದಲೇ ಗಾಂಧೀಜೀಯವರು ಶರೀರ ಶ್ರಮಕ್ಕೆ "ಅನ್ನದಾಸೋಹ" ಎಂದು ಕರೆದಿದ್ದಾರೆ. ಶಾರೀರಿಕ ಶ್ರಮವೂ ಒಂದು ಯಜ್ಞದಂತೆ. ದುಡಿದೇ ಉಂಣುವುದು ಸಂತುಷ್ಟ ಜೀವನದ ಲಕ್ಷಣವೆನ್ನಿಸುತ್ತದೆ.

ಆದರೆ ಕೆಲವರಿಗೆ ಶರೀರ ಶ್ರಮ ಅಥವಾ ಶ್ರಮಜೀವಿ, ಕಾರ್ಮಿಕ ಇವನು ಕನಿಷ್ಠ-ನಿಕೃಷ್ಟನಾಗಿ ಕಾಣುತ್ತಾನೆ. ಅವನ ಬಗ್ಗೆ ಸಮಾಜದಲ್ಲಿ ಗೌರವದ ವಿಚಾರ ಸಹ ಬರುವುದಿಲ್ಲ. ರಾಷ್ಟ್ರದ ಅನ್ನ ಸಂಪತ್ತು ಹೆಚ್ಚಿಸುವ ನೇಗಿಲಯೋಗಿಯನ್ನು ಎಷ್ಟು ಪ್ರೀತಿಸುತ್ತೇವೆ ? ಅವನ ತೊಂದರೆಯ ಬಗ್ಗೆ ಕಾಳಜೀ, ಸಹಾನುಭೂತಿಯೂ ಸಿಗುವುದಿಲ್ಲ. ಅವರ ಶ್ರಮಬೇಕು, ಗಳಿಕೆ ಬೇಕು, ಆದರೆ, ಸಹಾಯ-ಸಮಸ್ಯೆ ಬೇಡವೆಂದರೆ ಈ ಶ್ರಮಜೀವಿ ವರ್ಗವೇ ಪ್ರತ್ಯೇಕವೆಂಬಂತೆ ಸಿಡಿದುಕೊಂಡೀತು ಸರ್ವೋದಯದಲ್ಲಿ ಇದಕ್ಕೆ ಆಸ್ಪದವಿಲ್ಲ. ಎಲ್ಲರೂ ಒಂದೇ ಕುಟುಂಬದವರಂತೆ ಆಗುತ್ತಾರೆ. ಭಂಗಿಯ ಕೆಲಸವಿರಲಿ, ಬಡಿಗ, ಗಾಣಿಗ, ಮೋಚಿ, ಕುಂಬಾರ ಇನ್ನಿತರ ಎಲ್ಲ ವರ್ಗದ ಜನರೂ ವೃತ್ತಿಯಿಂದ ಬೇರೆ ಬೇರೆಯಾದರೂ ಅವರ ಶ್ರಮವೆಲ್ಲ ದೇಶ ಸೇವೆಯ ದೃಷ್ಟಿಯಿಂದ ಒಂದೇ ತೆರನಾದದ್ದು ಎಂಬುದನ್ನು ಮರೆಯಕೂಡದು. ಆಚಾರ್ಯರು ಹೇಳಿದ "ಯದ್ಯತ್ ಕರ್ಮಕರೋಮಿ ತತ್ತದಖಿಲಂ ಶಂಭೋತ-ವಾರಾಧನಂ" ಪ್ರತಿಯೊಬ್ಬನೂ ತಾನು ಮಾಡುವ ಕೆಲಸವನ್ನು ಈಶ್ವರನ ಆರಾಧನೆಯೆಂದೇ ತಿಳಿದು ಮಾಡುವುದರಿಂದ ಕಾರ್ಯದ ಕೌಶಲ್ಯದ ಶ್ರೇಷ್ಠತೆ ಬೆಳೆಯುತ್ತದೆ. ಹಾಗೂ ಅದರ ಜ್ಯೇಷ್ಠತೆ ಕನಿಷ್ಠತೆಯ ತಾರತಮ್ಯತೆಯೂ ಅಳಿದು ಶರೀರ ಶ್ರಮದ ಉನ್ನತ ಮೌಲ್ಯವೂ ರೂಢಿಸುತ್ತದೆ. ಇದರಿಂದ ಸಾಮಾಜಿಕ ಸಮಾನತೆ, ಜೀವನದ ಉನ್ನತ ಶ್ರದ್ಧೆ ಹೆಚ್ಚುತ್ತದೆಂದು ತಿಳಿಯಬೇಕು.

**ವಿಕೇಂದ್ರೀಕರಣ :**

ಈ ಸಮಾನತೆಯ ಸಾಧನೆಯಲ್ಲಿ ವಿಕೇಂದ್ರೀಕರಣವೂ ಪ್ರಮುಖ ಹೆಜ್ಜೆಯಾಗಿದೆ. ಉತ್ಪಾದನೆ ಹಾಗೂ ನ್ಯಾಯೋಚಿತ ವಿತರಣೆಯ ಮೂಲಕ ಶೋಷಣಾ ರಹಿತ ಸಮಾಜ ರಚನೆಗೆ ಸಹಾಯವಾಗುತ್ತದೆ. ಏಕಸ್ವಾಮ್ಯ ಅಧಿಕಾರದಿಂದ ಶ್ರಮ ಜೀವಿಯ ಹಾಗೂ ಜನ ಸಾಮಾನ್ಯರ ಆರ್ಥಿಕ ವ್ಯವಸ್ಥೆಯ ಮೇಲೆ ಬಲವಾದ ಪರಿಣಾಮ-ವುಂಟಾಗುತ್ತದೆ. ವಿತರಣೆಯಲ್ಲಿ ಪ್ರಾಮಾಣಿಕತೆಯ ಹಿಡಿತ ತಪ್ಪುವ ಸಂಭವವೇ ಹೆಚ್ಚು. ಈ ದೃಷ್ಟಿಯಿಂದ ಉತ್ಪಾದನೆ-ವಿತರಣೆಯಲ್ಲಿ ವಿಕೇಂದ್ರೀಕರಣ ಅವಶ್ಯವೆನ್ನಿಸಿದೆ. ವಿನೋಬಾರವರ ಭೂದಾನ ಯಜ್ಞ ಇದರಿಂದಲೇ ಪ್ರೇರಿತವಾದದ್ದು. ಸಾಮೂಹಿಕ ದುಡಿಮೆ, ಗಳಿಕೆ, ಹಾಗೆಯೇ ಅದರ ಸಮರ್ಪಕ ಹಂಚಿಕೆ, ಬಳಕೆ ಇದರಿಂದ ಆರ್ಥಿಕ ಹಾಗೂ ಅಧಿಕಾರ ಕೇಂದ್ರೀಕರಣ ತಪ್ಪುತ್ತದಲ್ಲದೇ ಸಾಮೂಹಿಕ ದುಡಿಮೆಯಿಂದ ಉತ್ಪಾದನೆಯೂ ಪ್ರಗತಿಶೀಲವಾಗುತ್ತದೆ. ದುರ್ಬಲರನ್ನು ಎತ್ತರಿಸುವುದರ ಜೊತೆಗೆ ಸಾಮಾಜಿಕ ಪ್ರಜ್ಞೆ-ಪರಿವರ್ತನೆಗೆ ಇದು ಅನುವು ಮಾಡುತ್ತದೆಂಬುದೇ ತಜ್ಞರ ಅಭಿಪ್ರಾಯ.

ಇದರಿಂದ ಇನ್ನೊಂದು ವಿಶಿಷ್ಟ ಪ್ರಯೋಜನವೆಂದರೆ-ಮಾನವಶಕ್ತಿಯ ಬಳಕೆ, ಗ್ರಾಮಸ್ವರಾಜ್ಯದ ಕಲ್ಪನೆಯಿಂದ ಸ್ವಾವಲಂಬನೆಗೆ ಸಾಗುವುದು. ನಮ್ಮ ಹಳ್ಳಿ-ಗಳನ್ನು ಸ್ವಯಂಪೂರ್ಣಗೊಳಿಸಿದರೆ ದಿಲ್ಲಿಯ ಪ್ರತಿಷ್ಠೆ ಹೆಚ್ಚುತ್ತದೆ. ಉತ್ಪಾದನೆಯ

ಶಕ್ತಿ ಪ್ರವಾಹ ಹಳ್ಳಿಯಿಂದಲೇ ಹರಿಯಬೇಕು. ಇಲ್ಲಿ ಮಾನವ ಶಕ್ತಿಯನ್ನು ಕಡೆಗಣಿಸುವಂತಿಲ್ಲ. ಅತಿ ಹೆಚ್ಚು ಉತ್ಪಾದನೆಯ ದೃಷ್ಟಿಯಿಂದ ಯಂತ್ರಗಳ ಬಳಕೆ ಹೆಚ್ಚಿಸಿದರೆ ಮಾನವಶಕ್ತಿಯ ಪ್ರಭಾವ ತಗ್ಗುತ್ತದೆ. ದೇಶದಲ್ಲಿ ಬೃಹತ್ ಯಂತ್ರೋಪ ಕರಣಗಳ ಅವಶ್ಯಕತೆಯೇ ಇಲ್ಲವೆಂದು ಹೇಳುವಹಾಗಿಲ್ಲ. ಆದರೆ ಜನಶಕ್ತಿಯನ್ನು ಕಡೆ ಗಣಿಸಿ ಎಲ್ಲಕ್ಕೂ ಯಂತ್ರಗಳನ್ನೇ ಅವಲಂಬಿಸುವುದು ಸಾಧುವಾಗದು. ಇದರಿಂದ ನಿರುದ್ಯೋಗ – ಬಡತನ ಹೆಚ್ಚುವ ಸಂಭವವಿರುತ್ತದೆ. ಮತ್ತೆ ಯಂತ್ರಜ್ಞಾನ ದಿಂದಲೂ ನಾವು ಹಿಂದುಳಿದವರು. ಮಾನವಶಕ್ತಿತಿಯ ಬಳಕೆಗೆ ಅಗ್ರ ಪಾಶಸ್ತ್ಯ ನೀಡಿ ನಂತರ ಯಂತ್ರೋಪಕರಣಗಳಿಗೆ ಗಮನ ನೀಡಿದರೆ ಮಾತ್ರ ಉದ್ಯೋಗದ ಹಂಚಿಕೆ ಸರಿಯಾದೀತು. ಮಾನವ ಶಕ್ತಿಗೂ ಸರಿಯಾದ ಸ್ಥಾನ — ಮಾನ ದೊರಕೀತು. ಸರ್ವೋದಯ ಸಿದ್ಧಾಂತವು ಇನದ್ನು ಹೆಚ್ಚು ಹೆಚ್ಚು ಪುರಸ್ಕರಿಸುತ್ತದೆ. ಹಾಗೂ ಆಕರ್ಷಿಸುತ್ತದೆ. ಮಾನವನು ಯಂತ್ರದ ಗುಲಾಮನಾಗದೆ ಸ್ವಶಕ್ತಿಯನ್ನು ಬೆಳಸಿ ಕೊಳ್ಳಬೇಕೆಂಬುದೇ ಇಲ್ಲಿ ಅದಕ್ಕೆ ಸ್ಪಷ್ಟ ನಿರ್ದೇಶನ ತೋರುತ್ತದೆ.

### ಸ್ವದೇಶೀ ವ್ರತ–ಹಾಗೂ ಸಮಾಜವಾದ:

ಸ್ವದೇಶಪ್ರೀತಿ ಮತ್ತು ದೇಶೀಯ ವಸ್ತು ವ್ಯವಸ್ಥೆಯನ್ನೇ ರೂಢಿಸಿಕೊಳ್ಳುವುದು. ಇವು ಸರ್ವೋದಯದ ಅರ್ಥಶಾಸ್ತ್ರದ ಪ್ರಮುಖ ಅಂಶ. ವ್ಯಕ್ತಿ ತನ್ನ ಸುತ್ತ ಮುತ್ತಲಿನಲ್ಲಿ ಉತ್ಪಾದಿಸುವ, ಲಭ್ಯವಾಗುವ ವಸ್ತುಗಳನ್ನೇ ಕೊಂಡು ಬಳಸುವುದು, ಪರಿಸರದ ಪರಿಸ್ಥಿತಿಗಳನ್ನು ಅರ್ಥೈಸಿಕೊಳ್ಳುವುದು, ಇದರಿಂದ ಅಲ್ಲಲ್ಲಿ ಉತ್ಪಾದಿಸುವ ವಸ್ತುಗಳಿಗೆ ಹೆಚ್ಚಿನ ಮಹತ್ವ ಸಿಗುವುದಲ್ಲದೇ ವಿಫಲ ಉದ್ಯೋಗಾವಕಾಶಗಳೂ ಬೆಳೆದು ಗ್ರಾಮೀಣ ಪ್ರದೇಶದ ಆರ್ಥಿಕ ಪುನರುಜ್ಜೀವನಕ್ಕೆ ಸಹಾಯವಾಗುತ್ತದೆ. ಖಾದೀ ಬಳಕೆ, ಗ್ರಾಮೋದ್ಯೋಗಗಳ ಅಭಿವೃದ್ಧಿ, ಕಲ್ಪನೆಯಿಂದಲೇ ಮೂಡಿ ಬಂದವುಗಳಾ ಗಿವೆ. ಹಳ್ಳಿಯ ಕುಂಬಾರ, ಬಡಗಿ, ಗಾಣಿಗ, ಅಗಸ ಇವರುಗಳಿಗೆ ಹಳ್ಳಿಯಲ್ಲಿ ಉದ್ಯೋಗ ಸಿಗುವುದಿಲ್ಲೇನು? ಅವರೇಕೆ ಪೇಟೆಗೆ ಹೋಗಬೇಕು, ಈ ಸರ್ವೋದಯದಲ್ಲಿ "ಅಪರಿ ಗ್ರಹ"ವೂ ಒಂದು ವ್ರತವೇ ಆಗಿದೆ. ತನಗೆ ಎಷ್ಟು ಅವಶ್ಯಕತೆಯೊ ಅಷ್ಟನ್ನೇ ಪಡೆ ಯುವುದು. ವಸ್ತುಗಳನ್ನೆಲ್ಲ ಕೂಡಿ ಕೂಡಿ ಸಂಗ್ರಹಿಸಿ ಇಡುವುದರಿಂದ ವಿತರಣೆಯ ವ್ಯವಸ್ಥೆ ಹದಗೆಟ್ಟು ಸಾಮಾಜಿಕ ಸ್ಥಿತಿ, ಅರ್ಥ ವ್ಯವಸ್ಥೆ ಗೊಂದಲ ತರುವಂತಾಗಬಾರದು "ಅಸಂಗ್ರಹ" ಧರ್ಮಸೂತ್ರಗಳಲ್ಲಿಯೇ ಸೇರಿದೆ.

ನಮ್ಮ ಸಮಾಜವಾದ ವ್ಯಾಖ್ಯೆಯನ್ನು ಎಷ್ಟು ವಿಸ್ತರಿಸಿದರೂ ಅದು ಮತ್ತಷ್ಟು ವಿಸ್ತೃತಗೊಳ್ಳುತ್ತದೆ. ಈ ಸಮಾಜವಾದವೆನ್ನುವುದು ಕೇವಲ ಅರ್ಥವ್ಯವಸ್ಥೆಗಷ್ಟೇ ಸೀಮಿತವಾಗದೇ ಬದುಕಿನ ಪ್ರಧಾನ ಮೌಲ್ಯ ಮಹತಿಗಳ ಅರಿವು ಅನುಷ್ಠಾನಗಳಿಗೆ ಸಹಾಯಕವಾಗುವಂತೆ ಆಗಬೇಕು. ಸಮಾಜದ ವ್ಯಕ್ತಿಗಳು ತಮ್ಮ ಸ್ವಂತಿಕೆಗಿಂತಲೂ

ಸಮಾಜದ ಉತ್ಕರ್ಷ ಶ್ರೇಯಸ್ಸಿಗಾಗಿ ಹೆಚ್ಚಿನ ಪ್ರಯತ್ನ ನಡೆಸಿದರೆ ನೈಜ ಸಮಾಜವಾದ ಅರ್ಥಾತ್ ಸರ್ವೋದಯ ಸಮಾಜ ನಿರ್ಮಾಣವಾದೀತು. ಪ್ರತಿಯೊಬ್ಬನ ದೈಹಿಕ ಬೌದ್ಧಿಕ, ವಸ್ತು ಸಂಪತ್ತುಗಳಿಗೆಲ್ಲ ಆತ ಧರ್ಮದರ್ಶಿಯೆನ್ನಿಸಿ ತನ್ನ ಹಾಗೂ ಸಮಾಜದ ಕಾರ್ಯಕ್ಕಾಗಿಯೇ ಇದನ್ನು ವಿನಿಯೋಗಿಸುವುದು ಎಂದು ತಿಳಿದರೆ ಸರ್ವೋದಯದ ಸಿದ್ಧಿ ಅಸಾಧ್ಯವಾದುದಲ್ಲ.

ದೇಶದ ಸ್ಥಿತಿ-ಗತಿಗಳುನ್ನು ಆಗಾಗ ಗಮನಕ್ಕೆ ತಂದು ಕೊಂಡು ಅದು ಎದುರಿಸುತ್ತಿರುವ ಸಮಸ್ಯೆ-ಸವಾಲುಗಳ ಪರಿಹಾರಕ್ಕೆ ಸೂಕ್ತ ವಿಚಾರ ನಿರ್ಧಾರ ಮಾಡುತ್ತಿರಬೇಕಾದುದು ಅವಶ್ಯ. ಅವನ್ನು ಅಲಕ್ಷಿಸಿದರೆ ಆ ಸಮಸ್ಯೆಗಳು ಮತ್ತಷ್ಟು ಜಟಿಲಗೊಳ್ಳುವ ಸಂಭವವೂ ಇರುತ್ತದೆ. ಇಂದು ದೇಶದ ಪರಿಸ್ಥಿತಿ ಹಾಗೇ ಆಗಿದೆ .ಒಂದು ಸಮಸ್ಯೆ ನೀಗಿದರೆ ಹತ್ತು ಸಮಸ್ಯೆ ಹುಟ್ಟಿಕೊಳ್ಳುತ್ತದೆ. ಬಡತನ ಸಿರಿವಂತಿಕೆಗಳ ಅಂತರವೂ ಹೆಚ್ಚುತ್ತ ಸಾಗಿದೆ. ದೀನ ದಲಿತರು ತಮ್ಮ ಕನಿಷ್ಠ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಇನ್ನೂ ಸಮರ್ಥರಾಗಿಲ್ಲ. ಧರ್ಮ ಜಾತಿಗಳ ಬಗ್ಗೆ ಸರಿಯಾದ ತಿಳುವಳಿಕೆ ಸಹಬಾರದೇ ಹಬ್ಬ ಹರಿದಿನಗಳಲ್ಲಿ ಮತೀಯ ಸಂಘರ್ಷಣೆ ಕಾಣಿಸಿಕೊಳುತ್ತಿರುವುದು ನಮಗೆ ಗೌರವದ ಸಂಗತಿಯಲ್ಲ. ಸ್ವಾತಂತ್ರ್ಯೋತ್ತರದಲ್ಲಿ ದೇಶದ ಪ್ರಗತಿ ನಿರೀಕ್ಷಿತ ಮಟ್ಟದಲ್ಲಿ ಸಾಧ್ಯವಾಗಿಲ್ಲ. ಹಳ್ಳಿಗಳು ಸ್ವಯಂಪೂರ್ಣಗೊಂಡು ಸ್ವಾವಲಂಬಿಯಾಗಿಲ್ಲ. ಇವೆಲ್ಲ ಕಾರಣಕ್ಕಾಗಿ ಗಾಂಧೀಜಿಯವರು ಹೇಳಿದ ಸರ್ವೋದಯ ಇದೀಗ ಅನಿವಾರ್ಯವೆನ್ನಿಸಿದೆ. ಇದು ಎಷ್ಟು ತೀವ್ರವಾಗಿ ಆಚರಣೆಯಲ್ಲಿ ರೂಢಿಸಿಕೊಂಡಿತೋ ಅಷ್ಟೇ ತೀವ್ರ ಗತಿಯಲ್ಲಿ ದೇಶದ ಪ್ರಗತಿ ಸಾಧ್ಯವಾದೀತು.

ಕವಿಯೊಬ್ಬನ ಮಾತಿನಲ್ಲಿ ಮೂಡಿಬಂದ ಸರ್ವೋದಯ ಹೀಗಿದೆ - "ನಕಾಮಯೇ ರಾಜ್ಯಭುವಂ, ನಸ್ವರ್ಗಂ, ನಾಪುನರ್ಭವಂ, ಕಾಮಯೇ ದು;ಖ ತಪ್ತಾನಾಂ ಪ್ರಾಣಿನಾಂ ಆರ್ತಿನಾಶನಂ.

---

ಧರಣಿಯ ಮೇಲೊಂದು ಹಿರಿದಪ್ಪ ಅಂಗಡಿಯನಿಕ್ಕಿ
ಹರದ ಕುಳ್ಳಿರ್ದ ನಮ್ಮ ಮಹದೇವಶೆಟ್ಟಿ
ಒಮ್ಮನವಾದರೆ ಒಡನೆ ನುಡಿವನು
ಇಮ್ಮನವಾದರೆ ನುಡಿಯನು
ಕಾಣಿಯ ಸೋಲ ಅದ್ದಗಾಣಿಯ ಗೆಲ್ಲ
ಬಹುಜಾಣ ನಮ್ಮ ಕೂಡಲಸಂಗಮದೇವ.

ಬಸವಣ್ಣನವರು.

# ಶಿವ ಸಹಸ್ರನಾಮದ ವೈಶಿಷ್ಟ್ಯವೇನು?

ಪ. ರಾಮಕೃಷ್ಣ ಶಾಸ್ತ್ರಿ, ಶಿವಶಕ್ತಿ ನಿಲಯ, ಅಂಚೆ ; ಮಂಚಿ - 574 295 (ದ.ಕ.)

ಮಂಗಲಸ್ವರೂಪಿಯಾದ ಭಗವಂತನನ್ನು ಸಾವಿರ ನಾಮಗಳಿಂದ, ಅನಂತರ ನೂರೆಂಟು ನಾಮಗಳಿಂದ ಭಜಿಸಿ ನಮಸ್ಕರಿಸುವುದು ಪುಣ್ಯಪ್ರದವೆಂದು ಸನಾತನ ಧರ್ಮವು ಸಾರುತ್ತದೆ ಅದೇ ರೀತಿಯಲ್ಲಿ ಕೃತಯುಗದಲ್ಲಿ ಧ್ಯಾನದಿಂದ, ತ್ರೇತದಲ್ಲಿ ಯಜ್ಞದಿಂದ ದ್ವಾಪರದಲ್ಲಿ ಅರ್ಚನೆಯಿಂದ ಸುಲಭದಲ್ಲಿ ದೇವರು ಒಲಿಯುತ್ತಿದ್ದನಾದರೆ ಈ ಕಲಿಯುಗದಲ್ಲಿ ಸಹಸ್ರನಾಮ ಜಪವೇ ದೇವರ ಸಾಕ್ಷಾತ್ಕಾರಕ್ಕೆ ಸುಲಭವಾದ, ಮಹತ್ತರವಾದಸಾಧನವೆಂದು ಪೌರಾಣಿಕರು ಸಾರಿದ್ದಾರೆ. ನಾಮ ಜಪವು ಯಜ್ಞಕ್ಕೆ ಸಮಾನವೆಂದು ಗೀತಾಚಾರ್ಯ ಕೃಷ್ಣನೇ ತಿಳಿಸಿದ್ದಾನಲ್ಲವೆ? ಸಹಸ್ರನಾಮಗಳು ಬೇರೆ ಬೇರೆ ಹೆಸರಿನ ದೈವಶಕ್ತಿಗಳಾಗಿ ಸಿದ್ಧಗೊಂಡರೂ ಲಲಿತೆ, ವಿಷ್ಣು, ಲಕ್ಷ್ಮಿ ಮತ್ತು ಶಿವ ಸಹಸ್ರನಾಮಗಳು ಮಾತ್ರ ಖ್ಯಾತಿಗೊಂಡು ಸರ್ವತ್ರ ಬಳಕೆಗೆ ಬಂದಿವೆ.

ಉಳಿದೆಲ್ಲ ಸಹಸ್ರನಾಮಗಳು ಒಂದೇ ರೀತಿಯವಾಗಿದ್ದರೆ ಶಿವ ಸಹಸ್ರನಾಮಗಳು ಮಾತ್ರ ಏಳು ರೀತಿಯಲ್ಲಿ ಪ್ರಚಲಿತವಾಗಿವೆ. ಒಂದರಲ್ಲಿ ಬರುವ ಹೆಸರುಗಳು ಇನ್ನೊಂದರಲ್ಲಿ ಬಾರದಷ್ಟು ಅವುಗಳ ರೀತಿ ವಿಭಿನ್ನವಾಗಿದೆ. ಶಿವರಹಸ್ಯ, ಶಿವಪುರಾಣ, ಸ್ಕಾಂದ ಪುರಾಣ, ಲಿಂಗಪುರಾಣ, ಪದ್ಮಪುರಾಣ, ಸೌರಪುರಾಣಗಳಲ್ಲಿ ಆರು ವಿಧದ ಶಿವಸಹಸ್ರನಾಮಗಳು ಬಳಕೆಯಲ್ಲಿದ್ದರೂ ಅವುಗಳ ಪ್ರಸಿದ್ಧಿ ಮತ್ತು ಪಸರಿಸುವಿಕೆ ತೀರ ವಿರಳವಾಗಿದೆ. ಪ್ರಸಿದ್ಧವೂ ಸಂಪ್ರದಾಯವಿದರಲ್ಲಿ ಹೆಚ್ಚು ಬಳಕೆಯಲ್ಲಿರುವಂಥದೂ ಅದ ಶಿವಸಹಸ್ರನಾಮ ಪಾಠ ಮಹಾ ಭಾರತದ ಅನು ಶಾಸನಿಕ ಪರ್ವದ ಹದಿನೇಳನೆಯ ಅಧ್ಯಾಯದಲ್ಲಿ ಉಕ್ತವಾಗಿದೆ.

ಆಚಾರ್ಯ ಭೀಷ್ಮರು ಸರಳ ಮಂಚದಲ್ಲಿ ಪವಡಿಸಿದ್ದಾಗ ಯುಧಿಷ್ಠಿರನಿಗೆ ಅವರ ಬಾಯಿಂದಲೇ ಶಿವ ನಾಮೋಚ್ಚಾರಣೆಯನ್ನು ಆಲಿಸಿಸಬೇಕೆನ್ನುವ ಆಶೆಯುಂಟಾಯಿತಂತೆ. ಆದರೆ ಆಯಾಸದಿಂದ ಬಳಲಿರುವ ಭೀಷ್ಮರಿಂದ ಅದು ಅಸಾಧ್ಯವೆನಿಸಿದಾಗ ಶಿವನ ಸಖ ಮಾತ್ರವಲ್ಲ ಮಹಾಭಕ್ತನಾದ ಕೃಷ್ಣನಿಂದ ಶಿವನಾಮ ಸಹಸ್ರವನ್ನು ತಿಳಿಸುವಂತೆ ಆದೇಶಿಸಿದರು. ಇದು ಹರ ಮೇಲೋ ಹರಿ ಮೇಲೋ ಎಂದು ವೃಥಾ ಚರ್ಚೆ ಮಾಡುವವರಿಗೆ ಹರಿಹರರೊಳಗೆ ಭೇದವಿಲ್ಲ, ಎರಡೂ ಪ್ರಪಂಚದಾಟ ಆಡಿಸುವ ಐಕ್ಯಶಕ್ತಿಗಳೆಂದು ತಿಳಿಸಲೊಂದು ನಾಟಕ ಅಷ್ಟೆ.

ಶ್ರೀಕೃಷ್ಣ ಯಾಕೆ ಶಿವಭಕ್ತನಾದ ಎಂದರೆ ಅವನಿಗೊಂದು ಸಲ ಶಿವದರ್ಶನ ಮಾಡಬೇಕೆಂಬ ಬಯಕೆಯುಂಟಾಗಿ ತಪಸ್ಸಿಗಾಗಿ ಹಿಮಾಚಲ ಪರ್ವತಕ್ಕೆ ತೆರಳಿದ. ಅಲ್ಲಿ ಉಪಮನ್ಯು ಎಂಬ ಮುನಿಯಿಂದ ದೀಕ್ಷಾಬದ್ಧನಾಗಿ ತಪಸ್ಸನ್ನು ಆರಂಭಿಸಿದ ಶಿವದರ್ಶನ ಪಡೆಯುವುದರಲ್ಲಿ ಸಫಲನಾದನು. ಬಳಿಕ ಆತನು ಉಪಮನ್ಯುವಿನ

ಬಳಿಗೆ ಮರಳಿದಾಗ ಆತನು, ಕೃತಯುಗದಲ್ಲಿ ಮಹರ್ಷಿ ತಂಡಿಯು ಪರಶಿವನನ್ನು ಭಕ್ತಿ ಪರವಶತೆಯಿಂದ ಧ್ಯಾನಿಸುತ್ತಾ ಹತ್ತು ಸಹಸ್ರ ವರುಷಗಳ ಕಾಲ ಸಮಾಧಿ ಸ್ಥಿ ಗೇರಿದ್ದ. ಶಿವನು ಅವನ ತಪಸ್ಸಿಗೊಲಿದು ಮೈದೋರಿದಾಗ ಅನೇಕ ವಿಧದಿಂದ ಶಿವನನ್ನು ತಂಡಿಯು ಸ್ತುತಿಸಿದರೂ ಮನತಣಿಯದೆ ಬ್ರಹ್ಮನು ಹಿಂದೆ ಶಿವನನ್ನು ಭಜಿಸಿದ ಹತ್ತು ಸಾವಿರ ನಾಮಗಳನ್ನು ಪಠಿಸಿ ಹೊಗಳಿದನು. ಅದರಿಂದ ಶಿವನಿಗೆ ಬಹು ಸಂತೋಷವಾಯಿತು ಅವನು ದಿವ್ಯಜ್ಞಾನ, ಅಕ್ಷಯತ್ವಗಳೇ ಮುಂತಾದ ನಾನಾ ವಿಧದ ವರಗಳನ್ನು ಮಹರ್ಷಿ ಕರುಣಿಸಿ ಕೈಲಾಸಕ್ಕೆ ತೆರಳಿದನು. ತಂಡಿ ಮಹರ್ಷಿಯು ಬ್ರಹ್ಮನಿಂದ ಪಡೆದ ಹತ್ತು ಸಾ ಶಿವ ನಾಮಗಳಲ್ಲಿ ಒಂದು ಸಾವಿರ ನಾಮಗಳನ್ನು ನನಗೆ ಹೇಳಿದ್ದಾನೆ. ಅದನ್ನು ನಿನಗ ಬೋಧಿಸುತ್ತೇನೆ" ಎಂದು ಕೃಷ್ಣನಿಗೆ ಉಪದೇಶಿಸಿದನು.

ಹೀಗೆ ಉಪಮನ್ಯುವು ಕೃಷ್ಣನಿಗೆ ಬೋಧಿಸಿದ ಶಿವಸಹಸ್ರನಾಮವು ೧೮೩ ಶ್ಲೋಕಗ ದ್ದು ಅವುಗಳ ನಾಮ ವಿಂಗಡಣೆಯು ಬಳಿಕ ನಡೆಯುತ್ತ. ಈ ಅನನ್ಯವು ಅಮೃತವು ಆದ ನಾಮಸಂಗ್ರಹವನ್ನು ಯುಧಿಷ್ಠಿರನಿಗೆ ಕೃಷ್ಣನು ಹೇಳಿದನು. ವೇದವೇದಾಂಗಗಳಲ್ಲಿ ಕಾಣ ಸುವ, ಹೆಸರುಗಳಿಂದ ಸರ್ವ ಲೋಕ ಪ್ರಸಿದ್ಧಿಗಳಿಸಿದ ಸ್ತೋತ್ರಕ್ಕೆ ಅತ್ಯಂತ ಯೋಗ್ಯ ನಾದ ಶಿವನನ್ನು ಸ್ತೋತ್ರಾರಂಭದಲ್ಲೇ ಸ್ತುತಿಸಲಾಗಿದೆ.

ನಾಮ ಶ್ರೇಷ್ಠತೆಗೆ ತಕ್ಕ ಫಲವನ್ನು ಸಿದ್ಧಿಯನ್ನೂ ಸಮರ್ಥಗಳನ್ನು ನೀಡಬಲ್ಲ ಮಹತ್ತು ಈ ನಾಮಗಳದು. ಖ್ಯಾತರಾದ ಸಾಧುಗಳು' ತತ್ವದರ್ಶಿಗಳಾದ ಮುನಿಗಳು ಹೊಗಳಿದ ಪರಮ ಶ್ರೇಷ್ಠವಾದ, ಸ್ವರ್ಗದಾಯಕನಾದ, ಸಕಲ ಪ್ರಾಣಿಗಳಿಗೂ ಹಿತದಾ ಕವಾದ ಆದಿಪುರುಷ ಮಹಾದೇವನ ನಾಮ ವಿಶೇಷಗಳಿವು. ಬ್ರಹ್ಮಲೋಕದಿಂದ ಇಳಿ ಗಿಳಿದು ಎಲ್ಲೆಡೆಯೂ ನಿನದಿಸುತ್ತಿರುವ ವೇದ ಪ್ರೋಕ್ತವಾದ, ಸನಾತನವಾದ ಪರ ಬ್ರಹ್ಮ ನಾಮಗಳಿಂದ ಭವನೂ ದೇವನೂ ವಿಶ್ವರೂಪನೂ ಆದ ಶಿವನ ನಾಮೈಶ್ವರ್ಯ ವನ್ನು ವಿಸ್ತಾರವಾಗಿ ವರ್ಣಿಸಲು ಯೋಗಿಗಳಿಗೆ ನೂರು ವರ್ಷ ಹೇಳುತ್ತಲೇ ಇದ್ದರೂ ಸಾಧ್ಯವಿಲ್ಲ. ವರದನಾದ,ವರೇಣ್ಯನಾದ ಶಿವನ ನಾಮಮಹಿಮೆ ಅಂತಹದು.

ಯಾವನ ಆದಿ ಮಧ್ಯಾಂತಗಳು, ದೇವತೆಗಳು ಕೂಡ ಅರಿತಿಲ್ಲವೋ ಅಂಥವನ ಮಹಿಮೆಯನ್ನು ವರ್ಣಿಸಲು ಕೃಷ್ಣನು ಧೀಮಂತನಾದ ಶಿವನಿಂದಲೇ ಅನುಗ್ರಹ ಶಕ್ತಿ ಯನ್ನು ಪಡೆಯಬೇಕಾಯಿತು. ಜಗತ್ಕಾರಣನೂ ಆದ್ಯಂತ ರಹಿತನೂ ಆದ ಶಿವನ ಈ ಸಹಸ್ರನಾಮಗಳೆಂದರೆ ಬ್ರಹ್ಮನು ಬೋಧಿಸಿದ ದಶಸಹಸ್ರ ನಾಮಗಳನ್ನು ಮಥಿಸಿ ತೆಗೆದ ಬೆಣ್ಣೆಯೆಂದು ಕೃಷ್ಣನು ಹೇಳುತ್ತಾನೆ. ಆದ್ದರಿಂದ ಈ ನಾಮಗಳು ಗಿರಿಗಳ ಸಾರವಾದ ಬಂಗಾರದಂತೆ, ಹೂವುಗಳ ಸಾರವಾದ ಮಧುವಿನಂತೆ, ತುಪ್ಪಗಳ ಸಾರವಾದ ಕೆನೆಯಂತೆ ಹತ್ತು ಸಹಸ್ರ ನಾಮಗಳ ಸಾರವೇ ಆಯಿತು. ಇಲ್ಲಿ ನಾಲ್ಕುವೇದಗಳ ಸಾರವಿದೆ. ಸಕಲ ಪಾಪನಿವಾರಕ ಶಕ್ತಿಯಿದೆ. ಮಂಗಳ ಸ್ವರೂಪವೂ ಪುಷ್ಟಿಕರವೂ ದುಷ್ಟ ಶಕ್ತಿ ನಿವಾರ ಕವೂ ಶ್ರೇಷ್ಠವೂ ಪಾವನವೂ ಆದ ಈ ನಾಮಗಳನ್ನು ಶ್ರದ್ಧೆಯಿರುವ ಆಸ್ತಿಕನಿಗೆ ಮಾತ್ರ ಕೊಡಬೇಕು.

ಪ್ರಕಾಶಾತ್ಮನೂ ಜಗತ್ಕಾರಣ ಸ್ವರೂಪಿಯೂ ಆದ ಶಿವನನ್ನು ವಿರೋಧಿಸುವವನು ತನ್ನ ಪೂರ್ವಜನರನ್ನೂ ಮಕ್ಕಳನ್ನು ಕೂಡಿಕೊಂಡು ನರಕಕ್ಕೆ ಹೋಗುವನು. ಮರಣ ಕಾಲದಲ್ಲಿ ಈನಾಮೋಪದೇಶ ಪಡೆದರೆ ಪಾಪನಾಶಕವಾದ, ಮಂಗಲಕರವಾದ, ಯಜ್ಞಾದಿ ಫಲ ನೀಡಬಲ್ಲ, ಪರಮಾನಂದರೂಪದ ನಾಮಗಳಿಂದ ಮೋಕ್ಷವನ್ನ ಗಳಿಸಬಲ್ಲ.

ಬ್ರಹ್ಮನು ಶಿವ ಸಹಸ್ರನಾಮವನ್ನು ಸ್ತೋತ್ರಗಳ ರಾಜನೆಂದು ಕರೆದ. ಇದನ್ನು ದೇವತೆಗಳು ಸ್ತವರಾಜನೆಂದು ಸ್ತುತಿಸಿದರು. ತಂಡಿ ಮುನಿಯು ಈ ನಾಮಗಳನ್ನು ಭೂಮಿಗೆ ತಂದುದರಿಂದ ತಂಡೀಕೃತ ಎಂಬ ಹೆಸರು ಇದೆ. ಸಕಲ ಪಾಪಗಳನ್ನು ನಿವಾರಿಸುವ ಮಂಗಳಗಳಲ್ಲಿ ಸಕಲ ಮಂಗಳತ್ವವನ್ನು ಪಡೆದ ಈ ನಾಮಗಳೆಂದರೆ ಬ್ರಹ್ಮರಲ್ಲಿ ಬ್ರಹ್ಮನೂ ಉತ್ತಮರಲ್ಲಿ ಉತ್ತಮನೂ ಆದ ಮಹಾದೇವನ ಸ್ತುತಿ ವಾಕ್ಯಗಳು. ಈ ನಾಮ ಪಠನೆಯಿಂದ ಸಕಲ ಸಿದ್ಧಿಗಳೂ ಕೈಗೂಡುತ್ತವೆ.

ಇದು ಶಿವನಾಮದ ವರ್ಣನೆಯಾದರೆ ಸಹಸ್ರ ನಾಮವನ್ನು ಪಠಿಸುವ ಮೊದಲು ಧ್ಯಾನಿಸುವ ಧ್ಯಾನ ಶ್ಲೋಕದಲ್ಲಿ "ಬೆಳ್ಳಿ ಬೆಟ್ಟದಂತೆ ಬಿಳಿಯ ವರ್ಣದವನೂ ಬಾಲಚಂದ್ರನನ್ನು ಜಟೆಯಲ್ಲಿ ಧರಿಸಿದವನೂ ರತ್ನಾದಿ ಆಭರಣಗಳ ಧಾರಣೆಯಿಂದ ಮಿನುಗುತ್ತಿರುವ ಅಂಗಕಾಂತಿಯುಳ್ಳವನೂ ಕೈಯಲ್ಲಿ ಜಿಂಕೆಯಮರಿ, ಪರಶು ಮೊದಲಾದುವುಗಳನ್ನು ಧರಿಸಿ, ಅಭಯಮುದ್ರೆ ಹಾಗೂ ವರ ಮುದ್ರೆಯನ್ನು ತೋರುತ್ತಿರುವವನೂ ಪ್ರಸನ್ನವದನನೂ ಪದ್ಮಾಸೀನನೂ ಸುತ್ತಲೂ ಆವೃತರಾಗಿರುವ ದೇವ ಸಮೂಹದಿಂದ ಸುತ್ತಿಸಲ್ಪಡುವವನೂ ಹುಲಿಚರ್ಮದ ವಸನವನ್ನು ಧರಿಸಿದವನೂ ಜಗತ್ಕಾರಣನೂ ಜಗದ್ವಂದ್ಯನೂ ಎಲ್ಲಾ ಭೀತಿಗಳನ್ನೂ ನಿವಾರಿಸುವವನೂ ಆಗಿರುವ ಪಂಚವದನನಾದ ಮೂರು ನೇತ್ರಗಳಿರುವ ಮಹೇಶನನ್ನು ಸದಾ ಧ್ಯಾನಿಸುತ್ತೇನೆ" ಎಂದು ಹೇಳಿ ಆನಂತರ ಸಹಸ್ರನಾಮ ಪಠಿಸುವುದು ಪದ್ಧತಿ.

ಬ್ರಹ್ಮಾದಿ ದೇವತೆಗಳಾಗಲೀ ಋಷಿಗಳಾಲೀ ಪೂರ್ಣವಾಗಿ ತಿಳಿಯಲು ಅಸಾಧ್ಯನಾದ ಶಿವನನ್ನು ಸಹಸ್ರನಾಮಗಳಿಂದ ಪಠಿಸಿದರೆ ಲಾಭವೇನಿದೆ! ನಿತ್ಯಯುಕ್ತನಾದ, ಶುಚಿಭೂತನಾದ ಭಕ್ತನು ಪರಿಶುದ್ಧ ಮನಸ್ಸಿನಿಂದ ಈ ನಾಮಜಪಗೈದರೆ ಭಗವಂತನನ್ನು ಹೊಂದುತ್ತಾನೆ. ಪರಬ್ರಹ್ಮವನ್ನು ಹೊಂದುತ್ತಾನೆ. ಭಕ್ತ ಪ್ರಿಯನೂ ಮೋಕ್ಷಪ್ರದನೂ ಆದಶಂಕರನು ಈ ನಾಮ ಪಠನೆಯಿಂದ ಸಂತೋಷಿಸುತ್ತಾನೆ.

ಶಿವನನ್ನು ಈ ನಾಮಗಳಿಂದ ಕಾರ್ಯದಿಂದಲೂ ಮಾತಿನಿಂದಲೂ ಭಾವದಿಂದಲೂ ಮನದಿಂದಲೂ ಅಲ್ಲದೆ ಮಲಗಿರುವಾಗ, ಎಚ್ಚರಿರುವಾಗ' ಕುಳಿತಿರುವಾಗ, ನಡೆಯುವಾಗ ಹೇಳುತ್ತಾ, ಸ್ತುತಿಸುತ್ತ ಇದ್ದರೆ ಆನಂದಾಮೃತವನ್ನು ಗಳಿಸುತ್ತಾನೆ.

ಜೀವನಿಗೆ ಶಿವನಲ್ಲಿ ಭಕ್ತಿಯು ಜನಿಸಬೇಕಾದರೆ ಹಲವು ಬಗೆಯ ಜೀವಜಾತಿಗಳಲ್ಲಿ ಕೋಟಿ ಸಾವಿರ ಸಲ ಜನಿಸಿ ಪಾಪವನ್ನು ನಿವಾರಿಸಿ ಕೊಂಡಿರಬೇಕಾಗುತ್ತದೆ. ಬಳಿಕ ಸರ್ವ ಕಾರಣನಾದ ಶಿವನಲ್ಲಿ ಶಿವೋಹಮಸ್ಮಿ ಎಂಬ ಅನನ್ಯ ರೂಪವಾದ ಭಕ್ತಿಯು ಎಲ್ಲಾ ವಿಧ ಹಾಗೂ ಭಾಗಗಳಿಂದ ಜನಿಸುವುದುಸಾಧ್ಯ. ಶಿವನ ಮೇಲೆ ಅವಿಚಲವಾದ ಅನನ್ಯವಾದ, ನಿರ್ವಿವಾದ ಭಕ್ತಿಯನ್ನಿರಿಸುವುದು ದೇವತೆಗಳಿಗೆ ಸಾಧ್ಯವಿಲ್ಲ, ಮನುಷ್ಯರಿಗೆ ಸುಲಭವೂ ಅಲ್ಲ. ಶಂಕರನಲ್ಲಿಯೇ! ಭಕ್ತಿಭಾವವನ್ನಿರಿಸಿ ಪರಮಸಿದ್ಧಿಗಳಿಸಲು ಕಾರಣವಾದ ತೇಜಸ್ಸನ್ನು ಗಳಿಸಲು ಶಿವನ ಅನುಗ್ರಹದಿಂದ ಮಾತ್ರ (ಇಂತಹ ಭಕ್ತಿಯು ಸ್ಥಿರಗೊಳ್ಳಲು) ಸಾಧ್ಯವಿದೆ.

ಎಲ್ಲಾ ರೀತಿಯಿಂದಲೂ ಶಿವನ ಮೊರೆ ಹೊಕ್ಕು ಶರಣಾದವರಿಗೆ ಭಕ್ತಪರಾಧೀನನಾದ ಭವನು ಸಂಸಾರ ಕೂಪದಿಂದ ಉದ್ಧರಿಸುತ್ತಾನೆ. ಆದರೆ ದೇವತೆಗಳು ಮನುಷ್ಯನಿಗೆ ಆಮಿಷವೊಡ್ಡಿ ತಪೋಬಲವನ್ನು ಕೆಡಿಸಲು ಯತ್ನಿಸುತ್ತಾರೆ. ಪವಿತ್ರವಾದ ಪುಣ್ಯಕರವಾದ ಯೋಗ, ಮೋಕ್ಷ, ಸಂತೋಷ, ಸ್ವರ್ಗದಾಯಕವಾದ ಈ ಸಾವಿರ ನಾಮಗಳಿಂದ ಶಿವನ ಸಂಕೀರ್ತನೆ ಮಾಡಿದವರಿಗೆ ಶ್ರೇಷ್ಠಸ್ಥಾನ ಲಭಿಸುತ್ತದೆ.

ಒಂದು ವರ್ಷದ ವರಗೆ ಸದಾ ಕಾಲ ಶಿವಸಹಸ್ರನಾಮ ಪಠಿಸಿದರೆ ಇಚ್ಛಿತಫಲ ದೊರಕುವುದು, ಬ್ರಹ್ಮಚಾರಿಯೂ ಜಿತೇಂದ್ರಿಯನೂ ಶುಚಿಯೂದವನೂ ಈ ಅವಧಿಯಲ್ಲಿ ಪಠಿಸಿದರೆ ಅಶ್ವಮೇಧದ ಫಲವನ್ನುಗಳಿಸುವನಲ್ಲದೆ ದಾನವರಿಂದ, ರಾಕ್ಷಸರಿಂದ ಯಕ್ಷ, ಪಿಶಾಚಿ, ಯಾತುಧಾನ' ಸರ್ವ, ಗುಹ್ಯಕಗಳಿಂದ ಯಾವತ್ತಿಗೂ ಬಾಧೆಗೊಳಗಾಗಲಾರನೆಂದು ವರ್ಣಿತವಾಗಿದೆ.



# ಅರ್ಥರಹಿತ ನಡವಳಿಕೆಗಳು :

ರಸಿಕ ಪುತ್ತಿಗೆ, ಪತ್ರಿಕೋದ್ಯಮಿಗಳು, ಚನ್ನಪಟ್ಟಣ – 571 501

"ನಮ್ಮ ಎಷ್ಟೋ ನಡವಳಿಕೆಗಳಿಗೆ ಅರ್ಥವೇ ಸಿಗುವುದಿಲ್ಲ," "ಅಜ್ಜ ನೆಟ್ಟ ಆಲದಮರ ಅಂತ ನೇಣುಹಾಕಿಕೊಳ್ಳುತ್ತೇವೆ" ಎಂದು ಹಲವು ಎಳೆಯರು ಹೇಳು–ವುದುಂಟು. ಆ ಮಾತಿನಲ್ಲಿ ಸತ್ಯವಿದೆ, ಕಾರಣವೂ ಇದೆ. ನಮ್ಮ ನಡವಳಿಕೆಯ ಮೂಲವನ್ನು ಅದರ ಕಾರಣ, ಅರ್ಥವನ್ನು ನಾವು ತಿಳಿಯುವ ಪ್ರಯತ್ನ ಮಾಡುವುದೇ ಇಲ್ಲ. ಆದರೆ ನಮ್ಮ ಹಾಗೇ ಮುಂದಿನ ಪೀಳಿಗೆಯೂ ಇರಬೇಕು ಎಂದೇನೂ ಇಲ್ಲವಲ್ಲ? ಅವರ ತರ್ಕ ವಾದಗಳಿಗೆ ನಾವು ತಲೆಹಾಕಲೇಬೇಕು, ಹಾಗಿಲ್ಲದಿದ್ದರೆ ಅವರು ನಮ್ಮನ್ನು ಬದಿಗೆ ಸರಿಸಿಬಿಡುತ್ತಾರೆ.

ಈಚೆಗೆ ನಮ್ಮಲ್ಲಿ ಸಭೆ ಸಮಾರಂಭಗಳಲ್ಲಿ ಒಂದು ಕ್ರಮಬದ್ಧ ಪರಿಪಾಠ ಇದೆ. ಸಮಾರಂಭದ ಅಧ್ಯಕ್ಷತೆ ಒಬ್ಬರು ವಹಿಸಿಕೊಳ್ಳಬೇಕು. ಒಬ್ಬರು ಮುಖ್ಯ ಅತಿಥಿಗಳು ಬೇಕು. ಒಬ್ಬರು ಭಾಷಣಕಾರರು ಬೇಕು. ಒಬ್ಬರು ಸಮಾರಂಭದ ಉದ್ಘಾಟನೆಗೆ ಬೇಕು. ಮತ್ತೊಬ್ಬರು ಬಹುಮಾನ ವಿತರಣೆ-ಹೀಗೆ ಹಲವು ತರದ ಇಲ್ಲದ ಸಲ್ಲದ ಅನಗತ್ಯ ಕಾರ್ಯಗಳನ್ನು ಹೊಂದಿಸಿ ಹೆಸರು ಪ್ರಿಂಟಿಸಿಬಿಡುತ್ತೇವೆ.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದವನ ಕರ್ತವ್ಯ ಇಡಿಯ ಕಾರ್ಯಕ್ರಮವನ್ನು ನಡೆಸಿಕೊಡುವುದು. ಆದರೆ ಈಗ ಅಧ್ಯಕ್ಷ ಸುಮ್ಮನೆ ಗುಮ್ಮನಂತೆ ಕೂರುತ್ತಾನೆ. ಅತನ ಕಾರ್ಯ ನಿರ್ವಹಿಸಲು ಒಬ್ಬ ನಿರೂಪಕ ಅಥವಾ ನಿರ್ದೇಶಕ ಬರುತ್ತಾನೆ, ಕೆಲವು ಸಲ ನಿರ್ದೇಶಕನ ಜೊತೆಗೆ ನಿರೂಪಕನೊಬ್ಬನೂ ಇರುವುದಿದೆ. ಇವುಗಳೆಲ್ಲ ಪೃಷ್ಠ ಪೋಷಣೆ ಅಂದರೆ ಖುಷಿಪಡಿಸಲು ಮಾಡುವ ಹುನ್ನಾರುಗಳು ಇಂಥ ಹುನ್ನಾರುಗಳಲ್ಲಿ ದೀಪ ಹಚ್ಚುವುದು ಕೂಡ ಒಂದು. ದೀಪ ಬೆಳಗಿಸಿಯಾವ ಕಾರ್ಯ ಮಾಡುವುದು? ಎಲ್ಲಿ ದೀಪ ಬೆಳಗಿಸಬೇಕು? ಯಾರು ಯಾವ ರೀತಿ ಬೆಳಗಿಸಬೇಕು? ಎಂಬಿತ್ಯಾದಿ ಯಾವ ವಿಧಿ ವಿಧಾನಗಳ ಪರಿವೆಯೂ ಇಲ್ಲದೆ ಈ ಕಾರ್ಯ ನಡೆಯುತ್ತದೆ.

ಕಾರ್ಯಕ್ರಮ ಆರಂಭವಾದ ಎಷ್ಟೋ ಹೊತ್ತಿನ ನಂತರ ಒಂದು ಪುಸ್ತಕದ ಬಿಡುಗಡೆ ಆಗಬೇಕು. ಆ ಪುಸ್ತಕದ ಬಿಡುಗಡೆಗೆ ಮೊದಲು ವೇದಿಕೆಯ ಪಕ್ಕದಲ್ಲಿ ಇಟ್ಟ ಪೀಠದ ಮೇಲೆ ಇರಿಸಿದ ದೀಪವನ್ನು ಬೂಟುಗಾಲಿನ ಮಹಾತ್ಮರು ಕ್ಯಾಂಡೆಲ್‌ನಿಂದ ಬೆಳಗುತ್ತಾರೆ. ಅವರ ಆ ಕಾರ್ಯವನ್ನು ಏನೋ ಚಮತ್ಕಾರ ಎಂಬಂತೆ ಸುತ್ತ ನಾಲ್ಕಾರು ಜನ ನಿಂತು ನೋಡುತ್ತಾರೆ. ಆಗ ಕ್ಯಾಮರಾಗಳು 'ಕ್ಲಿಕ್' ಆಗುತ್ತವೆ. ಇದಕ್ಕೆಲ್ಲ ತಾಳಮೇಳ ಇಲ್ಲ. ಅರ್ಥವಂತೂ ಖಂಡಿತ ಇಲ್ಲ

ಕ್ರಮವೂ ಇಲ್ಲ. ದೀಪ ಬೆಳಗ ಬೇಕಾಗಿದ್ದರೆ ಕಾರ್ಯಕ್ರಮಕ್ಕೆ ಮೊಟ್ಟಮೊದಲು ಇನ್ನೊಂದು ದೀಪದಿಂದ ಮತ್ತೊಂದು ದೀಪವನ್ನು ಪರಿಕ್ರಮವಾಗಿ ಪರಿಶುದ್ಧವಾಗಿ ಬೆಳಗಿಸಬೇಕು. ಬತ್ತಿಯನ್ನು ಬೆರಳಿನಿಂದ ದೂಡುವುದು ಮುಂದೆ ಮಾಡುವುದು ನಿಷಿದ್ಧ ಇದನ್ನೆಲ್ಲಾ ನಾವು ಯಾವ ಮುಲಾಜು ಇಲ್ಲದೆ ಮರೆತುಬಿಡುತ್ತೇವೆ.

ಮೊನ್ನೆ ಒಂದು ಸಮಾರಂಭದಲ್ಲಿ ಝಗಝಗಿಸುವ ವೇದಿಕೆಯ ಪಕ್ಕದಲ್ಲಿ ಇರಿಸಿದ ಪುಟ್ಟದೀಪಬೆಳಗಿಸುವ ಮಹಾಪುರುಷನನ್ನು ಕಂಡು ನನ್ನ ಮೊಮ್ಮಗಳು ಕೇಳಿದಳು: ತಾತಾ ಅಲ್ಲಿ ಯಾಕೆ ದೀಪ ಹಚ್ತಾರೆ? ಕತ್ತಲೆ ಇಲ್ಲವಲ್ಲ?"

ಈ ಪ್ರಶ್ನೆಗೆ ಉತ್ತರ ಕೊಡಲು ಬಹಳ ಹೊತ್ತು ಹಲವು ಪ್ರಶ್ನೆಗಳಿಗೆ ಉತ್ತರಿಸಿ ಸಮ ಜಾಯಿಸಬೇಕಾಯಿತು.

ಅಂದರೆ ನಮ್ಮ ಆಚರಣೆಗಳು ಒಂದ ಸಣ್ಣ ಮಗುವೂ ಪ್ರಶ್ನಿಸುವಷ್ಟು ಕೆಲವು ಸಲ ಬಾಲಿರುತ್ತವೆ.

ನಮ್ಮ ಎಲ್ಲ ನಡವಳಿಕೆಗಳೂ ಸತ್ಯಂ ಶಿವಸುಂದರದ ಸಂಪುಟಗಳು. ಅವುಗಳಲ್ಲಿ ಸಾಮಾಜಿಕ ಹಿತ, ಶಾರೀರಿಕ ಸುಖ, ಮಾನಸಿಕ ನೆಮ್ಮದಿ ಅಡಗಿರುತ್ತಿತ್ತು. ಆ ರೀತಿ ಅವುಗಳನ್ನು ಸಂಯೋಜಿಸಿದ್ದರು.

ಈಗ ಅತಿಥಿಗಳ ಕಡೆ ನೋಡುವ, "ಅತಿಥಿ" ಶಬ್ದಕ್ಕೆ ನಿಘಂಟು ನೀಡುವ ಅರ್ಥದಂತೆ ಕರೆಯಿಲ್ಲದೆ ಅಕಸ್ಮಾತಾಗಿ ದಾರಿಯಲ್ಲಿ ಹೋಗುತ್ತಿದ್ದು ಮನೆಗೆ ಬಂದವನು ಅತಿಥಿ. ನಾವು ಕರೆಯುವುದಿಲ್ಲ. ಎಲ್ಲಿಗೋ ಹೋಗುತಿದ್ದವನು ನಮಲ್ಲಿಗೆ ಬಂದ. ಅವನು ಅತಿಥಿ. ಆದರೆ ನಮ್ಮ ಸಮಾರಂಭದ ಮುಖ್ಯ ಅತಿಥಿ ಅಥವಾ ಅತಿಥಿಗಳು ಹತ್ತು ಸಲ ಹೇಳಿಸಿಕೊಂಡು ಕಾರ್ಯಕ್ರಮದ ಅರ್ಧ ಗಂಟೆಗೆ ಮೊದಲೊಮ್ಮೆ ಕರೆಸಿಕೊಂಡು ಕಾದು ಕಾದು ನಂತರ ಬರುತ್ತಾನೆ-ಬರುತ್ತಾರೆ. "ಚೀಫ್‌ಗೆಸ್ಟ್" ಇದನ್ನು ಕಂಡು ನಮ್ಮ ಹುಡುಗರು, ನಗುತ್ತಾರೆ. (ಅವರಿಗೆ ಅತಿಥಿ ಶಬ್ದದ ಅರ್ಥ ತಿಳಿದಿದ್ದರೆ ಮಾತ್ರ)" ಇಲ್ಲದಿದ್ದರೆ ನಗುವುದು– "ಎಷ್ಟು ಜನ ಅತಿಥಿಗಳು? ಇವರೆಲ್ಲಾ ಯಾಕೆ ? ಎಂದು ಹಾಸ್ಯ ಮಾಡಿ.

ಇಂಥ ಹತ್ತಾರು ಅರ್ಥವಿಲ್ಲದ ನಡವಳಿಕೆಗಳು ನಮ್ಮಲ್ಲಿ ಬೇರು ಬಿಟ್ಟವೆ ಅವುಗಳ ಫ್ಯಾಶನ್ ಆಗಿವೆ. ಅಂಥವುಗಳಲ್ಲಿ ಬಿರುದು" ನೀಡುವುದು ಕೂಡಾ ಒಂದು. ಈ ಬಿರುದು ನೀಡುವ ಪರಿಪಾಠ ನಮ್ಮ ಮೂಲದ್ದಲ್ಲವೆಂದು ಕಾಣುತ್ತದೆ. ಇದು ಆಂಗ್ಲರಿಂದ ಬಂದುದು. ಆಂಗ್ಲರು ನಮ್ಮವರಿಗೆ ಬಿರುದು ನೀಡಿ ಪೂಸಿಮಾಡಿ ಕಿಸೆಗೆ ಇಳಿಸಿಕೊಳ್ಳುತ್ತಿದ್ದರು. ಅವರ ಕಾರ್ಯ ಸಾಗಲು ನಾವು ಸುಮ್ಮನಿರಬೇಕಾಗಿತ್ತು

ಹಾಗಾಗಿ ಹಾಗೆ ಮಾಡುತ್ತಿದ್ದರು. ಆದರೆ ನಾವು? ಭಾರತದ ಕಲ್ಪನೆಯೇ ಇಲ್ಲದೆ ವ್ಯಕ್ತಿಗೆ ಆದರ ಉದ್ದಗಲ ತಿಳಿಯದವನಿಗೆ "ಭಾರತರತ್ನ" ಬಿರದು ನೀಡುತ್ತೇವೆ. ಶಂಕರ ಮಧ್ವರಂತಹ ಮಹಾನ್ ವ್ಯಕ್ತಿಗಳಿಗೂ ಭಾರತರತ್ನ ಎಂದು ಬಿರುದು ಸಲ್ಲುತ್ತದೋ ಇಲ್ಲವೋ ಸಂಶಯ ಅಂಥದರಲ್ಲಿ ಯಾರನ್ನೋ ಖುಶಿಗೊಳಿಸಲು ಯಾರಿಗೋ ಪೂಸಿಮಾಡಲು ಏನೋ ಒಂದು ಬಿರುದು ನೀಡಿಬಿಡುತ್ತೇವೆ.

ಮೊನ್ನೆ ಮೊನ್ನೆಯವರೆಗೆ ಧರ್ಮ ಸಂಪ್ರದಾಯ ದೇವರು ಬ್ರಾಹ್ಮಣಗಳನ್ನು ಹೀನಾಮಾನಾ ನಿಂದಿಸಿದ ವ್ಯಕ್ತಿಗೆ ಒಮ್ಮಿಂದೊಮ್ಮೆಗೇ "ಧರ್ಮಧುರಂಧರ" ನೆಂದು ಬಿರುದು ನೀಡಿ ಸಮ್ಮಾನಿಸಲು ಹಿಂಜರಿಯುವುದಿಲ್ಲ. ಅದು ಒಂದು ವಿಧದಲ್ಲಿ ಬೊಗಳುವ ಬಾಯಿಗೆ ಬಿರಡೆ ಹಾಕಿದ ಹಾಗೆ, ಇದರಿಂದ ಆತ್ಮವಂಚನೆ ಮಾಡಿಕೊಳ್ಳು ತ್ತಿರುವುದು ನಮಗೇ ತಿಳಿಯುವುದಿಲ್ಲ ವೆಂದಾದರೂ ನಮ್ಮ ಮುಂದಿನ ಪೀಳಿಗೆ ಯುವಕ ರಿಗೆ ತಿಳಿದೇ ತಿಳಿಯುತ್ತದೆ ಅವರು ನೋಡಿ ನಗುತ್ತಾರೆ. ನಮ್ಮ ಹಿಪೋಕ್ರಸಿ ಅವರಿಗೆ ತಿಳಿಯುತ್ತದೆ.

ಹೀಗೇ ಬಹುಮಾನ ವಿತರಣೆ, ವಂದನಾರ್ಪಣೆಗಳೂ ಹಾಸ್ಯದ ಸಾಮಾಗ್ರಿಗಳಾ ಗಿವೆ. ಬಹುಮಾನವನ್ನು ಸ್ಟೀಲ್‌ತಟ್ಟೆ, ಪೆನ್ಸಿಲ್, ಪುಸ್ತಕಗಳ ಮಟ್ಟಿಕ್ಕೆ ಇಳಿಸಿ ವಿತರಣೆ ಮಾಡುವ ಹಾಸ್ಯಾಸ್ಪದ ಕಾರ್ಯ ಮಾಡದಿರುವ ಶಾಲಾ ಕಾಲೇಜುಗಳೇ ಇಲ್ಲ. ಮಾನವನ್ನು 'ಬಹು' ಮಾಡುವುದು ಸಾಧ್ಯ. ಆದರೆ ಅದನ್ನು ವಿತರಿಸುವುದು ಹೇಗೆ ಎಂದು ಯಾರು ಯೋಚಿಸುವುದೇ ಇಲ್ಲ. ವಿತರಿಸಲಿ ಹುಡುಗ ಹುಡುಗಿಯರಿಗೆ ಉಪಯುಕ್ತ ಇನಾಮು " ಕೊಡಲಿ ಖುಷಿಗಾಗಿ ಮೆಚ್ಚುಗೆ ವ್ಯಕ್ತಪಡಿಸಲು ಇನಾಂ ಕೊಡಬಹುದು. ಹಾಗೇ ವಂದನೆಯನ್ನು ಅರ್ಪಿಸುವುದು ಸಾಧ್ಯ ವಿಲ್ಲ ವಂದಿಸಬಹುದು. ವಂದನೆ ಎಂದು ಹೇಳಬಹುದು ಧನ್ಯವಾದ ಹೇಳಬಹುದು ಹೊರತ ವಂದನೆ ಅರ್ಪಿಸುವುದು ಬೇಡ, ಸರಿಯಾಗುವುದಿಲ್ಲ.

ಹಾಗೆ ಆರಂಭದಲ್ಲಿ ಸ್ವಾಗತಿಸವುದೂ ಕೂಡ ಒಂದು ರೀತಿಯ ಪ್ರಹಸನವಾಗಿದೆ ಸ್ವಾಗತ ಭಾಷಣ''ವೂ ಇದರ ಜೊತೆಗೆ ಸೇರುತ್ತದೆ ಅದರ ಬದಲು ಅತಿಥಿಗಳ ಪರಿಚಯ ಆಹ್ವಾನಿತರ ಪರಿಚಯ ಪ್ರಸ್ತಾವನೆ ಇತ್ಯಾದಿಗಳನ್ನು ಹಮ್ಮಿಕೊಳ್ಳಬಹುದು. ಗೇಟಿನ ಹತ್ತಿರವೇ ನಿಂತು ಕೈಕುಲುಕಿ ಒಳಗೆ ಕರಕೊಂಡು ಬರುವುದೇ, ಸ್ವಾಗತಂ ಎಂದು ಹೇಳು ವುದೇ ಸಾಕು ಸ್ವಾಗತಂ ಎಂದು ಹೇಳುವ ಗೀತೆ ಹಾಡುವುದಿದ್ದರೆ ಬರುವಾಗಲೇ ಹೇಳಲಿ ಬಂದು ಕುಳಿತ ನಂತರ ಸರಿಬರುವುದಿಲ್ಲ ಜೊತೆಗೆ ''ಸುಸ್ವಾಗತಂ'' ಎಂದು ಹೇಳಬಾರ ದೆಂದೂ ನಾವು ತಿಳಿದಿರಬೇಕು. ಸ್ವಾಗತಂ ನಲ್ಲೇ 'ಸು ಇದೆ. ನೀವು ಸ್ವಾಗತಂ ಎಂದಾಗ ಸ್ವಾಗತಿಸಲ್ಪಟ್ಟವನು "ಸುಸ್ವಾಗತಂ" ಎಂದು ಉತ್ತರಿಸಬೇಕೇ ಹೊರತು ನೀವೇ ಸುಸಾಗತ ಎಂದು ಹೇಳಬಾರದು.

ಹಾಗೇ ಇತರ ಹಲವು ಅಬ್ದಗಳ ಜೊತೆಗೆ ಮನರಂಜನಾ ,, ಕಾರ್ಯಕ್ರಮ ಸಾಂಸ್ಕೃತಿಕ ಕಾರ್ಯಕ್ರಮಗಳೂ ಸೇರುತ್ತವೆ. " ಡಿಸ್ಕೊಡಾನ್ಸ್ " ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಸೇರಿಸಿದರೆ ಹೇಗೆ. ಭೂತದ ಕೋಲ ಹೇಗೆ ಸಾಂಸ್ಕೃತಿಕ ಕಾರ್ಯಕ್ರಮವೋ ಮನರಂಜನೆಯೋ ಹೇಗೆ ಆಗುತ್ತದೆ. ಆದು ಆರಾಧನಾ ಪದ್ಧತಿ ಆದಕ್ಕೆ ಒಂದು ವಿಶಿಷ್ಟ ರೀತಿಯ ಗೌರವ ಇದೆ. ಕುಡುಕನ ವೇಷ ಹಕಿ ಬಾಟ್ಲನಲ್ಲಿ ಬಿಳಿ ನೀರು ಹಿಡಿದುಕೊಂಡು ತೂರಾಡುವ ಬಾಲಕನ ಬಾಲಿಶ ಕಾರ್ಯಕ್ರಮ ಮನರಂಜನಾ ಕಾರ್ಯಕ್ರಮವೇ ? ಸಾಂಸ್ಕೃತಿಕ ಕಾರ್ಯಕ್ರಮವೇ ? ಇದಕ್ಕೆಲ್ಲಾ ನಾವು ಕಣ್ಣಿದ್ದ ಕುರುಡರ ಹಾಗೆ ನೋಡುತ್ತ ಸುಮ್ಮನಿರುತ್ತೇವೆ.

ವಿದೇಶಿಯರಲ್ಲಿ " ಮ್ಯಾನರ್ಸ್" ಎಟಕಿಸಿ ಮುಂತಾದ ಪಧಗಳ ಹಿನ್ನೆಲೆಗೆ ನಡವಳಿಕೆ ಶಿಷ್ಟಾಚಾರಗಳನ್ನು ಕಲಿಸಿಕೊಡುವ ವ್ಯವಸ್ಥೆಯೇ ಇದೆ. ಆದರೆ ನಮ್ಮ ಮಕ್ಕಳಿಗೆ ನಾವು ಈ ರೀತಿ ನಮ್ಮ ಸಂಪ್ರದಾಯ, ಸಂಸ್ಕೃತಿಯ ಶಿಷ್ಟಾಚಾರ ಕಲಿಸಿದ್ದೇವೆಯೆ

ಮನೆಗೆ ಅತಿಥಿ ಬಂದರೆ ಆವರನ್ನು ಸ್ವಾಗತಿಸುವ, ಮಾತಾಡಿಸುವ ಕುಶಲ ಪ್ರಶ್ನೆ ಕೇಳುವ ಪ್ರಶ್ನಿಸುವ ಕ್ರಮವನ್ನು ನಾನೆ ತಿಳಿದಿಲ್ಲವೆಂದ ಮೇಲೆ ಮುಂದಿನ ಪೀಳಿಗೆಗೆ ಯಾರು ತಿಳಿಸಬೇಕು? ಲಕ್ಷಣವಾಗಿ ಕೈಮುಗಿದು ನಮಸ್ತೆ ಅಂತ ಹೇಳಲು ದೂರದರ್ಶನದಲ್ಲಿ ಮುಖ ತೋರುವ ಜನರಿಗೆ ವಾರಗಟ್ಟಲೆ ತರಬೇತಿ ನೀಡಿದ್ದರಂತೆ. ದೇವಸ್ಥಾನಕ್ಕೆಹೋದರೆ ಅಲ್ಲಿ ವರ್ತಿಸಬೇಕಾದ ಕ್ರಮ ನಾನು ತಿಳಿದಿಲ್ಲವೆಂದ ಮೇಲೆ ಮಕ್ಕಳಿಗೆ ಎಷ್ಟು ತಿಳಿದೀತು ತೀರ್ಥ ತೆಗೆದುಕೊಳ್ಳುವುದು ಹೇಗೆ, ಆದನ್ನು ಸೇವಿಸುವುದು ಹೇಗೆ ಸೇವಿಸಿದನಂತರ ಕೈ ಒರಸಿ ಕೊಳ್ಳುವುದು ಹೇಗೆ? ದೇವರಿಗೆ ನಮಸ್ಕರಿಸುವುದು ಹೇಗೆ ಯಾವ ದೇವರಿಗೆ ಎಷ್ಟು ಪ್ರದಕ್ಷಿಣೆ ಹಾಕಬೇಕು ಎಂದೆಲ್ಲ ನಮಗೆ ಕಲಿಸುವರ್ಯಾರು?

ಮೂರರ ಮಗುವನ್ನು ಕಾನ್ವೆಂಟ್ ಶಾಲೆಗೆ ಕಳಿಸಿ ಆಂಗ್ಲಮಾದರಿಯ ಹಲೋ ಟಾಟಾ, ಬೈಬೈ ಗುಡ್‌ಮಾರ್ನಿಂಗ್ ಥ್ಯಾಂಕ್ಯೂ, ಸ್ಸಾರೀ, ಎಕ್ಸಕ್ಯೂಸ್ 'ಮೀ ಗಳ ಪರಿಪಾಟ ಮಾಡಿಸಿ ಖುಷಿಪಡುವ ತಂದೆ ತಾಯಿಗಳು ನಾವು ಭಾರತೀಯರು. ನಮಗೆ ನಮ್ಮದೇ ಆದ ಸಂಸ್ಕೃತಿ ಇದೆ ಎಂಬ ಸಂಗತಿ ಮರೆತಿದೆ. ಈಗಲಾದರು ನಾವು ಕಲಿತು ನಮ್ಮ ಮಕ್ಕಳಿಗೆ ನಮ್ಮ ಸಂಸ್ಕೃತಿಯ ಪಾಠ ಕಲಿಸುವುದು ಉತ್ತಮ.

---

ನುಡಿದರೆ ಮುತ್ತಿನ ಹಾರದಂತಿರಬೇಕು
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು
ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು
ನುಡಿದರೆ ಲಿಂಗಮೆಚ್ಚಿ ಆಹುದಹುದೆನಬೇಕು
ನುಡಿಯೊಳಗಾಗಿ ನಡೆಯದಿದ್ದರೆ ಕೂಡಲಸಂಗಮದೇವನೆಂತೊಲಿವನಯ್ಯ

- ಬಸವಣ್ಣನವರು.

## ಕಡಿಮೆ ಹಣ ಖರ್ಚು ಮಾಡಿ
## ಹೆಚ್ಚು ಬಟ್ಟೆಗಳನ್ನು ಒಗೆಯಿರಿ.

- ಇದೀಗ ನೀವು ಸಾಬೂನಿಗೆ ಕಡಿಮೆ ಹಣ ಖರ್ಚು ಮಾಡಿ ಹೆಚ್ಚು ಬಟ್ಟೆಗಳನ್ನು ಒಗೆಯಬಹುದು.
- ಕಸ್ತೂರಿ ನೀಲಂ ಹಾಗೂ ಕಸ್ತೂರಿ ಬಾರ್ ಸೋಪ್ ಉಪಯೋಗಿಸುವುದರಿಂದ ಇದು ಸಾಧ್ಯ.
- ಕಸ್ತೂರಿ ಸಾಬೂನುಗಳು ಬಹು ಉಳಿತಾಯಕರವಾದುದು ಅಲ್ಲದೆ, ಪ್ರತಿ ಬಾರ್ ಸೋಪಿನಿಂದಲೂ ಹೆಚ್ಚು ಬಾರಿ ಒಗೆಯಲು ಸಾಧ್ಯವಾಗುತ್ತದೆ.
- ಇದರಲ್ಲಿ ವಿಶೇಷ ಡಿಟರ್ಜೆಂಟುಗಳು ಮಿಶ್ರಿತವಾಗಿರುವುದರಿಂದ ನಿಮ್ಮ ಉಡುಪುಗಳು ಬಿಳುಪಿಗಿಂತಲೂ ಅತ್ಯಧಿಕ ಉಜ್ವಲವಾಗಿರುತ್ತವೆ.

ಸ್ತೂರಿ ಸಾಬೂನುಗಳನ್ನು ಇಂದೇ ಉಪಯೋಗಿಸಿರಿ

**'ಕಸ್ತೂರಿ'**
**ಾರ್ ಸೋಪ್**

**'ಕಸ್ತೂರಿ'**
**ನೀಲಂ ಬಾರ್ ಸೋಪ್**

ತಯಾರಕರು:

ರಾಮಕೃಷ್ಣ ಆಯಿಲ್ ಮಿಲ್, ತುಮಕೂರು

# ಶಿಕ್ಷಣ ಮತ್ತು ಮಾತು

ಕರ್ಕಿ ಸುಬ್ರಾಯ ಭಟ್ಟ, ಸಹಶಿಕ್ಷಕರು, ಹಿಂದೂ ಹೈಸ್ಕೂಲ್, ಕಾರವಾರ (ಉ.

ವೈದ್ಯ ಮಾಡಿದ ತಪ್ಪು ಹೂಳಲ್ಪಡುವುದು. ವಕೀಲ ಮಾಡಿದ ತಪ್ಪು "ಹಾಕಲ್ಪಡುವುದು. ಆದರೆ ಶಿಕ್ಷಕಮಾಡಿದತಪ್ಪು ಶತಮಾನದುದ್ದಕ್ಕೂ ಪ್ರೇತ ತೆವಳುವುದು" ಎನ್ನುವ ಮಾತಿದೆ.

ಶಿಕ್ಷಕನು ತನ್ನ ವ್ಯಕ್ತಿತ್ವವನ್ನು ಬೆಳಸಿಕೊಳ್ಳಲು ಆತನ ಮಾತು ಅತ್ಯಂತ ಪ್ರ ಬೀರುವುದು. ಪ್ರಭಾವಿ ಶಿಕ್ಷಕನಾಗಲು ಮಾತು ಅತೀ ಅವಶ್ಯಕ. ಶಿಕ್ಷಕನ ಪ್ರತಿಯೆ ಮಾತು ಮಗುವಿನ ಮೇಲೆ ಪ್ರಭಾವ ಬೀರುವುದು. ಮಗುವಿಗೆ ಶಿಕ್ಷಕನ ಮಾತೇ ವಾಕ್ಯವಾಗಿರುತ್ತದೆ. ಆದರಿಂದ ಶಿಕ್ಷಕ ತನ್ನ ಮಾತಿನಲ್ಲಿ ಕೆಲವೊಂದು ಮ ಅಂಶವನ್ನು ಅಳವಡಿಸಿಕೊಳ್ಳ ಬೇಕಾದುದು ಅತಿ ಅವಶ್ಯ.

"ಸತ್ಯಂಬ್ರೂಯಾತ್ ಪ್ರಿಯಂ ಬ್ರೂಯಾತ್<br>
ನಬ್ರೂಯಾತ್ ಸತ್ಯಮ ಪ್ರಿಯಮ್"

ಎಂಬಂತಹ ನುಡಿಯನ್ನು ಶಿಕ್ಷಕ ಅಳವಡಿಸಿಕೊಳ್ಳಬೇಕು. ಮಾತನ್ನು ಅ ಭಾವಿಗಳು 'ಜ್ಯೋತಿರ್ಲಿಂಗ' ಎಂದು ಹೇಳಿದ್ದಾರೆ, ಹಾಗೆಯೇ ಬಸವಣ್ಣನ ಮಾತನ್ನು ಕುರಿತು ಈ ಕೆಳಗಿನಂತೆ ಹೇಳಿದ್ದಾರೆ!

ನುಡಿದರೆ ಮುತ್ತಿನ ಹಾರದಂತಿರಬೇಕು!<br>
ನುಡಿದರೆ ಮಾಣಿಕ್ಯದ ದೀಪ್ತಿಯಂತಿರ ಬೇಕು!<br>
ನುಡಿದರೆ ಸ್ಫಟಿಕದ ಶಲಾಕೆಯಂತಿರ ಬೇಕು!<br>
ನುಡಿದರೆ ಲಿಂಗ ಮೆಚ್ಚಿ ಅಹುದೆನ ಬೇಕು!

"ಮಾತೇ ಮುತ್ತು, ಮಾತೇ ಮೃತ್ಯು" ಅದಕ್ಕಾಗಿ ಶಿಕ್ಷಕನು ಈ ನೀತಿಯ ಅರಿತು ಮಾತನಾಡಬೇಕು.

ಮಾತನ್ನು ಕುರಿತು ಸರ್ವಜ್ಞನ ಕವಿಯು

"ಎದ್ದು ಮಾತಾಡದಿರು, ಎದ್ದೆದ್ದು ನಿಲ್ಲದಿರು!<br>
ಇದ್ದ ಮನುಜರನು ನೀ ಹಳಿಯದಿರು<br>
ಜಗದೊಳಿದ್ದಾಗ ನೀನು ಸರ್ವಜ್ಞ"

ಎಂದು ವಿವರಿಸಿ ಎಲ್ಲರನ್ನು ದೂಷಿಸಿ ನೀನು ದೊಡ್ಡವನಾಗದಿರು ಎಂಬ ಮಾತ ತಿಳಿಸಿಹೇಳಿ ತಾನೇ ಶ್ರೇಷ್ಟ ಎಂದು ಬೀಗದಿರುವಂತೆ ಹೇಳಿದ್ದಾನೆ ಆದಕ ಶಿಕ್ಷಕನು ಕೇವಲ ವಾಚಾಳಿಯಾಗದೆ ಇನ್ನೊಬ್ಬರ ಮಾತಿಗೂ ಅವಕಾಶ ಕಲ್ಪಿಸಬೇ

‘ಮಾತು’ ಒಂದು ಕಲೆ ಇದು ಎಲ್ಲರಿಗೆ ಸಿದ್ಧಿಸುವುದಿಲ್ಲ. ಇಂದು ಸ್ಪರ್ಧಾತ್ಮಕ ಯುಗ. ಇಲ್ಲಿ ಪ್ರತಿಯೊಂದು ಮಾತು ಪ್ರತಿಯೊಬ್ಬರ ಮೇಲೆ ಪ್ರಭಾವ ಬೀರುವದು ಹಾಗೇ ಪ್ರಭಾವ ಬೀರುವ ಮಾತುಗಾರಿಕೆಕೂಡ ಒಂದು ಕಲೆ. ಎಲ್ಲರೂ ಮಾತನಾಡಿದರೂ ಸಹ ಎಲ್ಲರ ಮಾತಿಗೆ ಬೆಲೆ ಬರುವದಿಲ್ಲ. ಕೆಲವೇ ಕೆಲವರು ಮಾತ್ರ ಪ್ರಭಾವ ಬೀರುವಂತೆ ಮಾತನಾಡಬಲ್ಲರು ಅದಕ್ಕೆ ಇನ್ನೊಬ್ಬರ ಮನಸ್ಸನ್ನು ಅರ್ಥಮಾಡಿಕೊಳ್ಳುವ "ಸೈಕಾಲಾಜಿಕಲ್ ಮೈಂಡ್" ಅತಿ ಅಗತ್ಯ ಅದಕ್ಕಾಗಿ ಶಿಕ್ಷಕ ಇಂತಹ ತಲೆಯನ್ನು ಬೆಳಸಿಕೊಳ್ಳುವದು ಅತೀ ಅವಶ್ಯಕವಾಗಿದೆ.

ಶಿಕ್ಷಕರ ಆಸ್ತಿಯೆಂದರೆ ಮಕ್ಕಳು. ಮಕ್ಕಳಿಗೆ ಮಾತನಾಡಲು ಅವಕಾಶ ಕೊಡದೆ ತಾನೇ ಸರ್ವಜ್ಞನೆಂದು ತಿಳಿದು ಶಿಕ್ಷಕನು ಮಕ್ಕಳ ಪ್ರತಿಭೆಯನ್ನು ವ್ಯಕ್ತಿತ್ವವನ್ನು ಕುಗ್ಗಿಸುವದು ಸೂಕ್ತವಲ್ಲ, ಯಾವ ಹುತ್ತದಲ್ಲಿ ಯಾವ ಹಾವೊ! ಹಾಗೆಯೇ ಮಕ್ಕಳಲ್ಲಿರುವ ಪ್ರತಿಭೆಗೆ ತಣ್ಣೀರೆರಚದೆ ಅವರ ಮಾತಿಗೂ ಅವಕಾಶ ಕಲ್ಪಿಸುವದು ಶಿಕ್ಷಕನ ಕರ್ತವ್ಯ

ಮಾತುಗಾರಿಕೆಯಲ್ಲಿ ಧ್ವನಿಯ ಏರಿಳಿತ, ಹಾವ ಭಾವವು ಪ್ರಭಾವ ಬೀರುವದರಿಂದಾಗಿ ಶಿಕ್ಷಕನು ಈ ಕಲೆಯನ್ನು ರೂಢಿಸಿಕೊಳ್ಳುವದು ಅತೀ ಅವಶ್ಯ.

ಶಿಕ್ಷಕನ ವ್ಯಕ್ತಿತ್ವದ ಕನ್ನಡಿ ಎಂದರೆ "ಮಾತು" ಅದಕ್ಕಾಗಿ ಶಿಕ್ಷಕನು "ತಾ ಆಡಿದ್ದೇ ವೇದ ವಾಕ್ಯ" ಎಂದು ಸಾಧಿಸದೆ ಮಕ್ಕಳ ಹಾಗೂ ಇತರರ ಮಾತಿಗೆ ಬೆಲೆ ಕೊಡಬೇಕು. "ಮಾತರಿದವ ಜಗಳತಂದ, ಮಾತು ಬಲ್ಲವ ಮಾಣಿಕತಂದ" ಎಂಬಂತೆ ಅರಿತು ಮಾತನಾಡಬೇಕು. "ನಾಲಿಗೆ ಒಳ್ಳೆಯದಾದರೆ ನಾಡೆಲ್ಲ ಒಳೆಯದು" ಎಂಬಂತೆ ಒಳ್ಳೆಯ ಮಾತನಾಡಿ "ಮನಿ ಹೋದ್ರುಮಾತು ಉಳಿಯಬೇಕು" ಎನ್ನುವಹಾಗೆ ಮಾತನ್ನು ಉಳಿಸಿಕೊಳ್ಳಬೇಕು.

"ಮಾತು ಆಡಿದ್ರೆ ಹೋಯ್ತು ಮುತ್ತು ಒಡೆದರೆ ಹೋಯ್ತು' ಅದಕ್ಕಾಗಿ ಶಿಕ್ಷಕ ಮಾತನಾಡುವಾಗ ಅರಿತು ಮಾತನಾಡಬೇಕು. "ಒಪ್ಪಿಲ್ಲದ ಮಾತು ತಪ್ಪಿಇಲ್ಲದ ಊಟ' ಎರಡೂ ಒಂದೇ ಆದ್ದರಿಂದ ಮಾತಿನಲ್ಲಿ ಒಳ್ಳೆಯತನ ಇರಬೇಕು. ಆತನ ಮಾತು ‘ಮರ್ಮ ಇಲ್ಲ ಮಾತು, ಒಡಕಗಡ್ಗಿ ತೂತ' ಎಂಬಂತೆ ಇರಬಾರದು.

"ಬೇಡಾದ ಮಾತು ಬೇವಿನಕಾಯಿಗಿಂತ ವಿಷ" ವಾದ್ದರಿಂದಲೂ "ಬರಮೂರು ದಿನ, ಮಾತು ಅನಗಾಲ' ಆಗಿರುವದರಿಂದಲೂ ಶಿಕ್ಷಕನು ಮಾತಿನ ಮಹತ್ವ ಅರಿತು, ಹದವರಿತು, ಮಾತನಾಡಬೇಕು. "ಮಾತು ಆಡಿದರೆ ಹೋಯ್ತು ಮುತ್ತು ಒಡೆದರೆ ಹೋಯ್ತು' ಆದ್ದರಿಂದ ಶಿಕ್ಷಕ ಮಾತನಾಡುವ ಪೂರ್ವದಲ್ಲಿ ವಿವೇಚಿಸಿ ಯೋಚಿಸಿ ಮಾತನಾಡುವದು ಅತೀ ಅಗತ್ಯ.

# ವರತಪಸ್ವಿ

ಜಿ. ರಾಧಾದೇವಿ, ಕಾದಂಬರಿಗಾರ್ತಿ, ಬೆಸ್ತವಾರಪೇಟೆ, ರಾಯಚೂರು - 584101

ಶ್ರೀ ಧರ್ಮಸ್ಥಳದ ಮಂಜಯ್ಯ ಹೆಗಡೆ ಅವರ ಮಹಾಸಾಧನೆ ಕುರಿತು ಜಾನಪದದ ರೂಪದಲ್ಲಿ ಧಾರಾವಾಹಿಯಾಗಿ ಪರಿಚಯಮಾಡಿಕೊಟ್ಟಿದ್ದಾರೆ.

ನಮ್ಮ ಶ್ರೀ ಮಂಜಯ್ಯ ಹೆಗಡೇರು ಸುವ್ವಲಾಲಿ ಅವರು ಬಂಗಾರದಂಥೊರು ಸುವ್ವಲಾಲಿ ಹಾಲು ಉಕ್ಕಿ ಹರಿದಂತೆ ಸುವ್ವಲಾಲಿ ಅವರ ಕೀರ್ತಿ ಎಲ್ಲೆಲ್ಲು ಹರಡಿತು ಸುವ್ವಲಾಲಿ

ವಿದ್ಯಾಭ್ಯಾಸದಲ್ಲಿ ಸ್ನಾತಕೋತ್ತರ ಪದವಿ ಪಡೆಯಬೇಕು, ಚಿತ್ರಕಲೆಯನ್ನು ಒಂದು ಕಲಾಶಾಲೆಯಲ್ಲಿ ಗುರುವಿನ ಮೂಲಕ ಕಲಿಯಬೇಕು ಎಂಬ ಇವರ ಕನಸುಗಳು ನೆರವೇರಲಿಲ್ಲ, ಇದಕ್ಕೆ ಕಾರಣ ಇವರಿಗೆ ಶ್ರೀ ಕ್ಷೇತ್ರದಿಂದ ಬಂದ ಕರೆ ಚಿಕ್ಕಂದಿನಲ್ಲಿಯೆ ಸುವ್ವಲಾಲಿ ಶ್ರೀಕ್ಷೇತ್ರಕ್ಕೆ ದತ್ತುಪುತ್ರರಾಗಿದ್ರು ಸುವ್ವಲಾಲಿ ಇಪ್ಪತ್ತೊಂಬತ್ತರ ಹರೆಯದಲ್ಲಿ ಸುವ್ವಲಾಲಿ ಶ್ರೀ ಕ್ಷೇತ್ರದಲ್ಲಿ ಪಟ್ಟಾಭಿಶೇಕವಾಯ್ತು ಸುವ್ವಲಾಲಿ

ಸಜ್ಜನರ ಕೈಗೆ ಅಧಿಕಾರ ಬಂದರೆ ಲೋಕಹಿತವಾಗುತ್ತದೆ, ಎಂಬ ಮಾತು ಶ್ರೀ ಮಂಜಯ್ಯ ಹೆಗಡೆಯವರ ವಿಷಯದಲ್ಲಿ ನಿಜವಾಯ್ತು. ಇಪ್ಪತ್ತೊಂಬತ್ತರ ಹರೆಯದಲ್ಲಿ ಶ್ರೀ ಧರ್ಮಸ್ಥಳದ ಧರ್ಮಾಧಿಕಾರಿಯಾಗಿ ಅಭಿಶಿಕ್ತರಾದ ಇವರು ಅನೇಕ ಲೋಕಕಲ್ಯಾಣ ಕಾರ್ಯಗಳನ್ನು ಮಾಡಿದರು, ಜನಹಿತಕ್ಕಾಗಿ ದುಡಿದರು.

ಮೊದಲು ಶ್ರೀ ಕ್ಷೇತ್ರದ ಅಭಿವೃದ್ಧಿ, ಅನಂತರ ಯಾತ್ರಿಕರಿಗೆ ಸೌಲಭ್ಯಗಳು ಎರಡನ್ನು ಇವರು ಯಶಸ್ವಿಯಾಗಿ, ನಿರ್ವಹಿಸಿದರು. ಆಗಿನ ದಿನಗಳಲ್ಲಿ ನೇತ್ರಾವತಿ ಹೊಳೆಯನ್ನು ದೋಣಿಯಲ್ಲಿ ಧಾಟಿ ಶ್ರೀ ಕ್ಷೇತ್ರಕ್ಕೆ ಬರಬೇಕಾಗಿತ್ತು. ನಡೆದು ಬರುವ ನಾಲ್ಕೈದು ಮೈಲಿಯಾ ಕಾಡು ಮೇಡುಗಳು, ಮಳೆಗಾಲದಲ್ಲಿ ಪ್ರವಾಹ ಬಂದಾಗ ಯಾತ್ರಿಕರು ನದಿ ದಾಟಲು ತುಂಬ ಶ್ರಮಪಡಬೇಕಾಗಿತ್ತು. ಕಾಡಿನಂಥಾ ಎದಿರು ದಡದಲ್ಲಿ ಪ್ರವಾಹ ಇಳಿಮುಖ ಆಗುವವರೆಗೆ ಒಂದೆರೆಡು ದಿನ ಕಾಯಬೇಕಿತ್ತು, ಶ್ರೀ ಮಂಜಯ್ಯ ಹೆಗಡೆಯವರು ಇದನೆಲ್ಲಾ ತಪ್ಪಿಸಿ ಕೆಲವು ಸೌಲಭ್ಯ ಮಾಡಿದರು.

ನೇತ್ರಾವತಿಗೆ ಸೇತುವೆ ಕಟ್ಟಿ ಸುವ್ವಲಾಲಿ
ಯಾತ್ರಿಕರಿಗೆ ಅನುಕೂಲವಾಯ್ತು ಸುವ್ವಲಾಲಿ
ವೈದಿಕ ಬ್ರಾಹ್ಮಣರ ಕರೆಸಿ ಸುವ್ವಲಾಲಿ
ಶ್ರೀದೈವಕ್ಕೆ ಹೊತ್ತು ಹೊತ್ತಿಗೆ ಹೊಸಪೂಜೆ ಸುವ್ವಲಾಲಿ

ಮಹಾಕ್ಷೇತ್ರಗಳಲ್ಲಿ ವಿಗ್ರಹಗಳಲ್ಲಿ ಭಗವಂತ ಪೂರ್ಣಾಂಶನಾಗಿ ವಿಜೃಂಭಿಸುತ್ತಾನೆ. ಆ ದೈವಿ ಆವಾಹನೆ ಸಂಪೂರ್ಣವಾಗಿ ಪ್ರಸನ್ನೀಕರಿಸಿಕೊಳ್ಳಬೇಕಾದರೆ ಹೊತ್ತು ಹೊತ್ತಿಗೆ ಮಂತ್ರೋಕ್ತ ಪೂಜೆಗಳು ವಿಶೇಷ ನೈವೇದ್ಯಗಳು ಹೊಸ ಹೊಸ ಉತ್ಸವಗಳು ಹಮ್ಮಿಕೊಳ್ಳಬೇಕು.

ದೈವಿ ಸಾಕ್ಷಾತ್ಕಾರ ಪೂರ್ಣವಾಗಿ ವಿಜೃಂಭಿಸಿದರೆ ಮಾನವರ ಎಲ್ಲಾ ಅಭೀಷ್ಟಗಳು ನೆರವೇರುತ್ತವೆ, ದೇವರ ಮೇಲೆ ಸಾಮಾನ್ಯ ಮಾನವರಿಗೂ ನಂಬಿಕೆ ಹುಟ್ಟುತ್ತದೆ, ಹೀಗೆ ಯೋಚಿಸಿ ಶ್ರೀ ಮಂಜಯ್ಯ ಹೆಗ್ಗಡೆಯವರು ವೇದ ಮಂತ್ರಗಲ್ಲಿ ಚೆನ್ನಾಗಿ ಪರಿಣಿತಿ ಪಡೆದ ಅನೇಕ ಬ್ರಾಹ್ಮಣರನ್ನು ಶ್ರೀ ಕ್ಷೇತ್ರಕ್ಕೆ ಕರೆಸಿಕೊಂಡರು ಅವರಿಂದ ಶಾಸ್ತ್ರೋಕ್ತ ಪೂಜೆ, ಬ್ರಾಹ್ಮಣ ವಟುಗಳಿಗೆ ವೇದ ಮಂತ್ರ ಕಲಿಯುವ ಏರ್ಪಾಟು ಮಾಡಿದರು.

ಆಧುನಿಕ ಸೌಲಭ್ಯ ಉಳ್ಳ ಹೊಸ ಹೊಸ ಛತ್ರಗಳು ಯಾತ್ರಿಕರಿಗೆ ವಸತಿಗಳಾದವು ಬಂದವರಿಗೆಲ್ಲಾ ರುಚಿಯಾದ-ಶುಚಿಯಾದ ಊಟಾ, ಇದೆಲ್ಲ ಇವರ ಕಾಲದಲ್ಲಿ ಕೈಗೊಂಡ ಕಾರ್ಯಗಳು. ದೇವರನ್ನು ಪೂಜಿಸಿ, ತಮ್ಮ ತೊಂದರೆ ಹೇಳಿಕೊಂಡು, ಜನ ಕಾಣಿಕೆಕಟ್ಟುತ್ತಿದ್ದರು, ತಮ್ಮ ತೊಂದರೆ ಪರಿಹಾರವಾದಾಗ, ತಮ್ಮ ಅಭೀಷ್ಟ ಪೂರ್ತಿ ಆದಾಗ ಮತ್ತೆಬಂದು ಕಾಣಿಕೆ ಸಲ್ಲಿಸುತ್ತಿದ್ದರು, ಅವ್ಯಕ್ತವಾಗಿ ಜನರ ಮನದಲ್ಲಿ ತುಂಬಿದ ಭಕ್ತಿಗೆ ಸ್ಪಂಧಿಸಲು ಶ್ರೀ ಕ್ಷೇತ್ರದ ಮಂಜುನಾಥನಿಗೆ, ತಮ್ಮ ಭಾವನೆಗಳನ್ನು ತೂಂಡಿ ಕೊಂಡವರಿಗೆ ಕತ್ತಲಿನಿಂದ ಬೆಳಕಿನತ್ತ ದಾರಿ ತೋರಲು ಅಸತ್ಯದಿಂದ ಸತ್ಯದ ಕಡೆಗೆ ದಾರಿ ತೋರಲು ಅಧರ್ಮ ತೊರೆದು—ಧರ್ಮದ ದಾರಿಗೆ ಬರಲು ಶ್ರೀ ಮಂಜಯ್ಯ ಹೆಗಡೆಯವರು ಇದ್ದರು,

ಜನರ ಸಂಕಷ್ಟಗಳ ಬಗ್ಗೆ ಅವರೊಡನೆ ವಿಚಾರ ಮಾಡಿ, ಧರ್ಮದ ಪಥದಲ್ಲಿ ನಡೆಯಿರಿ ಧರ್ಮ ನಿಮ್ಮನ್ನು ರಕ್ಷಿಸುತ್ತದೆ, ದೈವಭಕ್ತಿ ನಿಮ್ಮ ಕುಟುಂಬದ ರಕ್ಷಕವಚವಾಗುತ್ತದೆ ಎಂಬುದನ್ನು ಉದಾಹರಣೆಗಳ ಮೂಲಕ ವಿವರಿಸಿ ಜನರ ,ಅಜ್ಞಾನ ಪರಿಹರಿಸಿದರು.

ಇವರ ಕಾಲದಲ್ಲಿ ಸಾಮಾನ್ಯ ಜನರು ಸಹ ಧರ್ಮ ಪರಿಪಾಲನೆ, ದೈವಭಕ್ತಿಯಲ್ಲಿ ಹೊಸ ಬೆಳಕು ಕಂಡುಕೊಂಡರು, ಸಂಸಾರ ಪರಿಪಾಲನೆಯ ಜೊತೆಜೊತೆಗೆ ದೇವರು, ಧರ್ಮದತ್ತ ಹೇಗೆ ಮನಸು ತೊಡಗಿಸಬೇಕೆಂದು ಕಲಿತರು.

ದೂರದೂರದ ಊರುಗಳಿಗೆ, ಹಳ್ಳಿಗಳಿಗೆ ಧರ್ಮ, ದೇವರ ಬಗ್ಗೆ ಚೆನ್ನಾಗಿ ತಿಳಿದ, ಉಪನ್ಯಾಸಕಾರರನ್ನು ಕಳಿಸಿ, ಜನರಿಗೆ ಧರ್ಮದ ಸ್ವರೂಪಾ-ದೇವರ ಮಹಾನ್ ತತ್ವಗಳ ಬಗೆ ತಿಳಿಯಲು ಅವಕಾಶ ಮಾಡಿಕೊಡುತ್ತಿದ್ದರು, ಈ ವಿದ್ವಾಂಸರಿಗೆ ತಾವು ಸಂಭಾವನೆ ಕೊಡುತ್ತಿದ್ದರು,

ಗುರುವಿಂಗೆ ಗುರುವಾಗಿ ಸುವ್ವಲಾಲಿ
ಜನರಿಗೆ ಅರಿವು ತೋರಿದರೊ ಸುವ್ವಲಾಲಿ
ಸುರಗಿ ಹೂವಿನಂತೆ ಪರಮಳಿಸಿ ಸುವ್ವಲಾಲಿ
ವರತಪಸ್ವಿ ಶ್ರೀ ಮಂಜಯ ಹೆಗಡೇರು ಬಾಳಿದ್ರೊ ಸುವ್ವಲಾಲಿ,

# ವಿದ್ಯಾರ್ಥಿ ಜೀವನದ ಬೆಳಕು ಸರಣಿ. ಲೇಖನ-೧

ಬಿ. ಎಸ್. ಕೃಷ್ಣಮೂರ್ತಿ ನಂ 5. ಸೀತಾ ವಿಲಾಸ್ ರಸ್ತೆ. ಮೈಸೂರು – 570 024

**ಜೀವನದ ಮುಖ್ಯಾಧಾರ:** ಬಡವನಾಗಲಿ, ಬಲ್ಲಿದನಾಗಲಿ ಅವನ ಹಾನಿ, ವೃದ್ಧಿಗೆ ಮೂಲಬಿಂದು ಆರೋಗ್ಯ! ಆರೋಗ್ಯವೇ ನಿಜವಾದಭಾಗ್ಯ, ಅದರಲ್ಲೂ ವಿದ್ಯಾರ್ಥಿಗಳು ಗಮನಿಸಬೇಕಾದ್ದು ಆರೋಗ್ಯ! ಇದು ಇಲ್ಲವಾದರೆ ವಿದ್ಯಾಭ್ಯಾಸದ ಪರಿಣಾಮವು ಕುಂದುತ್ತದೆ. ಸರ್ವತೋಮುಖ ವೃದ್ಧಿಗೆ ಆರೋಗ್ಯವು ಅಡಿಗಲ್ಲೆನಿಸುತ್ತದೆ. ಅದಕ್ಕಾಗಿ ಓದಿನ ವೇಳೆಯಲ್ಲಿ ವ್ಯಾಯಾಮವು ಅತ್ಯವಶ್ಯಕ.

ನಿಮ್ಮ ಪ್ರತಿಕಾರ್ಯಗಳಿಗೂ ಕಾಲವನ್ನು ನಿಗದಿಡಿಸಿಕೊಂಡು ಅದನ್ನು ಚಾಚೂ ತಪ್ಪದೆ ಕಾರ್ಯನಿರ್ವಹಿಸಬೇಕು. ಇದರಿಂದ ಹಿಡಿದ ಕೆಲಸಗಳೆಲ್ಲಾ ಸಾಂಗವಾಗಿ ನೆರವೇರುತ್ತವೆ. ವ್ಯಾಯಾಮಕ್ಕೆ ವೇಳೆ ಗೊತ್ತುಪಡಿಸಿ ಸಾಧನೆ ಮಾಡುವುದುಉತ್ತಮ.

ವ್ಯಾಯಾಮದಿಂದ ತಿಂದ ಆಹಾರವು ಕರಗಿ ರಕ್ತಗತವಾಗುವುದಲ್ಲದೆ ಮುಂದೆ ಮಾಡಬೇಕಾದ ಕಾರ್ಯಗಳಿಗೆ ಹೊಸ ಹುರುಪು ಬರುತ್ತದೆ. ಮಾನಸಿಕ ನೆಮ್ಮದಿ ಸಂತೋಷ ಇಮ್ಮಡಿಸುತ್ತದೆ. ದೇಹದ ಸ್ನಾಯುಗಳು ಬಲಿಷ್ಠವಾಗುವುವು. ಶರೀರದಲ್ಲಿ ಶೇಖರವಾದ ಕಶ್ಮಲಗಳು ಚರ್ಮದ ರಂಧ್ರಗಳಿಂದ ಬೆವರಿನ ರೂಪದಲ್ಲಿ ಹೊರಗೆ ಚೆಲ್ಲಲ್ಪಡುತ್ತವೆ.

ವ್ಯಾಯಾಮಗಳು ಅನೇಕ ವಿಧಗಳಿವೆಯೆಂಬುದು ಎಲ್ಲರಿಗೂ ತಿಳಿದಿರುವ ಅಂಶ. ಈಗಿನ ಕ್ರೀಡೆಗಳು ಮುಖ್ಯವಾಗಿ ಕಾಲು ಚೆಂಡಾಟ ಕ್ರಿಕೇಟ್, ಟೆನ್ನಿಸ್, ಬ್ಯಾಡ್ಮಿಂಟನ್ ಪೋಲ್ಲೋ, ಈಜುವುದು, ಜಿಮ್ನಾಷಿಯಮ್ ಇವು ಮುಖ್ಯ. ಈಗೀಗ ಹೆಚ್ಚಾಗಿ ಯೋಗಾಸನ, ಕರಾಟೆಗಳೂ ಹೆಚ್ಚು ಜನರನ್ನು ಆಕರ್ಷಿಸುತ್ತಿವೆ. ಸ್ಯಾಂಡೋಗಳಂತೆ ಅಂಗಸೌಷ್ಟವವುಳ್ಳವರನ್ನು ಮೆಚ್ಚುತ್ತಾರೆ. ಯೋಗಾಸನ ವಿಷಯವನ್ನು ಹೇಳುವುದಾದರೆ ದೇಹದಲ್ಲಿ ನಡೆಯುವ ಅವಯುವಗಳಿಗೆ ಸರ್ವಸಿದ್ಧಿ ಕೊಡುವ ಅಮೃತವೆನ್ನಬಹುದು. ಏಕೆಂದರೆ ಆಸನಗಳಲ್ಲಿ ಅನೇಕ ಬಗೆಗಳುಂಟು ಒಂದೊಂದು ಆಸನವನ್ನು ಮಾಡುವುದರಿಂದ ಒಂದೊಂದು ಬಗೆ ವ್ಯಾಧಿಯನ್ನು ಬುಡಮಟ್ಟ ಕಿತ್ತುಸೆಯುವ ಸಾಮರ್ಥ್ಯವಿದೆ. ವಿದ್ಯಾರ್ಥಿಗಳು ಈ ಆಸನಗಳ ಸರ್ವಪ್ರಯೋಗಗಳನ್ನು ನಡೆಸಿ ತಮ್ಮ ದೇಹ ದೊಳಗಿನ ವ್ಯಾಧಿಗಳನ್ನು ನಿವೃತ್ತಿಮಾಡಿಕೊಂಡು ವೈದ್ಯರನ್ನು ಹುಡಿಕಿ ಕೊಂಡು ಅಲೆಯುವ ಪರಿಪಾಠ ತಪ್ಪಿ, ವೈದ್ಯರಿಗಾಗಿ ತೆರುವ ಹಣ ಉಳಿತಾಯವಾಗುತ್ತದೆ.

ಇನ್ನು ಕರಾಟೆ ವಿಷಯ ಹೇಳುವುದಾದರೆ ಇದನ್ನು ಅಭ್ಯಾಸ ಮಾಡದವರು ತಮ್ಮ ಎದುರಾಳಿಗಳಿಂದ ತಾವು ಪ್ರಾಣಾಪಾಯವನ್ನು ತಪ್ಪಿಸಿಕೊಳ್ಳಬಹುದು. ಈ

ಎಲ್ಲಾ ಸಾಧನೆಗಳಿಗೂ ಅವರವರಿಗೆ ಉಚಿತವಾದ ಕ್ರೀಡೆಗಳನ್ನು ಆರಿಸಿಕೊಳ್ಳಬಹುದು ವ್ಯಾಸಂಗದ ವೇಳೆ ಮುಗಿದ ಮೇಲೆ ಈ ವ್ಯಾಯಮಗಳನ್ನು ನಿಶ್ಚಿತ ಗೊಂಡಂತೆ ವಿದ್ಯುಕ್ತ ವಾಗಿ ನಡಿಸಿ ದೇಹಾರೋಗ್ಯವನ್ನ ಕಾಪಡಿಕೊಳ್ಳಬಹುದು. ಪ್ರತಿ ವ್ಯಾಯಾಮ ಕ್ರೀಡೆ ಗಳಲ್ಲೂ ತಮ್ಮ ಗುರಿ ಶಿಸ್ತು ಮತ್ತು ವೇಳಾಕ್ರಮಗಳನ್ನು ಪಾಲಿಸಿ ಕೊಂಡು ನಡೆಯು ವುದು ಉತ್ತಮ ಮಾರ್ಗ

ಯಾರಿಗೇ ಆಗಲಿ ಬೇಕಾದಷ್ಟು ಧನ, ಭೂಮಿ, ಮನೆ ಮಠ, ಹೆಂಡತಿ, ಮಕ್ಕಳು, ದಾಸ ದಾಸೀಯ ಜನರಿದ್ದಾಗ್ಯೂ ಆರೋಗ್ಯ ಭಾಗ್ಯ ಇರದಿದ್ದರೆ, ಸುಖ ಶಾಂತಿಗಳು ಇರಲಾರವು. ಸರ್ವಕಾಲಕ್ಕೂ, ಸರ್ವಜಯಗಳಿಗೂ ಆರೋಗ್ಯದ ಪಾತ್ರ ಮುಖ್ಯವೆನಿಸಿದೆ. ಹೀಗಾಗಿ ಸಂತೋಷ ಪ್ರವೃತ್ತಿಯ ಸ್ವಭಾವ ಸ್ಥಿರವಾಗಿರುತ್ತದೆ.

ಹಿಂದಿನ ಕಾಲದಲ್ಲಿ ನಮ್ಮ ಪೂರ್ವಿಕರು ದೃಢಾಂಗರಾಗಿದ್ದುದರಿಂದ, ತಮ್ಮ ಕೆಲಸಗಳಿಗೆ ಸೇವಕರನ್ನು ನೇಮಿಸದೆ ತಾವೇ ಮಾಡಿಕೊಳ್ಳುತ್ತಿದ್ದರು. ಇವರ ಆಯುಸ್ಸು ಸಹ ಹೆಚ್ಚಾಗಿಯೇ ಇರುತ್ತಿತ್ತು. ಆ ಹಿರಿಯರು ಕಾಫಿ, ಟೀಗಳನ್ನು ಸೇವಿಸುತ್ತಿರಲಿಲ್ಲ. ಕಾಲವರಿತು ಆಹಾರ ಸೇವಿಸುತ್ತಾ, ದೇವತಾ ಕಾರ್ಯಗಳಿಂದ ಮನಸ್ಸನ್ನು ಹತೋಟಿಯಲ್ಲಿ ಇಟ್ಟುಕೊಳ್ಳುತ್ತಿದ್ದರು.

ಆದುದರಿಂದ ಮೇಲೆ ವಿವರಿಸಿರುವ ವಿಷಯುಗಳನ್ನು ವಿದ್ಯಾರ್ಥಿಗಳು ಗಮನಿಸಿ, ತಮ್ಮ ಏಳಿಗೆಗೆ ಸಾಧನವಾದ ಆರೋಗ್ಯದ ಕಡೆ ಲಕ್ಷ್ಯ ಕೊಟ್ಟು ಕೀರ್ತಿಶಾಲಿಗಳಾಗುವ ಮಾರ್ಗ ಅನುಸರಿಸಬೇಕು.

‡‡ ‡‡ ‡‡

ಕೊಲ್ಲುವವನೇ ಮಾದಿಗ, ಹೊಲಸು ತಿಂಬುವನೇ ಹೊಲೆಯ
ಕುಲವೇನೋ ಆವಂದಿರ ಕುಲವೇನೋ
ಸಕಲ ಜೀವಾತ್ಮರಿಗೆ ಲೇಸನೇ ಬಯಸುವ
ನಮ್ಮ ಕೂಡಲಸಂಗನ ಶರಣರೇ ಕುಲಜರು

– ಬಸವಣ್ಣನವರು.

ತುಮಕೂರಿಗೆ ಬರುವವರಿದ್ದೀರಾ? ಹಾಗಿದ್ದರೆ,
ವಸತಿ, ತಿಂಡಿ ತಿನಿಸುಗಳ ನಮ್ಮ ಈ ಸ್ಥಳಗಳು ಸದಾ ನಿಮ್ಮನ್ನು ಸ್ವಾಗತಿಸುತ್ತಿವೆ

**ಹೋಟೆಲ್**
**ಶ್ರೀ ನಂಜುಂಡೇಶ್ವರ**
ಊಟ, ವಸತಿ ಮತ್ತು
ಉಪಹಾರ ಮಂದಿರ,
ಬಿ.ಹೆಚ್. ರಸ್ತೆ, ತುಮಕೂರು-1
ದೂರವಾಣಿ
8597, 2373, 2577




**ಶ್ರೀ ನಂಜುಂಡೇಶ್ವರ**
**ಬೇಕರಿ**
ತುಮಕೂರು ಜಿಲ್ಲೆಯ ಪ್ರಖ್ಯಾತ
ಬೇಕರಿ
ಚಿಕ್ಕಪೇಟೆ ತುಮಕೂರು-1
ದೂರವಾಣಿ : 8077

**ಶ್ರೀ ನಂಜುಂಡೇಶ್ವರ ರೆಸ್ಟೋರೆಂಟ್**
ತುಮಕೂರಿನಲ್ಲಿ ಉತ್ತರ ಭಾರತದ ಶೈಲಿಯ ಊಟ
ಉಪಹಾರಗಳ ಶ್ರೇಷ್ಠ ದರ್ಜೆಯ ರೆಸ್ಟೋರೆಂಟ್
ಬಿ.ಹೆಚ್. ರಸ್ತೆ, ತುಮಕೂರು-1
ದೂರವಾಣಿ : 2677

**ಶ್ರೀ ನಂಜುಂಡೇಶ್ವರ ಸ್ವೀಟ್ಸ್**
ಎಲ್ಲಾ ವಿಧವಾದ ಸಿಹಿ ಮತ್ತು ಖಾರ ತಿಂಡಿ ಹಾಗೂ
ಬೇಕರಿ ತಿನಿಸುಗಳ ನಗರದ ಏಕೈಕ ಸ್ಥಳ
ಅಶೋಕ ರಸ್ತೆ ತುಮಕೂರು-1
ದೂರವಾಣಿ : 2077

# ಭಿಕ್ಷುಕರ ಹಳ್ಳಿ—ಇನ್ನಾದರೂ ಬದಲಾದೀತೆ!

ಬಿ. ಸುಬ್ರಾಯ ಅಡಿಗ, ನಿವೃತ್ತ ಅಧ್ಯಾಪಕರು, ಸಂಡೂರು, ಬಳ್ಳಾರಿ-ಜಿಲ್ಲೆ.

ಗೋಂಡಾ ಜಿಲ್ಲೆಯ ಟಿಕರಿಯಾ ರಸ್ತೆಯಿಂದ ಸುಮಾರು ೨ ಕಿಲೋಮೀಟರ್ ದೂರದಲ್ಲಿದೆ. ಏರುತಗ್ಗಾದ ನೆಲದಲ್ಲಿರುವ ಇಲ್ಲಿಯ ಮನೆಗಳಲ್ಲಿ ಜೋಗೀಪರಿವಾರಗಳುವಾಸಿಸುತ್ತಿವೆ. ೨೦೦ ಪರಿವಾಗಳಲ್ಲಿ ಸುಮಾರು ೧೦೦೦ ಜನರಿದ್ದಾರೆ. ಭಿಕ್ಷೆಬೇಡುವುದೇ ಇವರ ಮುಖ್ಯ ಉದ್ಯೋಗ. ಇತ್ತೀಚೆಗೆ ಕೆಲವರು ತಮ್ಮ ಗಳಿಕೆಯಿಂದ ಪಕ್ಕದ ಹಳ್ಳಿಯಲ್ಲಿ ಒಂದಿಷ್ಟು ಹೊಲ ಕೊಂಡಿರುವರಾದರೂ, ಭಿಕ್ಷೆ ಬೇಡುವ ಪರಂಪರಾಗತ ಉದ್ಯೋಗ ಬಿಟ್ಟಿಲ್ಲ. ಭಿಕ್ಷೆಯಿಂದ ದೊರೆಯುವ ಹಣದ ಆಕರ್ಷಣೆಯೇ ಇದಕ್ಕೆ ಕಾರಣವಿದ್ದೀತು. ಏಕೆಂದರೆ ಹಳ್ಳಿಯ ಹೆಚ್ಚಿನ ಮನೆಗಳ ಆರ್ಥಿಕಸ್ಥಿತಿ ಚೆನ್ನಾಗಿದೆ. ಕೆಲವರಂತೂ ಒಳ್ಳೆಯ ಮನೆಗಳನ್ನು ಕಟ್ಟಿಕೊಂಡಿದ್ದಾರೆ.

ಈಜೋಗಿಗಳು ಭಿಕ್ಷೆಯೆತ್ತುವ ಕ್ರಮವೂ ವಿಚಿತ್ರವಾದುದು. ಇವರು ತಂಡ ಕಟ್ಟಿಕೊಂಡು ಹೊರಡುತ್ತಾರೆ. ಬಿಹಾರ,ಪಶ್ಚಿಮಬಂಗಾಳ, ಅಸ್ಸಾಂಮ್ ಮೊದಲಾದ ಪ್ರದೇಶಗಳಿಗೆ ಹೋಗಿ ಭಿಕ್ಷೆ ಬೇಡುತ್ತಾರೆ. ಕೊರಳಿನಿಂದ ಕಾಲಿನವರೆಗೆ ಜೋತಾಡುವ ಕಿತ್ತಳೆ ಬಣ್ಣದ ಉಡುಪು, ತಲೆಯಮೇಲೆ ಅದೇಬಣ್ಣದಟೊಪ್ಪಿ ಕೈಯಲ್ಲೊಂದು ಸಾರಂಗಿ ಈ ವೇಷದಲ್ಲಿ ೧೦-೧೨ ಜನ ಭಜನೆ ಮಾಡುತ್ತ ಹೊರಟರೆಂದರೆ ಅವರು ಟಕರಿಯಾದ ಜೋಗಿಗಳೆಂದೇ ಅರ್ಥ.

ಇವರು ಜನರ ಕಣ್ಣಿಗೆ ಮಣ್ಣೆರಚಲು ಸಾಧುವೇಷವನ್ನು ಧರಿಸುತ್ತಾರೆ: ಒಬ್ಬ ಸಾಧುವಾದರೆ, ಉಳಿದವರು ಅವನ ಶಿಷ್ಯರಾಗಿ' ಅವನ ಮಹಿಮೆಯನ್ನು ಕೊಂಡಾಡುತ್ತ ಹೋಗುತ್ತಾರೆ.

ಭಿಕ್ಷೆಬೇಡುವ ತಮ್ಮ ಪರಂಪರಾಗತ ಕ್ರಮವನ್ನು ಈ ಜನ ಸರ್ವಥಾಬಿಡಲೊಪ್ಪರು ಇದರಿಂದ ಇವರಿಗೆ ಲಾಭವೇ ಲಾಭ. ಭಿಕ್ಷೆಗೆ ಊರುಬಿಟ್ಟು ಹೊರಡುವಾಗ ತುಂಬಾ ಕೃಶರಾಗಿದ್ದವರು ಮನೆಗೆ ಮರಳುವಾಗ ದಪ್ಪವಾಗುತ್ತಾರೆ. ಪರವೂರಲ್ಲಿದ್ದಾಗಲೂ ಮನೆಗೆ ಹಣಕಳಿಸುತ್ತಾರೆ. ಇದಕ್ಕೆ ಬದಲು ಮುಂಜಾವಿನಿಂದ ಸಂಜೆಯವರಗೆ ಬೆವರು ಹರಿಸಿದರೂ ತಿಂಗಳಿಗೆ ೨೦೦ ರೂಪಾಯಿಗಿಂತ ಹೆಚ್ಚು ಬರುವಂತಿಲ್ಲ. ಆದರೆ ಈ ಉದ್ಯೋಗದಲ್ಲಿ ಕಷ್ಟವೇ ಇಲ್ಲ. ಕೈತುಂಬ ಹಣ! ಎಂತಲೇ ಜೋಗಿ ಪರಿವಾರದ ಮಹಿಳೆಯರಿಗೂ ಇದರಲ್ಲಿ ಆಸಕ್ತಿ ತಮ್ಮ ೧೨-೧೩ ವರ್ಷದ ಹುಡುಗರನ್ನೂ ತಂಡದೊಟ್ಟಿಗೆ ಕಳಿಸಲು ಮುಂದಾಗುತ್ತಾರೆ. ಪರದೇಶಕ್ಕೆ ಹೋಗುವ ತಮ್ಮ 'ಪತಿ'ಯನ್ನು ಕಣ್ಣೀರ ತುಂಬಿ ಅಲ್ಲ ನಗುನಗುತ್ತ ಕಳುಹಿಸುತ್ತಾರೆ!

ಆದರೆ ತುಂಬಾ ಶಾಂತಿಯಲ್ಲಿ ಸಾಗುತಿದ್ದ ಜೋಗಿಯರ ಜೀವನದಲ್ಲಿ ಇತ್ತೀಚೆಗೆ ಒಮ್ಮೆಲೇ ವಿಸ್ಫೋಟ ಉಂಟಾಯಿತು. ಹಳ್ಳಿಯ ಮೂವರು ಹುಡುಗರು ತಮ್ಮ ಮದರಸಾ (ಉರ್ದೂಶಾಲೆ)ದ ತರುಣ ಮೌಲ್ವಿಯಜತೆ ಎಲ್ಲೋ ಹೊರಟು ಹೋದರು ಇದು ತರುಣತರುಣಿಯರ ಪಲಾಯನವಲ್ಲ- ಆದರಿಂದ ಪ್ರೇಮಪ್ರಕರಣವಲ್ಲವೆಂದು ಸಮಾಧಾನಪಟ್ಟುಕೊಳ್ಳಬಹುದಾರೂ ಈಊರಲ್ಲಿ ಇಂಥ ಘಟನೆ ಹಿಂದೆಂದೂ ನಡೆದಿರಲಿಲ್ಲ. ಮೌಲ್ವಿ ಆಧುನಿಕವಿಚಾರದವನಿದ್ದ. ಮಕ್ಕಳಿಗೆ ಸ್ವಾವಲಂಬನೆಯ ಪಾಠ ಹೇಳುತ್ತಿದ್ದ. ಮಕ್ಕಳ ಮಾಯವಾಗುತ್ತಲೇ ಗಾಬರಿಯಾದ ಮನೆಯವರು ಠಾಣೆಗೆ

ದೂರಿತ್ತರು ಮೌಲ್ವಿ ಮನೆಯಲ್ಲಿ ವಿಚಾರಿಸಿ, ಅವನ ಸಂಬಂಧಿಕನೊಬ್ಬ ಬೊಂಬಾಯಿಯಲ್ಲಿದ್ದಾನೆಂದು ತಿಳಿದು ಅಲ್ಲಿಯ ವಿಳಾಸ ಪಡೆದರು. ಬೊಂಬಾಯಿಗೆ ಹೋಗಿ ವಿಚಾರಿಸಿದಾಗ, ಆ ಹುಡುಗರು ಸಿಕ್ಕರು. ಅವರನ್ನೇ ಮನೆಗೆ ಕರೆತರಲಾಯಿತು ತಮ್ಮನ್ನು ಮೌಲ್ವಿ ಮೋಸದಿಂದ ಕರೆದೊಯ್ದಿರಲಿಲ್ಲವೆಂದೂ, ತಾವೇ ಏನಾದರೂ ಉದ್ಯೋಗ ಮಾಡಲೆಂದು ಅಲ್ಲಿಗೆ ಅವರ ಜತೆ ಹೋದೆವೆಂದೂ ಹೇಳಿದರವರು.

ಹಳ್ಳಿಯವರಿಗೆ ಈ ಘಟನೆ ಒಗ್ಗಲಿಲ್ಲವೆಂಬುದು ನಿಜ. ಲಾಭಾದಾಯಕ ಪರಂಪರೆಯನ್ನು ತೊರೆದು ಹೊಸ ಹಾದಿಹಿಡಿಯಲು ಅವರು ಖಂಡಿತ ಒಪ್ಪಲಾರರು. ಆದರೆ ವಿಚಾರವಂತ ಆಧುನಿಕ ಪೀಳಿಗೆ ಬದುಕಿನ ಸಂಘರ್ಷದಲ್ಲಿ ಪುಡಿಪುಡಿಯಾದರು. ಭಿಕ್ಷೆ ಬೇಡುವ ಹೀನಾಯತನಕ್ಕೆ ಖಂಡಿತ ಒಪ್ಪಲಾರದು. ಆರ್ಥಿಕವಾಗಿ ತಾವು ಉತ್ತಮವಾಗಿದ್ದರೂ ಭಿಕ್ಷೆಬೇಡುವುದು ನಾಚಿಕೆಗೇಡೆಂದು ತರುಣ ಪೀಳಿಗೆ ಭಾವಿಸುವುದು. ಪರಂಪರೆಯನ್ನು ಮುಂದುವರಿಸಲು ಅದು ಖಂಡಿತ ನಿರಾಕರಿಸುವುದು.

"ಭಿಕ್ಷೆಬೇಡುವುದು ತುಂಬ ಕೊಳಕು. ನಾನಿದನ್ನು ಮಾಡಲಾರೆ" ಎಂದು ಆ ಹುಡುಗರಲ್ಲೊಬ್ಬ ನಿರ್ಧಾರಪೂರ್ವಕ ಹೇಳಿದುದು ಭವಿಷ್ಯದ ಶುಭ ಸಂಕೇತ.

ಇನ್ನಾದರೂ ಈ ಹಳ್ಳಿ ಬದಲಾದೀತೆ? (ಹಿಂದಿಯಿಂದ)

---

**ಸೆಳೆ ಸಂಚು–೧**

ನಂದಕಿಶೋರ

ಟ್ರೇಡರ್ ಹಾರ್ನ ಎಂದು ಪ್ರಸಿದ್ಧನಾದ ಅಲ್ಫ್ರೆಡ್ ಅಲೋಸಿಸ್ ಸ್ಮಿತನು ದಕ್ಷಿಣ ಆಫ್ರಿಕಾದ ದುರ್ಗಮ ಅರಣ್ಯದಲ್ಲಿ ಸಂಚರಿಸಿ ಕ್ರೂರಮೃಗಗಳ ಕೈಯಲ್ಲಿ ಸಿಕ್ಕಿಪಾರಾದ ತನ್ನ ಅನುಭವಗಳನ್ನು ಗ್ರಂಥರೂಪದಲ್ಲಿ ಹೊರಗೆಡಿವಿದನು. ಅವನ ಪುಸ್ತಕ ಅಮೆರಿಕಾದ ಸಂಯುಕ್ತ ಸಂಸ್ಥಾನಗಳಲ್ಲೇ 400,000 ವರೆಗೂ ಮಾರಾಟವಾದವು. ಬ್ರಿಟನ್ನಿನಲ್ಲಿ ಅದೇ ರೀತಿ ಜನಕೊಂಡು ಓದಿದರು. ಅಮೆರಿಕಾದಲ್ಲಿ ಈ ಮಾರಾಟದ ಬಿರುಸನ್ನು ತಡೆಗಟ್ಟಲು ಯಾರೋ ಟ್ರೇಡರ್‌ಹಾರ್ನ ಒಬ್ಬ ಕಲ್ಪಿತ ಪುರುಷನೆಂದೂ ಅವನ ಕೃತಿ ಕವಿಕಲ್ಪನೆಯೆಂದೂ ಸುದ್ದಿ ಎಬ್ಬಿಸಿಬಿಟ್ಟರು. ಪುಸ್ತಕದ ಮಾರಾಟ ತಗ್ಗಿತು. ಪ್ರಕಟಣಕಾರನ ಹೆಸರು ಕೆಟ್ಟಿತು. ಸತ್ಯವನ್ನು ಬಯಲಿಗೆಳೆಯಲು ಇವನಿಗೆ ಅಮೆರಿಕಾಕ್ಕೆ ಬರುವಂತೆ ಆಮಂತ್ರಣ ಬಂದಿತು. ಟ್ರೇಡರ್ ಹಾರ್ನ್ ಹೊರಟ. ಅಮೆರಿಕಾದ ಕಡಲ ತೀರದಲ್ಲೇ ಅವನಿಗೆ ಅದ್ಭುತ ಸ್ವಾಗತ ಸಿಕ್ಕಿತು. ಕ್ಲಬ್‌ಗಳಲ್ಲಿ' ಮೀಟಿಂಗುಗಳಲ್ಲಿ ಜನ ಅವನನ್ನು ನೋಡಲು ಅಸಂಖ್ಯಾತವಾಗಿ ನೆರೆದರು.

ಒಂದು ದಿನ ಟೀಪಾರ್ಟಿಯೊಂದರಲ್ಲಿ (Trade Horn) ಕುಳಿತಿದ್ದಾಗ, ಆಗಂತುಕನೊಬ್ಬನು ಎದ್ದುನಿಂತು 'ನೀನು ಸಿಂಹದ ಸಂಗಡ ಹೋರಾಡಿದೆನೆಂದು ಬರೆದಿರುವುದು ಸುಳ್ಳಲ್ಲವೇ, ಎಂದ. ಗಡ್ಡ ನೀವಿಕೊಳ್ಳುತ್ತ ಮುದುಕ ಎದ್ದುನಿಂತು 'ಹಾಗೋ' ಎಂದು ತಾನು ಧರಿಸಿದ್ದ ಕೋಟುಶರಟುಗಳನ್ನು ಒಂದೊಂದಾಗಿ ಸೊಂಟದವರೆಗೂ ಕಳಚಿ ಬೆತ್ತಲೆ ನಿಂತ. ಬೆನ್ನಿನ ಮೇಲೆ ಸೊಂಟದ ತನಕ ಆಸ್ಟ್ರೇಲಿಯ ಭೂಪಟದ ಆಕೃತಿಯಲ್ಲಿ ಸಿಂಹ ತನ್ನ ನಖಗಳಿಂದ ಅವನ ಬೆನ್ನಿನಭಾಗವನ್ನು ಸಿಗಿದಿದ್ದ ಗುರುತಿನ ಮಾದಗಾಯದ ಕಲೆ ಎದ್ದುಕಾಣಿಸಿತು. ನೋಡಿದ ಜನ ಬೆಪ್ಪಾದರು. ಆಗಂತಕನು ನಾಚಿಸುಮ್ಮನಾದನು.

Alfred Aloysius Smith Trade Horn (1849–1931)

# ಗ್ರಾಮಾಂತರ ಬಸವ ಜಯಂತಿ–263

ಹೆಚ್. ವಿ. ವೀರಭದ್ರಯ್ಯ.

ಆತ್ಮೀಯ ಶರಣಬಂಧು,

ದಿನಾಂಕ 5-5-1991 ರಂದು ದೊಡ್ಡಬಳ್ಳಾಪುರ ತಾಲ್ಲೂಕು ದೊಡ್ಡಬೆಳುವಂಗಲದಲ್ಲಿ ಬಸವ ಜಯಂತಿ ಆಚರಣೆ. ಮೂರನೆಯ ಬಾರಿ ಆ ಗ್ರಾಮದಲ್ಲಿ ಜಯಂತಿ. ಬಸವತತ್ತ್ವ ಪ್ರೇಮಿಗಳ ಒತ್ತಾಸೆ, ಶ್ರೀ ಮಠದ ಭಕ್ತಾದಿಗಳ ಶ್ರದ್ಧೆ. ಕಳೆದ ವರ್ಷ 27-5-90 ರಂದು ಕಾರ್ಯಕ್ರಮ ಉಪನ್ಯಾಸಗಳವುಟ್ಟಿಗೆ ನಡೆದಿತ್ತು. ಮಳೆ ಪ್ರಯುಕ್ತ ನಾಟಕ ನಡೆದಿರಲಿಲ್ಲ ಈ ವರ್ಷವೂ ಮಳೆಯ ಆತಂಕ ಇದ್ದೇಯಿತ್ತು. ಆದರೂ ಸತ್ಸಂಕಲ್ಪ ಮನಸ್ಸುಗಳ ಆನಿಸಿಕೆಯಂತೆ ನಾಟಕವೂ ಪ್ರದರ್ಶನ ಗೊಂಡಿತು.

ಸಮಾರಂಭಕ್ಕೆ ಆಗಮಿಸಿದ್ದ ಪಂಡಿತ ಚನ್ನಪ್ಪ ಎರೆಸೀಮೆಯವರು ಮಾತನಾಡುತ್ತ 'ಅಗ್ನಿಪರೀಕ್ಷೆ'ಯನ್ನುಗೆದ್ದು ಬಂದದ್ದು ಶ್ರೀಮಠ ಎನ್ನುತ್ತ ಜೀವನ ದರ್ಶನವನ್ನು ಉಚ್ಚಕಂಠದಿಂದ ಸಮಸ್ತ ಸಮಾಜದ ಜನತೆಗೂ ಸಾರಿಹೇಳಿದ ಬಸವಣ್ಣ ಎಂದರು. ಭರತ ಖಂಡದ ಧರ್ಮವೀರರಲ್ಲಿ ಬಸವಣ್ಣನಂಥ ಶ್ರೇಷ್ಠರು ಅಪರೂಪ, ಎಂದು ಹೇಳಿದರು.

ಗ್ರಾಮೀಣ ಜನತೆಗೆ ಬಸವಣ್ಣನಂಥ ಮಹಾಮಾನವತಾವಾದಿಯ ಪರಿಚಯ ಮಾಡಿಕೊಡುವ ಆದರ್ಶ ಪ್ರಯತ್ನ ಸಿದ್ಧಗಂಗಾ ಶ್ರೀಶ್ರೀಗಳಿಂದ ನಡೆದಿರುವುದು ನಾಡಿನ ಸಮಾಜದ ಶುಭೋದಯ. ಅದೂ ನಾಟಕ ಮಾಧ್ಯಮದ ಮೂಲಕ ಬಸವ ತತ್ತ್ವಗಳನ್ನು ಪ್ರಸಾರ ಮಾಡುತ್ತಿರುವುದು ಪುಣ್ಯ ಪ್ರದವಾದುದು. ಗ್ರಾಮಾಂತರ ಬಸವ ಜಯಂತಿ "ಸಮವಸರಣ ಮಂಟಪ" ವಿದ್ದಂತೆ. ಬಸವಣ್ಣ ಕೈಲಾಸದೆತ್ತರಕ್ಕೆ, ಲಿಂಗದೆತ್ತರಕ್ಕೆ ಬೆಳೆದು ಬೆಳಗಿದ ಬೆಳಕಿನ ಚೇತನ. ಜೀವನ ದೊಡ್ಡದೆಂದು ಗೌರವಿಸಿದ ಬಸವಣ್ಣ ಧೂಳಿನಿಂದ ಮನುಷ್ಯರನ್ನು ಸೃಷ್ಟಿಸಿದ ವಿನೂತನ ಪವಾಡ ಪುರುಷ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಜಿ.ಎಸ್. ಸಿದ್ಧಲಿಂಗಯ್ಯನವರು ಉಪನ್ಯಾಸ ಮಾಡಿದರು.

ಸಮಾರಂಭದಲ್ಲಿ ದೊಡ್ಡಬಳ್ಳಾಪುರ ತಾಲ್ಲೂಕು ವೀರಶೈವ ಸಮಾಜದ ಅಧ್ಯಕ್ಷರಾದ ಶ್ರೀ ಸಿದ್ದಲಿಂಗಯ್ಯನವರು, ಕಿಶೋರಿ ಸುಧಾ, ಕುಮಾರಿ ಶಶಿಕಲಾ ಮಾತನಾಡಿದರು. ಶಾಸಕರಾದ ಶ್ರೀ ಆರ್. ಎಲ್. ಜಾಲಪ್ಪನವರು ಮಾತನಾಡುತ್ತ ಪೂಜ್ಯ ಶ್ರೀಗಳು ಸಿದ್ದಗಂಗಾಮಠವನ್ನು ಸರಸ್ವತಿಯ ಪೀಠವನ್ನಾಗಿ, ಅನ್ನಪೂರ್ಣೇಶ್ವರಿಯ ಪೀಠವನ್ನಾಗಿ ಸಿರುವುದರ ಜೊತೆಗೆ ಗ್ರಾಮೀಣ ಪ್ರದೇಶಗಳಲ್ಲಿ ಸುಸಂಸ್ಕೃತ ವಾತಾವರಣ, ಪರಿಸರ ಸೃಷ್ಟಿ ಮಾಡುವ ಮಹಾ ಕಾರ್ಯದಲ್ಲಿ ಹಗಲಿರುಳು ಗ್ರಾಮಾಂತರಬಸವ ಜಯಂತಿಯ ಮೂಲಕ ಪ್ರಯತ್ನಿಸಿದ್ದಾರೆ. ನಮ್ಮೆಲ್ಲರ ಭಾಗ್ಯವೆಂಬಂತೆ ಮೂಡಿ ಬಂದಿದ್ದಾರೆ ಎಂದು ಮುಕ್ತಕಂಠದಿಂದ ಪೂಜ್ಯ ಶ್ರೀಗಳವರ ಸೇವೆಯನ್ನು ಶ್ಲಾಘಿಸಿದರು.

" ಇಂದು ಜನಾಂಗ ಮೂರು ಆಕರ್ಷಣೆಗಳಿಗೆ ಬಲಿಯಾಗುತ್ತಿದೆ. ಹಣ, ಅಧಿಕಾರ, ಭೋಗ ಜೀವನಕ್ಕೆ ವಿಶೇಷವಾಗಿ ಮಾರು ಹೋಗುತ್ತಿದೆ. ಸಂಸ್ಕಾರ ಹೀನರಾಗಿ ಜೀವನ ನಡೆಸುವ ದಂದೆ ಇಂದು ಕಾಣಬರುತ್ತಿದೆ. ಮಾನವೀಯತೆ ಮರೆಯಾಗುತ್ತಿದೆ. ಭಾರತೀಯರು ತಲೆ ತಗ್ಗಿಸುವಂಥ ಚಟುವಟಿಕೆಗಳು ತಲೆಯೆತ್ತುತ್ತಿವೆ. ಮನುಷ್ಯ ಅದರಲ್ಲೂ ಕಲಿತ ಮನುಷ್ಯ ರಾಕ್ಷಸನಾಗುತ್ತಿದ್ದಾನೆ. ಇಂಥ ದುಷ್ಟ ಪರಿಸರ, ಪ್ರವೃತ್ತಿಗಳಿಂದ ದೂರ ಸರಿದು ನಿರ್ಮಲ ನೆಮ್ಮದಿಯ ಆತ್ಮ ವಿಶ್ವಾಸದ ಆತ್ಮಾಭಿಮಾನದ ಬದುಕನ್ನು ನಮ್ಮದಾಗಿಸಿಕೊಳ್ಳುವ ಪವಿತ್ರ ಪ್ರಯತ್ನಕ್ಕಾಗಿ ಬಸವಣ್ಣನವರನ್ನು ಅನುಸರಿಸಬೇಕಾಗಿದೆ. ಧರ್ಮದ ಸಂಪತ್ತನ್ನು, ಮೌಲ್ಯಗಳನ್ನು ಬಸವಣ್ಣನವರು ಬಿತ್ತಿದರು. ಬೆಳೆದರು. ಜನಶಕ್ತಿಯನ್ನು ಜಾಗೃತಗೊಳಿಸಿದ ಪವಾಡ ಪುರುಷ ಬಸವಣ್ಣ ಜೀವನ ಯೋಗವನ್ನು ಆಚರಿಸಿ ತೋರಿಸಿಕೊಟ್ಟರು". ಎಂಬುದಾಗಿ ಪರಮ ಪೂಜ್ಯ ಶ್ರೀ ಶ್ರೀಗಳವರು ಅಧ್ಯಕ್ಷ ಪೀಠದಿಂದ ಆಶೀರ್ವಚನ ನೀಡಿದರು.

ರಾತ್ರಿ 9 ಗಂಟೆಗೆ 261ನೆ ನಾಟಕ ಪ್ರಾರಂಭವಾಗಿ ಬೆಳಗಿನ ಆರು ಗಂಟೆಯವರೆಗೆ ನಡೆಯಿತು. ಮಳೆಯೂ ಸಹಕರಿಸಿ ನಾಟಕ ಪ್ರದರ್ಶನಕ್ಕೆ ಅವಕಾಶ ಕಲ್ಪಿಸಿಕೊಟ್ಟಿತು.

ದಿನಾಂಕ 16-5-91 ರಂದು ಹಾಸನ ಜಿಲ್ಲೆ ಸಕಲೇಶ ಪುರದಲ್ಲಿ 262ನೆಯ ಪ್ರಯೋಗವಾಗಿ ಬಸವ ಜಯಂತಿ ನಡೆಯಿತು. ಸಮಾರಂಭ ಸಾಮೂಹಿಕ ವಿವಾಹದೊಡನೆ ಜರುಗಿ ವಿಶೇಷವೆನಿಸಿತು. ಕಾಫಿ, ಏಲಕ್ಕಿಗಳ ನಾಡಿನಲ್ಲಿ ಬಸವತತ್ವಗಳ ಪ್ರಚಾರ ಉತ್ಸಾಹ ಶ್ರದ್ಧೆಗಳ ಮಧ್ಯೆ ಅನುರಣಿತವಾಯಿತು.

ಸಮಾರಂಭದಲ್ಲಿ ಬೆಂಗಳೂರು ಬೇಲಿಮಠದ ಅಧ್ಯಕ್ಷರಾದ ಪೂಜ್ಯ ಶ್ರೀ ಶ್ರೀ ಶಿವರುದ್ರಸ್ವಾಮಿಗಳವರು ಹಾಗೂ ಕೊಡ್ಲಿಪೇಟೆ ಕಲ್ಮಠದ ಪೂಜ್ಯ ಶ್ರೀ ಮಹಾಂತ ಸ್ವಾಮಿಗಳವರು ಆಶೀರ್ವಚನ ನೀಡಿದರು.

ಪರಮ ಪೂಜ್ಯ ಶ್ರೀ ಶ್ರೀಗಳವರು ಅಧ್ಯಕ್ಷ ಪೀಠದಿಂದ ಆಶೀರ್ವಚನ ನೀಡುತ್ತ " ಜನಗಳಲ್ಲಿ ನವ ಚೇತನವುಂಟು ಮಾಡಿದ ಬಸವಣ್ಣ ಆರ್ಥಿಕ ತಜ್ಞರಾಗಿದ್ದರು. ವಿಚಾರ ಶಕ್ತಿ ಹೃದಯವಂತಿಕೆಯುಳ್ಳ ಮಾನವತಾ ಪ್ರೇಮಿ ಬಸವಣ್ಣನವರಂತೆ ಜೀವನ ಕಲೆಯನ್ನರಿತವರು ಮತ್ತೊಬ್ಬರಿಲ್ಲ ಜಗತ್ತಿನ ಇತಿಹಾಸದಲ್ಲಿ ಬಸವಣ್ಣನವರಂಥ ಧರ್ಮದೀಪಕ' ಲೋಕ ಸುಧಾರಕ, ಮನುಕುಲೋದ್ಧಾರಕ ಇಲ್ಲ ಎನ್ನುತ್ತ " Basavanna is a wonder of creation " ಎಂಬ ವಿದ್ವಾಂಸರ ಮಾತನ್ನು ಉಲ್ಲೇಖಿಸಿದರು.

ರಾತ್ರಿ ನಾಟಕ ಪ್ರದರ್ಶನವಾದಾಗ ಇಪ್ಪತ್ತು ಸಾವಿರ ಪ್ರೇಕ್ಷಕರು ಹಿಮ ಚಳಿಗಳ ಮಧ್ಯೆಯೂ ತದೇಕ ಚಿತ್ತರಾಗಿ ನೋಡಿ ನಲಿದರು.

ದಿನಾಂಕ 1-6-91 ರಂದು 263 ನೆಯ ಪ್ರಯೋಗವಾಗಿ ಗ್ರಾಮಾಂತರ ಬಸವ ಜಯಂತಿ ಕಡೂರು ತಾ|| ಖಂಡುಗದಹಳ್ಳಿ ಶ್ರೀ ಸೋಮೇಶ್ವರ ಕ್ಷೇತ್ರದಲ್ಲಿ ನಡೆದಾಗ ನೆರೆದಿದ್ದ ಬೃಹತ್ ಜನಸ್ತೋಮ ತೃಪ್ತಿ ವಿಶ್ವಾಸಗಳನ್ನು ವ್ಯಕ್ತಪಡಿಸಿತು. ಮಳೆಬಿದ್ದು ಭೂಮಿ ನೆನೆದಿತ್ತು ಹಳ್ಳಕೊಳ್ಳಗಲ್ಲಿ ನೀರು ನಿಂತಿತ್ತು. ಸೋಮೇಶ್ವರ ಕ್ಷೇತ್ರದಲ್ಲಿ ನೂತನ ಕಲ್ಯಾಣ ಮಂಟಪ ಬಾಗಿಲು ತೆರಧಿತ್ತು. ಸಾಮೂಹಿಕ ಮದುವೆ ನಡೆದಿತ್ತು. ಹರ ಗುರು ಚರಮೂರ್ತಿಗಳ ಸಮೂಹದ ಮಧ್ಯೆ ಮಂತ್ರಿಗಳ ಶಾಸಕರ ಜಿಲ್ಲಾ ಪರಿಷತ್ ಅಧ್ಯಕ್ಷರ, ಸದಸ್ಯರ, ವಿವಿಧ ಅಧಿಕಾರಿ ವರ್ಗದ ಮಂದಿಯೊಂದಿಗೆ ಸಭೆ ಶೋಭಾಯಮಾನವಾಗಿತ್ತು, ಕಾರ್ಯಕರ್ತರಾದ ಬಾಸೂರಿನ ಶ್ರೀ ಸೋಮ ಶೇಖರಪ್ಪ ಮತ್ತು ಸಂಗಡಿಗರ ಶ್ರಮ ಸಾರ್ಥಕವಾಗಿತ್ತು.

ಸಿರಿಗೆರೆ ಬೃಹ್ಮನಠದ ಪೂಜ್ಯ ಶ್ರೀ ಪಂಡಿತಾರಾಧ್ಯ ಸ್ವಾಮಿಗಳು ಆಶೀರ್ವಚನ ನೀಡುತ್ತ ಕುಡಿತದ ಹಾವಳಿಯಿಂದ ಸಮಾಜ ಜೀವನ ನೈತಿಕ ದಿವಾಳಿಯನ್ನೆಬ್ಬಿಸಿದ ಘಟನೆಗಳನ್ನು ಉದಾಹರಿಸುತ್ತ ಬಸವಣ್ಣ ನೈತಿಕ ಜೀವನಕ್ಕೆ ಕೊಟ್ಟ ಪ್ರಾಶ್ತ್ಯವನ್ನು ಒತ್ತಿ ಹೇಳಿದರು.

ಹಣ್ಣೆ ಮಠದ ಅಧ್ಯಕ್ಷರಾದ ಪೂಜ್ಯ ಶ್ರೀ ಶಿವಲಿಂಗಶಿವಾಚಾರ್ಯಸ್ವಾಮಿಗಳು ಆಶೀರ್ವಚನ ನೀಡುತ್ತ ಸಿದ್ಧಗಂಗಾ ಶ್ರೀಗಳಿಂದ ಅದ್ಭುತ ಕಾರ್ಯ ನಡೆದಿದೆ ಎಂದರಲ್ಲದೆ ಜನತೆ ಪರಿಶುದ್ಧ ಭಕ್ತಿಯಿಂದ ಗುರುಲಿಂಗ ಜಂಗಮರನ್ನು ಆರಾಧಿಸಬೇಕೆಂದರು.

ಚಿಕ್ಕಮಗಳೂರು ದೊಡ್ಡ ಕುರುಬರಹಳ್ಳಿ ಜಾಬಾಲಿ ಪುರಿಮಠ ಬಸವ ಮಂದಿರದ ಅಧ್ಯಕ್ಷರಾದ ಪೂಜ್ಯ ಶ್ರೀ ಜಯಚಂದ್ರಶೇಖರ ಸ್ವಾಮಿಗಳವರು ‹‹ಸಿದ್ಧಗಂಗೆಯ ಪೂಜ್ಯ ಶ್ರೀ ಶ್ರೀಗಳು ಗ್ರಾಮಾಂತರ ಬಸವ ಜಯಂತಿಯ ಮೂಲಕ ಸಮಾಜದಲ್ಲಿ ಹೊಸ ಯುಗವನ್ನೇ ನಿರ್ಮಿಸುತ್ತ ನಡೆದಿದ್ದಾರೆ. ಜನಾಂಗ ಜೀವಂತವಾಗಿ ಮಾನವೀಯವ ಮೌಲ್ಯಗಳನ್ನು ಗೌರವಿಸುವ ಮಹೋನ್ನತ ಸಂಕಲ್ಪ ದೀಕ್ಷಿತರಾಗ ಬೇಕಾಗಿದೆ. ಬಸವಣ್ಣನವರ ತತ್ತ್ವಗಳಿಂದ ಮಾತ್ರ ನವ ಸಮಾಜ ರಚನೆ ಸಾಧ್ಯ' ಎಂದು ಆಶೀರ್ವಚನ ಮಾಡಿದರು.

ಸಚಿವರಾದ ಶ್ರೀ ಮಲ್ಲಿಕಾರ್ಜುನ ಪ್ರಸನ್ನ, ಶಾಸಕರಾದ ಶ್ರೀ ವೀರಭದ್ರಪ್ಪ, ಜಿಲ್ಲಾ ಪರಿಷತ್ ಅಧ್ಯಕ್ಷರಾದ ಶ್ರೀ ರಾಮದಾಸ್, ಮಾಜಿ ಅಧ್ಯಕ್ಷರಾದ ಶ್ರೀ ಕೃಷ್ಣಮೂರ್ತಿ, ಸೊಲ್ಲಾಪುರದ ಬಸವರಾಜ ಶಾಸ್ತ್ರಿಗಳು, ಜನಪದ ತಜ್ಞರಾದ ಶ್ರೀ ಗೊ.ರು. ಚೆನ್ನಬಸಪ್ಪ, ಶ್ರೀ ಹೆಚ್. ವಿ. ವೀರಭದ್ರಯ್ಯ ಅವರುಗಳು ಉಪನ್ಯಾಸ ಮಾಡಿ ಬಸವಣ್ಣನವರ ಜೀವನದ ವಿವಿಧ ಮುಖಗಳ ಪರಿಚಯ ಮಾಡಿಸಿದರು.

ಪರಮ ಪೂಜ್ಯರು ಆಶೀರ್ವಚನ ನೀಡುತ್ತ, ಬಸವಣ್ಣ ಬೋಧಿಸಿದ ಮಂತ್ರ ಸಾರ್ವಕಾಲಿಕವಾದದ್ದು. ಉತ್ತುಬಿತ್ತುವಮಂತ್ರ, ಬಿತ್ತಿ ಬೆಳೆಯುವ ಮಂತ್ರ ಒಟ್ಟಿನಲ್ಲಿ ದುಡಿದು ಬಾಳುವ ಆತ್ಮಾಭಿಮಾನದ ಮಂತ್ರ ಎನ್ನುತ್ತ ದುಡಿಮೆ ಮನುಷ್ಯನಿಗೆ ಸ್ವಾಭಿಮಾನದೊಂದಿಗೆ ಮಾನವೀಯತೆಯನ್ನೂ ಕಲಿಸುವ ದಿವ್ಯ ಶಕ್ತಿ. ತನ್ನ ದುಡಿಮೆ ತನಗೊಬ್ಬನಿಗೇ ಸೇರಬೇಕಾದುದಲ್ಲ ಆ ದುಡಿಮೆಗೆ ಕಾರಣರಾದ ಎಲ್ಲರಿಗೆ ಅದರಲ್ಲಿ ಪಾಲಿದೆ ಎಂಬ ಅರ್ಪಣಾ ಭಾವವನ್ನೂ ಬೆಳೆಸುತ್ತದೆ. ಅದೇ ದಾಸೋಹ. ಸ್ವಾರ್ಥದಿಂದ ಪರೋಪಕಾರದ ಕಡೆಗೆ, ಸಂಕುಚಿತತೆಯಿಂದ ಅನಂತದ ಕಡೆಗೆ ವ್ಯಕ್ತಿತ್ವ ವಿಕಾಸವಾಗುವಂತೆ ಮಾಡುತ್ತದೆ ಬಸವಣ್ಣ ಈ ಮಹಾಮಂತ್ರದ ದ್ರಷ್ಟಾರ, ನೇತಾರನೆಂದು ನುಡಿದರು.

ಬಾಸೂರಿನ ಶ್ರೀ ಬಿ. ಎಂ. ಪರಮೇಶ್ವರಪ್ಪನವರು ಕಾರ್ಯಕ್ರಮವನ್ನು ನಿರೂಪಿಸಿದರು. ಕಲ್ಯಾಣಮಂಟಪಕ್ಕೆ ಸಹಾಯ ಮಾಡಿದ ದಾನಿಗಳನ್ನು ಸಮಾರಂಭದಲ್ಲಿ ಸನ್ಮಾನಿಸಿ ಗೌರವಿಸಿದರು.

ರಾತ್ರಿ ಜಗಜ್ಯೋತಿ ಬಸವೇಶ್ವರ ನಾಟಕ ನಡೆಯಿತು.

ಮತ್ತೆ ಬರೆಯುತ್ತೇನೆ.

---

## ಆಜೀವ ಸದಸ್ಯರುಗಳಲ್ಲಿ ಒಂದು ಮನವಿ.

ಸಿದ್ಧಗಂಗಾ ಪತ್ರಿಕೆಯ ಅನೇಕ ಆಜೀವ ಸದಸ್ಯರುಗಳ ವಿಳಾಸಗಳು ಬದಲಾಗಿರುವುದರಿಂದ ಕಾರ್ಯಾಲಯದಿಂದ ಕಳುಹಿಸಿದ ಸಂಚಿಕೆಗಳು ಕೆಲವು ಸದಸ್ಯರುಗಳಿಗೆ ತಲುಪದೆ ಹಿಂತಿರುಗುತ್ತಿವೆ. ದಯವಿಟ್ಟು ನಿಮ್ಮ ಬದಲಾದ ವಿಳಾಸಗಳನ್ನು ಆಗಿಂದಾಗ್ಗೆ ಪತ್ರಿಕಾ ಕಾರ್ಯಾಲಯಕ್ಕೆ ಕಳುಹಿಸಿ ಕೊಡುವುದರ ಮುಖೇನ "ಸಿದ್ಧಗಂಗಾ" ನಿಮಗೆ ಕ್ರಮವಾಗಿ ತಲುಪಲು ಸಹಕರಿಸಬೇಕಾಗಿ ಪ್ರಾರ್ಥನೆ. **ತಮ್ಮ ಸದಸ್ಯತ್ವದ ನಂಬರನ್ನು ತಪ್ಪದೇ ತಿಳಿಸಿರಿ.**

ಪ್ರಕಾಶಕರು.

# ಕ್ಷೇತ್ರವಾರ್ತೆ

**ತ್ರಿವಿಧ ದಾಸೋಹ ಮೂರ್ತಿಗಳಾದ ಪರಮ ಪೂಜ್ಯ ಡಾ|| ಶ್ರೀ ಶ್ರೀ ಶ್ರೀ ಶಿವಕುಮಾರ ಮಹಾ ಸ್ವಾಮಿಗಳವರ ಪೀಠಾರೋಹಣ ವಜ್ರಮಹೋತ್ಸವ ಆಚರಣೆ ಸಂಬಂಧವಾಗಿ ನಡೆದ ಪೂರ್ವ ಸಿದ್ಧತಾ ರಾಜ್ಯಮಟ್ಟದ ಭಕ್ತರ ಮಹಾಸಭೆಯ ವರದಿ.**

ಹೆಚ್. ಬಿ. ಗಂಗಾಧರಯ್ಯ

9 ಜೂನ್ 1991 ಭಾನುವಾರ ಶ್ರೀ ಸಿದ್ದಗಂಗಾ ಮಠದಲ್ಲಿ ನಡೆದ ಪರಮ ಪೂಜ್ಯ ಶ್ರೀ ಶ್ರೀಗಳವರ ಪೀಠಾರೋಹಣ ವಜ್ರಮಹೋತ್ಸವ ಪೂರ್ವ ಸಿದ್ಧತಾ ಮಹಾಸಭೆಗೆ ರಾಜ್ಯಾದ್ಯಂತ ಹತ್ತು ಸಹಸ್ರಕ್ಕೂ ಹೆಚ್ಚು ಭಕ್ತಾದಿಗಳು ಭಾಗವಹಿಸಿದ್ದರು. ಈ ಮಹಾಸಭೆ ರಾಜ್ಯದ ಕೃಷಿ ಮತ್ತು ತೋಟಗಾರಿಕೆ ಸಚಿವರಾದ ಮಾನ್ಯ ಪುಟ್ಟಸ್ವಾಮಿ ಗೌಡರ ಅಧ್ಯಕ್ಷತೆಯಲ್ಲಿ ಸಮಾವೇಶ ಗೊಂಡಿತ್ತು.

ಪ್ರಾರಂಭದಲ್ಲಿ ಪೀಠಾರೋಹಣ ವಜ್ರಮಹೋತ್ಸವದ ಕಾರ್ಯಧ್ಯಕ್ಷರಾದ ಶ್ರೀ ಬಿ. ಎಸ್. ಮುದ್ದಪ್ಪನವರು, ನಿವೃತ್ತ ಐ. ಎ. ಎಸ್. ಆರ್ಥಿಕ ಇಲಾಖೆಯ ಕಾರ್ಯ ದರ್ಶಿಗಳು, ಯೋಜಿತ ವಜ್ರಮಹೋತ್ಸವ ಅಭೂತ ಪೂರ್ಣವಾಗಿ ರಚನಾತ್ಮಕ ಸ್ಮಾರಕ ವನ್ನು ಪ್ರತಿಬಿಂಬಿಸುವಂತೆ ಇರಬೇಕೆಂದು ಪ್ರಸ್ತಾವಿಕ ಮಾತುಗಳನ್ನಾಡಿ ನಾಡಿನ ಶ್ರೇಯೋಭಿವೃದ್ಧಿಗಾಗಿ ತಮ್ಮನ್ನು ಸಂಪೂರ್ಣವಾಗಿ ಅರ್ಪಿಸಿ ಕೊಂಡಿರುವ ಪೂಜ್ಯ ಶ್ರೀ ಶ್ರೀ ಗಳವರ ಮಹಾಪುಣ್ಯ ಕಾರ್ಯದಲ್ಲಿ ಭಾಗಿಯಾಗಲು ಅವಕಾಶ ಲಭ್ಯವಾದುದಕ್ಕೆ ಸಂತೋಷ ವ್ಯಕ್ತಪಡಿಸಿದರು. ಜವಾಬ್ದಾರಿಯಿಂದ ಈ ಕಾರ್ಯವನ್ನು ನಿರ್ವಹಿಸುವುದಾಗಿ ಆಶ್ವಾಸನೆ ಇತ್ತರು.

ರೂಪಿಸಿರುವ ಯೋಜನೆಗಳನ್ನು ಭಕ್ತ ಕೋಟಿಗೆ ಪರಿಚಯಿಸಿದರು.

1 ಶ್ರೀ ಮಠದಲ್ಲಿ ವಿದ್ಯಾರ್ಥಿಗಳ ವಸತಿ ಸೌಕರ್ಯಕ್ಕಾಗಿ 1500 ಚ. ಅ ವಿಸ್ತೀರ್ಣ ಹೊಂದಿರುವ 150 ಸುಸಜ್ಜಿತ ಕೊಠಡಿಗಳ ನಿರ್ಮಾಣ.

2 ಏಕಕಾಲದಲ್ಲಿ 2,000 ವಿದ್ಯಾರ್ಥಿಗಳು ಕೂಡುವ ಮಹಾಪ್ರಸಾದ ನಿಲಯ.

3 ನೀರು ಸರಬರಾಜು ಮತ್ತು ನೈರ್ಮಲ್ಯ ವ್ಯವಸ್ಥೆ.

4 ಶ್ರೀ ಶ್ರೀ ಗಳವರ ಜನ್ಮಸ್ಥಳವಾದ ವೀರಾಪುರದಲ್ಲಿ ವೃತ್ತಿ ಶಿಕ್ಷಣ ಕೇಂದ್ರ ಸ್ಥಾಪನೆ.

ಈ ನಾಲ್ಕು ರೂಪಿಸಿರುವ ಯೋಜನೆಗಳು ಶ್ರೀ ಮಠಕ್ಕೆ ಸದ್ಯದ ಪರಿಸ್ಥಿತಿಯಲ್ಲಿ ಅವಶ್ಯಕವಾಗಿವೆ. ಇವುಗಳ ಪೂರೈಕೆಗಾಗಿ ಸುಮಾರು ಮೂರು ಕೋಟಿ ಐವತ್ತು ಲಕ್ಷ ರೂಗಳು ಬೇಕಾಗುತ್ತವೆಂದು ಸಭೆಯ ಮುಂದಿಟ್ಟರು. ಇದಕ್ಕೆ ನೆರವು ಕಡ್ಡಾಯವಿಲ್ಲ.

ಸ್ವಯಂ ಪ್ರೇರಿತರಾಗಿ ಭಕ್ತಕೋಟಿ ಉದಾರವಾಗಿ ನೀಡಬೇಕೆಂದು ಕೋರಿದರು. ಕೊಠ ಗಳನ್ನು ಕಟ್ಟಿಸಿ ಕೊಟ್ಟವರ ದಾನಿಗಳ ಹೆಸರುಗಳನ್ನು ಕೊಠಡಿಗಳ ಮುಂದೆ ಪ್ರಕಟಿ ಲಾಗುತ್ತದೆಂದು ತಿಳಿಸಿದರು.

ಈ ಎಲ್ಲ ಯೋಜನೆಗಳನ್ನು ಗಮನದಲ್ಲಿರಿಸಿಕೊಂಡು ಪೂಜ್ಯ ಶ್ರೀ ಶ್ರೀಗಳವರಿಗೆ ನಮುನಗಳನ್ನು ಅರ್ಪಿಸಿ ಸಲಹೆ ನೀಡಿದವರೆಂದರೆ ವಿಧಾನ ಸಭಾಸದಸ್ಯರಾದ ಶ್ರೀ ಕೆ. ಲಕ್ಕಪ್ಪ, ಮಾಜಿ ಸಚಿವರಾದ ಶ್ರೀ ಎಸ್. ರೇವಣ್ಣನವರು, ಮಾಜಿ ಲೋಕಸಭಾ ಸದಸ್ಯರಾದ ಶ್ರೀ ಜಿ. ಎಸ್. ಬಸವರಾಜ್, ಮಾಜಿ ಸಚಿವರಾದ ಶ್ರೀ ಲಕ್ಷ್ಮಿ ನರಸಿಂಹಯ್ಯ, ಶಾಸಕರಾದ ಷಫಿ ಅಹಮ್ಮದ್, ಮಾಜಿ ಸಚಿವರಾದ ಎನ್. ಬಸವಯ್ಯ, ಮಾಜಿ ಶಾಸಕರಾದ ಶ್ರೀ ವಿ. ಎಲ್. ಶಿವಪ್ಪ, ಕೈಗಾರಿಕೋದ್ಯಮಿಗಳಾದ ಶ್ರೀ ಎನ್. ಆರ್. ಜಗದೀಶ್, ಪದ್ಮ ಶ್ರೀ ಆರ್. ಎಂ. ಬಿ ಆರಾಧ್ಯರು, ಬಾಪೂಜಿ ವಿದ್ಯಾಸಂಸ್ಥೆಯ ಕಾರ್ಯದರ್ಶಿಗಳಾದ ಶ್ಯಾಮನೂರು ಶ್ರೀ ಶಿವಶಂಕರಪ್ಪ, ಸಿದ್ಧಾರ್ಥ ವಿದ್ಯಾಸಂಸ್ಥೆಯ ಸಂಸ್ಥಾಪಕ ಕಾರ್ಯದರ್ಶಿಗಳಾದ ಶ್ರೀ ಹೆಚ್. ಎಂ. ಗಂಗಾಧರಯ್ಯ, ಹಾಸನದ ಶ್ರೀ ಕೆ.ಎಂ. ರುದ್ರಪ್ಪ, ಶ್ರೀ ಶಾಂತರಾಜು, ಶ್ರೀ ಶಿವಕುಮಾರ್, ಚಿಕ್ಕಮಗಳೂರಿನ ಶ್ರೀ ಟಿ.ಎಂ. ಬಸವೇಗೌಡರು, ಎ.ಸ್.ಐ.ಟಿ ಪ್ರಾಂಶುಪಾಲರಾದ ಶ್ರೀ ಜಿ. ಪರಮೇಶ್ವರಪ್ಪ, ಪ್ರೊ|| ಎಂ. ಷಡಕ್ಷರಿ ಸ್ವಾಮಿಗಳು, ಶ್ರೀ ಮಠದ ಹಳೆಯ ವಿದ್ಯಾರ್ಥಿಸಂಘದ ಪ್ರಧಾನ ಕಾರ್ಯದರ್ಶಿಗಳಾದ ಪ್ರೊ. ಶ್ರೀ ಎಂ. ಎನ್. ಚನ್ನಬಸಪ್ಪನವರು.

ಸುಪ್ರಸಿದ್ಧ ಸಾಹಿತಿಗಳಾದ ಸಿದ್ದಯ್ಯ ಪುರಾಣಿಕರು ಮಾತನಾಡುತ್ತಾ ನಾಲ್ಕು ಶಕ್ತಿಗಳಾದ ಇಚ್ಛಾಶಕ್ತಿ, ಜ್ಞಾನಶಕ್ತಿ, ಕ್ರಿಯಾಶಕ್ತಿ, ತಪಶ್ಶಕ್ತಿ, ಶ್ರೀ ಶ್ರೀ ಗಳವರಲ್ಲಿ "ಏಕೀಭವಿಸಿರುವುದರಿಂದ ಮಹಾಕಾರ್ಯವನ್ನು ಮಾಡಿ ತೋರಿಸಿದ್ದಾರೆ, ಅವರ ಸ್ಮರಣೆಗಾಗಿ ಯಾವ ಕಾರ್ಯ ಮಾಡಿದರೂ ಅದು ಸಾಲದು. ಅವರು ನೀಡಿದ ಸಲಹೆಗಳೆಂದರೆ ಶ್ರೀ ವೀರಾಪುರದಲ್ಲಿ ಸ್ಥಾಪಿಸಲಿರುವ ವೃತ್ತಿ ಶಿಕ್ಷಣ ಕೇಂದ್ರಕ್ಕೆ **ಕಾಯಕ ಪೀಠವೆಂದು** ಹೆಸರಿಡಬೇಕು, ಭಾರತದಲ್ಲಿ ಶ್ರೀ ಶ್ರೀ ಗಳವರ ಅಂಚೆ ಚೀಟಿ ಬಿಡುಗಡೆ ಮಾಡಬೇಕು. ಶ್ರೀ ಶ್ರೀಗಳವರ ಸಾಧನೆಯ ಬಗ್ಗೆ ಗ್ರಂಥ ಬಿಡುಗಡೆ. ದೆಹಲಿಯಲ್ಲಿ ಕರ್ನಾಟಕ ಪ್ರತಿನಿಧಿಸುವಂತ ಪುತ್ಥಳಿ ಸ್ಥಾಪನೆ.

ನಾಡಿನ ಮಠಾಧೀಶರ ಪರವಾಗಿ ಬೇಲಿಮಠಾಧ್ಯಕ್ಷರಾದ ಪೂಜ್ಯ ಶ್ರೀ ಶ್ರೀ ಶಿವರುದ್ರಸ್ವಾಮಿಗಳು ಮಾತನಾಡಿ ನಿರ್ಮಿಸಲಿರುವ ವಿದ್ಯಾರ್ಥಿಗಳ ಪ್ರಸಾದ ನಿಲಯದ ಖರ್ಚಿನ ಒಂದು ಭಾಗವನ್ನು ಎಲ್ಲಾ ಮಠಾಧಿಪತಿಗಳು ಕೊಡಲಿದ್ದಾರೆ ಎಂದು

ಹೇಳಿದರು ಶ್ರೀ ಶ್ರೀ ಗಳವರ ಜೀವನ ಚರಿತ್ರೆಯನ್ನು ಕನ್ನಡ, ಇಂಗ್ಲೀಷ್ ಮತ್ತು ಹಿಂದೀ ಭಾಷೆಗಳಲ್ಲಿ ಪ್ರಕಟಿಸಿ, ಸಾಕ್ಷ್ಯಚಿತ್ರವನ್ನು ದೂರದರ್ಶನದಲ್ಲಿ ಪ್ರದರ್ಶಿಸಬೇಕೆಂದು ಸಲಹೆ ಇತ್ತರು.

ಪೈಸೂರಿನ ಶ್ರೀ ಹೆಚ್. ಗಂಗಾಧರನ್ ಮಾತನಾಡಿ ನಮ್ಮ ರಾಜ್ಯ ಶ್ರೀ ಶ್ರೀ ಗಳವರ 84 ನೇ ಜನ್ಮದಿನೋತ್ಸವ ಆಚರಿಸಿದ್ದು ನಮ್ಮ ಪುಣ್ಯ. ಲಕ್ಷೋಪಲಕ್ಷ ಮಕ್ಕಳಿಗೆ ಶಿಕ್ಷಣ ನೀಡಿ ಬಡಕುಟುಂಬಗಳ ಉದ್ಧಾರವಾಗಿದೆ. ಜೀತಪದ್ಧತಿಯಿಂದ ವಿಮುಕ್ತಗೊಳಿಸಿ ಬಾಳಿಗೆ ಬೆಳಕು ನೀಡಿ ಆಶೀರ್ವದಿಸಿದ್ದಾರೆ. ಇಂತಹ ಮಹಾ ಸ್ವಾಮಿಗಳವರಿಗೆ ಭಾರತ ಪ್ರಶಸ್ತಿ ಮತ್ತು ನೊಬೆಲ್ ಪ್ರಶಸ್ತಿ ನೀಡಬೇಕೆಂದು ನಾಡಿನ ಭಕ್ತ ಸಮುದಾಯದಪರವಾಗಿ ಬಿನ್ನವಿಸಿಕೊಂಡರು.

ಈ ಸಮಾರಂಭದ ಪೀಠಾರೋಹಣ, ವಜ್ರಮಹೋತ್ಸವದ ಸಮಿತಿ ಕಾರ್ಯದರ್ಶಿಗಳಾದ ಶ್ರೀ ಎಸ್. ಎಸ್. ಹಸಬಿಯವರು ಸಮಾರಂಭದಲ್ಲಿ ಉಪಸ್ಥಿತರಿದ್ದರು

ಶ್ರೀ ಮಠದ ಉತ್ತರಾಧಿಕಾರಿಗಳಾದ ಪರಮ ಪೂಜ್ಯ ಶ್ರೀ ಶ್ರೀ ಸಿದ್ದಲಿಂಗ ಮಹಾ ಸ್ವಾಮಿಗಳು ಸಮಾರಂಭದಲ್ಲಿ ಮಾತನಾಡಿ ಪೂಜ್ಯ ಗುರುಗಳ ಪೀಠಾರೋಹಣ ವಜ್ರ ಮಹೋತ್ಸವ ಅಭೂತ ಪೂರ್ವವಾಗಿ ನಡೆಸಲು ಉತ್ಸಾಹದಿಂದ ಮುಂದೆ ಬಂದಿರುವ ಭಕ್ತ ಸ್ತೋಮವನ್ನು ಆನಂದದಿಂದ ಆಶೀರ್ವದಿಸಿದರು.

ಪೀಠಾರೋಹಣ ವಜ್ರ ಮಹೋತ್ಸವದ ಅಧ್ಯಕ್ಷರಾದ ನೇತ್ರದಾನಿ ಪದ್ಮಭೂಷಣ ಡಾ|| ಎಂ.ಸಿ. ಮೋದಿಯವರು ಮಾತನಾಡುತ್ತಾ ಶ್ರೀ ಶ್ರೀಗಳು ಮಾಡುತ್ತಿರುವ ಮಹಾಕಾರ್ಯ ಜಗತ್ತಿನಲ್ಲಿ ಯಾರೂ ಮಾಡಿಲ್ಲ. ಸ್ವಾಮಿಗಳಿಂದ ಮಠ ಪ್ರಗತಿಯಾಗಿದೆ. ಮಠದಿಂದ ಸ್ವಾಮಿಗಳಲ್ಲ. ನಾವೆಲ್ಲರು ಹೆಚ್ಚು ಜವಾಬ್ದಾರಿಯಿಂದ ಈ ಕಾರ್ಯವನ್ನು ಯಶಸ್ವಿಗೊಳಿಸಬೇಕಾಗಿದೆ. ಇದಕ್ಕಾಗಿ ನಾಡಿನ ಎಲ್ಲಾ ಭಕ್ತ ಸ್ತೋಮ ತಮ್ಮ ತನು, ಮನ, ಧನಗಳನ್ನು ಭಕ್ತಿ ಭಾವದಿಂದ ಈ ಪವಿತ್ರ ಕಾರ್ಯಕ್ಕೆ ಅರ್ಪಿಸಬೇಕೆಂದು ಮನವಿ ಮಾಡಿಕೊಂಡರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಶ್ರೀ ಪುಟ್ಟಸ್ವಾಮಿಗೌಡರು ಮಾತನಾಡುತ್ತ ಪರಮ ಪೂಜ್ಯ ಮಹಾಸ್ವಾಮಿಗಳು ಎಲ್ಲ ಮಾನವೀಯ ಗುಣಗಳನ್ನು ಮೈಗೂಡಿಸಿಕೊಂಡು ದೈವಾಂಶ ಸಂಭೂತರಾಗಿದ್ದಾರೆ. ಕರ್ನಾಟಕದ ಎಲ್ಲ ಮಠ ಪಂಥಗಳಿಗೆ ಈ ಮಠ ಬೆಳಕು ನೀಡಿದೆ. ಭಾರತದಲ್ಲಿ ಶ್ರೇಷ್ಠತೆ ಪಡೆದವರಲ್ಲಿ ಶ್ರೀ ಶ್ರೀ ಗಳವರು ಪ್ರಥಮ. ಅವರನ್ನು ನೋಡಿದಾಗ ದಯಾಮಯನಾದ ಭಗವಂತನ ದರ್ಶನವಾದಂತಾಗುತ್ತದೆ. ಇವರ ಸೇವೆ ಎಲ್ಲಾ ಕಾಲಕ್ಕೂ ಶ್ಲಾಘನೀಯವಾಗಿ ಮುಂದಿನ

ಪೀಳಿಗೆಗೆ ಮಾರ್ಗದರ್ಶನವಾಗಿದೆ. ಹಮ್ಮಿಕೊಂಡಿರುವ ವಜ್ರಮಹೋತ್ಸವಕ್ಕೆ ನನ್ನಿಂದಾಗಬಹುದಾದ ಸಂಪೂರ್ಣ ಸಹಕಾರವನ್ನು ನೀಡುತ್ತೇನೆ. ವೈದ್ಯಕೀಯ ಕಾಲೇಜಿನ ಪ್ರಸ್ತಾಪಕ್ಕೆ ನನ್ನ ಸಂಪೂರ್ಣ ಪ್ರಯತ್ನ ಇದೆ. ಎಂದಲ್ಲದೆ ಕೃಷಿ ಕಾಲೇಜು ಮತ್ತು ಅಗತ್ಯವಾದ ನೀರು ಮತ್ತು ನೈರ್ಮಲ್ಯ ವ್ಯವಸ್ಥೆಗೆ ಸರ್ಕಾರದ ಕಾನೂನಿನ ವ್ಯಾಪ್ತಿಯೊಳಗೆ ನೀಡಬಹುದಾದ ನೆರವು ಕೊಡಿಸುವುದಾಗಿ ಆಶ್ವಾಸನೆ ಇತ್ತರು.

ಕೊನೆಯಲ್ಲಿ ಪರಮ ಪೂಜ್ಯ ಮಹಾಸ್ವಾಮಿಗಳು ಆಶೀರ್ವಚನ ನೀಡುತ್ತಾ ಸಾಮಾಜಿಕ ಜೀವನ ಪರಿಶುದ್ಧವಾಗುವ ತನಕ ದೇಶದ ಭವಿಷ್ಯ ಉತ್ತಮವಾಗಲಾರದು. ಈ ದಿಶೆಯಲ್ಲಿ ರಾಷ್ಟ್ರನಾಯಕರು ಚಿಂತನೆ ಮಾಡಬೇಕು. ಮಠಮಾನ್ಯಗಳು ಸಲ್ಲಿ-ಸಿರುವ ಸೇವೆಯನ್ನು ಸಮಾಜ ಅರ್ಥಮಾಡಿಕೊಳ್ಳುತ್ತಿರುವುದು ಸಂತೋಷ. ನಾವು ಮಾಡುತ್ತಿರುವ ಸೇವೆ ನಮ್ಮ ಶ್ರೀ ಗುರು ಕೃಪೆಯಿಂದ ನಡೆದಿದೆ ಎಂದು ಸ್ಮರಿಸಿದರು. ತಮಗೆ ಒದಗಿ ಬಂದ ಸಮಾಜದ ಎಲ್ಲ ವರ್ಗದ ಜನತೆ ಸಹಕಾರ ಸಹಾಯಗಳನ್ನು ನೆನೆದರು. ಪ್ರಾಮಾಣಿಕ ವ್ಯಕ್ತಿಯಾಗಿ ಸೇವಾಕಾರ್ಯಗಳಲ್ಲಿ ಭಾಗಿಯಾಗಿದ್ದ ನಿವೃತ್ತ ಪ್ರಾಧ್ಯಾಪಕರಾದ ವಿದ್ವಾನ್ ಶ್ರೀ ಬಿ. ಗಂಗಪ್ಪನವರನ್ನು ಸ್ಮರಿಸಿದರು. ಶ್ರೀ ಮಠದ ಒಳಿತಿಗೆ ಸದ್ಭಾವನೆ ಕೊಡುಗೆ ನೀಡಿದ ಚೇಳೂರಿನ ಚಿಕ್ಕಣ್ಣನ ಹೃದಯ ವಾತ್ಸಲ್ಯ ಆದರಣೀಯವಾದದ್ದು ಎಂದು ನುಡಿದರು.

ಶ್ರೀ ಗೊ.ರು ಚನ್ನಬಸಪ್ಪನವರು ಸಭೆಯನ್ನು ಸ್ವಾಗತಿಸುತ್ತಾ ಕಾರ್ಯ-ಕ್ರಮ ನಿರೂಪಿಸಿದರು. ಶ್ರೀ ಕೆ.ಎಂ. ರೇವಣ್ಣಸಿದ್ದಯ್ಯನವರು ಗಣ್ಯರಿಂದ ಬಂದಿದ್ದ ಸಂದೇಶಗಳನ್ನು ಓದಿದರು. ಶ್ರೀ ಹೆಚ್. ವಿ. ವೀರಭದ್ರಯ್ಯನವರು ವಂದಿಸಿದರು.

ಯೋಜಿತ ವಜ್ರಮಹೋತ್ಸವ ಸಂಸ್ಮರಣಾರ್ಥವಾಗಿ ಸುಸಜ್ಜಿತ ವಿದ್ಯಾರ್ಥಿ ನಿಲಯ ಮಹಾ ಪ್ರಸಾದನಿಲಯಗಳ ಕಟ್ಟಡಗಳಿಗೆ ಉದಾರವಾಗಿ ದಾನ ನೀಡಲು ಸಭೆಯಲ್ಲಿ ವಾಗ್ದಾನ ಮಾಡಿದ ಮಹನೀಯರುಗಳು

**1. ಆರು ಕೊಠಡಿಗಳ ಒಂದು ಬ್ಲಾಕ್‌ನ್ನು ಕಟ್ಟಿಸಿಕೊಡುವ ಮಹನೀಯರುಗಳು**

1) ಶ್ರೀ ಶ್ಯಾಮನೂರು ಶಿವಶಂಕರಪ್ಪನವರು, ಕಾರ್ಯದರ್ಶಿಗಳು, ಬಾಪೂಜಿ ವಿದ್ಯಾಸಂಸ್ಥೆ, ದಾವಣಗೆರೆ.
2) ಶ್ರೀ ಎಸ್. ಷಡಕ್ಷರಿ ಅವರು, ಮಾಲೀಕರು, ಕಂಫರ್ಟ್ ಇನ್‌ಟರ್ ನ್ಯಾಷನಲ್, ಬೆಂಗಳೂರು-1

3) ಶ್ರೀ ಎನ್.ಆರ್. ಜಗದೀಶ್ ಅವರು, ಕೈಗಾರಿಕೋದ್ಯಮಿಗಳು, ಸಿದ್ಧಗಂಗಾ ಆಯಿಲ್ ಎಕ್ಸಾಟ್ರ್ಯಾಕ್ಷನ್, ತುಮಕೂರು.
4) ಪದ್ಮಶ್ರೀ ಆರ್ ಎಂ.ಬಿ. ಆರಾಧ್ಯರು, ಕೈಗಾರಿಕೋದ್ಯಮಿಗಳು, ವಿಶ್ವನಾಥರಾವ್ ರಸ್ತೆ, ಮಾಧವನಗರ, ಬೆಂಗಳೂರು-1
5) ಶ್ರೀ ಹೆಚ್. ಶಿವಲಿಂಗಯ್ಯನವರು, ಚಾರ್ಟೆಡ್ ಅಕೌಂಟೆಂಟ್, 'ಶಿವಕೃಪ' ನಂ.21 ಪ್ಯಾಲೇಸ್‌ರಸ್ತೆ, ಬೆಂಗಳೂರು-560052.
6) ಶ್ರೀ ಹೆಚ್.ಎಂ. ಗಂಗಾಧರಯ್ಯ, ಕಾರ್ಯದರ್ಶಿಗಳು, ಶ್ರೀ ಸಿದ್ಧಾರ್ಥ ಶಿಕ್ಷಣ ವಿದ್ಯಾಸಂಸ್ಥೆ, ಮರಳೂರು, ತುಮಕೂರು ತಾ||

**2 ಐದು ಕೊಠಡಿಗಳ ನಿರ್ಮಾಣಕ್ಕೆ ವಂತಿಕೆ ಸಂಗ್ರಹಿಸಿ ಕಟ್ಟಿಸಿಕೊಡುವ ಮಹನೀಯರುಗಳು.**

1) ಶ್ರೀ ಸಾಗರನಹಳ್ಳಿ ರೇವಣ್ಣನವರು, ಮಾಜಿಸಚಿವರು, ಸಾಗರನಹಳ್ಳಿ, ಗುಬ್ಬಿ ತಾ||
2) ಶ್ರೀ ಎ.ಎಂ. ಬಸವೇಗೌಡರು, ಪ್ಲಾಂಟರ್ಸ್, ಚಿಕ್ಕಮಗಳೂರು.
3) ಶ್ರೀ ಮಂಜರಾಬಾದ್, ಪ್ರದೇಶದ ಭಕ್ತಾದಿಗಳು.
4) ಸಿ.ಆರ್. ಪ್ರಭಣ್ಣ ಅಂಡ್ ಸನ್ಸ್, ಹಾರ್ಡ್‌ವೇರ್ ಮರ್ಚೆಂಟ್ಸ್, ಮಂಡಿಪೇಟೆ ತುಮಕೂರು.

**3. ಮೂರು ಕೊಠಡಿಗಳನ್ನು ಉದಾರವಾಗಿ ಕಟ್ಟಿಸಿಕೊಡುವ ದಾನಿಗಳು.**

1) ಶ್ರೀಮತಿ ಮತ್ತು ಶ್ರೀ ಕೆ.ಎ. ನಂಜಪ್ಪಗೌಡ ಇವರ ಹೆಸರಿನಲ್ಲಿ ಶ್ರೀಮತಿ ಮತ್ತು ಶ್ರೀ ಕೆ.ಎನ್. ಮಲ್ಲಪ್ಪ, ಕೆಂಚಾಂಬ ಫ್ಯಾಮಿಲಿ, ಬಳೇರ ಕೊಪ್ಪಲು, ಎಸ್ಟೇಟ್ ಆಲೂರು ತಾ|| ಹಾಸನ ಜಿಲ್ಲೆ.
2) ಶ್ರೀ ಬರ್ಮಯ್ಯ ಶಾಹೀರ್, ಶರಣ ಸಮಾಜ ಮತ್ತು ಅವರ ಮಾವಂದಿರ ಹೆಸರಿನಲ್ಲಿ

**4 ಎರಡು ಕೊಠಡಿಗಳನ್ನು ಉದಾರವಾಗಿ ಕಟ್ಟಿಸಿ ಕೊಡುವ ದಾನಿಗಳು**

1) ಶ್ರೀ ದಯಾನಂದ ಪೈ, ಬೆಂಗಳೂರು
2) ಶ್ರೀ ವಿಶ್ವಾರಾಧ್ಯರು, ಅಧ್ಯಕ್ಷರು, ಬಾಪೂಜಿ ಡೆಂಟಲ್ ಕಾಲೇಜು, ದಾವಣಗೆರೆ
3) ಶ್ರೀ ಪ್ರಭಾಕರ್ ಕೋರೆ, ಅಧ್ಯಕ್ಷರು, ಕೆ.ಎಲ್.ಇ. ಸೊಸೈಟಿ, ಬೆಳಗಾಂ
4) ಶ್ರೀ ಎಲ್. ರಾಜಪ್ಪನವರು, ಕಂಟ್ರಾಕ್ಟರ್ 924, 4ನೇ ಬ್ಲಾಕ್ 2ನೇ ಮುಖ್ಯರಸ್ತೆ, ರಾಜಾಜಿನಗರ, ಬೆಂಗಳೂರು

## 5 ತಲಾ ಒಂದು ಕೊಠಡಿಯನ್ನು ನಿರ್ಮಿಸಿಕೊಡಲು ವಾಗ್ದಾನಮಾಡಿರುವ ಮಹನೀಯರುಗಳು

1) ಅಥಣಿ ವೀರಣ್ಣನವರು, ಆಡಿಟರ್, ದಾವಣಗೆರೆ
2) ಶ್ರೀ ಆಬ್ರೆಫ್ ಅವರು, ರಾಜಾ ಟೈಲ್ಸ್ ವರ್ಕ್ಸ್, ಜೆ.ಸಿ. ರೋಡ್, ತುಮಕೂರು.
3) ಶ್ರೀ ವಿ.ಎಲ್. ಶಿವಪ್ಪನವರು, ಮಾಜಿ ಶಾಸಕರು, ತಿಪಟೂರು ಅಂಚೆ, ತಿಪಟೂರು
4) ಶ್ರೀ ಕೆ. ಎನ್. ರಾಜಶೇಖರ್ ಅವರು, ವಕೀಲರು, ಗಾಂಧಿನಗರ, ತುಮಕೂರು.
5) ಶ್ರೀ ಎ.ಎಂ. ಬಸವೇಗೌಡರು, ಕಾಫಿ ಪ್ಲಾಂಟರ್, ತಿಪ್ಪನಹಳ್ಳಿ, ಕೈಮಾರ ಅಂಚೆ ಚಿಕ್ಕಮಗಳೂರು ತಾಲ್ಲೂಕು.
6) ಶ್ರೀ ರೇವಣ್ಣಸಿದ್ದಪ್ಪನವರು, ಕಂಟ್ರಾಕ್ಟರ್, ನಂ. 960, 4ನೇ ಬ್ಲಾಕ್, 2ನೇ ಮುಖ್ಯರಸ್ತೆ, ರಾಜಾಜಿನಗರ, ಬೆಂಗಳೂರು
7) ಶ್ರೀ ಡಿ. ಚಂದ್ರಶೇಖರಯ್ಯ ಕಂಟ್ರಾಕ್ಟರ್, ನಂ. 970, ಮಹಾಮನೆ, 4ನೇ ಬ್ಲಾಕ್, 2ನೇ ಮುಖ್ಯರಸ್ತೆ, ರಾಜಾಜಿನಗರ, ಬೆಂಗಳೂರು
8) ಡಾ|| ಬಿ. ಶಿವಪ್ಪನವರು, ನಂ. 438, "ಮಲ್ಲಿಗೆ" ರಾಜಮಹಲ್ ವಿಲಾಸ ಎಕ್ಸ್‌ಟೆನ್‌ಷನ್, ಸದಾಶಿವನಗರ, ಬೆಂಗಳೂರು - 50
9) ಶ್ರೀ ಬಿ. ಎಸ್. ದೇವರಾಜ್ ಅವರು, ಮಾಲೀಕರು, ಆಶ್ರಯ ಇಂಟರ್ ನ್ಯಾಶನಲ್ ಹೋಟೆಲ್, ಇನ್ ಫೆಂಟರಿ ರಸ್ತೆ, ಬೆಂಗಳೂರು - 1
10) ಶ್ರೀ ಸಾರ್ವೆ ಮಹಾಂತಗೌಡರು, ಕಾಫಿಪ್ಲಾಂಟರ್ಸ್, ಸಕಲೇಶಪುರ ತಾ||
11) ಶ್ರೀ ಬಿ. ರಾಜಶೇಖರ್ ಮತ್ತು ಶ್ರೀ ಬಿ. ಮಲ್ಲಣ್ಣ, ಗುಡ್ಡದಮನೆ ಅವರುಗಳು ಲಕ್ಷ್ಮೀಪುರ ಬಡವಾಣೆ. ಸಕಲೇಶಪುರ
12) ಶ್ರೀ ಎಸ್. ಚೆನ್ನಬಸಪ್ಪನವರು, "ಚೇತನ್", 506, 10ನೇ ಕ್ರಾಸ್, ರಾಜಮಹಲ್ ವಿಲಾಸ ಬಡಾವಣೆ, ಸದಾಶಿವ ನಗರ, ಬೆಂಗಳೂರು - 50
13 ಶ್ರೀಮತಿ ಗೌರಮ್ಮ ಡಾ|| ಶ್ರೀ ಟಿ. ತಿಪ್ಪೇಸ್ವಾಮಿಅವರು, ನಿವೃತ್ತ ಪ್ರಾಂಶುಪಾಲರು "ಮಾತೃಕೃಪ" ತ್ಯಾಗರಾಜನಗರ, ಚಳ್ಳಕೆರೆ - 577522
14) ಶ್ರೀ ಜಿ. ಎಂ. ಚಿಕ್ಕವೀರಣ್ಣನವರು, ಚನ್ನಮ್ಮನ ಪಾಳ್ಯ, ಗುಬ್ಬಿ ತಾಲ್ಲೂಕು. ತುಮಕೂರು ಜಿಲ್ಲೆ
15) ಜಿ.ಎಸ್. ಶಿವಣ್ಣ, ಗಂಗನಪಾಳ್ಯ ರಘುವನಹಳ್ಳಿ ಸಮೀಪ, ಕಲಘಟ್ಟಪುರ ಅಂಚೆ ಬೆಂಗಳೂರು - 560062
16) ಶ್ರೀ ಬಸವರಾಜಪ್ಪನವರು, S/o ಸಿದ್ಧಗಂಗಯ್ಯ, ಲಕ್ಷ್ಮಿಪುರ ಮತ್ತು ಅಂಚೆ ನೆಲಮಂಗಲ ತಾಲ್ಲೂಕು, ಬೆಂಗಳೂರು - 562123

17) ಶ್ರೀ ಬಿ. ಶಾಂತರಾಜುಅವರು, ಕಾಫಿ ಪ್ಲಾಂಟರ್ಸ್, ನಂ. 22, ಬಿ.ಎಂ. ರಸ್ತೆ, ಸಕಲೇಶಪುರ ಟೌನ್
18) ಶ್ರೀ ಜಿ ಎಸ್. ಬಸವರಾಜುಅವರು, ಮಾಜಿ ಲೋಕಸಭಾ ಸದಸ್ಯರು, ಗಾಂಧಿನಗರ ತುಮಕೂರು
19) ಶ್ರೀ ಲಕ್ಷ್ಮೀನರಸಿಂಹಯ್ಯನವರು, ಮಾಜಿ ಸಚಿವರು, ಕಮಲ ಎಲಕ್ಟ್ರಿಕಲ್ಸ್, ಅಶೋಕ ರಸ್ತೆ, ತುಮಕೂರು
20) ಶ್ರೀ ಎಸ್. ಮುದ್ದಪ್ಪನವರು ಮತ್ತು ಮಕ್ಕಳು ಅಲಸೂರು, ಬೆಂಗಳೂರು
21) ಡಾ|| ಎಂ.ಸಿ. ಮೋದಿ ಟ್ರಸ್ಟ್ ನಂ. 1, ಡಬ್ಲ್ಯೂ. ಸಿ ಆರ್., ಎರಡನೇ ಹಂತ ರಾಜಾಜಿನಗರ, ಬೆಂಗಳೂರು - 560086
22) ಶ್ರೀ ಬಿ. ಎಂ. ಚಂದ್ರಶೇಖರ್, ಸಕಲೇಶಪುರ
23) ಶ್ರೀಮತಿ ಮನೋಹರಮ್ಮ ಬಸವಣ್ಣ ಅವರು, ಸಕಲೇಶಪುರ
24) ಶ್ರೀ ಎಸ್. ಶಿವಪ್ರಸಾದ ಜ್ಯೋತಿಅವರು, ನಂ. 11, ಸಿರಸಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು
25) ಶ್ರೀ ಎಂ. ಶಿವಪ್ಪ ಅಡ್ವೊಕೇಟ್, ಟ್ಯಾಂಕ್ ಬಂಡ್ ರಸ್ತೆ, ಬೆಂಗಳೂರು - 9
26) ಎಂ. ಎಸ್. ಪರಮಶಿವಪ್ಪನವರು' ರೇಣುಕಾ ಎಸ್ಟೇಟ್, ಅಂಕಿಹಳ್ಳಿ ಪೋಸ್ಟ್ ಬೇಲೂರು ತಾಲ್ಲೂಕು, ಹಾಸನ ಜಿಲ್ಲೆ
27) ಶ್ರೀ ಬಿ. ವೀರಭದ್ರಪ್ಪನವರು, ಅಡ್ವೊಕೇಟ್ ಗುರುಕೃಪ ನಂ. 301 ಶ್ರೀಕಂಠನ್ ಲೇಔಟ್, 1ನೇ ಮುಖ್ಯ ರಸ್ತೆ, ಹೈಗ್ರಾಂಡ್ಸ್, ಬೆಂಗಳೂರು - 1
28) ಶ್ರೀ ಮತಿ ಚನ್ನಮ್ಮ ಮತ್ತು ಚಿಕ್ಕವೀರಪ್ಪ ರಘುವನಹಳ್ಳಿ, ತಲಘಟ್ಟಪುರ ಅಂಚೆ ಬೆಂಗಳೂರು - 560062
29) ಶ್ರೀಮತಿ ಮಲ್ಲಮ್ಮ w/o ಟಿ. ಎಸ್. ಶಂಕರಪ್ಪ, ನಂ. ಜೆ-3, 3ನೇ ಮಹಡಿ, ಪ್ರಭುದೇವ ಬಿಲ್ಡಿಂಗ್, ಬೆಂಗಳೂರು

**ಯೋಜಿತ ಮಹಾಪ್ರಸಾದ ನಿಲಯದ ಕಟ್ಟಡಕ್ಕೆ ವಾಗ್ದಾನ ಮಾಡಿರುವ ದಾನಿಗಳು ತಲಾ ಹತ್ತುಸಾವಿರ ರೂಗಳಂತೆ**

1) ಡಾ|| ಬಿ. ಎಸ್. ಶಿವಪ್ಪ, ನಂ. 438, 'ಮಲ್ಲಿಗೆ' ರಾಜ್‌ಮಹಲ್ ವಿಲಾಸ್ ಬಡಾವಣೆ ಸದಾಶಿವನಗರ ಬೆಂಗಳುರು-50
2) ಬಿ.ಎಸ್. ಬಸವರಾಜ್ ಮಾಲೀಕರು, ಆಶ್ರಯ ಇಂಟರ್‌ನ್ಯಾಷನಲ್ ಹೋಟೆಲ್, ಇನ್‌ಫೆಂಟರಿ ರಸ್ತೆ, ಬೆಂಗಳೂರು-1
3) ಶ್ರೀಮತಿ ರತ್ನಮ್ಮ ಬಿ. ರಾಜಶೇಖರ್, ಕಾಫಿ ಪ್ಲಾಂಟರ್, ಗುಡ್ಡದಮನೆ ಲಕ್ಷ್ಮೀಪುರ ಬಡಾವಣೆ, ಸಕಲೇಶಪುರ.
4) ಶ್ರೀಮತಿ ಮಲ್ಲಮ್ಮ W/o ಟಿ. ಎ. ಶಂಕರಪ್ಪ, ನಂ. ಜೆ-3, 2ನೇ ಮಹಡಿ, ಪ್ರಭುದೇವ ಬಿಲ್ಡಿಂಗ್ ಮಲೇಶ್ವರಂ ಬೆಂಗಳೂರು-3


[ಶ್ರೀ ಬಸವರಾಜು, ಮಾಲೀಕರು ಲಕ್ಷ್ಮಿ ಲಾಡ್ಜ್ ಬೆಂಗಳೂರು-9]

COMFORTABLE
LUXURIOUS &
PEACEFUL
STAY
AT


# KENCHAMBA LODGE




SUBEDAR CHATRAM ROAD CROSS
NEAR KAPALI THEATRE
GANDHINAGAR
BANGALORE-9
Ph. 27082 GRAM: KENCHMLODG



ಪೂಜ್ಯ ಶ್ರೀ ಶ್ರೀಗಳವರು ತಮ್ಮ ಪೂಜ್ಯ ಗುರುಗಳಾದ ಉದ್ದಾನ ಶಿವಯೋಗಿಗಳ ಕೃಪೆಯಿಂದ ಮತ್ತು ಜನತೆಯ ಸಹಕಾರದಿಂದ 60 ವರ್ಷಗಳ ಸೇವಾ ಕಾರ್ಯ ಮುಂದುವರಿಯುತ್ತಾ ಬರುತ್ತಿದೆ ಎಂದು ಸ್ಮರಿಸಿ ಮಾತನಾಡುತ್ತಿರುವುದು. ಚಿತ್ರದ ಎಡ ತುದಿಯಲ್ಲಿ ವಜ್ರಮಹೋತ್ಸವದ ಕಾರ್ಯಾಧ್ಯಕ್ಷರಾದ ಶ್ರೀ ಬಿ.ಎಚ್. ಮುದ್ದಪ್ಪ, ಐ.ಎ.ಎಸ್ ಇವರನ್ನು ಕಾಣಬಹುದು.



ಶ್ರೀಮಠದ ಹಳೆಯ ವಿದ್ಯಾರ್ಥಿ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಡಾ|| ಎಂ.ಎಸ್. ಚನ್ನಬಸಪ್ಪನವರು ಪೂರ್ವ ಸಿದ್ಧತಾ ಸಭೆ ರೂಪಿಸಿದ ಯೋಜನೆಗಳಿಗೆ ಉದಾರವಾಗಿ ಸಹಾಯ ನೀಡಬೇಕೆಂದು ಮನವಿ ಮಾಡಿಕೊಳ್ಳುತ್ತಿರುವುದು.

# ಶಾಸ್ತ್ರೋಕ್ತವಾಗಿ ತಯಾರಿಸಿದ ಸುಗಂಧ ಸಾಮಗ್ರಿಗಳು

ಪ್ರಖ್ಯಾತವಾದ

- ಪರಿಮಳದಶಾಂಗ
- ದೂಪದ ಕೊಡ
- ವಿಭೂತಿ
- ಹವನ ಸಾಮಗ್ರಿಗಳ ತಯಾರಕರು




ಶಿವಪೂಜಾ ಸಾಮಗ್ರಿಗಳು ದೊರೆಯುತ್ತದೆ.

GY. BASAPPA PERFUMERS BANGALORE-2

ಫೋನ್ : ಅಂಗಡಿ — 28009 ಮನೆ — 224623.

ವೈ. ಬಸಪ್ಪ, 206, ಅವೆನ್ಯೂ ರೋಡ್, ಬೆಂಗಳೂರು-560 002

# ಸಿದ್ಧಗಂಗಾ

ಸಂಪುಟ–27. ಸಂಚಿಕೆ–7. ಜುಲೈ–1991.

ಧರ್ಮ ಜೀವನದ ಕಲೆಯನ್ನು ಕಲಿಸುತ್ತದೆ. ಮಾನವನ ಬದುಕು ಸೌಂದರ್ಯ ಪೂರ್ಣವಾಗಿ ನಳನಳಿಸಲು ಧರ್ಮಬೇಕು. ಧರ್ಮಬದ್ಧನಾದ ಮಾನವನ ಬದುಕಿನಿಂದಲೇ ಜಗತ್ತಿಗೆ ಅರ್ಥಪ್ರಾಪ್ತವಾಗುವುದು. ಧರ್ಮಸೀಮಿತ ವಾದುವಲ್ಲ. ಅದರ ವ್ಯಾಪ್ತಿ "ಜಗದಗಲ" ವಾದುದು. ಸ್ವಾರ್ಥಿಗಳ ಕೈಗೆ ಸಿಕ್ಕಿ ಧರ್ಮ ಸೀಮಿತವಾಯಿತು. ತಪ್ಪು ಕಲ್ಪನೆ ಬರುವಂತಾಯಿತು. ಶರಣರ ಜೀವನ ವನ್ನು ಅಧ್ಯಯನ ಮಾಡಿದಾಗ ಧರ್ಮದ ಅಂತರಾರ್ಥ ಮನದಟ್ಟಾಗುತ್ತದೆ. ಪ್ರಪಂಚವನ್ನು ತಿರಸ್ಕರಿಸದೆ, ಸಂಸಾರವನ್ನು ತ್ಯಜಿಸದೆ ಪರಿಶುದ್ಧ ಮಾರ್ಗದಲ್ಲಿ ನಡೆಯುವುದೇ "ಧರ್ಮ" ಎಂಬುದನ್ನು ಶರಣರ ಜೀವನ ತಿಳಿಸುತ್ತದೆ.

ಡಾ|| ಶ್ರೀ ಶ್ರೀ ಶಿವಕುಮಾರಸ್ವಾಮಿಗಳು.

ಪ್ರಕಾಶಕರು:
ಹಳೆಯ ವಿದ್ಯಾರ್ಥಿಗಳ ಸಂಘ.
ಸಿದ್ಧಗಂಗಾ ಕ್ಷೇತ್ರ.

## ಪರಮ ಪೂಜ್ಯ ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ವಜ್ರಮಹೋತ್ಸವ ಸಮಿತಿ, ಶ್ರೀ ಸಿದ್ಧಗಂಗಾ ಮಠ.

## ವಿನಮ್ರ ಮನವಿ

ಶ್ರೀ ಸಿದ್ಧಗಂಗಾ ಮಠಾಧ್ಯಕ್ಷರೂ ತ್ರಿವಿಧ ದಾಸೋಹಿಗಳೂ ಪರಮ ತಪೋ-ಧನರೂ ಆದ ಶಿವಯೋಗಿ ಪರಮ ಪೂಜ್ಯ ಶ್ರೀ ಶ್ರೀ ಡಾ|| ಶಿವಕುಮಾರ ಮಹಾಸ್ವಾಮಿಗಳವರ ಧರ್ಮಪೀಠ ಸ್ವೀಕಾರ ಸಂಸ್ಮರಣಾರ್ಥವಾಗಿ ವಜ್ರಮಹೋತ್ಸವವನ್ನು ಆಚರಿಸುವ ಮಹಾ ಯೋಜನೆಯನ್ನು ಶ್ರೀಮಠದ ಭಕ್ತಾದಿಗಳು ಅಭಿಮಾನಿಗಳು, ಹಿತೈಷಿಗಳು, ಹಳೆಯ ವಿದ್ಯಾರ್ಥಿಗಳು, ವಿಶ್ವವಿಖ್ಯಾತ ನೇತ್ರದಾನಿ ಪದ್ಮಭೂಷಣ ಡಾ|| ಎಂ.ಸಿ. ಮೋದಿಯವರ ಗೌರವಾಧ್ಯಕ್ಷತೆಯೊಂದಿಗೆ, ಮಾನ್ಯ ಶ್ರೀ ಮುದ್ದಪ್ಪ ಐ.ಎ.ಎಸ್ (ನಿವೃತ್ತ)ರವರ ಕಾರ್ಯಾಧ್ಯಕ್ಷತೆಯಲ್ಲಿ ರೂಪಿಸಿಕೊಂಡು ಕಾರ್ಯೋನ್ಮುಖವಾಗಿದೆ.

ಇಪ್ಪತ್ತನೆಯ ಶತಮಾನದ ಅಪರೂಪದ ಮಹಾ ವಿಭೂತಿ ಪುರುಷರಾದ ಪರಮ ಪೂಜ್ಯ ಶ್ರೀ ಶ್ರೀ ಗಳವರು ಅರವತ್ತು ವರ್ಷಗಳಿಂದ ಸರ್ವಸಮಾಜದ ಉದ್ಧಾರಕ್ಕಾಗಿ ಹಗಲಿರುಳು ಶ್ರಮಿಸುತ್ತಿರುವುದು ನಾಡಿನೆಲ್ಲ ಹೃದಯವಂತರಿಗೆ ತಿಳಿದಿರುವ ವಿಚಾರವಾಗಿದೆ ದೀನ ದಲಿತರ ಅಭಿವೃದ್ಧಿಗಾಗಿ ಪೂಜ್ಯ ಶ್ರೀ ಶ್ರೀಗಳವರು ಆಸಕ್ತಿವಹಿಸಿ ಗ್ರಾಮೀಣ ಬಂಧುಗಳ ಏಳ್ಗೆಯನ್ನು ಗಮನದಲ್ಲಿಟ್ಟುಕೊಂಡು ಸಲ್ಲಿಸುತ್ತ ಬಂದಿರುವ ನಿಷ್ಕಾಮ ಸೇವೆ ಅತ್ಯಂತ ಶ್ಲಾಘನೀಯವಾದುದು. “ ಸೇವೆಯೇ ಶಿವಯೋಗ, ಕಾಯಕವೇ ಲಿಂಗಪೂಜೆ, ದಾಸೋಹವೇ ಮಾನವೀಯತೆ ” ಎಂಬುದನ್ನು ಆಚರಿಸಿ ತೋರಿಸುತ್ತ ನಡೆದಿರುವ ಶಿವಯೋಗಿಗಳಿಗೆ ಕೃತಜ್ಞತಾ ಪೂರ್ವಕವಾಗಿ ಭಕ್ತಿ ನಮನಗಳನ್ನು ಸಲ್ಲಿಸಲು ಇದೊಂದು ಸುವರ್ಣಾವಕಾಶ.

ವಜ್ರಮಹೋತ್ಸವದ ಸಂಸ್ಮರಣಾರ್ಥಕವಾಗಿ ಶ್ರೀಮಠದಲ್ಲಿ ಅತ್ಯಂತ ವಿಶಾಲವಾದ 150 ಕೊಠಡಿಗಳನ್ನೊಳಗೊಂಡ ಬೃಹತ್ ವಿದ್ಯಾರ್ಥಿನಿಲಯವನ್ನು ಹಾಗೂ ಮೂರುಸಾವಿರ ಮಂದಿ ಕೂತು ಏಕ ಕಾಲದಲ್ಲಿ ಪ್ರಸಾದ ಸ್ವೀಕರಿಸುವಂಥ ಸುವಿಶಾಲ ಸುಸಜ್ಜಿತ ನೈರ್ಮಲ್ಯ ಪೂರ್ಣ ಪ್ರಸಾದನಿಲಯವನ್ನು ನಿರ್ಮಿಸುವ ಮತ್ತು ಶ್ರೀಮಠದ ಪರಿಸರ ಪರಿಶುದ್ಧವಾಗಿರುವಂತಹ ನೈರ್ಮಲ್ಯ ವ್ಯವಸ್ಥೆಯನ್ನು ರೂಪಿಸುವ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ.

(3ನೇ ರಕ್ಷಾ ಪುಟ ನೋಡಿ)

# ಸಿದ್ಧಗಂಗಾ

ಸಂಪುಟ–27.  ಸಂಚಿಕೆ–7.  ಜುಲೈ – 1991.

## ಶ್ರೀ ಸಿದ್ಧಗಂಗಾ ಗುರುಕರುಣ ತ್ರಿವಿಧಿ.

ಹಾಡು ಹಾಡಲೆ ಮನವೆ ಶ್ರೀ ಗುರು ಚರಣವ
ನೋಡು ನೋಡಲೆ ಕಣ್ಣೆ ಶ್ರೀರೂಪ। ಶಿವರೂಪ
ಸಿದ್ಧಗಂಗಾ ಗುರುವೆ ಕೃಪೆಯಾಗು ॥

ಹಾರೈಸಿ ಹಾರೈಸಿ ಅರಳಿಸಿದೆ ಮೊಗ್ಗುಗಳ
ಸಾರೈಸಿ ಸಲಹಿದೆ ಸಸಿಗಳ। ನನ್ನ ತಂದೆ
ಸಿದ್ಧಗಂಗಾ ಗುರುವೆ ಕೃಪೆಯಾಗು ॥

"ಎಂಥ ಪುಣ್ಯದತತ್ತ್ವ" ನಿತ್ಯ ನೀನಡೆದಿರುವೆ
ಸಂತ ಸಾಂತ್ವನ ಮಳೆಯ ಕರೆದಿರುವೆ। ನನ್ನ ತಂದೆ
ಸಿದ್ಧಗಂಗಾ ಗುರುವೆ ಕೃಪೆಯಾಗು ॥

—ಹೆಚ್. ವಿ. ವೀರಭದ್ರಯ್ಯ.

| ಲೇಖನ | ಲೇಖಕರು | ಪುಟ |
|---|---|---|


* ಶ್ರೀವಾಣಿ 5

* ಶ್ರೀ ಸಿದ್ಧಲಿಂಗೇಶ್ವರ ವಚನ 7

* ಸಂಪಾದಕೀಯ 9

* ಮುಂಜಾನೆಯ ಮನನ 1:
ಶ್ರೀ ಸಿದ್ಧಯ್ಯಪುರಾಣಿಕ

* ಮಾನವನ ಹುಟ್ಟು 13
ಶ್ರೀ ಎ.ಬಿ. ಚನ್ನಬಸಪ್ಪ

* ಬಸವ ತತ್ತ್ವ ರತ್ನಾಕರ-5 15
ಶ್ರೀ ಮೋಟಗಿ ಮಲ್ಲಿಕಾರ್ಜುನ

* ವಿಜ್ಞಾನ ಮತ್ತು ಆಧ್ಯಾತ್ಮ 22
ಶ್ರೀ ಎಚ್. ಎಸ್. ನರಸಿಂಹ ಜೀಯರ್

* ಸಂಗೀತದ ಪ್ರೇರಣಾ ಮೌಲ್ಯಗಳು 25
ಶ್ರೀ ಜಿ ವೀರಭದ್ರಪ್ಪ

* ಪ್ರಾಣಿಗಳಿಂದ ಭೂಕಂಪದ ಭವಿಷ್ಯ ? 29
ಪ. ರಾಮಕೃಷ್ಣ ಶಾಸ್ತ್ರಿ

* ವಿದ್ಯಾರ್ಥಿ ಜೀವನದ ಬೆಳಕು ಸರಣಿ 32
ಶ್ರೀ ಬಿ.ಎಸ್. ಕೃಷ್ಣಮೂರ್ತಿ

* ವರತಪಸ್ವಿ ಜಿ. ರಾಧಾದೇವಿ 34

* ಶಿಕ್ಷಣಯೋಗಿ, ಡೆಪ್ಯೂಟಿ ಚನ್ನಬಸಪ್ಪನವರ ಕನ್ನಡ ಸೇವೆ 38
ವಿ. ಬಿ. ಶಿವಸ್ವಾಮಿ

* ಗ್ರಾಮಾಂತರ ಬಸವ ಜಯಂತಿ - 264 43
ಶ್ರೀ ಹೆಚ್. ವಿ. ವೀರಭದ್ರಯ್ಯ



**ಚಂಪಾವತಿ**

ರಾಜ ಪ್ರತಾಪಸಿಂಹನ ಮಗಳು ಚಂಪಾವತಿ ಹತ್ತು ವರ್ಷದ ಬಾಲಕಿ. ಅವಳಿಗೊಬ್ಬ ತಮ್ಮ ಪ್ರತಾಪಸಿಂಹ ಆತ್ಮ ವಿಶ್ವಾಸಗಳುಳ್ಳ ದೇಶಭಕ್ತ, ಮಹಾ ಪರಾಕ್ರಮಿ. ಅಕ್ಬರ್ ಚಕ್ರವರ್ತಿ ಪ್ರತಾಪಸಿಂಹನ ರಾಜ್ಯದ ಮೇಲೆ ದಂಡೆತ್ತಿ ಬಂದ. ಘನ ಘೋರ ಯುದ್ಧವಾಯಿತು. ಪ್ರತಾಪಸಿಂಹನ ಕೈ ದುರ್ಬಲವಾಗುತ್ತ ಬಂದಿತು. ಅರಮನೆಯನ್ನು ತ್ಯಜಿಸಿ ಅರಣ್ಯ ಸೇರಬೇಕಾಯಿತು. ಅಕ್ಬರ್ ಕೋಟೆಯನ್ನು ವಶಪಡಿಸಿಕೊಂಡು ಪ್ರತಾಪಸಿಂಹನ ಶೋಧಕ್ಕೆ ತೊಡಗಿದ. ಅರಣ್ಯ ಸೇರಿದ ಪ್ರತಾಪಸಿಂಹನ ಜೀವನ ದಿನ ದಿನಕ್ಕೆ ದುರ್ಭರವಾಗುತ್ತ ಬಂದಿತು. ದಿನ ನಿತ್ಯದ ಊಟಕ್ಕೆ ಕಾರ್ಪಣ್ಯ ಒದಗಿತು. ತನ್ನೆರಡು ಮಕ್ಕಳಿಗೆ ಒದಗಿದ ದುರ್ದೆಸೆಗಾಗಿ ಸಂಕಟಪಟ್ಟ. ಆದರೆ ಅಭಿಮಾನ ಶೂನ್ಯನಾಗಲಿಲ್ಲ. ಅಕ್ಬರನ ಆಕ್ರಮಣಕ್ಕೊಳಗಾದರೂ ಶರಣಾಗತನಾಗಲಾರೆ, ತನ್ನ ಮೈಯಲ್ಲಿ ಒಂದು ತೊಟ್ಟು ರಕ್ತಯಿರುವವರೆಗೂ ಶರಣಾಗತನಾಗುವುದಿಲ್ಲ ಎಂದು ಪ್ರತಿಜ್ಞೆ ಮಾಡಿದ. ಪ್ರತಾಪಸಿಂಹನನ್ನು ಹುಡುಕುವುದಕ್ಕಾಗಿ ಬಂದ ಸನ್ಯಾಸಿ ವೇಷಧಾರಿ ಅಕ್ಬರನಿಗೇ ಮೇಲಿನಂತೆ ನೇರವಾಗಿ ತಿಳಿಸಿದ. ಸನ್ಯಾಸಿಯ ಸತ್ಕಾರಕ್ಕಾಗಿ ತನ್ನ ಬಳಿ ಏನೂ ಇಲ್ಲವಲ್ಲಾ ಎಂದು ಪರಿತಪಿಸುವಷ್ಟರಲ್ಲಿ ಮಗಳು ಚಂಪಾವತಿ ತಮಗೆಂದು ಇಟ್ಟುಕೊಂಡಿದ್ದ ರೊಟ್ಟಿಯನ್ನು ಕೊಟ್ಟು ಆತಿಥ್ಯ ಮಾಡುವುದಕ್ಕೆ ಸಹಾಯಕಳಾದಳು. ಅಷ್ಟರಲ್ಲಿ ಚಂಪಾವತಿಯ ತಮ್ಮ ಹಸಿದು ಬರುತ್ತಿರುವುದನ್ನು ಕಂಡು ಅವನನ್ನು ಸ್ವಲ್ಪದೂರ ಕರೆದು ಕೊಂಡು ಹೋಗಿ ಸಮಾಧಾನಪಡಿಸುವ ಪ್ರಯತ್ನದಲ್ಲಿ ಕಾಲುಜಾರಿ ಬಿದ್ದು ಬಿಟ್ಟಳು. ಪ್ರಾಣಾಂತಿಕವಾದ ಪೆಟ್ಟಾಯಿತು. ಮರಣ ಸನ್ನಿಹಿತವಾಯಿತು. ಆ ದೃಶ್ಯವನ್ನು ಕಂಡ ಪ್ರತಾಪಸಿಂಹ ತುಂಬ ಸಂಕಟದಿಂದ ಹೀಗೆ ಹೇಳತೊಡಗಿದ-ನನ್ನ ಮಕ್ಕಳ ಸಂಕಟ ಪರಿಹಾರಕ್ಕಾಗಿ ನನ್ನ ಪ್ರತಿಜ್ಞೆಯನ್ನು ಮುರಿದು ಅಕ್ಬರ್ ಚಕ್ರವರ್ತಿಗೆ ಶರಣಾಗುತ್ತೇನೆ ಎಂದ. ಅದನ್ನು ಕೇಳಿಸಿಕೊಂಡ ಚಂಪಾವತಿ ತಂದೆಯನ್ನು ಹತ್ತಿರ ಕರೆದಳು ಮೆಲ್ಲಗೆ ಮಾತಾಡಿದಳು. ತಂದೆ ಸಾಯುವ ಮೊದಲು ನಿಮ್ಮನ್ನು ಒಂದು ಮಾತು ಕೇಳುತ್ತೇನೆ. ವಚನ ಕೊಡಿ ನನಗಾಗಿ, ನಾನು ಸತ್ತನಂತರ ಸಮಾಧಿ ಮಾಡಿಸಿ ಎಂದು ಕೇಳುವುದಿಲ್ಲ. ಸ್ಮಾರಕವೇ

ರ್ಪಡಿಸಿ ಎಂದು ಬೇಡುವುದಿಲ್ಲ. ಆದರೆ ನನ್ನ ವೀರತಂದೆ ಕ್ಷತ್ರಿಯಕುಲ ದೀಪ ಪ್ರತಾಪಸಿಂಹನ ಮೈಯ್ಯಲ್ಲಿ ತೊಟ್ಟು ರಕ್ತವಿರುವವರೆಗೂ, ನಾನೇ ಸಾಯಲಿ ನನ್ನ ತಮ್ಮ ಸಾಯಲಿ, ನಮ್ಮ ವಂಶವೇ ಕೊನೆಯಾಗಲಿ, ಶತ್ರುವಿಗೆ ಶರಣಾಗತ ನಾಗು ವುದಿಲ್ಲ ಎಂದು ವಚನಕೊಡಿ ಎಂದಳು. ಪ್ರತಾಪಸಿಂಹನ ಕಣ್ಣುಗಳಲ್ಲಿ ಧಾರಾಕಾರ ವಾಗಿ ಕಣ್ಣೀರು ಸುರಿಯಿತು. ಚಂಪಾವತಿಯನ್ನು ಬಾಚಿ ತಬ್ಬಿಕೊಂಡ. ವಚನಕೊಟ್ಟ ಕೈಮೇಲೆ ಕೈಯಿಟ್ಟು ಪ್ರಮಾಣಮಾಡಿದ. ಚಂಪಾವತಿಯ ಪ್ರಾಣದೀಪ ನಂದಿ ಹೋಯಿತು. ಆದೆಲ್ಲವನ್ನು ಅಲ್ಲಿಯೇ ಇದ್ದು ನೋಡುತ್ತಿದ್ದ ಸಾಧು ವೇಷದ ಅಕ್ಬರ್ ತಕ್ಷಣವೇ ತನ್ನ ವೇಷಕಳಚಿ ಚಂಪಾವತಿಯನ್ನು, ಪ್ರತಾಪಸಿಂಹನನ್ನು ನೋಡುತ್ತ ನುಡಿದ “ಮೆಚ್ಚಿದೆ ಚಂಪಾವತಿ, ಮೆಚ್ಚಿದೆ ಪ್ರತಾಪಸಿಂಹ. ಹತ್ತು ವರ್ಷದ ಹೆಣ್ಣು-ಮಗುವಿನ ಬಾಯಲ್ಲಿ ಎಂಥ ಅಭಿಮಾನದ ಮಾತುಗಳು. ಅಭಿಮಾನಕ್ಕಿಂಥ ದೊಡ್ಡ ಸಂಪತ್ತು ಯಾವುದಿದೆ. ತೆಗೆದುಕೋ ನಿನ್ನ ರಾಜ್ಯ ನೀನು ಇಂದಿನಿಂದ ನನ್ನ ಶತ್ರುವಲ್ಲ, ಮಿತ್ರನಾದೆ. ಚಂಪಾವತಿಯಂಥ ಮಗಳ ತಂದೆಯಾಗಿ ಕೀರ್ತಿವಂತನಾದೆ” ಎಂದ.

ಅಭಿಮಾನ ಜೀವನದ ಬಹು ದೊಡ್ಡ ಭಾಗ್ಯ. ಅಭಿಮಾನ್ಯ ಶೂನ್ಯರಾಗಿ ಜೀವಿಸುವುದ ಶ್ರೇಯಸ್ಕರವಲ್ಲ ಭಾರತೀಯ ಪರಂಪರೆಯ ಪ್ರಜ್ಞೆಯುಳ್ಳವರಾಗಿ ಬಾಳಬೇಕು. (21.6.91 ರಂದು ಮಾಗಡಿ ತಾ॥ ರಂಗೇನಹಳ್ಳಿಯಲ್ಲಿ ಬಸವ ಜಯಂತಿ ಸಮಾರಂಭ ದಲ್ಲಿ ಮಾಡಿದ ಆಶೀರ್ವಚನದಿಂದ ಸಂಗ್ರಹ. )

## ಸಿದ್ಧಗಂಗಾ ಗುರುದೇವ

ಶರಣು ಸಿದ್ಧಗಂಗ ಗುರುದೇವ
ಸದ್ಗುರು ಪರಂಜ್ಯೋತಿಗೆ ನಮನ ॥ಪ॥

ಎಂಬತ್ತು ಮೂರು ವಸಂತ ಕಂಡ ಸುಜ್ಞಾನಿ
ಯೋಗಪುರುಷ ಓಂಕಾರ ಸ್ವರೂಪ ಮೂರ್ತಿ
ಶರಣರ ಗುರು ಶಿವಕುಮಾರ ಸ್ವಾಮ್ಗೀ
ಸ್ವಾಗತ – ಸುಸ್ವಾಗತ ಚೈತನ್ಯ ಚಿಲುಮೆಗೆ ॥೧॥

ಭಕ್ತರ ಕೋಟಿ ಹೃದಯಗಳ ಕೂಡುತ್ತಾ
ಗೆದ್ದ ಲೋಕಜ್ಞಾನಿ ದಿನಮಣಿಗೆ
ಶರಣ – ಶರಣೆಯರ ಶ್ರದ್ಧೆಯ ಚೇತನ
ತ್ರಿದಾಸೋಹ ಗುರುವಿಗೆ ಚರಣ ಕಮಲವು ॥೨॥

ವಿದ್ಯೆ – ದಾಸೋಹ – ಕೃಷಿ ಬಿತ್ತಿ
ಪೂರ್ವಕರ್ಮತರು ಮೀರಿರಲಾರದವರು
ಜಾತಿ – ಭೇದವಿಲ್ಲದೇ ಬಡವರ ಬಂಧುಗಳಾಗಿ ನೆಲೆಸಿರುವ
ನಿರ್ಮಲ ಮನದ ಸಿದ್ಧಗಂಗ ಗುರುವಿಗೆ ಶರಣು ॥೩॥

ಸಿದ್ದರಾಜ್ ಐವಾರ್. ಸಿದ್ಧಗಂಗಾ ಬಡಾವಣೆ, ತುಮಕೂರು.

# ಶ್ರೀ ಸಿದ್ಧಲಿಂಗೇಶ್ವರ ವಚನ



ಕತ್ತಲೆಯ ಪುರವ ಕಳ್ಳರು ಮುತ್ತಲು
ಪುರಪತಿ ಮುತ್ತಿಗೆಗೆ ಒಳಗಾದನು ನೋಡಾ ಅಯ್ಯ
ಅತ್ತಳ ಊರಿಂದ ಬೆಳಗು ಪಸರಿಸಲು, ಮುತ್ತಿಗೆತೆಗೆದೋಡಿತ್ತು ಕಾಣಾ
ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೇ.

ಅಜ್ಞಾನದಿಂದ ತುಂಬಿದ ದೇಹ ಕತ್ತಲೆಯ ಪುರವಿದ್ದಂತೆ. ಅದನ್ನು ಅರಿಷಡ್ವರ್ಗವೆಂಬ (ಕಾಮ, ಕ್ರೋಧ, ಮೋಹ, ಮದ, ಲೋಭ, ಮತ್ಸರ) ಕಳ್ಳರು ಮುತ್ತಿದಾಗ ದೇಹದೊಡೆಯನಾದ ಜೀವನೂ ಸಹ ಮುತ್ತಿಗೆಗೆ ಒಳಗಾದನು. ಆ ಜೀವನಿಗೆ ಲಿಂಗತನುವಿನ ಸಂಬಂಧವಾದಾಗ ಸುಜ್ಞಾನ ವುಂಟಾಗಿ ಶಿವಸ್ಮರಣೆಯಿಂದಿರುವಾಗ ಅರಿಷಡ್ವರ್ಗಗಳ ಪರಿವರ್ತನೆ ಪರಿಹಾರವಾಗಿ ಷಡ್ವಿಧ ಭಕ್ತಿಸ್ವರೂಪಿಯಾಗಿ ಪರಿವರ್ತಿತವಾಯಿತು. ಅಂದರೆ ದೇಹಸಂಬಂಧಿಯಾದ ಆತ್ಮನು ಪೂರ್ವಾರ್ಜಿತ ಪುಣ್ಯಫಲದಿಂದ ಸುಜ್ಞಾನೋದಯವಾಗಿ, ಶ್ರೀ ಗುರು ದೇವನ ವೇದ, ಮಂತ್ರ, ಕ್ರಿಯಾ ಉಪದೇಶಗಳಿಂದ ಲಿಂಗಾಂಗ ಸಂಬಂಧಿಯಾಗಿ, ಷಟ್‌ಸ್ಥಲ ಜ್ಞಾನ ಕ್ರಿಯೆ ಸಮನ್ವಿತನಾಗಿ ಆಚರಿಸುತ್ತಿರುವಂತಾಯಿತು.

## ಸಿದ್ಧಗಂಗಾ ಮಾಸ ಪತ್ರಿಕೆ
ಶ್ರೀ ಸಿದ್ಧಗಂಗಾ ಮಠ-572104
ತುಮಕೂರು ಜಿಲ್ಲೆ

ಪ್ರಧಾನ ಸಂಪಾದಕರು
**ಪ್ರೊ॥ ಚನ್ನಪ್ಪ ಎರೇಸೀಮೆ**

* * *

ಸಂಪಾದಕರು
**ಹೆಚ್. ವಿ. ವೀರಭದ್ರಯ್ಯ**

* * *

ಸಹ ಸಂಪಾದಕರು
**ಬಿ. ವೀರಭದ್ರಯ್ಯ**
**ಪಿ. ಎಸ್. ಚಂದ್ರಶೇಖರಯ್ಯ**

* * *

ಜಾಹೀರಾತು ವಿಭಾಗ
**ಎಂ. ರೇಣುಕಾರಾಧ್ಯ**

* * *

ವಿತರಣೆ ವಿಭಾಗ
**ಆರ್. ಎಸ್. ಮಲ್ಲೇಶಪ್ಪ**

* * *

ಪ್ರಕಾಶಕರು
**ಹೆಚ್. ಬಿ. ಗಂಗಾಧರಯ್ಯ**
ಹಳೆಯ ವಿದ್ಯಾರ್ಥಿ ಸಂಘದ ಪರವಾಗಿ

* * *

ಮುದ್ರಕರು
**ಶ್ರೀ ಸಿದ್ಧಲಿಂಗೇಶ್ವರಸ್ವಾಮಿ ಮುದ್ರಣಾಲಯ**

* * *

ಪ್ರಕಟಣೆಯ ಸ್ಥಳ
**ಶ್ರೀ ಸಿದ್ಧಗಂಗಾಕ್ಷೇತ್ರ**

**ಚಂದಾ ವಿವರ**
ವಾರ್ಷಿಕ ಚಂದಾ 25-00ರೂ
ಆಜೀವ ಸದಸ್ಯತ್ವ 250-00 ರೂ

## ಲೇಖಕರಲ್ಲಿ ಮನವಿ

'ಸಿದ್ಧಗಂಗಾ' ಶ್ರೀ ಸಿದ್ಧಗಂಗಾ ಮಠದಿಂದ ಪ್ರಕಟವಾಗುತ್ತಿರುವ ಮಾಸ ಪತ್ರಿಕೆ. ಶ್ರೀ ಮಠದ ಹಳೆಯ ವಿದ್ಯಾರ್ಥಿ ಸಂಘದ ಹೆಮ್ಮೆಯ ಸೇವಾ ಪುರಸಣಿ. ಮೇಲಾಗಿ ಶ್ರೀ ಮಠದ ಮುಖವಾಣಿ. ಪೂಜ್ಯ ಶ್ರೀ ಶ್ರೀ ಡಾ॥ ಶಿವಕುಮಾರ ಮಹಾಸ್ವಾಮಿಗಳವರ ದಿವ್ಯ ಮಾರ್ಗದರ್ಶನದಲ್ಲಿ ಮುನ್ನಡೆದಿರುವ ಪತ್ರಿಕೆ. ತ್ರಿವಿಧ ದಾಸೋಹ ಸೇವಾ ತತ್ಪರತೆಯಿಂದ ಹೆಜ್ಜೆ. ಹಾಕುತ್ತಿದೆ. ಈ ಧ್ಯೇಯ ಸಾಧನೆಗಾಗಿ ನಾಡಿನ ಗಣ್ಯ ಲೇಖಕರಿಂದ ಸಾಹಿತ್ಯ, ಸಂಸ್ಕೃತಿ, ಧರ್ಮ, ವಿಜ್ಞಾನ, ಶಿಕ್ಷಣ. ಇತಿಹಾಸ, ವೈಚಾರಿಕ, ಚಿಂತನ ಮುಂತಾದ ಲೇಖನಗಳನ್ನು ಸ್ವಾಗತಿಸುತ್ತದೆ ಅಸ್ವೀಕೃತ ಲೇಖನಗಳನ್ನು ಪಡೆಯಲು ಸಾಕಷ್ಟು ಅಂಚೆಸ್ಟಾಂಪುಗಳನ್ನು ಲಗತ್ತಿಸಿರಬೇಕು. ಲೇಖನಗಳಲ್ಲಿ ಸೂಕ್ತ ಬದಲಾವಣೆ ಮಾಡಿಕೊಳ್ಳುವ ಅಧಿಕಾರ ಸಂಪಾದಕರಿಗಿದೆ. ಅನುವಾದ, ರೂಪಾಂತರ ಲೇಖನಗಳಿಗೆ ಮೂಲ ಕೃತಿಕಾರರ ಅನುಮತಿ ಪಡೆದಿರಬೇಕು. ಸ್ವೀಕೃತ ಲೇಖನಗಳಿಗೆ ಸೂಕ್ತ ಸಂಭಾವನೆ ಕೊಡಲಾಗುವುದು.

---

**"ಸಂಪಾದಕರು"**
'ಸಿದ್ಧಗಂಗಾ' ಕನ್ನಡ ಮಾಸಪತ್ರಿಕೆ
ಶ್ರೀ ಸಿದ್ಧಗಂಗಾ ಕ್ಷೇತ್ರ-572104
ತುಮಕೂರು ಜಿಲ್ಲೆ.

ಇವರಿಗೆ ಕಳುಹಿಸಿಕೊಡಬೇಕಾಗಿ ಪ್ರಾರ್ಥನೆ

# ಸಂಪಾದಕೀಯ

ಶಾಲಾ ಕಾಲೇಜುಗಳ ಮುಂದೆ ಉದ್ದುದ್ದದ ಸಾಲುಗಳು. ಅರಳುವ ಮೊಗ್ಗುಗಳ ಉತ್ಸಾಹದ ದೃಶ್ಯ. ಪಾಲಕ ಪೋಷಕರ ಆತಂಕ. ಅಪೇಕ್ಷಿಸಿದ ಶಾಲೆಗಳ ಬಾಗಿಲು ತಟ್ಟುವ ಪ್ರಯತ್ನ. ಬಾಗಿಲು ತೆರೆದರೂ ನಿರೀಕ್ಷೆಗೆ ಮೀರಿದ ಶುಲ್ಕ. ಒಂದೊಂದು ಶಾಲೆಯಲ್ಲಿ ಒಂದೊಂದು ವಿಧಾನ. ಹೆತ್ತವರ ಸಂದರ್ಶನ ಮಕ್ಕಳ ಶಿಕ್ಷಣ ನೀಡುವಲ್ಲಿ ತಾಯಿ ತಂದೆಗಳ ಶೈಕ್ಷಣಿಕ ಅರ್ಹತೆಯ ಬಗ್ಗೆ ವಿಚಾರ ವಿನಿಮಯ 'ಇಂಗ್ಲಿಷ್ ಮೋಹವಂತೂ ನಮ್ಮ ದೇಶದಿಂದ ದೂರವಾಗಲಾರದು. ಬೆಳೆಯುವ ಎಳೆಯ ಚೇತನಗಳ ಮೇಲೆ ಹೊರಲಾರದಷ್ಟು ಪಠ್ಯ ಪುಸ್ತಕಗಳ ಹೊರೆ. ಶಿಕ್ಷಣ ತಜ್ಞರು ಎಷ್ಟು ಹೇಳಿದರೂ 'ಕಿವುಡು' ಪರಂಪರೆಯ ಹುಲುಸಾದ ಬೆಳಸು. ಮಾತೃಭಾಷೆಯ ಶಿಕ್ಷಣದ ಮಹತ್ವವನ್ನು ಯಾರು ಹೇಳಿದರೂ ಕೇಳದಷ್ಟು ದಪ್ಪ ಬುದ್ಧಿ. " ಪುತ್ತೊಂದ ಕೇಳದಂತೆ ಕಿವುಡನ ಮಾಡಯ್ಯ ತಂದೆ " ಎಂದೇ ಜನ ಪಠಣ. ಮತ್ತೆ ಕಾಲೇಜುಗಳ ಕಥೆ ಇನ್ನೊಂದು ತೆರ. ಎಲ್ಲರೂ ವಿಜ್ಞಾನ ವಿಷಯಗಳನ್ನು ಓದಬೇಕೆಂಬ ಹಂಬಲ. ಹಂಬಲಕ್ಕೆ ಸೂಕ್ತ ಹಿನ್ನೆಲೆ, ಸಂಕಲ್ಪವಿರಬೇಕೆಂಬ ನಿರ್ಧಾರದ ಅಭಾವ. ಎಲ್ಲರೂ ಇಂಜಿನಿಯರ್, ಡಾಕ್ಟರುಗಳೇ ಆಗಬೇಕೆಂಬ ಕನಸು. ಪೋಷಕರಿಗಂತೂ ಅದು ಬೆನ್ನು ಹತ್ತಿದ ಬೇತಾಳ. ಎಷ್ಟೇ ಖರ್ಚಾದರೂ ತಮ್ಮ ಮಕ್ಕಳನ್ನು ಇಂಜಿನಿಯರುಗಳನಾಗಿ ಡಾಕ್ಟರುಗಳನ್ನಾಗಿ ಮಾಡಬೇಕೆಂಬ ಅಪೇಕ್ಷೆ. ಆದರೆ ಯಾರನ್ನೇ ಆಗಲಿ ಯಾವುದನ್ನೇ ಆಗಲಿ "ಮಾಡಬಾರದು; ಆಗಬೇಕು" ಎಂಬ ಸತ್ಯ ತಿಳಿಯದೇ ಹೋಗಿರುವುದೇ ಜೀವನದ ದೊಡ್ಡ ವ್ಯಂಗ್ಯ. " ಸ್ವಾಮಿ ನನ್ನ ಮಗನಿಗೆ ಪಿ.ಸಿ.ಎಂ.ಬಿಯನ್ನೇ ಕೊಡಿ. ಟ್ಯೂಷನ್ ಕೊಡಿಸಿಯಾದರೂ ಪಾಸ್ ಮಾಡಿಸುತ್ತೇನೆ. ಹಿಂದಿನ ಪರೀಕ್ಷೆಯಲ್ಲಿ ಜ್ವರಬಂದು ಕಡಿಮೆ ಮಾರ್ಕ್ಸ್ ತೆಗೆದಿದ್ದಷ್ಟೆ. ತುಂಬ ಬುದ್ಧಿವಂತ. ದಯಮಾಡಿ ಸೀಟು ಕೊಡಲೇ ಬೇಕು" ಎಂಬ ಪಲ್ಲವಿ ಎಲ್ಲೆಲ್ಲೂ ಕೇಳಿಸುತ್ತಿರುವುದಾಗಿದೆ. ಆದರೆ ಹುಡುಗ ಗಳಿಸಿರುವ ಅಂಕಗಳು ಮಾತ್ರ ಮೂವತ್ತೈದರಿಂದ ನಲವತ್ತರ ಮೇಲಿಲ್ಲ. ಕಾಲೇಜಿನ ಪ್ರಿನ್ಸಿಪಾಲರ ಸಲಹೆಗಳಿಗೆ ಬೆಲೆಯಿಲ್ಲ. ಹಣ ಎಷ್ಟು ಕೇಳಿದರೂ ಕೊಡಲು ಸಿದ್ಧ. ಇನ್ನು ಕೆಲವರು – " ಅದೇನೋ ಪಿ.ಸಿ.ಎಂ.ಬಿ ಯಂತೆ ಕೊಟ್ಟು ಬಿಡಿ ಅವನ ಜೊತೆಯವರು ಅದನ್ನೇ ಓದುತ್ತಾರಂತೆ. ಇವನೂ ಅದನ್ನೇ ಓದಲಿ " ಎನ್ನುತ್ತಾರೆ. ಮತ್ತೆ ಕೆಲವರು " ಅವನ ಅಣ್ಣ ಹೇಳಿದ್ದಾನೆ ಸ್ವಾಮಿ. ಪಿ.ಸಿ.ಎಂ ಬಿ ಯೇ ಕೊಡಿ" ಎನ್ನುವುದುಂಟು. ಪ್ರಿನ್ಸಿಪಾಲರು ಅರ್ಹತೆಯ ಆಧಾರದ ಮೇಲೆ ನಿಯಮಾನುಸಾರ ಕೊಡಲಾಗುತ್ತದೆ ಎಂದರೆ, ಸ್ವಾಮಿ ನಿಮಗೆ ಯಾರಿಂದ ಕಾಗದ ತರಲಿ, ಫೋನ್ ಮಾಡಿಸಲಿ, ಯಾರನ್ನು ಕರೆತಂದು ಹೇಳಿಸಲಿ ಎಂಬೆಲ್ಲ ಮಾತುಗಳು. ನಮಗೆ ಅರ್ಥವಾಗಬೇಕು ನಮ್ಮ ಹುಡುಗನ ಸಾಮರ್ಥ್ಯ ಎಷ್ಟೆಂಬುದು. ನಾವು ಯೋಚಿಸಬೇಕು. ಕೇವಲ ಪಿ.ಸಿ.ಎಂ.ಬಿ ಯೊಂದೇ ಏಕೈಕ ವಿದ್ಯೆಯಲ್ಲ

ಎಂದು. ವಿಜ್ಞಾನ ನಮಗೆ ಬೇಕು. ಹಾಗೆಯೇ ಮಾನಸಿಕ ವಿಷಯಗಳೂ ಬೇಕಲ್ಲವೆ ಕಲಿತವರೂ, ಕಲಿಯದವರೂ, ನಗರವಾಸಿಗಳೂ, ಗ್ರಾಮೀಣರೂ ಎಲ್ಲರೂ ಇಂ ಏಕಮುಖಿಗಳಾಗುತ್ತಿದ್ದೇವೆ. ಶಿಕ್ಷಣ ಮನಷ್ಯನನ್ನು ರೂಪಿಸುವ ಮಹಾ ಮಣಿ ಆದರೆ ಇಂದು ನಾವೆಲ್ಲ ಅಂದರೆ ಹೆತ್ತವರು, ಹೊತ್ತವರು, ಶಿಕ್ಷಕರು, ಸಮಾಜ ಸರ್ಕಾರ, ಆಡಳಿತ ವ್ಯವಸ್ಥೆಯ ಮುಖ್ಯಸ್ಥರು ಕೇವಲ 'ಸಾಕ್ಷರಗಿಳಿ' ಗಳನ್ನು ಅಥವ "ಸಾಕ್ಷರ ರಾಕ್ಷಸ"ರನ್ನು ಬೆಳೆಸುವ ವ್ಯವಸಾಯದಲ್ಲಿಂದು ತೊಡಗಿದ್ದೇವೆ. ನಮ ದೇಶದ ಸಂಸ್ಕೃತಿಗೆ ಅನುಗುಣವಾದ ಶಿಕ್ಷಣ ಯೋಜನೆಗಳು ಬರಲೇ ಇಲ್ಲ ಮನುಷ ರನ್ನು ರೂಪಿಸುವ ಶಿಕ್ಷಣ ಸಿದ್ಧವಾಗಲಿಲ್ಲ. ಸ್ವಾತಂತ್ರ್ಯ ಬಂದನಂತರ ನಾವು ಕಟ್ಟಿ ಅಣೆಕಟ್ಟುಗಳೆಷ್ಟು? ಪಾರಂಭಿಸಿದ ಕೈಗಾರಿಕಾ ಸ್ಥಾವರಗಳೆಷ್ಟು? ಸಂಸ್ಥಾಪಿಸಿ ವಿಶ್ವವಿದ್ಯಾಲಯಗಳೆಷ್ಟು ? ಆದರೆ ಆದದ್ದೇನು ದೇಶದ ಪ್ರಧಾನಿಗಳನ್ನೇ ಹ ಮಾಡುವಂತಹ ಬರ್ಬರ ಸಂಸ್ಕೃತಿಯನ್ನು "ಶೀಲವಂತ ಜನಾಂಗದ ನಿರ್ಮಾಣಕ್ ನಾವು ಮಾಡಿದ ಪ್ರಯತ್ನಗಳೆಷ್ಟು? ಆತ್ಮಾವಲೋಕನ ಮಾಡಿ ಕೊಂಡಿದ್ದೇವೆಯೆ?" ಸಾಮಾನ್ಯವಾಗಿ ಒಂದು ದೇಶದ ಅಭಿವೃದ್ಧಿಯ ವಿಷಯ ಮಾತಾಡುವಾ (Per-capita income) ಸರಾಸರಿ ಆದಾಯವನ್ನು ಗಮನಿಸುತ್ತೇವೆ. ಆದ ಸರಾಸರಿ ಆದಾಯ ಆವರೆಗೆ ಸಾಧಿಸಿ ಪ್ರಗತಿಯ ಸೂಚಕ. ಜನರ ಸರಾಸರಿ ಶೀಲ ಪ್ರಾಮಣಿಕತೆ, ಮುಂದಿನ ಪ್ರಗತಿಯ ಅಡಿಗಲ್ಲು. ಶೀಲ ಪ್ರಾಮಾಣಿಕತೆ ಬರಿಯ ಆದರ್ಶಗಳಲ್ಲ. ಆಧುನಿಕ ಸಮಾಜದ ಸಮರ್ಪಕ ನಿರ್ವಹಣೆಗೆ ಅತ್ಯಗತ್ಯವಾದ ಇಂಧನ. ಆದ್ದರಿಂದಲ್ಲೇ ರಾಜಾಜಿ ಹೇಳಿದ್ದು Not average income but average character is important. ಇದನ್ನು ಸ್ವಲ್ಪ ಮಾರ್ಪಡಿಸಿ ಹೀಗೆ ಹೇಳಬಹುದು, ಸರಾಸರಿ ಆದಾಯ ಮುಖ್ಯ, ಸರಾಸರಿ ಶೀಲ ಇನ್ನೂ ಮುಖ್ಯ" ಎಂಬ ಶ್ರೀ ಎಲ್. ಎಸ್. ಶೇಷಗಿರಿರಾಯರ ಮಾತಿನಲ್ಲಿ ಅರ್ಥವಿದೆ.

---

ಗುರು ಸಾಹಿತ್ಯರ ಕಾಣಬಹದು, ಲಿಂಗಸಾಹಿತ್ಯರ ಕಾಣಬಹುದು,
ಜಂಗಮಸಾಹಿತ್ಯರ ಕಾಣಬಹುದು, ಪ್ರಸಾದ ಸಾಹಿತ್ಯರ ಕಾಣಬಹುದು,
ಕೂಡಲ ಚನ್ನಸಂಗಯ್ಯನಲ್ಲಿ ಇಂದ್ರಿಯ ಸಾಹಿತ್ಯ ಬಸವಣ್ಣಂಗಲ್ಲದೇ
ಮತ್ತಾರಿಗೂ ಇಲ್ಲ.

ಚನ್ನಬಸವಣ್ಣ

# ಮುಂಜಾನೆಯ ಮನನ

ಸಿದ್ಧಯ್ಯಪುರಾಣಿಕ, ಶ್ರೀಗಿರಿ, 4/5ಎ, ಆಲಿಆಸ್ಕರ್ ರಸ್ತೆ, ಬೆಂಗಳೂರು-560052

ಪ್ಲೆಟೋನ ಪರಿಕಲ್ಪನೆಯ ತತ್ತ್ವಜ್ಞಾನಿ ಭೂಪತಿಯಾಗಿದ್ದ ಮಾರ್ಕಸ್ ಅರೇಲಿಯಸ್ ಮುಂಜಾನೆ ಮೊದಲು ಮನನಿಸ ಬೇಕಾದುದನ್ನು ಹೀಗೆ ಬಿತ್ತರಿಸಿದ್ದಾನೆ.

ಪ್ರಭಾತದಲ್ಲಿ ಮನದಲ್ಲಿದ ನೆನೆ ಸಂಜೆಯಾಗುವುದೂರೊಳಗಾಗಿ ಒಬ್ಬ ಕಿಲಾಡಿಯನ್ನೋ, ಕೃತ್ಘನನ್ನೋ, ಅವಾಚ್ಯಶಬ್ದಗಳನ್ನಾಡುವವನನ್ನೋ, ದುಷ್ಟನನ್ನೋ, ಅಸೂಯಾಂಧನನ್ನೋ, ಸಮಾಜ ವಿರೋಧಿಯನ್ನೋ, ನೋಡುವುದು ನನ್ನಪಾಲಿಗಿದೆ. ಒಳಿತು ಕೆಡುಕಿನ ಬಗ್ಗೆ ಅವರಿಗೆ ತಿಳಿವಳಿಕೆಯಿಲ್ಲದಿರುವುದೇ ಆವರಲ್ಲಿ ಈ ವಿಷಯುಗಳು ಉದ್ಭವಿಸಲು ಕಾರಣ. ಆದರೆ ನನಗೆ ಒಂದು ಸಕ್ರಿಯೆಯ ಸಹಾ ಸೌಂದರ್ಯವಾವುದೆಂಬುದೂ, ದುಷ್ಕ್ರಿಯೆಯ ಕುರೂಪವಾವುದೆಂಬುದೂ ಬೆಳೆದಿರುವುದರಿಂದಲೂ, ನನಗೆ ಕೇಡು ಬಯಸಿದವನು ನನ್ನ ರಕ್ತ ಸಂಬಂಧಿಯಲ್ಲದಿದ್ದರೂ ನಮ್ಮ ಮನಗಳು ಒಂದೇ ದೈವೀ ಮೂಲಗಳಿಂದ ಬಂದುವುಗಳಾದುದರಿಂದ ಸಮೀಪ ಸಂಬಂಧಿಗಳಾಗುವುದರಿಂದಲೂ ಅವನಾಗಲೀ ಇನ್ನಾರೇ ಆಗಲಿ ತನಗೆ ನಿಜವಾದ ಹಾನಿಯನ್ನು ಮಾಡಲಾರನೆಂಬ ನಂಬಿಕೆನನ್ನದಾಗಿದೆ. ಯಾಕೆಂದರೆ ಯಾರೂ, ನಾನು ನಡತೆ, ತಪಸ್ವಿಯಾಗುವಂತೆ ನನ್ನನ್ನು ಬಲಾತ್ಕರಿಸಲಾರರು; ಮತ್ತು ನನ್ನ ಪರಿವಾರಕ್ಕೆ, ನನ್ನ ಸ್ವಭಾವಕ್ಕೇ ಸೇರಿದ ಯಾರೊಬ್ಬರ ಬಗೆಗೂ ನನ್ನ ಹೃದಯದಲ್ಲಿ ದೋಷ ಹುಟ್ಟಲಾರದು; ಕ್ರೋಧ ಜನಿಸಲಾರದು. ಯಾಕೆಂದರೆ ನಮ್ಮೆಲ್ಲರ ನಿರ್ಮಾಣವಾಗಿರುವುದು ಪರಸ್ಪರ ಸಹಾಯಕ್ಕಾಗಿ-ಜೋಡಿ ಕಾಲುಗಳಂತೆ, ಕೈಗಳಂತೆ, ರೆಪ್ಪೆಗಳಂತೆ, ಹಲ್ಲಿನ ಸಾಲುಗಳಂತೆ, ಇವುಗಳು ಏನನ್ನು ತಿಳಿಸುತ್ತವೆ? ಹೋರಾಟ ಹೊಲ್ಲ, ವಿರೋಧ ಸಲ್ಲ-ಎಂಬುದನ್ನು ತಿಳಿಸುತ್ತವೆ.

ನಾವು ನಿತ್ಯ ಮುಂಜಾನೆ ಮನನ ಮಾಡಬೇಕಾದುದೆಲ್ಲವೂ ಮಾರ್ಕಸ್ ಅರೇಲಿಯಸ್‌ನ ಈ ಚಿಂತನೆಯಲ್ಲಿದೆ. ನಮ್ಮನ್ನು ನಿಷ್ಕಾರಣವಾಗಿ ಪೀಡಿಸುವವರೇ, ದ್ವೇಷಿಸುವವರೇ, ದೂಷಿಸುವವರೇ, ಮತ್ಸರಿಸುವವರೇ, ನಮಗೆ ಎದುರಾಗಲಿ ನಾವು ಮನಸ್ಸು ಮಾಡಿದರೆ ನಾವು ಅವರನ್ನು ಪೀಡಿಸದೆ, ದ್ವೇಷಿಸದೆ, ದೂಷಿಸದೆ, ಮತ್ಸರಿಸದೆ ಇರುವುದು ಸಾಧ್ಯ. ನಾವೀಗ ಕೆಳಮಟ್ಟಕ್ಕೆ ಇಳಿದು ಅವರಿಗೆ ಆಸ್ಪದ ಕೊಡದಿದ್ದರೆ ಅವರು ಎಷ್ಟು ಯತ್ನಿಸಿದರೂ ನಮ್ಮನ್ನು ದುರ್ವರ್ತನೆಯ ವಿಷವರ್ತುಳಕ್ಕೆ ಎಳೆಯಲಾರರು. ಮೇಲಾಗಿ, ಅವರು ನಮ್ಮ ರಕ್ತ ಸಂಬಂಧಿಗಳಾಗಿರದಿದ್ದರೂ ನಾವೆಲ್ಲರೂ ಒಂದೇ ದೈವೀ ಮೂಲದ ಬಂಧುಗಳು, ಒಂದೇ ಬಳಗದವರು, ಆದುದರಿಂದ ಅವರನ್ನು ದ್ವೇಷಿಸುವುದೆಂದರೆ, ಜೋಡಿ

ಕಾಲುಗಳು ಒಂದನ್ನೊಂದು ದ್ವೇಷಿಸಿದಂತೆ, ಜೋಡಿ ಕೈಗಳು ಒಂದನ್ನೊಂದು ವಿರೋಧಿಸಿದಂತೆ, ಅವಳಿ ರೆಪ್ಪೆಗಳು ಒಂದನ್ನೊಂದು ವಿರೋಧಿಸಿದಂತೆ ಹಲ್ಲಿನ ಎರಡು ಸಾಲು ಒಂದರ ವಿರುದ್ಧ ಇನ್ನೊಂದು ಸೆಟೆದು ನಿಂತಂತೆ. ಅವು ಗಳಿರುವುದೇ ಪರಸ್ಪರ ಸಹಾಯಕ್ಕಾಗಿ, ಸಹಕಾರಕ್ಕಾಗಿ, ಸಹಜೀವನಕ್ಕಾಗಿ ಇದು ಮಾನವರಿಗೂ ಅನ್ವಯಿಸುವ ಸುವರ್ಣ ಸೂತ್ರ: ಇದಕ್ಕೆ ವಿರುದ್ಧವಾದುದು ವಿನಾಶ ಮಾತ್ರ: ಪರಸ್ಪರಂ ಭಾವಯಂತ್ರಃ ಎಂಬುದೇ ಮಂತ್ರ.

ಮರಗಳಿಗೆ ಶಾಖೆಗಳು ನೂರಿರಬಹುದು; ಮರದ ಬೊಡ್ಡೆ ಒಂದೇ; ಮಾನವ ಮತಗಳು, ಅಭಿಮತಗಳು, ಭಾಷೆಗಳು, ವೇಷಗಳು ಅಸಂಖ್ಯವಾಗಿರ ಬಹುದು. ಆದರೆ ಎಲ್ಲರೂ ನೆಮ್ಮದಿಯಿಂದ ಬಾಳಲು ಸೂತ್ರವೊಂದೇ; ನಾವೆಲ್ಲರೂ ಒಂದೇ ಮೂಲದವರು, ಒಬ್ಬರೊಬ್ಬರಿಗೆ ನೆರವಾಗಿ, ಒಬ್ಬರೊಬ್ಬರ ಹಿತ ಸಾಧಿಸ ಲೆಂದು ಹುಟ್ಟಿದವರು ಎಂಬುದೇ ಆ ಸೂತ್ರ. ಮಾರ್ಕಸ್ ಆಲಿಯಸ್ ಹೇಳಿರು ವಂತೆ ನಿತ್ಯ ಪ್ರಾತಃಕಾಲದಲ್ಲಿ ಈ ಸೂತ್ರದ ಮನನ ಮಾಡುತ್ತಿದ್ದರೆ ಯಾವ ದುಷ್ಟ ನಮ್ಮ ಮನಗಳನ್ನು ಬಗ್ಗಡಗೊಳಿಸಲಾರವು; ಯಾವ ದುಷ್ಟ ವ್ಯಕ್ತಿಗಳೂ ನಮ್ಮನ್ನು ಹೊಲ್ಲದ ನಡೆಗೆ ಒತ್ತಾಯಿಸಲಾರೆವು: ಸಲ್ಲದ ನುಡಿಗೆ ಬಲಾತ್ಕರಿಸಲಾರವು.

---

ತಿಳುವಳಿಕೆಯಿಲ್ಲದವನನ್ನು ಒಪ್ಪಿಸುವುದು ಸುಲಭ. ಹೆಚ್ಚು ತಿಳಿದವನನ್ನು ಒಪ್ಪಿಸುವುದು ಇನ್ನೂ ಸುಲಭ. ಆದರೆ ಸ್ವಲ್ಪ ತಿಳಿದುಕೊಂಡು ಅಹಂಕಾರ ಪಡುವ ಮನುಷ್ಯನನ್ನು ಬ್ರಹ್ಮನೂ ಕೂಡ ಒಪ್ಪಿಸಲು ಸಾಧ್ಯವಿಲ್ಲ.

**– ನೀತಿಶತಕ.**

ನೀರಿನ ಮೇಲೆ ದೋಣಿ ಇರಬಹುದು. ಆದರೆ ದೋಣಿಯೊಳಗೆ ನೀರಿರಬಾರದು. ಸಾಧಕ ಪ್ರಪಂಚದಲ್ಲಿರಬಹುದು. ಆದರೆ ಪ್ರಾಪಂಚಿಕತೆ ಸಾಧಕನಲ್ಲಿರಬಾರದು.

**– ರಾಮಕೃಷ್ಣ ಪರಮಹಂಸ.**

ವಿದ್ಯೆ, ಜ್ಞಾನ, ಅರಿವು ಮರಾಟಕ್ಕೆ ಸಿಗುವ ವಸ್ತುಗಳಲ್ಲ.
ನಿರಂತರ ಸಾಧನೆಯಿಂದ ಲಭಿಸುತ್ತವೆ.

**- ಅನುಭವಾಮೃತ.**

# ಮಾನವನ ಹುಟ್ಟು!

ಬಿ. ಚನ್ನಬಸಪ್ಪ, ಬಸವ ಪ್ರಸಾದ, ಶಂಕರಮಠ, 2ನೆ ಕ್ರಾಸ್. ಕಿಲ್ಲೆ ಮೊಹಲ್ಲ, ಮೈಸೂರು-4

ಮಾನವ ಹುಟ್ಟುತ್ತಾನೆ. ಇದು ಅವನ ಕೈಯಲ್ಲಿ ಇಲ್ಲ, ಪ್ರಕೃತಿಯ ಕೈಯಲ್ಲಿ. ಪ್ರಕೃತಿಯು ಏಕೆ ಹುಟ್ಟಿಸಿತು? ಯಾವುದೊ ಒಂದು ಪ್ರಾಮುಖ್ಯವಾದ ಉದ್ದೇಶ ಇದ್ದೇ ಇರಬೇಕು. ಪ್ರಕೃತಿಯು(ದೇವರು=ಶಕ್ತಿ) ಸ್ಥಿರ! ಪೂರ್ವ ಆಲೋಚನೆಯಿಂದ ಮಾನವನನ್ನು ತನ್ನ ಮನೆಯೆಂಬ ವಿಶ್ವದಲ್ಲಿ ಕಳುಹಿಸಿರುವನು.

ಹಾಗಾದರೆ ಆತನು ಕಳಹಿಸಿದ ಉದ್ದೇಶವಾದರೂ ಏನು?

ವಿಸ್ತಾರವಾದ ಪ್ರಪಂಚ, ಇಲ್ಲಿ ಸಿಕ್ಕದುದು ಯಾವುದೊ ಇಲ್ಲ." ನಿನ್ನ ಬಾಯಿಗೆ ಮಣ್ಣು ಹಾಕ!" ಅಂತ ಕೋಪದಲ್ಲಿ ಕೆಲವರು ಹೇಳುವುದುಂಟು. ಅದನ್ನು ಸೇಡಿನ ಒರೆಗಲ್ಲಿನ ಮೇಲೆ ಒತ್ತಿ ಹಚ್ಚುವುದಲ್ಲ. ಧರ್ಮದ ಒರೆಗಲ್ಲಿನ ಮೇಲೆ ಒರೆ ಹಚ್ಚಬೇಕು. ಮಣ್ಣಿನಿಂದಲೇ ನಾವು ಬದುಕಿರುವುದು. ಮಣ್ಣಿನಲ್ಲಿ ಚಿನ್ನ ಹಾಕಿದರೂ ಚಿನ್ನ ಬೆಳೆಯುತ್ತೆ. ಇದರ ಭಾವಾರ್ಥ: ಕಬ್ಬುಹಾಕಿ, ಮೆಣಸಿಗೆಹಾಕಿ, ಕಡ್ಲೆಕಾಯಿಹಾಕಿ, ದ್ವಿದಳಧಾನ್ಯಹಾಕಿ. ಅಯಾ ಬೆಳಸಿಗೆ ಬೇಕಾದ ರಸ ವಸ್ತುಗಳನ್ನು ಕೊಡುತ್ತೆ. ಅದ್ದರಿಂದ ಆತನ ಬಾಯಿಗೆ ವಿಶೇಷಗಳನ್ನು ಹಾಕಿದಂತೆ ಅದಿಕ್ಕೇಕೆ ಕೋಪ.

ಭೂಮಿಯಲ್ಲಿ ನೀರು-ಇತರೆ ಲೋಹಗಳು. ಗಾಳಿಯಲ್ಲಿ ಪ್ರಾಣ ಉಳಿಸುವಂಥಾ ಬೇರೆಕೆಮಾಡಿ ಆತ ಬಿಡುವಗಾಳಿ, ಅಕಾಶದಲ್ಲಿ ಗಾಳಿ, ಬೆಳಕು, ಶಾಖ ಮೊದಲಾವುಗಳಿಗೆ ಸಹಾಯಕ. ಈ ಸಹಾಯದಿಂದ ಸಸ್ಯ ವರ್ಗ - ಪ್ರಾಣಿವರ್ಗಗಳು ಜನಿಸಿ, ಬೆಳೆದು, ತಿಂದು, ಆನಂದಗೊಂಡು ಕಣ್ಮರೆಯಾಗುತ್ತಾನೆ ಮಾನವ. ಆದರೆ ಆತನು ಹುಟ್ಟಿದ ಉದ್ದೇಶ?

ಲೌಕೀಕವಾಗಿ ಯಾವುದೊ ಕೆಲಸಕ್ಕೆ ಕಳುಹಿಸಿ ಕೊಟ್ಟಿದ್ದ ಒಡೆಯ"ಏನು ಮಾಡಿ ಬಂದೆ?, ಎಂದು ಪ್ರಶ್ನಿಸಿದರೆ, ಏನು ಹೇಳುವುದು? ಉ.ಮಾ.ಹೇ. ಎಂದು ಹೇಳುವುದೇ? ಎಂದೂ ಅಲ್ಲ ಹಾಗಾದರೆ:- ಹೀಗಲ್ಲವೆ ಆತನ ಮನೆಯಲ್ಲಿ(ವಿಶ್ವದಲ್ಲಿ) ನಡೆದು ಕೊಳ್ಳುವುದು. 'ಹುಟ್ಟು' ಅದಕ್ಕಾಗಿ ನನ್ನ ಪ್ರತಿಯೊಂದು ಹೆಜ್ಜೆಯ ಧರ್ಮ ಮಾರ್ಗದಲ್ಲಿ ಇಟ್ಟು ದಾರಿಯನ್ನು ಸಾಗಿಸಿಕೊಂಡು ನಿಮ್ಮಲ್ಲಿಗೆ ಬಂದಿದ್ದೇನೆ.

1) ಅನ್ಯರ ಸ್ವತ್ತನ್ನು ಅಪಹರಿಸಲಿಲ್ಲ.
2) ಅನ್ಯರನ್ನು ಅನ್ಯರನ್ನಾಗಿಕಾಣದೆ,ನನ್ನವರೆಂದು ಕಂಡೆನು.
3) ದಯೆಯೇ ಧರ್ಮದ ಮೂಲ. ಈ ತತ್ವವನ್ನೇ ಎನ್ನ ಉಸಿರಾಗಿಟ್ಟುಕೊಂಡು ದಿನಗಳನ್ನು ಕಳೆದೆನು.

4) ಆತನು ಯಾರೇ ಆಗಿರಲಿ ಬಚ್ಚಲ ರೊಚ್ಚಿನಲ್ಲಿ ಆಯತಪ್ಪಿ ಬಿದ್ದು ನರಳು ತ್ತಿರುವನು. ಆಗ ಆ ಜಾತಿ ಈ ಜಾತಿ ! ಕರಿಯುವ ಬಿಳಿಯುವ : ಬಡವ–ಬಲ್ಲಿದ ಎಂಬ ಆಲೋಚನೆಗೆ ಎಡೆಗೊಡದೆ ಆತನನ್ನು ಆ ಬಚ್ಚಲ ರೊಚ್ಚಿನಿಂದ ಎತ್ತಿ ಪ್ರಥಮ ಚಿಕಿತ್ಸೆ ಮಾಡಿ, ತಜ್ಞರ ಬಳಿಗೆ ಒಯ್ಯಬೇಕು. ಇದು ಬರವಣಿಗೆ ಅಲ್ಲ ಮಾತಲ್ಲ, ಕೃತಿ; ಈ ರೀತಿ ಮಾಡಿ ಬಂದಿರುವೆನು ಎಂದು ಹೇಳುವ ಎದೆ ಇರಬೇಕು.

5) ತಾನು ಪ್ರಕೃತಿಯ ಸಮೀಪಕ್ಕೆ (ದೇವರ) ಹೋದರೂ ಆತನ ಹುಟ್ಟಿನ ಧರ್ಮದ ಸ್ಥಂಭದ ಮೇಲೆ " ಸರ್ವೇಜನಾಃ ಸುಖಿನೋ ಭವಂತು' ಎಂಬ ಬಾವುಟವು ಪಟ-ಪಟನೆ ಹಾರಾಡುತ್ತಿರಬೇಕು ಆತನ ಹೆಸರು. ಬಸವಣ್ಣನ ಹುಟ್ಟು, ಮಹಾತ್ಮಗಾಂಧೀ ಹುಟ್ಟು, ಅಬ್ರಹಾಂ ಲಿಂಕನ್ನಿನ ಹುಟ್ಟು, ಶಿವಾಜಿಯ ಹುಟ್ಟು, ಬುದ್ಧನ ಹುಟ್ಟು ಮೊದಲಾದವರ ಹುಟ್ಟು ಸಾರ್ಥಕ! ನಾವು ಏಕೆ ಅದೇ ವಿಶ್ವದಲ್ಲಿ ಇದ್ದುಕೊಂಡು, ಆ ಹುಟ್ಟಿನವರಾಗಬಾರದು? ಪ್ರಯತ್ನ ಪಡುತ್ತೇವೆ. ಆಗುತ್ತೇವೆ !

---

ಜ್ಞಾನ ಮತ್ತು ಮಾನಸಿಕ ಶಿಸ್ತು ಶಿಕ್ಷಣದ ಗುರುತು.

ಅಜ್ಞಾನ, ಅನಕ್ಷರತೆ ದೇಶದ ಪ್ರಗತಿಗೆ ಮಾರಕ.

Democracy is the Progress of all.

*  *  *  *

## ಮಾತು

ಪ್ರಾಣಿವರ್ಗದಲ್ಲಿ ಮಾನವ ಕಿರಿಟ ಪ್ರಾಯವಾಗಿದ್ದಾನೆ ಆಲೋಚಿಸಿ ಮನಸ್ಸಿನ ಭಾವನೆಗಳನ್ನು ಪದ, ವಾಕ್ಯದ ಮೂಲಕ ವ್ಯಕ್ತಪಡಿಸುವ ವಿಶೇಷವಾದ ಶಕ್ತಿಯನ್ನು ಹೊಂದಿದ್ದಾನೆ. ಇದು ದೇವರು ನೀಡಿರುವ ಮಹತ್ತಾದ ಕೊಡುಗೆ. ಮಾತು ಮೌಲ್ಯವುಳ್ಳದ್ದಾಗಿರಬೇಕು. ನಮ್ಮ ಮಾತು ವಿದ್ಯೆ, ಜ್ಞಾನ, ವಿವೇಕ ಪ್ರದರ್ಶಿಸು ತ್ತದೆ. ವ್ಯಕ್ತಿಯ ಸಂಸ್ಕೃತಿಯನ್ನು ನಿರೂಪಿಸುತ್ತದೆ. ಸದಾಕಾಲ ಸಂಪರ್ಕ ಮಧ್ಯ ವರ್ತಿಯಾಗಿ ನೆರವಾಗಿದೆ. ಸರ್ವರಿಗೂ ಹಿತವಾಗಿರುವಂತೆ ನುಡಿಯುತ್ತಿರಬೇಕು.

ಆದ್ದರಿಂದಲೇ ಮಾತಿನ ಪ್ರಾಮುಖ್ಯತೆಯನ್ನು ಅರಿತು ಮಹಾನುಭಾವ ಬಸವಣ್ಣನವರು ಮುತ್ತಿನ ಹಾರಕ್ಕೆ ಹೋಲಿಸಿ ಸಂಬಂಧ ಕಲ್ಪಿಸಿದ್ದಾರೆ. ಮುತ್ತು ಬಹು ಬೆಲೆಯುಳ್ಳದ್ದು. ಪ್ರತಿಯೊಬ್ಬರೂ ಅಪೇಕ್ಷಿಸಿ ಗಳಿಸಲು ಪ್ರಯತ್ನಿಸುತ್ತಾರೆ. ಆದರಂತೆ ಮಾತು ಪ್ರಿಯವಾಗಿ, ಮಧುರವಾಗಿ ಉತ್ತೇಜನ ನೀಡುವಂತಿರಬೇಕು. ಇಂಥಹ ಮಾತಿನ ಕಲೆಯನ್ನು ಅರಿತು ಪ್ರತಿಯೊಬ್ಬ ವ್ಯಕ್ತಿ ಚಿಂತನ ಮಾಡಬೇಕು.

## ಶ್ರೀ ಗುರುವಿನ ಮಹಿಮೆ-(41)

ಕಂದ ॥ ಗುರು ಚರಣವೆ ವರ ಸದ್ಗತಿ ।
ಗುರು ಚರಣವೆ ಮತಿ ಗುರುಶಬ್ದ ಸ್ಪರ್ಶದೊಳಾ ॥
ಕರಣ ಶ್ರುತಿ ಪಾವನ ಸಕಳ ।
ಗುರುವೆ ಸರ್ವಮೆನಲಧಿಕ ಪೆರತೊಂದಿಲ್ಲವ್ ॥

—"ಧರ್ಮಜ್ಞ ಕವಿ" ಕೃತ "ಶಿವಾನುಭಾವದರ್ಪಣ"
"(ಮೋಕ್ಷ ಚಿಂತಾಮಣಿ ಕಾವ್ಯ)

"ಶ್ರೀ ಗುರುವರನ ಪಾದಕಮಲಗಳೇ ಸದ್ಗತಿಗೆ ಕಾರಣ ನೋಡಾ.
ಶ್ರೀ ಗುರುವರನ ಚರಣ ಕಮಲಗಳೇ ಸುಮತಿ ಸುಬುದ್ಧಿ ವೃದ್ಧಿಗೆ ಕಾರಣ ನೋಡಾ.
ಶ್ರೀ ಗುರುವರನ ಶಬ್ದ ಸ್ಪರ್ಶದೊಳೇ ಕರಣೇಂದ್ರಿಯ ಶ್ರುತಿ ಪಾವನ ನೋಡಾ.
ಇಂತಪ್ಪ ಶ್ರೀ ಗುರುವು ಶಿಷ್ಯಂಗೆ ಸಕಳ ಶಿವಪದ-
ಮಾಗಿರಲು, ಶ್ರೀ ಗುರುವಿನಿಂದಧಿಕ ಮತ್ತೊಂದಿಲ್ಲ
ಕಾಣಾ, ಶ್ರೀ ಶೈಲ ಮಲ್ಲಿಕಾರ್ಜುನ."

## ಶ್ರೀ ಗುರುವಿನಾಧಿಕ್ಯ (42)

ಕಂದ ॥ ಶ್ರೀ ಗುರುವರ ಚಿಂತಾಮಣಿ ।
ಶ್ರೀ ಗುರುವರ ಶರಣರಂಗದೊಳ್ ಲಿಂಗಮುಖವ್ ॥
ಶ್ರೀ ಗುರುವರ ಪರುಷದ ಕಣಿ ।
ಶ್ರೀ ಗುರುವರ-ಚರಣ ಮಾಳ್ಕಿಸಲೆ ಪಾವನವವ್ ॥

"ಪರಮ ಶ್ರೀ ಗುರು ಚಿಂತಾರತ್ನವಾಗಿರ್ದ ನೋಡಾ.
ಪರಮ ಶ್ರೀ ಗುರು ಶಿವಶರಣರ ಲಿಂಗದೊಳು ಲಿಂಗ ಮುಖವಾಗಿರ್ಪ ನೋಡಾ.
ಪರಮ ಶ್ರೀ ಗುರು ಪರುಷದ ಕಣಿಯಾಗಿಪ್ಪ ನೋಡಾ.
ಪರಮ ಶ್ರೀ ಗುರು ಚರಣವೇ ಸಕಳ ಸೃಷ್ಟಿ ಪವಿತ್ರಗೊಳಿಪುದಾಗಿ
ಪರಮ ಶ್ರೀ ಗುರುವು ಶ್ರೇಷ್ಠ ನಿರಂಜನ ಮೂರ್ತಿಯಾಗಿರ್ದ
ಕಾಣಾ, ಶ್ರೀ ಶೈಲ ಮಲ್ಲಿಕಾರ್ಜುನ."

## ಶ್ರೀ ಗುರು ಮಂತ್ರೋಪದೇಶ (43)

"ಅನಾದಿ ಗುರು ತನ್ನ ಭಾವ ಮನೋದೃಷ್ಟಿಗಳಿಂದ
ಚಿದ್ಘನ ಕಳೆಯನ್ನು ಹೊರತಂದು, ಶಿಷ್ಯನ ನೇತ್ರ ನೇತ್ರ ಕರಂಗಳಲ್ಲಿ
ಇಷ್ಟಲಿಂಗ ಕ್ರಿಯೋಪದೇಶದಿಂದ ಕರಿಗೊಳಿಸುವನಯ್ಯಾ
ಮಂತ್ರೋಪದೇಶದಿಂದ ಮನ-ಪ್ರಾಣಂಗಳಲ್ಲಿ ನೆಲೆಗೊಳಿಸುವನಯ್ಯಾ.
ಅಂತರಂಗ ಬಹಿರಂಗಗಳು ಭಯಂಗಗಳನ್ನು
ಲಿಂಗಮಯವಾಗಿಸಿ ಒಂದಾಗಿಸುವನಯ್ಯಾ
ಕ್ರಿಯಾ ಜ್ಞಾನಂಗಳನ್ನು ನಿಷ್ಪತ್ತಿಗೊಳಿಸಿ
ವಿಶ್ರಾಂತಿಗೊಳಿಸುವನಯ್ಯಾ."
ಅದನರುಹಲಾಗದು ಕಾಣಾ, ಶ್ರೀ ಶೈಲಮಲ್ಲಿಕಾರ್ಜುನ,"

---

ಟೀ :- **ಶಿವಾನುಭಾವ**

ಶ್ಲೋಕ ॥ ಸದಾ ಹೃದಯದೊಳ್ ಶಾಂತಿ । ಮುದುತ್ಕರ್ಷಂ ದಯಾರಸಮ್ ॥
ತದ್ವೈಕ ಪ್ರಣವಂ ಸೂಸ। ಲಿದೇ ಶಿವಾನುಭಾವವಯ್ ॥ 1 ॥

## ಲಿಂಗಧಾರಣೆಯ ಶ್ರೇಷ್ಠತೆ (44)

"ಪರಮ ಪರಿಪೂರ್ಣ ಶಾಂತಿ ಸುಖಾನುಭವಕ್ಕೆ
ಇಷ್ಟಲಿಂಗಧಾರಣೆಗಿಂತ ಮಿಗಿಲಾದ ಬೇರೊಂದು ಹೊಲಬಿಲ್ಲವಯ್ಯಾ!
ಏಕೆಂದರೆ, ನೆನಹಿನ ಬಯಕೆ ನೋಟ ಸುಖದಲ್ಲಿ ಅಡಗಿತ್ತು.
ನೋಡುವ ಬಯಕೆ ಮುಟ್ಟಿ ಪೂಜಿಸುವುದರಲ್ಲಿ ಅಡಗಿತ್ತು.

ಮುಟ್ಟಿ ಪೂಜಿಸುವ ಕ್ರಿಯಾಸಕ್ತಿಯು ಇಷ್ಟಲಿಂಗಧಾರಣದಲ್ಲಿ ಅಡಗಿತ್ತು. ಎಂದಡೆ ತುಂಬಿ ಬಂದಿತ್ತು. ಲಿಂಗಧಾರಣವೇ ಪರಮೈಕ್ಯದ(ಪರಶಿವ ಪದ) ಶಿವಪಥವೆನಿಸಿತ್ತು. ಇದು ಕಾರಣ ಲೋಕಕ್ಕೆ ಲಿಂಗಧಾರಣವೇ ಶ್ರೇಷ್ಠವೆನಿಸಿತ್ತು.

ಇಂತು "ಧರ್ಮಜ್ಞ" "ಕನ್ನಡ ಕವಿ ಕಾಳಿದಾಸ" ವಾಣಿ
ದೇವವಾಣಿ! ಕೇಳಾ, ಶ್ರೀ ಶೈಲಮಲ್ಲಿಕಾರ್ಜುನ!"

## ತ್ರಿವಿಧ ಪಾದೋದಕ-ಪ್ರಸಾದ (45)

"ಭಕ್ತದೇಹಿಕ ದೇವನೆಂದುದಾಗಿ ಸಚ್ಚಿದಾನಂದ ಸ್ವರೂಪನಾದ ಸದ್‌ಭಕ್ತ (ಸತ್-ಚಿತ್-ಆನಂದ) ಗುರು-ಲಿಂಗ-ಜಂಗಮ ತ್ರಿವಿಧ ರೂಪಾಗಿರ್ದ ನೋಡಾ!
ಇಂತಪ್ಪ ಮಹಾನುಭಾವಿ ಪರಮ ಭಕ್ತನು ತನ್ನಿಂದ ತಾನೇ ಭಾವಿಸಿ,

ಗುರು-ಲಿಂಗ-ಜಂಗಮ ರೂಪ ತಾನೆಯಾಗಿ ಪಾದೋದಕ ಪ್ರಸಾದವಂ
ಭಕ್ತಿಯಿಂ ಸ್ವೀಕರಿಸಿ, ಲೋಕಪೂಜ್ಯನಾಗಿರ್ದು ನಿತ್ಯ ನಿಜಾನಂದ
ಪರಮ ಸುಖಶಾಂತಿ ಸುಖದಲ್ಲಿಪ್ಪನಾಗಿ, ಇಂತಪ್ಪ ಶಿವಭಕ್ತಂಗೆ
ಅಧಿಕವಾದ ದೈವ ಭುವನತ್ರಯದೊಳುಂಟೇ? ಹೇಳಾ,
ಶ್ರೀ ಶೈಲಮಲ್ಲಿಕಾರ್ಜುನ!"

### ಶ್ರೀ ಗುರುಬಸವ ಲಿಂಗಾಯ ನಮಃ

### ಮಹಾಮಂತ್ರ ಮಹಿಮೆ-(46)

"ಶ್ರೀ ಗುರುಬಸವಲಿಂಗಾಯ ನಮಃ, ಎಂಬೀ ಮೂಲಪ್ರಣವ ಮಂತ್ರವನು
ಪಠಿಸುವಂಗೆ ಗುರು ಉಂಟು; ಲಿಂಗ ಉಂಟು, ಜಂಗಮ ಉಂಟು,
ಲಿಂಗಾಂಗ ಸಾಮರಸ್ಯ ಸುಖ ಸಕಳ ಶಿವ ಪದವುಂಟು ನೋಡಾ!

ಇಂತಪ್ಪ ಮಹಾಮಹಿಮಾಸ್ಪದ ವಾಗಿಪ್ಪ 'ಶ್ರೀ ಗುರುಬಸವಲಿಂಗಾಯನಮಃ'
ಮಹಾಮಂತ್ರವನು ಜಪಿಸದವಂಗೆ ಗುರುವಿಲ್ಲ; ಲಿಂಗವಿಲ್ಲ;
ಜಂಗಮವಿಲ್ಲವಾಗಿ ಅಂತಪ್ಪ ಅಜ್ಞಾನಿ ಭವಚಕ್ರದಲ್ಲಿ
ಬಪ್ಪುದು ತಪ್ಪದು ಕಾಣಾ, ಶ್ರೀ ಶೈಲಮಲ್ಲಿಕಾರ್ಜುನ."

### ಆದಿ ಪುರಾತ ಶ್ರೀ ಬಸವಣ್ಣ (47)

"ನಮ್ಮ ಬಸವಣ್ಣ ಅನಾದಿ ಪುರಾತ ನೋಡಾ,
ನಮ್ಮ ಬಸವಣ್ಣ ಆದಿ ಪುರುಷ ನೋಡಾ,
ನಮ್ಮ ಬಸವಣ್ಣ ನಾದ ಪುರುಷ ನೋಡಾ.
ನಮ್ಮ ಬಸವಣ್ಣ ವೇದ ಪುರುಷ ನೋಡಾ.
ನಮ್ಮ ಬಸವಣ್ಣ ಅಗಮ್ಯ ಪುರುಷ ನೋಡಾ.
ನಮ್ಮ ಬಸವಣ್ಣ ಅಪ್ರಮಾಣ ಪುರುಷ ನೋಡಾ.
ನಮ್ಮ ಬಸವಣ್ಣ ಸರ್ವಜ್ಞ ಪುರುಷ ನೋಡಾ.
ನಮ್ಮ ಬಸವಣ್ಣ ಸಕಲ ಸೃಷ್ಟಿ ಉತ್ಪತ್ತಿ-ಸ್ಥಿತಿ
ಲಯಂಗಳಿಗೆ ಕಾರಣ ಕರ್ತನು ನೋಡಾ.
ಅದು ಕಾರಣ ಶ್ರೀ ಶೈಲಮಲ್ಲಿಕಾರ್ಜುನ ಲಿಂಗದಲ್ಲಿ
ಭಕ್ತಿವಡೆದ ಅನಂತ ಭಕ್ತರೆಲ್ಲ ಬಸವಣ್ಣ ಬಸವಣ್ಣ
ಬಸವಣ್ಣ ಎನುತ್ತ ಬದುಕಿದರಯ್ಯಾ!"

### ಬಸವಣ್ಣನ ಮಹಾ ಘನತೆ (48)

"ಶಂಬುಮೂರ್ತಿ ಬಸವಣ್ಣ, ನಿಮ್ಮ ಮುಂದಿರ್ದು
ಕಾಲಮಾಯೆಗಳೆರಡೂ ನಿಮ್ಮ ಕಾಣೆನೆನುತಿಹವಯ್ಯಾ.

ಧರ್ಮಮೂರ್ತಿ ಬಸವಣ್ಣ, ನಿಮ್ಮ ಮುಂದಿರ್ದು
ಸುರಾಸುರರು ನಿಮ್ಮ ಕಾಣೆನೆನುತಿಹರಯ್ಯಾ.

ಮಂತ್ರಮೂರ್ತಿ ಬಸವಣ್ಣ, ನಿಮ್ಮ ಮುಂದಿರ್ದು
ನಾದ ಮಂತ್ರಗಳು ಪಂಚ ಮಹಾವಾದ್ಯಂಗಳು ನಿಮ್ಮ ಕಾಣೆನೆನುತಿಹವಯ್ಯಾ.

ಜ್ಞಾನಮೂರ್ತಿ ಬಸವಣ್ಣ, ನಿಮ್ಮ ಮುಂದಿರ್ದು
ವೇದ ಶಾಸ್ತ್ರಾಗಮಂಗಳು ನಿಮ್ಮ ಕಾಣೆನೆನುತಿಹವಯ್ಯಾ.

ಷಟ್‌ಸ್ಥಲಮೂರ್ತಿ ಬಸವಣ್ಣ, ನಿಮ್ಮ ಮುಂದಿರ್ದು
ಅಂಗಾಲ ಕಣ್ಣವರು ಮೈಯೆಲ್ಲ ಕಣ್ಣವರು ನಂದಿವಾಹನರು
ಗಂಗೆವಾಳುರೆಲ್ಲ ನಿಮ್ಮ ಕಾಣೆನೆನುತಿಹರಯ್ಯಾ.
ಲಿಂಗಮೂರ್ತಿ ಬಸವಣ್ಣ, ನಿಮ್ಮಮುಂದಿರ್ದು
ಗೋಚರಿಸದ ಮನು ಮುನಿ ದೇವದಾನವ
ಮಾನವರೆಲ್ಲ ನಿಮ್ಮಕಾಣೆನೆನುತಿಹರಯ್ಯಾ.

ದೇವಗುರುಮೂರ್ತಿ ಬಸವಣ್ಣ, ಈ ಅಪ್ರಮಾಣ ಪುರುಷರೆಲ್ಲರೂ
ನಿಮ್ಮ ಮುಂದಿರ್ದು ನಿಮ್ಮ ಕಾಣೆನೆನುತಿಹರಯ್ಯಾ.

ಭಕ್ತ-ಜಂಗಮಮೂರ್ತಿ ಬಸವಣ್ಣ, ಇಂತೀ ಸರ್ವಪ್ರಕಾರದವರೆಲ್ಲರೂ
ನಿಮ್ಮ ಸಾಧಿಸದೆ ನಿಮ್ಮ ಅಂತುಮ ಕಾಣದೆ ಹೋದರಯ್ಯಾ.

ಅದು ಕಾರಣ ಶ್ರೀಶೈಲ ಮಲ್ಲಿಕಾರ್ಜುನ ಲಿಂಗದಲ್ಲಿ ಭಕ್ತಿದಳೆದ
ಭಕ್ತರೆಲ್ಲ ಬಸವಣ್ಣ ಬಸವಣ್ಣ ಬಸವಣ್ಣ ಎನ್ನುತ್ತ ಬದುಕಿದರಯ್ಯಾ."

### "ಪ್ರಣವ" ಸ್ವರೂಪ ಬಸವಣ್ಣ (49)

"ಬಸವ, ಓಂಕಾರ' ಪ್ರಣವ' ಸ್ವರೂಪನಯ್ಯಾ!
'ಅ ಉ ಮ' (=ಓಂ) ಅಕ್ಷರತ್ರಯಂಗಳನುಚ್ಚರಿಸುವಲ್ಲಿ
ಆವಭಾವವುಂಟೋ ಅದೆ ಭಾವವು
ಬಸವ ನಾಮೋಚ್ಚರಣೆಯಲ್ಲಿಪ್ಪುದು ನೋಡಯ್ಯಾ!
ಇಂತೀ ಪ್ರಣವ ಸ್ವರೂಪನೆಂಬ ಸದ್ಭಾವನೆ, ಮೇಣ್ ಕೀರ್ತಿ
ಸೃಷ್ಟಿಯ ಆದಿಯಿಂದಲೂ ನಮ್ಮೀ ಮಂತ್ರಮೂರ್ತಿ

ವಿಶ್ವವಿಭೂತಿ ಮಹಾತ್ಮ ಬಸವಣ್ಣನೊಬ್ಬಂಗೆ ಮಾತ್ರ ಸಂದಿತ್ತು ಕೇಳಾ !
ಇದು ಮಹಂತ ಶಿವಶರಣರಾ 'ಪವಿತ್ರ ಪ್ರಣವ'
ಭಾವನೆಯ ಪ್ರತೀಕವಲ್ತೆ? ಹೇಳಾ! ಇದಕ್ಕೆ ನೀವೆ ಪ್ರಮಾಣ
ಶ್ರೀ ಶೈಲ ಮಲ್ಲಿಕಾರ್ಜುನ.'

---

ತೀ:-

### ಆತ್ಮ ಪ್ರಕಾಶ.

ಶ್ಲೋಕ|| ಲಿಂಗದಾ ದಿಟ್ಟಿಯಿಂದಂಗ | ಲಿಂಗವಾಗಲ್ಕದಾತ್ಮಧೀ||
ಮಂಗಳ ಪ್ರಭೆಯೊ ವಿದ್ಯುತ್| ಸಂಗತಂ ನೀಡೆ ತೇಜಸಮ್ || ಪ.1. ||

### ದಿವ್ಯ ದೃಷ್ಟಿ

ಮಾ.ವೃ|| ಸುರುಚಿರ ಶಾಂತಿಪೂರಿತ ನಿಕೇತನದೊಳ್ ನಲಿದಿರ್ದು ನೈಜದಿವ್ |
ನಿರುಪಮಮಾದ ನೀರವ ವಿಲಾಸ ನವೀನತೆಯಾತ್ಮ ಸೃಷ್ಟಿಯೊಳ್||
ಜರುಗುವ ಮೋಡಿಯಂ ತಿಳಿಯೆ ಯೋಗಿಲಲಾಮನೆ ದಿವ್ಯ ದೃಷ್ಟಿಯಿಮ್||
ಮರವೆಯ ಮಾನವಂಗಿಹ ರಹಸ್ಯಮ ನೋಳ್ಪಗೆ ಸಾಧ್ಯಮಾಗದಯ್||ಪ.2

### ಬಸವ ಮಂತ್ರಮೂರ್ತಿ (50)

"ಬ, ಕಾರವೆ ಭವಹರ ಗುರುವೆನಿಸಿತ್ತು.
'ಸ' ಕಾರವೆ ಸಕಲ ಚೈತನ್ಯಾತ್ಮಕ ಲಿಂಗವೆನಿಸಿತ್ತು.
'ವ' ಕಾರವೆ ವಹಿಸುವುದಕ್ಕೆ ಕಾರಣವಾದ ಜಂಗಮವೆನಿಸಿತ್ತು.
ಇಂತೀ ಬಸವಾಕ್ಷರತ್ರಯ 'ಗುರು-ಲಿಂಗ-ಜಂಗಮ' ತ್ರಿವಿಧ
ರೂಪಾಂತ ಪರಶಿವ ಸ್ವರೂಪವೆನಿಸಿತ್ತು.

ಇದು ಕಾರಣ ಆನು ಬಸವಾ ಬಸವಾ-ಬಸವಾ ಎನ್ನುತ್ತ
ಬದುಕಿದೆ ಕಾಣಾ ಶ್ರೀ ಶೈಲ ಮಲ್ಲಿಕಾರ್ಜುನ"

### ಬಸವ ನಾಮವೆ ದಿವ್ಯ ಮಂತ್ರ (51)

"ವಸುಧೆಯೊಳಗಸಮನಯನನ ರೂಪಿಯೆನಲು
ಬಸವ ನಾಮವೆ ದಿವ್ಯ ಮಂತ್ರವಾಗಿತ್ತು ನೋಡಾ.
'ಬ' ಎಂದೊಡೆ ನಾದ, 'ಸ' ಎಂದೊಡೆ ಬಿಂದು 'ವ' ಎಂದೊಡೆ ಕಲಾ
ಇಂತು ನಾದ-ಬಿಂದು-ಕಲಾತ್ಮ ಸ್ವರೂಪಿ ನಮ್ಮ ಬಸವಣ್ಣ ನೋಡಾ.
ಐಕ್ಯಸ್ಥಲ ಕಾಸಾರದಲ್ಲಿ ಹಂಸನಾಗಿ ವಿಹರಿಸಿದೊಡು
ಪರಮ ಗುರು ಬಸವಣ್ಣ ಭಕ್ತಿ ಭಂಡಾರಿ ನೋಡಾ.
ಬಸವಾ ಬಸವಾ ಎಂಬ ಮಹಾಮಂತ್ರ ವೊಸೆದೆಸೆದು
ಜಗವೆಲ್ಲ ತುಂಬಿಕೊಂಡು 'ಓಂಕಾರ 'ನಾದಮಯವಾಗಿತ್ತು ನೋಡಾ.
ಬಸವಾ ಬಸವಾ ಎಂಬ ಪರಮ ಪವಿತ್ರ ಮಂತ್ರ
ಜಗದಸಕಲ ಜೀವರಾಶಿಯ ಹೃನ್ಮಂದಿರದಿ ಬೆಳಗಿ
'ಬಿಂದು' ಮಯವಾಗಿತ್ತು ನೋಡಾ.
ವಿಶ್ವೋದ್ಧಾರಣ ವಿಶ್ವಾತ್ಮವಿಕಾಸವಾಗಿ

'ಕಲಾ' ಮಯವಾಗಿ ಕಂಗೊಳಿಸಿತ್ತು ನೋಡಾ.
ಇಂತಪ್ಪ ಅನಾದಿಯಿಂದಾದಿಗೆ ಆದಿಯಿಂದನಾದಿಗೆ,
ಸ್ವಲೀಲಾ ವಿಲಾಸ ಲೋಲ ಚಿತ್ತನಾಗಿ,
ವಿಹರಿಸುತ್ತಿಪ್ಪ ಮಂತ್ರ ಸ್ವರೂಪ ನಮ್ಮ ಸಂಗನ ಬಸವಣ್ಣನ
ಶ್ರೀ ಪಾದಕ್ಕೆ ನಮೋ ನಮೋ ಎಂದು
ಬ್ರಹ್ಮಾಂಡಗಳೆಲ್ಲ ಬದುಕಿಪ್ಪವು
ಕಾಣಾ, ಶ್ರೀ ಶೈಲಮಲ್ಲಿ ಕಾರ್ಜುನ."

ದೈವ ನಿರೂಪಣೆ (ಚಂ.ಮಾ-ವೃತ್ತ-ಉ-ಮಾ-ವೃತ್ತ)

ಸಲು / ದೇ } ವನ ಬಿಟ್ಟೊಡೊಂದದುರೆ ಜೀವನವುಂ ಬರಿದುಃಖದಾಯಕವ್‌।
ಕಳ / ಸಾ } ವಿನ ಭಾವದಿಂ ಬೆರೆಯೆ ಮೇಣ್ ಭ್ರಮೆ ಭೀತಿಯೊಳಂ ನಿರಂತರವ್‌
ತಿಳಿ / ಜೀ } ವನ ಮುಕ್ತಿಗಂ ತನುವಿದಂ ಸರುವಂ ಶಿವಲಿಂಗಕರ್ಪಿಸಲ್ ।
ಒಲಿ / ಪಾ } ವನ ದಿಟ್ಟಯಿಂ ಪಡೆವುತಂ ಸುಧೆ ಶಾಂತಿ ವಿಲಾಸವಮಾ ಸುಖವ್‌ ॥8॥

---

ಟೀ:—

## ಸದ್ಧರ್ಮ ದೀಪಿಕೆ.

ಶ್ಲೋಕ॥ ಮಾನವಂಗಾತ್ಮತೇಜಸ್ಸಂ। ಸಾನಂದಮಂ ಸುಶಾಂತಿಯವ್‌ ॥
ಜ್ಞಾನಾನು ಭಾವಮಂ ಧರ್ಮ। ಭಾನುವೀಗೆ ರಹಸ್ಯದೊಳ್ ॥1॥

## ಈಶ ಪ್ರಭಾವ

ಮ.ವಿ.ವೃ! ಶಿವತಾನೇ ಜಗಮೂಳ್ಪವಂ ಮರಳಿ ಸರ್ವಂ ಶೂನ್ಯಗೆಯ್ವಾತನುವ್‌ ।
ನವ ಲೀಲಾಂಬುಧಿಯೊಳ್ ಮಹಾರಚನೆಯಾ ಕಾರ್ಯ ಶ್ರುತಾ ರಕ್ಷಣಾವ್‌॥
ತವ ಪೂರ್ಣಂ ಮೆರೆವಾ ರಹಸ್ಯಮಿದ ಪೇಳಲ್ ಸಾರ ವೇದಾಂತಮೇ ।
ವಿವಶಪ್ರಾಯಮುದಾಗೆ ದಿವ್ಯಮತುಳಂ ಭ್ರಾಜಿಷ್ಣುನೀಶಂ ಶ್ರಿತವ್‌ ॥2॥

## ಧರ್ಮಧ್ವಜ.

ಕಂದ॥ ದೇವಗೆ ಮನುಜಗೆ ಮಧ್ಯದಿ।
ತೀವಿದ ಅಂತರವೆ ಧರ್ಮವೆನಿಸಿರೆ ನಿರುತವ್‌॥
ಸಾವಿರ ಯುಗಗಳಳಿದೊಡಂ
ಭೂವಿನುತಂ ನೆರೆಮೆರೆದಮರಧ್ವಜ ರೂಪವ್‌॥3॥

## ಶಿವ ಪದರತ್ನ

ಕಂದ॥ ನುಡಿಯಲಿ ಸತ್ಯವ ಬಳಸುತೆ
ನಡೆಯುತನವರತ ಸದಾಚರಣೆಯಿಂ ಭಕ್ತವ್‌॥
ಪಿಡಿದಿಹ ಬಕುತಿಯ ಪಥದಿಂ!
ಪಡೆಯಲ್ ಮುಕುತಿಯ ಮಹಂತ ಶಿವಪದ ರತ್ನವ್‌ ॥24॥

## ಕಡಿಮೆ ಹಣ ಖರ್ಚು ಮಾಡಿ

## ಹೆಚ್ಚು ಬಟ್ಟೆಗಳನ್ನು ಒಗೆಯಿರಿ.

- ಇದೀಗ ನೀವು ಸಾಬೂನಿಗೆ ಕಡಿಮೆ ಹಣ ಖರ್ಚು ಮಾಡಿ ಹೆಚ್ಚು ಬಟ್ಟೆಗಳನ್ನು ಒಗೆಯಬಹುದು.
- ಕಸ್ತೂರಿ ನೀಲಂ ಹಾಗೂ ಕಸ್ತೂರಿ ಬಾರ್ ಸೋಪ್ ಉಪಯೋಗಿಸುವುದರಿಂದ ಇದು ಸಾಧ್ಯ.
- ಕಸ್ತೂರಿ ಸಾಬೂನುಗಳು ಬಹು ಉಳಿತಾಯಕರವಾದುದು ಅಲ್ಲದೆ, ಪ್ರತಿ ಬಾರ್ ಸೋಪಿನಿಂದಲೂ ಹೆಚ್ಚು ಬಾರಿ ಒಗೆಯಲು ಸಾಧ್ಯವಾಗುತ್ತದೆ.
- ಇದರಲ್ಲಿ ವಿಶೇಷ ಡಿಟರ್ಜೆಂಟುಗಳು ಮಿಶ್ರಿತವಾಗಿರುವುದ ರಿಂದ ನಿಮ್ಮ ಉಡುಪುಗಳು ಬಿಳುಪಿಗಿಂತಲೂ ಅತ್ಯಧಿಕ ಉಜ್ವಲವಾಗಿರುತ್ತವೆ.

**ಕಸ್ತೂರಿ ಸಾಬೂನುಗಳನ್ನು ಇಂದೇ ಉಪಯೋಗಿಸಿರಿ**

**'ಕಸ್ತೂರಿ' ಬಾರ್ ಸೋಪ್**

**'ಕಸ್ತೂರಿ' ನೀಲಂ ಬಾರ್ ಸೋಪ್**

ತಯಾರಕರು :

**ರಾಮಕೃಷ್ಣ ಆಯಿಲ್ ಮಿಲ್, ತುಮಕೂರು**

# ವಿಜ್ಞಾನ ಮತ್ತು ಆಧ್ಯಾತ್ಮ

ಎಚ್. ಎಸ್. ನರಸಿಂಹ ಜೀಯರ್, ಶ್ರೀ ಬಸವೇಶ್ವರ ಇಂಗ್ಲೀಷ್ ಸ್ಕೂಲ್, ತುಮಕೂರು

ವಿಜ್ಞಾನದ ಬೆಳವಣಿಗೆಯು ವಿಶ್ವದ ಜನತೆಗೆ ಒಂದು ವರದಾನವಾಗಿದೆ ಎಂಬುದನ್ನು ಯಾರೂ ಅಲ್ಲಗಳೆಯುವಂತಿಲ್ಲ ಮಾನವನ ಸುಖ ಸಂಪತ್ತುಗಳಿಗೆ ಕಾರಣವಾದ ಈ ವಿಜ್ಞಾನದ ಮತ್ತೊಂದು ಮುಖವನ್ನು ಈಗ ನೋಡೋಣ.

ಅನೇಕ ವಿಖ್ಯಾತ ದಾರ್ಶನಿಕರು, ಮನೋವಿಜ್ಞಾನಿಗಳು, ಸಮಾಜ ಸುಧಾರಕರೂ ಅಲ್ಲದೆ ಸ್ವತಃ ವಿಜ್ಞಾನಿಗಳೂ ಸಹ ವಿಜ್ಞಾನದ ಬೆಳವಣಿಗೆಯಿಂದ ಮಾನವನು ತನ್ನ ಮೌಲ್ಯಗಳನ್ನು ಕಳೆದುಕೊಳ್ಳುತ್ತಾ ಬಂದಿದ್ದಾನೆ, ಅಲ್ಲದೆ ತನ್ನ ವಿನಾಶ ಅಂಚಿಗೆ ಬರುತ್ತಾ ಇದ್ದಾನೆ ಎಂದೂ ಸಹ ದೂರುತ್ತಿದ್ದಾರೆ. ವಾಸ್ತವವಾಗಿ ಇವರ ಅಭಿಪ್ರಾಯವನ್ನು ತುಲಾತ್ಮಕ ದೃಷ್ಟಿಯಿಂದ ನೋಡಿದಾಗ ಈ ವಾದದಲ್ಲಿ ಹುರುಳಿಲ್ಲದೆ ಇಲ್ಲ. ಡಾ॥ ಸಾಮ್ಯುಯಲ್ ಸ್ಯಾಂಡ್‌ವಿಸ್ ಎಂಬ ಮನೋವಿಜ್ಞಾನಿ ಈ ರೀತಿ ಹೇಳಿದ್ದಾನೆ. "All the hopes raised by science about building a better world order" have proved dupes." ಎಂದಿದ್ದಾನೆ. ಭೌತಶಾಸ್ತ್ರ ಪ್ರೊ॥ ಫಿಲಿಪ್ ಪ್ರ್ಯಾಂಕ್ ಎಂಬುವರು "Despite these benefits (from Science) mankind has not become happier and is facing to day dangers of which have their source in these very achievements." ಎಂದು ಮಾರ್ಮಿಕವಾಗಿ ತಿಳಿಸಿದ್ದಾರೆ.

ವಿಜ್ಞಾನದ ಆವಿಷ್ಕಾರದಿಂದ ತಿಳಿದ ತತ್ವಗಳನ್ನು ತತ್ವಜ್ಞಾನದಲ್ಲಿ ಬಳಸಿಕೊಂಡು ಮಾನವನು ತನ್ನ ನಾಶಕ್ಕೇ ಈಗ ಸಿದ್ಧವಾಗಿದ್ದಾನೆಂದ ಮೇಲೆ ಮೌಲ್ಯಗಳಿಗೆ ಬೆಲೆ ಎಲ್ಲಿದೆ? ಇದು ವಿಜ್ಞಾನದ ತಪ್ಪಲ್ಲ. ಅದನ್ನು ಉಪಯೋಗಿಸಿಕೊಳ್ಳುವ ನಮ್ಮದೇ ತಪ್ಪುದಾರಿಯಾಗಿದೆ ಮಾನವತ್ವದಿಂದ ದೈವತ್ವಕ್ಕೆ ಏರಲು ಪ್ರಯತ್ನಿಸಬೇಕಾದ ಮಾನವ ಮೌಲ್ಯರಹಿತನಾಗಿ ದಾನವತ್ವಕ್ಕೆ ಹೋಗುತ್ತಿದ್ದಾನೆ. ಇದನ್ನರಿತ ಡಾ॥ ಐನ್‌ಸ್ಟೀನ್‌ರವರು ಬಹು ಹಿಂದೆಯೇ ಈ ರೀತಿ ನುಡಿದಿದ್ದಾರೆ.

"In the event of a third world war, The weapens of destructions will leave nothing of the old, neither culture nor harmony, witn the result that the fews who will have survived or escaped will have to defend themselves in the fcurth world war with crude weapons of stone, bows and arrows". ವಿಜ್ಞಾನಿಯ ಈ

ಹೇಳಿಕೆಯಿಂದ, ನಮ್ಮ ವಿಜ್ಞಾನದ ಬೆಳವಣಿಗೆಯಿಂದ ತಯಾರಿಸಲ್ಪಟ್ಟ ಮಾರಕಾಸ್ತ್ರಗಳ ಪರಿಣಾಮ ಯಾವ ರೀತಿಯಾಗ ಬಲ್ಲದು ಎಂಬುದನ್ನು ನಾವೆಲ್ಲಾ ತೆರೆದ ಮನಸ್ಸಿನಿಂದ ನೋಡಬೇಕಾಗಿದೆ.

ವಿಜ್ಞಾನದ ಬೆಳವಣಿಗೆಯಿಂದ ಮೌಲ್ಯಗಳು ನಾಶವಾದ ಬಗ್ಗೆ ಹಾಗೂ ಭೌತಿಕವಾದ ಹೆಚ್ಚಾದ ಬಗ್ಗೆ ಕಾರಣವನ್ನು ಸ್ವತಃ ವಿಜ್ಞಾನಿಗಳೇ ಈ ರೀತಿ ಅಭಿಪ್ರಾಯ ಪಟ್ಟಿದ್ದಾರೆ.

"The overwhelming progress of science, its conquest of space and time, sound and light making his life materially rich and physically happy developed mechanistic faith and made man less significant than machine. This made him more insensitive to finer instincts and impulses in his nature which constitute main springs humanism. This growth of insensitiveness developed the anti—vedic view of life of the ancient "Charvaks" As a result altruism, charity self-less love, spirit of self sacrifice and allied finer qualities and values of life lost their place of importance in man's View. " In their place egotism, selfishness,, opportunism and acquisitiveness became the hall-mark of "wise livir g"

ಈ ಹೇಳಿಕೆಯನ್ನು ಪರಾಮರ್ಶಿಸಿದಾಗ ವಿಜ್ಞಾನಿಗಳ ಅಭಿಪ್ರಾಯವನ್ನು ನಾವೆಲ್ಲರೂ ಒಪ್ಪಲೇಬೇಕಾಗಿದೆ. ನಮ್ಮ ರಾಷ್ಟ್ರಾಧ್ಯಕ್ಷರಾಗಿದ್ದ ಹಾಗೂ ವಿಶ್ವದ ಪ್ರಸಿದ್ಧ ತತ್ವ ಜ್ಞಾನಿಗಳಾಗಿದ್ದ ಡಾ|| ಸರ್ವಪಲ್ಲಿ ರಾಧಾಕೃಷ್ಣರವರು ತಮ್ಮ ಅಭಿಪ್ರಾಯವನ್ನು ಸೂಚಿಸುತ್ತಾ " The modren man, intoxicated by the triumph of $cience has repudiated existence of God " ಎಂದು ಹೇಳಿ ವಿಜ್ಞಾನದ ಬೆಳವಣಿಗೆ ನಮ್ಮ ಸಮಾಜದಲ್ಲಿದ್ದ ಒಳ್ಳೆಯತನವನ್ನು ಕಡಿಮೆ ಮಾಡಿದೆ ಎಂದು ತಿಳಿಸಿದ್ದಾರೆ.

1975 ನೆಯ ಇಸವಿಯಲ್ಲಿ ದೆಹಲಿಯಲ್ಲಿ ನಡೆದ 62 ನೆಯ ವಿಜ್ಞಾನ ಕಾಂಗ್ರೆಸ್‌ನಲ್ಲಿ ಮಂಡಿಸಿದ ಪ್ರಬಂಧದಲ್ಲಿಯೂ ಮೇಲ್ಕಂಡ ಅಭಿಪ್ರಾಯವನ್ನು ಕಾಣಬಹುದು. "Indians in the course of 25 years after Indepen–dence, had become less kind, honest, Virtuous, Patriotic

spiritual and artistic and simple, but also more secular, cruel, dishonest, corrupt, traitorous materialistic, ferocious and radical. This erosion of character has entered deep in to our social and national life as well." ಇದು ಅಕ್ಷರಶಃ ಸತ್ಯವಾದ ಅಂಶವೆಂಬುದು ಎಲ್ಲರಿಗೂ ಈಗಾಗಲೆ ಮನಗಂಡಿದೆ.

ಇದಕ್ಕೆಲ್ಲಾ ವಿಜ್ಞಾನದಿಂದ ಮಾನವ ಪಡೆದ ಅನುಕೂಲಗಳೇ ಕಾರಣವೆಂದು H.G. Wells ರವರು ಮಾರ್ಮಿಕವಾಗಿ ಈ ರೀತಿ ತಿಳಿಸಿದ್ದಾರೆ "If the dangers, confusious and disasters that crowd upon man in these days are enormous beyond any experience of the past. It is because, science has brought such powers as he never had before."

ಹೆಸರಾಂತ ವಿಜ್ಞಾನಿಗಳಾದ ಡಾ॥ ಎ. ಕೆ. ಗಂಗೂಲಿ, ಡಾ॥ ಎಸ್. ಮಹಾಪಾತ್ರ ಮತ್ತಿತರ ವಿಜ್ಞಾನಿಗಳು ಈ ಬಗ್ಗೆ ಚಿಂತನೆ ಮಾಡಿ ಕಾರಣವನ್ನೂ ಊಹಿಸಿದ್ದಾರೆ.

In short, Science by ignoring the inner "being" of man has made lose the precious traditional values of life, without making any provision to create new one suited to the present age of reason and rationality."

ಇಂದಿನ ಸನ್ನಿವೇಶವನ್ನು ಕೂಲಂಕುಷವಾಗಿ ಯಾವ ದಾಕ್ಷಿಣ್ಯ ಮನೋಭಾವವೂ-ಇಲ್ಲದೆ ವಿಮರ್ಶಿಸಿದಾಗ ಎಂದಿಗಿಂತ ಇಂದು ಆಧ್ಯಾತ್ಮ ಶಿಕ್ಷಣ ಅತ್ಯಾವಶ್ಯಕ ಎಂಬ ಭಾವನೆ ಎಲ್ಲರಲ್ಲಿಯೂ ಮೂಡುವುದು ಸಹಜವಾಗಿಯೇ ಇದೆ.

---

ನಾವು ಮಾತಾಡಬಾರದು, ನಮ್ಮ ಕೆಲಸಗಳು ಮಾತನಾಡಬೇಕು.
ಅದು ವ್ಯಕ್ತಿತ್ವಕ್ಕೆ ಶೋಭೆ, ಆದರೆ ಇಂದು ಬರೀ ಮಾತಾಡುತ್ತಿದ್ದೇವೆ.
ಕೆಲಸಗಳು ಮೂಲ ಸ್ಥಿತಿಯಲ್ಲಿವೆ ಅಥವಾ ಕೇವಲ ಸೊನ್ನೆಗಳಾಗಿವೆ.

ಮಾನವನ ಮನ ನೊಂದೀತೆಂದು ಸತ್ಯಕ್ಕೆ ಅಪಚಾರ ಮಾಡಬಾರದು,
ಇದರಿಂದ ಹಾನಿ, ನಷ್ಟ, ಮತ್ತು ಭೀತಿ ಉಂಟಾಗುವುದು.

(ಸಂಗ್ರಹ: ಶಿವಕುಮಾರವಾಣಿ

# ಸಂಗೀತದ ಪ್ರೇರಣಾ ಮೌಲ್ಯಗಳು .

ಜಿ. ವೀರಭದ್ರಪ್ಪ, ಶಾಖಾ ವ್ಯವಸ್ಥಾಪಕರು. ಸ್ಟೇಟ್ ಬ್ಯಾಂಕ್ ಆಫ್ ಹೈದ್ರಾಬಾದ್,
ನೆಹರುಗಂಜ್ ಶಾಖೆ, ಗುಲಬರ್ಗಾ.

ಗಾಯನ, ನಾದನ, ನೃತ್ಯ ಈ ಮೂರು ಕಲೆಗಳ ಸಂಗಮವೆ ಸಂಗೀತ. ಗಾಯನವೆಂಧರೆ ಹಾಡುವದು ಅಥವಾ ಇದಕ್ಕೆ ಕಂಠ ಸಂಗೀತವೆಂದು ಹೇಳುವದುಂಟು. ನಾದನವೆಂದರೆ ವಾದ್ಯಗಳನ್ನು ನುಡಿಸುವುದು, ಇದರಲ್ಲಿ ತಂತು ವಾದ್ಯಗಳು ಸಿತಾರ, ಸರೋದ, ಸಂತೂರ, ಸಾರಂಗಿ, ಪಿಟೀಲೂ, ಗಿಟಾರ ಮುಂತಾದವು. ಊದುವ ವಾದ್ಯಗಳೆಂದರೆ ಕೊಳಲು, ಶಹನಾಯಿ, ಕ್ಲ್ಯಾರೊನೇಟ್ ಮುಂತಾದವು ಮತ್ತು ಚರ್ಮ ವಾದ್ಯಗಳೆಂದರೆ ಮೃದಂಗ, ತಬಲಾ, ಫಖಾವಜ, ಢೋಲಕೆ, ಮುಂತಾದವು. ನೃತ್ಯಕಲೆ ‹ಎಂದರೆ ಮನುಷ್ಯನ ಅಂತರಂಗದ ಭಾವನೆಗಳನ್ನು ನಯ ವಿನಯದಿಂದ ಅವಯವೋನ್ಮುಖವಾಗಿ ರೂಪಿಸುವ ಕಲೆ.

ನಾವು ಬಾಳುತ್ತಿರುವ ಸೃಷ್ಟಿ ಮುಖ್ಯವಾಗಿ ನಾಲ್ಕು ವೇದಗಳಿಂದಾಗಿದೆ ಎಂದು ಬಲ್ಲವರು ಹೇಳುತ್ತಾರೆ. ಅವುಗಳೆಂದರೆ ಋಗ್ವೇದ ಆರ್ಥವೇದ, ಯುಜುರ್ವೇದ ಮತ್ತು ಸಾಮವೇದ. ಈ ನಾಲ್ಕರಲ್ಲಿ ಒಂದಾಗಿದ್ದ ಸಾಮವೇದವೂ ಸಂಪೂರ್ಣವಾಗಿ ಸಂಗೀತ ಭರತವಾಗಿದೆ. ಸಂಗೀತದ ಜನ್ಮವೂ ಈ ವೇದದಿಂದಲೆಂದು ಹೇಳುತ್ತಾರೆ.

ಸಂಗೀತವ ತಾಯಿ ಬೇರೆಂದರೆ ನಾದ, ನಾದದಲ್ಲಿ ಎರಡು ಭಾಗಗಳು ಅಹತ ನಾದ, ಅನಾಹತನಾದ. ನಾವು ನಮ್ಮ ಎರಡು ಕಿವಿಗಳಲ್ಲಿ ಎರಡು ಬೆರಳುಗಳನ್ನು ಹಾಕಿಕೊಂಡು ಕೆಲವು ಗಳಿಗೆಗಳ ಕಾಲ ಪರಿಶೀಲಿಸಿದರೆ ಒಂದು ಬಗೆಯ "ಘನ ಘನ" ವೆಂಬ ನಾದ ಭಾಸವಾಗುವುದು, ಇದು ಅನಾಹತನಾದ. ಅಹತನಾದವೆಂದರೆ ಮುಟ್ಟು ವದರಿಂದ ಹುಟ್ಟುವನಾದ. ಸಂಗೀತದ ಸಂಬಂಧವೂ ಸಂಪೂರ್ಣವಾಗಿ ಈ ನಾದ ದಿಂದಲೇ ಇದೆ.

ಸಂಗೀತದಲ್ಲಿ ಮುಖ್ಯವಾಗಿ ಇರುವ ಸ್ವರಗಳೆಂದರೆ, ‹ಎಳು ಷಡಜ್, ರಿಕ್ಷಬ, ಗಾಂಧಾರ, ಮಧ್ಯಮ, ಪಂಚಮ, ಧೈವತೆ, ಮತ್ತು ನಿಷಾದ, ಸೂಕ್ಷ್ಮವಾಗಿ ಇವುಗಳಿಗೆ ಸ, ರಿ, ಗ, ಮ, ಪ, ಧ, ನಿ, ಎಂದು ಕರೆಯುವದುಂಟು. ಈ ಸ್ವರಗಳು ವೃಷಭ, ಕುರಿ, ಕೋಗಿಲೆ, ಆನೆ ಮತ್ತು ಕುದರೆ ಮುಂತಾದ ಪ್ರಾಣಿ ಮತ್ತು ಪಕ್ಷಿಗಳಿಂದ ಅಯ್ದು ಕೊಂಡರೆಂದು ನಮ್ಮ ಶಾಸ್ತ್ರಗಳಲ್ಲಿ ಹೇಳಿದ್ದುಂಟು. ಈ ಏಳು ಸ್ವರ ಸಮೂಹದಲ್ಲಿ ಸ, ಮತ್ತು ಪ ಎರಡು ಅಚಲ ಸ್ವರಗಳೆಂದು, ರೆ, ಗ, ಧ, ನಿ ಕೋಮಲ ಮತ್ತು ಶುದ್ಧ ಹಾಗೂ 'ಮ' ಸ್ವರವೂ ಶುದ್ಧ ಮತ್ತು ತೀವ್ರವೆಂದು ಒಟ್ಟು ಇವೆಲ್ಲವೂ ಕೂಡಿ ಹನ್ನೆರಡು ಸ್ವರಗಳಾಗಿ ಇವುಗಳ ವಾಸಿಸುವ ಸ್ಥಳಕ್ಕೆ ಸಪ್ತಕವೆಂದು ಕರೆಯುವದುಂಟು. ಐದು ಸ್ವರಗಳನ್ನು ಒಳಗೊಂಡ ರಾಗಕ್ಕೆ, ಔಡವ ಜಾತಿ ರಾಗವೆಂದು, ಆರು

ಸ್ವರಗಳ ರಾಗಕ್ಕೆ ಷಾಡವ ಜಾತಿ ಮತ್ತು ಏಳು ಸ್ವರಗಳಿಗೆ ಸಂಪೂರ್ಣ ಜಾತಿ ರಾಗಗಳೆಂ ಕರೆಯುತ್ತಾರೆ.

ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತವೂ ಮುಖ್ಯವಾಗಿ ಹತ್ತು ಥಾಟುಗಳಲ್ಲಿ ವಿಭಜಿಸಲಾಗಿದ್ದು, ಬೇರೆ ಬೇರೆ ರಾಗಗಳ ಜೋಡಾವಣೆ ಆಯಾ ಥಾಟುಗಳಿಗೆ ಅನು ಗುಣವಾಗುವಂತೆ ಮಾಡಲಾಗಿದೆ. ನಮ್ಮ ಶರೀರವೂ 24 ಗಂಟೆಗಳಲ್ಲಿ ವಾತ, ಪಿತ್ತ, ಕಫಗಳೆಂಬ ಮೂರು ಪ್ರಕೃತಿಗಳಲ್ಲಿ ಪರಿವರ್ತಿಸಲ್ಪಡುತ್ತದೆ ಎಲ್ಲ ರಾಗ ರಾಗಿನಿಗಳ ಗಾಯನದ ಸಮಯವೂ ಸಹ ಆಯಾ ಪ್ರಕೃತಿಗೆ ಅನುಗುಣವಾಗುವಂತೆ ನಿರ್ಧರಿಸಲಾಗಿದೆ.

ಸುಪ್ರಭಾತದಲ್ಲಿ ಹಾಡುವ ಮುಖ್ಯವಾದ ರಾಗಗಳೆಂದರೆ, ಭೈರವ, ಭೈರಾಗಿ, ವಿಭಾಸ, ತೋಡಿ, ಲಲಿತ ಮುಂತಾದವು, ಮಧ್ಯಾಹ್ನ ಕಾಲದ ರಾಗಗಳೆಂದರೆ ಅಸಾವರಿ, ಜೀವನಪುರಿ ಮುಂತಾದವು, ಗೋಧೂಳಿ ಸಮಯದಲ್ಲಿ ಹಾಡುವ ರಾಗಗಳು ಭಿಮಪಲಾಸ, ಪೂರಿಯಾ, ಮಾರವಾ, ಪೂರಿಯ ಧನ್ಯಾಶ್ರಿ ಮುಂತಾದವು. ರಾತ್ರಿ ಸಮಯದಲ್ಲಿ ಹಾಡುವ ರಾಗಗಳೆಂದರೆ ಯಮುನ, ಬಾಗೇಶ್ರಿ, ಭೂಪ, ಮಾರು ಬಿಹಾಗ, ಕೇದಾರ, ದರಬಾರಿ ಕಾನಡಾ, ನಂದ, ಹಂಸಧ್ವನಿ, ಪೂರಿಯಾ ಕಲ್ಯಾಣ, ಜೋಗ, ಮಾಲಕಂಸ, ಚಂದ್ರ ಕಂಸ, ಮುಂತ್ತಾದವು. ಈ ಎಲ್ಲ ರಾಗಗಳು ನಿಸರ್ಗದ ಜಡ, ಚೇತನ, ಮತ್ತೆಲ್ಲ ಚರಾಚರಗಳ ಮೇಲೆ ತನ್ನ ಘನವಾದ ರಸಭರಿತ ಪ್ರಭಾವವನ್ನು ಬೀರುತ್ತಾ ನಮ್ಮ ಮನಸ್ಸನ್ನು ಆನಂದರಸ, ಭಕ್ತಿರಸ, ಕರುಣಾರಸ ಮತ್ತು ವೀರರಸ, ಗಳನ್ನು ಒಳಗೊಂಡ ನವರಸಗಳ ಅಲೆಗಳಲ್ಲಿ ದೋಚಿಕೊಂಡು ಹೋದಾಗ ನಾವು ಬೆಪ್ಪಾಗಿ ಒಬ್ಬೊಂಟಿಗರಾಗಿ ನಮ್ಮ ಮನಸ್ಸು ಯಾವಾಗ ಹಿಂತಿರುಗಿ ಬಂದಿತೆಂಬ ದಾರಿಯನ್ನೇ ಕಾಯುತ್ತಿರುತ್ತೇವೆ.

ನಾವು ಬಾಳುವಂಥ ಈ ಪುಣ್ಯ ಭೂಮಿಯು ಅತಿ ಸುಂದರವಾಗಿದ್ದು, ಇದರ ಮೂಲೆ, ಮೂಲೆಗಳಲ್ಲಿಯೂ ಸಂಗೀತ ವಿಪುಲವಾಗಿ ತುಂಬಿಕೊಂಡಿದೆ. ಹರಿಯುವ ಜಲದಲ್ಲಿ ಇಂಪಾದ ಸುಸ್ವರದಲ್ಲಿ ಕಿಲಿ ಕಿಲಿಸುವ ಪಕ್ಷಿಗಳ ಮಂಜುಳವಾದ ಹಾಡಿನಲ್ಲಿ, ಜೀವನದ ಹೆಜ್ಜೆ ಹೆಜ್ಜೆಯಲ್ಲಿಯೂ ಸಂಗೀತ ತುಂಬಿದೆ. ಪರಮಾತ್ಮನ ಈ ಸೃಷ್ಟಿ ಎಲ್ಲವೂ ನಾದಮಯವಾಗಿ ಅಂದರೆ ಸಂಗೀತಮಯವಾಗಿದೆ. ಮಾನವನ ಜನ್ಮದಿಂದ ಮೃತ್ಯುವಿನವರೆಗೆ ಎಲ್ಲ ಸಂದರ್ಭಗಳಲ್ಲಿ ಸಂಗೀತವೂ ಹಾಸು ಹೊಕ್ಕಾಗಿ ಹೆಣಿದುಕೊಂಡು ಜೀವನದ ಸಂಜೀವಿನಿ ಆಗಿ ಪರಿಗಣಿಸಿದೆ. ಮಗು ಜನಿಸಿದ ಕೂಡಲೇ ತೊಟ್ಟಿಲಲ್ಲಿ ಹಾಕುವ ಸಮಾರಂಭದ ಶ್ರೀ ಗಣೇಶವೆಂದರೆ ಸಂಗೀತದಿಂದಲೆ, ಜೀವನ ನೌಕೆ ಮುನ್ನುಗ್ಗಿದಾಗ, ಲಗ್ನ, ಮತ್ತೆಲ್ಲ ಶುಭ ಮುಹೂರ್ತಗಳಲ್ಲಿ ಮಂಗಲ ವಾದ್ಯದ ಮಧುರ ನಿನಾದವು ನಮ್ಮೆಲ್ಲರ ಕಿವಿಗಳಿಗೆ ಇಂಪಾದ ನವರಸದ ಔತಣವನ್ನು ನೀಡುತ್ತದೆ. ಇಷ್ಟೇ ಅಲ್ಲದೆ ಸಂಗೀತದ ಪ್ರಭಾವದಿಂದ ಹುಲಿ, ಕರಡಿ, ಹಾವು ಮುಂತಾದ

ಎಲ್ಲ ಕ್ರೂರ ಜೀವ ಜಂತುಗಳು ತಮ್ಮನ್ನು ತಾವೇ ಮರೆತು ನಾದಬ್ರಹ್ಮನಲ್ಲಿ ತಲ್ಲೀನವಾ ತ್ತವೆ ವಿದ್ಯುತ್ ಶಕ್ತಿಗಿಂತಲು ಹೆಚ್ಚು ಚಾಪಲ್ಯತೆಯುಳ್ಳ ಮನುಷ್ಯನ ಮನಸ್ಸು ಚಂಚಲವಾ ಗದಂತೆ ಸೆರೆ ಹಿಡಿದು ನಿಲ್ಲಿಸುವ ಶಕ್ತಿ ಈ ಸಂಗೀತದಲ್ಲಿದೆ. ಈ ಕೆಲಸ ಸಾಮಾನ್ಯವಾ ದುದ್ದೆ! ಅಂತಯೇ ಇದನ್ನು ನಾದಬ್ರಹ್ಮವೆಂದು ಕರೆಯುತ್ತಾರೆ. ನಮ್ಮ ವಸುಂಧರೆ, ಭಾರತಮಾತೆ ಈ ಭೂಮಿ ಪುಣ್ಯ ಭೂಮಿ ಇಲ್ಲಿ ಸಂಗೀತವೂ ಇದೆ. ಈ ಮಣ್ಣಿ ನಲ್ಲಿ ಋಷಿ ಮುನಿಗಳ ತಪಸ್ಸು ಇನ್ನೂ ಪ್ರೇರಣೆಯಾಗಿದೆ. ಅದರಂತೆ ಸಂಗೀತ ಸಾಧನೆಯೂ ಒಂದು ದೊಡ್ಡ ತಪಸ್ಸು, ಇದು ಜೀವನದ ಉದ್ದಕ್ಕೂ ನಮ್ಮ ದೇಶ ದಲ್ಲಿ ಸಂಜೀವಿನಿಯಾಗಿ ನಿತ್ಯನೂತನವಾಗಿದೆ. ಆದುದರಿಂದಲೇ ಶಾಸ್ತ್ರೀಯ ಸಂಗೀತದ ಬೇರೆ ಬೇರೆ ಮನೆತನಗಳಿವೆ. ಅವುಗಳಿಗೆ ಘರಾನಾ ಎಂಬುದಾಗಿ ಇನ್ನೊಂದು ಹೆಸರು. ಅವುಗಳಲ್ಲಿ ಮುಖ್ಯವೆಂದರೆ ಗ್ವಾಲಿಯರ, ಮೇವಾತಿ, ಜಯಪೂರ, ಪಟಿಯಾಲಾ ಮೊದಲಾದ ಘರಾನುಗಳು. ಈಬೇರೆ ಬೇರೆ ಘರಾನಾಗಳು ತಮ್ಮದೇ ಆದ ಒಂದು ವಿಶಿಷ್ಟ ಶೈಲಿಯನ್ನು ಬೆಳೆಸಿಕೊಂಡು ಬಂದಿವೆ.

ಇತ್ತೀಚೆಗೆ ಸಂಗೀತದ ಆಧಾರದ ಮೇರೆಗೆ ಎಷ್ಟೋ ಪ್ರಯೋಗಗಳನ್ನು ಮಾಡ ಲಾಗಿದ್ದು, ಇದರ ಪ್ರಭಾವದಿಂದ ಹಸು ಹೆಚ್ಚು ಹಾಲನ್ನು ನೀಡುವುದಾಗಿ, ಬೆಳೆಗಳ ಇಳುವರಿ ಇಮ್ಮಡಿ ಆಗುವುದಾಗಿ ಕಂಡು ಹಿಡಿಯಲಾಗಿದೆ.

ಅತಿ ಕಠಿಣವೆಂದು ಪರಿಗಣಿಸಲ್ಪಟ್ಟ ರೋಗಗಳು ಯಾವ ಔಷಧಿಗಳಿಂದಲೂ ಗುಣಪಡಿಸಲು ಸಾಧ್ಯವಿಲ್ಲವೋ ಅಂಥ ರೋಗಗಳನ್ನು ಸಂಗೀತ ದಿಂದ ಗುಣಪಡಿಸಲು ಸಾಧ್ಯವೆಂಬುದನ್ನು ನಮ್ಮ ವಿಜ್ಞಾನಿಗಳು ಕಂಡು ಹಿಡಿಯುತ್ತಿದ್ದಾರೆ. ಇದರ ಬಗ್ಗೆ ಅನೇಕಾನೇಕ ಪ್ರಯೋಗಗಳು ನಡೆಯುತ್ತಲಿವೆ.

ಹಿಂದಿನ ಕಾಲದಲ್ಲಿ ಸಂಗೀತಕ್ಕೂ, ಕಲಾಕಾರರಿಗೂ, ರಾಜ್ಯಾಶ್ರಯ ಇದ್ದ ಕಾರಣ ಸಂಗೀತವು ಬೆಳೆದು ವೃದ್ಧಿಯಾಗಿ ಇಂದಿನವರೆಗೆ ಉಳಿದುಕೊಂಡು ಬಂದಿದೆ. ರಾಜಮಹಾರಾಜರ ಕಾಲವು ಕೊನೆಗೊಂಡು ಈಗ ನಾವು ಪ್ರಜಾರಾಜ್ಯದಲ್ಲಿ ಬಾಳುವ ಕಾಲ ಈಗ ಸಂಗೀತ ಮತ್ತು ಕಲಾಕಾರರನ್ನು ನೋಡಿಕೊಳ್ಳುವ ಸಂಪೂರ್ಣ ಬಾಧ್ಯತೆಯು ನಮ್ಮ ಸಮಾಜದ ಮೇಲೆ ಇದೆ. ಇವೆರಡರ ಬೆಳವಣಿಗೆ ಆಗಬೇಕಾದರೆ ನಾವೆಲ್ಲರೂ ನಮ್ಮ ನಮ್ಮ ಶಕ್ತಿಗೆ ಅನುಗುಣವಾಗಿ ತನು, ಮನ, ಧನದಿಂದ ಸಂಪೂರ್ಣ ಸೇವೆ ಸಲ್ಲಿಸುವುದು ಪ್ರತಿಯೊಬ್ಬ ನಾಗರೀಕನ ಪರಮಪವಿತ್ರವಾದ ಕರ್ತವ್ಯವೆಂಬುದನ್ನು ನಾವು ಮನವರಿಸಿಕೊಂಡು ಅದರಂತೆ ನಡೆಯಬೇಕು. ನಮ್ಮ ದೇಶದ ಅಗ್ರ ಗಣ್ಯ ಕಲಾಕಾರರು ಜಗತ್ತಿನ ಎಲ್ಲ ರಾಷ್ಟ್ರಗಳಿಗೆ ಭೇಟಿ ನೀಡಿ ಶಾಸ್ತ್ರಿಯ ಸಂಗೀತದ ರಸಧಾರೆಯನ್ನು ಹರಿಸಿ, ಭಾರತಾಂಬೆಯ ಕೀರ್ತಿ ಪತಾಕೆಯನ್ನು ಗಗನ ದುದ್ದಕ್ಕೆ ಹಾರಿಸಿ ಬಂದಿದ್ದಾರೆ. ಇದರ ಪರಿಣಾಮವಾಗಿ ಬಹಳಷ್ಟು ಜನರಲ್ಲಿ ಸಂಗೀತದ ಅಭಿರುಚಿ ಹುಟ್ಟಿ ಅದರ ಅಭ್ಯಾಸ ಮಾಡಲು ಅವರೆಲ್ಲ ಆರಂಭಿಸಿದ್ದಾರೆ. ಇದಕ್ಕೆ ನಿದರ್ಶನವೆಂದರೆ ಪಂಡಿತ ರವಿಶಂಕರವರು ಅಮೇರಿಕಾದಲ್ಲಿ ಸ್ಥಾಪಿಸಿದ 'ಕಿನ್ನರ

ವೆಂಬ ಸಂಗೀತ ಮಹಾವಿದ್ಯಾಲಯ ಆ ದೇಶದ ಸಾವಿರಾರು ಸ್ತ್ರೀ ಪುರುಷರು ಸಿತಾರವಾದನವನ್ನು ಕಲಿಯುತ್ತಿದ್ದಾರೆ. ಸುಮಾರು ಐದು ವರ್ಷಗಳ ಹಿಂದೆ ಲಂಡನ್ ನಗರದಲ್ಲಿ ಸಂಗೀತ ತಂತು ವಾದ್ಯಗಳ ದೊಡ್ಡ ಪ್ರದರ್ಶನವನ್ನು ಏರ್ಪಾಡು ಮಾಡಲಾಗಿತ್ತು. ಇದರಲ್ಲಿ ಜಗತ್ತಿನ ಎಲ್ಲ ರಾಷ್ಟ್ರಗಳು ಭಾಗವಹಿಸಿ ತಮ್ಮ ತಮ್ಮ ದೇಶದ ಪ್ರಸಿದ್ಧವಾದ ಎರಡೆರಡು ವಾದ್ಯಗಳನ್ನು ಪ್ರದರ್ಶಿಸಲಾಗಿತ್ತು, ಒಟ್ಟಿನಲ್ಲಿ ಸುಮಾರು 150 ಕ್ಕಿಂತಲೂ ಹೆಚ್ಚು ವಾದ್ಯಗಳು ಸೇರಿದ್ದವು, ಈ ಪ್ರದರ್ಶನ ಸುಮಾರು ಒಂದು ತಿಂಗಳು ಕಾಲ ನಡೆದಿದ್ದು ಕೊನೆಗೆ ಎಲ್ಲಾ ವಾದ್ಯಗಳಲ್ಲಿ ಅತಿ ಪುರಾತನವಾದದ್ದು ಮತ್ತು ಶ್ರೇಷ್ಠವಾದ ವಾದ್ಯಗಳ ಆಯ್ಕೆಯ ಸಮಯದಲ್ಲಿ ಒಮ್ಮತವಾಗಿ ಎಲ್ಲಾ ರಾಷ್ಟ್ರದ ವಿದ್ವಾಂಸರು ನಮ್ಮ ಭಾರತ ದೇಶದಿಂದ ಕಳುಹಿಸಿದ ಸಿತಾರ ಮತ್ತು ತಂಬೂರಿ (ತಾನಪುರಾ) ವಾದ್ಯಗಳು ಅತಿ ಪುರಾತನವಾಗಿದ್ದು ಜಗತ್ತಿನ ಎಲ್ಲಾ ತಂತು ವಾದ್ಯಗಳಲ್ಲಿಯೇ ಅತಿ ಶ್ರೇಷ್ಠವಾದ್ಯಗಳೆಂದು ನಿರ್ಣಯಿಸಿದ್ದಾರೆ. ಇವೆರಡು ವಾದ್ಯಗಳು ಒಂದು ಸಾವಿರಕ್ಕಿಂತಲೂ ಹೆಚ್ಚು ವರ್ಷಗಳ ಹಿಂದೆ ಹುಟ್ಟಿದ ವಾದ್ಯಗಳೆಂದು ಪರಿಗಣಿಸಲಾಗಿದೆ, ಇದು ನಮ್ಮ ಸಂಸ್ಕೃತಿ ಮತ್ತು ಕಲೆಯ ಹಿರಿಮೆಯನ್ನು ತೋರಿಸಿಕೊಡುತ್ತದೆ.

ಮನುಷ್ಯನು ಇಂದಿನ ತಾಂತ್ರಿಕ ಯುಗದಲ್ಲಿ ವಿಜ್ಞಾನದಲ್ಲಿ ಎಷ್ಟು ಸಾಫಲ್ಯತೆ ಪಡೆದರೂ ಅವನ ಮನಸ್ಸಿಗೆ ಶಾಂತಿ, ಸಮಾಧಾನವಿಲ್ಲ. ಇವುಗಳನ್ನು ಪಡೆಯಬೇಕಾದರೆ, ಮನಸ್ಸು ಏಕಾಗ್ರಚಿತ್ತವಾಗಬೇಕಾದರೆ ಸಂಗೀತದಿಂದಲೇ ಮಾತ್ರ ಸಾಧ್ಯ. ನಮ್ಮ ಪೂರ್ವಜರ ತಪಸ್ಸಿನ, ತ್ಯಾಗದ ಫಲವಾದ ಸಂಗೀತವು ನಮಗೆ ಅವರಿಂದ ಬಂದ ಅತಿ ದೊಡ್ಡ ಕಾಣಿಕೆ. ಅದರ ಹಿರಿಮೆ ಮತ್ತು ಬೆಲೆಯನ್ನು ಅರಿತು ಈ ಪರಂಪರೆಯನ್ನು ಕಾಪಾಡಿಕೊಂಡು ಹೋಗಿ ಮುಂದಿನ ಜನಾಂಗಕ್ಕೆ ಅದನ್ನು ಒಪ್ಪಿಸುವುದು ನಮ್ಮ ಕರ್ತವ್ಯ. ಈಗಾಗಲೇ ಕಾಲೇಜು ಮತ್ತು ಶಾಲೆಗಳಲ್ಲಿ ಮಕ್ಕಳಿಗೆ ಶಾಸ್ತ್ರೀಯ ಸಂಗಿತಾಭ್ಯಾಸ ಮಾಡಿಸುವ ಕೆಲಸ ನಡೆಯುತ್ತಿದ್ದು ಸಂಗೀತದ ಪ್ರತಿಭೆ ಮತ್ತು ಮಹತ್ವ ಹೆಚ್ಚುತ್ತಿದೆ. ಪ್ರತಿ ಒಬ್ಬ ನಾಗರೀಕನು ತನ್ನ ಕುಟುಂಬದಲ್ಲಿ ಕನಿಷ್ಠವೆಂದರೆ ಒಬ್ಬ ಮಗುವಿಗೆ ತಪ್ಪದೆ ಸಂಗೀತಾಭ್ಯಾಸ ಮಾಡಿಸಲು ಮುಂದೆ ಬರಬೇಕು. ನಮ್ಮ ಮನೆಯಲ್ಲಿ ಲಗ್ನ ಮುಂತಾದ ವಿಶೇಷ ಸಂದರ್ಭಗಳಲ್ಲಿ ಪವಿತ್ರವಾದ ಸಂಗೀತ ಕಾರ್ಯಕ್ರಮವನ್ನು ತಪ್ಪದೆ ಏರ್ಪಡಿಸಿದಲ್ಲಿ ಆ ಸಂದರ್ಭಕ್ಕೆ ಇನ್ನೂ ಹೆಚ್ಚಿನ ಶೋಭೆ ಬರುತ್ತದೆ.

ವಿದ್ಯಾಬುದ್ಧಿಯನ್ನು ನೀಡುವ ಶ್ರೀ ವಿಘ್ನೇಶ್ವರ ಮತ್ತು ಸರಸ್ವತಿ ಮಾತೆಯರು ನಮ್ಮೆಲ್ಲರಿಗೆ ಸಂಗೀತದ ಬೆಳವಣಿಗೆಗಾಗಿ ದುಡಿಯುವ ಶಕ್ತಿ ದಯಪಾಲಿಸಲೆಂದು, ನಾವು ಕರ್ತವ್ಯ ನಿಷ್ಠರಾಗಿ ಒಳ್ಳೆ ನಾಗರೀಕರಾಗಿ ಬಾಳಿ ನಮ್ಮ ದೇಶದ ಗೌರವ ಮತ್ತು ಕೀರ್ತಿಗಳನ್ನು ಇಮ್ಮಡಿಸಲು ಒಂದಾಗಿ ದುಡಿಯಲು ಪ್ರೇರಣೆ ನೀಡಬೇಕೆಂದು ಪ್ರಾರ್ಥಿಸಬೇಕು. ಓಂ ನಮೋ ನಾದಬ್ರಹ್ಮಣೇಯಃ ನಮಃ

# ಪ್ರಾಣಿಗಳಿಂದ ಭೂಕಂಪದ ಭವಿಷ್ಯ ?

ಪ. ರಾಮಕೃಷ್ಣ ಶಾಸ್ತ್ರಿ, ಶಿವಶಕ್ತಿ ನಿಲಯ, ಮಚ್ಚಿನ - 574295 ದಕ್ಷಿಣ ಕನ್ನಡ ಜಿಲ್ಲೆ.

ಉತ್ತರ ಇಟಲಿಯಲ್ಲಿ ೧೯೭೬ ರಲ್ಲಿ ಭೀಕರ ಭೂಕಂಪವೊಂದು ಸಂಭವಿಸಲು ಕೆಲವೇ ತಾಸುಗಳಿದ್ದವು ಆಗ ಇದ್ದಕ್ಕಿದ್ದಂತೆಯೇ ನಾಯಿಗಳು ಕರ್ಕಶವಾಗಿ ಬೊಗಳುತ್ತಲೇ ಇದ್ದವು ಏನೋ ಒಂದು ವಿನಾಶಕಾಲಕ್ಕೊಳಗಾದಂತೆ ಪಂಜರದೊಳಗಿದ್ದ ಹಕ್ಕಿಗಳು ರೆಕ್ಕೆ ಬಡಿಯತೊಡಗಿದವು. ಕೋಳಿಗಳು ಕೂಗಲಾರಂಭಿಸಿದವು. ದನ ಎತ್ತು ಮೊದಲಾದ ಪ್ರಾಣಿಗಳು ಹಗ್ಗ ಬಿಡಿಸಿಕೊಂಡು ಓಡ ತೊಡಗಿದವು. ಹಾವು, ಇಲಿಗಳು ಬಿಲದಿಂದ ಹೊರಬಂದು ದಿಕ್ಕು ದಿಕ್ಕಿನತ್ತ ಸಾಗಿದರೆ ಗುಡ್ಡಗಳಿಂದ ಜಿಂಕೆಗಳು ಕೆಳಗಿಳಿಯಲಾರಂಭಿಸಿದವು ........ ರೈತರು ಶೋಕಗಳ ಧಾಳಿಯ ಸೂಚನೆ ಎಂದು ತಿಳಿದಿದ್ದರು.

ಆದರೆ ಜಗತ್ತಿನ ಹಲವು ವಿಜ್ಞಾನಿಗಳಿಗೆ ಬಳಿಕೆ ಪ್ರಾಣಿಗಳ ಈ ವರ್ತನೆಗೆ ಭೂಕಂಪದ ಮುನ್ಸೂಚನೆಯೇ ಕಾರಣವೆಂಬುದು ಮನದಟ್ಟಾಯಿತು. ಭೂಕಂಪ ಸಂಭವಿಸುವ ಕೆಲವು ತಾಸುಗಳ ಮೊದಲು ಪ್ರಾಣಿಗಳ ವರ್ತನೆ ಬದಲಾಗುತ್ತದೆ. ಇದನ್ನಾಧರಿಸಿ ಭೂಕಂಪದ ಬಗೆಗೆ ಭವಿಷ್ಯ ನುಡಿಯಬಹುದೆಂದು ಹಲವಾರು ಮುಂದುವರೆದ ರಾಷ್ಟ್ರಗಳ ವಿಜ್ಞಾನಿಗಳೂ ಒಪ್ಪುತ್ತಾರೆ.

೧೯೭೬ ರಲ್ಲಿ ಚೀನದ ಹಾಯ್ ಚೆಂಗ್ ನಗರದಲ್ಲಿ ಸಹಸ್ರಾರು ಜನರ ಸಾವಿಗೆ ಕಾರಣವಾಗಬಲ್ಲುದೆಂದು ಚೀನಿ ವಿಜ್ಞಾನಿಗಳು ಭೂಕಂಪದ ಬಗೆಗೆ ಭವಿಷ್ಯ ನುಡಿದಾಗ ನಗರವಾಸಿಗಳು ಅಲ್ಲಿಂದ ವಲಸೆ ಹೋಗಲಾರಂಭಿಸಿದರು. ಆಗ ಇತರ ದೇಶಗಳ ವಿಜ್ಞಾನಿಗಳು ತಾಂತ್ರಿಕ ದೃಷ್ಟಿಯಿಂದ ಪ್ರಗತಿಹೊಂದದ ಚೀನದಲ್ಲಿ ಆಧುನಿಕ ವೈಜ್ಞಾನಿಕ ಯಂತ್ರಗಳೂ ಬಳಕೆಯಲ್ಲಿಲ್ಲ. ಇವರ ಹೇಳಿಕೆ ನಿಜವಾಗಲು ಹೇಗೆ ಸಾಧ್ಯ ಎಂದು ಬೆರಗಾಗಿ ಅದನ್ನು ಪರಿಶೀಲಿಸಲು ಹಾಯ್ ಚೆಂಗ್ ನಗರಕ್ಕೆ ಭೇಟಿಯಿತ್ತರು. ಚೀನಿ ವಿಜ್ಞಾನಿಗಳ ಹೇಳಿಕೆ ಅವರಿಗೆ ಅವಹೇಳನಕರವೆನಿಸಿತು.

ಅಮೇರಿಕದ ಭೂಗರ್ಭ ಶಾಸ್ತ್ರಜ್ಞರನ್ನೊಳಗೊಂಡು ಅಲ್ಲಿಗೆ ಬಂದ ವಿಜ್ಞಾನಿಗಳಿಗೆ ಚೀನೀ ಭೂಕಂಪ ವಿಶೇಷಜ್ಞರು ಪಶು ಪಕ್ಷಿಗಳ ವ್ಯವಹಾರದಲ್ಲಿ ಉಂಟಾದ ದಿಢೀರ್ ಬದಲಾವಣೆಯೇ ತಮ್ಮ ಹೇಳಿಕೆಗಳಿಗೆ ಕಾರಣವೆಂದರು. ಹೇಂಟೆಗಳು ಗೂಡಿನಿಂದ ಹೊರಬರಲು ಒದ್ದಾಡುತ್ತವೆ, ಹಾವುಗಳು ಬಿಲದಿಂದ ಹೊರಬಂದು, ಎಲ್ಲೆಡೆಯೂ ಹರಿದಾಡುತ್ತವೆ' ಮೀನುಗಳು ನೀರಿನಾಳ ಸೇರಿವೆ, ತರಬೇತಿ ಹೊಂದಿದ ಪೋಲಿಸ್ ನಾಯಿಗಳು ಒಡೆಯನ ಆಣತಿಗೆ ನಿರಾಕರಿಸುತ್ತಿವೆ. ಇದರೊಂದಿಗೆನಗರದ

ಬಳಿಯ ನೆಲದಲ್ಲೂ ಏರುಪೇರುಂಟಾಗಿದೆ. ಬಾವಿಗಳ ನೀರಿನ ಮಟ್ಟ ದಿಢೀರೆಂದು ಏರಿದೆ. ಬೆಟ್ಟಗಳ ಇಳಿಜಾರಿನಲ್ಲಿ ಸ್ವಲ್ಪ ಮಟ್ಟನ ಅಂತರವುಂಟಾಗಿದೆ. ನೀರಿನಲ್ಲಿ ರೇಡಿಯೋ ಥರ್ಮೊ ಅನಿಲ ರೇಡಾನಿನ ಪ್ರಮಾಣ ಏರಿದೆ ಎಂದು ತಿಳಿಸಿದ್ದಲ್ಲದೆ ೧೧ವರ್ಷಗಳ ಹಿಂದೆ ಪೀಕಿಂಗಿನಲ್ಲಿ ಭೂಕಂಪ ನಡೆದಾಗಲ ಇದೇ ರೀತಿಯ ಅವಸ್ಥೆ ಉಂಟಾಗಿತ್ತು. ಮೃಗಾಲಯಗಳ ಪ್ರಾಣಿಗಳು ವಿಚಿತ್ರವಾಗಿ ವರ್ತಿಸಿದ್ದವು. ಕೆಲವು ಪ್ರಾಣಿಗಳು ವರ್ತುಲಾಕಾರವಾಗಿ ಕುಣಿಯ ತೊಡಗಿದ್ದವು ಎಂದರು.

ಚೀನೀ ವಿಜ್ಞಾನಿಗಳ ಭವಿಷ್ಯ ಪ್ರಕಾರ ಹಾಯ್‌ಚೆಂಗ್ ನಗರದಲ್ಲಿ ಭೂಕಂಪ ಸಂಭವಿಸಿತು. ಮೊದಲೇ ಜನರು ವಲಸೆ ಹೋಗಿದ್ದುದರಿಂದ ಜನನಾಶವಾಗಲಿಲ. ೧೯೭೬ ರಲ್ಲಿ ದಕ್ಷಿಣ ಪೀಕಿಂಗಿನಲ್ಲಿ ಸಂಭವಿಸಿದ ಭೂಕಂಪದಿಂದ ಸಹಸ್ರಾರು ಜನರು ಸತ್ತರು. ರಾಷ್ಟ್ರಾಧ್ಯಕ್ಷಮಾವೋ ಭೂಕಂಪದ ಬಗೆಗೆ ಸ್ಪಷ್ಟ ಭವಿಷ್ಯವಾಣಿ ನುಡಿಯಲು ವಿಜ್ಞಾನಿಗಳಿಗೆ ನೀಡಿದ ಕರೆಯಂತೆ ರಾಷ್ಟ್ರೀಯ ಮಟ್ಟದ ಪ್ರಯೋಗಗಳು ನಡೆದವು. ಇದರಿಂದ ಪಶುಪಕ್ಷಿಗಳ ವರ್ತನೆಯಲ್ಲಿ ಆಗುವ ಬದಲಾವಣೆಯೇ ಭೂಕಂಪದ ನೈಸರ್ಗಿಕ ಮುನ್ಸೂಚನೆ ಎಂಬುದು ತಿಳಿಯಿತು.

ಅಲ್ಲದೆ ಭೂಕಂಪದ ಭವಿಷ್ಯ ಹೇಳಲು ಇನ್ನೊಂದು ಬೃಹತ್ ವ್ಯವಸ್ಥೆಯೂ ಅಲ್ಲಿ ರೂಪಿತವಾಗಿದೆ. ೫ ಸಾವಿರ ಭೂಗರ್ಭ ಶಾಸ್ತ್ರಜ್ಞರಿಂದ ತರಬೇತಿ ಹೊಂದಿದ ೧೦ ಲಕ್ಷ ಚೀನೀಯರು ಹಳ್ಳಿಯಲ್ಲಿರುವ ಜಲಾಶಯಗಳಲ್ಲಿ ನೀರಿನ ರೇಡಾನ್ ಅನಿಲ ಪ್ರಮಾಣ ಏರುತ್ತಿದೆಯೆ ಎಂದು ಆಗಾಗ ಅಳೆಯುತ್ತಾರೆ. ರೈತರು ಸಾಕಿದ ಪ್ರಾಣಿಗಳ ವರ್ತನೆಯಲ್ಲಿ ಅತಿರೇಕವುಂಟಾದರೆ ಸಂಬಂಧಿಸಿದ ವಿಭಾಗಕ್ಕೆ ತಿಳಿಸುವುದೂ ಅವರ ಕರ್ತವ್ಯವಾಗಿದೆ.

ಚೀನದ ಈ ಸಿದ್ಧಾಂತ ಬರೀ ಪೊಳ್ಳಲ್ಲ, ಸತ್ಯಾಂಶವಿದೆ ಎಂದು ಪಶ್ಚಿಮ ಜರ್ಮನಿಯ ಜೀವಭೌತಿಕ ವಿಜ್ಞಾನ ಹೆಲ್ಮೂತ್ ಟೇಬ್ರುಚ್ ಹೇಳುತ್ತಾರೆ. ಇಟಲಿಯ ಆಲ್ಪ್ಸ ಗಿರಿ ಪ್ರದೇಶದ ಬಳಿಯಲ್ಲಿ ಭೂಂಕಪ ಸಂಭವಿಸುವ ಕೆಲವು ತಾಸುಗಳ ಮೊದಲು ಬೆಕ್ಕುಗಳು ಮನೆ ಬಿಟ್ಟು ಎಲ್ಲೆಲ್ಲೋ ಓಡಿದ್ದವಂತೆ. ಪ್ರಾಣಿಗಳು ಹುಚ್ಚುಗಟ್ಟಿ ಓಡಲೆಳೆಸಿದವು. ಆದ್ದರಿಂದ ಪ್ರಾಣಿಗಳ ಭೂಕಂಪದ ಭವಿಷ್ಯ ನುಡಿಯುವ ಶಕ್ತಿ ಇದೆ ಎಂದು ಅವರ ವಾದ.

೧೯೭೪ರಲ್ಲಿ ಕೆಫೊರ್ಲೀರ್ನಿಯದಲ್ಲಿ ಭೀಕರ ಭೂಕಂಪ ಸಂಭವಿಸುವ ಮುನ್ನ ಕುದುರೆಗಳ ವರ್ತನೆ ಬದಲಾಯಿತು. ತರಬೇತಿ ಹೊಂದಿದ ಕುದುರೆಗಳು ಆಹಾರ ಸ್ವೀಕರಿಸದೆ ಮೊಂಡುತನದಿಂದ ನಿಂತುಕೊಂಡವು. ಕೆಲವು ಕೆಳಗೆ ಬಿದ್ದವು. ಅಮೇರಿಕದ ಭೂಗರ್ಭ ಶಾಸ್ತ್ರಜ್ಞರು ಈ ವಿಚಾರವನ್ನು ಉಲ್ಲೇಖಿಸಿದ್ದಾರಲ್ಲದೆ ವಿಜ್ಞಾನಿಗಳು ಇಂತಹ ಹಲವು

ಪ್ರಸಂಗಗಳನ್ನು ಈಗ ಆಳವಾಗಿ ಅಧ್ಯಯನ ಮಾಡುತ್ತ ಇದ್ದಾರೆ. ಅಮೇರಿಕದ ವಿಜ್ಞಾನಿ ಕ್ಲಾರಿನ್ಸ್ ಎಲೆನ್ ಪ್ರಕಾರ ಪ್ರಾಣಿ ಪಕ್ಷಿಗಳ ಅತಿರೇಕ ವರ್ತನೆ ಭೂಕಂಪದ ಭವಿಷ್ಯ ಹೇಳ ಬಲ್ಲುದೆಂಬುದನ್ನು ನಿರಾಕರಿಸುವಂತಿಲ್ಲ ಮನುಷ್ಯ ಮತ್ತು ವೈಜ್ಞಾನಿಕ ಯಂತ್ರ ಗಳಿಗಿಂತಲೂ ಭೌತಿಕ ಪ್ರಭಾವಗಳು ಹೆಚ್ಚು ಸಂವೇದನಾಶೀಲವಾಗಿರುತ್ತವೆ ಹಕ್ಕಿಗಳಿಗೆ ಅತಿ ಸೂಕ್ಷ್ಮ ಕಂಪನ ಗಳನ್ನು ತಿಳಿಯಬಲ್ಲ, ಅತೀತ ಕಿರಣಗಳನ್ನು ನೋಡಬಲ್ಲ ಶಕ್ತಿಯಿದೆ. ನಾಯಿಯ ಶ್ರವಣಶಕ್ತಿ ಮಾನವನಿಗಿಂತ ಅಧಿಕ. ನೆಲದಲ್ಲಿ ಭೂಕಂಪದ ಕೆಲವು ತಾಸುಗಳ ಮೊದಲೇ ಉಂಟಾಗುವ ಸೂಕ್ಷ್ಮ ಪರಿವರ್ತನೆ, ನಡುಕು ಅವಕ್ಕೆ ಅರಿವಾಗುತ್ತದೆ. ಅದರಿಂದ ಪಾರಾಗಲು ಯತ್ನಿಸುತ್ತವೆ. ಈ ಚಡಪಡಿಕೆಯೇ ಅವುಗಳ ವರ್ತನೆಯಲ್ಲಿ ಕಾಣುವ ಬದಲಾವಣೆ ಎನ್ನುತ್ತಾರೆ.

ಜರ್ಮನ್ ವಿಜ್ಞಾನಿಗಳ ಪ್ರಕಾರ ನೆಲದೊಳಗಿರುವ ಬಂಡೆಗಳು ಭೂಕಂಪಕ್ಕೆ ಸ್ವಲ್ಪ ಮೊದಲು ಮೇಲಿರುವ ಬಂಡೆಗಳ ಮೇಲೆ ಒತ್ತಡ ಹೇರುವವು. ಆಗ ಮಣ್ಣಿನ ಮೇಲ್ಪದರ ವಿದ್ಯುತ್ ಚುಂಬಕ ಶಕ್ತಿಗೊಳಗಾಗಿ ವಾತಾವರಣದ ಮೇಲೆ ಪ್ರಭಾವ ಬೀರುತ್ತದೆ. ಆದ್ದರಿಂದ ಪ್ರಾಣಿಗಳು ರೋಮಾಂಚನ ಹೊಂದಿ ಒದ್ದಾಟ ಆರಂಭಿಸುತ್ತವೆಯಂತೆ.

---

## ಆಜೀವ ಸದಸ್ಯರುಗಳಲ್ಲಿ ಒಂದು ಮನವಿ.

ಸಿದ್ಧಗಂಗಾ ಪತ್ರಿಕೆಯ ಅನೇಕ ಆಜೀವ ಸದಸ್ಯರುಗಳ ವಿಳಾಸಗಳು ಬದಲಾಗಿರುವುದರಿಂದ ಕಾರ್ಯಾಲಯದಿಂದ ಕಳುಹಿಸಿದ ಸಂಚಿಕೆಗಳು ಕೆಲವು ಸದಸ್ಯರುಗಳಿಗೆ ತಲುಪದೆ ಹಿಂತಿರುಗುತ್ತಿವೆ. ದಯವಿಟ್ಟು ನಿಮ್ಮ ಬದಲಾದ ವಿಳಾಸಗಳನ್ನು ಆಗಿಂದಾಗ್ಗೆ ಪತ್ರಿಕಾ ಕಾರ್ಯಾಲಯಕ್ಕೆ ಕಳುಹಿಸಿ ಕೊಡುವುದರ ಮುಖೇನ "ಸಿದ್ಧಗಂಗಾ" ನಿಮಗೆ ಕ್ರಮವಾಗಿ ತಲುಪಲು ಸಹಕರಿಸಬೇಕಾಗಿ ಪ್ರಾರ್ಥನೆ. **ತಮ್ಮ ಸದಸ್ಯತ್ವದ ನಂಬರನ್ನು ತಪ್ಪದೇ ತಿಳಿಸಿರಿ.**

ಪ್ರಕಾಶಕರು.

---

# ವಿದ್ಯಾರ್ಥಿ ಜೀವನದ ಬೆಳಕು ಸರಣಿ.

ಬಿ. ಎಸ್. ಕೃಷ್ಣಮೂರ್ತಿ ನಂ. 5, ಸೀತಾ ವಿಲಾಸ ರಸ್ತೆ, ಮೈಸೂರು. 570,024.

ನೀತಿಮಾರ್ಗ:- ವಿದ್ಯಾರ್ಥಿಗಳು ತಾವು ಓದುವ ಪರೀಕ್ಷೆಗಳಿಗೆ ಇಟ್ಟಿರುವ ಪುಸ್ತಕಗಳನ್ನು ಮಾತ್ರ ಓದಿದರೆ ಸಾಲದು. ಪರಮ ಶ್ರೇಷ್ಠ ಜ್ಞಾನಿಗಳ ನೀತಿ ವಚನಗಳಿಗೂ ಮನಸ್ಸನ್ನು ಕೊಡಬೇಕು. ಏಕೆಂದರೆ ನೀತಿ ಬಾಹಿರನ ಓದು ಎಷ್ಟೇ ಹಿರಿದಾಗಿದ್ದರೂ ಹೀನವೆಂದು ಪರಿಗಣಿಸಲ್ಪಟ್ಟಿದೆ ಒಬ್ಬ ಕವಿ ಹೀಗೆ ಹೇಳಿದ್ದಾನೆ.

ನೀತಿ ನೆಲೆಯನು ಅರಿತು ಚರಿಪುದು।
ಪಾತಕವು ಹಿಮ್ಮೆಟ್ಟುವುದು, ನಿಜ।
ನೀತಿರೀತಿಯತಿಳಿದು ನಡೆನವ ಜಗದಿಸಜ್ಜನನು ॥

ನಿಜ ಹೇಳುವುದಾದರೆ ಮೂರು ನಾಲ್ಕು ದಶಕಗಳ ಹಿಂದೆ ಶಾಲೆಗಳಲ್ಲಿ ವಿದ್ಯಾಭ್ಯಾಸ ಇಲಾಖೆಯುವರು ಪ್ರೈಮರಿ ತರಗತಿಗಳಲ್ಲಿ ನೀತಿ ಪಾಠಗಳನ್ನು ಬೋಧಿಸಲು ವಾರದಲ್ಲಿ ಎರಡು ಮೂರು ಪೀರಿಯಡ್‌ಗಳನ್ನ ಮೀಸಲಾಗಿಡುತ್ತಿದ್ದರು. ಈಚಿನ ವಿದ್ಯಾಭ್ಯಾಸದಲ್ಲಿ ಆಂಗ್ಲೇಯ ಭಾಷೆಯ ಮೋಹ ಹೆಚ್ಚು, ಹಿಂದೆ ಪ್ರಾಬಲ್ಯವಿದ್ದ ನೀತಿ ಪಾಠಗಳು ಮೂಲೋತ್ಪಾದನೆಯಾಗಿವೆ. ಇದು ವ್ಯಸನಕರ!

ಹಿಂದಿನ ದಿನಗಳಲ್ಲಿ ಅನೇಕ ಲೇಖಕರು ನೀತಿಕಥೆಗಳನ್ನು ಬರೆದಿದ್ದರು. ಆ ಪುಸ್ತಕಗಳನ್ನು ಶಾಲೆಗಳಲ್ಲಿ ಕಡ್ಡಾಯವಾಗಿ ಓದಲು ನೇಮಿಸುತ್ತಿದ್ದರು. ಹೀಗಾಗಿ ಪ್ರತಿ ವಿದ್ಯಾರ್ಥಿಯೂ ಆ ನೀತಿ ಪುಸ್ತಕಗಳನ್ನು ಕೊಂಡು ಓದಲೇಬೇಕಾಗಿತ್ತು. ಅದರಲ್ಲಿರುವ ನೀತಿಯನ್ನು ಅನುಷ್ಠಾನಕ್ಕೆ ತರಲೂಬೇಕಾಗಿತ್ತು.

ಹಿಂದಿದ್ದ ನೀತಿ ಕಥೆಗಳು 'ಕಥಾಸಪ್ತಕಿ' ಕಥಾಮಂಜರಿ, ನೀತಿಮಂಜರಿ' ನೀತಿ ಚಿಂತಾಮಣಿ, ನೀತಿಬೋಧೆ, ನೀತಿಸಾರ, ಎಂಬ ನಾಮಾಂಕಿತಗಳಿಂದ ಪ್ರಸಿದ್ಧವಾಗಿದ್ದವು ಇವುಗಳಲ್ಲಿ 'ನೀತಿ ಚಿಂತಾಮಣಿ' ಎಂಬ ಪುಸ್ತಕವು ಹೆಸರಾಂತ ನೀತಿ ನಿರ್ದೇಶಕರಿಂದ ಮೂರು ಭಾಗದ ಪುಸ್ತಕಗಳಾಗಿ ಪ್ರಸಿದ್ಧಿ ಹೊಂದಿವೆ.

ಮೇಲ್ಕಾಣಿಸಿರುವ ಮೂರು ಭಾಗಗಳಲ್ಲೂ ಪುರಾಣ, ಇತಿಹಾಸ, ರಾಮಾಯಣ, ಭಾರತ ಭಾಗವತದ ಕಥೆಗಳಿಂದ ಭರಿತವಾಗಿ, ವಿದ್ಯಾರ್ಥಿಗಳನ್ನು ಮನರಂಜಿಸುತ್ತಿದ್ದವು. ಅವುಗಳೆಲ್ಲಾ ಶ್ರೇಷ್ಠಮಟ್ಟದವು. ಈಗಿನ ವಿದ್ಯಾಭ್ಯಾಸ ಇಲಾಖೆಯವರು ಈ ಪುಸ್ತಕಗಳನ್ನು ತುಚ್ಛವಾಗಿ ಹಿಂದೆ ಸರಿಸಿರುವುದು ತುಂಬಾವ್ಯಸನಕರವೆಂದು ಹೇಳದೆ ವಿಧಿಯಿಲ್ಲ. ಆದ್ದರಿಂದಲೇ ಈಗಿನ ವಿದ್ಯಾರ್ಥಿಗಳು ನೀತಿ ಏನೆಂಬುದನ್ನೇ ತಿಳಿಯದೆ ಅ ನೀತಿವಂತರಾಗಿ ದೇಶಕ್ಕೂ, ಸಮಾಜಕ್ಕೂ ಕಂಟಕರಾಗಿರುವರು.

ಇಂಥಾ ಅನೀತಿವಂತ ವಿದ್ಯಾರ್ಥಿಗಳನ್ನು ತಿದ್ದಿ ಅವರ ಏಳಿಗೆ ಯತ್ನಿಸದಿರುವುದು ದುರದೃಷ್ಟಕರ. ಈ ಕನ್ನಡ ನೀತಿ ಕಥೆಗಳ ಮಾದರಿಯಲ್ಲಿ, ಆಂಗ್ಲೇಯ ಭಾಷೆಯಲ್ಲಿ "ಈಸೋಫ" ನಕಥೆಗಳು ಮಾದರಿಯಾಗಿವೆ. ಈ ಕಥೆಗಳು ಓದಿದಾಗ ವಿದ್ಯಾರ್ಥಿಗಳ ಮನಸ್ಸಿನ ಮೇಲೆ ಹೆಚ್ಚು ಸತ್ಪರಿಣಾಮಗಳನ್ನು ಬೀರುವಂಥಾ ನೀತಿಕಥೆಗಳಾಗಿವೆ. ಇವನ್ನು ಓದಲು ಮನರಂಜನೆಯಾಗಿ, ರಂಜಿಸುತ್ತಿವೆ ಮಾತ್ರವಲ್ಲದೆ ಜ್ಞಾನಾರ್ಜನೆಗೆ ಸಹಕಾರಿಯಾಗಿವೆ. ಇನ್ನೂ ಹೇಳಬೇಕೆಂದರೆ ಸಂಸ್ಕೃತದಲ್ಲಿಯೂ 'ಹಿತೋಪದೇಶ,' 'ಪಂಚತಂತ್ರ' ಗಳೆಂಬುವುಗಳು ವಿದ್ಯಾರ್ಥಿಗಳನ್ನು ಮಾತ್ರವಲ್ಲದೆ ನೀತಿಗಳ ನೆಲಗಟ್ಟನ್ನು ಅರಿಯಲು ಸಾರ್ವಜನಿಕರಿಗೂ ಸರಿಸಮಾನವಾಗಿವೆ. ಈ ನೀತಿಗಳು ಆದರ್ಶಗಳ ಮೂಲಕ ಓದುಗರ ಮನಸ್ಸಿನ ಮೇಲೆ ಪ್ರತಿಬಿಂಬಿತವಾಗಿ, ಉತ್ತಮ ಪರಿಣಾಮವನ್ನು ಬೀರುತ್ತವೆ. ಇದು ಮಾತ್ರವಲ್ಲದೆ ಜ್ಞಾನ, ತಿಳುವಳಿಕೆ ಹೆಚ್ಚುವುದೆಂಬುದನ್ನು ಸಂದೇಹ ಪಡದೆ ಒಪ್ಪಬಹುದಾಗಿದೆ. ಇವು ಸನ್ಮಾರ್ಗದರ್ಶಿಗಳೆಂದು ತಿಳಿಯಬೇಕು.

ಯಾರು ನೀತಿ ಮಾರ್ಗದಲ್ಲಿ ನಡೆಯುತ್ತಾರೋ, ಸತ್ಪುರುಷರನ್ನು ತಮ್ಮ ಸೇವೆಯಿಂದ ತೃಪ್ತಿಪಡಿಸುವರೋ ಅವರ ಸಮಾನ ಶ್ರೇಷ್ಠರು ಯಾರು ಇಲ್ಲ. ಇಂಥವರನ್ನು ಮಹಾತ್ಮರೆಂದು ಕರೆಯಬಹುದು, ನೀತಿಯೊಂದಿಗೆ ಶೀಲವನ್ನೂ ಉಳಿಸಿಕೊಂಡರೆ ಅಂಥವರ ಬಾಳು ಸಾರ್ಥಕ. ನೀತಿ ಅನುಕರಣೆಯಿಂದ ಪಾಪಶಂಕೆಯ ಭಯವಿಲ್ಲ. ಸುಜ್ಞಾನವು ನೀತಿಗಳ ಸಾರವೇ ಆಗಿದೆ! ಈ ನೀತಿಯೇ ಮನುಷ್ಯನಿಗೆ ರಕ್ಷಾಕವಚ. ಅನೀತಿಗೊಳಗಾದ ಮಾನವ ಅಧಃಪತನ ಹೊಂದುತ್ತಾನೆಂಬುದು ಕಟುಸತ್ಯ!



# ವರತಪಸ್ವಿ (ಧಾರಾವಾಹಿ - ೨)

ಜಿ. ರಾಧಾದೇವಿ, ಕಾದಂಬರಿಗಾರ್ತಿ, ಬೆಸ್ತವಾರ ಪೇಟೆ, ರಾಯಚೂರು - 584101

ಸಂ;- ಶ್ರೀ ಧರ್ಮಸ್ಥಳದ ಮಂಜಯ್ಯ ಹೆಗ್ಗಡೆ ಅವರ ಮಹಾಸಾಧನೆ ಕುರಿತು ಜಾನಪದದ ರೂಪದ ಧಾರಾವಾಹಿಯಾಗಿ ಪರಿಚಯಮಾಡಿಕೊಟ್ಟಿದ್ದಾರೆ.

ನಮ್ಮ ಶ್ರೀ ಮಂಜಯ್ಯ ಹೆಗಡೇರು ಸುವ್ವಲಾಲಿ
ಶ್ರೀ ಕ್ಷೇತ್ರದ ಗುರುವಾಗಿ ಬಾಳಿದರು ಸುವ್ವಲಾಲಿ,
ನಮ್ಮ ಶ್ರೀ ಮಂಜಯ್ಯ ಹೆಗಡೇರು ಸುವ್ವಲಾಲಿ,
ಶ್ರೀ ಕ್ಷೇತ್ರದ ದೊರೆಯಾಗಿ ಬಾಳಿದರು ಸುವ್ವಲಾಲಿ.

ಶ್ರೀ ಮಂಜಯ್ಯ ಹೆಗಡೆಯವರ ಅಧಿಕಾರ ಲೌಕಿಕ ಕ್ಷೇತ್ರದಲ್ಲಿಯೂ ವಿಜೃಂಭಿಸಿತು, ಮದ್ರಾಸ್ ಲೆಜಿಸ್ಲೇಚರ್ ಕೌನ್ಸಿಲ್ ಸದಸ್ಯರಾಗಿ ಕಾರ್ಯ ನಿರ್ವಹಿಸಿದ ಇವರು ಅನೇಕ ಮಂತ್ರಿ ಮಾನ್ಯರೊಡನೆ ಗಣ್ಯ ನ್ಯಾಯಾಧೀಶರೊಡನೆ ಸ್ನೇಹ ಸಂಪರ್ಕ ಹೊಂದಿದ್ದರು.

ಅಧಿಕಾರ, ಕೀರ್ತಿ, ಸಂಪತ್ತು ಎಲ್ಲಾ ಒಲಿದು ಬಂದಿದ್ದರೂ ಇವರು ಅತ್ಯಂತ ಸರಳ ಜೀವಿಗಳಾಗಿದ್ದರು, ಉದಯಕಾಲದಲ್ಲೆದ್ದು ಸ್ನಾನ, ದೇವತಾ ಪ್ರಾರ್ಥನೆ ಮಾಡಿ ಶ್ರೀ ಕ್ಷೇತ್ರದ ಆಡಳಿತದ ಉಳಿದ ಕಾರ್ಯಗಳ ಕಡೆ ಗಮನ ಕೊಡುತ್ತಿದ್ದರು. ಆಗ ಶ್ರೀ ಕ್ಷೇತ್ರ ಮಲೇರಿಯ ರೋಗದ ಕೊಂಪೆಯಾಗಿತ್ತು. ಮಲೇರಿಯ ರೋಗ ನಿರ್ಮೂಲನ ವೆಂಬ ಮಹಾ ಸಮರ ಸಾರಿ ಪ್ರಕೃತಿಯನ್ನೇ ಗೆದ್ದರು.

ಹೊಂಡಗಳನ್ನು ಮುಚ್ಚಿಸಿ ಎಲ್ಲೆಲ್ಲೂ ಹಸಿರು ತೋಟ ಗಿಡಮರಗಳಿಂದ ಸ್ವಚ್ಛ ಹವೆ ಬರುವಂತೆ ಮಾಡಿ ಹೊಸದಾದ ಭಾವಿಗಳನ್ನೂ ತೋಡಿ ಅದರ ಸುತ್ತಮುತ್ತಲು ಶುಚಿಯಾದ ಪರಿಸರ ನಿರ್ಮಿಸಿದರು.

ಹೊಳೆಯಿಂದ ಶುದ್ಧೀಕರಿಸಿದ ನೀರು ಪೈಪುಗಳ ಮೂಲಕ ಹರಿದು ಬರುವಂತೆ ಮಾಡಿದರು, ಶುದ್ಧತ್ವವೇ ದೈವತ್ವ ಎಂಬ ಮಹತ್ವವನ್ನು ಚೆನ್ನಾಗಿ ತಿಳಿದ ಇವರು ತಮ್ಮ ಕಾರ್ಯಗಳ ಮೂಲಕ ಜನರಿಗೆ ಅದನ್ನು ಸಾರಿ ತೋರಿದರು.

ರೋಗಿಗಳಿಗೆ ಪ್ರತ್ಯೇಕ ಕೊಠಡಿಗಳೂ, ಉಚಿತ ಔಷಧೋಪಚಾರ ಹಾಗೂ ರೋಗ ಹರಡದಂತೆ ಮುನ್ನೆಚ್ಚರಿಕೆ ಕ್ರಮ ಈ ಎಲ್ಲಾ ವಿಧಿ ವಿಧಾನಗಳಿಂದಾಗಿ ಶ್ರೀ ಕ್ಷೇತ್ರ ಹಾಗೂ ಸುತ್ತಮುತ್ತಲ ಪ್ರದೇಶಗಳು ಆರೋಗ್ಯದ ಬೀಡಾದವು,

ಶ್ರೀ ಕ್ಷೇತ್ರದ ಉತ್ಪತ್ತಿ ಹೆಚ್ಚಿಸಬೇಕು. ಇದು ಅವರ ಮನದಲ್ಲಿ ಮೊದಲು ಮೊಳೆತ ವಿಚಾರ, ಶ್ರೀ ಕ್ಷೇತ್ರಕ್ಕೆ ಸೇರಿದ ಭೂಮಿ ಎಲ್ಲೆಲ್ಲಿದೆಯೆಂದು, ಮೊದಲು ದಾಖಲೆ ಸಮೇತ ಸಿದ್ಧಪಡಿಸಿಕೊಂಡು ಅಲ್ಲೆಲ್ಲಾ ರೈತರನ್ನು ಬಿಟ್ಟು ಬೇಸಾಯ ಮಾಡಿಸಿದರು.

ಶ್ರೀ ಕ್ಷೇತ್ರದ ಕೆಲವು ಪ್ರದೇಶಗಳಂತು ಬಂಜರು ಭೂಮಿಯಾಗಿತ್ತು, ಕೆಲವಾರು ವರ್ಷಗಳಿಂದ ಬೇಸಾಯ ಮಾಡದೆ ಕಾಡುಕಂಟಿಯಾಗಿ ಬಿದ್ದ ಕೆಲವು ಪ್ರದೇಶಗಳು. ಆಪ್ತರು .... ಇದು ಆಗದ ಕಾರ್ಯವೆಂದು ಹಿಂಜರಿದರೂ .... ಇವರು ಸಾಧಿಸಲೇ ಬೇಕೆಂದು ಸಂಕಲ್ಪ ತೊಟ್ಟರು.

ರೈತರಿಗೆ ವಸತಿ, ಆಹಾರ, ಬಿತ್ತುವ ಬೀಜ ಉಳುಮೆಗೆ ಎತ್ತು ತಾವೇ ನೀಡಿ ಅವರಿಗೆ ಹೊಲ ನೀಡಿದರು. ಮಾರ್ಗ ದರ್ಶನ ನೀಡಿದರು. ಮೊದಲು ನಾಲ್ಕಾರು ವರ್ಷ ಗೇಣಿ ಸಹ ಸ್ವೀಕರಿಸಲಿಲ್ಲ.

ಶ್ರೀಕ್ಷೇತ್ರದ ಬೇರೆ ಬೇರೆ ಕಡೆ ಅಡಿಕೆಯ ತೋಟ ತೆಂಗಿನ ತೋಟಾ, ಬಾಳೆ ತೋಟಾ ಮಾಡಿಸಿದರು. ಸುಂದರವಾದ ಉದ್ಯಾನವನಗಳನ್ನು ಬೆಳೆಸಿದರು. ಇವರ ಪ್ರತಿ ಕಾರ್ಯದ ಹಿಂದೆ ಶ್ರೀ ಮಂಜುನಾಥ ಸ್ವಾಮಿ ಇದ್ದ.

ದೈವಾನು ಗ್ರಹದಿಂದ ಸುವ್ವಲಾಲಿ
ಇವರು ಕೈಗೊಂಡ ಕಾರ್ಯಗಳೆಲ್ಲ ಜಯವಾಯ್ತು ಸುವ್ವಲಾಲಿ.
ಧರ್ಮದ ಬಲದಿಂದ ಸುವ್ವಲಾಲಿ
ಇವರ ಸಂಕಲ್ಪ ಫಲಿಸಿತು ಸುವ್ವಲಾಲಿ.

ಮಹಾ ಧರ್ಮಿಷ್ಠರಾದ, ದೈವ ಭಕ್ತರಾದ ಶ್ರೀ ಮಂಜಯ್ಯ ಹೆಗಡೆಯವರ ಎಲ್ಲಾ ಕಾರ್ಯಗಳೂ
ಎಲ್ಲಾ ಹೊವೆತ್ತಿದಂತೆ ಹಗುರಾಯಿತು. ಅವರ ಮನೋಬಲಕ್ಕೆ ಜಯವಾಯಿತು.

ಒಯಲು ಹಸುರಾಗಿತ್ತು ಸುವ್ವಲಾಲಿ
ಬಂಜರು ಫಲವತ್ತಾಯ್ತು ಸುವ್ವಲಾಲಿ
ಹರಿವ ನೇತ್ರವತಿ ಧಾರೆಯೊಡನೆ ಸುವ್ವಲಾಲಿ
ಹರುಷಧಾರೆ ಹರೆದಿತ್ತು ಸುವ್ವಲಾಲಿ

ದೀನ ದಲಿತರೆಂದರೆ, ಕಷ್ಟದಲ್ಲಿ ಸಿಲುಕಿದವರು ಎಂದರೆ ಶ್ರೀ ಮಂಜಯ್ಯ ಹೆಗಡೆ ಯವರ ಮನಸ್ಸು ಕರಗುತ್ತಿತ್ತು.

1923 ನೆ ಇಸವಿಯಲ್ಲಿ ದೊಡ್ಡ ನೆರೆಯ ಹಾವಳಿಯಿಂದ ಆ ವರ್ಷದ ಹೊಲ ಗಳು ಹಾಳಾಗಿ ಬೆಳೆ ಕೊಚ್ಚಿ ಕೊಂಡು ಹೋದವು, ರೈತರು, ಜನಸಾಮಾನ್ಯರು ಅನ್ನ ಆಹಾರಕ್ಕಾಗಿ ಹಾಹಾಕಾರ ಪಡುವಂತಾಯಿತು. ಇದೇ ಸಮಯದಲ್ಲಿ ಕೆಲವು ಕಳ್ಳಸಂತೆ ಲಾಭ ಕೋರರು ಸಿಕ್ಕಾ ಪಟ್ಟೆ ಬೆಲೆ ಏರಿಕೆ ಮಾಡಿ ಜನರನ್ನು ದೋಚ ತೊಡಗಿದರು, ಸಾಮಾನ್ಯವಾಗಿ ನ್ಯಾಯಬೆಲೆ ಮಾರಾಟವೇ ಮುಡಿಗೆ ಹದಿನಾರು ರೂಗಳಾಯಿತು.

ಬಡವರ ಕಷ್ಟ ಹಾಹಾಕಾರ ಗಮನಿಸಿದ ಶ್ರೀ ಮಂಜಯ್ಯ ಹೆಗಡೆಯವರು, ಮುಡಿಗೆ ಆರು, ಏಳು ರೂ ಕ್ರಯವಿಟ್ಟು ಅಕ್ಕಿ ವಿತರಿಸಿದರು, ಸಾವಿರಾರು ಜನಕ್ಕೆ ಎರಡು ಹೊತ್ತು ಉಚಿತ ಊಟ ಕೊಡುವ ಏರ್ಪಾಡು ಮಾಡಿದರು, ಹೀಗೆ ಕಷ್ಟಕ್ಕೆ ತುತ್ತಾದ ಜನರಿಗೆ ಉಪಕಾರ ಮಾಡುವುದರಲ್ಲಿ ಅವರು ಎತ್ತಿದ ಕೈ.

ಬೆಳದಿಂಗಳು ಸುರಿದಂತೆ ಸುವ್ವಲಾಲಿ
ಅವರ ಪರೋಪಕಾರಗಳು ಹರಡಿತ್ತು ಸುವ್ವಲಾಲಿ
ಸೂರ್ಯಕಿರಣ ಥಳಥಳಿಸಿದಂತೆ ಸುವ್ವಲಾಲಿ
ಅವರ ಸದ್ಗುಣ ಮೆರೆದು ವಿಜೃಂಭಿಸಿತ್ತು ಸುವ್ವಲಾಲಿ.

ಶ್ರೀ ಮಂಜಯ್ಯ ಹೆಗಡೆಯವರ ಕುಟುಂಬ ಜೀವನವೂ ಸುಂದರ ಸುಮಧುರ. ವಾಗಿತ್ತು. ಧರ್ಮಪತ್ನಿ ಲೋಕಮ್ಮ ಪತಿಗೆ ತಕ್ಕ ಸದ್ಗುಣ ಶಾಲಿಯಾಗಿದ್ದರು.

---

"ಎನ್ನ ಕುಲಸೂತಕವ ಕಳೆದಾತ ಬಸವಣ್ಣ,
ಎನ್ನ ಛಲಸೂತಕವ ಕಳೆದಾತ ಬಸವಣ್ಣ,
ಎನ್ನ ತನು ಸೂತಕವ ಕಳೆದಾತ ಬಸವಣ್ಣ,
ಎನ್ನ ಮನ ಸೂತಕವ ಕಳೆದಾತ ಬಸವಣ್ಣ,
ಎನ್ನ ಭಾವ ಸೂತಕವ ಕಳೆದಾತ ಬಸವಣ್ಣ,
ಎನ್ನ ಅಱಿಹು ಮಱಹಿನ ಸಂದು ಸಂಶಯವ ಬಿಡಿಸಿದಾತ ಬಸವಣ್ಣ,
ಎನ್ನ ತನ್ನೊಳಗೆ ಇಂಬಿಟ್ಟು ಕೊಂಡಾತ ಬಸವಣ್ಣ,
ನಿಜದ ನಿರ್ವಯಲ ಬಾಗಿಲ ನಿಜವ ತೋಱಿದಾತ ಬಸವಣ್ಣ,
ಬಸವಣ್ಣಪ್ರಿಯ ಚೆನ್ನಸಂಗಯ್ಯನ ಹೃದಯ ಕಮಲದಲ್ಲಿ
ನಿಜನಿವಾಸಿಯಾಗಿರಿಸಿದ ಎನ್ನ ತಂದೆ ಸಂಗನ ಬಸವಣ್ಣನು"

- ಬಸವಣ್ಣನವರು.

## ಬಸವ ಮಹಿಮೆ

'ಬಸವ' ಎಂಬ ಮೂರಕ್ಷರ ಹೃದಯಕಮಲದಲ್ಲಿ ನೆಲೆಗೊಂಡಡೆ,
ಅಭೇಧ್ಯ ಭೇದ್ಯವಾಯಿತ್ತು; ಅಸಾಧ್ಯ ಸಾಧ್ಯವಾಯಿತ್ತು.
ಇಂತು ಬಸವಣ್ಣನಿಂದ ಲೋಕ ಲೌಕಿಕದ ಕುಭಾಷೆಯ ಕಳೆದು,
ಲೋಕಾಚರಣೆಯನತಿಗಳೆದು ಭಕ್ತಿ ಭರವಪ್ಪುದು,
ಕೂಡಲ ಚನ್ನಸಂಗಯ್ಯನಲ್ಲಿ ಬಸವಣ್ಣನ ಕಾರುಣ್ಯದಿಂದ.

- ಚನ್ನಬಸವಣ್ಣ.

COMFORTABLE
LUXURIOUS &
PEACEFUL
STAY
AT

# KENCHAMBA LODGE




SUBEDAR CHATRAM ROAD CROSS
NEAR KAPALI THEATRE
GANDHINAGAR
BANGALORE-
Ph. 27082 GRAM.: KENCHMLODG

# ಶಿಕ್ಷಣಯೋಗಿ, ಡೆಪ್ಯೂಟಿ ಚನ್ನಬಸಪ್ಪನವರ ಕನ್ನಡ ಸೇವೆ.

ವಿ|| ಜಿ ಬಿ. ಶಿವಸ್ವಾಮಿ, ನಂ. 2306 ಜ್ಞಾನಸದನ, ಆರ್.ಪಿ ಸಿ. ಬಡಾವಣೆ, 2ನೆ ಹ
ವಿಜಯನಗರ, ಬೆಂಗಳೂರು-4011

ಕನ್ನಡ ನಾಡು ನುಡಿಯ ಅಭಿವೃದ್ಧಿಗಾಗಿ ಅನೇಕ ಮಹನೀಯರು ಶ್ರಮಿಸಿದ್ದಾರೆ ಅವರುಗಳಲ್ಲಿ ಡೆಪ್ಯುಟಿ ಚನ್ನಬಸಪ್ಪನವರೂ ಒಬ್ಬರು. ಕನ್ನಡ ನಾಡು-ನುಡಿಯನ್ನು ಕಟ್ಟಿ ಬೆಳೆಸಿದವರ ಚರಿತ್ರೆಯನ್ನು ಇಂದಿನ ಯುವ ಪೀಳಿಗೆಗೆ ಪರಿಚಯ ಮಾಡಿ ಕೊಡುವುದು, ಅವಶ್ಯಕವಾಗಿದೆ. ಮಹಾತ್ಮರ ಜೀವನದ ದರ್ಶನ ಒಂದು ಪುಣ್ಯಕರ ಅವರು ತೀರ್ಥಕ್ಷೇತ್ರವಿದ್ದಂತೆ. ಆದರೆ ತೀರ್ಥಕ್ಷೇತ್ರ ಕಾಲದಲ್ಲಿ ಫಲವನ್ನು ಕೊಡುತ್ತದೆ ಸತ್ಪುರುಷರ ಜೀವನ ಚರಿತ್ರೆಯನ್ನು ಅಭ್ಯಾಸ ಮಾಡಿದರೆ ಉತ್ತಮ ಗುಣ ಮತ್ತು ಕರ್ತವ್ಯ ಪ್ರಜ್ಞೆಗಳು ಜಾಗೃತಿಗೊಳ್ಳುತ್ತವೆ. ಕನ್ನಡ ನಾಡಿನ ಗಂಡು ಭೂಮಿಯಾದ ಧಾರವಾಡದಲ್ಲಿ ಕಾಯಕ ನಿರತರಾದ ಬಸವಲಿಂಗಪ್ಪ ಮತ್ತು ಶರಣೆ ತಿಪ್ಪವ್ವ ಇವರ ಗರ್ಭಸುಧಾಂಬುಧಿಯಲ್ಲಿ ಕನ್ನಡ ನುಡಿಯ ಅಭಿಮಾನವನ್ನು ಹುಟ್ಟುವಾಗಲೆ ಮೈಗೂ ಡಿಸಿಕೊಂಡು 1833 ರಲ್ಲಿ ಚನ್ನಬಸಪ್ಪನವರು ಜನಿಸಿದರು. ಹಿರಿಯರು ದೊಡ್ಡ ಬಸಪ್ಪನೆಂದ ನಾಮಕರಣ ಮಾಡಿ ಹರಸಿದರು ಆದರೆ ದೈವಲೀಲೆ ವಿಚಿತ್ರವಾಗಿತ್ತು.

ನಾಡಿನಲ್ಲಿ ಅನೇಕ ಮಕ್ಕಳು ಬಾಲ್ಯದಲ್ಲಿಯೇ ತಂದೆ ತಾಯಿಗಳನ್ನು ಕಳೆದು ಕೊಂಡು ಅನಾಥರಾಗುತ್ತಾರೆ. ಅವರ ಜೀವನ ಅನೇಕ ಕಷ್ಟಕಾರ್ಪಣ್ಯಗಳಿಗೆ ಸಿಕ್ಕಿ ಬಾಲ್ಯದಲ್ಲಿಯೇ ನಂದಿ ಹೋಗುತ್ತದೆ. ಕೆಲವು ಸಾಹಸಿಗಳು ತಮಗೆ ಬಂದ ಕಷ್ಟ ಕಾರ್ಪಣ್ಯಗಳನ್ನು ಧೈರ್ಯದಿಂದ ಎದುರಿಸಿ ತಮ್ಮ ಜೀವನ ಸಾಫಲ್ಯಕ್ಕಾಗಿ ಹೋರಾ ಡುತ್ತಾರೆ. ಅಂತಹ ಸಾಧಕರಲ್ಲಿ ಡೆಪ್ಯೂಟಿ ಚನ್ನಬಸಪ್ಪ ಹಸುಳೆಯಾಗಿದ್ದಾಗಲೇ ಇವರ ತಂದೆ ಬಸವಲಿಂಗಪ್ಪನವರು ಇಹಲೋಕವನ್ನು ತ್ಯಜಿಸಿದರು. ತಾಯಿ ಮತ್ತು ಮಗ ಅನಾಥರಾದರು. ಆ ತಾಯಿ ತನ್ನ ಮಗನಿಗಾಗಿ ಬಂದ ಕಷ್ಟಗಳನ್ನು ದಿಟ್ಟ ತನದಿಂದ ನಿವಾರಿಸಿಕೊಂಡು ಹಗಲಿರುಳು ಶ್ರಮಿಸಿ ತನ್ನ ಮಗನನ್ನು ಜೋಪಾನ ಮಾಡುತ್ತ ವಿದ್ಯಾವಂತನನ್ನಾಗಿ ಮಾಡಲು ನಿರ್ಧರಿಸಿದರು. ಅಂದಿನ ಕಾಲದಲ್ಲಿ ಪ್ರತಿ ಯೊಂದು ಊರಿಗೂ ಶಾಲೆ-ಕಾಲೇಜುಗಳಿರಲಿಲ್ಲ. ಮಗನ ವಿದ್ಯಾಭ್ಯಾಸವನ್ನು ಮಾಡಿಸಲು ಬಹಳ ಶ್ರಮ ಪಡಬೇಕಾಯಿತು, ಅಲ್ಲಲ್ಲಿ ಕೆಲವು ಗುರುಕುಲಗಳು, ಅಯ್ಯ ನವರ ಶಾಲೆ ಮಠಗಳಲ್ಲಿಯೇ ವಿದ್ಯಾಭ್ಯಾಸ ನಡೆಯುತ್ತಿತ್ತು. ಆ ಪ್ರದೇಶದಲ್ಲಿ ಶಾಲೆ ಮಠವನ್ನು ನಡೆಸುತ್ತಿದ್ದ ಶಿವರುದ್ರಯ್ಯನವರ ಬಳಿ ಚನ್ನಬಸಪ್ಪನನ್ನು ಕರೆದುಕೊಂಡು ಹೋಗಿ ಅಯ್ಯನವರೇ ಈ ನನ್ನ ಅನಾಥಮಗನಿಗೆ ಕೃಪೆಮಾಡಿ ವಿದ್ಯಾಭ್ಯಾಸ ಮಾಡಿಸಬೇಕು, "ಬಂಧುಗಳು ಆದವರು ಬಂದುಂಡು ಹೋಗು ವರು. ಬಂಧನವ ಕಳೆಯಲರಿಯರು ಗುರುವಿಂದ ಬಂಧುಗಳುಂಟೆ ಸರ್ವಜ್ಞ" ಎಂದು ಹೇಳಿದ್ದಾರೆ, ತಂದೆ ತಾಯಿಗಳಿಗಿಂತ ಗುರುಕರುಣೆ ಅವಶ್ಯಕವಾಗಿದೆ. ಆಚಾರ

ವಿಚಾರ ದೇಶಾಭಿಮಾನ, ಭಾಷಾಭಿಮಾನವನ್ನು ಬೋಧಿಸಿ ಈತನನ್ನು ವಿದ್ಯಾವಂತನನ್ನಾಗಿ ಮಾಡುವುದು ತಮ್ಮದು ಎಂದು ಹೇಳಿ ಗುರುಗಳ ಬಳಿ ಬಿಟ್ಟು ಹೋದರು.

ಶಾಲೆ ಮಠದ ಶ್ರೀ ಶಿವರುದ್ರಯ್ಯನವರು ಹಂತ ಹಂತವಾಗಿ ಚನ್ನಬಸಪ್ಪನ ಚುರುಕುತನ, ಕಲಿಕೆಯ ಆಸಕ್ತಿ, ಶ್ರದ್ಧೆ, ಯಾವುದನ್ನಾದರು ಸಾಧಿಸಬಲ್ಲೆನೆಂಬ ನಂಬಿಕೆಯನ್ನು ಗುರುತಿಸಿ ತಮ್ಮಲ್ಲಿ ಇರುವ ವಿದ್ಯೆಯನ್ನು ಬೋಧಿಸಿ ವಿದ್ಯಾಸಕ್ತನನ್ನಾಗಿ ಮಾಡಿದರು. ಕನ್ನಡ ಕಲಿಕೆಯ ಜೊತೆಗೆ ಮರಾಠಿ ಮತ್ತು ಗಣಿತವನ್ನು ಕಲಿಸಿಕೊಟ್ಟರು, ಹಳಗನ್ನಡದ ಕಾವ್ಯಗಳನ್ನು ಓದಿ ತಿಳಿಯುವ ಅಭಿರುಚಿ ಬೆಳೆಸಿಕೊಂಡರು, ಜೊತೆಗೆ ಅವರಲ್ಲಿ ಗಣಿತ ಮತ್ತು ಇಂಗ್ಲಿಷ್ ಭಾಷೆಯನ್ನು ಉನ್ನತ ಮಟ್ಟದಲ್ಲಿ ಅಭ್ಯಾಸಮಾಡುವ ಆಸಕ್ತಿ ಮೂಡಿತು. ಶಾಲೆ ಮಠದಲ್ಲಿ ಕೆಲವು ವರ್ಷಗಳು ಅಭ್ಯಾಸ ಮಾಡಿ ಮುಗಿಸಿದರು. ಶ್ರೀ ಶಿವರುದ್ರಯ್ಯ ಮಾಸ್ತರು ಉನ್ನತ ವ್ಯಾಸಂಗ ಮಾಡಲು ಚನ್ನಬಸಪ್ಪನಿಗೆ ಉತ್ತೇಜಿಸಿದರು. ಆಗಿನ ಕಾಲದಲ್ಲಿ ವ್ಯವಹಾರಗಳು ಪ್ರಾಂತೀಯ ಭಾಷೆಯ ಜೊತೆಗೆ ಇಂಗ್ಲೀಷ್‌ನಲ್ಲಿ ನಡೆಯುತ್ತಿದ್ದವು. ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಪುಣೆಗೆ ಹೋಗಬೇಕೆಂಬ ಹಂಬಲ ಚನ್ನಬಸಪ್ಪನಿಗೆ. ಆದರೆ ಬಹುದೂರವಿರುವ ಪುಣೆಗೆ ಹಣವಿಲ್ಲದೆ ಹೇಗೆ ಹೋಗುವುದು ? ಬಡತನದಲ್ಲಿಯೇ ಜೀವನ ನಡೆಸುತ್ತಿದ್ದ ತಾಯಿಗೆ ಬಹುದೂರ ಸ್ವಾರ್ಥವಿರಲಿಲ್ಲ. ಬಂಧುಗಳನ್ನು ಭೇಟಿಮಾಡಿ ವಿದ್ಯಾಭ್ಯಾಸದ ಆಸಕ್ತಿಯನ್ನು ತೋರಿಕೊಂಡರು, ಅವರಿಂದಲೂ ನಿರುತ್ಸಾಹದ ಉತ್ತರ ಬಂತು. ಯಾರು ಅವರನ್ನು ವಿದ್ಯಾಭ್ಯಾಸಕ್ಕೆ ಕಳುಹಿಸಲು ಮುಂದೆ ಬರಲಿಲ್ಲ. ಬಾಲಕ ಚನ್ನಬಸಪ್ಪನ ಉತ್ಸಾಹ ಮಾತ್ರ ನಿಲ್ಲಲಿಲ್ಲ. ಮಲಗಿದ್ದ ತಾಯಿಗೆ ಮನಸ್ಸಿನಲ್ಲಿಯೇ ವಂದಿಸಿ ತನ್ನ ತಂದೆಯ ಸ್ನೇಹಿತರಾದ ಗೋಕಾಕಿನ ಶ್ರೀ ನಾಗಪ್ಪಗಿರಿಯಪುರ ಇವರನ್ನು ಕಂಡು ತನ್ನ ಇಂಗಿತವನ್ನು ಹೇಳಿಕೊಂಡ. ಚನ್ನಬಸಪ್ಪನ ಶಿಕ್ಷಣಾಭಿರುಚಿಯನ್ನು ಕಂಡು ಸಂತೋಷದಿಂದ ಐವತ್ತು ರೂಗಳನ್ನು ಕೊಟ್ಟು ಪುಣೆಗೆ ಹೋಗಿ ಅಭ್ಯಾಸ ಮಾಡಲು ಪ್ರೋತ್ಸಾಹ ನೀಡಿದರು, ಇದು ಅವರ ಜ್ಞಾನದ ಬಾಗಿಲನ್ನು ತೆರೆದಂತಾಯಿತು.

ಪುಣೆಗೆ ಕಾಲ್ನಡಿಗೆಯಲ್ಲಿಯೇ ಹೋಗಿ ಚನ್ನಬಸಪ್ಪ ಬ್ರಿಟಿಷ್ ಸರ್ಕಾರದಿಂದ ಮಾನ್ಯತೆಪಡೆದ ಇಂಗ್ಲೀಷ್ ಶಾಲೆಗೆ ಸೇರಿ ಅಭ್ಯಾಸವನ್ನು ಮುಂದುವರಿಸಿದರು. ಪುಣೆಯಲ್ಲಿ ಶ್ರೀ ಗೋವಿಂದರಾಯರ ಉದಾರ ನೆರವಿನಿಂದ ಹಂತ ಹಂತವಾಗಿ ಶಿಕ್ಷಣಪಡೆದರು. ಇಂಜಿನಿಯರಿಂಗ್ ಪರೀಕ್ಷೆಯಲ್ಲಿ ಮೇಲ್ದರ್ಜೆಯಲ್ಲಿಯೇ ಉತ್ತೀರ್ಣರಾದರು. ವಿದ್ಯಾರ್ಥಿಯ ಪ್ರತಿಭೆಯನ್ನು ಗುರುತಿಸಿದ ಆಡಳಿತ ಮಂಡಳಿಯವರು ಆ ಸಂಸ್ಥೆಯಲ್ಲಿಯೇ ಕೆಲಸಮಾಡಲು ಕೆಲವುಕಾಲ ಅವಕಾಶ ಮಾಡಿಕೊಟ್ಟರು. ಅನಂತರ ಚನ್ನಬಸಪ್ಪ ಪುಣೆಯಿಂದ ತನ್ನ ಹುಟ್ಟೂರಾದ ಧಾರವಾಡಕ್ಕೆ ಮರಳಿ

ಬಂದರು. "ಉದ್ಯೋಗಂ ಪುರುಷಲಕ್ಷಣಂ" ಎಂದು ತಿಳಿದು ಪ್ರಯತ್ನ ಮಾಡಿ ಸರ್ಕಾರಿ ಅಂಚೆ ಕಛೇರಿಗೆ ಕೆಲಸಕ್ಕೆ ಸೇರಿ ವ್ಯಕ್ತಿ ಜೀವನವನ್ನು ಪ್ರಾರಂಭಿಸಿ ತಾಯಿಗೆ ಸಮಾಧಾನತಂದರು.

**ಶಿಕ್ಷಣ ಯೋಗಿ:-** ಜನ ಸಾಮಾನ್ಯರ ಮಕ್ಕಳಿಗೆ ಶಿಕ್ಷಣ ನೀಡುವುದು ವಿದ್ಯಾ ಇಲಾಖೆ ಎಂದು ಭಾವಿಸಿ, ನಾರ್ಮಲ್ ಸ್ಕೂಲ್ ಪ್ರಾರಂಭಿಸಿದರು. ಈ ಶಿಕ್ಷಣ ಅಭಿಮಾನಿ ಸಮರ್ಥನೆಂದು ಸರ್ಕಾರದವರು ತಿಳಿದು ಮುಖ್ಯೋಪಾಧ್ಯಾಯರನ್ನಾಗಿ ನೇಮಿಸಿದರು. ವಿದ್ಯಾ ಇಲಾಖೆಯಲ್ಲಿ ಚನ್ನಬಸಪ್ಪನವರು ಸಾಧಿಸಿದ ಕಾರ್ಯಗಳು ಅಪಾರ. ಅನಕ್ಷರಸ್ಥರಾಗಿದ್ದ ಜನರನ್ನು ಅಕ್ಷರಸ್ಥರನ್ನಾಗಿ ಮಾಡುವ ಜವಾಬ್ದಾರಿಯನ್ನು ಹೊತ್ತು ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಗಳನ್ನು ಪರಿಚಯ ಮಾಡಿಕೊಂಡರು. ಈ ಪ್ರದೇಶ ಬ್ರಿಟಿಷರ ದೇಶಕ್ಕೆ ಬರುವ ಮೊದಲು ಧಾರವಾಡ, ಬೆಳಗಾವಿ ,ಕಾರವಾರ, ಬಿಜಾಪುರ ಜಿಲ್ಲೆಗಳನ್ನೊಳಗೊಂಡು ಕರ್ನಾಟಕ ಈ ಭಾಗವು ಮಹಾರಾಷ್ಟ್ರೀಯ ಪೇಶ್ವೆಯರ ಆಡಳಿತದಲ್ಲಿತ್ತು. ಇದನ್ನು ದಕ್ಷಿಣ ಮಹಾರಾಷ್ಟ್ರವೆಂದು ಕರೆಯುತ್ತಿದ್ದರು. ಪ್ರದೇಶ ಮತ್ತು ಜನತೆಯ ಭಾಷೆ ಕನ್ನಡವಾಗಿದ್ದರೂ ಅರಸರ ಭಾಷೆ ಮರಾಠಿಯಾದ್ದರಿಂದ ಆ ಭಾಷೆಯಲ್ಲಿಯೇ ಆಡಳಿತ ಮತ್ತು ಶಿಕ್ಷಣ ನಡೆಯುತ್ತಿತ್ತು.

ಧಾರವಾಡ ಮುಂತಾದ ಈ ಪ್ರದೇಶವನ್ನು ಬ್ರಿಟಿಷರು ವಹಿಸಿಕೊಂಡ ಮೇಲೆ ಬದಲಾವಣೆಗೆ ಅವಕಾಶಗಳು ಕಂಡು ಬಂದವು. ಮರಾಠಿಶಾಲೆಗಳು ಇರುವುದನ್ನು ಕಂಡು" ಇದು ತಪ್ಪು' ಈ ವಿಭಾಗದ ಜನರ ಭಾಷೆ ಕನ್ನಡ ಅವರ ಭಾಷೆಯಲ್ಲಿಯೇ ಶಾಲೆಗಳು ನಡೆಯಬೇಕೆಂದು ಧಾರವಾಡ ವಿಭಾಗದ ಅಸಿಸ್ಟೆಂಟ್ ಕಲೆಕ್ಟರ್‌ರಾಗಿದ್ದ (1831) ವಾಲ್ಟರ್ ಎಲಿಯಟ್‌ರವರು ಬ್ರಿಟಿಷ್ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದ ಪರಿಣಾಮವಾಗಿ ಕನ್ನಡ ಶಾಲೆ ಪ್ರಾರಂಭಕ್ಕೆ ಅವಕಾಶ ದೊರೆಯಿತು. ಕನ್ನಡ ಪಠ್ಯ ಪುಸ್ತಕಗಳ ಅಭಾವ, ಶಿಕ್ಷಣ ಕೊರತೆ, ನೇಮಕಾತಿಯ ಜಟಿಲತೆಗಳನ್ನು ಮನಗೊಂಡ ಚನ್ನಬಸಪ್ಪನವರು ಪಾಠಕ್ರಮ ಮತ್ತು ಪರೀಕ್ಷೆಗಳನ್ನು ಸಮರ್ಪಕವಾಗಿ ನಡೆಸಿ ಜನರಲ್ಲಿ ಆಸಕ್ತಿ ಬೆಳೆಸಿ ಕನ್ನಡಿಗರಲ್ಲಿ ತಮ್ಮ ತಮ್ಮ ಮಾತೃ ಭಾಷೆಯಲ್ಲಿ ಅರಿವನ್ನು ಮೂಡಿಸಿ ಕನ್ನಡ ಶಾಲೆಗಳ ಅರುಣೋದಯಕ್ಕೆ ಕಾರಣರಾದರು.

ಮರಾಠಿಯ ಶಿಕ್ಷಣ ಕಲಿಯಲು ಪ್ರೇರಣೆ ನೀಡಿದರು. ಕನ್ನಡ ಮಕ್ಕಳು ಬಲವಂತವಾಗಿ ಮರಾಠಿ ಕಲಿಯುವುದನ್ನು ಗುರುತಿಸಿದ ಚನ್ನಬಸಪ್ಪನವರು ಚಾಣಾಕ್ಷತನದಿಂದ ಅಲ್ಲಲ್ಲಿ ಸಂಚರಿಸಿ ವಿದ್ಯಾರ್ಥಿಗಳೊಂದಿಗೆ ಆತ್ಮೀಯ ಸಂಪರ್ಕ ಬೆಳೆಸಿಕೊಂಡು ಕನ್ನಡ ಇಂಗ್ಲೀಷ್ ಕಲಿಯಲು ಆಸಕ್ತಿ ಮೂಡಿಸಿದರು. ಧಾರವಾಡ ಕಾರವಾರ, ಬಿಜಾಪುರ, ಪುಣೆ, ಮತ್ತು ಮುಂಬೈ ನಗರಗಳಲ್ಲಿ ಹೊಸ ಸಾಮಾಜಿಕ ಚಟುವಟಿಕೆಗಳ ಅರಿವು ಮೂಡಿಸಿ ವಿದ್ಯಾರ್ಥಿಗಳ ಮನಸ್ಸನ್ನು ಗೆದ್ದು ಕೊಂಡರು. ಅವರ ಪ್ರಾಮಾಣಿಕ ಪ್ರಯತ್ನ ದಕ್ಷತೆಯ ಕುರುಹು ಎನ್ನಬಹುದು.

ಕನ್ನಡ ಮಕ್ಕಳಲ್ಲಿ ತನ್ನ ತಾಯಿ ಭಾಷೆಯ ಮುಖೇನ ಕಲಿಯಬೇಕು. ನಮ್ಮ ಸಂಸ್ಕೃತಿಯನ್ನು ಮಾತೃ ಭಾಷೆಯ ಮುಖೇನ ಬೆಳೆಸಬೇಕು. ನಮ್ಮ ಭಾಷೆಯಲ್ಲಿ ಅಮೂಲ್ಯ ಪ್ರಾಚೀನ ಗ್ರಂಥಗಳ ರಾಶಿ ಇದೆ. ಅವುಗಳ ಜ್ಞಾನವನ್ನು ತಿಳಿದು ನಾಡನ್ನು ಬೆಳಗಿಸಬೇಕು ಎಂಬ ಸ್ವಾಭಿಮಾನ ಮೂಡಿಸಿದರು.

ಆವರಿಂದ ಶಾಲೆಗೆ ಶಿಕ್ಷಕರಾಗಿ ಬಂದಶ್ರೀ ಗಂಗಾಧರ ಮಡಿವಾಳೇಶ್ವರ ತುರಿಮುರಿಯವರು ಮತ್ತು ಶ್ರೀ ಚುರುಮುರಿ ಶೇಷಗಿರಿರಾಯರು, ಚನ್ನಬಸಪ್ಪನವರ ದೇಶ ಪ್ರೇಮ, ಕನ್ನಡ ಪ್ರೇಮವನ್ನು ಕಂಡು ಕನ್ನಡ ಪುಸ್ತಕಗಳನ್ನು ರಚಿಸಿಕೊಟ್ಟರು, ಪುಸ್ತಕದ ಪ್ರಕಟಣೆಗೆ ಚನ್ನಬಸಪ್ಪನವರು ತನು,ಮನ, ಧನಗಳನ್ನು ಧಾರೆಯರೆದು ಅಹರ ಪ್ರಯತ್ನದಿಂದ ಅನೇಕ ಕೃತಿಗಳು ಭಾಷಾಂತರವಾದವು, ಕೆಲವು ಹೊಸದಾಗಿ ರಚಿತಗೊಂಡು ಕನ್ನಡ ಸಾಹಿತ್ಯ ಬೆಳವಣಿಗೆಯಾಯಿತು.

**ಪ್ರಾಚಾರ್ಯರು :—**

1864 ರಲ್ಲಿ ದಕ್ಷಿಣಭಾಗಕ್ಕೆ ವಿಲಿಯಂ ಅಲೆನ್‌ರೆಸಲ್ ಎಂಬುವರು ಶಿಕ್ಷಣ ಇಲಾಖೆಯ ಮುಖ್ಯಾಧಿಕಾರಿಯಾಗಿ ಬಂದರು, ಅವರು ಮರಾಠಿಯ ವ್ಯಾಮೋಹವನ್ನು ಕಟುವಾಗಿ ಟೀಕಿಸಿ ಮಾತೃ ಭಾಷೆಯಲ್ಲಿ ಶಿಕ್ಷಣ ನೀಡಬೇಕೆಂದು ಆದೇಶ ಹೊರಡಿಸಿ ಇಪ್ಪತ್ತು ವರ್ಷಗಳ ಕಾಲ ಕನ್ನಡದ ಸ್ಥಾನಮಾನಸುಭದ್ರಗೊಳಿಸಿದರು, ಆಗ ಇದ್ದ ನಾರ್ಮಲ್ ಸ್ಕೂಲ್, ಕನ್ನಡ ಶಿಕ್ಷಕರ ಟ್ರೈನಿಂಗ್ ಕಾಲೇಜ್ ಆಗಿ ಪರಿವರ್ತನೆಯಾಯಿತು, ಚನ್ನಬಸಪ್ಪನವರು ಪ್ರಥಮ ಪ್ರಿನ್ಸಿಪಾಲ್‌ರಾಗಿ ಬಂದು ಕನ್ನಡದ ಬೆಳವಣಿಗೆಗೆ ಕಾರಣರಾದರು, ಅವರ ಕನ್ನಡ ಅಭಿಮಾನ, ಶಿಸ್ತು, ಆಡಳಿತ ನಿಪುಣತೆ ಜನಪ್ರಿಯವಾದವು, ಶಿಕ್ಷಣ ಕ್ಷೇತ್ರದ ಪ್ರಸಾರಕ್ಕಾಗಿ ಮಠ ಪತ್ರಿಕೆ (ಶಾಲಾಪತ್ರಿಕೆ) ಯನ್ನು ಪ್ರಾರಂಭಿಸಿ ಅಧ್ಯಾಪಕರ, ವಿದ್ಯಾರ್ಥಿಗಳ ಲೇಖನ ಕಲೆಗೆ ಪ್ರೋತ್ಸಾಹಿಸಿದ್ದು ಸ್ವಾಗತಾರ್ಹವಾದ ಕಾರ್ಯ.

**ಡೆಪ್ಯೂಟಿ ಇನ್ಸ್‌ಪೆಕ್ಟರ್ ಸೇವೆ :—**

ದಕ್ಷತೆ ಮತ್ತು ಪ್ರಾಮಾಣಿಕನತದಿಂದ ಮರುವರ್ಷವೇ ಡೆಪ್ಯೂಟಿ ಎಜುಕೇಷನಲ್ ಇನ್ಸ್‌ಪೆಕ್ಟರ್ ಹುದ್ದೆಯನ್ನು ವಹಿಸಿಕೊಂಡರು. ಸುಮಾರು ಹದಿನೈದು ವರ್ಷಗಳು ಬೆಳಗಾವಿ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಶಿಕ್ಷಣದ ಸರ್ವೋತೋಮುಖ ಅಭಿವೃದ್ಧಿಗೆ ಶ್ರಮಿಸಿದ ಮಹಾನುಭಾವ ಇವರು,

ತಾವು ಡೆಪ್ಯೂಟಿ ಇನ್ಸ್‌ಪೆಕ್ಟರ್ ಹುದ್ದೆಗೆ ಬಂದಕೊಡಲೆ ಇಲಾಖೆ ಶರವೇಗದಲ್ಲಿ ಚಲಿಸತೊಡಗಿತು. ವಿದ್ಯಾರ್ಥಿಗಳಲ್ಲಿ ಶಿಸ್ತು ಭಾಷಭಿಮಾನ ಬೆಳೆಯುವಂತೆ ಮಾಡಿದರು. ಕನ್ನಡ ಸಂಸ್ಕೃತಿ ಬೆಳವಣಿಗೆಗೆ ಉತ್ತೇಜನ ನೀಡಿದರು, ಕನ್ನಡವನ್ನು ಆಡಳಿತ ಕ್ಷೇತ್ರದಲ್ಲಿ ಬಳಕೆಗೆ ತರಲು ಅಸಹಕಾರ ನೀಡಿದವರನ್ನು ಕರೆಸಿ ವಿವೇಕ ಹೇಳಿದರು. ಆಜ್ಞೆಯನ್ನು ಉಲ್ಲಂಘಿಸಿದವರಿಗೆ ಬಡ್ತಿ ತಡೆಹಿಡಿದರು. ವೇತನದಲ್ಲಿ ಕಡಿತ ಮಾಡಿದರು, ಚೆನ್ನಬಸಪ್ಪನವರ ಪ್ರಾಮಾಣಿಕತೆಗೆ ಎಲ್ಲರೂ ಮನಸೋತು. ತಾವು ಪ್ರಮಾಣಿಕತೆಯ ಕಡೆ ಒಲವು ತೋರಿದರು, ಶಿಕ್ಷಕರಿಗೆ ಕನ್ನಡ ದೀಕ್ಷೆಯನ್ನು ಕೊಟ್ಟ ಪ್ರಥಮ ಶಿಕ್ಷಣಯೋಗಿ ಚನ್ನಬಸಪ್ಪನವರು.

ಹಸಿದ ಹೊಟ್ಟೆಗೆ ಶಿಕ್ಷಣ ನೀಡಿದರೆ ಭೂಮಿಗೆ ಜಳ್ಳು ಬೀಜ ಬಿತ್ತಿದಂತೆ. ಅನ್ನ ನೀಡಿ ಶಿಕ್ಷಣ ನೀಡಬೇಕೆಂದು ಭಾವಿಸಿ ಬೆಳಗಾವಿಯ ವಿದ್ಯಾಪ್ರೇಗಳಾದ ಶ್ರೀ ಹರಬಾಳ ರುದ್ರಗೌಡರು. ಮತ್ತು ಶ್ರೀ ಗಿಲಗುಜ್ಜರುದ್ರಪ್ಪ ಇವರ ನೆರವಿನಿಂದ ಬೆಳಗಾವಿಯಲ್ಲಿ ಒಂದು ವಿದ್ಯಾರ್ಥಿನಿಲಯವನ್ನು ತೆಗೆದು ವಿದ್ಯಾರ್ಥಿಗಳ ಅಭ್ಯಾಸಕ್ಕೆ ಅನುಕೂಲ ಮಾಡಿದ ವಿದ್ಯಾಪ್ರೇಮಿ ಚನ್ನಬಸಪ್ಪನವರು.

**ಶಿಕ್ಷಣ ಪ್ರಸಾರ:-**

ಗ್ರಾಮಾಂತರ ಪ್ರದೇಶದ ಮಣ್ಣಿನ ಮಕ್ಕಳು ಸ್ವಶೀಕ್ಷಿತರಾದರೆ ದೇಶ ಮತ್ತು ಸಮಾಜದ ಪ್ರಗತಿ ಎಂದು ಅರಿತ ಚನ್ನಬಸಪ್ಪನವರ ಭಗೀರಥ ಪ್ರಯತ್ನಗಳ ಫಲವಾಗಿ ಕನ್ನಡ ಶಿಕ್ಷಣ ಪ್ರಸಾರವಾಯಿತು ಗ್ರಾಮ, ಹೋಬಳಿ, ತಾಲ್ಲೂಕುಗಳಲ್ಲಿ ಹೋದ ಹೋದ ಕಡೆಗಳಲ್ಲಿ ಊರಿನ ನಾಗರೀಕರನ್ನು ಕರೆಯಿಸಿ ಶಿಕ್ಷಣದ ಮಹತ್ವವನ್ನು ಬೋಧಿಸ ತೊಡಗಿದರು. ಇವರ ಸತತ ಪರಿಶ್ರಮ ಆಸಕ್ತಿಯಿಂದ ಧಾರಾವಾಡ ಜಿಲ್ಲೆಗಳಲ್ಲಿ ಹೆಚ್ಚು ಕನ್ನಡಶಾಲೆಗಳು ಆರಂಭಿಸಲ್ಪಟ್ಟವು, 1855-56 ರಲ್ಲಿ ಬೆಳಗಾವಿ' ವಿಜಾಪುರ, ಧಾರಾವಾಡ, ಜಿಲ್ಲೆಗಳಲ್ಲಿ ಅನುಕ್ರಮವಾಗಿ 13. 9, 12, ಕನ್ನಡ ಶಾಲೆಗಳಿದ್ದವು, 1882 ರಲ್ಲಿ ಕನ್ನಡ ಶಾಲೆಗಳ ಸಂಖ್ಯೆ ಅನುಕ್ರಮವಾಗಿ 166, 150, 341ಕ್ಕೆ ಏರಿತು. ವಿದ್ಯಾರ್ಥಿಗಳ ಸಂಖ್ಯೆ 55 ಸಾವಿರಕ್ಕೆ ಏರಿಸಿದ ಕೀರ್ತಿ ಶಿಕ್ಷಣಯೋಗಿ ಚನ್ನಬಸಪ್ಪನವರಿಗೆ ಸಲ್ಲುತ್ತದೆ. ಕನ್ನಡ ಪುಸ್ತಕಗಳ ಕೊರತೆಯನ್ನು ನಿವಾರಿಸಲು ತಾವೇ ಕೆಲವು ಪುಸ್ತಕಗಳನ್ನು ಬರೆದು ಪ್ರಕಟಿಸಿದರು. ಕೆಲವು ಪುಸ್ತಕಗಳನ್ನು ಕನ್ನಡ ಪಂಡಿತರಿಂದ ಬರೆಸಿ ಇಲಾಖೆಯ ನೆರವಿನಿಂದಲೂ ತಮ್ಮ ಸ್ವಂತ ಹಣದಿಂದಲೂ ಪ್ರಕಟಿಸಿ ಕನ್ನಡ ಪುಸ್ತಕಗಳ ಕೊಂತೆಯನ್ನು ನಿವಾರಣೆ ಮಾಡಿದರು, ಒಟ್ಟಿನಲ್ಲಿ ಕನ್ನಡ ವಿದ್ಯಾಭ್ಯಾಸ ಪ್ರಸಾರವಾದದ್ದು ಕನ್ನಡ ಸಾಹಿತ್ಯ ಬೆಳೆದಿದ್ದು ಶಿಕ್ಷಣಯೋಗಿ ಚನ್ನಪ್ಪನವರ ತಪಸ್ಸಿನ ಫಲವೆಂದು ಹೇಳಬಹುದು. ಇಂಥಾ ಕನ್ನಡದ ಅಭಿಮಾನಿ ಮತ್ತೊಮ್ಮೆ ಹುಟ್ಟಿ ಬಂದು ಕನ್ನಡ ನಾಡು-ನುಡಿಯನ್ನು ಬೆಳಗಿಸಲಿ.

# ಗ್ರಾಮಾಂತರ ಬಸವ ಜಯಂತಿ-264

ಹೆಚ್. ವಿ. ವೀರಭದ್ರಯ್ಯ.

ಆತ್ಮೀಯ ಶರಣಬಂಧು,

ಕಡೂರು ತಾಲ್ಲೂಕಿನಿಂದ ಮಾಗಡಿ ತಾಲ್ಲೂಕಿಗೆ ಬಸವ ಜಯಂತಿ ಮಣಿಹದ ಪ್ರಯಾಣ. 21-6-91 ರಂದು ರಂಗೇನಹಳ್ಳಿ ಪುಣ್ಯ ಗ್ರಾಮದಲ್ಲಿ ಆಚರಣೆ. ಗ್ರಾಮ ಪುಟ್ಟದು. ಗ್ರಾಮ ಬಂಧುಗಳ ಮನಸ್ಸು ದೊಡ್ಡದು. ಯುವಕರ ಪಾತ್ರ ಶ್ಲಾಘನೀಯ. ಬಸವೇಶ್ವರ ಯುವಕ ಸಂಘದ ಶಕ್ತಿ ಮೀರಿದ ಪ್ರಯತ್ನ. ಸುಮಾರು ಮೂರು ಲಕ್ಷರೂಗಳ ಬಸವೇಶ್ವರ ದೇವಾಲಯದ ಜೀರ್ಣೋದ್ಧಾರದ ಕೆಲಸ. ಎತ್ತರವಾದ ಸ್ಥಳ. ದೇವಾಲಯವಿರುವ ಜಾಗಎತ್ತರವಾಗಿ ಬೆಳೆದು ತೋರಿಸಬೇಕೆಂಬ ಯುವ ಮನಸ್ಸುಗಳ ಉತ್ಸಾಹ.

ಜನಸಾಮಾನ್ಯರಿಗೆ ಬಸವಣ್ಣನವರ ಹೆಸರು ಮಂತ್ರವಾಗಿದೆ: ಬಸವಣ್ಣ ಕಲಿಸಿದ್ದು 'ಉತ್ತು ಬಿತ್ತುವ ಮಂತ್ರ, ಬಿತ್ತಿ ಬೆಳೆಯುವ ಮಂತ್ರ ಮರ್ತ್ಯ ದೊಳು ಮಂತ್ರ ಜೀವನಕೆ-' ಎಂದು ಹಾಡಿದ್ದಾರೆ ಜನಪದರು ಬಸವಣ್ಣ ಬೋಧಿಸಿದ್ದು ಸ್ವರ್ಗ, ನರಕಗಳ ಪಾಪ ಪುಣ್ಯಗಳ, ಪ್ರಾಯಶ್ಚಿತ್ತ-ಪಶ್ಚಾತ್ತಾಪಗಳ ಮಂತ್ರವನ್ನಲ್ಲ. ದುಡಿದು ತಿನ್ನುವ, ಮರ್ತ್ಯದಲ್ಲಿ ಜೀವನಕ್ಕೆ ಅಗತ್ಯವಾದ ಮಂತ್ರವನ್ನೂ ಎಂಬುದಾಗಿನುಡಿಯುತ್ತ ಸಮಾರಂಭವನ್ನು ಜ್ಯೋತಿ ಬೆಳಗಿಸುವುದರ ಮೂಲಕ ಉದ್ಘಾಟಿಸಿದರು. ಬೆಂಗಳೂರಿನ ಬೇಲಿಮಠದ ಪೂಜ್ಯ ಶ್ರೀಗಳಾದ ಶಿವರುದ್ರಸ್ವಾಮಿಗಳು ನುಡಿದರೆ ಮುತ್ತಿನ ಹಾರದಂತಿರಬೇಕು ' ಎಂಬ ಬಸವಣ್ಣನವರ ಮಾತನ್ನು ನಡೆಯಲ್ಲಿ ಅಳವಡಿಸಿಕೊಂಡು ಸೇವಾ ಮಣಿಹದಲ್ಲಿ ಸಾಗಿರುವ ಸಿದ್ಧಗಂಗಾ ಪೂಜ್ಯ ಶ್ರೀಗಳು ಮಠಾಧಿಪತಿಗಳಿಗೆ ಆದರ್ಶವಾಗಿದ್ದಾರೆ, ಆಶಾದೀಪವಾಗಿದ್ದಾರೆ ಎಂದು ಅಧ್ಯಕ್ಷತೆವಹಿಸಿದ್ದ ಕನಕಪುರದ ದೇಗುಲ ಮಠಾಧ್ಯಕ್ಷರಾದ ಪೂಜ್ಯ ಶ್ರೀ ಮುಮ್ಮಡಿ ನಿರ್ವಾಣಸ್ವಾಮಿಗಳು ಹೇಳಿದರು.

ಸಂಕಲ್ಪ ಸಾಕಾರಗೊಂಡ ಸಮಾರಂಭವೆಂದು ತಮಗಾದ ಸಂತೋಷವನ್ನು ವ್ಯಕ್ತಪಡಿಸುತ್ತ ಪರಮ ಪೂಜ್ಯ ಶ್ರೀ ಶ್ರೀಗಳು ಸೃಷ್ಟಿವರ್ಗದಲ್ಲಿ ಶ್ರೇಷ್ಠ ಜೀವಿಯಾದ ಮಾನವ "ಕ್ರಮ ತಪ್ಪಿ ನಡೆ" ದಿದ್ದು ಭೂಮಿಯ ಮೇಲಿನ ಬದುಕುನರಕ ಸದೃಶವಾಗಿದೆ ಧರ್ಮ ರಹಿತವಾದ ಬಾಳು ಎಲ್ಲ ಗೋಳಿಗೆ ಕಾರಣವಾದುದು. ಪಶು, ಪಕ್ಷಿ, ಪ್ರಾಣಿ, ಸಸ್ಯ, ಕ್ರಿಮಿ, ಕೀಟ, ಬೆಂಕಿ, ನೀರು, ಗಾಳಿ, ಮುಂತಾದುವುಗಳೆಲ್ಲ ಸ್ವಧರ್ಮ ಬಿಟ್ಟು ನಡೆದಿಲ್ಲ. ಆದರೆ ಮನುಷ್ಯ ಮಾತ್ರ ಅಧರ್ಮಿಯಾಗಿದ್ದಾನೆ. ಕ್ರಮ ತಪ್ಪಿ ನಡೆಯುತ್ತಿದ್ದಾನೆ "ಭೂಮಿ ನಿನ್ನದಲ್ಲ, ಹೇಮ ನಿನ್ನದಲ್ಲ, ಕಾಮಿನಿ ನಿನ್ನವಳಲ್ಲ, ಅದು

ಜಗಕೆಕ್ಕಿದವಿಧಿ, ನಿನ್ನೊಡವೆಯೆಂಬುದು ಜ್ಞಾನರತ್ನ" ಎಂಬುದನ್ನು ಅರಿತು ಜೀವಿಸುತ್ತಿದ್ದಾನೆ-ಎಂಬುದಾಗಿ ಆಶೀರ್ವಚನ ಮಾಡುತ್ತ ಧರ್ಮ ಕೆಲವೇ ಜನರ ಸ್ವತ್ತಾಗಿದ್ದುದನ್ನು ಮನಗಂಡು ಬಸವಣ್ಣನವರು ಅದನ್ನು ಜನಸಾಮಾನ್ಯರಿಗೆ ಲಭ್ಯವಾಗುವಂತೆ ಮಾಡುವ ಮಹಾ ಪ್ರಯತ್ನದಲ್ಲಿ ತಮ್ಮನ್ನೇ ಅರ್ಪಿಸಿಕೊಂಡರು. ಎಲ್ಲರನ್ನು ತನ್ನಂತೆಯೆ ಕಾಣುವ ಭಾವಲೋಕ ನಿರ್ಮಾಣ ಮಾಡಿದರು. ಪರಸ್ಪರ ಪ್ರೇಮದಿಂದ ಬಾಳುವ ಕಲೆಯನ್ನು ಕಲಿಸಿದರು. ಪರಿಶುದ್ಧ ಪ್ರಾಪಂಚಿಕ ಪ್ರಜ್ಞಾವಂತರಾದ ಬಸವಣ್ಣನವರು ಧರ್ಮದ ಬುನಾದಿಯ ಮೇಲೆ ವ್ಯಕ್ತಿ ಬಾಳುವುದನ್ನು ಕಲಿಸಿಕೊಟ್ಟರು. ಮನುಷ್ಯ ತನಗಿರುವ ಇಚ್ಛಾಶಕ್ತಿ, ಜ್ಞಾನ ಶಕ್ತಿ, ಕ್ರಿಯಾಶಕ್ತಿ, ತಪಶ್ಶಕ್ತಿಗಳ ಸದುಪಯೋಗ ಮಾಡಿಕೊಳ್ಳುವ ಕಲೆಗಾರನಾಗಬೇಕು ಎಂದರು.

ದ್ವಿತೀಯ ಅಧಿವೇಶನದಲ್ಲಿ ಮುಖ್ಯ ಉಪನ್ಯಾಸಕರಾಗಿ ಆಗಮಿಸಿದ್ದ ಪ್ರಸಿದ್ಧ ಸಾಹಿತಿಗಳಾದ ಡಾ||ಸಿದ್ಧಯ್ಯ ಪುರಾಣಿಕ "ಸುಲಿಗೆಗಾರರಿಂದ ಜನಸಾಮಾನ್ಯರನ್ನು ಮುಕ್ತ ಮಾಡಿದ ಬಸವಣ್ಣ ಮನುಕುಲದ ಮಂಗಳ ಸೂರ್ಯನೆನ್ನುತ್ತ ರಾಜನೇ ವಿಷ್ಣುವೆಂದು ದೇಶದಲ್ಲಿ" ವ್ಯಾಧನೊಂದು ಮೊಲನ ತಂದರೆ ಸಲುವ ಹಾಗಕೆ ಕೊಂಬರಯ್ಯ, ನೆಲನಾಳ್ದನ ಹೆಣನೆಂದರೆ ಒಂದಡಕೆಗೆ ಕೊಂಬರಿಲ್ಲ" ಎಂಬ ಕೆಚ್ಚಿನ ಮಾತನ್ನಾಡಿದ ಹುಟ್ಟು ಹೋರಾಟಗಾರನೆಂದರು.

ಬರೀ ಉಣ್ಣುವ ತಿನ್ನುವ ತೊಡುವ ಇಡುವ ಕೆಡುವ ಸಾಯುವ ಚಿಂತೆಯಲ್ಲಿರುವಾಗ ಪರಮಾತ್ಮನ ಸ್ಮರಣಾವಕಾಶಮಾಡಿ ಕೊಟ್ಟಿರುವ ಸಿದ್ಧಗಂಗೆಯ ಪರಮಪೂಜ್ಯ ಶ್ರೀ ಶ್ರೀಗಳು ಬಸವಣ್ಣನವರ ಸಂದೇಶವನ್ನು ಮಳೆ ಗಾಳಿ ಬಿಸಿಲು ಬೇಗೆ ಹಗಲು ರಾತ್ರಿ ಗಣಿಸದೆ ಹಳ್ಳಿಯ ಬಂಧುಗಳಿಗೆ ಮುಟ್ಟಿಸುವ ಮಹಾ ಯಾತ್ರೆಯಲ್ಲಿ ಪಾಲ್ಗೊಳುವುದೇ ಬದುಕಿನ ಸಾರ್ಥಕತೆ ಎಂದು ಕೊಂಡಿರುವ ನನಗೆ. ಎನ್ನುತ್ತ ಡಾ||ಸಾ.ಶಿ ಮರುಳಯ್ಯನವರು ಬಸವಣ್ಣನವರು ಅವತಾರ ಪುರುಷರಲ್ಲ. ವೀರಶೈವ ಸಿದ್ಧಾಂತಕ್ಕೆ ಅವತಾರದ ಕಲ್ಪನೆ ವಿರೋಧಿಯಾದುದು ಎಂಬುದಾಗಿ ವಿಶ್ಲೇಷಿಸುತ್ತ ಶಿಖರಗಾಮಿಯಾದ ಬಸವಣ್ಣ ಜನ ಸಾಮಾನ್ಯರ ಕಡೆಗೆ ದೃಷ್ಟಿಹರಿಸಿದುದನ್ನು ವಿವರಿಸುವುದರೊಂದಿಗೆ ಬಸವಪೂರ್ವದಲ್ಲಿದ್ದ ರಾಜಕೀಯ ಹಿನ್ನೆಲೆಯನ್ನು ಚಿತ್ರಿಸಿದರು. ಬಸವಣ್ಣನವರ ಕಾಲದಲ್ಲಾದ ರಾಜಕೀಯ ಏಳುಬೀಳುಗಳ, ತಂತ್ರಕುತಂತ್ರಗಳ ಎಳೆ ಬಿಡಿಸಿ ಬಸವಣ್ಣ ಬಿಜ್ಜಳನ ಕೊಲೆಗೆ ಕಾರಣರಲ್ಲವೆಂಬುದನ್ನು ಸ್ಪಷ್ಟಪಡಿಸಿದರು.

ನಿರ್ಮೋಹ ಭಾವದಿಂದ ಕೂಡಿದ ಸಮಾಜ ನಿರ್ಮಾಣ ಮಾಡಿದ ಬಸವಣ್ಣ ಹಾವಿಗೆ, ಉರಿಗೆ, ಸುರಗಿಗೆ ಅಂಜದವರು ಪರಧನ, ಪರಸ್ತ್ರೀಗೆ ಅಂಜಿದ ನೀತಿನಾಣ್ಯ

ಸಾಗಿದ್ದರು. ಪರವಧುವನ್ನು ಮಹಾದೇವಿಯೆಂದು ಗೌರವಿಸಿದರು. ಸ್ತ್ರೀಯರ ಬದುಕಿಗೆ ಬೆಳಕಾಗಿ ಬಂದರು ಎನ್ನುತ್ತ ಶ್ರೀಮತಿ ಬಿ. ಗಂಗಾಂಬಿಕೆಯವರು ಧರ್ಮ-ದೀಪಕರ ಜೀವನ ಚರಿತ್ರೆಯನ್ನು ಅಧ್ಯಯನ ಮಾಡದಂಥ ಮಹಾ ಅಪರಾಧದ ದೆಸೆಯಿಂದಾಗಿ ರಾಷ್ಟ್ರದ ಪ್ರಧಾನಿಯನ್ನೇ ಹತ್ಯೆಗೈಯ್ಯುವಂಥ ಮಹಾಪಾಪಕ್ಕೆ ಸ್ತ್ರೀಯರಿಂದು ನಡೆದಿರುವುದನ್ನು ಕಂಡಾಗ ಎತ್ತ ಸಾಗಿದ್ದೇವೆ ಹೆಣ್ಣು ಮಕ್ಕಳು ಎಂಬ ದಿಗಿಲಾಗುತ್ತದೆ ಎಂದು ಬಸವಸಂದೇಶ ನಮಗೆ ಸಂಸ್ಕಾರ ನೀಡಬಲ್ಲುದು ಎಂಬ ಭರವಸೆಯ ಮಾತುಗಳನ್ನಾಡಿದರು.

ಬಸವಣ್ಣನವರ ಜೀವನವೇ ಒಂದು ಬೃಹತ್ ಕಾವ್ಯ. ಅದಗಲ್ಲಿ ಜಾನಪದ ಸತ್ವವನ್ನು ತುಂಬಿಕೊಂಡ ಮಹಾಕಾವ್ಯ ಎನ್ನುತ್ತ ಶ್ರೀ ಹೆಚ್. ವಿ. ವೀರಭದ್ರಯ್ಯನವರು ಬಸವಣ್ಣನವರು ಬರೆದ ಕಾವ್ಯಗಳಿಗಿಂತ ಬದುಕಿದ ಬಾಳು ಶ್ರೇಷ್ಠವಾಗಿತ್ತು ಎಂಬುದನ್ನು ಜನಪದಕವಿಗಳು ಮುಕ್ತಕಗಳಿಂದ ಹಾಡಿ ತೋರಿಸಿದರು.

ಸಮಾರಂಭದಲ್ಲಿ ಕುಮಾರಿ ಶಶಿಕಲಾ ಪುಟ್ಟಬಾಯಿಂದ ಬಸವ ತತ್ವಗಳನ್ನು ಸ್ಫುಟವಾಗಿ ನುಡಿದುದನ್ನು ಕಂಡ ಗ್ರಾಮೀಣ ತಾಯಿಯೊಬ್ಬಳು ಮೆಚ್ಚುಗೆಯಾಗಿ ಹತ್ತು ರೂಪಾಯಿ ಕೊಟ್ಟಾಗ ಆ ಹತ್ತು ರೂಪಾಯಿಗಳನ್ನು ಸಿದ್ಧಗಂಗಾ ಪರಮ ಪೂಜ್ಯ ಶ್ರೀ ಶ್ರೀ ಗಳವರ ಚರಣಗಳಿಗೆ ಅರ್ಪಿಸಿ ಸಂತೋಷಗೊಂಡರೆ, ಕಿಶೋರಿಸುಧಾ ಮೊಗ್ಗು ಅರಳುವಂತೆ ಮಾತನಾಡಿ ಪರಮ ಪೂಜ್ಯ ಶ್ರೀ ಶ್ರೀಗಳ ಮತ್ತು ಅತಿಥಿಗಳ ಮನಸ್ಸನ್ನು ಮುಟ್ಟಿದಳು.

ಮಳೆಯ ನಿರಂತರ ಅಭಿಷೇಕದ ಮಧ್ಯದಲ್ಲಿಯೇ ದ್ವಿತೀಯ ಅಧಿವೇಶನ ಮುಕ್ತಾಯವಾಗುವ ಮೊದಲು ಶ್ರೀ ನೀಲಕಂಠಯ್ಯ ಶರಣು ಸಮರ್ಪಿಸಿದರು. ಆರಂಭದಲ್ಲಿ ಶ್ರೀ ಪರಶಿವಮೂರ್ತಿ ಸ್ವಾಗತಿಸಿದರು.

ಗ್ರಾಮದ ಸಂಘಟನೆಯ ಸಮಾರಂಭವಾಗಿ 'ಬಸವ ಜಯಂತಿ' ನಡೆದದ್ದು ಸರ್ವರ ಸಂತೋಷಕ್ಕೆ ಕಾರಣವಾಯಿತು.

ಮಳೆರಾಯ ಬಂದ ನಾಟಕ ಬೇಡವೆಂದ. ಇನ್ನೊಮ್ಮೆ ಬನ್ನಿರೆಂದ, ಅಷ್ಟೇ ಅಲ್ಲ ಮರೆಯದೆ ಬರಬೇಕೆಂದ.

ಮತ್ತೆ ಬರೆಯುತ್ತೇನೆ,

## ಶಾಸ್ತ್ರೋಕ್ತವಾಗಿ ತಯಾರಿಸಿದ ಸುಗಂಧ ಸಾಮಗ್ರಿಗಳು




ಪ್ರಖ್ಯಾತವಾದ

- ಪರಿಮಳದಶಾಂಗ
- ದೂಪದ ಕೊಡ
- ವಿಭೂತಿ
- ಹವನ ಸಾಮಗ್ರಿಗಳ

ತಯಾರಕರು

ಶಿವಪೂಜಾ
ಸಾಮಗ್ರಿಗಳು ದೊರೆಯುತ್ತದೆ.

Y. BASAPPA PERFUMER BANGALORE-2

ಫೋನ್ : ಅಂಗಡಿ — 28009 ಮನೆ — 224623.

ವೈ. ಬಸಪ್ಪ, 206 ಅವೆನ್ಯೂ ರೋಡ್, ಬೆಂಗಳೂರು-560 002

ನೇ ರಕ್ಷಾ ಪುಟದಿಂದ ಮುಂದುವರೆದಿದೆ)

ಈಗಾಗಲೇ ಅನೇಕ ಮಹನೀಯರು ಉದಾರವಾಗಿ ಯೋಜನೆಗಳನ್ನು ಲಿಸಿ ದಾನ ಮಾಡಲು ಮುಂದೆ ಬಂದಿದ್ದು 115 ಕೊಠಡಿಗಳಿಗೆ ್ರಾನ ಮಾಡಿರುವುದಲ್ಲದೆ ಕಾಣಿಕೆಯನ್ನು ನೀಡಿರುತ್ತಾರೆ. ಪ್ರಸಾದ ಯದ ನಿರ್ಮಾಣಕ್ಕೂ ಸಹಾಯ ಮಾಡಿರುತ್ತಾರೆ. ಈ ಸುಸಂದರ್ಭದಲ್ಲಿ ಠದ ಭಕ್ತಾದಿಗಳಾದ ತಮ್ಮಲ್ಲಿ ಪ್ರಾರ್ಥಿಸುವುದೇನೆಂದರೆ ತಾವು ಈ ವಜ್ರ- ೋನ್ನತ ಪುಣ್ಯ ಮಣಿಹದಲ್ಲಿ ಉದಾರವಾಗಿ ಕಾಣಿಕೆ ಅರ್ಪಿಸುವುದರ ಮೂಲಕ ಜ್ರ ಮಹೋತ್ಸವ " ಅಮೋಘವಾಗಿ ನಡೆಯಲು ಸಹಕಾರ ನೀಡುವಿರೆಂದು ುತ್ತೇವೆ.

ನಿಯೋಜಿತ ವಿದ್ಯಾರ್ಥಿನಿಲಯದ ಒಂದು ಕೊಠಡಿ ಕಟ್ಟಿಸಿಕೊಡುವವರ ನ್ನು ಕೊಠಡಿಗೆ ಇಡಲಾಗುತ್ತೆ. ಅದಕ್ಕೆ ತಗಲುವ ಅಂದಾಜು ಮೊಬಲಗು 000 ರೂಗಳು ಆರು ಕೊಠಡಿಯ 'ಬ್ಲಾಕ್' ಕಟ್ಟಿಸಿಕೊಡುವವರ ಹೆಸರನ್ನು ಬ್ಲಾಕ್‌ಗೆ ಇಡಲಾಗುತ್ತದೆ.

ಪ್ರಸಾದ ನಿಳಯಕ್ಕೆ ಸಹಾಯ ಮಾಡುವವರ ಹೆಸರನ್ನು ನಿಲಯದ ಶಿಲಾ ಕದಲ್ಲಿ ಬರೆಸಲಾಗುತ್ತದೆ.

ದಯಮಾಡಿ ತಮ್ಮ ವಂತಿಕೆಯನ್ನು ಈ ಪುಣ್ಯ ಕಾರ್ಯಕ್ಕೆ ವಿನಿಯೋಗಿಸ ಾಗಿ ಪ್ರಾರ್ಥಿಸುತ್ತೇವೆ.


**ಪರಮ ಪೂಜ್ಯ ಶ್ರೀ ಶ್ರೀಗಳವರ ಸೇವಾ ಮಣಿಹಕ್ಕೆ ನಾವೆಲ್ಲ ನೀಡ ಂದಾದ ಭಕ್ತಿ ಕಾಣಿಕೆಗೆ ಇದೊಂದು ಅಪೂರ್ವ ಅವಕಾಶವಾಗಿದೆ.**

**ಶರಣಾರ್ಥಿಗಳು**

ೂಷಣ ಡಾ॥ ಎಂ.ಸಿ. ಮೋದಿಯವರು, ಗೌರವಾಧ್ಯಕ್ಷರು.

ಶ್ರೀ ಬಿ.ಎಸ್. ಮುದ್ದಪ್ಪನವರು ಕಾರ್ಯಾಧ್ಯಕ್ಷರು, (ನಿವೃತ್ತ)

ಶ್ರೀ ಹಸಬಿಯವರು ಕಾರ್ಯದರ್ಶಿಗಳು.


ತುಮಕೂರಿಗೆ ಬರುವವರಿದ್ದೀರಾ? ಹಾಗಿದ್ದರೆ, ವೈವಿಧ್ಯಮಯ ಊಟ,
ವಸತಿ, ತಿಂಡಿ ತಿನಿಸುಗಳ ನಮ್ಮ ಈ ಸ್ಥಳಗಳು ಸದಾ ನಿಮ್ಮನ್ನು ಸ್ವಾಗತಿಸುತ್ತಿವೆ.
ಹೋಟೆಲ್
ಶ್ರೀ ನಂಜುಂಡೇಶ್ವರ
ಊಟ, ವಸತಿ ಮತ್ತು
ಉಪಹಾರ ಮಂದಿರ,
ಬಿ.ಹೆಚ್. ರಸ್ತೆ, ತುಮಕೂರು.
ದೂರವಾಣಿ
8597, 2373, 2577
SRI
Hotel Shree Nanjundeswara
ಶ್ರೀ ನಂಜುಂಡೇಶ್ವರ
ಬೇಕರಿ
ದೂರವಾಣಿ : 8077
SN
BAKERY
ಶ್ರೀ ನಂಜುಂಡೇಶ್ವರ ರೆಸ್ಟೋರೆಂಟ್
ತುಮಕೂರಿನಲ್ಲಿ ಉತ್ತರ ಭಾರತದ ಶೈಲಿಯ ಊಟ
ಉಪಹಾರಗಳ ಶ್ರೇಷ್ಠ ದರ್ಜೆಯ ರೆಸ್ಟೋರೆಂಟ್
ಬಿ.ಹೆಚ್. ರಸ್ತೆ, ತುಮಕೂರು.
ದೂರವಾಣಿ : 2677
ಸಿ.ವಿ. ಮಹದೇವಪ್ಪ
ಮ್ಯಾನೇಜಿಂಗ್ ಪಾರ್ಟನರ್
ಶ್ರೀ ನಂಜುಂಡೇಶ್ವರ ಸ್ವೀಟ್ಸ್
ತುಮಕೂರು.
ದೂರವಾಣಿ : 2077

# ಸಿದ್ಧಗಂಗಾ

ಸಂಪುಟ 27 ಸಂಚಿಕೆ 8 ಆಗಸ್ಟ್ - 1991

ಶ್ರೀ ಮಠದ ಆಶ್ರಯದಲ್ಲಿ ವ್ಯಾಸಂಗ ಮಾಡುತ್ತಿರುವ ನಾಲ್ಕು ಸಾವಿರ ಮಕ್ಕಳು ಪ್ರಸಾದ ಸ್ವೀಕರಿಸಿ(ಊಟಮಾಡಿ) ಜ್ಞಾನಾರ್ಜನೆಯಲ್ಲಿ ತೊಡಗಿರುವುದನ್ನು ಕಂಡಾಗ ಎಲ್ಲಿಲ್ಲದ ಆನಂದವಾಗುತ್ತದೆ.

— ಡಾ|| ಶ್ರೀ ಶ್ರೀ ಶಿವಕುಮಾರ ಸ್ವಾಮಿಗಳು.

ಪ್ರಕಾಶಕರು:
ಹಳೆಯ ವಿದ್ಯಾರ್ಥಿಗಳ ಸಂಘ,
ಸಿದ್ಧಗಂಗಾ ಕ್ಷೇತ್ರ.

# ಹಳೆಯ ವಿದ್ಯಾರ್ಥಿಗಳ ಸಂಘ

ಶ್ರೀ ಸಿದ್ಧಗಂಗಾ ಮಠ : : ತುಮಕೂರು ಜಿಲ್ಲೆ-572104

## ಸರ್ವ ಸದಸ್ಯರ ವಿಶೇಷ ಮಹಾಧಿವೇಶನ

ದಿನಾಂಕ : 1-9-1991 ಭಾನುವಾರ 10-00 ಘಂಟೆಗೆ

ಅಧ್ಯಕ್ಷತೆ : **ಪರಮಪೂಜ್ಯ ಶ್ರೀ ಶ್ರೀ ಸಿದ್ಧಲಿಂಗಸ್ವಾಮಿಗಳವ**

ಮುಖ್ಯ ಅತಿಥಿಗಳು : **ಪದ್ಮಭೂಷಣ ಡಾ|| ಎಂ. ಸಿ. ಮೋದಿ.**

**ಸನ್ಮಾನ್ಯ ಶ್ರೀ ಬಿ. ಎಸ್. ಮುದ್ದಪ್ಪ** IAS (ನಿವೃತ್ತ)

**ಸನ್ಮಾನ್ಯ ಶ್ರೀ ಎಸ್. ಎಸ್. ಹಸಬಿ** IPS (ನಿವೃತ್ತ)

ತಾವು ದಯಮಾಡಿ ಈ ಸಭೆಗೆ ಆಗಮಿಸಿ ಮುಂದೆ ನಡೆಯಲಿರುವ **ಶ್ರೀ ಶ್ರೀ** ಗಳವರ **“ ವಜ್ರಮಹೋತ್ಸವ ”** ಕಾರ್ಯಯೋಜನೆಗಳಿಗೆ ತಮ್ಮ ಅಮೂಲ್ಯ ಸಲಹೆಗಳನ್ನಿ ಸಹಕರಿಸಬೇಕಾಗಿ ಪ್ರಾರ್ಥನೆ.

### ಶ್ರೀ ಶ್ರೀಗಳವರ ವಜ್ರಮಹೋತ್ಸವದ ನೆನಪಿನ ಯೋಜನೆಗಳು:-

---

1 ಶ್ರೀ ಮಠದಲ್ಲಿ 150 ಕೊಠಡಿಗಳುಳ್ಳ ಬೃಹತ್ ವಿದ್ಯಾರ್ಥಿ ನಿಲಯ-ಅಂದಾಜು. ರೂ 1.5 ಕೋಟಿ

2 ಏಕಕಾಲದಲ್ಲಿ 2000 ವಿದ್ಯಾರ್ಥಿಗಳು ಪ್ರಸಾದ ಸ್ವೀಕರಿಸುವ ಸುಸಜ್ಜಿತ ಪ್ರಸಾದ ನಿಲಯ ಅಂದಾಜು ವೆಚ್ಚ ರೂ -1.12 ಕೋಟಿ.

3 ನೀರು ಸರಬರಾಜು ಮತ್ತು ನೈರ್ಮಲ್ಯ ವ್ಯವಸ್ಥೆ. ಅಂದಾಜು ವೆಚ್ಚ 54 ಲಕ್ಷ ರೂ.

4 ಶ್ರೀ ಶ್ರೀಗಳವರ ಜನ್ಮಸ್ಥಳವಾದ ವೀರಾಪುರದಲ್ಲಿ ವೃತ್ತಿ ಶಿಕ್ಷಣ ಕೇಂದ್ರ ಸ್ಥಾಪನೆ. ಅಂದಾಜು ವೆಚ್ಚ 15 ಲಕ್ಷ ರೂಗಳು.

ಇನ್ನೂ ಮುಂತಾದ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ.

ಈ ಎಲ್ಲಾ ಯೋಜನೆಗಳು ಶೀಘ್ರವಾಗಿ ಕಾರ್ಯಗತವಾಗಿ ಪೂರ್ಣ ಗೊಳ್ಳಲು ಸರ್ವರ ಸಹಾಯ, ಸಹಕಾರವನ್ನು ಕೋರುತ್ತೇವೆ.

ಪ್ರೊ|| ಎಂ. ಎನ್. ಚನ್ನಬಸಪ್ಪ,
ಪ್ರಧಾನ ಕಾರ್ಯದರ್ಶಿ.

# ಸಿದ್ಧಗಂಗಾ

ಸಂಪುಟ–27. ಸಂಚಿಕೆ–8. ಆಗಸ್ಟ್ –1991.

## ಶ್ರೀ ಸಿದ್ಧಗಂಗಾ ಗುರುಕರುಣ ತ್ರಿವಿಧಿ.

ವಚನ ಮಂತ್ರವ ಪಠಿಸಿ ವಚನ ಪ್ರಣವತೆ ಮಣಿದು
ವಚನಲಿಂಗವಾಗಿ ಆರಳಿರುವೆ। ನನ್ನ ತಂದೆ
ಸಿದ್ಧಗಂಗಾ ಗುರುವೆ ಕೃಪೆಯಾಗು॥


ಹುಟ್ಟು ಸಾವಿನ ಗುಟ್ಟರಟ್ಟು ಮಾಡುತ ನಡೆದು
ಕಟ್ಟಿದೆ ಕನ್ಮಠವ ಶರಣರ। ನನ್ನ ತಂದೆ
ಸಿದ್ಧಗಂಗಾ ಗುರುವೆ ಕೃಪೆಯಾಗು॥

ಕುದಿವೆದೆಯ ಜೀವಗಳ ಹದಗೊಳಿಸಿಸಾಗಿರುವೆ
ನಿಜದನುಭಾವವ ತೋರಿರುವೆ। ನನ್ನ ತಂದೆ
ಸಿದ್ಧಗಂಗಾ ಗುರುವೆ ಕೃಪೆಯಾಗು॥

—ಹೆಚ್. ವಿ. ವೀರಭದ್ರಯ್ಯ.

| ಲೇಖನ | ಲೇಖಕರು | ಪುಟ |
|---|---|---|
| * ಶ್ರೀವಾಣಿ | | 5 |
| * ಶ್ರೀ ಸಿದ್ಧಲಿಂಗೇಶ್ವರ ವಚನ | | 8 |
| * ಸಂಪಾದಕೀಯ | | 9 |
| * ಜನಸೇವೆಯೇ ಪರಮಾದರ್ಶ | ಶ್ರೀ ಎನ್. ಕಸ್ತೂರಿ ರಂಗನ್ | 11 |
| * ರಾಷ್ಟ್ರ ಮತ್ತು ಯುವಶಕ್ತಿ | ಶ್ರೀ ಕೆ. ವಿ. ಚಂದ್ರಣ್ಣಗೌಡ | 15 |
| * ವಿಶ್ವ, ಪರೀಕ್ಷೆಯರಂಗ | ಶ್ರೀ ಎ. ಬಿ. ಚನ್ನಬಸಪ್ಪ | 17 |
| * ಶಿವಾನುಭವ ಚಿಂತಕ, ಶರಣ ಫ.ಗು. ಹಳಕಟ್ಟಿ | ಶ್ರೀಮತಿ ಲಲಿತಾಂಬ ವೃಷಭೇಂದ್ರ ಸ್ವಾಮಿ | 20 |
| * ಬೆರಳುಗಳ ಅಚ್ಚು ಕೊಟ 'ಟೈಪ್ ರೈಟರ್' | ಶ್ರೀ ಪ. ರಾಮಕೃಷ್ಣ ಶಾಸ್ತ್ರಿ | 25 |
| * ವಿಜ್ಞಾನ ಮತ್ತು ಅಧ್ಯಾತ್ಮ | ಎಚ್. ಎಸ್. ನರಸಿಂಹಜೀಯರ್ | 28 |
| * ಪ್ರಪಂಚದ ಅತಿ ಸ್ಥೂಲಕಾಯ ವ್ಯಕ್ತಿ ವಾಲ್ಟರ್ ಹಡ್ಸನ್ | ಶ್ರೀ ಬಿ. ಸುಬ್ರಾಯ ಅಡಿಗ | 31 |
| * ವರತಪಸ್ವಿ | ಜಿ. ರಾಧಾದೇವಿ | 34 |
| * ಕೃಷಿ ಮಾರಾಟದಲ್ಲಿ ಮಾಹಿತಿ ಸಂಗ್ರಹಣೆ | ಡಿ. ವೆಂಕಟರಾವ್ | 37 |
| ವಿದ್ಯಾರ್ಥಿ ಜೀವನದ ಬೆಳಕು ಸರಣಿ ೧೧ | ಬಿ. ಎಸ್. ಕೃಷ್ಣಮೂರ್ತಿ | 42 |
| * ಬಸಯುಗದ ಶಿವಶರಣೆಯರು | ಕು॥ ಆಶಾರಾಣಿ ಬೆನಗುಂಡಿ<br>ಕೃಪೆ-ಬಸವಪಥ | 43 |

# ಶ್ರೀ ವಾಣಿ



ನಾಯಿ ಸಮಾಧಿ:-

ಧಾರವಾಡ ಜಿಲ್ಲೆಯ ನವಿಲುಗುಂದದಲ್ಲಿ ಚನ್ನಬಸಪ್ಪನೆಂಬ ಶರಣರಿದ್ದರು. ಶ್ರೀಮಂತರಾಗಿದ್ದರು, ಧರ್ಮಿಷ್ಠರು ಕಾಯಕ ದಾಸೋಹಗಳಲ್ಲಿ ಶ್ರದ್ಧೆ ಬೆಳೆಸಿಕೊಂಡಿದ್ದರು. ಅವರು ಮಾಡುತ್ತಿದ್ದ ಕಾಯಕ ವ್ಯಾಪಾರ. ಅವರ ಬಳಿ ಸುಬ್ಬರಾಯರು ಎಂಬ ಗುಮಾಸ್ತರಿದ್ದರು. ತುಂಬಾ ಪ್ರಾಮಾಣಿಕ ವ್ಯಕ್ತಿ, ಮಕ್ಕಳೊಂದಿಗರು. ಕೆಲಸದಲ್ಲಿ ಅಚ್ಚುಕಟ್ಟು ಕಾಲಕ್ಕೆ ಸರಿಯಾಗಿ ಕೆಲಸದ ಮೇಲೆ ಹಾಜರಾಗುತ್ತಿದ್ದರು. ನಿಮಿಷ ನಿಮಿಷಾರ್ಧವನ್ನೂ ವ್ಯರ್ಥವಾಗಿ ಕಳೆಯದಂತೆ ಕೆಲಸದಲ್ಲಿ ತಲ್ಲೀನರಾಗಿರುತ್ತಿದ್ದರು. ಚನ್ನಬಸಪ್ಪನವರಿಗೆ ಸುಬ್ಬರಾಯರ ಮೇಲೆ ಪ್ರೀತಿ, ನಂಬಿಕೆಗಳು ಸಹಜವಾಗಿಯೇ ಬೆಳೆದು ಬಂದವು, ಇಬ್ಬರೂ ಮಿತಭಾಷಿಗಳು ವ್ಯವಹಾರದಲ್ಲಿ ಇಬ್ಬರದೂ ಶುದ್ಧ ಹಸ್ತ, ನೋಡಿದವರಿಗೆಲ್ಲ ಸಂತೋಷವಾಗುವಂತೆ ಇಬ್ಬರೂ ನಡೆದುಕೊಳ್ಳುತ್ತಿದ್ದರು ಕೆಲಸಕ್ಕಿಟ್ಟುಕೊಂಡವನು ನಾನು ಎಂಬ ಭಾವನೆ ಚನ್ನಬಸಪ್ಪನವರಿಗಿರಲಿಲ್ಲ, ಇವರ ಆಶ್ರಯದಲ್ಲಿ ಕೆಲಸಕ್ಕೆ ನಾನಿದ್ದೇನೆ ಎಂಬ ಭಾವನೆ ಸುಬ್ಬರಾಯರಿಗಿರಲಿಲ್ಲ. ಇಬ್ಬರ ಹೃದಯಗಳೂ ಬೆಸೆದುಕೊಂಡಿದ್ದವು. ಒಮ್ಮೆ ಸುಬ್ಬರಾಯರಿಗೆ ಹಣದ ಮುಗ್ಗಟ್ಟು ಎದುರಾಯಿತು. ಮಗಳ ಮದುವೆ ನಿಶ್ಚಿತವಾಯಿತು. ಯಾವುದೋ ಬರಬೇಕಾಗಿದ್ದ ಹಣ ಕೈಗೆ ಸಮಯಕ್ಕೆ ಬರಲಿಲ್ಲ. ಅನಿವಾರ್ಯವಾಗಿ ಚನ್ನಬಸಪ್ಪನವರ ಬಳಿ ಬಾಯಿ ಬಿಡಬೇಕಾಯಿತು. ಚನ್ನಬಸಪ್ಪನವರಿಗಾದರೋ ಎಲ್ಲಿಲ್ಲದ ಸಂತೋಷ. ನಿಷ್ಠಾವಂತ ಸುಬ್ಬರಾಯರಿಗೆ ಇಷ್ಟಾದರೂ ಸಹಾಯಮಾಡುವ ಅವಕಾಶ ಒದಗಿತಲ್ಲಾ ಎಂಬ

ಭಾವನೆ. ಸುಬ್ಬರಾಯರು ಕೇಳಿದಷ್ಟು ಹಣಕೊಟ್ಟು ಹಣ ಹಿಂತಿರುಗಿಸುವ ಯೋಜ
ಬೇಡವೆಂದು ತಿಳಿಸಿದರು. ಆದರೆ ಸುಬ್ಬರಾಯರು ಆದಷ್ಟು ಬೇಗ ಸಾಲ ತೀರಿಸುವ
ದಾಗಿ ತಿಳಿಸಿ ಹಣ ಪಡೆದುಕೊಂಡು ಮಗಳ ಮದುವೆ ಸಾಂಗವಾಗಿ ನಡೆಸಿದರು. ಅನಂ
ಸುಬ್ಬರಾಯರಿಗೆ ಒಂದರಮೇಲೊಂದು ತೊಂದರೆಗಳು ಬರುತ್ತಲೇ ಇದ್ದವು. ಚನ್ನಬ
ಪ್ಪನವರ ಬಳಿ ಆಗಾಗ ಆಬಗ್ಗೆ ನೆನಪಿಸುತ್ತಲೇ ಬಂದರು. ಚನ್ನಬಸಪ್ಪನವರು ಆ
ಹಣವನ್ನು ಹಿಂದಕ್ಕೆ ಪಡೆಯ ಬೇಕೆಂದು ಕೊಟ್ಟಿರಲಿಲ್ಲ. ಸುಬ್ಬರಾಯರು ಅದನ್ನು
ದಾನವೆಂದು ಸ್ವೀಕರಿಸಿರಲಿಲ್ಲ. ಹೀಗಿರುವಾಗ ಸುಬ್ಬರಾಯರು ಖಾಯಿಲೆ ಮಲಗಿದರು.
ಹಣಕೊಡಲಾಗಲಿಲ್ಲವಲ್ಲ ಎಂದೇ ಕೊರಗಿದರು. ಕೊನೆಗೊಂದು ದಿನ ಕಣ್ಮುಚ್ಚಿದರು.
ಚನ್ನಬಸಪ್ಪನವರು ಆತ್ಮೀಯ ಸುಬ್ಬರಾಯರನ್ನು ಕಳೆದುಕೊಂಡು ತಂಬಾ ದುಃಖಿಸಿದರು.
ಕಾಲಕಳೆಯುತ್ತ ಬಂದಿತು ಒಂದು ದಿನ ರಾತ್ರಿ ಚನ್ನಬಸಪ್ಪನವರ ಮನೆಗೆ ಕಳ್ಳರು
ನುಗ್ಗಿ ಚಿನ್ನ ಬೆಳ್ಳಿ ಆಭರಣಗಳನ್ನು ಕಳವು ಮಾಡಿಕೊಂಡು ಹೋದರು. ಚನ್ನಬಸ
ಪ್ಪನವರು ಅವರ ಬಗ್ಗೆ ಹೆಚ್ಚೇನೂ ಚಿಂತಿಸಲಿಲ್ಲ. ಹೀಗಿರುವಾಗ ಒಂದು ನಾಯಿಮರಿ
ಎಲ್ಲಿಂದಲೋ ಬಂದದ್ದು ಚನ್ನಬಸಪ್ಪನವರ ಪಂಚೆಯನ್ನು ಬಾಯಲ್ಲಿ ಕಚ್ಚಿ ಎಳೆಯ
ಹತ್ತಿತು. ಅವರಿಗೆ ಇದೇನೆಂದು ಗೊತ್ತಾಗದೇ ಹೋಯಿತು. ಕೊನೆಗೆ ನಾಯಿಮರಿ
ಎಳೆದ ಕಡೆಗೆ ನಡೆದರು. ಅದು ಊರಹೊರಗೆ ದೂರದ ಹೊಲದ ಪಕ್ಕದಲ್ಲಿದ್ದ
ಪೊದೆಯ ಬಳಿಗೆ ಕರೆದುಕೊಂಡು ಹೋಗಿ ಅಲ್ಲಿ ನೆಲವನ್ನು ಕಾಲಿನಿಂದಕೆರೆದು
ತೋರಿಸಿತು. ಚನ್ನಬಸಪ್ಪನವರು ಅದು ಕೆರೆದು ತೋರಿಸಿದ ಕಡೆಯಲ್ಲಿ ಮತ್ತಿಷ್ಟು
ಅಗೆದು ನೋಡಿದಾಗ ತಮ್ಮ ಮನೆಯಲ್ಲಿ ಕಳುವಾಗಿದ್ದ ಅಭರಣಗಳು ಕಾಣಿಸಿದವು
ಅವರಿಗೆ ತುಂಬ ಸಂತೋಷವಾಯಿತು, ಕಣ್ಣಲ್ಲಿ ನೀರು ಬಂತು. ಆ ಆಭರಣಗಳನ್ನು
ಕೈಗೆತ್ತಿಕೊಂಡರು ! ತಕ್ಷಣವೇ ತಮ್ಮನ್ನು ಅಲ್ಲಗೆ ಕರೆದು ತಂದಿದ್ದ ನಾಯಿಮರಿ
ಅವರ ಕಾಲಬಳಿ ಬಿದ್ದು ಪ್ರಾಣ ಬಿಟ್ಟಿತು. ಚನ್ನಬಸಪ್ಪನವರ ಕಣ್ಣಲ್ಲಿ ಮತ್ತೆ ಕಣ್ಣೀರು
ಬಂತು. **ಸುಬ್ಬರಾಯರೇ ಎಂಥ! ಮನುಷ್ಯರಪ್ಪ** ಈ ರೂಪದಲ್ಲಿ ಬಂದು ಹಣ ಕೊ
ಬೇಕಿತ್ತೆ ? ನೀವು! ಎಂದು ನಾಯಿಮರಿಗೆ ಅಲ್ಲಿಯೇ ಸಮಾಧಿ ಮಾಡಿಸಿದರು. ಗಣಾ
ರಾಧನೆ ಏರ್ಪಡಿಸಿದರು.

# ಶ್ರೀ ಸಿದ್ಧಲಿಂಗೇಶ್ವರ ವಚನ



ಮರ್ಕಟನ ತಲೆಯಲ್ಲಿ ಮಾಣಿಕವಿಪ್ಪುದ ಕಂಡೆನಯ್ಯ
ಮರ್ಕಟ ಹಿಡಿದು ಮಾಣಿಕವ ತೆಕ್ಕೊಳ್ಳಲಾರಿಗಳವಲ್ಲ ನೋಡಾ
ಆ ಮರ್ಕಟನ ಕೊಂದು ಮಾಣಿಕವ ತೆಕ್ಕೊಳ್ಳಬಲ್ಲದೆ
ಮುಕ್ಕಣ್ಣ ಶಿವನೆಂದು ಬೇರುಂಟೆ ಹೇಳಾ
ಮಹಾಲಿಂಗಗುರು ಶಿವಸಿದ್ದೇಶ್ವರ ಪ್ರಭುವೇ.

ಚಂಚಲ ಸ್ವರೂಪನಾದ ಮನವೆಂಬ ಮರ್ಕಟನತಲೆಯಲ್ಲಿ ಅನರ್ಘ್ಯ ರತ್ನ ಸ್ವರೂಪವಾದ ಪರ ಶಿವಲಿಂಗವಿದೆ. ಅರಿವಿನ ಕಣ್ಣಿಗೆ ಅದನ್ನು ಕಾಣುವುದು ಸಾಧ್ಯ. ಅಂತಹ ಮನಸ್ಸನ್ನು ಪರಶಿವಲಿಂಗದಲ್ಲಿ ಕೇಂದ್ರೀಕರಿಸುವುದು ಜ್ಞಾನಿಗಳಿಗೆ ಮಾತ್ರಸಾಧ್ಯ. ಅಂತಹವರು ವಿರಳ. ಮನಸ್ಸನ್ನು ಮಂತ್ರ ಲಿಂಗ ಸಂಬಂಧದಿಂದ ಚಂಚಲ ಸ್ವಭಾವದಿಂದ ದೂರಗೊಳಿಸಿ ಪರಶಿವಲಿಂಗವನ್ನು ಬಹಿರಂಗದಲ್ಲಿ ಇಷ್ಟಲಿಂಗವಾಗಿ, ಅಂತರಂಗದಲ್ಲಿ ಪ್ರಾಣಲಿಂಗವಾಗಿ ಅಳವಡಿಸಿಕೊಂಡು ಷಟ್‌ಸ್ಥಲಾಚರಣೆಯಿಂದ ಜ್ಞಾನಕ್ರಿಯಾ ಸಮರಸಸಾಧಿಸಿದ ಶರಣರು ಶಿವಸ್ವರೂಪಿಗಳೇ ಅಲ್ಲದೆ ಬೇರೆ ಪರಶಿವಲಿಂಗವೆಂಬುದುಂಟೆ ? ಎನ್ನುತ್ತದೆ ವಚನ.

## ಸಿದ್ಧಗಂಗಾ ಮಾಸ ಪತ್ರಿಕೆ
ಶ್ರೀ ಸಿದ್ಧಗಂಗಾ ಮಠ-572104
ತುಮಕೂರು ಜಿಲ್ಲೆ

ಪ್ರಧಾನ ಸಂಪಾದಕರು
ಪ॥ ಚನ್ನಪ್ಪ ಎರೇಸೀಮೆ

* * *

ಸಂಪಾದಕರು
ಹೆಚ್. ವಿ. ವೀರಭದ್ರಯ್ಯ

* * *

ಸಹ ಸಂಪಾದಕರು
ಬಿ. ವೀರಭದ್ರಯ್ಯ
ಪಿ. ಎಸ್. ಚಂದ್ರಶೇಖರಯ್ಯ

* * *

ಜಾಹೀರಾತು ವಿಭಾಗ
ಎಂ. ರೇಣುಕಾರಾಧ್ಯ

* * *

ವಿತರಣೆ ವಿಭಾಗ
ಆರ್. ಎಸ್. ಮಲ್ಲೇಶಪ್ಪ

* * *

ಪ್ರಕಾಶಕರು
ಹೆಚ್. ಬಿ. ಗಂಗಾಧರಯ್ಯ
ಹಳೆಯ ವಿದ್ಯಾರ್ಥಿ ಸಂಘದ ಪರವಾಗಿ

* * *

ಮುದ್ರಕರು
ಶ್ರೀ ಸಿದ್ಧಲಿಂಗೇಶ್ವರಸ್ವಾಮಿ
ಮುದ್ರಣಾಲಯ

* * *

ಪ್ರಕಟಣೆಯ ಸ್ಥಳ
ಶ್ರೀ ಸಿದ್ಧಗಂಗಾಕ್ಷೇತ್ರ


### ಚಂದಾ ವಿವರ
ವಾರ್ಷಿಕ ಚಂದಾ 25-00ರೂ
ಆಜೀವ ಸದಸ್ಯತ್ವ 250-00 ರೂ

### ಲೇಖಕರಲ್ಲಿ ಮನವಿ

'ಸಿದ್ಧಗಂಗಾ' ಶ್ರೀ ಸಿದ್ಧಗ
ಮಠದಿಂದ ಪ್ರಕಟವಾಗುತ್ತಿರುವ ಮ
ಪತ್ರಿಕೆ. ಶ್ರೀ ಮಠದ ಹಳೆಯ ವಿದ್ಯಾ
ಸಂಘದ ಹೆಮ್ಮೆಯ ಸೇವಾ ಪುರ
ಮೇಲಾಗಿ ಶ್ರೀ ಮಠದ ಮುಖ್ಯ
ಪೂಜ್ಯ ಶ್ರೀ ಶ್ರೀ ಡಾ॥ ಶಿವಕುಮ
ಮಹಾಸ್ವಾಮಿಗಳವರ ದಿವ್ಯ ಮಾರ್ಗದ
ನದಲ್ಲಿ ಮುನ್ನಡೆದಿರುವ ಪತ್ರಿಕೆ. ಶ್ರೀ
ದಾಸೋಹ ಸೇವಾ ತತ್ಪರತೆಯಿಂದ ಹೆ
ಹಾಕುತ್ತಿದೆ. ಈ ಧ್ಯೇಯ ಸಾಧನೆಗ
ನಾಡಿನ ಗಣ್ಯ ಲೇಖಕರಿಂದ ಸಾಹಿ
ಸಂಸ್ಕೃತಿ, ಧರ್ಮ, ವಿಜ್ಞಾನ, ಶಿಕ್ಷಣ
ಇತಿಹಾಸ, ವೈಚಾರಿಕ, ಚಿಂತನ ಮುಂತಾ
ಲೇಖನಗಳನ್ನು ಸ್ವಾಗತಿಸುತ್ತದೆ ಅಸ್ವೀಕೃ
ಲೇಖನಗಳನ್ನು ಪಡೆಯಲು ಸಾಕಷ
ಅಂಚೆಸ್ಟಾಂಪುಗಳನ್ನು ಲಗತ್ತಿಸಿರಬೇಕ
ಲೇಖನಗಳಲ್ಲಿ ಸೂಕ್ತ ಬದಲಾವಣೆ ಮಾ
ಕೊಳ್ಳುವ ಅಧಿಕಾರ ಸಂಪಾದಕರಿಗಿದೆ
ಅನುವಾದ, ರೂಪಾಂತರ ಲೇಖನಗಳಿ
ಮೂಲ ಕೃತಿಕಾರರ ಅನುಮತಿ ಪಡೆದಿ
ಬೇಕು. ಸ್ವೀಕೃತ ಲೇಖನಗಳಿಗೆ ಸೂಕ
ಸಂಭಾವನೆ ಕೊಡಲಾಗುವುದು.

"ಸಂಪಾದಕರು"
'ಸಿದ್ಧಗಂಗಾ' ಕನ್ನಡ ಮಾಸಪತ್ರಿಕೆ
ಶ್ರೀ ಸಿದ್ಧಗಂಗಾ ಕ್ಷೇತ್ರ-572104
ತುಮಕೂರು ಜಿಲ್ಲೆ.
ಇವರಿಗೆ ಕಳುಹಿಸಿಕೊಡಬೇಕಾಗಿ ಪ್ರಾರ್ಥನೆ

# ಸಂಪಾದಕೀಯ

ಶ್ರೀ ಮಠಕ್ಕ ಸೇರಿದ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಈ ವರ್ಷ ಹೆಚ್ಚಳ. ಳ್ಳಾರಿ, ಬಿಜಾಪುರ, ಗುಲ್ಬರ್ಗ, ರಾಯಚೂರು ಜಿಲ್ಲೆಗಳಿಂದ ಬಂದ ಮಕ್ಕಳೇ ಹೆಚ್ಚು ಟ್ಟ ಪುಟ್ಟ ಮಕ್ಕಳು ತಂದೆ-ತಾಯಿಗಳನ್ನು ಬಿಟ್ಟು ದೂರದಿಂದ ಬಂದಾಗ ಅವ ನ್ನು ಹಿಂದಕ್ಕೆ ಕಳುಹಿಸುವುದಾದರು ಹೇಗೆ ಎಂಬ ಕಳಕಳಿ ಪರಮ ಪೂಜ್ಯ ಶ್ರೀಗಳಿಗೆ ಂದಯಾರೂ ಪ್ರವೇಶ ಸಿಗಲಿಲ್ಲ ಎಂದು ಹಿಂತಿರುಗಿದ ನಿದರ್ಶನಗಳಿಲ್ಲ. ಹತ್ತಾರು ಕ್ಷಣ ಸಂಸ್ಥೆಗಳು ಮಠದಲ್ಲಿವೆ. ಅವುಗಳ ಜೊತೆಗೆ ತುಮಕೂರಿನ ಶಾಲಾ ಕಾಲೇ ಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಬೇರೆ ಆಶ್ರಯ ಪಡೆದಿದ್ದಾರೆ. ್ರೀ ಮಠಕ್ಕೆ ಬಂದ ಹೋಗುವ ಯಾತ್ರಾರ್ಥಿಗಳು ಹೆಚ್ಚಾಗುತ್ತಿದ್ದಾರೆ ದಿನೇ ದಿನೇ ಕ್ತಾದಿಗಳು, ಅಭಿಮಾನಿಗಳು, ಹಳೆಯ ವಿದ್ಯಾರ್ಥಿಗಳು ಪರಮ ಪೂಜ್ಯರಲ್ಲಿ ವಿನಯಪೂರ್ವಕವಾಗಿ ವಿನಂತಿಸಿಕೊಳ್ಳುತ್ತಿದ್ದಾರೆ-ಸಂಸ್ಥೆಯನ್ನು ಮಿತಿಗೊಳಿಸಿಕೊಳ್ಳು ವುದು ಸೂಕ್ತವೆಂದು—ಎಲ್ಲರಿಗೂ ಎಲ್ಲಕ್ಕೂ ಪೂಜ್ಯ ಶ್ರೀಗಳವರು ಹೇಳುತ್ತಿರುವ ಉತ್ತರ ಒಂದೇ "ಆಗಲಿ ನೋಡೋಣ; ವಿಚಾರ ಮಾಡುತ್ತೇನೆ" - ಎಂದು. "ಇದೇಕೆ ಬುದ್ಧಿ ಹೀಗೆ?" ಎಂದು ಯಾರಾದರು ಕೇಳಿದರೆ ಒಂದು ಎಸ್‌ಎಸ್‌ಎಲ್‌ಸಿ ಯನ್ನು ಅಥವಾ ಒಂದು ಡಿಗ್ರಿಯನ್ನು ಪಡೆದುಕೊಂಡರೆ ಅವನ ಬದುಕಿಗೆ ಒಂದು ದಾರಿಯಾಗುತ್ತದಲ್ಲವೆ ? ಸಂಸ್ಥೆಗೆ ಜವಾಬ್ದಾರಿಯೇನೋ ಹೆಚ್ಚಾಗುತ್ತದೆ. ನಿಜ. ಆದರೆ ಒಬ್ಬನ ಜೀವನಕ್ಕೆ ಒಂದು ಸಣ್ಣ ದೀಪ ಹಚ್ಚಲು ಸಹಾಯವಾಗುವುದಾ ದರೆ ಸಂಸ್ಥೆಯ ಕಷ್ಟವೇನೂ ದೊಡ್ಡದಲ್ಲ ಬಿಡಿ "- ಎನ್ನುತ್ತಾರೆ. ಸೇವೆಯೇ ಶಿವಯೋಗ ಎಂದು ನಂಬಿ ನಡೆದಿರುವ ಶಿವಯೋಗಿ ಪರಮಪೂಜ್ಯ ಶ್ರೀ ಶ್ರೀ ಡಾ|| ಶಿವಕುಮಾರ ಮಹಾಸ್ವಾಮಿಗಳು ಅರವತ್ತು ವರ್ಷಗಳಿಂದ ಈ ಸೇವೆ ಮಾಡುತ್ತ ಬಂದಿದ್ದಾರೆ. ಅವರಿಗೀಗ ವಜ್ರಮಹೋತ್ಸವ ಆಚರಿಸಲು ಭಕ್ತಾದಿಗಳು ನಡೆಸಿ ದ್ದಾರೆ. ಈ ಸಂದರ್ಭದಲ್ಲಿ ತಮ್ಮ ಉದಾರ ಕಾಣಿಕೆ ಸಲ್ಲಿಸಲು ಅವಕಾಶ ಬಾಗಿಲು ತೆರೆದಿದೆ. ಹಳೆಯ ವಿದ್ಯಾರ್ಥಿಗಳು ಮುಕ್ತ ಮನಸ್ಸಿನಿಂದ ಭಕ್ತಿ ಕಾಣಿಕೆ ಅರ್ಪಿ ಸುತ್ತಾರೆಂದು 'ಸಿದ್ಧಗಂಗಾ' ಆಶಿಸುತ್ತದೆ. ಭಕ್ತಾದಿಗಳು, ಅಭಿಮಾನಿಗಳು ಈ ಪುಣ್ಯಾವಸರದಲ್ಲಿ ಕೊಡುಗೈದಾನಿಗಳಾಗಿ ಮುಂದೆ ಬರಬೇಕೆಂದು ಪ್ರಾರ್ಥಿಸುತ್ತದೆ.

## ದಾನಿಗಳಿಗೊಂದು ಸದವಕಾಶ

### ಶ್ರೀ ಮಠದ ಸಮಸ್ತ ಭಕ್ತಾದಿಗಳಿಗಾಗಿ

* ಪ್ರತಿ ತಿಂಗಳು ಯಥಾ ಶಕ್ತಿ ನಿಮ್ಮ ಕಾಣಿಕೆ ಕಳಿಸಿರಿ.
* ಮನಿಯಾರ್ಡರು ದ್ವಾರಾ ಕಳುಹಿಸಬಹುದು.
* ಮೊದಲ ಬಾರಿ ಶ್ರೀಗಳವರಿಂದ ಪತ್ರ ಬರುತ್ತದೆ.
* ಪ್ರತಿ ತಿಂಗಳು ಶ್ರೀಗಳವರೇ ಹಣಪಡೆದು ಸಹಿಮಾಡಿದ ಕೂಪನ್ ಬರುತ್ತದೆ.
* ಯಥಾಶಕ್ತಿ ಕಾಣಿಕೆ ಕಳುಹಿಸುವುದು ಯಾರಿಗೂ ಹೊರೆಯಾಗಲಾರದು.
* ಪ್ರತಿಯೊಬ್ಬರ ಒಂದೊಂದು ಕಾಣಿಕೆಯೂ ಹಲವು ಸಹಸ್ರಗಳೇ ಆಗಿ ಶ್ರೀಗಳವರ ಪುಣ್ಯಕಾರ್ಯಕ್ಕೆ ಸಹಕಾರಿಯಾದೀತು.

### ಪ್ರತಿ ಶತ ಒಂದು ರೂ. ಯೋಜನೆ

(ಶ್ರೀ ಮಠದ ಎಲ್ಲಾ ಹಳೆಯ ವಿದ್ಯಾರ್ಥಿಗಳು ಮತ್ತು ಆ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವವರಿಗೆ)

* ನಿಮಗೆ ಪ್ರತಿ ಮಾಹೆ ನಿರ್ದಿಷ್ಟ ಆದಾಯ ಉಂಟು.
* ಅದರಲ್ಲಿ ಪ್ರತಿಶತ ಒಂದು ರೂ. (*one percent*) ಶ್ರೀ ಮಠಕ್ಕೆ ಕಳುಹಿಸಬಹುದು.
* ಒಬ್ಬೊಬ್ಬರೇ ಕಳುಹಿಸಬಹುದು ಅಥವಾ ಹಲವರು ಒಟ್ಟಾಗಿ ಕಳುಹಿಸಬಹುದು.
* ಚೆಕ್, ಡ್ರಾಫ್ಟ್ ಅಥವಾ ಎಂ.ಓ ಕಳುಹಿಸಬಹುದು
* ಶ್ರೀ ಶ್ರೀಗಳವರ ಹೆಸರಿಗೇ ಕಳುಹಿಸಬೇಕು.
* ಈ ನಿಧಿ ಸತ್ಪಾತ್ರಕ್ಕೆ ಸಲ್ಲುತ್ತದೆ.

ಜೀವನದಲ್ಲಿ ದಾನ ಮಾಡುವವರು ಇಷ್ಟು ಉತ್ಕೃಷ್ಟ ದಾನವನ್ನು ಮಾಡಲು ಹಿಂಜರಿಯಬಾರದು. ಇದಕ್ಕೂ ಶ್ರೇಷ್ಠ ಪಾತ್ರತ್ವ ನಿಮ್ಮ ದಾನಕ್ಕೆ ಅನ್ಯತ್ರ ದೊರೆಯದು, ಇದು ಸುಸಮಯ, ಅಪರೂಪದ ಅವಕಾಶ. ಈ ತಿಂಗಳಿನಿಂದಲೇ ಕಾರ್ಯರೂಪಕ್ಕೆ ತನ್ನಿ. ಇಂದೇ ಕಳಿಸಿರಿ. ಜ್ಞಾನ ದೀವಿಗೆಯಾಗಿ ಶ್ರೀ ಸಿದ್ಧಗಂಗಾ ಮಠ ನಾಡಿಗೆ ಬೆಳಕನ್ನು ಚೆಲ್ಲುತ್ತಿದೆ.

* ಪುಣ್ಯ ಕಾರ್ಯಕ್ಕಾಗಿ ಉದಾರ ನೆರವು ನೀಡಿರಿ.

ಇತಿ,

**ಭಕ್ತ ಮಂಡಳಿ.**

# ಜನಸೇವೆಯೇ ಪರಮಾದರ್ಶ

ಎಸ್. ಕಸ್ತೂರಿ ರಂಗನ್, (ನೀಲತ್ತಹಳ್ಳಿ ಕಸ್ತೂರಿ) ನಂ.29. 3ನೇ ದೇವಸ್ಥಾನದರಸ್ತೆ,
ಮಲ್ಲೇಶ್ವರ, ಬೆಂಗಳೂರು - 560003.

"ಜನಸೇವೆಯೆ" ಜನಾರ್ಧನ ಸೇವೆ"
"ದೇಶಸೇವೆಯೆ ಈಶಸೇವೆ"

ಇಂಥ ವಾಕ್ಯಗಳನ್ನ ಎಷ್ಟೋಸಲ ಕೇಳುತ್ತೇವೆ. ಮಾತೃದೇವೋಭವ ಪಿತೃ ದೇವೋಭವ, ಅತಿಥಿ ದೇವೋ ಭವ, ಆಚಾರ್ಯದೇವೋ ಭವ ಎಂದಿತು ವೇದ ಸಾವಿರಾರುವರ್ಷಗಳ ಹಿಂದೆ ಕಾಯಕವೇ ಕೈಲಾಸ ಎಂದರು ಬಸವಣ್ಣನವರು. ಸ್ವಾಮಿ ವಿವೇಕಾನಂದರು 'ದರಿದ್ರನಾರಾಯಣ' ಎಂಬ ಮಾತನ್ನು ಆಡಿದರು. 'ದರಿದ್ರದೇವೋ ಭವ' ಎಂಬ ಮಾತೂ ಈ ಯುಗದಲ್ಲಿ ಬಂತು. ಮಹಾತ್ಮ ಗಾಂಧೀಜಿ ಅಂತೂ ದೀನ ದಲಿತರ ಸಲುವಾಗಿಯೆ ಬಾಳಿದರು. ಗಾಂಧೀಯುಗದಲ್ಲಿ ಇಂಥ ನಿಷ್ಕಾಮ ಸೇವೆಯ ಪ್ರಸಂಗಗಳು ಅನೇಕ. ಹಾಗೆ ಸೇವೆಯಲ್ಲಿ ಬದುಕು ಕಳೆದ ಮಹಿಮರೂ ಅನೇಕ.

ತಾವು ಮಾಡುವ ಕೆಲಸವನ್ನೇ ದೇವರಪೂಜೆ ಎಂದು ಭಾವಿಸುವುದು ಅಪರೂಪ ಏನಲ್ಲ. ಸಮಾಜದಲ್ಲಿ ಭಗವಂತನನ್ನು ಕಂಡು, ಆ ಸಮಾಜರೂಪಿ ಭಗವಂತನನ್ನು ಸೇವೆಯ ಮೂಲಕ ಆರಾಧಿಸುವ ಉದಾಹರಣೆ ಎಷ್ಟೋ ಉಂಟು. ಮಹಾಭಾರತದಲ್ಲಿ ಬರುವ ಧರ್ಮವ್ಯಾಧನ ಕಥೆ ಇದಕ್ಕೆ ಉದಾಹರಣೆ. ಅಲ್ಲಿ ಒಬ್ಬ ಸಾಧ್ವಿ ತನ್ನ ಪತಿಸೇವೆಯನ್ನು ಪರಮಾತ್ಮನ ಸೇವೆ ಎಂದು ಕೊಂಡು ಮಾಡುತ್ತಾಳೆ. ಅದಕ್ಕಾಗಿ ಬಾಗಿಲಿಗೆ ಬಂದಿದ್ದ ಅತಿಥಿಯಾದ ಮುನಿಯನ್ನು ಸಹ ಸ್ವಲ್ಪಹೊತ್ತು ಕಾಯಿಸುತ್ತಾಳೆ. ಮುನಿಯ ಕೋಪ ಅವಳನ್ನು ಏನು ಮಾಡಲೂ ಸಾಧ್ಯವಾಗುವುದಿಲ್ಲ. ಮುನಿಯು ಆಕೆಗೆ ಮಣಿದು ಮಾರ್ಗದರ್ಶನ ಬೇಡುತ್ತಾನೆ. ಆಕೆ ಅದಕ್ಕೆ ಹೇಳುವ ಮಾತು ಮಾರ್ಮಿಕ. 'ಕಟುಕರ ಕೇರಿಯಲ್ಲಿ ಇಂಥ ಕಟುಕ ವ್ಯಾಧ ಒಬ್ಬ ಇದ್ದಾನೆ. ಅವನ ಬಳಿಹೋಗಿ ಜ್ಞಾನ ಪಡೆ ಎನ್ನುತ್ತಾಳೆ. ಮುನಿ ಅವಕ್ಕಾದರೂ, ಹಾಗೆಯೆ ಮಾಡುತ್ತಾನೆ. ಕಟುಕ ಹೇಳಿದ ಮಾತು ಸೇವಾಧರ್ಮದ ಮಾತು, "ನನ್ನಪಾಲಿಗೆ ಈ ಮಾಂಸ ವಿಕ್ರಯದ ಕಾಯಕ ಬಂದಿದೆ. ಇದನ್ನು ದೇವರ ಸೇವೆ ಎಂದೇ ಭಾವಿಸಿ ಪ್ರಾಮಾಣಿಕವಾಗಿ ಮಾಡುತ್ತೇನೆ" ಎಂದ. ಮುನಿ ಇಂಥ ಸೇವಾ ಕರ್ಮದ ದಾರಿ ಕಂಡುಕೊಂಡ ಎನ್ನುತ್ತದೆ ಆಕತೆ. ಮಾಡುವ ಕೆಲಸವನ್ನೇ ಹೀಗೆ ಪೂಜೆ ಎಂದು ಮಾಡುವ ನಿದರ್ಶನ ಉಂಟು. ಆದರೆ ದೇವರ ಸೇವೆ ಅಥವಾ ಪೂಜೆಯ ವ್ರತ ತೊಟ್ಟು ನಡೆಸುತ್ತಿರುವಾಗ, ನಡುವೆ ದೀನ ದಲಿತರ ಸೇವೆಗೆ ಆಪೂಜಾವ್ರತವನ್ನೇ ಬಿಟ್ಟು ಬರುವುದು ತೀರ ಅಪರೂಪದವಿಷಯ. ಮಹತ್ತರವಿಷಯ.

ಇಂಥದೊಂದು ಪ್ರಸಂಗ ನಮ್ಮ ಕರ್ನಾಟಕದಲ್ಲೇ, ಈ ಕಾಲದಲ್ಲೆ ನಡೆಯಿತು ಎನ್ನುವುದು ಹೆಮ್ಮೆಯ ವಿಚಾರ.

ಕೌಜಲಗಿ ಹನುಮಂತರಾಯರು ಕರ್ನಾಟಕದ ಸ್ವಾತಂತ್ರ್ಯ ಹೋರಾಟ, ಖಾದಿ ಕೆಲಸಗಳ ಆದ್ಯರಲ್ಲಿ ಒಬ್ಬರು. ಬಿಜಾಪುರದವರು. ಅವರು ಹುಟ್ಟಿದ್ದು ಮುಧೋಳದಲ್ಲಿ ಫೆಬ್ರುವರಿ 1891ರಲ್ಲಿ. ಇತ್ತೀಚೆಗೆ ಅವರ ಜನ್ಮ ಶತಾಬ್ದಿ ಸರವೇರಿತು. ರಾಯರು ದೇಶ ಸೇವೆಗಾಗಿ ತಮ್ಮನ್ನು ತಾವು ಪೂರಾ ಅರ್ಪಿಸಿಕೊಂಡಿದ್ದರು. ವಕೀಲಿ ಕಲಿತಿದ್ದರು. ಅದರಲ್ಲಿ ಹೆಸರು ಹಣ ಎಲ್ಲಗಳಿಸುವ ಅವಕಾಶವಿತ್ತು. ಆದರೆ ಗಾಂಧೀಜಿ ಬೀಸಿದ ಸಂಮೋಹಕ ಗಾಳಿಗೆಸಿಕ್ಕಿ, ರಾಯರು ಎಲ್ಲವನ್ನು ತ್ಯಜಿಸಿ ದೇಶಸೇವೆಯ ಹಾದಿ ಹಿಡಿದರು. ಬಡತನದಲ್ಲಿ ಬೆಂದರು. ಹೋರಾಟಬಿಡಲಿಲ್ಲ. ಜೈಲಿಗೆಹೋದರು. ಅಲ್ಲಿದ್ದಾಗಲೇ ಅವರಿಗೆ ಮಗಹುಟ್ಟಿದ, ಹೆಂಡತಿ ಕ್ಷಯರೋಗಕ್ಕೆ ಬಲಿಯಾದರು. ರಾಯರು ಮಾತ್ರ ವಿಚಲಿತರಾಗಲಿಲ್ಲ. ಸ್ವಂತ ಕಷ್ಟನಷ್ಟ ಎಲ್ಲವನ್ನು ಬದಿಗಿಟ್ಟು ನಾಡಿಗಾಗಿ ದುಡಿದರು, ಬಡಜನರ ಹೊಟ್ಟೆಪಾಡಿಗಾಗಿ ಹಳ್ಳಿ ಹಳ್ಳಿಯಲ್ಲೂ ಖಾದಿ ಕೆಲಸ ಏರ್ಪಡಿಸಿದರು. ಖಾದಿ ಹೊತ್ತು ಮಾರಿದರು. ಖಾದಿ ಹನುಮಂತರಾಯರು ಎಂದೇ ಹೆಸರು ಪಡೆದರು. ಹರಿಜನರ ಸೇವೆ, ದೇವದಾಸಿಯರ ವಿಮೋಚನೆಯ ಕಾರ್ಯ, ಸತ್ಯಾಗ್ರಹ, ಕ್ಷಾಮುಪರಿಹಾರ ಕಾರ್ಯ ನಾನಾಬಗೆ ಅವರ ಸೇವೆ.

ಬಿಜಾಪುರದ ಬರಗಾಲದಲ್ಲಿ ರಾಯರು ಮಾಡಿದ ಸೇವೆ ಶ್ರೇಷ್ಠತಮ. 1943 ರಲ್ಲಿ ಬಿಜಾಪುರ ಪ್ರಾಂತದಲ್ಲಿ ಭೀಕರ ಬರಬಂತು. ಇತಿಹಾಸದಲ್ಲೇ ಕಂಡರಿಯದಬರ. ಇದರ ಚಿತ್ರಣವನ್ನೇ ಡಾ|| ರಂ. ಶ್ರೀ. ಮುಗಳಿ ತಮ್ಮ 'ಅನ್ನ' ಕಾದಂಬರಿಯಲ್ಲಿ ಕೊಟ್ಟಿದ್ದಾರೆ. ಅಗ ನಾಡಲ್ಲಿ ಕ್ವಿಟ್ ಇಂಡಿಯಾ ಚಳುವಳಿ. ನಾಯಕರೆಲ್ಲ ಜೈಲಿನಲ್ಲಿ ಇದ್ದರು, ಜನ ಜಾನುವಾರು ಸಾವಿರ ಗಟ್ಟಲೆ ಕಂಗಾಲಾಗಿ ಸಾವಿನ ಹೊಸಿಲಿನಲ್ಲಿ ಇದ್ದವು. ಹನುಮಂತರಾಯರು ಚಳುವಳಿಯಲ್ಲಿ ಸೇರಿರಲಿಲ್ಲ- ಕಾರಣ ಅವರ ಅನಾರೋಗ್ಯ. ಅನೇಕ ವರ್ಷಗಳ ದುಡಿತ ಅಲೆತಗಳ ಪರಿಣಾಮವಾಗಿ ಅವರು ಮೂರ್ಛೆ ರೋಗಕ್ಕೆ ತುತ್ತಾಗಿದ್ದರು. ಆದರೂ ಕೆಲಸವನ್ನು ನಿಲ್ಲಿಸಿರಲಿಲ್ಲ. ಆ ರೋಗಕ್ಕೆ ಸಾಮಾನ್ಯವಾಗಿ ಕೊಡುವ ಶಾಮಕ ಔಷಧಿಯನ್ನು ಸೇವಿಸಲು ರಾಯರು ಒಪ್ಪಲಿಲ್ಲ ವೈದ್ಯರು ನಿರುಪಾಯರಾದರು. ಕೊನೆಗೆ ರಾಯರು ದೇವರೇ ಗತಿ ಎಂದು ಮಂತ್ರಾಲಯದ ಶ್ರೀ ರಾಘವೇಂದ್ರ ಸ್ವಾಮಿಯವರಿಗೆ ಶರಣು ಹೋದರು. ಮಂತ್ರಾಲಯಕ್ಕೆ ಹೋಗಿ ಅಲ್ಲಿ ನಿರ್ದಿಷ್ಟ ಅವಧಿಯ ಸೇವಾವ್ರತ ಹಿಡಿದರು. ಆಗ ಅವರು ರಾಘವೇಂದ್ರ ಗುರುಗಳನ್ನೇ ಉದ್ದೇಶಿಸಿ ಬರೆದ ಒಂದು ಪತ್ರರೂಪದ ಬಿನ್ನಹ ಅವರ ಆತ್ಮನಿವೇದನವಾಗಿದೆ. ಬರೆದದ್ದು ಹೀಗೆ-

"ಇಷ್ಟು ಅಲ್ಪ ಅವಧಿಯಲ್ಲೇ ನೀವು ನನ್ನನು ಅನುಗ್ರಹಿಸುವಿರಿ ಎಂದು ನಾನು ನಿರೀಕ್ಷಿಸಲಾರೆ. ಏಕೆಂದರೆ ನನ್ನ ಸೇವೆ ಸಾಲದು ಎನ್ನುವುದು ಸ್ಪಷ್ಟ.

"ತಮ್ಮನ್ನೇ ನಂಬಿ, ತಮ್ಮ ಆಶೀರ್ವಾದದ ಮೇಲೆ ಶ್ರದ್ಧೆಯಿಡಬೇಕು ಎನ್ನುತ್ತಾರೆ ಜನ. ಆದರೆ ಶ್ರದ್ಧೆ ಹೇಳಿದರೆ ಬರಲಾರದು. ಪ್ರಶ್ನಿಸುವ ಪ್ರವೃತ್ತಿಯಲ್ಲಿ ನಾನು ಬೆಳೆದಿರುವುದು.

"ನನಗೆ ಗುಣ ಆದೀತೊ ಇಲ್ಲವೊ ಸ್ಪಷ್ಟವಾಗಿ ಹೇಳಬೇಕು. ತಾವು ಗುಣವಾಗಲಾರದವನು ಎಂದು ನನ್ನನ್ನು ತಾವು ಹೇಳಿದರೆ ನಾನೇನೂ ಆಕ್ಷೇಪಿಸುವುದಿಲ್ಲ.

"ನಿರುಪಯೋಗಿ ಜೀವನ ನನಗೆ ಹಿಡಿಸದು. ತಾವು ನನ್ನನ್ನೂ ಉಪಯೋಗಿಯಾಗಿಮಾಡಿ ಇಲ್ಲವೇ ನನ್ನ ಬಾಳನ್ನು ಮುಗಿಸಿ ಬಿಡಿ.

"ಉಪದೇಶ ಸಹಿತವಾಗಿದೆ ನನ್ನ ಸೇವೆ. ನಿಷ್ಕಾಮವಲ್ಲ. ನನ್ನ ದುರದೃಷ್ಟ. ಇದು ರಾಜಸ ಸೇವೆ.

ನಾ ಬಲ್ಲೆ, ಈ ನನ್ನ ಗತಿ ನಾನು ಮಾಡಿದ ಪಾಪಗಳ ಫಲ. ತಾವು ನನ್ನನ್ನು ಕ್ಷಮಿಸಲಾರಿರಾ?

"ನನ್ನನ್ನೇಕೆ ಆಸೆಯಿಂದ ಮರುಳು ಮಾಡುವಿರಿ? ತಮ್ಮ ಅನುಗ್ರಹದ ಬಗ್ಗೆ ನನಗೆ ನೆಚ್ಚಿಗೆ ಇಲ್ಲ.

"ತಾವು ನಿಜಕ್ಕೂ ನನ್ನನ್ನು ಅನುಗ್ರಹಿಸಿರುವಿರಾದರೆ, ಇನ್ನೂ ಮುಂದೆ ನಾನು ಮಾಡುವುದೆಲ್ಲ ತಮ್ಮ ಕಾರ್ಯವೇ. ತಾವೇ ನನ್ನ ಮೂಲಕ ಕಾರ್ಯ ಮಾಡುವಿರಿ. ನಾನು ತಮ್ಮ ಸಾಧನ ಮಾತ್ರ."

ಈ ಆರ್ಶಭಾವದಿಂದ ಹನುಮಂತರಾಯರು ಗುರು ಸೇವೆಗೆ ತೊಡಗಿದರು. ಆದರೆ ಕೆಲವೇ ದಿನದಲ್ಲಿ ಬಂದ ಸುದ್ದಿ ಅವರನ್ನು ವಿಚಲಿತರಾಗಿಸಿತು. ಬಿಜಾಪುರ ಪ್ರಾಂತ್ಯ ಬರಗಾಲಕ್ಕೆ ತುತ್ತಾಗಿತ್ತು, ಜನ, ದನ ಕೂಳಿಲ್ಲದೆ ನೀರಿಲ್ಲದೆ ನರಳುತ್ತಿದ್ದರು. ಮಕ್ಕಳನ್ನೇ ಮಾರಿಕೊಳುತ್ತಿದ್ದರು. ದನಗಳನ್ನು ಕಟುಕರಿಗೆ ಮಾರುತ್ತಿದ್ದರು. ಇಲ್ಲವೇ ಕಳಚಿ ಬಿಡುತ್ತಿದ್ದರು. ಸತ್ತದನ ಕರು ಹೇರಳ. ಈ ವರದಿ ರಾಯರನ್ನು ತಟ್ಟಿತು. ದೀನ ದಲಿತರ ಪಶು ಪ್ರಾಣಿಗಳ ಕ್ಷೀಣ ಆರ್ತನಾದ ಅವರನ್ನು ವ್ರತವಿಮುಖರನ್ನಾಗಿಸಿತು. ಹಿಂದಿನ ಪುರಾಣಗಳಲ್ಲಿ ತಪಸ್ವಿಗಳು ಕಾಮಾದಿ ಪ್ರಲೋಭನಗಳಿಂದ ತಪೋ

ಭಂಗ ಪಡೆದುದನ್ನು ಕೇಳಿದ್ದೇವೆ. ಇಲ್ಲಿ ಆರ್ತರ ಗೋಳು ಕೇಳಿ ತಪೋಭಂಗ ಆಯಿತು. "ಜನ, ದನ ಇಂಥ ಸಂಕಟದಲ್ಲಿರುವಾಗ, ನಾನು ಇಲ್ಲಿ ದೂರದಲ್ಲಿ ಗುರುರಾಯರ ಸೇವೆಯಲ್ಲಿ ಅದರಲ್ಲೂ ಸ್ವಂತ ಆಸೆಯಿಂದ, ಮುಂದುವರಿಯಲಾರೆ" ಎಂದು ಕೊಂಡರು ಹನುಮಂತರಾಯರು. ಅವರ ಕಣ್ಣೆದುರು ಗುರುರಾಯರು ಇರಲಿಲ್ಲ. ಕಂಗಾಲಾಗಿ ಸಾಯುತ್ತಿದ್ದ ದನ, ಕರು ಮಕ್ಕಳು ಮುದುಕರು ಹೆಂಗಸರೇ ಕಣ್ಣಮುಂದೆ ಬಂದರು. ವ್ರತ ನಿಂತಿತು. ತಮ್ಮ ಸೂಕ್ಷ್ಮ ಆರೋಗ್ಯವನ್ನು ಲೆಕ್ಕಿಸದೆ ಹನುಮಂತರಾಯರು ಬಿಜಾಪುರಕ್ಕೆ ಧಾವಿಸಿ ಬಂದರು, ಹಳ್ಳಿ ಹಳ್ಳಿ ತಿರುಗಿ ಪರಿಸ್ಥಿತಿ ನೋಡಿದರು ಒಡನೆಯೆ ಕಾರ್ಯಪ್ರವೃತ್ತರಾದರು. ಮುಂಬೈಗೆ ಹೋಗಿ ಅಲ್ಲಿ ಠಕ್ಕರ್ ಬಾಸಾ ವೈಕುಂಠ ಲಾಲಮೆಹತಾ ಮುಂತಾದ ಗೆಳೆಯರನ್ನು ಕಂಡು, ಬಿಜಾಪುರ ಬರಪರಿಹಾರ ನಿಧಿ ಶೇಖರಿಸಲು ತೊಡಗಿದರು. ಹತ್ತುಲಕ್ಷಕ್ಕೂಮೀರಿ ಹಣ ಸೇರಿಸಿ ತಂದರು. ಹಗಲು ರಾತ್ರಿ ದುಡಿದು ಓಡಾಡಿ ಊರೂರಲ್ಲೂ ಪರಿಹಾರ ವ್ಯವಸ್ಥೆ ಮಾಡಿದರು. ಸಾವಿನ ದವಡೆಯಿಂದ ಸಾವಿರಾರು ಮಂದಿಯನ್ನು ಹಸುಗಳನ್ನೂ ಬಿಡಿಸಿದರು. ಓಡಾಡುವಾಗ, ಕಚೇರಿಯಲ್ಲಿರುವಾಗ ಎಷ್ಟೋ ಸಲ ಮೂರ್ಛೆ ಬಂದು ಬಿದ್ದುದೂ ಉಂಟು. ರಾಯರಿಗೆ ಯಾವುದೂ ಲಕ್ಷ್ಯವಿಲ್ಲ, ನಿರಂತರ ದುಡಿದರು. ಜನ - ದನ ಉಳಿದರು. ರಾಯರು ಮಾತ್ರ ದಣಿದರು ಬಳಲಿದರು, ಅವರ ದೇಹ ಪೂರಾ ಸೋತಿತು; ರೋಗ ಉಲ್ಬಣಿಸಿತು, ಕೊನೆಗೆ 1945 ಜೂನ್ 10 ರಂದು ರೋಗಕ್ಕೆ ಬಲಿಯಾದರು.

ದೀನ ದರಿದ್ರರ ಸಂಕಟ ನಿವಾರಣೆಗಾಗಿ ತಾವು ಆರೋಗ್ಯಕ್ಕಾಗಿ ಮಾಡುತ್ತಿದ್ದ ದೇವರ ಸೇವೆಯನ್ನು ಅರ್ಧಕ್ಕೇ ಬಿಟ್ಟು ಬಂದು ಕರ್ಮಯೋಗದಲ್ಲಿ ನಿರತರಾಗಿ ಅದರಲ್ಲೆ ಬಲಿದಾನ ಮಾಡಿದ ಕೌಜಲಗಿ ಹನುಮಂತರಾಯರ ಈ ಪ್ರಸಂಗ ವಿಶಿಷ್ಟವಾದದ್ದು, ವಿಶೇಷವಾದದ್ದು. ನಮ್ಮೆಲ್ಲರ ಕಣ್ಣನ್ನು ತೆರೆಯಿಸುವಂಥದು.

---

**ಗುರು ಬಸವಣ್ಣನೇ ಶರಣು**

ಬಸವಣ್ಣನೇ ಶರಣು, ಬಸವಣ್ಣನೇ ಶರಣು,
ಬಸವಣ್ಣನೇ ಪರಮ ಬಂಧುವೆನಗೆ
ವಸುಧೀಶ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ,
ನಿಮ್ಮಹೆಸರಿಟ್ಟ ಗುರು ಬಸವಣ್ಣನಯ್ಯಾ.

— ಸಿದ್ಧರಾಮೇಶ್ವರ

**ಬಸವನ ವಿಚಾರ ಪತ್ನಿ**

ಬಸವನ ಅನುಭಾವದಿಂದ ವಿವರವ ಕಂಡು,
ವಿಚಾರ ಪತ್ನಿಯಾದೆನಯ್ಯ ಸಂಗಯ್ಯ.

—ನೀಲಾಂಬಿಕಾ

# ರಾಷ್ಟ್ರ ಮತ್ತು ಯುವಶಕ್ತಿ

ಕೆ.ವಿ. ಚಂದ್ರಣ್ಣಗೌಡ, ೩೭, ಚಿಕ್ಕಮ್ಮ ಬಿಲ್ಡಿಂಗ್, ಐಯ್ಯಣ್ಣ ಶೆಟ್ಟಿ ಬಡಾವಣೆ,
ಮೈಸೂರು ರಸ್ತೆ, ಬೆಂಗಳೂರು-560026.

ಇಂದು ರಾಷ್ಟ್ರದಲ್ಲಿ ಭಾವೈಕ್ಯತೆ, ಸೋದರತ್ವ, ಸ್ವಾತಂತ್ರ್ಯ, ಸಮಾನತೆ ಮೂಡಿಸುವ ದಿಶೆಯಲ್ಲಿ ಯುವಶಕ್ತಿ ಅಪೂರ್ವ ಪಾತ್ರವಹಿಸಬೇಕಾಗಿದೆ. ಭವ್ಯ ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ, ತನ್ನ ರಾಷ್ಟ್ರದಲ್ಲಿ ಸಂಸ್ಕೃತಿ, ಸಾಹಿತ್ಯ ಹಾಗೂ ರಾಜಕಾರಣದ ಸಂಪತ್ತನ್ನು ಅಭಿವೃದ್ಧಿಗೊಳಿಸುವಲ್ಲಿ ಯುವ ಜನರು ಸದಾ ಶ್ರಮಿಸಬೇಕು.

ಮಹಾತ್ಮಗಾಂಧೀಜಿಯವರು ಹೇಳಿರುವಂತೆ-' ಯುವಜನರು ತಮ್ಮ ತಮ್ಮ ದೊಡ್ಡಸ್ಥಿಕೆಗಾಗಿ ಮಾಡುವ ದುಂದುವೆಚ್ಚವನ್ನು ಬಿಟ್ಟು ಸರಳವಾಗಿ ಬದುಕುವ ಸುಮಾರ್ಗವನ್ನು ಅವಲಂಬಿಸಬೇಕು. ಜಾತಿ, ಬಣ್ಣ ಲಿಂಗಬೇಧ ಇವುಗಳ ದ್ವೇಷವನ್ನು ಬದಿಗಿಟ್ಟು ಪರಸ್ಪರ ಸಹಕಾರ, ಅರಿವು ಒಡಂಬಡಿಕೆಯಿಂದ ಬದುಕಿ ತಮ್ಮ ಭಾವನೆಗಳನ್ನು ಅರಳಿಸಬೇಕು. ಕ್ಷುಲ್ಲಕ ಕಾರಣಗಳಿಗಾಗಿ ಯುವ ಜನರು ನಿರಾಶವಾದಿಗಳಾಗಬಾರದು. ಆತ್ಮಸ್ಥೈರ್ಯ ಹಾಗೂ ಅಂತಃಸಾಕ್ಷಿಗಳನ್ನು ಪಡೆಯಲು ಲವಲವಿಕೆಯಿಂದ ಕಾರ್ಯೋನ್ಮುಖರಾಗಬೇಕು. ಕರಾಳ ಸಮಸ್ಯೆಗಳ ವಿರುದ್ಧ, ಭ್ರಷ್ಟ ಸಮಾಜದ ವಿರುದ್ಧ ಹೋರಾಡಿ ಹೊಸ ಸಮಾಜವನ್ನು, ಹೊಸ ಸಂಸ್ಕೃತಿಗಳನ್ನು ಸೃಷ್ಟಿಸುವಲ್ಲಿ ಉಜ್ವಲ ವೀರರಾಗಬೇಕು. ರಾಷ್ಟ್ರದ ವಿರುದ್ಧ ಬೆಂಕಿ ಕಾರುವ ವಿಚ್ಛಿದ್ರಕಾರಕ ಶಕ್ತಿಗಳ ಎದುರಿಗೆ ಎದೆಗೊಟ್ಟು ಹೋರಾಡುವ ರಾಷ್ಟ್ರಪ್ರೇಮಿಗಳಾಗಬೇಕು. ಇದರಿಂದ ಹಿಂಸೆಯನ್ನು ಹೋರಾಟದಲ್ಲಿ ಸ್ವೀಕರಿಸಬೇಕೆಂದು ಅರ್ಥವಲ್ಲ. ಹಾಕಿ ಕೊಟ್ಟಿರುವ ಸತ್ಯಾಗ್ರಹ, ಗಾಂಧೀಜಿಯವರ ಅಹಿಂಸಾ ಮಾರ್ಗ ಇವುಗಳಿಂದ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳಬೇಕು. ಯುವಶಕ್ತಿ ಯಾವಾಗಲೂ ಶಾಂತಿ, ನೆಮ್ಮದಿಯ ಪ್ರತೀಕಗಳಾಗಿರಬೇಕು.

ಯುವಶಕ್ತಿ ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಹಕ್ಕುಗಳಿಗಾಗಿ ಹೋರಾಡಬೇಕು; ಅಲ್ಲದೆ ಆರೋಗ್ಯಕರವಾದ ಚಳುವಳಿ, ಮುಷ್ಕರ ಮುಂತಾದ ಕಾರ್ಯಚಟುವಟಿಕೆಗಳನ್ನು ಸದಾ ಬೆಂಬಲಿಸಬೇಕು. ಮಾನವನ ಸರ್ವ ವಿಧ ಹಕ್ಕು ಬಾಧ್ಯತೆಯ ರಕ್ಷಣೆಯ ಹೊಣೆ ಸಂಪೂರ್ಣವಾಗಿ ಯುವಜನತೆಯ ಮೇಲಿದೆ. ಇಂದು ಯುವಜನತೆ ಉದ್ಯೋಗ, ವಿದ್ಯೆ, ಮುಂತಾದ ಅವಕಾಶಗಳಿಂದ ವಂಚಿತರಾಗಿರುವುದು ಸಹಜ. ಆದರೆ ಇದರಿಂದ ನಿರಾಶಗೊಂಡು ಹಿಂಸೆ, ಅನ್ಯಾಯ ದರೋಡೆ ಮಾರ್ಗಗಳಿಗೆ ಇಳಿಯಬೇಕಾಗಿಲ್ಲ. ಸ್ನೇಹ, ಒಗ್ಗಟ್ಟು, ಉಲ್ಲಾಸದಿಂದ ಬದುಕುವುದನ್ನು ಕಲಿಯಬೇಕು. ಮನುಷ್ಯನ ಬದುಕು ದೊಡ್ಡದು; ಈ ಬದುಕಿನಲ್ಲಿ ಉಲ್ಲಾಸ, ತಲ್ಲಣ, ಬಡತನ, ಸಿರಿತನ ಎಲ್ಲವೂ ಇರುತ್ತದೆಂಬುದರ ಅರಿವು ಯುವ

ಶಕ್ತಿಯಲ್ಲಿ ಮೂಡಬೇಕು. ಒಟ್ಟಾರೆ ಇಂದಿನ ಹಾಗೂ ನಾಳಿನ ಸವಾಲುಗಳನ್ನು ಎದುರಿಸವಲ್ಲಿ ಯುವಶಕ್ತಿಯ ಪಾತ್ರ ವಿಶಿಷ್ಟವಾದುದು. ರಾಷ್ಟ್ರ ಹಾಗೂ ತನ್ನನ್ನು ದುರ್ಬಲಗೊಳಿಸುತ್ತಿರುವ ಎಲ್ಲಾ ದುಷ್ಟ ಶಕ್ತಿಗಳ ವಿರುದ್ಧ ಯುವಶಕ್ತಿ ಸದಾ ಜಾಗೃತವಾಗಿರಬೇಕಾಗಿರುವುದು ಒಳಿತು. ರಾಷ್ಟ್ರದಲ್ಲಿನ ಸಮಕಾಲೀನ ತುರ್ತು ಸಮಸ್ಯೆಗಳನ್ನು ಕುರಿತು ಗಂಭೀರವಾಗಿ ಚಿಂತಿಸಿ, ಚರ್ಚಿಸುವುದು; ನ್ಯೂಕ್ಲಿಯರ್ ಹಾಗೂ ಅಣುಬಾಂಬುಗಳ ದಳ್ಳುರಿಯಿಂದ, ಕ್ರೌರ್ಯದ ಸಾವಿನಿಂದ ಮಾನವ ಕುಲವನ್ನು ರಕ್ಷಿಸುವಲ್ಲಿ ಸನ್ನದ್ಧರಾಗುವುದು, ಪರಸ್ಪರ ತಿಳುವಳಿಕೆಯ ಹಾಗೂ ಸ್ನೇಹದ ವಾತಾವರಣದಲ್ಲಿ ಸಮಸ್ಯೆಗಳಿಗೆ ಪರಿಹಾರ ಕಂಡು ಹಿಡಿದು, ಸನ್ನಿವೇಶವನ್ನು ತಿಳಿಯಾಗಿಸುವ ಜವಾಂಬ್ದಾರಿ ಇಂದಿನ ಯುವಶಕ್ತಿಯ ಮೇಲಿದೆ ಆದುದರಿಂದ ಇದಕ್ಕಾಗಿ ಯುವಶಕ್ತಿಯಲ್ಲಿ ಅಚಲವಾದ ಶ್ರದ್ಧೆ, ಗುರಿ, ಸಂಯಮ ಅತ್ಯಗತ್ಯ.

ರಾಷ್ಟ್ರ ನಿರ್ಮಾಣದ ಅಗಾಧಕಾರ್ಯಕ್ಕೆ ಸಾಧ್ಯವಾದ ಎಲ್ಲಾ ಸಂಪನ್ಮೂಲನಗಳನ್ನು ಬೆಳಸಿ ಕೊಳ್ಳುವುದರೊಂದಿಗೆ; ಯುವಶಕ್ತಿಯ ಪ್ರತಿಭೆ ಮಿಳಿತವಾದರೆ, ಯಾವುದೇ ರಾಷ್ಟ್ರ ಭದ್ರ ಬುನಾದಿಯ ಮೇಲೆ ನಿಲ್ಲಲು ಸಾಧ್ಯವಾಗುತ್ತದೆ. ಇಂದು ನಮ್ಮ ರಾಷ್ಟ್ರದಲ್ಲಿ ನಗರಹಾಗೂ ಗ್ರಾಮಗಳ ನಡುವೆ ಆಗಾಧ ಕಂದರ ಸೃಷ್ಟಿಯಗುತ್ತಿರುವುದು ಕಂಡು ಬರುತ್ತಿದೆ. ಇಂತಹ ವಿಭಜನೆ ರಾಷ್ಟ್ರ ನಿರ್ಮಾಣದ ದೃಷ್ಟಿಯಿಂದ ಹಾಗೂ ಯುವಶಕ್ತಿಯ ಬೆಳವಣಿಗೆಗೆ ಮಾರಕವಾದ ಅಂಶ. ರಾಷ್ಟ್ರವನ್ನು ಅಭಿವೃದ್ಧಿ ಮತ್ತು ಪ್ರಗತಿಯ ದಿಕ್ಕಿನಲ್ಲಿ ಕೊಂಡೊಯ್ಯಲು ಅತ್ಯಗತ್ಯವಾದ ಸಾಮರ್ಥ್ಯ ಹಾಗೂ ಪ್ರತಿಭೆ ಗ್ರಾಮೀಣ ಯುವಜನಕ್ಕೂ ಇದೆ ಎಂಬ ವಾತಾವರಣವನ್ನು ಸೃಷ್ಟಿ ಮಾಡುವಲ್ಲಿ ವಿದ್ಯಾವಂತ ಯುವಜನತೆ ಶ್ರಮಿಸಬೇಕು. ನಗರ ಹಾಗೂ ಗ್ರಾಮೀಣ ಯುವಜನತೆ ತಂತಮ್ಮ ಭವಿಷ್ಯ ರೂಪಿಸಿಕೊಳ್ಳಲು ಅಗತ್ಯವಾದ ಉತ್ತೇಜನ ನೀಡುವುದು ನಮ್ಮೆಲ್ಲರ ಕರ್ತವ್ಯ.

ಇಪ್ಪತ್ತನೆಯ ಶತಮಾನದ ಮಹಾನ್ ಚಿಂತಕರಲ್ಲಿ ಒಬ್ಬರಾದ ಶ್ರೀ ಜಯಪ್ರಕಾಶ್ ನಾರಾಯಣವರು ಯುವಜನತೆಯ ಬಗ್ಗೆ ಅಪಾರ ಕಾಳಜಿಯುಳ್ಳವರಾಗಿದ್ದು; ದೇಶದ ಪ್ರಜಾಪ್ರಭುತ್ವದಲ್ಲಿ ಯುವಜನರ ಸ್ಥಾನ ಬಹು ಪ್ರಮುಖವಾದದು ಎಂದ ಅವರು 'ನಾಡಿನಲ್ಲಿ ನೈತಿಕ ಪ್ರಜ್ಞೆ ಅರಳಲು, ಬಡತನ, ನಿರುದ್ಯೋಗ ತೊಲಗಲು ಹೋರಾಡುವಂತೆ ಯುವಜನರು ಎಚ್ಚೆತ್ತುಕೊಳ್ಳಬೇಕೆಂದು 'ಸಂಪೂರ್ಣ ಕ್ರಾಂತಿ' ಎಂಬ ಚಳುವಳಿಯನ್ನೇ ಹುಟ್ಟುಹಾಕಿದರು. ಎಲ್ಲಾ ಕ್ಷೇತ್ರಗಳಲ್ಲಿ ಭ್ರಷ್ಟತೆ ತೊಲಗುವಂತೆ ಯುವಜನರು ಹೋರಾಡಬೇಕೆಂದು ರೆಯಿತ್ತರು. ಸ್ವತಂತ್ರ್ಯ ಭಾರತದಲ್ಲಿ ಶ್ರೀಯತರು ಬಿಟ್ಟು ಹೋಗಿರುವ ವಿಚಾರಧಾರೆಗಳು ಇಂದಿನ ಯುವಜನಕ್ಕೆ ಪ್ರೇರಕವಾದ ನೈತಿಕ ಶಕ್ತಿಯಾಗಿದೆ. ಒಟ್ಟಿನಲ್ಲಿ ರಾಷ್ಟ್ರ ನಿರ್ಮಾಣ ಕಾರ್ಯಕ್ರಮದಲ್ಲಿ ಯವಜನತೆ ಒಟ್ಟುಗೂಡಿ ಯುವಶಕ್ತಿ ಚೇತನದ ಮುಖಾಂತರ ಸಮಗ್ರ ಭಾರತವನ್ನು ಮುಂದಿನ ಶತಮಾನದತ್ತ ಒಯ್ಯಬೇಕಾದ ಗುರುತರ ಹೊಣೆಗಾರಿಕೆ ಇದೆ.

# ವಿಶ್ವ, ಪರೀಕ್ಷೆಯರಂಗ

ಎ ಬಿ ಚನ್ನಬಸಪ್ಪ, ನಿವೃತ್ತ ಮುಖೋಪಾಧ್ಯಾಯರು, ಎಫ್/1
"ಬಸವಪ್ರಸಾದ" ಶಂಕರಮಠ ಕ್ರಾಸ್ ।।. ಕಿಲ್ಲೆ – ಮೈಸೂರು - 4

...ಪದ ಪುಟ್ಟದು. ಅದು ಎಂದೂ ಯಾರಿಗೂ ಸಂಪೂರ್ಣ ತೆರೆದು ತೋರಿಸದ ಪರೀ...ಯ ರಂಗ. ಈ ಸಂಗತಿ ಪ್ರತಿಯೊಬ್ಬರಿಗೂ ಉಂಟು. ಒಬ್ಬಾತ ತಾಯಿಯ ಗರ್ಭ...ಲ್ಲಿ ಸೂಕ್ಷ್ಮ ಅಣುವಿನಲ್ಲಿ ಅಣು ಕ್ರಿಮಿಯಾಗಿ, ಕ್ರಮೇಣ ಪ್ರಕೃತಿಯ ನಿಯಮ...ಂತೆ, ಅಂಗಾಂಗಳಂ ಪಡೆಯುತ್ತ ಆ ಪುರುಷನ ಬಿತ್ತನೆಯ ಗುಣ ಶಕ್ತಿಯಂತೆ, ಅಲ್ಲದೆ ...ಸ್ತ್ರೀಯ ಆ ಕಾಲದ ಮನಸ್ಸಿನ ಮತ್ತು ಶರೀರದ ವ್ಯವಹಾರದಂತೆ, ಬೆಳೆಯುತ್ತಾ ...ಮಗು ಬರುತ್ತಿರುವುದು!

ಇದರ ಸಮರ್ಥನೆಗೆ ನಮ್ಮ ಪೂರ್ವಿಕರು ಅನೇಕ ಸಮರ್ಥನೆಗಳಂ ತಿಳಿಸಿ...ವರು. ಶ್ರೀ ಕೃಷ್ಣ ತನ್ನ ಸಹೋದರಿ ಪೂರ್ಣ ಗರ್ಭಿಣಿಯಾಗಿದ್ದಾಗ ತನ್ನ ಪಟ್ಟ...ಕ್ಕೆ ಕರೆದೊಯ್ಯುತ್ತಿದ್ದಾಗ, ಯುದ್ಧ ಕಾಲದಲ್ಲಿ ಚಕ್ರ ವ್ಯೂಹ ಕೋಟೆಯನ್ನು, ಹೇಗೆ ...ಪ್ರವೇಶಿಸುವುದು? ಎಂಬ ಭಾಗದ ತಿಳುವಳಿಕೆಯನ್ನು ತಿಳಿಸುತ್ತಿರುವಾಗ, ಆಲಿಸುವ ...ನಿ "ಹೂಂ ಹೂಂ" ಕೇಳಿ ಬರುತ್ತಿತ್ತು. ಶ್ರೀ ಕೃಷ್ಣ ಚತುರ. ತನ್ನ ಮುಂದಿನ ಪ್ರತಾ...ಕ್ಕೆ ಕುಂದು ಉಂಟಾಗುವುದೊ ಎಂಬ ಸ್ವಾರ್ಥತೆಯಿಂದ ಅಲ್ಲಿಗೆಯೇ ನಿಲ್ಲಿಸಿದನು. ...ದುದರಿಂದ ಆ ಅಭಿಮನ್ಯು ಮಹಾಭಾರತದ ಯುದ್ಧದಲ್ಲಿ, ಚಕ್ರವ್ಯೂಹ ಕೋಟೆ-...ಯಂ ಪ್ರವೇಶಿಸಿ, ಅಲ್ಲಿಂದ ಹೊರಬರಲು ಆಗಲಿಲ್ಲ. ಏಕೆ? ಗರ್ಭದಲ್ಲಿರುವಾಗ ಅಷ್ಟು ...ಮಾತ್ರ ತಿಳಿಯಲು ಅವಕಾಶವಾಯಿತು. ಇದು ಪರೀಕ್ಷೆಯಕಾಲವಲ್ಲ ಉತ್ತರ.

ಪಂಚ ಭೂತಗಳಿಂದ ಪ್ರಪಂಚ, ಅವು ಒಟ್ಟಿಗೆ ಸೇರಿಕೊಂಡು ಪ್ರಕೃತಿಯ ...ಜ್ಞಾನುಸಾರ, ಪರೀಕ್ಷಾಕ್ಷೇತ್ರವಾಗಿ, ರಚಿಸಿಕೊಂಡು ಪರೀಕ್ಷೆಯನ್ನು ನಡೆಸುತ್ತಿರು...ವುವು. ಮಾನವ ಪರೀಕ್ಷೆಯ ಅಭ್ಯರ್ಥಿ, ಈ ಪರೀಕ್ಷೆಯಲ್ಲಿ ಮೊದಲನೆಯ ತರಗತಿಯಲ್ಲಿ ...ತೇರ್ಗಡೆಯಾಗಬೇಕು. ಆಗ ಮಾತ್ರ ಅವರುಗಳಿಗೆ ಕೈಲಾಸ (ಸುಖ) ಪ್ರಾಪ್ತಿ.

ಮೊದಲನೆಯ ದೇವರು ಪೃಥ್ವಿ. ಹುಟ್ಟುವುದು ಮಣ್ಣಿನಲ್ಲೇ. ಕೊನೆಯಾ...ಗುವುದು ಮಣ್ಣಿನಲ್ಲೇ, ಚಿನ್ನಹಾಕಿದರೆ ಚಿನ್ನ ಬೆಳೆಯುತ್ತೆ, ನಿಕ್ಕಲ್ ಲೋಹಗಳು ...ಮಣ್ಣಿನಲ್ಲಿ ಸಕ್ಕಲ್ ಬೆಳಸು ಮಣ್ಣಿನಲ್ಲಿ, ರೈತನ ಜೀವನಾಡಿ ಮಣ್ಣು. ರೈತನಿಲ್ಲದೆ ಪೃಥ್ವಿ ...ಇಲ್ಲ. ಆದಿಯಲ್ಲಿ ಆಯ್ಯಾಯ ಕಸುಬುದಾರರು ಇಲ್ಲದಿರುವಾಗ್ಗೆ ಭೂಮಿ ಬೆಳಸನ್ನು ...ಕೊಡುತ್ತಿತ್ತು. ಕಾಡು ಪ್ರಕೃತಿಯ ಪ್ರಸಾರವಲ್ಲವೆ ? ಭೂಮಿ ಬಿಟ್ಟು ಕಾಡು ಉಂಟೆ?

ಇದು ಅದರ ರಂಗದಲ್ಲಿ ಬಹಳ ಪ್ರಾಮುಖ್ಯ. ಯಾವ ಅಭ್ಯರ್ಥಿಯೇ ಆಗಿರಲಿ ಆತನ ಶರೀರವೆಂಬ ಯಂತ್ರದಲ್ಲಿ ಮುಕ್ಕಾಲು ಭಾಗಕ್ಕಿಂತ ಹೆಚ್ಚಾಗಿ ನೀರಿನ ಭಾಗ ಇರಲೇ ಬೇಕು. ಪ್ರಕೃತಿ (ದೇವರು) ಬಹು ಆಲೋಚನಾಪರ. ಪೃಥ್ವಿಯಲ್ಲಿ ನೀರಿನ ಭಾಗವೇ ಹೆಚ್ಚು, ಆ ನೀರಿನಿಂದಲೇ ಭೂಮಿಯು ಸುತ್ತವರಿದಿದೆ. ನೀರಿನಿಂದ ಪ್ರಾಣಿ ವರ್ಗ ಸಸ್ಯವರ್ಗ ಮಳೆಗಾಲದಲ್ಲಿ ಮೋಡಗಳು ಮಳೆ ಸುರಿಸುತ್ತವೆ. ಆದರಿಂದ ಧರೆಯು ಜೀವಂತವಾಗಿ ಉಳಿದಿದೆ. ಒಳ್ಳೆಯದಕ್ಕೂ ಕೆಟ್ಟದಕ್ಕೂ ಬೇಕು. ಮಗು ಹುಟ್ಟಿ ದಾಗ ತೊಳೆಯುವುದಕ್ಕೆ ಸತ್ತಾಗ ತೊಳೆಯುವುದಕ್ಕೆ ನೀರು ಬೇಕಲ್ಲವೆ? ಅಂದ ಮೇಲೆ ನೀರು ಇಲ್ಲ ನಾವು ಇಲ್ಲ!

ಸೂರ್ಯ ಮೊಟ್ಟ ಮೊದಲನೇಯ ಅಗ್ನಿ. ಪೃಥ್ವಿ ಮೊದಲನೆಯ ದರ್ಶನ. ಆತನಿಂದಲೇ ಶಾಖ ಮತ್ತು ಬೆಳಕು. ಕ್ರಮೇಣ ನಮ್ಮ ಅಗ್ನಿ. ಅಗ್ನಿಯನ್ನು ಬೇಡ ಅನ್ನುವವ್ಯಕ್ತಿಯು ಇಲ್ಲವೇ ಇಲ್ಲ. ಆತ ಏನೇ ಆಗಿರಲಿ ದಿವಾನನಾಗಿರಲಿ-ಜವಾನನಾಗಿರಲಿ ಗುಡಿಸುವನಾಗಿರಲಿ ಏಕೆ ಮನೆ ಮಠವಿಲ್ಲದೆ ಮರದ ಕೆಳಗೆ ವಾಸಿಸುತ್ತಿರಲಿ-ಅರಮನೆ ಯಲ್ಲಿ ಯಾಗಲಿ ಇಲ್ಲವೇ ರಾಷ್ಟ್ರಪತಿಯ ಭವನದಲ್ಲಾಗಲಿ: ಬಿಳಿಯವನಾಗಿರಲಿ-ಕಪ್ಪಿ ನವನಾಗಲಿ ಅಂತು ಒಟ್ಟಿನಲ್ಲಿ ಯಾರೇ ಆಗಿರಲಿ, ಅಗ್ನಿ ಬೇಕೆ ಬೇಕು.

ಋಷ್ಯಾಶ್ರಮಗಳಲ್ಲಿ ಅವರ ದೇವರೇ ಅಗ್ನಿ. ಅಗ್ನಿಪೂಜೆಯೇ ಮೊದಲನೆಯ ಕರ್ತವ್ಯ ಅನ್ನ, ಆಹಾರ, ನೀರು ಮೊದಲಾದ ಸಾಧನಗಳು ಕೆಲದಿನಗಳಿಲ್ಲದೆ ಬದಕಬಹುದು. ಗಾಳಿ(ವಾಯು) ಕೇವಲ ಐದು ನಿಮಿಷವಿಲ್ಲ, ಆತ ಇಲ್ಲ. ಪ್ರಪಂಚಕ್ಕಾದರೆ ಅದುಕೂಡ ಇಲ್ಲ!. ಒಂದು ಗಾಜಿನ ಶೀಸೆಯಲ್ಲಿ ಒಂದು ಪ್ರಾಣಿ ಉದಾ: ಒಂದು ಜಾತಿಯ ಹುಳು ವನ್ನು ಹಾಕಿ ಅದರ ಬಿರುಡೆಯನ್ನು ಒಳಗಿನ ಗಾಳಿ, ಹೊರಗೆ ಬರದಂತೆಯೂ ಹೊರಗಿನ ಗಾಳಿಯು ಒಳಗೆ ಹೋಗದಂತೆಯೂ ಹಾಕುವುದು. ಒಳಗೆ ಗಾಳಿ ಇರುವ ತನಕ ಜೀವಂತವಾಗಿರುತ್ತದೆ. ನಂತರ ಸಂಕಟದಿಂದ ಹೊರಳಾಡಿ ಕೊನೆಗೆ ಸಾಯುವುದು.

ಅದು ಸಾಯಲು ಕಾರಣ ಹೊರಗಿನ ಗಾಳಿ ಇಲ್ಲದಿದುದರಿಂದ. ಅಂದಮೇಲೆ ಗಾಳಿ ಬೇಕೇ ಬೇಕು. ಗಾಳಿಇಲ್ಲ ನಾವು ಇಲ್ಲ!.

ಆಕಾಶ ಪೃಥ್ವಿಗೆ ರಕ್ಷೆ. ಸೂರ್ಯ-ಚಂದ್ರರ ನೆಲೆ ಆಕಾಶ. ಅಳತೆಗೆ ಗಾತ್ರಕ್ಕೆ ಮೀರಿರುವ ನಕ್ಷತ್ರಗಳು ಆಕಾಶದಲ್ಲಿ ಅಷ್ಟದೂರ ಏಕೆ? ಪೃಥ್ವಿಯೂ ಕೂಡ ಆಕಾಶದಲ್ಲಿ. ನಾವೆಲ್ಲವೂ ಆಕಾಶದಲ್ಲಿ, ಪಕ್ಷಿಗಳಿಗಂತೂ ಆಕಾಶವೇ ನೈಜ ತಾಣ. ಅದರ ಅಳತೆಯನ್ನು ತಿಳಿದಿರುವವನು ಅವನೊಬ್ಬನೇ (ದೇವರು). ಆದುದರಿಂದ ಸಕಲಕ್ಕೂ ಆಕಾಶವೇ!


ಪ್ರಕೃತಿಯ ಐದು ಪ್ರಶ್ನೆಪತ್ರಿಕೆಗಳನ್ನು ನಿಷ್ಠೆಯಿಂದ ಉತ್ತರಿಸಿರುವನು ಯಾವ ಪೇಪರನ್ನು ತೆಗೆದುಕೊಂಡರೂ ಅದು ತನ್ನದೇ ಆದ ಶಕ್ತಿ ಸಾಮರ್ಥ್ಯದಿಂದ ಕೂಡಿದೆ ಉಳಿದ ಪೇಪರು(ಶಕ್ತಿ) ಇಲ್ಲದಿದ್ದರೆ ಈ ಪೇಪರು ಪ್ರಯೋಜನಕ್ಕೆ ಬರಲಾರದು. ಬಹಳ ಕಠಿಣವಾದ ಪೇಪರು ಅಂದರೆ ವಾಯು (ಗಾಳಿ) ಅದನ್ನು ಉತ್ತರಿಸುವಾಗಲು ವಾಯು ಬೇಕಿತ್ತು. ಈಗಲೂ ಬೇಕು ಮುಂದಕ್ಕೂ ಬೇಕು.

ಈ ಕಾರಣವನ್ನೇ ಅರಿತಿರುವ ಪ್ರಕೃತಿಯು ಪೃಥ್ವಿ ಮತ್ತು ಆಕಾಶಗಂಗೆಗಳನ್ನು ವಾಯುವಿನಿಂದ ತುಂಬಿಸಿದೆ. ಒಟ್ಟಿನಲ್ಲಿ ಈ ರಂಗದ ಪರೀಕ್ಷೆಗಳಿಂದ ತಿಳಿದಿದುದು ಏನು? ಅಂತ ನಮಗೆ ನಾವೇ ಪ್ರಶ್ನೆ ಹಾಕಿಕೊಂಡರೆ :-

ಈ ಪಂಚಭೂತಗಳು ಒಂದಕ್ಕೊಂದು ಸಹಕರಿಸಿ ಕೊಂಡು ಒಟ್ಟಾಗಿ ಸೇರಿ ಪೃಥ್ವಿ ಆಗಿದೆ, ಈ ಪಂಚಧೂತಗಳಿಂದಲೇ ನಮ್ಮ ಶರೀರ ಆಗಿರುವುದು.

ಅಂತೂ ಇಂತ ದೈವದತ್ತವಾದ ಪರೀಕ್ಷೆಯ ಲಭ್ಯವಾಗಿ ಎಲ್ಲಾ ಪ್ರಶ್ನೆ ಪತ್ರಿಕೆಗಳಿಗೆ ಉತ್ತರಿಸಿದುದು ನನ್ನ ಗುರುಗಳ ಆಶೀರ್ವಾದ.

---



# ಶಿವಾನುಭವ ಚಿಂತಕ, ಶರಣ ಫ. ಗು. ಹಳಕಟ್ಟಿ

ಶ್ರೀಮತಿ ಲಲಿತಾಂಬ ವೃಷಭೇಂದ್ರ ಸ್ವಾಮಿ.

ಸಾಹಿತ್ಯಕ್ಷೇತ್ರ, ರಾಜಕೀಯ ಕ್ಷೇತ್ರ, ಶೈಕ್ಷಣಿಕ ಕ್ಷೇತ್ರ, ಸಾಮಾಜಿಕ ಅಥವಾ ಧಾರ್ಮಿಕ ಕ್ಷೇತ್ರ ಹೀಗೆ ಯಾವುದೋ ಒಂದು ಕ್ಷೇತ್ರದಲ್ಲಿ ಮಹತ್ತರ ಸಾಧನೆಗಳನು ಸಾಧಿಸಿದ ಅನೇಕರನ್ನು ಕಾಣಬಹುದು. ಆದರೆ ಇವೆಲ್ಲವುಗಳಲ್ಲೂ ಉತ್ತುಂಗಸ್ಥಾ ವನ್ನು ಮುಟ್ಟಿದಂತಹ ವ್ಯಕ್ತಿಗಳು ಬಹಳ ವಿರಳ. ಜಗತ್ತನ್ನೇ ಹುಡುಕಿದರೂ ಕೇವ ಬೆರಳೆಣಿಸುವಷ್ಟು ಮಂದಿ ಸಿಕ್ಕಬಹುದು. ಅಂತಹ ಜಗತ್ತಿನ ಅತಿ ವಿರಳ ವ್ಯಕ್ತಿಗಳ ರಾಮ ಬಹದ್ದೂರ ಹಳಕಟ್ಟಿಯವರ ಹೆಸರು ಕನ್ನಡ ನಾಡಿನಲ್ಲಿ ಎದ್ದು ಕಾಣು ವಂತಹ ಸ್ಥಾನ ಪಡೆದಿದೆ

ಶರಣ ಹಳಕಟ್ಟಿಯವರ ಜೀವನ ಚರಿತ್ರೆಯ ಬಗ್ಗೆ ಕಣ್ಣಾಡಿಸಿದರೆ ಅವರ ಅದ್ಭು ಸಾಧನೆಗಳು ಪರಿಚಯವಾಗುತ್ತದೆ. ಒಬ್ಬ ವ್ಯಕ್ತಿ ಯಾವ ಸಂಘ ಸಂಸ್ಥೆಗಳ ಬಲ ವಿಲ್ಲದೆ ಏಕಾಂಗಿಯಾಗಿ ಇಷ್ಟೊಂದು ಸಾಧನೆಗಳನ್ನು ಸಾಧಿಸಲು ಸಾಧ್ಯವೇ ಎಂದು ಬೆ ಗುಗೊಳ್ಳಬೇಕಾಗುತ್ತದೆ. ಇದೊಂದು ಪವಾಡವಿರಬೇಕು ಎನ್ನಿಸುತ್ತದೆ. ಆದರೆ ಇದ ಸಂಪೂರ್ಣ ಸತ್ಯವೆಂದು ಅರಿತಾಗ, ಸಹೃದಯ ಅವರ ಆತ್ಮಕ್ಕೆ ಕೈ ಜೋಡಿಸುತ್ತಾನೆ

ಶ್ರೀ ಹಳಕಟ್ಟಿಯವರು ಸರಳತೆ ಸಜ್ಜನಿಕೆ ದಕ್ಷತೆಯ ತ್ರಿವೇಣಿ ಸಂಗಮದಂ ದ್ದರು. ಲೌಕಿಕ, ಪಾರಮಾರ್ಥಿಕಗಳೆರಡನ್ನೂ ಪರಿಶುದ್ಧ ಜೀವನದಲ್ಲಿ ಸಾಧಿಸಿದವರು ಸಾರ್ವಜನಿಕವನ್ನು ಬಳಸಿಕೊಂಡು ತಮ್ಮದನ್ನು ಬೆಳೆಸಿಕೊಳ್ಳುವ ಸಮಾಜದ ಮಧ್ಯ ನಿಂತು ತಮ್ಮದನ್ನು ಬಳಸಿಕೊಂಡು ಸಾರ್ವಜನಿಕರನ್ನು ಬೆಳೆಸಲು ಶ್ರಮಿಸಲು ಮಹಾ ಜೀವಿ ಇವರು.

ಶ್ರೀ, ಫ, ಗ, ಹಳಕಟ್ಟಿಯವರು 1880 ಜುಲೈ 3 ನೆಯ ತಾರೀಖು ಧಾರ ವಾಡದಲ್ಲಿ ಜನಿಸಿದರು. ಇವರ ತಂದೆ ಸಾಹಿತ್ಯ ಪ್ರೇಮಿಗಳೂ, ಆದರ್ಶ ಶಿಕ್ಷಕರೂ ಸುಸಂಸ್ಕೃತ ಧಾರ್ಮಿಕ ವ್ಯಕ್ತಿಗಳೂ ಆಗಿದ್ದ ಗುರುಬಸಪ್ಪನವರು. ತಾಯಿ ಸದ್ಗುಣ ಸಂಪನ್ನೆಯಾದ ದಾನಾದೇವಿ ಮೂರು ವರ್ಷದ ಮಗುವಾಗಿದ್ದಾಗಲೇ ತಾಯಿಯನ್ನು ಕಳೆದುಕೊಂಡು ಫಕೀರಪ್ಪ ಹಳಕಟ್ಟಿಯವರು ತಂದೆಯ ಪೋಷಣೆ ಹಾಗೂ ಮಾರ್ಗ- ದರ್ಶನದಲ್ಲಿಯೇ ಮೈದೆಳೆದರು. ಮೆಟ್ರಿಕ್ ಪರೀಕ್ಷೆಯವರೆಗೆ ಧಾರವಾಡದಲ್ಲಿಯೇ ಓದಿ ಮುಂಬಯಿಯಲ್ಲಿ ಸೈನ್ಸ್ ಪದವಿಯನ್ನು ಪಡೆದರು. ಮುಂದೆ ಎಲ್.ಎಲ್.ಬಿ. ಪರೀಕ್ಷೆ ಯನ್ನು ಮುಗಿಸಿ ಎಂ.ಎ ಪರೀಕ್ಷೆಗೂ ಅಭ್ಯಾಸ ಮಾಡಿದರೂ ಪರೀಕ್ಷೆಗೆ ಕುಳಿತು ಕೊಳ್ಳಲಿಲ್ಲ, ಆಗಿನ ಕಾಲದಲ್ಲಿ ಶಿಕ್ಷಣ ಈಗಿನಷ್ಟು ಜನಜನಿತವಾಗಿರಲಿಲ್ಲ. ಕೇವಲ

ಕೆಲವು ಪದವೀ ಧರರಿದ್ದರು. ಇಂಗ್ಲೀಷಿನಲ್ಲಿ ಪರೀಕ್ಷೆ ಪಾಸು ಮಾಡಿ, ಇಂಗ್ಲೀಷರಿಗೆ ವಿಧೇಯತೆಯಿಂದ ಸೇವೆ ಮಾಡ ಬೇಕಾದಂತಹ ಉನ್ನತ ಪದವಿ ಪಡೆಯುತ್ತಿದ್ದ ಕಾಲವದು, ಅಂತಹ ಸನ್ನಿವೇಶದಲ್ಲಿ ಎರಡು ಪದವಿಗಳನ್ನು ಪಡೆದ ಅವರು, ಮನಸ್ಸು ಮಾಡಿದ್ದರೆ, ಬಹು ದೊಡ್ಡ ಹುದ್ದೆಯನ್ನು ಸರ್ಕಾರದಲ್ಲಿ ಪಡೆಯಬಹುದಿತ್ತು. ಆದರೆ ಸ್ವತಂತ್ರವಾಗಿ ಕೆಲಸ ಮಾಡಿ ಪರದೇಶದವರೂ ಮೆಚ್ಚಿ ತಾವೇ 'ರಾವ್ ಬಹದ್ದೂರ್', 'ರಾವ್ ಸಾಹೇಬ್' ಎಂಬ ಪ್ರಶಸ್ತಿಗಳನ್ನಿತ್ತು ಗೌರವಿಸುವಂತೆ ಬದುಕಿದರು. ಇವರು ವಕೀಲ ವೃತ್ತಿಯನ್ನು ಬೆಳಗಾಂವಿಯಲ್ಲಿ ಪ್ರಾರಂಭಿಸಿದರೂ ಅಲ್ಲಿ ಬಹಳ ಕಾಲ ನಿಲ್ಲದೆ ಬಿಜಾಪುರಕ್ಕೆ ಬಂದು ನೆಲೆಸಿ ಅದನ್ನೇ ತಮ್ಮ ಕಾರ್ಯ ಕ್ಷೇತ್ರವನ್ನಾಗಿ ಮಾಡಿ ಕೊಂಡರು.

ಅನೇಕ ಸಂಘ ಸಂಸ್ಥೆಗಳು ಸಾಧಿಸುವಷ್ಟು ಕೆಲಸವನ್ನು ಹಳಕಟ್ಟಿಯವರು ಮಾಡಿ ರುವುದನ್ನು ನೋಡಿದರು. ಒಬ್ಬ ದಕ್ಷ ವ್ಯಕ್ತಿ ಪ್ರಾಮಾಣಿಕನಾಗಿ ನಿಷ್ಠೆಯಿಂದ ಸತತ ವಾಗಿ ದುಡಿದರು. ಏನೆಲ್ಲಾ ಸಾಧಿಸಲು ಸಾಧ್ಯ ಎಂಬುದಕ್ಕೆ ಇವರೊಂದು ಕಣ್ಮುಂದಿನ ನಿದರ್ಶನ. ಅವರ ಪರಿಶುದ್ಧ ಕಾಯಕ ನಿಷ್ಠ ವ್ಯಕ್ತಿತ್ವ ಅನುಕರಣೀಯ, ಸಮಾಜಕ್ಕೆ ಮಾರ್ಗದರ್ಶಕ. ಹಳಕಟ್ಟಿಯವರು ಮಾನವ ಜೀವಿಸಿದ ಎಲ್ಲ ಕ್ಷೇತ್ರದಲ್ಲೂ ಕೆಲಸ ಮಾಡಿದ್ದಾರೆ. ರಾಜಕೀಯ ಶೈಕ್ಷಣಿಕ, ಧಾರ್ಮಿಕ ಸಾಹಿತ್ಯಕ ಸಾಮಾಜಿಕ ಎಲ್ಲ ಕ್ಷೇತ್ರಗಳಲ್ಲೂ ದುಡಿದಿದ್ದಾರೆ.

ರಾಜಕೀಯ ಕ್ಷೇತ್ರಗಳಲ್ಲಿ ಕಾಲಿರಿಸಿ ರಾಷ್ಟ್ರದ ಸ್ವಾತಂತ್ರ ಗಳಿಸುವ ಸೇವೆಯ ಲ್ಲಿ ಪಾಲ್ಗೊಂಡಿದ್ದಾರೆ. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಯಾಗಿ ವಿಧಾನಪರಿಷತ್ತಿನ ಚುನಾಯಿತ ಸದಸ್ಯರಾಗಿ ರಾಜಕೀಯ ಕ್ಷೇತ್ರದಲ್ಲಿ ದುಡಿದಿದ್ದಾರೆ,

**ವಚನ ಸಾಹಿತ್ಯದ ಅವಿಷ್ಕಾರಿ**

ಸಾಹಿತ್ಯ ಕ್ಷೇತ್ರದಲ್ಲಿ ಇವರು ಸಲ್ಲಿಸಿರುವ ಸೇವೆ ಅಪಾರ. ಗುಬ್ಬಿಯ ಮಲ್ಲಣಾರ್ಯ ಮಾಡಿದ ಗಣಭಾಷ್ಯ ರತ್ನ ಮಾಲೆಯ ಕೈ ಬರಹದ ಕೃತಿ ಅವರ ದೃಷ್ಟಿಗೆ ಬಿದ್ದು ಅವರ ಜೀವನದ ಜಾಡನ್ನೇ ಬದಲಿಸಿತು. ಅವರಲ್ಲಿಯ ಸುಂದರ ವಚನಗಳು ಅವರ ಮನಸ್ಸನ್ನು ಸೂರೆಗೊಂಡವು. ಅಲ್ಲಿಂದ ಅವರು ವಚನ ವಾಙ್ಮ ಯದ ಶೋಧನೆಗೆ ಹೊರಟರು. ಮನೆ ಮನೆಗಳನ್ನು. ಮಠ-ಮಠಗಳನ್ನು ಸುತ್ತ ಗೆದ್ದಲು ತಿಂದು ನಾಶವಾಗಿ ಹೋಗುತ್ತಿದ್ದಂತಹ ಅಮೂಲ್ಯ ವಚನ ಸಾಹಿತ್ಯದ ತಾಡೋಲೆ ಗ್ರಂಥಗಳನ್ನು ಸಂಗ್ರಹಿಸಿದರು. ಅವರ ಅವಿಶ್ರಾಂತ ಶ್ರಮ, ಕುಂದದ ಆಸಕ್ತಿಯ ಫಲವಾಗಿ ಸುಮಾರು ಒಂದುಸಾವಿರ ಕೃತಿಗಳ ಸಂಗ್ರಹವಾಯ್ತು. ಆ ಅಮೂಲ್ಯ ಸರಳ, ಸುಂದರ, ಜನಸಾಮಾನ್ಯರ ಕೈ ದೀವಿಗೆಯಾಗಬಹುದಾದ ವಚನ ಸಾಹಿ-

ತ್ಯದ ಲಾಭ ಜನತೆಗೆ ದೊರೆಯಬೇಕಾದರೆ ಅವರ ಮಹತ್ತ್ವ, ಲಾಭ ಶ್ರೇಷ್ಠತೆಯ ಅರಿವಾಗುವಂತೆ ಮಾಡುವುದು ಅವಶ್ಯಕವೆಂದು ಅರಿತರು. ಅದಕ್ಕಾಗಿ ಒಂದು ಪ್ರದರ್ಶನವ ಏರ್ಪಡಿಸಿ ಅಂದಿನ ಕಲೆಕ್ಟರ್‌ರಿಂದ ಉದ್ಘಾಟಿಸಿದರು. ಆ ಸಂಗ್ರಹದಲ್ಲಿದ್ದ ರಗಳೆ ಷಟ್ಪದಿ, ಸಾಹಿತ್ಯ ತ್ರಿಪದಿ, ಹಾಡು ಮೊದಲಾದವುಗಳನ್ನು ಬೇರೆ ಬೇರೆ ಗುಂಪುಗಳನ್ನಾಗಿ ವಿಂಗಡಿಸಿ ಸ್ವಂತ ಖರ್ಚಿನಲ್ಲಿ ಕಾರಕೂನರನ್ನು ನೇಮಿಸಿಕೊಂಡು ಅವುಗಳ ನಕಲನ್ನು ಸಿದ್ಧಪಡಿಸಿದರು. ಆಗಿನ ಕಾಲದಲ್ಲಿ ಅಚ್ಚು ಹಾಕಿ ಪುಸ್ತಕ ಪ್ರಕಟಣೆ ಮಾಡುವುದು ಸುಲಭಸಾಧ್ಯವಾಗಿರಲಿಲ್ಲ. ಅದಕ್ಕಾಗಿ ಅವರು ಪಟ್ಟಶ್ರಮ ಸಾರ್ಥಕವಾಗಲಿಲ್ಲವಾಗಿ ತಮ್ಮ ಸ್ವಂತಮನೆಯನ್ನು ಮಾರಿ 'ಹಿತಚಿಂತಕ' ಎಂಬ ಅಚ್ಚುಕೂಟವನ್ನು ಪ್ರಾರಂಭಿಸಿದರು. ಉತ್ತಮ ವಚನ ಆರಿಸಿ ವಿಷಯಕ್ಕನುಗುಣವಾಗಿ ಹೊಂದಿಸಿ ಪ್ರಕಟಿಸಿದರು. ಸುಮಾರು 60 ವರ್ಷಗಳಕಾಲ ಸತತ ಸಾಹಿತ್ಯಸೇವೆ ಸಲ್ಲಿಸಿ ಕನ್ನಡ ನಾಡಿಗೆ, ಕನ್ನಡ ಜನರಿಗೆ ಕನ್ನಡ ಭಾಷೆಗೆ ಅತ್ಯಮೂಲ್ಯ ಕಾಣಿಕೆಯನ್ನು ಅರ್ಪಿಸಿದ್ದಾರೆ. ಈ ಕೆಲಸ ಮಾಡುವಲ್ಲಿ ಅಡ್ಡಿಯಾಗುತ್ತಿದ್ದ ರಾಜಕೀಯದಿಂದ ದೂರಾದರು. ತಮ್ಮ ಉದ್ಯೋಗದಲ್ಲಿ ಆಸಕ್ತಿಯನ್ನು ಬಿಟ್ಟರು. ಪಬ್ಲಿಕ್ ಪ್ರಾಸಿಕ್ಯೂಟರ್ ನೇಮಿಸಲ್ಪಟ್ಟ ಇವರು ಆ ಬಗೆಗೆ ಆಸಕ್ತಿ ವಹಿಸಿದ್ದರೆ ನೌಕರಿಯಲ್ಲಿ ಬೇಕಾದಂತಹ ಎತ್ತರಕ್ಕೆ ಏರಬಹುದಿತ್ತು. ಆದರೆ ಅವರ ಸಾಹಿತ್ಯ, ಪ್ರೇಮ, ಸಾಮಾಜಿಕನಿಷ್ಠೆ, ಧಾರ್ಮಿಕಶ್ರದ್ಧೆ ಪ್ರಾಮಾಣಿಕ ಕರ್ತವ್ಯಗಳು ಅವರನ್ನು ವೈಯಕ್ತಿಕ ಪ್ರಗತಿಗಳ ಬಗೆಗೆ ಮಿಡಿಯಲು ಬಿಡಲಿಲ್ಲ. ಧರ್ಮಾಂಧತೆ ಇಲ್ಲದ ವಿಶ್ವಧರ್ಮವಾದ ವೀರಶೈವ ಶರಣರ ತತ್ವಗಳು ಇವರ ಮನಸ್ಸನ್ನು ಸೆರೆಹಿಡಿದು. ಮಾನವೀಯ ಉದ್ಧಾರಕ್ಕಾಗಿ ಶರಣಸಾಹಿತ್ಯ ಸೇವೆ ಮಾಡಲು ಇವರನ್ನು ಪ್ರೇರೇಪಿಸಿದವು. ಕ್ರಮೇಣವಾಗಿ ವಕೀಲ ವೃತ್ತಿಯನ್ನು ತ್ಯಜಿಸಿದರು. ಜನರಲ್ಲಿ ಕನ್ನಡದ ಬಗ್ಗೆ ಅಭಿಮಾನ ಹುಟ್ಟಿಸಲು ಕನ್ನಡವನ್ನು ಪ್ರೋತ್ಸಾಹಿಸಲು ಕನ್ನಡ ಭಾಷೆಯನ್ನು ಬೆಳೆಸಲು ನವಕರ್ನಾಟಕವೆಂಬ ಪತ್ರಿಕೆಯನ್ನು ಹೊರಡಿಸಿದರು. ಜನರಲ್ಲಿ ಧಾರ್ಮಿಕ ಭಾವನೆ ಜಾಗೃತಗೊಳಿಸಲು ನಿಜವಾದ ಧರ್ಮವೇನೆಂಬುದರ ಪರಿಚಯ ಮಾಡಿಕೊಡಲು ವಚನಗಳ ಮಹತ್ತರ ಅರಿವನ್ನುಂಟುಮಾಡಲು ಶಿವಾನುಭವ ಮಾಸಿಕವನ್ನು ಪ್ರಾರಂಭಿಸಿದರು. ಸುಮಾರು 77 ಕೃತಿಗಳನ್ನು ಸ್ವತಃ ಪ್ರಕಟಿಸಿದರು. ಬರೀ ಆದರ್ಶಗಳಿದ್ದು ವ್ಯವಹಾರಕ್ಕೆ ಜೀವನದ ಅರಿವಿಲ್ಲದಿದ್ದರೆ ಮನುಷ್ಯನ ಜೀವನ ದುಃಖಮಯವಾಗುವುದೆಂದು ಅರಿತು ಸಮಾಜದ ಜನರೆಲ್ಲಾ ಸುಖದಿಂದ ಬದುಕಬೇಕೆಂಬ ಮಾನವೀಯ ಗುಣಪಡೆದ ಇವರು ನೈತಿಕ, ಬೌದ್ಧಿಕ ವ್ಯವಹಾರಿಕ ಪ್ರಗತಿಗೆ ಸಹಾಯಕವಾಗುವ ವಿಚಾರಗಳನ್ನು ಘೋಷಿಸಿ ಯುವಕ ಪೀಳಿಗೆಗೆ "ಪ್ರಗತಿ ಮಾರ್ಗ ಜೀವನ" ಎಂಬ ಪುಸ್ತಕ ಬರೆದು ಪ್ರಕಟಿಸಿದರು. ಕನ್ನಡ ಸಾಹಿತ್ಯ ಪರಿಷತ್ತಿನೊಡನೆ ನಿಕಟ ಸಂಪರ್ಕ ಇಟ್ಟುಕೊಂಡು ಪ್ರತಿಸಲವೂ ಸಾಹಿತ್ಯ ಸಮ್ಮೇಳನದಲ್ಲಿ

ವಿಚಾರಪೂರ್ಣವಾದ ಉಪನ್ಯಾಸಗಳನ್ನು ಕೊಡುತ್ತಿದ್ದರು. ಒಮ್ಮೆ ವಚನ ಸಾಹಿತ್ಯದ ಮೇಲೆ ಇವರು ಮಾಡಿದ ಭಾಷಣದಿಂದ ಜನ ಬೆರಗಾದರು ಇವರ ಸಾಹಿತ್ಯ ಪ್ರೇಮ ಪಾಂಡಿತ್ಯ, ಸೇವೆಯನ್ನು ಅವಲೋಕಿಸಿದ ಪರಿಷತ್ತು ಬಳ್ಳಾರಿಯಲ್ಲಿ ನಡೆದ ಕನ್ನಡ-ಸಾಹಿತ್ಯ ಸಮ್ಮೇಳನಕ್ಕೆ ಇವರನ್ನು ಅಧ್ಯಕ್ಷರನ್ನಾಗಿ ಆರಿಸಿ ಗೌರವಿಸಿತು. ಕರ್ನಾಟಕ ವಿಶ್ವವಿದ್ಯಾಲಯವೂ ಸಹ ಇವರ ಅಗಾಧ ಸಾಹಿತ್ಯಸೇವೆಯನ್ನು ಡಾಕ್ಟರೇಟ್ ಪ್ರಶಸ್ತಿ ನೀಡುವುದರ ಮೂಲಕ ಕೊಂಡಾಡಿ ಗೌರವಿಸಿತು.

**ಶಿಕ್ಷಣ ಪ್ರೇಮಿ ಶ್ರೀ ಹಳಕಟ್ಟಿ :-**

ಇವರ ಕನ್ನಡ ಪ್ರೇಮ ಶಿಕ್ಷಣದ ಬಗೆಗಿನ ಅಭಿಮಾನ ಅಮಿತವಾದುದು. ಕನ್ನಡದ ಗಂಡು ಮೆಟ್ಟಿದ ಬಿಜಾಪುರದಲ್ಲಿ ಕನ್ನಡ ಶಾಲೆಗಳಿಗಿಂತ ಮರಾಠೀ ಶಾಲೆಗಳೇ ಹೆಚ್ಚಾಗಿದ್ದುದನ್ನು ನೋಡಿ ಅವರ ಸ್ವಾಭಿಮಾನಕ್ಕೆ ಧಕ್ಕೆ ಎನ್ನಿಸಿ ಕನ್ನಡಿಗರ ಬಗ್ಗೆ ಅನುಕಂಪ ಮೂಡಿತು. ಬಿಜಾಪುರದ ನಗರ ಸಭೆಯ ಶಾಲಾ ಮಂಡಲದ ಸದಸ್ಯರುಗಳ ಅವಕಾಶ ಉಪಯೋಗಿಸಿಕೊಂಡು ಬಿಜಾಪುರದಲ್ಲಿ ಕನ್ನಡ ಶಾಲೆಗಳು ತಲೆ ಎತ್ತುವಂತೆ ಮಾಡಿದರು. ಸಿದ್ದೇಶ್ವರ ಹೈಸ್ಕೂಲನ್ನು ತೆರೆದು ಅದನ್ನು ಅಭಿವೃದ್ಧಿಗೊಳಿಸುವ ಮಾರ್ಗದರ್ಶಿಯಾದ ಒಂದು ಪುಸ್ತಕವನ್ನು ಪ್ರಕಟಿಸಿದರು. ಅದರಲ್ಲಿ ಪಠ್ಯ-ಪಠ್ಯೇತರ ಚಟುವಟಿಕೆಗಳ ವಿವರವನ್ನೆಲ್ಲಾ ಕೊಟ್ಟಿರುವುದನ್ನು ನೋಡಿದರೆ ಇವರು ಒಬ್ಬ ಶಿಕ್ಷಣ ತಜ್ಞರೂ ಆಗಿದ್ದರೆಂಬುದರಲ್ಲಿ ಸಂಶಯವಿಲ್ಲ. ಕರ್ನಾಟಕ ಏಕೀಕರಣ ಪರಿಷತ್ತಿನ ಅಧ್ಯಕ್ಷರಾಗಿ ಕರ್ನಾಟಕ ರಾಜ್ಯದ ಸ್ಥಾಪನೆಗೂ ತಮ್ಮ ಸೇವೆ ಸಲ್ಲಿಸಿದ್ದಾರೆ.

ಇಷ್ಟೇ ಅಲ್ಲದೆ ಸಾರ್ವಜನಿಕರ ವ್ಯವಹಾರಿಕ ಜೀವನಕ್ಕೆ ಅನುಕೂಲವಾಗಲೆಂದು ವಿಜಾಪುರದಲ್ಲಿ ಶ್ರೀ ಸಿದ್ದೇಶ್ವರ ಕೋ- ಆಪರೇಟೀವ್ ಸೊಸೈಟಿಯನ್ನು ಪ್ರಾರಂಭಿಸಿದರು. ರೈತನಿಗೆ ಸಹಾಯವಾಗುವಂತೆ ಒಕ್ಕಲುತನಸಹಕಾರಿ ಸಂಘವನ್ನು ಸ್ಥಾಪಿಸಿದರು. ನೇಕಾರರಿಗೂ, ಹತ್ತಿಯ ಬೆಳೆಗಾರರಿಗೂ ಉಪಕಾರವಾಗಲೆಂದು ಹತ್ತಿಯ ಮಾರಾಟ ಸಂಘಗಳನ್ನು ರಚಿಸಿದರು. ಯುದ್ಧಸಮಿತಿಯ ಕಾರ್ಯದರ್ಶಿಯಾಗಿ ಆ ಕ್ಷೇತ್ರದ ಸೇವೆ ಸಲ್ಲಿಸಿದ ಸರ್ವಾಂತರ್ಯಾಮಿ ಇವರು. ಗ್ರಾಮೀಣದ ಅಭಿವೃದ್ಧಿ ಮಂಡಲದ ಕಾರ್ಯದರ್ಶಿಯಾಗಿ ಹಳ್ಳಿಗರ ಉದ್ಧಾರಕ್ಕೆ ಶ್ರಮಿಸಿದ್ದಾರೆ. ಆ್ಯಂಟಿ ಫ್ಯಾಮಿನ್ ಇನ್‌ಸ್ಟಿಟ್ಯೂಟ್‌ನ ಕಾರ್ಯದರ್ಶಿಯಾಗಿ ಭೂಮಿಯ ಅಭಿವೃದ್ಧಿ ಕಾರ್ಯ ಕೈಗೊಂಡು ವ್ಯವಸಾಯದ ಉತ್ಪನ್ನಗಳ ಹೆಚ್ಚುವರಿಗೆ ಸಹಾಯಕರಾದರು. ಹೀಗೆ ಇವರು ಸಲ್ಲಿಸಿದ ಸೇವೆ ಒಂದೆ ಎರಡೆ? ಇವರ ಕೆಲಸ ಗಮನಿಸಿದರೆ ಇವರು ಭೂಮಿಗಿಳಿದು ಬಂದ ಸರ್ವಶಕ್ತನೆ ಎಂಬ ಶಂಕೆ ಮೂಡುತ್ತದೆ.

ಈ ಎಲ್ಲ ಕಾರ್ಯಗಳ ಮೂಲಕ ಅವರು ಜನರಲ್ಲಿ ಒಂದಾದರು. ಅವರುಗಳ ಮನದಲ್ಲಿ ಬೆರೆತರು. ಎಲ್ಲರ ಅಚ್ಚು ಮೆಚ್ಚಿನ ಅಣ್ಣನವರಾದರು, ನಾವು ಯಾರು ಯಾರನ್ನೋ ಬಸವಣ್ಣನವರಿಗೆ ಹೋಲಿಸಿ ಬಸವಣ್ಣನವರು ಸಣ್ಣವರನ್ನಾಗಿ ಮಾಡುತ್ತಿರುತ್ತೇವೆ. ಆದರೆ ಫಕೀರಪ್ಪ ಹಳಕಟ್ಟಿಯವರನ್ನು ಇಪ್ಪತ್ತನೆಯ ಶತಮಾನದ ಬಸವಣ್ಣ ಎಂದರೆ ಯಾವ ರೀತಿಯ ಅಪಚಾರವೂ ಆಗದೆ ಸೂಕ್ತವಾದ ಹೋಲಿಕೆ ಎನ್ನಿಸಬಹುದು. ಬಸವಣ್ಣನವರು ಕಲ್ಯಾಣದ ಕ್ರಾಂತಿಗೆ ಕಾರಣರಾದರೆ ಫಕೀರಣ್ಣನವರು ಬಿಜಾಪುರ ಭಾಗದ ಜನಜೀವನದಲ್ಲಿ ತಮ್ಮ ಸರ್ವತೋಮುಖವಾದ ಕೃತಿಗಳಿಂದ ಕ್ರಾಂತಿ ಮಾಡಿದ್ದಾರೆ.

ಇವರ ಧರ್ಮ ಶ್ರದ್ಧೆ ಅಪಾರವಾದುದು ನಿಜವಾದ-ವೀರಶೈವ ಧರ್ಮದ ವ್ಯಕ್ತಿ ಹೇಗಿರಬೇಕೋ ಹಾಗೆ ಬಾಳಿದವರು. ಸ್ವಧರ್ಮಾಭಿಮಾನಿ, ಪರಧರ್ಮ ಪ್ರೇಮಿ. ಇವರ ಧಾರ್ಮಿಕ ಶ್ರದ್ಧೆ ಕಾರ್ಯಗಳನ್ನು ಗೌರವಿಸಿ, ಜನತೆ ಅವರನ್ನು 1933 ರಲ್ಲಿ ಧಾರವಾಡದಲ್ಲಿ ನಡೆದ ಅಖಿಲ ಭಾರತ ವೀರಶೈವ ಮಹಾಸಭೆಯ ಅಧ್ಯಕ್ಷರನ್ನಾಗಿ ನೇಮಿಸಿ, ನಮಿಸಿತು. ಹೀಗೆ ಜೀವನದ ಸರ್ವ ಕ್ಷೇತ್ರದಲ್ಲೂ ಸೇವೆ ಸಲ್ಲಿಸಿ, ಜನಮನವನ್ನು ಗೆದ್ದು ಜನತೆಯ ಗೌರವಕ್ಕೆ ಸತ್ಪಾತ್ರರಾದ ಹಳಕಟ್ಟಿಯವರು 1964 ನೆಯ ಜೂನ್ 29 ರಂದು ಇಹಲೋಕಕ್ಕೆ ಯಾತ್ರೆ ಮುಗಿಸಿ ಲಿಂಗದಲ್ಲಿ ಒಂದಾದರು.

ಶರಣ ಫ, ಗು, ಹಳಕಟ್ಟಿಯವರ ದಿವ್ಯಾತ್ಮ ದೇಹ ಬಿಟ್ಟು ಜ್ಯೋತಿಯ ರೂಪತಾಳಿದೆ. ಯಾವ ಮಾನವ ಬೇಕಾದರೂ ಈ ಜ್ಯೋತಿಯ ಬೆಳಕಿನಲ್ಲಿ ತನ್ನ ಜೀವನ ಮಾರ್ಗದ ಕತ್ತಲೆಯನ್ನು ಕಳೆದುಕೊಂಡು ಬೆಳಕಿನ ಮಾರ್ಗದಲ್ಲಿ ಸಾಗಬಹುದಾಗಿದೆ. ಈ ಜ್ಯೋತಿ ಸರ್ವರಿಗೂ ಬೆಳಕನ್ನು ನೀಡಬಲ್ಲ ಪ್ರಕಾಶ ಮಯವಾದ ಅಮರ ಜ್ಯೋತಿ ಎಂದಿಗೂ 'ನಂದದ ನಂದಾದೀಪ.

---

ಶಾಸ್ತ್ರ ಘನವೆಂಬೆನೆ ? ಕರ್ಮವ ಭಜಿಸುತ್ತಿದೆ !
ವೇದ ಘನವೆಂಬೆನೆ ? ಪ್ರಾಣವಧೆಯ ಹೇಳುತ್ತಿದೆ !
ಸ್ಮೃತಿ ಘನವೆಂಬೆನೆ ? ಮುಂದಿಟ್ಟು ಅರಸುತ್ತಿದೆ !
ಅಲ್ಲೆಲ್ಲಿಯೂ ನೀವಿಲ್ಲದ ಕಾರಣ, ತ್ರಿವಿಧದಾಸೋಹದಲ್ಲಲ್ಲದೆ
ಕಾಣಬಾರದು ಕೂಡಲಸಂಗಮದೇವನ !

—ಭಗವಾನ್ ಬಸವಣ್ಣ

# ಬೆರಳುಗಳ ಅಚ್ಚು ಕೊಟ್ಟ 'ಟೈಪ್ ರೈಟರ್'

ಪ. ರಾಮಕೃಷ್ಣ ಶಾಸ್ತ್ರಿಗಳು, "ಶಿವಶಕ್ತಿ ನಿಲಯ" ಅಂಚೆ : ಮಜ್ಜಿನ - 574 295 (ದ. ಕ.)

ಸಾವಿರಾರು ವರುಷಗಳಿಂದ ಬಾತುಕೋಳಿಯ ಗರಿಯನ್ನು ಮಸಿಯಲ್ಲಿ ಅದ್ದಿ ಬರೆಯುವ ವಿಧಾನ ಬಳಕೆಯಲ್ಲಿತ್ತು. ಅದನ್ನು ನಿವಾರಿಸಿ ಕೈಯಿಂದ ಬಡಿಯುತ್ತಲೇ ಕಾಗದದ ಮೇಲೆ ಅಕ್ಷರ ಮೂಡಿಸುವ ಯೋಜನೆಯನ್ನು ಮನುಷ್ಯ ಆವಿಷ್ಕಾರಗೊಳಿಸಿದ. ಹೀಗೆ ಬಡಿದಾಗ ಅಕ್ಷರ ಮೂಡಿಸುವ ಯಂತ್ರವನ್ನು ನಾವಿಂದು ಟೈಪ್‌ರೈಟರೆಂದು ಕರೆಯುತ್ತಿದ್ದೇವೆ. ಎರಡು ಶತಮಾನಗಳಿಗೂ ಹಿಂದೆ ಹೆನ್ರಿಮಿಲ್ ಎಂಬಾತ ಮೊದಲ ಬಾರಿಗೆ ಇಂತಹ ಯಂತ್ರವನ್ನು ತಯಾರಿಸಿದ. ಆದರೆ ಇದಕ್ಕೆ ಯಾರ ಪ್ರೋತ್ಸಾಹವೂ ಸಿಗದೆ ಅದರ ಸುಧಾರಣೆ ಸಾಧ್ಯವಾಗಲಿಲ್ಲ. ಸಾಮಾನ್ಯವಾಗಿ ಇಂದಿನ ಟೈಪ್‌ರೈಟರಿನಂತಿರುವ ಯಂತ್ರವನ್ನು ಫ್ರಾನ್ಸಿನ ಪ್ರೋಗ್ರಿನ್ ೧೮೩೩ ರಲ್ಲಿ ಶೋಧಿಸಿದ್ದರೂ ಅದು ಜನಪ್ರಿಯವಾಗಲಿಲ್ಲ. ಆಂಗ್ಲರು, ಅಮೇರಿಕನ್ನರು, ಫ್ರೆಂಚರು ಇಂತಹದೇ ಯಂತ್ರಗಳನ್ನು ತಯಾರಿಸಿದ್ದರು.

ಆದರೆ ಸರಿಯಾದ ಟೈಪ್‌ರೈಟರ್ ಯಂತ್ರ ಶೋಧಿಸಿದ ಕೀರ್ತಿ ಅಮೇರಿಕದ ಮಿಲ್ವಾಕಿಯ ಕ್ರಿಸ್ಟೋಫರ್ ಶೋಲ್ಸ್ ಎಂಬ ಮುದ್ರಕನಿಗೆ ಸಲ್ಲುತ್ತದೆ. ಆತ ತನ್ನ ಊರಿನವರೇ ಆದ ಸ್ಯಾಮುಯಲ್ ಸೋಲೆ ಎಂಬ ಮುದ್ರಕ ಮತ್ತು ಕಾರ್ಲೋಸ್ ಗ್ಲಿಡನ್ ಎಂಬ ಯಂತ್ರ ರಿಪೇರಿಯವನೊಂದಿಗೆ ೧೮೬೭ ರಲ್ಲಿ ಯಂತ್ರವೊಂದನ್ನು ತಯಾರಿಸಿದ. ಈ ಯಂತ್ರ ದೋಷ ಪೂರ್ಣವಾಗಿದ್ದುದರಿಂದ ೩೦ ಸಲ ಅದರ ಮಾದರಿಗಳನ್ನು ಬದಲಾಯಿಸಬೇಕಾಗಿ ಬಂದುದರಿಂದ ನಿರಾಶರಾಗಿ ಇಬ್ಬರೂ ಜಾರಿಕೊಂಡರು. ಉಳಿದವ ಕ್ರಿಸ್ಟೋಫರ್ ಮಾತ್ರ. ಅವನು ೧೮೭೩ ರಲ್ಲಿ ಇಂತಹ ಯಂತ್ರವೊಂದನ್ನು ಜಗತ್ತಿಗೆ ನೀಡುವಲ್ಲಿ ಸಾಫಲ್ಯ ಗಳಿಸಿದ.

ಆದರೆ ಯಂತ್ರವನ್ನು ತಯಾರಿಸಲು ಶೋಲ್ಸನಲ್ಲಿ ಹಣವಿರಲಿಲ್ಲ. ೧೮೭೪ ರಲ್ಲಿ ನ್ಯೂಯಾರ್ಕಿನ ಇ ರೆಮಿಂಗ್ಟನ್ ಎಂಡ್ ಸನ್ಸ್ ಎಂಬ ಬಂದೂಕು ತಯಾರಿಕಾ ಸಂಸ್ಥೆಯು ಅವನ ಯಂತ್ರದ ಉತ್ಪನ್ನ ಮತ್ತು ಮಾರಾಟದ ಹೊಣೆ ವಹಿಸಿಕೊಂಡಿತು. ಅತನ ಯಂತ್ರದ ಹಲವು ನ್ಯೂನತೆಗಳನ್ನು ನಿವಾರಿಸಿ "ರೆಮಿಂಗ್ಟನ್ ನಂ. ೧" ಎಂಬ ಯಂತ್ರವನ್ನು ಮಾರುಕಟ್ಟೆಗೆ ಬಿಡುಗಡೆಗೊಳಿಸಿತು. ಆಗ ಅದರ ಬೆಲೆ ೫೦೦ ರೂಗಳಾಗಿತ್ತು. ಆರಂಭದಲ್ಲಿ ಯಂತ್ರಕ್ಕೆ ಜನಪ್ರಿಯತೆ ಸಿಗಲಿಲ್ಲ ೭ ವರ್ಷಗಳಲ್ಲಿ ಕೇವಲ ೧೨೦೦ ಯಂತ್ರಗಳು ಮಾತ್ರ ಮಾರಾಟವಾದವು. ಅಗ್ಗವಾಗಿ ಲೇಖನಿಗಳು ಸಿಗುವಾಗ ಇಂಥದಕ್ಕೆ ಹಣ ಸುರಿಯುವುದು ಹುಚ್ಚುತನವೆಂದೇ ಸಂಸ್ಥೆಗಳು ಪರಿಗಣಿಸಿದವು. ಕಛೇರಿಗಳಲ್ಲಿ ನೌಕರರು ಅದರಿಂದಾಗಿ ತಮ್ಮ ನೌಕ

ರಿಗೆ ಸಂಚಕಾರ ಬರುವುದೆಂದು ಭಾವಿಸಿ ಕಛೇರಿಗೆ ಅದನ್ನು ಹೋಗಿಸಿದರೆ ತಾವು ಒಳಗೆ ಬಾರದೆ ಸಂಪು ಹೂಡುವ ಬೆದರಿಕೆಯನ್ನೊಡ್ಡಿದರು. ಆಗ ಎಲ್ಲೆಡೆಯೂ ಯೂ ಸುಂದರವಾದ ಬರವಣಿಗೆಯುಳ್ಳವರಿಗೆ ಚೆನ್ನಾಗಿ ಬೇಡಿಕೆ ಇತ್ತು. ಶಬ್ದದ ವೇಗ ನಿಮಿಷಕ್ಕೆ ೨೦ ಇದ್ದಿತಾದರೂ ಅಂಥವರಿಗೆ ಅದು ಜೀವನ ಸಾಗಿಸುವ ಉಪಾಯುವಾಗಿತ್ತು.

ನ್ಯೂಯಾರ್ಕಿನ ಕ್ರೈಸ್ತ ಯುವತಿಯರ ಸಂಘವು ಮೊದಲ ಬಾರಿಗೆ ವಾಣಿಜ್ಯ ರಂಗದಲ್ಲಿ ಮಹಿಳೆಯರನ್ನು ಪ್ರವೇಶಗೊಳಿಸಿ ೧೮೮೦ ರಲ್ಲಿ ಕಛೇರಿ ಉದ್ಯೋಗದಲ್ಲಿ ತರಬೇತಿ ನೀಡತೊಡಗಿತು. ಅದೇತಾನೆ ಐಸಾಕ್ ಪಿಟ್‌ಮನ್ ಶೀಘ್ರಲಿಪಿಯನ್ನು ಶೋಧಿಸಿದ್ದ. ಅದನ್ನು ಟೈಪ್‌ರೈಟರ್‌ನಲ್ಲಿ ಮೂಡಿಸುವ ಶಿಕ್ಷಣವನ್ನು ನೀಡುತ್ತಿದ್ದ. ಆದರೆ ದೃಢಕಾಯರಲ್ಲದ ತರುಣಿಯರಿಗೆ ಈ ಯಂತ್ರವನ್ನು ನಡೆಸಲು ಸಾಧ್ಯವಿರಲಿಲ್ಲ. ಅಂತೂ ೬ ತಿಂಗಳ ತರಬೇತಿಯಲ್ಲಿ ೮ ಮಂದಿ ದೃಢಕಾಯ ಯುವತಿಯರು ಪರಿಣತರಾದರು.

ಆಗ ಸಂಸ್ಥೆಗಳು ಟೈಪ್‌ರೈಟರಿನ ಉಪಯೋಗವನ್ನರಿತು ಅವರಿಗೆ ಮಾಸಿಕ ೩೦ ಡಾಲರ್ ವೇತನದ ನೌಕರಿ ನೀಡಿದವು. ಈ ಸಂಬಳ ಗಿರಣಿಗಳಲ್ಲಿ ಸಿಗುವುದರ ದುಪ್ಪಟ್ಟಾಗಿತ್ತು. ಇಂದಿಗೂ ಟೈಪ್‌ರೈಟರ್ ಕ್ಷೇತ್ರದಲ್ಲಿ ಗಂಡಸರಿಗಿಂತ ಹೆಂಗಸರದೇ ಮೇಲುಗೈ. ನಿಮಿಷಕ್ಕೆ ೪೦ ರಿಂದ ನೂರರ ತನಕ ಶಬ್ದ ಮೂಡಿಸಬಲ್ಲರು. ಅಮೇರಿಕದಲ್ಲಿ ಅವರಿಗೆ ೬ ಸಾವಿರ ರೂ ಸಂಬಳವಿದೆ.

ಈ ಶತಮಾನದ ಬೆಳಕು ಹರಿದಾಗ ಜಗತ್ತಿನ ಎಲ್ಲೆಡೆ ೭ ಲಕ್ಷ ಈ ಯಂತ್ರಗಳು ಕಾಲಿರಿಸಿದ್ದವು. ದಕ್ಷಿಣ ಧ್ರುವಕ್ಕೆ ಸಂಶೋಧನೆಗೆ ತೆರಳಿದ ಅಮೇರಿಕದ ಹಡಗೊಂದರಲ್ಲಿ ಅದು ಅಲ್ಲಿಗೂ ಕಾಲಿರಿಸಿತು ದಕ್ಷಿಣ ಆಫ್ರಿಕದವರಿಗೂ ಇದು ಪ್ರಿಯವಾಯಿತು. ಮುಂದೆ ಮನೆ ಮನೆಯಲ್ಲೂ ಅದರ ಪ್ರಸಾರವಾಯಿತು. ಹಾಸ್ಯ ಸಾಹಿತಿ ಮಾರ್ಕ್ ಟ್ವೇನ್ ತನ್ನ ಕೆಲವು ಕೃತಿಗಳನ್ನು ಇದರಲ್ಲೇ ಮೂಡಿಸಿದ. ಆಗೆಲ್ಲ ಯಂತ್ರ ತಯಾರಕರು ಯಂತ್ರದೊಂದಿಗೇ ಅದನ್ನು ನಡೆಸುವವರನ್ನೂ ಒದಗಿಸ ಬೇಕಾಗಿತ್ತು. ಅವರಿಗೆ ತರಬೇತಿ ನೀಡಿ ಉದ್ಯೋಗವೀಯುವ ಭರವಸೆಯನ್ನೂ ಕೊಡಬೇಕಾಗಿತ್ತು. ಆರಂಭದ ಟೈಪ್‌ರೈಟರಿಗೆ ಈಗಿನ ವೇಗವಿರಲಿಲ್ಲ. ಎರಡೇ ಬೆರಳುಗಳಲ್ಲಿ ನಡೆಸುತ್ತಿದರು. ಟೇಬ್ಯುಲೇಟರ್ ಇರಲಿಲ್ಲ, ಆಂಗ್ಲ ವರ್ಣಮಾಲೆಯ ದೊಡ್ಡ ಅಕ್ಷರಗಳು ಮಾತ್ರ ಅದರಲ್ಲಿದ್ದುವು.

ಅಮೇರಿಕದಗ್ರ್ಯಾಂಡ್ ರ್‍ಯಾಪಿಟ್ಸ್ ಎಂಬಾತ ಪಿಯಾನೋ ವಾದಕರು ಪಿಯಾನೋವನ್ನು ನೋಡದೆ ನೆನಪಿನ ಬಲದಿಂದ ನುಡಿಸುವುದನ್ನು ನೋಡಿದ. `ನೆನಪಿನ ಬಲದಿಂದಲೇ ಟೈಪ್‌ರೈಟರನ್ನೂ ಯಾಕೆ ನಡೆಸಬಾರದು? ಎಂದು ಆತ ಯೋಚಿಸಿ

ವರಲ್ಲಿ ಸಫಲತೆ ಗಳಿಸಿದ ಇಂದಿನ ಅತಿಶಯ ವೇಗದ ಟಚ್ ಸಿಸ್ಟಂ ಅಥವಾ ಸ್ಪರ್ಶ ದ್ಧತಿಯ ಶೋಧಕ ಆತ ನಿಮಿಷಕ್ಕೆ ೧೦ ಶಬ್ದಗಳ ಆತ ಮಾಡಿಸಿದರೆ. ರೆಮಿಂಗ್ಟನ್ ಪೆನಿ ಆವನನ್ನು ನೌಕರಿಗೆ ನೇಮಿಸಿಕೊಂಡು ಎಲ್ಲೆಡೆ ಈ ಪದ್ಧತಿಯ ಪ್ರಚಾರ ಾಡಿಸಿತು. ೧೯೩೫ ರಲ್ಲಿ ವಿದ್ಯುತ್ತಿನಿಂದ ಚಲಿಸುವ ವೇಗದ ಯಂತ್ರಗಳು ಬಂದು ಧಕಾಯರೇ ಅದನ್ನು ನಡೆಸಬೇಕೆಂಬ ಪದ್ಧತಿ ಮಾಯವಾಯಿತು. ಶೋಲ್ಸ್ ಯಾರಿಸಿದ ಯಂತ್ರದ ವ್ಯವಸ್ಥೆಯಲ್ಲಿ ಆದರಲ್ಲಿ ಒಂದು ತಾಸು ದುಡಿದರೆ ಅವನ ರಳು ಒಂದು ಮೈಲು ದೂರ ಚಲಿಸಿದಂತಾಗುತ್ತಿತ್ತು. ೬೦ ವರ್ಷ ಇದೇ ವ್ಯವಸ್ಥೆ ಡೆದು ಬಂತು. ವಾಷಿಂಗ್ಟನ್ ವಿಶ್ವವಿದ್ಯಾನಿಲಯದ ಡಾ|| ದ್ವೋರಕ್ ಎಂಬಾತ ಅಕ್ಷರಗಳ ಸ್ಥಾನ ಬದಲಿಸಿ ತಯಾರಿಸಿದ ಹೊಸ ಯಂತ್ರದಿಂದಾಗಿ ಹೊಸ ಬೆರಳು ಳ ಕೆಲಸ ಹತ್ತು ಪಾಲು ತಗ್ಗಿತು.

ಶೋಲ್ಸ್ ೧೮೯೦ ರಲ್ಲಿ ತೀರಿಕೊಂಡ. ಇಂಥ ಉಪಕಾರಿ ಯಂತ್ರ ಶೋಧಿಸಿದ. ಆತ ದರಿಂದಾಗಿ ಗಳಿಸಿದ ಹಣ ೬೦ ಸಾವಿರ ರೂಪಾಯಿ ಮಾತ್ರ. ಅವನು ಆದರ ಫಲವ ನ್ನುಣ್ಣದೆ ಬಡವನಾಗಿಯೇ ತೀರಿಕೊಂಡ. ಅವನ ಮರಣ ಶತಾಬ್ದದ ಸಂದರ್ಭ ಮೇರಿಕದಲ್ಲಿ ಟೈಪ್‌ರೈಟರ್ ಸಂಗ್ರಹಾಲಯವೊಂದನ್ನು ಸ್ಥಾಪಿಸಿ ಈ ವರೆಗೆ ಆದು ಳೆದು ಬಂದ ಮಾದರಿಗಳನ್ನು ಅಲ್ಲಿ ಜೋಡಿಸಿಡಲಾಗಿದೆ.

---

ವ್ಯಾಸ ಬೋಯಿತಿಯ ಮಗ, ಮಾರ್ಕಂಡೇಯ ಮಾತಂಗಿಯ ಮಗ,
ಮಂಡೋದರಿ ಕಪ್ಪೆಯ ಮಗಳು !
ಕುಲವನರಸದಿರಿಂ ಭೋ, ಕುಲದಿಂದ ಮುನ್ನೇನಾದಿರಿಂ ಭೋ !
ಸಾಕ್ಷಾತ್ ಅಗಸ್ತ್ಯ ಕಬ್ಬಿಲ, ದೂರ್ವಾಸ ಮುಚ್ಚಿಗ,
ಕಶ್ಯಪ ಕಮ್ಮಾರ, ಕೌಂಡಿಲ್ಯನೆಂಬ ಋಷಿ
ಮೂರು ಭುವನವರಿಯೆ ನಾವಿದ ಕಾಣಿ ಭೋ !
ನಮ್ಮ ಕೂಡಲಸಂಗನ ವಚನವಿಂತೆಂದುದು :
ಶ್ವಪಚೋಪಿ.........ಯಾದರೇನು, ಶಿವಭಕ್ತನೇ ಕುಲಜನು.

— ಬಸವಣ್ಣ

# ವಿಜ್ಞಾನ ಮತ್ತು ಆಧ್ಯಾತ್ಮ

ಹೆಚ್. ಎಸ್. ನರಸಿಂಹಜೀಯರ್, ಶ್ರೀ ಬಸವೇಶ್ವರ ಇಂಗ್ಲೀಷ್ ಸ್ಕೂಲ್, ತುಮಕೂರು-2

ನಮ್ಮ ಹಿಂದಿನ ಮಹರ್ಷಿಗಳು ತಮ್ಮ ಯೋಗಾಭ್ಯಾಸದಿಂದ ಪಡೆದ ಅಂತ-ಜ್ಞಾನ (intutive perception) ದಿಂದ ವೇದ ಉಪನಿಷತ್ತುಗಳನ್ನು ಬರೆದರು. ಆಧ್ಯಾತ್ಮ ಭಾಷೆಯಲ್ಲಿ ಇದನ್ನು ಪ್ರಜ್ಞಾ ಅಥವಾ ಪ್ರತಿಭಾ ಎನ್ನುತ್ತಾರೆ. ಇಂತಹ ಜ್ಞಾನವನ್ನು ತಮ್ಮ ಯೋಗ ಸಾಧನೆಯಿಂದ ವಿಶ್ವದ ಅನಂತ ಶಕ್ತಿಯಿಂದ ನೇರವಾಗಿ ಪಡೆಯಬಲ್ಲವರಾಗಿದ್ದರು. ಡಾ|| ಗಂಗೂಲಿ ಮತ್ತು ಇತರ ಕೆಲವರ ಅಭಿಪ್ರಾಯ-ದಂತೆ " Vedic knowledge was a direct giff of revelea-tion to $eers and sages who, in their higher reaches of yogic realisation, were competent to receive it from a source, Perfect and immaculate'' ಬುದ್ಧನು ತನ್ನ ತಪಸ್ಸಿನಿಂದ ಇಂತಹ ಜ್ಞಾನೋದಯ ಹೊಂದಿದನು. ಇದೇರೀತಿ ಅನೇಕ ಸಾಧು ಸಂತರು ಮಹಾಮಹಿಮರು ಅಂತಜ್ಞಾನ ಪಡೆದಿದ್ದರು "When the obser ving human mind becomes attuned to the cosmic consciousness within and arrcund and focusses att-ention on any Problem, the underlying truth comes as a flash" ಎಂಬುದನ್ನು ವಿಜ್ಞಾನಿಗಳು ಒಪ್ಪುತ್ತಾರೆ.

ಡಾ|| ಆರ್. ಡಿ. ರ್‍ಯಾನಡೆ, ಅಲಹಾಬಾದ್ ವಿಶ್ವವಿದ್ಯಾಲಯದ ಮಾಜಿ ಕುಲ ಪತಿಗಳು ''Intution far from Contradicting reason, feeli-ng or will, does Penetrate them because it is at the back of then all'' ಎಂದು ಹೇಳಿದ್ದಾರೆ. Intution ಎಂದರೆ seeing intelligence or truth bearing intellect which grasps reality'' ಎಂಬುದಾಗಿ ಡಾ|| ಗಂಗೂಲಿ ಹಾಗೂ ಇತರ ವಿಜ್ಞಾನಿಗಳು ತಿಳಿಸಿದ್ದಾರೆ. ಇದನ್ನೇ ಆಧುನಿಕವಾಗಿ Super reason or Supra rational Perception ಎನ್ನುತ್ತಾರೆ.

ವಿಜ್ಞಾನವು ಮಾನವನ ಜ್ಞಾನವನ್ನು ಅಪಾರವಾಗಿ ಹೆಚ್ಚಿಸಿದೆ. ಇತ್ತೀಚೆಗೆ ಈ ವಿಜ್ಞಾನ Sub - Atomic level ಗೆ ಬಂದಾಗ ಎಲ್ಲಾ ವಿಜ್ಞಾನಿಗಳೂ, ಮನಶ್ಯಾಸ್ತ್ರಜ್ಞರೂ, ಜೀವ ಶಾಸ್ತ್ರಜ್ಞರು, ಹಾಗೂ ಭೌತ ವಿಜ್ಞಾನಿಗಳೂ ಸಹ ಈ ಅಂತಜ್ಞಾನದ ಮಹತ್ವವನ್ನು ಒಪ್ಪಲು ಪ್ರಾರಂಭಿಸಿದ್ದಾರೆ.

Dr- Kenneth walker ಎಂಬ ಇಂಗ್ಲೆಂಡಿನ ಪ್ರಸಿದ್ಧ ಸರ್ಜನರು
There exist higher levels of Consciousness as the
en who have attained them have access to Know-
edge that is not accessible to others who function
n the ordinary level" ಎಂದು ಅಭಿಪ್ರಾಯ ಪಟ್ಟಿದ್ದಾರೆ. ಡಾ||
ಬಿಲ್‌ಎಂಪೂಲೆ ಎಂಬುವರು "Intution is the voice of the cos-
nic Reffer Seript consciousness in man" ಎಂದಿದ್ದಾರೆ.

ಭೌತ ಶಾಸ್ತ್ರಜ್ಞರಾದ Dr. Fritjof Copra ರವರಂತೆ "Though
ational Knowledge and rational activities constitute
he major part of scientific research, they are not
ll there is to it. The rational part of research would in
act be useless if it were not Complemeted intution
hat gives scientists new insights and makes them
creative." ಅನೇಕ ವಿಜ್ಞಾನಿಗಳು ಈ ಅಭಿಪ್ರಾಯವನ್ನು ಒಪ್ಪುತ್ತಿಲ್ಲ. ಏಕೆಂದರೆ
ವಿಜ್ಞಾನದಂತೆ ಈ ವಿಧಾನದಲ್ಲಿ Methodofo bservation collection
of data, reasoning, experimentation ಯಾವ ಹಂತಗಳೂ ಇಲ್ಲ.
ನೇರವಾಗಿ ಅಂತಹ ಜ್ಞಾನ ಹೇಗೆ ಬರಬಲ್ಲುದು, ಎಂಬುದೇ ಅವರಿಗೆ ಅನುಮಾನ
ವಾಗಿದೆ. ಇಂತಹವರಿಗಾಗಿ ಪ್ರಸಿದ್ಧ ಭೌತಶಾಸ್ತ್ರ ವಿಜ್ಞಾನಿಗಳಾದ Dr. Phillip
Frank ಎಂಬುವರು, The scientist is not an inventor of
formulae, he "sees" the formulae wih his "inner
eye" by looking at the observable phenomena and
makes use of his intution to di$cover that formula.
Some Scientists hesitate to acknowledge their debt. to
intution for the tear that this faculty may be in-
compatible with their Conception of themselves as
"men of facts" ಎಂಬುದಾಗಿ ಬಿಚ್ಚು ಮನಸ್ಸಿನಿಂದ ಹೇಳಿದ್ದಾರೆ. ಅನೇಕ
ವಿಜ್ಞಾನಿಗಳೇ "All atomic nucler would be made in stars"
ಎಂಬ Heyle ರವರ ಹೇಳಿಕೆ, ನ್ಯೂಟನ್ನನ "Law of gravitation,"
ಡಾರ್ವಿನ್ನರ 'Theory of Evolution" ಇವೆಲ್ಲವೂ ಅಂತರ್ಜ್ಞಾನದಿಂದ
ಹೊರಹೊಮ್ಮಿವೆಯೆಂದು ಒಪ್ಪಿಕೊಂಡಿದ್ದಾರೆ.

ಈ ರೀತಿ ಅನೇಕ ವಿಜ್ಞಾನಿಗಳ ಅಭಿಮತವನ್ನು ಪರಿಶೀಲಿಸಿದಾಗ ಅಂತಜ್ಞಾನದಿಂದ ಇಂತಹ ಅನೇಕ ಸತ್ಯಪ್ರಮಾಣಗಳು ದೊರೆತಿವೆ ಎಂಬುದು ಗೊತ್ತಾಗುತ್ತದೆ. ಆದ್ದರಿಂದ ಹಿಂದಿನ ನಮ್ಮ ಮಹರ್ಷಿಗಳು ಸಾಧುಸಂತರು ಇಂತಹ ಅಂತಜ್ಞಾನದ (intutive Perception) ದಿಂದಲೇ ವೇದ, ಉಪನಿಷತ್ತುಗಳನ್ನು ಬರೆದಿದ್ದಾರೆ ಎಂಬುದನ್ನೂ ಎಲ್ಲರೂ ಒಪ್ಪಬಹುದಾಗಿದೆ. ಆದ್ದರಿಂದಲೇ ಅವುಗಳಲ್ಲಿ ಬರುವ ವಿಚಾರಗಳು ಸತ್ಯ ಪ್ರಮಾಣವಾಗಿರಲೇಬೇಕಲ್ಲವೆ ? ಇಂತಹ ಜ್ಞಾನವನ್ನು ವಿಜ್ಞಾನದಲ್ಲಿ ನಾವು ಅನುಸರಿಸುವ ಯಾವಹಂತಗಳನ್ನೂ ಅನುಸರಿಸದೆ ನೇರವಾಗಿ ಆಧ್ಯಾತ್ಮ ಜೀವಿಗಳು ಪಡೆಯಬಲ್ಲವರಾಗಿದ್ದರು ಈ ಬಗ್ಗೆ ಡಾ॥ ಅಲೆಕ್ಸಿ ಕ್ಯಾರೆಲ್‌ರವರ ಹೇಳಿಕೆ ಹೆಚ್ಚಿನ ಸಮರ್ಥನೆ ನೀಡುತ್ತದೆ. ಅವರ ಹೇಳಿಕೆ ಈ ರೀತಿ ಇದೆ.

" Great discoveries are not the Product of intelligence alone, Men of genius in addition to their proess of Observation and Comprehension pessess other qualities such as intution and creative imagination. Through intution, they learn, without analysis, without reasoning, what is important for them to know. All great men are endowed with intution "

---

ಕಾಯದ ಕವಳಕ್ಕಂಜಿ 'ಕಾಯಯ್ಯಾ' ಎನ್ನೆನು;
ಜೀವನೋಪಾಯಕ್ಕಂಜಿ ಈಯಯ್ಯಾ ಎನ್ನೆನು,
"ಯದ್‌ಭಾವಂ ತದ್‌ಭವತಿ" ಉರಿ ಬರಲಿ, ಸಿರಿಬರಲಿ-
ಬೇಕು ಬೇಡನ್ನೆನಯ್ಯಾ.
ಆ ನಿಮ್ಮ ಹಾರೆನು, ಮಾನವರ ಬೇಡೆನು;
ಆಣೆ, ನಿಮ್ಮಾಣೆ, ಕೂಡಲ ಸಂಗಮದೇವಾ.

— ಬಸವಣ್ಣ

# ಪ್ರಪಂಚದ ಅತಿ ಸ್ಥೂಲಕಾಯ ವ್ಯಕ್ತಿ ವಾಲ್ಟರ್ ಹಡ್ಸನ್.

ಬಿ ಸುಬ್ರಾಯ ಅಡಿಗ ನಿವೃತ್ತ ಉಪಾಧ್ಯಾಯ, ಸಂಡೂರು-583119, ಬಳ್ಳಾರಿ ಜಿಲ್ಲೆ.

ಕೆಲವರ್ಷಗಳ ಹಿಂದೆ ಉತ್ತರ ಅಯರ್ಲ್ಯಾಂಡ್ ನಿವಾಸಿ 'ರೋಲೀ ಮಿನ್ ಟಾಯರ್' ವಿಶ್ವದ ಅತಿ ಸ್ಥೂಲದೇಹಿಯೆನಿಸಿದ್ದ. ಗಿನ್ನಿಸ್ ಬುಕ್ ಆಫ್ ವರ್ಲ್ಡ್ ರಿಕಾರ್ಡ ದಲ್ಲಿ ಹೆಸರು ಪಡೆದಿರುವ ಈತ ಅದೆಷ್ಟು ದಪ್ಪ ಇದ್ದನೆಂದರೆ, ಇವನಿಗೆ ಮಲಗಲು ದಪ್ಪ ಕಟ್ಟಿಗೆಯಿಂದ ತಯಾರಿಸಲಾದ ವಿಶಿಷ್ಟ ರೀತಿಯ ಬಲಿಷ್ಠ ಮಂಚ ಬೇಕಾಗುತ್ತಿತ್ತು. ೨೬೨ ಕಿಲೋಗ್ರಾಮ್ ಭಾರದ ರೋಲೀ ಮಿನಟಾಯರ್‌ನ ಡೊಂಕಾದ ಸುತ್ತಳತೆ ೨.೭ ಮೀಟರ್. ಇದು ಅವನ ಎತ್ತರಕ್ಕಿಂತ ೨೦ ಸೆಂಟಿಮೀಟರ್ ಹೆಚ್ಚಾಗಿತ್ತು !

ಒಮ್ಮೆ ಆತ ತನ್ನ ದೇಶದಲ್ಲೇ ನಡೆಯುತ್ತಿದ್ದ ಒಂದು ಫುಟಬಾಲ್ ಪಂದ್ಯವನ್ನು ನೋಡಲು ಹೋದ. ಸ್ಟೇಡಿಯಮ್‌ನ ಬಾಗಿಲ ಒಳಹೊಕ್ಕಾಗ ಆಕಸ್ಮಾತ್ ಅವನ ಬಾಯಿಯಿಂದ ಚೀತ್ಕಾರ ಹೊರಟಿತು. ಏಕೆಂದರೆ ಆತ ಬಾಗಿಲ ನಡುವೆ ಸಿಕ್ಕಿ ಕೊಂಡಿದ್ದ. ಈಗ ಆತ ಒಳಗೂ ಹೋಗುವಂತಿರಲಿಲ್ಲ, ಹೊರಗೂ ಬರುವಂತಿರಲಿಲ್ಲ! ನೋವಿನಿಂದ ಚೀರುತ್ತಿರುವ ರೋಲೀಮಿನ್ ಟಾಯರ್‌ನನ್ನು ಹೊರತೆಗೆಯಲು ಸ್ಟೇಡಿಯಮ್‌ನ ಬಾಗಿಲನ್ನೇ ಒಡೆಯಬೇಕಾಯಿತು.

ರೋಲೀಮಿನ ಟಾಯರ್ ಅದೆಷ್ಟು ಸ್ಥೂಲ ದೇಹಿ ಯೆಂದರೆ ಅವನ ತೊಡೆಗಳು ನಿರಂತರ ದಪ್ಪವಾಗುತ್ತ ಹೋದುದರಿಂದ ಮೂರು ವಾರಗಳಿಗೊಮ್ಮೆ ಪ್ಯಾಂಟ್ ಬದಲಾಯಿಸಬೇಕಾಗಿರುತ್ತಿತು. ಸ್ಥೂಲತೆ ಅವನ ಪಾಲಿಗೆ ಅಭಿಶಾಪ ವಾಗಿತ್ತು. ಅದರಿಂದಾಗಿಯೇ ಅವನನ್ನು ಮದುವೆಯಾಗಲು ಯಾವ ತರುಣಿಯೂ ಸಿದ್ಧಳಿರಲಿಲ್ಲ.

ಒಮ್ಮೆ ರೋಲೀ ತನ್ನ ಆರೋಗ್ಯ ಪರೀಕ್ಷೆಗಾಗಿ ತನ್ನ ಚಿಕಿತ್ಸಕನ ಬಳಿ ಹೋದ. ಆಗ ಅವನ ಬದುಕಿನಲ್ಲಿ ಅಕಸ್ಮಾತ್ ಭೂಕಂಪ ಉಂಟಾದಂತಾಯಿತು. ಇದೇ ರೀತಿ ದೇಹ ದಪ್ಪವಾಗುತ್ತ ಹೋದರೆ ನೀವು ಆರು ತಿಂಗಳಿಗಿಂತ ಹೆಚ್ಚು ಉಳಿಯಲಾರಿರಿ — ಎಂದು ಚಿಕಿತ್ಸಕನು ಸ್ಪಷ್ಟವಾಗಿ ನುಡಿದ. ಹೆಚ್ಚುಕಾಲ ಬದುಕುವ ಇಚ್ಛೆಯಿದ್ದರೆ ಹಸಿತರಕಾರಿ ಮತ್ತು ಹಣ್ಣುಗಳನ್ನು ಮಾತ್ರ ಸೇವಿಸಬೇಕೆಂದೂ ಮಾಂಸ, ಬಿಯರ್ ಮೊದಲಾದವನ್ನು ಬಿಟ್ಟುಬಿಡಬೇಕೆಂದೂ ಆತ ಸಲಹೆಯಿತ್ತ.

ಈಗ ರೋಲೀ ತಾನು ಬಹುಕಾಲ ಬದುಕಬೇಕೆಂಬ ದೃಢನಿರ್ಧಾರದೊಂದಿಗೆ ಚಿಕಿತ್ಸಕನ ಸಲಹೆಯನ್ನು ಚಾಚೂ ತಪ್ಪದೆ ಪಾಲಿಸಿದ. ಮೊದಮೊದಲು ಅವನಿಗೆ ತುಂಬಾ ಕಷ್ಟವಾಯಿತು. ಆದರೆ ಬರುಬರುತ್ತ ಅದು ಅಭ್ಯಾಸವಾಯಿತು. ಈ ಕ್ರಮದಿಂದ

ಮೆಲ್ಲಮೆಲ್ಲನೆ ಅವನ ಭಾರ ಹಾಗೂ ಸ್ಥೂಲತೆ ಕಡಿಮೆಯಾಗತೊಡಗಿತು. ಈ ರೀತಿ ಅವನ ಭಾರ ಕುಗ್ಗಿ ಬರೀ ೮೫.೬ ಕಿಲೋ ಉಳಿಯಿತು !

ಇತ್ತೀಚೆಗೆ ಇಂಗ್ಲೆಂಡಿನ ಒಂದು ಆರೋಗ್ಯ ಪತ್ರಿಕೆ ತನ್ನ ವಾರ್ಷಿಕ ಸಮಾರಂಭದಂದು ರೋಲೀ ಮಿನಿಟಾಯರ್‌ನಿಗೆ ಒಂದು ಸಾವಿರ ಪೌಂಡ್ ಪುರಸ್ಕಾರ ನೀಡಿ ಗೌರವಿಸಿತು. ಈಗ ಆತ ವಿಶ್ವದ ಅತಿ ತೆಳುವ್ಯಕ್ತಿಯೆಂದು 'ಗಿನ್ನೀಸ್ ಬುಕ್ ಆಫ್ ವರ್ಲ್ಡ್ ರಿಕಾರ್ಡ್' ದಲ್ಲಿ ನಮೂದಿಸಲ್ಪಟ್ಟಿದ್ದಾನೆ.

ಗುಡ್ಡಕ್ಕೆ ಗುಡ್ಡ ಅಡ್ಡ — ಎಂಬ ಗಾದೆಯಂತೆ ಭಾರತದಲ್ಲಿ ರೋಲಿ ಮಿನಿಟಾಯರ್‌ನನ್ನು ಮೀರಿಸುವ ವಾಲ್ಟರ್ ಹಡ್ಸನ್ ಎಂಬುವನು ಈಗ ಅತ್ಯಂತ ಸ್ಥೂಲಕಾಯನೆಂದು ಪ್ರಸಿದ್ಧಿಪಡೆದಿದ್ದಾನೆ. ಅವನ ಭಾರ ೫೬೬ ಕಿಲೋ ರೋಲೀಯ ಭಾರದ ಇಮ್ಮಡಿಗಿಂತಲೂ ಹೆಚ್ಚು !

ಹ್ಯಾಮಸ್ಟ್ಯಾಡ್‌ದಲ್ಲಿ ೨೫–೧೨-೧೯೮೭ ರಂದು ವಿಶ್ವದ ಈ ಅತಿ ಸ್ಥೂಲದೇಹಿ ಯಾವುದೇ ಆಧಾರವಿಲ್ಲದೆ ಒಂದು ಕೋಣೆಯಿಂದ ಇನ್ನೊಂದು ಕೋಣೆಗೆ ನಡೆದು ಹೋದ ಈ ರೀತಿ ಸುಮಾರು ೨೦ ಅಡಿ ಸಾಗಿದುದು ತನಗೆ ಹೊಸ ಹುಟ್ಟು ಬಂದಂತೆ — ಎಂದು ಹಡ್ಸನು ಭಾವಿಸಿದ್ದಾನೆ. ಅದಕ್ಕಾಗಿ ಆತ ೧೬೯ ಕಿಲೋ ಗ್ರಾಮ್ ಭಾರ ಇಳಿಸಿಕೊಂಡಿದ್ದ ಅದು ಏಕೆಂದರೆ ಸುಮಾರು ೧೬ ವರ್ಷ ಕಾಲ ಆತ ಒಂದೇ ಕೋಣೆಯಲ್ಲಿ ಕಳೆ-ದಿದ್ದ. ಇದು ತನಗೆ ದೊರೆತ ಅತಿ ದೊಡ್ಡ ಕ್ರಿಸ್‌ಮಸ್ ಕಾಣಿಕೆಯೆಂದು ಆತ ಹಿಗ್ಗಿ ನುಡಿದ.

ಅದಕ್ಕೆ ಮುನ್ನ ಹಡ್ಸನ್ ೧೬ ವರ್ಷ ಕಾಲ ಒಂದೇ ಕೋಣೆಯಲ್ಲಿ ಉಳಿದಿರಬೇಕಾಯಿತು. ಒಂದು ಕೋಣೆಯಿಂದ ಇನ್ನೊಂದು ಕೋಣೆಗೆ ಸಾಗಿದ ಈ ಐತಿಹಾಸಿಕ ಪಾದಯಾತ್ರೆಯ ಬಳಿಕ ಆತ ಸುದ್ದಿಗಾರರನ್ನು ಭೇಟಿಯಾದ. ಆ ವೇಳೆ ಆತ ೬.೩ ಮೀಟರ್ ಉದ್ದನೆಯ ಬಿಳಿ ಹಾಗೂ ನೀಲಿ ಬಟ್ಟೆಯಿಂದ ತಯಾರಾದ ಟೆಂಟ್‌ದಂತಹ ಅಂಗಿ ತೊಟ್ಟಿದ್ದ. ತಾನಿನ್ನು ಸ್ವತ ನಡೆದು ಮನೆಯಿಂದ ಹೊರ ಬರುವ ಪ್ರಯತ್ನ ನಡೆಸುವುದಾಗಿ ಹಡ್ಸನ್ ಹೇಳಿದ. ಗಿನ್ನೀಸ್ ವಿಶ್ವದಾಖಲೆಯಲ್ಲಿ ಹಡ್ಸನನ ಹೆಸರು ಎಲ್ಲರಿಗಿಂತ ಮೇಲಿದೆ !

೧೬೮೨ ರಲ್ಲಿ ಒಮ್ಮೆಲೇ ಅವನ ಹೆಸರು ವಿಶ್ವವಿಖ್ಯಾತವಾಯಿತು. ಏಕೆಂದರೆ ಆರಡಿ ಎತ್ತರದ ಹಾಗೂ ೯ ಅಡಿ ಸುತ್ತಳತೆಯ ಹಡ್ಸನ್ ತನ್ನ ಸ್ನಾನ ಗೃಹದ ಬಾಗಿಲೊಳಗೆ ಸಿಕ್ಕಿಕೊಂಡಿದ್ದ, ಅವನನ್ನು ಹೊರತೆಗೆಯಲು ತುರ್ತು ಚಿಕಿತ್ಸೆಯ ತಂತ್ರಜ್ಞನನ್ನು ಕರೆಯಿಸಬೇಕಾಯಿತು. ಕಷ್ಟ ಪಟ್ಟು ಅವನನ್ನು ಹೊರದೆಗೆದರು. ಆದರೆ ಮುಂದೆ ಅವನ ಭಾರ ಇಳಿಸಲೆಂದು ನೀರು, ಹಣ್ಣುಗಳ ರಸ ಹಾಗೂ ಒಂದು ರೀತಿಯ ಪೋಷಕಚೂರ್ಣದ ಮೇಲೆಯೇ ಅವನನ್ನು ಇರಿಸಲಾಯಿತು.

ಹಡ್ಸನ್ ಈಗ ಸ್ಥೂಲದೇಹಿಯಾದರೂ ಹೊಟ್ಟೆಬಾಕನಲ್ಲ. ಈಗ ತನಗೆ ಮನ ಬಂದಂತೆ ತಿನ್ನುವ ಇಚ್ಛೆ ಉಂಟಾಗುತ್ತಿಲ್ಲ ಎಂದು ಆತ ಸುದ್ದಿಗಾರರಿಗೆ ಹೇಳಿದ್ದಾನೆ. ಹಡ್ಸನ್ ತನ್ನ ಭಾರವನ್ನು ನಿರಂತರ ತಗ್ಗಿಸುವ ವಿಚಾರದಲ್ಲಿದ್ದಾನೆ. ಆದರೆ ಇದು ಸಾಧ್ಯವೋ ಅಲ್ಲವೋ ಎಂಬುದನ್ನು ಕಾಲವೇ ಹೇಳಬೇಕು.

ಸ್ನಾನ ಗೃಹದ ಬಾಗಿಲಲ್ಲಿ ಸಿಕ್ಕಿಕೊಂಡ ಬಳಿಕ, ಆತ ಸಾಮಾಜಿಕ ಕಾರ್ಯ ಕರ್ತ ಹಾಗೂ ಪೋಷಣ ತಜ್ಞ 'ಡಿಕ್ ಗ್ರೆಗೊರ್ನಿಯ ಮೇಲ್ವಿಚಾರಣೆಯಲ್ಲಿ ಆಹಾರ ತೆಗೆದು ಕೊಳ್ಳುತ್ತಿದ್ದಾನೆ. ಅವನ ಆಹಾರದ ಸ್ವರೂಪ ಪೂರ್ತಿ ಬದಲಾಗಿದೆ. ಈಗ ಆತ ಹಣ್ಣು ಹಾಗೂ ತರಕಾರಿಗಳನ್ನಷ್ಟೇ ಬಳಸುತ್ತಾನೆ. ಜತೆಗೆ ಗ್ರೆಗೊರಿ ಕೊಡುತ್ತಿರುವ ಪುಡಿರೂಪದ ಆಹಾರವನ್ನು ಕಿತ್ತಳೆರಸದಲ್ಲಿ ತೆಗೆದುಕೊಳುತ್ತಿದ್ದಾನೆ.

ಹಡ್ಸನನ ಭಾರವನ್ನು ೭೦೮ ಪೌಂಡಿಗೆ ಇಳಿಸಬೇಕೆಂದು ಗ್ರೆಗೊರೀ ದೃಢನಿರ್ಧಾರ ಮಾಡಿರುವ. ಆದರೆ ಹಡ್ಸನ್ ರೋಲೀ ಮಿನಿಚಾಯರ್‌ನಷ್ಟು ತೆಳುಮನುಷ್ಯನಾದಾನೆ? ಎಂಬುದನ್ನು ಭವಿಷ್ಯವೇ ಹೇಳಬೇಕು! (ಹಿಂದಿಯಿಂದ)

---

## ವಿಶ್ವ ವೀರಶೈವ ಧರ್ಮದಲ್ಲಿಯೇ ಪ್ರಪ್ರಥಮ ವೀರಶೈವ ಡೈರೆಕ್ಟರಿ.

ವೀರಶೈವ ಧರ್ಮದ ಮಠ, ಮಂದಿರಗಳು, ಪುಣ್ಯಕ್ಷೇತ್ರಗಳು, ಮಠಾಧೀಶರು, ವೀರಶೈವ ವೈದ್ಯರು, ವಕೀಲರು, ಶಿಕ್ಷಣ ತಜ್ಞರು, ಅಭಿಯಂತರು ಉದ್ಯಮಿಗಳು ಸಾಹಿತಿ ಪತ್ರಕರ್ತರು ಸಮಾಜಸೇನಾ ಕಾರ್ಯಕರ್ತರು ಮುಂತಾದವರ ಬಗ್ಗೆ ಛಾಯಾಚಿತ್ರ ಸಹಿತ ವಿವರಗಳುಳ್ಳ ವೀರಶೈವ ಡೈರೆಕ್ಟರಿಯು ಈ ತಿಂಗಳಾಂತ್ಯದಲ್ಲಿ ಮುದ್ರಣಕ್ಕೆ ಹೋಗುತ್ತದೆ.

ಕಳೆದ ಆರು ತಿಂಗಳಿನಿಂದ ಈ ಬಗ್ಗೆ ವಿಷಯ-ವಿವರಣೆ ಸಂಗ್ರಹಿಸಲು ತೊಡಗಿದ್ದು ಎಲ್ಲ ಕಡೆಯಿಂದಲೂ ಸೂಕ್ತ ಪ್ರತಿಕ್ರಿಯೆ ಸಹಾಯ ಸಹಕಾರ ಸಿಗುತ್ತಿದೆ. ಇದು ಸರ್ವವಿಷಯ ಸಂಪನ್ನವಾಗಿ ಪ್ರಕಟವಾಗಬೇಕೆಂಬುದು ನಮ್ಮ ಹೆಬ್ಬಯಕೆ. ಈ ಬಗ್ಗೆ ಇದರಲ್ಲಿ ಮೇಲೆ ತಿಳಿಸಿದಂತೆ ವಿವರ ಮಾಹಿತಿಯನ್ನು ಛಾಯಾಚಿತ್ರ ಸಹಿತ ಕಳುಹಿಸಿಕೊಟ್ಟು ಈ ಕಾರ್ಯ ಯಶಸ್ವಿಯಾಗಿ ಆದರ್ಶ ಸಂಪುಟವಾಗುವಂತೆ ಸಕ್ರಿಯವಾಗಿ ಸಹಕರಿಸಲು ಈ ಮೂಲಕ ಕಳಕಳಿಯ ಮನವಿ ಮಾಡಿಕೊಳ್ಳುತ್ತೇವೆ.

**ಶಿವರುದ್ರಯ್ಯ ಪ. ಮ.**
ಬೆಂಗಳೂರು
ಸಹ ಸಂಪಾದಕರು

**ಷಡಕ್ಷರಿ ಶೆಟ್ಟರ**
ಎಂ. ಎ.
ಸಂಪಾದಕರು

**ವಿಳಾಸ :** ಸಂಪಾದಕರು, ವೀರಶೈವ ಡೈರೆಕ್ಟರಿ ನಂ. 3893,
ಹೊಸ ಹುಬ್ಬಳ್ಳಿ ಕಿಲ್ಲೆ, ಹುಬ್ಬಳ್ಳಿ-580 020.

# ವಚ ತಪಸ್ವಿ (ಧಾರಾವಾಹಿ - ೩)

ಜಿ, ರಾಧಾದೇವಿ, ಕಾದಂಬರಿಗಾರ್ತಿ, ಬೆಸ್ತವಾರ ಪೇಟೆ, ರಾಯಚೂರು- 584101

ಸಂ:- ಶ್ರೀ ಧರ್ಮಸ್ಥಳದ ಮಂಜಯ್ಯ ಹೆಗ್ಗಡೆ ಅವರ ಮಹಾಸಾಧನೆ ಕುರಿತು ಜಾನಪದ ರೂಪದಲ್ಲಿ ಧಾರಾವಾಹಿಯಾಗಿ ಲೇಖಕರು ಪರಿಚಯಮಾಡಿಕೊಟ್ಟಿದ್ದಾರೆ.

ಮಾತನಾಡುವ ಮಂಜುನಾಥ ಸುವ್ವಲಾಲಿ
ನಮ್ಮ ಶ್ರೀ ಮಂಜಯ್ಯ ಹೆಗಡೇರುಸುವ್ವಲಾಲಿ
ಪ್ರೀತಿ ಪ್ರೇಮ ಅವರುಸಿರು ಸುವ್ವಲಾಲಿ
ಜನ ಹಿತಕಾಗಿಯೆ ಬಾಳಿದರು ಸುವ್ವಲಾಲಿ

ವಿಶ್ವ ಕುಟುಂಬಿಯಾಗಿ ಬಾಳಿದ ಇವರ ವೈಯಕ್ತಿಕ ಬದುಕು ಗುರುತಿಸುವುದು ಬಹುಕಷ್ಟ, ತಮ್ಮ ಅಸಾಧಾರಣಾ ಮೇಧಾವಿ ತನ, ಶ್ರೀ ಕ್ಷೇತ್ರದ ಧನ ಜನಬಲ- ತಮ್ಮ ಅಧಿಕಾರ ವರ್ಚಸ್ಸು ತಮ್ಮ ಪ್ರಭಾವ ಎಲ್ಲಾ ಲೋಕ ಕಲ್ಯಾಣಕ್ಕೆ ನೀಡಿದರು,

ನೀರು ತುಂಬಿದ ನದಿ ಸುವ್ವಲಾಲಿ
ಬಾಯಾರಿ ಬಂದವರಿಗೆ ಸುವ್ವಲಾಲಿ
ಹಣ್ಣು ತುಂಬಿದ ಮರ ಸುವ್ವಲಾಲಿ
ಹಸಿದು ಬಂದವರಿಗೆ ಸುವ್ವಲಾಲಿ

ಹೀಗೆ ಸಜ್ಜನರ ಜನಬಲ, ಧನಬಲಗಳು ಪರೋಪಕಾರಕ್ಕೆ ಎಂಬುತ್ತಿದ್ದರು, ಶ್ರೀ ಕ್ಷೇತ್ರವನ್ನು ನವ ನವೀನವಾಗಿ, ಸುಂದರ ಸುಮಧುರವಾಗಿ ಹೇಗೆ ಅಲಂಕರಿಸ ಬೇಕೆಂಬುದರ ಬಗ್ಗೆ ಅವರ ಮನಸ್ಸಿನಲ್ಲಿ ಅಪೂರ್ವ ಯೋಜನೆಗಳು ಹೊಳೆಯುತ್ತಿದ್ದವು. ಅದು ಅವರ ಮೇಧಾವಿತನದ ದ್ಯೋತಕವಾದರೆ, ಅದನ್ನು ಕಾರ್ಯರೂಪಕ್ಕೆ ಇಳಿಸಲು ಒಂದು ತಂಡ ಪರಿಣಿತರಾದ ಜನ ಇವರ ನೇತೃತ್ವದಲ್ಲಿ ದುಡಿಯುತ್ತಿದರು,
ಶ್ರೀ ಕ್ಷೇತ್ರದ ಉತ್ಪತ್ತಿಯು ದಿನದಿನಕ್ಕೆ ಸಮೃದ್ಧಿಯಾಯಿತು, ಒಳ್ಳೆಯ ಮೇಧಾವಿ ತನ್ನ ಜನಬಲ, ಧನಬಲ ಕೂಡಿದರೆ ಏನಾಗಲಾರದು ?

ಬೆಳ್ಳಿರಥ ಬೆಳಗಿತು ಸುವ್ವಲಾಲಿ
ಬ್ರಹ್ಮ ಕಲಶಮೆರೆಯಿತು ಸುವ್ವಲಾಲಿ
ಹವನ, ಹೋಮ ದ್ರವ್ಯಕಲಶ ಸುವ್ವಲಾಲಿ
ಶ್ರೀ ಕ್ಷೇತ್ರ ಧರ್ಮದ ನೆಲೆಯಾಯ್ತು ಸುವ್ವಲಾಲಿ

ಶ್ರೀ ಕ್ಷೇತ್ರದ ದೈವಿ ಆರಾಧನೆ ಪೂರ್ಣಾಂಶದಿಂದ ವಿಜೃಂಭಿಸಿ|ಜನರಿಗೆ ಅಪೂರ್ವ ದೈವಿ ಸಾಕ್ಷಾತ್ಕಾರವಾಗಲೂ ಹೊಸ ಹೊಸ ಉತ್ಸವಗಳಲ್ಲಿ ಪಾಲ್ಗೊಂಡು ಜನರು

ಹೊಸ ಉಲ್ಲಾಸ ಪಡೆಯಲು ಇವು ಕಾರಣವಾದವು. ಇನ್ನು ಧರ್ಮದ ಬಗ್ಗೆ ಜನರಿಗಿರುವ ಅಜ್ಞಾನವನ್ನು ತೊಲಗಿಸಲು ಸರ್ವಧರ್ಮಗಳ ಸಾರವೊಂದರ ಎಂಬ ಬೆಳಕು ಮೂಡಿಸಲು ಸರ್ವಧರ್ಮ ಸಮ್ಮೇಳನ ಪ್ರಾರಂಭಿಸಿದರು.

ಸಾಹಿತ್ಯ, ಲಲಿತಕಲೆಗಳಲ್ಲಿ ಇವರಿಗೆ ಅಪಾರ ಅಭಿರುಚಿ, ಸ್ವತಃ ಖ್ಯಾತ ಚಿತ್ರಗಾರರೂ ಹೌದು! ಕಲಾವಿದರನ್ನು, ಚಿತ್ರಗಾರರನ್ನು, ಸಾಹಿತಿಗಳನ್ನು ಬರಮಾಡಿಕೊಂಡು ಅವರ ಕಲೆ ಪ್ರಕಾಶಗೊಳಿಸಿ, ಜನರಿಗೆ ತಲುಪುವಂತೆ ಮಾಡಿ ಅವರೊಂದಿಗೆ ಚರ್ಚಿಸಿ ಮಾರ್ಗದರ್ಶನನೀಡಿ ಅಪಾರವಾದ ಸಂಭಾವನೆ ನೀಡಿ ಸತ್ಕರಿಸುತ್ತಿದ್ದರು, ಇವರಿಗೆ ಕೊಡುಗೈ ದೊರೆ, ಅಭಿನವ ಭೋಜರಾಜ ಎಂದು ಅಭಿಮಾನಿಗಳು ಸಂತಸದಿಂದ ನುಡಿಯುವರು,

> ತನಗೆ ತಾನೆ ಗುರುವಾಗಿ ಸುವ್ವಲಾಲಿ
> ಅಪೂರ್ವ ಚಿತ್ರಕಲೆ ರಚಿಸಿದ್ರೊ ಸುವ್ವಲಾಲಿ
> ನಿಸರ್ಗವೇ ಪ್ರೇರಕವಾಗಿ ಸುವ್ವಲಾಲಿ
> ಸರ್ವಕಾಲಕ್ಕು ಉಳಿಯುವ ಕಲೆ ರಚಿಸಿದರು ಸುವ್ವಲಾಲಿ.

ಚಿಕ್ಕಂದಿನಿಂದ ಒಲಿದುಬಂದ ಚಿತ್ರಕಲೆಗೆ ಮೊದಲು ಇವರಲ್ಲಿ ಮೂಡಿದ್ದ ಆಸೆಯೆಂದರೆ ಮುಂಬೈ ಕಲಾಶಾಲೆಯಲ್ಲಿ ಅಭ್ಯಸಿಸಬೇಕು, ಅಥವಾ ಆಗಿನ ಮಹಾನ್ ಚಿತ್ರಕಾರರಲ್ಲಿ ಅಭ್ಯಸಿಸಿ ಪರಿಣಿತರಾಗಬೇಕೆಂದು.

ಆದರೆ ಕೆಲವು ಕಾರಣಗಳಿಂದ ಅವರ ಆಶೆ ಫಲಿಸಲಿಲ್ಲ, ಹಾಗೆ ಅವರಾಶೆ ಫಲಿಸಿದ್ದರೆ ಆಗಿನ ಕಾಲದ ಪ್ರಸಿದ್ಧ ಚಿತ್ರಗಾರರಲ್ಲಿ ಒಬ್ಬರಾಗಿ ಲೌಕಿಕವಾದ ಕೆಲವು ಚಿತ್ರ ರಚಿಸುತ್ತಿದ್ದರೇನೊ? ಆದರೆ ಅವರ ಅಪಾರ ಪಾಂಡಿತ್ಯವೇ ಅವರ ಗುರುವಾಯಿತು, ಧರ್ಮ ದೈವಭಕ್ತಿಯ ಅಮೂರ್ತವಾದ ಭಾವನೆ ಚಿತ್ತರಿಸುವ ಆಧ್ಯಾತ್ಮಿಕ ಲೋಕದಲ್ಲಿ ಎಂದೆಂದು ಪೂಜಿಸಲ್ಪಡುವ ಸಾರ್ವಕಾಲಿಕವಾದ ಹಲವುಚಿತ್ರಗಳು ಇವರಿಂದ ರಚಿಸಲ್ಪಟ್ಟವು, ಇವರ ಚಿತ್ರಗಳಲ್ಲಿ ಧರ್ಮದ ಬೆಳಕು ಆರ್ತಾನುಕಂಪ, ದೈವಿಸಾಕ್ಷಾತ್ಕಾರ, ನಿಸರ್ಗದ ವರ್ಚಸ್ ವಿಜೃಂಭಿಸುತ್ತವೆ. ಈ ಕಾರಣಗಳಿಂದಲೆ ಇವುಗಳು ಎಂದೆಂದು ಉಳಿಯುವ ಚಿತ್ರಗಳು, ಸರ್ವಕಾಲಕ್ಕೆ ಸಲ್ಲುವ ಅಪೂರ್ವಕಲೆ.

ಆಗಿನ ಕಾಲದಲ್ಲಿ ಶ್ರೀ ಕ್ಷೇತ್ರದ ಸುತ್ತ ಮುತ್ತ ಒಳ್ಳೆವೈದ್ಯಕೀಯ ಸೌಲಭ್ಯವಿರಲಿಲ್ಲ, ಆರ್ಯುವೇದ ಹೋಮಿಯೋಪತಿ ಪದ್ಧತಿಗಳನ್ನು ಪೋಷಿಸಿ, ಅವುಗಳ ಸೌಲಭ್ಯ ಜನರಿಗೆ ದೊರಕುವಂತೆ ನೋಡಿಕೊಂಡರು.

ಸಂಚಾರಿ ಆಸ್ಪತ್ರೆಗಳನು ನಿರ್ಮಿಸಿ ಸುತ್ತ ಮುತ್ತಲ ಹತ್ತಾರು ಹಳ್ಳಿಯ ಜನ ಆದರ ಸೌಲಭ್ಯ ಪಡೆಯುವಂತೆ ಮಾಡಿದರು.

ಪಖ್ಯಾತ ನೇತ್ರತಜ್ಞ ಡಾ॥ ಮೋದಿ ಅವರನ್ನು ಕರೆಸಿ ಕಣ್ಣಿನ ಚಿಕಿತ್ಸಾ ಶಿಬಿರ ಏರ್ಪಡಿಸಿ ಕಣ್ಣಿನ ತೊಂದರೆಯಿಂದ ಬಳಲುತ್ತಿರುವ ಸಾವಿರಾರು ಜನರಿಗೆ ಚಿಕಿತ್ಸೆ ದೊರಕುವಂತೆ ಮಾಡಿದರು.

ಇನ್ನು ಶಿಕ್ಷಣ ರಂಗದಲ್ಲಿ ತಾಲೂಕಿನ ಮೊತ್ತ ಮೊದಲ ಹೈಸ್ಕೂಲನ್ನು ಉಜಿರೆಯಲ್ಲಿ ಪ್ರಾರಂಭಿಸಿದರು.

ಭಾರತೀಯ ಸಂಸ್ಕೃತಿ ಸನಾತನ ಪರಂಪರೆಗಳ ಉಳಿವಿಗಾಗಿ ಗುರುಕುಲ ಮೊದರಿಯ ಶಿಕ್ಷಣ ಕೇಂದ್ರ ಸಿದ್ಧವನವನ್ನು ಸ್ಥಾಪಿಸಿ ಇಲ್ಲಿದ ವಿದ್ಯಾರ್ಥಿ ಸ್ವಾವಲಂಬಿ ಆಗುವುದರ ಜೊತೆ ಭಾರತ ಸಂಸ್ಕೃತಿಯ ತಿರುಳಾದ ವೇದ, ಶಾಸ್ತ್ರ, ಪುರಾಣಗಳು ಅನ್ಯಧರ್ಮದವರ ಮಹಾ ಧರ್ಮ ಗ್ರಂಥಗಳು ಎಲ್ಲದರ ಬಗ್ಗೆ ಅಧ್ಯಯನ ಮಾಡಿ ತಿಳುವಳಿಕೆ ಪಡೆಯಲು ಅವಕಾಶವಿತ್ತು.

ಸಿದ್ಧವನ ಗುರುಕುಲದಲ್ಲಿ ಸುವ್ವಲಾಲಿ
ಅಧ್ಯಯನ ಮಾಡಿದರು ಸುವ್ವಲಾಲಿ
ಸಿದ್ಧಿ ಹೊಂದಿ ಸಕಲ ವಿದ್ಯೆಯಲ್ಲಿ ಸುವ್ವಲಾಲಿ
ಸದ್ಗುಣ್ಯ ವ್ಯಕ್ತಿಗಳಾಗಿ ಮೆರೆದರೊ ಸುವ್ವಲಾಲಿ ॥

— ಸಶೇಷ

---

ಕಣ್ಣೂ ಕಾಲದ ಎರಡುಳ್ಳವ ದೂರ ಎಯ್ದುವನಲ್ಲದೆ, ಕಣ್ಣೂ ಕಾಲೂ ಎರಡರೊಳಗೆ ಒಂದಿಲ್ಲದವನು ದೂರ ಎಯ್ದಲರಿಯನೆಂಬಂತೆ, ಜ್ಞಾನರಹಿತನಾಗಿ. ಕ್ರಿಯೆಯನೆಷ್ಟು ಮಾಡಿದಡೇನು, ಅದು ಕಣ್ಣಿಲ್ಲದವನ ನಡೆಯಂತೆ. ಕ್ರಿಯಾರಹಿತನಾಗಿ, ಜ್ಞಾನಿಯಾದಡೇನು, ಅದು ಕಾಲಿಲ್ಲದವನ ಇರವಿನಂತೆ. ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನ ನಿಜವ ಬೆರಸುವಡೆ ಜ್ಞಾನವೂ ಕ್ರಿಯೆಯೂ ಎರಡೂ ಬೇಕು.

ಆಧಾರ - ಸಮರ್ಪಣೆ

# ಕೃಷಿ ಮಾರಾಟದಲ್ಲಿ ಮಾಹಿತಿ ಸಂಗ್ರಹಣೆ.

ಡಿ. ವೆಂಕಟರಾವ್, ರೀಡರ್, ಸರ್ಕಾರಿ ಕಲಾ ಕಾಲೇಜ್, ಹಾಸನ.

ನಮ್ಮ ದೇಶ ಆರ್ಥಿಕವಾಗಿ ಸುಧಾರಿಸಿ, ಸುಖ – ನೆಮ್ಮದಿಗಳ ತವರೂರಾಗ ೇಕಾದರೆ ಬಡ ರೈತರು ಉದ್ಧಾರವಾಗಬೇಕು. ರೈತರ ಉದ್ಧಾರವವರು ೆಳೆಯುವ ಉತ್ಪನ್ನಕ್ಕೆ ದೊರೆಯುವ ಬೆಲೆಯನ್ನು ಅವಲಂಬಿಸಿದೆ. ಿದ್ದರಿಂದಲೇ ಸರಕಾರ ಅನೇಕ ಸುಸಜ್ಜಿತ ಕೃಷಿ ಮಾರುಕಟ್ಟೆಗಳನ್ನು ಸ್ಥಾಪಿಸಿದೆ, ಇಂತಹ ಮಾರುಕಟ್ಟೆಗಳಲ್ಲಿನ ಸಮರ್ಥ ಮಾರಾಟ ಪದ್ಧತಿಯಿಂದ ಮಾತ್ರ ೃತರ ಆರ್ಥಿಕ ಸ್ಥಿತಿ ಸುಧಾರಿಸಿ ಬೆಲೆಗಳಲ್ಲಿ ಸ್ಥಿರತೆಯನ್ನು ತರುವುದು ಸಾಧ್ಯ. ಮಾರುಕಟ್ಟೆಯ ಸುಗಮ ಹಾಗೂ ಸಮರ್ಥ ಕಾರ್ಯಕಲಾಪಗಳಿಗೆ ಅನೇಕ ಅಂಗಗಳ ೆರವು ಅಗತ್ಯ, ಅವುಗಳಲ್ಲಿ 'ಮಾಹಿತಿ ಸಂಗ್ರಹಣೆಯೂ ಒಂದು.

ಮಾಹಿತಿ ಸಂಗ್ರಹಣೆಯು ಸುಗಮ ಮಾರಾಟ ಪದ್ಧತಿಗೆ ಅನವು ಮಾಡಿಕೊ ಡುವುದಲ್ಲದೆ ರೈತರಿಗೆ ವ್ಯವಸ್ಥಿತವಾಗಿ ಕೃಷಿ ಮಾಡುವಲ್ಲಿ ಮತ್ತು ಅವರ ಸರಕುಗಳಿಗೆ ಯೋಗ್ಯ ಬೆಲೆಯನ್ನು ಒದಗಿಸುವಲ್ಲಿ ಅತಿ ಮಹತ್ವದ ಪಾತ್ರ ವಹಿಸುತ್ತದೆ. ಕೃಷಿ ಉತ್ಪನ್ನಗಳ ಮಾರಾಟಕ್ಕೆ ಸಂಬಧಪಟ್ಟ ಎಲ್ಲಾ ಪ್ರಶ್ನೆಗಳಿಗೂ ಮಾಹಿತಿ ಸಂಗ್ರಹಣೆ ಸಮರ್ಪಕವಾದ ಉತ್ತರ ಪೂರೈಸುತ್ತದೆ, ಪ್ರಚೋದನಾತ್ಮಕ ಸಮಗ್ರ ಅಂಶಗಳನ್ನು ೊಳಗೊಂಡಿರುವುದರಿಂದಲೂ ಮಾರಾಟ ಚರ್ಚೆಯ ಮೇಲೆ ಹೆಚ್ಚಿನ ಪ್ರಭಾವ ಬೀರು ವುದರಿಂದಲೂ ಇದು ವಿಶಾಲವಾದ ವ್ಯಾಪ್ತಿಯನ್ನು ಹೊಂದಿದೆ.

ಮಾಹಿತಿ ಸಂಗ್ರಹಣೆಯ ಮೂಲಗಳಲ್ಲಿ ಮುಖ್ಯವಾದವು-ವ್ಯಕ್ತಿಗಳ ಹೇಳಿಕೆ, ಚಿಲ್ಲರೆ ವ್ಯಾಪಾರಸ್ಥರು, ವರ್ತಮಾನ ಪತ್ರಿಕೆಗಳ, ಆಕಾಶವಾಣಿ, ಸಂಶೋಧನಾ ಲೇಖನಗಳು, ಗ್ರಂಥಗಳು, ನಿಯತ ಕಲಿಕೆಗಳು ಇತ್ಯಾದಿ, ಮಾಹಿತಿ ಸಂಗ್ರಹಣೆಯು ಕೃಷಿ ಉಪ್ಪನ್ನಗಳ ಉತ್ಪಾದಕರಿಗೆ, ವ್ಯಾಪಾರಸ್ಥರಿಗೆ ಸರಕಾರಕ್ಕೆ, ಗ್ರಾಹಕರಿಗೆ, ಸಂಶೋಧಕರಿಗೆ ವಿವಿಧ ಇಲಾಖೆ ಹಾಗೂ ಸಂಘ–ಸಂಸ್ಥೆಗಳಿಗೆ ಸಂಗ್ರಹಣೆಯ ಹೆಚ್ಚಿನ ಪ್ರಯೋಜನ ಬೇಕಾಗಿರುವುದು ಕೃಷಿ ಉತ್ಪಾದಕರಿಗೆ, ಎನ್ನಬಹುದು, ಏಕೆಂದರೆ ನಮ್ಮ ದೇಶದಲ್ಲಿ ಕೃಷಿ ಉತ್ಪನ್ನಗಳಿಗೆ ಪೂರೈಕೆಗಿಂತಲೂ ಬೇಡಿಕೆ ಹೆಚ್ಚಾಗಿದೆ, ಮತ್ತು ಬೇಡಿಕೆಯ ಪ್ರಮಾಣದಲ್ಲಿ ಬದಲಾವಣೆಯಾದಂತೆ ಪೂರೈಕೆ ಪ್ರಮಾಣದಲ್ಲಿ ಬದಲಾ ವಣೆಯಾಗುವುದಿಲ್ಲ. ಕೃಷಿ ಉತ್ಪನ್ನಗಳ ಬೆಲೆಗಳ ಅಸ್ಥಿರತೆಗೆ ದಾರಿ ಮಾಡಿಕೊಟ್ಟಿ ರುವ ಈ ಪ್ರವೃತ್ತಿಗೆ ಮುಖ್ಯ ಕಾರಣ ನಮ್ಮ ರೈತರಿಗೆ ಯಾವ ದಾಸ್ತಾನು ಎಷ್ಟು ಮತ್ತು ಎಲ್ಲಿ ಉತ್ಪಾದಿಸಬೇಕು ಎಂಬ ಮಾಹಿತಿಗಳ ಕೊರತೆ.

## ಸಂಗ್ರಹಣೆ ಎಂದರೇನು ?

ಕೃಷಿ ಮಾರಾಟಕ್ಕೆ ಸಂಬಂಧಿಸಿದಂತೆ ಮಾಹಿತಿ ಸಂಗ್ರಹಣೆ ಮಾರುಕಟ್ಟೆಯ ಏಳು ಬೀಳುಗಳ ಮೇಲೆ ಪ್ರಭಾವ ಬೀರುವ ಎಲ್ಲಾ ಅಂಶಗಳನ್ನು ಒಳಗೊಳ್ಳುತ್ತದೆ. ಸಾಮಾನ್ಯ ಮಾಹಿತಿ ಸಂಗ್ರಹಣೆಯುವ್ಯಾಪ್ತಿಯಲ್ಲಿ ಬರುವ ಮುಖ್ಯ ಅಂಶಗಳು—

1. ವಿವಿಧ ಸರಕುಗಳ ಸದ್ಯದ ಹಾಗೂ ಭವಿಷ್ಯದ ಪೂರೈಕೆ ಪ್ರಮಾಣ, ನಮೂನೆಗಳು ಮತ್ತು ಪೂರೈಕೆಯ ಕಾಲಾವಧಿ.
2. ಮಾರಾಟ ಮತ್ತು ರವಾನೆಯಲ್ಲಾಗುವ ಬದಲಾವಣೆ, ಸಂಗ್ರಹಣೆಯಲ್ಲಾಗುವ ಬದಲಾವಣೆ ಗ್ರಾಹಕರ ಬೇಡಿಕೆ ಬಳಕೆಯರೀತಿ, ವರ್ತಕರ ಬೇಡಿಕೆ ಹಾಗೂ ಮಾರಾಟದ ಎಲ್ಲ ಹಂತಗಳಲ್ಲಿ ಖರೀದಿ.
3. ಹರಾಜು ಬೆಲೆ ಮತ್ತು ನೀಡಿಕೆ ಬೆಲೆ
4. ಬೆಳೆಗಳ ಅಂದಾಜು - ಮಾರುಕಟ್ಟೆಯ ವಾತಾವರಣ, ಮಾರುಕಟ್ಟೆಯ ಮೇಲೆ ಪರಿಣಾಮ ಬೀರುವ ಪ್ರತಿಕೂಲ ಹವಾಮಾನ ಮತ್ತು ಇತರ ಅಂಶಗಳು.

ಹೀಗೆ ಮಾಹಿತಿ ಸಂಗ್ರಹಣೆ ಕೇವಲ ಉತ್ಪಾದನೆ,ಪೂರೈಕೆ, ಸಂಗ್ರಹ, ಮಾರಾಟ ಮುಂತಾದವುಗಳಿಗೆ ಸಂಬಂಧಿಸಿದ ಅಂಕಿ-ಅಂಶಗಳನ್ನು ಸಂಗ್ರಹಿಸುವ ವಿಷಯವಲ್ಲ. ಅದು ವಿಶಾಲವಾದ ಮತ್ತು ಮಹತ್ವದ ಅರ್ಥವನ್ನೊಳಗೊಂಡಿದೆ. ಕೃಷಿ ಉತ್ಪನ್ನದ ಇಳುವರಿ ಪ್ರಮಾಣ, ಹಿಡುವಳಿದಾರರ ವಿಂಗಡನೆ, ಪ್ರತಿಯೊಂದು ಕೃಷಿಉತ್ಪನ್ನವನ್ನು ಬೆಳೆದ ಕ್ಷೇತ್ರ, ಲಭ್ಯವಿರುವ ನೀರಾವರಿ ಪ್ರಮಾಣ, ಕೃಷಿ ಉಪಕರಣಗಳು, ಮಳೆಯ ಪ್ರಮಾಣ, ಮಾರಾಟವಾದ ಕೃಷಿ ಉತ್ಪನ್ನಗಳ ಬೆಲೆಗಳು, ಆರ್ಥಿಕ ನೆರವು ಒದಗಿಸುವ ಮೂಲಗಳು, ಗ್ರಾಹಕರ ಅಭಿರುಚಿ, ಬೇಡಿಕೆಯ ಪ್ರಮಾಣ, ರಫ್ತು ಬೇಡಿಕೆ, ಆಮದು ಪ್ರಮಾಣ, ಜನ ಸಂಖ್ಯೆ ಮುಂತಾದ ಅನೇಕ ವಿಷಯಗಳು ಮಾಹಿತಿ ಸಂಗ್ರಹಣೆಯ ರಕ್ಷೆಯಲ್ಲಿ ಬರುತ್ತವೆ. ಇದನ್ನು ಮುಖ್ಯವಾಗಿ ಎರಡು ಭಾಗವಾಗಿ ವಿಂಗಡಿಸಬಹುದು.

1. ಪ್ರಸಕ್ತ ಮಾರುಕಟ್ಟೆಗೆ ಸಂಬಂಧಿಸಿದ ಸುದ್ದಿಯ ಸಂಗ್ರಹಣೆ ಮತ್ತು ಪ್ರಸಾರ
2. ಭವಿಷ್ಯತ್ತಿನಲ್ಲಿ ಬೆಲೆಗಳ ಮೇಲೆ ಪರಿಣಾಮ ಬೀರಬಹುದಾದ ಅಂಶಗಳ ಬಗ್ಗೆ ಮಾಹಿತಿ ಮತ್ತು ಮಾರುಕಟ್ಟೆವೌಲ್ಯಗಳದೀರ್ಘಾವಧಿ ಪ್ರವೃತ್ತಿ, ಮಾರಾಟ, ಬೆಲೆಗಳು, ಕೂಲಿ ಆದಾಯ, ಅಭಿವೃದ್ಧಿ ವೆಚ್ಚ, ಸಾರ್ವಜನಿಕರೊಂದಿಗಿರುವ ಹಣದ ಪೂರೈಕೆ, ವಿವಿಧಮೂಲಗಳಿಂದ ಸಿಗುವ ಸಾಲ, ಬಳಕೆ ಮತ್ತು ಸಂಗ್ರಹಣಾ ಸಾಮರ್ಥ್ಯ, ಜನಸಂಖ್ಯೆ ಬೆಳವಣಿಗೆ ಆಧಾರಿತ ಅಂದಾಜು ಬೇಡಿಕೆ,

ನಗರೀಕರಣದ ಪರಿಮಿತಿ, ಆದಾಯ ಮಟ್ಟದಲ್ಲಿ ಮತ್ತು ಬಳಕೆ ಪದ್ಧತಿಯಲ್ಲಿ ಆಗುವ ಬದಲಾವಣೆ ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿಯೊಂದಿಗೆ ಮಾರುಕಟ್ಟೆಮಾಹಿತಿಯ ಅಧ್ಯಯನ ಮಾಡಬೇಕಾಗುತ್ತದೆ.

**ರ್ಯಗಳು :**

ಮಾರುಕಟ್ಟೆ ಮಾಹಿತಿಯ ಮುಖ್ಯಕಾರ್ಯ ಮಾರುಕಟ್ಟೆಯ ಅರ್ಥವ್ಯವಸ್ಥೆ ೇಗಿದೆ, ಭವಿಷ್ಯದಲ್ಲಿ ಹೇಗಿರಬಹುದು ಎಂಬ ಬಗ್ಗೆ ಮಾಹಿತಿಯನ್ನು ಪೂರೈಸುವು ು. ಇದೇ ಅದರ ಮುಖ್ಯಗುರಿ. ಕೃಷಿ ಉತ್ಪನ್ನಗಳ ಯೋಗ್ಯಬೆಲೆ ಧೋರಣೆಯನ್ನು ೂಪಿಸುವುದು, ಅದರ ಕಾರ್ಯಾಚರಣೆಯಮೇಲೆ ನಿಗಾ ಇಡುವುದು, ಮಾರುಕಟ್ಟೆ ್ರವೃತ್ತಿಯನ್ನು ಅರಿತುಕೊಳ್ಳುವುದು, ಮಾರುಕಟ್ಟೆ ಬೆಲೆಗಳನ್ನು ಅಪೇಕ್ಷಿತ ಮಟ್ಟ ಲ್ಲಿ ಕಾಯ್ದುಕೊಳ್ಳಲು ಸರಕಾರ ಯಾವ ಕ್ರಮಕೈಗೊಳ್ಳಬೇಕೆಂಬುದನ್ನು ನಿರ್ಧರಿ ುವ ಕಾರ್ಯಗಳನ್ನು ಮಾರುಕಟ್ಟೆ ಮಾಹಿತಿಯು ನಿರ್ವಹಿಸಬೇಕಾಗುತ್ತದೆ.

ಮಾರು ಕಟ್ಟೆ ಮಾಹಿತಿಯು ರೈತರಿಗೆ ಯಾವ ಬೆಳೆಯನ್ನುಯಾವಾಗ ಬೆಳೆಯ ೇಕು, ಎಲ್ಲಿಬೆಳೆಯ ಬೇಕು, ಎಷ್ಟು ಪ್ರಮಾಣದಲ್ಲಿ ಬೆಳೆಯಬೇಕು ಯಾವ ಸರಕು ಎಲ್ಲಿ ುತ್ತು ಎಷ್ಟು ಪ್ರಮಾಣದಲ್ಲಿ ಮಾರಾಟ ಮಾಡಬೇಕು ಎನ್ನುವ ವಿಷಯಗಳ ಬಗ್ಗೆ ಾಹಿತಿ ಒದಗಿಸಬೇಕು. ಇಷ್ಟೇ ಅಲ್ಲದೆ ರೈತರ ಪ್ರಯೋಜನಕ್ಕೆಂದೇ ಇರುವ ವಿವಿಧ ಾರಾಟ ಸಂಸ್ಥೆಗಳ ಬಗ್ಗೆ ಅವರಿಗೆ ತಿಳಿಸುವುದು ಮತ್ತು ರೈತರ ಹಿತರಕ್ಷಣೆಗಾಗಿ ರಕಾರ ಕೈಗೊಂಡಿರುವ ಕಾರ್ಯ ಚಟುವಟಿಕೆಗಳ ಬಗ್ಗೆ ತಿಳಿಸಬೇಕು. ಬೆಳೆಗಳ ಗಾಗ ನಿಖರಮಾಹಿತಿ ಒದಗಿಸಿ, ಬೆಲೆಗಳಏರಿಳಿತ ಕುರಿತ ಮಾರ್ಗದರ್ಶನ ಮಾಡು ುದು. ಮಾರುಕಟ್ಟೆಯ ಮಾಹಿತಿ ಸಂಗ್ರಹಣೆಯ ಮುಖ್ಯಕೆಲಸ,

**್ರಯೋಜನಗಳು :**

. ಬೆಳೆ ಮತ್ತು ಪಶುಗಳ ಆಯ್ಕೆ ಮತ್ತು ನಿರ್ವಹಣೆ 2. ಸಮಗ್ರ ಕೃಷಿವ್ಯವಹಾರಗಳನ್ನು ಯೋಜಿಸುವುದು. 3. ಮಾರಾಟದ ಕಾಲವನ್ನು ಆಯ್ದುಕೊಳ್ಳುವುದು 4. ಬೆಳೆಗಳ ಉತ್ಪಾದನೆಯಲ್ಲಿ ಹೊಂದಾಣಿಕೆ ಮಾಡುವ ಮೂಲಕ ಉತ್ಪಾದನೆಗೆ ಹೆಚ್ಚಿನಲಾಭ ದೊರಕಿಸುವುದಲ್ಲದೆ ಬೆಲೆ ಸ್ಥಿರೀಕರಣವನ್ನುಂಟು ಮಾಡುವುದು.

. ಸಾಮುದಾಯಿಕ, ಪ್ರಾದೇಶಿಕ ಮತ್ತು ರಾಷ್ಟ್ರೀಯ ಕೃಷಿ ಕಾರ್ಯಕ್ರಮಗಳನ್ನು ಯೋಜಿಸುವುದು.

. ಕೃಷಿ ಉತ್ಪನ್ನಗಳ ವ್ಯವಹಾರದಲ್ಲಿ ತೊಡಗಿರುವ ಸಹಕಾರಿ ಸಂಘಗಳು ಮತ್ತು ಖಾಸಗಿ ವರ್ತಕರಿಗೆ ಮಾರ್ಗದರ್ಶನ ನೀಡುವುದು.

7. ಒಟಿನಲ್ಲಿ ಮಾರುಕಟ್ಟೆ ಮಾಹಿತಿ ಸಂಗ್ರಹಣೆಯು ಮಾರುಕಟ್ಟೆ ವ್ಯವಸ್ಥೆಯು ಎಷ್ಟು ಪರಿಣಾಮಕಾರಿಯಾಗಿದೆ ಎಂಬುದನ್ನು ತಿಳಿದುಕೊಳ್ಳಲು ನೆರವಾಗುವು ದಲ್ಲದೆ ಅದನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಮಾಡಲು ಮಾರ್ಗೋ ಪಾಯಗಳನ್ನು ಕಂಡುಹಿಡಿಯಲು ಸಹಾಯಕವಾಗುತ್ತದೆ.

**ಪೂರೈಕೆ ಪ್ರಮಾಣ :**

ಮಾರುಕಟ್ಟೆ ಸಂಗ್ರಹಣೆ ಹಾಗೂ ಪ್ರಸಾರದ ಹಂತಗಳಲ್ಲಿ ಕಂಡುಬರುವ ನ್ಯೂನತೆಗಳನ್ನು ಇಂದು ಸಾಧ್ಯವಾದ ಮಟ್ಟಿಗೆ ಪರಿಹರಿಸಿಕೊಳ್ಳುವುದು ಅಗತ್ಯ. ಈ ದಿಸೆಯಲ್ಲಿ ಆದಷ್ಟು ಜಾಗ್ರತೆವಹಿಸಿ ನಿಖರವಾದ ಮಾಹಿತಿಗಳನ್ನು ಸಂಗ್ರಹಿಸ ಬೇಕು. ಸಂಗ್ರಹಿಸಿದ ಮಾಹಿತಿಗಳನ್ನು ತಕ್ಷಣ ವಿಶ್ಲೇಷಿಸಿ, ಕ್ರೋಢೀಕರಿಸಿ ಅನಾವಶ್ಯಕವಾಗಿ ಕಾಲವ್ಯಯವಾಗದಂತೆ ಜಾಗ್ರತೆಯಾಗಿ ಪೂರೈಸಬೇಕು. ಎಲ್ಲಾ ಮಾರುಕಟ್ಟೆ ಪ್ರಾಂಗಣಗಳಲ್ಲಿ ದೊಡ್ಡ ಫಲಕಗಳಲ್ಲಿ ಕೃಷಿ ಉತ್ಪನ್ನಗಳ ಬೆಲೆಗಳು ಹಾಗೂ ಸಮೀಪದ ಪೇಟೆಗಳ ಅಂತರವನ್ನು ಬರೆಸಿ ಪ್ರದರ್ಶಿಸಬೇಕು. ವಿವಿಧ ಪೇಟೆಗಳಲ್ಲಿನ ಕೃಷಿಉತ್ಪನ್ನಗಳ ಪ್ರಸರಣದ ಬಗ್ಗೆ ಸರಳವಾಗಿ ವರದಿಗಳನ್ನು ತಯಾ ರಿಸಿ ಗ್ರಾಮೀಣ ಸಂಸ್ಥೆಗಳ ಮುಖಾಂತರ ರೈತರಿಗೆ ಹಂಚಬೇಕು. ಮಾಹಿತಿ ಸಂಗ್ರ ಹಣೆ ಹಾಗೂ ಪ್ರಸಾರಕ್ಕಾಗಿ ಆಧುನಿಕ ಸಂಪರ್ಕ ಸಾಧನಗಳಾದ ದೂರವಾಣಿ, ಟೆಲೆಕ್ಸ್ ಸೌಲಭ್ಯಗಳನ್ನು ಬಳಸಿಕೊಳ್ಳುವುದು ಉತ್ತಮ.

ರೈತರು ತಮ್ಮ ಸರಕಿಗೆ ಪಡೆಯುವ ಬೆಲೆ ಹೆಚ್ಚಿನ ಪ್ರಮಾಣದಲ್ಲಿ ಈ ವರ್ಷ ಇರುವಂತಹ ಒಟ್ಟುಪೂರೈಕೆಯ ಪ್ರಮಾಣವನ್ನು ಅವಲಂಬಿಸಿರುತ್ತದೆ. ಹೀಗೆ ಪೂರೈಕೆ ಉತ್ಪಾದನೆಯ ಮೇಲೆ ನಿಂತಿರುವುದರಿಂದ ಉತ್ತಮ ತಳಿ ಬೀಜಗಳನ್ನು ಬಿತ್ತುವಂತೆ, ಉತ್ಪಾದನಾ ಹಂತದಲ್ಲಿ ತಳಿಯನ್ನು ರೋಗಗಳಿಂದ ದೂರವಿರುವಂತೆ ನೋಡಿಕೊಳ್ಳಬೇಕಾಗುತ್ತದೆ.

ನಮ್ಮ ಹೆಚ್ಚಿನ ರೈತರು ಅಜ್ಞರು ಹಾಗೂ ಅನಕ್ಷರಸ್ಥರು, ಅವರಿಗೆ ಬೆಳೆಯನ್ನು ಹೇಗೆ ಬೆಳೆಯಬೇಕು ಎಂಬ ಬಗ್ಗೆ ಮಾಹಿತಿ ಕೊಟ್ಟರೆ ಸಾಲದು. ಯಾವ ಬೆಳೆಯನ್ನು ಎಷ್ಟು ಪ್ರಮಾಣದಲ್ಲಿ ಬೆಳೆಯಬೇಕು, ಯಾವಾಗ ಬೆಳೆಯಬೇಕು, ಎಲ್ಲಿ ಬೆಳೆಯಬೇಕು ಎಂಬ ಬಗ್ಗೆ ಮಾಹಿತಿ ಕೊಡದೇ ಹೋದಲ್ಲಿ ಯಾವ ಪ್ರಯೋಜನವೂ ಲಭಿಸು ವುದಿಲ್ಲ. ಜೊತೆಗೆ ನಿಯಂತ್ರಿತಮಾರುಕಟ್ಟೆಗಳ ದಾಸ್ತಾನು-ಮಳಿಗೆಗಳ, ಸಾಲ ಸಂಸ್ಥೆ ಗಳ ಮತ್ತು ಇನ್ನಿತರ ಮಾರಾಟ ಸಂಘಗಳ ಪ್ರಯೋಜನಗಳ ಬಗ್ಗೆ ರೈತರಿಗೆ ತಿಳಿಸಬೇಕು.

ಮಾಹಿತಿ ಒದಗಿಸ ಬೇಕು.
ಸರಕಾರದ ನೀತಿ ಮತ್ತು ಕಾರ್ಯಗಳ ಬಗ್ಗೆ
ಸ್ತ ಬೆಲೆ ಹಾಗೂ ಖರೀದಿ ಪಡಿಸುವಿಕೆ, ಕೆಲವು ಸರಕುಗಳ ರಫ್ತಿಗೆ ನೆರವಾಗು
ತಹ ಕಾರ್ಯಕ್ರಮಗಳ ಬಗ್ಗೆ ರೈತರಿಗೆ ಮಾಹಿತಿ ಒದಗಿಸಿದಲ್ಲಿ ಅವರು ಉತ್ಸ
ಾಗಿ ಅವರು ಅದಷ್ಟು ಹೆಚ್ಚು ಬೆಳೆ ಬೆಳೆದು ಲಾಭ ಹೊಂದಲು ಪ್ರಯತ್ನಿಸ
ುದು. ಈ ಎಲ್ಲಾ ಕಾರ್ಯಕ್ರಮಗಳನ್ನೂ ಕೃಷಿ ಇಲಾಖೆ ಅಥವಾ ಮಾರಾಟ
ಷಗಳ ಬಗ್ಗೆ ಪ್ರಚಾರ ಮಾಡುವ ಯಾವುದೇ ಸಂಸ್ಥೆ ನಿರ್ವಹಿಸಬಹುದು. ಈ
ಮಾಡುವುದರಿಂದ ರೈತರಿಗೆ ಮಾಹಿತಿ ಸಂಗ್ರಹಣೆಯ ಪೂರ್ಣ ಪ್ರಯೋಜನ
ರೆತು ಅವರ ಆರ್ಥಿಕ ಸುಧಾರಣೆ ಯಾಗುವುದಲ್ಲದೆ ಕೃಷಿ ಬೆಲೆಗಳಲ್ಲಿ ಸ್ಥಿರತೆ
ನ್ನು ತರಬಹುದು.

---

ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು
ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ
ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಂಗೆ
ಎಲ್ಲರೊಳಗೊಂದಾಗು–ಮಂಕುತಿಮ್ಮ.
ದಿನ ದಿನವು ಕುಸಿದು ಕಟ್ಟಿಸಿಕೊಳುವ ಗುಡಿ ವಿಶ್ವ
ಜನರೆಲ್ಲರಾ ಗುಡಿಯ ಕೆಲಸದಾಳುಗಳು
ಮನೆಯೇನು ನಾಡೇನು ಕುಲವೇನು ಮತವೇನು
ಎಣಿಸಲ್ಲವದೆಯೆಂದು–ಮಂಕುತಿಮ್ಮ.

ಡಿ. ವಿ. ಜಿ.

# ವಿದ್ಯಾರ್ಥಿ ಜೀವನದ ಬೆಳಕು ಸರಣಿ - ೧೧

ಬಿ. ಎಸ್. ಕೃಷ್ಣಮೂರ್ತಿ, ನಂ. 5, ಸೀತಾವಿಲಾಸ ರಸ್ತೆ, ಮೈಸೂರು - 570 024.

## ಬಾಳಿನ ಕಲೆ ಅಂದರೇನು ?

ವಿದ್ಯಾರ್ಥಿಗಳು ವಿದ್ಯಾಭ್ಯಾಸದ ಕಾಲದಲ್ಲಿ ನಾವು ಮುಂದೆ ಹೇ ಜೀವನ ಜರುಗಿಸಬೇಕು, ಜನರಲ್ಲಿ ಹೇಗೆ ಸಂಪರ್ಕಿಸಿ ಮಿಳನವಾಗಿ ಜೀವನನಡೆಸ ಸ್ನೇಹಭಾವದಿಂದಲೂ, ಆತ್ಮೀಯತೆಯಿಂದಲೂ ಇರಬೇಕು ಎಂಬುವ ಗುಟ್ಟನ್ನು ತಿ ಯುವುದೂ ಸಹ ಒಂದುಬಗೆಯುಕಲೆಯೂ ಆಗಿದೆ. ಆದ್ದರಿಂದ ಇದೂಸಹ ವಿದ್ಯಾಭ್ಯಾ ಸದ ಭಾಗವೇ ನಿಜ! ಇದರಿಂದ ಬಾಳಿನಲ್ಲಿ 'ಜ್ಞಾನೋದಯ' ವೆಂಬ ರವಿಕಿರ ವನ್ನು ಪ್ರಜ್ವಲಿಸುವ ಯತ್ನಮಾಡಬೇಕು.

ವಿದ್ಯೆಯೆಂಬದು ವಿದ್ಯಾರ್ಥಿಗಳಲ್ಲಿ ತುಂಬಿಹರಿಯುವ ಪ್ರವಾಹ! ಈ ಪ್ರವಾ ನಿಶ್ಚಿತ ದಿಕ್ಕಿನಲ್ಲಿ ಸಾಗುತ್ತಾ ಪರಿಪೂರ್ಣಜ್ಞಾನ ನಿಧಿಯೆಂಬ ಸಮುದ್ರ ಸೇರಬೇಕ ಇಂಥ ವಿದ್ಯೆ ನೈತಿಕ, ಮಾನಸಿಕ, ದೈಹಿಕ ಕರ್ಮಗಳಿಂದ ಸಾಧಿಲ್ಪಡುತ್ತದೆ. ಅ ಗಳು ಮಾನವರನ್ನು ಶಕ್ತಿ ಪ್ರವಾತರನ್ನಾಗಿ ಮಾಡುತ್ತವೆ. ಹೀಗಾಗಿ ನೀವು ಶ್ರೇಷ್ಠ ಮಾನವರೂ, ಉತ್ತಮ ಪ್ರಜೆಗಳೂ ಆಗುವ ಶಕ್ತಿ ಹೊಂದುತ್ತೀರಿ, ಇದು ಕಾರ್ಯಗತವಾಗಲು ಸಾಧನೆಅವಶ್ಯಕ. ಸಾಧನೆ ಸಿದ್ಧಿಸಿದರೆ ಆತ್ಮ ಕಲ್ಯಾಣ, ಸಮಾ ಕಲ್ಯಾಣಗಳು ಸಿದ್ಧಿಸಿ ತೇಜೋವಂತರಾಗಬಹುದು.

ಗಾಂಧಿಜೀಯವರು ಹೇಳಿರುವಂತೆಶಿಸ್ತು ಪ್ರಾಧಾನ್ಯ. ಆದರಿಂದ ಮನುಷ್ಯನು ಉತ್ತ ಮ ಶಿಕ್ಷಣ ಪಡೆದವನೆಂಬ ಕೀರ್ತಿಬರುವುದು. ಇದರ ಜೊತೆಗೆ ಸತ್ಯ, ಅಹಿಂಸೆ ಸೇವಾಭಾವ, ದೈವಭಕ್ತಿ, ಸ್ವಾವಲಂಬನೆಗಳನ್ನು ಬಿಡದೆ ಪಾಲಿಸಬೇಕು. ಇವುಗಳ ಮಾರ್ಗಾನುಸರಣೆಗಳಿಂದಲೇ ತಮ್ಮ ಬಾಳಿನಿಂದುದ್ದಕ್ಕೂ ನಡೆಸಿಕೊಂಡು ಬಂದರು

ವಿದ್ಯಾರ್ಥಿಗಳು ತಾವುಕಲಿತ ವಿದ್ಯೆಯಿಂದ ತಮ್ಮ ಜ್ಞಾನ ಪರಿಪಕ್ವವಾಗಲು ವಾತಾವರಣವನ್ನು ಕಲ್ಪಿಸಿಕೊಳ್ಳಬೇಕು. ಸ್ವಪ್ರಯತ್ನಗಳಿಂದ ಸಾರ್ಥಕ ಜೀವನದ ನೇತಾರನಾಗಬೇಕಾಗಿದೆ. ಇದಿಲ್ಲವಾದರೆ ಆರ್ಜಿಸಿದ ವಿದ್ಯೆಗೆ ಬೆಲೆಯಿಲ್ಲವಾಗುತ್ತದೆ. ಕಾಲಬದಲಾವಣೆಯಾದಂತೆಲ್ಲಾ ಮನುಷ್ಯರ ಭಾವನೆಗಳು ಸಹಜವಾಗಿ ಬದಲಾವಣೆ ಯಾಗುವುದು ಸ್ವಾಬಾವಿಕ. ಹಳೇರೂಢಿಗಳು ಮಾಯವಾಗಿ ಹೊಸರೂಪ ತಾಳು ವುದು ಪ್ರಕೃತಿ ನಿಯಮವಾಗಿದೆ.

ಗತವರ್ಷಗಳಲ್ಲಿದ್ದಂತೆ ಈಗಿನ ದಿನಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ ಗಳಲ್ಲಿ, ಗುರುಗಳಲ್ಲಿ ಭಕ್ತಿ, ವಿಧೇಯತೆ ನಶಿಸಿಹೋಗಿದೆ. ಕೆಲವು ವಿದ್ಯಾರ್ಥಿಗಳು ಅಯೋ ಗ್ಯ ಮಿತ್ರರ ಸಂಗದಿಂದ ದುಶ್ಚಟಗನ್ನು ರೂಢಿಸಿಕೊಂಡಿರುವರು. ಇದರಿಂದ ಕೀಳು ಅಭಿರುಚಿ ದುಷ್ಕಾಮನೆಗಳು ಬೆಳೆಯುತ್ತಿವೆ. ಇದರಪರಿಣಾಮದಿಂದ ತಮಗೆ ಮಾನ ಹಾನಿಯಾಗುವುದನ್ನು ಗಣನೆಗೆ ತೆಗೆದುಕೊಂಡಿಲ್ಲ. ಪರಿಶುದ್ಧ ಮಾನವರೆನ್ನಿಸಿಕೊ ಳ್ಳುವ ಆಸೆಯಿರುವ ಸಜ್ಜನರನ್ನು ನೋಡಿಯಾದರೂ ತಮ್ಮ ದುರ್ಗುಣಗಳನ್ನುತಿದ್ದಿ ಕೊಳ್ಳುಲು ಯತ್ನಿಸಬೇಕು. ಇದು ಜಾಣತನದ ಮಾರ್ಗವೆನಿಸುತ್ತದೆ.

# ಬಸವಯುಗದ ಶಿವಶರಣೆಯರು.

ಕು. ಆಶಾರಾಣಿ ಬೆನಗುಂಡಿ

ಭಾರತ ದೇಶವಲ್ಲಿ ಪುರಾತನ ಕಾಲದಿಂದಲೂ ಮಹಿಳೆಯರಿಗೆ ಯೋಗ್ಯ ಸ್ಥಾನ ಕಲ್ಪಿಸ ಲಾಗಿದೆ. ಸರಸ್ವತಿವಿದ್ಯೆಯ ಅಧಿದೇವತೆ, ಲಕ್ಷ್ಮಿ ಸಂಪತ್ತಿನಅಧಿದೇವತೆ, ಮಹಾಕಾಳಿ ದುಷ್ಟ ಸಂಹಾರಿಣಿ, ಮಹೇಶ್ವರ, ಚೈತನ್ಯದಾಯಿನಿ ಎಂಬ ಭಾವನೆ ಭಾರತೀಯರ ಜನ ಜೀವನದಲ್ಲಿ ನೆಲೆಯೂರಿದೆ. ಇದಲ್ಲದೇ ಸಾಕ್ಷಾತ್ ಶಿವನೇ ಅರ್ಧನಾರೀಶ್ವರನಾಗಿ ಹೆಣ್ಣು ಗಂಡೆಂಬ ಭಾವನೆಯನ್ನು ತೊಡದುಹಾಕಿದ್ದಾನೆ.

ವೇದ ಉಪನಿಷತ್ತುಗಳ ಕಾಲದಲ್ಲಿ ಆತ್ಮೋನ್ನತಿಯೇ ಮಾನವ ಜೀವನದ ಗುರಿಯಾ ಗಿತ್ತು. ಆತ್ಮಕ್ಕೆ ಹೆಣ್ಣು–ಗಂಡೆಂಬ ಭೇದವಿರಲಿಲ್ಲ ಸ್ತ್ರೀಯರೂ ಆಧ್ಯಾತ್ಮದಜ್ಞಾನ ಸಂಪಾದಿಸಬಹುದು ಎಂಬ ವಿಶಾಲ ಮನೋಭಾವನೆಯಿಂದ ಆ ಕಾಲದ ಋಷಿಗಳು ಹೆಣ್ಣುಮಕ್ಕಳಿಗೆ ವೇದಾಧ್ಯಯನ ಅವಕಾಶ ಕಲ್ಪಿಸಿಕೊಟ್ಟರು. ಆದರಿಂದಾಗಿ ಅನೇಕ ಜನ ಮಹಿಳೆಯರು ಬ್ರಹ್ಮಜ್ಞಾನಿಗಳಾದರು. ಮೈತ್ರೇಯಿ, ಗಾರ್ಗಿ, ವಿಶ್ವವಾರಾ' ಲೋಪಾಮುದ್ರಾ ಮೊದಲಾದ ಮಹಿಳೆಯರು ಆಧ್ಯಾತ್ಮ ಮಾರ್ಗದಲ್ಲಿ ಉನ್ನತಿಯನ್ನು ಪಡೆದಿದ್ದಾರೆ. ಕೆಲವರು ವೇದ ಮಂತ್ರಗಳನ್ನು ರಚಿಸಿದರು. ಇನ್ನು ಕೆಲವರು ಯಜ್ಞ-ಯಾಗಗಳಲ್ಲಿ ಪತಿಗೆ ಸಹಧರ್ಮಿಣಿಯರಾಗಿ ಬಾಳಿದರು. ಸ್ಮೃತಿಕಾರರ ಕಾಲದಲ್ಲಿ ಹೆಣ್ಣು ಧಾರ್ಮಿಕ ಕಾರ್ಯಗಳಲ್ಲಿ ಪುರುಷನ ಸಹಚರಿಯಾಗಲಿಲ್ಲ, ಸಹಾ ಯಕಳಾದಳು. ಪುರುಷರಲ್ಲಿ ಸಂಕುಚಿತ ಭಾವನೆ ಬೆಳೆದಂತೆ ಹೆಣ್ಣಿಗಿದ್ದ ಧಾರ್ಮಿಕ ಸ್ವಾತಂತ್ರ್ಯ ಮಾಯವಾಯಿತು. ಹೆಣ್ಣು ಸ್ವರ್ಗವನ್ನು ಪಡೆಯಬೇಕಾದರೆ ಪತಿಯೇ ಪರದೈವವೆಂದುಭಾವಿಸಿ, ಪತಿಸೇವೆಯ ಮೂಲಕ ಸ್ವರ್ಗ ಪಡೆಯುವ ಆಶ್ವಾಸನೆ ದೊರೆಯಿತು. ಹೆಣ್ಣು ಸ್ವತಂತ್ರಳಾಗಿ ಬಾಳಲು ಅನರ್ಹಳು ಎಂದು ಅವಳ ವ್ಯಕ್ತಿ ತ್ವವನ್ನು ಕಡೆಗಣಿಸಲಾಯಿತು.

ಹೆಣ್ಣಿಗೊದಗಿದ ಈ ಹೀನ ಸ್ಥಿತಿ ಜೈನ ಬೌದ್ಧ ಯುಗದಲ್ಲಿ ಮಾಯವಾಯಿತು ಆಗ ಹೆಣ್ಣು ಮಕ್ಕಳಿಗೆ ಸೇವೆ-ತ್ಯಾಗಗಳ ಶಿಕ್ಷಣವನ್ನೀಯಲಾಗಿ, ಆತ್ಮೋನ್ನತಿಗೆ ಅವಕಾಶ ಕಲ್ಪಿಸಿಕೊಟ್ಟಾಗ ಸಾವಿರಾರು ಬೌದ್ಧ ಭಿಕ್ಷುಕಿಯರು, ಜೈನ ಶ್ರಾವಿಕೆಯರು ಧಾರ್ಮಿಕ ಸೇವೆಗೈದರು.

ಭಾರತದೇಶ ರಾಜಕೀಯ ದೃಷ್ಟಿಯಿಂದ ಏರಿಳಿತಗಳನ್ನು ಕಂಡಂತೆ ಮಹಿಳೆಯರ ಜೀವನವೂ ಅನೇಕ ಸಲ ಏರಿಳಿತಕ್ಕೆ ಒಳಗಾಯಿತು. ಬೌದ್ಧ, ಜೈನಧರ್ಮದ ವೈರಾಗ್ಯ ಭಾವ ಜನಮನಕ್ಕೆ ಹಿಡಿಸದೇ ಆ ಪ್ರಭಾವ ಕುಂದಿದಾಗ' ಹೆಚ್ಚಿನ ಸಂಖ್ಯೆಯ ಮಹಿಳೆ ಯರು ಧಾರ್ಮಿಕ ಜೀವನದಿಂದ ಮತ್ತೆ ದೂರ ಉಳಿದರು.

ಹನ್ನೆರಡನೇ ಶತಮಾನದಲ್ಲಿ ಬಸವಣ್ಣನವರ ಉದಯದೊಂದಿಗೆ ಹೊಸ ಸಮಾ ಜದ ನಿರ್ಮಾಣದೊಂದಿಗೆ, ಜೀವನದ ವಿವಿಧ ಮುಖಗಳ ಅಭಿವೃದ್ಧಿಗೆ ಆಸ್ಪದ ಕೊಡ ಲಾಯಿತು. ಹೆಣ್ಣು, ಗಂಡು, ಮೇಲು-ಕೀಳು, ಬಡವ-ಬಲ್ಲಿದ ಎಂಬ ಭೇದಗಳನ್ನು

ಮಾರೆತು, ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸುವ ಶರಣಧರ್ಮ ಪ್ರಚಾರವಾಯಿತು. ಹೆಣ್ಣುಮಕ್ಕಳಿಗೆ ಲಿಂಗಾಧಾರಣೆ, ದೀಕ್ಷಾವಿಧಾನಗಳಿಗೆ ಅವಕಾಶ ಕಲ್ಪಿಸಿ ಕೊಟ್ಟರು. ಬಸವಣ್ಣನವರ ಮಹಾಮನೆ, ಅನುಭವ ಮಂಟಪಗಳಲ್ಲಿ ಹೆಣ್ಣು ಮಕ್ಕಳಿಗೆ ಸ್ಥಾನಗಳು ದೊರೆತವು. ಬಸವಯುಗದಲ್ಲಿ ಹೆಣ್ಣುಮಕ್ಕಳಿಗೆ ಜೀವನದ ಎಲ್ಲ ರಂಗಗಳಲ್ಲಿ ಸಮಾನತೆ ದೊರೆಯಿತು. ಧಾರ್ಮಿಕ ಸ್ವಾತಂತ್ರ್ಯವನ್ನು ಕಳೆದುಕೊಂಡು ಭೋಗ ಜೀವನದ ಕೈಗೊಂಬೆಗಳಾಗಿ ಬಾಳಿದ ಮಹಿಳೆಯರು ಶರಣರ ಪ್ರಭಾವದಿಂದ ಧಾರ್ಮಿಕ ಶಿಕ್ಷಣ ಪಡೆದು ಶಿವಾನುಭವ ಸಂಪನ್ನರಾದರು. ಇದರ ಫಲವಾಗಿ ಬಸವಯುಗದಲ್ಲಿ ಧಾರ್ಮಿಕ ಸ್ವಾತಂತ್ರ್ಯ, ಸಾಮಾಜಿಕ-ಆರ್ಥಿಕ ಸ್ವಾಂತತ್ರ್ಯ, ಶಿಕ್ಷಣ ಸೌಲಭ್ಯ ಪಡೆದುದರ ಫಲವಾಗಿ ಅನುಭವಮಂಟಪದಲ್ಲಿ ಪುರುಷರಷ್ಟೇ ಮಹಿಳೆಯರಿಗೂ ಸಮಾನ ಸ್ಥಾನವು ದೊರಕಿತು. ಕನ್ನಡ-ಸಂಸ್ಕೃತ ಸಾಹಿತ್ಯವನ್ನು ಅಭ್ಯಾಸ ಮಾಡಿದರು ಅನುಭವಮಂಟಪದ ಕಾರ್ಯಕಲಾಪಗಳಲ್ಲಿ ಭಾಗವಹಿಸುತ್ತಿದ್ದ ಮಹಿಳೆಯರ ಶರಣರೊಡನೆ ಆತ್ಮ ಜ್ಞಾನ ಕುರಿತು ಚರ್ಚಿಸುತ್ತಿದ್ದರು. ಅನುಭವ ಮಂಟಪದ ದಾಸೋಹದಲ್ಲಿ ಪಾಲ್ಗೊಂಡ ಶಿವ-ಶರಣೆಯರು ತಮ್ಮ ಅನುಭವವನ್ನು ವಚನರೂಪದಲ್ಲಿ ಹೊರಹೊಮ್ಮಿಸಿ ಶ್ರೇಷ್ಠ ವಚನಕಾರ್ತಿಯರೂ ಎನಿಸಿಕೊಂಡರು.

ಇಂತಹ ಸಮಯದಲ್ಲಿ ಹೆಸರಾಂತ ಶಿವಶರಣೆಯರು ಆಗಿಹೋದರು. ಅಕ್ಕ ನಾಗಲಾಂಬಿಕೆ ಶಿವಶರಣೆಯರಲ್ಲಿ ಹೆಚ್ಚಿನ ಮಹತ್ವ ಪಡೆದವಳು. ಚಿಕ್ಕಂದಿನಿಂದಲೂ ಯೋಗಾಭ್ಯಾಸ ಕನ್ನಡ-ಸಂಸ್ಕೃತ ಸಾಹಿತ್ಯಾಭ್ಯಾಸಗೈದವಳು, ಭಕ್ತಿ ಭಂಡಾರಿ ಬಸವಣ್ಣ ಜ್ಞಾನನಿಧಿ ಚನ್ನಬಸವಣ್ಣನವರ ವ್ಯಕ್ತಿತ್ವವನ್ನು ರೂಪಿಸಿದ ಶ್ರೇಯಸ್ಸು ಈ ತಾಯಿಯದು. ಅಕ್ಕಮಹಾದೇವಿಯ ವಚನ ಮಹಿಮೆಯಿಂದಲೂ ವ್ಯಕ್ತಿ ವೈಶಿಷ್ಟ್ಯದಿಂದಲೂ ಮೇಲಾದ ಶಿವಶರಣೆ. ನಮಗೆ ತಿಳಿದ ಮಟ್ಟಿಗೆ ಕನ್ನಡ ಸಾಹಿತ್ಯದಲ್ಲಿ ಅವಳೇ ಮೊದಲ ಕವಯಿತ್ರಿ. ಆಧ್ಯಾತ್ಮ ಮತ್ತು ಗದ್ಯಕವಿತ್ವ ಇವುಗಳ ಸಮ್ಮಿಳನಕ್ಕೆ ಅಕ್ಕಮಹಾದೇವಿ ಮೊದಲಗಿತ್ತಿ. ಸಾಂಪ್ರದಾಯಿಕ ಸಮಾಜದ ಸಂಕೋಲೆಗಳನ್ನು ಮುರಿದೊಗೆದು, ಲಗ್ನಸಂಸ್ಥೆಯನ್ನು ಅಲ್ಲಗಳೆದು ಚನ್ನಮಲ್ಲಿಕಾರ್ಜುನನೆಂಬ ಲೋಕಪತಿಯನ್ನೇ ಪತಿಯಾಗಿವರಿಸಿ, ಅವಳುಮಾಡಿದ ಉಗ್ರಸಾಧನೆ, ಪಡೆದ ಸಿದ್ಧಿ ಆಶ್ಚರ್ಯಕರವಾದಂತಹವು. ಬಸವಣ್ಣನವರ ಪತ್ನಿಯರಾದ ನೀಲಾಂಬಿಕೆ ಗಂಗಾಂಬಿಕೆಯರು ಪತಿಯಸಾನಿಧ್ಯದಿಂದ ತಮ್ಮ ಬಾಳಿಗೆ ಬೆಳಕನ್ನು ಕಂಡುಕೊಂಡವರು. ಬಸವಣ್ಣನವರ ಮಹಾಮನೆಯಾಗಲೂ ತಮ್ಮ ಜೀವನವನ್ನು ಗಂಧದ ಕೊರಡಿನಂತೆ ಸವೆಯಿಸಿದರು. ನೀಲಾಂಬಿಕೆಗೆ ಬಸವಣ್ಣನವರು ಪತಿ, ಗುರು, ದೇವರು ಸರ್ವಸ್ವವಾಗಿದ್ದರು. ಗಂಗಾಂಬಿಕೆ ತನ್ನ ಪತಿ ಮತ್ತು ಅಕ್ಕ ನಡೆದ ಹಾದಿಯಲ್ಲೇ ಸಾಗಿದ ಶಿವಶರಣೆ. ಮಂತ್ರಿಯ ಮಗಳು ಗಂಗಾಂಬಿಕೆ, ಸಿದ್ಧರಸ ದಣ್ಣಾಯಕರ ಮಗಳು ನೀಲಾಂಬಿಕೆ ಸುಖದ ಸುಪ್ಪತ್ತಿಗೆಯಲ್ಲಿ ರಾಜವೈಭವದಲ್ಲಿ ಬೆಳೆದವರು. ಆದರೂ ಅವರಿಬ್ಬರೂ ಪತಿಯ ಇಚ್ಛೆಯನ್ನು ಸರಿಯಾಗಿ ಅರ್ಥಮಾಡಿ

ಡು, ಹಿರಿಯ ಶರಣೆ ಅಕ್ಕನಾಗಲಾಂಬಿಕೆಯ ಮಾರ್ಗದರ್ಶನದಲ್ಲಿ ಗಂಗಾಂಬಿಕೆ
ಾಂಬಿಕೆಯರು ವೀರಶೈವ ಧರ್ಮ ತತ್ವಗಳನ್ನು ಅರಿತುಕೊಂಡು ಆಚರಣೆಯಲ್ಲಿ
ರು.

ಬಸವಣ್ಣನವರು ಭಂಡಾರಿಯಕಾರ್ಯ ನಿರ್ವಹಿಸುತಿದ್ದ ಕಾಲದಲ್ಲಿ ಬೆಳಿಗ್ಗೆ
ಲಿಂಗಪೂಜೆ ಮಾಡಿಕೊಂಡು ಉಪಹಾರ ಸೇವಿಸಿ ತಮ್ಮ ಕೆಲಸಕ್ಕೆ ಹೋಗು
ರು. ಮಧ್ಯಾಹ್ನ ಪೂಜೆ ಮುಗಿಸಿ, ವಿಶ್ರಾಂತಿ ಪಡೆದು ಮತ್ತೆ ಕೆಲಸಕ್ಕೆ
ಗುತ್ತಿದ್ದರು. ನಂತರ ಸಾಯಂಕಾಲ ಮನೆಗೆ ಬಂದು ಶಿವಾನುಭವಗೋಷ್ಠಿ
ುತ್ತಿದ್ದರು. ಬಸವಣ್ಣನವರ ಪತ್ನಿಯರಾದ ಗಂಗಾಂಬಿಕೆ, ನೀಲಾಂಬಿಕೆಯರು
ಣ್ಣನವರು ರಚಿಸಿದ ವಚನಗೀತೆಗಳನ್ನು ಭಕ್ತಿ ಭರಿತರಾಗಿ, ಏಕಾಗ್ರತೆಯಿಂದ
ುತ್ತಿದ್ದರು. ಅಕ್ಕ ನಾಗಲಾಂಬಿಕೆಯು ಶಿವಯೋಗಸಾಧನೆ, ಗಂಗಾಂಬಿಕೆಯ
ಾ ಶಕ್ತಿ, ನೀಲಾಂಬಿಕೆಯ ದಾಸೋಹಭಾವಗಳು ಒಂದುಗೂಡಿ ಜನಕಲ್ಯಾಣ
ಬಸವಣ್ಣನವರ ಮನೆ ಮಹಾಮನೆಯಾಗಿ ಪರಿವರ್ತನೆ ಮಾಡಿದ ಕೀರ್ತಿ
ಶಿವಶರಣೆಯರಿಗೆ ಸಲ್ಲುತ್ತದೆ. ಬಸವಣ್ಣನವರ ದಾಸೋಹದ ಮಹಾಮನೆಯ
ಣೆಗಾರಿಕೆ ಹೊತ್ತು ಗಂಧದ ಕೊರಡಿನಂತೆ ನೀಲಾಂಬಿಕೆ ತನ್ನ ಸೇವೆಗೈದರೆ,
ಾಂಬಿಕೆ ಅನುಭವ ಮಂಟಪದ ಕಾರ್ಯಗಳಿಗೆ ಬಸವಣ್ಣ, ಚನ್ನಬಸವಣ್ಣನ
ಾಯಕಳಾಗಿ, ಸಲಹೆಗಾರ್ತಿಯಾಗಿ ಸೇವೆ ಸಲ್ಲಿಸಿದಳು. ಗಂಗಾಂಬಿಕೆ ಸ್ವತಂತ್ರ
ತ್ವವನ್ನು ಪಡೆದ ಧೀರೆ. ಪತಿ ಪ್ರಾರಂಭಿಸಿದ ಕಾರ್ಯವನ್ನು ಮುನ್ನಡೆಸಿ
ಂಡು ಹೋಗುವುದೇ ಸತಿಧರ್ಮವೆಂದು ಬಗೆದು ಧರ್ಮರಕ್ಷಣೆಗಾಗಿ ಪ್ರಾಣಾ
ಣೆಗೈದ ವೀರಾಂಗನೆ.

ಬಸವಣ್ಣನವರ ಮಹಾಮನೆಯ ಹಿರಿಯಮಗಳಾಗಿ ಬೆಳೆದ ಗುಡ್ಡಾಪುರದ
ಾನಿಯಮ್ಮ ವೀರಶೈವ ಧರ್ಮಪ್ರಚಾರಕ್ಕಾಗಿ, ಧರ್ಮರಕ್ಷಣೆಗಾಗಿ, ಕಲ್ಯಾಣ
ರ ಬಳ್ಳಾರಿ, ಶ್ರೀಶೈಲ, ರಾಮೇಶ್ವರಗಳಲ್ಲಿ ಸಂಚರಿಸಿ ಸಾವಿರಾರು ಜನರಿಗೆ
ದೀಕ್ಷೆಯನ್ನಿತ್ತಳು. ತನ್ನ ಆತ್ಮಶಕ್ತಿಯ ಬಲದಿಂದ ಬೇಡಿದವರಿಗೆ ಬೇಡಿದುದ
ಯುವ ವರದಾನಿಯಾಗಿದ್ದಳು.

ಪದ ಅಪ್ಪಣ್ಣನ ಪತ್ನಿ ಲಿಂಗಮ್ಮ ತನುಮನಗಳ ಗೆದ್ದ ಧೀರೆ. ಉರಿಲಿಂಗ
ಯ ಪತ್ನಿ ಕಾಳವ್ವೆ ವ್ರತ ನಿಯಮಗಳನ್ನು ನಿಷ್ಠೆಯಿಂದ ನಡೆಸುವ ನಿಷ್ಠಾ
ತ ಶರಣೆ

ಪತಿಯೇ ಪರದೈವವೆಂದು ಬಾಳಿದ ಅಕ್ಕಮಹಾದೇವಿ, ಬೊಂತಾಲದೇವಿಯರು
ರರೇ ಪತಿಯೆಂಬ ಛಲದಿಂದ ಬಾಳಿದ ಶಿವಶರಣೆಯರು. ಶರಣ–ಲಿಂಗಪತಿ
ದು ಬಾಳಿದಧೀರ ಶಿವಶರಣೆಯರು. ಆಯ್ದಕ್ಕಿ ಮಾರಯ್ಯನ ಪತ್ನಿ ಲಕ್ಕಮ್ಮ
ಗೆ ಕಾಯಕದ ಮಹತ್ವವನ್ನು ಅರುಹಿದಳು. ದೇಹಕ್ಕೆ ಅಗತ್ಯವಾದುದನ್ನು ಸತ್ಯ
ದ ಕಾಯಕದಲ್ಲಿ ದುಡಿದು ಹಂಚಿ ಉಣ್ಣುವ ಆಧ್ಯಾತ್ಮ ಸಾಧನೆ ಎಂದು ತಿಳಿ
ಪಡಿಸಿದ ಶರಣೆ.

ಮೋಳಿಗೆಯ ಮಾರಯ್ಯನ ಪತ್ನಿಯಾದ ಮಹಾದೇವಮ್ಮ ಪತಿಯನ್ನು ಹಿಂಬಾಲಿಸಿ, ಆತನ ಸಾಧನೆಗೆ ಸಹಾಯಕಳಾಗಿ ತಾನೂ ಆಧ್ಯಾತ್ಮ ಮಾರ್ಗದಲ್ಲಿ ನಡೆದ ಮಹಾಶರಣೆ, ಸತಿಯಾಗಿ ತನ್ನ ವಿನಯವನ್ನೂ ಸಾಧಕಿಯಾಗಿ ತನ್ನ ಆಧ್ಯಾತ್ಮಿಕ ನಿಲುವನ್ನೂ ಸೂಚಿಸಿ ಮಾರಯ್ಯನ ಸಾಧನೆಗೆ ಅವಲಂಬನೆಯನ್ನು ಕೊಟ್ಟ ಶರಣೆ.

ತಮ್ಮ ತಮ್ಮ ವಿಶಿಷ್ಟವಾದ ಕಾಯಕಗಳಿಂದಲೇ ಹಲವಾರು ಮಹಿಳೆಯರು ಶ್ರೇಷ್ಠ ಶಿವಶರಣೆಯರು ಎಂಬ ಹೆಗ್ಗಳಿಕೆಗೆ ಪಾತ್ರರಾದರು. 'ಕಾಯಕವೇ ಕೈಲಾಸ' 'ಆಚಾರವೇ ಸ್ವರ್ಗ' ಎಂದು ಬಸವ ಉಪದೇಶಿಸಿದುದರ ಫಲವಾಗಿ ಕದಿರೆಯ ರೇಮವ್ವೆ ನೂಲು ತೆಗೆಯುವ ಕಾಯಕ ಕೈಗೊಂಡಳು. ಕೊಟ್ಟಣದ ಸೋಮವ್ವೆ ಶರಣರ ಮನೆಗಳಲ್ಲಿ ಭತ್ತ ಕುಟ್ಟುತ್ತಿದ್ದಳು. ತೊಂಗಿನ ಮಹಾದೇವಿ ಶರಣರನ್ನು ಪೂಜೆಗೆ ಎಬ್ಬಿಸುವುದು, ಸೇವೆಗೆ ಗೂರುವ ಶಿವಾನುಭವ ಮಂಟಪದ ಶಿಸ್ತನ್ನು ಕಾಣುವುದು, ಬಾಣಸಿಗ ಮಲ್ಲರಸಿ ಮಹಾಮನೆಯಲ್ಲಿ ಪ್ರಸಾದ ಸಿದ್ಧಗೊಳಿಸುವುದು, ಶಿವಮಾಯಿದೇವಿ ಪುರಾಣ ಹೇಳುವುದು, ಬಾಚಲೆ ದೇವಾಲಯಗಳಲ್ಲಿ ಮದ್ದಳೆ ಬಾರಿಸುವುದು, ಗೊಗ್ಗವ್ವೆ ದೇವರಿಗೆ ಧೂಪ ಹಾಕುವುದು, ನಾಟ್ಯ ಪ್ರವೀಣೆ ಸಿದ್ದವ್ವ ದೇವಾಲಯದಲ್ಲಿ ವಾದ್ಯ ಬಾರಿಸುವುದು. ಇದೂ ಅಲ್ಲದೆ ಗುಪ್ತಕಾಯಕ ದಿಂದ ಬಾಳಿದ ಶಿವಶರಣೆಯರೂ ಕಲ್ಯಾಣದಲ್ಲಿದ್ದರು.

ಹನ್ನೆರಡನೆಯ ಶತಮಾನದಲ್ಲಿ ಶಿವಶರಣೆಯರು ತಮಗೆ ದೊರೆತ ಅವಕಾಶ ವನ್ನು ಸದುಪಯೋಗಪಡಿಸಿಕೊಂಡರು. ಭಕ್ತಿ, ಜ್ಞಾನ, ವೈರಾಗ್ಯದ ಸಾಕಾರ ಮೂರ್ತಿಗಳಾದ ಶಿವಶರಣರು ಆತ್ಮೋನ್ನತಿಯ ಮಾರ್ಗದಲ್ಲಿ ಹಿಂಜರಿದಾಗ, ಆತ್ಮ ಶಕ್ತಿಯ ಪಾಬಲ್ಯದಿಂದ ಅವರ ಕೈ ಹಿಡಿದು ಮುನ್ನಡೆಸಿದ ಆಯ್ದಕ್ಕಿ ಲಕ್ಕಮ್ಮ, ಮೋಳಿ ಮಹಾದೇವಿಯರು ಆದರ್ಶ ಸತಿಯರು. ಪರಶಿವನೇ ಪತಿಯೆಂದೆ ಬಾಳಿದ ಅಕ್ಕಮಹಾದೇವಿ, ಬೊಂತಲಾದೇವಿಯರ ಬಾಳು ಉಜ್ವಲವಾಗಿದೆ. ಅಂಗೈ ಲಿಂಗದಲ್ಲಿ ಪತಿಯನ್ನೂ ಪರಮೇಶ್ವರನನ್ನೂ ಕಂಡು ಐಕ್ಯಸ್ಥಾನದಲ್ಲಿ ಮೆರೆದ ನೀಲಾಂಬಿಕೆ ಪೂಜಾರ್ಹಳು.

ವೇದಯುಗದಲ್ಲಿ ಮಹಿಳೆಯರು ಕೇವಲ ಆತ್ಮಜ್ಞಾನ ಪಡೆದರು. ಜೈನ ಬೌದ್ಧ ಯುಗದಲ್ಲಿ ಸೇವಾತ್ಯಾಗಗಳ ಬಲದಿಂದ ಮಹಿಳೆಯರು ಸಾಮಾಜಿಕ ಧಾರ್ಮಿಕ ಸೇವೆಗೈದರು. ರಜಪೂತಯುಗದಲ್ಲಿ ಮಹಿಳೆಯರು ವೀರರಮಣಿಯರಾಗಿ ಮೆರೆದರು ಬಸವಯುಗದಲ್ಲಿ ಮಹಿಳೆಯರು ಸರ್ವತೋಮುಖ ಪ್ರಗತಿಯನ್ನು ಸಾಧಿಸಿ, ಸ್ವತಂತ್ರ ವ್ಯಕ್ತಿತ್ವವನ್ನು ಪಡೆದುಕೊಂಡು ಆತ್ಮೋನ್ನತಿಯನ್ನು ಸಾಧಿಸಿದರು. ಸಾಮಾಜಿಕ ಜೀವನದಲ್ಲಿ ಸಮಾನತೆಯನ್ನೂ, ಆರ್ಥಿಕ ಜೀವನದಲ್ಲಿ ಪ್ರಗತಿಯನ್ನೂ ಆಧ್ಯಾತ್ಮ ಜೀವ ನದಲ್ಲಿ ಉನ್ನತಿಯನ್ನೂ ಸಾಧಿಸಿದರು. ತಮ್ಮ ಅನುಭಾವದ ಅಮೃತದಂತಿರುವ ವಚನ ಸಾಹಿತ್ಯವನ್ನು ರಚಿಸಿ ಕನ್ನಡ ಸಾಹಿತ್ಯವನ್ನು ಸತ್ವಯುತಗೈದ ಮಹತ್ವ ನಮ್ಮ ಶಿವಶರಣೆಯರದಾಗಿದೆ.

ಕೃಪೆ -ಬಸವಪಥ

"ಸಿದ್ಧಗಂಗಾ" ಚಿರಾಯುವಾಗಲೆಂದು ಹರಸಿ ಹಾರೈಸಿರುವ

## ಆಜೀವ ಸದಸ್ಯರ ಬಳಗ

327 ಶ್ರೀ ಎಂ. ರುದ್ರಾರಾಧ್ಯ S/o ಶ್ರೀ ಮಲ್ಲಯ್ಯ, ಹಳೆಮಡಿವಾಳ, ಬೆಂ-53

328 ಶ್ರೀ ಎಸ್. ಗಿರಿರಾಜು, S/o ಶ್ರೀ ಸಿದ್ಧನಂಜಯ್ಯ, ಎಲ್.ಐ.ಸಿ. ಕಾಲೋನಿ, ಜಯನಗರ, ಬೆಂಗಳೂರು - 11

329 ಶ್ರೀ ಹೆಚ್. ಜಿ. ಲೋಕೇಶ್, S/o ಶ್ರೀ ಎಸ್.ಎಸ್. ಗುರುಮಲ್ಲಯ್ಯ, ಜಯನಗರ, ಬೆಂಗಳೂರು- 11

1330 ಶ್ರೀ ಹೆಚ್. ವಿ. ರೇಣುಕ ಪ್ರಸಾದ್ S/o ಶ್ರೀ ಹೆಚ್. ವಿ. ವಿರೂಪಾಕ್ಷಯ್ಯ, ರಾಜಾಜಿ ನಗರ, ಬೆಂಗಳೂರು – 10

1331 ಶ್ರೀ ಬಿ. ಜೆ. ಪ್ರಸನ್ನಕುಮಾರ್, S/o ಶ್ರೀ ಎಸ್. ಜಯಣ್ಣ. ಆರ್. ಆರ್. ರಾಯ ಕಲ್ಯಾಣ ಮಂದಿರ, ಶಂಕರಪುರಂ, ಬೆಂಗಳೂರು - 4

1332 ಶ್ರೀ ಹೆಚ್, ಎಸ್. ರಾಜಣ್ಣ, ಹಾರಗದ್ದೆ, ಆನೇಕಲ್ ತಾಲ್ಲೂಕ್, ಬೆಂಗಳೂರು ಜಿಲ್ಲೆ.

1333 ಶ್ರೀ ಎಸ್. ಟಿ. ಮಹೇಶ್ S/o ಶ್ರೀ ಎಸ್. ತಮ್ಮಯ್ಯ, ರಾಜಾಜಿ-ನಗರ, ಬೆಂಗಳೂರು – 10

1334 ಶ್ರೀ ಎನ್ ಬಿ ಪಾಂಡುರಂಗಶೆಟ್ಟಿ ಕಿರಾಣಿ ಮರ್ಚೆಂಟ್, ಕೂಡ್ಲಿಗಿ, ಬಳ್ಳಾರಿ

1335 ಶ್ರೀ ಹೆಚ್. ಮೃತ್ಯುಂಜಯ, ಪತ್ರಿಕೋದ್ಯಮಿ, ಪೈಯಾಲಿ ಕಾವಲ್, ಬೆಂಗಳೂರು – 3

1336 ಶ್ರೀ ಬಿ. ಎನ್. ಬಸವರಾಜಪ್ಪ, ಪ್ರೊ|| ಮಂಜುಮಳಿಗೆ, ಕೆ. ಆರ್. ಮೊಹಲ್ಲ, ಮೈಸೂರು – 4

133⁻ ಶ್ರೀ ಬಿ. ಸಿ. ಬಸವರಾಜ್, ಎಕ್ಸಿಕ್ಯುಟೀವ್ ಇಂಜಿನಿಯರ್, ಕುವೆಂಪು ನಗರ, ಮೈಸೂರು - 23

1338 ಶ್ರೀ ಈಶ್ವರಪ್ಪ, ಎಕ್ಸ್‌ಪೈಸ್ ಡಿ. ಸಿ, ಕುವೆಂಪು ನಗರ, ಮೈಸೂರು – 23

1339 ಪ್ರಾಂಶುಪಾಲರು, ಎಸ್. ಎಸ್. ಮಾರ್ ಗೋಲ್ ಕಾಲೇಜ್, ಶಹಬಾದ್, ಗುಲ್ಬರ್ಗ – ಜಿಲ್ಲೆ.

1340 ಶ್ರೀ ಎನ್. ಶಿವಾನಂದಯ್ಯ S/o ಶ್ರೀ ಎಸ್. ನಂಜುಂಡಯ್ಯ —— ಎಲ್. ಐ. ಸಿ. ಕಾಲೋನಿ, ಜಯನಗರ, ಬೆಂಗಳೂರು 11

1341 ಶ್ರೀ ಮುಕೇಶ್, S/o ಶ್ರೀ ಬಿ. ಎಮ್. ಚನ್ನಪ್ಪ, ಚಾಮರಾಜ ಪೇಟೆ ಬೆಂಗಳೂರು - 18

1342 ಶ್ರೀ ಕೆ. ಎಂ. ಜಗದೀಶ್, ಸೇಲ್ ಸಹಾಯಕರು S/o ಶ್ರೀ ಟಿ. ವಿ. ಮಲ್ಲಪ್ಪ, ಐ ಎ. ಎಸ್. ಎಂ. ಸಿ, ನಾಗಪಾಲ್, ಮಂಡಿಪೇಟೆ, ತುಮಕೂರು.

ಸ್ಥಾಪನೆ : 1915 ತಂತಿ :

## ಶಾಸ್ತ್ರೋಕ್ತವಾಗಿ ತಯಾರಿಸಿದ ಸುಗಂಧ ಸಾಮಗ್ರಿಗಳು




ಪ್ರಖ್ಯಾತವಾದ

- ಪರಿಮಳದಶಾಂಗ
- ದೂಪದ ಕೊಡ
- ವಿಭೂತಿ
- ಹವನ ಸಾಮಗ್ರಿಗಳ

ತಯಾರಕರು

ಶಿವಪೂಜಾ ಸಾಮಗ್ರಿಗಳು ದೊರೆಯುತ್ತದೆ.

ಫೋನ್ : ಅಂಗಡಿ — 28009 ಮನೆ — 224623.

ವೈ. ಬಸಪ್ಪ, 206, ಅವೆನ್ಯೂ ರೋಡ್, ಬೆಂಗಳೂರು-560 002

# ದ್ಧಗಂಗಾ

ುಟ 27 ಸಂಚಿಕೆ 9 ಸೆಪ್ಟಂಬರ್ - 1991

ಬಸವಾದಿ ಶರಣರು ಸಂಸ್ಕೃತ ದ್ವೇಷಿಗಳಾಗಿರಲಿಲ್ಲ, ಕನ್ನಡ ಮಿಗಳಾಗಿದ್ದರು. ತಾವು ಒಪ್ಪಿಕೊಂಡ ಧರ್ಮಸಿದ್ಧಾಂತವನ್ನು ಪಾದಿಸುವಾಗ ಅವರು ಸಂಸ್ಕೃತ ಭಾಷೆಯಲ್ಲಿದ್ದ ದರ್ಶನ ಗ್ರಂಥ ಂದಲೇ ಉದಾಹರಣೆಗಳನ್ನು ಕೊಟ್ಟಿದ್ದಾರೆಂಬುದು, ಅವರ ವಚನಗಳಿಂದಲೇ ವ್ಯಕ್ತವಾಗುತ್ತದೆ.

—ಡಾ|| ಶ್ರೀ ಶ್ರೀ ಶಿವಕುಮಾರಸ್ವಾಮಿಗಳು.

ಪ್ರಕಾಶಕರು:
ಹಳೆಯ ವಿದ್ಯಾರ್ಥಿಗಳ ಸಂಘ.
ಸಿದ್ಧಗಂಗಾ ಕ್ಷೇತ್ರ.

# ಪರಮ ಪೂಜ್ಯ ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ವಜ್ರಮಹೋತ್ಸವ ಸಮಿತಿ, ಶ್ರೀ ಸಿದ್ಧಗಂಗಾ ಮಠ.

## ವಿನಮ್ರ ಮನವಿ

ಶ್ರೀ ಸಿದ್ಧಗಂಗಾ ಮಠಾಧ್ಯಕ್ಷರೂ ತ್ರಿವಿಧ ದಾಸೋಹಿಗಳೂ ಪರಮ ತಪೋಧನರೂ ಆದ ಶಿವಯೋಗಿ ಪರಮ ಪೂಜ್ಯ ಶ್ರೀ ಶ್ರೀ ಡಾ|| ಶಿವಕುಮಾರ ಮಹಾಸ್ವಾಮಿಗಳವರ ಧರ್ಮಪೀಠ ಸ್ವೀಕಾರ ಸಂಸ್ಮರಣಾರ್ಥವಾಗಿ ವಜ್ರಮಹೋತ್ಸವವನ್ನು ಆಚರಿಸುವ ಮಹಾ ಯೋಜನೆಯನ್ನು ಶ್ರೀಮಠದ ಭಕ್ತಾದಿಗಳು ಅಭಿಮಾನಿಗಳು, ಹಿತೈಷಿಗಳು, ಹಳೆಯ ವಿದ್ಯಾರ್ಥಿಗಳು, ವಿಶ್ವವಿಖ್ಯಾತ ನೇತ್ರದಾನಿ ಪದ್ಮಭೂಷಣ ಡಾ|| ಎಂ.ಸಿ ಮೋದಿಯವರ ಗೌರವಾಧ್ಯಕ್ಷತೆಯೊಂದಿಗೆ, ಮಾನ್ಯ ಶ್ರೀ ಮುದ್ದಪ್ಪ ಐ.ಎ.ಎಸ್ (ನಿವೃತ್ತ) ರವರ ಕಾರ್ಯಾಧ್ಯಕ್ಷತೆಯಲ್ಲಿ ರೂಪಿಸಿಕೊಂಡು ಕಾರ್ಯೋನ್ಮುಖವಾಗಿದೆ.

ಇಪ್ಪತ್ತನೆಯ ಶತಮಾನದ ಅಪರೂಪದ ಮಹಾ ವಿಭೂತಿ ಪುರುಷರಾದ ಪರಮ ಪೂಜ್ಯ ಶ್ರೀ ಶ್ರೀಗಳವರು ಅರವತ್ತು ವರ್ಷಗಳಿಂದ ಸರ್ವಸಮಾಜದ ಉದ್ಧಾರಕ್ಕಾಗಿ ಹಗಲಿರುಳು ಶ್ರಮಿಸುತ್ತಿರುವುದು ನಾಡಿನೆಲ್ಲ ಹೃದಯವಂತರಿಗೆ ತಿಳಿದಿರುವ ವಿಚಾರವಾಗಿದೆ. ದೀನ ದಲಿತರ ಅಭಿವೃದ್ಧಿಗಾಗಿ ಪೂಜ್ಯ ಶ್ರೀ ಶ್ರೀಗಳವರು ಆಸಕ್ತಿವಹಿಸಿ ಗ್ರಾಮೀಣ ಬಂಧುಗಳು ಏಳ್ಗೆಯನ್ನು ಗಮನದಲ್ಲಿಟ್ಟುಕೊಂಡು ಸಲ್ಲಿಸುತ್ತ ಬಂದಿರುವ ನಿಷ್ಕಾಮ ಸೇವೆ ಅತ್ಯಂತ ಶ್ಲಾಘನೀಯವಾದುದು. “ ಸೇವೆಯೇ ಶಿವಯೋಗ, ಕಾಯಕವೇ ಲಿಂಗಪೂಜೆ, ದಾಸೋಹವೇ ಮಾನವೀಯತೆ ” ಎಂಬುದನ್ನು ಆಚರಿಸಿ ತೋರಿಸುತ್ತ ನಡೆದಿರುವ ಶಿವಯೋಗಿಗಳಿಗೆ ಕೃತಜ್ಞತಾ ಪೂರ್ವಕವಾಗಿ ಭಕ್ತಿ ನಮನಗಳನ್ನು ಸಲ್ಲಿಸಲು ಇದೊಂದು ಸುವರ್ಣಾವಕಾಶ.

ವಜ್ರಮಹೋತ್ಸವದ ಸಂಸ್ಮರಣಾರ್ಥಕವಾಗಿ ಶ್ರೀಮಠದಲ್ಲಿ ಅತ್ಯಂತ ವಿಶಾಲವಾದ 150 ಕೊಠಡಿಗಳನ್ನೊಳಗೊಂಡ ಬೃಹತ್ ವಿದ್ಯಾರ್ಥಿನಿಲಯವನ್ನು ಹಾಗೂ ಮೂರುಸಾವಿರ ಮಂದಿ ಕೂತು ಏಕಕಾಲದಲ್ಲಿ ಪ್ರಸಾದ ಸ್ವೀಕರಿಸುವಂಥ ಸುವಿಶಾಲ ಸುಸಜ್ಜಿತ ನೈರ್ಮಲ್ಯ ಪೂರ್ಣ ಪ್ರಸಾದನಿಲಯವನ್ನು ನಿರ್ಮಿಸುವ ಮತ್ತು ಶ್ರೀಮಠದ ಪರಿಸರ ಪರಿಶುದ್ಧವಾಗಿರುವಂತಹ ನೈರ್ಮಲ್ಯ ವ್ಯವಸ್ಥೆಯನ್ನು ರೂಪಿಸುವ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ.

(3ನೇ ರಕ್ಷಾ ಪುಟ ನೋಡಿ)

# ಸಿದ್ಧಗಂಗಾ

ಂಪುಟ – 27. ಸಂಚಿಕೆ – 9. ಸೆಪ 1991.

## ಶ್ರೀ ಸಿದ್ಧಗಂಗಾ ಗುರುಕರುಣ ತ್ರಿವಿಧಿ.

ಕಾವಿನಂದನ ಬನದಿ ಕೋಗಿಲೆಯೆ ನೀನಾದೆ
ಕಾಯ ವಾಚಾ ಮನದಿ ಸ್ವರಗೈದೆ । ನನ್ನತಂದೆ
ಸಿದ್ಧಗಂಗಾ ಗುರುವೆ ಕೃಪೆಯಾಗು ॥

❀ ❀ ❀

ನೋಡಿಲ್ಲಿ ಗುರುದೇವ ಬಂದಿಹೆನು–ತವಪದಕೆ
ಬಿದ್ದು ಹೋಗುವಮುನ್ನ ಹಾಡಿರುವೆ। ನನ್ನತಂದೆ
ಸಿದ್ಧಗಂಗಾ ಗುರುವೆ ಕೃಪೆಯಾಗು ॥

❀ ❀ ❀

"ನಾನೆಂಬ ನೀನೆಂಬ ಜಗವೆಂಬ" ಮತಿಬಿಡಿಸಿ
ಅಂಗಲಿಂಗವೆಂಬ ಉಭಯುವನು । ಕಳಚಿದ
ಸಿದ್ಧಗಂಗಾ ಗುರುವೆ ಕೃಪೆಯಾಗು ॥

—ಹೆಚ್. ವಿ. ವೀರಭದ್ರಯ್ಯ.

| ಲೇಖನ | ಲೇಖಕರು | ಪುಟ |
|---|---|---|


* ಶ್ರೀವಾಣಿ 5

* ಶ್ರೀ ಸಿದ್ಧಲಿಂಗೇಶ್ವರ ವಚನ 8

* ಸಂಪಾದಕೀಯ 9

* ಕರಿಗೊಂಡ ನರನಾರಿಯರು 11
ಡಾ. ಸಿದ್ಧಯ್ಯಪುರಾಣಿಕ

* ಶಿವಶರಣರ ವಚನಗಳ ಉಗಮ ಭಾಗ-7 13
ಎನ್. ಚನ್ನಬಸಪ್ಪ

* ವಿಜ್ಞಾನ ಮತ್ತು ಅಧ್ಯಾತ್ಮ 18
ಎಚ್. ಎಸ್. ನರಸಿಂಹಜೀಯರ್

* ಡಾ. ಬಸವರಾಜ ರಾಜಗುರು : ಒಂದು ನೆನಪು 21
ಎಸ್. ವಿ. ಮನ್ವಾಚಾರ್

* ಕನ್ನಡ ಕಣ್ಮಣಿ ಡಾ. ಎಂ. ಚಿದಾನಂದಮೂರ್ತಿ 25
ಕವಿತಾಕೃಷ್ಣ

* ಹಲವು ಕೈಗಾರಿಕೆಗಳಿಗೆ ಗ್ಲಿಸರಿನ್ 27
ಶ್ರೀ ಪ. ರಾಮಕೃಷ್ಣ ಶಾಸ್ತ್ರಿ

* ವಿದ್ಯಾರ್ಥಿ ಜೀವನದ ಬೆಳಕು ಸರಣಿ–೧೨ 31
ಬಿ. ಎಸ್. ಕೃಷ್ಣಮೂರ್ತಿ

* ವರತಪಸ್ವಿ
ಜಿ. ರಾಧಾದೇವಿ 33

* ಮುಷ್ಟಿಯುದ್ಧ - ಹಿಂಸಾತ್ಮ 36
ಬಿ. ಸುಬ್ರಾಯ ಅಡಿಗ

ಮಾನವನ ಗುರಿ 41
ಎ. ಬಿ. ಚನ್ನಬಸಪ್ಪ

* ಕ್ಷೇತ್ರವಾರ್ತೆ 45
ಹೆಚ್. ಬಿ. ಗಂಗಾಧರಯ್ಯ

# ಶ್ರೀವಾಣಿ



**ಎರಡು ಬರುವುದಿಲ್ಲ.**

ಒಬ್ಬ ಶ್ರೀಮಂತನಿದ್ದ. ಸುಸಂಸ್ಕೃತ ಸ್ವಭಾವ ಅವನದು. ಕೌಟುಂಬಿಕ ಜೀವನ ತೃಪ್ತಿಕರವಾಗಿತ್ತು. ಒಂದು ಗಂಡು ಒಂದು ಹೆಣ್ಣು ಅವನನಿಗಿದ್ದ ಮಕ್ಕಳು. ಅತ್ಯಂತ ಇಂಗಿತಜ್ಞೆಯಾಗಿದ್ದ ಪತ್ನಿಯಿದ್ದಳು. ದಾಸೋಹ ಭಾವದ ಮನೋಧರ್ಮಿಯಾಗಿದ್ದಳು. ಅತಿಥಿ ಅಭ್ಯಾಗತರ ಸತ್ಕಾರದಲ್ಲಿ ತಾಯಿಗೆ ಎಲ್ಲಿಲ್ಲದ ಸಂತೋಷ. ಹನ್ನೆರಡನೆಯ ಶತಮಾನದ ಶರಣೆಯರನ್ನು ನೆನಪಿಗೆ ತರುವಂತ ನಡೆನುಡಿ ಅವರದಾಗಿತ್ತು. ಮಕ್ಕಳಿಬ್ಬರೂ ವಿದ್ಯಾವಂತರು. ಪ್ರಾಪ್ತ ವಯಸ್ಸಿಗೆ ಬಂದರು. ಮಗಳಿಗೆ ಲಗ್ನಮಾಡಬೇಕೆಂಬ ಪ್ರಯತ್ನನಡೆಸಿದರು. ಅವರಿವರು ಬಂದುಹೋದರು. ಕೊನೆಗೆ ಒಂದು ಸಂಬಂಧ ಕುದುರಿತು. ಲಗ್ನವಾಯಿತು. ಅಳಿಯಂದಿರು ಸಾಕಷ್ಟು ಓದಿಕೊಂಡವರು. ಆಧುನಿಕ ಜೀವನ ವಿಧಾನವನ್ನು ಅಳವಡಿಸಿಕೊಂಡವರು. ಆದರೆ ನಿತ್ಯ ಅತೃಪ್ತಿ, ಅಶಾಂತಿಯನ್ನೇ ಬಿತ್ತಿಬೆಳೆಯುವ ಪ್ರವೃತ್ತಿಯವರು. ನಮ್ಮ ಹಿರಿಯರು ಹೇಳುವಂತೆ ಅರುವತ್ನಾಲ್ಕು ವಿದ್ಯೆಗಳಲ್ಲಿ ಅರುವತ್ತೆರಡು ವಿದ್ಯೆಗಳಲ್ಲಿ ಪಾರಂಗತರಾದವರು. ಶ್ರೀಮಂತರಿಗೆ ಅಳಿಯಂದಿರದೇ ಚಿಂತೆಯಾಯಿತು. ಎಲ್ಲ ಇದ್ದು ಅನುಭವಿಸುವ ಅದೃಷ್ಟ ಹೀನರಾಗುತ್ತಿದ್ದಾರಲ್ಲಾ ಅಳಿಯಂದಿರೆಂದು ಯೋಚನೆಮಾಡುತ್ತಿದ್ದರು. ಯಾರಾದರೂ ತಮ್ಮಲ್ಲಿಗೆ ಬಂದಾಗ ಅಳಿಯಂದಿರನ್ನು ಕುರಿತು ಮಾತನಾಡುವ ಪ್ರಸಂಗಬಂದಾಗ ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದರೂ ನೋವನ್ನು ಅನುಭವಿಸುತ್ತಿದ್ದರು. ನಮ್ಮ ಅಳಿಯಂದಿರಿಗೆ ಅರವತ್ತೆರಡು ವಿದ್ಯೆಗಳು ಬರುತ್ತವೆ ಆದರೆ ಇನ್ನೆರಡು ವಿದ್ಯೆಗಳೇ ಅವರಿಗೆ ಬರಲಿಲ್ಲ ಎಂಬುದಾಗಿ. ಆ ಎರಡು ವಿದ್ಯೆ ಯಾವುದೆಂದು ಯಾರಾದರೂ ಕೇಳಿದರೆ ತುಂಬ ಸಂಕಟದಿಂದ ಹೇಳುತ್ತಿದ್ದರು. ಒಂದು ಸ್ವಂತ ಬುದ್ಧಿಯಿಲ್ಲ, ಇನ್ನೊಂದು, ಬಲ್ಲವರ ಮಾತನ್ನು ಕೇಳುವುದಿಲ್ಲ. ಇಂದು ನಮಗೆ ಬೇಕಾಗಿರುವುದು ಸ್ವಂತ ಬುದ್ಧಿ ಹಾಗೂ ಬಲ್ಲವರ ಮಾತನ್ನು ಕೇಳುವಂತ ಸದ್ಗುಣ. ಯುವಜನಾಂಗದಲ್ಲಿ ಕಾಣೆಯಾಗುತ್ತಿರುವ ಈ ಎರಡು ವಿದ್ಯೆಗಳನ್ನು ಬಿತ್ತಿಬೆಳೆಯುವಂಥ ಯೋಚನೆ ನಮ್ಮದಾಗಬೇಕು. ಶರಣರು ಇದನ್ನು ಬಲ್ಲವರಾಗಿದ್ದರು "ಅರಿವಿಂಗೆ ಅನುಭವವೇ ಆಶ್ರಯ"ವೆಂದರು. ಅಲ್ಲದೆ ವಿಚಾರದ ಒರೆಗಲ್ಲ ಮೇಲೆ ವಿಚಾರವನ್ನು ತಿಕ್ಕಿನೋಡಿದರು. "ಶರಣರ ಸೂಳ್ನುಡಿಯು" ಬೆಳಕಿನಲ್ಲಿ ಬಾಳಿದರು. ಪರಂಪರೆಯ ಅರಿವು ನಮ್ಮದಾಗುವಂತಹ ಜೀವನ ವಿಧಾನ ನಮ್ಮದಾಗಬೇಕು.

(15-4-86 ರಲ್ಲಿ ತರಿದಾಳು ಗ್ರಾಮದ ಬಸವಜಯಂತಿಸಮಾರಂಭದ ಆಶೀರ್ವಚನದಿಂದ ಸಂಗ್ರಹ)

## ಸಿದ್ಧಗಂಗಾ ಮಾಸ ಪತ್ರಿಕೆ
ಶ್ರೀ ಸಿದ್ಧಗಂಗಾ ಮಠ-572104
ತುಮಕೂರು ಜಿಲ್ಲೆ

ಪ್ರಧಾನ ಸಂಪಾದಕರು
**ಪ್ರೊ|| ಚನ್ನಪ್ಪ ಎರೇಸೀಮೆ**

* * *

ಸಂಪಾದಕರು
**ಹೆಚ್. ವಿ. ವೀರಭದ್ರಯ್ಯ**

* * *

ಸಹ ಸಂಪಾದಕರು
**ಬಿ. ವೀರಭದ್ರಯ್ಯ**
**ಪಿ. ಎನ್. ಚಂದ್ರಶೇಖರಯ್ಯ**

* * *

ಜಾಹೀರಾತು ವಿಭಾಗ
**ಎಂ. ರೇಣುಕಾರಾಧ್ಯ**

* * *

ವಿತರಣೆ ವಿಭಾಗ
**ಆರ್. ಎಸ್. ಮಲ್ಲೇಶಪ್ಪ**

* * *

ಪ್ರಕಾಶಕರು
**ಹೆಚ್. ಬಿ. ಗಂಗಾಧರಯ್ಯ**
ಹಳೆಯ ವಿದ್ಯಾರ್ಥಿ ಸಂಘದ ಪರವಾಗಿ

* * *

ಮುದ್ರಕರು
**ಶ್ರೀ ಸಿದ್ಧಲಿಂಗೇಶ್ವರಸ್ವಾಮಿ ಮುದ್ರಣಾಲಯ**

* * *

ಪ್ರಕಟಣೆಯ ಸ್ಥಳ
ಶ್ರೀ ಸಿದ್ಧಗಂಗಾಕ್ಷೇತ್ರ

ಚಂದಾ ವಿವರ
ವಾರ್ಷಿಕ ಚಂದಾ 25-00ರೂ
ಆಜೀವ ಸದಸ್ಯತ್ವ 250-00 ರೂ


## ಲೇಖಕರಲ್ಲಿ ಮನವಿ

'ಸಿದ್ಧಗಂಗಾ' ಶ್ರೀ ಸಿದ್ದಗಂಗಾ ಮಠದಿಂದ ಪ್ರಕಟವಾಗುತ್ತಿರುವ ಮಾಸ ಪತ್ರಿಕೆ. ಶ್ರೀ ಮಠದ ಹಳೆಯ ವಿದ್ಯಾರ್ಥಿ ಸಂಘದ ಹೆಮ್ಮೆಯ ಸೇವಾ ಪುರವಣಿ. ಮೇಲಾಗಿ ಶ್ರೀ ಮಠದ ಮುಖವಾಣಿ. ಪೂಜ್ಯ ಶ್ರೀ ಶ್ರೀ ಡಾ|| ಶಿವಕುಮಾರ ಮಹಾಸ್ವಾಮಿಗಳವರ ದಿವ್ಯ ಮಾರ್ಗದರ್ಶನದಲ್ಲಿ ಮುನ್ನಡೆದಿರುವ ಪತ್ರಿಕೆ. ತ್ರಿವಿಧ ದಾಸೋಹ ಸೇವಾ ತತ್ಪರತೆಯಿಂದ ಹೆಜ್ಜೆ ಹಾಕುತ್ತಿದೆ. ಈ ಧ್ಯೇಯ ಸಾಧನೆಗಾಗಿ ನಾಡಿನ ಗಣ್ಯ ಲೇಖಕರಿಂದ ಸಾಹಿತ್ಯ, ಸಂಸ್ಕೃತಿ, ಧರ್ಮ, ವಿಜ್ಞಾನ, ಶಿಕ್ಷಣ. ಇತಿಹಾಸ, ವೈಚಾರಿಕ, ಚಿಂತನ ಮುಂತಾದ ಲೇಖನಗಳನ್ನು ಸ್ವಾಗತಿಸುತ್ತದೆ. ಅಸ್ವೀಕೃತ ಲೇಖನಗಳನ್ನು ಪಡೆಯಲು ಸಾಕಷ್ಟು ಅಂಚೆಸ್ಟಾಂಪುಗಳನ್ನು ಲಗತ್ತಿಸಿರಬೇಕು. ಲೇಖನಗಳಲ್ಲಿ ಸೂಕ್ತ ಬದಲಾವಣೆ ಮಾಡಿಕೊಳ್ಳುವ ಅಧಿಕಾರ ಸಂಪಾದಕರಿಗಿದೆ. ಅನುವಾದ, ರೂಪಾಂತರ ಲೇಖನಗಳಿಗೆ ಮೂಲ ಕೃತಿಕಾರರ ಅನುಮತಿ ಪಡೆದಿರಬೇಕು. ಸ್ವೀಕೃತ ಲೇಖನಗಳಿಗೆ ಸೂಕ್ತ ಸಂಭಾವನೆ ಕೊಡಲಾಗುವುದು.

---


"ಸಂಪಾದಕರು"
'ಸಿದ್ಧಗಂಗಾ' ಕನ್ನಡ ಮಾಸಪತ್ರಿಕೆ
ಶ್ರೀ ಸಿದ್ಧಗಂಗಾ ಕ್ಷೇತ್ರ-572104
ತುಮಕೂರು ಜಿಲ್ಲೆ.


ಇವರಿಗೆ ಕಳುಹಿಸಿಕೊಡಬೇಕಾಗಿ ಪ್ರಾರ್ಥನೆ

# ಶ್ರೀ ಸಿದ್ಧಲಿಂಗೇಶ್ವರ ವಚನ



ಪಶುವನೇರಿದ ಕೋಣ ಶಿಶು ವೇಧೆಗಾರ ನೋಡಾ
ಪಶುವಿನ ಒಡೆಯ ಕೋಣನ ನೆಬ್ಬಟ್ಟಲು
ಶಿಶುವಿನ ವೇದನೆ ಮಾಯವಾಯಿತ್ತು ನೋಡಾ
ಶಿಶುವೆದ್ದು ತನ್ನ ತಾಯನಪ್ಪಲು
ತಾಯಿ ತಂದೆಯನೊಡಗೂಡಿ ನಿಂದ ನಿಲವು ತಾನೊಂದೇ ನೋಡಾ
ಮಹಾಲಿಂಗ ಗುರು ಶಿವಸಿದ್ದೇಶ್ವರ ಪ್ರಭುವೇ

ಪಶು—ಅಜ್ಞಾನಿಮಾನವ, ಕೋಣ—ಮದ, ಶಿಶು—ಆತ್ಮ.

ಜೀವ ಭಾವದಿಂದ ಕೂಡಿ ವರ್ತಿಸುತ್ತಿರುವ ಜೀವನಿಗೆ ಅಷ್ಟಮದಗಳ ವ್ಯವಹಾರವುಂಟಾಗಿ ಆತ್ಮಶಿಶುವಿಗೆ ಪ್ರಪಂಚ ವೇದನೆಯನ್ನುಂಟು ಮಾಡುತ್ತಿದೆ. ಆಜೀವನಿಗೆ ಕರ್ತೃವಾದ ಸಜ್ಜೀವನಿಗೆ ಸುಜ್ಞಾನೋದಯವಾಗಿ, ಅಷ್ಟಮದಗಳು ನಷ್ಟವಾಗಿ ಅಷ್ಟವಿಧ ಭಕ್ತಿಸ್ವರೂಪವಾಗಲು ಆತ್ಮಶಿಶುವು ಜ್ಞಾನಶಕ್ತಿಯೊಡನೆ ಕೂಡಿ ಪರಶಿವಲಿಂಗದಲ್ಲಿ ಲೀನವಾದಾಗ ಜೀವ ಬೇರೆ ಪರಮು ಬೇರೆ ಎಂಬುದಳಿದು ಏಕಸ್ವರೂಪವಾಗಿತ್ತು.

## ಶ್ರೀ ಮದುದ್ಧಾನೇಶ್ವರ ಶತಕಂ (ಮುಂದುವರಿದುದು)

— ಜೆ. ವಿ. ರಾಜಶೇಖರಯ್ಯ.

ಲೋಕದೊಳು ಸಂಸಾರದಂಗಡಿ
ಯೇಕೆನಲು ಗುರುಶಿಶುವುಗೋವ್ಗಳ
ನೇಕರತಿಥಿಗಳನ್ನು ಸೇವಿಸಿ ಭಾವಶುದ್ಧಿಯಲೀ।
ಕಾಕುಮತಿಯಳಿದುಳಿದ ನಿಜಸುವಿ
ವೇಕನಿಧಿ ಸಂಗ್ರಹಿಸಲೆನುತತಿ
ಜೋಕೆಯರುಪಿದ ಜೀಯಉದ್ಧಾನೇಶದಯವಾಗೋ॥

ನೆರಳನತಿಥಿಗೆಕೊಡಲು ಮನೆಯಿದು
ಕರುಣೆಯಡಿಗೆಯು ಮಾಡಲತಿಥಿಗೆ
ಧರಣಿಧಾನ್ಯಕೆಪಶುವು ಹೈನಿಗೆ ತರಳನವಸರಕೇ।
ಸಿರಿಯುಪಾತ್ರದಿ ದಾನಮಾಡಲು
ಹರನುಕೊಟ್ಟಿಹನೆಂದು ತಿಳಿಸಿದ
ಶರಣಗಾತ್ರನೆ ಜೀಯ ಉದ್ಧಾನೇಶದಯವಾಗೋ॥

ಲೋಕದರ ಮನೆಯೊಳಗೆ ದೇವರ
ಚಾಕರರು ನಾವೆಮಗೆ ಪ್ರಕೃತಿಯ
ನೇಕ ಸಂಬಳಸಾಕು ಸಾಕೆನುವಂತೆ ದೊರೆಯುವುದೂ।
ಸಾಕು ಸಾಲದ ರಾಜಜೀತಕ
ನೇಕಪರಿಪಿಗಿಲದರೊಳಗೇಜಗ
ಸಾಕಿ ಪಲಹುತ್ತಿರುವ ಉದ್ಧಾನೇಶ ದಯವಾಗೋ॥

ಐದುಭೂತಗಳೇ ಖಜಾನೆಗ
ಳೈದು ತತ್ವವೇ ಪಂಚಲೋಹದಿ
ದ್ವೈದುಮುಖದೊಳು ಹೊತ್ತುತಂದುದ ನಾರುಕಾಣದಲೂ।
ಹೊದ್ದುಮಲಗಿರೆ ಬುದ್ಧಿಗೆಟ್ಟರೆ
ನಿದ್ದೆಯೊಳಗಿರ ಲೊದ್ದಿ ಮುದ್ದಿಸಿ
ಗುದ್ದುಕೊಡುತಿಹ ಸಿದ್ಧ ಉದ್ಧಾನೇಶ ದಯವಾಗೋ॥

# ಸಂಪಾದಕೀಯ

## ವೀರಶೈವಾಮೃತ ಮಹಾಪುರಾಣ

ದಿನಾಂಕ 18-8-1991 ರಂದು ಗುಬ್ಬಿಯಲ್ಲಿ ಗುಬ್ಬಿಯ ಮಲ್ಲಣಾರ್ಯ ವಿರಚಿತ ವೀರಶೈವಾಮೃತ ಮಹಾಪುರಾಣವು ಬಿಡುಗಡೆಯಾಯಿತು. ಕ್ರಿಶ, 1530ರಲ್ಲಿದ್ದ ಮಲ್ಲಣಾರ್ಯನ ಜನ್ಮಸ್ಥಳವಾದ ಅಮರಗೊಂಡದಲ್ಲಿ ( ಇಂದಿನ ಗುಬ್ಬಿ ) ಮಲ್ಲಿಕಾರ್ಜುನ ದೇವಸ್ಥಾನದ ಆವರಣದಲ್ಲಿ ನಡೆದ ಪುರಾಣಕೃತಿಯ ಬಿಡುಗಡೆಯಾದದ್ದು, ಆ ಸಂದರ್ಭದಲ್ಲಿ ನಡೆದ ವಿಚಾರ ಸಂಕಿರಣದಲ್ಲಿ ಬೆಳಗಾವಿಯ ನಾಗನೂರು ಮಠದ ಪರಮಪೂಜ್ಯ ಶ್ರೀ ಶ್ರೀ ಗಳವರು, ಗದಗ-ಡಂಬಳದ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠದ ಪರಮಪೂಜ್ಯ ಶ್ರೀ ಶ್ರೀ ಗಳವರು, ಸಿದ್ಧಗಂಗಾ ಮಠದ ಪರಮ ಪೂಜ್ಯ ಶ್ರೀಶ್ರೀ ಗಳವರು, ಮತ್ತು ನಾಡಿನ ಪ್ರಸಿದ್ಧ ಸಂಶೋಧಕರೆಂದು ವಿದ್ವಾಂಸರೆಂದು ಹೆಸರುವೆತ್ತ ಡಾ॥ ಚಿದಾನಂದಮೂರ್ತಿಯವರು, ಎಂ. ಎಂ. ಕಲ್ಬುರ್ಗಿಯವರು, ಡಾ॥ ಎಸ್. ವಿದ್ಯಾಶಂಕರ್‌ಅವರು, ಡಾ॥ಎಂ. ಶಿವಕುಮಾರಸ್ವಾಮಿಗಳು ಡಾ॥ ಸಾ. ಶಿ ಮರುಳಯ್ಯನವರು ಭಾಗವಹಿಸಿ ವೀರಶೈವಾಮೃತ ಮಹಾ ಪುರಾಣದ ಬಗ್ಗೆ ಮಾತನಾಡಿ ಬೆಳಕು ಚೆಲ್ಲಿದ್ದು ಮಹತ್ವಪೂರ್ಣವಾಗಿತ್ತು. ಮಠ ಮಾನ್ಯಗಳು ಮಾಡುವ ಸಾಹಿತ್ಯ ದಾಸೋಹ ಇಂದು ನಿನ್ನೆಯದಾಗಿಲ್ಲ. ವೀರಶೈವ ಧರ್ಮದ ಪ್ರಮುಖ ಲಕ್ಷಣವಾದ ದಾಸೋಹ ಜಂಗಮಸ್ವರೂಪಿ-ಯಾದ ಸಮಾಜ ಸೇವೆ. ಸೇವೆಗೆ ತೆರೆದ ಬಾಗಿಲುಗಳು. ಅನೇಕ ವೀರಶೈವ ಮಠಗಳಂತೂ ಮುಕ್ತವಾಗಿ, ಎಲ್ಲ ಸಮಾಜದ ಜನತೆಗೂ ಸೇವಾ ಕೈಂಕರ್ಯವನ್ನು ಮಾಡುತ್ತ ಬಂದಿವೆ. ಬೆಳಗಾವಿಯ ನಾಗನೂರು ಶ್ರೀ ಮಠದ ವೀರಶೈವಾಮೃತ ಮಹಾಪುರಾಣವನ್ನು ಮರು ಮುದ್ರಿಸಿ ಪ್ರಕಟಿಸಿದ್ದು ಸ್ವಾಗತಾರ್ಹವಾದ ವಿಚಾರ. ದುರ್ಲಭವಾಗಿದ್ದ ಕೃತಿಯನ್ನು ಆಸಕ್ತರಿಗೆ ಲಭಿಸುವಂತಹ ಪುಣ್ಯ ಕಾರ್ಯವನ್ನು ಶ್ರೀ ಮಠ ಮಾಡಿದೆ. ನಾಗನೂರು ಮಠದ ಸೇವಾಮಣಿಹದಲ್ಲಿ ಸಹಕಾರ ಹಸ್ತವನ್ನು ನೀಡಿದ ಬೆಂಗಳೂರು ಬಸವ ಸಮಿತಿ ಹಾಗೂ ಗುಬ್ಬಿಯ ಮಲ್ಲಿಕಾರ್ಜುನ ದೇವಾಲಯದ ಸೇವಾ ಸಮಿತಿ ಸ್ಮರಣಾರ್ಹರಾಗಿದ್ದಾರೆ.

ವೀರಶೈವಾಮೃತ ಮಹಾಪುರಾಣ ಬೃಹತ್ ಎರಡು ಗ್ರಂಥ ಸಂಪುಟಗಳಲ್ಲಿ ಮರು ಮುದ್ರಿತವಾಗಿದೆ. ಕೃತಿ ಷಟ್ಪದಿಯಲ್ಲಿ ರಚಿತವಾಗಿದೆ, ಕೃತಿ ಆಗಮಗಳ ಆಧಾರದಮೇಲೆ ವಚನ ಸಿದ್ಧಾಂತದ ಆಧಾರದ ಮೇಲೆ ರಚಿತವಾಗಿದೆ, ಎಂಬುದಾಗಿ ವಿದ್ವಾಂಸರು ಹೇಳುತ್ತಾರೆ. ಕೃತಿಯಲ್ಲಿ ಅನೇಕ ಕಥೆಗಳು ಬರುತ್ತವೆ. ಸಿದ್ಧಾಂತದ ವಿಚಾರಗಳು ಬರುತ್ತವೆ. ‹ವೀರಶೈವ ವಿಶ್ವಕೋಶವೆಂಬಂತೆ ಕೃತಿಯಿದೆ ಎನ್ನುತ್ತಾರೆ ಬಲ್ಲವರು. ಸಮಾಜದ ಜನ ಸಾಮಾನ್ಯರು ಅಧ್ಯಯನ ಮಾಡುವುದಕ್ಕೆ ಅನುಕೂಲವಾಗುವಂತೆ ಕೃತಿಯನ್ನು ಗದ್ಯರೂಪದಲ್ಲಿ ಪ್ರಕಟಿಸುವ ಪ್ರಯತ್ನವನ್ನು ಸಮಾಜದಲ್ಲಿರುವ ಬಲ್ಲಿದರು, ಬಲ್ಲವರು ಮಾಡುವುದು ಅಪೇಕ್ಷಣೀಯ. ವೀರಶೈವಾಮೃತ ಮಹಾಪುರಾಣ

ವಾಣಿರಲಿ, ಸಿದ್ಧಾಂತ ಶಿಖಾಮಣಿಯಾಗಿರಲಿ, ವಚನ ಸಾಹಿತ್ಯವಾಗಲಿ, ಒಟ್ಟಾರೆ ಶರಣ ಸಿದ್ಧಾಂತ ಸಾಹಿತ್ಯಕೃತಿಗಳು ಸಮಾಜದ ಪ್ರತಿಯೊಂದು ಕುಟುಂಬದಅಮೂಲ್ಯ ಆಸ್ತಿಯಾಗುವಂತಹ ಯೋಜನೆಯೊಂದು ರೂಪಿತವಾಗಬೇಕು. ನಾಡಿನ ಶ್ರೀಮಂತರು, ಹೆಸರಾಂತ ಮಠಗಳು, ಸಂಘ ಸಂಸ್ಥೆಗಳು, ಧಾರ್ಮಿಕ ಪ್ರತಿಷ್ಠಾನಗಳು, ಒಂದಾಗಿ ಮುಂದುವರಿಯಬೇಕು. ಒಂದು ಸಾಹಿತ್ಯ ಎಂಬುದು ಒಂದು ಜನಾಂಗದ ಜೀವಂತ ದಾಖಲೆ. ಕಾಲದೇಶಗಳುದ್ದಕ್ಕೂ ಬೆಳಕು ನೀಡುವ ದೀಪ ಎಂಬುದನ್ನು ಮರೆಯಬಾರದು. "ಸ್ಥಾವರಕ್ಕಳಿವುಂಟು - ಜಂಗಮಕ್ಕಳಿವಿಲ್ಲ" ಎಂಬುದನ್ನು ಸದಾ ಎಚ್ಚರಿಕೆಯ ನುಡಿಯನ್ನಾಗಿ ಪರಿಭಾವಿಸುವ ಮನಸ್ಸು ನಮ್ಮದಾಗಬೇಕು. "ಸಾಹಿತ್ಯ ಎಲ್ಲರಿಗಲ್ಲ" ಎಂದಾಗಬಾರದು, "ಸಾಹಿತ್ಯ ಎಲ್ಲರಿಗಿಲ್ಲ" ಎಂದಾಗದಂತೆ ನೋಡಿಕೊಳ್ಳಬೇಕು.

---

## ಬೆಳಕಾಗಿ ಬಾ ಬೇಗ.

ಬೆಳಕಾಗಿ ಬಾ ಬೇಗ । ಸಿದ್ಧಗಂಗಾ ಈಗ।
ಬಾಲಜ್ಯೋತಿಗಳಿರುವ । ಈ ಜಗದ ಶಾಲೆಯಲಿ ॥

ತಿಳಿವಿಗಿಂಮಿಗಿಲಾದ । ಬೆಳೆಯಿಲ್ಲ ಬಾ ಜನನಿ ।
ಇಳೆಯಪಟದೊಳು ಬೆಳಗಿ । ನಲಿದುನಾಟ್ಯವನಾಡು ॥

ಸಾಹಿತ್ಯಸಂಸ್ಕೃತಿಯು । ನೀತಿಕಲೆಗಳು ನೆಲಸಿ ।
ಸ್ವಾತಂತ್ರ್ಯಜನಕೋಟಿ । ಬೆಳಕುನಿನ್ನೊಳು ಬೆರೆತು ॥

ಅಧ್ಯಯನವೇತಪವು । ವಿದ್ಯಾರ್ಥಿಗಳಿಗೆಂದು ।
ಬೋಧನೆಯೆನಿಜಭಕ್ತಿ । ಅಧ್ಯಾಪಕರಿಗೆಂದು ॥

ಬುದ್ಧಬಸವಾದಿಗಳ । ಶುದ್ಧತತ್ತ್ವವಸಾರು ।
ಉದ್ಧರಿಸಬಾಬೇಗ ! ಬದ್ಧ ಕಂಕಣಳಾಗಿ ॥

ಕಾಯಕವೆ ಕೈಲಾಸ । ಕರ್ಮಯೋಗಿಗೆ ಜನನಿ ।
ತಾಯೆ ! ಬೇಗದಿಬಂದು । ಕಾಯಬೇಕೌ ಇಂದು ॥

ಅಸ್ಥಾನವಿದ್ವಾನ್, ಡಾ॥ ಬಸವರಾಜಶಾಸ್ತ್ರಿಗಳು.
ಬೃಹನ್ಮಠ, ಬಳ್ಳಾರಿ - 3

# ಕರಿಗೊಂಡ ನರನಾರಿಯರು

ಡಾ॥ ಸಿದ್ಧಯ್ಯ ಪುರಾಣಿಕ, ಶ್ರೀ ಗಿರಿ, 4/5 ಎ, ಆಲಿ ಆಸ್ಕರ್ ರಸ್ತೆ, ಬೆಂಗಳೂರು - 560052,

ಕರಿಗೊಳ್ಳು ಎನ್ನುವುದಕ್ಕೆ ಪರಸ್ಪರವಿರುದ್ಧಾರ್ಥಗಳಿವೆ. ಸೀದು ಕರಿಕಾಗು, ಕಂಗೆಡು, ಕಳಂಕಹೊಂದು, ಮಾಸು ಇತ್ಯಾದಿ ಒಂದು ಅರ್ಥ. ಗಾಢವಾಗು, ಗಟ್ಟಿಗೊಳ್ಳು, ಸ್ಥಿರವಾಗು ಇತ್ಯಾದಿ ಇನ್ನೊಂದು ಅರ್ಥ. ಮೊದಲನೆಯ ಅರ್ಥದಲ್ಲಿ ಕರಿಗೊಳ್ಳಲು ಯಾವ ಸಿದ್ಧತೆಯೂಬೇಕಿಲ್ಲ. ಎರಡನೆಯ ಅರ್ಥದಲ್ಲಿ ಕರಿಗೊಳ್ಳುದು ಕಠಕಷ್ಟ. ಈಎರಡನೆಯ ಅರ್ಥದಲ್ಲಿ ಕರಿಗೊಳ್ಳದ ನರನಾರಿಯರಿಲ್ಲದೆ ನಾಡುನುಡಿಗಳಿಗೆ ಬಲ ಬರದು. ಸಮಾಜ ಸುಭದ್ರವಾಗದು. ಪ್ರಗತಿ ತ್ವರಿತಗೊಳ್ಳದು. ಮೊದಲನೆಯ ಅರ್ಥದಲ್ಲಿ ಕರಿಗೊಂಡರಂತೂ ದೇಶದ ಭವಿತವ್ಯವೇ ಕರಿದಾಗುತ್ತದೆ.

ಭಾರತರತ್ನ ಡಾ॥ ಬಿ. ಆರ್. ಅಂಬೇಡಕರರು ಕೇಂದ್ರ ಮಂತ್ರಿಮಂಡಲ ಸೇರಿದಾಗ ಅವರ ಅನುಯಾಯಿಗಳಲ್ಲಿ ಕೆಲವರು ಪ್ರಶ್ನಿಸಿದರು ಅವರನ್ನು. "ನಮಗೆ ಕಾಂಗ್ರೆಸ್ಸಿನಿಂದ ದೂರವಿರಲು ಬೋಧಿಸಿದ ನೀವೇ ಕಾಂಗ್ರೆಸ್ ಮಂತ್ರಿಮಂಡಲ ಸೇರಿದರೆ ಹೇಗೆ"? ಅದಕ್ಕೆ ಅವರಿತ್ತ ಉತ್ತರವಿಲ್ಲಿ ಪ್ರಸ್ತುತ. ನಾನು ಸುಟ್ಟ ಇಟ್ಟಿಗೆ ಬಂಧುಗಳೆ, ನನ್ನನ್ನು ಎಷ್ಟುದಿನ ನೀರಿನಲ್ಲಿಟ್ಟರೂ ಕರಗಲಾರೆ. ಎಂಥ ನೀರಿನಲ್ಲಿಟ್ಟರೂ ಕರಗಲಾರೆ, ನೀವಿನ್ನೂ ಸುಟ್ಟುಗಟ್ಟಿಯಾಗದ ಇಟ್ಟಿಗೆಗಳು. ನಿಮಗೆ ನೀರಿನ ಭಯವಿರುವುದು. ತಾನು ನಂಬಿದ ತತ್ವಗಳಲ್ಲಿ ನಿಷ್ಠೆ ಗಟ್ಟಿಗೊಂಡ ಮೇಲೆ, ತನ್ನಲ್ಲಿ ತನಗೆ ವಿಶ್ವಾಸ ಸ್ಥಿರ ನಿಶ್ಚಲವಾದ ಮೇಲೆ ವಸ್ತುಗಳನ್ನು ಜೀವಿಗಳನ್ನು ನೋಡುವ ತನ್ನದೇ-ಆದ ದೃಷ್ಟಿ ರೂಪಿತವಾದ ಮೇಲೆ ನರನಾರಿಯರಿಗೆ ಸಂದೇಹ, ಶೈಥಿಲ್ಯ ಶೀಲಹಾನಿಗಳ ನೀರಿನಲ್ಲಿ ಕರಗುವ ಭಯವಿಲ್ಲ.

ಸರ್ವ ಧರ್ಮ ಸಮನ್ವಯಾಚಾರ್ಯ ರಾಮಕೃಷ್ಣ ಪರಮಹಂಸರ ಇನ್ನೊಂದು ದೃಷ್ಟಾಂತ ಉಪಾಧೇಯ "ಹಾಲು ಹಾಲಾಗಿರುವವರೆಗೆ ಅದಕ್ಕೆ ನೀರಿನ ಭಯ, ಅದೇ ಹಾಲು ಕಾಯ್ದು ಹೆಪ್ಪಿನಿಂದ ಹೆತ್ತು ಮೊಸರಾಗಿ, ಕಡೆದು ಬೆಣ್ಣೆಯಾಯಿತೆಂದರೆ ಅದು ಕೆಡದಿರಲು ನೀರಿನಲ್ಲಿಯೇ ಇಡಬೇಕಾಗುತ್ತದೆ. ವಿಶುದ್ಧ ಶ್ರದ್ಧೆಯ, ತ್ತತ್ವ ನಿಷ್ಠೆಯ, ಶುಭ್ರ ಶೀಲಾ ಬೆಣ್ಣೆಯಾದ ಎಂದರೆ ಕರಿಗೊಂಡ ನರನಾರಿಯರಿಗೆ ಬದುಕಿನ ಕಡಲಿನ ಭಯವೆಲ್ಲಿ?

ವಿಶ್ವಜ್ಯೋತಿ ಅಕ್ಕಮಹಾದೇವಿ ಇನ್ನೂ ಮನೋಹರವಾದ ಸಾಮತಿಯನ್ನು ನಮಗೆ ಕೊಟ್ಟಿದ್ದಾಳೆ – ತನ್ನ ಈ ಅಮೂಲ್ಯ ವಚನದಲ್ಲಿ :

ಮುತ್ತು ನೀರಲ್ಲಾಯಿತ್ತು ವಾರಿಕಲ್ಲೂ ನೀರಲ್ಲಾಯಿತ್ತು ಉಪ್ಪುನೀರಲ್ಲಾಯಿತ್ತು
ಉಪ್ಪುಕರಗಿತ್ತು, ವಾರಿಕಲ್ಲು ಕರಗಿತ್ತು ಮುತ್ತುಕರಗಿದುದನಾರು ಕಂಡವರಿಲ್ಲ
ಈ ಸಂಸಾರಿ ಮಾನವರು ಅಂಗವ ಮುಟ್ಟಿ ಭವಭಾರಿಗಳಾದರೆ
ನಾ ನಿಮ್ಮ ಮುಟ್ಟಿ ಕರಿಗೊಂಡೆನಯ್ಯ ಚೆನ್ನಮಲ್ಲಿಕಾರ್ಜುನಾ.

ಸುಟ್ಟ ಇಟ್ಟಿಗೆಯ ಸಾಮತಿ, ಕಡೆದ ಬೆಣ್ಣೆಯ ಸಾಮತಿ, ಈಗ ಸಿಂಪನ್ನು ಸೇರಿದ ಸ್ವಾತಿಯ ಹನಿ ಸಿಂಪಿನ ಕಾಂತಿಯನ್ನೇ ಹೀರಿ ಮುತ್ತಾಗಿ ಮಿರುಗುವ ಸಾಮತಿ. ಜೀವಿ ಬದುಕಿನ ಸಿಂಪಿನಲ್ಲಿ ಮುತ್ತಾಗಿ ಕರಿಗೊಳ್ಳುವುದನ್ನು ಕಲಿತರೆ ಆ ಮೇಲೆ ಕರಗುವ, ಕರಿದಾಗುವ, ಮಾಸುವ, ಮಸಕಾಗುವ, ಬಯವೆಲ್ಲಿ? ಅದು ನತ್ತಾಗುವ ಮುತ್ತು ಕರಿದುಗೊಳಿಸುವ ಇದ್ದಿಲಲ್ಲ. ಇದ್ದಲಿನ ಎದೆಯಲ್ಲಿಯೂ ಅದೃಷ್ಟ ರೂಪದಲ್ಲಿ ವಜ್ರ ನಿದ್ರಿಸುತ್ತಿರುತ್ತದಂತೆ. ಅದನ್ನು ಎಬ್ಬಿಸಿ ಹೊರಗೆಳೆಯುವ ಹದ ಗಾರಿಕೆಯೇ ಕರಿಗೊಂಡ ನರನಾರಿಯರ ನಿರ್ಮಾಣಕ್ಕೂ ಬೇಕು. ದೇಶದಲ್ಲಿ ಇಂಥ ನರನಾರಿಯರ ಸಂಖ್ಯೆ ಹೆಚ್ಚಿ ದೇಶ ಕೀರ್ತಿಯ ಧವಳಗಿರಿಯನ್ನೇರಲೆಂದು ಹಾರೈಸೋಣ.

---

## ಮಿನುಗು ತಾರೆ

ಆಹಾ! ಆಕಾಶದ ಈ ತಾರಕೆಗಳು, ಈ ಅಗಣಿತ ತಾರಾಗಣ – ಕರೆಯ ಕಾಳ ರಾತ್ರಿಯಲ್ಲಿ ಒಂದೊಂದೆ ಒಂದೊಂದೆ ಮೂಡಿ ನಿಶಾದೇವಿಯ ಮುಕುಟ ಮಣಿಗಳಂತೆ ನಭ – ಮಂಡಲವ ತುಂಬಿ ಬಿಡುತ್ತಿರುವುವು. ಅವುಗಳ ಮೂಡು ಮುಳುಗುಗಳನ್ನು ನಾನು ಪ್ರತಿನಿತ್ಯ ನೋಡುತ್ತಿರುವೆನು. ಆದರೇನು ಅವುಗಳ ಹುಟ್ಟು ಸಾವುಗಳನರಿತಿ-ರುವರುಂಟೆ? ಅವು ಕಾಣುವುದೇಕೆ ಅಡಗುವುದೇಕೆ ಯಾರು ಬಲ್ಲರು? ಅವುಗಳ ಮಿನು ಗಿನಿಂದೇನು ಕತ್ತಲೆ ಹರಿಯುವುದೆ? ಇಲ್ಲ. ಪಥಿಕರಿಗೆ ದಾರಿ ಕಾಣುವುದೇ? ಇಲ್ಲ. ಒಬ್ಬ ಬಡವನ ಮನೆ ಯಾದರೂ ಬೆಳಗುವುದೇ, ಸರ್ವಥಾ ಇಲ್ಲ. ಆದರೂ ವಿಶ್ವದೇವಿ ಘನ ನೀಲ ಪಾತ್ರೆಯಲಿ ಈ ಮಲ್ಲಿಗೆಯ ಹೂ ತುಂಬಿ ತುಂಬಿ ಶಾಂತ ನಿಶಾ ಸಮಯ ದಲ್ಲಿ ನಿನ್ನ ಗೂಢ ಪಾದಗಳ ಮೇಲೆ ನಿಚ್ಚ. ನಿಚ್ಚ. ಎರಚುತಿರುವಳು. ಆ ಚಿಕ್ಕೆಗಳಲಿ ನನ್ನನೊಂದು ಚಿಕ್ಕೆಯು ಮಾಡು ದೇವಾ, ಆ ಮಲ್ಲಿಗೆಯ ರಾಶಿಯಲಿ ಎನ್ನನೊಂದು ಆಡವಿ ಮಲ್ಲಿಗೆ ಮಾಡಿ ಇರಿಸು ಸ್ವಾಮಿ, ಎನ್ನ ಹುಟ್ಟು ನಾನರಿಯೆ; ಯಾಕೆಂದು ಹೋಗುವೆ ಏನೆಂದು ಬರುವೆ ನಾನರಿಯೆ, ಬಂದುದೆಲ್ಲಿಂದ ಸಾಗುವುದೆಲ್ಲಿಗೆ ನಾನರಿಯೆ. ಇಲ್ಲಿರುವ ತನಕ ಮಿಣುಕಿ ಒಮ್ಮೆ ಯಾದರೂ ನಿನ್ನಡಿಯ ನೋಡಿದರೆ ಅದೇ ಎನ್ನ ಜೀವನ ಸಾರ್ಥಕ್ಯವು, ಜೀವದೊಡೆಯಾ, ಇದಕಾಗಿಯೆ ಮಿಡುಕುವೆ, ಇದನೆ ಬೇಡುವೆ, ಇದನೆ ಹಾಡುವೆ, ಕಾಡಿ, ಕಾಡಿ ನಿನ್ನನು ಇದನೆ ಕೇಳುವೆ, ಅಂತರಾತ್ಮಾ, ಕೊಟ್ಟು ಕಡೆ ಹಾಯಿತು.

ಆರ್. ದಿವಾಕರ

"ಅಂತರಾತ್ಮನಿಗೆ" —ಆಧಾರ:–ಸಮರ್ಪಣ.

# ಶಿವ ಶರಣರ ವಚನ ಉಗಮ ಭಾಗ-7

ಎಸ್. ಚನ್ನಬಸಪ್ಪ. ಗಮಕಿ, 543, 5 ನೇ ಅಡ್ಡರಸ್ತೆ 8 ನೇ ಮುಖ್ಯರಸ್ತೆ,
ಮಹಾಲಕ್ಷ್ಮಿ ಲೇಔಟ್, ಬೆಂಗಳೂರು 86.

ಶರಣರು ಕಾಯಕ ಜೀವಿಗಳು. ದೇಹಶ್ರಮವಿಲ್ಲದೆ ತಿನ್ನುವುದು ವಿಷ ಪ್ರಮಾಣ ಎಂದು ನಂಬಿದವರು. ಅವರೆಲ್ಲರ ಸಾಮೂಹಿಕ ಪ್ರಯತ್ನದಿಂದ ದಾಸೋಹ ನಡೆಯುತ್ತಿದೆ. ಬಿಜ್ಜಳನ ಭಂಡಾರದ ಹಣದಿಂದಲೂ ಎಂದು ಬಸವಣ್ಣನವರು ತಮ್ಮನ್ನು ನಿಂದಿಸುವ ಜನವನ್ನು ಕುರಿತು

ವಚನ - 72. ಊರಮುಂದೆ ಹಾಲಹಳ್ಳ ಹರಿಯುತ್ತಿರಲು
ಓರೆ ಯಾವಿನ ಬೆನ್ನಲ್ಲಿ ಹರಿಯಲೇಕಯ್ಯಾ ?
ಲಜ್ಜೆಗೆಡಲೇಕೆ ? ನಾಣುಗೆಡಲೇಕೆ ?
ಕೂಡಲ ಸಂಗಮ ದೇವಯ್ಯನುಳ್ಳನ್ನಕ್ಕ
ಬಿಜ್ಜಳನ ಭಂಡಾರವೆನಗೇಕಯ್ಯಾ ?

ಎಂದಾಗ ಇದು ಸರಿಯಾದ ಮಾತು ಅಣ್ಣಾ ಎಂದು ನಿಷ್ಠುರವಾದಿ ಚೌಡಯ್ಯ ಬಸವಣ್ಣನವರನ್ನು ಸಂತೈಸಿದ.

ಬಸವಣ್ಣನ ಅನುಗ್ರಹದಿಂದ ಮಹಾದೇವಿ ಬೊಮ್ಮಣ್ಣನನ್ನು ಹಿಂಬಾಲಿಸಿ ಕಲ್ಯಾಣವನ್ನು ಹೊಕ್ಕುನುಡಿದಳು

ವಚನ - 73 ಕಲ್ಯಾಣವೆಂಬುದುನಾರಿಗೆ ಹೋಗಬಾರದು, ಹೋಗಬಾರದು
ಅಸಾಧ್ಯವಯ್ಯಾ, ಆಶೆಯಾಮಿಷ ಅಳಿದವಂಗಲ್ಲದೆ
ಕಲ್ಯಾಣದತ್ತ ಅಡಿ ಇಡಬಾರದು,
ಒಳ ಹೊರಗು ಶುದ್ಧ ವಾದವಂಗಲ್ಲದೆ ಕಲ್ಯಾಣವ ಹೋಗಬಾರದು
ನಾನೆಂಬುದ ಅರಿದವಂಗಲ್ಲದೆ ಕಲ್ಯಾಣವ ಹೋಗಬಾರದು
ಒಳಗು ತಿಳಿದು, ಚನ್ನಮಲ್ಲಿಕಾರ್ಜುನಂಗೊಲಿದು
ಉಭಯ ಲಜ್ಜೆಯಳಿದೆನಾಗಿ ಕಲ್ಯಾಣವ ಕಂಡು ನಮೋ ನಮೋ
ಎನುತಿರ್ದೆನು.

ಎಂದು ಕಲ್ಯಾಣದ ಮಹತ್ವವನ್ನು ಸಾಂಕೇತಿಕವಾಗಿ ಹೇಳಿಕೊಳ್ಳುತ್ತಾ ನಡೆದಳು.

ಅನುಭವ ಮಂಟಪವನ್ನು ಹೊಕ್ಕ ಮಹಾದೇವಿಯನ್ನು ಕುರಿತು ಪ್ರಭು "ಉದಮದದ ಯೌವನವ ನೊಳಗೊಂಡ ಸತಿ ನೀನು ಇತ್ತಲೇಕೆ ಬಂದೆಯವ್ವಾ ? ಸತಿ ಎಂದರೆ ಮುನಿವರು ನಮ್ಮ ಶರಣರು. ನಿನ್ನ ಪತಿಯ ಕುರುಹು ಹೇಳಿದರೆ ಬಂದು ಕುಳ್ಳಿರು; ಅಲ್ಲವಾದರೆ ತೊಲಗುತಾಯೆ– ಪ್ರಭುದೇವನ ಮಾತು ಮಹಾದೇವಿಯ ಮನಸ್ಸನ್ನು ತಾಗಿತು. ಆಗ ನುಡಿದಳು– "ಹಠನೇ ಗಂಡನಾಗಬೇಕೆಂದು ಅನಂತಕಾಲ ತಪಿಸಿದ್ದೆ ನೋಡಾ! ಅದು ಈ ಜನ್ಮದಲ್ಲಿ ನನಗೆ ಸಿದ್ಧಿಸಿದೆ. ಗುರು ನನ್ನನ್ನು ಚನ್ನ ಮಲ್ಲಿಕಾರ್ಜುನನಿಗೆ ಮದುವೆಮಾಡಿ ಕೊಟ್ಟಿದ್ದಾನೆ.

**ವಚನ - 74** ಗುರುವೆ ತೆತ್ತಿಗನಾದ ಲಿಂಗವೆ ಮದುವಳಿಗನಾದ,
ನಾನೆ ಮದುವಳಿಗೆಯಾದೆನು. ಈ ಭುವನವೆಲ್ಲವರಿಯಲು
ಅಸಂಖ್ಯಾತರೆನಗೆ ತಾಯಿ ತಂದೆಗಳುಕೊಟ್ಟರು
ಪ್ರಭುವಿನ ಮನೆಗೆ ಸಾದೃಶ್ಯವಪ್ಪವರನ ನೋಡಿ,
ಇದು ಕಾರಣ ಚನ್ನಮಲ್ಲಿಕಾರ್ಜುನ ಗಂಡನೆನಗೆ
ಮಿಕ್ಕಿನ ಲೋಕದ ಗಂಡರೆನಗೆ ಸಂಬಂಧವಿಲ್ಲಯ್ಯಾ ಪ್ರಭುವೇ.

ಈ ಮಾತನ್ನು ಕೇಳಿ ಶರಣರು ತಲೆದೂಗಿದರು ಬಸವಣ್ಣನೂ ಸಂತೋಷ ಭರಿತನಾದನು.

ಪ್ರಭುವು ಮುಂದೆ ಆಕೆಯನ್ನು ಪರೀಕ್ಷಿಸುತ್ತಾ ನಗುತ್ತಾ ಕೇಳಿದ "ನಿನ್ನ ದೇಹದ ಮೇಲಿನ ಮೋಹ ನಿನಗಿನ್ನೂ ಬಿಟ್ಟಿಲ್ಲ ನಿನ್ನ ಸೌಂದರ್ಯದ ಹೆಮ್ಮೆ ನಿನಗಿನ್ನೂ ಉಳಿದಿದೆಯಲ್ಲವೆ ? ಅಂದಾಗ

**ವಚನ - 75** "ಇಲ್ಲ ನನ್ನ ಸೌಂದರ್ಯದ ಮೋಹ ನನಗೆಳ್ಳಷ್ಟೂ ಉಳಿದಿಲ್ಲ.
ಕಾಯಕರ್ರನೆ ಕಂದಿದ್ದರೇನಯ್ಯಾ ? ಕಾಯಮಿರ್ರನೆ ಮಿಂಚಿದಡೇನಯ್ಯಾ
ಅಂತರಂಗ ಶುದ್ಧವಾದ ಬಳಿಕ, ಚನ್ನಮಲ್ಲಿಕಾರ್ಜುನ
ಒಲಿದಕಾಯವು ಹೇಗಿದ್ದಡೇನಯ್ಯಾ."

ಎಂದು ಉತ್ತರಿಸಿದಳು. ಆಗ ಪ್ರಭುವು ದೇಹದ ಹಂಗನ್ನು ಬಿಟ್ಟು ಕೂದಲ ಮರೆಮಾಡಿಕೊಂಡು ನಡೆದಿರುವೆ ಎಂದಾಗ ಅದು ನನಗಾಗಿ ಅಲ್ಲ ನಿಮಗಾಗಿ ಅಂದರೆ ಜನರ ಹಂಗಿಗಾಗಿ ಈ ರೀತಿ ಅವಲಂಬಿಸಿದ್ದೇನೆ ಎಂದು ಹೇಳಿ

**ವಚನ - 76** ಫಲ ಒಳಗೆ ಪಕ್ವವಾಗಿಯಲ್ಲದೆ ಹೊರಗಣ ಸಿಪ್ಪೆ ಒಪ್ಪಗೊಡದು,
ಕಾಮನ ಮುದ್ರೆಯಕಂಡು ನಿಮಗೆ ನೋವಾದೀತೆಂದು

ಆ ಭಾವದಿಂದ ಮುಚ್ಚಿದೆ. ಇದಕ್ಕೆ ನೋವೇಕೆ ?
ಕಾಡದಿರಣ್ಣಾ ಚನ್ನಮಲ್ಲಿಕಾರ್ಜುನ ದೇವರ ದೇವನ ಒಳಗಾದವಳಾ.

ಈ ದಿಟ್ಟತನದ ಮಾತಿಗೆ ಮೆಚ್ಚಿ ಶರಣರೆಲ್ಲಾ ಸಂತೋಷಿಸಿದರು ಆದರೆ ಅಲ್ಲಮ ಪ್ರಭುವು

ವಚನ - 77 ನಾ ಸತ್ತೆನೆಂದು ಹೆಣ ಕೂಗಿದುಂಟೇ ?
ಬೈಚಿಟ್ಟ ಬಯಕೆ ಕರೆದುದುಂಟೇ ?
ಹೆಪ್ಪಿಟ್ಟ ಹಾಲು ಸಿಹಿಯಪ್ಪುದೇ ?
ಈ ಮಾತು ಒಪ್ಪವಲ್ಲ ಗುಹೇಶ್ವರ ಲಿಂಗಕ್ಕೆ

ಎಂದಾಗ ಮಹಾದೇವಿ "ಸತ್ತ ಹೆಣ ಕೂಗಿದುದುಂಟು. ಮತ್ತೆ ಒರಗಿ ಕನಸಕಂಡು ಅದನ್ನು ಹೇಳುವಲ್ಲಿ ಸತ್ತ ಹೆಣ ಎದ್ದಂತೆಯೇ ಅಲ್ಲವೆ? ಹೆಪ್ಪಿಟ್ಟ ಹಾಲು ತುಪ್ಪವಾಗಿ ಸಿಹಿಯಾಗುತ್ತದೆ. ಅಂತೆಯೇ ತನ್ನ ಋಣ ನಿಧಾನ ಎದ್ದು ಕರೆಯಿತ್ತೇ. ಇದನ್ನು ನಿಶ್ಚಯಿಸಿ ನೋಡಿರಿ." ಅಲ್ಲದೆ ಮುಂದುವರಿದು "ಕಾಮನ ಗೆದ್ದ ಠಾವನ್ನು ಹೇಳ ಬೇಕೇ ಪ್ರಭುವೇ" ಇಲ್ಲ ಇನ್ನೂ ಮುಂದುವರಿದು ಹೇಳುತ್ತೇನೆ; ಕಾಮುವನ್ನು ಗೆಲ್ಲುವುದಕ್ಕೆ ಆ ಕಾಮ ನನ್ನ ಮನಸ್ಸಿನಲ್ಲಿ ಹುಟ್ಟಿಯೇ ಇಲ್ಲ, ಕೇಳಿರಿ :

ವಚನ-78 ಅಂಗದ ಭಂಗವ ಲಿಂಗ ಸುಖದಿಂದ ಗೆಲಿದೆ,
ಮನದ ಭಂಗವ ಅರುಹಿನ ಮುಖದಿಂದ ಗೆಲಿದೆ,
ಜೀವದ ಭಂಗವ ಶಿವಾನು ಭವದಿಂದ ಗೆಲಿದೆ,
ಕರಣದ ಕತ್ತಲೆಯ ಬೆಳಗ ನುಟ್ಟು ಗೆಲಿದೆ,
ಜವ್ವನದ ಹೊರಮಿಂಚಿನಲ್ಲಿ ನಿಮ್ಮ ಕಣ್ಣಿಂಗೆ ತೋರುವ ಕಾಮನ
ಸುಟ್ಟುರುಹಿದ ಭಸ್ಮವ ನೋಡಯ್ಯಾ !
ಚನ್ನಮಲ್ಲಿಕಾರ್ಜುನ-ಕಾಮನ ಕೊಂದು ಮನಸಿಜನಾಗುಳುಹಿದರೆ
ಮನಸಿಜನ ತಲೆಯ ಬರಹವ ತೊಡೆದೆನು.

ಎಂದಾಗ ಪ್ರಭು ಬಸವಣ್ಣನೊಡನೆ ನಾನು ಈ ನಿಲವನ್ನು ಪ್ರಕಟಿಸ ಬೇಕೆಂದು ಹೋಗಿ ನಿಷ್ಠುರನಾದೆ. "ಮಹಾದೇವಿಯಕ್ಕನ ಶ್ರೀ ಪಾದಕ್ಕೆ ನಮೋ ನಮೋ ಎಂದ-ಶರಣೆರೆಲ್ಲರೂ ಜಯಘೋಷ ಮಾಡಿದರು. ಮಹಾದೇವಿ ಪ್ರಭು ಬಳಿಗೆ ಬರುತ್ತಿದ್ದಂತೆ ಸಾಷ್ಟಾಂಗ ಪ್ರಣಾಮ ಮಾಡಿದಳು, ಪ್ರಭುದೇವ ಅವಳನ್ನು ಸಂತೈಸುತ್ತಾ :

ವಚನ-79 ಅಂಗ ಅಂಗನೆಯ ರೂಪಸಲ್ಲದೆ ಮನವಸ್ತು ಭಾವದಲ್ಲಿ ಬೆಚ್ಚಂತಿರ್ಪುದು
ಬಂದ ಕಥನದಲ್ಲಿ ಬಂದು ಹಿಂಗಿದೆಯಲ್ಲಾ !
ಅಕ್ಕ, ಗುಹೇಶ್ವರ ಲಿಂಗದಲ್ಲಿ ಉಭಯನಾಮವಳಿದೆ ಎನ್ನಕ್ಕಾ !

ಆಗ ಬಸವಣ್ಣ ಈಕೆ ನಮೆಲ್ಲರಅಕ್ಕ. ಅಕ್ಕಮಹಾದೇವಿ ಶರಣು ಶರಣಾರ್ಥಿ" ಎಂದು ನಮಸ್ಕರಿಸಿದ. ಮಹಾದೇವಿ ಇನ್ನೂ ವಿನೀತಳಾಗಿ, ತಾವು ಹಾಗೆ ಹೇಳಬಾರದು ಅಣ್ಣಾ ನಿಮ್ಮೆಲ್ಲರ ಕರುಣೆಯ ಶಿಶು ನಾನು. ನಿಮ್ಮೆದುರಿನಲ್ಲಿ ಅತಿ ಚಿಕ್ಕವಳು" ಆಗ ಚನ್ನಬಸವಣ್ಣ ಹೇಳಿದ "ಇರಬುಹುದು. ವಯಸ್ಸು ಅತಿ ಚಿಕ್ಕದೇ ಆದರೆ ಹಿರಿಯತನ ವಯಸ್ಸಿನಿಂದ ಮಾತ್ರವೇ ಬರುವುದಿಲ್ಲ ತಾಯಿ ಅಜಕಲ್ಪ ಕೋಟಿ ವರ್ಷದವರೆಲ್ಲರೂ ಹಿರಿಯರೇ ? ಹಿರಿದು ಕಿರಿದೆಂಬ ಭೇದವನ್ನು ಮರೆದು ಬೆರೆಸಿ ಬೇರಿಲ್ಲದಿಪ್ಪ, ಹಿರಿಯ ತನ ಮಹಾದೇವಿಯಕ್ಕಂಗಾಯಿತು" ಎಂದು ಘೋಷಿಸಿದ.

ಬಸವಣ್ಣನ ಮೇಲೆ ಅಪವಾದ ಹೊರಿಸುವ ಪ್ರಯತ್ನ ವಿಫಲವಾದ ಮೇಲೂ ಋಗ್ವೇದಿ ದಾಮೋದರ, ಚತುರ್ವೇದಿ ಕೃಷ್ಣರಸ ಸಾಮವೇದಿ ಅಪ್ಪಣ್ಣ ಮೊದಲಾದ ಪ್ರಮುಖರು ತಮ್ಮ ಪ್ರಯತ್ನವನ್ನು ಕೈ ಬಿಡಲಿಲ್ಲ. ಇದನ್ನು ಕಂಡ ಕೆಲವು ಶರಣರು ಅವರ ಮೇಲೆ ಕೆರಳಿ ಬಿದ್ದರು. ಆಗ ಬಸವಣ್ಣನವರು "ದ್ವೇಷದಿಂದ ದ್ವೇಷವನ್ನು ಗೆಲ್ಲುವುದು ಸಾಧ್ಯವಿಲ್ಲ. ಅವರು ಏನೇ ಮಾಡಿದರೂ ನಾವು ದ್ವೇಷಿಸುವುದು ಸಲ್ಲದು." ಆಗ ಉಗಮವಾದ ವಚನ :-

**ವಚನ-80** ತನಗೆ ಮುನಿವರಿಗೆ ತಾಮುನಿಯಲೇಕಯ್ಯಾ ?
ತನಗಾದ ಆಗೇನು ? ಅವರಿಗಾದ ಚೇಗೇನು ?
ತನುವಿನ ಕೋಪ ತನ್ನ ಹಿರಿಯ ತನದ ಕೇಡು !
ಮನದ ಕೋಪ ತನ್ನರುಹಿನ ಕೇಡು ! ಮನೆಯೊಳಗಣ ಕಿಚ್ಚು ಮನೆಯ
ಸುಟ್ಟಲ್ಲದೆ ನೆರೆಮನೆಯ ಸುಡದು ಕೂಡಲಸಂಗಮ ದೇವಾ,

ಬಸವಣ್ಣನವರು ಈ ರೀತಿ ಶರಣರಿಗೆ ಎಚ್ಚರಿಕೆ ನೀಡುತ್ತಿದ್ದರು.

ಇನ್ನು ಕೆಲವು ಶರಣರ ಅತ್ಯಭಿಮಾನ, ಅನೇಕ ಸಮಸ್ಯೆಗಳಿಗೆ ಕಾರಣವಾಗುತಿತ್ತು. ಘರ್ಷಣೆಗಳು ನಡೆದು ಒಮ್ಮೊಮ್ಮೆ, ರಾಜಾಸ್ಥಾನದವರೆಗೂ ದೂರುಗಳು ಹೋಗುತ್ತಿದ್ದುವು. ಇದನ್ನು ಕೇಳಿದಾಗಲೆಲ್ಲಾ ಬಸವಣ್ಣನ ಮನಸ್ಸು ನೊಂದು ಕೊಳ್ಳುತ್ತಿತ್ತು. ಆಗ ಬಸವಣ್ಣ :-

**ವಚನ 81.** ಕೂಪವರಿಗೆ ಹೇಳುವೆನು ಕುಳಸ್ಥಳಂಗಳೆಲ್ಲವನು ;
ಕೂರದವರಿಗೆ ಹೇಳಿ ನಾನೇವೆನು ಶಿವನೆ ?
ಕರಲ ಭೂಮಿಯಲ್ಲಿ ಕರೆದ ವೃಷ್ಟಿಯ ತೆರನಂತೆ.
ಅವರೆತ್ತ ಬಲ್ಲರು ಎನ್ನ ಸುಖದುಃಖವ ?
ಲಿಂಗತ ವಿಲ್ಲದ ಸಂಗವು ಅಳಲಿಲ್ಲದ ಹುಯ್ಯಲಂತೆ.

ಎಂದು ಆ ನೋವನ್ನು ತನ್ನಲ್ಲಿಯೇ ಅಡಗಿಸಿ ಕೊಳ್ಳುವನು

ಒಮ್ಮೆ ಪ್ರಭುದೇವ ಮಂದಹಾಸದ ದೃಷ್ಟಿಯನ್ನು ಬಸವನತ್ತ ಬೀರಿ ಹೇಳಿದ ನಿನ್ನ ಈ ನಿರಹಂಕಾರದ ಸಹಜ ವಿನಯ ಸಾಧಕರಿಗೆ ಕೈ ದೀವಿಗೆಯಾಗಲಿ ಬಸವಣ್ಣ ಮೇಲಾಗ ಲೊಲ್ಲೆನು ಕೀಳಾಗಲೊಲ್ಲದೆ; ಕೀಳಿಂಗಲ್ಲದೆ ಹಯನು ಕರೆವುದೆ. ? ಈ ಮಾತು ಎಲ್ಲರಿಗೂ ಉಜ್ವಲ ಆದರ್ಶವಾಗಬೇಕು. ಈ ವಿಷಯದಲ್ಲಿ ನಮ್ಮೆಲ್ಲರಿಗೂ ನೀನು ಗುರು ಬಸವಣ್ಣ.

**ವಚನ :–** 82 ಅದ್ವೈತವ ನುಡಿದು ಅಹಂಕಾರಿ ಯಾದೆನಯ್ಯಾ;
ಬ್ರಹ್ಮವ ನುಡಿದು ಭ್ರಮಿಕನಾದೆನಯ್ಯಾ.
ಶೂನ್ಯವ ನುಡಿದು ಸುಖದುಃಖಕ್ಕೆ ಗುರಿಯಾದೆನಯ್ಯಾ.
ಗುಹೇಶ್ವರಾ ನಿಮ್ಮ ಶರಣ ಸಂಗನ ಬಸವಣ್ಣನ
ಸಾನ್ನಿಧ್ಯದಿಂದಾನು ಸದ್ಭಕ್ತನಾದೆನಯ್ಯಾ !

ಇದನ್ನು ಕೇಳಿ ಶರಣರೆಲ್ಲಾ ಸಂತೋಷವನ್ನು ವ್ಯಕ್ತಪಡಿಸಿದರು. ಬಸವಣ್ಣ ಭಕ್ತಿಯಿಂದ ಬಾಗಿ ಕುಳಿತ.

---

ಬನಮುಂ ಪಟ್ಟಣಮಪ್ಪುದು । ಜನರೆಲ್ಲರ್ ಸಜ್ಜನರಪ್ಪರೀ ನೆಲನೆಲ್ಲಂ ॥
ಧನ ಕನಕ ವಸ್ತುಪೂರಿತ । ಮೆನಿಪುದಣಂ ಪೂರ್ವಪುಣ್ಯವುಳ್ಳಂಗನಿಶಂ ॥
ಕರಮೆಸೆಗುಂ ದಾನದೆ, ಕಿವಿ । ಮೆರೆಗುಂ ಶ್ರುತದಿಂದ, ಕಡುಕಕಂಡುಗಳಿನೇಂ ॥
ಕರುಣಾಳುಗಳೊಡಲೆಸಗುಂ । ಪರಹಿತದಿಂ, ಚಂದನಾನುಲೇಪನದಿಂದೇಂ ॥
ವಿದ್ಯೆಯೆ ಸಿರಿರೂಪು, ವಿದ್ಯೆಯೆ ನಿಗೂಢ ಸುರಕ್ಷಿತಮಾದ ವಿತ್ತಮುಂ ।
ವಿದ್ಯೆಯೆ ಕೀರ್ತಿಭೋಗರ ವಿದ್ಯೆಯೆ ದೇಶಿಕರ್ಗೆಲ್ಲ ದೇಶಿಕಂ ॥
ವಿದ್ಯೆಯೆ ಬಂಧುವಪ್ಪುದು ವಿದೇಶದೆ, ವಿದ್ಯೆಯೆ ರಾಜಪೂಜ್ಯಮುಂ ।
ವಿದ್ಯೆಯದಿಲ್ಲದಿರ್ಪ ಮನುಜಂ ಬಗೆಯಲ್ಪಶುವಲ್ತೆ ಧಾತ್ರಿಯೊಳ್ ॥

—ಬಸವಪ್ಪ ಶಾಸ್ತ್ರಿಗಳ ಕನ್ನಡ ಭರ್ತೃಹರಿ ಸುಭಾಷಿತ

# ವಿಜ್ಞಾನ ಮತ್ತು ಅಧ್ಯಾತ್ಮ

ಎಚ್. ಎಸ್. ನರಸಿಂಹ ಜೀಯರ್, ಶ್ರೀ ಬಸವೇಶ್ವರ ಶಾಲೆ, ತುಮಕೂರು.

ಭಾರತದ ದೇಶದ ಋಷಿಗಳು, ಸಂತರು ತಮ್ಮ ಯೋಗ ಸಾಧನೆ ಹಾಗೂ ತಪಸ್ಸಿನಿಂದ ಅತೀಂದ್ರಿಯ ಜ್ಞಾನ ಪಡೆದಿದ್ದರು. ಭೂತ, ಭವಿಷ್ಯತ್ ಹಾಗೂ ವರ್ತಮಾನಗಳನ್ನೆಲ್ಲಾ ಬಲ್ಲವರಾಗಿದ್ದರು. ನಮ್ಮ ವೇದ ಪುರಾಣಗಳಲ್ಲಿ ಇಂತಹ ಅನೇಕ ಪ್ರಸಂಗಗಳು ಇವೆ.

ಆದರೆ ವಿಜ್ಞಾನ ಇದನ್ನು ನಂಬುವುದಿಲ್ಲ. ಭವಿಷ್ಯತ್‌ನಲ್ಲಿ ನಡೆಯಬಲ್ಲುದನ್ನು ಹಾಗೂ ವರ್ತಮಾನದಲ್ಲಿ ಬೇರೆ ಬೇರೆ ಸ್ಥಳಗಳಲ್ಲಿ ನಡೆಯುತ್ತಿರುವುದನ್ನೂ ತಿಳಿಯಲು ಅಸಾಧ್ಯವೆಂಬ ಭಾವನೆ ಇದೆ. ಸಿದ್ಧಮಾಡಿ ತೋರಿಸುವುದಷ್ಟೇ ಸತ್ಯ, ಉಳಿದುದೆಲ್ಲವೂ ಭ್ರಮೆ ಎಂಬುದು ವಿಜ್ಞಾನಿಗಳ ವಾದ. ಯಾವುದಾದರೂ ಇರುವುದಾದರೆ ಅದನ್ನು ಅಳೆಯುವುದು ಸಾಧ್ಯವಾಗಬೇಕು, ಪ್ರಯೋಗಶಾಲೆಯಲ್ಲಿ ಸಿದ್ಧಮಾಡಿ ತೋರಿಸಬೇಕು. ಇಂದ್ರಿಯ ಗ್ರಾಹ್ಯವಲ್ಲದ, ಅನುಭವಿಸಲಾರದ, ಪ್ರಯೋಗಮಾಡಲಾಗದ ಯಾವುದನ್ನೂ ನಂಬಬಾರದು ಎಂಬ ಭಾವನೆ ವಿಜ್ಞಾನ ಬೆಳೆದಂತೆ ಜನಗಳಲ್ಲಿ ಮೂಡುತ್ತಾ ಬಂದಿದೆ.

ಅತೀಂದ್ರಿಯ ಜ್ಞಾನದ ಬಗ್ಗೆಯೂ ಇದೇ ಭಾವನೆ ಬೆಳೆದು ಬಂದಿತ್ತು. ಇತ್ತೀಚೆಗೆ ಈ ವಿಚಾರದಲ್ಲಿ ಸಾಕಷ್ಟು ಸಂಶೋಧನೆ ನಡೆದಿದೆ ಹಾಗೂ ನಡೆಯುತ್ತಿದೆ. ಈಗೀಗ ವಿಜ್ಞಾನಿಗಳ ನಿಲುವು ಸಹ ಈ ವಿಚಾರದಲ್ಲಿ ಬದಲಾವಣೆಯಾಗುತ್ತಿದೆ. ಈ ಬಗ್ಗೆ ವಿಚಾರ ಮಾಡೋಣ.

ನಮ್ಮ ದೇಶದಲ್ಲಿಯೇ ಅಲ್ಲದೆ ವಿಶ್ವದ ನಾನಾ ಭಾಗಗಳಲ್ಲಿ ದಾರ್ಶನಿಕರು, ಸಂತರು ಹೇಳಿರುವ ಭವಿಷ್ಯಗಳಲ್ಲಿಯೂ ನಿಜವಾಗಿರುವ ಅನೇಕ ಉದಾಹರಣೆಗಳಿವೆ. ಫ್ರಾನ್ಸ್ ದೇಶದ ಮಹಾಸಂತ ನಾಸ್ಟರ್ ಡ್ಯಾಮ್ಸ್ (Nosterdamns) ರವರು 2500 ಭವಿಷ್ಯವಾಣಿ ನುಡಿದಿದ್ದಾರೆ. (16 ನೆಯ ಶತಮಾನದಲ್ಲಿ) ಇವು ಇಡೀ ವಿಶ್ವದಲ್ಲಿ ನಡೆಯುವ ಘಟನೆಗಳಿಗೆ ಸಂಬಂಧಿಸಿವೆ. ಇವುಗಳಲ್ಲಿ ಅಂದರೆ ಇತ್ತೀಚಿನ 400 ವರ್ಷಗಳಲ್ಲಿ ಅವರು ಹೇಳಿರುವ 800 ಭವಿಷ್ಯಗಳು ನಿಜವಾಗಿವೆ. ಇವುಗಳಲ್ಲಿ ಪ್ರಮುಖವಾದವುಗಳೆಂದರೆ 1792 ರಲ್ಲಿ ನಡೆದ ಫ್ರಾನ್ಸಿನ ಮಹಾಕ್ರಾಂತಿ, ಈ ಶತಮಾನದ ಆದಿಯಲ್ಲಿ ಜರುಗಿದ ಎರಡು ಪ್ರಪಂಚದ ಮಹಾಯುದ್ಧಗಳು ಜರ್ಮನಿಯಲ್ಲಿ ಹಿಟ್ಲರನ ಉದಯ ಮತ್ತು ಪತನ ಹಾಗೂ ಇತ್ತೀಚಿನ ಕುವೈಟ್ ಮೇಲೆ

ಇರಾಕಿನಧಾಳಿ ಮುಂತಾದವುಗಳು. ಇವೆಲ್ಲವೂ ಆತನು ಹೇಳಿರುವ ವರ್ಷಗಳಲ್ಲಿ ಕರಾರುವಕ್ಕಾಗಿ ನಡೆದಿವೆ. ಈ ವಿಷಯ ಈಗ ಇಡೀ ವಿಶ್ವಕ್ಕೆ ಗೊತ್ತಿರುವ ವಿಚಾರ ವಾಗಿದೆ. 1759 ರಲ್ಲಿ ಸ್ವೀಡನ್ ಬೋರ್ಗ್ ಎಂಬ ದಾರ್ಶನಿಕ ತಾನಿದ್ದ ಊರಿನಿಂದ 300 ಮೈಲು ದೂರದಲ್ಲಿದ್ದ ಸ್ಟಾಕ್ ಹೋಂ ನಗರದ ಗೃಹಸ್ಥನೊಬ್ಬನ ಮನೆಗೆ ಬೆಂಕಿ ಬಿದ್ದ ವಿಷಯವನ್ನು ಆದಿನವೇ ತನ್ನ ಕಣ್ಣೆದುರಿಗೆ ನಡೆಯುತ್ತಿರುವಂತೆ ವಿವರಿಸಿ ಹೇಳಿದ. ಮನೆಯಿದ್ದ ಬೀದಿ, ಮನೆಯ ನಂಬರು, ಮನೆಯ ಯಜಮಾನನ ವಿವರ, ಬೆಂಕಿ ಉರಿಯುತ್ತಿದ್ದ ಬಗ್ಗೆ ಎಲ್ಲವನ್ನೂ ಕಣ್ಣಿಗೆ ಕಟ್ಟಿದಂತೆ ತಿಳಿಸಿದ. ಈ ವಿಚಾರ ಮೂರು ನಾಲ್ಕು ದಿನಗಳ ನಂತರ ಖಚಿತವಾಗಿ ತಿಳಿಯಿತು. ಇಂಗ್ಲೆಂಡಿನ ಊರೊಂದರಲ್ಲಿ ಒಬ್ಬಾತನ ಹೆಂಡತಿ 1945 ನೇ ಇಸವಿ ನವೆಂಬರ್ 18 ರ ರಾತ್ರಿ ಯುದ್ಧಕ್ಕೆ ಹೋಗಿದ್ದ ತನ್ನ ಮಗ ಸತ್ತನೆಂದು ಗೋಳಾಡ ಹತ್ತಿದಳು. ಯಾರು ಎಷ್ಟು ಸಮಾಧಾನಪಡಿಸಿದರೂ ಆಕೆಯ ದುಃಖ ಶಮನವಾಗಲಿಲ್ಲ. ಆಕೆಗೆ ಹುಚ್ಚು ಹಿಡಿದಿದೆಯೆಂದು ಆಸ್ಪತ್ರೆಗೆ ಸೇರಿಸಿದರು. ಕೆಲವಾರು ದಿವಸಗಳಲ್ಲಿ ಯುದ್ಧರಂಗದಿಂದ ಅವರ ಮಗ ಸತ್ತನೆಂಬ ಸತ್ಯವಿಚಾರ ಟೆಲಿಗ್ರಾಂ ಮೂಲಕ ಬಂದು ತಲುಪಿತು. ಆಶ್ಚರ್ಯಕರ ಸಂಗತಿ ಎಂದರೆ ಆತನು ನವೆಂಬರ್ 17 ರಂದು ಹಠಾತ್ತಾಗಿ ತೀರಿಕೊಂಡಿದ್ದ. 18 ರಂದು ಈಕೆ ಗೋಳಾಟ ಪ್ರಾರಂಭವಾಯಿತು. ಇಂತಹ ಅನೇಕ ನಿದರ್ಶನಗಳು ವಿಶ್ವದಾದ್ಯಂತ ಸಿಗುತ್ತವೆ. ಭಾರತದಲ್ಲಂತೂ ವೇದ ಪುರಾಣಗಳ ಕಾಲದಿಂದಲೂ ಪ್ರತ್ಯಕ್ಷ ಪ್ರಮಾಣವಾಗಿ ಅನೇಕ ಉದಾಹರಣೆಗಳಿವೆ.

ಈ ಘಟನೆಗಳನ್ನೆಲ್ಲಾ ಪರಿಶೀಲಿಸಿದ ವಿಚಾರವಂತರು, ವಿದ್ಯಾವಂತರು, ವಿಜ್ಞಾನಿಗಳು ಯೋಚನೆ ಮಾಡಲು ಪ್ರಾರಂಭಿಸಿದರು. ಇವೆಲ್ಲವನ್ನು ಕಲ್ಪನೆಗಳೆಂದಾಗಲೀ, ಹುಚ್ಚರ ವರ್ತನೆಗಳೆಂದಾಗಲೀ ತಳ್ಳಿಹಾಕುವಂತಿರಲಿಲ್ಲ. 1884 ರಲ್ಲಿ ತತ್ವಶಾಸ್ತ್ರ ಮತ್ತು ಮನಶಾಸ್ತ್ರ ಪಂಡಿತನಾದ ವಿಲಿಯಂ ಜೇಮ್ಸ್ ಎಂಬುವನು ಈ ಬಗ್ಗೆ ಸಂಶೋಧನೆ ಮಾಡಲು ಅಮೆರಿಕಾದಲ್ಲಿ "ಅಭೌತಿಕ ಸಂಶೋಧನಾ ಸಂಸ್ಥೆ" ಸ್ಥಾಪಿಸಿದನು. ಸ್ಟಾನ್‌ಫರ್ಡ್ ಹಾಗೂ ಹಾರ್ವರ್ಡ ವಿಶ್ವವಿದ್ಯಾನಿಲಯಗಳಲ್ಲಿ ಈ ವಿಚಾರವಾಗಿ ಅಧ್ಯಯನ ಮಾಡಲು ಸೌಕರ್ಯ ಕಲ್ಪಿಸಿದರು, ಕೋಪನ್ ಹೇಗನ್‌ನಲ್ಲಿ ಅಭೌತಿಕ ಸಂಶೋಧಕರ ಮಹಾ ಸಮ್ಮೇಳನವನ್ನು ನಡೆಸಿ ತಮ್ಮ ತಮ್ಮ ಸಂಶೋಧನೆಗಳನ್ನು ಚರ್ಚಿಸಿದರು. 1927 ರಲ್ಲಿ ಅಮೆರಿಕಾದ ವಿಲಿಯಂ ಮೆಕ್ ಡೂಗಲ್ ಮತ್ತು ಜೆ. ಬಿ. ರೈನ್ ಎಂಬಿಬ್ಬರು ಮನ ಶಾಸ್ತ್ರಜ್ಞರು ಸಂಶೋಧನೆ ನಡೆಸಿ ಈ ಅಧ್ಯಯನಕ್ಕೆ ಶಾಸ್ತ್ರದ ಸ್ಥಾನ ಕಲ್ಪಿಸಿಕೊಟ್ಟರು. ಇವರು ಇಂತಹ ಅಭೌತಿಕ ಸಂಗತಿಗಳನ್ನು ಸಂಗ್ರಹಿಸಿ ಅಧ್ಯಯನ ಮಾಡಿ ವಿವರಗಳನ್ನು ಪರಿಶೀಲಿಸಿ ಪ್ರಕಟಿಸಿದರು. ನ್ಯೂಯಾರ್ಕಿನಲ್ಲಿ "ಪರಾಮಾನಸ ಪ್ರತಿಷ್ಠಾನ" (Parapsychology Foundation) ಎಂಬ ಸಂಸ್ಥೆಯನ್ನೇ ಸ್ಥಾಪಿಸಿದರು. ಮಾನಸ ಶಾಸ್ತ್ರದಲ್ಲಿ ಹೊಸದೃಷ್ಟಿ

ಮೂಡಿತು. ಮನಸ್ಸಿನ ಮೂಲಭೂತ ಪ್ರವೃತ್ತಿಗಳ ಹಾಗೂ ಮಾನವ ವ್ಯಕ್ತಿತ್ವದ ಬಗ್ಗೆ ಹೊಸ ಹೊಸ ವಿಚಾರ ಧಾರೆಗಳು ಬೆಳಕಿಗೆ ಬಂದವು. ಈಗ ಈ ವಿಚಾರದಲ್ಲಿ ಇಂಗ್ಲೆಂಡ್, ರಷ್ಯ, ಜರ್ಮನಿ, ನೆದರ್‌ಲ್ಯಾಂಡ್ಸ್ ಹಾಗೂ ಜೆಕೊಸ್ಲೋವಾಕಿಯಾ ಗಳಲ್ಲಿಯೂ ವಿಶೇಷ ಅಧ್ಯಯನ ಪರಿಶೋಧನೆ ನಡೆಯುತ್ತಿದೆ.

ಈಗ ಇಂದ್ರಿಯ ಗ್ರಾಹ್ಯ ಹಾಗೂ ಪ್ರಯೋಗಗಳಿಗೆ ಸಾಧ್ಯವಾದುದು ಮಾತ್ರ ಸತ್ಯವೆನ್ನುವ ನಿಲವು ಬದಲಾಗುತ್ತಿದೆ. ಅಧ್ಯಾತ್ಮ ಜೀವಿಗಳಿಗೆ ಈ ಜಗತ್ತು ಅನಿತ್ಯ, ಇಂದ್ರಿಯ ಗ್ರಾಹ್ಯ ವಿಷಯಗಳೆಲ್ಲವೂ ಭ್ರಮೆ. ಇಂತಹವರು ಅತೀಂದ್ರಿಯ ಸಾಮರ್ಥ್ಯ ಪಡೆದಿದ್ದರು. ಇವೆಲ್ಲವೂ ಸ್ವಚ್ಛ ಜೀವನದಿಂದ ಯೋಗಧ್ಯಾನಗಳಲ್ಲಿ ನಿರತರಾಗಿ ತಮ್ಮ ಮನಸ್ಸನ್ನು ತಪಸ್ಸಿನಲ್ಲಿ ಕೇಂದ್ರೀಕರಿಸಿದವರಿಗೆ ಅಂತಹ ಸಾಮರ್ಥ್ಯ ತಾನಾಗಿಯೇ ಲಭಿಸುತ್ತದೆ. ಮನಶಾಸ್ತ್ರಜ್ಞರೂ ಈ ಬಗ್ಗೆ ಅಧ್ಯಯನಮಾಡಿ ಇವೆಲ್ಲವೂ ಸಾಧ್ಯವೆಂಬುದರ ಬಗ್ಗೆ ಅರಿಯುತ್ತಿದ್ದಾರೆ. ಆಧ್ಯಾತ್ಮ ವಿಚಾರಗಳನೇಕವು ವೈಜ್ಞಾನಿಕ ಸಂಶೋಧನೆಯಲ್ಲಿ ನಿಜವೆಂದು ಗೊತ್ತಾಗುತ್ತಿದೆ.

ಪ್ರೊ॥ ಎಸ್. ಕೆ. ರಾಮಚಂದ್ರರಾವ್‌ರವರು ತಮ್ಮ ಅನುಭವದ ಹಿನ್ನೆಲೆಯಲ್ಲಿ ಈ ರೀತಿ ನುಡಿದಿದ್ದಾರೆ.

'ವಿಜ್ಞಾನವೆನ್ನುವುದು ಕೇವಲ ಒಂದು ಜ್ಞಾನ ಸಾಧನ" ಅದರ ಯೋಗ್ಯತೆಗೆ ತಕ್ಕಷ್ಟು, ಅದರ ಉಪಾಧಿಗಳಿಗೆ ಸಿಕ್ಕುವಷ್ಟು, ಅದರ ವ್ಯಾಪ್ತಿ ಇರುವಷ್ಟು ಮಾತ್ರ ವಿವರಗಳನ್ನು ಅದು ಗ್ರಹಿಸಬಲ್ಲದು, ಪಾತ್ರೆಯ ಗಾತ್ರದಷ್ಟು ನೀರನ್ನು ಅದರಲ್ಲಿ ತುಂಬಬಹುದು. ಆದರೆ ನದಿಯ ನೀರೆಲ್ಲಾ ಅಷ್ಟೇ ಎನ್ನಬಹುದೇ? ಅಳತೆಗೋಲು ಇದ್ದಂತೆ ಅಳತೆ ತಿಳಿಯುತ್ತದೆ. ಆದರೆ ಅಳತೆಗೆ ಅಳತೆಗೋಲನ್ನು ಅಳವಡಿಸಬೇಕಲ್ಲವೆ? ವಿಜ್ಞಾನ ಸದ್ಯದ ಪರಿಕರಗಳನ್ನು ಅವಲಂಬಿಸಿ ಪ್ರಪಂಚದ ವಿವರಗಳನ್ನು ತಿಳಿಯಲೆತ್ನಿಸುತ್ತದೆ. ಪರಿಕರಗಳ ಮಿತಿಯು ಜ್ಞಾನದ ಮಿತಿಯನ್ನು ನಿರ್ಧರಿಸುವುದು ಸಹಜ, ಅನಿವಾರ್ಯ. ಪರಿಕರಗಳ ನೆರವಿನಿಂದ ಒದಗಿದುದಷ್ಟೇ ಜ್ಞಾನ, ಅವುಗಳಿಗೆ ಮೀರಿದುದೆಲ್ಲಾ ಕಲ್ಪನೆ ಎನ್ನುವುದು ಸಲ್ಲದು" ಎಂಬುದಾಗಿ ವಿಜ್ಞಾನವೇ ಸರ್ವಸ್ವವೆನ್ನುವವರಿಗೆ ಕಿವಿ ಮಾತು ಹೇಳಿದ್ದಾರೆ. ಇದು ಎಲ್ಲರೂ ಒಪ್ಪಬಹುದಾದ ಅನುಭಾವಿಕ ವಿವರಣೆಯಲ್ಲವೆ?

# ಡಾ|| ಬಸವರಾಜ ರಾಜಗುರು : ಒಂದು ನೆನಪು

ಎಸ್. ವಿ. ಮನ್ನಾಚಾರ್, ವ್ಯವಸ್ಥಾಪಕರು, ಕನ್ನಡ ಸಾಹಿತ್ಯ ಪರಿಷತ್,
ಚಾಮರಾಜ ಪೇಟೆ, ಬೆಂಗಳೂರು - 560 018.

ಖ್ಯಾತ ಹಿಂದೂಸ್ತಾನಿ ಗಾಯಕ ರಸಋಷಿ, ಪ್ರತಿಭೆಯ ಅಪೂರ್ವ ಸಂಗಮ, ಕರ್ನಾಟಕ ಸಂಗೀತದಲ್ಲೂ ಪರಿಶ್ರಮವನ್ನು ಪಡೆದಿದ್ದ ಸ್ವರ ಸಾಮ್ರಾಜ್ಯದ ಮಹಾ ಸಾಮ್ರಾಟ; ಸಂಗೀತವನ್ನೇ ಜೀವ ಪ್ರೇಮವೆಂದು ನಂಬಿದ್ದ ಪಂಡಿತ ಬಸವರಾಜ ರಾಜಗುರು ಅವರು ದಿನಾಂಕ 22.7.91ರಂದು ನಿಧನರಾದರು. ಇದರಿಂದ ಕರ್ನಾಟಕದ ಮತ್ತೊಬ್ಬ ಖ್ಯಾತ ಸಂಗೀತಗಾರರು ಅಸ್ತಂಗತರಾದಂತಾಯಿತು.

ಸವಾಯಿ ಗಂಧರ್ವ, ಕುಮಾರ ಗಂಧರ್ವ, ಮಲ್ಲಿಕಾರ್ಜುನ ಮನ್ಸೂರ, ಭೀಮಸೇನ ಜೋಷಿ, ಗಂಗೂಬಾಯಿ ಹಾನಗಲ್, ಬಸವರಾಜ ಮನ್ಸೂರ ಮುಂತಾದ ಸಂಗೀತ ವಿದ್ವಾಂಸರನ್ನು ದೇಶಕ್ಕೆ ಕೊಟ್ಟ ಕೀರ್ತಿ ಧಾರವಾಡ ಜಿಲ್ಲೆಯದು. ಡಾ|| ಬಸವರಾಜ ರಾಜಗುರುಗಳು ಕೂಡ ಧಾರವಾಡ ಜಿಲ್ಲೆಯ ಕುಂದಗೋಳ ತಾಲ್ಲೂಕಿನ ಯಲಿವಾಳ ಗ್ರಾಮದಲ್ಲಿ 1920 ಆಗಸ್ಟ್ 20 ರಂದು ಜನಿಸಿದರು. ತಂದೆ ಮಹಂತಸ್ವಾಮಿ; ತಾಯಿ ರಾಚಮ್ಮ.

ತಂದೆ ಮಹಂತಸ್ವಾಮಿ ಹಾಗೂ ತಾತ ಸಿದ್ಧಯ್ಯಸ್ವಾಮಿರಾಜಗುರು ಅವರು ಕೂಡ ಕರ್ನಾಟಕ ಸಂಗೀತದಲ್ಲಿ ಸಾಕಷ್ಟು ಪರಿಶ್ರಮವನ್ನು ಹೊಂದಿದವರು. ಹೀಗೆ ಇವರ ಮನೆತನವೇ ಸಂಗೀತದಲ್ಲಿ ಪರಿಣತ ಮನೆತನ. ಸಂಗೀತದಲ್ಲಿ ಇವರಿಗೆ ತಂದೆಯೇ ಮೊದಲ ಗುರು. ಮನೆಯಲ್ಲೇ ತಂದೆಯಿಂದ ಕರ್ನಾಟಕ ಸಂಗೀತವನ್ನು ಅಭ್ಯಸಿಸಿದ ಬಸವರಾಜರು ತಮ್ಮ 10 ನೆಯ ವಯಸ್ಸಿನಲ್ಲೇ, ಅಂದಿನ ಖ್ಯಾತ ನಾಟಕ ಕಂಪನಿಯ ವಾಮನ ಮಾಸ್ತರರ ಹತ್ತಿರ ಸೇರಿಕೊಂಡರು. ಆಗಲೇ ಅಭಿಮಾನಿಗಳ ಹೃದಯವನ್ನೂ ಗೆದ್ದುಕೊಂಡಿದ್ದರು. ಬಸವರಾಜ ರಾಜಗುರು ಅವರ ಪೂರ್ವಜರು ಕೆಳದಿ ಅರಸರಿಗೆ ಸಂಗೀತದ ಗುರುಗಳಾಗಿದ್ದರೆಂದೂ ಅದ್ದರಿಂದಲೇ ಅವರಿಗೆ 'ರಾಜಗುರು' ಎಂದು ಹೆಸರು ಬಂದಿತೆಂದೂ ಮುಂದೆ ಅದೇ ಮನೆತನದ ಹೆಸರಾಯಿತೆಂದು ಹೇಳುವರು.

ಹುಬ್ಬಳ್ಳಿಯ ಮೂರುಸಾವಿರ ಮಠದಲ್ಲಿ ಸಂಸ್ಕೃತ ಅಭ್ಯಾಸವನ್ನು ಮಾಡಿದ ಇವರು ಹಿಂದೂಸ್ತಾನಿ ಸಂಗೀತದಲ್ಲಿ, ಕರ್ನಾಟಕದ ಕೀರ್ತಿಯನ್ನು ಗಗನದೆತ್ತರಕ್ಕೆ ಏರಿಸಿದ ಮಹಾನ್ ಗಾಯಕರಲ್ಲಿ ಬಸವರಾಜ ರಾಜಗುರು ಅವರೂ ಒಬ್ಬರು. 1930 ರಲ್ಲಿ ಗಾನಯೋಗಿ ಪಂಚಾಕ್ಷರಿ ಬುವಾ ಅವರು ಬಸವರಾಜ ರಾಜಗುರು ಅವರನ್ನು

ಹೇಳಬಹುದು. ಅಲ್ಲಿ ಅವರು ಹನ್ನೊಂದು ವರ್ಷಗಳ ಕಾಲ ಕರ್ನಾಟಕ ಸಂಗಿ
ಮತ್ತು ಹಿಂದೂಸ್ತಾನಿ ಸಂಗೀತವನ್ನು ಅಭ್ಯಸಿಸಿದರು. ಅದರೂ ಅವರ ಸಂಗೀ
ಕಲಿಕೆಯ ದಾಹ ತೀರಲಿಲ್ಲ. ಅಲ್ಲಿಂದ ಅವರು ನೀಲಕಂಠ ಬುವಾಮಿರಜಕರ್, ಸವಾ
ಗಂಧರ್ವ, ಸುರೇಶಬಾಬು ಮಾನೆ, ಮುಬಾರಕ್ ಅಲಿ, ಇನಾಯುತ್ತುಲ್ಲಾ ಖಾನ್, ರ
ಅಲಿ, ಗೋವಿಂದರಾವ್ ತಂಬೆ, ಲಾಹೋರ್‌ನ ಅಬ್ದುಲ್ ವಹೀದ್ ಮುಂತಾದ ಸ
ವಿಚಾರದಲ್ಲಿ ಸಂಗೀತಾಭ್ಯಾಸವನ್ನು ಮಾಡಿ ವಿವಿಧ ಚೀಜಗಳಲ್ಲಿ ವಿದ್ವತ್ತನ್ನು ಪಡೆ
ಕೊಂಡರು. ಇವರ ಗುರು ಪರಂಪರೆಯೇ ಇದೆ; ಅದು ಭಾರತ-ಪಾಕಿಸ್ತಾನಗಳೆರಡನ
ಆವರಿಸಿಕೊಂಡಿದೆ. ಈ ರಾಜಗುರುಗಳು ಕೆಳದಿಯಿಂದ ಲಾಹೋರ್ ಕರಾಚಿಯವರೆ
ಹೋಗಿ ಕಲಿತುಬಂದವರು.

ಬಸವರಾಜ ರಾಜಗುರು ಅವರ ಸಂಗೀತ ಪ್ರಕಾರವು ಎಂತಹವರನ್ನೂ ಬೆರ
ಗೊಳಿಸುವಂತಹವು. ವೈವಿಧ್ಯಕ್ಕೆ ಹೆಸರಾದ ರಾಜಗುರು ಅವರದು ಬಹುಶ್ರುತತ್ವ
ಕಳವಳ ಖ್ಯಾಲ್, ದ್ರುಪದ, ಧಮಾರ್, ತುಮರಿ, ಲಿಂಕ, ಕನ್ನಡ-ಮರಾಠಿ ನಾಟ್ಯಗೀತೆ
ಭಾವಗೀತೆಗಳು, ಭಜನೆ ವಚನಭಕ್ತಿ ಗೀತೆಗಳುಹಾಗೂ ಜನಪದ ಗೀತೆಗಳನ್ನು ಸುಶ
ವ್ಯವಾಗಿ ಶ್ರೋತೃಗಳ ಮನ ಮೆಚ್ಚುವಂತೆ ಹಾಡುತ್ತಿದ್ದರು. 'ಚೀಜಗಳ ಮಹ
ರಾಜ'ನೆಂದೇ ಹೆಸರಾದ ಇವರ ಸಂಗೀತ ಭಂಡಾರದಲ್ಲಿ ಹನ್ನೆರಡುಸಾವಿರ ಚೀಜಗಳ
ಎಲ್ಲದರಲ್ಲೂ ಡಾ|| ಬಸವರಾಜ ರಾಜಗುರು ಅವರದು ವಿಶಿಷ್ಟವಾದ ಹೆಜ್ಜೆಗುರುತ
ಈ ಎಲ್ಲ ಸಾಧನೆಯು ಒಂದೇ ಉಸುರಿಗೆ ಬಂದದ್ದಲ್ಲ; ಇದರ ಹಿಂದೆ ಅವರ 2
ವರ್ಷಗಳ ಸಾಧನೆಯಿದೆ ಎಂಬುದು ಗಮನಾರ್ಹ.

1936 ರಲ್ಲಿ ಹಂಪೆಯಲ್ಲಿ ಆಚರಿಸಿದ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ಆ
ನೆಯ ಶತಮಾನೋತ್ಸವ ಸಮಾರಂಭದ ಸಂದರ್ಭದಲ್ಲಿ ಮೊಟ್ಟ ಮೊದಲ ಬಾರಿ
ಇವರ ಪ್ರತಿಭೆಯ ಪ್ರದರ್ಶನವಾಯಿತು. ಆ ಸಮಾರಂಭದಲ್ಲಿ ಸುಮಾರು ಹದಿನೈ
ಸಾವಿರ ಶ್ರೋತೃಗಳು ಹಾಜರಿದ್ದು ಗಾಯನವನ್ನು ಆಲಿಸಿದರು. ಆಗಲೇ ಅವ
ಹಿಂದೂಸ್ತಾನಿ ಸಂಗೀತದ ಹಿರಿಯ ಗಾಯಕರ ಸಾಲಿಗೆ ಸೇರಿದ್ದು; ಮತ್ತೆಂದು
ಅವರು ಹಿಂದಿರುಗಿ ನೋಡಲಿಲ್ಲ. 18 ರಿಂದ 21 ನೆಯ ವಯಸ್ಸಿನ ಅವಧಿಯ
ಹಲವು ಧ್ವನಿ ಮುದ್ರಿಕೆಗಳನ್ನ ಹೊರತಂದರು ಶ್ಯಾಮ ಕಲ್ಯಾಣ, ದೇಶಿ, ಮಾಲಕಂ
ಮೇಘ, ಚಾಂದನಿ, ಕೇದಾರ, ಹಂಸಧ್ವನಿ – ಮುಂತಾದ ರಾಗಗಳನ್ನು ಇವ
ಬಾಯಿಂದ ಕೇಳುವುದು ರಸಿಕರಿಗೊಂದು ರಸದೌತಣ. ಬಸವರಾಜರ ಗಾಯನದ
ಕಿರಾನಾ, ಗ್ವಾಲಿಯರ ಹಾಗೂ ಪಾಟಿಯಾಲಾ ಘರಾನಾಗಳ ತ್ರಿವೇಣಿ ಸಂ
ಮವನ್ನು ಹಲವು ಸಂಗೀತ ವಿದ್ವಾಂಸರು ಗುರುತಿಸಿದ್ದಾರೆ,

ಬಸವಣ್ಣನವರ ಅನೇಕ ವಚನಗಳನ್ನು ರಾಗ-ಭಾವ ತುಂಬಿ ಹಾಡಿ ಮನೆ ಮಾತಾಗಿದ್ದಾರೆ. ಅವರು ಹಾಡಿದ ಜನಪ್ರಿಯ ವಚನಗಳು - 'ಅತ್ತಲಿತ್ತ ಹೋಗ ದಂತೆ, 'ಮಡಕೆಯ ಮಾಡುವರೆ' 'ಚಕೋರಂಗೆ ಚಂದ್ರಮನ', ವಚನದಲ್ಲಿ ನಾಮಾ ಮೃತ ತುಂಬಿ' ಮುಂತಾದವುಗಳು. ಬಸವಣ್ಣನವರ 'ಪರಚಿಂತೆ ಈಗ ಏಕೆ ಅಯ್ಯ'-ಎಂಬ ಹಾಡನ್ನು ಹಾಡಿ ಇವರು ಸಂಗೀತದ ಉಸಾಬರಿಯನ್ನುಳಿದು ಬೇರೆ ಯಾವ ಉಸಾಬರಿಗೂ ಹೋದವರಲ್ಲ.


ಅತ್ಯುತ್ತಮ ವಾಗ್ಮಿಗಳಾದ ಬಸವರಾಜ ರಾಜಗುರು ಅವರು ಮುಚ್ಚುಮರೆಯಿಲ್ಲದೆ, ತೆರೆದ-ಮನಸ್ಸಿನ, ಬಿಚ್ಚು ಹೃದಯದ ಮಾತುಗಾರರು. ಲಾಹೋರ್, ಅಮೃತಸರ, ದೆಹಲಿ, ಆಗ್ರಾ, ಗ್ವಾಲಿಯರ್-ಅಲ್ಲದೆ, ದೇಶದಾದ್ಯಂತ ಅಭಿಮಾನಿ ಶ್ರೋತೃಗಳನ್ನು ಹೊಂದಿದ್ದರು. ಇವರು ಹೋದೆಡೆಯಲ್ಲೆಲ್ಲ ಶಹಭಾಸುಗಿರಿಯನ್ನು ಪಡೆದುಕೊಂಡವರು. ಬಸವರಾಜ ರಾಜಗುರು ಅವರ ಸಂಗೀತವನ್ನು – ವಿನಯ್ ಕರ್ಾವ್, ಪಟವರ್ಧನ. ಹೀರಾಬಾಯಿ ಬಡೋಡ್‌ಕರ್, ಅಬ್ದುಲ್ ಕರೀಮಖಾನ್, ಸವಾಯಿ ಗಂಧರ್ವ - ಮುಂತಾದ ಅತಿರಥ-ಗಾಯಕರಿಂದ 'ಭಲೆ' ಎನ್ನಿಸಿಕೊಂಡ ಕನ್ನಡದ ಹೆಮ್ಮೆಯ ಸಂಗೀತ ಸಾಧಕರು.

ದೂರದರ್ಶನದ ರಾಷ್ಟ್ರೀಯ ಕಾರ್ಯಕ್ರಮದಲ್ಲಿ ಹದಿನೈದಕ್ಕೂ ಹೆಚ್ಚು ಬಾರಿ ಇವರ ಕಾರ್ಯಕ್ರಮಗಳು ಬಿತ್ತರಗೊಂಡಿವೆ ಅಲ್ಲದೆ ಮದರಾಸು, ಮುಂಬೈ, ದೂರದರ್ಶನ ಕೇಂದ್ರಗಳಲ್ಲೂ ಹಲವಾರು ಬಾರಿ ಕಾರ್ಯಕ್ರಮಗಳನ್ನು ಕೊಟ್ಟು ಖ್ಯಾತನಾಮರಾಗಿದ್ದಾರೆ. ಇವರೇ ಒಂದು ಕಡೆ ಹೇಳಿದಂತೆ "ಮರಾಠಿಯವರು ನನಗೆ ಹೆಚ್ಚು ಪ್ರೋತ್ಸಾಹವನ್ನು ನೀಡಿದರು", ಅಲ್ಲದೆ ಇವರು ಹಲವಾರು ಸಂಘ ಸಂಸ್ಥೆಗಳಲ್ಲಿ ಸೇವೆಯನ್ನು ಸಲ್ಲಿಸಿರುವರು. ಕರ್ನಾಟಕ ರಾಜ್ಯ ಸಂಗೀತ ಮತ್ತು ನಾಟಕ ಅಕಾಡೆಮಿ ಸದಸ್ಯರಾಗಿ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಗೌರವ ಪ್ರಾಧ್ಯಾಪಕರಾಗಿ ದುಡಿದಿದ್ದಾರೆ.

ಇವರು ಎಂದೂ ಪ್ರಶಸ್ತಿಗಾಗಿ ಹಾಡಿದವರಲ್ಲ: ಪ್ರಶಸ್ತಿಯನ್ನು ಬೆನ್ನುಹತ್ತಿ ಹೋದವರಲ್ಲ. ಇವರಿಗೆ ಸಂದ ಯಾವ ಪ್ರಶಸ್ತಿಯೂ ಹೆಚ್ಚಿನದೆನಿಸುವುದಿಲ್ಲ. ಆದರೆ ಇವರಿಗೆ ಬಂದ ಪ್ರಶಸ್ತಿಗಳು ಹಲವಾರು. ಭಾರತ ಸರ್ಕಾರವು ಈ ಸಂಗೀತ ಸಾಮ್ರಾಟನನ್ನು ಗೌರವಿಸಿ "ಪದ್ಮಶ್ರೀ" ಪ್ರಶಸ್ತಿಯನ್ನು ಪ್ರದಾನ ಮಾಡಿದೆ. ಕರ್ನಾಟಕ ವಿಶ್ವವಿದ್ಯಾಲಯವು ಗೌರವ ಡಾಕ್ಟರೇಟ್ ಪದವಿಯನ್ನು ನೀಡಿದೆ. 1982ರಲ್ಲಿ ಕೇಂದ್ರ ಸಂಗೀತ ನಾಟಕ ಅಕಾಡೆಮಿಯು ಪ್ರಶಸ್ತಿ ನೀಡಿ ಸನ್ಮಾನಿಸಿದೆ. ಹಲವಾರು ಸಂಘ ಸಂಸ್ಥೆಗಳು, ಮಠ ಮಾನ್ಯರುಗಳು ಇವರನ್ನು ಅಭಿನಂದಿಸಿ–ಸಂಗಿತ ರತ್ನ, ಸಂಗೀತ ಸುಧಾಕರ,

ಅಭಿನವ ಗಂಧರ್ವ, ಸ್ವರ ಸಾಮ್ರಾಜ್ಯದ ಮಹಾಸಾಮ್ರಾಟ ಎಂಬ ಬಿರುದುಗಳನ್ನು ನೀಡಿ ಗೌರವಿಸಿವೆ. ಹಿಂದೂಸ್ತಾನಿ ಸಂಗೀತದ ಹಾಡುಗಾರರ ರಾಷ್ಟ್ರೀಯ ಪ್ರಶಸ್ತಿಯೂ ಇವರಿಗೆ ದೊರೆತಿದೆ.

ಹಿಂದೂಸ್ಥಾನಿ ಸಂಗೀತ ಜಗತ್ತಿನ ಮಹಾನ್ ಪಂಡಿತ ಬೇಗಂ ಅಖ್ತರ್ ಅವರು ರಾಜಗುರು ಅವರನ್ನು 'ಸ್ವರ ಸಾಮ್ರಾಜ್ಯದ ಮಹಾಸಾಮ್ರಾಟ' (ಸೂರಕಾ ಬಾದಶಾಹ) ಎಂದು ಕರೆದಿದ್ದರು. ಆಗಿನ ಸಮಾಚಾರ ಮತ್ತು ಆಕಾಶವಾಣಿ ಮಂತ್ರಿ ಬಾಳಕೃಷ್ಣ ಕೇಸರರು ರಾಜಗುರು ಅವರನ್ನು 'ಹುಕುಮಿಯಕ್ಕಾ" ಎಂದು ಹೇಳಿದ್ದರು. ಆದರೆ ಈ ಸಾಮ್ರಾಟನ ಕೊನೆಯ ದಿನಗಳು ಕಠೋರವಾಗಿದ್ದವು. ವಿದೇಶದಲ್ಲಿ ಸಂಗೀತ ಕಾರ್ಯಕ್ರಮವನ್ನು ಏರ್ಪಡಿಸುವ ಸಲುವಾಗಿ ಬೆಂಗಳೂರಿಗೆ ಬಂದು ಅಲ್ಲೇ ನಿಧನರಾದರು. ಕನ್ನಡಿಗರು ತಮ್ಮನ್ನು ಪ್ರೋತ್ಸಾಹಿಸಲಿಲ್ಲ ಅನ್ನುವ ನೋವು ಕೊನೆಯವರೆಗೂ ನೋವಾಗೇ ಉಳಿಯಿತು. ಈ ನೋವಿನ ನಿವಾರಣೆಗಾಗಿಯಾದರೂ ಕರ್ನಾಟಕ ಸರ್ಕಾರವು ಧಾರವಾಡದಲ್ಲಿನ ಡಾ॥ ರಾಜಗುರು ಸಂಗೀತ ಸಭಾ ಸಂಸ್ಥೆಯನ್ನು ಅಂತರಾಷ್ಟ್ರೀಯ ಮಟ್ಟದ ಸಂಗೀತ ಅಧ್ಯಯನ ಕೇಂದ್ರವನ್ನಾಗಿ ಮಾಡಿ, ಕರ್ನಾಟಕಕ್ಕೆ ಹೆಮ್ಮೆಯನ್ನು ತಂದುಕೊಟ್ಟ ಈ ಸಂಗೀತ ಸಾಮ್ರಾಟನ ಹೆಸರನ್ನು ಶಾಶ್ವತವಾಗಿ ಉಳಿಯುವಂತೆ ಮಾಡಬೇಕು. ಬಸವರಾಜ ರಾಜಗುರು ಕರ್ನಾಟಕದವರು ಎನ್ನುವುದು ಕನ್ನಡಿಗರಿಗೆ, ಕರ್ನಾಟಕಕ್ಕೆ ಹೆಮ್ಮೆಯ ಕೋಡು ಮೂಡಿಸುವ ಸಂಗತಿ.



# ಕನ್ನಡ ಕಣ್ಮಣಿ ಡಾ|| ಎಂ. ಚಿದಾನಂದಮೂರ್ತಿ

ಕವಿತಾಕೃಷ್ಣ. ಅಧ್ಯಕ್ಷರು, ತುಮಕೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ತುಮಕೂರು.

ಕನ್ನಡ ಸಾಹಿತ್ಯ ರಚಿಸುತ್ತಾ ಮುನ್ನಡೆ ಸಾಧಿಸಿದವರು ಬಹಳ ಮಂದಿ. ಆದರೆ ಕನ್ನಡ ಕಟ್ಟುವ ಕಾರ್ಯದಲ್ಲಿ ಮುನ್ನಡೆ ಸಾಧಿಸಿದವರು ಬಹಳ ವಿರಳ. ಆದರೆ ಸಾಹಿತ್ಯ ಸೇವೆಯೊಂದಿಗೆ ಕನ್ನಡ ಕಟ್ಟುವ ಕಾರ್ಯದಲ್ಲಿ ತಮ್ಮನ್ನು ತಾವೇ ಸಮರ್ಪಿಸಿಕೊಂಡವರಲ್ಲಿ ಡಾ|| ಚಿದಾನಂದಮೂರ್ತಿ ಅವರು ಪ್ರಥಮವಾಗಿ ಕಾಣುತ್ತಾರೆ. ಎಂ.ಸಿ.ಎಂ, ಚಿ.ಮೂ ಮುಂತಾದ ಸಂಕ್ಷಿಪ್ತ ನಾಮಗಳಿಂದ ಕನ್ನಡನಾಡಿಗೆ ಚಿರಪರಿಚಿತರಾಗಿರುವ ಇವರು ನಾಲ್ಕು ದಶಕಗಳಿಂದಲೂ ಕನ್ನಡ ನಾಡು ನುಡಿ, ಗಡಿ, ಗುಡಿ, ನೆಲ, ಜಲಗಳ ಬಗ್ಗೆ ಜನ ಜಾಗೃತಿ ಮೂಡಿಸುತ್ತಾ ಬಂದು ಸಾಧಿಸಿದ ಓರ್ವ ದೊಡ್ಡ ವ್ಯಕ್ತಿಗಳೆನಿಸಿದ್ದಾರೆ. ಭಾಷಾಶಾಸ್ತ್ರದ ಬಗೆಗೆ, ಶಾಸನ ಶಾಸ್ತ್ರದ ಬಗೆಗೆ, ಸಾಹಿತ್ಯದ ಬಗೆಗೆ, ಸಂಶೋಧನೆ ಬಗೆಗೆ ಇವರು ಗೈದಿರುವ ಸೇವೆ ಅನಂತವಾದುದು, ಇನ್ನು ಕನ್ನಡ ಸಂಸ್ಕೃತಿಯ ಉಳಿವಿಗಾಗಿ ಗೈದ ಸೇವೆ, ಚಳವಳಿ ತುಂಬಾ ಗಮನಾರ್ಹವಾದುದು.

ಚಿ.ಮೂ. ಅವರು 1931ನೆಯ ಇಸವಿ ಮೇ ಮಾಹೆ 10ರಂದು ಶಿವಮೊಗ್ಗ ಜಿಲ್ಲೆಯ ಹಿರೇಕೋಗಲೂರಿನಲ್ಲಿ ಜನಿಸಿದರು. ತಂದೆ ಕೊಟ್ಟೇರಯ್ಯ, ತಾಯಿ ಪಾರ್ವತಮ್ಮ, ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಸಂಶೋಧನ ಕ್ಷೇತ್ರದಲ್ಲಿ ಇವರದು ದೊಡ್ಡ ಹೆಸರು. ೨೦೦ಕ್ಕೂ ಹೆಚ್ಚಿನ ಅಮೂಲ್ಯವಾದ ಸಂಶೋಧನ ಲೇಖನಗಳನ್ನು ಬರೆದಿದ್ದಾರೆ. ಭಾಷಾವಿಜ್ಞಾನ, ಶಾಸನ ಶಾಸ್ತ್ರ, ಸಂಸ್ಕೃತಿ ಕ್ಷೇತ್ರಗಳಿಗೆ ಇವರು ಕೊಟ್ಟಿರುವ ಕೊಡುಗೆ ಅತ್ಯಮೂಲ್ಯವಾದದ್ದು. ಇವರ ಸಂಶೋಧನ ತರಂಗ, ಪೂರ್ಣ ಸೂರ್ಯಗ್ರಹಣ ಕೃತಿಗಳಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭ್ಯವಾಗಿದೆ. ಭಾಷಾವಿಜ್ಞಾನದ ಮೂಲತತ್ವಗಳು ಎಂಬ ಕೃತಿಯಾಗಿದ್ದು ದೇವರಾಜ ಬಹದ್ದೂರು ಪ್ರಶಸ್ತಿ ಲಭಿಸಿವೆ.

ಚಿ ಮೂ ಅವರು 'ಮಾತು ಮಿತವಾಗಿರಬೇಕು. ಕಾರ್ಯ ಉಗ್ರವಾಗಿರಬೇಕು' ಎಂಬವಾಣಿಗೆ ಉದಾಹರಣೆಯಂತಿದ್ದಾರೆ. ಕನ್ನಡ ನಾಡು - ನುಡಿಗೆ ಆಡಿಗಡಿಗೆ ಪೆಟ್ಟು ಬೀಳುತ್ತಿರುವುದನ್ನು ಕಂಡು ಕೇವಲ ವಿಷಾದ ವ್ಯಕ್ತಪಡಿಸದೆ, ಪರಿಹಾರ ಕಂಡು ಹಿಡಿಯಲು ಜಾಗೃತವಾದ ಚಿಕಿತ್ಸಕ ಬುದ್ಧಿ ಅವರದಾಗಿದೆ. ಬೀದರ್‌ನ ಜನತೆಗೆ ಪಂಜಾಬಿ ವಿದ್ಯಾರ್ಥಿಗಳಿಂದ ಆಗುತ್ತಿದ್ದ ಅನ್ಯಾಯವನ್ನು ಸ್ವಯಂ ಪರಿಶೀಲಿಸಿ, ಕಿಡಿಕಾರಿದ ಮೊದಲ ಸಾಹಿತಿ ಇವರು. ಅಲ್ಲಿನ ಅನ್ಯಾಯವನ್ನು ನಿರ್ಭೀತಿಯಿಂದ ಬಯಲಿಗೆಳೆದ ಸುಹಾನ್ ಧೀರ. ಪ್ರತಿಯಾಗಿ ಬಾಂಬ್ ಹಾಕಿ ಕುಟುಂಬ ನಾಶಪ

ಡಿಸುವ ಬೆದರಿಕೆ ಪತ್ರ ಬಂದಾಗ ಹೆದರದೆ, ಕರ್ತವ್ಯ ಭ್ರಷ್ಟರಾಗದೆ ಅವರು ತೋರಿದ ಧೈರ್ಯ ಅಸಾಧಾರಣವಾದುದು. ಕನ್ನಡನಾಡಿನಲ್ಲಿ ಕನ್ನಡಿಗರು ನಿರುದ್ಯೋಗಿಗಳಾಗುತ್ತಿರುವುದನ್ನು ಕಂಡು ಸರೋಜಿನಿ ಮಹಿಷಿ ವರದಿಯನ್ನು ಯಥಾವತ್ತಾಗಿ ಜಾರಿಗೊಳಿಸಬೇಕೆಂದು ಹೋರಾಡಿದ ಅವರ ಕಳಕಳಿ ಅನುಕರಣೀಯ ಅಪೇಕ್ಷಣೀಯ.

ಗೋಕಾಕ್ ಚಳುವಳಿ ಕಾಲದಲ್ಲಿ ಪ್ರಧಾನ ಪಾತ್ರವಹಿಸಿದ ಚಿ.ಮೂ. ಅವರ ಎದೆಗಾರಿಕೆ ಮೆಚ್ಚುವಂತದು. ಕನ್ನಡ ಚಳುವಳಿಯಲ್ಲಿ ತಮ್ಮನ್ನು ತಾವು ಸಂಪೂರ್ಣವಾಗಿ ತೊಡಗಿಸಿಕೊಂಡು ಶವನಿದ್ದೆಯಲ್ಲಿರುವ ಕನ್ನಡಿಗರನ್ನು ಅವರು ಎಚ್ಚರಗೊಳಿಸಿದ ರೀತಿ, ಪ್ರಾಚೀನ ಕನ್ನಡ ಸಂಸ್ಕೃತಿಯನ್ನು ಪರಿಚಯ ಮಾಡಿಕೊಟ್ಟ ರೀತಿ ಸುವರ್ಣಾಕ್ಷರಗಳಲ್ಲಿ ಬರೆದಿಡುವಂತದ್ದು. ಕನ್ನಡ ಶಕ್ತಿ ಕೇಂದ್ರವನ್ನು ಪ್ರಾರಂಭಿಸಿ ತನ್ಮೂಲಕ ಅವರು ಕನ್ನಡಿಗರನ್ನು ಜಾಗೃತಗೊಳಿಸಿದ ತ್ರಿವಿಕ್ರಮ ಶಕ್ತಿ ಬೆಕ್ಕಸಬೆರಗಾಗಿಸುವಂತದ್ದು. ಅವರ ಈ ಸದ್ಗುಣ, ಕನ್ನಡ ಪ್ರೇಮ, ಕನ್ನಡ ಕಟ್ಟುವ ಕಾರ್ಯಕ್ಕೆ ಕನ್ನಡದ ಅಸಂಖ್ಯಾತ ಕವಿಗಳೆಲ್ಲರೂ ದನಿಗೂಡಿಸಿದಲ್ಲಿ ಇರುವ ಸಮಸ್ಯೆಗಳೆಲ್ಲಾ ಒಂದೇ ಕ್ಷಣದಲ್ಲಿ ಪರಿಹಾರವಾಗುವ ಕಾಲ ದೂರವಿರುವುದಿಲ್ಲ.

ಚಿದಾನಂದ ಮೂರ್ತಿ ಪ್ರತಿಭಾ ಸಂಪನ್ನರು. ಅವರ ವೀರಗಲ್ಲು, ಮಾಸ್ತಿಗಲ್ಲು ವಾಗರ್ಥ, ಗ್ರಾಮೀಣ, ಬಸವಣ್ಣ, ಮಧ್ಯಕಾಲಿನ ಕನ್ನಡ ಸಾಹಿತ್ಯ ಮತ್ತು ಅದರ ಅಸ್ಪೃಶ್ಯತೆ, ವಚನಸಾಹಿತ್ಯ ಈ ಮುಂತಾದ ಕೃತಿಗಳು ಮೌಲ್ಯಯುತ ಕೃತಿಗಳಾಗಿ, ಹಿರಿಯ ಕೊಡುಗೆಗಳಾಗಿವೆ. ಸ್ಟಾನ್‌ಫೋರ್ಡ್‌ನಲ್ಲಿ ವಿಶ್ವ ವಿದ್ಯಾನಿಲಯದಲ್ಲಿ ಜರುಗಿದ ೧ನೇ ಅಂತರಾಷ್ಟ್ರೀಯ ಐತಿಹಾಸಿಕ ಭಾಷಾ ವಿಜ್ಞಾನ ಸಮ್ಮೇಳನ ಅಧ್ಯಕ್ಷತೆ ವಹಿಸಿದ ಕೀರ್ತಿ ಇವರದಾಗಿ ೧೯೮೩-೮೪ ರಲ್ಲಿ ತಿರುವನಂತಪುರ ದ್ರಾವಿಡ ಭಾಷಾವಿಜ್ಞಾನ ಸಂಸ್ಥೆಯ ಅಧ್ಯಕ್ಷರಾದರು. ೧೯೮೧ ರಲ್ಲಿ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಇತ್ತು ಪುರಸ್ಕರಿಸಿವೆ.

ಶ್ರೀಯುತರು ಕರ್ನಾಟಕದ ಬಗ್ಗೆ ಅಧಿಕೃತವಾಗಿ ಮಾತನಾಡಬಲ್ಲ ಆಕಾರ ವ್ಯಕ್ತಿಯಾಗಿದ್ದಾರೆ. ಯಾವ ಚಾರಿತ್ರಿಕ ಅಂಶಗಳನ್ನು ನಿಂತಲ್ಲಿಯೇ ವಿವರವಾಗಿ ಹೇಳಬಲ್ಲರು. ಅವರಿಗಿರುವ ಕನ್ನಡ ಪ್ರೇಮ ಬೆಲೆ ಕಟ್ಟಲಾಗದಂತದ್ದು. ಕನ್ನಡಿಗರು ಕನ್ನಡ ಸಂಸ್ಕೃತಿಯಿಂದ, ಕನ್ನಡ ಭಾಷೆಯಿಂದ ದೂರಾಗುತ್ತಿರುವುದು ಕಂಡು ಚಿ.ಮೂ. ತುಂಬಾನೊಂದಿದ್ದಾರೆ. ಈ ಬಗ್ಗೆ ಸರ್ಕಾರದ ಅನಾದರ ಕಂಡು ಕನ್ನಡ ಪ್ರೇಮಿಗಳಿಗೆ ಹೆಮ್ಮೆಯಾಗದಿರದು. ನಾಡಿನ ಕಣ್ಮಣಿಯಂತಿರುವ ಚಿ ಮೂ. ಅವರಿಗೆ ೬೦ ವಸಂತಗಳು. ಅಭಿಮಾನಿಗಳು ಗೌರವಿಸಿ ದೊಡ್ಡತನ ತೋರಿದ್ದಾರೆ. ಈ ಶುಭ ಸಂದರ್ಭದಲ್ಲಿ ಕನ್ನಡ ಕಣ್ಮಣಿ ಚಿದಾನಂದ ಮೂರ್ತಿಗಳಿಗೆ ಹಾರ್ದಿಕ ಶುಭಾಶಯಗಳು.

# ಹಲವು ಕೈಗಾರಿಕೆಗಳಿಗೆ ಗ್ಲಿಸರಿನ್

ಪ. ರಾಮಕೃಷ್ಣ ಶಾಸ್ತ್ರಿ, ಶಿವಶಕ್ತಿ ನಿಲಯ, ಮಚ್ಚಿನ – 574 295, ದಕ್ಷಿಣ ಕನ್ನಡ

ಪ್ರಾಣಿ ಮತ್ತು ಸಸ್ಯಗಳಲ್ಲಿರುವ ಮೇದಸ್ಸನ್ನು ಪ್ರತ್ಯಾಮ್ಲಗಳೊಂದಿಗೆ ರಾಸಾಯನಿಕ ಕ್ರಿಯೆಗೊಳಪಡಿಸಿ, ಕಡಾಯಿಯಲ್ಲಿ ತುಂಬಿಸಿ ಉರಿಯ ಮೇಲಿಟ್ಟು ಕಲಕುವಾಗ ಕೆಳಪದರದಲ್ಲಿ ಸಾಬೂನು ಮತ್ತು ಮೇಲ್ಪದರದಲ್ಲಿ ಶೇ. ೧೦ ಅಂಶ ದ್ರವರೂಪಿ ರಾಸಾಯಿನಿಕವೊಂದು ತೇಲುತ್ತದೆ. ಇದಕ್ಕೆ ವಾಸನೆ ಇಲ್ಲ; ಬಣ್ಣವೂ ಇಲ್ಲ. ಆದರೆ ಸಕ್ಕರೆಗಿಂತ ಸಿಹಿ, ರುಚಿಯಿರುವಕಾರಣ ಗ್ರೀಕ್ ವಿಜ್ಞಾನಿ ಮೈಕೆಲ್ ಚರ್ವಲ್ ಅದನ್ನು ಗ್ಲೈಕಸ್ ಎಂದು ಕರೆದ. ಈ ಹೆಸರಿನ ಅರ್ಥ ಸಿಹಿ ಎಂದು. ಈ ರಸಾಯನಿಕವನ್ನು ವಿಜ್ಞಾನಿ ಕಾರ್ಲ್‌ವಿಲ್‌ಲ್ಮ್ ಶೀಲೆ ಅದಕ್ಕೆ ಒಲುಷನ್ ಎಂದು ಹೆಸರಿಸಿದ. ಮುಂದೆ ಆ ಹೆಸರು ಗ್ಲಿಸರಿನ್ ಎಂದು ಬದಲಾಯಿತು.

ದ್ರವರೂಪದ ಗ್ಲಿಸರೀನ್ ಮದ್ಯಸಾರ ಮತ್ತು ನೀರಿನೊಂದಿಗೆ ಎಲ್ಲಾ ರೂಪದಲ್ಲೂ ಸೇರುವುದಾದರೂ ಅತ್ಯಲ್ಪ ಉಷ್ಣದಲ್ಲೂ ಸಕ್ಕರೆ ಹರಳಿನಂತೆ ಗಟ್ಟಿಯಾಗುತ್ತದೆ. ಪೆಟ್ರೋಲಿಯಂ ಕೈಗಾರಿಕೆಗಳಲ್ಲಿ ಸಿಗುವ ರಾಸಾಯನಿಕ ಪದಾರ್ಥದಿಂದ ಗ್ಲಿಸರಿನ್ ಉತ್ಪಾದಿಸಲು ಅಮೇರಿಕಾ ೪ ದಶಕಗಳ ಹಿಂದೆ ಶೋಧಿಸಿತು. ೧೮೫೮ ರಲ್ಲಿ ಲೂಯಿ ಪಾಶ್ಚರ್ ತೋರಿಸಿಕೊಟ್ಟ ಪ್ರಕಾರ ಹುಳಿಬಂದ ಮಧ್ಯದಿಂದ ಜರ್ಮನ್‌ರು ಗ್ಲಿಸರಿನ್ ತೆಗೆಯಲಾರಂಭಿಸಿದರು. ಸಕ್ಕರೆ ಮತ್ತು ಪಿಷ್ಟಗಳನ್ನು ಹುಳಿಬರಿಸಿ ಆ ದ್ರಾವಕದಿಂದಲೂ ಇದನ್ನೂ ಪಡೆಯಲಾಗುತ್ತದೆ.

ಹೀಗೆ ಪಡೆಯುವ ಗ್ಲಿಸರಿನ್ ೫೦ ಕ್ಕಿಂತ ಹೆಚ್ಚಿನ ಕೈಗಾರಿಕೆಗಳಲ್ಲಿ ಬಳಸಲ್ಪಡುತ್ತಿದೆ. ಹರಳೆಣ್ಣೆಯಂತೆ ಜಿಡ್ಡಾಗಿರುವ ಇದನ್ನು ಗಾಳಿಗೆ ತೆರೆದಿಟ್ಟರೆ ಜಲಾಂಶವನ್ನು ಹೀರಿಕೊಳ್ಳುವುದು. ಚರ್ಮದ ಮೇಲೆ ಲೇಪಿಸಿದರೆ ಬಿಸಿಯಾದ ಅನುಭವ ನೀಡಿ ಜೀವಕೋಶಗಳ ನೀರನ್ನು ಹೀರಿಕೊಳ್ಳುವುದಲ್ಲದೆ ಚರ್ಮದ ಉರಿಯನ್ನು ತಗ್ಗಿಸಿ ಚಳಿಗಾಲದಲ್ಲಿ ಒಡೆಯದಂತೆ ರಕ್ಷಿಸುವುದು. ಆದ್ದರಿಂದ ವ್ಯಾಸಲೀನ್ ತಯಾರಿಕೆಯಲ್ಲಿ ಗ್ಲಿಸರಿನ್ ಅಗತ್ಯ. ಮುಖಕಾಂತಿ ಹೆಚ್ಚಿಸಿ, ಚರ್ಮದ ಮೊಡವೆ, ಇನ್ನಿತರ ಕಜ್ಜಿಕಲೆಗಳನ್ನು ಮಾಯವಾಗಿಸಿ ಚರ್ಮವನ್ನು ಕೋಮಲವಾಗಿರಿಸುವ ಲೇಪನಗಳಲ್ಲೂ ಇದನ್ನು ಬೆರೆಸುತ್ತಾರೆ. ಗ್ಲಿಸರಿನ್ ಬೆರೆತ ನೀರಿನಲ್ಲಿ ಬಾಯಿ ಮುಕ್ಕಳಿಸಿದರೆ ಶರೀರಕ್ಕೂ ಆರೋಗ್ಯಕರ. ಅದರೆ ಲೇಪನದಿಂದ ಸೊಳ್ಳೆಗಳನ್ನು ದೂರವಿಡಬಹುದು. ಕಾಲು, ಕೈಗಳ ಸಿಡಿತಕ್ಕೆ ಇದರಿಂದ ಮಾಲೀಸು ಮಾಡಬಹುದು. ಬಾಯಿಯ ಹುಣ್ಣುಗಳನ್ನೂ ನಿವಾರಿಸಬಹುದು.

ವಿಷಿಷ್ಟ ಪ್ರಸಂಗದಲ್ಲಿ ದೇಹದ ಒಳ ಮತ್ತು ಹೊರಗೆ ಬಳಸುವ ಅನೇಕ ಮದ್ದು ಗಳಿಗೆ ಗ್ಲಿಸರಿನ್ ಬಳಕೆಯಾಗುತ್ತದೆ. ಸಿರಪ್, ಮಾತ್ರೆಗಳು, ಟಾನಿಕ್, ಮುಲಾಮು ಕಣ್ಣು ಕಿವಿಗಳಿಗೆ ಹಾಕುವ ಲೋಷನುಗಳು ಗ್ಲಿಸರಿನ್ ಯುಕ್ತವಾಗಿವೆ. ನೀರಿನಲ್ಲಿ ಕರಗದ ಲೋಹಯುಕ್ತ ಸಾಬೂನು ಗ್ಲಿಸರಿನ್‌ನಲ್ಲಿ ಕರಗುವಂತೆ, ಟಿಂಕ್ಚರಿನಂತಹ ರಾಸಾಯನಿಕಗಳ ತಯಾರಿಕೆಗೆ ಅದೊಂದು ದ್ರಾವಕವೂ ಆಗಿದೆ. ಹಲ್ಲಿನ ಮತ್ತು ಶಸ್ತ್ರಚಿಕಿತ್ಸೆಯ ಗಾಯದ ಸೂಕ್ಷ್ಮ ರೋಗಾಣು ನಿವಾರಣೆಯಲ್ಲಿ ಗ್ಲಿಸರಿನ್ ಪಾತ್ರ ವಿದೆ. ಉಬ್ಬಸ, ಮೂತ್ರಪಿಂಡದ ಖಾಯಿಲೆಗಳಲ್ಲಿ ಗುಣಕಾರಿಯೆನಿಸಿದ ಅದು ಕ್ಷಯ ರೋಗ ಮತ್ತು ಸಿಡುಬಿನ ಚುಚ್ಚುಮದ್ದುಗಳಿಗೆ ಸೇರ್ಪಡೆಯಾಗುತ್ತದೆ. ಸ್ತ್ರೀಯರ ಲೈಂಗಿಕ ವ್ಯಾಧಿಗಳ ಚಿಕಿತ್ಸೆಗೂ ಕೆಲವೊಮ್ಮೆ ಅದನ್ನು ಬಳಸುವುದಿದೆ. ಮಲವಿಸ ರ್ಜನೆಯಾಗದ ಮಕ್ಕಳ ಗುದದ್ವಾರಕ್ಕೆ ತುರುಕಿಸುವ ಬತ್ತಿಗಳಲ್ಲಿ ಗ್ಲಿಸರಿನ್ ಲೇಪ ನವಿದೆ. ಕುದಿಹಿಟ್ಟಿನೊಂದಿಗೆ ಗ್ಲಿಸರಿನ್ ಬೆರಸಿ ಲೇಪಿಸಿದರೆ ಕುರುಗಳು ಒಡೆಯುತ್ತವೆ ತಲೆಹೊಟ್ಟಿನಿಂದಾಗಿ ಕೂದಲು ಉದುರುತ್ತಿದ್ದರೆ ಗ್ಲಿಸರಿನ್ ತಡೆಯುವುದು. ಪಾರದ- ರ್ಶಕವಾದ ಹಲವು ಸೋಪುಗಳು ಗ್ಲಿಸರಿನ್ ಯುಕ್ತವಾಗಿವೆ. ಹೂವುಗಳಿಂದ ಕಂಪನ ತೈಲ ತೆಗೆಯಲು ಗ್ಲಿಸರಿನ್ ಬೇಕಾದಂತೆ ಶೃಂಗಾರ ಪ್ರಧಾನಗಳು, ಹಲ್ಲಿನಪೇಸ್ಟ್ ಗಳು, ಸಿಗರೇಟು, ಚುಟ್ಟ, ವೀಳ್ಯದೊಂದಿಗೆ ತಿನ್ನುವ ತಂಬಾಕುಗಳಿಗೂ ಅಗತ್ಯವಾ ಗಿದೆ. ಸಿಂಧೂರದೊಂದಿಗೆ ಅದನ್ನು ಬೆರೆಸಿದಾಗ ಕಾಂಕ್ರೀಟಿನಂತಹ ಘನವಸ್ತು ವಾಗಿ ಗೋಡೆಯ ಸಂದುಗಳನ್ನು ಅದರಿಂದ ಮುಚ್ಚಬಹುದು. ಕೈಗಾರಿಕಾ ಕ್ಷೇತ್ರಕ್ಕೆ ವರದಾನವೆನಿಸಿದ ಗ್ಲಿಸರಿನ್‌ನಿಂದ ನಾನಾಬಗೆಯ ಅಂಟುಗಳು, ಬಣ್ಣಗಳು ವಾರ್ನಿ ಷುಗಳು ತಯಾರಾಗುತ್ತವೆ.

ರಬ್ಬರು ಕಾರ್ಖಾನೆಗಳ ಪ್ರೊಟೆಕ್ಟಿವ್ಸ್‌ಗಳ ತಯಾರಿಕೆ, ಬೇಕಾದ ರೀತಿಯಲ್ಲಿ ಚರ್ಮ ಹದ ಮಾಡಲು, ಲೋಹದ ಕೈಗಾರಿಕೆಗಳಲ್ಲಿ ಬೆಸುಗೆ ಮತ್ತು ಪಾಲಿಷು ಕೆಲಸಕ್ಕೆ ಗ್ಲಿಸರಿನ್ ಬೇಕೇ ಬೇಕು. ಪೊಟಾಷಿಯಂ ಪರಮಾಂಗನೇಟಿನೊಂದಿಗೆ ಗ್ಲಿಸರಿನ್ ಬೆರೆತರೆ ತಕ್ಷಣ ಬೆಂಕಿ ಉತ್ಪನ್ನವಾಗುವುದರಿಂದಾಗಿ ಒಂದು ವಿಧದಸ್ಫೋಟಕ ಮದ್ದು ಕೂಡ ಇದರಿಂದ ತಯಾರಾಗುವುದು. ಹಲವು ಉಷ್ಣವಾಹಕಗಳ ನಿರ್ಮಾಣಕ್ಕೆ ಗ್ಲಿಸರಿನ್ ಅಗತ್ಯವಾದಂತೆ ಪ್ರಯೋಗಾಲಯಗಳಲ್ಲಿ ಕೆಂಪು ರಕ್ತಕಣಗಳನ್ನು ಪ್ರತ್ಯೇಕಿಸಲೂ ಬೇಕಾಗುತ್ತದೆ.

ಜಲಾಂಶವನ್ನು ಹೀರಿಕೊಳ್ಳಬಲ್ಲ ಗ್ಲಿಸರಿನನ್ನು ಬಟ್ಟೆ ನೆಯ್ಯುವ ನೂಲಿಗೆ ಲೇಪಿಸುತ್ತಾರೆ. ಆದರಿಂದ ನೂಲು ಮೆದುವಾಗಿ ಕಡಿಮೆ ಘರ್ಷಣೆಯಿಂದ ಹೆಚ್ಚಿನ ಚಲನೆಯ ಸೌಲಭ್ಯ ಪಡೆಯಬಲ್ಲುದೆಂದೇ ಹತ್ತಿ ಗಿರಣಿಗಳಲ್ಲಿ ಗ್ಲಿಸರಿನ್‌ಗೆ ಪ್ರಾಧಾ ನ್ಯತೆ ಸೆಲ್ಯುಲೋಸ್ ಪದಾರ್ಥಗಳ ತಯಾರಿಕೆಯಲ್ಲಿ ಅದಕ್ಕೊಂದು ರೂಪ ಬರುವುದು

ವಿವರಿಂದಲೇ. ಸ್ಟೈಯಿನಲೆಸ್ ಸ್ಟೀಲಿನ ಪರಿಕರಗಳಿಗೆ ಹೊಳಪಿನ ಮುಲಾಮು ಲೇಪನ ವಿದ್ಯುಚ್ಛಕ್ತಿಯಿಂದ ನಡೆಯುವುದಾದರೂ ಆಗ ಗ್ಲಿಸರಿನ್ ಲೇಪನ ಅನಿವಾರ್ಯ

ಹಾಲಿನಿಂದ ತಯಾರಿಸುವ ಐಸ್‌ಕ್ರೀಮಿನಂಥ ತಿನಿಸುಗಳ ರುಚಿ ಹೆಚ್ಚಿಸಿ ಬಹುಕಾಲ ಉಳಿಯುವಂತೆ ಮಾಡುವ ಗ್ಲಿಸರೀನ್ ಹಣ್ಣು ಮಾಂಸಗಳನ್ನು ಕೂಡ ದೀರ್ಘಕಾಲ ಸುರಕ್ಷಿತವಾಗಿರಿಸುತ್ತದೆ. ನಾನಾ ಕೈಗಾರಿಕೆಗಳಲ್ಲಿ ಅದರ ಪಾತ್ರವು ಹಿರಿದು ಅನಿವಾರ್ಯವೂ ನಿಜ.

೧೯೩೭ ರ ವರೆಗೆ ಭಾರತದಲ್ಲಿ ಸಾಬೂನು ಕಾರ್ಖಾನೆಗಳಲ್ಲಿ ಗ್ಲಿಸರಿನ್ ಸಿಗುತ್ತಿದ್ದರೂ ಅದನ್ನು ತೆಗೆಯುವ ವಿಧಾನ ತಿಳಿಯದೆ ನಷ್ಟವಾಗುತ್ತಿತ್ತು. ಅಗತ್ಯವಾದ ಗ್ಲಿಸರಿನ್ನನ್ನು ಇಂಗ್ಲೆಂಡಿನಿಂದ ತರಿಸಲಾಗುತ್ತಿತ್ತು. ಮೊದಲನೆಯ ಮಹಾಯುದ್ಧದ ಕಾಲದಲ್ಲಿ ಸರ್ದೇಸಾಯಿ ಕಂಪನಿ ಅದನ್ನು ಉತ್ಪಾದಿಸಿದರು. ಆದರೆ ಅದರ ಶುದ್ಧೀಕರಣದ ಉಪಕರಣಗಳು ನಮ್ಮಲ್ಲಿಲ್ಲದೆ ವಿದೇಶಕ್ಕೆ ಕಳುಹಿಸಬೇಕಾಗಿತ್ತು. ೧೯೩೭ ರಲ್ಲಿ ಮುಂಬೈಯಲ್ಲಿ ಪರಿಶುದ್ಧ ಗ್ಲಿಸರಿನ್ ಶೋಧನಾಗಾರ ತಲೆಯೆತ್ತಿದ ಮೇಲೆ ಆ ತೊಂದರೆ ತಪ್ಪಿತು. ಬೇರೆಕಡೆಯ ಕಾರ್ಖಾನೆಗಳಲ್ಲೂ ಅದನ್ನು ಶುದ್ಧೀಕರಿಸಿ, ಶೀಸೆ ಮತ್ತು ಡ್ರಮ್ಮುಗಳಿಗೆ ತುಂಬಿಸಿ ಬೇಕಾದಲ್ಲಿಗೆ ಕಳುಹಿಸುವ ಶೋಧಾನಾಗಾರ ಸ್ಥಾಪಿತವಾಗಿ ದೇಶ ಅದರಲ್ಲಿ ಸ್ವಾವಲಂಬಿಯಾಯಿತು.

ಪೆಟ್ರೋಲಿಯ ಕೈಗಾರಿಕೆಗಳಲ್ಲಿ ಸಿಗುವ ಪ್ರೊಪೇಲಿನ್ ರಾಸಾಯನಿಕದಿಂದ ಲಭಿಸುವ ಗ್ಲಿಸರಿನ್ ಅಮೇರಿಕದಲ್ಲಿ ಜನಪ್ರಿಯವಾಗಿದೆ.

---

ಅಟವೀಶಚರಿತ

ಕಂದ॥ ಮನವೊಲಿದು ಭಕ್ತಜನಮುದು।
ದಿನದಿನವತಿ ದೂರಮಾದ ದೇಶಗಳಿಂದಂ॥
ತನತನಗೈದರಲಾದುದು।
ಘನ ಗುರುವಿನ ಮಹಿಮೆಯಂತೋ ಕಾಂಬರದಾರೋ॥
ನಾನಾವ್ಯಾಧಿಗಳಿಂದತಿ
ನಾನಾ ಗ್ರಹಭೀತಿಗಳೊಳು ನರಳುವರನಿಶಂ॥
ನಾನಾ ಚಿಂತೆಯೊಳಾಳ್ದರು
ನಾನಾ ದಿಕ್ಕಿನನೊಳು ಕೂಡಿ ನಡೆತರುತಿರ್ದರ್॥

COMFORTABLE
LUXURIOUS &
PEACEFUL
**STAY**
**AT**

# KENCHAMBA LODGE



SUBEDAR CHATRAM ROAD CROSS
NEAR KAPALI THEATRE
GANDHINAGAR
BANGALORE-9

Ph. 27092 GRAM : KENCHMLODG

# ವಿದ್ಯಾರ್ಥಿ ಜೀವನದ ಬೆಳಕು ಸರಣಿ.

ಬಿ. ಎಸ್. ಕೃಷ್ಣಮೂರ್ತಿ, ನಂ. 5, ಸೀತಾವಿಲಾಸರಸ್ತೆ, ಮೈಸೂರು – 500 024.

**ಸ್ನೇಹಸಂಪಾದನೆ :** ವಿದ್ಯಾರ್ಥಿಗಳು ವಿದ್ಯಾಭ್ಯಾಸ ಕಾಲದಲ್ಲಿ ಏಕಾಂಗಿಯಾಗಿರಲು ಸಾಧ್ಯವಿಲ್ಲ. ಪಾಠಗಳು ಆಯಾದಿನದಲ್ಲಿ ಪೂರ್ತಿಯಾದ ನಂತರ ಇಷ್ಟ ಮಿತ್ರರು ಬೇಕಾಗುತ್ತಾರೆ. ಅವರೊಡನೆ ಕಲೆತು, ವಿನೋದವಾಗಿ ಮಾತನಾಡುತ್ತಾ ನಾನಾಬಗೆಯ ಮಾತುಕಥೆಗಳನ್ನಾಡಿ, ದಿನ ತಳ್ಳಬೇಕು. ಸಂಜೆಯಲ್ಲಿ ತಮಗೆ ತೋಚಿದೆಡೆ ವಿಹರಿಸಿ ಮಾನಸಿಕ ಶಾಂತಿ ಪಡೆಯುವುದು ಬೇಸರಕಳೆಯುವ ಮಾರ್ಗವೆನ್ನಬಹುದು ಆಗ ಮುಂದಿನದ ಓದಿಗೆ ಮನಸ್ಸು ಹಗುರವಿರುತ್ತದೆ. ಸ್ನೇಹಮಾಡುವ ನಿಟ್ಟಿನಲ್ಲಿ ಮನವು ಆತುರದಿಂದ ಕೂಡಿರಬಾರದು. ಸ್ನೇಹಿತರು, ಗುಣಭರಿತರೂ, ಪ್ರಾಜ್ಞರೂ ಸುಸಂಸ್ಕೃತಿಯುಳ್ಳವರೂ, ವಿವೇಕಿಗಳೂ, ವಿದ್ಯಾಭಿಮಾನಿಗಳೂ ಆಗಿರುವವರನ್ನು ನೋಡಿ ಅವರ ಸ್ನೇಹ ಮಾಡಬೇಕು. ನೀವು ಕಾರಣವಶಾತ್ ತಪ್ಪುಹಾದಿ ಹಿಡಿದಾಗ ನಿಮ್ಮನ್ನು ತಿದ್ದಿ, ಬುದ್ಧಿಹೇಳಿ ಸನ್ಮಾರ್ಗದಲ್ಲಿ ನಡೆಸುವ ಕುಶಲಮತಿಗಳಾಗಿರಬೇಕು. ಇಂಥವರ ಸ್ನೇಹದಿಂದ ನೀವು ಉನ್ನತ ಶಿಖರವನ್ನೇರುವಿರಿ. ಆಗಲೇ ನಿಮ್ಮ ಅಜ್ಞಾನದ ತೆರೆಮಾಯವಾಗಿ ಜೀವನವು ಸಂತೋಷಭರಿತವಾಗುತ್ತದೆ. ಮನೋವಿಕಾಸವು ವೃದ್ಧಿಸುತ್ತದೆ. ನಿಮ್ಮಲ್ಲಿ ದುಷ್ಟಮಿತ್ರರು ಇದ್ದು ಕೀಳು ಭಾವನೆಗಳನ್ನು ಪ್ರೇರಿಸುವ ಸಮಯದಲ್ಲಿ ಎಚ್ಚೆತ್ತುಗೊಂಡು ಜಾಗರೂಕರಾಗಬೇಕು. ಆಗ ನೀವು ವಿವೇಕಿಗಳಾಗುವಿರಿ.

ಸ್ನೇಹಿತರು ನಾನಾ ಬಗೆಯವರಿರುತ್ತಾರೆ. ಅವರ ಗುಣ, ಸ್ವಾಭಾವಗಳನ್ನು ನೀವು ತಿಳಿದಿರುವುದಿಲ್ಲ ಅವರ ಕೀಳುಸ್ವಭಾವ ಕಾಮನೆಗಳನ್ನು ಯಾರೂ ತಿಳಿಯಲಾಗದಂತೆ ಎಚ್ಚರವಿರುವ ಕುಶಲಿಗಳಿರುವರು. ಆದ್ದರಿಂದ ನೀವೂ ಜಾಗೃತರಿರಬೇಕು.

ಆನೇಕ ಗುರಿಗಳನ್ನಿಟ್ಟುಕೊಂಡಿರುವ ಸ್ನೇಹಿತರಿರುತ್ತಾರೆ. ಕೆಲವರು ನಿಮ್ಮಿಂದ ಏನಾದರೂ ಉಪಯೋಗ ಹೊಂದುವವರು ನಿಮ್ಮನ್ನು ಆಶ್ರಯಿಸಿ ಕೊಂಡು, ಬಹಳ ಆತ್ಮೀಯರಂತೆ ಬರುತ್ತಾರೆ. ಬಹಳ ಜಾಣತನದಿಂದ ಮಾತನಾಡಿ, ತಮ್ಮ ಆಸೆಗಳನ್ನು ನೆರವೇರಿಸಿ-ಕೊಳ್ಳುವರು. ಆ ಕ್ಷಣವೇ ನಿಮ್ಮಿಂದ ದೂರವಾಗಿ ಜಾರಿಕೊಳ್ಳುತ್ತಾರೆ. ಇವರೇ ಸ್ವಾರ್ಥಸಾಧಕರು. ಉತ್ತಮ ಸ್ನೇಹಿತರ ದುರ್ಗುಣಗಳ ಕಡೆಗಾಗಲಿ ವೈರಿಗಳ ಸದ್ಗುಣ ಕಡೆಗಾಗಲಿ ನಾವು ಕುರುಡುತನವನ್ನು ತೋರಿಸಬಾರದು.

ಒಬ್ಬ ಆಂಗ್ಲೇಯ ಲೇಖಕನು Society, friendship and love divinely bestowed upon man'' ಎಂದು ಹೇಳಿರುತ್ತಾನೆ. ಅಂದರೆ ಸಮಾಜ, ಗೆಳೆತನ, ಮತ್ತು ಪ್ರೇಮ ಇವು ಮೂರೂ ದೈವದತ್ತ ಕೊಡುಗೆಗಳಾಗಿವೆ ಎಂಬುದನ್ನು ತಿಳಿಯಬೇಕು. ವಿಶ್ವಾಸತುಂಬಿದ, ಸಮತಾಭಾವದಿಂದ ಕಷ್ಟ ಸುಖಗಳಲ್ಲಿ

ಬೆರೆತು ಪರಸ್ಪರ ಸಹಾಯ ಮಾಡುವ ಮಿತ್ರರು ಸಿಕ್ಕುವುದು ಪೂರ್ವಪುಣ್ಯವೇ ಅನ್ನಬೇಕಾಗುತ್ತದೆ. ಇಂಥವರು ದೊರಕಿದರೆ, ಅಂಥವರ ಸ್ನೇಹಮಾಡಿ, ಹೊಂದಿಕೊಂಡು ಅವರ ಮೈತ್ರಿಯನ್ನು ಉಳಿಸಿಕೊಳ್ಳಬೇಕು. ಇದು ಜಾಣರ ಗುಣ.

ಸರ್ವಗುಣ ಸಂಪನ್ನರಾದ ಮಿತ್ರರು, ತಮಗೆ ಅನೇಕ ಕುಂದುಗಳಿದ್ದರೂ ಆಪ್ತರ ಕಷ್ಟ ಸುಖಗಳಲ್ಲೂ, ಹುಟ್ಟು ಸಾವುಗಳಲ್ಲೂ, ಪ್ರಾಣಾಪಾಯಗಳಲ್ಲೂ, ಆಪತ್ತುಗಳಲ್ಲೂ ಮುನ್ನುಗ್ಗಿ ಸಹಾಯ ಮಾಡುವರು. ಇಂಥವರು ಈಚಿನ ದಿನಗಳಲ್ಲಿ ಬಹು ಅಪರೂಪ! ಒಂದು ವೇಳೆ ಇದ್ದರೆ ಇವರೇ ನಿಜವಾದ ಮಿತ್ರರು!

ಸಹವಾಸದೋಷದಿಂದಲೋ, ಪರಿಸ್ಥಿತಿಯ ಒತ್ತಡದಿಂದಲೋ ಮನುಷ್ಯರ ಗುಣ ಬದಲಾಗುತ್ತದೆ. ಇದು ಅನಿವಾರ್ಯ. ಕಾಲಕ್ರಮೇಣ ಈ ಗುಣ ಬದಲಾದೀತು! ಯಾವಾಗಲೂ ಕೆಲವು ಮಿತ್ರರು ವಿನಾಕಾರಣ ನಗುತ್ತಲೇ, ನಿಮ್ಮ ಬಳಿಗೆ ಬಂದು, ವಿನೋದವಾಗಿ ಮಾತನಾಡುತ್ತಾ, ಅಧಿಕ ಸ್ನೇಹದಯತ್ನ ಮಾಡುತ್ತಾರೆ. ಇಂಥವರ ಸ್ನೇಹ ಮಾಡಲು ನೀವು ನಿಧಾನವಾಗಿ, ಆಳವಾಗಿ ಯೋಚಿಸಿ ಈ ಮಿತ್ರತ್ವ ನಿಜವಾದುದೇ ಎಂದು ತಿಳಿದಾಗ ಸ್ನೇಹ ಮಾಡಿರಿ. ಕೆಲವು ಸ್ನೇಹಿತರು ಹಿತವಚನಗಳನ್ನಾಡಿ ಅವರ ಮರ್ಮವನ್ನು ಮುಚ್ಚಿಟ್ಟುಕೊಂಡು ಬೆನ್ನಿಗೆ ಚೂರಿಯಿಂದ ಇರಿಯುವವರೂ ಇರುವುದುಂಟು. ಆಪತ್ಕಾಲದಲ್ಲಿ ಆಸರೆ ಕೊಟ್ಟವನೇ ನಿಜ ಮಿತ್ರನಾದಾನು! ಉತ್ತಮರ ಸ್ನೇಹದಿಂದ ಸಂತೋಷ, ಮನಶ್ಶಾಂತಿ ಲಭಿಸುವುದೆಂಬುದು ನಿರ್ವಿವಾದ.

---

ಅವರಿಸಿರ್ದ ಕಲ್ಪತರು ಕಾನನದೊಳ್ ಪವನಾಶನಂ ಮಣಿ
ಗ್ರಾವದೆ ಜಾನಮಂತೆ, ಕನಕಾಬ್ಜ ಸರೋವರದಲ್ಲಿ ಮಜ್ಜನಂ
ದೇವ ವಧೂ ಸಮೀಪದೊಳೆ ಸಂಯಮೊಪ್ಪೆ ಪೆರರ್ ಮುನೀಂದ್ರರೊ
ಲ್ದಾವುದ ಕಾಂಕ್ಷಿಪರ್ ತಪಮಿರ್ದಪರಲ್ಲಿ ತಾಮಿವರ್

ಅಭಿನವ ಕಾಳಿದಾಸ ಬಸವಪ್ಪ ಶಾಸ್ತ್ರಿಗಳ
—"ಶಾಕುಂತಳ ನಾಟಕ"ದಿಂದ.

## ಪರತಪಸ್ವಿ (ಧಾರವಾಹಿ-5)

ಜಿ. ರಾಧಾದೇವಿ, ಕಾದಂಬರಿಗಾರ್ತಿ, ಬೆಸ್ತವಾರಪೇಟೆ, ರಾಯಚೂರು-584101

ಶ್ರೀಮತಿ ಹೆಚ್. ಜಿ. ರಾಧಾದೇವಿ ಅವರು ಧರ್ಮಸ್ಥಳದ ಹಿಂದಿನ ಧರ್ಮಾಧಿಕಾರಿಗಳನ್ನು ಧಾರ್ಮಿಕ ಕ್ಷೇತ್ರ, ಸಾಮಾಜಿಕ ಕ್ಷೇತ್ರ, ಸಾರ್ವತ್ರಿಕ, ಆರ್ಥಿಕ ಕ್ಷೇತ್ರಗಳಲ್ಲಿ ಸಮಾಜಕ್ಕೆ ಧಾರೆ ಎರೆದ ಅವರ ಸಮರ್ಪಣಾ ಬದುಕನ್ನು ಸುಂದರವಾಗಿ ನಿರೂಪಿಸಿ ಪರಿಚಯಿಸಿ ಕೊಟ್ಟಿದ್ದಾರೆ.

ಸಾರ್ವಜನಿಕ ಜೀವನದಲ್ಲಿ ಶ್ರೀ ಮಂಜಯ್ಯ ಹೆಗಡೆಯವರು ಏನೇನು ಲೋಕಹಿತ ಕಾರ್ಯಗಳನ್ನು ಮಾಡಿದರೆಬುದು ವಿವರಿಸುತ್ತ ಹೋದರೆ ಒಂದು ಮಹಾಗ್ರಂಥವೆ ಬೇಕಾಗುತ್ತದೆ

ಲಲಿತ ಕಲಾ ಗೋಷ್ಠಿಗಳನ್ನೇರ್ಪಡಿಸಿದಾಗ ನಾಡಿನ ಗಣ್ಯ ಸಾಹಿತಿಳು ವಿದ್ವಾಂಸರನ್ನು ಸಂಗೀತಗಾರರನ್ನು ಬರ ಮಾಡಿಕೊಂಡು ಅವರ ಕಲೆ ಪ್ರಸಾರ ಮಾಡಿ; ಆನಂದಿಸಿ ಅವರಿಗೆ ಗೌರವ ಸಂಭಾವನೆ ನೀಡುತ್ತಿದ್ದರ.

ದೇವಸ್ಥಾನದ ಆದಾಯ, ಪೂಜೆ ಉತ್ಸವ ಎಲ್ಲದರ ಅಭಿವೃದ್ಧಿ ಕೆಲಸಗಳು ಒಂದೆಡೇ ಜೊತೆಗೆ ಆಪ್ತರಾಗಿ ಅಥವ ಆರ್ತಗಳಾಗಿ ಬಂದವರನ್ನು ಸುಧಾರಿಸುವ ಕೆಲಸಾ- ಇನ್ನೊಂದೆಡೆಗೆ.

ಮಧ್ಯೆ ತಮ್ಮ ಚಿತ್ರಕಲಾ ರಚನೆ-ನಾಡಿನ ಅನೇಕ ಸಂಘ ಸಂಸ್ಥೆಗಳಿಂದ ಅವರಿಗೆ ಆಹ್ವಾನ ಬರುತ್ತಿದ್ದವು, ಒಳ್ಳೆಯ ಕೆಲಸ ಎಲ್ಲಾದರೂ ಹೋಗಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು, ಆ ಕೆಲಸ ಕಾರ್ಯಗಳಿಗೆ ಕೈ ತುಂಬ ಹಣ ಕೊಡುತ್ತಿದ್ದರು ತಮ್ಮ ಧರ್ಮಸ್ಥಳ ದೇವಸ್ಥಾನವನ್ನು ನವೀಕರಿಸಿದ್ದು, ದೇವರಿಗೆ ಬೆಳ್ಳಿರಥ, ಅನೇಕ ಬಗೆಯ ಸುವರ್ಣ ಆಭರಣಗಳನ್ನು ಮಾಡಿಸಿದ್ದು, ಹೊಸ ಹೊಸ ಉತ್ಸವಗಳನ್ನು ಏರ್ಪಡಿಸಿದ್ದು ವೈದಿಕ ಬ್ರಾಹ್ಮಣರಿಗೆ ಜೀವನೋಪಾಯ ಏರ್ಪಡಿಸಿದ್ದು ಮಾತ್ರವಲ್ಲದೇ ನಾಡಿನ ಬೇರೆ ಬೇರೆ ಕಡೆ ಇರುವ ಅನೇಕ ಶಿಥಿಲ ದೇವಾಲಾಯಗಳನ್ನು ಜೀರ್ಣೋದ್ಧಾರ ಮಾಡಿಸಿದರು, ಪೂಜೆ ಇಲ್ಲದ ದೇವಸ್ಥಾನಗಳಿಗೆ ಅರ್ಚಕರನ್ನು ನೇಮಿಸಿ ಅವರಿಗೆ ಸಂಬಳ, ವಸತಿ, ಅಕ್ಕಿಪಡಿ ಹೀಗೆ ಜೀವನೋಪಾಯ ಕಲ್ಪಿಸಿ ದೇವರಿಗೆ ಪೂಜೆ ಏರ್ಪಡಿಡಿಸಿದರು,

ನಾಡಿನ ನಾನಾ ದೇವಾಲಯುಗಳಿಗೆ ಸುವ್ವಲಾಲಿ
ಧರ್ಮಧನ, ದಾನ ದತ್ತಿ ನೀಡಿದರು ಸುವ್ವಲಾಲಿ
ವೈದಿಕ ಬ್ರಾಹ್ಮಣರಿಗೆ ಉಂಬಳಿ ನೀಡಿ ಸುವ್ವಲಾಲಿ
ದೈವಸನ್ನಿಧಾನದಲ್ಲಿ ಪೂಜೆ ಏರ್ಪಡಿಸಿದರು ಸುವ್ವಲಾಲಿ

ಮಹಾಕ್ಷೇತ್ರಗಳಲ್ಲಿ ಇರುವ ದೇವಾಲಯಗಳು ಅಲ್ಲದೆ ನಿಮ್ಮ ಊರೂರಿನ ದೇವಾಲಯಗಳು ಸುಸ್ಥಿತಿಯಲ್ಲಿ ಇರುವಂತೆ ನೋಡಿಕೊಳ್ಳಿ, ಎಂದು ಶ್ರೀ ಕ್ಷೇತ್ರಕ್ಕೆ ಬಂದ ಬೇರೆ ಊರಿನ ಧನಿಕರಿಗೂ ಸಂದೇಶ ನೀಡುತ್ತಿದ್ದರು.

ಇಷ್ಟೆಲ್ಲ ದಾನಧರ್ಮ, ಆರ್ತಗಳಾಗಿ ಬಂದವರಿಗೆ ಕೈ ತುಂಬ ಸಹಾಯ, ವಿದ್ವಾಂಸ ಜನಕ್ಕೆ ಸಂಭಾವನೆ ಅಭಿವೃದ್ಧಿ ಕೆಲಸ ಕಾರ್ಯಗಳಿಗೆ ನಿರಂತರ ಹಣ ಎಲ್ಲಿಂದ ಬರುತ್ತಿತ್ತು ?

ಈ ಸಂದರ್ಭದಲ್ಲಿ ಶ್ರೀ ರಾಮನ ಪೂರ್ವಜನಾದ ಇಕ್ಷ್ವಾಕು ವಂಶದ ಶ್ರೀ ರಘುಮಹಾರಾಜನ ನೆನಪು ಬರುತ್ತದೆ.

ಇಂಥಾ ಕಾರ್ಯಕ್ಕೆ ಇಷ್ಟು ಹಣ ಎಂದು ನಿರಂತರವಾಗಿ ದಾನ ಧರ್ಮ ಹಾಗೂ ಪ್ರಜಾಕಲ್ಯಾಣ ಕಾರ್ಯಗಳನ್ನು ಮಾಡುತ್ತಿದ್ದ ರಘು ಮಹಾರಾಜನಿಗೆ ತನ್ನ ಭಂಡಾರದ ಎಷ್ಟುಹಣ ಖರ್ಚಾಗಿದೆ? ಎಷ್ಟು ಉಳಿದಿದೆ? ಎಂದು ಚಿಂತೆಯೇ ಇರಲಿಲ್ಲವಂತೆ. ಆದರೆ ಅವನ ಭಂಡಾರ ಯಾವಾಗಲೂ ತುಂಬಿರುತ್ತಿತ್ತು, ಒಮ್ಮೆ ಮಹಾಯಜ್ಞವೊಂದನ್ನು ಆಚರಿಸಿ ಋಷಿ ಮುನಿಗಳಿಗೆ ಹಾಗೂ ಸಮಸ್ತ ಯಾಚಕ ವರ್ಗಕ್ಕೆ ತನ್ನ ಸಂಪತ್ತೆಲ್ಲಾ ಸೂರೆ ಮಾಡಿದನಂತೆ, ಅರಮನೆ, ಭಂಡಾರ, ಎಲ್ಲಾ ಖಾಲಿಯಾಯಿತು, ಅದೇ ಸಮಯದಲ್ಲಿ ಅಪಾರ ಧನರಾಶಿ ಬೇಡಿ ಋಷಿ ಓರ್ವರು ಬಂದರಂತೆ, ಮಣ್ಣಿನ ಪಾತ್ರೆಯಲ್ಲಿ ತನ್ನ ಕಾಲು ತೊಳೆಯಲು ರಾಜನ ಸ್ಥಿತಿ ಕಂಡು "ಅಯ್ಯಾ! ನಿನ್ನಲ್ಲಿಗೆ ಧನದ ರಾಶಿ ಕೇಳಲು ಬಂದ ನಾನೆಂಥಾ ಹುಚ್ಚಾ!" ಎಂದು ಋಷಿ ಪೇಚಾಡಿದನಂತೆ, ಋಷಿ ಬಂದ ಉದ್ದೇಶ ತಿಳಿದ ರಘು ಮಹಾರಾಜ "ನನ್ನ ಬಳಿ ಯಾಚಕರಾಗಿ ಬಂದ ಯಾರನ್ನೂ ಬರಿಗೈಯಲ್ಲಿ ಕಳಿಸಲಾರೆ, ನಾನು ಸ್ವರ್ಗಕ್ಕೆ ಧಾಳಿ ಇಟ್ಟು ಸಂಪತ್ತನ್ನು ಸೂರೆಮಾಡಿ ತರುವೆ ನನಗೆ ಕೆಲವು ದಿನ ಅವಕಾಶ ಕೊಡಿ........ಎಂದು ಬೇಡಿದನಂತೆ, ಆದರೆ ಮಾರನೆದಿನ ಇವನ ಭಂಡಾರ ಅಪೂರ್ವ ರತ್ನರಾಶಿ, ಧನಕನಕದಿಂದ ತುಂಬಿ ತಳುಕುತ್ತಿತ್ತಂತೆ.

ಕಾವಲುಗಾರರು ಬಂದು ಮಹಾಪುಣ್ಯಶಾಲಿ ಹಾಗೂ ಮಹಾನ್ ಧರ್ಮಿಷ್ಠನಾದ ಶ್ರೀ ರಘುಮಹಾರಾಜನಿಗೆ "ದೇವೇಂದ್ರನೂ ಎದುರಿಸಲಾರ, ಶಸ್ತ್ರಾಸ್ತ್ರ ಬೇಡಾ........ ಅಪ್ಪಾ ಎಂದು ಸ್ವೀಕರಿಸಿ ಎಂದು ಹೇಳಿ ದೇವದೂತರು ರಾತ್ರೋರಾತ್ರಿ ಅಪಾರ ಧನರಾಶಿ ಸುರಿದು ಹೋದರಂತೆ. ಋಷಿಗೆ ಮಾರನೆದಿನವೇ ಅವನು ಬಯಸಿದ ಎರಡರಷ್ಟು ಧನ ಕನಕರಾಶಿ ತನ್ನ ಸೇವಕರೊಡನೆ ಹೊರಿಸಿ ಕಳಿಸಿದನಂತೆ.

ಶ್ರೀ ಮಂಜಯ್ಯ ಹೆಗಡೆಯವರನ್ನು ಶ್ರೀ ರಘುಮಹಾರಾಜನಿಗೆ ಹೋಲಿಸ ಬಹುದು, ಮಹಾನಡಾವಳಿಕೆ ಮಹಾಕಾರ್ಯ ಇವರ ಕಾಲದಲ್ಲಿ ಲೀಲಾಜಾಲವಾಗಿ ನಡೆದು ಯಶಸ್ವಿಯಾಯಿತು. ಅನೇಕ ಲೌಕಿಕ ಅಡ್ಡಿಗಳು ಆಶ್ಚರ್ಯಕರ ರೀತಿಯಲ್ಲಿ ದೂರವಾಗಿ ದೈವೀಸಹಾಯ ಒದಗಿ ಬಂತು. ಮಹಾಯಜ್ಞದಂಥಾ ಈ ಮಹಾಕಾರ್ಯ ಸಂಪೂರ್ಣವಾಗಿ ನೆರವೇರಿತು. ಶ್ರೀ ಮಂಜುನಾಥನೆ ಇವರಿಗೆ ಬಲಗೈ ಆಗಿ ನಿಂತು ಇವರು ಕೈಗೊಂಡ ಕಾರ್ಯ ಪೂರ್ತಿ ಮಾಡುತ್ತಿದ್ದ. ಶ್ರೀ ರಾಮನ ಅಶ್ವಮೇಧಯಾಗ ಕಾಲದಲ್ಲಿ ಸಮಸ್ತ ಬ್ರಾಹ್ಮಣರಿಗೆ ದಾನ ದಕ್ಷಿಣೆ ನೀಡಿ ಸಮಸ್ತ ಜಾತಿಯ ಯಾಚಕ ವರ್ಗಕ್ಕೆ ಸಂಪತ್ತು ಸೂರೆಯಾದಂತೆ, ಮಹಾನಡಾವಳಿಕೆಯಲ್ಲಿ ದಿನ ದಿನಕ್ಕೆ ಲಕ್ಷಾಂತರ ಜನರ ಊಟಾ ತಿಂಡಿ, ಶ್ರೀ ಕ್ಷೇತ್ರದ ಎಲ್ಲಾ ದೇವರಿಗೆ ಪೂಜೆ; ಉತ್ಸವಗಳು ನಡೆಯಿತು. ನಡಾವಳಿಯ ನಿಯಮದಂತೆ ಸಮಸ್ತ ಸಂಪತ್ತನ್ನು ಸೂರೆಗರ್ಪಣೆ ಮಾಡಿ, ಧೀರತಪಸ್ವಿಗಳಾಗಿ ವಿಜೃಂಭಿಸಿದರು ಶ್ರೀ ಮಂಜಯ್ಯ ಹೆಗ್ಗಡೆ ಅವರು.

ಅನ್ನ ಅಕ್ಷಯ ವಾಯ್ತು ಸುವ್ವಲಾಲಿ
ಮಹಾನಾಡವಳಿಯ ದಿವ್ಯ ಮಹಿಮೆ ಸುವ್ವಲಾಲಿ
ಪುಣ್ಯಶಾಲಿ ಶ್ರೀ ಮಂಜಯ್ಯ ಹೆಗ್ಗಡೇರಿಗೆ ಸುವ್ವಲಾಲಿ
ಪುಣ್ಯ ಅಕ್ಷಯ ವಾಯ್ತು ಸುವ್ವಲಾಲಿ ||

ಅದುವರೆವಿಗೂ ಅನೇಕ ಪುಣ್ಯಕಾರ್ಯ ಮಾಡಿ, ಮಹಾ ಪುಣ್ಯ ಸಂಪಾದಿಸಿದ್ದ ಶ್ರೀ ಮಂಜಯ್ಯ ಹೆಗ್ಗಡೆಯವರು, ಈ ಮಹಾನಡಾವಳಿಯನ್ನು ಯಶಸ್ವಿಯಾಗಿ ನಿರ್ವಹಿಸಿ ಎಂದೆಂದಿಗೂ ವೃದ್ಧಿಯಾಗುವ ಅಕ್ಷಯ ಪುಣ್ಯರಾಶಿಗಳಿಸಿ ಕೊಂಡರು.

(ಸಶೇಷ)

---

ಶಿವ ನಿಮ್ಮ ಪಾದಾರವಿಂದವನ್ನು ನೆರೆನಂಬಿ
ಭವಜಲಧಿಯುತ್ತರಿಸಿ ನಿತ್ಯಪದವಿಯ ಸಾಧ
ನವ ಮಾಡಬೇಕೆಂಬ ಸದ್ಗುಣವು ಪಿರಿಯ ಸುಕೃತವ ಮಾಡಿದರಿಗಲ್ಲದೆ||

ಕವಲುಗೊಂಡಿಹ ಮನದ ಕಿರುಕುಳಿಗಳೆಲ್ಲರಿಗೆ
ಧವಳಾಂಗ ನಿಮ್ಮ ಪೂಜಾಮೃತವು ಬರಲುಂಟೆ
ರವಿಕೋಟಿ ಸನ್ನಿಭನೆ ನಿಜಲಿಂಗ ಭವಭಂಗ ಶರಣಜನ ಭಕ್ತಸಂಗಾ ||

—ನಿಜಲಿಂಗ ಶತಕ.

# ಮುಷ್ಟಿಯುದ್ಧ-ಹಿಂಸಾತ್ಮಕ ಕ್ರೀಡೆ

ಶ್ರೀ ಬಿ. ಸುಬ್ರಾಯ ಅಡಿಗ, ನಿವೃತ್ತ ಶಿಕ್ಷಕರು, ಸಂಡೂರು, ರಾಯಚೂರು-ಜಿಲ್ಲೆ.

ಸ್ಪರ್ಧೆಗಾಗಿ ನಿರ್ಧರಿಸಲ್ಪಟ್ಟ ೧೨ ಸುತ್ತುಗಳು ಪೂರ್ಣವಾಗುವ ಮೊದಲೇ ಅಂದು ೫ನೇ ಸುತ್ತಿನಲ್ಲೇ ಒಬ್ಬ ಆಟಗಾರ ಎದುರಾಳಿಯನ್ನು ಸೋಲಿಸಿ ೮೦ ಲಕ್ಷ ಡಾಲರ್ (ಸುಮಾರು ೧೨ ಕೋಟಿ ೮೦ ಲಕ್ಷರೂಪಾಯಿ) ಮೊತ್ತವನ್ನು ಗೆದ್ದುಕೊಂಡನೆಂಬುದು ನಿಜಕ್ಕೂ ವಿಚಿತ್ರ ಸಂಗತಿಯಲ್ಲವೇ ? ಈ ಆಟದಲ್ಲಿ ಸೋತ ಆಟಗಾರನು ೩೮ ಲಕ್ಷ ಡಾಲರ್ (ಸುಮಾರು ೬ ಕೋಟಿ ೮ ಲಕ್ಷರೂಪಾಯಿ) ಪಡೆದ.

ಇದೇನೂ ಲಾಟರಿಯಾಟವಾಗಿರದೆ **ಮುಷ್ಟಿ ಯುದ್ಧ** (ಬಾಕ್ಸಿಂಗ್)ದ ಸ್ಪರ್ಧೆಯಾಗಿತು. ೨೫-೨-೧೯೮೯ ರಂದು ಇದು ಲಾಸ್‌ಬೋಗಾಸ್‌ದಲ್ಲಿ ನಡೆಯಿತು. ಇದರಲ್ಲಿ ಅಮೇರಿಕೆಯ ೨೨ ವರ್ಷದ ಮುಷ್ಟಿ ಯೋಧ ಮೈಕ್‌ಟಾಯ್ಸನ್ ಬ್ರಿಟನಿನ ಮುಷ್ಟಿ ಯೋಧ ಫ್ರಾಂಕ್‌ಬ್ರೂನೋನನ್ನು ನಿಶ್ಚಿತ ಸುತ್ತುಗಳಿಗೆ ಮೊದಲೇ ತನ್ನ ಬಿರುಸಾದ ಗುದ್ದುಗಳ ಹೊಡೆತದಿಂದ ರಿಂಗ್‌ದೊಳಗೇ ಬೀಳಿಸಿಬಿಟ್ಟ. ಟಾಯ್ಸನ್‌ನ ಮುಷ್ಟಿಪ್ರಹಾರದಿಂದ ಬ್ರೂನೋನ ಮೂಗಿನಿಂದ ರಕ್ತ ಹರಿಯತೊಡಗಿದಾಗ ಆತ ರಿಂಗಿನೊಳಗೇ ಬಿದ್ದುಬಿಟ್ಟ. ರೆಫ್ರೀಡ್ರ್ ಸ್ಟೀಲ್ ಟಾಯ್ಸನ್ ಗೆದ್ದುದಾಗಿ ಘೋಷಿಸಿದ. ಆಗ ಗೆದ್ದವನಿಗೆ ೩೬.೦ ಹಾಗೂ ಸೋತವನಿಗೆ ೩೨.೩ ಅಂಕಗಳು ದೊರೆತಿದ್ದವು.

ಮೈಕ್ ಟಾಯ್ಸನ್ ಈ ಮೊದಲೂ ೬-೯-೧೯೮೮ ರಂದು ಅಮೇರಿಕೆಯ ಅಟ್ಲಾಂಟಿಕ್ ನಗರದಲ್ಲಿ ಜರಗಿದ ಮುಷ್ಟಿಯುದ್ಧದಲ್ಲಿ ಜಯಗಳಿಸಿದ್ದ. ಅದರಲ್ಲಿ ಆತ ಒಲಿಂಪಿಕ್ ಸ್ವರ್ಣಪದಕ ವಿಜೇತ ಸ್ಪಿಂಕ್‌ನನ್ನು ಬರ್ರೇ ಸೆಕೆಂಡಿನಲ್ಲಿ ರಿಂಗ್‌ದಿಂದ ಹೊರಗಟ್ಟಿದ್ದ ! ಆಗ ಅವನಿಗೆ ೨ ಕೋಟಿ ಡಾಲರ್ ಹಾಗೂ ಸೋತವನಿಗೆ ೧ ಕೋಟಿ ೩೫ ಲಕ್ಷ ಡಾಲರ್ ಮೊತ್ತ ದೊರೆತ್ತಿತ್ತು.

ಆ ವೇಳೆ ಇವರಿಬ್ಬರ ಪಂದ್ಯವನ್ನು ಕಾಣಲು ನೆರೆದ ಜನಸಂದಣಿಯೂ ಮುಷ್ಟಿ-ಯುದ್ಧದ ಇತಿಹಾಸದಲ್ಲಿ ಹೊಸವಿಕ್ರಮ ಸಾಧಿಸಿತು. ವ್ಯವಸ್ಥಾಪಕರು ಈ ಪಂದ್ಯದಿಂದ ಸುಮಾರು ೮ ಕೋಟಿ ಡಾಲರ್ ಹಣಗಳಿಸಿದರು.

ಇಂದಿನ ಒಲಿಂಪಿಕ್ ಕ್ರೀಡೆಗಳಲ್ಲಿ ಮುಷ್ಟಿಯುದ್ಧವೂ ಒಂದು ಆಟವೆಂದು ಪರಿಗಣಿಸಬೇಕೇ ? ಎಂಬುದು ವಿವಾದಾತ್ಮಕ ಅಂಶ. ಭಯಂಕರ ಕ್ರೂರತೆಯಿಂದಾಗಿ ಮುಷ್ಟಿಯುದ್ಧವು ಹಿಂಸೆಯ ಪ್ರತಿರೂಪ ಎನಿಸಿದೆ. ಈ ಆಟವನ್ನು ಒಲಿಂಪಿಕ್ ದಿಂದ ಹೊರಹಾಕಬೇಕೆಂದೂ ಹಲವು ಸಲ ವಾದಿಸಲಾಯಿತು. ಏಕೆಂದರೆ ಇದರಿಂದ ಶಾರೀರಿಕ ಹಾಗೂ ಮಾನಸಿಕ ಹಾನಿ ಉಂಟಾಗುವುದಷ್ಟೇ ಅಲ್ಲ ಪ್ರೇಕ್ಷಕರಲ್ಲೂ ಹಿಂಸಾಪ್ರವೃತ್ತಿ ಜಾಗ್ರತವಾಗುತ್ತದೆ.

ಮುಷ್ಟಿಯುದ್ಧ ಒಂದನ್ನು ಬಿಟ್ಟರೆ ಬೇರಾವ ಆಟದಲ್ಲೂ ತನ್ನ ಎದುರಾಳಿಗೆ ಘಾತ ಉಂಟುಮಾಡುವ ಉದ್ದೇಶ ಇರುವುದಿಲ್ಲ. ಮುಷ್ಟಿ ಪ್ರಹಾರ ದಿಂದ ಇತರರ ಹನಶೀಲತೆ ಪರೀಕ್ಷಿಸುವುದೂ ತನ್ನ ವಿರೋಧಿಯನ್ನು ರಕ್ತರಂಜಿತಗೊಳಿಸುವುದೂ ಆಟದ ವೈಶಿಷ್ಟ್ಯ.

ಫುಟಬಾಲ್, ಹಾಕೀ, ಪೋಲೋ, ಮೊದಲಾದ ಆಟಗಳಲ್ಲಿ ಆಟಗಾರರಿಗೆ ಕೆಲವು ಭಯಂಕರ ಪೆಟ್ಟು ಉಂಟಾಗುತ್ತದೆ. ಕೆಲವೊಮ್ಮೆ ಅವರು ಸಾವಿಗೀಡಾಗುವುದೂ ಂಟು. ಇಷ್ಟಾದರೂ ಈ ಆಟಗಳು ಮುಷ್ಟಿಯುದ್ಧದಷ್ಟು ಅಪಾಯಕಾರಿಯಲ್ಲ. ಈ ಟದಲ್ಲಿ ಗೆಲ್ಲಬೇಕಾದರೆ ಎದುರಾಳಿಯ ಮೋರೆ' ಹಣೆ ಹಾಗೂ ತಲೆಗೆ ಬಲವಾಗಿ ಬಡಿ ಯುವುದು ಅಗತ್ಯ ಎದುರಾಳಿ ದುರ್ಬಲವಾದರೆ ಹೊಡೆದಾತ ಗೆದ್ದಂತೆಯೇ ಎಂತಲೇ ಲ್ಲ ಮುಷ್ಟಿಯೋಧರು ಎದುರಾಳಿಗಳ ಮೋರೆಗೆ ಹೊಡೆಯಲು ಯತ್ನಿಸುತ್ತಾರೆ.

ಮುಷ್ಟಿಯೋಧನಲ್ಲಿ ಶಾರೀರಿಕ ಶಕ್ತಿಯ ಜತೆಗೇ ಮಾನಸಿಕ ಸಮತೋಲನವೂ ಗತ್ಯ, ಆದರೆ ಎದುರಾಳಿಯನ್ನು ಹೊಡೆತಗಳಿಂದ ಜರ್ಜರಿತಗೊಳಿಸುವುದು ಅಭಿ- ಮಾನದ ಸಂಗತಿಯೆಂದು ಈ ಆಟದಲ್ಲಿ ಭಾವಿಸಲಾಗುತ್ತದೆ. ಒಲಿಂಪಿಕ್ ಆಟಗಳಲ್ಲಿ ುಷ್ಟಿಯುದ್ಧವನ್ನೇ ಉದ್ಯೋಗವಾಗಿ ಮಾಡಿಕೊಂಡ ಆಟಗಾರರು ಆಡುವಂತಿಲ್ಲ. ವೃತ್ತಿ ಆಟಗಾರರ ಗುರಿಯೂ ಎದುರಾಳಿಯ ತಲೆಯೇ ಆಗಿರುತ್ತದೆ.

ಇತರರನ್ನು ಹೊಡೆದು ಜರ್ಜರಗೊಳಿಸುವ ಪ್ರಯತ್ನದಲ್ಲಿ ಕೆಲವೊಮ್ಮೆ ಹೊಡೆಯು ವನೂ ತನ್ನ ಮಾನಸಿಕ ಸಮತೋಲನವನ್ನು ಕಳೆದುಕೊಳ್ಳುತ್ತಾನೆ. ಟಾಯ್ಸನ್ ಕೂಡ ದಕ್ಕೆ ಹೊರತಾಗಿಲ್ಲ. ಟಾಯ್ಸನ್ ಮತ್ತು ಬ್ರೂನೋನ ಹಿಂದಿನ ಪ್ರದರ್ಶನಗಳತ್ತ ೃಷ್ಟಿ ಹರಿಸಿದರೆ ಟಾಯ್ಸನ್ ಈ ಪಂದ್ಯಕ್ಕೂ ಮುನ್ನ 35 ಪಂದ್ಯಗಳನ್ನು ಗೆದ್ದಿರುವ ಬ್ರೂನೋ ಅದುವರೆಗಿನ 31 ಪಂದ್ಯಗಳಲ್ಲಿ ಮೂರುಬಾರಿ ಸೋತಿರುವ, ಮೊದಲ ಲ ಮೇ ೧೯೮೬ರಲ್ಲಿ ಜೇಮ್ಸ್ ಸ್ಮಿತ್ ನಿಂದ ಹಾಗೂ ಎರಡನೆ ಸಲ ಬೇರಿಟ್ಲೀ ಯಲ್ಲಿ ಟಿಮ್ ವಿಂದರ ಸ್ಪೂನ್‌ನಿಂದ ಸೋತಿದ್ದ. ಟಾಯ್ಸನ್‌ನ ಆಟ ಹಾಗೂ ಅವನ ಪರಾಜಿತ ರಿಕಾರ್ಡ್‌ನೋಡುವಾಗ ಮುಷ್ಟಿಯುದ್ಧದ ವಿರೋಧಸ್ವರಗಳೇ ಹೆಚ್ಚಾಗಿ ೇಳಿಬರುತ್ತಿವೆ. ಮುಷ್ಟಿಯುದ್ಧದ ಆಟವೇ ಅಪರಾಧ ಜಗತ್ತಿಗೆ ಸಂಬಂಧಿಸಿದ ಗೂಂಡಾ ಳು ಆವಿಷ್ಕರಿಸಿದರೆಂದು ಹೇಳುತ್ತಾರೆ. ಆದರೆ ಇದನ್ನೇ ಸಭ್ಯ ಸಮಾಜದ ಜನರೂ ್ವೀಕರಿಸಿದಾಗ, ಇದು ಬರ್ಬರ ಸಭ್ಯತೆಯಸಾಲಿಗೆ ಸೇರಿಕೊಂಡಿತು.

ಮುಷ್ಟಿಯುದ್ಧ ಎಂದಿನಿಂದ ಆರಂಭವಾಯಿತು— ಎಂಬುದಕ್ಕೆ ಪ್ರಾಮಾಣಿ ವಾದ ಪುರಾವೆ ಇಲ್ಲವಾದರೂ ೧೮೮೧ರಲ್ಲಿ ಜಾನ್ ಸ್ಲೀವನ್ ಹಾಗೂ 'ಜಿಮ್ ಾರ್ಬೆಟ್'ರ ನಡುವೆ ನಡೆದ ಸ್ಪರ್ಧೆಯಿಂದಲೇ ಈ ಆಟ ಆರಂಭವಾಯಿತೆಂದು

ಹೇಳಬಹುದು. ಬಿಳಿಯನಲ್ಲದ ವ್ಯಕ್ತಿಯೊಬ್ಬ ಈ ಸಂಧ್ಯದಲ್ಲಿ ಜಯಗಳಿಸಿದುದು ಉಲ್ಲೇಖನೀಯ. ಅಂದಿನಿಂದಲೇ ಡೆಂಪಸೀ, ಲುಯಿಸ್, ಪ್ಯಾಟರಸನ್, ಮಹಮ್ಮದ್ ಅಲೀ (ಕ್ಯಾಸಿಯಸ್ ಕ್ಲೇ), ಟಾಯ್ಸನ್ ಮೊದಲಾದವರು ಈ ಪರಂಪರೆಯನ್ನು ಮುಂದುವರಿಸಿಕೊಂಡು ಬಂದಿದ್ದಾರೆ.

ಏಳು ಅಂಕೆಗಳುಳ್ಳ ( ದಶಲಕ್ಷ ) ಹಣದ ಪುರಸ್ಕಾರ ಪಡೆದ ಮೊದಲ ಆಟಗಾರ ಟೆನ್ನೀ ಅಂದಿನಿಂದ ಮುಷ್ಟಿಯುದ್ಧದಲ್ಲಿ ದೊಡ್ಡಮೊತ್ತದ ಪುರಸ್ಕಾರ ಸಿಗತೊಡಗಿತು. ಈ ಆಟ ಅದೆಷ್ಟು ಭಯಾನಕವಾಗಿದೆಯೆಂದರೆ ಕೆನಡಾದ ಆಟಗಾರ ಜಾನ್ ಸ್ಲೀವನ್ ಇದನ್ನು ಉದ್ಯೋಗವಾಗಿ ಮಾಡಿಕೊಳ್ಳುವ ಮುನ್ನ ೫೦ ಎದುರಾಳಿಗಳನ್ನು ಅಮೇರಿಕೆಯ ಆಟಗಾರ ವರ್ಜಿಲ್‌ಹಿಲ್ ೫೪ ಆಟಗಾರರನ್ನು ಮೂರ್ಛೆಗೊಳಿಸಿದ್ದರು. 'ನಾಕ್ ಔಟ್' ಮಾಡುವುದು ಈ ಆಟದ ಕೊಸೆಯಹಂತ. ಎದುರಾಳಿ ಕಣದಲ್ಲಿ ಬಿದ್ದು ೧೦ ರವರೆಗೆ ಲೆಕ್ಕಿಸುವಾಗಲೂ ಎಳೆದಿದ್ದರೆ ಈತ ಗೆದ್ದಂತೆಯೇ. ಕೆಲವೊಮ್ಮೆ ಗುದ್ದು ತಿಂದ ಆಟಗಾರ ಸಾಯುವುದೂ ಇದೆ. ಆಗ ಪ್ರೇಕ್ಷಕರು ಗೆದ್ದ ಆಟಗಾರನಿಗಾಗಿ ಚಪ್ಪಾಳೆ ತಟ್ಟುತ್ತಾರೆ !

### ಪ್ರೇಕ್ಷಕರ ಪ್ರತಿಕ್ರಿಯೆ

ಮುಷ್ಟಿಯುದ್ಧದ ಈ ಪೈಶಾಚಿಕ ಆಟದ ಪ್ರಭಾವ ಆಟಗಾರರ ಹಾಗೂ ಪ್ರೇಕ್ಷಕರ ಮೇಲೆ ಹೇಗಾಗುತ್ತದೆ – ಎಂಬುದರ ಬಗೆಗೂ ಸಾಕಷ್ಟು ಅಧ್ಯಯನ ನಡೆದಿದೆ. ಮುಷ್ಟಿಪ್ರಹಾರದಿಂದ ಹೆಚ್ಚಿನ ಮುಷ್ಟಿಯೋಧರ ಮಾನಸಿಕ ಸಮತೋಲನ ತಪ್ಪಿಹೋಗುತ್ತದೆ. ಮೈದಾನದ ಹೊರಗೂ ಅವರು ಮಾತು ಮಾತಿಗೆ ಸಿಡಿದೇಳುತ್ತಾರೆ. ಮತ್ತು ತಮ್ಮ ಸಂಬಂಧಿಕರನ್ನು ಥಳಿಸುತ್ತಾರೆ.

ನಮ್ಮ ದೇಶದ ಉದಾಹರಣೆಯನ್ನೇ ತೆಗೆದುಕೊಳ್ಳಿರಿ. ಕಳೆದಬಾರಿ ಭಾರತದ ರಾಜ್ಯಮಟ್ಟದ ಮುಷ್ಟಿಯೋಧ ಕೋಟಾದ ಮಹಾವೀರ ಪ್ರಸಾದಗೌಡ ತನ್ನ ಮಾವ ದೇವಕೀನಂದನಶರ್ಮಾನ ಮೇಲೆ ಆಕಸ್ಮಾತ್ ಸಿಟ್ಟಿಗೆದ್ದು ಅವನನ್ನು ಚೆನ್ನಾಗಿ ಗುದ್ದಿದ ಪರಿಣಾಮವಾಗಿ ಮಾವ ಸ್ಥಳದಲ್ಲೇ ಸತ್ತು ಬಿದ್ದ. ಮುಂದೆ ಪೊಲೀಸರು ಮಹಾವೀರನನ್ನು ಬಂಧಿಸಿ ಜೈಲಿಗೆ ಹಾಕಿದರು.

ಘಾತಕ ಮುಷ್ಟಿಪ್ರಹಾರ ಆಟಗಾರರ ಮೇಲೂ ದುಷ್ಪರಿಣಾಮ ಬೀರುವುದು. ರಿಂಗದಲ್ಲೇ ಎಚ್ಚರ ತಪ್ಪುವವರ ವಿಚಾರ ಬಿಟ್ಟರೂ ಉಳಿದವರು ಕೂಡ ಶಾರೀರಿಕ ಹಾಗೂ ಮಾನಸಿಕ ದೃಷ್ಟಿಯಿಂದ ದುರ್ಬಲರಾಗುತ್ತಾರೆ. ಕೈಕಾಲು ನಡುಕ, ಉಗ್ಗುವುದು, ಜಗಳಗಂಟಿತನ, ಮತ್ಸರ ಪ್ರಭಾವ- ಇವು ಈ ಮುಷ್ಟಿಪ್ರಹಾರದ ದುಷ್ಪರಿಣಾಮಗಳು.

ವಿಜೇತ ಮುಷ್ಟಿಯೋಧ ಟಾಯ್ಸನ್‌ನ್ನನೇ ತೆಗೆದುಕೊಳ್ಳಿರಿ. ಆತ ಅಮೇರಿಕನ್
ರೋಬಿನ್ ಗಿಬ್ಸನಳನ್ನು ೭-೨-೮೮ರಂದು ಮದುವೆಯಾದ. ಮರುವರ್ಷ
ರಿಯಲ್ಲೇ ವಿಚ್ಛೇದನವನ್ನು ಪಡೆದುಕೊಂಡ ತನ್ನನ್ನು ಆತ ಅಮಾನುಷವಾಗಿ
ಡೆಯುತ್ತಾನೆಂದು ರೋಬಿನ್ ಗಿಬ್ಸನ್‌ಳ ಆರೋಪ. ಅವನು ಕಣದಲ್ಲಷ್ಟೇ ಅಲ್ಲ
ರ್ವಜನಿಕ ಜೀವನದಲ್ಲೂ ಭಯಂಕರ ಹೋರಾಟಗಾರನಾಗಿದ್ದು ಎದುರಾಳಿಯನ್ನು
ಣ್ಣು ಮುಕ್ಕಿಸುವುದೇ ತನ್ನ ಏಕಮಾತ್ರ ಉದ್ದೇಶವೆಂದು ಭಾವಿಸುತ್ತಾನೆ.

ಚಿಂತಾಗ್ರಸ್ತ ಸ್ಥಿತಿಯಲ್ಲೇ ಒಮ್ಮೆ ಟಾಯ್ಸನ್ ಟೆಲಿವಿಜನ್‌ದ ಕ್ಯಾಮರಾ
ಯಾನನ ಮೇಲೂ ದಾಳಿಯಿಟ್ಟ. ಟಾಯ್ಸನ್ ನಂತಹ ಉದ್ವೇಗಭರಿತ ಮನ
ತಿಯ ವ್ಯಕ್ತಿಯನ್ನು ಬಿಟ್ಟ ರೂ ೬೦% ರಿಂದ ೮೭% ರಷ್ಟು ಮುಷ್ಟಿಯೋಧರು
ದುಳು ರೋಗಕ್ಕೀಡಾಗಿದ್ದಾರೆಂದು ಅಮೇರಿಕೆಯ ಮೆಡಿಕಲ್ ಅಸೋಸಿಯೇಶನ್‌ದ
ತ್ರಿಕೆಯ ಹೇಳಿಕೆ.

ಮುಷ್ಟಿಯೋಧರ ಮನೋವೃತ್ತಿ ಅದೆಷ್ಟು ಹಿಂಸಕವೆಂದು ಅವರು ಬಳಸುವ
ಾಷೆಯಿಂದ ವ್ಯಕ್ತವಾಗುತ್ತದೆ. ವಿಶ್ವವಿಖ್ಯಾತ ಕ್ಯಾಸಿಯಸ್ ಕ್ಲೇ ಉರ್ಫ ಮಹಮ್ಮದ್
ಲೀ ಫ್ಲಾಯ್ಡ್ ಪ್ಯಾಟರಸನ್ ನೊಡನೆ ಹೋರಾಡಲು ಹೊರಡುವ ಮುನ್ನ ಹೀಗೆಂದಿದ್ದ.
ಾನು ಅವನನ್ನು ಅದೆಷ್ಟು ಜೋರಾಗಿ ಹೊಡೆಯುವೆನೆಂದರೆ ಮುಂದೆ ತನ್ನ ತಲೆಗೆ
ೂಪ್ಪಿ ಹಾಕಿಕೊಳ್ಳಲೂ ಅವನು ಇನ್ನೊಬ್ಬನನೆರವು ಪಡೆಯಬೇಕಾಗುವುದು!
ಾಯ್ಡ ಹನಿಕನ್ ಮತ್ತು ಗ್ರೇ ಹೋಗನ್ ಕೂಡ ಒರಟಾಗಿ ನಾವು ನಮ್ಮ ಎದು
ಾಳಿಗಳನ್ನು ಮುಗಿಸಿ ಬಿಡಲೆಂದೇ ಕಣಕ್ಕಿಳಿಯುವೆವು! ಎಂದಿದ್ದರು.

ಟಾಯ್ಸನ್ ರಿಂಗ್‌ದ ಹೊರಗೂ ತನ್ನ ಆವೇಶಮಯ ವರ್ತನೆಗೆ ಪ್ರಸಿದ್ಧ.
. ಅಮೇತೋ ತನ್ನನ್ನು ಅಪರಾಧಿ ಜೀವನದಿಂದ ಹೊರತಂದು ವಿಶ್ವವಿಖ್ಯಾತ
ುಷ್ಟಿಯೋಧನನ್ನಾಗಿ ಮಾಡಿಸದೆ ಹೋಗಿದ್ದರೆ ತಾನು ಯಾವುದೇ ಜೈಲಿನಲ್ಲಿ
ೊಳೆಯತ್ತಿದೆನೆಂದು ಹೇಳುತ್ತಾನೆ.

ಅಮೇರಿಕೆಯ ಮುಷ್ಟಿಯೋಧ ಡೇವಿಸ್ ತನ್ನ ಮುತ್ತಜ್ಜನಕೊಲೆ, ಅಗ್ನಿಕಾಂಡ
ಾಗೂ ಸುಲಿಗೆಯ ಆರೋಪಕ್ಕೀಡಾದ ಡೇವಿಸ್ ತನ್ನ ಮುತ್ತಜ್ಜ ಬ್ರಾಯಂಟ್
ೊಡನೆ ಕೊಕೇನ್ ಕೊಳ್ಳಲು ಹಣ ಬೇಡಿದ. ಬ್ರಾಯಂಟ್ ಕೊಡಲೊಪ್ಪದಾಗ
ಡೇವಿಸ್ ಅವನನ್ನು ಹೊಡೆದು ಹಣ ಕಸಿದುಕೊಂಡ; ಮತ್ತು ಮನೆಗೆ ಉರಿಹಚ್ಚಿದ.
ಹೊಡೆತ ಹಾಗೂ ಬೆಂಕಿಯ ಹೊಗೆಯಿಂದ ಉಸಿರುಗಟ್ಟಿದ ಬ್ರಾಯಂಟ್ ತಕ್ಷಣ
ಸತ್ತು ಹೋದ. ತನಗೆ ಹುಚ್ಚು ಹಿಡಿದಿರುವುದರಿಂದ ತನ್ನನ್ನು ಬಿಡುಗಡೆ ಮಾಡು
ವಂತೆ ಡೇವಿಸ್ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ. ಆದರೆ ನ್ಯಾಯಾಲಯ
ಅವನ ಅರ್ಜಿಯನ್ನು ತಿರಸ್ಕರಿಸಿತು.

ಈ ಎಲ್ಲ ಉದಾಹರಣೆಗಳೂ ಈ ಆಟದ ಸಾಂಸ್ಕೃತಿಕ ಮಟ್ಟದ ದ್ಯೋತಕ. ಮಾಜಿ ಮುಷ್ಟಿಯೋಧನೊಬ್ಬ ಇಂದೂ ನ್ಯೂಜರ್ಸಿಯ ಕಾರಾಗೃಹದಲ್ಲಿ ೩೦ ವರ್ಷ ಗಳ ಶಿಕ್ಷೆ ಅನುಭವಿಸುತ್ತಿದ್ದಾನೆ.

ಇಂಥ ಹಿಂಸ್ರ ಆಟವನ್ನು ನೋಡುವ ಜನರೂ ತಮ್ಮಲ್ಲಿ ಹುದುಗಿದ ಹಿಂಸೆ ಪ್ರವೃತ್ತಿಯನ್ನು ತಪ್ಪದೆ ಪ್ರಕಟಿಸುತ್ತಾರೆ. ಈ ಆಟದ ಮೂಲಕ ಬಡ ಹಾಗೂ ಅಲ್ಪಸಂಖ್ಯಾತ ಜನರು (ಅಮೇರಿಕೆಯಲ್ಲಿರುವ ಕರಿಯರು) ತಮ್ಮ ಅಸ್ತಿತ್ವವನ್ನು ಜಗತ್ತಿನಲ್ಲಿ ಮೆರೆಸುತ್ತಾರೆಂದು ಮುಷ್ಟಿಯೋಧರ ಸಮರ್ಥಕರು ಹೇಳುತ್ತಾರೆ. ಆದರೆ ಇದು ಸಮರ್ಥನೀಯವಲ್ಲ. ಲಾಸ್ ಏಂಜಲ್ಸ್ ಅಥವಾ ಸೋಲ್ ಒಲಿಂಪಿಕ್ ದಲ್ಲಿ ಈ ಆಟದಿಂದಾಗಿ ಮಧ್ಯವರ್ತಿಗಳಿಗೆ ಕೋಟ್ಯಂತರ ರೂಪಾಯಿ ಲಾಭವಾಗಿ ರುವುದರಿಂದ ಆ ಜನರು ಈ ಆಟಕ್ಕೆತಡೆಹೇರಲು ಒಪ್ಪರೆಂಬುದು ನಿಜ. ಆದರೆ ಈ ಆಟದ ಹಿಂಸೆ ಪ್ರವೃತ್ತಿಯಿಂದಾಗಿ ಎಷ್ಟೋದೇಶಗಳಲ್ಲಿ ಇದನ್ನು ಪ್ರತಿಬಂಧಿಸಲಾಗಿದೆ.

ಮುಂದಿನ ಒಲಿಂಪಿಕ್ ಕ್ರೀಡೆಗಳಲ್ಲಿ ಮುಷ್ಟಿ ಯುದ್ಧಕ್ಕೆ ಎಡೆದೊರೆಯಬಾರ- ದೆಂದು ಎಷ್ಟೋ ಜನರು ಪ್ರಯತ್ನಿಸುತ್ತಿರುವಾಗಲೇ ಹವ್ಯಾಸಿ ಮುಷ್ಟಿಯೋಧರ ಅಂತರರಾಷ್ಟ್ರೀಯ ಅಸೋಸಿಯೇಶನ್ ಈ ಆಟದಲ್ಲಿ ಕಂಪ್ಯೂಟರ್ ಪ್ರಣಾಳಿಯನ್ನು ಅಳವಡಿಸಬೇಕೆಂದು ತೀರ್ಮಾನಿಸಿದೆ! ಸಾಧ್ಯವಿದ್ದಷ್ಟೂ ಮುಷ್ಟಿ ಯುದ್ಧವನ್ನು ರೋಮಾಂಚಕ ಹಾಗೂ ಆಕರ್ಷಕವಾಗಿ ಮಾಡುವುದೇ ಈ ಸಂಸ್ಥೆಯ ಉದ್ದೇಶ.

(ಹಿಂದಿಯಿಂದ)

---

**ಆಜೀವ ಸದಸ್ಯರುಗಳಲ್ಲಿ ಒಂದು ಮನವಿ.**

ಸಿದ್ಧಗಂಗಾ ಪತ್ರಿಕೆಯ ಅನೇಕ ಆಜೀವ ಸದಸ್ಯರುಗಳ ವಿಳಾಸಗಳು ಬದಲಾ ಗಿರುವುದರಿಂದ ಕಾರ್ಯಾಲಯದಿಂದ ಕಳುಹಿಸಿದ ಸಂಚಿಕೆಗಳು ಕೆಲವು ಸದಸ್ಯರುಗಳಿಗೆ ತಲುಪದೆ ಹಿಂತಿರುಗುತ್ತಿವೆ. ದಯವಿಟ್ಟು ನಿಮ್ಮ ಬದಲಾದ ವಿಳಾಸಗಳನ್ನು ಆಗಿಂದಾಗ್ಗೆ ಪತ್ರಿಕಾ ಕಾರ್ಯಾಲಯಕ್ಕೆ ಕಳುಹಿಸಿ ಕೊಡುವುದರ ಮುಖೇನ "ಸಿದ್ಧಗಂಗಾ" ನಿಮಗೆ ಕ್ರಮವಾಗಿ ತಲುಪಲು ಸಹಕರಿಸಬೇಕಾಗಿ ಪ್ರಾರ್ಥನೆ. **ತಮ್ಮ ಸದಸ್ಯತ್ವದ ನಂಬರನ್ನು ತಪ್ಪದೇ ತಿಳಿಸಿರಿ.**

ಪ್ರಕಾಶಕರು.

---

# ಮಾನವನ ಗುರಿ

ಎ. ಬಿ. ಚನ್ನಬಸಪ್ಪ "ಎಫ್/1 ಬಸವ ಪ್ರಸಾದ"' ಶಂಕರ್‌ಮಠ ಕ್ರಾಸ್ II, ಕಿಲ್ಲೆ, ಮೈಸೂರ-4.

ಸದ್ಯಕ್ಕೆ ಕಂಡುಬರುವ ಪರಿಸರಗಳನ್ನು ನೋಡಿದರೆ ಮಾನವ ಮೇಲು ಮಟ್ಟ ದಲ್ಲಿರುವನು. ಚರಾಚರ ವಸ್ತುಗಳಿಗೆ ಒಡೆಯನಾಗಿರುವನು. ಭೂಮಿ ಮೇಲೆ, ಒಳಗೆ; ನೀರಿನ ಮೇಲೆ ಒಳಗೆ ಆಕಾಶದ ಕೆಲಗ್ರಹಗಳ ಪರಿಚಯ ಮಾಡಿಕೊಂಡು ಯಜಮಾನನ ಅಂತಸ್ಥಿನಲ್ಲಿರುವನು.

ಮಾನವ ಪ್ರಾಣಿಗಳ ಗುಂಪಿಗೆ ಸೇರಿದವನು. ಹುಲಿ, ಸಿಂಹ, ಚಿರತೆ, ದನ, ಕುರಿ, ಆಡು ಮೊದಲಾದವುಗಳು ಪ್ರಕೃತಿಯ ಧರ್ಮದಂತೆ ನಡೆಯುತ್ತಿರುವುವು. ಅವುಗಳ ಗುರಿ ಏನಿರಬಹುದೆಂದು ಊಹಿಸಿದರೆ, ಈ ಕಿರಿಯ ಲೇಖಣಿ ಅವುಗಳಿಗೆ ತಮ್ಮ ಹಸಿವನ್ನು ಇಂಗಿಸಿಕೊಳ್ಳುವುವೇ, ಅವುಗಳ ಗುರಿ; ಇವುಗಳ ಜೊತೆಯಲ್ಲೇ ಕಾಮದ ಒಕಳಿ ಹೊಂದುವುದೇ ಅವುಗಳಗುರಿ. ಇವುಗಳಿಗೆ ಇನ್ನು ಯಾವ ಗುರಿ? ಇದು ಅವುಗಳ ತಪ್ಪೇ? ಅಲ್ಲ. ಹಾಗಾದರೆ ಪ್ರಕೃತಿಯಧರ್ಮ ಈ ರೀತಿಯ ಕ್ರಮವನ್ನು ತಪ್ಪು ಎಂದು ಹೇಳಲು ಸಾಧ್ಯವಿಲ್ಲ. ಪ್ರಕೃತಿ (ದೇವರು) ಯು ಆ ನಿಯಮವನ್ನು ಇಟ್ಟಿರುವನು.

ಸಸ್ಯಗಳ ಕಡೆ ತಿರುಗಿ ನೋಡಿದರೆ ಪ್ರಕೃತಿಯ ಆಜ್ಞಾಸಾರ ನಡೆದುಕೊಳ್ಳು ತ್ತಿರುವುವು. ಹುಣಸೆಮರ ಹುಣಸೆಹಣ್ಣು, ಬೇವಿನ ಮರ ಬೇವಿನಹಣ್ಣು, ಮಾವಿನ ಮರ ಮಾವಿನ ಹಣ್ಣು, ಸೀಬಿಗಿಡ ಸೀಬಿಯಹಣ್ಣು ಮೊದಲಾಗಿ ಸಸ್ಯಗಳ ಗುಂಪು ಆಜ್ಞಾನುಸಾರ ನಡೆಯುತ್ತಿರುವುವು. ಸ್ವತಃ ಅವುಗಳಿಗಿಲ್ಲ!

ಮಾನವ ಹಾಗಲ್ಲ. ವಿಚಿತ್ರವಾದ ಪ್ರಾಣಿ ತನ್ನದೇ ಆದ ಗುರಿ! ವಿಶ್ವದಲ್ಲಿ ಎಷ್ಟು ಮಾನವರು ಉಂಟೋ ಅಷ್ಟು ರೀತಿಯ ಗುರಿಗಳುಂಟು. ಏಕೆ ಹೀಗೆ? ಸ್ವಲ್ಪಆಲೋಚಿಸೋಣ! ಪ್ರಕೃತಿಯು ಈತನಿಗೆ ವಿಚಿತ್ರವಾದ ತಲೆ. ಆ ತಲೆಯಲ್ಲಿ ವಿಚಿತ್ರವಾದ ಮೆದುಳು. ಆದುದರಿಂದ ವಿಚಿತ್ರವಾದ ಆಲೋಚನೆ. ಆ ಆಲೋಚನೆ ಗಳಿಂದ ವಿಚಿತ್ರವಾಡ ಕಾರ್ಯಕಲಾಪಗಳು (ಫಲಗಳು), ಆ ಕಾರ್ಯಗಳು ಧರ್ಮದ ಒರೆಗಲ್ಲಿನ ಮೇಲೆ ಒರೆ ಹಚ್ಚಿನೋಡಿದರೆ, ಕೆಲವು ಚಿನ್ನ; ಕೆಲವು ಕೋಟ.

ಮಾನವ ಹುಟ್ಟಿರುವುದು ಕೋಟ ಆಲೋಚನೆಗೆ ಅಲ್ಲ. ಆ ಕೋಟ ಆಲೋ ಚನೆಗಳಿಂದ ಹೊರ ಬೀಳುವ ಕೃತಿಗಳು ಕೋಟ. ಅಂಥಾ ಕೃತಿಗಳು ಮಾನವ ಕೋಟಿಯನ್ನು ನಾಶ ಮಾಡುತ್ತವೆಯೇ ಹೊರತು ಉನ್ನತಿಗೆ ತರಲಾರವು!

ಮೋಸ–ವಂಚನೆ–ಸುಳ್ಳು - ಕಳ್ಳತನ–ದರೋಡೆ– ಕೊಲೆ ಮೊದಲಾದವುಗಳು ಅವುಗಳನ್ನು ಅನುಸರಿಸುವ ವ್ಯಕ್ತಿಗಳನ್ನು ಕಾಲಾನುಕಾಲಕ್ಕೆ ಹೀನ-ನಾಶ ಸ್ಥಿತಿಗೆ ತರುವುವು! ಹೀಗಿರುವುದೆ ಮಾನವನ ಗುರಿ. ಈ ಗುರಿಯನ್ನು ಸಾಧಿಸಲು ಪ್ರಕೃತಿ (ದೇವರು) ಯು ಮಾನವನಿಗೆ; ಯಾವ ಪ್ರಾಣಿಗೂ ಕೊಡದಂಥಾ ಮಿದುಳನ್ನು ಕೊಟ್ಟದ್ದು ಈ ಕಾರ್ಯಗಳನ್ನು ಸಾಧಿಸಲು ? ಎಲ್ಲಾದರೂ ಉಂಟೆ ? ಆತನು ವಿಶ್ವದ ಯಜಮಾನ ?

ಕೆಲ ಮಹನೀಯರು ಗುರಿಯನ್ನು ಸಾಧಿಸಲಿಲ್ಲವೆ ? ಮಹಾತ್ಮಗಾಂಧಿಯವರು ಸ್ವತಂತ್ರ ಗುರಿ–ಅಂಬೇಡ್ಕರವರು ಹಿಂದುಳಿದವರನ್ನು ಮುಂದೆ ತರುವ ಗುರಿ, ಕೆನಡಿಯವರೂ ಕೂಡ ಆ ಗುರಿ. ಸುಭಾಸ್‌ಚಂದ್ರಭೋಸ್‌ರವರು ಗುಲಾಮತನವನ್ನು ಹೊಡೆದು ಓಡಿಸುವ ಗುರಿ, ಭಗತ್‌ಸಿಂಗ್, ಗುರುದೇವರುಗಳು, ನಾಡಿಗೋಸ್ಕರ ತಮ್ಮ ಆತ್ಮಗಳನ್ನು ಅರ್ಪಿಸುವ ಗುರಿ' ಸಾಧಿಸಿದರು. ಆ ರೀತಿಯ ಗುರಿಗಳೇ ಮಾನವನ ಗುರಿಯಾಗಿರಬೇಕು ! ಅಂಥ ಗುರಿ ಸಾಧಿಸಲು ಕಂಕಣ ಬದ್ಧರಾಗೋಣ !

---

ಹಿರಿಯ ಭಕ್ತ್ಯಂಗನೆಯನುರದೊಳುಜಯಸತಿಯ
ವರಭುಜದೊಳು, ದಯಾಸತಿಯ ಮುಖದೊಳತಿಶಾಂತಿ
ತರುಣಿಯಾಮನದೊಳೆಡೆವಿಡದಪ್ಪಿ ನೆರೆವುದಲ್ಲದೆ ಮತ್ತೆ ಪರನಾರಿಗೆ
ತೆರವನಟ್ಟುವನಿವನ ಚೀಟದೊಳು ಕಣ್ಣಾಗಿ
ದಿರದೆ ಕೈವಿಡಿದೆನ್ನನೂಂಕಿ ಕಳೆದಂಮಹಾ
ಪುರುಷರರಿದಿರಿ ಸಿದ್ಧರಾಮನೆಂದಾ ಕೀರ್ತಿವಧು ದೂರಿದಳು ಜಗದೊಳು ||

ಆಧಾರ-ಸಮರ್ಪಣೆ.

---

## ಪರಿಹಾರ

ಶ್ರೀ ಮಠದ ವ್ಯಾಪ್ತಿಗೆ ಸೇರಿದ ಕ್ಯಾತ್ಸಂದ್ರ ನಿವೇದಿತಾ ಪ್ರೌಢಶಾಲೆಯಲ್ಲಿ ಸೇವಕನಾಗಿ ಕೆಲಸ ಮಾಡುತ್ತಿದ್ದ ಮಹದೇವಯ್ಯ ಶಿವೈಕ್ಯರಾದ ಪ್ರಯುಕ್ತ ಶ್ರೀ ಸಿದ್ಧಗಂಗಾ ಶಿಕ್ಷಣ ಸಂಸ್ಥೆಗಳ ಕುಟುಂಬ ಕಲ್ಯಾಣ ನಿಧಿಯಿಂದ ನೀಡಿದ 10,000/– ರೂಗಳ ಚೆಕ್ಕನ್ನು ಮೃತರ ಪತ್ನಿಯಾದ ಶ್ರೀಮತಿ ಶಾರದಮ್ಮನವರು ತುಮಕೂರು ಜಿಲ್ಲಾ, ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಶ್ರೀ ಪಿ. ಸುಬ್ಬರಾವ್ ಅವರಿಂದ 15 ಆಗಸ್ಟ್ 1991ರಂದು ಸ್ವೀಕರಿಸಿದರು.

# 45 ನೇ ಸ್ವಾತಂತ್ರ್ಯೋತ್ಸವ

## ನತೆಗೆ ನೀಡಿದ ಭರವಸೆಯು ಮಾರ್ಗದಲ್ಲಿ ಪ್ರಗತಿಯ ಮುನ್ನೋಟ.

ಜನತೆಯ ಆಶೋತ್ತರಗಳನ್ನು ಪೂರೈಸುವುದೇ ಜನಪ್ರಿಯ ಸರ್ಕಾರದ ರ್ತವ್ಯ. ಈ ದಿಕ್ಕಿನಲ್ಲಿ ಗ್ರಾಮೀಣ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡುವ ಜೊತೆಗೆ ಜ್ಯ ಸರ್ಕಾರವು ಹಲವಾರು ಕಲ್ಯಾಣ ಸ್ವಾತಂತ್ರ್ಯೋತ್ಸವ ಸಂದರ್ಭದಲ್ಲಿ ಒಂದು ಮ್ಮೆಯವಿಷಯವಾಗಿದೆ.

**ಶ್ರಯ :**

ಯೋಜನೆಯಡಿಯಲ್ಲಿ ಸಮಾಜದ ದುರ್ಬಲ ವರ್ಗದವರಿಗೆ ನಿವೇಶನಗಳನ್ನು ಂಚಲು ಮತ್ತು ಮನೆಗಳನ್ನು ನಿರ್ಮಿಸಲು ನೆರವು ನೀಡಲಾಗುವುದು.

**ುಶ್ರೂಷಾ :**

ರೋಗ್ಯವಂತ ಮಕ್ಕಳನ್ನು ರೂಪಿಸಲು ಕ್ರಾಂತಿಕಾರಿ ಕಾರ್ಯಕ್ರಮಗಳನ್ನು ಹಮ್ಮಿ ಾಳ್ಳಲಾಗಿದೆ ಹಾಗೂ ಆರುತಿಂಗಳಿಗೊಮ್ಮೆ ಎಲ್ಲಾ ವ್ಯಕ್ತಿಗಳಿಗೂ ಉಚಿತ ೖದ್ಯಕೀಯ ತಪಾಸಣೆ ಮಾಡುವ ಯೋಜನೆ.

**ಕ್ಷಯ :**

ರಾಮೀಣ ಪ್ರದೇಶದ ಮಕ್ಕಳನ್ನು ಉತ್ತಮ ವಿದ್ಯಾವಂತ ಪ್ರಜೆಗಳನ್ನಾಗಿ ರೂಪಿ ುವ ದೃಷ್ಟಿಯಿಂದ ಒಂದರಿಂದ ಏಳನೇ ತರಗತಿ ವರೆಗಿನ ಮಕ್ಕಳಿಗೆ ಪೌಷ್ಟಿಕವಾದ ುಧ್ಯಾಹ್ನದ ಊಟ ನೀಡುವ ಕಾರ್ಯಕ್ರಮ.

**ಕ್ಷೆ :**

ರಂಪರಾನುಗತವಾಗಿ ಬಂದ ಗ್ರಾಮೀಣ ಜನತೆಯ ಕೌಶಲ್ಯಗಳನ್ನು ಬಳಸಿಕೊಳ್ಳು ುದರ ಮೂಲಕ ಉದ್ಯೋಗ ಸೃಷ್ಟಿಸುವ ಹೊಸ ಯೋಜನೆ. ಗ್ರಾಮೀಣ ುದ್ಯೋಗಾಧಾರಿತ ಆರ್ಥಿಕ ಅಭಿವೃದ್ಧಿಗೆ ಇದೊಂದು ದಿಟ್ಟ ಹೆಜ್ಜೆ. ಸರ್ಕಾರವು ಸಾಮಾಜಿಕ ಭದ್ರತಾ ನಿಧಿ' ಯೊಂದನ್ನು ಸ್ಥಾಪಿಸಿದ್ದು ಮೊದಲನೆಯ ಹಂತದಲ್ಲಿ ಸುಮಾರು ಒಂದು ಲಕ್ಷ ನೇಕಾರರು ಮತ್ತು ಕುಶಲ ಕರ್ಮಿಗಳು ಈ ಯೋಜ ನೆಯ ಅನುಕೂಲ ಪಡೆಯುವರು.

**ಡಾ|| ಅಂಬೇಡ್ಕರ್ ಭವನ**

ಅಂಬೇಡ್ಕರ್ ಭವನ ನಿರ್ಮಾಣ ಹಾಗೂ ದಲಿತ ವರ್ಗಗಳ ಪ್ರಗತಿಗೆ ಎಲ್ಲಾ ವಿಧ ದಲ್ಲೂ ಹೆಚ್ಚು ನೆರವು. ಪರಿಶಿಷ್ಟ ಜಾತಿ ಮತ್ತು ಜನಾಂಗದವರಿಗೆ ಮನೆಗಳನ್ನು ನೀಡಲು 'ಲಕ್ಷ ಗೃಹ ನಿರ್ಮಾಣ' ಎಂಬ ಅಭೂತಪೂರ್ವ ಯೋಜನೆಯೊಂದನ್ನು ಹಮ್ಮಿಕೊಂಡಿದೆ.

**ನೀರಾವರಿ ಮತ್ತು ವಿದ್ಯುತ್ ಉತ್ಪಾದನೆ :**

ಭಾರಿ ಮತ್ತು ಮಧ್ಯಮ ನೀರಾವರಿಗೆ 190 ಕೋಟಿ ರೂ. ಮೀಸಲು 69, 07 ಪಂಪ್‌ಸೆಟ್‌ಗಳಿಗೆ ವಿದ್ಯುತ್ ಒದಗಿಸಿದ ಒಂದು ಹೊಸ ದಾಖಲೆಯನ್ನು ಸ್ಥಾಪಿಸಿದೆ. ಹೆಚ್ಚು ವಿದ್ಯುತ್ ಉತ್ಪಾದಿಸಲು ಖಾಸಗಿ ಉದ್ದಿಮೆಗಳಿಗೆ ರಾಜ್ಯ ಸರ್ಕಾರವು ಹೆಚ್ಚಿನ ಸಹಕಾರ ಹಾಗೂ ಉತ್ತೇಜನ ನೀಡುವುದು.

**ಆರಾಧನ :**

ಹರಿಜನ ಕೇರಿಗಳು, ಲಂಬಾಣಿ ತಾಂಡಾಗಳು, ಒಡ್ಡರ ಕೇರಿಗಳು ಇಂತಹಸ್ಥಳಗಳಲ್ಲಿ ದೇವಸ್ಥಾನಗಳು ಮತ್ತು ಪೂಜಾ ಮಂದಿರಗಳ ನಿರ್ಮಾಣಕ್ಕೆ ಜೀರ್ಣೋದ್ಧಾರ ಮಾಡಲು ಸರ್ಕಾರದ ನೆರವು.

**ಆಕ್ರಮ ಸಾಗುವಳಿಯ ಸಕ್ರಮ :**

ಅಧಿನಕೃತ ಸಾಗುವಳಿಯನ್ನು ಸಕ್ರಮಗೊಳಿಸಿ ಹಕ್ಕು ಪತ್ರ ನೀಡಲಾಗುವುದು. ಬಗರ್ ಹುಕುಂ ಸಾಗುವಳಿ ಮಾಡುತ್ತಿದ್ದ ಗ್ರಾಮೀಣ ದರ್ಬಲರು ಪರಿಶಿಷ್ಟ ಜಾತಿ ಮತ್ತು ಪಂಗಡದವರ ಜಮೀನನ್ನು ಸಕ್ರಮ ಗೊಳಿಸಲು ಕ್ರಾಂತಿಕಾರಿ ನಿಲುವನ್ನು ಸರ್ಕಾರ ತೆಗೆದುಕೊಂಡಿದೆ.

**ಸಣ ಕೈಗಾರಿಕೋದ್ಯಮ :**

ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚು ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಸ್ಥಾಪಿಸಲು ನಿರ್ಧರಿಸಲಾಗಿದೆ.

**ಮಹಿಳೆಯರಿಗೆ ಮೀಸಲಾತಿ :**

ಸರ್ಕಾರಿ ಇಲಾಖೆ ಮತ್ತು ಸಾರ್ವಜನಿಕ ಉದ್ದಿಮೆಗಳಲ್ಲಿ ಶೇ: 30 ರಷ್ಟು ಮಹಿಳೆಯರಿಗಾಗಿ ಉದ್ಯೋಗ ಮೀಸಲಿಡಲು ಸರ್ಕಾರ ನಿರ್ಧರಿಸಲಾಗಿದೆ.

**ಕುಡಿಯುವ ನೀರು :**

ಪ್ರತಿಯೊಂದು ಹಳ್ಳಿಗೂ ಕುಡಿಯುವ ನೀರು ಇತ್ಯಾದಿ ಸೌಲಭ್ಯಗಳನ್ನು ಒದಗಿಸಲಾಗುವುದು.

**ಸಾಕ್ಷರತಾ ಕಾರ್ಯಕ್ರಮ :**

ಹಳ್ಳಿಗಳಲ್ಲಿ ಅವಿದ್ಯಾವಂತ ವಯಸ್ಕರಿಗೆ ವಿದ್ಯಾಭ್ಯಾಸ ಕಲಿಸುವ ಯೋಜನೆ.

---

* ಐಕ್ಯತೆ, ಕೋಮು ಸೌಹಾರ್ದತೆ, ಸಹ ಬಾಳ್ವೆ, ಸಮತಾವಾದ ಇವೆಲ್ಲವನ್ನು ಆಚ
* ರಣೆಗೆ ತರುವುದು ಸ್ವಾತಂತ್ರ್ಯದ ಗುರಿ. ಇಂದು ಇದೇ ನಮ್ಮೆಲ್ಲರ ಪ್ರತಿಜ್ಞೆಯಾಗಲಿ.

---

# ಕ್ಷೇತ್ರವಾರ್ತೆ

## 45 ನೇ ಸ್ವಾತಂತ್ರ್ಯೋತ್ಸವ ದಿನಾಚರಣೆ.

—ಹೆಚ್. ಬಿ. ಗಂಗಾಧರಯ್ಯ.

ಶ್ರೀ ಮಠದ ಸಂಯುಕ್ತ ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ಸ್ವಾತಂತ್ರದಿನಾ ರಣೆಯನ್ನು 15 ಆಗಸ್ಟ್ 1991 ಗುರುವಾರ ಪ್ರಾತಃಕಾಲ 7 ಗಂಟೆಗೆ ಧ್ವಜಾ ೋಹಣ ಮಾಡುವುದರ ಮೂಲಕ ಆಚರಿಸಲಾಯಿತು. ಲೋಕಸಭೆಗೆ ಹೊಸದಾಗಿ ಪಸಭಾಪತಿಯಾಗಿ ಆಯ್ಕೆಯಾಗಿರುವ ತುಮಕೂರು ಲೋಕಸಭಾ ಸದಸ್ಯರಾದ ೀ ಎಸ್.ಮಲ್ಲಿಕಾರ್ಜುನಯ್ಯನವರು ಧ್ವಜಾರೋಹಣ ಮಾಡಿ ವಿವಿಧ ವಿದ್ಯಾಸಂಸ್ಥೆಗಳಲ್ಲಿ ್ಯಾಸಂಗ ಮಾಡುತ್ತಿರುವ ೯,000 ಸಾವಿರ ವಿದ್ಯಾರ್ಥಿಗಳಿಂದ ನಡೆದ ಒಂದು ಗಂಟೆ ದೀರ್ಘ ಾಲ ಪಥ ಚಲನೆಯಲ್ಲಿ ವಂದನೆಸ್ವೀಕರಿಸಿದರು. ಅವರು ಮಾತನಾಡುತ್ತ ತ್ರಿವಿಧ ಾಸೋಹ ಮೂರ್ತಿಗಳಾದ ಪರಮ ಪೂಜ್ಯ ಡಾ|| ಶ್ರೀ ಶಿವಕುಮಾರಮಹಾಸ್ವಾಮಿ ಳವರ ದರ್ಶನಾಶೀರ್ವಾದಕ್ಕಾಗಿ ಶ್ರೀಮಠಕ್ಕೆ ಬಂದೆ. ಇಂದು ಐತಿಹಾಸಿಕವಾಗಿ ವೈಯುಕ್ತಿಕ ಾಗಿ ಪುಣ್ಯದಿವಸವಾಗಿದೆ. ಭಾರತದ ಮೂಲೆ ಮೂಲೆಗಳಲ್ಲೂ ಶ್ರೀ ಮಠದ ಶಿಕ್ಷಣ ಂಸ್ಥೆಗಳಲ್ಲಿ ವ್ಯಾಸಂಗಮಾಡಿದ ಪ್ರತಿಭಾನ್ವಿತರನ್ನು ನಾನು ಕಾಣುತ್ತಿದ್ದೇನೆ. ಉತ್ತರ ಾರತದ ಶ್ರೀ ಮೌರ್ಯ ಎಂಬುವರು ಲೋಕಸಭಾಸದಸ್ಯರಾಗಿ ನನ್ನ ಸಹೋದ್ಯೋಗಿ ಯಾಗಿದ್ದಾರೆ. ಅವರು ಆಗಾಗ್ಗೆ ಪೂಜ್ಯ ಶ್ರೀ ಶ್ರೀ ಗಳವರನ್ನು ಮತ್ತು ವ್ಯಾಸಂಗ ಮಾಡಿದ ಸಿದ್ಧಗಂಗಾ ತಾಂತ್ರಿಕ ವಿದ್ಯಾಲಯವನ್ನು ಸ್ಮರಿಸುತ್ತಿರುತ್ತಾರೆ.

ಜೀವನದಲ್ಲಿ ದೀನದಲಿತರಿಗೆ ಆಶ್ರಯವಿದೆ ಎಂದರೆ ಭಾರತದಲ್ಲಿ ಶ್ರೀ ಸಿದ್ಧಗಂಗಾ ಮಠ. ಇದಕ್ಕಾಗಿ ಪೂಜ್ಯ ಶ್ರೀ ಶ್ರೀಗಳು ದಿನದ 20 ಘಂಟೆಗಳು ಕ್ರಿಯಾಶೀಲರಾಗಿ ತ್ಯಾಗಿ ಳಾಗಿದ್ದಾರೆ. ಇಂಥಹ ಮಹಾಚೇತನಕ್ಕೆ ನಾವು ಮತ್ತು ರಾಷ್ಟ್ರ ಭಕ್ತಿ ಪೂರ್ವಕ ಕೃತಜ್ಞ ಗಳನ್ನು ಎಲ್ಲಾ ಕಾಲಕ್ಕೂ ಸಮರ್ಪಿಸಬೇಕು

ಇಂದು ಸ್ವಾತಂತ್ರ್ಯ ದಿನದ ನೆನಪು ಮಾಡಿಕೊಳ್ಳುತ್ತಿದ್ದೇವೆ. ಸ್ವಾತಂತ್ರ್ಯದ ಫಲ ನಿರಕ್ಷರತೆ, ಅಶಾಂತಿ, ಕ್ರೌರ್ಯ ಭಾವನೆ, ಕೊಲೆ ಮುಂತಾದ ಅಜ್ಞಾನ, ಬಡತನ, ದುಷ್ಕೃತ್ಯಗಳಾಗಿವೆ. ಇವುಗಳಿಂದ ವಿಮುಕ್ತರಾಗಲು ದೇಶಾಭಿಮಾನ, ರಾಷ್ಟ್ರಪ್ರಜ್ಞೆ, ಸಹಕಾರ ಬಾಳ್ವೆ, ಮಾನವೀಯ ಮೌಲ್ಯಗಳ ಬೆಳವಣಿಗೆಗಳ ಬಗ್ಗೆ ಚಿಂತನಮಾಡಿದಾಗ ನಮ್ಮ ಭಾರತ ಸರ್ವತೋಮುಖ ಸಮೃದ್ಧ ರಾಷ್ಟ್ರವಾಗುತ್ತದೆ ಎಂದು ಹೇಳಿದರು.

ಮುಖ್ಯ ಅತಿಥಿಯಾಗಿ ತುಮಕೂರು ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯ ಉಪನಿರ್ದೇಶಕರಾದ ಶ್ರೀ ಶಿವಬಸಪ್ಪನವರು, ಮಾತ ನಾಡಿ ಶ್ರೀ ಶ್ರೀಗಳವರು ಹೊಸ ಹೊಸ ಸಾಧನೆಗಳನ್ನು ಮಾಡುತ್ತಾ ಸಮಾಜ ಸೇವೆಗೆ ಸಮರ್ಪಿಸಿಕೊಂಡಿದ್ದಾರೆ. ಇಂಥ ತ್ಯಾಗ ಮೂರ್ತಿಗೆ ರಾಷ್ಟ್ರವು ಕೊಟ್ಟದ ಭಾರತರತ್ನ ಪ್ರಶಸ್ತಿ ನೀಡಬೇಕು ಎಂದು ಆಶಿಸಿದರು.

ನಮ್ಮದೇಶ ಆರ್ಥಿಕ, ಸಾಮಾಜಿಕವಾಗಿ ಅನೇಕ ತೊಂದರೆಗಳನ್ನು ಎದುರಿಸುತ್ತಿ ರತ್ನಪ್ರಾಯವಾದ ಸ್ವಾತಂತ್ರ್ಯ ಲಕ್ಷಾಂತರ ಜನಗಳ ತ್ಯಾಗ ಬಲಿದಾನದಿಂದ ದೊರಕಿದೆ. ಶ್ರೀ ಮಠದ ಹಿನ್ನೆಲೆಯಲ್ಲಿ ಬೆಳೆಯುತ್ತಿರುವ ವಿದ್ಯಾರ್ಥಿಗಳು ಉಜ್ವಲವಾದ ರಾಷ್ಟ್ರ ಪ್ರೇಮ ಉಳ್ಳವರಾಗಿ' ಒಳ್ಳೆಯ ಆದರ್ಶಭಾವನೆಗಳನ್ನು ಬೆಳಸಿಕೊಳ್ಳಲು ಪಣತೊಡ ಬೇಕೆಂದು ನುಡಿದರು.

ಸಮಾರಂಭದ ಅಧ್ಯಕ್ಷತೆವಹಿಸಿದ್ದ ತುಮಕೂರು ಜಿಲ್ಲೆ ಶಿಕ್ಷಣ ಉಪನಿರ್ದೇಶಕ ರಾದ ಶ್ರೀ ಪಿ. ಸುಬ್ಬರಾವ್ ಮಾತನಾಡಿ ಸ್ವಾತಂತ್ರ್ಯದ ಬೆಲೆಯನ್ನು ನಾವು ಅರಿಯ ಬೇಕು. ಪರಕೀಯರ ದಾಸ್ಯದಲ್ಲಿ ಬದುಕಿದ್ದ ಜನತೆ ನಿಕೃಷ್ಟವಾದ ದುರ್ಬರ ಜೀವನ ಸಾಗಿಸುತ್ತಿತ್ತು. ಸ್ವಾತಂತ್ರ್ಯ ಮತ್ತು ಅಧಿಕಾರಬಂದಾಗ ನಮ್ಮ ನಡವಳಿಕೆಗಳು ಉದಾತ್ತವಾಗಿರಬೇಕು. ಸಂಪತ್ತಿನ ವಿತರಣೆಯಲ್ಲಿ ಸಮಾನತೆ, ಅಜ್ಞಾನ, ಅನಕ್ಷರತೆ ನಿವಾರಿಸುವಲ್ಲಿ ಎಲ್ಲರೂ ಶ್ರಮಿಸಬೇಕು. ಸ್ವಾತಂತ್ರ್ಯಕ್ಕೆ ಬಲಿಯಾದ ಹುತಾತ್ಮರನ್ನು ಸ್ಮರಿಸಿ ವಂದನೆ ಸಲ್ಲಿಸಬೇಕೆಂದರು.

ಪೂಜ್ಯ ಶ್ರೀ ಶ್ರೀಗಳವರು ಆಶೀರ್ವಚನ ನೀಡುತ್ತಾ ಸ್ವಾತಂತ್ರ್ಯದ ಅವಧಿ 44 ವರ್ಷಗಳು ತುಂಬಿ 45ನೇ ವರ್ಷಕ್ಕೆ ಪಾದಾರ್ಪಣೆ ಮಾಡಿದೆ. 1947 ಆಗಸ್ಟ್ ಮಧ್ಯರಾತ್ರಿ ಸ್ವಾತಂತ್ರ್ಯಘೋಷಣೆಯಾಯಿತು. ಇದು ಕೇವಲ ರಾಜಕೀಯ ಸ್ವಾತಂತ್ರ್ಯ ವಾಯಿತೇ ವಿನಃ ರಾಷ್ಟ್ರೀಯ ಸ್ವಾತಂತ್ರ್ಯವಲ್ಲ. ಇಂದು ನಾವು ಸಮಸ್ಯೆಗಳ ಸುಳಿಯ ಲ್ಲಿದ್ದೇವೆ, ಧರ್ಮ ನಶಿಸಿಹೋಗಿದೆ. ಬಡತನ, ಅಜ್ಞಾನ ವಿಪುಲವಾಗಿ ಬೆಳೆದಿದೆ. ಏಳುಪಂ ವಾರ್ಷಿಕ ಯೋಜನೆಗಳು ಮುಗಿದರೂ ಈಬಗ್ಗೆ ಗುರಿಮುಟ್ಟಿಲ್ಲ. ನಾಲ್ಕು ದಶಕ ಕಳೆದರು ಪರಿಸ್ಥಿತಿ ಗಂಭೀರವಾಗಿ ಉಳಿದಿದೆ. ಗಾಂಧೀಜೀಯವರ ಇಚ್ಛೆ ರಾಮರಾಜ್ಯ ಸ್ಥಾಪನೆ, ಉ.ದಾ. ಜಪಾನ್ ದೇಶ ಮಹಾಯುದ್ಧಕ್ಕೆ ಗುರಿಯಾದ ಅಲ್ಪ ಕಾಲದಲ್ಲಿ ಸಾಧಿಸಿರು ಪ್ರಗತಿ ಜಗತ್‌ವಿಖ್ಯಾತವಾಗಿದೆ. ಈರೀತಿ ನಮ್ಮ ರಾಷ್ಟ್ರ ಸಂಮೃದ್ಧಿಯಾಗಬೇಕಾದರೆ ಎಲ್ಲರೂ ಅವರವರ ಸ್ಥಾನದಲ್ಲಿ ಸಮರ್ಪಣ ಭಾವದಿಂದ ಕರ್ತವ್ಯಗಳನ್ನು ಯೋಗ್ಯ ರೀತಿಯಲ್ಲಿಮಾಡಬೇಕು.

ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವಗಳ ಅರ್ಥ ಶಾಂತಿ ನೆಮ್ಮದಿಯಿಂದ ಎಲ್ಲರೂ ಪ್ರಗತಿಯಾಗಬೇಕು.

Democracy is the Peaceful living and Progress of all. ಭರತ ಖಂಡ ಎಲ್ಲರಿಗೂ ಕಲ್ಯಾಣಬಯಸಿ ಮಾರ್ಗದರ್ಶನ ಮಾಡಿದೆ. ಮಹೋನ್ನತ ಸಂದೇಶವನ್ನು ಅರಿತು ಮುನ್ನಡೆಯಬೇಕೆಂಬ ಆತ್ಮವಿಶ್ವಾಸವನ್ನು ಹೊಂದಬೇಕು. ಎಂದು ನುಡಿದರು. ಸ್ವಾತಂತ್ರ್ಯೋತ್ಸವದ ಮಹತ್ವವನ್ನು ಪ್ರತಿಬಿಂಬಿಸುವಂಥ ಸಾಂಸ್ಕೃತಿಕ ಚಟುವಟಿಕೆಗಳನ್ನು ಶ್ರೀ ಮಠದ ಸನಿವಾಸ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿ ಗಳು, ವಿದ್ಯಾರ್ಥಿನಿಯರು ಉತ್ತಮವಾಗಿ ಪ್ರದರ್ಶಿಸಿದರು. ಈ ಸಮಾರಂಭದ ಪ್ರಾರಂಭದಲ್ಲಿ ಶ್ರೀ ಸಿದ್ಧಲಿಂಗೇಶ್ವರ ವೇದ-ಸಂಸ್ಕೃತ ವಿದ್ಯಾಲಯದ ಪ್ರಾಂಶುಪಾಲರಾದ ಶ್ರೀ ಎಸ್.ಪಿ. ಶಿವಶಂಕರ್ ಸ್ವಾಗತಕೋರಿದರು ಪ್ರೌಢಶಾಲಾ ಶಿಕ್ಷಕರಾದ ಶ್ರೀ ಪಿ.ಆರ್ ಸೋಮಶೇಖರ್ ವಂದಿಸಿದರು.

2 ನೇ ರಕ್ಷಾ ಪುಟದಿಂದ ಮುಂದುವರಿದಿದೆ)

ಈಗಾಗಲೇ ಅನೇಕ ಮಹನೀಯರು ಉದಾರವಾಗಿ ಯೋಜನೆಗಳನ್ನು ಂಬಲಿಸಿ ದಾನ ಮಾಡಲು ಮುಂದೆ ಬಂದಿದ್ದು 115 ಕೊಠಡಿಗಳಿಗೆ ಾಗ್ದಾನ ಮಾಡಿರುವುದಲ್ಲದೆ ಕಾಣಿಕೆಯನ್ನು ನೀಡಿರುತ್ತಾರೆ. ಪ್ರಸಾದ ಲಯದ ನಿರ್ಮಾಣಕ್ಕೂ ಸಹಾಯ ಮಾಡಿರುತ್ತಾರೆ. ಈ ಸುಸಂದರ್ಭದಲ್ಲಿ ್ರೀಮಠದ ಭಕ್ತಾದಿಗಳಾದ ತಮ್ಮಲ್ಲಿ ಪ್ರಾರ್ಥಿಸುವುದೇನೆಂದರೆ ತಾವು ಈ ವಜ್ರ-ುಹೋನ್ನತ ಪುಣ್ಯ ಮಣಿಹದಲ್ಲಿ ಉದಾರವಾಗಿ ಕಾಣಿಕೆ ಅರ್ಪಿಸುವುದರ ಮೂಲಕ ವಜ್ರ ಮಹೋತ್ಸವ" ಅಮೋಘವಾಗಿ ನಡೆಯಲು ಸಹಕಾರ ನೀಡುವಿರೆಂದು ಂಬಿರುತ್ತೇವೆ.

ನಿಯೋಜಿತ ವಿದ್ಯಾರ್ಥಿನಿಲಯದ ಒಂದು ಕೊಠಡಿ ಕಟ್ಟಿಸಿಕೊಡುವವರ ೆಸರನ್ನು ಕೊಠಡಿಗೆ ಇಡಲಾಗುತ್ತೆ. ಅದಕ್ಕೆ ತಗಲುವ ಅಂದಾಜು ಮೊಬಲಗು 5,000 ರೂಗಳು ಆರು ಕೊಠಡಿಯ 'ಬ್ಲಾಕ್' ಕಟ್ಟಿಸಿಕೊಡುವವರ ಹೆಸರನ್ನು ಡೀ ಬ್ಲಾಕ್‌ಗೆ ಇಡಲಾಗುತ್ತದೆ.

ಪ್ರಸಾದ ನಿಲಯಕ್ಕೆ ಸಹಾಯ ಮಾಡುವವರ ಹೆಸರನ್ನು ನಿಲಯದ ಶಿಲಾ ಲಕದಲ್ಲಿ ಬರೆಸಲಾಗುತ್ತದೆ.

ದಯಮಾಡಿ ತಮ್ಮ ವಂತಿಕೆಯನ್ನು ಈ ಪುಣ್ಯ ಕಾರ್ಯಕ್ಕೆ ವಿನಿಯೋಗಿಸ ೇಕಾಗಿ ಪ್ರಾರ್ಥಿಸುತ್ತೇವೆ.

**ಪರಮ ಪೂಜ್ಯ ಶ್ರೀ ಶ್ರೀಗಳವರ ಸೇವಾ ಮಣಿಹಕ್ಕೆ ನಾವೆಲ್ಲ ನೀಡ ಹುದಾದ ಭಕ್ತಿ ಕಾಣಿಕೆಗೆ ಇದೊಂದು ಅಪೂರ್ವ ಅವಕಾಶವಾಗಿದೆ.**

**ಶರಣಾರ್ಥಿಗಳು**

**ನ್ಮಭೂಷಣ ಡಾ|| ಎಂ.ಸಿ. ಮೋದಿಯವರು,**
ಗೌರವಾಧ್ಯಕ್ಷರು.

**ಶ್ರೀ ಬಿ.ಎಸ್. ಮುದ್ದಪ್ಪನವರು**
ಕಾರ್ಯಾಧ್ಯಕ್ಷರು, (ನಿವೃತ್ತ)

**ಶ್ರೀ ಹಸಬಿಯವರು**
ಕಾರ್ಯದರ್ಶಿಗಳು.

ತುಮಕೂರಿಗೆ ಬರುವವರಿದ್ದೀರಾ? ಹಾಗಿದ್ದರೆ, ವೈವಿಧ್ಯಮಯ ಊಟ,
ವಸತಿ, ತಿಂಡಿ ತಿನಿಸುಗಳ ನಮ್ಮ ಈ ಸ್ಥಳಗಳು ಸದಾ ನಿಮ್ಮನ್ನು ಸ್ವಾಗತಿಸುತ್ತಿವೆ.

ಹೋಟೆಲ್
ಶ್ರೀ ನಂಜುಂಡೇಶ್ವರ
ಊಟ, ವಸತಿ ಮತ್ತು
ಉಪಹಾರ ಮಂದಿರ,
ಬಿ.ಹೆಚ್. ರಸ್ತೆ, ತುಮಕೂರು.
ದೂರವಾಣಿ
8597, 2373, 2577




ಶ್ರೀ ನಂಜುಂಡೇಶ್ವರ
ಬೇಕರಿ
ತುಮಕೂರು ಜಿಲ್ಲೆಯ ಪ್ರಖ್ಯಾತ
ಬೇಕರಿ
ಚಿಕ್ಕಪೇಟೆ ತುಮಕೂರು.
ದೂರವಾಣಿ : 8077

ಶ್ರೀ ನಂಜುಂಡೇಶ್ವರ ರೆಸ್ಟೋರೆಂಟ್
ತುಮಕೂರಿನಲ್ಲಿ ಉತ್ತರ ಭಾರತದ ಶೈಲಿಯ ಊಟ
ಉಪಹಾರಗಳ ಶ್ರೇಷ್ಠ ದರ್ಜೆಯ ರೆಸ್ಟೋರೆಂಟ್
ಬಿ.ಹೆಚ್. ರಸ್ತೆ, ತುಮಕೂರು.
ದೂರವಾಣಿ : 2677

ಸಿ.ವಿ. ಮಹದೇವಯ್ಯ
ಮ್ಯಾನೇಜಿಂಗ್ ಪಾರ್ಟನರ್
ಮನೆ ಫೋ. 2477

ಶ್ರೀ ನಂಜುಂಡೇಶ್ವರ ಸ್ವೀಟ್ಸ್
ಎಲ್ಲಾ ವಿಧವಾದ ಸಿಹಿ ಮತ್ತು ಖಾರ ತಿಂಡಿ ಹಾಗೂ
ಬೇಕರಿ ತಿನಿಸುಗಳ ನಗರದ ಏಕೈಕ ಸ್ಥಳ
ಅಶೋಕ ರಸ್ತೆ ತುಮಕೂರು.
ದೂರವಾಣಿ : 2077


ಶ್ರೀ ಸಿದ್ಧಲಿಂಗೇಶ್ವರಸ್ವಾಮಿ ಮುದ್ರಣಾಲಯ, ಶ್ರೀ ಸಿದ್ಧಗಂಗಾ ಮಠ,

# ಸಿದ್ಧಗಂಗಾ

ಂಪುಟ–27.　　ಸಂಚಿಕೆ–10.　　ಅಕ್ಟೋಬರ್–1991.

ಭ್ರಷ್ಟಾಚಾರದ ಬಯಲು ನೃತ್ಯ ಎಲ್ಲೆಲ್ಲೂ ನಡೆದಿದೆ, ಲ್ಲ ಹಂತಗಳಲ್ಲೂ ವಿಜೃಂಭಿಸಿದೆ. ಜನ ನಾಯಕರು ನೈತಿಕ ವಾಳಿಯ ದೀಪಾವಳಿಯನ್ನೇ ಆಚರಿಸುತ್ತಿದ್ದಾರೆ. ಅಧಿಕಾರಿಗಳು, ೌಕರರು, ರಕ್ಷಕರು, ಶಿಕ್ಷಕರು ಅಪವಾದವಿಲ್ಲವೆಂಬಂತೆ ಭ್ರಷ್ಟಾ ಚಾರದ ಸ್ಪರ್ಧೆ ನಡೆಸಿದ್ದಾರೆ. ಸಾರ್ವ ಜೀವನ ಪೂರ್ಣ ರಾಡಿಯಾಗಿ ಹೋಗಿದೆ. ಯುವಜನಾಂಗ ಬೆಳಕು ಕಾಣದೆ ಹತಾಶರಾಗು- ್ತಿದ್ದಾರೆ; ಸಮಾಜ ಕಂಟಕರಾಗಿ ತಲೆ ಎತ್ತುತ್ತಿದ್ದಾರೆ. ಮಠಾಧಿ ಪತಿಗಳು ಧರ್ಮಾಧಿಕಾರಿಗಳು ಜಾಗೃತರಾಗಿ ಈ ಅನಿಷ್ಟ ಪರಿಹಾರ ಕ್ಕಾಗಿ ಸಂಕಲ್ಪ ದೀಕ್ಷಿತರಾಗಬೇಕಾಗಿದೆ.

– ಡಾ|| ಶ್ರೀ ಶ್ರೀ ಶ್ರೀ ಶಿವಕುಮಾರಸ್ವಾಮಿಗಳು

ಪ್ರಕಾಶಕರು:
ಹಳೆಯ ವಿದ್ಯಾರ್ಥಿಗಳ ಸಂಘ.
ಸಿದ್ಧಗಂಗಾ ಕ್ಷೇತ್ರ.

## 'ಸಿದ್ಧಗಂಗಾ' ಚಿರಾಯುವಾಗಲೆಂದು ಹರಸಿ ಹಾರೈಸುವ
## ಅಜೀವ ಸದಸ್ಯರ ಬಳಗ.

1343 ಶ್ರೀ ರಾಜಶೇಖರಪ್ಪ ಸಜ್ಜನ್, ರಂಗಂಪೇಟೆ,
ಸುರಪುರ, ಗುಲ್ಬರ್ಗ ಜಿಲ್ಲೆ

1344 ಶ್ರೀ ಶರಣಗೌಡ ಬೀರಾದಾರ್, ಮನಮತಗಿ,
ಶಹಪುರ ತಾ||, ಗುಲ್ಬರ್ಗಜಿಲ್ಲೆ

1345 ಶ್ರೀ ಆರ್. ಸಿ. ಜಾಲಕಿ, ನಾಗಯ್ಯ, ನಂದಿಕೋಲು,
ಸುರಪುರ ತಾ||, ಗುಲ್ಬರ್ಗ ಜಿಲ್ಲೆ

1346 ಶ್ರೀ ಎಂ. ಮುದ್ದರಂಗಯ್ಯ, ರಾಜಾಜಿನಗರ, ಬೆಂಗಳೂರು

1347 ಶ್ರೀ ಬಿ. ಟಿ. ಲಿಂಗದೇವರಯ್ಯ, ಪ್ರಾಂಶುಪಾಲರು,
ಜನತ ಜೂನಿಯರ್ ಕಾಲೇಜು, ಹಂದನಕೆರೆ, ತುಮಕೂರು ಜಿಲ್ಲೆ

1348 ಶ್ರೀ ರಂಗಸ್ವಾಮಿ, ಪ್ರೊ|| ಪ್ರತಿಭಾ ಏಜನ್ಸೀಸ್,
ತಿಪಟೂರು, ತುಮಕೂರು ಜಿಲ್ಲೆ

1349 ಶ್ರೀ ಎ.ಆರ್. ಕೊಟಕಿ, ಗಜೇಂದ್ರಗಡ
ರೋಣಾ ತಾ||, ಧಾರವಾಡ ಜಿಲ್ಲೆ

1350 ಶ್ರೀ ಎಸ್. ಉಮೇಶ್, S/o ಷರಾಫ್‌ಶಿವಶಂಕರಪ್ಪ
ಚಾಮರಾಜಪೇಟೆ, ಬೆಂಗಳೂರು – 18

1351 ಶ್ರೀ ಹೆಚ್. ಎಸ್. ಜಯಣ್ಣ, S/o ಹೆಚ್. ವಿ. ಶಿವಣ್ಣ
ಚಾಮರಾಜ ಪೇಟೆ, ಬೆಂಗಳೂರು

1352 ಶ್ರೀ ಬಿ.ಎಸ್. ನಟರಾಜ್ S/o ಶ್ರೀ ಎಸ್. ಶಾಂತಯ್ಯ
ಚಾಮರಾಜ ಪೇಟೆ, ಬೆಂಗಳೂರು - 18

1353 ಶ್ರೀ ಬಿ ಸಿ. ಹೊನ್ನಪ್ಪ, ಬೈಯ್ಯಂಡಹಳ್ಳಿ, ಬೆಂಗಳೂರು–30

1354 ಶ್ರೀ ಬಿ. ಶಿವಣ್ಣ, ಗೋವಿಂದರಾಜ ನಗರ, ಬೆಂಗಳೂರು-40

1355 ಶ್ರೀ ಎಲ್. ಎಫ್, ಹುಂಡೇಕರ್, ಬೀಜೊಲೀಮ್, ಗೋವಾ.

1356 ಶ್ರೀ ಪಿ.ಎನ್. ಲಿಂಗಪ್ಪ, ವಿಜಯ ನಗರ, ಬೆಂಗಳೂರು.

1357 ಶ್ರೀ ಕೆ. ಆರ್. ಸಿದ್ಧಲಿಂಗಾಚಾರ್, S/o ಶ್ರೀ ಪಿ. ರಾಜಾಚಾರ್,
ಶಿಕ್ಷಕರು, ಕಬ್ಬೂರ್, ಹೊಳೇನರಸಿಪುರ ತಾ||, ಹಾಸನ ಜಿಲ್ಲೆ.

1358 ಶ್ರೀ ಎಲ್. ಶಿವಕುಮಾರ್, ಅಸಿಸ್ಟೆಂಟ್, ಕೆ.ಇ.ಬಿ,
ಯಲಹಂಕ, ಬೆಂಗಳೂರು - 64

# ಸಿದ್ಧಗಂಗಾ

ಸಂಪುಟ – 27.    ಸಂಚಿಕೆ – 10.    ಅಕ್ಟೋಬರ್ 1991.

## ಶ್ರೀ ಸಿದ್ಧಗಂಗಾ ಗುರುಕರುಣ ತ್ರಿವಿಧಿ.

ಕರ್ತನಟ್ಟಿದನೆಂದು ಮರ್ತ್ಯಕ್ಕೆ ಬಂದಿರುವೆ
ಮರ್ತ್ಯದ ಮಣಿಹವ ನಡೆಸಿರುವೆ । ನನ್ನತಂದೆ
ಸಿದ್ಧಗಂಗಾ ಗುರುವೆ ಕೃಪೆಯಾಗು ॥

❁ ❁ ❁

ಕಾಲಕರ್ಮಗಳ ಜಾಲವನು ಬಿಡಿಸುವ
ಲೀಲೆ ನೀನಡೆಸಿರುವೆ ನನ್ನತಂದೆ । ಪೊಡಮಡುವೆ
ಸಿದ್ಧಗಂಗಾ ಗುರುವೆ ಕೃಪೆಯಾಗು ॥

❁ ❁ ❁

ಕಾಶಿ ಶ್ರೀ ಶೈಲಗಳು ತೀರ್ಥಕೇದಾರಗಳು
ಶ್ರೀ ಚರಣಕಿಂ ಮಿಗಿಲೆ ನನ್ನತಂದೆ । ಪೊಡಮಡುವೆ
ಸಿದ್ಧಗಂಗಾ ಗುರುವೆ ಕೃಪೆಯಾಗು ॥

— ಹೆಚ್. ವಿ. ವೀರಭದ್ರಯ್ಯ.

| ಲೇಖನ | ಲೇಖಕರು | ಪುಟ |
|---|---|---|
| * ಶ್ರೀವಾಣಿ | | 5 |
| * ಶ್ರೀ ಸಿದ್ಧಲಿಂಗೇಶ್ವರ ವಚನ | | 8 |
| * ಸಂಪಾದಕೀಯ | | 9 |
| * ತುಮಕೂರು ಜಿಲ್ಲೆಯ ಇತಿಹಾಸ | ಕೃಪೆ:- ಇತಿಹಾಸ ಪರಿಷತ್ | 11 |
| * ಬಸವತತ್ತ್ವ ರತ್ನಾಕರ-6 | ಮೋಟಗಿ ಮಲ್ಲಿಕಾರ್ಜುನ | 19 |
| * ಅಪ್‌ಟುಡೇಟ್‌ಗಣೇಶ | ಎಲ್. ಆರ್. ಹೆಗಡೆ | 26 |
| * ಚಿಂತನ-ಮಂಥನ | ತದ್ದಲಸೆ ವಿಘ್ನೇಶ್ವರ ಶರ್ಮ | 33 |
| * ವಿಜ್ಞಾನ ಮತ್ತು ಅಧ್ಯಾತ್ಮ | ಎಚ್. ಎಸ್. ನರಸಿಂಹಜೀಯರ್ | 35 |
| * ವರತಪಸ್ವಿ | ಜಿ. ರಾಧಾದೇವಿ | 40 |
| * ಕ್ಷೇತ್ರ ವಾರ್ತೆ | ಹೆಚ್. ಬಿ. ಗಂಗಾಧರಯ್ಯ | 45 |
| * ಅಭಿನಂದನೆ | | 48 |
| * ಶ್ರದ್ಧಾಂಜಲಿ | | 49 |
| * ಸಂತಾಪ | | 50 |

# ಶ್ರೀವಾಣಿ




## ಕಾಪಿ ಪಿಡುಗು

ಎಸ್.ಎಸ್.ಎಲ್.ಸಿ ಫಲಿತಾಂಶ ಪ್ರಕಟವಾದ ಸಂದರ್ಭ. ಪತ್ರಿಕೆಗಳ ತುಂಬ ಶಿಕ್ಷಣ ಸಂಸ್ಥೆಗಳ ಹೆಮ್ಮೆಯ ಪ್ರಕಟಣೆ. ತಮ್ಮ ಸಂಸ್ಥೆಯ ಫಲಿತಾಂಶ ನೂರಕ್ಕೆ ನೂರು, ನೂರಕ್ಕೆ ತೊಂಬತ್ತೆಂಟು, ತೊಂಬತ್ತೈದು ಮುಂತಾಗಿ ಸಾರ್ವಜನಿಕರ ಗಮನ ಸೆಳೆದದ್ದೇ ಸೆಳೆದದ್ದು. ಸಂಸ್ಥೆಯ ಮುಖ್ಯಸ್ಥರು ಶಿಕ್ಷಕರು ಬೆನ್ನು ತಟ್ಟಿ ಕೊಂಡ ಪ್ರಸಂಗಗಳು, ಎಲ್ಲೆಲ್ಲೂ ವಿದ್ಯಾರ್ಥಿಗಳಿಗಂತೂ ತಾವು ಪ್ರೌಢ ವಿದ್ಯಾಭ್ಯಾಸ ಮುಗಿಸಿದೆವು ಎಂಬ ಹೆಮ್ಮೆ. ಶಿಕ್ಷಣಾಧಿಕಾರಿಗಳು ಫಲಿತಾಂಶದಲ್ಲಿ ಹೆಚ್ಚಳ ಎಂಬ ಪತ್ರಿಕಾ ಹೇಳಿಕೆ. ಶಿಕ್ಷಣ ಕ್ಷೇತ್ರ ಸುಧಾರಿಸುತ್ತಿದೆ ಎಂದು ಶಿಕ್ಷಣ ಸಚಿವರ ತೃಪ್ತಿ. ತಮ್ಮ ಮಕ್ಕಳು ಸದ್ಯ ಪಾಸಾದರು ಎಂಬುದಾಗಿ ಪೋಷಕರ ನೆಮ್ಮದಿಯ ನಿಟ್ಟುಸಿರು.

ಆದರೆ, ಫಲಿತಾಂಶ ಉತ್ತಮಗೊಳ್ಳಲು ಅನುಸರಿಸಿದ ಮಾರ್ಗಗಳು ಯಾವುವು ? ಸಕ್ರಮವಾಗಿದ್ದವೆ ? ನೈತಿಕತೆಯ ತಳಹದಿಯ ಮೇಲೆ ರೂಪಿತವಾಗಿದ್ದವೇ? ಯೋಚಿಸುವ ಪ್ರವೃತ್ತಿ ಸಂಬಂಧಿಸಿದವರಲ್ಲಿ ಕಾಣುತ್ತಿದೆಯೇ? ಏಕೆ ಹೀಗೆ ? ಎತ್ತ ಸಾಗಿದ್ದೇವೆ ? ವಿಚಾರ ಮಾಡಬೇಡವೆ ? ವರ್ಷದುದ್ದಕ್ಕೂ ಪಾಠ ಪ್ರವಚನ ಬೋಧಿಸುವ ಶಿಕ್ಷಕವರ್ಗ ತನ್ನ ವಿದ್ಯಾರ್ಥಿ ಅನೈತಿಕಮಾರ್ಗ ಅನುಸರಿಸಿದಂತಹ ಮಾರ್ಗ ತೋರಿಸಲು ಬರಲಾರದೆ ಅಥವಾ ಅಸಹಾಯಕನಾಗಿದ್ದಾನೆಯೆ ?

ಆದಕ್ಕೆ ಕಾರಣಗಳೇನು ? ವಿದ್ಯಾರ್ಥಿಯ ಸುತ್ತ-ಮುತ್ತ ಬೆಳೆಯುತ್ತಿರುವ ಭ್ರಷ್ಟಾಚಾರದ ರಾಜಮಾರ್ಗವೆ ? ತಮ್ಮ ಮಕ್ಕಳು ಅನೈತಿಕವಂಶರಾಗಬಾರದು ಎಂಬ ಎಚ್ಚರದಿಂದ ಪೋಷಕ ಪಾಲಕರು ಕರ್ತವ್ಯಚ್ಯುತರಾಗುತ್ತಿದ್ದಾರೆಯೆ ? ಪಾಸು-ಫೇಲುಗಳ ಅಂಕಿ ಅಂಶಗಳು ಮುಖ್ಯವಲ್ಲ ಉತ್ತಮ ನಡತೆಯ ಯುವಜನಾಂಗ ನಾಡಿನ ಆಸ್ತಿ ಎಂಬುದನ್ನ ಸರ್ಕಾರ ಸಮಾಜ ಗಮನಿಸುತ್ತಿಲ್ಲ ಏಕೆ ? ಫಲಿತಾಂಶದ ಹೆಚ್ಚಳಕ್ಕಾಗಿ ಅನುಸರಿಸುತ್ತಿರುವ ಅನೈತಿಕ ಮಾರ್ಗಗಳು ಎಷ್ಟು ? ಯಾವರೂಪದವು ? ಯಾವ ಯಾವ ಹಂತದಲ್ಲಿ ಯಾರ್‍ಯಾರು ಎಷ್ಟೆಷ್ಟು ಭಾಗಿಗಳು ಎಂಬುದಕ್ಕಾಗಿ ನೇಮಕವಾಗುತ್ತಿರುವ ವಿಚಾರಣಾ ಸಮಿತಿಗಳು, ಜಾಗೃತ ದಳಗಳು, ಮುಕ್ತವಾಗಿ ಪ್ರಾಮಾಣಿಕವಾಗಿ ತಮ್ಮ ಪಾಲಿನ ಕರ್ತವ್ಯ ನಿರ್ವಹಿಸಲು ಎದುರಾಗುತ್ತಿರುವ 'ಸೂಕ್ಷ್ಮ ಸಮಸ್ಯೆ'ಗಳಿಗೆ ಪರಿಹಾರ ಎಲ್ಲ ಕಂಡುಕೊಂಡು ಕೊಳ್ಳುವುದು? ಪರೀಕ್ಷಾನಂತರ ನಡೆಯುತ್ತಿರುವ ಅಕ್ರಮಗಳು ಹೇಗೆ ? ಎಲ್ಲಿ ತಲೆ ಎತ್ತುತ್ತವೆ ? ಉತ್ತರಪತ್ರಿಕೆಗಳ ಮೌಲ್ಯ ಮಾಪನಕ್ಕೆ ಮೊದಲ ಗುಪ್ತಸಂಖ್ಯೆಗಳನ್ನು ಕೊಟ್ಟೊ ಅಕ್ರಮಗಳು ನಡೆಯಲು ಯಾರು ಕಾರಣ ? ಅಂಕ ಪಟ್ಟಿಯ ದೋಷಗಳು ಹೇಗೆ ನುಸುಳುತ್ತವೇ ? ಆಕಸ್ಮಿಕವಾಗಿಯೇ ? ಅಥವಾ ? ಅದೊಂದು ವ್ಯವಸ್ಥಿತ ರಹಸ್ಯ ತಂತ್ರವೇ ? ಆಕಾಶದಲ್ಲಿ ಮಿನುಗುವ ನಕ್ಷತ್ರಗಳನ್ನು ಎಣಿಸಬಹುದೆಂದು ಕಾಣುತ್ತದೆ ಈ ವಿಜ್ಞಾನ ಯುಗದಲ್ಲಿ. ಆದರೆ ಮನುಷ್ಯನ ಅನೈತಿಕ ಅಪ್ರಮಾಣಿಕ ಕೃತ್ಯಗಳನ್ನು ಎಣಿಸಲಾಗದೆಂದೇ ಹೇಳುವಂತಾಗಿದೆ. ಪರೀಕ್ಷೆ ಎಂಬುದು ಪಕ್ವತೆಯ ಅಳತೆಗೋಲಾಗಬೇಕೇ ಹೊರತು ಶೇಖಡವಾರು ಹೆಚ್ಚಳದ ಸಂತೆಯಾಗಬಾರದು. ಪರೀಕ್ಷಾ ವ್ಯವಸ್ಥೆಯ ಪಾವಿತ್ರ್ಯಕ್ಕೆ ಸಂಬಂಧಿಸಿದವರೆಲ್ಲರೂ ಆತ್ಮಶೋಧ ಮಾಡಿಕೊಳ್ಳಬೇಕು. ಫಲಿತಾಂಶದ ಹೆಚ್ಚಳಕ್ಕೆ ಅನುಸರಿಸುತ್ತಿರುವ ಮಾರ್ಗ ಭವಿಷ್ಯದ ಜನಾಂಗವನ್ನು ವಿಷಕೂಪದತ್ತ ತಳ್ಳುತ್ತಿದ್ದೇವೆ ಎಂದು ? ಆತ್ಮಪರೀಕ್ಷೆಗಿಂತ ಲೋಕ ನಿರೀಕ್ಷೆ ದೊಡ್ಡದಲ್ಲ " ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ, ನಿಮ್ಮನಿಮ್ಮಮನವ ಸಂತೈಸಿಕೊಳ್ಳಿ ". ಎಂಬ ಬಸವಣ್ಣನವರ ಮಾತಿನಲ್ಲಿ ಸ್ಮರಿಸಿಕೊಳ್ಳಬಹುದು. ಆತ್ಮವಂಚನೆಗಿಂತಮಿಗಿಲಾದ ಪಾಪಮತ್ತೊಂದಿಲ್ಲ. ಅಂತೆಯೇ ಆತ್ಮಪರೀಕ್ಷೆಗಿಂತ ಶ್ರೇಷ್ಠವಾದ ಪೂಜೆ ಇನ್ನೊಂದಿಲ್ಲ. ಸುಸಂಸ್ಕೃತ ಜನಾಂಗನಿರ್ಮಾಣ ಕಾರ್ಯದಲ್ಲಿ ಆತ್ಮಪರೀಕ್ಷೆಯ ಅವಶ್ಯಕತೆ ತುಂಬಾ ತ್ರೀವ್ರವಾದುದು.

# ಶ್ರೀ ಸಿದ್ಧಲಿಂಗೇಶ್ವರ ವಚನ



ಎಮ್ಮೆಯನೇರಿದ ಎತ್ತು ಸಮ್ಮಗಾರ ನೋಡಾ
ಎತ್ತಿನ ಒಡೆಯ ಬಂದು ಎಮ್ಮೆಯ ಕೊಲಲು
ಸಮ್ಮಗಾರ ಸತ್ತು ನಿಮ್ಮ ಕಂಡೆನು ಕಾಣಾ
ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೇ.

ಅವಿದ್ಯೆಯಿಂದ ಕೂಡಿ ವರ್ತಿಸುವ ಸಜ್ಜೀವನು ಕೇವಲ ಜೀವಾತ್ಮನಾಗಿ ರ್ತಿಸುತ್ತಿರಲು ಆ ಜೀವನಿಗೆ ಕರ್ತೃವಾದ ಸಜ್ಜೀವ ಸ್ವರೂಪನಾದ ಶ್ರೀಗುರುಮಂತ್ರ ಲಿಂಗ ಸಂಬಂಧದಿಂದ ಅವಿದ್ಯಾಭಾವವ ನಷ್ಟಮಾಡಲು ಸುಜ್ಞಾನೋದಯವಾಗಿ, ಜೀವತ್ವವಳಿದು, ಲಿಂಗದಲ್ಲಿಯ ಏಕತ್ವಕ್ಕೆ ಯೋಗ್ಯವಾದೆನೆಂಬುದನ್ನು ಜ್ಞಾನನೇತ್ರದಿಂದ ಕಂಡಕೊಂಡೆನು.

ಎಮ್ಮೆ–ಅವಿದ್ಯೆ. ಎತ್ತು–ಜೀವ, ಎತ್ತಿನ ಒಡೆಯ ಶ್ರೀಗುರು.

**ಸಿದ್ಧಗಂಗಾ ಮಾಸ ಪತ್ರಿಕೆ**
**ಶ್ರೀ ಸಿದ್ಧಗಂಗಾ ಮಠ-572104**
ತುಮಕೂರು ಜಿಲ್ಲೆ

ಪ್ರಧಾನ ಸಂಪಾದಕರು
**ಪ್ರೊ|| ಚನ್ನಪ್ಪ ಎರೇಸೀಮೆ**

* * *

ಸಂಪಾದಕರು
**ಹೆಚ್. ವಿ. ವೀರಭದ್ರಯ್ಯ**

* * *

ಸಹ ಸಂಪಾದಕರು
**ಬಿ. ವೀರಭದ್ರಯ್ಯ**
**ಪಿ. ಎನ್. ಚಂದ್ರಶೇಖರಯ್ಯ**

* * *

ಜಾಹೀರಾತು ವಿಭಾಗ
**ಎಂ. ರೇಣುಕಾರಾಧ್ಯ**

* * *

ವಿತರಣೆ ವಿಭಾಗ
**ಆರ್. ಎಸ್. ಮಲ್ಲೇಶಪ್ಪ**

* * *

ಪ್ರಕಾಶಕರು
**ಹೆಚ್. ಬಿ. ಗಂಗಾಧರಯ್ಯ**
ಹಳೆಯ ವಿದ್ಯಾರ್ಥಿ ಸಂಘದ ಪರವಾಗಿ

* * *

ಮುದ್ರಕರು
**ಶ್ರೀ ಸಿದ್ಧಲಿಂಗೇಶ್ವರಸ್ವಾಮಿ ಮುದ್ರಣಾಲಯ**

* * *

ಪ್ರಕಟಣೆಯ ಸ್ಥಳ
**ಶ್ರೀ ಸಿದ್ಧಗಂಗಾಕ್ಷೇತ್ರ**

**ಚಂದಾ ವಿವರ**
ವಾರ್ಷಿಕ ಚಂದಾ 25-00ರೂ
ಆಜೀವ ಸದಸ್ಯತ್ವ 250-00 ರೂ

## ಲೇಖಕರಲ್ಲಿ ಮನವಿ

'ಸಿದ್ಧಗಂಗಾ' ಶ್ರೀ ಸಿದ್ಧಗಂ[...] ಮಠದಿಂದ ಪ್ರಕಟವಾಗುತ್ತಿರುವ ಮಾ[...] ಪತ್ರಿಕೆ. ಶ್ರೀ ಮಠದ ಹಳೆಯ ವಿದ್ಯಾ[...] ಸಂಘದ ಹೆಮ್ಮೆಯ ಸೇವಾ ಪುರಸ್[...] ಮೇಲಾಗಿ ಶ್ರೀ ಮಠದ ಮುಖವಾ[...] ಪೂಜ್ಯ ಶ್ರೀ ಶ್ರೀ ಡಾ|| ಶಿವಕುಮಾ[...] ಮಹಾಸ್ವಾಮಿಗಳವರ ದಿವ್ಯ ಮಾರ್ಗದ[...] ನದಲ್ಲಿ ಮುನ್ನಡೆದಿರುವ ಪತ್ರಿಕೆ. ಶ್ರೀ[...] ದಾಸೋಹ ಸೇವಾ ತತ್ಪರತೆಯಿಂದ ಹೆ[...] ಹಾಕುತ್ತಿದೆ. ಈ ಧ್ಯೇಯ ಸಾಧನೆಗಾ[...] ನಾಡಿನ ಗಣ್ಯ ಲೇಖಕರಿಂದ ಸಾಹಿತ್[...] ಸಂಸ್ಕೃತಿ, ಧರ್ಮ, ವಿಜ್ಞಾನ, ಶಿಕ್ಷಣ[...] ಇತಿಹಾಸ, ವೈಚಾರಿಕ, ಚಿಂತನ ಮುಂತಾ[...] ಲೇಖನಗಳನ್ನು ಸ್ವಾಗತಿಸುತ್ತದೆ ಅಸ್ವೀಕೃ[...] ಲೇಖನಗಳನ್ನು ಪಡೆಯಲು ಸಾಕಷ್[...] ಅಂಚೆಸ್ಟಾಂಪುಗಳನ್ನು ಲಗತ್ತಿಸಿರಬೇಕು[...] ಲೇಖನಗಳಲ್ಲಿ ಸೂಕ್ತ ಬದಲಾವಣೆ ಮಾ[...] ಕೊಳ್ಳುವ ಅಧಿಕಾರ ಸಂಪಾದಕರಿಗಿದೆ[...] ಅನುವಾದ, ರೂಪಾಂತರ ಲೇಖನಗಳಿ[...] ಮೂಲ ಕೃತಿಕಾರರ ಅನುಮತಿ ಪಡೆದಿ[...] ಬೇಕು. ಸ್ವೀಕೃತ ಲೇಖನಗಳಿಗೆ ಸೂಕ್[...] ಸಂಭಾವನೆ ಕೊಡಲಾಗುವುದು.


"ಸಂಪಾದಕರು"
'ಸಿದ್ಧಗಂಗಾ' ಕನ್ನಡ ಮಾಸಪತ್ರಿಕ[...]
ಶ್ರೀ ಸಿದ್ಧಗಂಗಾ ಕ್ಷೇತ್ರ-572104
ತುಮಕೂರು ಜಿಲ್ಲೆ.
ಇವರಿಗೆ ಕಳುಹಿಸಿಕೊಡಬೇಕಾಗಿ ಪ್ರಾರ್ಥನ[...]

# ಸಂಪಾದಕೀಯ

ಬೆಂಗಳೂರು ಗವಿಪುರಬಡಾವಣೆ ಎರಡನೆ ರಸ್ತೆ ಶ್ರೀ ನಿಜಗುಣರ ಜಂಗಮ ಮಠ, ಅಲ್ಲೊಂದು ಧಾರ್ಮಿಕ ಸಪ್ತಾಹ ಕಾರ್ಯಕ್ರಮ. ಒಂದು ವಾರ ನಡೆದ "ಅನುಭಾವಸಪ್ತಾಹ" ದಿನಾಂಕ 15.9-91 ರಿಂದ 21-9-91ರ ವರೆಗೆ ನಡೆಯಿತು. "ವೀರಶೈವ ಧರ್ಮಗ್ರಂಥನಿರ್ಣಯ ವಿಚಾರ ಕಮ್ಮಟ" ವೆಂದು ಹಮ್ಮಿಕೊಂಡ ಕಾರ್ಯ ಕ್ರಮದಲ್ಲಿ ಧರ್ಮಗುರುಗಳು, ಅನುಭಾವಿಗಳು ವಿದ್ವಾಂಸರು, ಆಸಕ್ತರು ಪಾಲ್ಗೊಂಡು ವಿವಿಧ ವಿಷಯಗಳನ್ನು ಕುರಿತು ಪ್ರಬುದ್ಧ ಉಪನ್ಯಾಸಗಳು ಅರಳಿದವು. " ಗುರು-ಲಿಂಗ-ಜಂಗಮದ ಪರಿಕಲ್ಪನೆ, ಅಷ್ಟಾವರಣದ ಅಂತರಂಗ, ಪಂಚಾಚಾರದ ಪರಿ-ಪೂರ್ಣತೆ ಷಟ್‌ಸ್ಥಲದ ಸೋಪಾನ, ವೀರಶೈವಧರ್ಮ ಸಂಸ್ಕಾರಗಳು, ವೀರಶೈವ ವಿವಾಹ ಪದ್ಧತಿ, ಸಮಾಜ ಮತ್ತು ಧರ್ಮ"-ಗಳನ್ನು ಅನುಭಾವಸಪ್ತಾಹದಲ್ಲಿ ಅಳವಡಿಸಿದ್ದು ಶ್ಲಾಘನೀಯವಾದುದು. ವಿಚಾರ ಚರ್ಚೆಯಲ್ಲಿ ವಿದ್ವಾಂಸರು ಅನು ಭಾವಿಗಳು, ಸ್ವಾಮಿಗಳು ಭಾಗವಹಿಸಿದ್ದರು. ಆದರೆ ಜಗತ್ತಿನ ಅತ್ಯಂತ ವಿಚಾರಾ ತ್ಮಕವಾದ, ಕ್ರಿಯಾವಂತ ವೀರಶೈವ ಧರ್ಮಗ್ರಂಥ ನಿರ್ಣಯ" ದಲ್ಲಿ ಇನ್ನೂ ವ್ಯಾಪಕವಾದ, ತಲಸ್ಪರ್ಶಿಯಾದ, ಆಳವಾದ ಅರಿವು ಆಚಾರಗಳುಳ್ಳ ಪ್ರಾಜ್ಞರು ಭಾಗವಹಿಸಬೇಕಾಗಿತ್ತು ಎನಿಸಿತು. ಕಾರ್ಯಕ್ರಮ ಸಂಯೋಜಕರ ಕಳವಳಿ, ಸಮಾಜಾಭಿಮಾನ, ಆತಿಥ್ಯನೀಡಿದ ಶ್ರೀ ನಿಜಗುಣರ ಜಂಗಮ ಮಠದ ಪೂಜ್ಯ ಶ್ರೀ ಶ್ರೀಗಳವರ ಸೇವಾ ಮನೋಧರ್ಮವನ್ನು ಸಮಾಜ ಬಾಂಧವರು ಗಮನಿಸದೇ ಹೋದುದು 'ಲಿಂಗವಂತ' ಧರ್ಮಾಭಿಮಾನಿಗಳು ಯೋಚಿಸು ವಂತಾಯಿತು. ವಿಚಾರ ಕಮ್ಮಟದಲ್ಲಿ ಮೂಡಿಬಂದ ವಿಚಾರಗಳೆಲ್ಲ ಗನಗಹನವಾದುವೇ, ಭಾಗವಹಿಸಿದ್ದ ವಿದ್ವಾಂಸರೂ ನಾಡಿನ ಪ್ರಸಿದ್ಧನಾಮರೇ ಕೈಗೊಂಡ ನಿರ್ಣಯಗಳು ಸೂಕ್ತವಾದುವೇ. ಸುಮಾರು ಎರಡು ಕೋಟಿ ಲಿಂಗವಂತ ಸಮಾಜ ಬಂಧುಗಳು ಅನುಸರಿಸ ಬೇಕಾದ, "ಧರ್ಮಗ್ರಂಥ" ರೂಪಿತವಾಗಬೇಕಾದರೆ ಇನ್ನೂ ವ್ಯಾಪಕವಾದ ಚಿಂತನ ಮಂಥನ, ಅಭಿಪ್ರಾಯ ಸಂಗ್ರಹಣ ಹಾಲಿ ಆಚರಣೆಯಲ್ಲಿರುವ ನ್ಯೂನತೆಗಳು, ಅವುಗಳು ನುಸುಳಿಬಂದ ಹಿನ್ನೆಲೆ, ಪ್ರಭಾವ ಪರಿಣಾಮುಗಳು, ಅನ್ಯ ಸಂಸ್ಕೃತಿಯ ಕೊಡುಗೆ, ಇತಿಹಾಸಜ್ಞಾನ, ಪರಂಪರೆಯ ಪರಿಕ್ರಮ, ತತ್ವದರ್ಶನಕ್ಕೆ ಬೇಕಾದ

ಸಹಾಯಕ ಸಾಮಗ್ರಿ, ಸಾಹಿತ್ಯ, ಸಮಾಜದಲ್ಲಿ ಇಂದು ಬೆಳೆದು ಬಂದಿರುವ ಆಚರಣೆಗಳು, ಬೇರು ಬಿಟ್ಟಿರುವ ನಂಬಿಕೆಗಳು ಅವುಗಳ ಸತ್ಯಾಸತ್ಯಗಳ ಕೂಲಂಕಷ ವಿಮರ್ಶೆ ಇತ್ಯಾದಿಗಳೆಲ್ಲವುಗಳ ಸಮಗ್ರ ವ್ಯಾಪಕ ವಿಚಾರಕಮ್ಮಟಗಳು ನಾಡಿನೆಲ್ಲಕಡೆ ಮೊದಲು ನಡೆಯಬೇಕು. ಅಭಿಪ್ರಾಯಗಳು ಸಂಗ್ರಹವಾಗ ಬೇಕು, ಅನುಭಾವಿಗಳ ಬೆಳಕಿನಲ್ಲಿ ವಿದ್ವಾಂಸರು ಒಮ್ಮತದ ನಿರ್ಣಯಕ್ಕೆ ಬರಬೇಕು ಪ್ರಜಾಪ್ರಭುತ್ವ ತತ್ವವನ್ನು ಒಪ್ಪಿಕೊಂಡಿರುವ ಲಿಂಗವಂತ ಧರ್ಮ ಚಿರಂತನವಾಗಿ ನಳನಳಿಸುವಂತೆ ಆಚರಣೆಗೆ ಸುಲಭವಾಗುವಂತೆ ಧರ್ಮಗ್ರಂಥದ ನಿರ್ಣಯವಾಗುವುದು ಸ್ವಾಗತಾರ್ಹವು. ಅನುಭಾವ ಸಪ್ತಾಹ ಕಾರ್ಯಕ್ರಮದ ನಿಯೋಜಕರು ಆ ಉದ್ದೇಶದಿಂದಲೇ "ಧರ್ಮದರ್ಶಿನಿ" ಗ್ರಂಥವನ್ನೂ ಹೊರತರುವ ಸತ್ಪ್ರಯತ್ನ ಶೀಲರಾಗಿದ್ದಾರೆ. ಅವರಿಗೆ ಅಭಿವಂದನೆ ಇಂತಹ ವಿಷಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಎಲ್ಲ ಪೂಜ್ಯರು ಅನುಭಾವಿಗಳು, ವಿದ್ವಾಂಸರು ವಂದನಾರ್ಹರು. ಶತಮಾನಗಳಿಂದ ಬೆಳೆದು ಬಂದಿರುವ ಧರ್ಮವೊಂದು ಆಚರಿಸಬಹುದಾದ ಆಚರಣೆ ಗಳನ್ನು ಕುರಿತ ಧರ್ಮಗ್ರಂಥವೊಂದರ ನಿರ್ಣಯವಾಗುವ ಎಷ್ಟೊಂದು ದೂರದೃಷ್ಟಿ ಅಗತ್ಯವೆಂಬುದನ್ನು ಆಲೋಚಿಸ ಬೇಕಾದುದು ವಿಚಾರಶೀಲರೆಲ್ಲರಿಗೆ ಹೊಳೆಯದಿರದು. ಸಮಾಜದ ಮುಂದೆ ಇಂಥ ಮಹತ್ವದ ಮಣಿಹ ಇಂದುಬಂದಿದೆ. ನಮ್ಮ ಕರ್ತವ್ಯ, ಕಾಣಿಕೆಯೇನು ಎಂಬುದನ್ನೀಗ ಎಲ್ಲರೂ ಚಿಂತಿಸಬೇಕು, ಕರ್ತವ್ಯ ಮುಖಿಗಳಾಗ ಬೇಕು. ಹಾಗಾಗಲಿ ಎಂದು 'ಸಿದ್ಧಗಂಗಾ' ಹಾರೈಸುತ್ತದೆ.

'ಅನುಭಾವಸಪ್ತಾಹ, ಸಂಪೂರ್ಣ ಆತಿಥ್ಯವನ್ನು ಆದರಾಭಿಮಾನಗಳಿಂದ ನಡೆಸಿಕೊಟ್ಟ ಶ್ರೀನಿಜಗುಣರ ಜಂಮುಗಮಠದ ಪೂಜ್ಯ ಶ್ರೀಗಳವರಿಗೆ ಕಾರ್ಯಕ್ರಮವನ್ನು ರೂಪಿಸಿ ನಿರ್ವಹಿಸಿದ ಶರಣ ಬಂಧುಗಳಿಗೆ ಶರಣಾರ್ಥಿಗಳನ್ನು ಅರ್ಪಿಸಲು ಸಂತೋಷ ವಾಗುತ್ತದೆ.



# ತುಮಕೂರು ಜಿಲ್ಲೆಯ ಇತಿಹಾಸ

ಕೃಪೆ :- ಇತಿಹಾಸ ಪರಿಷತ್, ಗಾಂಧೀನಗರ, ತುಮಕೂರು.

ಜನರಲ್ಲಿ ಸ್ವಾಭಿಮಾನ, ದೇಶಾಭಿಮಾನ ಬೆಳೆಯ ಬೇಕಾದರೆ ತಮ್ಮ ಸುತ್ತ-ಮುತ್ತಣ ಸನ್ನಿವೇಶದ ಪರಿಚಯವಾಗಬೇಕು. ಈ ಇತಿಹಾಸವನ್ನು ಜನರ ಅವಗಾಹನೆಗಾಗಿ ಬರೆಯಲಾಗಿದೆ. ಇದಕ್ಕೆ ಸಂಬಂಧಪಟ್ಟ ಸಂಗತಿಗಳನ್ನು ಎರಡು ಭಾಗ ಮಾಡಬಹುದು.

1) ಪುರಾಣೋಕ್ತವಾದ ಕಥೆಗಳು

2) ಕನ್ನಡ ಸಾಹಿತ್ಯದಲ್ಲಿ, ಚರಿತ್ರೆಯಲ್ಲಿ ಶಾಸನಗಳಲ್ಲಿ ನಿಷ್ಕರ್ಷೆಯಾದ ವಿಷಯಗಳನ್ನೊಳಗೊಂಡ ಸಂಗತಿಗಳು.

## 1) ಪುರಾಣೋಕ್ತ ಕಥೆಗಳು

ದ್ವಾಪರ ಯುಗದಲ್ಲಿ ಭರತ ಖಂಡದಲ್ಲಿ ಪ್ರದ್ಯುಮ್ನನೆಂಬ ರಾಜನಿದ್ದನು. ಅವನು ತನ್ನ ಅವಸಾನಕಾಲದಲ್ಲಿ ತನ್ನ ಮೂವರು ಮಕ್ಕಳಿಗೂ ರಾಜ್ಯವನ್ನು ಹಂಚಿಕೊಟ್ಟನು. ಅದರಲ್ಲಿ 1) ನೀಲಧ್ವಜನಿಗೆ ಮಾಹಿಷ್ಮತಿಯೂ 2) ಹಂಸಧ್ವಜನಿಗೆ ಚಂದ್ರಪುರವೂ 3) ಮೂರನೆಯವನಿಗೆ ರತ್ನಪುರವೂ ಬಂದವು.

ಹಂಸಧ್ವಜನ ಪಾಲಿಗೆ ಬಂದ ಚಂದ್ರಪುರದಲ್ಲಿ ತುಮಕೂರು ಪ್ರದೇಶವು ಸೇರಿತ್ತು. ಹಂಸಧ್ವಜನ ಮಗನಾದ ಸುಧನ್ವನು ತುಮಕೂರಿಗೆ 20 ಮೈಲಿ ಪಶ್ಚಿಮಕ್ಕೆ ಚಂಪಕಾಪುರ (ಸಂಪಿಗೆ) ವನ್ನು ರಾಜಧಾನಿಯನ್ನಾಗಿ ಮಾಡಿಕೊಂಡಿದ್ದನು. ಇವನು ಪಾಂಡವರ ಅಶ್ವಮೇಧ ಕುದುರೆಯನ್ನು ತಡೆದು ಅರ್ಜುನನೊಡನೆ ಯುದ್ಧಮಾಡಿದ್ದನ್ನು ಕನ್ನಡ ಜೈಮಿನಿ ಭಾರತದಲ್ಲಿ ವಿಸ್ತಾರವಾಗಿ ಹೇಳಿದೆ.

## 2) ಚಾರಿತ್ರಿಕ ಸಂಗತಿ

ಸಾವಿರಾರು ವರ್ಷಗಳ ಹಿಂದೆ ಕರ್ನಾಟಕ ದೇಶದ ಹೇಮಚಂದ್ರನ ಮಗ ಸುಮತಿಯು ತಂದೆಯ ಅಪ್ಪಣೆಯ ಪ್ರಕಾರ ರಾಜಧಾನಿಯಾದ ಯದುಪಟ್ಟಣದಿಂದ ಹೊರಟು 13 ದಿನ ಪ್ರಯಾಣ ಮಾಡಿ, ನಾವು ಈಗ ದೇವರಾಯನ ದುರ್ಗ ಎಂದು ಕರೆಯುವ ಪರ್ವತ ಪ್ರದೇಶಕ್ಕೆ ಬಂದು ಅಲ್ಲಿದ್ದ ಕಳ್ಳರ ಮುಖಂಡನಾದ ಅಂಧಕನೆಂಬನನೊಡನೆ ಹೋರಾಡಿ ಅವನನ್ನೂ ಅವನ ಬಂಧು ಬಾಂಧವರನ್ನೂ ಕೊಂದು ಆ ಪರ್ವತ ಪ್ರದೇಶವನ್ನು ತನ್ನ ಸ್ವಾಧೀನ ಮಾಡಿಕೊಂಡು ಭೂಮಂಡನಪುರವೆಂಬ ರಾಜಧಾನಿಯನ್ನು ಕಟ್ಟಿಸಿ ಆಳಿದನು. ಅದು ನೆಲಮಂಗಲ ತಾಲ್ಲೂಕಿನ ಮಣ್ಣೆ (ಮಾನ್ಯಪುರ) ಇರಬಹುದು ಎಂದು ಚರಿತ್ರೆ-ಕಾರರು ಹೇಳುತ್ತಾರೆ.

ವಿಜಯನಗರದಿಂದ ಹರಿಹರರಾಯನ (1376-1404) ಕಾಲದ 1403
ವರ್ಷದ ಶಾಸನದಲ್ಲಿ ಈಗಿನ ಶೀಬಿ ಅಗ್ರಹಾರದ ಪ್ರಾಂತವೆಲ್ಲಾ ಅರಣ್ಯವ
ತ್ತೆಂದೂ ಹೇಳಿದೆ. ಈ ಪ್ರದೇಶದಲ್ಲಿ ಆನೆಗಳು ವಾಸಮಾಡಿಕೊಂಡಿದ್ದವು ಎಂಬುದ
ಕರಿಗಿರಿ ಮಹಾತ್ಮೆ ಎಂಬ ಗ್ರಂಥದಲ್ಲಿ ಆಧಾರವಿದೆ. ದೇವರಾಯನದುರ್ಗದ ಪ್ರದೇಶ
ಈಗಲೂ ಅರಣ್ಯವಾಗಿದೆ. ಈ ವಿಚಾರವನ್ನು ಹೈದರಲೀಖಾನ್‌ನು 1777 ನೇ ವ
ದಲ್ಲಿ ಚಿಕ್ಕ ದೇವಾಲಯಕ್ಕೆ ಬರೆಸಿಕೊಟ್ಟಿರುವ ಭೂಮಿದಾನದ ಶಾಸನದಲ್ಲಿ ವಿ
ವಾಗಿ ಹೇಳಿದೆ. ಇದರ ಪ್ರಕಾರ, ಈ ತಾಲ್ಲೂಕಿನ ವಾಯುವ್ಯ ಪ್ರದೇಶ 150 ವ
ಗಳ ಹಿಂದೆ ಅರಣ್ಯವಾಗಿ ಬೆಳೆದುಕೊಂಡಿತ್ತೆಂದೂ ಈಗ ತುಮಕೂರಿನಲ್ಲಿರುವ
ಣೀಕಸಲ್ಲಪ್ಪನವರ ಪೂರ್ವಜರು ಕಾಡು ಕಡಿದು ಆಕಾರ ಮಾಡಿದರೆಂದು, ಅದಕ್ಕಾ
ಚಿಕ್ಕ ಶೀಬಿ ನರಸಿಂಹಸ್ವಾಮಿ ದೇವಾಲಯಕ್ಕೆ ಈ ಪ್ರಾಂತ್ಯವನ್ನು ದತ್ತಿಯಾ
ಬಿಟ್ಟುಕೊಟ್ಟು, ಅವರನ್ನೇ ದೇವಾಲಯದ ಆಡಳಿತ ನೋಡಿಕೊಳ್ಳಲು ನೇಮಿಸಿದನೆಂ
ತಿಳಿಯುತ್ತದೆ. ಈ ಶಾಸನದಲ್ಲಿ ಹೈದರಲ್ಲಿಖಾನನ ಕೈಕೆಳಗೆ ಕಾರ್ಯದಲ್ಲಿ ಸುಭೇದ
ರನಾಗಿದ್ದ ಬಾಜೀ ಅಬ್ದುಲ್ ಮತ್ತು ಬಜಿ ಅಬ್ದು ರಹೀಮ್ ಅವರ ಸಹಿ ಇದೆ.

ಅಲ್ಲದೇ ಈ ತಾಲ್ಲೂಕಿನ ಪೂರ್ವದಲ್ಲಿ ಕಾಡುಜನರಿದ್ದರೆಂದೂ ಇಲ್ಲಿ ಅವ
ಆಶ್ರಮಗಳನ್ನು ಕಟ್ಟಿಕೊಂಡಿದ್ದ ಅಗಸ್ತ್ಯ, ಗೌತಮ, ಪರಾಶರ ಋಷಿಗಳಿಗೆ ಅಡ್ಡಿ ಮ
ಡುತ್ತಿದ್ದರೆಂದೂ, ಈ ತಪೋಧನರು ಅವರನ್ನು ನಿಗ್ರಹಿಸಲು ಪ್ರಯತ್ನ ಪಡುತಿದ್ದ
ರೆಂದೂ ತಿಳಿಯುತ್ತದೆ. ಅಗಸ್ತ್ಯರು ಈ ತಾಲ್ಲೂಕಿಗೆ ಪೂರ್ವಕ್ಕೆ ಸ್ವಲ್ಪ ದೂರದಲ್ಲಿರು
ಕಮ್ಮಸಂದ್ರ ಎಂಬಲ್ಲಿಯೂ ಗೌತಮರು ಈ ತಾಲ್ಲೂಕಿನ ಕೌತುಮಾರನಹಳ್ಳಿ ಎಂ
ಲ್ಲಿಯೂ, ಪರಾಶರರು ಕರಿಗಿರಿ ಎಂಬಲ್ಲಿಯೂ ಬೇರೆ ಬೇರೆ ಕಾಲದಲ್ಲಿದ್ದರೆಂದೂ ತಿಳಿದ
ಬಂದಿದೆ.

ತುಮಕೂರು ಪ್ರದೇಶದ ನಿಜವಾದ ಚರಿತ್ರೆಯನ್ನು ಈ ತಾಲ್ಲೂಕಿನಲ್ಲಿ ದೊರೆ
ರುವ ಶಾಸನಗಳಿಂದ ತಿಳಿಯಬಹುದು. ಶಾಸನಗಳಿಗೆ "ಚಪ್ಪೋಡುಗಳೆಂದೂ"
ಹೆಸರಿದೆ. ಶಾಸನ ಎಂದರೆ ಅಪ್ಪಣೆ ಎಂದು ಅರ್ಥ. ಈ ಶಾಸನಗಳಲ್ಲಿ ಆಯಾ ಕಾಲ
ದಲ್ಲಿ ಆಳುತ್ತಿದ್ದ ರಾಜರ ಹೆಸರುಗಳು, ಬಿರುದುಗಳು, ಮತ, ದಿಗ್ವಿಜಯಗಳೂ, ದಾನ
ಧರ್ಮಗಳೂ ವಿವರಿಸಲ್ಪಟ್ಟಿವೆ. ಇವರು ಕಟ್ಟಿಸಿದ ದೇವಾಲಯಗಳೂ, ಛತ್ರಗಳೂ,
ಕೆರೆಗಳೂ, ಅಗ್ರಹಾರಗಳೂ ತಿಳಿಸಲ್ಪಟ್ಟಿವೆ. ಅಲ್ಲದೆ ಗೌಡಿಕೆಗಳೂ, ಶಾನುಭೋಗಿಕೆ
ಗಳೂ, ಸರ್ವಮಾನ್ಯಗಳೂ, ಕೊಡುಗೆಗಳೂ, ಉಂಬಳಿಗಳೂ ಸೇರಿವೆ. ಉಂಬಳಿ ಎಂದರೆ
1) ಆಧಾರ 2) ದಾನ 3) ಕ್ರಯ 4) ಪರಿವರ್ತನೆಗಳೆಂಬ 4 ವ್ಯವಹಾರಗಳಿಗೆ
ಬಾಧ್ಯತೆಯಿಲ್ಲದೇ, ಬಂದ ಫಲವನ್ನು ಅನುಭವಿಸುವ ಹಕ್ಕುಳ್ಳ ಭೂಮಿಗಳು
ಎಂದು ಅರ್ಥ

ಈ ಶಾಸನಗಣಲ್ಲದೆ ಕೆಲವು ವೀರಗಲ್ಲುಗಳೂ ಮತ್ತು ಮಹಾಸತಿಕಲ್ಲುಗಳೂ ಈ ಪ್ರಾಂತದಲ್ಲಿ ಇವೆ.

ಶಾಸನಗಳು ಸಾಮಾನ್ಯವಾಗಿ ಚಪ್ಪಡಿ ಕಲ್ಲುಗಳ ಮೇಲೆ ತಾಮ್ರದ ತಗಡುಗಳ ಮೇಲೆ ಬರೆಯಲ್ಪಟ್ಟಿವೆ. ಈ ತಾಲ್ಲೂಕಿಗೆ ಸಂಬಂಧಿಸಿದ 74 (1942ರವರೆಗೆ)111 (1954ರ ವರೆಗೆ) ದೊರೆತಿವೆ. ಇವುಗಳಲ್ಲಿ 16 ರಲ್ಲಿ ಅಕ್ಷರಗಳು ಅಳಸಿಹೋಗಿವೆ. ಇತರ 58ಶಾಸನಗಳು.

| | | |
|---|---|---|
| 3. | ಗಂಗರಕಾಲದ ಶಾಸನಗಳು | (700 ರಿಂದ 925 ಎ.ಡಿ.) |
| 1. | ಚಾಲುಕ್ಯರ ,, | (1121ಎ.ಡಿ.) |
| 1. | ಕಾಕತೀಯರು ,, | (1293) |
| 17. | ಹೊಯ್ಸಳರ ,, | (1150—1328) |
| 23. | ವಿಜಯನರಗದ ,, | (1387—1546) |
| 10. | ಮೈ. ಒಡೆಯರ ,, | (1699—1858) |
| 1. | ಹಾಗಲವಾಡಿ ಪಾಳೇಗಾರರ | (1760) |
| 1. | ಹೈದರಾಲಿ | (1777) |
| 1. | ಟಿಪ್ಪುಸುಲ್ತಾನ್ | (1782) |

ಈ ಶಾಸನಗಳು ದೊರೆತಿರುವ ಸ್ಥಳಗಳು :— ತುಮಕೂರು, ಹೆಗ್ಗೆರೆ, ಕೈದಾಳ, ಉಳ್ಳೇನಹಳ್ಳಿ ಮುಳುಕುಂಟೆ, ಪಿರುಪಸಂದ್ರ, ಹೊನ್ನುಡಿಕೆ, ಹೆಬ್ಬೂರು, ರಾಯಪುರ ಹರಳೂರು, ಪಾಲಸಂದ್ರ, ಕೊಡುಗೇಹಳ್ಳಿ, ದೇವರಾಯನದುರ್ಗ, ಕೋಳಾಲ, ಮೈದಾಳ, ಪಂಡಿತನಹಳ್ಳಿ, ಬ್ಯಾಟರಾಯನಪಾಳ್ಯ, ಸೀತಕಲ್ಲು, ದಮಟೆಹಳ್ಳಿ, ಚಿನ್ನಹಳ್ಳಿ ಎಲಚಿಕೆರೆ, ಭೀಮಸಾಗರ, ಕೋರಾ, ಬ್ರಹ್ಮಸಂದ್ರ, ತರೀಕೆರೆ, ನೆಲಹಾಲು, ಮಾವುಕೆರೆ, ಚಿಕ್ಕನಾರವಂಗಲ, ದೊಡ್ಡನಾರವಂಗಲ, ಕೊಟ್ನಹಳ್ಳಿ ಚಿಕ್ಕಶೀಬಿ.

ಸುಮಾರು 952 ರಿಂದ 1004 ರ ವರಗೆ, 52 ವರ್ಷಗಳ ಕಾಲ ಗಂಗವಾಡಿ, ನೊಳಂಬ ವಾಡಿಗಳನ್ನು ಜಯಸಿದ್ದರೆಂದೂ ಹೇಳಿದೆ. ಚೋಳರು ನಿಡುಗಲ್ಲಿನಲ್ಲಿ ನೆಲೆಸಿದ್ದಕ್ಕೆ 1269 ರ ವೀರಗಲ್ಲಿನಲ್ಲಿ ವಿವರಣೆ ಇದೆ

ತುಮಕೂರಿನ ಪ್ರಾಂತಕ್ಕೆ ಮೊದಲಿನಿಂದಲೂ "ಆನೆ ಬಿದ್ದ ಸರಿ ರಾಜ್ಯ" ಎಂಬ ಹೆಸರಿತ್ತು. ಕರಿಗಿರಿ ಮಹಾತ್ಮೆಯಲ್ಲಿ ಈರೀತಿ ಹೇಳಿದೆ. ಬ್ರಹ್ಮನ ಸಭೆಯಲ್ಲಿ ದೇವದತ್ತ ದನಂಜಯ ಎಂಬ ಇಬ್ಬರು ಗಂಧರ್ವರು ಗಾಯನ ಮಾಡುತ್ತಿದ್ದಾಗ, ಭೃಗು ಋಷಿಯು ಸಂತೋಷದಿಂದ ಅವರನ್ನು ಮತ್ತೊಮ್ಮೆ ಹಾಡಿ ಎಂದು ಕೇಳಿದನು. ಗರ್ವಿ

ಷ್ಠರಾದ ಅವರು ಅವನನ್ನು ಪರಿಹಾಸ್ಯ ಮಾಡುತ್ತಾ "ಫಲಗಳನ್ನು ತಿಂದು ಜೀವಿಸುವ ನಿನಗೆ ಗಂಧರ್ವ ವಿದ್ಯೆಯ ವಿಷಯವೇಕೆ, ನೀನು-ದಂತ ಹೀನವಾದ ಮುದುಕ, ನಿನ್ನ ನೆರೆತ ಗಡ್ಡ ನೋಡಿದರೆ ನಮಗೆ ನಗೆ ಬರುತ್ತದೆ" ಎಂದು ಹೀಯಾಳಿಸಿದರು. ಭೃಗು ಋಷಿ ಕೋಪದಿಂದ ಶಾಪ ಕೊಟ್ಟನು. "ನೀವು ಆನೆ, ಬೆಟ್ಟವಾಗಿ ಭೂಲೋಕದಲ್ಲಿ ಹುಟ್ಟಿರಿ" ಅವರು ಕೇಳಿಕೊಳ್ಳಲಾಗಿ ಋಷಿಯು ಧನಂಜಯನು ಸದಾ ಬೆಟ್ಟವಾಗಿರ ಬೇಕು. ದೇವದತ್ತನು ಆನೆಯಾಗಿದ್ದು ಕೋಡುಗಲ್ಲಿಂದ ಜಾರಿ ಬಿದ್ದು ಸತ್ತಾಗ ಶಾಪ ವಿಮೋಚನೆ ಎಂದು ಹೇಳಿದನು. ಆಪಕಾರ ಧನಂಜಯನುಬೆಟ್ಟವಾಗಿ ("ಕುಸುಮಾ ಚಲ ") ಅಥವಾ ದೇವರಾಯನದುರ್ಗ )ಜನಿಸಿದನು. ದೇವದತ್ತನು ಆನೆಯಾಗಿ ಜನಿಸಿ ಕೆಲ ಕಾಲಾನಂತರ ಕೋಡುಗಲ್ಲಿಂದ ಜಾರಿ ಬಿದ್ದು ಸತ್ತು ಶಾಪ ವಿಮೋಚನೆ ಹೊಂದಿದನು. ಈ ಆನೆ ಬಿದ್ದ ಸ್ಥಳಕ್ಕೆ " ಆಜೆಬಿದ್ದ ಜರಿ " ಎಂದುಹೆಸರಾಯಿತು. ( ಆನೆಗುಂದಿ, ಗಜಾಕುಂಡ ಎಂತಲೂ ಕರೆಯುತ್ತಾರೆ. ) ಆನೆಬಿದ್ದರಿ, ಆನೇಸಿದ್ದರಿ ಎಂಬ ಹೆಸರಿನ ಹಳ್ಳಿ ಶಿರಾದ ಉತ್ತರಕ್ಕೆ, ಹಿರಿಯೂರು ತಾಲ್ಲೂಕಿನಲ್ಲಿದೆ ಈ ಹೆಸರು 1269 ರಲ್ಲಿನ ಶಾಸನದಲ್ಲಿ ಕಂಡು ಬರುತ್ತದೆ.

**ನಾಡುಗಳು :-** ಶಾಸನಗಳ ಪ್ರಕಾರ ಈ ತಾಲ್ಲೂಕು 30 ಮೈಲು ಉದ್ದ, 25 ಮೈಲು ಅಗಲವಿದ್ದ ಸುಮಾರು 80 ಚದರ ವಿಸ್ತೀರ್ಣವಾಗಿದ್ದಿತು. ಇದರಲ್ಲಿ ದೇವ ಗುಂದನಾಡು, ಮರುಗೆರೆನಾಡು, ಹುಲುಕೂಲನಾಡು ( ಪೂರ್ವ ) ಸೋರಮುತ್ತು ಗನಾಡು (ಮಧ್ಯ) ಚೋಳೂರು ನಾಡು (ಪಶ್ಚಿಮ) ಕುರುಹೆನಾಡು (ನೈರುತ್ಯ)ಗಳನ್ನು ಒಳಗೊಂಡಿದ್ದವು.

**ಸೀಮೆಗಳು :-** ಶೂರಗಿರಿ ಸೀಮೆ (ಆಗ್ನೇಯ) ಗೂಳೂರು ಸೀಮೆ (ದಕ್ಷಿಣ) ಮೂಕ ಪಟ್ಟಣ ಸೀಮೆ (ಪಶ್ಚಿಮ) ಕೋಳಾಲ ಸೀಮೆ (ಉತ್ತರ) ದೇವರಾಯನ ದುರ್ಗಕ್ಕೆ ಮೊದಲು ಜಡಕನದುರ್ಗವೆಂಬಹೆಸರಿತ್ತು.

ಈ ದುರ್ಗದ ಇಳಿಜಾರಿನ ಕುಂಬಾರ ಕೆರೆಯನ್ನು ವಿಜಯನಗರದ ಹರಿಹರನ (1376-1404) ಮಗ ಮಹಾಮಂಡಲೇಶ್ವರ ವೀರ ಬುಕ್ಕಣ್ಣ ಒಡೆಯರ ಅಂಗರಕ್ಷಕ ನಾಗಿದ್ದ ಅಲ್ಲಪ್ಪನಾಯನ ಮಗ. ಪೋಲೇ ನಾಯಕನ ಹೆಸರಿನ ಮೇಲೆ ಪೋಲಸ ಮುದ್ರ ಎಂದು ಕರೆಯುತ್ತಿದ್ದರು.

ತುಮಕೂರನ್ನು ತುಮೇಗೂರು ಎಂದು 955 ಎ. ಡಿ. ವರ್ಷದ ಶಾಸನದಲ್ಲಿ ಹೇಳಿದೆ. ಈ ಶಾಸನ ಸೋಮೇಶ್ವರ ದೇವಾಲಯದಲ್ಲಿದೆ ಇದೇ ಇಲ್ಲಿಯವರೆಗೆ ಅತ್ಯಂತ ಪ್ರಾಚೀನ ಶಾಸನ. ಇದು ಗಂಗವಂಶದ ಬೂತುಗನ ಕಾಲದ್ದು (925-960) ಈ ಹೆಸರುಬರುವುದಕ್ಕೆ ಆಗ ಹೆದ್ದುಂಬೆ ಗಿಡಗಳು ಕಾಡಿನಂತೆ ಬೆಳೆದಿದ್ದವಂತೆ

ಕೊರಟಗೆರೆ ತಾಲ್ಲೂಕಿನ ತುಂಬಾಡಿ, ಗ್ರಾಮವೂ ತುಂಬೆ ಗಿಡದಿಂದ ಆವರಿಸಲ್ಪಟ್ಟಂತೆ ತೋರುತ್ತದೆ.

ತುಮೆಗೂರು 1100ರಲ್ಲಿ ಟುಂಕೆಹಳ್ಳಿ (ಟುಂಕಿ ಊರು) ಆಯಿತೆಂದು ತೋರುತ್ತದೆ. ಇದನ್ನು ಕೈದಾಳದ ಅರಸು ನೃಪರಾಯನು ಟುಂಕಿ (ನಗಾರಿ) ಹೊಡೆಯುವವರಿಗೆ ದಾನ ಕೊಟ್ಟಿದ್ದನೆಂದು ಪ್ರತೀತಿ. ಇದು ಕಟ್ಟುಕಥೆ, ನಂಬಲರ್ಹವಲ್ಲ (1)

ಈ ಪ್ರಾಂತವು 700 ರಿಂದ 955ರ ವರೆಗೆ ಗುಂಗರಸರಿಂದ 955 ರಿಂದ 1100 ರ ವರೆಗೆ ಚಾಲುಕ್ಯರಿಂದಲೂ, 1638 ರ ವರೆಗೆ ವಿಜಯನಗರದ ಅರಸರಿಂದಲೂ, 1638—1687 ರ ವರೆಗೆ ಶೀರ್‍ಯರ ರಣದುಲ್ಲಾ ಖಾನ್ ಮೊದಲಾದವರಿಂದಲೂ, 1687 - 1731 ರ ವರೆಗೆ ಮೈಸೂರು ಒಡೆಯರಿಂದಲೂ, 1731 – 1761ವರೆಗೆ ಒಡೆಯರ ದಳವಾಯಿಗಳಿಂದಲೂ, 1761 - 1775 ರವರೆಗೆ ಹಾಗಲವಾಡಿ ಚನ್ನಬಸಪ್ಪನಾಯಕನಿಂದಲೂ 1775 - 1799 ರ ವರೆಗೆ ಹೈದರ್, ಟಿಪ್ಪೂಸುಲ್ತಾನರಿಂದಲೂ, 1799 – ಮೈಸೂರು ಒಡೆಯರಿಂದ ಆಳಲ್ಪಟ್ಟಿತು.

## ತುಮಕೂರು ನಗರ ಇತಿಹಾಸ

ತುಮಕೂರನ್ನು ಮೈಸೂರು ಒಡೆಯರ ವಂಶದ ಕಾಂತೀ ಅರಸು ಕಟ್ಟಿಸಿ, ಕೋಟೆಯನ್ನು, ಪೇಟೆಯನ್ನೂ ಕಟ್ಟಿಸಿದನು. ಈಗ ಕೋಟೆ ಬಿದ್ದುಹೋಗಿದೆ. ಈಗಿನ ಅಗ್ರಹಾರವೇ ಕೋಟೆಯಾಗಿತ್ತು. ಈಗಿನ ಹೊರಪೇಟೆ ಆಗಿನ ಪೇಟೆಯಾಗಿತ್ತು. ಇದಕ್ಕೆ ಹತ್ತಿರವಾಗಿ ದೊಡ್ಡ ಕೆರೆ ಇದೆ. ಇದು ದೇವರಾಯನದುರ್ಗಕ್ಕೆ ನೈರುತ್ಯದಲ್ಲಿದೆ

1926 ರಲ್ಲಿ ಕುಡಿಯುವ ನೀರಿಗಾಗಿ ನಲ್ಲಿಗಳನ್ನು ಹಾಕಲಾಯಿತು.. ಅದಕ್ಕೆ ಮುಂಚೆ ರಾಟೆ ಭಾವಿಗಳ ಬಳಕೆ ಹೆಚ್ಚಾಗಿತ್ತು.

ಈಗ ಬಾಳನ ಕಟ್ಟೆ ಎಂದು ಕರೆಯುವ ಪುಷ್ಕರಣಿಯನ್ನು 400 ವರ್ಷಗಳ ಹಿಂದೆ ರಿಪೇರಿ ಮಾಡಿಸಿದಂತೆ ತಿಳಿಯುತ್ತದೆ. ಇದನ್ನು ಸುಮಾರು 921ರಲ್ಲಿ ಬಾಣ ಅರಸನಾದ ಪೃಥ್ವೀಪತಿ ಕಟ್ಟಿಸಿರಬಹುದು. ಕೆಲವರು ಇದನ್ನು ಬಾಳಯ್ಯಗೌಡನು ಕಟ್ಟಿಸಿದನೆಂದು ಹೇಳುತ್ತಾರೆ. ಹತ್ತಿರದಲ್ಲಿ ಬಾಳೇಗೌಡನ ಪಾಳ್ಯವಿದೆ, ಈಗ ಬಾಳನಕಟ್ಟೆನೀರು ಕೆಟ್ಟುನಾರುತ್ತದೆ. ಮುಚ್ಚಿಬಿಟ್ಟರೆ ತೊಂದರೆಯಾಗಲಾರದು. ಈಗ ಕಾರಂಜಿ ಭಾವಿಗಳು ಆಗುತ್ತಿವೆ (ಬೋರ್‌ವೆಲ್ಸ್, ಅಗ್ರಹಾರದವರು ಸ್ನಾನಾದಿಗಳಿಗಾಗಿ ಉಪಯೋಗಿಸಲು ಒಂದು ದೊಡ್ಡ ಕೊಳವು ಈಗಿನ ಪೂರ್ಣಯ್ಯನ ಛತ್ರದ ಬಳಿ 900 ಎ.ಡಿ. ಕಟ್ಟಲ್ಪಟ್ಟಿತ್ತು. ಆದರೆ ಅನಾರೋಗ್ಯ ಕಾರಣದಿಂದ ಇದನ್ನು ಈಗ ಮುಚ್ಚಿಬಿಟ್ಟಿದ್ದಾರೆ.

ನೀರಿನ ಪೂರೈಕೆಗಾಗಿ 955 ರಲ್ಲಿ, ಈಗಿನ ಸೋಮೇಶ್ವರ ದೇವಾಲಯದ ಬಳಿ ಕೆರೆಯನ್ನು ಕಟ್ಟಲಾಗಿತ್ತು ಈ ಉದ್ದೇಶಕ್ಕಾಗಿ 8 ಮುಖಂಡರ ಸಮಿತಿಯೊಂದನ್ನು ಗೊತ್ತುಮಾಡಲಾಗಿತ್ತು. ಇದಕ್ಕಾಗಿ ಬಿಟ್ಟಿಯಣ್ಣ ಎಂಬುವನನ್ನು ಅಧಿಕಾರಿಯನ್ನಾಗಿ ಮಾಡಿ ಅವನಿಗೆ 12 ಖಂಡುಗ ಬಿತ್ತುವಟ್ಟ ಭೂಮಿಯನ್ನು, ಬ್ರಹ್ಮಪುತ್ರ (ಬ್ರಹ್ಮವೃತ್ತ ನೆಂಬ ಬಿರುದನ್ನೂ, ಕಂದಮಯ್ಯನ ಮಗ ಅಜ್ಜಮಯ್ಯನು ಕೊಟ್ಟನೆಂದೂ ಉಲ್ಲೇ

ಖಿಸಿದೆ (ಕೆರೆಗಳ ರಿಪೇರಿಗೂ, ಕೆರೆಯ ನೀರನ್ನು ಅನಾವಶ್ಯಕವಾಗಿ ಪೋಲು ಮಾಡದಂತೆ ನೋಡಿಕೊಳ್ಳುವುದಕ್ಕೆ ಇಂಥ ಸಮಿತಿಗಳನ್ನು ಏರ್ಪಡಿಸುವುದು ಸರ್ವೇಸಾಮಾನ್ಯ ವಾಗಿತ್ತೆಂದೂ ರಾಜೇಂದ್ರ ಚೋಳನ 1019ನೇ ವರ್ಷದ ಶಾಸನದಿಂದ ತಿಳಿಯುತ್ತದೆ.

ಲಕ್ಷ್ಮೀಕಾಂತ ದೇವಾಲಯವು ಇನ್ನೊಂದು ಪುರಾತನ ದೇವಾಲಯ. ಇದನ್ನು 1560 ರಲ್ಲಿ ಕಟ್ಟಿಸಲಾಯಿತೆಂದು ಅಲ್ಲಿನ ಶಾಸನದಿಂದ ತಿಳಿಯುತ್ತದೆ. ಇದು ನವ ರಂಗದ ಬಲಗಡೆ ಗೋಡೆಯ ಮೇಲೆ ಇದೆ. ತೆಲುಗು ಭಾಷೆಯಲ್ಲಿದೆ ಸದಾಶಿವ ರಾಯಲು (1542–1570) ವಿಜಯನಗರ ರತ್ನಸಿಂಹಾಸನಾರೂಢುಲೈ ಪೃಥ್ವಿ ಸಾಮ್ರಾಜ್ಯಂ ಚೇಸ್ತುಂಡಗಾನು ಶ್ರೀಮನ್ ಮಹಾಮಂಡಲೇಶ್ವರ, ಗೋತ್ರಂ ಅಶ್ವ ಲಾಯನ, ಸೂತ್ರಂ ಶ್ರೀ ದೇವಪ್ಪದಾಸಿಗರಾಜಗಾರಿ ಪುತ್ರುಲು ಜಗನ್ನಾಥದೇವಯ್ಯ ಮಹಾರಾಜುಲು, ಆನೆಬಿದ್ದಜರಿ ರಾಜ್ಯಮುಲು" ದೇವರಿಗೆ ಪಂಡಿತಾರಾಧನೆಗೆ ದತ್ತಿ ಬಿಟ್ಟಿರುವುದನ್ನು ಹೇಳಿದೆ. ಶಾಸನದ ಕೊನೆ ಸ್ಪಷ್ಟವಾಗಿಲ್ಲ. ಈ ದೇವಾಲಯ ದ್ರಾವಿಡ ಶೈಲಿಯಲ್ಲಿದೆ. ವಿಗ್ರಹ ಪದ್ಮಸನಾರೂಢವಾಗಿದೆ, ವಿಗ್ರಹ 4½ ಅಡಿ ಎತ್ತರವಾಗಿದೆ. ಲಕ್ಷ್ಮೀವಿಗ್ರಹವಿದೆ.

ತುಮಕೂರಿನ ಮಾರಿಗುಡಿಯ ಬಳಿ ಇರುವ ಶಾಸನ 1610 ನೇ ವರ್ಷದ್ದು ಇಮ್ಮಡಿ ಬಸವನಾಯಕ ಒಡೆಯರ ತಮ್ಮ ಮಗಳಿಗೆ ಮದುವೆ ತೆರೆದ ವಿಚಾರ ಹೇಳಿದೆ.

ಕೋಡಿ ಬಸವನ ಗುಡಿಯ ಗರುಡಗಂಬದಲ್ಲಿ–"ಮಲ್ಲಶೆಟ್ಟಿ ಮಗ ಪರ್ವತನಾ ಯಕನು ತನ್ನ ತಂದೆ ತಾಯಿಗಳಿಗೆ ಧರ್ಮವಾಗಬೇಕೆಂದು ಸಮೀಪದ ಗುಡ್ಡದಿಂದ ತಂದ ಕಲ್ಲಿನಿಂದ ಗರಡು ಗಂಬ ಸ್ಥಾಪಿಸಿದನು" ಎಂದು ಕೆತ್ತಲಾಗಿದೆ ಇದರ ಕಾಲ 1575, ಶ್ರೀ ಕೃಷ್ಣದೇವರಾಯನ ಕಾಲದ್ದು.)

**ಅಪ್ಪಯ್ಯನಾಯಕನ ವೀರಗಲ್ಲು :–** 1269ನೇ ವರ್ಷದ್ದು. ಇದು ಕೆ ಕೆಳಗೆಕರಣೀಕ ನಲ್ಲಪ್ಪನವರ ತೋಟದಲ್ಲಿದೆ. ಇದು "ಹೊಯ್ಸಳರಕಾಲದ್ದು" ಮುಮ್ಮಡಿ ನರಸಿಂಹ (1254–1292)ನು ದ್ವಾರಸಮುದ್ರದಲ್ಲಿ ಆಳುತ್ತಿದ್ದಾಗ ಆಜೆಬಿದ್ದಜ ರಾಜ್ಯದಲ್ಲಿ ಮಹಾಪ್ರಧಾನ ವೀರಚಿಕ್ಕೇತಯ್ಯ ದಣ್ಣಾಯಕನು ಆಳುತ್ತಿದ್ದನು. ಇವನ ಕೈಕೆಳಗೆ ಸರದಾರ ಅಪ್ಪಯ್ಯ ನಾಯಕನೆಂಬುವನಿದ್ದನು. ಗೂಳಯ್ಯನಾಯಕನ 1268-12೭9 ರಲ್ಲಿ ನಿಡುಗಲ್ಲು ಚೋಳರ ಸನಾದ ಇಮ್ಮಡಿ ಇರುಂಗೋಳದೇವ ಸಕಲ ಸೇನೆಯನ್ನೊಳಗೊಂಡು ಆನೆಬಿದ್ದಜರಿ ರಾಜ್ಯಕ್ಕೆ ದಂಡೆತ್ತಿ ಬಂದು ಗೋವು ಗಳನ್ನು ಕೊಂಡೊಯ್ದಾಗ, ಸೈನಿಕರನ್ನೂ ಬೆನ್ನಟ್ಟಿಹೋಗಿ, ಅನೇಕರು ಕೊಂದು ಗೋವುಗಳನ್ನು ಹಿಂತಿರಗಿಸಿಕೊಂಡು ಬರುವಾಗ ರಣರಂಗದಲ್ಲಿ ಬಿದ್ದುಸತ್ತನು"

ಈ ವೀರಗಲ್ಲು ಚೋಳಗಿರೂ, ಹೊಯ್ಸಳರಿಗೂ ನಡೆದ ಯುದ್ಧವನ್ನು ಸೂ ಸುತ್ತದೆ. ಚೋಳರನ್ನು ಮೈಸೂರು ದೇಶದಿಂದ ವಿಷ್ಣುವರ್ಧನನು ಓಡಿಸಿದನು. ಅದ

ಒಂದು ಸಂತತಿಯು ನಿಡುಗಲ್ಲಿನಲ್ಲಿ 8 ನೇ ಶತಮಾನದಿಂದಲೂ ನಡೆದು ಕೊಂಡು ಬಂದಿದ್ದು, ಹೊಯ್ಸಳರ ಧಾಳಿಗೆ ಸಿಕ್ಕಿರಲಿಲ್ಲ. ಈ ವಂಶದವರು ನಿಡುಗಲ್ಲಿನ ಪ್ರದೇಶವನ್ನು ಗೆದ್ದು ಶಿರಾ ತಾಲ್ಲೂಕಿನಲ್ಲಿರುವ ಹೇಮಾವತಿ ಎಂಬ ಗ್ರಾಮವನ್ನು ರಾಜಧಾನಿಯನ್ನಾಗಿ ಮಾಡಿಕೊಂಡಿದ್ದರು. ಹೇಮಾವತಿ ಗ್ರಾಮಕ್ಕೆ ಹೆಂಜೇರು, ಪೆಂಜೇರು, ಪೆರುಂಜೇರು, ಎಂದು ಕರೆಯಲಾಗುತ್ತಿತ್ತು. ಈ ಅರಸರು ನಿಡುಗಲ್ಲ ಚೋಳ ಮಹಾರಾಜರೆಂದು ಹೆಸರಿಟ್ಟುಕೊಂಡಿದ್ದರು. ಇವರು 1292 ರ ವರೆಗೆ ಅಲ್ಲಿ ಆಳಿದರು. ಇವರಲ್ಲಿ ಇಮ್ಮಡಿ ಇರುಂಗೋಳದೇವನೆಂಬುವನು 1232 ರಿಂದ 1277 ರ ವರೆಗೆ ಆಳಿದನು. 1285 ರಲ್ಲಿ ಹೊಯ್ಸಳ ನರಸಿಂಹನು ದೊಡ್ಡ ಸೈನ್ಯವನ್ನು ತೆಗೆದುಕೊಂಡು ಹೋಗಿ ಆಗಿನ ಮುಮ್ಮಡಿ ಇರುಂಗೋಳದೇವನನ್ನು ಸೋಲಿಸಿ ಕೋಟೆಗಳನ್ನು ವಶಪಡಿಸಿಕೊಂಡನು. ಇವನ ಮಗ ಭೋಗ ಇವನ ಮಗ ಬೊಮ್ಮ, 1292 ರ ವರೆಗೆ ಇದ್ದರು. ನಂತರ ಇವರ ವಂಶ ನಿರ್ನಾಮವಾಯಿತು.

ತುಮಕೂರಿನಲ್ಲಿ 3 ತಾಮ್ರ ಶಾಸನಗಳು ದೊರೆತಿವೆ ಕೆಸ್ತೂರು ಶ್ರೀ ನಿವಾಸಾಚಾರ್ಯರ ವಶದಲ್ಲಿದ್ದ ಒಂದು ತಾಮ್ರ 157ನೇ ವರ್ಷದ್ದು. ಆದರಲ್ಲಿ ಒಂದನೇ ಶಾಸನ ತಿರುಮಲರಾಯನು (1570-1574) ತೆರೆಯೂರು ಇಮ್ಮಡಿ ತಿಮ್ಮನಾಯಕನ ಮಗ ಮುಮ್ಮಡಿ ತಿಮ್ಮಪ್ಪ ನಾಯಕನ ಅರಿಕೆ ಪ್ರಕಾರ, ತುಮಕೂರಿಗೆ ಪಶ್ಚಿಮದಲ್ಲಿ 6 ಮೈಲಿಗಳ ದೂರದಲ್ಲಿ ಮಲ್ಲಸಂದ್ರ ಗ್ರಾಮವನ್ನು ಅಗ್ರಹಾರ ಮಾಡಿ ಅಲ್ಲಿನ ಭೂಮಿಯನ್ನು 100 ವೃತ್ತಿಗಳನ್ನಾಗಿ ವಿಂಗಡಿಸಿ 100 ಬ್ರಾಹ್ಮಣರಿಗೆ ದಾನ ಕೊಟ್ಟದುದನ್ನು ಹೇಳಿದೆ. ಈ ದಾನ ಪ್ರತಿ ಪಡೆದ ಪ್ರತಿಯೊಬ್ಬರ ಗೋತ್ರ, ಸೂತ್ರ ಹೇಳಿರುವುದು. ಗೂಳೂರ್‌ನವರಿಗೆ 3 ವೃತ್ತಿಗಳನ್ನೂ ಕೊಟ್ಟಿರುವುದನ್ನು ತಿಳಿಸಿದೆ. ಒಂದು ವೃತ್ತಿಯನ್ನು ಗದುಗಿನ ನಾರಣಪ್ಪನ ವ ಗನಿಗೆ ಕೊಟ್ಟಿದೆ.

2 ತುಮಕೂರು ವೆಂಕಟರಾಮ ಶಾಸ್ತ್ರಿಗಳ ವಶದಲ್ಲಿದ್ದ 183 ರ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದ ತಾಮ್ರ ಶಾಸನದಲ್ಲಿ - ಮು.ಕೃ. ಒಡೆಯರು ಶ್ರೀರಂಗಪಟ್ಟಣದಲ್ಲಿ ಆಳುತ್ತಿರುವಾಗ, ತುಮಕೂರಿನಲ್ಲಿ ದೇವರ ಭಕ್ತರಾದ ಶೆಟ್ಟಿನಂಜಯ್ಯ ಮೊದಲಾದವರು 10 ಮಂದಿ ವರ್ತಕರು ತಮಗಾದ ಯಾವುದೋ ಒಂದು ಅಮಾನುಷ ಉಪಕಾರಕ್ಕಾಗಿ ತುಮಕೂರಿನ ಯಜುರ್ವೇದಿ ರಾಮಾವಧಾನಿಗಳ ಮಗ ದಿವಾಕರ ಶಾಸ್ತ್ರಿಗೆ ತಮ್ಮ ಮನೆಗಳಲ್ಲಿ ನಡೆಯುವ ಶುಭ ಕಾರ್ಯಗಳಲ್ಲಿ ಎರಡು ರೂಪಾಯಿಗಳು ತಲತಲಾಂತರದವರೆಗೆ ಕೊಟ್ಟು ಕೊಂಡು ಬರುತ್ತೇವೆ ಎಂದು ಒಪ್ಪಿಕೊಂಡಿರುವುದನ್ನು ಹೇಳಿದೆ.

1760ರ ಶಾಸನವು ಹಾಗಲವಾಡಿಯ "ಇಮ್ಮಡಿ ಚನ್ನಬಸಪ್ಪನಾಯಕನ ಕಾಲದ್ದು" ಇದರಲ್ಲಿ ರಾಯರ ಸಂಬಂಧಿಕರಾದ ಶ್ರೀಮಾನ್ ಮಹಾನಾಡಪ್ರಭು ಮುಮ್ಮಡಿ ಹೊನ್ನಪ್ಪ ಗೌಡರಯ್ಯನವರು (1748-1776) ಗುಬ್ಬಿ ಹೊಸಳ್ಳಿಯಲ್ಲಿ

ರಾಜ್ಯವಾಳುತ್ತಿದ್ದಾಗ ಗುಬ್ಬಿ ಪೇಟೆ ಚೆನ್ನಶೆಟ್ಟಿ ಎಂಬವನಿಗೆ "ಶೆಟ್ಟಿ" ತನವನ್ನು ಕೊಟ್ಟು, ಗುಬ್ಬಿ ಕೆರೆ ಕೆಳಗೆ, ತರಿ ಮತ್ತು ಖುಷ್ಕಿ ಜಮೀನನ್ನು ಕೊಡಿಗೆ ಹಾಕಿ ಕೊಟ್ಟಿದ್ದನ್ನು ಹೇಳಿದೆ. ಹಾಗಲವಾಡಿಯ ಪಾಳೆಯಗಾರರು ತಮ್ಮ ಹೆಸರ ಮುಂದ ಅಯ್ಯನವರು ಎಂದು ಸೇರಿಸಿಕೊಳ್ಳುವ ವಾಡಿಕೆ ಇತ್ತು. ಈ ಪಾಳೆಯಗಾರರಲ್ಲಿ 12 ನೆಯವನಾದ ಇಮ್ಮಡಿ ಚೆನ್ನಬಸಪ್ಪನಾಯಕ (1760-76 ತುಮಕೂರನ್ನು ಗೆದ್ದುಕೊಂಡಿದ್ದನು. ಇವನು 1776ರಲ್ಲಿ ಹೈದರ್ ಅಲಿಯಿಂದ ಸೆರೆ ಹಿಡಿಯಲ್ಪಟ್ಟು ಸ್ವಲ್ಪ ಕಾಲದಲ್ಲಿಯೇ ಅವನು ಸೆರೆಯಲ್ಲಿ ಸತ್ತನು. ಅನಂತರ ಅವನ ಮಗ ಮುದಿಯಪ್ಪ ನಾಯಕನೆಂಬ ಬಾಲಕನಿಗೆ 3 ಹಳ್ಳಿಗಳ ಜಹಗೀರನ್ನೂ ಕೊಡಲಾಯಿತು.

**ತುಮಕೂರು ನಗರ ಭಾಗ 2 :** ಶಾಲಿವಾಹನ ಶಕ 1670 (1687 ಎ ಡಿ. ರಲ್ಲಿ ಚೈತ್ರ-ಶುದ್ಧ ಪೂರ್ಣಿಮೆಯ ದಿನ ಚಿಕ್ಕದೇವರಾಜ ಒಡೆಯರು (1672-1704) ತುಮಕೂರನ್ನು ಶಿರಾ ನವಾಬನಿಂದ ಗೆದ್ದುಕೊಂಡರು.

1931 ರ ಜನಗಣತಿ ಪ್ರಕಾರ 18,600 ಪ ಜೆಗಳಿದ್ದಾರೆ.

**ತುಮಕೂರಿನ ಭಾಗಗಳು:** ಗರಡಿ ಚಿಕ್ಕನ ಪಾಳ್ಯ ಅಥವಾ ಸೋಮೇಶ್ವರ ಬಡಾವಣೆ, ಗುಬ್ಬಿ ರೋಡ್ ಬಡಾವಣೆ. ಕೃಷ್ಣರಾಜ ಬಡಾವಣೆ, ಜಯಚಾಮರಾಜ ಬಡಾವಣೆ, ಕುರೀಪಾಳ್ಯ, ಕಂಬಾಳಯ್ಯನ ಪಾಳ್ಯ, ಹಾಲಶೆಟ್ಟಿ ಪಾಳ್ಯ, ಹನುಮಂತನ ಪಾಳ್ಯ, ಕೆಂಪಸಿದ್ಧನ ಪಾಳ್ಯ, ಕಡೇಕೋಡಿ ಪಾಳ್ಯ, ನಾಗಣ್ಣನ ಪಾಳ್ಯ, ಸಾದೇ ಪಾಳ್ಯ, ಮುಖ್ಯವಾದುವು ಈ ಊರಿನ ಬೆಳವಣಿಗೆಯಲ್ಲಿ ವಿಶೇಷ ಶ್ರದ್ಧೆ ವಹಿಸಿದವರು ಕ್ರಿಶ್ಚಿಯನ್ ವೆಸ್ಲಿಯನ್ ಮಿಷನರಿಯವರು (1857) ಇವರು 1837 ರಲ್ಲಿ ಗುಬ್ಬಿ ಯಲ್ಲಿ 1840 ರಲ್ಲಿ ಕುಣಿಗಲ್‌ನಲ್ಲಿ ಕೆಲಸ ಆರಂಭಿಸಿದ್ದರು ಇವರು ತುಮಕೂರಿನ ಬಳಿಯ ಬೆತ್ತಲೂರು, ದೇವನೂರುಗಳಲ್ಲಿಯೂ ನೆಲಸಿದರು. ಇದರು ಚರ್ಚುಗಳನ್ನೂ, ಕಸುಬಿನ ಕೇಂದ್ರಗಳನ್ನೂ, ಶಾಲೆಗಳನ್ನೂ ಕಟ್ಟಿ, ಸೌಜನ್ಯ, ನಾಗರೀಕತೆ, ವಿದ್ಯಾ ಭ್ಯಾಸ, ಧರ್ಮಪ್ರಚಾರವಮಾಡಿದರು. ಇವು ನಗರಕ್ಕೆ ಆದರ್ಶಪ್ರಾಯವಾಗಿದೆ. ಕೋರ್ಟು ಕಛೇರಿಗಳು ಹಿಂದೆ ದೇವರಾಯನ ದುರ್ಗದಲ್ಲಿದ್ದವು. ಈಚೆಗೆ ತುಮಕೂರಿಗೆ ಬಂದಿವೆ. ಡಾಬ್ಸ್-ಬಂಗಲೆ ಮೊದಲಾದವು ಕಟ್ಟಲ್ಪಟ್ಟವು.

ಪೌರ ಸಭೆಯ ಆಡಳಿತಕ್ಕನುಗುಣವಾಗಿ ಸೇರಿದ ಪ್ರದೇಶವು 4 ಚ ಮೈಲಿಗಳು ಳ್ಳದ್ದಾಗಿದೆ. ಇದು ಸಮುದ್ರಮಟ್ಟದಿಂದ 2,678 ಅಡಿ ಎತ್ತರವಿದೆ. ಹತ್ತಾರು ವರ್ಷಗಳಲ್ಲಿ ಹೆಚ್ಚು ಅಭಿವೃದ್ಧಿಯಾಗುವ ಚಿಹ್ನೆಗಳು ಹೇರಳವಾಗಿವೆ. ವ್ಯಾಪಾರ ಸೌಲಭ್ಯಗಳೂ, ಎಂಟು ದಿಕ್ಕುಗಳಿಗೂ ಭಾಟಾ ಮಾರ್ಗ, ರೈಲು ಮಾರ್ಗ, ಸುಂದರ ಉದ್ಯಾನ ವಿನೋದ ವಿಶ್ರಾಂತಿ ಮಂದಿರಗಳೂ ಈ ಪಟ್ಟಣವನ್ನು ಆದರ್ಶಣೀಯವಾಗಿ ಮಾಡಿದೆ.

(ಆಧಾರ : ಎ. ಶ್ರೀಕಂಠಯ್ಯ, ಪ್ರಬುದ್ಧ ಕರ್ನಾಟಕ, ನಂ . 91, ವರ್ಷ: 1942)

ಧಾರಣ—ಧ್ಯಾನ—ಸಮಾಧಿ [52]

"ಇಷ್ಟಲಿಂಗವನು ಹಗಲಿರುಳು ನೆನೆವ ಏಕನಿಷ್ಠೆಯೆ
'ಧ್ಯಾನ' ವೆನಿಸಿಹುದು ನೋಡಾ.
ಆ ಇಷ್ಟಲಿಂಗದ ಅರಿವಿನಲ್ಲಿ ಎರಕವಾದ ಮನೋಲಯವೆ
'ಸಮಾಧಿ'ಯೆನಿಸಿಹುದು ನೋಡಾ.
ಆ ಮನೋಲಯಕ್ಕೆ ನೆಲೆಯಾಗಿಪ್ಪ ಇಷ್ಟಲಿಂಗವನು
ಭಕ್ತಿ ಭಾವಯುಕ್ತ ಶಿವೋಪಚಾರ ಕ್ರಿಯೆಗಳಿಂದ
ಎಡೆ ಬಿಡದೆ ದೇಹದ ಮೇಲೆ ಧರಿಸಿರ್ಪುದೇ
'ಧಾರಣ' ಮೆನಿಸಿಹುದು ನೋಡಾ.
ಶ್ರೀ ಶೈಲ ಮಲ್ಲಿಕಾರ್ಜುನ."

ಭಕ್ತಿಯೋಗಿ. [53]

"ಶರಣನ ಅಂಗೇದ್ರಿಯ ಲಿಂಗೇಂದ್ರಿಯದಲ್ಲಿ,
ಮನ ಲಿಂಗ ಮನದಲ್ಲಿ, ಬುದ್ಧಿ ಲಿಂಗ ಬುದ್ಧಿಯಲ್ಲಿ,
ವಿಷಯ ಲಿಂಗ ವಿಷಯದಲ್ಲಿ ಬೆರೆದು ಏಕವಾಗಿ,
ಸಕಳೇಂದ್ರಿಯಂಗಳು ಶಿವವಾಗಿ ನಿರ್ಮಳವಾಗಿಪ್ಪುವು ನೋಡಾ.
ಲೋಕ ಜಾಡ್ಯತೆಗಳಿಲ್ಲದೆ, ದೈಹಿಕತೆಯಿಲ್ಲದೆ,
ಯಾವ ಆವರಣವೂ ಇಲ್ಲದೆ ನಿರ್ಲೇಪವಾಗಿಪ್ಪವು ನೋಡಾ.
ಇಂತಪ್ಪ ಶರಣನು ಭಕ್ತಿಯೋಗಿಯಾಗಿ ಬೆಳಗುತಿಪ್ಪನು ನೋಡಾ.
ಶ್ರೀ ಮಲ್ಲಿಕಾರ್ಜುನ."

ಲಿಂಗಯೋಗದಲ್ಲಿ " ಮಹಾಲಿಂಗವೃಕ್ಷ " [54]
ಪರಾಪ್ರಕೃತಿ ಪ್ರಭೆ

:-ಶ್ಲೋಕ ॥ ತೇಜಃ ಪುಂಜ ಪರಂಜ್ಯೋತಿ। ಓಜಸ್ಸಿನಿಂ ಪ್ರಜ್ವಲಿಸಿ ॥
ನೈಜದಾ ಭಕ್ತಿಯಿಂಧೀಹೃ । ದ್ರಾಜೀವದೊಳ್ ಎಸೆವುದಯ್ ॥1॥

**ಮಹಾಲಿಂಗ**

ಕಂದ ॥ ಲಿಂಗದ ವೃಕ್ಷಕೆ ಪಣ್ಗಳ್
ಲಿಂಗಮೆನೆ ಮಿಗೆ ಸೊಗಯಿಸಿ ವಿರಾಜಿಸುತಿರ್ಕುಮ್ ॥
ಲಿಂಗದ ಬೀಜದೆ ವೃಕ್ಷಮ್ ।
ಹಿಂಗದೆ ತಾನಡಗೆ ಬೀಜವೃಕ್ಷ ನ್ಯಾಯಮ್॥1॥

"ಧರ್ಮಜ್ಞ ಕವಿ "ಕೃತ "ಲಿಂಗವಿಲಾಸ" (ಸತ್ಕಾವ್ಯಸೌರಭ)

"ಆಡುವಲ್ಲಿ, ನೋಡುವಲ್ಲಿ, ಕ್ರೀಡಿಸುವಲ್ಲಿ,
ಪಡಿಪದಾರ್ಥವಂ ಹಿಡಿಯುವಲ್ಲಿ, ವಿಷಯಮಂ ಭೋಗಿಸುವಲ್ಲಿ,
ಸುಖಾನುಭವಮಂ ಪಡೆವಲ್ಲಿ, ದೇಹಮಂ ಬಿಡುವೆಡೆಯಲ್ಲಿ,
ಸ್ವಾರ್ಥವಾಸನೆಯಿಲ್ಲದೆ ಲಿಂಗಕಳೆ ಲಿಂಗಗುಣ-ಲಿಂಗಯೋಗಂಗಳಲ್ಲಿ
ಬೆರಗುವಡೆದ ಆ ಮಹಾನುಭಾವನನ್ನು ಬಣ್ಣಿಸಲಳವಲ್ಲವಯ್ಯಾ !
ಕೇಳಾ, ಶ್ರೀ ಶೈಲಮಲ್ಲಿಕಾರ್ಜುನ

**ಅನುಭಾವ ಜ್ಯೋತಿ**

ತ್ರಿಪದಿ ॥ ಭಕ್ತಿಪಥ ಮೊದಲೆನೆ ! ಮುಕ್ತಿಸಾಧನಕೆ ! ಆತ್ಮ-
ಶಕ್ತಿಯನುಭಾವ ಜ್ಯೋತಿ ತಳೆದು ಮನುಜ !
ಮುಕ್ತಿಯನು ಸಾಧಿಸೊ! ಧರ್ಮಜ್ಞ ॥50॥

**ಶರಣ ಜೀವನ**

ನೂರು ಕಾಲ ಬಾಳಿ ಫಲವೇನು ಹದ್ದಿನಂತೆ !
ವೀರಭಕ್ತನ ಮೂರುದಿನ ಬದುಕು ಲೇಸು !
ಧಾರಿಣಿಗೆ ಬೆಳಕು ! ಧರ್ಮಜ್ಞ ॥51॥

---

"ಮಹಾಪುರುಷರ ಚರಿತ್ರೆಗಳು" ಮತ್ತು "ದೇವಪುರುಷರ ಚರಿತ್ರಾ ವೃತ;
"ಕನ್ನಡ ಕವಿ ಕಾಳಿದಾಸ" ಕೃತೇ (ಸಹಸ್ರದ್ವಯ ತ್ರಿಪದಿಕಾವ್ಯ)

---

**"ತತ್ತ್ವಮಸಿ" ಮಹಾವಾಕ್ಯಾರ್ಥ** [55]

"ತತ್ಪದವೆ ಲಿಂಗವಯ್ಯಾ
ತ್ವಂ ಪದವೆ ಅಂಗವಯ್ಯಾ
ಅಸಿ ಪದವೆ ಅವೆರಡರ ಸಂಗ ಸಮರಸವಯ್ಯಾ !
ಇಂತು ಶ್ರೀ ಗುರುದೇವನು ನಿರೂಪಿಸಿರ್ದ
"ತತ್ತ್ವಮಸಿ" ಮಹಾವಾಕ್ಯಾರ್ಥವಂ ಅರಿದು
ಅನುಭವವನ್ನು ಪಡೆದ ಬಳಿಕ, ಉಳಿದ
ಆಗಮಂಗಳ ಅರಿವು ಅಗತ್ಯವಿಲ್ಲವಯ್ಯಾ
ಶ್ರೀ ಗುರುದೇವನ ವಾಕ್ಯವೇ ಶಿಷ್ಯಂಗೆ ಪ್ರಮಾಣ -
ಕಾಣಾ, ಶ್ರೀಶೈಲಮಲ್ಲಿಕಾರ್ಜುನ

**ಲಿಂಗ ಸುಖ ಸಿದ್ಧಿ** [56]

“ ಲಿಂಗವಂತನ ಮನಸ್ಸು ಎಲ್ಲಿ ವಿಶ್ರಾಂತಿ ಪಡೆಯುವುದೊ
ಅಲ್ಲಿ ಲಿಂಗಸುಖ ಸಿದ್ಧಿ ನೋಡಾ.
ಮನಸ್ಸು ಎಲ್ಲಿ ಸೊಗವಡೆವುದೊ
ಅಲ್ಲಿ ಲಿಂಗದ ನಿಲುಕಡೆ ನೋಡಾ.
ಮನಸ್ಸು ಎಲ್ಲಿ ಕ್ರೀಡಿಸುವುದೊ
ಅಲ್ಲಿ ಮಹಾಲಿಂಗ ಪೂಜೆಯಾಗಿ ಪರಿಣಮಿಸುವುದು ನೋಡಾ.
ಇದುವೆ ಸತ್ಯಸಂಪತ್ತು ಇದುವೆ ನಿತ್ಯಪರಮಾರ್ಥ
ಕೈವಲ್ಯಪದ ನೋಡಾ, ಶ್ರೀಶೈಲಮಲ್ಲಿಕಾರ್ಜುನ ! ”

**ಅಂಗ ಲಿಂಗ ಸುಖೋಪ ಭೋಗ** [57]

“ ಪ್ರಿಯತಮೆಯು ತನ್ನ ಪ್ರಾಣಕಾಂತನಿಗೆ
ಪರಮ ರತಿಯಿಂದ ಪ್ರೀತಿಗಾಸ್ಪದವಾದ ತನ್ನ
ಮೈಯಪ್ಪುಗೆಯಾಲಿಂಗನಮಂ ಸಮರ್ಪಿಸಿ
ಆ ಸುಖಮಂ ತಪ್ಪದೆ ಭೋಗಿಸುತಿಪ್ಪ ಕಲೆಗಳಾ ಎಚ್ಚರಿಕೆಯೋಲ್
ಅಂಗ ಲಿಂಗ ಸುಖೋಪ ಭೋಗಮಿದತ್ಯಂತ
ಸೂಕ್ಷ್ಮವಾಗಿ ಶುಭಪ್ರದವಾಗಿ
ದಿವ್ಯರಸಾಮೃತವಾಗಿಹುದಲ್ತೆ ?
ಹೇಳಾ ! ಶ್ರೀ ಶೈಲಮಲ್ಲಿಕಾರ್ಜುನ ! ”

**ಹರನ ಭಕ್ತ-ಮರಣ ವಿಮುಕ್ತ** [58]

“ ಲಿಂಗ ಭಕ್ತನ ನಡೆ ಚೆನ್ನ . ನುಡಿಚೆನ್ನ ನೋಡಾ.
ಕ್ರಿಯಾನಿಷ್ಠಲಿಂಗ ಭಕ್ತನೆ ಶ್ರೇಷ್ಠ ನೋಡಾ.
ಮನಮೆಚ್ಚಿ ನಡೆವ ಲಿಂಗಭಕ್ತ ಮರಣ ವಿಮುಕ್ತ ನೋಡಾ.
ಅನಾದಿ ಮಾಯಾ ರಹಿತ ಲಿಂಗ ಭಕ್ತ ದೃಕ್ಕ್ರಿಯಾ ಸಮರ್ಥ ನೋಡಾ.
ಇಂತಪ್ಪ ಶಿವಶರಣ ಮಾತಿನಮಲ್ಲನಲ್ಲ ನೋಡಾ.
ಜನ ಮೆಚ್ಚಿಗೆಗಾಗಿ ಒಣ ಅಡಂಬರವ ಆಡುವನಲ್ಲ ಮಾಡುವನಲ್ಲ ನೋಡಾ.
ಜನಮೆಚ್ಚಿ ನಡೆಕೊಂಡರೇನಹುದು ? ಮನಮೆಚ್ಚಿ ನಡೆವುದೇ ಚೆಂದವಲ್ತೆ ?
ಹೇಳಾ ! ಶ್ರೀ ಶೈಲಮಲ್ಲಿಕಾರ್ಜುನ. ”

---

**ಮಾನವಜನ್ಮವೇ ಶ್ರೇಷ್ಠ – 9**

“ಅನಂತ ಜೀವಕೋಟಿಯಲ್ಲಿ ಮಾನವನ ಜೀವನ ಅತ್ಯಂತ ಶ್ರೇಷ್ಠ ವಾದದ್ದು, ಇವನ ಆ ಮೋಕ್ಷವನ್ನು ಪಡೆಯಲು ಅರ್ಹನಾದಂತೆ ಇನ್ನಾವ ಉಳಿದ ಜೀವಿಗಳಿಗ ಯೋಗ್ಯತೆಯಿಲ್ಲ. ಎಲೆ ಮಾನವಾ ಧನ್ಯ ! ಧನ್ಯ ! ನೀನೇಧನ್ಯ ! ಆದರೆ ನೀನು ನಿನ್ನನ್ನು ತಿಳಿವಾಗ ನೀನೇ ಶರಣ ! ಮರೆವಾಗ ಈ ಜನನ–ಮರಣಗಳ ದು:ಖಕ್ಕೆ ಕಾರಣ ! ಆಮೇಲೆ ತಮ ಧಾರಣ ! ಇದುವೇ ಆ ಬಂಧ–ಮೋಕ್ಷಗಳ ಉಭಯ ತೆರನಾದ ಸೋಪಾನ !” “ಕನ್ನಡ ಕವಿ ಕಾಳಿದಾಸ ” ಕೃತ ದಿವ್ಯವಾಣಿ (ವಿಶ್ವಧರ್ಮತತ್ತ್ವ ಬೋಧೆ)

## ಶಿವಾರ್ಪಣಭಾವ [59]

" ಆತ್ಮನಿಷ್ಠರಾದ ಮಹಾನುಭಾವಿ ಶಿವಶರಣರು ಸದಾಕಾಲ
ಹೇಗಿರ್ದಡೇನದೇ ಶಿವಪೂಜೆ ನೋಡಾ.
ಅದೇ ಶಿವಾರ್ಪಣ, ಅದೇ ಶಿವೈಕ್ಯ ಸಂಪದ ನೋಡಾ.
ಇದಕ್ಕೆ ಬೇರೆಯಾದುದೆಲ್ಲ ಯುಕ್ತಿಯಾದ ಪ್ರಯುಕ್ತ
ಚಿತ್ತ ಭ್ರಾಂತಿಗೆ ಕಾರಣವಾಯಿತ್ತು ನೋಡಾ.
ಎಂದು ಗುರುವಚನದಿಂದರಿತು ಆಚರಿಪರು ಮಹಂತರಿವರು
ಕಾಣಾ, ಶ್ರೀಶೈಲ ಮಲ್ಲಿಕಾರ್ಜುನ '

## ಪರಮ ಪೂಜ್ಯತೆಯ ಲಕ್ಷಣ [60]

ಈ ದೇಹವು-ಅಸ್ತಿ, ಚರ್ಮ, ರಕ್ತ
ಮಾಂಸಮಯವಾಗಿರ್ಪುದು ಕಂಡಯ್ಯ
ಇದಕ್ಕೆ ಹಸಿವು, ತೃಷೆ, ನಿದ್ರೆಗಳಿರ್ಪುದು ಸಹಜವಯ್ಯ
ಇದನರಿದವರು ಶರೀರ ಗುಣಂಗಳನು ಎಣಿಸಲಾಗದಯ್ಯಾ
ಈ ಹಸಿವು, ನೀರಡಿಕೆ, ನಿದ್ರಾದಿಗಳು
ಭೂಮಿಗೆ ಜನಿಸಿ ಬರ್ಪ ಪ್ರತಿ ಜೀವಿಗಳಿಗುಂಟು। ಬಿಟ್ಟಿಲ್ಲ ಕಂಡಯ್ಯ
ಆದಕಾರಣ ಮಾನವತೆಯ ಹಿರಿಮೆಗೆ
ಈದೇಹ ಧರ್ಮ ಪ್ರಮಾಣವಲ್ಲ ಕಂಡಯ್ಯ
ಆತ್ಮ ಪ್ರತಿಭೆಯಿಂದ ಚೆನ್ನಾಗಿ ಪರಿಶೋಭಿಸುತಿರ್ಪ
ಜ್ಞಾನರತ್ನ ಪ್ರಭೆಯೆ ಪ್ರಮಾಣ ಕಂಡಯ್ಯ.
ಸುಚಿತ್ ಪ್ರಭೆಯುಳ್ಳವರು ಎಂತಿರ್ದೊಡು ಪರಮಪೂಜ್ಯರು
ಕೇಳಾ, ಶ್ರೀಶೈಲ ಮಲ್ಲಿಕಾರ್ಜುನ'

## ಕಾಯಕಧರ್ಮ, ಕಾಯಕದ ಆವಶ್ಯಕತೆ [61]

" ಕ್ರಿಯೆಯಳಿದ ಭಕ್ತ ಮನುಜ, ಕ್ರಿಯೆಯಳಿದ ಗುರು ಪಶು,
ಕ್ರಿಯೆಯಳಿದ ಜಂಗಮ ರಾಕ್ಷಸ, ಕ್ರಿಯೆಯಳಿದ ಪ್ರಸಾದಿ ಯವನ,
ಕ್ರಿಯೆಯಳಿದ ಶರಣ ಅಜ್ಞಾನಿ, ಕ್ರಿಯೆಯಳಿದ ಲಿಂಗೈಕ್ಯ ಜನನಕ್ಕೊಳಗು ನೋಡಾ
ಶ್ರೀಶೈಲ ಮಲ್ಲಿಕಾರ್ಜುನ "

## ಕಾಯಕವೇ ಕೈಲಾಸ [62]

" ಗುರುವಾದಡು ಕಾಯಕದಿಂದಲೇ ಮುಕ್ತಿಯಹುದು
ಲಿಂಗವಾದಡು ಕಾಯಕದಿಂದಲೆ ಶಿಲೆಯ ಕುರುಹು ಕಳೆಯುವುದು

ಜಂಗಮವಾದಡು ಕಾಯಕದಿಂದಲೆ ತನ್ನ ಲಾಂಛನದ ಪಾಶ ಹರಿಯುವುದು ನೋಡಾ
ಗುರುವಾದಡು ಚರಸೇವೆ ಮಾಡಬೇಕು,
ಲಿಂಗವಾದಡು ಚರಸೇವೆ ಮಾಡಬೇಕು,
ಜಂಗಮವಾದಡು ಚರಸೇವೆ ಮಾಡಬೇಕು ನೋಡಾ,
ಇಂತೀ ತ್ರಿನೇತ್ರ ಶಂಭುವಾದ ಶರಣ ಲೋಕಕಲ್ಯಾಣಾರ್ಥವಾಗಿ
ಭುವನ ಭಾಗ್ಯದಿಂದವತರಿಸಿ, (ಗುರು-ಲಿಂಗ-ಜಂಗಮ) ತ್ರಿಮೂರ್ತಿತಾನಾಗಿ ಚರಿಸಿ,
ಧಾರ್ಮಿಕಾಭಿವೃದ್ಧಿಗೊಳಿಸಿ ವರಕಾಯಕದ ಮಹಿಮೆಯಿಂ
ಕೈಲಾಸವನಿಳೆಗಿಳಿಸಿ ತಂದ ಮಹಂತನೀತ ನೋಡಾ.
ಅದ್ವಿತೀಯ ಘನಮಹಿಮ ಅನಾದಿ ಶರಣ ನೋಡಾ.
ಇದುಶ್ರೀಶೈಲಮಲ್ಲಿಕಾರ್ಜುನ ಮಹಾಲಿಂಗ ಮೂರ್ತಿಯನಿಜದರಿವು ಕಾಣಿರಯ್ಯಾ !"

---

ವಿಶೇಷ ಟೀಪು : ಆತ್ಮ ಸಂಕಲ್ಪ.

'ನಾನು ಮೃತ್ಯುವಿಗಿಂತ ಶಕ್ತಿಶಾಲಿ ಇರುತ್ತೇನೆ ಹಾಗೂ ನನ್ನ ದೈವಕ್ಕಿಂತ ಶ್ರೇಷ್ಠಳಾಗಿದ್ದೇನೆ ; ನನ್ನ ಪ್ರೇಮವು ಈ ಜಗತ್ತಿನ ನಂತರವೂ ಇರುವುದು. ದುರ್ವಿಧಿಯು ನನ್ನ ಅಮರತ್ವದ ಮುಂದೆ ನಿಲ್ಲಲಶಕ್ಯವಾಗಿ ನಿಸ್ಸಹಾಯಕವಾಗಿ ನನ್ನಿಂದ ಬಿದ್ದು ಹೋಗುವುದು. ವಿಧಿಯ ನಿಯಮವೇ ಬದಲಾಗಬೇಕು ವಿನಃ ನನ್ನ ಆತ್ಮ ಸಂಕಲ್ಪವು ಎಂದೂ ಬದಲಾಗದು"

– ಶ್ರೀ ಅರವಿಂದರ–ಮಹಾಕಾವ್ಯ 'ಸಾವಿತ್ರಿ'

---

## ಆತ್ಮಾನುಭವ

ಓ ಸನಾತನ ಯೋಗಪುತ್ರನೇ ಎಲ್ಲವರಲ್ಲಿ ಆತ್ಮವನ್ನು ಕಾಣು. ಹೆದರದಿರು. ನಿಜವಾಗಿಯೂ ನೀನೇನಿರುವೆಯೋ ಅದೇ ನೀನಾಗಲು ಯಾವುದಕ್ಕೂ ನಿನ್ನ ಪಾತ್ರವನ್ನು ಶಕ್ತಿ ಹಾಗೂ ಧೈರ್ಯದಿಂದ ನಿರ್ವಹಿಸು - ನಿನ್ನ ಸೋಲಿನಲ್ಲೂ ದೇವರಿದ್ದಾನೆ, ನಿನ್ನ ಗೆಲುವಿನಲ್ಲೂ ದೇವರಿದ್ದಾನೆ ......... ಭಗವಂತನು ಯಾವುದಕ್ಕಾದರೂ ಹೆದರುವನೆಂಟೆ ? ಛೇ, ಎಂದೂ ಇಲ್ಲ ............ ಸರ್ವ ಪ್ರಾಣಿಗಳಲ್ಲಿ ಆತ್ಮವನ್ನು ಅನುಭವಕ್ಕೆ ತಂದುಕೋ, ಆತ್ಮನಲ್ಲೇ ಸರ್ವ ಪ್ರಾಣಿಗಳನ್ನು ಕಾಣು ......... ಅಂದಾಗ ಅಂತಿಮವಾಗಿ ಭಯವು ನಿನ್ನಿಂದ ಭಯಗೊಂಡು ದೂರ ಓಡುವದು ! ನಿನ್ನ ಸ್ಪರ್ಶದಿಂದ ಎಲ್ಲ ತಾನೇ ಚಿತ್ರಹಿಂಸೆಗೊಂಡೇನೆಂದು ನೋವು ನಿನ್ನನ್ನು ಸ್ಪರ್ಶಿಸದು !! ಎಲ್ಲಿ ತಾನೇ ಸಾಯುವನೆಂಬ ಭಯದಿಂದ ಮೃತ್ಯುವು ನಿನ್ನ ಬಳಿಸುಳಿಯಲು ಕೂಡ ಧೈರ್ಯವಹಿಸದು !!! ............ ನೋಡಿಲ್ಲಿ ಯೋಗಪುತ್ರನೇ ಇನ್ನೂ ಸಹಿತ ಸಂಶಯಗಾರನಾಗಬೇಡ, ಹೆದರಿ ನಡುಗುವವನಾಗ ಬೇಡ. ಯಾಕೆಂದರೆ ನಿನ್ನ ಈ ತೋರಿಕೆಯ ದೇಹದಲ್ಲೇ ಕೇವಲ ತನ್ನೊಂದು ಉಸಿರಿನಿಂದಲೇ ಜಗತ್ತುಗಳನ್ನು ಸೃಷ್ಟಿಸಬಲ್ಲ ಹಾಗೂ ಧ್ವಂಸಗೊಳ್ಳಿಸಬಲ್ಲ ಭಗವಂತನೇ ಇದ್ದಾನೆ.

---

(ಈಶ ಉಪನಿಷತ್). ಶ್ರೀ ಅರವಿಂದರು

## ಪವಿತ್ರ ಕಾಯಕ [63]

"ಅತಿಯಾಶೆಯನಳಿದು, ಮಿತಧನ ಪಡೆದು,
ಸಂಗ್ರಹದ ದುರ್ಭಾವನೆ ತೊರೆದು, ಸಮಾಜ ಹಿತಗೆಯ್ದು,
ಸತ್ಯನುಡಿ ನುಡಿದು, ಲಿಂಗ ನಡೆ ನಡೆದು,
ಶಿವಾಚಾರ ಪಥವಿಡಿದು, ಹೆರಂಗಾನಂದವ ಸರಿದು,
ತ್ರಿವಿಧ ಭಕ್ತಿ ದಳೆದು, ತ್ರಿವಿಧ ದಾಸೋಹಗೆಯ್ದು,
ನಿತ್ಯ ಜ್ಞಾನಪ್ರಸಾದ ಪಡೆದು, ಶಿವಾನಂದ ತೃಪ್ತಿವಡೆದು,
ಸೃಷ್ಟಿಯೊಳ್‌ನಿಂದು ವಿಶ್ವಾತ್ಮಕಲ್ಯಾಣಿಯೆನಿಸಿರ್ದ
ಶಿವಶರಣ ನಿತ್ಯಮಾಳ್ಪಪವಿತ್ರ ಕಾಯಕ ಮಹಿಮೆ
ಘನ ಮಹಿಮೆಕಾಣಾ ! ಶ್ರೀಶೈಲಮಲ್ಲಿಕಾರ್ಜುನ."

## ವಿಷಯ ವ್ಯಾಮೋಹ [64]

"ವಿಷಯಕ್ಕೊಳಗಾದ ಭಸ್ಮಾಸುರ ಭಸ್ಮವಾದ.
ವಿಷಯಕ್ಕೊಳಗಾದ ಚಂದ್ರ ಗುರುಪತ್ನಿಯ ಬಯಸಿ ಕಲಂಕಿತನಾದ.
ವಿಷಯಕ್ಕೊಳಗಾದ ರಾವಣ ಸೀತೆಯನು ಕದ್ದೊಯ್ದು ಹತನಾದ.
ವಿಷಯಕ್ಕೊಳಗಾದ ಕೀಚಕ ಸೈರಂಧ್ರಿಗಾಗಿ ಮೃತನಾದ.
ಇಂತು ಭುವನತ್ರಯದೊಳು ವಿಷಯಕ್ಕೊಳಗಾದವರೆಲ್ಲ ನಾಶವಾದರು,
ಕೇಳಾ, ಶ್ರೀಶೈಲಮಲ್ಲಿಕಾರ್ಜುನ"

## ಕಾಲ ಕಾಮರ ಸೋಲು [65]

ಶ. ಷ.॥ ಕಾಲನ ಬಾಧೆಗೆ।
ಸೋಲದ ಅಮರನೆ।
ಲೀಲೆಯ ಮಹಿಮೆಯ ಮೆರೆವನು ತಾ॥
ಕೇಳಿಯ ಕಾಮನ।
ಶೂಲಕೆ ಸಿಲುಕಿಸಿ
ಮೇಲಿನ ಮನೆಯೊಳು ವಾಸಿಸುವನ್ ॥5॥

"ಲಿಂಗಭೋಗೋಪ ಭೋಗಿಯಾಗಿಪ್ಪ ಶರಣ
ಶಿವಧರ್ಮ ಶಿವಜ್ಞಾನ ಶಿವಾಚಾರ ಶಿವಾನುಭವ ಸಂಪನ್ನನಾಗಿರ್ದು
ಲಿಂಗದಾಣತಿಯಿಂದ ಬಂದಿರ್ದ ಪಂಚೇಂದ್ರಿಯಂಗಳ
ವ್ಯವಹಾರವನೆಲ್ಲ ಲಿಂಗಕ್ಕರ್ಪಿಸಿ ಲಿಂಗಮುಖವಾಗಿ
ಸೇವಿಸುತಿರ್ಪನಾಗಿ ಕಾಲ ಕಾಮರನು ಸೋಲಿಸಿ
ಪರಮ ಸುಖಶಾಂತಿ ಸಾಗರದೊಳೋಲಾಡಿ
ನಿತ್ಯ ನಿಜಾನಂದ ಸಾಮ್ರಾಜ್ಯದೊಳಿರ್ದು ನಲಿದೊಲಿದು
ಸಹಜ ಸದ್‌ಭಕ್ತಿ ಲೀಲಾಲೋಲನಾಗಿ ದಯಾಶೀಲನಾಗಿ
ಮೆರೆಯುತಿರ್ದನು ಕಾಣಾ ಶ್ರೀಶೈಲ ಮಲ್ಲಿಕಾರ್ಜುನ!"

---

ಟಿಪ್ಪಣಿ; ಪಂಚೇಂದ್ರಿಯಗಳು; ಕಣ್ಣು, ಕಿವಿ, ಮೂಗು, ನಾಲಿಗೆ, ತ್ವಚೆ (ಇವು ಪಂಚೇಂದ್ರಿಯಗಳು)
ಗುದ, ಗುಹ್ಯ, ಪದ, ಪಾಣಿ, ವಾಕ್ (ಇವು ಪಂಚಕರ್ಮೇಂದ್ರಿಯಗಳು)

---

ವಿಶೇಷ ಟೇಪು : ೧೪ ಹಿಂದಿನ ಜನ್ಮದಲ್ಲಿ ಅಪರಾಧಿ

'ಒಮ್ಮೆ ಪ್ರಸಿದ್ಧ ವ್ಯಕ್ತಿಯೊಬ್ಬನು ಕೊಲೆಯ ಅಪರಾಧದಲ್ಲಿ ಸಿಕ್ಕುಬಿದ್ದಿದ್ದನು. ಮರಣ ದಂಡನೆ ಭಯವೂ ಇತ್ತು. ಆತ ನಿರಾಪರಾಧಿಯೆಂದು ಆತನ ಮೇಲೆ ಕೊಲೆಯ ಆರೋಪ ಹೊರಿಸಿದ್ದಾರೆಂದೂ ಅತನ ಶಿಷ್ಯರು ಆಣೆಮಾಡಿ ಹೇಳುತ್ತಿದ್ದರು. ಅವರು ಆತನ ಭಾವಚಿತ್ರವನ್ನು ಮಾತೆಗೆ ಕಳಿಸಿ ಸಹಾಯವನ್ನು ಕೋರಿದ್ದರು. ಆತನ ಭಾವಚಿತ್ರವನ್ನು ನೋಡಿ ಆತ ನಿಜವಾಗಿ ನಿರಪರಾಧಿಯೆಂದೂ ಆದರೆ ಹಿಂದಿನ ಜನ್ಮದಲ್ಲಿ ಆತ ಕೊಲೆಮಾಡಿದ್ದನೆಂದೂ ಮಾತೆ ಹೇಳಿದರು.'

---

ಶ್ರೀ ಮಾತೆಯವರು ಶ್ರೀ ಅರವಿಂದಾಶ್ರಮ 'ದಿವ್ಯ ಸತ್ತ್ವದ ಮಿಂಚು' ಕೃತಿರತ್ನ.

---

## ಆಜೀವ ಸದಸ್ಯರುಗಳಲ್ಲಿ ಒಂದು ಮನವಿ.

ಸಿದ್ಧಗಂಗಾ ಪತ್ರಿಕೆಯ ಅನೇಕ ಆಜೀವ ಸದಸ್ಯರುಗಳ ವಿಳಾಸಗಳು ಬದಲಾಗಿರುವುದರಿಂದ ಕಾರ್ಯಾಲಯದಿಂದ ಕಳುಹಿಸಿದ ಸಂಚಿಕೆಗಳು ಕೆಲವು ಸದಸ್ಯರುಗಳಿಗೆ ತಲುಪದೆ ಹಿಂತಿರುಗುತ್ತಿವೆ. ದಯವಿಟ್ಟು ನಿಮ್ಮ ಬದಲಾದ ವಿಳಾಸಗಳನ್ನು ಆಗಿಂದಾಗ್ಗೆ ಪತ್ರಿಕಾ ಕಾರ್ಯಾಲಯಕ್ಕೆ ಕಳುಹಿಸಿ ಕೊಡುವುದರ ಮುಖೇನ "ಸಿದ್ಧಗಂಗಾ" ನಿಮಗೆ ಕ್ರಮವಾಗಿ ತಲುಪಲು ಸಹಕರಿಸಬೇಕಾಗಿ ಪ್ರಾರ್ಥನೆ. ತಮ್ಮ ಸದಸ್ಯತ್ವದ ನಂಬರನು ಬರೆಯಿರಿ.

# ಅಪ್‌ಟು ಡೇಟ್ ಗಣೇಶ

ಶ್ರೀ ಎಲ್. ಆರ್. ಹೆಗಡೆ, ಸಿದ್ದಾಪುರ, ಉತ್ತರ ಕನ್ನಡ ಜಿಲ್ಲೆ.

ವಿಜ್ಞಾನದ ಹೊಸ ಹೊಸ ಶೋಧಗಳ, ಮಾನವನ ಹೊಸ ಹೊಸ ಸಾಹಸಗಳ ರಾಕೆಟ್ ಯುಗದಲ್ಲಿ ಜೀವನ ಕ್ರಮವು ದಿನ ದಿನಕ್ಕೆ ಹೊಸರೂಪ ಪಡೆಯುತ್ತಿದೆ. ನಾಳೆ ಬರುವಷ್ಟರಲ್ಲಿಯೇ ಇಂದು ಹಳೆಯದಾಗಿರುತ್ತದೆ.

ನಾಳೆಯಾದರೋ? "ನಾಳೆಯೆಂಬೆಯೊ? ನಾಳೆ ಸೇರುವೆನು ನೂರ್ಕೋಟಿ ನಿನ್ನೆಗಳ ಜತೆಗೆ" ಎಂದು "ಉಮರನ ಒಸಗೆ" ಯನ್ನು ಕನ್ನಡಕ್ಕೆ ಬೀರಿದ ಡಿ ವಿ ಜಿ ಯವರ ಉಮರ್ ಖಯ್ಯಾಂ ಹೇಳಿಲ್ಲವೆ ?

ಹೊಸ ಹೊಸ ಚಲಚ್ಚಿತ್ರಗಳ (ಯುವಕರ ರೂಢಿಯ ಮಾತಿನಂತೆ ಪಿಕ್ಚರ್‌ಗಳ) ಪ್ರೀಮಿಯರ್ ಶೋಗಳನ್ನು ದಿನಕ್ಕೆ ಮೂರು ಸಲ ನೋಡಿ, ತಮ್ಮ ಫ್ಯಾಶನ್‌ಗಳನ್ನು ಮಾರ್ಪಡಿಸಿಕೊಳ್ಳುವ ಅಪ್‌ಟು ಡೇಟ್ ಅಮ್ಮಯ್ಯಗಳ, ಹಾಗೂ ತಮ್ಮಯ್ಯಗಳ ಮತ್ತು ತಂಗಮ್ಮಗಳ ವಿಷಯವಾಗಿ ಭಾಷಣ ಮಾಡುವಾಗಲೂ ಅಪ್‌ಟು ಡೇಟ್ ಆಗುವುದು ಕಷ್ಟ. ಹೀಗಿರುವಾಗ ಪುರಾತನನೂ ಸನಾತನನೂ ಆದ ಗಣಪತಿಯನ್ನು ಅಪ್‌ಟು ಡೇಟ್ ಮಾಡುವದಾಗಲಿ ಅವನ ಕುರಿತು ಲೇಖನ ಬರೆವುದಾಗಲಿ ಎಷ್ಟು ಕಷ್ಟ ಎಂಬುದನ್ನು ಅಪ್‌ಟು ಡೇಟ್ ಮುಂದಿಯೇ ವಿಚಾರಿಸಿಕೊಳ್ಳಬೇಕು.

ಅಂತೂ ಗಣಪತಿಯನ್ನು ಈ ಶತಮಾನದ ಫ್ಯಾಶನ್‌ಯುಗಕ್ಕೆ ಹೊಂದಿಸಿಕೊಳ್ಳಲು ನಮ್ಮ ರಸಿಕರು ಪ್ರಯತ್ನಗಳನ್ನು ಯಶಸ್ವಿಯಾಗಿಯೇ ಮಾಡಿದ್ದಾರೆ.

ಕಲೆಗಾರರ ಈ ಸೃಷ್ಟಿಯಲ್ಲಿ ಚಡ್ಡಿ. ಬೂಟು, ಹ್ಯಾಟು, ಹಾಕಿಕೊಂಡು ಒಂದು ಕೈಯಲ್ಲಿ ಸಿಗರೇಟ್, ಇನ್ನೊಂದು ಕೈಯಲ್ಲಿ ವಾಕಿಂಗ್ ಸ್ಟಿಕ್ (ನಡೆವ ಬಡಿಗೆಯೆಂದು ಅನುವಾದಿಸಿದರೆ ಹೊಂದಿಕೊಳ್ಳದಲ್ಲ) ಹಿಡಿದ ಗಣಪತಿ ಇದ್ದಾನೆ. ಇನ್ನೊಬ್ಬ ಗಣಪತಿ ಬೊಕ್ಕತಲೆ ಬಿಟ್ಟುಕೊಂಡು ಕೈಯಲ್ಲಿ ಹ್ಯಾಟ್ ಹಿಡಿದುಕೊಳ್ಳುತ್ತಾನೆ. ಹ್ಯಾಟಿಗೆ ಕನ್ನಡದಲ್ಲಿ ಬಂಡಿ (ಕಾನಲಿ) ಟೊಪ್ಪಿಗೆ ಎಂದು ಹಿಂದಣ ಕಾಲದ ಜನರು ಹೇಳುತ್ತಿದ್ದರು ಆದರೆ, ಅದು ಈಗ ಹಳೇ ಶಬ್ದವಾಯಿತು.

ಕನ್ನಡಕವನ್ನು, ಅದರಲ್ಲಿಯೂ ಕಪ್ಪುಕನ್ನಡಕ. ಹಾಕಿಕೊಳ್ಳುವದು ದೃಷ್ಟಿಗೆ ಬೀಳುತ್ತದೆ. ಫೆಜ್‌ಕ್ಯಾಪ್, ಹಾಗೂ ಶರ್ವಾನಿಗಳನ್ನು ಧರಿಸುವ ಗಣಪತಿಯನ್ನು ಅಪೂರ್ವಕ್ಕಾಗಿಯಾದರೂ ನೋಡಿದ್ದುಂಟು, ಕೈಯ್ಯಲ್ಲಿ ಬಂದೂಕವನ್ನು ಹಿಡಿದಿದ್ದನು ಒಬ್ಬ ಗಣಪತಿ.

ಕೈಯ್ಯಲ್ಲಿ ರಾಕೆಟ್ (ಕ್ಷಿಪಣಿ) ಹಿಡಿದ ಗಣಪತಿಯನ್ನು ಕಂಡರೆ ಆಶ್ಚರ್ಯವಾಗಬೇಕಿಲ್ಲ. ಮೊದಲ ಪೂಜೆಗೊಳ್ಳುವ ಮನ್ನಣೆ ಪಡೆದಿರುವ ಈತನು ಕ್ಷಿಪಣಿಯನ್ನು ಮೊಟ್ಟಮೊದಲಿಗೆ ಯಶಸ್ವಿಯಾಗಿ ಪ್ರಯೋಗಿಸಿದವನೆಂಬುದು ಹಲವರಿಗೆ ತಿಳಿದಿರಲಿಕ್ಕಿಲ್ಲ ಕೈಯಲ್ಲಿ ತ್ರಿಶೂಲ, ಪರಶುಗಳನ್ನು ಹಿಡಿವ ಮೊದಲೇ ಆತನು ತನ್ನ ಬಾಲ್ಯದಲ್ಲಿಯೇ ತಾನು ಎಡವಿ ಬಿದ್ದ ಸಮಯದಲ್ಲಿ ನಕ್ಕ ಚಂದ್ರನ ಮೇಲೆ ನಿರ್ದೇಶಿತ ಕ್ಷಿಪಣಿಯನ್ನು ಪ್ರಯೋಗಿಸಿದ್ದನು. ಅದನ್ನು ಪುರಾಣಕಥೆಯಲ್ಲಿ ತನ್ನ ಒಂದು ಹಲ್ಲನ್ನು ಮುರಿದು ಆ ತುಂಡನ್ನು ಚಂದ್ರನ ಮೇಲೆ ಪ್ರಯೋಗಮಾಡಿದ್ದನೆಂದು ವರ್ಣಿಸಿರುವುದು ಕಾಣುತ್ತದೆ. ಈತ ಹೀಗೆ ಹಲ್ಲುಮುರಕ (ಹಲ್ಲುಮುಕ್ಕ) ನೆಂದು ತೋರಿಸುವ ಇಚ್ಛೆಯಿಲ್ಲದವರು ಆತನ ಎರಡು ಮುಂಬಲ್ಲುಗಳನ್ನು ಪೂರ್ತಿಯಾಗಿಯೆ ಇಡಿಯಾಗಿಯೇ ಇಟ್ಟಿರಬಹುದು.

ಸಂಗೀತ ಪ್ರೇಮಿಗಳು ಆತನು ಪಿಟೀಲನ್ನು ಹಿಡಿದು ಅದನ್ನು ನುಡಿಸುವಂತೆ (ಮೌನ ಸಂಗೀತದಲ್ಲಿ) ನಿರ್ಮಿಸಿರುತ್ತಾರೆ. ಒಬ್ಬ ಗಣಪತಿ ಕೊಳಲನ್ನೂದಿದರೆ ಇನ್ನೊಬ್ಬನು ಡೊಳ್ಳನ್ನು (ತನ್ನ ಡೊಳ್ಳನ್ನಲ್ಲ) ಬಡಿಯುತ್ತಾನೆ. ಸಣ್ಣ ಮಕ್ಕಳು ಊದುವಂತೆ ಸಾರಂಗವನ್ನು ಊದುವುದಕ್ಕೆ ಬಾಯಿಗೆ ಹಿಡಿದ ಗಣಪತಿಯನ್ನು ನೋಡಿದ್ದೆನು. ಒಬ್ಬ ಗಣಪತಿಮೂರ್ತಿಯು ತನ್ನ ಕುತ್ತಿಗೆಗೆ ತೂಗ ಹಾಕಿ ಕೊಂಡ ಪಿಯಾನನ್ನು ತನ್ನ ಡೊಳ್ಳಿಗೇ ಆಧಾರಮಾಡಿಕೊಂಡು ಬೆರಳುಗಳಿಂದ ಬಾರಿಸುತ್ತಾನೆ.

---

೧. 'ಹರಚರಿತ ಚಿಂತಾಮಣಿ' ಎಂಬ ಗ್ರಂಥದಲ್ಲಿ ಗಣೇಶನಿಗೂ ಕುಮಾರಸ್ವಾಮಿಗೂ (ಅಂದರೆ ಷಣ್ಮುಖನಿಗೂ) ಸ್ಪರ್ಧೆ ಬಂದಕಾಲದಲ್ಲಿ ಗಣೇಶನ ಹಲ್ಲು ಮುರಿದುದು ಎಂದು ಉಂಟು ಎಂದು ಡಾ॥ ಕೆ ಕೃಷ್ಣಮೂರ್ತಿಯವರ ಲೇಖನದಲ್ಲಿದೆ. (ವಿಶ್ವವ್ಯಾಪೀ ಗಣೇಶನ ಗ್ರಂಥ)

---

ನೆಪಕ್ಕೆ ಮಾತ್ರ ಸಂಪ್ರದಾಯ ಪಾಲಿಸಲು ಸಣ್ಣ ಇಲಿಯೊಂದನ್ನು ಗಣಪತಿಯ ಬಳಿ ಇಟ್ಟಿರುತ್ತಾರೆ. ಆದರೆ, ಗಣಪತಿ ಪಾದದ ಮೇಲೆ ಸಹ ಇಲಿಯನ್ನು ಇಟ್ಟು ಮೂರ್ತಿಯನ್ನು ಮಾಡಿರುವದುಂಟು. ಇಲಿಯು ಗಣಪತಿಯ ವಾಹನವಾಗಿರವುದು ಹಳೇ ಗೊಡ್ಡು ಸಂಪ್ರದಾಯವೆಂದು ತಿಳಿದು ಆಧುನಿಕ ಫ್ಯಾಶನ್‌ಪ್ರಿಯರ್ ಸೈಕಲ್ ಮೇಲೆ ಹತ್ತಿ ಕುಳಿತ ಗಣಪತಿ ಮೂರ್ತಿಯನ್ನು ಮಾಡಿಸಿದರು. ಮೋಟರ್ ಕಾರ್ ನಡೆಸಲು ಕುಳಿತ ಗಣಪತಿಯನ್ನು ಹಲವರು ನೋಡಿರಬಹುದು. ಹೆಲಿಕಾಪ್ಟರ್ ಮೇಲೆ ಕುಳಿತ ಗಣಪತಿಯನ್ನು ನಿರ್ಮಿಸಿದುದನ್ನು ನೋಡಿದವರಿರಬಹುದು.

ಶ್ರೀ ಗೋವರ್ಧನ ಅಂಕೋಲೇಕರರ "ವಿಶ್ವವ್ಯಾಪಿ ಗಣೇಶ" ಗ್ರಂಥವನ್ನು ನೋಡಿದವರು ಇತರ ದೇಶಗಳಲ್ಲಿ ಸೊಂಡಿಲೇ ಇಲ್ಲದ ಗಣಪತಿಯ ಮೂರ್ತಿಗಳಿರು ದನ್ನು ತಿಳಿದಿರುತ್ತಾರೆ. ಆದರೆ, ನಮ್ಮ ದೇಶದಲ್ಲಿ ಎಷ್ಟೇ ಫ್ಯಾಶನ್‌ಗಳು ಬದಲಾದರೂ ಸೊಂಡಿಲು ಇಲ್ಲದ ಗಣಪತಿಯನ್ನು ಪೂಜೆಯಲ್ಲಿ ಕುಳ್ಳಿರಿಸಿಕೊಳ್ಳುವುದು ಸಾಧ್ಯವಿಲ್ಲ.

"God made Man in his own image" 'ದೇವರು ಮನುಷ್ಯ ನನ್ನು ತನ್ನ ಬಿಂಬದಂತೆಯೇ, ತನ್ನರೂಪಿನಂತೆಯೇ ನಿರ್ಮಿಸಿದನು' ಎಂದು ಬೈಬಲ್ ನಲ್ಲಿ ತಿಳಿಸಲಾಗಿದೆ.

ಆದರೆ, ಈ ಗಣಪತಿ ಮೂರ್ತಿಗಳ ವೈವಿಧ್ಯವನ್ನು ನೋಡಿದರೆ, ಬೆಳಗಾವಿ ಲಿಂಗರಾಜ ಕಾಲೇಜಿನಲ್ಲಿ ನಾನು ವಿದ್ಯಾರ್ಥಿಯಾಗಿದ್ದಾಗ ವಕೀಲ್ ಎಂಬವರು "Man made God in his own image" ಎಂಬ ವಿಷಯದ ಮೇಲೆ ಬಹಳ ಸ್ವಾರ ಸ್ಯವಾಗಿ ಭಾಷಣ ಮಾಡಿದ್ದು ನೆನಪಾಗುತ್ತದೆ. ಮಾನವನು ತನ್ನ ಹಾಗೆಯೇ ದೇವರನ್ನು ಕಲ್ಪಿಸಿ ದೇವತೆಗಳಲ್ಲಿ ಮಾನವ ಸ್ವಭಾವವನ್ನು ಆರೋಪಿಸಿದನು. ತನ್ನ ದೌರ್ಬಲ್ಯಗಳನ್ನು ದೇವತೆಗಳಲ್ಲಿ ಕಂಡು ಪುರಾಣ ಕಥೆಗಳನ್ನು ಸೃಷ್ಟಿಸಿದನು, ತನ್ನಂ ತೆಯೇ ಅವರಿಗೂ ಹೆಂಡರು ಮಕ್ಕಳು ಇರುವರೆಂದು ಸಂಬಂಧಗಳ ಜೋಡಣೆ ಮಾಡಿದ ತನ್ನಂತೆಯೇ ಅವರೂ ಸಹ ಕಷ್ಟ – ನಷ್ಟಗಳಲ್ಲಿ ತೊಳಲಾಡುವರೆಂದು ಕಥೆಗಳನ್ನು ಕಟ್ಟಿ ಸಮಾಧಾನ ತಂದುಕೊಂಡನು.

ತಾನು ಮರಣಕ್ಕೆ ಗುರಿಯಾಗುವವನಾದರೂ ದೇವತೆಗಳು ಅಮರರಾಗಿರುವ ರೆಂದು ತಿಳಿದು ಆ ಅಮರತ್ತ್ವವನ್ನು ತಾನೂ ಪಡೆಯಬೇಕೆಂಬ ಹವಣಿಕೆಯಲ್ಲಿ ಆಯುಷ್ಯವನ್ನು ಸವೆಸಿದನು.

ಕ್ರಿಕೆಟ್ ಪ್ರೇಮಿಗಳು ಬ್ಯಾಟ್ ಹಿಡಿದುಕೊಂಡಿರುವ ಗಣಪತಿಯ ಮೂರ್ತಿ ಯನ್ನು ನೋಡಲು ಇಷ್ಟಪಡಬಹುದು. ದೃಷ್ಟಿಯಂತೆ ಸೃಷ್ಟಿ, ಭಾವದಂತೆ ದೇವ. ಅದಕ್ಕೆ ತಕ್ಕಂತೆಯೇ ಈ ದೇವರ ಮೂರ್ತಿಗಳ ಸೃಷ್ಟಿಯೂ ಆಗುತ್ತದೆ.

ಆನೆಯು ಪ್ರಾಣಿಗಳಲ್ಲಿ ಅತಿ ಬುದ್ಧಿವಂತಪ್ರಾಣಿಯಾಗಿದೆ. ಗಣಪತಿಯ ಆನೆ ಮೊಗವು ಗಣಪತಿಯ ಬುದ್ಧಿಶಕ್ತಿಯ ಪ್ರತೀಕವಾಗಿದೆಯೆಂದು ಹೇಳುತ್ತಾರೆ, ಹಾಗಿದ್ದರೆ ಕೆಲವುದೇಶಗಳಲ್ಲಿ ಗಣಪತಿಗೆ ಮೂರು ಸೊಂಡಿಲು, ಐದು ಸೊಂಡಿಲುಗಳನ್ನು ಜೋಡಿಸುವ ಕ್ರಮವು ಆ ಬುದ್ಧಿಶಕ್ತಿಯ ವೃದ್ಧಿಯನ್ನು ಸೂಚಿಸಬಹುದು.

ಅದರಂತೆಯೇ ಗಣಪತಿಯು ತಿನ್ನುವ ಬಗೆ ಬಗೆಯ ಸಿಹಿಖಾದ್ಯ ಪರಿಣಾಮ ವಾಗಿ ಅವನ ಹೊಟ್ಟೆಯು ಬಲು ದೊಡ್ಡದಾಗಿರುವದು ಹಿಂದಣ ಕಾಲದಲ್ಲಿನ ಆಹಾರ ಸಮೃದ್ಧಿಯನ್ನು ಸೂಚಿಸಹುದು.

ಗಜಾನನಂ ಭೂತಗಣಾಧಿಸೇವಿತಂ |
ಕಪಿತ್ಥ ಜಂಬೂಫಲ ಸಾರಭಕ್ಷಿತಂ ||
ಉಮಾಸುತಂ ಶೋಕವಿನಾಶಕಾರಣಂ |
ನಮಾಮಿ-ವಿಘ್ನೇಶ್ವರ ಪಾದಪಂಕಜಂ ||

ಎಂಬ ಸ್ತೋತ್ರ ಶ್ಲೋಕದಲ್ಲಿ ಬರುವ ಕಪಿತ್ಥ ಅಂದರೆ ಬೆಳವಲದ ಹಣ್ಣನ್ನೂ ಜಂಬೂಫಲ ಅಂದರೆ ನೇರಿಲಿಹಣ್ಣುಗಳನ್ನೂ ಸೇವನೆ ಮಾಡುವ ಗಣಪತಿಯು ಮಧು ಮೇಹರೋಗ ದಲ್ಲಿ ಗುಣಕಾರಿಯಾಗಿರುವ ಹಣ್ಣುಗಳನ್ನು ಯಾಕೆ ಹೆಚ್ಚಾಗಿ ಅಪೇಕ್ಷಿಸುತ್ತಾನೆ ಎಂಬ ಕುರಿತು ನನ್ನ ಮಿತ್ರರಾದ ಆಯುರ್ವೇದ ಚಿಕಿತ್ಸಕರೊಬ್ಬರು ವಿಚಾರ ಮಾಡಿದ್ದಾರೆ. ಬಹಳ ಬೊಜ್ಜನ್ನುಂಟುಮಾಡುವ ಕಜ್ಜಾಯಗಳನ್ನು ತಿಂದ ಪರಿಣಾಮವಾಗಿ ಮಧು ಮೇಹರೋಗ ಬರಬಾರದೆಂದು ಈ ಹಣ್ಣುಗಳನ್ನು ತಿನ್ನಲು ಈರೀತಿ ಸೂಚನೆಯನ್ನು ಗಣಪತಿಗೆ ಕೊಡುತ್ತಿರುವನೆಂಬುದು ಅವರ ತರ್ಕವಾಗಿದೆ.

ಗಣಪತಿಯ ಮೂಗೇ ಉದ್ದವಾಗಿ ಹೊಟ್ಟೆಯವರೆಗೆ ಬಂದರೂ ಹೊಟ್ಟೆಯೂ ದೊಡ್ಡದಾಗಿ ಮೂಗಿನ ವರೆಗೆ ಬಂದಿದೆ ಎಂದೂ ಹೇಳಬಹುದಾಗಿತ್ತು. ಆದರೆ ರೇಶನ್ ಯುಗದ ಪರಿಣಾಮವಾಗಿ ಮತ್ತು ಎರಡನೇ ಮಹಾಯುದ್ಧ ಕಾಲದ ಹಾಗೂ ಅನಂತರದ ಗಣಪತಿಯ ಹೊಟ್ಟೆ ಮೊದಲಿನಷ್ಟು ದೊಡ್ಡದಿರುವುದಿಲ್ಲ. ಜನರ ಫ್ಯಾಶನ್ ಪ್ರಕಾರ ವಾಗಿಯೂ ಸೌಂದರ್ಯದೃಷ್ಟಿಯಿಂದಲೂ ಆಹಾರಸಾಮಗ್ರಿಗಳ ಕೊರತೆಯಿಂದಲೂ ಗಣಪತಿಯ ಹೊಟ್ಟೆಯು ತೆಳ್ಳಗಾಗುವ ಯೋಗ ಬಂದಿದೆ. ಕೈಕಾಲುಗಳು ಮೊದಲಿ ನಂತೆ ಬೊಜ್ಜು ಬೆಳೆದು ಗಡುತರವಾಗಿರುವಂತೆ ಕಾಣುವುದಿಲ್ಲ

ತಂಜಾವೂರು ದೇವಾಲಯದಲ್ಲಿ ನರ್ತಿಸುವ ಗಣಪತಿಯ ಮೂರ್ತಿಇರುವುದಂತೆ ಈಗಿನ ಗಣಪತಿಯ ವೈಕಟ್ಟು ನರ್ತನಮಾಡಲು ಅನುಕೂಲಕರವಾಗಿರುತ್ತದೆ.

ಗಣಪತಿಗೆ ಇಲಿಯು ವಾಹನವಾದ ಕುರಿತು ಒಂದು ಕಥೆಯಿದೆ. ಗಣೇಶನು ಒಮ್ಮೆ ಗಜಮುಖ ರಾಕ್ಷಸನೊಡನೆ ಯುದ್ಧಮಾಡಿದನಂತೆ, ರಾಕ್ಷಸನು ಅವನ ಬಲ ದಂತವನ್ನು ಮುರಿದನಂತೆ. ಮುರಿದ ಕೋರೆಯಿಂದಲೇ ಗಣಪನು ದೈತ್ಯನ ಮೇಲೆರ ಗಿದನಂತೆ. ಆಗ ಆತನು ಇಲಿಯ ರೂಪದಿಂದ ಓಡಿಹೋದನಂತೆ. ಅದೇ ಇಲಿಯನ್ನು ಹಿಡಿದು ತನ್ನ ರೂಪಕ್ಕೆ ಪ್ರತಿಸ್ಪರ್ಧಿಯಾದ ರಕ್ಕಸನ ಮೇಲೆ ತನ್ನ ಬ್ರಹ್ಮಾಂಡ ಹೊಟ್ಟೆಯ ಭಾರವನ್ನು ಶಿಕ್ಷೆಯ ರೂಪದಲ್ಲಿ ಹೇರಿ, ವಾಹನವನ್ನಾಗಿ ಮಾಡಿಕೊಂಡ ನಂತೆ ಪರಶುರಾಮನೊಡನೆ ಯುದ್ಧ ಮಾಡುವಾಗ, ಪರಶುರಾಮನು ಇವನ ದಂತ ವನ್ನು ತನ್ನ ಕೊಡಲಿಯಿಂದ ಕಡಿದನೆಂದೂ ಕಥೆಯಿದೆ.

ಭಾರತದ ಗಣರಾಷ್ಟ್ರವಂತೂ ಚೀನಾ ಗಜಮುಖ ರಾಕ್ಷಸನೊಡನೆ ಹಿಂದಿ ಚೀನೀ ಭಾಯಿ ಭಾಯಿ ಎಂದು ಹೇಳುತ್ತಾ ಗೋಮುಖ ವ್ಯಾಘ್ರದಂತೆ ವಂಚಿಸಿದ್ದು ನಿಜ) ಯುದ್ಧ ಮಾಡುವಾಗ ಒಂದು ಹಲ್ಲನ್ನು ಮುರಿದು ಕೊಂಡಿದ್ದಂತೂ ನಿಜ.

ಗಣಪತಿಯು ಬ್ರಹ್ಮಚಾರಿಯೆಂದು ತಿಳಿಯಲಾಗುತ್ತಿದ್ದರೂ ಕೆಲವು ಕಥೆಗಳಲ್ಲಿ ಆತನು ಸಿದ್ಧಿ-ಬುದ್ಧಿ ಈ ಇಬ್ಬರು ಕನ್ಯೆಯರನ್ನು ವಿವಾಹವಾಗುತ್ತಾನೆ.

ಗಣೇಶ-ಸ್ಕಂದ (ಸ್ಕಂದ ಎಂಬುದು ಷಣ್ಮುಖನ ಇನ್ನೊಂದು ಹೆಸರು) ಸಮಾನ ವಯಸ್ಕರು ಯಾರಿಗೆ ಮೊದಲು ಮದುವೆ ಮಾಡಬೇಕೆಂಬ ಸಮಸ್ಯೆಯಾಗಿತ್ತದೆ. ಪೃಥ್ವಿಯನ್ನು ಯಾರು ಏಳುಸಾರಿ ಪ್ರದಕ್ಷಿಣೆ ಮಾಡುವರೋ ಅವರಿಗೆ ಮೊದಲು ಮದುವೆ ಎಂದು ಅವರಿಗೆ ಶಿವನು ತಿಳಿಸಿದನು.

ಸ್ಕಂದನು ನವಿಲನ್ನೇರಿ ಏಳುಸಾರಿ ಭೂ ಪ್ರದಕ್ಷಿಣೆ ಮಾಡಲು ಹೊರಟನು. ಆ ಗಣಪತಿಯು ತಂದೆ-ತಾಯಿಗಳು ಜಗತ್ತನ್ನೇ ಹಡೆದವರು (ಜಗತಃ ಪಿತರೌ ಎಂದು ಕಾಳಿದಾಸ ಸ್ತುತಿಸಿದ್ದಾನೆ) ಅವರ ಸುತ್ತಲು ತಿರುಗಿದರೆ ಜಗತ್ತನ್ನೇ ತಿರುಗಿದಂತೆ ಎಂದು ಭಾವಿಸಿ, ಏಳುಸಾರಿ ಪಾರ್ವತಿ ಪರಮೇಶ್ವರರ ಸುತ್ತಲು ತಿರುಗಿದನು. ಸ್ಕಂದನು ಬಂದು ತಾನು ಪಣದಲ್ಲಿ ಸೋತನೆಂದು ತಿಳಿದು ತಪಸ್ಸುಮಾಡಲು ಹೊರಟು ಹೋದನು. ಗಣಪತಿಯು ಮದುವೆಯಾದ ಬುದ್ಧಿ ಮತ್ತು ಸಿದ್ಧಿ ಎಂಬ ಕನ್ಯೆಯರು ಸಾಂಕೇತಿಕ ಎಂದು ತಿಳಿಯಬೇಕು ಬುದ್ಧಿವಂತಿಕೆಯಿಂದ ಕೈಗೊಂಡ ಕಾರ್ಯಗಳು ಸಿದ್ಧಿಯನ್ನೈದುತ್ತವೆ.

ಆ ಸಿದ್ಧಿಯು ನಮ್ಮ ಪಂಚವಾರ್ಷಿಕ ಯೋಜನೆಗಳು ಎಂದು ತಿಳಿದುಕೊಂಡರೆ ಅವು ಯಶಸ್ವಿಯಾಗಬೇಕಾದರೆ, ಕವಿವರ ಅಂಬಿಕಾತನಯದತ್ತರು ಹೇಳಿದಂತೆ ಯೋಜನೆಯು ಉತ್ತಮ ಯೋಚನೆಯ ತಳಹದಿಯ ಮೇಲೆ ರೂಪಿತವಾಗಬೇಕು. ಶಿವಪುರಾಣದಲ್ಲಿ ವಿನಾಯಕನು ವಿವಾಹವಾದದು ಸ್ಧಿದಿ ಮತ್ತು ಬುದ್ಧಿ(ಸಮೃದ್ಧಿ) ಎಂಬುವರೊಡನೆ ಎಂದಿದೆ ಕ್ಷೇಮ ಮತ್ತು ಲಾಭ ಮಕ್ಕಳು (ವಿಶ್ವವ್ಯಾಪೀ ಗಣೇಶ ಡಾ|| ಸಂಪೂರ್ಣಾನಂದರು, ಗಣಪತಿ ಕುರಿತು ಇಂಗ್ಲಿಷ್‌ನಲ್ಲಿ ಒಂದು ಉತ್ತಮ ಗ್ರಂಥವನ್ನು ಬರೆದು ಪ್ರಕಟಿಸಿದ್ದರು, ಗಣಪತಿಯ ಅರ್ಥವಿಶ್ಲೇಷಣೆಯನ್ನು ಮಾಡುವಾಗ ಶ್ರೀ ರಾಯ್ ಎಂಬವರ ಅಭಿಪ್ರಾಯವನ್ನು ಹೀಗೆ ಉಲ್ಲೇಖಿಸಿದ್ದರು.

"ಇಲಿ ವಿವೇಚಕ, ವಿಭಾಜಕ, ಭೇದಕಾರಕ ನಿಸ್ವಾರ್ಥಕ. ವಿಶ್ಲೇಷಕ ಬುದ್ಧಿ ಅದನ್ನು ವಾಹನವಾಗಿ ಮಾಡಿಕೊಂಡು ಮುಂದಡಿಯಿಡಬೇಕು ಗಣೇಶನ ಮೊದಲ ಶಿರಸ್ಸು ಹೋದದ್ದು ಅಹಂಕಾರನಾಶದ ಕುರುಹು ಆನೆಯ ಶಿರ ಸಮನ್ವಯ ಬುದ್ಧಿ ಲಂಬೋದರತ್ವ ಅನೇಕ ಬ್ರಹ್ಮಾಂಡ ಅಡಗಿರುವದರಿಂದ ಏಕದಂತ ಅದ್ವೈತರೂಪ ಮೋದಕ ಆನಂದ ಉಂಟುಮಾಡುವವ.

ಇನ್ನು ಲೌಕಿಕವಾಗಿ ಇಲಿ ಪಶು. ಸಂಚಾರ ರಾತ್ರಿಯಲ್ಲಿ ಮೋಹವನ್ನು (ಅಜ್ಞಾನವನ್ನು) ರಾತ್ರಿಗೆ ಹೋಲಿಸುತ್ತಾರೆ. ಇಲಿಗೆ ಜೀವನಕ್ಕೆ ಸಾಮ್ಯ. ಅಜ್ಞಾನ ಹತ್ತಿಕ್ಕಿ ಜ್ಞಾನಹೊಂದಬೇಕು."

ನನ್ನ ಅಭಿಪ್ರಾಯದಂತೆ ನಮ್ಮ ಪಂಚವಾರ್ಷಿಕಯೋಜನೆಗಳು ಯಶಸ್ವಿಯಾಗಲು ಯೋಜನೆಗಳ ಹಣವನ್ನು ಒಳಗಿಂದೊಳಗೇ ಗಿಳಂಕರಿಸುವ ಮತ್ತು ಕಳಪೆ ಕೆಲಸವನ್ನು ತಯಾರುಮಾಡುವ ಧೂರ್ತರು, ಕುತಂತ್ರಿಗಳು, ಈಮಂತ್ರಿಗಳು, ಕಂತ್ರಾಟದಾರರ ಸಂಕೇತವಾದ ಇಲಿಯನ್ನು ನಮ್ಮ ಗಣರಾಷ್ಟ್ರವೆಂಬ ಗಣಪತಿಯು ಹತ್ತಿಕ್ಕಿ ಮೆಟ್ಟಿದರೆ ಮಾತ್ರ ಯಶಸ್ವಿಯಾಗಿ ಕಲ್ಪವೃಕ್ಷದಂತೆ ಫಲ ಕೊಡಬಲ್ಲವು.

ಕಲ್ಪವೃಕ್ಷವಾದ ತೆಂಗಿನ ಮರದ ಕುರಿತು "ನೆನೆ ನೀನು ಮನದಲ್ಲಿ" ಎಂಬ ಭಾವಪೂರ್ಣ ಕವನದಲ್ಲಿ ತೋಡಿಕೊಂಬುವ ಹುಳಗಳೊಳತಂಪ್ರವೋ? ಎಂದು ಷಿರ್ಸಿಯ ಕವಿ ಶ್ರೀ ಜಿ. ಕೆ. ಹೆಗಡೆಯವರು ಸಂದೇಹವನ್ನು ವ್ಯಕ್ತಪಡಿಸಿದ್ದರು. ಈ ಕಲ್ಪವೃಕ್ಷವು ಮೇಲೆದ್ದು ಬಂದು ಫಲಕೊಡಬೇಕಾದರೆ ಈ ತೋಡಿಕೊಂಬುವ ಹುಳಗಳ ಹಾಗೂ ಇಲಿಗಳ ಒಳತಂತ್ರ ನಿಷ್ಫಲವಾಗಬೇಕು.

"**ರಾಜಾ ಕಾಲಸ್ಯ ಕಾರಣಂ**" ಎಂಬ ಉಕ್ತಿಯನ್ನು ಇಂದು ಯುವಾಃ ಕಾಲಸ್ಯ ಕಾರಣಂ ಯುವೈಃ ರಾಷ್ಟ್ರಸ್ಯ ತಾರಣಂ (ರಕ್ಷಣೆ) ಎಂದು ಬದಲಾಯಿಸಿ ಹೇಳಬೇಕಾಗಿದೆ.

ನಮ್ಮ ಭಾವೀಜನಾಂಗವನ್ನು, ರಾಷ್ಟ್ರವನ್ನು ಮುನ್ನಡೆಸಿಕೊಂಡು ಹೋಗುವ ಹೊಣೆ ಕಲಿಯುತ್ತಿರುವ ಯುವಕರಿಗೆಸಲ್ಲುತ್ತದೆ ಯುವಕರಿಗೆ ಮಾತ್ರವಲ್ಲ ಯುವತಿಯರಿಗೂ ಇದು ಅನ್ವಯಿಸುತ್ತದೆ, ರಾಷ್ಟ್ರಶರೀರವನ್ನು ಒಡೆಯುವದನ್ನು ತಡೆಯಲು ಅವರು ಸರ್ಪಗಾವಲು ಮಾಡಬೇಕಾಗಿದೆ. ಈ ವಿನಾಯಕರು ರಾಷ್ಟ್ರದ ಭದ್ರತೆಯನ್ನು ಕಾಯುವ ಭಾವೀನಾಯಕರಾಗಬೇಕಾಗಿದೆ.

ಇಂದು ನಾವು ಪೂಜಿಸುವ ಗಣಪತಿಯು ಗಣರಾಜ್ಯದ ಪ್ರತೀಕವಾಗಬೇಕಾಗಿದೆ. ನಮ್ಮ ಗಣರಾಜ್ಯದ ಸರ್ವಾಂಗೀಣ ಪ್ರಗತಿಯಲ್ಲಿ ಕರ್ತವ್ಯಸಲ್ಲಿಸುವುದೇ ಇಂದು ನಾವು ಮಾಡಬೇಕಾದ ಸರ್ವೋತ್ತಮ ದೇಶಪೂಜೆಯಾಗಿದೆ, ಈಶಪೂಜೆಯಾಗಿದೆ.

ದೇಶಸೇವೆಯೇ ಈಶಸೇವೆ ಎಂಬ ಮಾತು ಇಂದಿನ ಮಹಾಮಂತ್ರವಾಗಿದೆ ನಮ್ಮ ಸಮಗ್ರಜನತೆಯ ಆರ್ಥಿಕ ಅಭಿವೃದ್ಧಿ, ಶಿಸ್ತಿನ ಸಂಘಟನೆ, ಹಾಗೂ ಸಶಕ್ತ ಜನಾಂಗದ ಚೈತನ್ಯಪೂರ್ಣವಾದ ಸಮಗ್ರ ಮೂರ್ತಿಭವನವಾದಾಗ ಯಾವ ರಾಷ್ಟ್ರದವರಿಗೂ ನಮ್ಮ ಮೇಲೆ ದಾಳಿ ಮಾಡಲು ಬರುವ ಧೈರ್ಯವಾಗಲಿಕ್ಕಿಲ್ಲ.

---

೧. ಜೀವನವೆಲ್ಲವೂ ಮಹಾದೇವನದು ಎಂಬ (ಈಶಾವಾಸ್ಯಮಿದಂ ಸರ್ವಂ] ತಿಳಿವಳಿಕೆಯಿಂದ ಕಾಯಕವೇಕೈಲಾಸ ಎನ್ನುವಂತೆ ಇಡೀಜೀವನವೇ ದಿವ್ಯ ಜೀವನವಾಗಿ ವಿಕಾಸಗೊಳ್ಳುವಂತೆ ರೂಪಿಸಿರುವ ವೀರಶೈವ ತತ್ವ ಮತ್ತು ಆಚರಣೆಗಳಲ್ಲಿ ದೇಶಸೇವೆಯೂ ಈಶಸೇವೆಯಲ್ಲಿ ಒಳಗೊಂಡಿರುತ್ತದೆ.


COMFORTABLE
LUXURIOUS &
PEACEFUL
STAY
AT
KENCHAMBA LODGE
SUBEDAR CHATRAM-ROAD CROSS
NEAR KAPALI THEATRE
GANDHINAGAR
BANGALORE-9
Ph. 27082 GRAM: KENCHMLODG

# ಚಿಂತನ – ಮಂಥನ

## ಒಳ್ಳೆಯ ಹವ್ಯಾಸ ಬೆಳಸಬೇಕು.

ಜವ್ದಲಸೆ ನಿಘ್ನೇಶ್ವರ ಶರ್ಮಾ, ಹುಣ್ಸೆಕೊಪ್ಪ–ಮೊಕ್ಕಾ - ಅಂಚೆ, - ಶಿರಸಿ [ಉ.ಕ.]

ಮನಸ್ಸಿನ ಗತಿ ಬಹು ಸೂಕ್ಷ್ಮ, ಅದು ಅತ್ತಿತ್ತ ಹರಿದಾಡುತ್ತಲೇ ಇರುತ್ತದೆ. ಒಂದೇಕಡೆ ಸ್ಥಿರವಾಗಿ ಇರುವುದೇ ಇಲ್ಲ. ಏನನ್ನಾದರೂ ಕೇಳಬಯಸುತ್ತದೆ. ಅಪ್ರಿಯ ಅಹಿತ ಸಂಗತಿಗಳನ್ನು ಅದು ಅಪೇಕ್ಷಿಸುತ್ತದೆ. ಹೀಗೆ ಅದರ ಚಲನೆ ಸಂಚಾರ ಬಹುಮುಖ, ಆದರೆ ಈ ರೀತಿ ಚಂಚಲವಾಗಿ ಹರಿದಾಡುವುದರಿಂದ ಏನನ್ನು ಸಾಧಿಸಲಾಗುವುದಿಲ್ಲ. ಯಾವ ಉತ್ತಮ ಸಂಸ್ಕಾರವೂ ಆಗುವುದಿಲ್ಲ. ಹಾಗಾಗಿ ಅದನ್ನು ತಿದ್ದುವುದಕ್ಕೆ - ಸಂಸ್ಕರಿಸುವುದಕ್ಕೆ ಸರಿಯಾದ ಮಾರ್ಗ ಹಿಡಿಯುವುದು ತೀರ ಅವಶ್ಯ. ಇದರಲ್ಲಿ ಒಳ್ಳೆಯ ಗ್ರಂಥ ಓದುವ, ತಿಳಿಯುವ ಹವ್ಯಾಸ ಬಹಳ ಉಪಯುಕ್ತವಾದುದು ನಮ್ಮ ಬಿಡುವಿನ ವೇಳೆಯಲ್ಲಿ ಮನಸ್ಸಿಗೆ ಈ ರೀತಿಯ ಸಮರ್ಪಕ ಅವಲಂಬನೆ ದೊರೆತರೆ ಅದು ಆರೋಗ್ಯಕರವಾಗಿ ಬೆಳೆದು ಕೊಳ್ಳುತ್ತದೆ.

ಶರೀರದ ಬೆಳವಣಿಗೆ ಪೌಷ್ಟಿಕ ಆಹಾರದ ಅವಶ್ಯಕತೆಯಿರುವಂತೆ ಮನಸ್ಸಿನ ಬೆಳವಣಿಗೆಗೂ ಹದ ಬದ್ಧ ವಿಕಾಸಕ್ಕೂ ಸತ್ವಶಾಲಿ ವೈಚಾರಿಕ ಗ್ರಂಥಗಳ ಅಧ್ಯಯನವೂ ಅವಶ್ಯಕ. ಏನನ್ನಾದರೂ ತಿನ್ನುವುದರಿಂದ ಆರೋಗ್ಯಕ್ಕೆ ಅಪಾಯದ ಸಂಭವ ವಿರುವಂತೆ ಆಯೋಗ್ಯ-ಹಸಿ-ಬಿಸಿವಿಚಾರದ ಗ್ರಂಥಗಳನ್ನು ಓದುವುದರಿಂದ ಮನಸ್ಸಿನ ಸುಪ್ರಸನ್ನ, ಜಾಗೃತ ಸ್ಥಿತಿಯು ಹದಗೆಡುವುದಲ್ಲದೆ ಉದ್ವೇಗ-ವಿಚಾರಗಳಿಗೂ ಆಸ್ಪದವಾಗುವುದುಂಟು. ಆಗ ಅದನ್ನು ಸುಧಾರಿಸಲು ಬಹಳ ಕಾಲದ ಪ್ರಯತ್ನವು ಬೇಕಾದಿತು. ಬಾಯಿಗೆ ಸವಿಯೆನಿಸಿದ ವಸ್ತುಗಳು ಶರೀರಕ್ಕೂ ಹಿತವೆನಿಸುತ್ತವೆ ಎಂದು ಹೇಳಬರುವುದಿಲ್ಲ. ಹಾಗೆ ಕಣ್ಣಿಗೆ-ಕಿವಿಗೆ ಇಂಪಾದುದು ಮನಸ್ಸಿಗೂ ಸೊಗಸು-ಸ್ವಾದಿಷ್ಟಕರವಾದೀತೆಂದು ತಿಳಿಯುವ ಹಾಗಿಲ್ಲ. ಈ ಕಾರಣದಿಂದ ಮನಸ್ಸಿಗೆ ಸಂಸ್ಕಾರ - ಸಂತೋಷವಾಗುವ ಹಾಗೆ ಓದುವ ಹವ್ಯಾಸ ಹಿಡಿದರೆ ಅದಕ್ಕೆ ಒಳ್ಳೆಯ ಆಹಾರ ನೀಡಿದಂತೆ ಆಗುತ್ತದೆ.

ಈ ರೀತಿ ಓದುವ ಹವ್ಯಾಸದಲ್ಲಿ ಒಳ್ಳೆಯ ನಮಗೆ ಒಳ್ಳೆಯ ಸಂಗಾತಿ ಇದ್ದ ಹಾಗೆ ಅದು ಕಾಲ–ಕಾಲದ ವಿಚಾರಗಳನ್ನು ತಿಳಿಸುತ್ತವೆ. ಸನ್ಮಿತ್ರನಾದವನು ನಮಗೆ ಹಿತವಾದ ಮಾತುಗಳನ್ನು ಹೇಳುವಹಾಗೆ ಈ ಗ್ರಂಥಗಳೂ ಹಿತವಾದುದನ್ನು ಬೋಧಿಸುತ್ತವೆ. ಯುಕ್ತ – ಅಯುಕ್ತ ಸಂಗತಿಗಳನ್ನು ವಿವೇಚಿಸಿ ತಿಳಿಸುತ್ತವೆ. ಕೆಲವು ಸಂದರ್ಭ ಮಿತ್ರನಾದವನೂ ಕಾರಣಾಂತರದಿಂದ ನಮ್ಮಿಂದ ದೂರ ಸರಿಯಬಹುದು. ಆದರೆ ಗ್ರಂಥಗಳು ಮಾತ್ರ ದೂರ ಸರಿಯುವುದೇ ಇಲ್ಲ. ನಾವು ಓದುತ್ತಿದ್ದಂತೆಲ್ಲ ಕಾಲಕಾಲಕ್ಕೆ ಬೇಕಾದ ವಿಚಾರಗಳನ್ನು ಪ್ರಚೋದಿಸುತ್ತಲೇ ಇರುತ್ತವೆ. ಮನಸ್ಸಿನ ಈ ಸಂಬಂಧ ಬೆಳೆಸುವುದು ಮಾತ್ರ ನಮ್ಮ ಕೆಲಸ. ಆರಂಭ

ದಲ್ಲಿ ಔಷಧ ಕುಡಿಯುವುದು ರೋಚಕವೇನೂ ಆಗುವುದಿಲ್ಲ. ಆದರ ಪರಿಣಾಮ ಒಳ್ಳೆಯದಾದನ್ನೇಲೆ ಆಸಕ್ತಿ ಹೊಂದುತ್ತದೆ. ಹಾಗೆ ಓದುವುದನ್ನು ಅಧ್ಯಯನ ಶೀಲಪ್ರವೃತ್ತಿಯನ್ನೂ ಬೆಳಸಿಕೊಂಡರೆ ಅದು ಕ್ರಮೇಣ ಬೆಳೆಯುತ್ತಾ ಹೋಗುತ್ತದೆ. ಆಹಾರದ ಹಸಿವು ಆದಂತೆ ಮನಸ್ಸಿಗೂ ಓದಲೇಬೇಕೆಂಬ ಹಸಿವು ಅಪೇಕ್ಷೆ ಆಗು ತ್ತಿರಬೇಕು. ಆಗ ಅದು ತನ್ನ ಆಹಾರವನ್ನು ಅನ್ವೇಷಿಸುತ್ತದೆ

ಮನಸ್ಸಿನ ಅಸ್ಥಿರತೆಯನ್ನು ನಿಯಂತ್ರಿಸುವಲ್ಲಿ ಸಮರ್ಥರಾದರೆ ನಾವು ನಮ್ಮ ಉದ್ದೇಶ ಸಾಧನೆಗಳನ್ನು ಸಫಲಗೊಳಿಸಬಲ್ಲವು. ನಾವು ಮಾಡುವ ಕೆಲಸಗಳಲ್ಲಿ ಮನಸ್ಸು ತನ್ಮತೆ ಹೊಂದಬೇಕು ಕಾರ್ಯದ ಯಶಸ್ಸಿನತ್ತ ಗಮನವಿಡಬೇಕು. ಅಂದರೆ ಮಾತ್ರ ಆ ಕೆಲಸಗಳು ಹೇಗೆ ಆಗಬೇಕೋ ಹಾಗೇ ಆಗುತ್ತವೆ. ಅದರ ಲೋಪ-ದೋಷಗಳು ತಿಳಿದುಬರುತ್ತವೆ. ಮನಸ್ಸು ಒಂದುಕಡೆ, ಕೆಲಸ ಮತ್ತೊಂದು ಕಡೆಯಾದರೆ ಅದು ಹೇಗೆ ಸಮರ್ಪಕವಾದೀತು ? ಈ ನಿಮಿತ್ತ ವಾಗಿಯೇ ಆಡಿದ್ದು ಇದ್ದಿರಬೇಕು.- "ಮನಃ ಪೂತಂ ಸಮಾಚರೇತ್" ಎಂದು.

ಸ್ಥೂಲವಾಗಿ ನೋಡಿದರೆ ಮನಸ್ಸನ್ನು ಹಿಡಿತಕ್ಕೆ ತರುವುದು ಎಷ್ಟು ಕಷ್ಟ ವೆಂದು ಕಾಣುತ್ತದೋ ಅದು ಅಷ್ಟೇ ಸುಲಭವೂ ಇದೆ. ಅದನ್ನು ಹರಿದಂತೆ ಹರಿ ಬಿಟ್ಟರೆ ಅದು ಸ್ವಚ್ಛಂದವಾಗಿ ಹರಿದೀತು. ನೀರಿನ ಹರಿವು ಇದ್ದಹಾಗೆ ಅದು. ನೀರಿನಪ್ರವಾಹವನ್ನು ಸ್ವತಂತ್ರವಾಗಿಸಿಬಿಟ್ಟರೆ ಅದು ವೇಗವಾಗಿ ಹರಿದು ಕೊರ- ಕಲು ನಿರ್ಮಿಸೀತು. ಹೊಲದತ್ತ ತಿರುಗಿಸಿದರೆ ಸಮೃದ್ಧ ಬೆಳೆಯುನ್ನು ಹೆಚ್ಚಿಸೀತು ಇಲ್ಲಿ ಸಂಸ್ಕಾರ ಮುಖ್ಯ. ಒಳ್ಳೆಯ ಅಭಿರುಚಿ ಬೆಳಸಿ ಓದುವ ಹವ್ಯಾಸ ಹೆಚ್ಚಿ ಸಿದರೆ ಮನಸ್ಸಿನ ವಿಕಾರಗಳು ಅಳಿದುಹೋಗುತ್ತವೆ ಗಾಂಧೀಯವರು ಒಮ್ಮೆ ಈ ರೀತಿ ಓದುವ ವಿಷಯದಲ್ಲಿ ಒಂದು ಮಾತು ಹೇಳಿದ್ದರು. ನಾನು ನಿಯ ಮಿತವಾಗಿ ಓದುವಗ್ರಂಥಗಳನ್ನು ನಿತ್ಯವೂ ಓದಲೇ ಬೇಕು. ನನಗೆ ಅದು ಆಹಾರವಿದ್ದಹಾಗೆ. ಶರೀರದ ಆಹಾರ ಒಮ್ಮೆ ಇಲ್ಲದಿದ್ದರೂ ಬದುಕಿ ಉಳಿದೇನು ಆದರೆ ಮನಸ್ಸಿನ ಆಹಾರವಿಲ್ಲದಿದ್ದರೆ ತುಂಬಾ ಕಳವಳ ಪಡುವಂತಾಗುತ್ತದೆ. ಅಂದಾಗ ಓದುವ ಹವ್ಯಾಸವನ್ನು ಅವರು ಎಷ್ಟು ಶ್ರೇಷ್ಠವಾಗಿ - ಬಲಿಷ್ಟವಾಗಿ ಬೆಳಸಿಕೊಂಡಿದ್ದರು ಎಂಬುದು ಇದರಿಂದ ವೇದ್ಯ.

ಹಾರಿದಾಡುವ ಮನಸ್ಸಿಗೆ ಹವ್ಯಾಸದ ಅವಲಂಬನೆ ಅವಶ್ಯ ಬೇಕು ಆಸರೆಯಾಗಿ ಅದನ್ನು ನೀಡಿದರೆ ಅದಕ್ಕೆ ಅದು ಆತುಗೊಳ್ಳುತ್ತದೆ. ಕ್ರಮಕ್ರಮವಾಗಿ ಹಿಡಿದುಕೊಳ್ಳು ತ್ತದೆ. ಓದುವ ಅಭ್ಯಾಸ ಬೆಳಸಿದರೆ ನಂತರ ಅದೇ ಓದಿಸಿಕೊಳ್ಳುತ್ತದೆ. ಶುಚಿ-ರುಚಿ ಯಾದುದನ್ನು ನೀಡಿದರೆ ತುಂಬ ಆರೋಗ್ಯಕರವಾಗಿಯೂ ಪ್ರವರ್ಧಿಸುತ್ತದೆ. ಕೆರಳ- ವುದು-ಅರಳುವುದು ಎರಡೂ ಅದರ ಸಹಜ ಪ್ರವೃತ್ತಿ ಇದರಲ್ಲಿ ಒಳ್ಳೆಯ ಹವ್ಯಾಸ ಹೆಚ್ಚಿದರೆ ಅದನ್ನು ಅರಳಿಸುವುದಾಗಲೀ ಅದರ ತುಡಿತ-ಮಿಡಿತಗಳನ್ನು ನಿಯಂತ್ರಿಸು ವುದಾಗಲೀ ನಮಗೆ ಅಸಾಧ್ಯವಾಗದು.

# ವಿಜ್ಞಾನ ಮತ್ತು ಆಧ್ಯಾತ್ಮ

ಎಚ್. ಎಸ್. ನರಸಿಂಹ ಜೀಯರ್, ಶ್ರೀ ಬಸವೇಶ್ವರ ಆಂಗ್ಲ ಶಾಲೆ, ತುಮಕೂರು.

ಹುಟ್ಟು ಸಾವುಗಳನ್ನು ಈ ಲೋಕದಲ್ಲಿ ಎಲ್ಲರೂ ಅನುಭವಿಸಲೇಬೇಕು. ಸಾವೆನ್ನುವುದೇ ಒಂದು ಸೋಜಿಗದ ಸಂಗತಿ ಅದರಾಚೆ ಏನಿದೆ ಎಂಬುದನ್ನು ತಿಳಿದವರಿಲ್ಲ!

ಆಧ್ಯಾತ್ಮವಾದಿಗಳ ನಂಬಿಕೆ ಪ್ರಕಾರ ಜೀವವಸ್ತು ಶಾಶ್ವತವಾದುದು. ಜೀವ ಒಂದು ದೇಹವನ್ನು ಬಿಟ್ಟು ಮತ್ತೊಂದು ದೇಹವನ್ನು ಪಡೆಯುತ್ತದೆ. ದೇಹಾಂತರ ಪ್ರಾಪ್ತಿಯಲ್ಲಿ ದೇಹಿ ಎನಿಸುವ ಜೀವ ಉಳಿದೇ ಇರುತ್ತಾನೆ. ಈ ನಿಲುವನ್ನು ಹೊಂದಿದ ಎಲ್ಲಾ ಧರ್ಮಗಳೂ ಪುನರ್ಜನ್ಮವನ್ನು ನಂಬುತ್ತವೆ. ಪುನರ್ಜನ್ಮ ಇದೆ ಎಂದ ಮೇಲೆ ಪೂರ್ವಜನ್ಮದ ಸ್ಮೃತಿಯೂ ಸಾಧ್ಯವಿದೆ. ಜೈನ ಬೌದ್ಧ ಹಿಂದೂ ಸಂಪ್ರದಾಯಗಳ ಯೋಗ ಸಾಧನೆಯಲ್ಲಿ ಆವರಣಗಳು ಕಳಚಿಬಿದ್ದಾಗ ಪೂರ್ವಾನುಸ್ಮೃತಿ ಒದಗುವುದೆಂದು ನಂಬಿಕೆ ಇದೆ. ಆದರೆ ಸಾಧನೆಯೇ ಇಲ್ಲದೆ ಪೂರ್ವಜನ್ಮ ಸ್ಮರಣೆ ಇರುವ ಅನೇಕ ವಿವರಣೆಗಳನ್ನು ಘಟನೆಗಳನ್ನು ಪತ್ರಿಕೆಗಳಲ್ಲಿ ಓದುತ್ತಿದ್ದೇವೆ. ಸತ್ತವನು ಮತ್ತೆ ಜನ್ಮವೆತ್ತಿ ಹಿಂದಿನದನ್ನೆಲ್ಲಾ ನೆನೆಸಿಕೊಳ್ಳುವುದು ಸಾಮಾನ್ಯವಾಗಿ ನಮ್ಮ ಅನುಭವದಲ್ಲಿಲ್ಲ. ಆದ್ದರಿಂದ ವಿಜ್ಞಾನದ ದಾರಿ ಹಿಡಿದ ವಿದ್ಯಾವಂತರು ವಾಸ್ತವವಾಗಿ ಅದು ಜರುಗುತ್ತದೆ ಎನ್ನಲು ಆಧಾರ ಸಾಲದು ಎಂದೇ ಅವರ ಸಾಮಾನ್ಯ ತಿಳುವಳಿಕೆ. ಆದರೆ ಮೂಲಭೂತವಾಗಿ ಈ ಪುನರ್ಜನ್ಮದ ಸ್ಮೃತಿ ಅಸಂಭವವಲ್ಲವೆಂದು ಈಗ ಸ್ಪಷ್ಟವಾಗಿದೆ.

ಈ ಬಗ್ಗೆ ಕೆಲವು ನಡೆದಿರುವ ವಾಸ್ತವಿಕ ಘಟನೆಗಳನ್ನು ಪರಿಶೀಲಿಸೋಣ. ಆಗ್ರಾನಗರದಲ್ಲಿ ಪೋಸ್ಟ್ ಮಾಸ್ಟರ್ ಆಗಿದ್ದ ಭಾರ್ಗವ ಎಂಬ ಸದ್ಗೃಹಸ್ಥರ ಮಗಳು ಎರಡು ವರ್ಷದ ಮಂಜುಲತಾ ತಾನು ಇಲ್ಲಿ ಹುಟ್ಟುವ ಮೊದಲು ಧುಲಿಯಾ ಗಂಜಿನ ಮನೆಯೊಂದರಲ್ಲಿ ಇದ್ದುದಾಗಿ ತಿಳಿಸಿದಳು. ಆ ಊರಿಗೆ ಅವಳನ್ನು ಕರೆದೊಯ್ದು ಬಿಟ್ಟಾಗ ಹಿಂದಿನ ಜನ್ಮದಲ್ಲಿ ತಾನಿದ್ದ ಮನೆಯನ್ನು ಗುರ್ತಿಸಿ ಅಲ್ಲಿಯ ಜನರನ್ನೂ ಗುರ್ತಿಸಿದಳು. ಅದು ಪ್ರತಾಪಸಿಂಹ ಚತುರ್ವೇದಿ ಎಂಬುವ ಅಡ್ವೊಕೇಟರ ಮನೆಯಾಗಿತ್ತು. ಎಲ್ಲರೂ ಅತ್ಯಾಶ್ಚರ್ಯ ಪಟ್ಟರಲ್ಲದೆ ವಿವರಗಳನ್ನು ಪರಿಶೀಲಿಸಲಾಗಿ ಈ ವಕೀಲರ ತಮ್ಮ ವಿಶ್ವೇಶ್ವರನಾಥ ಎಂಬುವರ ಹೆಂಡತಿ 1952ರಲ್ಲಿ ತೀರಿಕೊಂಡಳೆಂದೂ, ಈ ಹುಡುಗಿ ಅದೇ ಸಮಯದಲ್ಲಿ ಹುಟ್ಟಿದಳೆಂಬುದೂ ಖಚಿತವಾಯಿತು.

ಟಿಬೆಟ್ ದೇಶವು ಧರ್ಮ ಪ್ರಭುತ್ವವಾಗಿದ್ದಾಗ ಲಾಮಾ ಪೀಠಗಳಿಗೆ ಅಧಿಕಾರಿಗಳನ್ನು ಆರಿಸುವಾಗ ಪುನರ್ಜನ್ಮ ಸ್ಮೃತಿಯನ್ನು ಗಮನಿಸಿ ಆರಿಸುತ್ತಿದ್ದರು. ಒಬ್ಬ

ಲಾಮ ತೀರಿಕೊಂಡಾಗ ತನ್ನ ಉತ್ತರಾಧಿಕಾರಿಯಾಗಿ ತಾನೇ ಜನ್ಮವೆತ್ತುತ್ತಾನೆಂ
ನಂಬಿಕೆ ಇದ್ದಿತು. ಲಾಮ ಪೀಠಕ್ಕೆ ಉತ್ತರಾಧಿಕಾರಿ ಸಾಮಾನ್ಯನಾಗಿ ಹಸುಳೆ ಅಥ
ಸಣ್ಣ ಹುಡುಗನಾಗುತ್ತಿದ್ದ. ಒಮ್ಮೆ ಒಂದು ಶ್ರೀಮಂತ ಮಠದ ಲಾಮಾ ತೀರಿ
ಕೊಂಡಾಗ ಅವನ ಉತ್ತರಾಧಿಕಾರಿಯನ್ನು ಗುರ್ತಿಸಲು ಮಠದ ನಿರ್ದೇಶಕರ
ಬಹುಕಾಲ ಅಲೆದು ಶಕುನ ಸಂಕೇತಗಳನ್ನು ಅವಲಂಬಿಸಿ ಒಂದು ಹಳ್ಳಿಯ ಮಗುವನ್ನ
ಆರಿಸಿದರು. ಆ ಮಗುವಿಗೆ ಆಗ ನಾಲ್ಕು ವರ್ಷಗಳು ಹಾಗೂ ಲಾಮ ತೀರಿಕೊಂಡು
ನಾಲ್ಕು ವರ್ಷಗಳಾಗಿದ್ದುವು.

ಮಗುವನ್ನು ಲಾಮಸೆಲಿ ಎಂಬ ಮಠವಿದ್ದ ಊರಿಗೆ ಕರೆತರುತಿದ್ದಾಗ ಮಠ
ಊಳಿಗದವನೊಬ್ಬನು ನಶ್ಯಹಾಕುವುದನ್ನು ನೋಡಿದ ಮಗುವು ಅವನ ಬೆಳ್ಳಿಯ
ನಶ್ಯದ ಡಬ್ಬಿಯನ್ನು ಕಿತ್ತುಕೊಂಡು ಅದು ತನ್ನದೆಂದೂ ಊಳಿಗದವನು ಅದನ್ನು
ಕದ್ದಿದ್ದಾನೆಂದೂ ಆಪಾದಿಸಿತು ವಿಚಾರಿಸಲಾಗಿ ಊಳಿಗದವನು ಹಿಂದಿನ ಲಾಮ
ಸತ್ತನಂತರ ಅವರ ನಶ್ಯದ ಡಬ್ಬಿಯನ್ನು ಕಳವು ಮಾಡಿದ್ದುದು ತಿಳಿಯಿತು.

ಮಠಕ್ಕೆ ಬಂದೊಡನೆಯೇ ಮಗುವು ಬಲಕ್ಕೆ ತಿರುಗಲು ಹೇಳಿತು. ಆದ

ಅಲ್ಲಿ ಗೋಡೆಯಿತ್ತು. ಹೊಸಲಾಮಾಗೆ ಎಡಗಡೆ ಕೊಠಡಿ ವ್ಯವಸ್ಥೆ ಮಾಡಿದ್ದರು
ಹಿಂದಿನ ಲಾಮ, ಬಲಗಡೆ ಕೊಠಡಿಯಲ್ಲಿ ಇರುತ್ತಿದ್ದರು. ಅವರು ಸತ್ತಮೇಲೆ ಅದನ್ನ
ಮುಚ್ಚಿ ಎಡಗಡೆ ಕೋಣೆ ಸಿದ್ಧಪಡಿಸಿದರು. ಈಮಗ ಈ ಊರಿಗೆ ಬಂದುದು ಇದೆ
ಮೊದಲು. ಅದಕ್ಕೆ ಈ ವಿಷಯ ತಿಳಿದುದಾದರೂ ಹೇಗೆ?

ಮಗುವು ಅಧಿಕಾರ ಸ್ವೀಕರಿಸುವ ಸಮಾರಂಭದಲ್ಲಿ ಚಾಕುಡಿಯಲು ಬಟ್ಟ
ಲೊಂದನ್ನು ಇಡಲಾಯಿತು. ತಕ್ಷಣ ಮಗವು ಅದು ತನ್ನ ಬಟ್ಟಲಲ್ಲವೆಂದೂ ತನ್ನ
ಬೆಳ್ಳಿಯ ಬಟ್ಟಲು ಉಗ್ರಾಣದ ಪೆಟ್ಟಿಗೆಯ ತಳದಲ್ಲಿದೆಯೆಂದೂ ತಿಳಿಸಿತು. ವ್ಯವಸ್ಥಾ
ಪಕರಿಗೇ ಈ ವಿಷಯ ತಿಳಿಯದು. ಉಗ್ರಾಣದ ಪೆಟ್ಟಿಗೆ ಪರಿಶೀಲಿಸಿದಾಗ ಹಿಂದಿನ
ಲಾಮನ ಹೆಸರನ್ನು ಕೆತ್ತಿದ್ದ ಬೆಳ್ಳಿಯ ಬಟ್ಟಲೊಂದು ದೊರೆಯಿತು. ಅದರಲ್ಲಿಯೇ
ಚಾಪನ್ನು ಕೊಡಲಾಯಿತು.

ತನ್ನ ಎಲ್ಲಾ ಚಟುವಟಿಕೆಗಳಲ್ಲಿಯೂ ಮಗುವು ಚಿರಪರಿಚಿತರಂತೆ ವ್ಯವಹರಿಸಿ
ತಾನು ಹಿಂದಿನ ಲಾಮಾ ಎಂದೇ ಖಚಿತ ಪಡಿಸಿತು. ಈ ವಿವರಗಳನ್ನು ಪ್ರೊ
ಎಸ್. ಕೆ. ರಾಮಚಂದ್ರರಾವ್‌ರವರು ತಮ್ಮ "ಪರಾಮಾನಸಶಾಸ್ತ್ರ" ಪುಸ್ತಕದಲ್ಲಿ
ತಿಳಿಸಿದ್ದಾರೆ.

ತಿರುವಣ್ಣಾಮಲೆಯ ರಮಣಾಶ್ರಮದ "Mountain path" ಎಂಬ
ಮಾಸಿಕಪತ್ರಿಕೆಯಲ್ಲಿ (ನಂ. 3, 1966) ವರದಿಯಾಗಿರುವ ಈ ಘಟನೆ ನೋಡಿ.

ದಕ್ಷಿಣ ಅಮೇರಿಕಾದ ಅಮೆಜಾನ್ ಪ್ರಾಂತ್ಯದ ಪೆರು ಎಂಬಲ್ಲಿನ ಕಗ್ಗಾಡಿನಲ್ಲಿ ವಾಸವಾಗಿದ್ದ ಅನಾಗರಿಕ ಕಾಡುಜನರಲ್ಲಿ ಹುಟ್ಟಿದ್ದ ಏಳುವರ್ಷದ ಮಗುವನ್ನು ಅಲ್ಲಿಯ ಚರ್ಚಿನ ಪಾದ್ರಿಯ ಹತ್ತಿರ ಅವನ ತಂದೆ - ತಾಯಿಗಳು ಕರೆತಂದು ಮಗ ನಿಗೆ ಭೂತ ಹಿಡಿದಿರುವುದನ್ನು ಬಿಡಿಸಲು ಕೇಳಿಕೊಂಡರು. ಆ ಹುಡುಗ ತನ್ನ ತಂದೆ ತಾಯಿಗಳು ಬನಾರಸ್‌ನಲ್ಲಿದ್ದಾರೆಂದೂ ಅಲ್ಲಿಗೆ ಹೋಗಬೇಕೆಂದೂ ಆಗಾಗ ಅಳು ತ್ತಿದ್ದ. ಪ್ರಾದ್ರಿಯು ಬನಾರಸ್ ಎಲ್ಲಿದೆ ಎಂದು ಕೇಳಿದಾಗ " ಇಂಡಿಯಾದಲ್ಲಿದೆ " ಎಂದು ಹುಡುಗ ಉತ್ತರಿಸಿದ. ಕುತೂಹಲದಿಂದ ಪಾದ್ರಿಯು ವಿಷಯವನ್ನು ಪರಿ ಶೀಲಿಸಿ ಅವನ ಹಿಂದಿನ ತಂದೆ ತಾಯಿಗಳ ವಿವರಗಳನ್ನೂ, ಅವರಿರುವ ಬೀದಿಯ ಹೆಸರನ್ನು ಹುಡುಗನಿಂದ ತಿಳಿದು ಲಿಮಾನಗರದದ ನ್ಯಾಯವಾದಿಗೆ ಪತ್ರ ಒಂದನ್ನು ಬರೆದು ಈ ಬಗ್ಗೆ ವಿವವರವನ್ನು ಬನಾರಸ್‌ನಿಂದ ಪಡೆಯಬೇಕೆಂದು ಕೇಳಿಕೊಂಡನು.

ಲಿಮಾನಗರದ ನ್ಯಾಯವಾದಿಯೂ ಆಶ್ಚರ್ಯಪಟ್ಟು ಕುತೂಹಲಕ್ಕಾಗಿ ಬನಾರಸ್ ಮುನಿಸಿಪಾಲಿಟಿ ಅಧಿಕಾರಿಗೆ ಪತ್ರಬರೆದು ಹುಡುಗ ಹೇಳಿದ ತಂದೆ ವಿಳಾಸದ ಬಗ್ಗೆ ವಿಚಾರಿಸಿ ತಿಳಿಸಬೇಕೆಂದು ಕೇಳಿಕೊಂಡು ಬನಾರಸ್‌ನಲ್ಲಿ ಅಧಿ ಕಾರಿಗಳು ವಿಚಾರಿಸಿದಾಗ ಆ ಹುಡುಗ ಹೇಳಿದ ಬೀದಿ ಹಾಗೂ ಮನೆಯಲ್ಲಿ ಬ್ರಾಹ್ಮಣ ದಂಪತಿಗಳಿದ್ದುದು ಹಾಗೂ ಅವರ ಮಗ ಏಳುವರ್ಷದ ಹಿಂದೆ ತೀರಿಕೊಂಡಿ ದ್ದುದೂ ಸತ್ಯವಾಗಲಾಗಿ ಅವರು ವಿವರಗಳನ್ನು ಲಿಮಾನಗರದ ನ್ಯಾಯ ವಾದಿಗೆ ತಿಳಿಸಿದರು. ಆ ಹುಡುಗ ತಿಳಿಸಿದಂತೆ ಆತನು ಆಟಿಕೆಯೊಡನೆ ಆಟ ವಾಡುವಾಗ ಬೀದಿಯಲ್ಲಿ ಕಾರೊಂದು ಇವನ ಮೇಲೆ ಹರಿದು ಸತ್ತುಹೋಗಿದ್ದನು. ಈ ಎಲ್ಲಾ ಘಟನೆಗಳೂ ನಿಜವಾಗಿರುವುಧನ್ನು ಗಮನಿಸಿ "From the Ganges to the Amazon" ಎಂಬ ಶೀರ್ಷಿಕೆಯಡಿ 1966 ರಲ್ಲಿ ಪ್ರಕಟಿಸಲಾಗಿದೆ,

ವರ್ಜೀನಿಯಾ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕ ಅಯಾನ್ ಸ್ಟೀವನ್‌ಸನ್ ಎಂಬುವರು ಪುನರ್ಜನ್ಮದ ಬಗ್ಗೆ ಅಧ್ಯಯನ ನಡೆಯಿಸಿ ಇಂತಹ ಸಹಸ್ರಾರು ಘಟನೆಗಳನ್ನು ಸಂಗ್ರಹಿಸಿದ್ದಾರೆ. ಇವರು ನಮ್ಮ ಭಾರತಕ್ಕೆ 1974 ನೆಯ ಮಾರ್ಚಿ 18 ಮತ್ತು 19 ರಂದು ಇಂತಹದೇ ಮತ್ತೊಂದು ಘಟನೆಯನ್ನು ಅಧ್ಯ ಯನ ಮಾಡಲು ಭೇಟಿಕೊಟ್ಟಿದ್ದರು. ಇತ್ತೀಚಿನ ಈ ಘಟನೆ ಈ ರೀತಿ ಇದೆ.

ಮೃದುಲಾ ಶರ್ಮಾ ಇಪ್ಪತ್ತೈದರ ಹರೆಯದ ಮೀರತ್ ವಿಶ್ವವಿದ್ಯಾನಿಲ- ಯದ ರಾಜಕೀಯ ಶಾಸ್ತ್ರದ ಎಂ.ಎ., ಪದವೀಧರೆ, ಈಕೆಯು 1949 ರಲ್ಲಿ ನಾಸ್ತಿಕ್‌ ನಲ್ಲಿ ಜನಿಸಿದಳು. ತಾಯಿ ಶಾಂತಾ ಶಾಸ್ತ್ರಿ. ಈ ತಾಯಿ ಮಗಳಿಬ್ಬರೂ ಡೆಹರಾ ಡೂನ್‌ನಲ್ಲಿ ನಡೆದ ಧಾರ್ಮಿಕ ಸಭೆಗೆ ಹೋಗಿದ್ದಾಗ ಅಲ್ಲಿದ್ದ ವಯಸ್ಸಾದ

ಮಹಿಳೆಯನ್ನು ಗುರ್ತಿಸಿ ಮೃದುಲಾ ಅವಳ ಮಡಿಲಲ್ಲಿ ನೇರವಾಗಿ ಕುಳಿತಳು. ಆ ವೃದ್ಧ ಮಹಿಳೆಯ ಪಕ್ಕದಲ್ಲಿದ್ದ ಇನ್ನೊಬ್ಬ ಹೆಂಗಸನ್ನು ಕುರಿತು ನೀನು ನನ್ನ ತಂಗಿ ಎಂದು ವಿಶ್ವಾಸದಿಂದ ಹೇಳಿದಳು. ನಾನು ನಿನ್ನ ಹಿರಿಯಕ್ಕ ಎಂದು ಅವಳ ಹೆಸರು ಹಿಡಿದೇ ಗುರ್ತಿಸಿದಳು. ವೃದ್ಧ ಮಹಿಳೆಗೆ ಆಶ್ಚರ್ಯವಾಗಿ ಅವಳನ್ನು ತನ್ನ ಮನೆಗೆ ಕರೆದುಕೊಂಡು ಹೋದಾಗ ರಿಪೇರಿಯಾದ ಮನೆಯನ್ನೂ ಅಲ್ಲಿದ್ದ ವಿವರಗಳನ್ನು ಗುರ್ತಿಸಿ ತನ್ನ ಹಿಂದಿನ ಜನ್ಮದ ತಂದೆಯನ್ನೂ ಅಕ್ಕಪಕ್ಕದವರನ್ನೂ ಅವರವರ ಹೆಸರಿನಿಂದ ಕರೆದು ಎಲ್ಲರಿಗೂ ವಿಸ್ಮಯವನ್ನುಂಟು ಮಾಡಿದಳು. ಹಿಂದೆ ಬಿಳಿಬಟ್ಟೆ ಧರಿಸುತ್ತಿದ್ದು ಕಾವಿಧಾರಿಯಾಗಿದ್ದ ಆನಂದ ಸ್ವಾಮಿಯವರನ್ನೂ ಗುರ್ತಿಸುತ್ತಾ ಈ ಕಾವಿಯನ್ನು ಎಂದಿನಿಂದ ಹಾಕುತ್ತಿದ್ದೀರಿ ಹಿಂದೆ ಬಿಳಿ ವಸ್ತ್ರ ಧರಿಸುತ್ತಿದ್ದಿರಲ್ಲಾ ಎಂದೇ ಪ್ರಶ್ನಿಸಿದಳು, ಎಲ್ಲರ ಸಂಶಯವೂ ನಿವಾರಣೆಯಾಗಿ 25 ವರ್ಷಗಳ ಹಿಂದೆ ತಮ್ಮ ಮನೆಯಲ್ಲಿ ಗತಿಸಿದ ನಮ್ಮ ಮಗಳೇ ಮೃದುಲಾ ಆಗಿ ಹುಟ್ಟಿದ್ದಾಳೆಂದು ಖಚಿತಪಡಿಸಿಕೊಂಡರು. ಹಿಂದಿನ ಜನ್ಮದಲ್ಲಿ ಆಕೆ ವಾರಣಾಸಿ ವಿಶ್ವವಿದ್ಯಾನಿಲಯದ ಹಿಂದಿ ಪದವೀಧರೆ. ಆ ವಿವರಗಳನ್ನು ತಿಳಿಸಿದ್ದಳು ಎರಡೂ ಜನ್ಮಗಳ ತಂದೆ ತಾಯಂದಿರನ್ನು ಭೇಟಿಮಾಡಿದ ಮೃದುಳಾಲ ಮೇಲೆ ಪ್ರೀತಿಯ ಹೊನಲನ್ನೇ ಹರಿಸಿ ಮದುವೆ ಮಾಡಿದರು.

ಈ ಘಟನೆಯನ್ನು ಅಧ್ಯಯನ ಮಾಡಲು ಅಯಾ ಸ್ಟೀವನ್‌ಸನ್‌ರವರು ಭಾರತಕ್ಕೆ 18,19ನೇ ಮಾರ್ಚಿ 1974ರಲ್ಲಿ ಬಂದು ಆಕೆಯನ್ನು ಹಾಗೂ ಆಕೆಯ ಎರಡೂ ಜನ್ಮಗಳ ತಂದೆ ತಾಯಂದಿರನ್ನೂ ಭೇಟಿಮಾಡಿ ಅನೇಕ ರೀತಿಯ ಪ್ರಶ್ನೆಗಳನ್ನು ಹಾಕಿ ಅವರ ಹೇಳಿಕೆಗಳನ್ನೆಲ್ಲಾ ತಾಳೆ ನೋಡಿ ಕಾಲ, ಮರಣ ಇತರೆ ವಿವರಗಳೆಲ್ಲಾ ಸರಿಹೊಂದಿರುವುದನ್ನು ಗಮನಿಸಿ ಇದನ್ನು 'ನಿಜವಾದ ಪುನರ್ಜನ್ಮದ ಘಟನೆ' ಎಂದು ಖಚಿತವಾಗಿ ಘೋಷಿಸಿದರು. ಇದೇ ವಿವರಗಳು ದಿ ಟೈಮ್ಸ್ ಆಫ್ ಇಂಡಿಯಾದ 1976ನೆಯ ಇಸವಿ ಅಕ್ಟೋಬರ್ 31ರ ಭಾನುವಾರದ ಸಂಚಿಕೆಯಲ್ಲಿ ಸಚಿತ್ರ ವಿವರಣೆಯೊಂದಿಗೆ ಪ್ರಕಟವಾಗಿವೆ.

ಸಾವನ್ನು ಕುರಿತು ಒಂದು ನೂರು ವರ್ಷಗಳ ಸಂಶೋಧನೆಯಿಂದ ಸಂಗ್ರಹಿಸಿದ ಸಂಗತಿಗಳನ್ನೆಲ್ಲಾ ಕ್ರೋಢೀಕರಿಸಿ ಅಯನ್ ಕ್ಯೂರಿಯವರು 'you Cannot die' ಎಂಬ ಗ್ರಂಥದಲ್ಲಿ ಪ್ರಕಟಿಸಿದ್ದಾರೆ. (Fnindings of a Century of Research on death) A Jonathan James Book-Hamlyn ಜನ್ಮಾಂತರ ಮತ್ತು ಕರ್ಮಸಿದ್ಧಾಂತಕ್ಕೆ ಸಂಬಂಧಿಸಿ ಯಾವ ಪೂರ್ವಾಗ್ರಹವಿಲ್ಲದೆ ಮಾನಸಶಾಸ್ತ್ರ, ಸಮಾಜಶಾಸ್ತ್ರಗಳ ಆಳವಾದ ಪಾಂಡಿತ್ಯದಿಂದ ಪರಾಮಾನಸ ಶಾಸ್ತ್ರದಲ್ಲಿ ಆಸಕ್ತಿ ತಳೆದು ತೆರೆದ ಮನಸ್ಸಿನಿಂದ ಸತ್ಯಾನ್ವೇಷಣೆ ಮಾಡ ಹೊರಟ

ಅಯಾನ್ ಕ್ಯೂರಿಯವರು ತಿಳಿಸಿರುವ ಅಭಿಪ್ರಾಯಗಳನ್ನು ಎಲ್ಲರೂ ಗಮನಿಸಬೇಕಾದುದು ಅವಶ್ಯವೆನಿಸಿದೆ. ಅವರ ದೀರ್ಘಕಾಲದ ಅಧ್ಯಯನದಿಂದ ವ್ಯಕ್ತವಾಗಿರುವ ಅಂಶಗಳು ಈ ರೀತಿ ಇವೆ.

1. ಸಾವಿನೊಂದಿಗೆ ಜೀವನ ಅಂತ್ಯವಾಗುವುದಿಲ್ಲ
2. ಗತಿಸಿ ಹೋದ ಜೀವಾತ್ಮರು ವಿಭಿನ್ನಸ್ತರ ಅಥವಾ ಲೋಕಗಳಲ್ಲಿ ಅರಿವು ಚಟುವಟಿಕೆಯಿಂದ ಕೂಡಿಯೇ ಇರುತ್ತಾರೆ. ಸ್ಥೂಲ ದೇಹಧಾರಿಗಳಾದ ನಮಗೆ ಅದು ಗೋಚರವಾಗದು ಈ ಸತ್ಯಾಂಶಗಳನ್ನು ಆಳವಾಗಿ ಅಭ್ಯಸಿಸಿ ಗಮನಿಸಿದ ಸ್ವಾಮಿ ಜಗದಾತ್ಮಾನಂದರವರು ತಮ್ಮ ಅಭಿಪ್ರಾಯವನ್ನು ಈಕೆಳಕಂಡಂತೆ ವ್ಯಕ್ತಪಡಿಸಿದ್ದಾರೆ.

"ವೈಜ್ಞಾನಿಕ ಮನೋವೃತ್ತಿ ಎಂದು ಕರೆದು ಕೊಳ್ಳುವ ಜನರು ಇಂತಹ ಘಟನೆಗಳನ್ನು ಸಂಶಯದೃಷ್ಟಿಯಿಂದ ನೋಡುತ್ತಾ ಬಂದಿದ್ದಾರೆ. ಈ ಘಟನೆಗಳನ್ನು ಕಂಡರೂ ಸಹ ತಮ್ಮನ್ನು "ಮೂಢನಂಬಿಕೆ ಬಿಡದೆ ವಿಜ್ಞಾನಿ ಯೀತ" ನೆಂದು ಹೀಗಳೆಯುವರೆಂಬ ಭಯದಿಂದ ಧೃಡ ನಿಲುವೆ ವ್ಯಕ್ತಪಡಿಸಲು ಹಿಂಜರಿಯುತ್ತಾರೆ. ಹೀಗೆ ಸತ್ಯವು ಪೂರ್ವಾಗ್ರಹ ದೂಷಿತರ ಗೊಂದಲದ ಮುಸುಕಿನಲ್ಲಿ ಮರೆಯಾದಂತೆ ಕಂಡರೂ ಯಥಾರ್ಥ ಅನ್ವೇಷಕರಿಗೆ ತನ್ನ ನೈಜಸ್ವರೂಪವನ್ನು ತೋರಿಸದಿರದು" ಎಂದಿದ್ದಾರೆ.

ಇದಕ್ಕಿಂತಲೂ ಬಿಚ್ಚು ಮನಸ್ಸಿನ ಅಭಿಪ್ರಾಯ ಬೇಕೆ?



# ವರತಪಸ್ವಿ (ಧಾರಾವಾಹಿ-6.)

ಹೆಚ್. ಜಿ. ರಾಧಾದೇವಿ, ಶ್ರೀ ಜಗನ್ನಾಥ ದಾಸರಗುಡಿ ಬ್ರಾಹ್ಮಣರವಾಡಿ, ಮಾನವಿ,
ರಾಯಚೂರು-584 101.

ಸೂರ್ಯನ ಮಹಾತೇಜವನ್ನು ಸುವ್ವಲಾಲಿ
ಬರಿಯ ಕಣ್ಣಿಂದ ಅಳಿಯುವುದೇ ಸುವ್ವಲಾಲಿ
ಸಮುದ್ರದ ಜಲರಾಶಿಯನ್ನೆಲ್ಲ ಸುವ್ವಲಾಲಿ
ಒಂದು ಪುಟ್ಟ ತಂಬಿಗೇಲಿ ತುಂಬಲುಂಟೆ ಸುವ್ವಲಾಲಿ ।

ಇದೇ ರೀತಿಯಾಗಿ ಶ್ರೀ ಮಂಜಯ್ಯ ಹೆಗಡೆಯವರು... ತಮ್ಮ ಅಧಿಕಾರವಧಿಯ ಮುವ್ವತ್ತೇಳು ವರ್ಷಗಳ ಕಾಲ ಮಾಡಿದ ಕೆಲಸಗಳೆಲ್ಲವನ್ನು ಈಪುಟ್ಟ ಆರು ಲೇಖನಗಳಲ್ಲಿ ಸಂಪೂರ್ಣವಾಗಿ ವಿವರಿಸಲು ಸಾಧ್ಯವೆ? ಈ ಲೇಖನ ಮಾಲೆ ಅವರ ಬದುಕಿನ ಮಹಾಕಾರ್ಯಗಳ ಸಮಗ್ರ ಚಿತ್ರಣವೂ ಅಲ್ಲ, ಸಂಪೂರ್ಣ ವಿವರವೂ ಅಲ್ಲ.

ಮಹಾಕಾರ್ಯ ಮಾಡಿದ ಮಹಾಪುರುಷರ ಸ್ಮರಣೆಯೆ ಒಂದು ಪುಣ್ಯಸಾಧನೆ, ಆ ದೃಷ್ಟಿಯಿಂದ ಈ ಲೇಖನಮಾಲೆ ಅವರ ಸ್ಮರಣೆ ಅಷ್ಟೆ,

ಶ್ರೀ ಮಂಜಯ್ಯ ಹೆಗ್ಗಡೆಯವರ ಕುಟುಂಬ ಜೀವನದ ಬಗ್ಗೆ ಕೆಲವು ಮುಖ್ಯ ಅಂಶವನ್ನು ವಿವರಿಸಿ ಈ ಲೇಕನ ಮಾಲೆ ಪೂರ್ಣಮಾಡುತ್ತೇನೆ.

ಹಾಗೂ ಈ ಲೇಖನ ಮಾಲೆಗೆ ಸ್ಫೂರ್ತಿ ನೀಡಿದ ಮಹಾಗ್ರಂಥಗಳಾದ **ಮಹಾಚೇತನ** "ಗ್ರಂಥದ' ಮೂರು ಭಾಗಗಳಿಗೆ[ಗ್ರಂಥಋಣ ಸ್ವೀಕರಿಸಿದ್ದ ಕಾರಣಕ್ಕೆ] ಅಲ್ಲಿನ ಕೆಲವು ಲೇಖಕರಿಗೆ ನಮಿಸುತ್ತೇನೆ.

ಸಾಮಾನ್ಯವಾಗಿ ಸಮಾಜದ ಗಣ್ಯವ್ಯಕ್ತಿಗಳಾಗಿ ವಿಜೃಂಭಿಸಿದ ವ್ಯಕ್ತಿಗಳು, ಅಥವ ಯಾವುದಾದರೂ ಕಲೆಯಲ್ಲಿ ತಲ್ಲೀನರಾದವರೂ ಕುಟುಂಬದ ಉಳಿದ ಬಂಧು ಬಾಂಧವರ ಪಾಲಿಗೆ ಅಪರಿಚಿತರಾಗಿರುತ್ತಾರೆ.

ಆದರೆ ಶ್ರೀ ಮಂಜಯ್ಯ ಹೆಗಡೆಯವರು ಈ ಮೋಡಿಗೆ ಅಪವಾದ, ಒಂದು ಕಡೆ ಶ್ರೀ ಕ್ಷೇತ್ರದ ಧರ್ಮಾಧಿಕಾರಿಯ ಪಟ್ಟ. ಅಲ್ಲಿನ ಅನಿವಾರ್ಯ ಕೆಲಸ ಕಾರ್ಯಗಳು ಲೆಕ್ಕಾಚಾರದ ಸುವ್ಯವಸ್ತೆ, ಇನ್ನೊಂದು ಕಡೆ ತಾವಾಗಿ ಹಮ್ಮಿಕೊಂಡ ಸಮಾಜದ ಅಭಿವೃದ್ಧಿ ಕಾರ್ಯಗಳು, ವೈದ್ಯಕೀಯ, ಶೈಕ್ಷಣಿಕ, ಸಾಂಸ್ಕೃತಿಕ ರಂಗದ ಎಡಬಿಡದ ಕಾರ್ಯಗಳು.

ಜೊತೆಗೆ ಅಪೂರ್ವ ಚಿತ್ರಕಲೆಯ ರಚನ ಕಾರ್ಯಗಳ ತಲ್ಲೀನತೆ ಲಲಿತಕಲಾ ಗೋಷ್ಠಿಗಳ ನಿರ್ವಹಣೆ, ಈ ಎಲ್ಲಾ ಕಾರ್ಯಭಾರದ ಮಧ್ಯೆ ಕುಟುಂಬದ ಎಲ್ಲಾ ಬಂಧು ಬಾಂಧವರೊಡನೆ ಆತ್ಮೀಯವಾದ ಸಂಪರ್ಕಇಟ್ಟುಕೊಂಡಿದ್ದರು.

ಅವರ ಕುಟುಂಬಕ್ಕೆ ಸೇರಿದ ಪ್ರತಿ ಒಬ್ಬರು ತಮ್ಮ ವೈಯುಕ್ತಿಕವಾದ ಸಿಹಿಯಾದ ಕೆಲವು ನೆನಪು ಹೊಂದಿರುವಂತೆ ಎಲ್ಲರ ಪಾಲಗೆ ಸವಿಯಾದ ಸುಮಧುರ ಸಂಬಂಧ ಹೊಂದಿದ್ದರು,

ನ್ಯಾಯವಾಗಿ ಶ್ರೀ ಮಂಜಯ್ಯ ಹೆಗಡೆ ಅವರಿಗಿದ್ಧ ಹೊರಗಿನ ಕಾರ್ಯ ಭಾರದ ಒತ್ತಡ ಗಣ್ಯವ್ಯಕ್ತಿಗಳ ಸಂಪರ್ಕ ನೆನೆಸಿಕೊಂಡರೆ ಬೇರೆ ವ್ಯಕ್ತಿಗಳಾಗಿದ್ದರೆ ಯಾವುದೊ ದಂತಗೋಪುರದಲ್ಲಿ ಕೂತು ಕುಟುಂಬದ ಎಲ್ಲ ಸದಸ್ಯರಿಂದ ದೂರವಾಗಿರ ಬೇಕಾಗಿತ್ತು.

ಆದರೆ ಶ್ರೀ ಮಂಜಯ್ಯ ಹೆಗಡೆ ಅವರು ಕುಟುಂಬದ ಸದಸ್ಯರನ್ನು ವೈಯಕ್ತಿಕ-ವಾಗಿ ಎಷ್ಟು ಗಮನಿಸುತ್ತಿದ್ದರು ಎಂದರೇ........ ಕುಟುಂಬ ಜೀವನದಲ್ಲಿ ಹೆಣ್ಣು ಮಕ್ಕಳಿಗೆ ಸಲ್ಲಿಸಬೇಕಾದ ಪ್ರತಿ ಒಂದೊಂದು ಸಣ್ಣ ಸಣ್ಣ ವಿಷಯಕ್ಕೂ ಗಮನ ನೀಡಿದ್ದರು.

ಮೊದಲು ಹೆತ್ತತಾಯಿ ಅನಂತಮತಿಯಮ್ಮ....ತಾಯಿಯ ಎಲ್ಲಾ ಧಾರ್ಮಿಕ ವ್ರತ ನೇಮಗಳಿಗೂ ಅವರು ಅನುಕೂಲ ಮಾಡಿಕೊಟ್ಟಿದ್ದರು. ಪುಣ್ಯವಂತನಾದ ಮಗನನ್ನು ಪಡೆದ ತಾಯಿ ಸ್ವರ್ಗಸಾಧನೆಗೆ ಅನುಕೂಲವಾಗುವಷ್ಟು ಪುಣ್ಯಗಳಿಸ ಬಹುದು ಎಂದು ಅಧ್ಯಾತ್ಮಿಕ ವಿವರದಲ್ಲಿ ಹೇಳುತ್ತಾರಲ್ಲವೆ? ಜಿನದೇವರ ಪರಮ ಭಕ್ತೆಯಾದ ಇವರ ತಾಯಿ ಶಾಸ್ತ್ರಶ್ರವಣ ಹಾಗೂ ನಿಯಮಭದ್ಧ ಧಾರ್ಮಿಕಳಾದ ಜೈನಸ್ತ್ರೀ ಮಾಡಬಹುದಾದ ಎಲ್ಲಾ ವ್ರತ ನೋಂಪಿಗಳನ್ನು ಮಾಡಿದ್ದರು, ಜೈನರಿಗೆ ಅತಿ ಪವಿತ್ರವಾದ ಅಸಂಖ್ಯ ಮುನಿಗಳ ಮುಕ್ತಿ ಧಾಮವಾಗಿರುವ ತೀರ್ಥಂಕರರ ಸಾಕ್ಷಾತ್ಕಾರದ ಸ್ಥಳವಾದ... "ಸಮ್ಮೇದ ಗಿರಿಯಾತ್ರೆ" ಅನೇಕ ದೈವಭಕ್ತ ಜೈನರ ಕನಸು, ಕೆಲವರಿಗೆ ಅದರ ಸ್ಮರಣೆಯೆ ಪುಣ್ಯಗಳಿಸುವ ಸಾಧನ, ಶ್ರೀ ಮಂಜಯ್ಯಹೆಗಡೆ ಅವರು ತಾಯಿಗೆ ಸಮ್ಮೇದ ಗಿರಿಯ ಯಾತ್ರೆ ಮಾಡಿಸಿ, ಆ ಕ್ಷೇತ್ರಕ್ಕೆ ಹತ್ತಿರವಾದ ಪಾವಾಪುರ, ಚಂಪಾಪುರ, ರಾಜಗಿರಿ ಮುಂತಾದ ಅನೇಕ ಪುಣ್ಯಪ್ರದ ಕ್ಷೇತ್ರ ದರ್ಶನ ಮಾಡಿಸಿದರು,

ಪುಣ್ಯಪ್ರದವಾದ ಈ ಯಾತ್ರೆಗಳನ್ನು ಮಾಡಿದ ಮೇಲೆ ಸತ್‌ಪಾತ್ರರಾದ ಯಾಚಕರಿಗೆ ದಾನ ದಕ್ಷಿಣೆ ಸಮಾರಾಧನೆ ಮಾಡಿ ವ್ರತ ನೋಂಪಿ ನಡೆಸಿದರು, ತಾಯಿಗೆ ವೈರಾಗ್ಯ, ದಾನ, ಧರ್ಮ ಯಾತ್ರೆ ತೀರ್ಥಗಳಿಗೆ ಸಹಕರಿಸಿದ ಶ್ರೀ ಮಂಜಯ್ಯ ಹೆಗ್ಗಡೆ ಅವರು........

ಕುಟುಂಬದ ಕಿರಿಯರಿಗೆ ಸಲ್ಲ ಬೇಕಾದ ಲೌಕಿಕ ಎನಿಸಬಹುದಾದ ಸಣ್ಣ ಸಣ್ಣ ವಿವರಗಳನ್ನು ಗಮನಿಸಿ, ಅವರವರ ಮನಸ್ಸನ್ನು ಯಥೋಚಿತವಾಗಿ ಸಂತೋಷ ಪಡಿಸುತ್ತಿದ್ದರು.

ಶ್ರೀ ಮಂಜಯ್ಯ ಹೆಗ್ಗಡೆ ಅವರ ತಮ್ಮ ಶ್ರೀ ಪುಟ್ಟಸ್ವಾಮಿ ಅವರ ಪತ್ನಿ ಕುಸುಮಾವತಿ, ತಮ್ಮನ ಪಾಲಿಗೆ ಅಣ್ಣಾ ಸ್ವಂತ ತಂದೆಯ ಹಾಗೆ ಇದ್ದರು. ತಮ್ಮನಿ ಉನ್ನತ ವಿದ್ಯಾಭ್ಯಾಸ ಮಾಡಿಸಿ, ಒಳ್ಳೆ ಕನ್ಯೆ ನೋಡಿ ವಿವಾಹ ಮಾಡಿಸಿ ಅವ ಕುಟುಂಬವನ್ನು ಚೆನ್ನಾಗಿ ನೋಡಿಕೊಂಡರು, ಹೆಣ್ಣುಮಕ್ಕಳಿಗೆ ಒಡವೆ, ಸೀ ಉಡುಗರೆ ಆಸೆ ಇರುತ್ತದೆ,

ಶ್ರೀ ಕ್ಷೇತ್ರಕ್ಕೆ ಈ ದಂಪತಿಗಳು ಬಂದಾಗಾಗಲಿ, ತಾವೇ ಅವರ ಕುಟುಂಬಕ್ಕೆ ಹೋದಾಗಾಗಲಿ ಅರಶಿನ ಕುಂಕುಮದೊಡನೆ ಹಣಾ, ಚಿನ್ನ, ಸೀರೆ ಉಡುಗ ನೀಡುತ್ತಿದ್ದರು, ಈ ಸಣ್ಣ ವಿಷಯ ಪ್ರಸ್ತಾಪಿಸಲು ಕಾರಣ ಏನೆಂದರೆ ಕೆಲವರು ಹೊರಗಿನವರ ಪಾಲಿಗೆ ಉದಾರಿಗಳಾಗಿದ್ದರು, ಕುಟುಂಬದ ಅತಿ ನಿಕಟರಾದ ಬಂಧು ಬಾಂಧವರಿಗೆ ಮೂರು ಕಾಸು ನೀಡಲಾರರು.

ದೀಪದ ಕೆಳಗೆ ಕತ್ತಲೆ ಎಂಬಂತೆ ಇರುತ್ತಾರೆ, ಆದರೆ ಶ್ರೀ ಮಂಜಯ್ಯ ಹೆಗಡೆಯವರು ಎಲ್ಲೆಲ್ಲು ಪ್ರಕಾಶ ಬೀರುವ ರತ್ನ ದೀಪವಾಗಿದ್ದರು.

ಹೊರಗಿನ ವಿದ್ವಾಂಸ ವರ್ಗಕ್ಕೆ, ಆರ್ತಿಗಳಾಗಿ ಬಂದವರಿಗೆ ಇವರು ಉದಾ ವಾಗಿ ಹಣದರಾಶಿಯನ್ನು ದಾನಮಾಡುತ್ತಿದ್ದರು, ಅದರಂತೆ ಕುಟುಂಬದ ಬಂಧುಗ ಪಾಲಿಗೂ ಉದಾರಿಗಳೆ,

ಶ್ರೀ ಪುಟ್ಟಸ್ವಾಮಿ, ಸೌ. ಕುಸುಮಾವತಿ ದಂಪತಿಗಳನ್ನು ಪ್ರೀತಿಸಿದಂತೆ... ಶ್ರೀ ರತ್ನವರ್ಮ ಹೆಗಡೆ ಹಾಗೂ ಶ್ರೀ ರತ್ನಮ್ಮ ಅವರ ಕುಟುಂಬವನ್ನು ಪ್ರೀತಿಸುತ್ತಿದ್ದರು

ಜೈನರಲ್ಲಿ ಜಿನಬಾಲಕನ ಜನ್ಮಾಭಿಶೇಕ ಕಲ್ಯಾಣಮಹೋತ್ಸವ ಎಂಬ ಅಪೂರ್ವ ಉತ್ಸವ ನಡೆಸುತ್ತಾರೆ. ಈ ಸಂದರ್ಭದಲ್ಲಿ ದೇವೇಂದ್ರ ಶಚಿಯರಾಗಿ ಮೆರವಣಿಗೆ ಯಲ್ಲಿ ಹೊರಡುವುದು ಒಂದು ಅಪೂರ್ವ ಅವಕಾಶ

ಇಂಥಾ ಅಪೂರ್ವ ಅವಕಾಶವನ್ನು ಒಮ್ಮೆ ಶ್ರೀ ರತ್ನವರ್ಮ ಹೆಗಡೆ ದಂಪ ತಿಗಳಿಗೆ ಹಾಗೂ ಒಮ್ಮೆ ಶ್ರೀ ಪುಟ್ಟಸ್ವಾಮಿ ದಂಪತಿಗಳಿಗೆ ನೀಡಿ ಅವರನ್ನು ಸಂತಸಗೊಳಿಸಿದ್ದರು.

ಇದು ಅವರ ಸಮಾನತೆಯ ಮನಸತ್ವ ತೋರಿಸುತ್ತದೆ. ಆ ಸಂದರ್ಭದಲ್ಲಿ ಶಚಿದೇವಿ ಉಡಬೇಕಾದ ಜರಿಸೀರೆಯನ್ನು ಸಹ ತಾವೆ ನೀಡಿ; ಹರಸಿ-ಹೆಣ್ಣುಮಕ್ಕಳಿಗೆ ಸಂತಸಪಡಿಸಿದ್ದರು.

ಸಿದ್ಧವನಕ್ಕೆ ಹೋಗುವಾಗ ಅಲ್ಲಿನ ವಿದ್ಯಾರ್ಥಿಗಳಿಗೆ ಸಿಹಿತಿಂಡಿಗಳನ್ನು ಹಾಗೂ ಗೇರುಬೀಜಗಳನ್ನು ತಿನ್ನಲು ತೆಗೆದುಕೊಂಡುಹೋಗಿ ಕೊಡುತ್ತಿದ್ದರು.

ಈಗಿನ ಧರ್ಮಾಧಿಕಾರಿಗಳಾದ ಶ್ರೀ ವೀರೇಂದ್ರಹೆಗಡೆ ಅವರು ಆಗ ಪುಟ್ಟ ಬಾಲಕ, ಒಮ್ಮೆ ತಾಯಿಯ ಬಳಿ ಆನೆಬೇಕೆಂದು ಹಟ ಮಾಡಿದ್ದರಂತೆ, ಶ್ರೀ ಮಂಜಯ್ಯ ಹೆಗಡೆಯವರು ಮಗುವಿಗೆ ಹತ್ತು ಇಂಚು ಎತ್ತರದ ಮರದ ಆನೆ ನೀಡಿ ಸಂತೋಷಿಸಿ, ತಮ್ಮ ಆಪ್ತರಾದ ಶಾಸ್ತ್ರಿಗಳೊಡನೆ ಆನೆ ಬೇಕು — ಎಂದು ಅಶಿಶು ವುದು ಸಾಮಾನ್ಯ ಬಾಲಕನ ಲಕ್ಷಣವಲ್ಲ. ಮಗು ಮುಂದೆ ಉನ್ನತ ಕೀರ್ತಿ ಗಳಿಸಿ ಮಹಾಪುರುಷನಾಗುತ್ತಾನೆ—ಎಂದು ಆನಂದಿಸಿದರಂತೆ.

ಶ್ರೀ ವೀರೇಂದ್ರ ಹೆಗಡೆಯವರು ಜನಿಸಿದ ಸಮಯದಲ್ಲಿಯೂ....... ಅಂದರೇ ಶ್ರೀರತ್ನವರ್ಮ ಹೆಗಡಯವರಿಗೆ ಗಂಡುಮಗು ಹುಟ್ಟಿದ ಸುದ್ದಿ ತಿಳಿದಾಗಲು....

ಇನ್ನು ಧರ್ಮಸ್ಥಳದ ಜ್ಯೋತಿ – ಸರ್ವತೋಮುಖವಾಗಿ ಬೆಳಗುತ್ತದೆ. ಎಂದು ಶುಭನುಡಿದರಂತೆ, ಅವರ ಎಲ್ಲಾ ಹಾರೈಕೆಗಳು ಇಂದು ನಿಜವಾಗಿವೆ.

ಶ್ರೀಮಂಜಯ್ಯ ಹೆಗಡೆಯವರ ಪತ್ನಿ ಶ್ರೀಮತಿ ಲೋಕಮ್ಮನವರು ಆ ಮಹಾ ಪುರುಷನಿಗೆ ತಕ್ಕ ಸತಿ,

ಹಾಲಿಗೆಹಾಲು ಬೆರತಂತೆ ಸುವ್ವಲಾಲಿ
ಈ ದಂಪತಿಗಳ ಮಧುರ ಜೀವನಸುವ್ವಲಾಲಿ
ಬೆಳಕಿಗೆ ಬೆಳಕು ಬೆರತಂತೆ ಸುವ್ವಲಾಲಿ
ಇವರ ಸುಮಧುರದಾಂಪತ್ಯ ಸುವ್ವಲಾಲಿ ||

ಜನಕಮಹಾರಾಜನಿಗೆ ಸೀತೆ ಒಬ್ಬಳೆ ಮಗಳು, ಸಮುದ್ರರಾಜನಿಗೆ ಶ್ರೀಲಕ್ಷ್ಮಿ ಒಬ್ಬಳೆ ಮಗಳು. ಶ್ರೀ ಮಂಜಯ್ಯ ಹೆಗಡೆ ದಂಪತಿಗಳಿಗೆ ಒಬ್ಬಳೆ ಮಗಳು ಸೌ|| ವಿಮಲಕುಮಾರಿ,

ಶ್ರೀ ವಿಮಲ ಕುಮಾರಿಯನ್ನು ಶ್ರೀ ಶ್ರೀನಿವಾಸ ಬಲ್ಲಾಳ ಎಂಬ ಯೋಗ್ಯ ವರನಿಗೆ ಕೊಟ್ಟು ವಿವಾಹ ಮಾಡಿದರು, ಒಂದು ಕುಡಿಯಲ್ಲಿ ಹತ್ತು ಹೂವು ಅರಳಿತು ಎಂಬಂತೇ ಆ ಒಬ್ಬ ಮಗಳಲ್ಲಿ ನಾಲ್ವರು ಗಂಡು ಮೊಮ್ಮಕ್ಕಳನ್ನು ನಾಲ್ವರು ಹೆಣ್ಣು ಮಕ್ಕಳನ್ನು ಕಂಡು ಧನ್ಯರಾದರು, ಶ್ರೀಮಂಜಯ್ಯಹೆಗಡೆ ಅವರೋ ಇವರ ಬದುಕು ಎಷ್ಟು ಪುಣ್ಯಪ್ರದವೋ — ಮರಣವೂ ಅಷ್ಟೇ ಪುಣ್ಯಪ್ರದ,

ಶ್ರೀ ಕ್ಷೇತ್ರದ ಮಹಾಅಧಿಕಾರ, ಗಣ್ಯವ್ಯಕ್ತಿಗಳ ವಿದ್ವಾಂಸರ ಒಡನಾಟ, ಕೀರ್ತಿ, ಸಂಪತ್ತು ಯಾವುದು ಇವರಿಗೆ ಅಂಟಿರಲಿಲ್ಲ ಎಂಬುದಕ್ಕೆ ಇವರ ಮರಣದ ಸಮಯದಲ್ಲಿನ ವರ್ತನೆ ಇವರ ಮಹಾಗುಣಕ್ಕೆ ಸಾಕ್ಷಿ,

ತಾವು ಪಡೆದ ಈ ಎಲ್ಲದ್ದಕ್ಕೆ ಅಂಟಿಕೊಂಡು ಜೇಡರ ಬಲೆಯಲ್ಲಿ ಸಿಲುಕಿದಂತೆ ವ್ಯಾಮೋಹಿತರಾಗಿ — ತೊಳಲಾಡಲಿಲ್ಲ, ತಾವರೆ ಎಲೆಯ ಮೇಲಣ ನೀರಿನಂತೆ ಮರಣಕಾಲದಲ್ಲಿ ಈ ಅಧಿಕಾರ, ಕೀರ್ತಿ, ಸಂಪತ್ತು ಲೌಕಿಕ ಜಂಜಡಾ ಎಲ್ಲಾ ಮರೆತು ಪೂರ್ತಿ ಜಿನನಾಥನ ಧ್ಯಾನದಲ್ಲಿ ಮಗ್ನರಾದರು.

ಮೋಲಿ ತಮ್ಮ ಗೆಳೆಯರೊಬ್ಬರಿಗೆ ಹೇಳಿದಂತೆ "ಈ ಯಾವ ಕೆಲಸಕಾರ್ಯ ಗಳಲ್ಲಿ ತೊಡಗಿದ್ದರು ಮನಸ್ಸು ಜಿನದೇವನಲ್ಲಿ ಮಗ್ನವಾಗಿರುತ್ತದೆ, ಜನ ಕಲ್ಯಾಣಕ್ಕೆ ಮಾಡುವ ಈ ಎಲ್ಲಾ ಕಾರ್ಯಗಳು ಜಿನನಾಥನ ಸೇವೆ ಎಂದೇ ತಿಳಿದಿದ್ದೇನೆ ಇದು ಹಿಂದಿನ ಅವರ ಮಾತು. ಅವರ ಈ ಮಾತು ನಿಜವೆಂಬಂತೆ ಕಡೆಯದಿನದಲ್ಲಿ ಈ ಯಾವ ವ್ಯಾಮೋಹವೂ ಅವರನ್ನು ಕಾಡಲಿಲ್ಲ.

ಅವರ ಆಪ್ತರಾದ, ಮಹಾ ಜ್ಞಾನಿಗಳಾದ ಜಿನರಾಜ ಶಾಸ್ತ್ರಿಗಳಿಂದ ವ್ರತ ದೀಕ್ಷೆ ಪಡೆದು, ಸಹಸ್ರನಾಮ ಭಕ್ತಾಮರ, ದ್ವಾದಶಾನು ಪೇಕ್ಷೆ, ಪಂಚನಮಸ್ಕಾರ ಮುಂತಾದ ಪುಣ್ಯಪ್ರದ ಸ್ತೋತ್ರ ಕೇಳುತ್ತಾ .... ಶಿಖರ್ಜಿಯಾತ್ರೆ ಮಾಡಿದಂತೆ ಶ್ರೀಮಂದಿರ ಸ್ವಾಮಿಯ ಪಾದದಲ್ಲಿ ಶರಣು ಬಿದ್ದಂತೆ – ಮನಸ್ಸಿನಿಂದಲೇ ಅನು ಸಂಧಾನ ಮಾಡುತ್ತಾ–ಸಲ್ಲೇಖನ ವ್ರತದ ನಿಯಮ ಸ್ವೀಕರಿಸಿ - ಪಂಚನಮಸ್ಕಾರ ಮಂತ್ರ ಕೇಳುತ್ತಾ-ದೇಹತ್ಯಾಗ ಮಾಡಿದರು. ಬೆಳಕು—ಮಹಾಬೆಳಕಿನಲ್ಲಿ ಬೆರೆತು ಅಮರವಾಯಿತು.

– **ಸಂಪೂರ್ಣಂ**

---

## ಸಿದ್ಧ ಪುರುಷರ ಪುಣ್ಯ ಭೂಮಿ ಸಿದ್ಧಗಂಗಾ ಕ್ಷೇತ್ರ

— ಬಿ. ಪುಟ್ಟಸ್ವಾಮಯ್ಯ.

ನಿಷ್ಠೆಯುಳ್ಳ ಭಕ್ತ ನಟ್ಟಡವಿಯಲ್ಲಿರ್ದಡೇನು ಅದು ಪಟ್ಟಣವೆನಿಸುವುದು
ನಿಷ್ಠೆಯಿಲ್ಲದ ಭಕ್ತ ಪಟ್ಟಣದಲ್ಲಿರ್ದಡೇನು ಅದು ನಟ್ಟಡವಿ ಕಣಾ ರಾಮನಾಥ ||1||

ಉಳ್ಳವರು ಶಿವಾಲಯವ ಮಾಡುವರು ನಾನೇನ ಮಾಡುವೆ ಕಡುಬಡವನಯ್ಯ
ಎನ್ನ ಕಾಲೇ ಕಂಭ ದೇಹವೇ ದೇಗುಲ ಶಿರವೇ ಹೊನ್ನ ಕಳಸವಯ್ಯ
ಕೂಡಲಸಂಗಮದೇವ ಕೇಳಯ್ಯ ಸ್ಥಾವರಕ್ಕಳಿವುಂಟು. ಜಂಗಮಕ್ಕಳಿವಿಲ್ಲವಯ್ಯ ||2||

ಶರಣ ನಿದ್ರೆ ಗೈದೊಡೆ ಜಪ ಕಾಣಿರ ಶರಣನೆದ್ದು ಕುಳಿತೊಡೆ ಶಿವರಾತ್ರಿ ಕಾಣಿರ
ಶರಣ ಮಿಂದುದೇ ತೀರ್ಥ ಶರಣ ನಿಂದುದೇ ಕ್ಷೇತ್ರ ಶರಣ ನಡೆದುದೇ ಸತ್ಪಥ.
ಶರಣ ನುಡಿದುದೇ ಪರತತ್ವ ಕೂಡಲಸಂಗನ ಶರಣರ ಕಾಯವೇ ಕೈಲಾಸ ಕಾಣಿರೆ ||3||

# ಕ್ಷೇತ್ರವಾರ್ತೆ

—ಹೆಚ್. ಬಿ. ಗಂಗಾಧರಯ್ಯ

## ಹಳೆಯ ವಿದ್ಯಾರ್ಥಿ ಸಂಘದ ವಿಶೇಷಸಭೆ

ಸೆಪ್ಟಂಬರ್ 1991 ಭಾನುವಾರ ಶ್ರೀ ಮಠದಲ್ಲಿ ಹಳೆಯ ವಿದ್ಯಾರ್ಥಿ ಸಂಘದ ಸರ್ವಸದಸ್ಯರ ವಿಶೇಷ ಸಭೆ ನಡೆಯಿತು. ತ್ರಿವಿಧದಾಸೋಹ ಮೂರ್ತಿಗಳಾದ ಪರಮ ಪೂಜ್ಯ ಡಾ|| ಶ್ರೀ ಶ್ರೀ ಶಿವಕುಮಾರ ಮಹಾ ಸ್ವಾಮಿಗಳವರ ಪೀಠಾರೋಹಣ ವಜ್ರಮಹೋತ್ಸವ ಸಮಿತಿ ರೂಪಿಸಿರುವ ಯೋಜನೆಗಳನ್ನು ಕಾರ್ಯಾಧ್ಯಕ್ಷರಾದ ಶ್ರೀಬಿ. ಎಸ್. ಮುದ್ದಪ್ಪನವರು (ನಿವೃತ್ತ ಐ.ಎ.ಎಸ್.) ಸಭೆಗೆ ಪರಿಚಯಿಸಿದರು:

| | | |
|---|---|---|
| 1 | 1,500 ವಿದ್ಯಾರ್ಥಿಗಳಿಗೆ ವಸತಿ ನಿಲಯ | 1.57 ಕೋಟಿರೂ |
| 2 | 2,000 ವಿದ್ಯಾರ್ಥಿಗಳಿಗೆ ಪ್ರಸಾದ ನಿಲಯ | 1.25 ಕೋಟಿರೂ |
| 3 | ನೈರ್ಮಲ್ಯ ಮತ್ತು ನೀರು ಸರಬರಾಜು | 0.57 ಲಕ್ಷರೂ |
| 4 | ಶ್ರೀ ಶ್ರೀಗಳವರ ಜನ್ಮಸ್ಥಳವಾದ ವೀರಾಪುರದಲ್ಲಿ-ವೃತ್ತಿ ಶಿಕ್ಷಣ ಕೇಂದ್ರ ಸ್ಥಾಪನೆ | 0.15 ಲಕ್ಷರೂ |

ಒಟ್ಟು 3.54 ಕೋಟಿರೂಗಳು ಯೋಜನೆ ಪೂರ್ಣವಾಗಲು ಬೇಕಾಗುತ್ತದೆ. ನಾವು ಈ ಬಗ್ಗೆ ಕಾರ್ಯನಿರತರಾಗಿದ್ದೇವೆ. ಈ ಮಹತ್ವದ ಕಾರ್ಯಸಾಧನೆಗೆ ಎಲ್ಲರ ಆರ್ಥಿಕ ಸಹಕಾರ ಬಹಳ ಮುಖ್ಯ. ಶಕ್ತಿಮೀರಿ ಎಲ್ಲ ಹಳೆಯ ವಿದ್ಯಾರ್ಥಿಗಳು ಭಕ್ತಿಕಾಣಿಕೆಯನ್ನು ನೀಡಬೇಕಾಗಿ ಕೋರುತ್ತೇವೆ

ವಸತಿನಿಲಯದ ಒಂದು ಕೊಠಡಿಗೆ ತಗಲುವ ವೆಚ್ಚ 35,000 ರೂಗಳು ನೀಡಿದವರ ಹೆಸರನ್ನು ಅಮೃತ ಶಿಲೆಯಲ್ಲಿ ಕೊಠಡಿಯ ಮುಂದೆ ಹಾಕಲಾಗುತ್ತದೆ. 10,000/ ರೂಗಳನ್ನು ನೀಡಿದವರ ಹೆಸರನ್ನು ಇದೇರೀತಿ ಪ್ರಸಾದ ನಿಲಯದ ಮುಂಭಾಗದಲ್ಲಿ ಹಾಕಲಾಗುವುದು ಎಂದು ಪ್ರಕಟಿಸಿದರು.

**ಆದಾಯ ತೆರಿಗೆ ರಿಯಾಯಿತಿ :** ಸರ್ಕಾರ ವಜ್ರಮಹೋತ್ಸವ ನಿಧಿಗೆ ಹಣ ಸಂದಾಯ ಮಾಡಿದವರಿಗೆ ಶೇಖಡ ೫0 ರಷ್ಟು ತೆರಿಗೆ ರಿಯಾಯಿತಿ ನೀಡಿರುವುದಾಗಿ ಸಭೆಯಲ್ಲಿ ಶ್ರೀ ಬಿ. ಎಸ್. ಮುದ್ದಪ್ಪನವರು ಘೋಷಿಸಿದರು.

ಜನಪದ ಸಾಹಿತಿಗಳು ಮತ್ತು ಶ್ರೀ ಮಠದ ಹಿತೈಷಿಗಳಾದ ಶ್ರೀ ಗೊ.ರು. ಚನ್ನಬಸಪ್ಪನವರು ನಿಧಿಗೆ ಹಣ ಸಂಗ್ರಹಿಸುವುದರ ಬಗ್ಗೆ ರೂಪು ರೇಶೆಗಳನ್ನು ವಿವರಿಸಿದರು.

ಶ್ರೀ ಮಠಕ್ಕೆ ಶ್ರೀಶ್ರೀಗಳವರು ಹೃದಯ, ಹಳೆಯ ವಿದ್ಯಾರ್ಥಿ ಸಂಘಕ್ಕೆ ಧರ್ಮಶಾಸನವಿದೆ, ಶ್ರೀ ಮಠ ನಾಡಿನ ಎಲ್ಲ ಜನತೆಯ ಒಳಿತಿಗಾಗಿ ಶ್ರಮಿಸುತ್ತಿದೆ. ಅದರಂತೆ ಎಲ್ಲರು ಶ್ರೀಮಠಕ್ಕೆ ಉದಾರವಾಗಿ ನೀಡುತ್ತಾರೆ, ವಿವಿಧ ಮೊತ್ತದ ಟಿಕೆಟ್ಟುಗಳನ್ನು ಸಿದ್ಧಪಡಿಸಲಾಗಿದೆ. ಅವುಗಳನ್ನು ಮಾರಿ ನಿಧಿಗೆ ಹಣ ಸಂಗ್ರಹಿಸಬೇಕು.

ವಿವಿಧ ಮೊತ್ತದ ಟಿಕೆಟ್ಟುಗಳು ಈ ಕ್ರಮದಲ್ಲಿರುತ್ತವೆ,

| | | | |
|---|---|---|---|
| 25,000 ರೂ, | 10,000 ರೂ. | 5,000 ರೂ. | 1,000 ರೂ. |
| 500 ರೂ, | 1,00 ರೂ | 50 ರೂ, | 25 ರೂ. |
| 10 ರೂ, | 5 ರೂ, | | |

ಶ್ರೀ ಮಠದ ಭಕ್ತಾದಿಗಳು, ಹಿತೈಶಿಗಳು, ಹಳೆಯ ವಿದ್ಯಾರ್ಥಿಗಳು ಮತ್ತು ಶ್ರೀ ಸಿದ್ಧಗಂಗಾ ಸಂಸ್ಥೆಗಳ ಮುಖ್ಯಸ್ಥರು ಟಿಕೆಟ್ಟುಗಳನ್ನು ಪಡೆದು ನಿಧಿ ಸಂಗ್ರಹಣೆಯಲ್ಲಿ ತೊಡಗಬೇಕೆಂದು ಮನವಿ ಮಾಡಿದರು

**ಅರ್ಧ ತಿಂಗಳ ಅದಾಯ :** ಹಳೆಯ ವಿದ್ಯಾರ್ಥಿಗಳು ಸಭೆಯಲ್ಲಿ ಸರ್ವಾನುಮತದಿಂದ ಕನಿಷ್ಟ ಅರ್ಧತಿಂಗಳ ವೇತನ ಅದಾಯವನ್ನು ನಿಧಿಗೆ ನೀಡಬೇಕೆಂದು ಸಂತೋಷದಿಂದ ಒಪ್ಪಿಗೆ ನೀಡಿತು.

— ಸಭೆಯಲ್ಲಿ ನಿಧಿಗೆ ವಾಗ್ದಾನ ಮಾಡಿದ ಮಹನೀಯರುಗಳು —

| | | |
|---|---|---|
| ಶ್ರೀ ಆರ್.ಎಂ.ಬಿ. ಆರಾಧ್ಯರು, ಬೆಂಗಳೂರು | 1 ಬ್ಲಾಕ್‌ಗಾಗಿ | 1,00,000 ರೂ |
| ಡಾ|| ಎಂ.ಸಿ. ಮೋದಿ ಟ್ರಸ್ಟ್ | 1 ಕೊಠಡಿ ನಿರ್ಮಾಣಕ್ಕೆ | 35,000 ರೂ. |
| ಶ್ರೀ ಎಲ್. ರೇವಣ್ಣಸಿದ್ಧಪ್ಪ, (ಐ.ಜಿ.ಪಿ.) | ,, | 35,000 ರೂ. |
| ಬೇವೂರು ಮಠದ ಶ್ರೀ ಶ್ರೀಗಳವರು | ,, | 35,000 ರೂ. |
| ಶ್ರೀ ಜಿ. ರಾಜಶೇಖರಯ, ಆಡಿಟರ್, ಬೆಂಗಳೂರು | ,, | 35,000 ರೂ. |
| ಡಾ|| ಎಂ. ಎನ್. ಚನ್ನಬಸಪ್ಪ, ತುಮಕೂರು | ,, | 10,000 ರೂ. |
| ಡಾ|| ಜಿ. ಪರಮೇಶ್ವರಪ್ಪ, ಬೆಂಗಳೂರು | ,, | 6,000 ರೂ. |
| ಶ್ರೀ ಡಿ.ಎಸ್. ರೇಣುಕಾರಾಧ್ಯ, ದಾಸೇನಹಳ್ಳಿ | ,, | 6,000 ರೂ. |
| ಶ್ರೀ ಕೆ.ಎಂ. ರೇವಣ್ಣಸಿದ್ಧಯ್ಯ, ಮೈಸೂರು | ,, | 5,000 ರೂ. |
| ಶ್ರೀ ಕೆ. ಸಿದ್ಧಗಂಗಯ್ಯ, ಬೆಂಗಳೂರು | ,, | 5,000 ರೂ. |
| ಶ್ರೀ ನಂಜುಂಡಪ್ಪ, ಮಲ್ಲಸಂದ್ರ | ,, | 5,000 ರೂ. |

# ಶಿಕ್ಷಕರ ದಿನಾಚರಣೆ

ಸಂಯುಕ್ತ ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ಸೆಪ್ಟಂಬರ್ 5ರಂದು ಶ್ರೀ ಮಠದಲ್ಲಿ ಶಿಕ್ಷಕರ ದಿನಾಚರಣೆಯನ್ನು ಆಚರಿಸಲಾಯಿತು. ಪೂಜ್ಯ ಶ್ರೀ ಶ್ರೀ ಗಳವರ ಸಾನ್ನಿಧ್ಯದಲ್ಲಿ ರಾಜ್ಯದ ಸಣ್ಣ ಉಳಿತಾಯ ಖಾತೆಯ ಸಚಿವರಾದ ಶ್ರೀ ಟಿ. ಎಂ. ಮಂಜುನಾಥ್ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ ಇಂದು ಶಿಕ್ಷಕರನ್ನು ಸನ್ಮಾನಿಸುವ ಪವಿತ್ರದಿನ. ಇಂದು ಭಾರತದ ಸಮಸ್ಯೆಗಳು, ಧರ್ಮದ ಹಿನ್ನೆಲೆ ಮತ್ತು ಪರಂಪರೆಯನ್ನು ಉದಾತ್ತಗೊಳಿಸಲು ಶಕ್ತರಾಗಿರುವುದು ಶಿಕ್ಷಕರು ಮಾತ್ರ. ಈ ದಿಶೆಯಲ್ಲಿ ಡಾ॥ ರಾಧಾಕೃಷ್ಣನ್‌ರವರು ಬಹಳವಾಗಿ ಶ್ರಮಿಸಿದರು. ಅವರ ವ್ಯಕ್ತಿತ್ವ ಮತ್ತು ಮಾರ್ಗದರ್ಶನದಲ್ಲಿ ಶಿಕ್ಷಕ ಸಮಾಜ ಮುನ್ನಡೆಯಬೇಕೆಂದು ಮನವಿಮಾಡಿಕೊಂಡರು.

**ಶ್ರೀ ಮಠದ ಶ್ರೇಯಸ್ಸಿಗೆ ಅಹಿತ ಬಯಸುವುದು ಮೂರ್ಖತನ:-** ಇಂದು ಶ್ರೀ ಶ್ರೀ ಗಳವರ ಪಾದ ಸ್ಪರ್ಶಮಾಡಲು ಅವಕಾಶಸಿಕ್ಕಿದ್ದು ನನ್ನ ಪುಣ್ಯ. ಶ್ರೀ ಮಠದ ಸಂಬಂಧ ಇತ್ತೀಚಿನ ವರ್ಷಗಳಲ್ಲಿ ಕಡಿದು ಹೋಗಿತ್ತು. ಶಿಷ್ಯ ಗುರುವನ್ನು ಮರೆಯಬಹುದು. ಆದರೆ ಶ್ರೀಗುರು ಶಿಷ್ಯನನ್ನು ಮರೆಯುವುದಿಲ್ಲ. ನನ್ನ ಆತ್ಮ ಮತ್ತು ಮನಸ್ಸು ಶ್ರೀ ಶ್ರೀಗಳನ್ನು ಸ್ಮರಿಸುತ್ತವೆ. ಶ್ರೀಮಠ ಶ್ರೀಗುರುಗಳ ಕೃಪೆ, ಆಶೀರ್ವಾದ ಮತ್ತು ತಪಸ್ಸಿನ ಪ್ರಭಾವದಿಂದ ಬೆಳೆದಿದೆ. ಇದಕ್ಕೆ ಅಡ್ಡಿಮಾಡಿ ಕುಂದುತರಲು ಪ್ರಯತ್ನಿಸಿದರೆ ಅವರು ಮಹಾ ಮೂರ್ಖರು. ಶ್ರೀ ಮಠದಿಂದ ಜೀವನದಲ್ಲಿ ಬೆಳಕು ಕಂಡಿರುವವರು ಲಕ್ಷೋಪಲಕ್ಷಜನ. ಈಕಾರ್ಯ ಸರ್ಕಾರ ಮಾಡಲು ಸಾಧ್ಯವಿಲ್ಲ. ಇಂಥ ಮಠದಿಂದ ಧರ್ಮ ಸ್ವಲ್ಪ ಮಟ್ಟಿಗೆ ಉಳಿದಿದೆ. ಶ್ರೀ ಶ್ರೀಗಳವರ ಆಶೀರ್ವಾದ ಬಲದಿಂದ ಕರ್ನಾಟಕ ರಾಜ್ಯದಲ್ಲಿ ಮಂತ್ರಿಯಾಗಿದ್ದೇನೆ ಎಂದು ಕೃತಜ್ಞತೆ ವ್ಯಕ್ತಪಡಿಸಿದರು.

ಮುಖ್ಯ ಅತಿಥಿಯಾಗಿ ತುಮಕೂರು ಸುಪ್ರಸಿದ್ಧ ಕೈಗಾರಿಕೋದ್ಯಮಿಗಳಾದ ಶ್ರೀ ಎನ್. ಆರ್. ಜಗದೀಶ್‌ರವರು ಮಾತನಾಡುತ್ತಾ ಉತ್ತಮ ಆದರ್ಶಗಳನ್ನು ಮೈಗೂಡಿಸಿಕೊಂಡು ಶಿಕ್ಷಕರು ಕಾರ್ಯೋನ್ಮುಖರಾದರೆ ರಾಷ್ಟ್ರಪ್ರಗತಿಯಾದೀತು ಎಂದು ಎಚ್ಚರಿಸಿದರು.

ಶ್ರೀ ಶ್ರೀ ಗಳವರು ಆಶೀರ್ವಚನ ನೀಡುತ್ತಾ ಸಮಾಜ-ರಾಷ್ಟ್ರದಲ್ಲಿ ಶಿಕ್ಷಕರ ಸ್ಥಾನ ಬಹಳ ಹಿರಿದು. ಡಾ॥ ರಾಧಾಕೃಷ್ಣನ್‌ರವರು ಮೇಧಾವಿಗಳು, ತತ್ವಜ್ಞಾನಿಗಳು,ರಾಷ್ಟ್ರ ಪ್ರೇಮ ಉಳ್ಳವರು, ಜಗತ್ತಿನ ಎಲ್ಲ ರಾಷ್ಟ್ರಗಳಲ್ಲಿ ಸಂಚರಿಸಿ ಭಾರತದ ಹಿರಿಮೆಯನ್ನು ಪ್ರಚಾರ ಮಾಡಿದ್ದಾರೆ. ಶಿಕ್ಷಕ ನಾಡಿನ ಜನಾಂಗ ಉದ್ಧರಿಸುವವನು. ಇಂದು ಸಾಮಾಜಿಕ ಜೀವನ ಕೆಳಮಟ್ಟಕ್ಕೆ ಹೋಗಿದೆ. ಕಾರಣ ತತ್ವಜ್ಞಾನದ ಅಭಾವ. ಪ್ರಯುಕ್ತ ಶಿಕ್ಷಕರು ಆದರ್ಶಸ್ಥಾನವನ್ನು ದೊರಕಿಸಿಕೊಳ್ಳಲು ಸದಾ ಪ್ರಯತ್ನಿಸುತ್ತಿರಬೇಕೆಂದು ಹೇಳಿದರು.

# ಅಭಿನಂದನೆ

ಪೊಲೀಸ್ ಇಲಾಖೆಯ ವರಿಷ್ಠಾಧಿಕಾರಿಗಳಲ್ಲೊಬ್ಬರಾದ ಮಾನ್ಯ
ಶ್ರೀ ಎಸ್. ಎಂ. ಶಂಕರಬಿದರಿಯವರು ಇತ್ತೀಚೆಗೆ ರಾಷ್ಟ್ರಪತಿಯವರಿಂದ
ಶೌರ್ಯಪ್ರದರ್ಶನ ಪ್ರಶಸ್ತಿ ಪುರಸ್ಕೃತರಾದುದನ್ನು ತಿಳಿದು "ಸಿದ್ಧಗಂಗಾ"
ಸಂತೋಷಿಸುತ್ತದೆ. ಬಳ್ಳಾರಿಯಲ್ಲಿ ಜಿಲ್ಲಾ ಪೊಲೀಸ್ ಮುಖ್ಯಾಧಿಕಾರಿ-
ಗಳಾಗಿದ್ದ ಶ್ರೀಯುತರು ಕುಖ್ಯಾತನಾಗಿದ್ದ ಭೀಮಣ್ಣನಾಯಕನ ಬಂಧನದ
ಪ್ರಕರಣದಲ್ಲಿ ಜೀವದ ಹಂಗು ತೊರೆದು ಹೋರಾಡಿದುದನ್ನು ಪರಿ-
ಗಣಿಸಿ ರಾಷ್ಟ್ರಪತಿ ಶೌರ್ಯಪ್ರಸಸ್ತಿ ನೀಡಿರುವುದು ಸೂಕ್ತವಾಗಿದೆ.
ತುಮಕೂರು ಜಿಲ್ಲೆಯಲ್ಲಿ ಪೊಲೀಸ್ ಮುಖ್ಯಾಧಿಕಾರಿಗಳಾಗಿ ಶ್ರೀಯುತರು
ಸಲ್ಲಿಸಿದ ಪ್ರಾಮಾಣಿಕ, ದಕ್ಷಸೇವೆಯನ್ನು 'ಸಿದ್ಧಗಂಗಾ' ಈ ಸಂದರ್ಭದಲ್ಲಿ
ಹೃತ್ಪೂರ್ವಕವಾಗಿ ಸ್ಮರಿಸುತ್ತದೆ. ಶ್ರೀ ಎಸ್. ಎಂ. ಶಂಕರಬಿದರಿಯವರ
ಸೇವಾವಧಿ ಸಮಾಜ, ಸರ್ಕಾರಗಳು ಮೇಲಿಂದ ಮೇಲೆ ಅಭಿನಂದಿಸುವಂತೆ
ಆನಂದದಾಯಕವಾದುದಾಗಿರಲಿ ಎಂದು ಹಾರೈಸುತ್ತಾ, ಶ್ರೀಯುತರಿಗೆ
ಸಕಲ ಸನ್ಮಂಗಳವನ್ನುಂಟು ಮಾಡುವಂತೆ ಬಸವಾದಿಶರಣರನ್ನು ಶ್ರೀ
ಸಿದ್ಧಗಂಗಾ ಗುರುಪರಂಪರೆಯನ್ನೂ "ಸಿದ್ಧಗಂಗಾ" ಪ್ರಾರ್ಥಿಸುತ್ತದೆ.

# ಶ್ರದ್ಧಾಂಜಲಿ

ಶ್ರೀ ಮದ್‌ರಂಭಾಪುರಿವೀರ ಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ 1008 ಜಗದ್ಗುರು ಪ್ರಸನ್ನರೇಣುಕ ವೀರರುದ್ರಮುನಿದೇವ ಶಿವಾಚಾರ್ಯ ಭಗವತ್ಪಾದ ಮಹಾಸನ್ನಿಧಿಯವರು ಇತ್ತೀಚೆಗೆ ಲಿಂಗೈಕ್ಯರಾದುದನ್ನು ತಿಳಿದು 'ಸಿದ್ಧಗಂಗಾ' ಅತೀವ ಶೋಕಕ್ಕೊಳಗಾಗಿದೆ. ಸಂಸ್ಕೃತ, ಕನ್ನಡ ಭಾಷೆಗಳಲ್ಲಿ ತುಂಬು ವಿದ್ವಾಂಸರಾಗಿದ್ದ ಜಗದ್ಗುರುಗಳು ಶ್ರೀ ಪೀಠದ ಪರಂಪರೆಯ ಅಭಿವೃದ್ಧಿಗಾಗಿ ಅಪಾರ ಶ್ರಮಿಸುತ್ತಿದ್ದರು. ವೀರಶೈವ ಧರ್ಮಾಭಿವೃದ್ಧಿಗಾಗಿ ಉದಾರ ದೃಷ್ಟಿಯ ಸಮನ್ವಯ ಮನೋಧರ್ಮವನ್ನು ಹೊಂದಿದ್ದ ಪೂಜ್ಯಪಾದರ ಅಗಲಿಕೆ ಆಸ್ತಿಕ ಲೋಕಕ್ಕೆ ಬಹು ದೊಡ್ಡನಷ್ಟವಾಗಿದೆ. ಲಿಂಗೈಕ್ಯರಾದ ಜಗದ್ಗುರುಗಳ ದಿವ್ಯಾತ್ಮಕ್ಕೆ ಭಕ್ತಿಪೂರ್ವಕ ಶ್ರದ್ಧಾಂಜಲಿಯನ್ನು ಅರ್ಪಿಸುತ್ತದೆ "ಸಿದ್ಧಗಂಗಾ".

ಸಂಗೀತ ಸಾಮ್ರಾಟ, ಗಾನಗಂಧರ್ವ ಶ್ರೀ ಬಸವರಾಜಗುರು ಇತ್ತೀಚೆಗೆ ಲಿಂಗೈಕ್ಯರಾದುದನ್ನು ತಿಳಿದು 'ಸಿದ್ಧಗಂಗಾ' ದುಃಖಿಸುತ್ತದೆ. ಕರ್ನಾಟಕದ ಅಮೂಲ್ಯ ನಿಧಿಯಾಗಿದ್ದ, ಸಂಗೀತ ಜಗತ್ತಿನ ಧ್ರುವತಾರೆಯೆನಿಸಿ ಸಂಗೀತ ದಿಗ್ಗಜಗಳ ನಡುವೆ ಭಕ್ತಿ ದೀಪವಾಗಿ ಬೆಳಗಿದ ಶ್ರೀ ಬಸವರಾಜಗುರುಗಳ ಅಗಲಿಕೆಯಿಂದ ಕರ್ನಾಟಕ ನಿಜಕ್ಕೂ ಬಡವಾಗಿದೆ. ಕಲಾವಿದನ ಕಣ್ಮರೆಯಿಂದ ಸಾಂಸ್ಕೃತಿಕ ಲೋಕ ಕೃಶವಾಗಿದೆ ಸುಸಂಸ್ಕೃತ ಪರಂಪರೆಯನ್ನು ಜೀವನದಲ್ಲಿ ಅನುಷ್ಠಾನಕ್ಕೆ ತಂದಿದ್ದ ಶ್ರೀಯುತರಿಗೆ ಅಭಿಮಾನಿಗಳು, ಸಮಾಜ ಬಂಧುಗಳು, ಅಶ್ರುತರ್ಪಣ ಅರ್ಪಿಸಿ ದುಃಖಭರಿತರಾಗಿದ್ದಾರೆ. ಶ್ರೀಯುತರ ಅಗಲಿಕೆಯಿಂದಾದ ನೋವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗದವರಿಗೆ ಬಸವಾದಿ ಶರಣರು ಶ್ರೀ ಸಿದ್ಧಗಂಗಾ ಗುರುಪರಂಪರೆ ನೀಡಲಿ ಎಂದು "ಸಿದ್ಧಗಂಗಾ" ಪ್ರಾರ್ಥಿಸುತ್ತ, ಶ್ರೀ ಬಸವರಾಜಗುರುಗಳ ಆತ್ಮಕ್ಕೆ ವಿನಮ್ರ ಗೌರವವನ್ನು ಸಲ್ಲಿಸುತ್ತದೆ.

## ಸಂತಾಪ

ದಿನಾಂಕ 29-9-91 ರಂದು ಧಾರವಾಡದಲ್ಲಿ ಹಿರಿಯ ಸಂಶೋಧಕ ಡಾ|| ಶಂ.ಬಾ. ಜೋಶಿಯವರು ನಿಧನರಾದುದನ್ನು ತಿಳಿದು 'ಸಿದ್ಧಗಂಗಾ' ಶೋಕಿಸುತ್ತದೆ. ನಾಡಿನ ಸಂಶೋಧಕ ಲೋಕಕ್ಕೆ ಶ್ರೀ ಜೋಶಿಯವರ ಅಗಲಿಕೆಯಿಂದ ತುಂಬಲಾರದ ನಷ್ಟವಾಗಿದೆ. ಅವರ ಸಂಶೋಧಕ ಕೃತಿಗಳು ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿವೆ. ಮಡಿಕೇರಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದ ಶ್ರೀಯುತರು ಅನೇಕ ಗೌರವ ಪ್ರಶಸ್ತಿಗಳಿಗೆ ಪುರಸ್ಕೃತರಾಗಿದ್ದರು. ಕಣ್ಮರೆಯಾದ ಶ್ರೀಯುತರ ಕುಟುಂಬವರ್ಗದವರಿಗೆ ಅಗಲಿಕೆಯನೋವನ್ನ ಸಹಿಸುವ ಶಕ್ತಿಯನ್ನು ಕೊಡಲೆಂದು ದಯಾಮಯನಾದ ಭಗವಂತನನ್ನು ಪ್ರಾರ್ಥಿಸುತ್ತ, ಡಾ|| ಶಂ. ಬಾ. ಜೋಶಿಯವರ ಆತ್ಮಕ್ಕೆ ನಮ್ರಗೌರವವನ್ನು ಸಲ್ಲಿಸುತ್ತದೆ "ಸಿದ್ಧಗಂಗಾ'.

ದಿನಾಂಕ-28-9-91ರಂದು ಬೆಂಗಳೂರಿನಲ್ಲಿ ಶ್ರೀ ಗೊರೂರು ರಾಮಸ್ವಾಮಿ ಐಯ್ಯಂಗಾರ್ ಅವರು ನಿಧನರಾದುದನ್ನು ತಿಳಿದು 'ಸಿದ್ಧಗಂಗಾ' ದುಃಖಿಸುತ್ತದೆ. ಶ್ರೇಷ್ಠ ಸಾಹಿತಿಗಳಾಗಿದ್ದ ಶ್ರೀಯುತರು ಜಾನಪದ ವಿದ್ವಾಂಸರೂ ಆಗಿದ್ದರು. ಗ್ರಾಮೀಣ ಜೀವನದ ಬಗ್ಗೆ ಗೌರವಾದರಗಳಿಂದ ಅನೇಕ ಗ್ರಂಥಗಳನ್ನು ಬರೆದಿದ್ದರು. ಅವರ ಬರೆಹಗಳಲ್ಲಿ ಶುದ್ಧ ಅಭಿರುಚಿಯ ಹಾಸ್ಯ ವ್ಯಕ್ತವಾಗಿರುವುದನ್ನು ಇಲ್ಲಿ ಸ್ಮರಿಸಬೇಕು. ಗಾಂಧಿ ಮಾರ್ಗಾನುಯಾಯಿಗಳಾಗಿದ್ದ ಶ್ರೀಯುತರ ಅಗಲಿಕೆ ಕನ್ನಡ ಸಾರಸ್ವತ ಲೋಕಕ್ಕಾದ ನಷ್ಟ. ಕಣ್ಮರೆಯಾದ ಶ್ರೀಯುತರು ಕುಟುಂಬ ವರ್ಗದವರಿಗೆ ಅವರ ಅಗಲಿಕೆಯ ನೋವನ್ನು ಭರಿಸುವ ಶಕ್ತಿಯನ್ನು ದಯಾಮಯನು ನೀಡಲೆಂದು ಪ್ರಾರ್ಥಿಸುತ್ತ, ಅಗಲಿದ ಶ್ರೀ ಗೊರೂರು ರಾಮಸ್ವಾಮಿಐಯ್ಯಂಗಾರರ ಆತ್ಮಕ್ಕೆ 'ಸಿದ್ಧಗಂಗಾ' ಗೌರವವನ್ನು ಸಲ್ಲಿಸುತ್ತದೆ.

ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಪುರಸ್ಕೃತರಾಗಿದ್ದ ಶ್ರೀ ಗೊರೂರರು ಅನೇಕ ಗೌರವಗಳ ಜೊತೆಗೆ ಡಿ.ಲಿಟ್. ಗೌರವ ಪಡವಿಯನ್ನು ಪಡೆದಿದ್ದರು. ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ತುಮಕೂರಿಗೆ ಬರುವವರಿದ್ದೀರಾ? ಹಾಗಿದ್ದರೆ, ವೈವಿಧ್ಯಮಯ ಊಟ,
ವಸತಿ, ತಿಂಡಿ ತಿನಿಸುಗಳ ನಮ್ಮ ಈ ಸ್ಥಳಗಳು ಸದಾ ನಿಮ್ಮನ್ನು ಸ್ವಾಗತಿಸುತ್ತಿವೆ.

ಹೋಟೆಲ್
ಶ್ರೀ ನಂಜುಂಡೇಶ್ವರ
ಊಟ, ವಸತಿ ಮತ್ತು
ಉಪಹಾರ ಮಂದಿರ,
ಬಿ.ಹೆಚ್. ರಸ್ತೆ, ತುಮಕೂರು-1
ದೂರವಾಣಿ
8597, 2373, 2577




ಶ್ರೀ ನಂಜುಂಡೇಶ್ವರ
ಬೇಕರಿ
ತುಮಕೂರು ಜಿಲ್ಲೆಯ ಪ್ರಖ್ಯಾತ
ಬೇಕರಿ
ಚಿಕ್ಕಪೇಟೆ ತುಮಕೂರು-1
ದೂರವಾಣಿ : 8077

ಶ್ರೀ ನಂಜುಂಡೇಶ್ವರ ರೆಸ್ಟೋರೆಂಟ್
ತುಮಕೂರಿನಲ್ಲಿ ಉತ್ತರ ಭಾರತದ ಶೈಲಿಯ ಊಟ
ಉಪಹಾರಗಳ ಶ್ರೇಷ್ಠ ದರ್ಜೆಯ ರೆಸ್ಟೋರೆಂಟ್
ಬಿ.ಹೆಚ್. ರಸ್ತೆ, ತುಮಕೂರು-1
ದೂರವಾಣಿ : 2677

ಸಿ.ವಿ. ಮಹದೇವಯ್ಯ
ಮ್ಯಾನೇಜಿಂಗ್ ಪಾರ್ಟನರ್
ಮನೆ ಫೋ. 2477

ಶ್ರೀ ನಂಜುಂಡೇಶ್ವರ ಸ್ವೀಟ್ಸ್
ಎಲ್ಲಾ ವಿಧವಾದ ಸಿಹಿ ಮತ್ತು ಖಾರ ತಿಂಡಿ ಹಾಗೂ
ಬೇಕರಿ ತಿನಿಸುಗಳ ನಗರದ ಏಕೈಕ ಸ್ಥಳ
ಅಶೋಕ ರಸ್ತೆ ತುಮಕೂರು-1
ದೂರವಾಣಿ : 2077

ಸ್ಥಾಪನೆ : 1913 ತಂತಿ : "ಹ್ಯಾಪಿಮೂನ್"

ಶಾಸ್ತ್ರೋಕ್ತವಾಗಿ ತಯಾರಿಸಿದ ಸುಗಂಧ ಸಾಮಗ್ರಿಗಳು

ಪ್ರಖ್ಯಾತವಾದ
- ಪರಿಮಳದಶಾಂಗ
- ದೂಪದ ಕೊಡ
- ವಿಭೂತಿ
- ಹವನ ಸಾಮಗ್ರಿಗಳ ತಯಾರಕರು




ಶಿವಪೂಜಾ ಸಾಮಗ್ರಿಗಳು ದೊರೆಯುತ್ತದೆ.

ಫೋನ್ : ಅಂಗಡಿ — 28009 ಮನೆ — 224623.

ವೈ. ಬಸಪ್ಪ, 206, ಅವೆನ್ಯೂ ರೋಡ್, ಬೆಂಗಳೂರು-560 002

# ಸಿದ್ಧಗಂಗಾ

ಸಂಪುಟ–27.   ಸಂಚಿಕೆ–11.   ನವಂಬರ್–1991.

ತತ್ವವಿರೋಧ, ಧರ್ಮವಿರೋಧ, ದೈವವಿರೋಧ, ಆತ್ಮವಿರೋಧಗಳ ಮಧ್ಯೆ ಬಾಳುತ್ತಿದ್ದೇವೆ. ಹಿರಿಯರು ಕೊಟ್ಟು ಹೋಗಿರುವ ತತ್ವಾನುಸರಣೆಯಿಂದ, ಮಾನವೀಯತೆಯೇ ಧರ್ಮದ ನೈಜಸ್ವರೂಪವೆಂಬ ನಿಶ್ಚಿತಜ್ಞಾನದಿಂದ, ದೈವೀಶಕ್ತಿಯ ಒಂದು ಕಿರು ಉಪಕರಣ ನಾನು ಎಂಬ ನಮ್ರ ಭಾವನೆಯಿಂದ, ಮಾತು ಮನ ಮೈಗಳ ಮಧ್ಯೆ ಅಂತರ ಬರದಂತೆ ಬಾಳುವುದನ್ನು ಕಲಿತಾಗ ಮಾತ್ರ ಜೀವನವನ್ನು ಪವಿತ್ರ ಪ್ರಸಾದವೆಂದು ಕಂಡು ಕೊಂಡಂತಾಗುತ್ತದೆ.

.... ಡಾ|| ಶ್ರೀ ಶ್ರೀ ಶಿವಕುಮಾರಮಹಾಸ್ವಾಮಿಗಳು.

ಪ್ರಕಾಶಕರು:
ಹಳೆಯ ವಿದ್ಯಾರ್ಥಿಗಳ ಸಂಘ.
ಸಿದ್ಧಗಂಗಾ ಕ್ಷೇತ್ರ.

## "ಸಿದ್ಧಗಂಗಾ" ಚಿರಾಯುವಾಗಲೆಂದು ಹರಸಿ ಹಾರೈಸಿರುವ
## ಆಜೀವ ಸದಸ್ಯರ ಬಳಗ

1359 ಶ್ರೀ ಎಸ್. ಎಂ. ಬಾಲಿ, ಕಂಟ್ರಾಕ್ಟರ್, ಹುಣಸಗಿ, ಗುಲ್ಬರ್ಗ ಜಿಲ್ಲೆ.

1360 ಮುಖ್ಯೋಪಾಧ್ಯಾಯರು, ಸರ್ಕಾರಿ ಪ್ರೌಢಶಾಲೆ, ಹುಣಸಗಿ, ಗುಲ್ಬರ್ಗ ಜಿಲ್ಲೆ

1361 ಶ್ರೀ ಎಸ್. ವೀರಭದ್ರಯ್ಯ, ಶಿಕ್ಷಕರು,
ಹೊಸಹಳ್ಳಿಪಾಳ್ಯ, ಮಾಗಡಿ ತಾಲ್ಲೂಕು, ಬೆಂಗಳೂರು ಜಿಲ್ಲೆ.

1362 ಶ್ರೀಮತಿ ಕೆ.ಎಸ್. ಶಾಂತಕುಮಾರಿ, D/o ಶ್ರೀ ಕೆ. ವಿ. ರುದ್ರೇಶಯ್ಯ
ಅಮರ ಜ್ಯೋತಿ ನಗರ, ವಿಜಯನಗರ, ಬೆಂಗಳೂರು - 40

1363 ಶ್ರೀ ಪಿ. ನಾಗರಾಜ್, S/o ಶ್ರೀ ಪುಟ್ಟಚನ್ನಯ್ಯ,
ಜಯನಗರ, ಬೆಂಗಳೂರು – 11.

1364 ಶ್ರೀ ಜಿ. ರಾಜಶೇಖರಯ್ಯ, ವೆಂಕಟಪ್ಪ ಗಾರ್ಡನ್,
ಜಯನಗರ, ಬೆಂಗಳೂರು – 82

1365 ಶ್ರೀ ಚನ್ನಬಸವಯ್ಯ, ಶ್ರೀ ಬಸವೇಶ್ವರ ನಗರ, ಬೆಂಗಳೂರು – 79

1366 ಶ್ರೀ ಕೆ ಬಿ. ಶಿವಗಂಗಣ್ಣ, ನಾಗರಹಳ್ಳಿ,
ಬಸವೇಶ್ವರ ನಗರ, ಬೆಂಗಳೂರು - 79

1367 ಶ್ರೀ ಹೆಚ್.ಎಸ್. ಶಿವರುದ್ರಯ್ಯ, ಶಿಕ್ಷಕರು, ಪ್ರಸನ್ನಹಳ್ಳಿ,
ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.

1368 ಶ್ರೀ ಬಸವರಾಜಪ್ಪ, ಲಕ್ಷ್ಮೀಪುರ, ಬೆಂಗಳೂರು ಉತ್ತರ ತಾಲ್ಲೂಕು

1369 ಶ್ರೀ ಕೆ.ಪಿ. ಚಂದ್ರಶೇಖರಯ್ಯ, ಶಿಕ್ಷಕರು, ಕವರನಹಳ್ಳಿ,
ಬೆಂಗಳೂರು ಉತ್ತರ ತಾಲ್ಲೂಕು.

1370 ಶ್ರೀ ಕೆ. ವೀರಭದ್ರಯ್ಯ, ರೇಷ್ಮೆ ಗ್ರೈನೇಜ್, ದೇವನಹಳ್ಳಿ, ಬೆಂಗಳೂರು ಜಿಲ್ಲೆ.

1371 ಶ್ರೀ ಬಿ. ಎಸ್. ಸೋಮಶೇಖರಯ್ಯ, ಶಿಕ್ಷಕರು, ಸಿದ್ಧಗಂಗಾ ಪ್ರೌಢಶಾಲೆ,
ದೊಡ್ಡಗುಣಿ, ಗುಬ್ಬಿ ತಾಲ್ಲೂಕು, ತುಮಕೂರು ಜಿಲ್ಲೆ.

1372 ಶ್ರೀಮತಿ ಗೌರಮ್ಮ, W/o ಚಂದ್ರಣ್ಣ, ಶಿರಗನಹಳ್ಳಿ,
ಮಾಗಡಿ ತಾಲ್ಲೂಕು, ಬೆಂಗಳೂರು ಜಿಲ್ಲೆ.

(ಮುಂದುವರಿಯುತ್ತದೆ)

# ಸಿದ್ಧಗಂಗಾ

ಸಂಪುಟ – 27. ಸಂಚಿಕೆ – 11. ನವಂಬರ್ 1991.

## ಶ್ರೀ ಸಿದ್ಧಗಂಗಾ ಗುರುಕರುಣ ತ್ರಿವಿಧಿ.

ಹಾಲು ಹಾಲಾಹಲವ ಸಮಭಾವದಿ ನೀಸವಿದೆ
ಲಿಂಗಜಂಗಮ ಲೀಲೆ ನಡೆಸಿದೆ। ನನ್ನತಂದೆ
ಸಿದ್ಧಗಂಗಾ ಗುರುವೆ ಕೃಪೆಯಾಗು॥

❀ ❀ ❀

ಬೇಕು - ಬೇಡಗಳೆಲ್ಲ ಸಮರೂಪ ತವಪದಕೆ
ನಾಕ - ನರಕಗಳೆಂಬ ಸುಳಿವಿಲ್ಲ। ನನ್ನತಂದೆ
ಸಿದ್ಧಗಂಗಾ ಗುರುವೆ ಕೃಪೆಯಾಗು॥

❀ ❀ ❀

ನಾಮರೂಪ ಕ್ರೀ ಕಳಾಪಾತೀತ ಗುರುವೆ
ವ್ಯೋಮ ಮೂರುತಿ ದಿವ್ಯತೇಜವೆ। ನನ್ನತಂದೆ
ಸಿದ್ಧಗಂಗಾ ಗುರುವೆ ಕೃಪೆಯಾಗು॥

— ಹೆಚ್. ವಿ. ವೀರಭದ್ರಯ್ಯ.

| ಲೇಖನ | ಲೇಖಕರು | ಪುಟ |
|---|---|---|
| * ಶ್ರೀವಾಣಿ | | 5 |
| * ಶ್ರೀ ಸಿದ್ಧಲಿಂಗೇಶ್ವರ ವಚನ | | 8 |
| * ಸಂಪಾದಕೀಯ | | 9 |
| * ಬಸವತತ್ತ್ವ ರತ್ನಾಕರ-7 | ಮೋಟಗಿ ಮಲ್ಲಿಕಾರ್ಜುನ | 11 |
| * ವಿಶ್ವಶಾಂತಿಗೆ ಭಾರತದ ಕೊಡುಗೆ | ಎಂ.ಬಿ. ಸದಾಶಿವಯ್ಯ | 17 |
| * ಬಸವಣ್ಣನವರ ದೃಷ್ಟಿಯಲ್ಲಿ ಸಮಾನತೆ | | 23 |
| * ಇತಿಹಾಸಕಾರ ಪಾದ್ರಿ ಹೆರಾಸ್ | ಎಂ.ಎ. ಊರ್ಮಿಳಾದೇವಿ | 26 |
| * ಪ್ರಕಾಂಡ ಪಂಡಿತ ಪ್ರೊ॥ ಕೆ. ವೆಂಕಟರಾಮಪ್ಪ | ಕವಿತಾಕೃಷ್ಣ | 28 |
| * ವಿಜ್ಞಾನ ಮತ್ತು ಆಧ್ಯಾತ್ಮ | ಎಚ್. ಎಸ್. ನರಸಿಂಹಜೀಯರ್ | 30 |
| * ಅಶಾಶ್ವತಾನಿ ಜಗತ್ | ರಾಜೇಂದ್ರಶಿಶು | 32 |
| * ಕ್ರೋಮಿಯಂ ಬಗ್ಗೆ ನೀವೆಷ್ಟು ಬಲ್ಲಿರಿ ? | ಪ. ರಾಮಕೃಷ್ಣ ಶಾಸ್ತ್ರಿ | 35 |
| * ವಿದ್ಯಾರ್ಥಿ ಜೀವನದ ಬೆಳಕು ಸರಣಿ-೧೧ | ಬಿ. ಎಸ್. ಕೃಷ್ಣಮೂರ್ತಿ | 38 |
| * ಕನ್ನಡ ಜನತೆಗೆ ಕನ್ನಡವೇಗತಿ | ಜೆ.ಬಿ. ಲಿಂಗರಾಜು | 40 |
| * ಒಂದು ಪತ್ರ | ಗೋವಿಂದರಾಜು | 41 |
| * ಏನಂತೀರಿ ? ಮಹಾತ್ಮ – ದುರಾತ್ಮ | ರಸಿಕ ಪುತ್ತಿಗೆ | 43 |
| * ಮೈಸೂರರಮನೆ | ಜೆ.ಬಿ. ಲಿಂಗರಾಜು | 45 |
| * ಕ್ಷೇತ್ರವಾರ್ತೆ | ಹೆಚ್. ಬಿ. ಗಂಗಾಧರಯ್ಯ. | 48 |

# ಶ್ರೀ ವಾಣಿ (ಲೇಖನ ಚಿಹ್ನೆಗಳು)

ಭಾಷೆಯ ಕಲಿಕೆಯಲ್ಲಿ ಹಲವಾರು ಹಂತಗಳುಂಟು. ಕಾಗುಣಿತ ಜ್ಞಾನ, ಉಚ್ಚಾರಣಾವಿಧಾನ, ಲೇಖನ ಚಿಹ್ನೆಗಳ ಬಳಕೆ ಮುಂತಾಗಿ. ಈ ಕ್ರಮ ಬದ್ಧತೆಗಳನ್ನು ಪ್ರಾಥಮಿಕ, ಮಾಧ್ಯಮಿಕ, ಪ್ರೌಢ ಹಾಗೂ ಕಾಲೇಜು ವಿದ್ಯಾಭ್ಯಾಸದ ಅವಧಿಯಲ್ಲಿ ಕಲಿಸಲಾಗುತ್ತದೆ. ಭಾಷೆಯನ್ನು ಕಲಿಯುವುದೆಂದರೆ ಸುಂದರವಾದ ಗೃಹನಿರ್ಮಾಣ ಮಾಡಿದಂತೆ. ಒಂದಕ್ಕೊಂದು ವ್ಯತ್ಯಯವಾಗಬಾರದು. ಹಾಗಾದರೆ ಅನರ್ಥ, ಅಪಾರ್ಥ, ಅನಾಹುತಗಳಿಗೇ ಆಹ್ವಾನ ನೀಡಿದಂತಾಗುತ್ತದೆ. ಭಾಷಾ ಕಲಿಕೆಯಲ್ಲಿ Punctuation ಅಥವಾ ಲೇಖನಚಿಹ್ನೆಗಳ ಪಾತ್ರ ಮಹತ್ವಪೂರ್ಣವಾದುದು. ಒಮ್ಮೆ ನಡೆದ ಪ್ರಸಂಗ ನೆನಪಾಗುಗುತ್ತದೆ. ಶಾಲೆಯೊಂದರ ತನಿಖೆಗೆ ಒಬ್ಬ ಇನ್‌ಸ್ಪೆಕ್ಟರ್ ಹೋಗುತ್ತಾರೆ. ಏಳನಯ ತರಗತಿಗೆ ಇಂಗ್ಲಿಷ್ ಭಾಷೆಯನ್ನು ಬೋಧಿಸುತ್ತಿರುತ್ತಾರೆ. ಮಧ್ಯೆ ಪ್ರವೇಶಿಸಿದ ಇನ್‌ಸ್ಪೆಕ್ಟರ್‌ರವರು ವಿದ್ಯಾರ್ಥಿಗಳಿಗೆ ಲೇಖನ ಚಿಹ್ನೆಗಳನ್ನು ಬಳಸುವ ಕ್ರಮವನ್ನು ತಿಳಿಸಲು ಪ್ರಾರಂಭಿಸುತ್ತಾರೆ. ಅಧ್ಯಾಪಕರು ಬೇಸರಗೊಂಡು ಇನ್‌ಸ್ಪೆಕ್ಟರಿಗೆ ಕೇಳಿಸದಂತೆ ಮೆಲು ದನಿಯಲ್ಲಿ The Teacher says, Inspector is a fool ಎನ್ನುತ್ತಾರೆ. ಎಷ್ಟೇ ಮೆಲುದನಿಯಲ್ಲಿ ಅಧ್ಯಾಪಕರು ಹೇಳಿಕೊಂಡರೂ ಅದು ಇನ್‌ಸ್ಪೆಕ್ಟರಿಗೆ ಕೇಳಿಸಿಯೇ ಬಿಡುತ್ತದೆ. ತಕ್ಷಣವೇ ಅವರು The Teacher, says the Inspector is a fool ಎಂದು ಬಿಡುತ್ತಾರೆ. ಇಲ್ಲಿ ಒಂದು ಅರ್ಧ ವಿರಾಮವನ್ನು ಬಳಸುವುದರಿಂದ ಆಗಿರುವ ವ್ಯತ್ಯಾಸವನ್ನು ತಿಳಿಯಬಹುದಲ್ಲವೆ ? ಇನ್ನೊಮ್ಮೆ ನಡೆದ ಪ್ರಸಂಗ ಒಬ್ಬ ಸುಪ್ರಸಿದ್ಧ ತತ್ವಜ್ಞಾನಿಯನ್ನು ವಿದಾರ್ಥಿಯೊಬ್ಬ ಸಂಧಿಸಿದಾಗ ಹೀಗೆ ಹೇಳಿದನಂತೆ God is no where ಎಂಬುದಾಗಿ. ತಕ್ಷಣವೇ ಆ ತತ್ವಜ್ಞಾನಿ ಅದೇ ಮಾತನ್ನು ಒಂದು ಕಾಗದದ ಮೇಲೆ ಬರೆದು ಕೊಡುವಂತೆ ಕೇಳಿದರು. ವಿದ್ಯಾರ್ಥಿ ಬರೆದು ಕೊಟ್ಟ. ಆ ತತ್ವಜ್ಞಾನಿ ಕಾಗದ ಮೇಲಿದ್ದ ಆವಾಕ್ಯದಲ್ಲಿ ಒಂದು ಸಣ್ಣ ತಿದ್ದು ಪಡಿಮಾಡಿ ದೇವರು ಈಗ ಇಲ್ಲಿದ್ದಾನೆ ಎಂಬುದನ್ನು ತೋರಿಸಿಕೊಟ್ಟರಂತೆ God is now here ಎಂಬುದಾಗಿ. ನೀವು ಕೇಳಿರಬಹುದು ನ್ಯಾಯಾಧೀಶನೊಬ್ಬ "Kill him not save him" ಎಂಬ ತೀರ್ಪು ನೀಡಿದ್ದನ್ನು ಅಪರಾಧಿಯಪರವಾಗಿ ವಾದಿಸಿದ ನ್ಯಾಯವಾದಿ ಆ ವಾಕ್ಯದಲ್ಲಿ ಒಂದು ಅರ್ಧ ವಿರಾಮವಿಲ್ಲದ್ದನ್ನೂ ಗಮನಿಸಿ ತನ್ನಕಕ್ಷಿದಾರನಿಗೆ ಅನುಕೂಲಕರವಾಗುವಂತೆ ಅರ್ಧ ವಿರಾಮವನ್ನು ಬಳಸಿ ಆಗಬಹುದಾಗಿದ್ದ ಮರಣ ದಂಡನೆಯನ್ನು ತಪ್ಪಿಸಿದನೆಂಬುದನ್ನು "Kill him not, save him" ಅರ್ಧವಿರಾಮವೊಂದು ಪ್ರಾಣಉಳಿಸಿತಲ್ಲವೆ? ಹೀಗೆ ಭಾಷಾ ಕಲಿಕೆಯಲ್ಲಿ ಲೇಖನ ಚಿಹ್ನೆಗಳಿಗೆ ಮಹತ್ವಸ್ಥಾನವಿದೆ. ಇತ್ತೀಚೆಗೆ ಲೇಖನ ಚಿಹ್ನೆಗಳನ್ನು ಹೇಗೆ ಬಳಸಬೇಕೆಂಬುದನ್ನು ಕಲಿಸುತ್ತಿರವುದು ಕಾಣಬರುತ್ತಿಲ್ಲ ಇದೊಂದು ವ್ಯಸನಕರ ಸಂಗತಿ.

[ 31-10-91 ರಂದು ಖಾಸಗಿ ಮಾತು ಕಥೆಗಳ ಮಧ್ಯೆ ಮೂಡಿ ಬಂದ ನಿರೂಪಣೆ. ]

## ಸಿದ್ಧಗಂಗಾ ಮಾಸ ಪತ್ರಿಕೆ
ಶ್ರೀ ಸಿದ್ಧಗಂಗಾ ಮಠ-572104
ತುಮಕೂರು ಜಿಲ್ಲೆ

ಪ್ರಧಾನ ಸಂಪಾದಕರು
ಪ್ರೊ॥ ಚನ್ನಪ್ಪ ಎರೇಸೀಮೆ

* * *

ಸಂಪಾದಕರು
ಹೆಚ್. ವಿ. ವೀರಭದ್ರಯ್ಯ

* * *

ಸಹ ಸಂಪಾದಕರು
ಬಿ. ವೀರಭದ್ರಯ್ಯ
ಪಿ. ಎನ್. ಚಂದ್ರಶೇಖರಯ್ಯ

* * *

ಜಾಹೀರಾತು ವಿಭಾಗ
ಎಂ. ರೇಣುಕಾರಾಧ್ಯ

* * *

ವಿತರಣೆ ವಿಭಾಗ
ಆರ್. ಎಸ್. ಮಲ್ಲೇಶಪ್ಪ

* * *

ಪ್ರಕಾಶಕರು
ಹೆಚ್. ಬಿ. ಗಂಗಾಧರಯ್ಯ
ಹಳೆಯ ವಿದ್ಯಾರ್ಥಿ ಸಂಘದ ಪರವಾಗಿ

* * *

ಮುದ್ರಕರು
ಶ್ರೀ ಸಿದ್ಧಲಿಂಗೇಶ್ವರಸ್ವಾಮಿ
ಮುದ್ರಣಾಲಯ

* * *

ಪ್ರಕಟಣೆಯ ಸ್ಥಳ
ಶ್ರೀ ಸಿದ್ಧಗಂಗಾಕ್ಷೇತ್ರ

### ಚಂದಾ ವಿವರ
ವಾರ್ಷಿಕ ಚಂದಾ 25-00ರೂ
ಆಜೀವ ಸದಸ್ಯತ್ವ 250-00 ರೂ

## ಲೇಖಕರಲ್ಲಿ ಮನವಿ

'ಸಿದ್ಧಗಂಗಾ' ಶ್ರೀ ಸಿದ್ಧಗಂಗಾ ಮಠದಿಂದ ಪ್ರಕಟವಾಗುತ್ತಿರುವ ಮಾಸ ಪತ್ರಿಕೆ. ಶ್ರೀ ಮಠದ ಹಳೆಯ ವಿದ್ಯಾರ್ಥಿ ಸಂಘದ ಹೆಮ್ಮೆಯ ಸೇವಾ ಪುರವಣಿ. ಮೇಲಾಗಿ ಶ್ರೀ ಮಠದ ಮುಖವಾಣಿ. ಪೂಜ್ಯ ಶ್ರೀ ಶ್ರೀ ಡಾ॥ ಶಿವಕುಮಾರ ಮಹಾಸ್ವಾಮಿಗಳವರ ದಿವ್ಯ ಮಾರ್ಗದರ್ಶನದಲ್ಲಿ ಮುನ್ನಡೆದಿರುವ ಪತ್ರಿಕೆ. ತ್ರಿವಿಧ ದಾಸೋಹ ಸೇವಾ ತತ್ಪರತೆಯಿಂದ ಹೆಜ್ಜೆ. ಹಾಕುತ್ತಿದೆ. ಈ ಧ್ಯೇಯ ಸಾಧನೆಗಾಗಿ ನಾಡಿನ ಗಣ್ಯ ಲೇಖಕರಿಂದ ಸಾಹಿತ್ಯ, ಸಂಸ್ಕೃತಿ, ಧರ್ಮ, ವಿಜ್ಞಾನ, ಶಿಕ್ಷಣ. ಇತಿಹಾಸ, ವೈಚಾರಿಕ, ಚಿಂತನ ಮುಂತಾದ ಲೇಖನಗಳನ್ನು ಸ್ವಾಗತಿಸುತ್ತದೆ. ಅಸ್ವೀಕೃತ ಲೇಖನಗಳನ್ನು ಪಡೆಯಲು ಸಾಕಷ್ಟು ಅಂಚೆಸ್ಟಾಂಪುಗಳನ್ನು ಲಗತ್ತಿಸಿರಬೇಕು. ಲೇಖನಗಳಲ್ಲಿ ಸೂಕ್ತ ಬದಲಾವಣೆ ಮಾಡಿಕೊಳ್ಳುವ ಅಧಿಕಾರ ಸಂಪಾದಕರಿಗಿದೆ. ಅನುವಾದ, ರೂಪಾಂತರ ಲೇಖನಗಳಿಗೆ ಮೂಲ ಕೃತಿಕಾರರ ಅನುಮತಿ ಪಡೆದಿರಬೇಕು. ಸ್ವೀಕೃತ ಲೇಖನಗಳಿಗೆ ಸೂಕ್ತ ಸಂಭಾವನೆ ಕೊಡಲಾಗುವುದು.

"ಸಂಪಾದಕರು"
'ಸಿದ್ಧಗಂಗಾ' ಕನ್ನಡ ಮಾಸಪತ್ರಿಕೆ
ಶ್ರೀ ಸಿದ್ಧಗಂಗಾ ಕ್ಷೇತ್ರ-572104
ತುಮಕೂರು ಜಿಲ್ಲೆ.

ಇವರಿಗೆ ಕಳುಹಿಸಿಕೊಡಬೇಕಾಗಿ ಪ್ರಾರ್ಥನೆ

# ಶ್ರೀ ಸಿದ್ಧಲಿಂಗೇಶ್ವರ ವಚನ



ಹಾಳು ಕೇರಿಯಲ್ಲಿ ಒಂದು ಹಂದಿ ನಾಯಿಯು ಮೈಥುನವ
ಮಾಡುವುದನು ಕಂಡು

ಆಕಾಶದಲ್ಲಾಡುವ ಅರಗಿಳಿ ನಗುತಿದೆ ನೋಡಾ

ಆದುತಾಡುತ ಬಂದು ಅರಗಿಳಿ ಮಾರ್ಜಾಲವ ನುಂಗಲು

ಮಾಯಾವಿಲಾಸವಡಗಿತ್ತು ನೋಡಾ

ಮಹಾಲಿಂಗ ಗುರು ಶಿವಸಿದ್ದೇಶ್ವರ ಪ್ರಭುವೇ.

ಚಿತ್ಕರಣಗಳು ಸಂಚರಿಸದ ಭೂತ ಕಾಯವೆಂಬ ಹಾಳು ಕೇರಿಯಲ್ಲಿ ಅವಿದ್ಯಾ ಶಕ್ತಿಯು ಕರಣೇಂದ್ರಿಯಗಳೊಡನೆ ಕೂಡಿವರ್ತಿಸುವುದನ್ನು ಚಿದಾಕಾಶದಲ್ಲಾಡುವ ಪರಮಾತ್ಮ ಲಿಂಗ ಸ್ವರೂಪವಾದ ಶರಣನು ಕಂಡು ಇದೆತ್ತಣ ಸಂಬಂಧವೆಂದು ಗಹಗಹಿಸಿ ನಗುತ್ತಿದ್ದನು. ಆ ಶರಣನು ಸತ್ಕ್ರಿಯೆ ಸಮ್ಯಕ್ಜ್ಞಾನಗಳಿಂದ ಪ್ರವರ್ತಿಸಿ ಭೇದಜ್ಞಾನವ ನಷ್ಟಮಾಡಲು, ಅವಿದ್ಯಾಕಾರ್ಯವು ನಿವೃತ್ತಿಯಾಗಿರ್ಪುದು.

# ಸಂಪಾದಕೀಯ

ಕರುಣ ಬಂದರೆ ಕಾಯೋ ಮರಣ ಬಂದರೆ ಒಯ್ಯೋ
ಕರುಣಿ ಕಲ್ಯಾಣ ಬಸವಣ್ಣ । ಕೂಡಲ ಸಂಗ
ಕಡೆತನಕ ಕಾಯೋ ಅಭಿಮಾನ ॥

ಕನ್ನಡ ನಾಡಿನ ಈ ಜನಪದ ಮುಕ್ತಕವನ್ನು ಗಮನಿಸಿದಾಗ ಕನ್ನಡ ರಾಜ್ಯೋತ್ಸವವನ್ನು ಆಚರಿಸುತ್ತಿರುವ ಕನ್ನಡಿಗರಲ್ಲಿ ಅಭಿಮಾನವಿದೆಯೇ ಎಂದೆನಿಸುತ್ತದೆ. ಸ್ವಾಭಿಮಾನಧನರಾಗಿ ಕನ್ನಡನೆಲ ಜಲಗಳಿಗಾಗಿ ಹೋರಾಟ ಮಾಡುವ ಕೆಚ್ಚು ಇನ್ನೂ ಏಕೆ ಪ್ರಜ್ವಲಿಸುತ್ತಿಲ್ಲ ಎನ್ನಬೇಕಾಗಿದೆ. ಆಕರ್ಷಕ ಘೋಷಣೆಗಳಿಂದ ಕನ್ನಡದ ಉದ್ಧಾರವಾಗುತ್ತದೆಯೇ? ಕನ್ನಡವನ್ನು ಆಡಳಿತ ಭಾಷೆಯಾಗಿ ಅನುಷ್ಠಾನಕ್ಕೆ ತರುವಲ್ಲಿ ನೂರಾರು ಆದೇಶಗಳು ಮಾತ್ರ ಸಾಕೆ ? ಅವುಗಳ ಪಾಡೇನಾಗಿದೆ ಇಂದು ? ಆಡಳಿತ ಸೂತ್ರಗಳನ್ನು ಹಿಡಿದು ಕೂತಿರುವ ಅಧಿಕಾರಿಗಳು ಕನ್ನಡಿಗರಾಗದ ಹೊರತು, ಕನ್ನಡಾಭಿಮಾನಿಗಳಾಗದ ಹೊರತು ಇಂಗ್ಲೀಷ್ ವ್ಯಾಮೋಹದಿಂದ ಮುಕ್ತರಾಗದಹೊರತು, "ಕನ್ನಡ" ಸರ್ಕಾರದ ವ್ಯವಹಾರದಲ್ಲಿ ತನ್ಮಯವಾಗದ ಹೊರತು ರಾಜ್ಯೋತ್ಸವಕ್ಕೆ ಅರ್ಥವೆಲ್ಲಿ ? ಕನ್ನಡ ವಿಶ್ವವಿದ್ಯಾನಿಲಯ, ಕನ್ನಡ ಭವನ ನಿರ್ಮಾಣ, ಕನ್ನಡ ಮಾದರಿ ಶಾಲೆಗಳ ಪ್ರಾರಂಭ, ಕನ್ನಡ ಪುಸ್ತಕ ಪ್ರಾಧಿಕಾರ ಇವೆಲ್ಲ ಸ್ವಾಗತಾರ್ಹ ಕ್ರಮಗಳೇ, ಅದಕ್ಕಿಂತಲೂ ಹೆಚ್ಚು ಕನ್ನಡನಾಡಿನ ಆಡಳಿತ ವ್ಯವಹಾರ ಕನ್ನಡದಲ್ಲಿಯೇ ನಡೆಯಬೇಕೆಂಬ ಛಲ ಹಾಗೂ ನಿಷ್ಠೆ. ಕೇವಲ ಯೋಜನೆಗಳಪ್ರಾರಂಭದಿಂದ ಕನ್ನಡಉದ್ಧಾರವಾಗದು. ಮೊನ್ನೆ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಜಿ. ಎಸ್. ಸಿದ್ಧಲಿಂಗಯ್ಯನವರು ಹೇಳಿರುವಂತೆ ಕನ್ನಡವನ್ನು ಅನುಷ್ಠಾನಕ್ಕೆ ತರುವ ಅಧಿಕಾರಿಗಳ ಮನಸ್ಸು ದೊಡ್ಡದಾಗಿರಬೇಕು ಎಂಬ ಮಾತು ಗಮನಾರ್ಹ. ಆಡಳಿತ ನಡೆಸುತ್ತಿರುವ ನಾಯಕರು ಈ ಮಾತನ್ನು ಗಂಭೀರವಾಗಿ ಗಮನಿಸಬೇಕು. ತಾವು ಹೊರಡಿಸಿದ ಆದೇಶ ಪಾಲನೆಗೆಬರಲಿಲ್ಲವೆಂದರೆ ಏನರ್ಥ? ಅದಕ್ಕಿರುವ ಅಡ್ಡಿ ಯಾವುದು? ಪರಿಹಾರಬೇಕು ಎಂಬುದಾಗಿ ಸಚಿವರು ತಮ್ಮ ಕಡೆಗೆ ಬರುವ ಕಾಗದ ಪತ್ರಗಳಿಗೆ ವಿಶೇಷ ಸಂದರ್ಭಗಳನ್ನು ಹೊರತುಪಡಿಸಿ ಕನ್ನಡದಲ್ಲಿ

ಟಿಪ್ಪಣಿಹಾಕಬೇಕು. ಕನ್ನಡದಲ್ಲಿ ಬರೆದ ಪತ್ರಗಳಿಗೆ ಸ್ಪಷ್ಟವಾಗಿ ಕನ್ನಡದಲ್ಲಿ ಬರೆದು ತರುವಂತೆ ತಿಳಿಸಬೇಕು. ಶ್ರೀ ಪಾಟೀಲಪುಟ್ಟಪ್ಪನವರು ಕಾವಲುಸಮಿತಿ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ನಡೆಯುತ್ತಿದ್ದ ಕನ್ನಡಬಳಕೆ ಇಳಿಮುಖವಾಗಲು ಕಾರಣಗಳೇನು? ಪರಾಮರ್ಶಿಸಬೇಕು. ಬೆಂಗಳೂರಿನಲ್ಲಿ ಕನ್ನಡ ಭಾಷಿಕರು ಅಲ್ಪ ಸಂಖ್ಯಾತರಾಗುತ್ತಿರುವ ಬಗೆಗೆ ಅನ್ಯರಾಜ್ಯಗಳಿಂದ ಬರುತ್ತಿರುವ ವಲಸೆ ಜನಪ್ರವಾಹವೇ ಕಾರಣವೆಂಬುದು ಸರ್ಕಾರಕ್ಕೆ ಗೊತ್ತಿಲ್ಲದಿರುವ ವಿಚಾರವೇನಲ್ಲ. ಇದು ಹೀಗೆ ಮುಂದುವರೆದರೆ ಬೆಂಗಳೂರು ಕರ್ನಾಟಕದ ರಾಜಧಾನಿಯಾಗಿ ಕನ್ನಡ ನಗರವಾಗಿ ಉಳಿದೀತೆ ಎಂಬ ಆತಂಕ ಕನ್ನಡಾಭಿಮಾನಿಗಳನ್ನು ಕಾಡುತ್ತಿರುವ ಸಮಸ್ಯೆ. ಆದಕ್ಕಾಗಿ ಆದೆಷ್ಟು ಪ್ರಜ್ಞಾವಂತರು ಇಂದುಸಂಘ ಸಂಸ್ಥೆಗಳ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸುತ್ತಿರುವುದು ಅಂಥ ಮನವಿಗಳನ್ನು ಸರ್ಕಾರ ತೀವ್ರವಾಗಿ ಪರಿಗಣಿಸಬೇಕು. ಏಕೆಂದರೆ ಕನ್ನಡ ಇದ್ದರೆ ಕನ್ನಡಿಗರಿದ್ದರೆ ತಾನೇ ಕನ್ನಡ ಸರ್ಕಾರ. ಅಂಥಅಭಿಮಾನ ಕನ್ನಡ ಭುವನೇಶ್ವರಿ ಎಲ್ಲರಿಗೂ ದಯಪಾಲಿಸಲೆಂದು 'ಸಿದ್ಧಗಂಗಾ' ಹಾರೈಸುತ್ತದೆ.

---

ಕರ್ಣದ ಸೂತಕ ಹೋಯಿತ್ತು ಸದ್ಗುರು ವಚನದಿಂದ ;
ಕಣ್‌ಗಳ ಸೂತಕ ಹೋಯಿತ್ತು ಸದ್‌ಭಕ್ತರ ಕಂಡೆನಾಗಿ ;
ಕಾಯದ ಸೂತಕ ಹೋಯಿತ್ತು ನಿಮ್ಮ ಚರಣವ ಮುಟ್ಟಿದೆನಾಗಿ ;
ನಾನಾ ಸೂತಕ ಹೋಯಿತ್ತು ನಿಮ್ಮ ಶರಣರ ಅನುಭವವ ಕೇಳಿದೆನಾಗಿ ;
ಕೂಡಲ ಸಂಗಮದೇವಯ್ಯ.
ಎನ್ನ ನಾನಾ ಸೂತಕ ಹೋಯಿತ್ತು ನೀವಿಲ್ಲದನ್ಯವಿಲ್ಲವೆಂದಾಗಿ.

—ಬಸವಣ್ಣನವರು.

# ಶ್ರೀಮದುದ್ದಾನೇಶ್ವರ ಶತಕಂ

ಜೆ. ವಿ. ರಾಜಶೇಖರಯ್ಯ, ನೆಲಮಂಗಲ.

ಹೊಗಲು ಜಾರಾಲಯವಕಾಮವು
ಹೊಗಲು ದೇವಾಲಯವ ಪ್ರೇಮವು
ಬಗೆಗೆತೋರುವುದಾಗಿ ದುಷ್ಟಕೃತಘ್ನಸಂಘದೊಳೂ।
ಹೊಗದೆ ಸದ್ಗುಣ ಶುಚಿಕೃತಜ್ಞತೆ
ಬಗೆದು ಸನ್ಮಾರ್ಗದೊಳು ನಡೆಯಲು
ನಗುತಪಾಲಿಪ ಜೀಯ ಉದ್ದಾನೇಶದಯವಾಗೋ॥

ದುಷ್ಟಕಾರ್ಯವ ಮಾಳ್ಪಶಕ್ತಿಯೆ
ಶಿಷ್ಟಕಾರ್ಯವನೆಸಗಬಲ್ಲುದು
ದುಷ್ಟಕಾರ್ಯದೆ ಪಶುಕೆಸುಕೃತದೆ ದೇವತಾಜನ್ಮಾ।
ಸ್ಪಷ್ಟತರ ಸುಖದುಃಖಗಳೆಫಲ
ವಿಷ್ಟಕೂರಹ ವಾಸಕಾರಣ
ಶಿಷ್ಟರೊಳಗಿರಿಸುತ್ತೆ ಉದ್ದಾನೇಶದಯವಾಗೋ॥

ತನವು ಶಾಶ್ವತವಲ್ಲವಾರಿಗು
ಧನಕನಕ ಸಿರಿಪಶುವುಮನೆಯೊಳು
ಮನದ ಸತಿಸುತ ಬಳಗಮಸಣದೆನೆಲದಲ್ಲಿಲ್ಲೇ
ಘನದಿ ನಂಬಿದ ತನುವುಗುಳಿಯೊಳು
ಮನದ ಪುಣ್ಯವು ಪಾಪಜತೆಯೊಳು
ಚಿನುಮಯಾತ್ಮಕಜೀಯ ಉದ್ದಾನೇಶದಯವಾಗೋ॥

ಪಾಪದಾ ಬಿರುಗಾಳಿಯಿಂ ಭವ
ತಾಪದಾನರ ಕಾಬ್ಧಿಸೇರಿದೆ
ತಾಪಸುಳಿದಾರಿದ್ರ್ಯಮಡುಜನಿಮರಣದಲೆಯೊಳಿಹೇ।
ಕೋಪಕ್ಷುತ್ತೃಷ್ಣೆಮೊಸಳೆ ಬಾಧೆವಿ
ಕಲ್ಪದಿಂ ಗತಿಗಾಣದಿದೆಂಬ
ದಾಪದುದ್ಧರ ಜೀಯಉದ್ದಾನೇಶದಯವಾಗೋ॥

(ಮುಂದುವರಿಯುವುದು)

# ಬಸವ ತತ್ತ್ವ ರತ್ನಾಕರ ....7

## (ವಚನಕಾವ್ಯಸುಧಾಸಾಗರ)

ಶ್ರೀ ಮೋಟಗಿ ಮಲ್ಲಿಕಾರ್ಜುನ, 'ಕನ್ನಡ ಕವಿ ಕಾಳಿದಾಸ', ಅಥಣಿ, ಬೆಳಗಾವಿ ಜಿಲ್ಲೆ.

### ದಿವ್ಯ ಸಾಕ್ಷಾತ್ಕಾರ [66]

"ಲಿಂಗಕ್ಕೆ ಲಿಂಗ ಸಂಬಂಧವಾಗಿ
ಆತ್ಮಂಗೆ ಅರಿವು ಸಂಬಂಧವಾಗಿ
ಅರಿವಿಂಗೆ ನಿಶ್ಚಯ ಸಂಬಂಧವಾಗಿ
ನಿಶ್ಚಯ ನಿಜದಲ್ಲಿ ನಿಂದಿತ್ತಾಗಿ
ಇಷ್ಟಲಿಂಗದ ತೃಷ್ಣೆ ಅಡಗಿತ್ತು.
ಶ್ರೀಶೈಲ ಮಲ್ಲಿಕಾರ್ಜುನ ಲಿಂಗವನರಿಯಲಾಡಿ.

### ಆತ್ಮಸಾಹಿತ್ಯ [67]

"ಅನುಭಾವದ ಅಣಿಮುತ್ತುಗಳೆನೆ ಹೊಳೆಯುತ್ತಿಪ್ಪ
ಬಸವಾದಿಪ್ರಮಥರಾ ಅಗಣಿತ ವಚನಗಳಿವು
ಜನ ಮನ ಭಾವ ಪರಿವರ್ತನೆಗೆ, ಸಮಾಜ ಸುಧಾರಣೆಗೆ
ಕಾರಣವೆನಿಸಿದುವು ನೋಡಾ.
ಲಿಂಗಭಕ್ತಿ ಜ್ಞಾನ ವೈರಾಗ್ಯ ಕ್ರಿಯಾಚರಣೆಗೆ ಅನುಕೂಲಮಪ್ಪ
ಬೋಧನಾತ್ಮಕ ದಿವ್ಯಾಮೃತ ವಾಣಿಗಳಾದುವು ನೋಡಾ.
ಲಿಂಗಾಂಗ ಸಾಮರಸ್ಯಾನುಭವಕ್ಕೆ ಈವಚನ ಕಾವ್ಯರತ್ನಗಳು
ಪ್ರತ್ಯಕ್ಷ ಪರಮಪ್ರಮಾಣವಾಣಿಗಳೆನಿಸಿದುವು ನೋಡಾ
ಇಂತೀಶಿವಶರಣರ ಆತ್ಮಸಾಹಿತ್ಯವಿಂದು 'ವಿಶ್ವಧರ್ಮಸಾಹಿತ್ಯ' ವೆನಿಸಿ
ಬೆಳಗುತಿಪ್ಪುದು ಕಾಣಾ, ಶ್ರೀಶೈಲಮಲ್ಲಿಕಾರ್ಜುನ !

ವಚನ ವಾಙ್ಮಯ [-8]

"ವೇದಾಗವೋಪನಿಷತ್ತಂಗಳಿಗೂ ಮಿಗಿಲೆನಿಸಿರ್ದ
ಈ ವಚನವಾಙ್ಮಯವಿಂದು ಪೃಥ್ವಿಯಪ್ರಾಣವಾಗಿ ಪರಮ
ಸಂಜೀವಿನಿಯಾಗಿ ಮೆರೆಯುತಿಪ್ಪುದು ನೋಡಾ.
ಮಹಾನುಭಾವಿ ಶಿವಶರಣರಾ ವಚನಕಾವ್ಯರತ್ನಗಳಲ್ಲಿನ ಒಂದೊಂದು
ಶಬ್ದಾರ್ಥಂಗಳು ಭೂಮಿ ಆಕಾಶಂಗಳನಿತು
ವ್ಯಾಪಕಾರ್ಥವನೊಳಗೊಂಡಿಪ್ಪವು ನೋಡಾ !
ಇಂತು ಸೃಷ್ಟಿಗೆ ಜೀವಂತ ಆತ್ಮಸಾಹಿತ್ಯ ಸಾಗರವನಿತ್ತು
ಮಹಾಶ್ರೀಯಮದು ಎಮ್ಮ ಶಿವಶರಣರಿಗೆ ಸಂದಿತ್ತುನೋಡಾ !
ಈಬಗೆಯು, ಆ ಬ್ರಹ್ಮಾಂಡಗಳನೆ ಪವಿತ್ರವಾಗಿಸುವ
ಸೋಜ್ವಲವಾದ ದಿವ್ಯಸಂಜೀವಿನಿಯಾದ
ಸ್ವಾನುಭವ ಸಾಹಿತ್ಯ ಸುಧಾ ಸಂಪತ್ತನ್ನು
ಈ ಮೊದಲು ಸೃಷ್ಟಿಗಾರೂ ಕೊಡಲಿಲ್ಲ ನೋಡಾ !
ಇಂತು ಆತ್ಮಸಾಹಿತ್ಯ ಸಾಗರಮಾದ ಈ ವಚನ ವಾಙ್ಮಯದೈಶ್ವರ್ಯ
ಭುವನ ಸೌಭಾಗ್ಯ ಸಂಪದಮೇಣ್‌ಸತ್ಯಶಿವಸೌಂದರ್ಯ
ಕಾಣಾ ! ಶ್ರೀಶೈಲ ಮಲ್ಲಿಕಾರ್ಜುನ ! "

---

ಟೀಪು. **ಸತ್ಯಸಾಕ್ಷಾತ್ಕಾರ (ಕಾವ್ಯಸಂಪದ)**

"ಚಿರಗಭೀರ ಪ್ರಣಿಧಾನ ಕಾಲದಲಿ ಚಿದ್ಘನ ಹೃದಯಾಂತರಾಳದಲಿ
ಪರತರಾನಂದವೇನೊ ! ದಿವ್ಯಶಾಂತಿಸಾಗರವೆ-ಅಲ್ಲಿ !!
ಮಾನಸದಾಚೆಯ ಭಾವಾತೀತದ ನಿರ್ಭರ ಮೌನದಲಿ
ಸಾನುರಾಗದಿ ಸಾಮರಸ್ಯಕೆ ಒಲಿದಿಹ ಶಿವಶಕ್ತಿಯಲಿ
ಲೋಕಲೌಕಿಕ ಧರ್ಮಗಳೆಲ್ಲ ಸಾರಸರ್ವೈಕ್ಯಮಾಗಿರಲು ಮುಕ್ತಿ
ನಾಕನರಕಗಳೆಂಬ ಬಗೆಯಳಿಯೆ ಬೆಳಗೆ ನಿಸರ್ಗಧರ್ಮಜ್ಯೋತಿ "

– ಕನ್ನಡಕವಿಕಾಳಿದಾಸ

## ನಿರಂಜನ ಜಂಗಮ ಪ್ರಭುವ್ಪೋರ್ವನೇ [69]

"ಜಂಗಮ ಜಂಗಮರೆಂದಡೆ ಅಶನಕಾಗಿ ಭಕ್ತರಂಗಳದಲ್ಲಿ
ಕಾಯ್ದುಕೊಂಡಿಪ್ಪ ಆಯ್ಯಗಳೆಲ್ಲ ಜಂಗಮರಪ್ಪರೇನು ಹೇಳಯ್ಯಾ?
ಅಜ್ಞಾನಿ ಅನಾಚಾರಿ ಅಸಂಖ್ಯ ಜಂಗಮರಿರ್ದಡೇನು
ಅವರಿಂದ ಜಗಕೆ ಹಾನಿಯಲ್ಲದೆ ಹಿತವಪ್ಪುದೇನು ಹೇಳಯ್ಯಾ ?
ಷಟ್‌ಸ್ಥಲ ಜ್ಞಾನಚಕ್ರವರ್ತಿ ಚನ್ನಬಸವಣ್ಣ
ತ್ರಿಕಾಲಜ್ಞಾನಿ ಮಹಂತ ಮಹಾನುಭಾವಿ ನೋಡಾ.
ಇಂತಪ್ಪ ಚನ್ನಬಸವಣ್ಣ : ನಿರಂಜನ ಜಂಗಮವೆಂದಡೆ
ಅಲ್ಲಮಪ್ರಭುದೇವರೊಬ್ಬರೆಂದು ಜ್ಞಾನದಿಂದತಿಳಿದುಬಂದಿತ್ತು ಎಂದುದಾಗಿ
ನಿತ್ಯನಿರಂಜನ ಮೂರ್ತಿ ವ್ಯೋಮಕಾಯ ನಿರ್ಮಾಯ !
ನಿಜಜಂಗಮ ಆತ್ಮಜ್ಞಾನಿ ಅಲ್ಲಮ ಪ್ರಭುವ್ಪೋರ್ವನೇ ನೋಡಾ !
ಚತುರ್ದಶಭುವನಂಗಳಲ್ಲಿ-ಇದು ನಿಜಕ್ಕೂ
ಸತ್ಯಕಾಣಾ, ಶ್ರೀಶೈಲಮಲ್ಲಿಕಾರ್ಜುನ."

## ಶರಣರ ಸೇವಾಕಾಂಕ್ಷೆ [70]

"ಸರ್ವಲೋಕೋಪಕಾರಾಯ ಮಿದಂಶರೀರಂ, ಎಂಬಂತೆ
ಶರಣರ್ಕಳ್‌ಸಕಲ ಲೋಕಗಳುದ್ಧರಣೆಗಂ ಅವತರಿಸುತಿರ್ಪರು ನೋಡಾ.
ಆಗಾಗ ಆ ಭೂದೇವಿ ಗೆಯ್ದ ಅನಂತಕಾಲದಾ
ಪುಣ್ಯತಪಸಿಂಗೊಲಿದು ಬಸವಣ್ಣ ಸಪ್ತ ಜನ್ಮಂಗಳಂ
ತಳೆದು ಭುವಿಗೆ ಬಂದಿರ್ಪರು ನೋಡಾ.
ಪ್ರಭುವಿಂಗೆ ನಾಲ್ಕು ಜನ್ಮಂಗಳಾದಡೆ, ಚನ್ನಬಸವಣ್ಣಂಗೆ ಒಂದೆ ಜನ್ಮವಾಯಿತ್ತು ನೋಡಾ
ಇಂತಪ್ಪ ಮಹಾಮಹಿಮರೆಲ್ಲರ್ಕಳ್ ಆ ಬಸವರಾಜದೇವರ
ಮಹಂತಲೀಲಾವಿಲಾಸದೊಳ್ ಭುವಿಗೆ ಬಂದಪರು ನೋಡಾ
ಆನು ಹನ್ನೊಂದು ಜನ್ಮಂಗಳೊಳು ಬಂದೆ ನೋಡಾ
ಬಸವೇಶ ! ನೀವು ಅನುಜ್ಞೆಗೆಯ್ದು ಕಳಿಸಿದಿರಾಗಿ,
ದೇವ ದೇವ ! ಮಹಾದೇವ ! ಬಸವೇಶ ! ತಂದೆಯೇ ! ಭಯ ಭಕ್ತಿಯಿಂ
ತವ ಸನ್ನಿಧಿಯೊಳೊಂದೆ ಬೇಡುವೆನು :
ನೀವೆನಿಸು ಜನ್ಮಂಗಳೊಳು ಬರಿಸಿದೊಡುಂ
ಸಂತತಂ ಆನು ನಿಮ್ಮ ಶರಣರಾ ಸಂಗ-ಸೇವೆಯಂ ಮಾಳ್ಪ
ಭಾಗ್ಯಮಂ ಕರುಣಿಪುದೆಂದು-ಕೇಳುವೆನು !

ಪರಶಿವಮೂರ್ತಿ ಬಸವೇಶ ತಂದೆಯೇ! ತವಪದ ಪದ್ಮಂಗಳಲ್ಲಿ
ಶತ ಶತ ಕೋಟಿ ಪ್ರಣಾಮಂಗಳಂ ಸಲಿಸುತಂ
ಭಕ್ತಿ ಮಾನಸ ಹೃದಯಂಗಳಿಂ ತ್ರಿಕಾಲದೊಳ್
ಸ್ಮರಿಸುತಲಿದ್ದೆ ಕಾಣಾ! ಶ್ರೀಶೈಲ ಮಲ್ಲಿಕಾರ್ಜುನ!

### ಧರೆಗಿಳಿದು ಬಾ ಚನ್ನಬಸವಣ್ಣ [71]

"ಬಸವರಾಜ! ಅಂದು ನೀವು ಪ್ರಮಥಗಣ ಮೇಳದಿಂ
ಭುವಿಗೆ ಬಂದು ಕಲ್ಯಾಣದೊಳ್ ನಿಂದು
ವಿಶ್ವ ಕಲ್ಯಾಣಕ್ರಾಂತಿ ಗೆಯ್ದಿರಲ್ತೆ?
ಒಬ್ಬ ಜಂಗಮನ ಅಭಿಮಾನದಿಂದ ಕಲ್ಯಾಣ ಪಟ್ಟಣ ಹಾಳಾಯಿತ್ತು
ಎಂದು, ಅಂದು ಪೇಳ್ದ ವಚನವಾಣಿ ಸತ್ಯವಾಯಿತ್ತು.
ನೀವು ನಿಮ್ಮ ಮಣಿಹ ಪೂರೈಸಲೊಡನೆ
ಕೂಡಲಸಂಗಮದೇವನೊಳ್ ಕೂಡಿ ಬಯಲಾದಿರಲ್ತೆ?
ಜಗದ ಕಾಲಚಕ್ರಗತಿಯಂತೆ ನಡೆದು ಹೋಯಿತ್ತು.
ಅದೆಲ್ಲ ನಿಮ್ಮ ಮಹಾಲಿಂಗವಿಲಾಸಲೀಲೆ!
ಅಂದು ತ್ರಿಕಾಲ ಜ್ಞಾನಿ ಷಟ್‌ಸ್ಥಲ ಚಕ್ರವರ್ತಿ ಚನ್ನಬಸವಣ್ಣ
ಇನ್ನು ಏಳುನೂರೆಪ್ಪತ್ತು ವರುಷಂಗಳ್ ಕಳೆಯಲ್ಕಂದು
ಮತ್ತೆನಾವೆಲ್ಲ ಪ್ರಮಥರೊಡಗೂಡಿ ಭುವಿಗೆ ಬಂದೇವು!
ಎಂದು ಕಾಲಜ್ಞಾನವಾಣಿಯಂ ತಿಳುಪಿ,
ಎಮಗೆಲ್ಲ ಸಾಂತ್ವನನುಡಿಪೇಳ್ದು ನೀವು ಉಳುವಿಯೊಳ್
ಲಿಂಗದಲಿ ಬೆರೆದು ಲಿಂಗವಾಗಿರ್ದಿರಲ್ತೆ?
ಚನ್ನಬಸವೇಶ! ತಮ್ಮ ಕಾಲಜ್ಞಾನವಾಣಿಯಾ ಸಂದೇಶದೊಲ್
ಅಂದಿನಿಂ ಇಂದಿನಾ ಪರಿಯಂತ ಧಾರಿಣಿಯೊಳು
ನಡೆಯಬಾರದುದೆಲ್ಲ ನಡೆದು ಹೋಯಿತು ತಂದೆ!
ತವಗುರುವರ ಬಸವರಾಜ ಅಂದು ತಮ್ಮ ಹೃದಯಾಂಬುಧಿಯೊಳ್
ಅಡಗಿಕುಳ್ಳಿರ್ದ ಜಂಗಮ ಲಾಂಛನದಾ ಅಯ್ಯಗಳನೆಲ್ಲ
ಪಾವನಗೆಯ್ದು ಮುಕ್ತಗೊಳಿಸಿದರಾದಡುಂ ಕಾಲಗತಿಯೇನೊ!
ಮತ್ತೆ ಕೆಲಬೀಜವಾಗುಳಿದಿರ್ದ ಅಯ್ಯಗಳಿಂದು
ಬೆಳೆದು ಬಹುವಾಗಿ ನಿಂದು ಬಸವಧರ್ಮ
ಪಾಳುಗೆಯ್ದಿಹರು ತಂದೆ ಚನ್ನಬಸವೇಶ!
ಗುರು-ಲಿಂಗ-ಜಂಗಮ ತತ್ತ್ವಂಗಳ ಹದಗೆಡಿಸಿ ಜಾತಿಕುಲ ಸಾರಿದರಯ್ಯ
ಅಯ್ಯಗಳೊಂದು ತಮ್ಮ ಜಾತಿಯನೆ ನಿರ್ಮಿಸಿಹರಯ್ಯ.
ಬೆಳಗುವಾ ನಿರಭ್ರಮಾದ ಬಸವತತ್ತ್ವಾಕಾಶದೊಳೆಲ್ಲ

ಜಾತಿ ಕುಲ ಕಪ್ಪು ಮೋಡಗಳೇ ಬಂದು ಆವರಿಸಿಹವಯ್ಯ.
ಶಿವನೆ ಬಸವಾ! ಬಸವಾ ಶಿವನೆ! ಇನ್ನು ಕರುಣಿಸಾ ಬಸವತಂದೆ!
ನಿಮ್ಮ ಪ್ರಮಥರಾ ಕಾಲಜ್ಞಾನವಾಣಿಯಂತೆ
ಧರೆಗೆ ಚನ್ನಬಸವಣ್ಣ ಬರುವ ಕಾಲ ಸಮನಿಸಿತು!
ಬಸವೇಶ! ಕೃಪಾಸಾಗರ! ಧರ್ಮಮೂರ್ತಿ! ದಯಾಸಿಂಧು! ನೀವೆಕೃಪೆಗೆಯ್ಯು
ನಿಮ್ಮ ಪುರಾತನರೊಡನೆ ಜ್ಞಾನ ಭಾನು ಪ್ರಕಾಶಮೂರ್ತಿ
ಚನ್ನಬಸವನಂ ಧರೆಗೆ ಕಳುಹಿಸಯ್ಯ!
ಬಸವತತ್ತ್ವಾಕಾಶ ನಿರಭ್ರವಾಗಲಿ! ಶುಭ್ರವಾಗಲಿ!
ಶಿವತತ್ತ್ವಾಂಬುಧಿ ಉಕ್ಕಿಬರಲಿ! ಗಗನ ತರಂಗ ತುಂಬಲಿ!
ತ್ರಿಭುವನ ತುಂಬ ಬಸವತತ್ತ್ವ ಬೆಳಗಲಿ!
ಶ್ರೀ ಶೈಲಮಲ್ಲಿಕಾರ್ಜುನ."

**ಅನಾದಿ ಶರಣ ಬಸವ** [72]
" ಭೂಮಿ ಆಕಾಶ ಸೂರ್ಯ ಚಂದ್ರ ತಾರಾ ಮಂಡಲ
ಸಪ್ತ ಸಮುದ್ರಗಳಿಲ್ಲದಂದು, ಏನೂ ಇಲ್ಲದಂದು,
ಅನಾದಿಯಲ್ಲಿ ಬಸವ ಶರಣ ಉದಯವಾದನಂದು.
ಆ ಶರಣನಿಂದ ಸದಾಶಿವ ಹುಟ್ಟಿದ
ಆ ಸದಾಶಿವನಿಂದ ಶಿವ ಹುಟ್ಟಿದ
ಆ ಶಿವನಿಂದ ರುದ್ರ ಹುಟ್ಟಿದ
ಆ ರುದ್ರನಿಂದ ವಿಷ್ಣು ಹುಟ್ಟಿದ
ಆ ವಿಷ್ಣುವಿನಿಂದ ಬ್ರಹ್ಮ ಹುಟ್ಟಿದ
ಆ ಬ್ರಹ್ಮನಿಂದ ಸಕಲ ಜಗತ್ತುಗಳು ಹುಟ್ಟಿದವು
ಇವರೆಲ್ಲ ನಮ್ಮ ಶ್ರೀ ಶೈಲಮಲ್ಲಿಕಾರ್ಜುನನ ಕರಸ್ಥಲದ ಹಂಗಿನಲ್ಲಿ ಹುಟ್ಟಿ ಬೆಳೆದರು."

**ಶಿ ವ ರ ಹ ಸ್ಯ** [73]
" ವಿಶ್ವಾಧಿಕೋ ಋಷೀ ರುದ್ರೋ ಮಹಾನ್, ಎಂಬಂತೆ
ಮಹಿಮಾಶಾಲಿಯಾದ ರುದ್ರದೇವನು
ಜನ್ಮರಹಿತನು ನಿತ್ಯನು ಕಂಡಯ್ಯ.
ಸುಜ್ಞಾನಾತ್ಮಕನು, ಸಕಲ ಸಂಪೂಜ್ಯನು–ಕಂಡಯ್ಯ
ಆತನೆ ಸರ್ವ ಸೃಷ್ಟಿ ಕರ್ತನು,
ಹರಿ ಬ್ರಹ್ಮಾದಿಗಳನು ಹುಟ್ಟಿಸಿದವನು
ಆತನೆ ಪರಮಪುರುಷ ವಾಚ್ಯನು–ಕಂಡಯ್ಯ,
'ತ್ರಿಪಾದದೂರ್ಧ್ವ ಉದೈತ್ಪುರುಷಃ ಪರಮೋ ರುದ್ರೋ ದೇವದೇವೋತ್ತಮೋತ್ತಮು; !

ಪುರುಷೋ ವೈರುದ್ರ ಏವ ಶೃತಿ ರೇಷಾಯುತೋ ಮತಾ ॥
ಇಂತೀ ಶಿವರಹಸ್ಯ ಗೀತಾರ್ಥವನರಿಯುವುದು ಕಂಡಯ್ಯ.
ರುದ್ರದೇವನು ಮೂರು ಪಾದವುಳ್ಳ ಮಹಾಪುರುಷನು,
ದೇವ ದೇವೋತ್ತಮನು, ಪುರುಷಪದ ಸಮನ್ವಿತನು,
ವ್ಯಷ್ಟಿ-ಸಮಷ್ಟಿ-ಸೃಷ್ಟಿಯನೆಲ್ಲ ವ್ಯಾಪಿಸಿರುವನು-ಕಂಡಯ್ಯ,
ಶ್ರೀ ಶೈಲಮಲ್ಲಿಕಾರ್ಜುನ."

**ಸೃಷ್ಟಿ ಹಾಗೂ ವೇದಗಳುತ್ಪತ್ತಿ** [74]

"ರುದ್ರದೇವನು ಅಗ್ನಿ ಅಗ್ಗವಣಿ ಔಷಧಿಗಳಲ್ಲಿ
ನೆಲಸಿರುವನಾಗಿ ವಿಶ್ವವನ್ನೆಲ್ಲ ವ್ಯಾಪಿಸಿರುವನು ನೋಡಾ.
ಭುವನತ್ರಯಂಗಳು ತ್ರಿಕಾಲದಲ್ಲಿಯೂ
ರುದ್ರಸ್ವರೂಪವಾಗಿಯೆ ಇರುವುವು ನೋಡಾ
ಋಗ್ವೇದ ಯಜುರ್ವೇದ ಸಾಮವೇದಂಗಳು
ರುದ್ರದೇವನಿಂದಲೆ ಹುಟ್ಟಿದುವು ನೋಡಾ
ಸಕಲ ಛಂದಸ್ಸುಗಳು, ಸಮಸ್ತ ಪ್ರಜೆಗಳು
ರುದ್ರದೇವನಿಂದಲೆ ಜನಿಸಿವೆ ನೋಡಾ
ಈ ಭೂವ್ಯೋಮಾಕಾಶಂಗಳನು, ದ್ವಾದಶಾದಿತ್ಯರನು,
ಅಷ್ಟವಸುಗಳನು, ಅರುವತ್ತು ನಾಲ್ಕು ಕಲೆಗಳನು,
ಇಂದ್ರ, ಯಮ, ವರುಣ, ವಿಷ್ಣು-ಬ್ರಹ್ಮರನು
ಹುಟ್ಟಿಸಿದಾತ ಶ್ರೀ ರುದ್ರದೇವನು ನೋಡಾ.
ಇದಕ್ಕೆ ಪ್ರಮಾಣ:
"ಯೋರುದ್ರೋಽಗ್ನಾವಪ್ಸು ರುದ್ರೋಯೋ ರುದ್ರಸ್ತ್ವೋಷಧೀಷ್ವಪಿ।
ಯೋ ವಿಶ್ವಾಭುವನಾನೇಕೋ ವಿವೇಶ ಸಪರಾತ್ಪರಃ ॥
ವಿಶ್ವಂ ಭೂತಂಚ ಭವನು ಚಿತ್ರಂಚ ಬಹುಧಾಚ ಯತ್।
ತಜ್ಜಾತಂ ಜಾಯಮಾನಂಚ ಶ್ರೀ ರುದ್ರಾತ್ಮಕಂ ವಿದುಃ ॥
ಋಚೋ ಯಜೂಂಷಿ ಸಾಮಾನಿ ರುದ್ರಾದೇವಹಿ ಜಜ್ಞಿರೇ।
ಛಂದಾಂಸಿ ಜಜ್ಞಿರೇ ರುದ್ರಾಜ್ಜಜ್ಞಿರೇ ವಿವಿಧಾಃ ಪ್ರಜಃ ॥

ಇಂತೆಂದುದ ಕೇಳಿ ಅರಿಯಿರಯ್ಯ!
ನಮ್ಮ ರುದ್ರದೇವನ ಮಹಿಮೆಯಿದು ಕಾಣಿರಯ್ಯ!
"ಧರ್ಮಜ್ಞ" ದೇವಕವಿವಾಣಿ ಅಮೃತವಯ್ಯ!
ಶ್ರೀಶೈಲ ಮಲ್ಲಿಕಾರ್ಜುನ."

# ವಿಶ್ವ ಶಾಂತಿಗೆ ಭಾರತದ ಕೊಡುಗೆ

ಶ್ರೀ ಎಂ. ಬಿ. ಸದಾಶಿವಯ್ಯ, ಇಂಗ್ಲಿಷ್ ವಿಭಾಗ, ಸಿದ್ದಗಂಗಾ ಕಾಲೇಜ್, ತುಮಕೂರು.

ಶಾಂತಿ ಪ್ರತಿಪಾದಕ ಆರ್ನಾಲ್ಡ್ ಟಾಯಿನ್‌ಬೀಯವರು ಲಂಡನ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕರು ಮತ್ತು ಪ್ರಮುಖ ಇತಿಹಾಸ ತಜ್ಞರು. 1960 ರಲ್ಲಿ ಅವರು ಆಜಾದ್ ಸ್ಮಾರಕ ಉಪನ್ಯಾಸ ಮಾಲೆಯಲ್ಲಿ ಮೂರು ಉಪನ್ಯಾಸಗಳನ್ನು ನೀಡಿದರು. ಮೊದಲನೆ ಉಪನ್ಯಾಸ “ವಿಶ್ವ ಶಾಂತಿ ಮತ್ತು ಮಾನವನ ಉಳಿಯುವಿಕೆ” ಯನ್ನು ಕುರಿತದ್ದಾದರೆ, ಎರಡನೆಯ ಉಪನ್ಯಾಸ “ವಿಶ್ವ ಶಾಂತಿಯ ಭರವಸೆ” ಕುರಿತದ್ದು. ಮೂರನೆಯ ಮತ್ತು ಕೊನೆಯ ಉಪನ್ಯಾಸ “ವಿಶ್ವ ಶಾಂತಿಗೆ ಭಾರತದ ಕೊಡುಗೆ’ ಕುರಿತದ್ದು, ಮೂರನೆಯ ಮತ್ತು ಮುಕ್ತಾಯದ ಉಪನ್ಯಾಸ ವಿದೇಶಿಯರಾದ ಅವರಿಗೆ ಸ್ವಲ್ಪ ಸೂಕ್ಷ್ಮವಾಗಿ ಕಂಡಿದೆ ಮತ್ತು ಮೂರು ಮುಖ್ಯ ಅಂಶಗಳನ್ನು ವ್ಯಕ್ತಪಡಿಸಿದ್ದಾರೆ.

ಮೊದಲನೆಯ ಅಂಶವೆಂದರೆ ನಾಗರೀಕತೆಯು ತನ್ನ ಉಗಮ ಸ್ಥಾನವಾದ ಇರಾಕ್‌ನಿಂದ ಪೂರ್ವ ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ಹರಡಿದಾಗಲಿಂದಲೂ, ಭಾರತವು ಮಹತ್ವದ ಸ್ಥಾನ ಪಡೆದಿದೆ ಎಂಬುದು. ಎರಡನೆಯ ಅಂಶವೆಂದರೆ ಭಾರತವು ಈಗಿನ ಪ್ರಪಂಚದ ಸಂಕ್ಷೇಪ-ಕಾರಣ, ಪ್ರಪಂಚದಲ್ಲಿ ನಾನಾ ರಾಷ್ಟ್ರಗಳು ಇಂದು ಕಾಣುವ ಸಮಸ್ಯೆಗಳೆಲ್ಲವೂ ಭಾರತದಲ್ಲಿದೆ ಮತ್ತು ಅವು ಭಾರತದ ರಾಷ್ಟ್ರಸಮಸ್ಯೆಗಳಾಗಿ ನಮ್ಮ ಸರ್ಕಾರವು ಎದುರಿಸುತ್ತಿದೆ. ಮೂರನೆಯ ಅಂಶವೆಂದರೆ ಜೀವನ ಮತ್ತು ವ್ಯವಹಾರದ ಬಗ್ಗೆ ಭಾರತೀಯರ ಮನೋಭಾವ. ಈ ಮೂರು ಅಂಶಗಳನ್ನು ಲೇಖಕರು ಸವಿಸ್ಥಾರವಾಗಿ ತಿಳಿಸಿರುತ್ತಾರೆ.

ಮೊದಲನೆಯ ಅಂಶ ಭಾರತವು ನಾಗರೀಕತೆಯು ಸಾಲಿನಲ್ಲಿ ಕೇಂದ್ರ ಸ್ಥಾನದಲ್ಲಿದ್ದು, ಈಶಾನ್ಯ ರಾಷ್ಟ್ರವಾದ ಜಪಾನ್‌ನಿಂದ ವಾಯುವ್ಯ ರಾಷ್ಟ್ರವಾದ ಐಲೆಂಡ್‌ನವರೆಗೂ ಹಬ್ಬಿದೆ. ಭಾರತದ ಮಹತ್ವ ಸ್ಥಾನ ಭೌಗೋಳಿಕವಾಗಲ್ಲದೆ ವಿಶ್ವಾದ್ಯಂತ ಇರುವ ತತ್ವಗಳ ಪೈಪೋಟಿಯಲ್ಲಿಯೂ ಸಮತೋಲನ ಭಾವನೆ ತಳದಿದೆ. ಏಷ್ಯಾ ಖಂಡದಲ್ಲಿ ಪ್ರಜಾಪ್ರಭುತ್ವ ಬಲವಾಗಿ ಬೇರೂರಿದೆಯೆಂದರೆ ಅದಕ್ಕೆ ಭಾರತ ಪ್ರಜಾಪ್ರಭುತ್ವ ಸಿದ್ಧಾಂತವನ್ನು ಮೈಗೂಡಿಸಿಕೊಂಡಿರುವುದೇ ಕಾರಣ. ಇನ್ನು ಧರ್ಮ ಭಾರತದಲ್ಲಿ ಬಹಳವಾಗಿ ಬೇರೂರಿದೆ ಮತ್ತು ಧಾರ್ಮಿಕ ವಿಷಯದಲ್ಲಿ ಅದು ಸದಾ ಒಂದು ಮಾರ್ಗದರ್ಶಿ. ಅದು ಎಂದೂ ಬೇರೆಯವರಿಂದ ಧರ್ಮವನ್ನು ಯಾಚಿಸಿಲ್ಲ

(At Religious level India has not been a recipient and she has been a giver) ಇದು ಪ್ರಪಂಚದಲ್ಲಿನ ಜೀವಂತ ಧರ್ಮಗಳಲ್ಲಿ ಅರ್ಧ ಭಾಗ ಭಾರತದಲ್ಲಿ ಜನ್ಮ ತಾಳಿದ್ದವು. ಸುಮಾರು ಅರ್ಧ ಭಾಗದಷ್ಟು ಮಾನವಜನಾಂಗ ಬೌದ್ಧಧರ್ಮವನ್ನು ಅವಲಂಬಿಸಿದ್ದಾರೆ. ವಿಶ್ವದ ಇತಿಹಾಸದಲ್ಲೂ ಮತ್ತು ರಾಜಕೀಯದಲ್ಲೂ ಭಾರತ ಪ್ರಬಲ ಶಕ್ತಿಯಾಗಿದೆ.

ವಿಶ್ವ ರಾಷ್ಟ್ರ ಕಟ್ಟುವ ಪ್ರಯೋಗದ ಮಾದರಿ ಅಕ್ಷರಶಃ ಭಾರತದಲ್ಲಿ ನಡೆದಿದೆ. ಇದನ್ನು ನಡೆಸಿದವರೆಂದರೆ ಭಾರತದವರೇ ಆದ ಮೌರ್ಯರು ಮತ್ತು ಗುಪ್ತರು ಹಾಗೂ ಮೊಘಲರು ಮತ್ತು ಬ್ರಿಟೀಷರು. ಪರಕೀಯರಾದ ಮೊಘಲರು ಮತ್ತು ಬ್ರಿಟೀಷರು ಭಾರತೀಯರ ಬೆಂಬಲವಿಲ್ಲದಿಲ್ಲದಿದ್ದಲ್ಲಿ ಇಷ್ಟು ಬೃಹತ್ ಪ್ರಮಾಣದ ರಾಷ್ಟ್ರ ನಿರ್ಮಾಣಮಾಡಲು ಸಾಧ್ಯವಾಗುತ್ತಿರಲಿಲ್ಲ,

ಇನ್ನು ಭಾರತವು ತನ್ನ ಸಾಮಾನ್ಯ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವ ರೀತಿ ಪ್ರಪಂಚಕ್ಕೆ ಒಂದು ಕುತೂಹಲಕಾರಿಯಾಗಿದೆ. ಏಕೆಂದರೆ ಭಾರತದ ಮಾರ್ಗ ಮತ್ತು ಭಾರತದ ಅನುಭವ ಜಗತ್ತಿಗೊಂದು ಉಪದೇಶದಾಯಕ. ಏಕೆಂದರೆ ಇತರ ದೇಶಗಳು ಸಹ ಈ ಸಮಸ್ಯೆಗಳನ್ನು ಎದುರಿಸುತ್ತಿವೆ. ನವ ಶಿಲಾಯುಗದಿಂದಲೂ ನಾಗರೀಕತೆ ಪೂರ್ಣವಾಗಿ ರೈತನ ಬೆನ್ನ ಮೇಲೆ ಹೇರಲ್ಪಟ್ಟಿದೆ. ಐದುಸಾವಿರ ವರ್ಷಗಳಿಂದಲೂ ರೈತ ಶೋಷಣೆಯ ಅಭ್ಯಾಸಕೊಳ್ಳಗಾಗಿ ನಿರ್ಲಿಪ್ತನಾಗಿದ್ದಾನೆ. ಇದು ಕೇವಲ ಕೆಲವೇ ಮಂದಿ ಪಟ್ಟಣವಾಸಿಗಳ ಸುಖ ಜೀವನಕ್ಕೆ ದಾರಿ ಮಾಡಿಕೊಟ್ಟಿದೆ. ಅನಾದಿಯಿಂದಲೂ ರೈತ ನಾಗರೀಕ ಸೌಲಭ್ಯಗಳಿಂದ ವಂಚಿತನಾಗಿದ್ದಾನೆ. ರೈತಾಪಿ ಜನರು ಉಪವಾಸ ನೀಗುವ ಮಟ್ಟದಲ್ಲಿ ಜೀವನ ಸಾಗಿಸಿಕೊಂಡು ಬರುತ್ತಾ ಹೆಚ್ಚುವರಿ ಉತ್ಪಾದನೆಯನ್ನು ಒಂದು ನಾಗರಿಕತೆಯನ್ನು ನಿರ್ಮಿಸಲು ಅಥವಾ ಇತರ ನಾಗರಿಕತೆಯ ಸರ್ವನಾಶಕ್ಕೆ ಬಳಸುತ್ತಾ ಬರಲಾಗಿದೆ. ಕೃಷಿಕ ವರ್ಗ ಕಷ್ಟಜೀವನವನ್ನೇ ಸ್ವಾಗತಿಸುವುದನ್ನು ಕಲಿತು ಸುಖ ಜೀವನವನ್ನು ಬದಲಾಯಿಸಿಕೊಳ್ಳುವುದು ಸಾಧ್ಯವೆಂಬ ಕನಸು ಸಹಾ ಕಾಣಲಿಲ್ಲ. ನಾಗರಿಕತೆ ಇವರ ಮೇಲೆ ಒಂದು ಹೊರೆಯಂತೆ ಇದ್ದಿತು. ಇತ್ತೀಚಿನ ದಿನಗಳಲ್ಲಿ ಉತ್ಪಾದನೆಯಲ್ಲಿ ಹೊಸತಿರುವು ಪಡೆಯುವವರೆಗೂ ಇವರ ಜೀವನದ ಸುಧಾರಣೆಯ ಸೂಚನೆ ಕಾಣಲಿಲ್ಲ.

ನಾಗರೀಕತೆಯು ರಾಜಕೀಯ ಮಹತ್ ಸಾಧನೆಯೆಂದರೆ ರೈತನ ಬೆಳೆಯಲ್ಲಿ ಕನಿಷ್ಠ ಪ್ರಮಾಣ ಅವನಿಗೆ ಬಿಟ್ಟು, ಉಳಿದ ಹೆಚ್ಚುವರಿಯ ನಾಗರೀಕರೆಂದು ಹೇಳಿಕೊಳುತ್ತಿರುವ ಶ್ರಮ ರಹಿತ ಅಲ್ಪ ಸಂಖ್ಯಾತ ನಗರವಾಸಿಗಳು ಒದಗಿಸುವುದಾಗಿದೆ. ಈ ಅಲ್ಪ ಸಂಖ್ಯಾತ ವರ್ಗ ಸಕಲ ಅನುಕೂಲಗಳನ್ನು ಪಡೆದು ಸೃಜನ ಶೀಲ ಕೃಷಿ

ಯಲ್ಲಿ ತೊಡಗಿರುತ್ತಾರೆ. ಶಿಲ್ಪ, ಸಂಗೀತ, ದೃಶ್ಯಕಲೆ, ಕಾವ್ಯ ಮುಂತಾದವುಗಳಲ್ಲಿನ ಸಾಧನೆಯೇ ನಾಗರಿಕತೆಯ ಕುರಹುಗಳಾಗಿವೆ. ಈಚಿನ ಎರಡುನೂರು ವರ್ಷಗಳಿಂದ ಅಲ್ಪ ಸಂಖ್ಯಾತ ವರ್ಗದ ಗಮನ ತಾಂತ್ರಿಕ ಮುನ್ನಡೆಯತ್ತ ಸಾಗಿದೆ. ಅದರ ಸಾಧನೆ ಯಿಂದ ಸಮಾಜದ ಎಲ್ಲ ವರ್ಗದ ಜನರಿಗೂ ಅನುಕೂಲ ಮಾಡಿಕೊಡುವುದಾಗಿದೆ.

ಸತತವಾಗಿ ಶೋಷಣೆಗೊಳಗಾದ ಕೃಷಿಕ ವರ್ಗಕ್ಕೆ ಸಹಾಯ ಮಾಡುವ ಸದುದ್ದೇಶದ ಪ್ರಯತ್ನ ಭಾರತದಲ್ಲಿ ನಡೆದಿದೆ. ಇದಕ್ಕೆ ದೃಷ್ಟಾಂತವಾಗಿ ಸಾಮೂಹಿಕ ಅಭಿವೃದ್ಧಿ ಯೋಜನೆ (C.D.P.) ಯನ್ನು ತೆಗೆದುಕೊಳ್ಳಬಹುದು. ಭಾರಥ ತೆಗೆದು ಕೊಂಡ ಈ ಒಂದು ಹೆಜ್ಜೆ ಜಗತ್ತಿನಾದ್ಯಂತ ಶೋಷಣೆಗೊಳಗಿರುವ ರೈತ ಜನಾಂಗಕ್ಕೆ ಒಂದು ಶುಭ ಸೂಚಕವಾಗಿದೆ.

ಎರಡನೆಯ ಜ್ವಲಂತ ಸಮಸ್ಯೆಯೆಂದರೆ ಜನ ಸಂಖ್ಯಾಸ್ಫೋಟ ವಿಜ್ಞಾನದ ಪ್ರಗತಿಯಿಂದಾಗಿ ಮರಣ ಪ್ರಮಾಣವು ಸಾಕಷ್ಟು ಕಡಿಮೆಯಾಗಿ ಜನನ ಪ್ರಮಾಣ ನಿಯಂತ್ರಿಸಲಾಗದೆ ಅತಿ ಹೆಚ್ಚಾಗಿದೆ. ಇಂತಹ ಸಮಸ್ಯೆಯನ್ನು ಜನರ ಮೂಢ ನಂಬಿಕೆಗಳಿಗೆ ಪೆಟ್ಟಾಗದಂತೆ ಭಾರತ ಪರಿಹಸುವ ರೀತಿ ಪ್ರಪಂಚದಾದ್ಯಂತ ರಾಷ್ಟ್ರಗಳಿಗೆ ಸ್ಫೂರ್ತಿದಾಯಕವಾಗಿದೆ.

ಮೂರು ಸಾವಿರ ವರ್ಷಗಳಿಂದ ಇರುವ ಮತ್ತೊಂದು ಭಾರತದ ಹಾಗೂ ವಿಶ್ವ-ದಾದ್ಯಂತಇರುವ ಸಮಸ್ಯೆ ಎದಂರೆ ಜಾತಿ ವರ್ಣದ್ವೇಷ. ಕಳೆದ ಮೂರೂವರೆ ಶತಮಾನಗಳ ಅವಧಿಯಲ್ಲಿ ಪಾಶ್ಚಾತ್ಯರ ಆಳ್ವಿಕೆ ಸಾಗರೋತ್ತರ ದೇಶಗಳಲ್ಲಿ ಭಾಷೆ ಮತ್ತು ಸಂಸ್ಕೃತಿ ಗಳ ಮೇಲೆ ತೀವ್ರ ಪ್ರಭಾವ ಉಂಟು ಮಾಡಿದೆ- ಉದಾಹರಣೆಗೆ-ಡಚ್ಚರು ಮತ್ತು ಪೋರ್ಚುಗೀಸರು ದಕ್ಷಿಣ ಆಫ್ರಿಕಾದಲ್ಲಿ ಮತ್ತು ಇತರ ದೇಶಗಳಲ್ಲಿ ವರ್ಣಭೇದ ನೀತಿಗೆ ಕಾರಣರಾಗಿದ್ದಾರೆ. ಭಾರತದ ದ್ರಾವಿಡ ಜನಾಂಗವನ್ನು ಗೆದ್ದಆರ್ಯ ಜನಾಂಗ ತನ್ನ ಸಂಸ್ಕೃತಿಯನ್ನು ದ್ರಾವಿಡರ ಮೇಲೆ ಹೇರಿತು. ಹೀಗೆ ಎರಡು ಜನಾಂಗಗಳ ಸಂಸ್ಕೃತಿಗಳ ಮಿಲನ ಉಂಟಾಯಿತು. ಆದೇ ರೀತಿ ಅಮೇರಿಕಾದಲ್ಲಿ ವರ್ಣ ದ್ವೇಷ 1861 ರಿಂದ 65 ರವರೆಗೆ ಅಂತರ್ ಯುದ್ಧಕ್ಕೆ ಕಾರಣವಾಯಿತು. ಭಾರತದಲ್ಲಿ ಬುದ್ಧನ ಕಾಲದಲ್ಲಿ ಜಾತಿ ಪದ್ಧತಿ ವಿರುದ್ಧ ನಡೆದ ಪ್ರತಿಭಟನೆ ಬ್ರಿಟೀಷರ ಕಾಲದಲ್ಲಿ ಗಾಂಧೀಜಿಯವರ ನೇತೃತ್ವದಲ್ಲಿ ಹೊಸತಿರುವು ಪಡೆಯಿತು. ವರ್ಣಭೇದ ನಿರ್ಮೂಲನೆಗೆ ಬುದ್ಧ ಮತ್ತು ಗಾಂಧೀಜಿಯವರ ಮೂಲಕ ಭಾರತದ ವಾಣಿ ವಿಶ್ವಕ್ಕೆ ಪ್ರಭಾವಕಾರಿಯಾಗಿದೆ. ಇಂತಹ ಜಾತೀಯ,ಜನಾಂಗೀಯ ಸಮಸ್ಯೆಗಳಿಗೆ ಸರ್ಕಾರಿ ಕಾಯಿದೆಗಳಿಗಿಂತಲೂ ಹೃದಯ ಪರಿವರ್ತನೆಯಿಂದ ಹೆಚ್ಚು ಪರಿಣಾಮಕಾರಿಯಾಗ ಬಹುದು. .ಈಹೃದಯ ಪರಿವರ್ತನೆಯು ಬೃಹತ್ ಕಾರ್ಯ ಜನತೆಯ ಸ್ವಶಿಕ್ಷಣದಿಂದ ಮಾತ್ರ ಸಾಧ್ಯ.

ಭಾರತದ ಮತ್ತು ವಿಶ್ವದ ನಾಲ್ಕನೆಯ ಸಮಸ್ಯೆಯೆಂದರೆ ಭಾಷಾವಾರು ರಾಜ್ಯಗಳ ವಿಂಗಡಣೆ.–ಈ ಸಮಸ್ಯೆ ಪ್ರಜಾಪ್ರಭುತ್ವದ ಬೆಳವಣಿಗೆಯ ಒಂದು ಪ್ರತಿ ಫಲವಾಗಿದೆ. ಇಂತಹ ಸಮಸ್ಯೆಗಳನ್ನು ಎದುರಿಸುವುದಲ್ಲಿ ಭಾರತೀಯರು ಹೊಂದಿರುವ ಸದ್ಗುಣ- ಅವರ ದ್ವೇಷ ಮುಕ್ತ ಸ್ವಭಾವ. ಇತ್ತೀಚಿನ ಉದಾಹರಣೆಯಲ್ಲಿ ಬ್ರಿಟಿಷರ ವಿರುದ್ಧ ದ್ವೇಷರಹಿತವಾಗಿ, ಶಾಂತಿಯುತವಾಗಿ ಹೋರಾಡಿ ಮತ್ತು ಸ್ವಾತಂತ್ರ್ಯಗಳಿಸಿದ ನಂತರ ಹಳೇ ದ್ವೇಷವನ್ನು ಮರೆತು ಶತ್ರುವಾದ ಬ್ರಿಟಿಷರೊಂದಿಗೆ ಮೈತ್ರಿಯುತ ಸಂಬಂಧ ಸ್ಥಾಪಿಸಿ ಕೊಂಡಿದೆ.

ಆಂಗ್ಲರು ಮತ್ತು ಮೊಗಲರು ಭಾರತದ ಮೇಲೆ ದಾಳಿ ಮಾಡಿದವರು, ಆದರೂ ಸಹ ಭಾರತದ ಮುಸ್ಲಿಮರಾದ ಆಜಾದ್‌ರವರಿಗೆ ಗೌರವ ಸಲ್ಲಿಸಲು ಒಬ್ಬ ಆಂಗ್ಲ ವಿದ್ವಾಂಸನನ್ನು ಕರೆಸಿ ಉಪನ್ಯಾಸ ಮಾಲಿಕೆಯನ್ನು ಏರ್ಪಡಿಸಿರುವುದು ಭಾರತೀಯರ ಜಾತಿಯ ಮುಕ್ತ ಭಾವನೆಗೆ ಉದಾಹರಣೆಯಾಗಿದೆ.

ಆಂಗ್ಲರ ಆಡಳಿತವನ್ನು ಭಾರತದಲ್ಲಿ ಮುಂದುವರೆಸಿ ಕೊಂಡು ಹೋಗಲು ಅಸಾಧ್ಯವಾಗಿ ಮಾಡಿದ ಅಸಾಧಾರಣ ವ್ಯಕ್ತಿ ಗಾಂಧೀಜಿ. ಸ್ವಾತಂತ್ರ್ಯ ಹೋರಾಟ ವನ್ನು ಧರ್ಮದ ಹಾದಿಯಲ್ಲಿಟ್ಟ ಗಾಂಧಿ ಭಾರತ ಮತ್ತು ಬ್ರಿಟನ್ ಎರಡನ್ನು ಏಕ ಕಾಲದಲ್ಲಿ ರಕ್ತ ಕ್ರಾಂತಿಯಿಂದ ಕಾಪಾಡಿದರು. ಈ ದಿಸೆಯಲ್ಲಿ ಗಾಂಧೀಜಿಯವರು ಬ್ರಿಟನ್ನಿಗೆ ಮಾಡಿದ ಸೇವೆ ಭಾರತಕ್ಕೆ ಮಾಡಿದ ಸೇವೆಗಿಂತ ಯಾವುದೇ ರೀತಿಯ- ಲ್ಲಿಯೂ ಕಡಿಮೆಯಾಗಿಲ್ಲವೆಂದರೆ ಉತ್ಪ್ರೇಕ್ಷೆಯಾಗಲಾರದು.

ಅಹಿಂಸಾ ಕ್ರಾಂತಿ ಭಾರತದ ಒಂದು ಮಹತ್ ಸಾಧನೆ ಈಒಂದು ಸಿದ್ಧಾಂತವನ್ನು ಭಾರತ ತನ್ನ ಆಂತರಿಕ ಸಮಸ್ಯೆಗಳ ಪರಿಹಾರಕ್ಕೆ ಉಪಯೋಗಿಸುತ್ತಿರುವುದಕ್ಕೆ "ಭೂಧಾನ ಚಳುವಳಿ" ಒಂದು ಉದಾಹೆರಣೆಯಾಗಿದೆ. ಇತಿಹಾಸ ಪುಟಗಳನ್ನು ಹಿಂದಕ್ಕೆ ತೆರೆದು ನೋಡಿದಲ್ಲಿ ಅಶೋಕಚಕ್ರವರ್ತಿ ಅಹಿಂಸಾ ಸಿದ್ಧಾಂತ ಅನುಯಾಯಿಯಾಗಿ ಸೈನ್ಯದ ಆಕ್ರಮಣಕ್ಕೆ ಬದಲು ಧರ್ಮ ಪ್ರಚಾರಕ್ಕೈಗೊಂಡಿದ್ದು ಕಂಡುಬರುತ್ತದೆ.

ಅಣು ಸ್ಫೋಟ ಯುಗದಲ್ಲಿ ನಾವಿನ್ನೂ ಬದುಕಿದ್ದೇವೆ ಮತ್ತು ಬದುಕಲಿದ್ದೇವೆ. ಜಗತ್ತನ್ನೇ ನುಂಗಿ ಬಿಡುವ ಈ ಪರಮಾಣುವಿನ ಚಂಡ ಮಾರುತದಲ್ಲಿ ಮಾನವ ಜನಾಂಗ ಸರ್ವನಾಶದಿಂದ ಉಳಿಯಬೇಕಾದರೆ ಅದು ಅಹಿಂಸಾ ಸಿದ್ಧಾಂತವನ್ನು ಅನುಸರಿಸಲೇಬೇಕು. ನೆರೆ ರಾಷ್ಟ್ರಗಳಿಂದ ತೊಂದರೆ ಇದ್ದರೂ ಸಹ ಗಾಂಧೀಜಿ ಮತ್ತು ಇತಿಹಾಸಕ್ಕೆ ಋಣಿಯಾಗಿರುವ ಭಾರತ ವಿಶ್ವಕ್ಕೆ ಅಹಿಂಸಾ ಸಿದ್ಧಾಂತದ ಮಾದರಿಯಾಗಿದೆ.

ಅಹಿಂಸೆ ಎನ್ನುವುದು ಒಂದು ಮನೋಸ್ಥಿತಿ. ಅದು ನೈತಿಕ ಆದರ್ಶದಿಂದ ಪ್ರೇರಣೆಯಾದದ್ದು. ಈ ನೈತಿಕ ಆದರ್ಶ ಭೌತಿಕ ದೃಷ್ಟಿಗೆ ತಳಕುಗೊಂಡಿದೆ. ಸತ್ಯ ಮತ್ತು ಮುಕ್ತಿಗೆ ವಿವಿಧ ಪದಗಳಿವೆ. ಸತ್ಯವೆಂದರೆ ಪರಿಪಕ್ವವಾದ ಆಧ್ಯಾತ್ಮಿಕ ಅರಿವು. ದಿವ್ಯದರ್ಶನದಲ್ಲಿಕಂಡ ಸಾಮರಸ್ಯವೇ ಮುಕ್ತಿ.

ಸತ್ಯದ ಬಗ್ಗೆ ತಾಳುವ ವಿಶಾಲವಾದ ಮನೋಭಾವವೇಭಾರತೀಯ ಲಕ್ಷಣ. ಈ ವಿಶಾಲವಾದ ಭಾರತೀಯರ ಧಾರ್ಮಿಕ ಮನೋಭಾವನೆಯನ್ನು ಬೌದ್ಧ ಧರ್ಮವು ಹಂಚಿಕೊಂಡಿದೆ. ವಿಶ್ವದಾದ್ಯಂತ ಒಂದುಕಾದಲ್ಲಿದ್ದ ವಿಶಾಲ ಹೃದಯತೆ ವಿಶಾಲ ಧಾರ್ಮಿಕ ಮನೋಭಾವ ಉಳಿಸಿಕೊಂಡು ಹೋಗುವುದು ಭಾರತದ ಕರ್ತವ್ಯವಾಗಿದೆ. ಭಾರತವು ಹಿಂದೂಧರ್ಮವನ್ನು ರಾಷ್ಟ್ರಧರ್ಮವನ್ನಾಗಿ ಮಾಡಿದೆ ಜಾತ್ಯಾತೀತ ರಾಷ್ಟ್ರವನ್ನು ಸ್ಥಾಪಿಸಿ ಎಲ್ಲ ಧರ್ಮದವರಿಗೂ ಸಮಾನತೆಯನ್ನು ನೀಡಿದೆ.

ಭಾರತದ ಪ್ರಾಚ್ಯ ಸಂಶೋಧನಾ ಇಲಾಖೆ ತಾಜ್‌ಮಹಲ್ ಮತ್ತು ಆಗ್ರ ಕೋಟೆಯನ್ನು ನೋಡಿಕೊಳ್ಳುತ್ತಿರುವ ರೀತಿಗೆ ಇಸ್ಲಾಮಿಕ್ ರಾಷ್ಟ್ರಗಳೇ ಏಕೆ ವಿಶ್ವದ ಎಲ್ಲ ರಾಷ್ಟ್ರಗಳೂ ಋಣಿಯಾಗಿರಬೇಕು. ಭಾರತೀಯರ ವೈವಿಧ್ಯತೆಯ ನೋಟ ವಿಶ್ವಕ್ಕೆ ಮಹತ್ವದ್ದಾಗಿದೆ. ರಾಷ್ಟ್ರಗಳು ಭೌಗೋಳಿಕವಾಗಿ ಹತ್ತಿರವಿದ್ದರೂ ಮಾನಸಿಕವಾಗಿ ಅಂತರವಾಗಿರುವ ಈ ಅಪಾಯದ ಕಾಲದಲ್ಲಿ ನೆರೆ ರಾಷ್ಟ್ರಗಳ ಜನರನ್ನು ವಿಶ್ವಮಾನವ ಕುಟುಂಬದ ಭಾರತದ ಅತ್ಯದ್ಭುತ ಸ್ಥಾಪನೆಯಾದ "ವೈವಿಧ್ಯತೆಯಲ್ಲಿ ಐಕ್ಯತೆ" ವಿಶ್ವದಲ್ಲಿ ಪ್ರಮುಖವಾಗಿ ಎದ್ದು ಕಾಣುತ್ತಿವೆ.

ಕೊನೆಯದಾಗಿ ಗಾಂಧೀಜಿಯವರು ದಿನ ನಿತ್ಯದ ಕಾರ್ಯಕ್ರಮಗಳ ಒತ್ತಡಗಳ ನಡುವೆಯೂ ಆಧ್ಯಾತ್ಮ ಚಿಂತನೆಗೆ (ಧ್ಯಾನಕ್ಕೆ) ಬಿಡುವು ಮಾಡಿಕೊಳ್ಳುತ್ತಿದ್ದರು. ಅವರ ಆಧ್ಯಾತ್ಮಿಕ ಸಾಧನೆ ಭಾರತೀಯ ಪರಂಪರೆಯ ಪ್ರತೀಕ. ದೈನಂದಿನ ಬದುಕಿನ ಚಟುವಟಿಕೆಗಳೇ ಆಧ್ಯಾತ್ಮಿಕ ಚಟುವಟಿಕೆಗಳಿಗೆ ಮೂಲವೆಂಬುದನ್ನು ಗಾಂಧೀಜಿಯವರು ಪ್ರಯೋಗದಿಂದ ಸಾಬೀತು ಪಡಿಸಿದ್ದಾರೆ. ಇಂತಹ ಪ್ರೇರಣೆ ಅವರ ಪ್ರಾಯೋಗಿಕ ಬದುಕಿಗೆ ಫಲ ಕೊಟ್ಟಿತೇ ಹೊರತು ಬದುಕನ್ನು ಎಂದೂ ಅಸ್ತವ್ಯಸ್ಥ ಗೊಳಿಸಲಿಲ್ಲ. ಗಾಂಧೀಜಿ ತೋರಿದ ಮಾರ್ಗ ಇಂದಿನ ಜಗತ್ತಿಗೆ ಭಾರತ ಕೊಡಬಹುದಾದ ದಾರಿ ದೀಪವಾಗಿದೆ. ಭಾರತದ ಈ ಆಧ್ಯಾತ್ಮಿಕ ಕೊಡುಗೆ ಮಾನವನನ್ನು ಹೆಚ್ಚು ಮಾನವೀಯತೆ ಉಳ್ಳವನನ್ನಾಗಿ ಮಾಡಿ ಮನುಷ್ಯನನ್ನು ಸ್ವಯಂ ನಾಶದಿಂದ ರಕ್ಷಿಸುತ್ತದೆ.

ಮೂಲ ; ಆರ್ನಾಲ್ಡ್ ಟಾಯಿನ್‌ಬೀ.

# ಕಡಿಮೆ ಹಣ ಖರ್ಚು ಮಾಡಿ
# ಹೆಚ್ಚು ಬಟ್ಟೆಗಳನ್ನು ಒಗೆಯಿರಿ.

- ಇದೀಗ ನೀವು ಸಾಬೂನಿಗೆ ಕಡಿಮೆ ಹಣ ಖರ್ಚು ಮಾಡಿ ಹೆಚ್ಚು ಬಟ್ಟೆಗಳನ್ನು ಒಗೆಯಬಹುದು.
- ಕಸ್ತೂರಿ ನೀಲಂ ಹಾಗೂ ಕಸ್ತೂರಿ ಬಾರ್ ಸೋಪ್ ಉಪಯೋಗಿಸುವುದರಿಂದ ಇದು ಸಾಧ್ಯ.
- ಕಸ್ತೂರಿ ಸಾಬೂನುಗಳು ಬಹು ಉಳಿತಾಯಕರವಾದುದು ಅಲ್ಲದೆ, ಪ್ರತಿ ಬಾರ್ ಸೋಪಿನಿಂದಲೂ ಹೆಚ್ಚು ಬಾರಿ ಒಗೆಯಲು ಸಾಧ್ಯವಾಗುತ್ತದೆ.
- ಇದರಲ್ಲಿ ವಿಶೇಷ ಡಿಟರ್ಜೆಂಟುಗಳು ಮಿಶ್ರಿತವಾಗಿರುವುದ ರಿಂದ ನಿಮ್ಮ ಉಡುಪುಗಳು ಬಿಳುಪಿಗಿಂತಲೂ ಅತ್ಯಧಿಕ ಉಜ್ವಲವಾಗಿರುತ್ತವೆ.

**ಕಸ್ತೂರಿ ಸಾಬೂನುಗಳನ್ನು ಇಂದೇ ಉಪಯೋಗಿಸಿರಿ**

**'ಕಸ್ತೂರಿ' ಬಾರ್ ಸೋಪ್**

**'ಕಸ್ತೂರಿ' ನೀಲಂ ಬಾರ್ ಸೋಪ್**

ತಯಾರಕರು :

## ರಾಮಕೃಷ್ಣ ಆಯಿಲ್ ಮಿಲ್, ತುಮಕೂರು

# ಬಸವಣ್ಣನವರ ದೃಷ್ಟಿಯಲ್ಲಿ ಸಮಾನತೆ

**ಶರಣರ ಸಂದೇಶ**

ಕಲ್ಯಾಣವೆಂಬ ಪ್ರಣತೆಯಲ್ಲಿ ಭಕ್ತಿರಸವೆಂಬ ತೈಲವನೆರೆದು
ಆಚಾರವೆಂಬ ಬತ್ತಿಯಲ್ಲಿ ಬಸವಣ್ಣನೆಂಬಜ್ಯೋತಿಯ ಮುಟ್ಟಿಸಲು
ತೊಳಗಿ ಬೆಳಗುತ್ತಿರ್ದುದಯ್ಯಾ ಶಿವನಪ್ರಕಾಶ.
ಆ ಬೆಳಗಿನೊಳಗೊಪ್ಪುತಿರ್ದರಯ್ಯ
ಅಸಂಖ್ಯಾತ ಭಕ್ತಮಹಾಗಣಂಗಳು.
ಶಿವಭಕ್ತರಿರ್ದ ಕ್ಷೇತ ಅವಿಮುಕ್ತ ಕ್ಷೇತ್ರವೆಂಬುದು ಹುಸಿಯೇ?
ಶಿವಭಕ್ತರಿರ್ದ ದೇಶವು ಪಾವನವೆಂಬುದು ಹುಸಿಯೇ
ಗುಹೇಶ್ವರಲಿಂಗದಲ್ಲಿ ಎನ್ನ ಪರಮಾರಾಧ್ಯ ಸಂಗನಬಸವಣ್ಣನ ಕಂಡು
ಬದುಕಿದೆ ಕಾಣಾ ಸಿದ್ಧರಾಮಯ್ಯಾ

– ಪ್ರಭುದೇವರು

ಹನ್ನೆರಡನೆಯ ಶತಮಾನ ಅಣ್ಣ ಬಸವಣ್ಣ ತನ್ನ ಕಾಲಕ್ಕೆ ಮೀರಿಸಮಾರು ಎಂಟುನೂರು ವರ್ಷ ಮುಂದಿನ ಇಪ್ಪತ್ತನೆಯ ಶತಮಾನದ ವಿವರಗಳನ್ನು ಹೊಂದಿದ್ದುದು ಆತನ ದೂರದೃಷ್ಟಿಗೆ ಸಾಕ್ಷಿ. ಆತ ದಾರ್ಶನಿಕ. ವಿಚಾರಗಳು ಜಾಗತಿಕ ಮನ್ನಣೆ ಪಡೆದಿವೆ, ಆತನ ಹೊಸ ವಿಚಾರಗಳನ್ನು ಹೊತ್ತ ವೀರಶೈವ ಧರ್ಮ ವಿಶ್ವಧರ್ಮ ಎನಿಸಿದೆ.

ಸಮಾಜದ ಸರ್ವರಂಗದಲ್ಲಿ ವಿಚಾರ ಕ್ರಾಂತಿಗೈದ ಬಸವಣ್ಣ ಹೊಸ ಸಮಾಜ ರಚನೆಗೆ ರೂವಾರಿಯಾದ. ಜಿಡ್ಡುಗಟ್ಟಿದ ಗೊಡ್ಡು ಸಂಪ್ರದಾಯಗಳನ್ನು ತನ್ನ ಕ್ರಾಂತಿಕಾರಿ ವಿಚಾರಗಳಿಂದ ಉಜ್ಜಿ ಸಮಾಜಕ್ಕೆ ಶುದ್ಧೀಕರಿಸಿ ನವಸಮಾಜ ಕಟ್ಟಿದ– ಇಡೀ ಜಗತ್ತಿನಲ್ಲಿಯೇ ಆದರ್ಶ ಪ್ರಾಯವಾಗಿರುವಂತೆ.

ಬಸವಣ್ಣನ ಘನ ಉದ್ದೇಶ ಬದುಕಬೇಕೆನ್ನುವುದು. ಅದು ಬದುಕಲು ಬೇಕಾಗುವಂಥ ಪರಿಸರ, ಸನ್ನಿವೇಶ, ಸಾಮಗ್ರಿಗಳನ್ನು ಆತ ಸಮಾಜಕ್ಕೆ ಒದಗಿಸಿದ. ಅಂಥ ಹಲವಾರು ವಿಚಾರಗಳಲ್ಲಿ ಆತನ ಸಮಾನತಾ ದೃಷ್ಟಿಯೂ ಒಂದು. ಬಸವಣ್ಣ ಸಮತಾವಾದಿ, ಸಮಾನತಾವಾದಿ.

## ಅಸಮಾನತೆಯ ವಿರುದ್ಧ ಹೋರಾಟ

ನೈಸರ್ಗಿಕವಾಗಿ ಏನೇ ಇದ್ದರೂ ಬದುಕಿನ ವಿವಿಧ ರಂಗಗಳಲ್ಲಿ ಸರಿಸಮಾನರು ಎಂಬ ವಿಚಾರವನ್ನು ಜಗತ್ತಿನಲ್ಲಿ ಪ್ರಥಮವಾಗಿ ಬಿತ್ತಿದವನು ಬುದ್ಧ. ಬುದ್ಧನ ನಂತರ ಎದ್ದು ಕಾಣುವ ವ್ಯಕ್ತಿ ಬಸವಣ್ಣ. ಈ ಹಾದಿಯಲ್ಲಿ ಆತ ಸಮಾನತೆಯ ಕ್ರಾಂತಿಯನ್ನು ಮುಂದುವರಿಸಿದ. ಆತನ ಕ್ರಾಂತಿ ಸಮಗ್ರಕ್ರಾಂತಿ ಎನಿಸಿತು. ಜೀವನದ ಪ್ರತಿ ರಂಗದಲ್ಲಿ ಸಮಾನತೆಯನ್ನು ತರುವುದು ಆತನ ಮೂಲ ಉದ್ದೇಶವಾಗಿತ್ತು. ಗುರಿಯಾಗಿತ್ತು. ಈ ಮಾರ್ಗವೇ ವೀರಶೈವ ಧರ್ಮ ಎನಿಸಿತು. ಆಗಿನ ಆಳರಸರು ಇದನ್ನು ಸ್ವೀಕರಿಸಿ ಪ್ರಚಾರಗೈದಿದ್ದರೆ ಆಗಲೆ ಇದು ಜಾಗತಿಕ ಧರ್ಮ ಅಥವಾ ವಿಶ್ವಧರ್ಮವಾಗುತ್ತಿತ್ತು. ಆದರೆ ದುರ್ದೈವವೆಂದರೆ ಧರ್ಮಾಂಧರು ಇದಕ್ಕೆ ವಿರೋಧ ಒಡ್ಡಿದರು. ಕಲ್ಯಾಣದಲ್ಲಿ ಕ್ರಾಂತಿಯಾಯಿತು. ಆಳರಸ ಬಿಜ್ಜಳನ ಕೊಲೆಯಾಯಿತು. ಶಿವಶರಣರು ದಿಕ್ಕೆಟ್ಟು ಓಡಿದರು. ತಮ್ಮ ಸಾಹಿತ್ಯ ಧರ್ಮ ಉಳಿಸಿ, ಬೆಳೆಸಲು. ಸಮಾನತೆಗಾಗಿ ನಿಜ ಅರ್ಥದಲ್ಲಿ ಕ್ರಾಂತಿಯಾದದ್ದು ಇಡೀ ಭಾರತದ ಇತಿಹಾಸದಲ್ಲಿ ಇದುಪ್ರಥಮ. ಈದೃಷ್ಟಿಯಲ್ಲಿ ಬಸವ ಭಾರತದ ಪ್ರಥಮಕ್ರಾಂತಿಕಾರಿ.

## ಬಸವಣ್ಣನವರ ಧಾರ್ಮಿಕ ಸಮಾನತೆ

ಬಸವಣ್ಣನು ಧರ್ಮದ ಬಗೆಗೆ ತನ್ನದೇ ಆದ ವ್ಯಾಖ್ಯೆ ನೀಡಿರುವನು :

ದಯವಿಲ್ಲದ ಧರ್ಮವದೇವುದಯ್ಯ
ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿಯೂ ;
ದಯವೇ ಧರ್ಮದ ಮೂಲವಯ್ಯಾ
ಕೂಡಲ ಸಂಗಯ್ಯನಂತಲ್ಲದೊಲ್ಲನಯ್ಯಾ

ಬಸವಣ್ಣನ ದೃಷ್ಟಿಯಲ್ಲಿ ದಯವಿಲ್ಲದ್ದು ಧರ್ಮವೇ ಅಲ್ಲ. ಅದೇ ರೀತಿ ದೇವರ ಹೆಸರಿನಲ್ಲಿ ಹಾಗೂ ಆಹಾರಕ್ಕಾಗಿ ಪ್ರಾಣಿಗಳನ್ನು ಹಿಂಸಿಸುವ ಧರ್ಮಗಳು ಬಸವಣ್ಣನ ಪ್ರಕಾರ ಅಲ್ಲ. ಸಕಲ ಜೀವಿಗಳಿಗೂ ಲೇಸ ಬಯಸುವವ ಬಸವಣ್ಣ. ಮಾನವರ ಹಿತಕ್ಕಾಗಿ ಅನ್ಯ ಪ್ರಾಣಿಗಳನ್ನು ಹಿಂಸಿಸುವ ವಿಚಾರವೂ ಬಸವನಿಗಿಲ್ಲ. ಮಾನವ-ಕೋಟಿಗಾಗಿ ಒಂದೆರಡು ಸಾಕುಪ್ರಾಣಿಗಳನ್ನು ಬಲಿಕೊಡುವ ದೃಷ್ಟಿಯೂ ಬಸವನಿಗೆ ಇಲ್ಲ. ಒಟ್ಟಿನಲ್ಲಿ ದಯವಿಲ್ಲದ ಧರ್ಮ ದೇವಸಮ್ಮತವಲ್ಲ ಎನ್ನುವುದು ಅವನ ನಿಲುವು.

"ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿಯೂ"-ಎನ್ನುವಲ್ಲಿ ಮಾನವೀಯತೆ ಇದೆ, ಸಮಾನತೆ ಇದೆ. ಬಸವನದು ದೇವರಿಗಾಗಿ ಧರ್ಮವಲ್ಲ. ದೇವಸಂಪತ್ತಿಗಾಗಿ ಹಿಂಸೆ, ಹೋಮ, ಹವನ, ಮಾಡುವವನಲ್ಲ ಬಸವ. ಇಡೀ ಭರತಖಂಡದ ಇತಿಹಾಸದಲ್ಲಿ ಇಂಥ ಮಾನವೀಯ ಧರ್ಮವನ್ನು ಮೆರೆದವರಲ್ಲಿ ಪ್ರಥಮರು ಬಹುಶಃ ಬುದ್ಧ ಬಸವರಿಬ್ಬರೇ. ಹರಿಹರನ ಮಾತಿನಲ್ಲಿ ಹೇಳಬೇಕಾದರೆ "ಬಸವನ ಬಟ್ಟೆ (ದಾರಿ)ಯೇ ಬಟ್ಟೆ"

ಆಧ್ಯಾತ್ಮಿಯು ಸಮಾನ ದೃಷ್ಟಿಯುಳ್ಳವ. ಅದು ಕಾರಣ ಬಸವನದು ಸಮಾನತೆಯ ದೃಷ್ಟಿ. ಆಧ್ಯಾತ್ಮಿಕತೆಯಲ್ಲಿಯೂ ಆತ ಏಕತೆಯನ್ನು ತಂದನು. ಮೂಢನಂಬಿಕೆಯ ಹಲವು ದೈವಗಳನ್ನು ಅಲ್ಲಗಳೆದು ಎಲ್ಲರ ಹೃತ್ಕಮಲದಲ್ಲಿ ಇಷ್ಟ ಲಿಂಗವನ್ನು ಪ್ರತಿಷ್ಠಾಪಿಸಿದುದು ಬಸವಣ್ಣನ ವೈಶಿಷ್ಟ್ಯ. ಈ ವಚನಗಳನ್ನು ನೋಡಿ

ಮಡಿಕೆ ದೈವ, ಮೊರ, ಬೀದಿಯ ಕಲ್ಲು ದೈವ
ಹಣಿಗೆ ದೈವ, ಬಿಲ್ಲ ನಾರಿ ದೈವ, ಕಾಣಿರೋ.
ಕೊಳಗ ದೈವ ಗಿಣ್ಣಿಲು ದೈವ ಕಾಣಿರೋ
ದೈವ ದೈವವೆಂದು ಕಾಲಿಡಲಿಂಬಿಲ್ಲಾ !
ದೈವನೊಬ್ಬನೇ ಕೂಡಲ ಸಂಗಮದೇವ....

ದೇವನೊಬ್ಬ, ನಾಮ ಹಲವು,
ಪರಮ ಪತಿವ್ರತೆಗೆ ಗಂಡನೊಬ್ಬ ;
ಮತ್ತೊಂದಕ್ಕೆರಗಿದರೆ ಕಿವಿ ಮೂಗು ಕೊಯ್ವನು !
ಹಲವು ದೇವರ ಎಂಜಲ ತಿಂಬವರನೇನೆಂಬೆ,
ಕೂಡಲಸಂಗಮ ದೇವಾ ?

ಸ್ಥಾವರ ಲಿಂಗವು ಅಸಮಾನತೆಗೆ ಎಡೆ ಮಾಡಿತ್ತು. ದಲಿತರು ಮತ್ತು ಹೆಣ್ಣುಮಕ್ಕಳಿಗೆ ಗುಡಿಯಲ್ಲಿ ಪ್ರವೇಶವಿರಲಿಲ್ಲ. ಇದರ ಸೇಡನ್ನು ಬಸವಣ್ಣ ಇಷ್ಟ ಲಿಂಗದ ಮುಖಾಂತರ ತೀರಿಸಿಕೊಂಡ. ಗುಡಿಯಲ್ಲಿಯ ಸ್ಥಾವರಲಿಂಗವನ್ನು ಇಷ್ಟ ಲಿಂಗವನ್ನಾಗಿ ಮಾರ್ಪಡಿಸಿ ಭಕ್ತನ ಎದೆಗೆ ಕಟ್ಟಿದ. ದಲಿತರು ಈಗ ಗುಡಿಗೆ ಹೋಗಬೇಕಾಗಿಲ್ಲ. ಗುಡಿಯಲ್ಲಿದ್ದವನೇ ಈಗ ಎದ್ದು ಬಂದು ಭಕ್ತನ ಕೊರಳಲ್ಲಿರುವ, ಈರೀತಿ ಜಗವರಿಯದ ಮಹತ್ಕಾರ್ಯವನ್ನು ಮಾಡಿ ಬಸವನು ದಲಿತೋದ್ಧಾರ ಮಾಡಿದ. ಸ್ಥಾವರಲಿಂಗ ಬಸವನಿಂದ ಇಷ್ಟಲಿಂಗವು ಏಕತೆ ಮತ್ತು ಸಮಾನತೆಯ ದ್ಯೋತಕ. ಅದು ಭಕ್ತನ ಎದೆಯನ್ನೇ ಗರ್ಭಗುಡಿ ಮಾಡಿಕೊಂಡಿತು.

—ಸತ್ಯ ಶುದ್ಧ ಕಾಯಕದ ಕೃಪೆ,

# ಇತಿಹಾಸಕಾರ ಪಾದ್ರಿ ಹೆರಾಸ್ [1888—1956]

ಎಂ. ಎ. ಊರ್ಮಿಳಾದೇವಿ, ರೀಡರ್, ಸಿದ್ಧಗಂಗಾ ಕಾಲೇಜ್, ತುಮಕೂರು.

ಬಾರ್ಸಿಲೋಲಾದಲ್ಲಿ 1888ರಲ್ಲಿ ಜನಿಸಿದ ಸ್ಪೈನಿನ ಪಾದ್ರಿ ಹೆರಾಸರು. 1922 ರಲ್ಲಿ ತಮ್ಮ 34 ನೇ ವಯಸ್ಸಿನಲ್ಲಿ ಬೊಂಬಾಯಿಗೆ ಬಂದರು. ಇವರು ಅಧ್ಯಾಪಕ ವೃತ್ತಿಯನ್ನು ಕೈಗೊಂಡರು.

ಭಾರತ ಇತಿಹಾಸ ಮತ್ತು ಸಂಸ್ಕೃತಿ ಹೆರಾಸರನ್ನು ಹೆಚ್ಚು ಆಕರ್ಶಿಸಿತು. "ಭಾರತ' ಹೆರಾಸರ ಅಧ್ಯಯನದ ಪ್ರಿಯ ವಸ್ತುವಾಯಿತು.

ಭಾರತ ಇತಿಹಾಸದ ಬಗ್ಗೆ ಬೊಂಬಾಯಿಯ ಸೇಂಟ್ ಜೆವಿಯರ್ ಕಾಲೇಜಿನ ಪ್ರಿನ್ಸಿಪಾಲರಾದ ಫಾದರ್ ಬಟ್ಲರ್ ಮತ್ತು ಹೆರಾಸರ ನಡುವೆ ಜರುಗಿದ ಸಂಭಾಷಣೆ ಕುತೂಹಲಕಾರಿಯಾಗಿದೆ.

—ಏನು ಬೋಧಿಸುತ್ತೀರಿ ? ಬಟ್ಲರರ ಪ್ರಶ್ನೆ.

ಭಾರತೀಯ ಇತಿಹಾಸ-ಹೆರಾಸರ ಉತ್ತರ. ಭಾರತೀಯ ಇತಿಹಾಸ ಬಗ್ಗೆ ನಿಮಗೇನು ತಿಳಿದಿದೆ ? -ಬಟ್ಲರರ ಮರುಪ್ರಶ್ನೆ.

ಏನು ಗೊತ್ತಿಲ್ಲ ಅಧ್ಯಯನ ಮಾಡಿ ಬೋಧಿಸುವೆ ಹೆರಾಸರ ಉತ್ತರ. ಇದು ಭಾರತೀಯ ಇತಿಹಾಸದ ಬಗ್ಗೆ ಹೆರಾಸರಿಗಿದ್ದ ಕುತೂಹಲವನ್ನು ಆಸಕ್ತಿಯನ್ನು ವ್ಯಕ್ತಪಡಿಸುತ್ತದೆ.

ಭಾರತೀಯ ಇತಿಹಾಸದಲ್ಲಿ ಅವರಿಗಿದ್ದ ಆಸಕ್ತಿ ಅಪಾರ. ಭಾರತೀಯ ಇತಿಹಾಸದ ಗಣಿಯನ್ನು ತೆರೆದಿಟ್ಟ ಕೀರ್ತಿ ಹೆರಾಸರಿಗೆ ಸಲ್ಲುತ್ತದೆ.

ಹೆರಾಸರ ಮೊದಲ ಪುಸ್ತಕವಾದ "ಭಾರತ ಪ್ರಾಕ್ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಅಧ್ಯಯನ" ಪ್ರಾಚ್ಯಶಾಸ್ತ್ರವನ್ನಾಧರಿಸಿದೆ.

ಈ ಪುಸ್ತಕದಲ್ಲಿ ನಲಂದ ವಿಶ್ವವಿದ್ಯಾಲಯವನ್ನು ಸ್ಥಾಪಿಸಿದ, ನಂದರು ಮತ್ತು ಯುವರ್ಾಚುವಾಂಗನ ಬಗ್ಗೆ ವಿವರಣೆ ಇದೆ.

ಇದಲ್ಲದೆ ಹೆರಾಸರು ಹದಿಮೂರು ಪುಸ್ತಕಗಳನ್ನು 230 ಪ್ರಬಂಧಗಳನ್ನು ರಚಿಸಿದ್ದಾರೆ. ಕಾಲಗಣನೆ ಮತ್ತು ಘಟನಾವಳಿಗಳ ಬಗ್ಗೆ ಅವರಿಗಿದ್ದ ಜ್ಞಾಪಕಶಕ್ತಿ ಅಪಾರ. ಇವರು ತಮ್ಮ ಸಂಶೋಧನೆಗಳನ್ನು ಪೂನಾದ ಬಂಡಾರ್‌ಕರ್ ಓರಿಯಂಟಲ್ ರೀಸರ್ಚ್ ಇನ್‌ಸ್ಟಿಟ್ಯೂಟ್‌ನಲ್ಲಿ ನಡೆಸಿದರು.

ಬೊಂಬಾಯಿಯ "ರಾಯಲ್ ಏಶಿಯಾಟಿಕ್ ಸೊಸೈಟಿ ಡಾ|| ಫ್ಲೀಟರ ನಂತರ ಅವನತಿ ಹೊಂದಿತು. ಹೆರಾಸರು ಮೇಲಿನ ಸಂಸ್ಥೆಯ ಪುನಃ ಏಳಿಗೆಗೆ ಶ್ರಮಿಸಿದರು. ಅದರ ಫಲವಾಗಿ "ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಹಿಸ್ಟರಿ ಅಂಡ್ ಕಲ್ಚರ್–ಸಂಸ್ಥೆ 1926ರಲ್ಲಿ ಜನ್ಮತಾಳಿತು.

ಈ ಸಂಸ್ಥೆ ಸಂಗ್ರಹಿಸುವ ಪ್ರಾಚ್ಯವಸ್ತುಗಳಲ್ಲಿ .... ಮೆಸೆಪೊಟೆಮಿಯಾದ ಮುದ್ರೆಗಳು ಗಾಂಧಾರ ಶೈಲಿಯಲ್ಲಿರುವ "ಅಮರಪಾಲಿ ಬುದ್ಧನಿಗೆ ಮಾವಿನ ತೋಪನ್ನು ಅರ್ಪಿಸುತ್ತಿರುವ ದೃಶ್ಯ," ಗುಜರಾತ್, ರಾಜಾಸ್ಥಾನಗಳಲ್ಲಿನ ಶಿಲಾ ವಿಗ್ರಹಗಳು, ಕ್ರೈಸ್ತದೃಶ್ಯಗಳು–1662 ರಲ್ಲಿ ಆಗ್ರಾದಲ್ಲಿ ನಿಧನರಾದ ಜೂಯಿಸ್ಟ್ ಪಾದ್ರಿಯ ಸಮಾಧಿಯ ಕಲ್ಲು - ಹೆನ್ರಿ ಬೀಚರರ ಅಭಿಪ್ರಾಯಗಳು ಎಂಬ ಪುಸ್ತಕ ಪ್ರಮುಖವಾದವು.

ಹೆನ್ರಿ ಬೀಚರು ಸ್ವಲ್ಪಕಾಲ ಸುಲ್ತಾನನ ಸೆರೆಯುಲ್ಲಿದ್ದರು. ಬೀಚರ ಪುಸ್ತಕವನ್ನು ಹೆರಾಸರು ರಸ್ತೆ ಬದಿಯ ವ್ಯಾಪಾರಿಯಿಂದ ಕೇವಲ ಎಂಟು ಅಣೆಗಳಿಗೆ ಕೊಂಡದ್ದು, (ಆಶ್ಚರ್ಯ) ಸಂಗತಿಯೇ ಸರಿ.

ಇಂಡಿಯನ್ ಇನ್‌ಸ್ಟಿಟೂಟ್ ಆಫ್ ಹಿಸ್ಟರಿ ಅಂಡ್ ಕಲ್ಚರ್ ಸಂಸ್ಥೆಯಲ್ಲಿ ಸೂಕ್ಷ್ಮದರ್ಶಕ ಘಟಕವಿದ್ದು, ಸಂಸ್ಥೆಗೆ ವಿಶ್ವವಿದ್ಯಾಲಯು ಸಹಾಯಧನ ದೊರೆತಿದೆ.

ಕೇವಲ 80 ಪುಸ್ತಕಗಳಿಂದ ಪ್ರಾರಂಭವಾದ ಈ ಸಂಸ್ಥೆಯ ಗ್ರಂಥಾಲಯದಲ್ಲಿ ಈಗ ಕಲೆ, ಪ್ರಾಚ್ಯಶಾಸ್ತ್ರ, ಶಾಸನಗಳು ಮತ್ತು ಇತಿಹಾಸಕ್ಕೆ ಸಂಬಂಧಪಟ್ಟ ಸುಮಾರು 26,000 - ಗ್ರಂಥಗಳಿವೆ.

ಈ ಸಂಸ್ಥೆಯ ಬೆಳ್ಳಿಹಬ್ಬ ಡಾ|| ರಾಧಾಕೃಷ್ಣನ್‌ರವರ ಅಧ್ಯಕ್ಷತೆಯಲ್ಲಿ 1951ರಲ್ಲಿ ನಡೆಯಿತು.

ಇತಿಹಾಸಕಾರರೂ "ಬಾಂಬೆ ಸ್ಕೂಲ್ ಆಫ್ ಹಿಸ್ಟರಿ ಅಂಡ್ ಆರ್ಕಾಲಜಿ" ಸಂಸ್ಥೆಯ ಸ್ಥಾಪಕರು ಆಗಿದ್ದ ಪಿತಾಮಹ ಹೆರಾಸರು 1956ರಲ್ಲಿ ವಿಧಿವಶರಾದರು.

1960ರಲ್ಲಿ ಹೆರಾಸ್ ಇನ್‌ಸ್ಟಿಟ್ಯೂಟನ್ನು ಸ್ಥಾಪಿಸಲಾಯಿತು. ಈ ಸಂಸ್ಥೆ ಹೆರಾಸ್ ಸ್ಮಾರಕ ವಾರ್ಷಿಕ ಉಪನ್ಯಾಸಗಳನ್ನು ಏರ್ಪಡಿಸುತ್ತದೆ. ಈ ಸಂಸ್ಥೆ ದ್ವೈವಾರ್ಷಿಕ ಪತ್ರಿಕೆಯನ್ನು ಪ್ರಕಟಿಸುತ್ತದೆ. ಈ ಸಂಸ್ಥೆಯ ಬೆಳ್ಳಿಹಬ್ಬವನ್ನು 1976ರಲ್ಲಿ ಆಚರಿಸಲಾಯಿತು. ಇದು ಹೆರಾಸರ 20ನೇ ಪುಣ್ಯತಿಥಿಯ ಸಂದರ್ಭವಾಗಿದ್ದುದು ಒಂದು ವಿಶೇಷ ಸಂಗತಿಯಾಗಿದೆ.

[ಆಧಾರ :– ಇಲ್‌ಸ್ಟ್ರೇಟೆಡ್ ವೀಕ್ಲಿ ಆಫ್ ಇಂಡಿಯಾ 1–1–1978]

ಒಂದು ನೆನಪು :

## ಪ್ರಕಾಂಡ ಪಂಡಿತ ಪ್ರೊ॥ ಕೆ. ವೆಂಕಟರಾಮಪ್ಪ.

—ಕವಿತಾಕೃಷ್ಣ

ಮೊನ್ನೆ ತಾನೆ ನಮ್ಮಿಂದ ಅಗಲಿ ಅಸ್ತಂಗತರಾದ ಪ್ರೊ॥ ಕೆ ವೆಂಕಟರಾಮಪ್ಪನವರು ಕನ್ನಡ, ತೆಲುಗು, ಸಂಸ್ಕೃತ ಭಾಷೆಗಳನ್ನು ಬಲ್ಲ ಪ್ರಕಾಂಡ ಪಂಡಿತ-ರಾಗಿದ್ದರು. ಶ್ರೇಷ್ಠ ಶಿಕ್ಷಕರಾಗಿದ್ದುದು ಮಾತ್ರವಲ್ಲದೆ ಶ್ರೇಷ್ಠ ಭಾಷಣಕಾರರೂ, ಬರಹಗಾರರೂ ಆಗಿದ್ದರು. ಕರ್ನಾಟಕಾಂಧ್ರ ಸಾಹಿತ್ಯ ಸಮೀಕ್ಷೆಯನ್ನು ಒಪ್ಪವಾಗಿ ಮಾಡಿದ ವಿಚಾರ ಶೀಲರಾಗಿದ್ದರು. ಪ್ರಬಂಧ ರಚನೆಯಲ್ಲೂ ಸಿದ್ಧಹಸ್ತರಾದಿದ್ದರು ದಿವಂಗತರು ಬರೆದುದೇ ಕಮ್ಮಿ ಎಂಬ ಅಪವಾದವಿದೆ. ಸಂಖ್ಯೆ ದೃಷ್ಟಿಯಿಂದ ಈ ಮಾತು ನಿಜವೆನಿಸಿದರೂ ಪೌಲ್ಮಿಕತೆಯಿಂದ ಈ ಮಾತು ಒಪ್ಪುವಂತದಲ್ಲ. ಇಂದಿನ ಬಹುಪಾಲು ಲೇಖಕರು ಕೃತಿಯಿಂದ ಕೃತಿಗೆ ಇಳಿಮುಖವಾಗುತ್ತಿರುವುದನ್ನು ಕಾಣು-ತ್ತಿದ್ದೇವೆ. ಆದರೆ ಕೋಟಿಬಂಡೆ ವೆಂಕಟರಾಮಪ್ಪನವರು ಕೃತಿಯಿಂದ ಕೃತಿಗೆ ಏರಿರುವುದನ್ನು ಕಾಣುತ್ತೇವೆ. ಮೈಸೂರು ವಿಶ್ವ ವಿದ್ಯಾನಿಲಯದ ಕನ್ನಡ ಎಂ ಎ. ಮೊದಲ ತಂಡದ ವಿದ್ಯಾರ್ಥಿಗಳಾಗಿದ್ದ ಇವರು ಸಾಹಿತ್ಯ ಸೇವೆಯನ್ನು ಸದ್ದು ಗದ್ದಲವಿಲ್ಲದೆ ಸಲ್ಲಿಸಿದ ರೀತಿಯನ್ನು ಸಾಹಿತ್ಯಾಸಕ್ತರು ಗುರುತಿಸದೇ ಇಲ್ಲ. ಎಲೆಮರೆಯ ಹೂವಾಗಿ ಅವರು ಬೀರಿದ ಕಂಪು ಬೆಲೆ ಕಟ್ಟಲಾಗದಂತದ್ದು. ಅವರು ಅಮೂಲ್ಯವಾದ 20ಕ್ಕೂ ಹೆಚ್ಚಿನ ಕೃತಿಗಳನ್ನು ರಚಿಸಿ ಹೋಗಿದ್ದಾರೆ.

ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನ ಕೋಟಿಬಂಡೆಯ ವೆಂಕಟ ರಾಮಪ್ಪನವರು ೧೯೦೬ನೆಯ ಇಸವಿ ಮೇ ೨೮ರಂದು ಜನಿಸಿದರು. ಸುಬ್ಬಾಶಾಸ್ತ್ರಿ ಹಾಗೂ ಸಾವಿತ್ರಮ್ಮನವರ ಸುಪುತ್ರರಾಗಿ ಜನಿಸಿದ ಇವರ ಪ್ರಾಥಮಿಕ ವಿದ್ಯಾಭ್ಯಾಸ ಪಾವಗಡದಲ್ಲಿ ಸಾಗಿತು. ಪ್ರೌಢ ವ್ಯಾಸಂಗ ಮೈಸೂರಿನಲ್ಲಿ ಪಡೆದು ೧೯೩೯ರಲ್ಲಿ ಎಂ. ಎ. ಪದವೀಧರರಾದರು ಕನ್ನಡ ಎಂ. ಎ. ಮೊದಲ ತಂಡದ ವಿದ್ಯಾರ್ಥಿಯಾಗಿ-ದ್ದಾಗ ರಾಷ್ಟ್ರಕವಿ ಕುವೆಂಪು ಡಿ. ಎಲ್. ನರಸಿಂಹಾಚಾರ್, ಎನ್. ಅನಂತರಂಗಾ-ಚಾರ್, ಡಿ. ಕೆ. ಭೀಮಸೇನಾಚಾರ್, ಅವರುಗಳು ಸಹ ಓದುಗರಾಗಿದ್ದರು ಕನ್ನಡದ ಅಶ್ವಿನಿ ದೇವತೆಗಳೆನಿಸಿದ ಎ. ಆರ್. ಕೃಷ್ಣಶಾಸ್ತ್ರಿಗಳ ಪ್ರೀತಿ ಪಾತ್ರರಾಗಿದ್ದ ವೆಂಕಟ-ರಾಮಪ್ಪನವರು ಶಾಸ್ತ್ರಿಗಳ ಅಚ್ಚು ಮೆಚ್ಚಿನ ಶಿಷ್ಯರೂ ಆಗಿದ್ದರು. ದಿವಂಗತರ ಪ್ರತಿಭೆ-ಯನ್ನು ಗುರುವೃಂದ ಗಮನಿಸಿ ನೀಡಿದ ಪ್ರೋತ್ಸಾಹವನ್ನೂ, ಆಡಿದ ನುಡಿಗಳನ್ನೂ ಸದಾ ಸ್ಮರಿಸುತ್ತಿದ್ದರು. ತಮ್ಮಲ್ಲಿ ಕನ್ನಡಾಭಿಮಾನದ ಚಿಲುಮೆ ಉಕ್ಕಿದ್ದೇ ಗುರುಗಳ ಕಾರುಣ್ಯದಿಂದ. ಸಾಧನೆ ಸಿದ್ಧಿಗಳಾದುದು ಅವರ ಕರುಣಾ ಪ್ರಸಾದದಿಂದಲೇ ಎಂಬುದು ಅವರ ಅನಿಸಿಕೆಯಾಗಿತ್ತು. ಕನ್ನಡದ ಕಣ್ವ ಬಿ. ಎಂ. ಶ್ರೀಕಂಠಯ್ಯ, ಆಚಾರ್ಯ ಪುರುಷ ತಳುಕಿನ ವೆಂಕಣ್ಣಯ್ಯ, ಜೆ.ಸಿ.ರಾಲೋ ಎಸ್.ಎಸ್.ಸುಬ್ಬರಾಯ, ಎ.ಆರ್.ಕೃ ಮುಂತಾದ ಅಧ್ವರ್ಯುಗಳು ಇವರ ಗುರುಗಳಾಗಿದ್ದರು.

ತ್ರಿಭಾಷಾ ಪಂಡಿತರಾದ ಕೆ. ವೆಂ. ಅವರು ೧೯೩೦ರಲ್ಲಿ ಸೆಂಟ್ರಲ್ ಕಾಲೇಜಿನಲ್ಲಿ ಕನ್ನಡ ಪಂಡಿತರಾಗಿ ನೌಕರಿಗೆ ಸೇರಿದರು. ತುಮಕೂರು, ಬೆಂಗಳೂರುಗಳಲ್ಲಿ ಗಣನೀಯವಾದ ಸೇವೆಯನ್ನು ಸಲ್ಲಿಸಿ ೧೯೬೧ ರಲ್ಲಿ ನಿವೃತ್ತರಾದರು. ಉಪನ್ಯಾಸಕರಾಗಿ, ಪ್ರವಾಚಕರಾಗಿ ಪ್ರೊಫೆಸರ್ ಆಗಿ ದುಡಿದ ಹಿರಿಯ ಜೀವ ವೃತ್ತಿ ಪ್ರವೃತ್ತಿಗಳನ್ನು ನಿಲುಗಡೆಗೊಳಿಸದೆ ಶಾರದಾವಿಲಾಸ ಕಾಲೇಜಿನಲ್ಲಿ ಅಧ್ಯಾಪಕರಾಗಿ ದುಡಿದರು. ಮೈಸೂರಿನ ನಿವೃತ್ತ ಜೀವನ ಸಾಗಿಸುತ್ತಾ ಹಲವು ಮೌಲಿಕ ಕೃತಿಗಳನ್ನು ಬರೆದರು. ಆ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯದ ಅನುದಾನ ಸಮಿತಿಯು ಸಂಶೋಧನಾ ವೇತನ ನೀಡಿತು.

ದಿವಂಗತರಲ್ಲಿ ಒಂದು ರೀತಿ ಸ್ಥಿತ ಪ್ರಜ್ಞಶಕ್ತಿ ಇತ್ತು ಎಂದರೆ ಅವರನ್ನು ಸಮೀಪದಿಂದ ಬಲ್ಲವರಿಗೆ ಈ ಮಾತು ಅತಿಶಯೋಕ್ತಿ ಎನಿಸದು. ಅವರು ಕಳೆದು ಹೋದ ವಿಷಯಗಳ ಬಗ್ಗೆ ಕೊರಗಿ ಮರುಗಿದವರಲ್ಲ. ಭವಿಷ್ಯದ ಬಗ್ಗೆ ಆಶಾಗೋಪುರವನ್ನು ಕಟ್ಟಿದವರಲ್ಲ. ಕಾರ್ಯವಾಗಿ ಕಾಲುಕಟ್ಟುವ ಕೀಳು ಗುಣಕ್ಕೆ ಎಂದೂ ತಲೆಬಾಗಿದವರಲ್ಲ. ಕೀರ್ತಿ ಶನಿಯ ಬೆನ್ನು ಹತ್ತಿದ ಜಾಯಮಾನದವರಲ್ಲ. ದೇವರು ತೋರಿದ ಸನ್ಮಾರ್ಗದಲ್ಲಿ ಮುನ್ನಡೆವ ಸಂಕಲ್ಪ ಅವರದಾಗಿತ್ತು. ಒಪ್ಪನುಡಿ ಅದಕ್ಕೆ ತಕ್ಕ ನಡೆ ಅವರ ಸಾಧನಾ ಮಾರ್ಗವಾಗಿತ್ತು.

ವೆಂಕಟರಾಮಪ್ಪನವರ ಕೃತಿಗಳನ್ನು ಪ್ರಚಾರ ಪುಸ್ತಕ ಮಾಲೆ, ಮೈಸೂರು ವಿ.ವಿ. ಶಾರದಾ ಮಂದಿರ, ಗೀತಾ ಬುಕ್ ಹೌಸ್, ಸಾಹಿತ್ಯ ಅಕಾಡೆಮಿ, ಡಿ.ವಿ ಕೆ ಮೂರ್ತಿ, ವಯಸ್ಕರ ಶಿಕ್ಷಣ ಸಮಿತಿ, ಕನ್ನಡಸಾಹಿತ್ಯಪರಿಷತ್ತು ಮೊದಲಾದ ಸಂಸ್ಥೆಗಳು ಇವರ ಪುಸ್ತಕಗಳನ್ನು ಪ್ರಕಟಗೊಳಿಸಿವೆ ೩೦ಕ್ಕೂ ಹೆಚ್ಚಿನ ಕೃತಿಗಳು ಪ್ರಕಟಗೊಂಡು ಅಮೂಲ್ಯವೆನಿಸಿವೆ. ಕನ್ನಡ ಸಾಹಿತ್ಯ-ತೆಲಗು ಚಾಟುಪದ್ಯಗಳು, ಶ್ರೀನಾಥ-ವೇಮನ ಸಂಪ-ನನ್ನಯ ಒಂದು ಸಮೀಕ್ಷೆ ಚಾಟುವಿಠಲನಾಥನ ಭಾಗವತ ಸಂಪುಟಗಳು, ರಾಘವಾಂಕ, ಕನಕದಾಸರು, ದುರ್ಗಸಿಂಹ, ಕಾವ್ಯ ಮಂಥನ, ವಿಚಾರಲಹರಿ ಬಹುಮುಖ್ಯ ಎನಿಸಿವೆ.

ತಿಪಟೂರಿನಲ್ಲಿ 1981ರಲ್ಲಿ ಜರುಗಿದ ತುಮಕೂರು ಜಿಲ್ಲೆಯ ದ್ವಿತೀಯ ಸಾಹಿತ್ಯ ಸಮ್ಮೇಳನಾಧ್ಯಕ್ಷರಾಗಿದ್ದರು. ಮೊನ್ನೆ ಜರುಗಿದ ಮೈಸೂರಿನ ಅ.ಕ.ಸಾ. ಸಮ್ಮೇಳನದಲ್ಲಿ ಸನ್ಮಾನಿಸಲಾಗಿತ್ತು. ನಾಡಿನಾದ್ಯಂತ ಹಲವೆಡೆ ಇವರ ಉಪನ್ಯಾಸ ಕಾರ್ಯಕ್ರಮಗಳು ಜೊತೆಗೂಡಿ ನಡೆದಿದ್ದವು. ನನಗೆ ದೇವರು ಕೊಟ್ಟ ಶಕ್ತಿ, ನಾನು ಬೆಳೆದ ಪರಿಸರ, ನನಗಿದ್ದ ಬುದ್ಧಿಯ ಪರಿಮಿತಿಗಳಲ್ಲಿ ಎಷ್ಟು ಸಾಧ್ಯವೋ ಅಷ್ಟು ಸಾಹಿತ್ಯ ಸೇವೆಮಾಡಿದ್ದೇನೆ. ಆ ಬಗ್ಗೆ ನನಗೆ ತೃಪ್ತಿ ಸಿಕ್ಕಿದೆ ಎಂದು ನುಡಿದಿದ್ದ ಹಾಗೂ ಮನಮೆಚ್ಚುವಂತೆ ಬಾಳಿದ್ದ ಕೆ. ವೆಂಕಟರಾಮಪ್ಪನವರಂತಹ ಪ್ರಕಾಂಡ ಪಂಡಿತರನ್ನು ಕಳೆದುಕೊಂಡು ನಷ್ಟ ಪಟ್ಟಂತಾಗಿದೆ. ಅಗಲಿದ ಆಚಾರ್ಯ ಪುರುಷರಿಗೆ ಶ್ರದ್ಧಾಂಜಲಿ.

# ವಿಜ್ಞಾನ ಮತ್ತು ಆಧ್ಯಾತ್ಮ

ಶ್ರೀ ಎಚ್. ಎಸ್. ನರಸಿಂಹ ಜೀಯರ್, ಶ್ರೀ ಬಸವೇಶ್ವರ ಇಂಗ್ಲಿಷ್ ಶಾಲೆ, ತುಮಕೂರು-2

ಮಹಾಭಾರತ ಯುದ್ಧ ನಡೆಯುತ್ತಿರುವಾಗ ಆಚಾರ್ಯ ದ್ರೋಣರನ್ನು ಪಾಂಡುವರು ಕೊಂದ ಬಗ್ಗೆ ಬರುವ ಸನ್ನಿವೇಶವನ್ನು ನಾವೆಲ್ಲಾ ಅರಿತಿದ್ದೇವೆ. ಆಚಾರ್ಯರನ್ನು ನೇರ ಯುದ್ಧದಲ್ಲಿ ಸೋಲಿಸಲು ಸಾಧ್ಯವಿಲ್ಲವೆಂಬುದನ್ನು ಅರಿತ ಶ್ರೀ ಕೃಷ್ಣನು ತಂತ್ರ ಹೂಡಿ "ಅಶ್ವತ್ಥಾಮೋ ಹತಃ ಕುಂಜರಃ" ಎಂಬ ವಾಣಿಯನ್ನು ಧರ್ಮರಾಯನಿಂದ ಹೇಳಿಸಿದ. "ಕುಂಜರಃ" ಶಬ್ದವು ಆಚಾರ್ಯರ ಕಿವಿಗೆ ಬೀಳದಂತೆಮಾಡಲು ತನ್ನ ಪಾಂಚಜನ್ಯವನ್ನೂದಿದ. "ಅಶ್ವತ್ಥಾಮೋ ಹತಃ" ಎಂಬ ವಾಕ್ಯ ಧರ್ಮರಾಯನಿಂದ ಹೇಳಲ್ಪಟ್ಟಿರುವುದರಿಂದ ಅದನ್ನು ಸತ್ಯವೆಂದೇ ಭಾವಿಸಿ ತಮ್ಮ ದೇಹವನ್ನು ರಣರಂಗದಲ್ಲಿಯೇ ಬಿಟ್ಟು ಮಗನ ಯೋಗಕ್ಷೇಮ ನೋಡಲು ಸೂಕ್ಷ್ಮ ರೂಪದಲ್ಲಿ ಹೋದರು. ದೇಹ ರಣರಂಗದಲ್ಲಿದ್ದರೂ ದೇಹಿ ಮಾತ್ರ ಮಗನನ್ನು ಅರಸುತ್ತಿತ್ತು. ಆಗ ಅರ್ಜುನನಿಂದ ಆಚಾರ್ಯರ ದೇಹಿ ಇಲ್ಲದ ದೇಹವನ್ನು ಶ್ರೀ ಕೃಷ್ಣನು ಕತ್ತರಿಸಿದ. ಈ ಸನ್ನಿವೇಶವನ್ನು ಪರಿಶೀಲಿಸಿದಾಗ ಭೌತ ದೇಹ ಬೇರೆ ಹಾಗೂ ಅದರಲ್ಲಿ ವಾಸಿಸುವ ದೇಹಿ ಬೇರೆ ಎಂಬ ಭಾವನೆ ಎಲ್ಲರಲ್ಲಿಯೂ ಮೂಡುವುದು ಸಹಜವಾಗಿದೆ. ಇದು ಪುರಾಣದಲ್ಲಿ ಬರುವ ವಿಚಾರ. ಇಂತಹ ಅನೇಕ ಅತೀಂದ್ರಿಯ ಘಟನೆಗಳನ್ನು ವೇದಗಳಲ್ಲಿ ಉಪನಿಷತ್ತುಗಳಲ್ಲಿ ಹಾಗೂ ಪುರಾಣಗಳಲ್ಲಿ ನೋಡುತ್ತೇವೆ. ಈ ಅಂಶವನ್ನು ವೈಜ್ಞಾನಿಕ ಯುಗದಲ್ಲಿ ನಂಬಲು ಸಾಧ್ಯವೇ? ನಂಬಲು ಸಾಧ್ಯವಿಲ್ಲವೆಂದೇ ಅನೇಕರ ಭಾವನೆ.

ಈ ಬಗ್ಗೆ ವಿಜ್ಞಾನ ಏನು ಹೇಳುತ್ತದೆ? ಇಂತಹ ವಿಚಾರಗಳನ್ನು ಪ್ರಯೋಗಗಳಿಗೆ ಅಳವಡಿಸಲಾಗಿದೆಯೇ? ಮನೋವಿಜ್ಞಾನಿಗಳು ಈ ಘಟನೆಗಳ ವಿಚಾರದಲ್ಲಿ ಏನು ಅಭಿಪ್ರಾಯಪಡುತ್ತಾರೆ? ಎಂಬ ಬಗ್ಗೆ ಈ ವಿಚಾರ ಮಾಡೋಣ. ನ್ಯಾಸಾದಲ್ಲಿರುವ ಟೊಪೇಕಾದ ವೆಟಿಕಿನ್ಸ್ ಆಸ್ಪತ್ರೆಯ ಸೈಕಿಯಾಟ್ರಿ ವಿಭಾಗದ ಮುಖ್ಯಸ್ಥರಾದ ಸ್ಟುವರ್ಟ್‌ಟ್ವಿವ್ಲೋರವರು ಅನೇಕ ಪ್ರಯೋಗಗಳನ್ನು ಈವಿಚಾರದಲ್ಲಿ ನಡೆಯಿಸಿ ಔಷಧ ಸೇವನೆ, ಸುಪ್ತ ಸೂಚನೆ ಹಾಗೂವಿದ್ಯುತ್ ತರಂಗಗಳ ಮೂಲಕ ಮಿದುಳನ್ನು ಉತ್ತೇಜನಗೊಳಿಸಿ ದೇಹಾತೀತ ಅನುಭವವನ್ನು ಸ್ವತಃ ತಾವೇ ಪಡೆಯಬಹುದೆಂಬುದನ್ನು ಧೃಡಪಡಿಸಿದ್ದಾರೆ. ಕೆಂಟಕಿಯ ಅಸ್ವನ್ ಪ್ರಯೋಗ ಶಾಲೆಯಲ್ಲಿನ ಸುಸಜ್ಜಿತ ಪಂಜರದಲ್ಲಿ ಶ್ರೀ ಟ್ವಿವ್ಲೋರವರು ಕುಳಿತುಕೊಂಡು ಅವರ ಮಿದುಳನ್ನು ಶಬ್ದಾತೀತ ತರಂಗಗಳ ಮೂಲಕ ಪ್ರಚೋದನೆಗೆ ಒಳಪಡಿಸಿದರು. ಆಗ ಅವರಿಗಾದ ಅನುಭವವನ್ನು ಈಗ ಅವರ ಮಾತಿನಲ್ಲೇ ಕೇಳೋಣ.

"ಮಿದುಳನ್ನು ಪ್ರಚೋದಿಸಿದ ನಂತರ ನನ್ನ ಮನಸ್ಸು ದೇಹದಿಂದ ಬೇರೆಯಾಗುತ್ತಿರುವುದನ್ನು ನಾನು ಗಮನಿಸುತ್ತಲೇ ಇದ್ದೆ. ಇದೇ ಸ್ಥಿತಿಯಲ್ಲಿ ಮನಸ್ಸು ವೇಗವಾಗಿ ಒಂದು ಸುರಂಗದ ಮೂಲಕ ಕತ್ತಲಿನಲ್ಲಿ ಪ್ರಯಾಣ ಮಾಡಿ ಸುಮಾರು ನಲವತ್ತು ಮೈಲಿಗಳಷ್ಟು ದೂರವಿದ್ದ ನನ್ನ ಮನೆಯನ್ನು ತಲುಪಿತು. ಇದರ ಅರಿವು ನನಗೆ ಚೆನ್ನಾಗಿಯೇ ಇತ್ತು. ಆ ವೇಳೆಯಲ್ಲಿ ನನ್ನ ಹೆಂಡತಿ ಅಡಿಗೆ ಮನೆಗೆ ನೀರನ್ನು ಕುಡಿಯಲು ಹೋಗುತ್ತಿದ್ದುದನ್ನು ಗಮನಿಸಿದೆ. ಆಗ ವೇಳೆ ರಾತ್ರಿ 9-30 ಗಂಟೆ. ಆಕೆ ನೀರನ್ನು ಕುಡಿದು ಪುನಃ ಮಲಗುವ ಕೋಣೆಗೆ ಹೋಗುತ್ತಿದ್ದುದನ್ನೂ ನೋಡಿದೆ. ಅವಳ ಪಕ್ಕದಲ್ಲಿ ಕೆಲವು ಕಾಲ ನಿಂತು ನಂತರ ನಿಲುವು ಗನ್ನಡಿಯ ಹತ್ತಿರ ಹೋಗಿ ನನ್ನ ಪ್ರತಿಬಿಂಬಕಾಣಲು ಪ್ರಯತ್ನಿಸಿದೆ. ಆದರೆ ನನ್ನ ಪ್ರತಿಬಿಂಬ ಕನ್ನಡಿಯಲ್ಲಿ ಕಾಣಲಿಲ್ಲ. ನಂತರ ಹಿಂತಿರುಗಿ ಬಂದು ನನ್ನ ಶರೀರವನ್ನು ಸೇರಿದಂತೆ ಅನುಭವವಾಯಿತು.

ಈ ಅನುಭವವನ್ನು ನಾನು ಊರಿಗೆ ಬಂದ ನಂತರ ಯಾರಿಗೂ ಹೇಳಲಿಲ್ಲ, ನನ್ನ ಹೆಂಡತಿಗೂ ಹೇಳಲಿಲ್ಲ. ಇಂತಹ ಅನುಭವಗಳ ಬಗ್ಗೆ ಅವಳಿಗೆ ನಂಬಿಕೆ ಸಹ ಇರಲಿಲ್ಲ, ನಾನಾಗಿ ಅವಳನ್ನು ಕೇಳದೆ ಇದ್ದರೂ ಅವಳೇ ಈ ರೀತಿ ಹೇಳಿದಳು. "ನೀವು ಕೆಂಟಕಿಯಲ್ಲಿದಾಗ ಒಂದು ದಿನ ರಾತ್ರಿ 9-30 ಗಂಟೆಯಲ್ಲಿ ಅಡಿಗೆ ಮನೆಗೆ ನೀರನ್ನು ಕುಡಿಯಲು ಹೋಗಿ ಹಿಂತಿರುಗಿ ಬರುತ್ತಿದ್ದಾಗ ಯಾವುದೋ ನೆರಳಿನಂಥದೊಂದು ಕ್ಷಣಕಾಲ ನನ್ನ ಸಮೀಪದಲ್ಲಿದ್ದಂತೆ ನನಗೆ ಅನುಭವವಾಯಿತು. ನಂತರ ಅದು ನಿಲವು ಗನ್ನಡಿ ಹತ್ತಿರ ನಿಂತಂತಾಗಿ ಮಾಯವಾಯಿತು'' ಇದರಿಂದ ಸಂತೋಷಗೊಂಡ ಟ್ವಿವ್ಲೋ ತನ್ನ ಪ್ರಯೋಗ ಯಶಸ್ವಿಯಾದುದನ್ನು ಗಮನಿಸಿ ದೇಹಾತೀತ ಅಸ್ಥಿತ್ವದಲ್ಲಿದೆ ಎಂಬುದ ತರ್ಕಬದ್ಧವಾಗಿದೆ ಎಂದು ಖಚಿತ ಪಡಿಸಿದ.

ಅತೀಂದ್ರಿಯ ಘಟನೆಗಳು ಸಾಮಾನ್ಯವಾಗಿ ಬುದ್ಧಿ ಭ್ರಮಣೆ ಯಾದ ವ್ಯಕ್ತಿಗಳಿಗೆ ಮಾತ್ರ ಸೀಮಿತವಾದುದು ಎಂಬ ಭಾವನೆ ಕೆಲವು ಮನಶಾಸ್ತ್ರಜ್ಞರಲ್ಲಿತ್ತು. ಈ ದಿಶೆಯಲ್ಲಿ ಮೇಲ್ಕಂಡತಹ ಅನೇಕ ಪ್ರಯೋಗಗಳನ್ನು ನಡೆಸಿದ ನಂತರ ಹಾಗೂ ಅಂತಹ ಅನೇಕ ಘಟನೆಗಳನ್ನು ವೈಜ್ಞಾನಿಕವಾಗಿ ಪರಿಶೀಲಿಸಿದ ನಂತರ ವಿಜ್ಞಾನಿಗಳು ತಮ್ಮ ಮನೋಭಾವವನ್ನು ಬದಲಾಯಿಸಿದ್ದಾರೆ. ಅಮೆರಿಕಾದ "ಟ್ರಾನ್ಸ್ ಪರ್ಸನಲ್ ಸೈಕಾಲಜಿ" ವಿಭಾಗದ ಅನ್ವೇಷಣಾ ತಜ್ಞರು ಅನೇಕ ಅತೀಂದ್ರಿಯ ಘಟನೆಗಳನ್ನು ಪರಿಶೀಲಿಸಿ ತಮ್ಮ ಪತ್ರಿಕೆಯಲ್ಲಿ ಪ್ರಕಟಮಾಡಿದ್ದಾರೆ. ಅವರ ಅಭಿಪ್ರಾಯದಂತೆ ಮನುಷ್ಯನ ಮನಸ್ಸು ಮಿದುಳಿಗಿಂತ ಭಿನ್ನವಾದುದು. ಮನಸ್ಸಿನ ನಿಯಂತ್ರಣದಿಂದ ಮಾನವನ ನರಮಂಡಲ ಹಾಗೂ ದೈಹಿಕ ಚಟುವಟಿಕೆಗಳನ್ನೂ ಸಹ ನಿಯಂತ್ರಿಸಬಹುದು. ಈ ತೀರ್ಮಾನಗಳು, ನಮ್ಮ ಹಿಂದಿನ ವೇದ, ಉಪನಿಷತ್ತು ಹಾಗೂ ಪುರಾಣಗಳಲ್ಲಿ ಬರುವ ಅನೇಕ ಅತೀಂದ್ರಿಯ ಘಟನೆಗಳ ಬಗ್ಗೆ ಬೆಳಕು ಬೀರುವುದಲ್ಲದೆ ಅವುಗಳು ನಡೆದಿರಲು ಸಾಧ್ಯ ಎಂಬ ಅರಿವನ್ನೂ ನಮ್ಮಲ್ಲಿ ಮೂಡಿಸುತ್ತವೆ. ಈ ದಿಶೆಯಲ್ಲಿ ಇನ್ನೂ ಹೆಚ್ಚಿನ ಪ್ರಯೋಗಗಳು ರಷ್ಯಾ, ಅಮೆರಿಕಾಗಳಲ್ಲದೆ ಇನ್ನೂ ಇತರ ದೇಶಗಳಲ್ಲಿಯೂ ನಡೆಯುತ್ತಿವೆ.

# ಅ ಶಾ ಶ್ವ ತಾ ನಿ ಜ ಗ ತ್

ರಾಜೇಂದ್ರಶಿಶು, 242, ಉತ್ತರಾಧಿಮಠದ ರಸ್ತೆ, ಮೈಸೂರು-4.

ಸಿರಿಯು ಸಂಪದವು ಸ್ಥಿರವೆಂದ ಜಗಜನರ
ಪರಿಯ ಕಂಡು ಜಗ ನಗುತ್ತ ಕೇಳಿತ್ತು,
ಸ್ಥಿರವಾವುದಿಲ್ಲಿ ?

ಅಶಾಶ್ವತವಾದ ಈ ಜಗತ್ತಿನಲ್ಲಿ ಯಾವುದು ಶಾಶ್ವತ ? ಯಾವುದು ಅಶಾಶ್ವತ ? ಮಾನವ ಅಶಾಶ್ವತವಾದುದನ್ನ ನಂಬಿ ತನ್ನ ಸಂತಸದ ದಿನಗಳನ್ನು ದುಃಖಮಯವಾಗಿಸಿದ್ದಾನೆ. ಆತನ ಆಶೆ ಎಂಬ ಸರ್ಪ ಹೆಡೆ ಎತ್ತಿ ಎಷ್ಟು ಜನರನ್ನ ಘಾಸಿಗೊಳಿಸಿಲ್ಲ. ''ಜಾತಸ್ಯಂ ಮರಣಂ ಧೃವಂ'' ಎಂದು ಅರಿತಿದ್ದರೂ ಆತನ ದುರಾಶೆಯ ರೂಪ ಇನ್ನೂ ಆಳವಾಗುತ್ತಲೇ ಇದೆ. ಕಾಲವೆ ಅಶಾಶ್ವತವಾಗಿರುವಾಗ ನಮ್ಮ ಜೀವನವೇನು ? ಕಾಲ ಶಾಶ್ವತವಾಗಿದ್ದರೆ. ಕೃತಯುಗ, ತ್ರೇತಾಯುಗ ದ್ವಾಪರಯುಗ' ಕಲಿಯುಗಗಳ ಚಕ್ರಸುತ್ತುತ್ತಿರಲಿಲ್ಲ, ಆಯುಗಗಳ ಸ್ಥಿತಿ ಹೀಗಾದಾಗ ನಮ್ಮ ಬದುಕೇನು ?

ನಾವು ಆಶೆಯತಂದವರೆ ಹೊರತು ಆಯುಷ್ಯ ತಂದವರಲ್ಲ. ಇದನ್ನರಿತ ಶರಣರು ಹೇಳಿದುದು "ಅರ್ಥರೇಖೆ ಇದ್ದಲ್ಲಿ ಫಲವೇನು ? ಆಯುಷ್ಯ ರೇಖೆ ಇಲ್ಲದನ್ನಕ್ಕ" ಜಗದ ಅಶಾಶ್ವತತೆಯನ್ನ ಚೆನ್ನಾಗಿ ಅರಿತಿದ್ದರು ಶರಣರು. ಕಲ್ಯಾಣ ಕ್ರಾಂತಿಯ ಸಮಯದಲ್ಲಿ ಬಸವಣ್ಣನವರು ಮಂತ್ರಿ ಪದವಿಯ ಸಂಕೋಲೆಯನ್ನು ಕಳಚಿಟ್ಟು ಅದರತ್ತತಿರುಗಿ ನೋಡದೆ ನಿರ್ಲಿಪ್ತರಾಗಿ ಹೋಟಿದ್ದು ಈ ಲೋಕದ ಬಂಧನದಿಂದ ಮುಕ್ತರಾದದ್ದು ಇಲ್ಲಿ ನೆನಪಿಗೆ ಬರುತ್ತದೆ. ಅವರಿಗೆ ಗೊತ್ತಿತ್ತು ಸಿರಿಯು ಸಂಪದವು ಸ್ಥಿರವಲ್ಲವೆಂದು. ನಾವು ಅಸ್ಥಿರವಾದುದನ್ನ ಸ್ಥಿರವೆಂದು ನಂಬಿ ಅದರಲ್ಲಿ ತೊಳಲಾಡುತಿದ್ದೆವೆ ಉನ್ನತ ಅಧಿಕಾರಿ ತನ್ನ ಅಧಿಕಾರ ಶಾಶ್ವತವಂದರೆ ಎಷ್ಟು ಮೈಮರೆತಿರುತ್ತಾನೆ. ಅಹಂಕಾರದಿಂದ ವರ್ತಿಸುತ್ತಾನೆ. ತಾನು ತನ್ನ ಅಧಿಕಾರದಿಂದ ನಿವೃತ್ತನಾಗುವೆ ನೆಂಬುದನ್ನು ಮರೆತಿರುತ್ತಾನೆ. ಅಧಿಕಾರ ಮೋಹ ಮೈಮರೆತರುತ್ತದೆ. ಆದರೆ ಮೇಲೇರಿದ ವಿಮಾನ ಕೆಳಗಿಳಿಯಲೇ ಬೇಕು ಕೆಳಗಿಳಿದ ನಂತರ ತನ್ನ ಸ್ಥಿತಿಯ ಬಗ್ಗೆ ಪಶ್ಚಾತ್ತಾಪ ಪಟ್ಟಲ್ಲ ಅಶಾಶ್ವತ ಕಲ್ಪನೆ ಇದ್ದಿದ್ದರೆ ಸಂತೃಪ್ತಿಯ ಬದುಕು ಅವನದಾಗಿರುತಿತ್ತು. ನಾವು ಕೊಟ್ಟಕುದುರೆಯ ನೇರಲರಿಯದ, ನಾಳಿನ ಬಗ್ಗೆ ಚಿಂತಿಸುವ, ಕೊಡುವ ಶಿವನ ಮರೆತ ಜನ. ಅದರಿಂದ ಅಶಾಶ್ವತ ವಸ್ತುವಿಗಾಗಿ ತೊಳುಲುತ್ತೇವೆ ಬಳಲುತ್ತೇವೆ. ಸಿಗದಾಗ ಕೋಪಗೊಂಡು ಉದ್ರೇಕ ಗೊಳ್ಳುತ್ತೇವೆ ಬದುಕನ್ನು ನಾಶಗೊಳಿಸಿಕೊಳ್ಳುತ್ತೇವೆ.

ನಮ್ಮಂಥವರಿಗೆ ಜೀವನದ ಅಶ್ವಾಶ್ವತತೆಯ ನೆನಪು ಬರುವುದು ಒಂದೇ ಸಂದರ್ಭದಲ್ಲಿ, ಸ್ಮಶಾನಕ್ಕೆ ಹೋಗ ಬೇಕಾದ ಸಂದರ್ಭದಲ್ಲಿ. "ಏನು ಶಾಶ್ವತವಪ್ಪ ಎಲ್ಲಾ ಒಂದಲ್ಲ ಒಂದು ದಿನ ಈ ರೀತಿ ಹೋಗಲೇ ಬೇಕು ಅದಕ್ಯಾಕೆ ಇಷ್ಟೊಂದು ಕಚ್ಚಾಡ ಬೇಕು ಏನನ್ನೂ ಕೊಂಡು ಹೋಗಲ್ಲ ಬರಿಗೈಯಲ್ಲಿ ಹಿಂದಿರುಗುತ್ತೇವೆ. ಸತ್ಮೇಲೆ ನಾನ್ಯಾರೋ, ಗಳಿಸಿದ ಆಸ್ತಿ ಯಾರದೋ ? ಇರೋತನಕ ಬಡಿದಾಡ್ತೇವೆ" ಎಂದು ಮಾತನಾಡಿ ಕೊಂಡರೂ—ಸ್ಮಶಾನ ಬಿಟ್ಟು ಹೊರ ಬಂದ ನಂತರ ನಾವು ಹಿಂದಿನ ಸ್ಥಿತಿಗೆ ಮರಳುತ್ತೇವೆ. ನಮ್ಮ ಜೀವನ ಪುಸ್ತಕದಲ್ಲಿ ನಾಳೆಗಳೇ ಹೆಚ್ಚು. ಆ ಕಾರಣ ಗಳಿಸಬೇಕೆಂಬ ಆಲೋಚನೆಗೆ ಬಲಿಯಾಗುತ್ತೇವೆ. ಅದಕ್ಕಾಗಿ ಸಂಗ್ರಹಿಸುವ ಆಶೆ ಬಲವಾಗುತ್ತದೆ. ಅದಕ್ಕೆ ಬಲಿಯಾಗುತ್ತೇವೆ "ಒಬ್ಬ ಮುದುಕ ಆತ ಎಲ್ಲಿಗೋ ಪ್ರಯಾಣಿಸುತ್ತಿದ್ದ ಬಹಳ ಬಾಯಾರಿಕೆ ಆಗಿತ್ತು ತುಸು ನೋಡಿದ ನೀರಿನ ಹನಿಯೂ ಸಿಗಲ್ಲಿಲ್ಲ. ಹತ್ತಿರದಲ್ಲಿ ಒಂದು ತೆಂಗಿನ ಮರ ಕಂಡ ಎಳನೀರು ಕಡಿದು ಬಾಯಾರಿಕೆ ನೀಗಿಸಿ ಕೊಳ್ಳುವ ಇಚ್ಛೆಯಿಂದ ಮರ ಹತ್ತಿ ನಾಲ್ಕಾರು ಎಳನೀರು ಕಿತ್ತು ಹಾಕಿದ. ಆನಂತರ ಸ್ವಲ್ಪ ಕೆಳಗಿಳಿದ ಆ ಕ್ಷಣ ಅವನ ದೃಷ್ಟಿ ಒಂದು ಹಾರುವ ಚಿಟ್ಟೆಯತ್ತ ಹೋಯಿತು. ಅದು ಇವನಸುತ್ತ ಸುಳಿಯುತ್ತಿತ್ತು, ತಕ್ಷಣ ಆತನಿಗೆ ಅವನ ಮೊಮ್ಮಗ ಮನೆಯಲ್ಲಿ ಚಿಟ್ಟೆ ಹಿಡಿದು ಕೊಡು ಎಂದು ಕಾಡಿದ್ದು ನೆನಪಾಯಿತು. ಅದನ್ನು ಹಿಡಿಯಲು ಮನ ಮಾಡಿದ. ಹಾರುತ್ತಿರುವ ಚಿಟ್ಟೆ ಇವನ ಕೈ ಸೇರಲ್ಲಿಲ್ಲ. ಆಶೆ ಬಲವತ್ತಾಗಿ ಅದನ್ನು ಹಿಡಿಯಲೇ ಬೇಕೆಂಬ ಛಲದಲ್ಲಿ ಕೆಳಗೆ ಬಿದ್ದ. ಪರಿಣಾಮ ಜೀವನ ಅಂತ್ಯವಾಯಿತು. ಇದು ಒಂದು ಕಥೆಯಷ್ಟೆ. ಆದರೆ ಅದರ ಹಿನ್ನೆಲೆ ನೋಡಿದಾಗ ಮಾನವನು ತನ್ನ ಆಶೆಗಾಗಿ ಪ್ರಾಣ ಕೊಡಲೂ ಹೆದರನು. ಆಶೆಯ ಭೂತ ಯಾರನ್ನೂ ಬಿಡದು. ಇಂಥ ಕಥೆಗಳನ್ನು ನಾವು ಕೇಳಿದರೂ ನಮ್ಮ ಮನಃ ಪರಿವರ್ತನೆಯಾಗದು.

ನಮ್ಮ ಆಶೆ ಎಂದರೆ ಈ ಜಗತ್ತಿನಲ್ಲಿ ನಾನು ಸತ್ತರೂ ನನ್ನ ಹೆಸರು ಅಜ-ರಾಮರವಾಗಿರ ಬೇಕೆಂದು ಆಶಿಸುತ್ತೇವೆ. ಯೂರೋಪಿನಲ್ಲಿ ಒಬ್ಬ ಸಮಾಜಸುಧಾರಕ ಆತ ಸಮಾಜ ಸೇವೆ ಮಾಡಿದ್ದರ ಕಾರಣ ಆತನ ಪ್ರತಿಮೆಯನ್ನು ಊರ ಮಧ್ಯದಲ್ಲಿ ಅನಾವರಣ ಮಾಡಲು ಜನರೆಲ್ಲ ಇಚ್ಛಿಸುತ್ತಾರೆ. ಅನಾವರಣ ಮಾಡುವ ಹಿಂದಿನ ದಿನ ತನ್ನ ಪ್ರತಿಮೆ ನೋಡಬೇಕೆಂಬ ಕಾತರತೆ ಹೆಚ್ಚಾಗಿ ಆತ ರಾತ್ರಿ 12ಗಂಟೆಗೆ ಎದ್ದು ತನ್ನ ಪ್ರತಿಮೆ ಸಿದ್ಧವಾಗಿರುವ ಸ್ಥಳಕ್ಕೆ ಬಂದ. ಸುತ್ತ ನೋಡಿದ ಯಾರೂ ಇರಲ್ಲಿಲ್ಲ. ಮೆಟ್ಟಲುಗಳನ್ನು ಹತ್ತಿ ಹೋಗಿ ತನ್ನ ಪ್ರತಿಮೆ ಇರುವ ಸ್ಥಳಕ್ಕೆ ತಲುಪಿದ ಸುತ್ತ ನೋಡಿ ಹರ್ಷಿಸಿದ. ತನ್ನ ಪ್ರತಿಮೆಯನ್ನು ಮುಟ್ಟಿ ಮುಟ್ಟಿ ನೋಡಿದ ಆ ಕ್ಷಣ ಯಾರೋ ನಕ್ಕಂತಾಯಿತು. ಅಲ್ಲಿ ಕೆಳಗಿನ ಹಂತದಲ್ಲಿ ಕುಳಿತು ಸುತ್ತ

ನೋಡಿದ ಯಾರು ಇಲ್ಲ, ಮತ್ತೆ ತನ್ನ ಪ್ರತಿಮೆಯತ್ತ ತಿರುಗಿದಾಗ ಮತ್ತೆ ನಕ್ಕ ಧ್ವನಿ ಕೇಳಿತು. ನಗುವರಾರೆಂದು ನೋಡಿದಾಗ ಅವನ ಕಾಲ ಕೆಳಗಿನ ಕಲ್ಲು. ಏಕೆ ನಗುತ್ತಿ ? ಕೇಳಿದ ನಿನ್ನ ಸ್ಥಿತಿ ಕಂಡು ನಗು ಬರುತ್ತಿದೆ, ಹಿಂದೆ ನಾನೂ ಕೂಡ ನಿನ್ನ ಪ್ರತಿಮೆ ಇರುವ ಜಾಗದಲ್ಲಿದ್ದೆ. ಈಗ ನಿನ್ನ ಕಾಲ ಕೆಳಗೆ ಹಾಕಿದ್ದಾರೆ. ಯಾರೂ ಕೂಡ ಶಾಶ್ವತವಲ್ಲ. ನಾಳೆ ನಿನ್ನ ಸ್ಥಿತಿಯೂ ಇಷ್ಟೆ. ನೀನು ನನ್ನ ಮೇಲಿನ ಹಂತವಾಗುವೆ. ನೀನು ಇಷ್ಟೋಂದು ಹರ್ಷಿಸಿದ್ದು ನೋಡಿ ನಗು ಬಂತು" ಎಂದಿತು. ಆಗ ಆತ ತಲೆ ತಗ್ಗಿಸಿದ. ಆ ವ್ಯಕ್ತಿ ಏನು ಎಲ್ಲರೂ ಅಂಥವರೇ

ನಾವು ಶಾಶ್ವತ ಎಂಬ ಭಾವ ಬಂದುದರಿಂದ ಮನುಷ್ಯ ಜೀವನದಲ್ಲಿ ನೆಮ್ಮದಿ ಕಳೆದು ಕೊಳ್ಳುತ್ತಾನೆ. ಆ ಕಾರಣ ಶರಣರು ಹೇಳಿದುದು, ಸಿರಿಯ ಸಂಪದವು ನಂಬಿ ನೀಕೆಡಬೇಡ ಅದು ನೀರ ಮೇಲಣ ಗುಳ್ಳೆ. ನೀಶಾಶ್ವತ ವೆಂದರಿಯ ಬೇಡ ಅಲ್ಲಿಯೂ ಇಲ್ಲಿಯೂ ಸಲ್ಲುವ ಕಾರ್ಯಮಾಡು ಆಶೆ ಸಲ್ಲದು, ಎಂದು ಬುವಿಗೆ ಬಂದಂತೆ ಮರಳುವವರಗೆ ಇನ್ನೇನು ಬೇಕು ಎಂದು ಆಲೋಚಿಸಿ ಮನ ನಿರ್ಲಿಪ್ತತೆ ಯಿಂದ ಕೂಡಿದಾಗ ಮಾತ್ರ ನಮ್ಮೆಲ್ಲರ ಜೀವನ ಸುಖಮಯವಾಗುವುದು.

---




# ಕ್ರೋಮಿಯಂ ಬಗ್ಗೆ ನೀವೆಷ್ಟು ಬಲ್ಲಿರಿ ?

ಶ್ರೀ ಪ. ರಾಮಕೃಷ್ಣ ಶಾಸ್ತ್ರಿ, ಶಿವಶಕ್ತಿನಿಲಯ, ಮಚ್ಚಿನ ಅಂಚೆ-574295 (ದ. ಕ.)

ಕಬ್ಬಿಣವನ್ನು ಸ್ಟೈಯಿನ್‌ಲೆಸ್ ಸ್ಟೀಲನ್ನಾಗಿ ಪರಿರ್ತಿಸಿ, ಅದರಿಂದ ದಿನ ಬಳಕೆಯ ನೂರಾರು ವಸ್ತುಗಳನ್ನು ತಯಾರಿಸಬೇಕಾದರೆ ಅದಕ್ಕೆ ಕ್ರೊಮಿಯಂ ಅದುರನ್ನು ಬೆರೆಸುವುದು ಅನಿವಾರ್ಯ. ಈ ಕ್ರೋಮಿಯುಮ್ಮನ್ನು ಲೋಹದ ಸಾಮಗ್ರಿಗಳ ಮೇಲೆ ಲೇಪಿಸಿದಾಗ ಬೆಳ್ಳಿಯಂತಹ ಹೊಳಪು ಬರುವುದು. ಸಾರಿಗೆ ವಾಹನಗಳ ಬಿಡಿಭಾಗಗಳಿಗೆ ಈ ಲೇಪನ ನೀಡಿದರೆ ಹೊಳಪು ಮಾತ್ರವಲ್ಲ, ಅದು ತುಕ್ಕನ್ನು ನಿರೋಧಿಸುವುದೆಂದು ಗೊತ್ತಾಗಿದೆ.

ಹಲವು ಕೈಗಾರಿಕೆಗಳಲ್ಲಿ ಬಳಸಲ್ಪಡುವ ಕ್ರೋಮಿಯಂ, ಗಣಿಗಳಲ್ಲಿ ಕ್ರೋಮೈಟ್ ಎಂಬ ಹೆಸರಿನಿಂದ ಆಕ್ಸೈಡ್ ರೂಪದಲ್ಲಿ ಸಿಗುತ್ತದೆ. ಇದರಲ್ಲಿ ಎರಡು ರೀತಿಗಳಿವೆ, ಒಂದು ವಿಧದಲ್ಲಿ ಕಬ್ಬಿಣವು ಬೆರೆತಿರುವುದು. ಈ ಅದಿರನ್ನು ಕಂಡುಹಿಡಿದದ್ದು ೧೭೯೭ ರಲ್ಲಿ ವ್ಯಾಂಕ್ವೆಲಿನ್ ಎಂಬ ವಿಜ್ಞಾನಿ. ಇದಕ್ಕೆ ಗ್ರೀಕ್ ಭಾಷೆಯಲ್ಲಿ "ಕ್ರೋಮ್" ಅಂದರೆ ಬಣ್ಣ ಎಂಬ ಹೆಸರು ಬಂತು. ಇದರ ಉತ್ಪನ್ನ ಭೂಮಿಯೊಳಗೆ ಸಾಕಷ್ಟಿದ್ದರೂ ಮೊದಲನೆಯ ಮಹಾಯುದ್ಧದವರೆಗೆ ಬಳಕೆ ಇರಲಿಲ್ಲ. ಯುದ್ಧಕಾಲದಲ್ಲಿ ಕೋವಿಗಳ ಗುಂಡು ತಯಾರಿಸಲು ಇದು ಉತ್ತಮ ಅದಿರೆನಿಸುದದರಿಂದ ಕ್ರೋಮಿಯಂ ತೆಗೆಯುವ ಕಾರ್ಯ ಆರಂಭವಾಯಿತು. ಕ್ರೋಮಿಯಂ ಕ್ರೊಕಾಯಿಟ್‌ನಂತಹ ಬೇರೆ ಕೆಲವು ಅದಿರುಗಳಲ್ಲೂ ಬೆರೆತಿರುವುದು ಗೊತ್ತಾಯಿತು.

ಇಂಗಾಲದದೊಂದಿಗೆ ಕೂಡಲೇ ಬೆರೆಯಬಲ್ಲ ಕ್ರೊಮಿಯಂಗೆ ಬೆಳ್ಳಿಯಷ್ಟೇ ಹೊಳಪಿದೆ. ಆದರೆ ಕಾಠಿಣ್ಯದಲ್ಲಿ ವಜ್ರಕಿಂತ ಅನಂತರದ ಸ್ಥಾನ ಪಡೆದಿದೆ. ಗಣಿಗಳಿಂದ ಇದರ ಅದಿರನ್ನು ತೆಗೆದು ಹುಡಿಮಾಡಿ ಇಳಿಜಾರಾಗಿ ಹರಿಯುವ ನೀರಿನಲ್ಲಿ ತೊಳೆದಾಗ ಜೊತೆಗೆ ಬೆರೆತಿರುವ ನಿರರ್ಥಕ ಪದಾರ್ಥಗಳೆಲ್ಲ ಹರಿದುಹೋಗಿ ಲೋಹದ ಅಂಶಉಳಿಯುವುದು. ಈ ಅಂಶವನ್ನು ಸಣ್ಣ ಹಾಗೂ ಸೋಡಿಯಂ ಕಾರ್ಬೊನೇಟ್‌ನೊಂದಿಗೆ ಬೆರೆಸಿ ಕುಲುಮೆಯಲ್ಲಿ ಸೋಡಿಯಂ ಕ್ರೊಮೇಟ್ ಎಂಬ ವಸ್ತು ಸಿದ್ಧವಾಗುತ್ತದೆ. ಬಳಿಕ ಇದಕ್ಕೆ ಗಂಧಕ ಅನಂತರ ಅಲ್ಯುಮಿನಿಯಂ ಸಂಸ್ಕರಣೆ ನಡೆಸುವುದರಿಂದ ಬಹೂಪಯೋಗಿ ಕ್ರೋಮಿಯಂ ಲಭಿಸುವುದು.

ಭಾರತವೂ ಸೇರಿದಂತೆ ಪಾಕಿಸ್ತಾನ, ರಷ್ಯಾ, ದಕ್ಷಿಣ ಆಫ್ರಿಕಾ, ಟರ್ಕಿ, ರೋಡಿಷಿಯಾ ಮೊದಲಾದೆಡೆಗಳಲ್ಲಿ ಕ್ರೋಮಿಯಂಸಿಗುವುದು. ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ತಮಿಳುನಾಡಿನ ಕೆಲೆವೆಡೆ ಇದರ ಧಾರಳ ಉತ್ಪನ್ನವಿದೆ

ಕ್ರೋಮಿಯಂಗೆ ತುಕ್ಕು ಹಿಡಿಯುವ ಭಯ ಇಲ್ಲ. ಹವಾಮಾನದ ಒತ್ತಡ ಗಳಿಗಾಗಲೀ ಯಾವುದೇ ಆಮ್ಲಗಳ ದುಷ್ಪರಿಣಾಮಗಳಾಗಲೀ ಸಿಲುಕದ ಹಾಗೆ ಇದನ್ನು ರೂಪಿಸಿಲುವುದರಿಂದ ಅನೇಕ ಉದ್ಯಮಗಳಿಗೆ ಅದು ಅತ್ಯಗತ್ಯವೆನಿಸಿದೆ.

ಶುದ್ಧವಾದ ಕ್ರೋಮಿಯಂನ ಬಳಕೆ ಒಂದು ಮಾತ್ರ. ತಾಮ್ರ, ಹಿತ್ತಾಳೆ, ನಿಕ್ಕಲ್ ಮುಂತಾದ ಲೋಹದ ಸಾಮಗ್ರಿಗಳು ಬೆಳ್ಳಿಯಂತೆ ಹೊಳಪು ಪಡೆಯಲು ಇದನ್ನು ಎಲೆಕ್ಟ್ರೋ ಪ್ಲೇಟಿಂಗ್ ಮಾಡುತ್ತಾರೆ. ಆದರಿಂದ ಅವು ನಿರಂತರವಾಗಿ ಹೊಳೆಯುತ್ತವೆ. ಜಂಗುಬರವುದಿಲ್ಲ, ಸವೆಯುವುದಿಲ್ಲ. ಇತರ ಲೋಹಗಳಿಗೆ ಕ್ರೋಮಿಯಂನ್ನು ಬೆರೆಸಿದರೆ ಅನೇಕ ಲಾಭಗಳಿವೆ. ಅರಿಸಿಣದ ಸಂಸ್ಕರಣೆಗೂ ಕ್ರೋಮಿಯಂ ಬೇಕಾಗುವುದು.

ಬೇರೆ ಬೇರೆ ಪ್ರಮಾಣದಲ್ಲಿ ಕ್ರೋಮಿಯಂ ಬೆರೆಸಿ ಸ್ಟೀಲುಗಳನ್ನು ತಯಾರಿ ಸುವುದರಿಂದ ಹೆಚ್ಚು ಕಾಂತಿ, ಕಣತೆ, ನಯ ತುಕ್ಕು ಮತ್ತು ವಿದ್ಯುತ್ ನಿರೋಧಕ ಶಕ್ತಿ ಇರುತ್ತದೆ. ರೈಲು ಬೋಗಿಗಳು, ಸಾರಿಗೆ ವಾಹನಗಳು, ಸೇತುವೆಗಳು, ಟ್ಯಾಂಕ್ ಗಳನ್ನು ತಯಾರಿಸಲು ಶೇ ೪ರಷ್ಟು ಕ್ರೋಮಿಯಂ ಬೆರಿಸಿದರೆ ಸಾಕಾಗುವುದು. ಗೃಹ ಬಳಕೆಯ ಪಾತ್ರೆಗಳು, ಚೂರಿಗಳನ್ನು ತಯಾರಿಸಲು ಅದನ್ನು ಶೇ ೧೨ ರಷ್ಟು ಬೆರಸಬೇಕಾಗುತ್ತದೆ.

ಕಠಿಣತೆಗೆ ಹೆಸರಾದ ಕ್ರೋಮಿಯಂ ವಿಮಾನ ಮತ್ತು ಯುದ್ಧನೌಕೆಗಳ ಹೊರಮೈಯ ನಿರ್ಮಾಣಕ್ಕೆ ಅಗತ್ಯ. ರಾಸಾಯನಿಕ ಸ್ಥಾವರಗಳ ನಿರ್ಮಾಣ, ಸಮುದ್ರದ ತಾಂತ್ರಿಕ ವ್ಯವಸ್ಥೆಗಳು, ಹೈನೋದ್ಯಮ, ವಿದ್ಯುದುತ್ಪನ್ನಗಳಿಗೆ ಇದು ಬೇಕಾಗುತ್ತದೆ. ಶುದ್ಧವಲ್ಲದ ಕ್ರೋಮಿಯಂ ಅದುರು ಕೂಡ ಉಪಯೋಗದಿಂದ ಹಿಂದೆ ಬಿದ್ದಿಲ್ಲ. ಅಗ್ನಿ ನಿರೋಧಕವಾದ ಇಟ್ಟಿಗೆಗಳು, ಸಿಮೆಂಟ್ ಮತ್ತು ಪ್ಲಾಸ್ಟರ್ ಕಾರ್ಯಗಳಿಗೆ ಇದರ ಬಳಕೆ ಅಧಿಕವಾಗಿದೆ.

ಕಲಾವಿದರು ಬಳಸುವ ನಾಲ್ಕು ತೈಲ ವರ್ಣಗಳ ತಯಾರಿಕೆಗೆ ಕ್ರೋಮಿಯಂ ಸೇರುತ್ತದೆ. ಆದರಿಂದ ಸಿಗುವ ಲೆಡ್ ಕ್ರೋಮೇಟ್ ರಾಸಾಯನಿಕ ಬಳಸಿ, ಕೆಂಪು, ನೀಲಿ, ಹಸಿರು, ಅರಶಿನ ಬಣ್ಣಗಳನ್ನು ಸಿದ್ಧಪಡಿಸುತ್ತಾರೆ.

ಕ್ರೋಮಿಯಂನಿಂದ ಪಡೆದ ಎರಡು ಬಗೆಯ ಲವಣಗಳು ಹಲವು ಬಣ್ಣಗಳ ತಯಾರಿಕೆಗೆ ಅಗತ್ಯವಲ್ಲದೆ ಕ್ಯಾಲಿಕೋ ಮುದ್ರಣ ಮತ್ತು ಛಾಯಾಚಿತ್ರ ಸಂಸ್ಕರಣೆಗೆ ನೆರವಾಗುತ್ತವೆ.

ತೊಗಲು ಹದ ಮಾಡುವಾಗಲೂ ಈ ಲವಣಗಳ ಬಳಕೆ ಉಂಟು. ಜಾಗತಿಕ ಉತ್ಪನ್ನದ ಪ್ರತಿಶತ ೪೫ ಭಾಗ ಕ್ರೋಮಿಯನಿಂದ ಮಿಶ್ರಲೋಹಗಳನ್ನೂ ಪ್ರತಿಶತ ೪೦ ಭಾಗದಿಂದ ಅಗ್ನಿನಿರೋಧಕ ವಸ್ತುಗಳನ್ನೂ ತಯಾರಿಸಿ ಉಳಿದುದನ್ನ ರಾಸಾಯನಿಕ ಪ್ರಯೋಗಗಳಿಗೆ ಬಳಸುತ್ತಾರೆ. ನಮ್ಮ ದೇಶದಲ್ಲಿ ಇದರ ವಾರ್ಷಿಕ ಉತ್ಪನ್ನ ೩ ಲಕ್ಷ ಟನ್ನುಗಳಷ್ಟಿದೆ.

ಗಂಧಕಾಮ್ಲ ಮತ್ತು ಹೈಡ್ರೋಕ್ಲೋರಿಕ್ ಆಮ್ಲಗಳಲ್ಲೂ ಸಂಸ್ಕರಿತ ಕ್ರೋಮಿಯಂ ಕರಗುವುದಿಲ್ಲವೆಂಬುದೇ ಅದರ ವೈಶಿಷ್ಟ್ಯ.

## ನಾಗ ಪಂಚಮಿ ಜಾನಪದಗೀತೆ

ಮಂದಾಕಿನೀದೇವಿ, ಮಾನವತಾ ಪ್ರತಿಷ್ಠಾನ, ಧಾರವಾಡ.

ಅಕ್ಕತಂಗೆರು ನಾವು ಅಕ್ಕರದಿ ಆಡೋಣು
ವಟ್ಟಾಗಿ ಹಾಡಿ ಕರಿಯೂಣು ಅಣ್ಣಯ್ಯ
ಪಂಚಮಿಗೀ ಮುಂಚೆ ಬರಲೇಳ........

ಪಂಚಮಿಗೀ ಮುಂಚೆ ಕರಿದರ ಅಣ್ಣಯ್ಯ
ಬಿಡುವಿಲ್ಲ ಅಂತ ಹೇಳ್ಯಾನ ಹಬ್ಬಕ್ಕ
ರನ್ನದುಂಗುರ ಕಳಿಸ್ಯಾನ........

ರನ್ನದುಂಗುರ ಬ್ಯಾಡ ಅಣ್ಣನೀ ಬಾ ಅಂದ್ರ
ಮರು ಪಂಚಮಿಗೀ ಬರುತ್ತೇನ ತಂಗ್ಯವ್ವ
ಮುತ್ತಿನ್ವಾಲಿಯ ಹಿಡಿಯೆಂದ........

ಮುತ್ತಿನ್ವಾಲಿಯ ಬ್ಯಾಡ ಮುತ್ತಿನಂಥಣ್ಣಯ್ಯ
ಹಿತ್ತಲ ಬಳ್ಳಿ ಒಣಗೇದ ಹಬ್ಬಕ್ಕ
ಹೊತ್ತುತಾ ಒಲವಿನುದಕಾವ........

ಹೊತ್ತು ತಾ ಒಲವಿನ ಉದಕಾವ ಎನ್ನುತ್ತ
ಭಕ್ತೀಲೆ ಬಾಗಿ ಕರಿದರ ಅಣ್ಣಯ್ಯ
ಹುತ್ತದಾಗ ಬಂದು ನಿಂತಾನ

ಹಾಡಿದ್ದು. ಕುಮಾರಿ ಯಮುನಾ

## ವಿದ್ಯಾರ್ಥಿ ಜೀವನದ ಬೆಳಕು ಸರಣಿ – ೧೧

## ಅಶಿಸ್ತಿನಿಂದಾಗುವ ದುಷ್ಫಲಗಳು

ಶ್ರೀ ಬಿ. ಎಸ್. ಕೃಷ್ಣಮೂರ್ತಿ, ನಂ. 5. ಸೀತಾ ವಿಲಾಸ ರಸ್ತೆ, ಮೈಸೂರು - 570 024

ವಿದ್ಯಾರ್ಥಿಗಳು ಮುಖ್ಯವಾಗಿ ಗಮನಿಸಬೇಕಾದ ವಿಷಯಗಳು ಇಂತಿವೆ. ನೀವು ಶಾಲಾಕಾಲೇಜು ವ್ಯಾಸಂಗ ಪೂರ್ಣಮಾಡಿ, ವ್ಯಾಸಂಗ ಮಾಡಿದ ಸಂಸ್ಥೆಗಳನ್ನು ಬಿಟ್ಟು ಹೊರಟುಹೋಗುತ್ತೀರಿ. ಆಗ ನಿಮಗೆ ಸಂಸ್ಥೆಯ ಅಧಿಕಾರಿಗಳು 'ಲೀವಿಂಗ್' ಸರ್ಟಿಫಿಕೇಟುಗಳನ್ನು ಕೊಡುತ್ತಾರಷ್ಟೇ ? ಆ ಸಮಯದಲ್ಲಿ ನೀವು ವಿದ್ಯಾಲಯಗಳಲ್ಲಿ ನಡೆದುಕೊಂಡ ರೀತಿಗೆ ಸಂಕೇತವಾದ ಸನ್ನಡತೆ ವಿಚಾರದಲ್ಲಿ ಸರ್ಟಿಫಿಕೇಟನ್ನು ತಿರುಚಿ ಕೊಡಬಹುದು ಇದರಿಂದ ನಿಮಗೆ ಹಾನಿಯಲ್ಲವೇ ? ಯೋಚಿಸಿ !

ಅಲ್ಲದೆ ಕೆಲವು ವೇಳೆ ನಿಮಗೆ ಯೋಗ್ಯತಾ ಪತ್ರ ಕೊಡುವ ಸಂದರ್ಭದಲ್ಲಿ ಕೊಡದೆ ನಿರಾಕರಿಸಬಹುದು. ನೀವು ಶಾಲಾಕಾಲೇಜುಗಳಲ್ಲಿ ಅಭ್ಯಾಸ ಮಾಡುವಾಗ ದುಶ್ಚಟಗಳಾದ ಬೀಡಿ ಸಿಗರೇಟುಗಳನ್ನು ಸೇದಿ ಆವರಣಗಳಲ್ಲಿ ಹೊಗೆ ಬಿಟ್ಟು ವಾತಾವರಣವನ್ನು ಮಲಿನಮಾಡುವುದು ಕೆಟ್ಟ ಚಾಳಿ. ಈ ವಿಷಯ ನೀವು ತಿಳಿದೂ ಸಹ ಮಾಡುವುದು ಅಪರಾಧವಾದುದರಿಂದ ನಿಮ್ಮ ತರಗತಿಗೆ ಬರದಂತೆ ನಿರಾಕರಿಸುತ್ತಾರೆ. ದಂಡ ಹಾಕಲೂ ಬಹುದು. ನಿಮಗೆ ಪೀರಿಯಡ್ ಮುಗಿದು ತರಗತಿಯಿಂದ ಹೊರಗೆ ಹೋಗುವಾಗ ಬೇರೆ ತರಗತಿಗಳ ಪಾಠ ನಡೆಯುತ್ತಿರುವಲ್ಲಿ ನಿಮ್ಮ ಜೊತೆ ಹುಡುಗರೊಂದಿಗೆ ಗಟ್ಟಿಯಾಗಿ ಮಾತನಾಡುವುದಾಗಲಿ, ಕಿರಿಚುವುದಾಗಲಿ, ಮಾಡಿದಲ್ಲಿ ಆ ತರಗತಿಯ ಪಾಠಗಳಿಗೆ ತೊಂದರೆ ಆಗುವ ಪ್ರಜ್ಞೆ ಮೂಡಬೇಕು. ಹೀಗೆ ಮಾಡದಿದ್ದಲ್ಲಿ ನಿಮಗೆ ಶಿಕ್ಷೆಯಾಗುವುದು ಯಾವರೀತಿಯಿಂದಲೂ ತಪ್ಪದು. ಇವೆಲ್ಲವೂ ಶಿಕ್ಷಣ ಕ್ರಮದ ಅಶಿಸ್ತು ಎನ್ನಿಸಿಕೊಳ್ಳುತ್ತದೆ. ಈ ಹೀನ ನಡವಳಿಕೆಗಳಿಂದ ನಿಮ್ಮ ವಿದ್ಯೆಗೆ ಮುಸಿಬಳಿದಂತಾಗುತ್ತದೆ. ನಿಮ್ಮ ಓದು ಎಷ್ಟೇಹೆಚ್ಚಿದ್ದರೂ ಯಾರೂ ಬೆಲೆಕೊಡರು. ನಿಮ್ಮನ್ನು ಹೀನವಾಗಿ ಕಾಣುತ್ತಾರೆ.

ಯಾವುದೇಕಾರಣದಿಂದಾಗಲಿ ವಿದ್ಯಾರ್ಥಿಗಳು ನಿಮ್ಮ ಜೊತೆಹುಡುಗರೊಂದಿಗೆ ಗುಂಪುಕೂಡಿ ನಿಮ್ಮ ವಿದ್ಯಾ ಸಂಸ್ಥೆಯ ಮೊಗಸಾಲೆಯಲ್ಲಾಗಲಿ, ಓಡಾಡುವ ಮಧ್ಯಂತರ ಪ್ರದೇಶದಲ್ಲಾಗಲಿ ಕಿರುಚಾಟ, ಗುದ್ದಾಟ ಮಾಡುವ ಹೀನ ನಡವಳಿಕೆ. ಇದರಿಂದ ನಿಮಗೆ ಕಾಲೇಜು ಅಥವಾ ಶಾಲಾ ಮುಖ್ಯಸ್ಥರಿಂದ ಯಾವುದೊಂದು ರೀತಿಯಲ್ಲಾದರೂ ಶಿಕ್ಷೆ ತಪ್ಪದು.

ವಿದ್ಯಾರ್ಥಿಗಳು ಓದಿಗೆ, ವ್ಯಾಸಂಗಕ್ಕೆ ಮಾತ್ರ ಗಮನಕೊಡಬೇಕೇ ವಿನಾ ರಾಜಕೀಯ, ಅಥವಾ ಯಾವುದೇ ಗೊಂದಲಗಳಲ್ಲಾಗಲಿ ಬೆರೆಯಬಾರದು. ಇದರಿಂದ ಕಲಿಕೆಗೆ ತಡೆಯಾಗಿ ಭವಿಷ್ಯ ಹಾಳಾಗುತ್ತದೆ. ಪರೀಕ್ಷೆಗಳ ಸಮಯದಲ್ಲಿ ಹೆಚ್ಚು ಜಾಗರೂಕರಾಗಿರಬೇಕು. ಪರೀಕ್ಷೆಗಳ ಸಮಯದಲ್ಲಿ ಸಕಾಲದಲ್ಲಿ ಬಾರದೆ ನಿಧಾನ ಮಾಡಿದಲ್ಲಿ ಪರೀಕ್ಷೆ ನಡೆಯುವ ಕೊಠಡಿಗಳಿಗೆ ಪ್ರವೇಶ ನೀಡುವುದಿಲ್ಲ. ಇದರಿಂದ ಅನುತ್ತೀರ್ಣರಾಗುವ ಪಟ್ಟಿಗೆ ಸೇರಿದಂತಾಗುವಿರಿ. ಆದಕಾರಣ ನಿಮ್ಮ ಒಂದು ವರ್ಷ ಓದಿದ ವ್ಯಾಸಂಗ ಹಾಳಾಗಿ ಓದಿದ ಹಳೇ ತರಗತಿಯಲ್ಲೇ ಉಳಿದು ಓದಬೇಕಾಗುತ್ತದೆ. ಭವಿಷ್ಯತ್ತಿನ ಏಳಿಗೆಗೆ ಕಲ್ಲುಬಿದ್ದಂತೆ !

ವಿದ್ಯಾರ್ಥಿಗಳು ಪರೀಕ್ಷೆಗಳಿಗೆ ಹಾಜರಾಗಿ, ಪಕ್ಕದಲ್ಲಿ ಕುಳಿತು ಉತ್ತರ ಬರೆಯುತ್ತಿರುವ ಸಹ ವಿದ್ಯಾರ್ಥಿಗಳ ಉತ್ತರದ ಪತ್ರಿಕೆಗಳನ್ನು ನಕಲುಮಾಡಿ ನೀವು ಉತ್ತರ ಬರೆದಿದ್ದು ಅಲ್ಲಿ ನೇಮಿಸಿದ್ದ ಅಧಿಕಾರಿಗೆ ಕಂಡುಬಂದಾಗ ನೀವು ಬರೆದಿದ್ದ ಉತ್ತರ ಪತ್ರಿಕೆಗಳನ್ನು ಕಿತ್ತುಕೊಂಡು ಹೊರಗೆ ದಬ್ಬುವುದಲ್ಲದೆ ಶಿಕ್ಷೆಗೆ ಗುರಿ ಮಾಡದೆ ಬಿಡುವುದಿಲ್ಲ. ಈ ಅಕ್ರಮ ಮುಂದುವರೆದಲ್ಲಿ ನಿಮ್ಮನ್ನು ಕೆಲವು ವರ್ಷಗಳ ಕಾಲ ಪರೀಕ್ಷೆಗಳಿಗೆ ಕೂಡದಂತೆ ಬಹಿಷ್ಕರಿಸುತ್ತಾರೆ, ತಿಳಿಯಿರಿ.

ಪರೀಕ್ಷೆಗೆ ಕೂಡಿಸಲು ಸಾಕಾಗುವಷ್ಟು ದಿನಗಳು ತಾವು ಓದುವ ತರಗತಿಗಳಿಗೆ ಹಾಜರಾತಿ ಇರಲೇಬೇಕು ಮತ್ತು ಡ್ರಿಲ್, ಎನ್.ಸಿ.ಸಿ. ಹಾಜರಾತಿಯೂ ಇರಬೇಕು. ಇಲ್ಲವಾದರೆ ಪರೀಕ್ಷೆಗೆ ಕಟ್ಟಿಸುವುದಿಲ್ಲ. ಇದಲ್ಲದೆ ಶಾಲಾಕಾಲೇಜುಗಳಲ್ಲಿ ವರ್ಷಂಪ್ರತಿ ಪ್ರತಿ ತಿಂಗಳೂ ಸಲ್ಲಿಸುವ ಫೀಜನ್ನು ಪೂರ್ತಿ ಕಟ್ಟಿರಬೇಕು. ಬಾಕಿ ಇದ್ದ ಸಂದರ್ಭದಲ್ಲಿ ಪರೀಕ್ಷೆಗೆ ಕಟ್ಟುವ ಮುಂಚೆ ಚುಕ್ತಾ ಮಾಡದಿದ್ದರೆ ಪರೀಕ್ಷೆಗೆ ಕಟ್ಟಿಸುವುದಿಲ್ಲವಾದಕಾರಣ ನಿಮ್ಮ ಒಂದು ವರ್ಷದ ವಿದ್ಯೆ ಹಾಳಾಗುತ್ತದೆ.

ಆದ್ದರಿಂದ ಈ ಮೇಲೆ ತಿಳಿಸಿದ ಕಾರಣಗಳಿಗೆ ನಿಯಮಗಳನ್ನು ಆಧರಿಸಿ ನಡೆಯುವ ಶಿಸ್ತುಗಳಿಂದ ನಡೆಸಿದ ನಿಮ್ಮ ವ್ಯಾಸಂಗಕ್ಕೆ ಅರ್ಥವಿದೆ, ಬೆಲೆಯಿದೆ. ವಿದ್ಯಾರ್ಥಿಗಳು ಮುಂದಿನ ನಿಮ್ಮ ಶ್ರೇಯಸ್ಸಿಗೆ ನೀವೇ ಕಾರಣವೆಂಬುದನ್ನು ಮರೆಯದಿರಿ !

## " ಕನ್ನಡ ಜನತೆಗೆ ಕನ್ನಡವೇಗತಿ "

ಜೆ. ಬಿ. ಲಿಂಗರಾಜು, ಕಲ್ಲುಸಾದರಹಳ್ಳಿ.

ಕನ್ನಡ ಧ್ವಜವ ಹಾರಿಸಬನ್ನಿರಿ
ರಾಜ್ಯೋತ್ಸವದ ಶುಭದಿನದಿ
ಕನ್ನಡಿಗರುನಾವೆನ್ನುತ ನಿಲ್ಲಿರಿ
ಕನ್ನಡಾಂಬೆಯ ಉತ್ಸವದಿ.
ಕನ್ನಡ ಜನತೆಗೆ ಕನ್ನಡವೇಗತಿ
ಕರ್ಣಾನಂದದ ಜಯಧ್ವನಿಯು
ಕನ್ನಡ ಮಾತೆಗೆ ಬೆಳಗಿದ ಜ್ಯೋತಿ
ಕರ್ಣಾಟಕದಿ ಹಾರಿದೆ ಧ್ವಜವು.
ಕನ್ನಡ ಜನತೆಯ ಜೈಜೈ ಕಾರವು
ಪ್ರತಿಧ್ವನಿ ತಳೆದಿದೆ ಗಿರಿಗಳಲಿ !
ಕನ್ನಡ ಕುಲಕೋಟಿಯು ನಮಿಸಿದೆ
ಚಾಮುಂಡಿದೇವಿಯ ಚರಣದಲಿ.
ಶ್ರೀಗಂಧದ ಪರಿಮಳ ಗಾಳಿಯ ಸೇರಿ
ಸಂತಸ ತಂದಿದೆ ನಾಡಿನೊಳು
ಕಸ್ತೂರಿಯ ಸುರಿಮಳೆ ಹೂಗಳರಾಶಿ
ಸಂಭ್ರಮ ಬಿಂಬಿಸಿ ಹಾಡಿನೊಳು.
ಸವಿಗನ್ನಡದ ಸುಧೆಯನು ನೀಡಿ
ಗಾಯನ ನೃತ್ಯದ ಮೇಳದಲಿ
ಸಿರಿಗನ್ನಡದ ನುಡಿಯನು ಹಾಡಿ
ಬಾಳಿನೈಕ್ಯತೆಯ ಗಾನದಲಿ.
ನವ ಚೈತನ್ಯವ ನೀಡಲಿತಾಯಿ
ಕನ್ನಡಮಾತೆಗೆ ಶರಣಾಗಿ,
ಸವಿಗನ್ನಡವನೇ ನುಡಿಯಲಿ ಬಾಯಿ
ಕನ್ನಡ ಭಾಷೆಗೆ ಶುಭವಾಗಿ.

# ಒಂದು ಪತ್ರ

ದಿನಾಂಕ 28 - 8 - 91
ಮೈಸೂರು

ಶ್ರೀಮನ್ನಿರಂಜನ ಪ್ರಣವ ಸ್ವರೂಪಿಗಳಾದಂತ ಶ್ರೀ ಶ್ರೀ ಗಳವರ ದಿವ್ಯ ಪಾದಕಮಲಗಳಲ್ಲಿ ತಮ್ಮ ಬಾಲಕನಾದ ಗೋವಿಂದರಾಜುವಿನ ನಮಸ್ಕಾರಗಳು.

ಸ್ವಾಮೀಜಿ,

ಕಳೆದ ಸುಮಾರು 3 ತಿಂಗಳ ಹಿಂದೆ ತಮ್ಮನ್ನು ಭೇಟಿಮಾಡಿದಾಗ ನಾನು K.A.S. ಪರೀಕ್ಷೆಯಲ್ಲಿ ಉತ್ತೀರ್ಣನಾಗಿ, B.D O.ಆಗಿ ಆಯ್ಕೆಯಾಗಿರುವ ವಿಷಯವನ್ನು ತಿಳಿಸಿದ್ದೆ. ಹೆಚ್ಚಿನ ತಯಾರಿ ನಡೆಸಿ ಪರೀಕ್ಷೆಯನ್ನು ಬರೆದಿದ್ದ ನಾನು! ಸಹಜವಾಗಿ 'ಅಸಿಸ್ಟೆಂಟ್ ಕಮೀಷನರ್' ಹುದ್ದೆಗೆ ಆಯ್ಕೆಯಾಗಬಹುದೆಂದು ನಿರೀಕ್ಷಿಸಿದ್ದೆ. ನನಗಿಂತ ಕಡಿಮೆ ಅಂಕಗಳಿಸಿರುವ ಅನೇಕರು ಇನ್ನೂ ಉತ್ತಮ ಹುದ್ದೆಗಳಿಗೆ ಆಯ್ಕೆಯಾಗಿದ್ದರೂ ನಾನು General Merit ನಲ್ಲಿ ಬಂದ ಕಾರಣ B. D. O. ಹುದ್ದೆಗೆ ತೃಪ್ತಿಪಡಬೇಕಾಯ್ತು. ತಮಗೆ ತಿಳಿದಂತೆ ಈ ಹಿಂದೆ ನಾನು Telecom. ಇಲಾಖೆಯಲ್ಲಿ Junior Telecom officer ಆಗಿ ಕೆಲಸ ನಿರ್ವಹಿಸುತ್ತಿದ್ದೆ. ಈಗ ರಾಜೀನಾಮೆ ನೀಡಿ B. D. O. (p) ಆಗಿ ಮೈಸೂರಿನಲ್ಲಿರುವ Administrative Training Institute ತರಬೇತಿ ಪಡೆಯುತ್ತಿದ್ದೇನೆ.

ಹಳ್ಳಿಯಲ್ಲಿ ಕೂಲಿಕಾರನಾಗಿ ಕೆಲಸ ಮಾಡಬೇಕಾಗಿದ್ದ ಈ ಬಾಲಕನನ್ನು ತಾವು 5 ನೇ ತರಗತಿಯಿಂದ 3 ನೇ B.Sc., ಯವರೆಗೆ ವಿದ್ಯೆ, ಊಟ ವಸತಿಗಳನ್ನು ನೀಡಿ ಮನುಷ್ಯನನ್ನಾಗಿ ಮಾಡಿದಿರಿ. ನಾನು ತಿನ್ನುವ ಪ್ರತಿಯೊಂದು ತುತ್ತಿನ ಹಿಂದೆ ತಮ್ಮ ಪರಿಶ್ರಮ ಇದೆ. ಈ ಮಾತನ್ನು ಹೇಳುವಾಗ ನನಗೆ ಕಣ್ಣೀರು

ಬರುತ್ತದೆ. ಮನೆಗೆ ಹಿರಿಯಮಗನಾದ ನನಗೆ ಇನ್ನೂ ನಾಲ್ಕು ಜನ ಸಹೋದರರು ಮತ್ತು ಇಬ್ಬರು ಸಹೋದರಿಯರಿದ್ದಾರೆ, ನನಗೀಗ 2 ಮಕ್ಕಳು(1 ಹೆಣ್ಣು ಮಗು 6 ವರ್ಷ, ಗಂಡುಮಗು 3 ವರ್ಷ )

ಹಳ್ಳಿಯಲ್ಲಿ ಯಾವುದೇ ವರಮಾನವಿಲ್ಲದ ಪ್ರಯುಕ್ತ ತಾಯಿಯನ್ನೊಳಗೊಂಡು, ಸಹೋದರರು ಸಹೋದರಿಯರು ಎಲ್ಲರನ್ನೂ ಬೆಂಗಳೂರಿನಲ್ಲಿ ನನ್ನೊಟ್ಟಿಗಿಟ್ಟುಕೊಂಡು ತಾವು ನನಗೆ ಸಾಕಿದ ಹಾಗೆ, ತಮ್ಮ ನೆನಪಿನಲ್ಲಿ, ನನ್ನ ಕುಟುಂಬದವರಿಗೆ ತಾವು ನೀಡಿದ ಅನ್ನವನ್ನು ಹಂಚಿಕೊಂಡು ವಾಸಮಾಡುತ್ತಿದ್ದೇನೆ.

ಶ್ರೀ ಕ್ಷೇತ್ರದಲ್ಲಿ ನಾನುಪಡೆದ ಸವಲತ್ತುಗಳಿಗೆ ಪ್ರತಿಯಾಗಿ ಋಣವನ್ನು ತೀರಿಸಲು ಸಾಧ್ಯವಿಲ್ಲ. ಬದಲಾಗಿ ಋಣದ ಸಂಕೇತವಾಗಿ ಪ್ರತಿ ತಿಂಗಳು ಕೈಲಾದಷ್ಟು ಹಣವನ್ನು M.O. ಮೂಲಕ ತಿಂಗಳಿಗೆ 2 ತಿಂಗಳಿಗೆ ಈ ಪ್ರಕಾರ ತಲುಪಿಸುತ್ತಿರುವುದು ಮತ್ತು ತಮ್ಮಿಂದ ಆಶೀರ್ವಾದದ ಪತ್ರ ಬರುವುದು ತಿಳಿದವಿಷಯವೆ.

ಇತ್ತೀಚಿನ ನನ್ನ ಸಹೋದರನೊಬ್ಬ Assistant Commissoner ಆಗಿ ಆಯ್ಕೆಯಾಗಿ ಇದೀಗ ತರಬೇತಿಯಲ್ಲಿದ್ದಾನೆ. ಇನ್ನೋರ್ವ M.A ವ್ಯಾಸಂಗ ಮಾಡುತ್ತಿದ್ದಾರೆ. ಉಳಿದವರು ಪದವಿ ಹೈಸ್ಕೂಲಿನಲ್ಲಿ ವ್ಯಾಸಂಗ ನಡೆಸಿದ್ದಾರೆ. ಈ ಎಲ್ಲ ಯಶಸ್ಸಿಗೆ ತಮ್ಮ ಆಶೀರ್ವಾದವೇ ಮೂಲಕಾರಣವೆಂದು ನಾನುತಿಳಿದಿದ್ದೇನೆ. ಶ್ರೀ ಗಳವರ ದಿವ್ಯ ಪಾದಕಮಲಗಳಿಗೆ ಮತ್ತೊಮ್ಮೆ ನಮಿಸಿ, ತಮ್ಮ ಆಶೀರ್ವಾದವನ್ನು ಬೇಡುವ ತಮ್ಮ ಬಾಲಕ.

(ಸಹಿ) ಗೋವಿಂದರಾಜು.

GOVINDARAJU, M.sc., L.L.B.,
Block Development officer (p),
Room No 35, Officers Hostel,
Administrative Training Institute,
Lalithmahal Road, Mysore - 11.

## ಏನಂತೀರಿ? ಮಹಾತ್ಮ — ದುರಾತ್ಮ

ರಸಿಕ ಪುತ್ತಿಗೆ, ೨ನೇ ಕ್ರಾಸ್, ಚನ್ನಪಟ್ಟಣ, ಬೆಂಗಳೂರು-ಜಿಲ್ಲೆ.

ಸಂಸ್ಕೃತದಲ್ಲಿ ಒಂದು ಚಮತ್ಕಾರ ಪೂರ್ಣ ಶ್ಲೋಕವಿದೆ. ಅದರ ಪದಾವಲಿ ಒಂದೇ ಆದರೂ ಹೇಳುವ ಧಾಟಿಯಿಂದ ಅರ್ಥ ಬದಲಾಯಿಸಿ ಬಿಡುತ್ತದೆ.

**ಮನಸ್ಯೇಕಂ ವಚಸ್ಯೇಕಂ ಕರ್ಮಣ್ಯೇಕಂ ಮಹಾತ್ಮನಾಂ**

ಇದು ಆ ಶ್ಲೋಕದ ಮೊದಲ ಭಾಗ ಇದರ ಅರ್ಥ ಮಹಾತ್ಮರಾದವರ ಮನಸ್ಸು ಮಾತುಕೃತಿಗಳು ಒಂದೇ ಆಗಿರುತ್ತವೆ. ಅದರಲ್ಲಿ ಭೇದವಿರುವುದಿಲ್ಲ, ಆಡಿದಂತೆ ಮಾಡುತ್ತಾರೆ, ಮಾಡಿದಂತೆ ಮನಸ್ಸಿನಲ್ಲಿಯೂ ಗ್ರಹಿಸುತ್ತಾರೆ ಎಂದರ್ಥ. ಉತ್ತರ ಭಾಗದಲ್ಲಿಯೂ ಅವೇ ಪದಗಳು ಬರುತ್ತವೆ.

**ಮನಸ್ಯೇಕಂ ವಚಸ್ಯೇಕಂ ಕರ್ಮಣ್ಯೇಕಂ ದುರಾತ್ಮನಾಂ**

ಇಲ್ಲಿ ಅರ್ಥ ಬೇರೆ ಬರುತ್ತದೆ. ಇಲ್ಲಿ ದುರಾತ್ಮರ ಮನಸ್ಸು ಒಂದು ತರವಾದರೆ ಮಾತು ಮತ್ತೊಂದು ತರ-ಕೃತಿ ಇನ್ನೊಂದು-ತರ ಎಂದು ಅರ್ಥ ಮಾಡಬೇಕು. ಹೇಳುವಾಗ ಮನಸ್ಯೇಕಂ ಅಂತ ಕೈ ಅಡಿಸಿದರೆ ಬೇರೆ ಎಂದು ತಿಳಿಸಿದರೆ ಅರ್ಥ ಬರುತ್ತದೆ. ವರ್ಚಸ್ಯೇಕಂ ಅಂತ ಕೈ ಆಡಿಸಿದರೆ ಬೇರೆ ಎಂದರ್ಥ ಆಗುತ್ತದೆ. ಹಾಗೇ ಕರ್ಮಣ್ಯೇಕಂ ಎಂದಾಗಲೂ ಕೂಡ, ಅಂದರೆ ದುರಾತ್ಮರು ಮಾತು ಆಡುವು ದೊಂದಾದರೆ ಮಾಡುವುದು ಬೇರೆ ಮನಸ್ಸು ಬೇರೇ ಆಗಿರುತ್ತದೆ ಎಂದರ್ಥ ಇದಕ್ಕೆ ಸಮಾನವಾದ ಅರ್ಥದ ಬೇರೆ ಗಾದೆಗಳು ಕನ್ನಡದಲ್ಲಿ ಹಲವು ಇವೆ.

"**ಓದೋದು ಕಾಶೀ ಖಂಡ ತಿನ್ನೋದು ಮಸಿ ಕೆಂಡ**" "ಓದೋದು ಶಾಸ್ತ್ರ ಹಾಕೋದು ಗಾಳ" ಅಂತ, ಹಲವು ಸಿಗುತ್ತವೆ. ಇವೆಲ್ಲ ಬಂದಿರುವುದು ಮಾತಿಗೂ ಕೃತಿಗೂ ಭಿನ್ನರಾದ ಜನರನ್ನು ಕಂಡು, ಅಂಥವರು ಬಹಳ ಜನ ಸಿಗುತ್ತಾರೆ. ಜನರಿಗೆ ಉಪದೇಶ ಮಾಡುವ ಜನ ಹಿನ್ನಲೆಯಲ್ಲಿ ಹಾದರ ಮಾಡಿದರೆ? ನೀತಿ ಹೇಳುವ ಜನ ಅನೀತಿ ಮಾಡಿದರೆ? ಬುದ್ಧಿ ಹೇಳುವ ಜನ ಲದ್ದಿ ತಿಂದರೆ? ಅವರನ್ನು ದುರಾತ್ಮರೆಂದು ಹೇಳುವರು.

ಮಹಾ ಮಡಿವಂತನಂತೆ ಮೂಗಿನ ತುದಿಯಿಂದ ನೆತ್ತಿವರೆಗೆ ನಾಮ ಹಾಕಿ ಮಂತ್ರ ಪಠಿಸಿ ಮಡಿ ಮಡಿ ಅಂತ ಮಠದಲ್ಲಿ ಓಡಾಡುವವರು ಬೆಂಗಳೂರಿನ ಬಾರ್‌ಗಳಲ್ಲಿ ಮೂಗು ಹಿಡಿದು ಮೂರು ಪೆಗ್ ಹಾಕಿದರೆ? ಆ ನಾಟಕ ಯಾಕೆ? ತಿನ್ನುವುದಿದ್ದರೆ ನೇರಕ್ಕೆ ತಿನ್ನಲಿ ಕುಡಿಯುವುದಿದ್ದರೆ ನೇರಕ್ಕೆ ಕುಡಿಯಲಿ ಮಾಡುವುದಿದ್ದರೆ ನೇರಕ್ಕೆ ಮಾಡಲಿ ಈ ಹಿಪೊಕ್ರಸಿ ಯಾಕೆ?

ಗಾಂಧೀಜಿಯ ಜೀವನ ತೆರೆದ ಪುಸ್ತಕವಂತಿತ್ತು. ಅವರ ದಿನಚರಿ ಎಲ್ಲರಿಗೂ ನೋಡುವಂತಿತ್ತು. ಮುಚ್ಚುಮರೆ ಕಪಟ ಇರಲಿಲ್ಲ.

ಮಾಡುವ ಕೆಲಸ ಎದುರಿಗೆ ಸಮಾಜ ಸೇವೆ ಹಿಂಬದಿಗೆ ಮೋಸ ತಟವಟ ಅಂತಹವರನ್ನೇ ಮನಸ್ಯೇಕಂ ಅಂತ ಹೇಳಿ ದುರಾತ್ಮ ಎಂದದು ಇರಬೇಕು, ನಿಜ, ದೋಷರಹಿತನಾದ ಮನುಷ್ಯ ಖಂಡಿತ ಇಲ್ಲಿ ದೇವರು ಮಾತ್ರ ದೋಷರಹಿತ. ಇರುವ ದೋಷದ ಮೇಲೆ ಸಭ್ಯತೆಯ ತೆರೆ ಹಾಕಿಕೊಂಡು ಓಡಾಡುವುದು ಸರಿಯಲ್ಲ ಸಾಧ್ಯವಾದರೆ ಆರೋಪ ಕಡಿಮೆ ಮಾಡಿಕೊಳ್ಳಲಿ, ಅಥವಾ ಅದನ್ನು ಹಾಗೆ ಉಳಿಸಿಕೊಳ್ಳಲಿ. ವೇಷ ಬೇಡ ಬೂಟಾಟಿಕೆ ಬೇಡ ಮನಸ್ಯೇಕಂ ವಚಸ್ಯೇಕಂ ಎಂಬ ಮಹಾತ್ಮರಾಗುವ.

## ಗಾಳದ ಕನ್ನಪ್ಪ

ಬಸವ ಸಮಕಾಲೀನ ಗಾಳದ, ಕನ್ನಪ್ಪ
ಒಸೆದು ಮತ್ಸ್ಯವ ಹಿಡಿದು ವಿಕ್ರಯಿಪ ಧನದಿಂದ
ಅಸಮಾಕ್ಷ- ಭಕ್ತರನು ತೃಪ್ತಿಪಡಿಸುತಲಿದ್ದ
ಎಸೆವ ಪರ್ವವನೊಮ್ಮೆ ಮಾಡಲುಜ್ಜುಗಿಸಿದನು
ಶಿವಪೂಜೆ ಸಮಯದಲಿ ಬೇಡಿದನು ವರವೊಂದ
ಶಿವನು ಕರುಣಿಸಿದಂತೆ ಚಿನ್ನದಾ ಮೀನೊಂದು
ಭವಹರನ ಭಕ್ತನನು ಪರಿಕಿಸಲು ಸಿಕ್ಕಿತದು
ಶಿವಶರಣರನು ಬೇಡಿದನು ಪರ್ವಕಾಗಮಿಸೆ.

ಜಂಗಮರು ಕೋಪದಿಂ ದೂಡಿದರು ಕನ್ನನನು
"ಭಂಗಪಡುತಿಹ ಭವಿಯ ಕಾಯಕವ ನೆಸಗುತಿಹೆ"
ಹಂಗಿಸುತಲಿಂಕೆಂದು ಕಿತ್ತುಕಳುಹಿದರು ಶಿವ-
ಲಿಂಗವನೆ ಖಿನ್ನನಾಗಿಯೆ ಬಂದ ಕನ್ನಪ್ಪ
ಪೂಜೆಯಲಿ ನೋಡಿದರೆ ಅವರ ಲಿಂಗಗಳಿಲ್ಲ!
ಸಾಜದಿಂ ಕ್ಷಮೆ ಬೇಡಿ ಪಡೆದರವ ಕೆರೆಯಲ್ಲಿ !!

—ಕೆ. ಪಿ. ಶಿವಲಿಂಗಯ್ಯ.

# -: ಮೈ ಸೂ ರ ರ ಮ ನೆ :-

ಜೆ. ಬಿ. ಲಿಂಗರಾಜು, ಬಿ.ಎ. ಅಧ್ಯಾಪಕ, ಕಲ್ಲುಸಾದರಪಳ್ಳಿ,
ಬಾಣಾವಾರ – 573 112, ಹಾಸನ ಜಿಲ್ಲೆ.

ಬೆಳ್ಳಂ ಬೆಳಕು ಮೈಸೂರರಮನೆ
ನಾಡಿಗೆ ನಾಡಿಗೆ ಬಿಂಬಿಸಿದೆ
ಜಿರ್‍ರಂ ಜಿಗಿ ಜಿಗಿ ಶ್ರಾವಣಸೋನೆ
ಕಣ್ಮನ ತಣಿಸಿ ರಂಜಿಸಿದೆ!,

ಚಿನ್ನದ ಚಿಕ್ಕಿಯ ಗೋಪುರದಂದದಿ
ಕಲಶವದೆನಿಸಿದೆ ಕಂಗೊಳಿಸಿ ;
ಕನ್ನಡ ನಲ್ಮೆಯ ಬೆಳ್ಮುಗಿಲಂದದಿ
ಬೆಳಕಿನ ಹಂದರ ಶೋಭಿಸಿದೆ.

ಮೈಸೂರರಸರ ವೈಭವದರಮನೆ
ಕನ್ನಡ ನಾಡನು ಸ್ವಾಗತಿಸಿದೆ;
ಕೈಬೀಸುವ ತೆರದಿ-ಗಂಧದಕೆತ್ತನೆ
ಹರಳಿನ ಹಂದರ ಬಿಂಬಿಸಿದೆ.

ಬಣ್ಣಗಳೆನಿತೊ ಕಲೆಯುಲಿ ನಲಿದಿದೆ
ಮಯೂರನಾಟ್ಯದ ಕಲೆಯಾಗಿ,
ವರ್ಣವಿಧವಿಧ ಶಿಲೆತಾನುಲಿದಿದೆ
ಜೀವದ ಕಳೆಯ ಶಿಲೆಯಾಗಿ.





COMFORTABLE
LUXURIOUS &
PEACEFUL
STAY
AT
KENCHAMBA LODGE
KENCHAMBA LODGE
SUBEDAR CHATRAM ROAD CROSS
NEAR KAPALI THEATRE
GANDHINAGAR
BANGALORE-9
Ph. 27082 GRAM: KENCHMLODG

# ಕ್ಷೇತ್ರ ವಾರ್ತೆ

.... ಹೆಚ್. ಬಿ. ಗಂಗಾಧರಯ್ಯ

## ಗಾಂಧಿ ಜಯಂತಿ

ಶ್ರೀ ಮಠದ ಸಂಯುಕ್ತ ವಿದ್ಯಾರ್ಥಿಸಂಘದ ಆಶ್ರಯದಲ್ಲಿ 2, ಅಕ್ಟೋಬರ್ ಬುಧವಾರ ಗಾಂಧಿ ಜಯಂತಿಯನ್ನು ತ್ರಿವಿಧ ದಾಸೋಹ ಮೂರ್ತಿಗಳಾದ ಪರಮ ಪೂಜ್ಯ ಡಾ॥ ಶಿವಕುಮಾರ ಮಹಾಸ್ವಾಮಿಗಳವರ ಸಾನ್ನಿಧ್ಯದಲ್ಲಿ ಆಚರಿಸಲಾಯಿತು. ಸಮಾರಂಭಕ್ಕೆ ಮುಖ್ಯ ಅತಿಥಿಯಾಗಿ ಕರ್ನಾಟಕ ರಾಜ್ಯದ ಬಾರ್ ಕೌನ್ಸಿಲ್ ಅಧ್ಯಕ್ಷರಾದ ಶ್ರೀ ಕೆ. ಎನ್. ರಾಜಶೇಖರ್ ಆಗಮಿಸಿದ್ದರು. ಈ ಸಂದರ್ಭದಲ್ಲಿ ಉಪನ್ಯಾಸ ಮಾಡುತ್ತಾ .... ....

ಮಹಾತ್ಮರು ನಡೆದ ದಾರಿಯಲ್ಲಿ ನಾವು ನಡೆದರೆ ಉತ್ತಮ ವ್ಯಕ್ತಿಗಳಾಗುತ್ತೇವೆ ಬುದ್ಧ-ಬಸವಣ್ಣನವರು ಬೋಧಿಸಿದ ಶಾಂತಿ, ಅಹಿಂಸೆ, ಕಾಯಕ, ಸಮಾನತೆ ಮುಂತಾದ ಆದರ್ಶಗಳನ್ನು ಮಹಾತ್ಮ ಗಾಂಧಿಯವರು ಆಚರಿಸಿ ತೋರಿಸಿದ್ದಾರೆ. ಇವರು ಮಾಡಿದ ತಪ್ಪುಗಳನ್ನು ತಿದ್ದಿಕೊಳ್ಳುವುದರಲ್ಲಿ ನಿಸ್ಸೀಮರಾಗಿದ್ದರು. ಅವರ ಜೀವನದರ್ಶನ ಕಣ್ಣು, ಕಿವಿ, ಬಾಯಿಗಳನ್ನು ಮುಚ್ಚಿಕೊಂಡಿರುವ ಮೂರು ಮಂಗಗಳ ಚಿತ್ರಗಳನ್ನು ಸದಾ ನಿರೂಪಿಸುತ್ತದೆ. ಕೆಟ್ಟದ್ದನ್ನು ನೋಡಬಾರದು, ಕೆಟ್ಟದ್ದನ್ನು ಕೇಳಬಾರದು, ಕೆಟ್ಟಮಾತುಗಳನ್ನು ನುಡಿಯಬಾರದು ಎಂಬುದು ಈ ತತ್ವ. ಇಂದಿನ ಯುವಕರು ಪ್ರಾಮಾಣಿಕರಾಗಿ ನಡೆದುಕೊಳ್ಳಬೇಕು. ಎಲ್ಲರ ಏಳಿಗೆಗಾಗಿ ಶ್ರಮಿಸಬೇಕು ಎಂಬುದೇ ಗಾಂಧೀಜಿಯವರ ಜೀವನ ಮಂತ್ರವಾಗಿತ್ತೆಂದು ಶ್ರೀ ರಾಜಶೇಖರ್ ನುಡಿದರು.

ವಿಶೇಷ ಆಹ್ವಾನಿತರಾಗಿದ್ದ ತುಮಕೂರಿನ ನಿವೃತ್ತ ಪಬ್ಲಿಕ್ ಪ್ರಾಸಿಕ್ಯೂಟರ್ ಶ್ರೀ ನಂಜುಂಡಪ್ಪನವರು ಮಾತನಾಡಿ 1934ರಲ್ಲಿ ಗಾಂಧೀಜಿಯವರು ತುಮಕೂರಿಗೆ ಬಂದಿದ್ದರು. ಅವರನ್ನು ನೋಡುವ ಭಾಗ್ಯ ಒದಗಿ ಬಂದದ್ದು ಪುಣ್ಯದ ಫಲವೆಂದು ಭಾವಿಸಿದ್ದೇನೆ. ಆ ಸಂದರ್ಭದಲ್ಲಿ ನಿರ್ಮಿಸಿದ್ದ ಎತ್ತರವಾದ ವೇದಿಕೆಯ ಮೇಲೆ ಅವರು ಕೂರಲು ಇಷ್ಟಪಡಲಿಲ್ಲ. ಎಲ್ಲರಂತೆ ನಾನೂ ಒಬ್ಬ ಸಾಮಾನ್ಯ ಪ್ರಜೆ ಎಂಬುದೇ ಅವರ ಉದಾತ್ತ ಭಾವನೆ. ಅವರು ಸಮತೆ, ಸಮಾನತೆಗೆ ಸಂಕೇತವಾಗಿದ್ದರು. ಅವರ ಭಕ್ತಿ ವಿಶ್ವಾಸಕ್ಕೆ ಮಣಿದು ದೇಶದ ಜನ ಲಕ್ಷೋಪಲಕ್ಷವಾಗಿ ಹಿಂಬಾಲಿಸುತ್ತಿತ್ತು. ಅವರ ಶ್ರಮದ ಫಲವಾಗಿ ದೇಶಕ್ಕೆ ಸ್ವಾತಂತ್ರ್ಯ ಬಂತು. ಆದರೆ ಇಂದು ದೇಶದ ಸ್ವಾತಂತ್ರ್ಯ ಸ್ವಾರ್ಥಿಗಳ ಶೋಷಣೆಗೆ ಸಿಕ್ಕಿದೆ. ಸ್ವಾತಂತ್ರ್ಯದ ಫಲ ಬಡಜನಗಳಿಗೆ ದೊರೆತಿಲ್ಲ. ಏಕೆ ಎಂಬುದು ಇಂದು ವಿಶ್ಲೇಷಿಸಬೇಕಾಗಿದೆ. ಗಾಂಧೀಜಿಯವರನ್ನು ನೆನಸಬೇಕಾದರೆ ಉತ್ತಮ ವ್ಯಕ್ತಿಗಳು ರಾಜಕೀಯ ಕ್ಷೇತ್ರ ಪ್ರವೇಶ ಮಾಡಬೇಕೆಂದು ಅಭಿಪ್ರಾಯಪಟ್ಟರು.

## ಶ್ರೀ ಶ್ರೀ ಗಳವರ ಆಶೀರ್ವಚನ॥

ಗಾಂಧೀಜಿಯವರ ಜೀವನ, ಸಾಧನೆ, ಸಿದ್ಧಿ, ಸೇವೆ ವರ್ಣನೆ ಮಾಡಲು ಸಾಧ್ಯವಿಲ್ಲ. ಅವರು ಮಹಾಮಾನವತಾವಾದಿಯಾಗಿದ್ದರು, ದೇಶದ ಸ್ವಾತಂತ್ರ್ಯಕ್ಕಾಗಿ ಬ್ರಿಟಿಷರ ಮೇಲೆ ಹೋರಾಟ ಮಾಡಲು ಅವರು ಬಳಸಿದ ಅಸ್ತ್ರ ಭಾರತೀಯ ಸಂಸ್ಕೃತಿಯ ಹಿರಿಮೆ. ಇದರ ಮೌಲ್ಯಗಳು ಅವರನ್ನು ಆಗಾಗ್ಗೆ ಸ್ಮರಣೆ ತಂದುಕೊಟ್ಟು ಪ್ರಭಾವ ಬೀರುತ್ತಿದ್ದವು. ಇದರ ಪ್ರಯೋಗದಿಂದಲೇ ಜಯಲಭಿಸಿತು. ಅವರ ನಡೆ ನುಡಿಯಲ್ಲಿ ಏಕತೆ ಇತ್ತು. ಅವರ ಮಾತಿಗೆ ಎಲ್ಲರೂ ಓಗೊಡುತ್ತಿದ್ದರು.

ಬ್ರಿಟಿಷರಿಗೆ ಗಾಂಧೀಜಿಯ ಬಗ್ಗೆ ಪೂಜ್ಯಭಾವನೆ ಇತ್ತು. ವೈಸ್‌ರಾಯ್ ಮೌಂಟ್ ಬ್ಯಾಟನ್ ಸಭೆಯಲ್ಲಿ ಗಾಂಧೀಜಿ ಭಾಗವಹಿಸಿದ್ದರು. ಸಭೆಯು ಮುಗಿದ ನಂತರ ಮರೆತು ಗಾಂಧೀಜಿ ತಮ್ಮ ಬಳಿ ಇದ್ದ ತುಂಡು ಬಿಳಿ ಕಂಬಳಿ ಬಿಟ್ಟು ಮುಂದೆ ಸರಿದರು. ಆಗ ವೈಸ್‌ರಾಯ್ ಮೌಂಟ್‌ಬ್ಯಾಟನ್‌ರವರೇ ಕಂಬಳಿ ತೆಗೆದುಕೊಂಡು ಓಡುತ್ತಾ ಗಾಂಧಿಜೀಯನ್ನು ವಾತ್ಸಲ್ಯದಿಂದ ಕೂಗುತ್ತಾ ಕಂಬಳಿ ಹಿಂದಿರುಗಿಸಿದರು. ಇದು ಅವರ ವ್ಯಕ್ತಿತ್ವಕ್ಕೆ ಸಂದ ಅಪಾರಗೌರವ ಸೂಚಕವಾಗಿದೆ. ದೇವರು, ಧರ್ಮದ ಬಗ್ಗೆ ಅಪಾರ ಭಕ್ತಿ ಇತ್ತು. ಹಿಂಸೆಯನ್ನು ಅಹಿಂಸೆಯಿಂದ ಗೆಲ್ಲಬೇಕು. ಅಸತ್ಯವನ್ನು ಸತ್ಯದಿಂದ ಗೆಲ್ಲಬೇಕೆಂಬುದೇ ಅವರ ಧ್ಯೇಯವಾಗಿತ್ತು. ಕಷ್ಟಗಳಿಗೆ ಹಿಂಜರಿಯುವ ವ್ಯಕ್ತಿಯಾಗಿರಲಿಲ್ಲ, ಜಗತ್ತು ಶಾಂತಿಯಿಂದರಬೇಕಾದರೆ ಧರ್ಮದ ಮೂಲವನ್ನು ಅರಿಯಬೇಕೆಂದು ಪ್ರತಿಪಾದಿಸಿದ್ದಾರೆ.

### ರಾಮ ರಾಜ್ಯ ಸ್ಥಾಪನೆ ಅವರ ಉದ್ದೇಶ

ಎಲ್ಲರೂ ಏಳಿಗೆ ಯಾಗಬೇಕು. ಎಲ್ಲರಲ್ಲಿ ಮಾನವೀಯ ಮೌಲ್ಯಗಳ ಬೆಳವಣಿಗೆ ಯಾಗಬೇಕು. ಶ್ರೀ ರಾಮತೀರ್ಥರು ನಾಲ್ಕುವರ್ಗಗಳಾಗಿ ಮಾನವರನ್ನು ವಿಂಗಡಿಸಿದ್ದಾರೆ.

1) ಶಿಲಾವರ್ಗ :- ನಾನು ................ ನನ್ನ ಏಳ್ಗೆ.
2) ಸಸ್ಯವರ್ಗ :- ನಾನು ................ ನನ್ನ ಕುಟುಂಬಪಾಲನೆ.
3) ಪ್ರಾಣಿವರ್ಗ :- ನಾನು ................ ನನ್ನ ಪಕ್ಕದವರು.
4) ಮನುಷ್ಯವರ್ಗ ;- ನಾನು ................ ನನ್ನ ದೇಶ ಚೆನ್ನಾಗಿರಬೇಕು.

ಇವನ್ನುಹೊರತು ಪಡಿಸಿ ದೇವವರ್ಗ ಒಂದು ಇದೆ. ಇದರ ಧ್ಯೇಯ ನಾನು, ಜಗತ್ತೆಲ್ಲವೂ ಚೆನ್ನಾಗಿರಬೇಕು. ಗಾಂಧೀಜಿಯ ಜೀವನ ದರ್ಶನ ಸರಳ ಜೀವನಕ್ಕೆ ಪ್ರತೀಕವಾಗಿದ್ದು ದೇವ ವರ್ಗದ ವ್ಯಾಪ್ತಿಗೆ ಒಳಪಟ್ಟಿತ್ತು. ಆರ್ಥಿಕವಾಗಿ ಭರತಖಂಡ ಚೆನ್ನಾಗಿ ಬೆಳವಣಿಗೆಯಾಗಬೇಕು. ಸಾಮಾಜಿಕವಾಗಿ ಅಸ್ಪೃಶ್ಯತಾ ನಿವಾರಣೆಗಾಗಿ ಬಹಳವಾಗಿ ಶ್ರಮಿಸಿದರು. ಸ್ವಾತಂತ್ರ್ಯ ನಂತರ ಭಾರತ ಜಗತ್ತಿಗೆ ಮಾರ್ಗದರ್ಶನ ಮಾಡಬೇಕೆಂಬ ಹಂಬಲ ಅವರಿಗಿತ್ತು. ಆದರೆ ಈ ದಿನದ ಚಿತ್ರ ಲಜ್ಜಾಸ್ಪದವಾಗಿದೆ.

ಪ್ರಜಾಪ್ರಭುತ್ವ ಎಲ್ಲರ ಪ್ರಗತಿಯ ಸಂಕೇತ, ಎಲ್ಲರೂ ಬುದ್ಧಿವಂತರಾಗಿ ನೀತಿಯುತವಾದ ಬಾಳ್ವಿಕೆ ನಡೆಸಬೇಕು. ಆದರೆ ಇಂದು ದ್ರೋಹ ಬಗೆಯುತ್ತಿದ್ದೇವೆ. ಪ್ರತಿಭಟನೆ ಮಾಡುವವರಿಲ್ಲ. ಶಿಕ್ಷಕರು ಮನಸ್ಸುಮಾಡಿದರೆ ಬದಲಾವಣೆ ತರಬಹುದು. ಬಸವಣ್ಣನವರ ತತ್ವಗಳನ್ನು ಗಾಂಧೀಜಿ ಸಂಪೂರ್ಣವಾಗಿ ಆಚರಿಸಿ ತೋರಿಸಿದ್ದಾರೆ.

## ಅಭಿನಂದನೆ :

ಕರ್ನಾಟಕ ರಾಜ್ಯಬಾರ್ ಕೌನ್ಸಿಲ್ ಅಧ್ಯಕ್ಷ ಸ್ಥಾನಕ್ಕೆ ಶ್ರೀ ಕೆ. ಎನ್. ರಾಜಶೇಖರ್‌ರವರ ಅವಿರೋಧ ಆಯ್ಕೆ ಅವರ ಬಹುಮುಖ ವ್ಯಕ್ತಿತ್ವಕ್ಕೆ ದೊರೆತಪುರಸ್ಕಾರ.

ಶ್ರೀಯುತರಿಗೆ ಅಭಿನಂದನ ಸಮಾರಂಭವನ್ನು ಶ್ರೀ ಸಿದ್ಧಗಂಗಾ ವಿದ್ಯಾ ಸಂಸ್ಥೆ ತುಮಕೂರಿನ ಸಿದ್ಧಗಂಗಾ ಎಸ್. ಐ. ಟಿ. ಬಿರ್ಲಾ ಆಡಿಟೋರಿಯಂನಲ್ಲಿ ಆಕ್ಟೋಬರ್ 5 1991ನೇ ಶನಿವಾರ ಏರ್ಪಡಿಸಿತ್ತು. ಸಮಾರಂಭ ಪೂಜ್ಯ ಡಾ|| ಶ್ರೀ ಶ್ರೀ ಶಿವಕುಮಾರಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆಯಿತು.

ಸಮಾರಂಭದ ಅಧ್ಯಕ್ಷತೆಯನ್ನು ಕರ್ನಾಟಕದ ಉಚ್ಚನ್ಯಾಯಾಲಯದ ಗೌರವಾನ್ವಿತ ನ್ಯಾಯಾಧೀಶರಾದ ಶ್ರೀ ಎಂ. ರಾಮಾಜೋಯಿಸ್ ವಹಿಸಿದ್ದರು. ಮುಖ್ಯ ಅತಿಥಿಯಾಗಿ ರಾಷ್ಟ್ರೀಯ ನ್ಯಾಯಾಶಾಲೆ ಭಾರತ ವಿದ್ಯಾಲಯ, ಬೆಂಗಳೂರು ಇದರ ನಿರ್ದೇಶಕರಾದ ಡಾ|| ಶ್ರೀ ಎಸ್. ಆರ್. ಮಾಧವ ಮೆನನ್ ಆಗಮಿಸಿದ್ದರು.

ಪ್ರಾರಂಭಕ್ಕೆ ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆಯ ಸಹ ಕಾರ್ಯದರ್ಶಿಗಳಾದ ಶ್ರೀ ಟಿ. ಕೆ. ನಂಜುಂಡಪ್ಪನವರು ಸ್ವಾಗತ ಕೋರಿದರು. ಬೆಂಗಳೂರು ಉಚ್ಚನ್ಯಾಯಾಲಯದ ವಕೀಲರಾದ ಶ್ರೀ ವೀರಭದ್ರಪ್ಪನವರು ಪರಿಚಯಿಸಿದರು. ಶ್ರೀ ಬಸವೇಶ್ವರ ಶಿಕ್ಷಕ ತರಬೇತಿ ಸಂಸ್ಥೆಯ ವಿದ್ಯಾರ್ಥಿ-ಶಿಕ್ಷಕರು ಸಾಮೂಹಿಕವಾಗಿ ಗಾಂಧಿಸ್ತುತಿಯನ್ನೊಳಗೊಂಡ ದೇಶ ಭಕ್ತಿಗೀತೆಗಳನ್ನು ಹಾಡಿದರು.

ತುಮಕೂರು ಜಿಲ್ಲಾ ಸೆಷನ್ ಶ್ರೇಷ್ಠನ್ಯಾಯಾಧೀಶರಾದ ಶ್ರೀ ಅಗ್ನಿಹೋತ್ರಿ, ನ್ಯಾಯವಾದಿಗಳಾದ ಶ್ರೀ ಗರುಡಾಚಾರ್, ಕೈಗಾರಿಕೋದ್ಯಮಿಗಳಾದ ಶ್ರೀ ಎನ್. ಆರ್. ಜಗದೀಶ್ ಮತ್ತು ಪ್ರಮುಖ ವ್ಯಾಪಾರಿಗಳಾದ ಶ್ರೀ ಟಿ. ಎಲ್. ಲಕ್ಷ್ಮೀನಾರಾಯಣಶೆಟ್ಟಿ ಶ್ರೀ ಕೆ.ಎನ್. ರಾಜಶೇಖರ್‌ರವರ ಬಗ್ಗೆ ಶ್ಲಾಘನೆಮಾಡಿದರು.

ಶ್ರೀ ಮೆನನ್‌ರವರು ಮಾತನಾಡಿ ಕಾನೂನು ಶಿಕ್ಷಣದಲ್ಲಿ ತುಂಬಾ ಸುಧಾರಣೆಯಾಗಬೇಕಾಗಿದೆ, ನ್ಯಾಯವಾದಿಗಳು ಇಂದು ತೀವ್ರವಾಗಿ ಸಮಸ್ಯೆಗಳನ್ನು ವಿಮರ್ಶಿಸಿ ಅಭಿಪ್ರಾಯಗಳನ್ನು ನೀಡಬೇಕು. ಈ ದಿಶೆಯಲ್ಲಿ ನೂತನವಾಗಿ ಆಯ್ಕೆಯಾಗಿರುವ ಶ್ರೀ ಕೆ. ಎನ್. ಆರ್‌ರವರು ಶ್ರಮಿಸಬೇಕಾಗಿದೆ ಎಂದರು.

ಈ ಸಂದರ್ಭದಲ್ಲಿ ಶ್ರೀ ಕೆ. ಎನ್. ಆರ್‌ರವರು ಮಾತನಾಡಿ ನನ್ನ ಎಲ್ಲಾ ಅಭ್ಯುದಯ ಬೆಳವಣಿಗೆಗೆ ಪೂಜ್ಯ ಗುರುಗಳಾದ ಶ್ರೀ ಶ್ರೀ ಶಿವಕುಮಾರಮಹಾಸ್ವಾಮಿಗಳವರ ಆಶೀರ್ವಾದದ ಫಲ. ದೀನ, ದಲಿತರ ಕೇಂದ್ರವಾಗಿ ಶ್ರೀ ಸಿದ್ಧಗಂಗಾಮಠ

ಭಾರತದಲ್ಲಿ ಸರ್ವರ ಹಿತಕ್ಕಾಗಿ ಶ್ರಮಿಸುತ್ತಿದೆ. ತುಮಕೂರಿನ ಸಿದ್ಧಗಂಗಾ ಪ್ರೌಢ ಶಾಲೆಯ ವಿದ್ಯಾರ್ಥಿಯಾಗಿ ಜೀವನದಲ್ಲಿ ಸ್ಫೂರ್ತಿ ಪಡೆದೆ ಎಂದು ಸ್ಮರಿಸಿದರು.

ಅತಿಥಿಗಳಾದ ಶ್ರೀ ರಾಮಾಜೋಯಿಸ್‌ರವರು, ಶ್ರೀ ಶ್ರೀಗಳವರ ಸನ್ನಿಧಿಯಲ್ಲಿ, ಶ್ರೀ ಕೆ.ಎನ್.ಆರ್‌ರವರಿಗೆ ಸನ್ಮಾನ ದೊರೆತದ್ದು ಅವರ ಪುಣ್ಯ ಫಲದ ಸಂಕೇತ.

ಸೇವೆ ಮತ್ತು ತ್ಯಾಗಕ್ಕೆ ಹೆಸರಾಂತ ಶ್ರೇಷ್ಠ ವ್ಯಕ್ತಿಗಳಾದ ಶ್ರೀ ಶ್ರೀ ಗಳವರ ಸನ್ನಿಧಿಯಲ್ಲಿ ಸೇರುವುದೇ ಪುಣ್ಯ ಮತ್ತು ಅಪೂರ್ವ. ಈ ಸುಂದರಸಂಜೆಯು ನನ್ನ ಮೇಲೆ ವಿಶೇಷ ಪ್ರಭಾವಬೀರಿದೆ. ವಕೀಲರ ಪರಿಷತ್ ಪ್ರಾಮುಖ್ಯವಾದುದು. ಕರ್ನಾಟಕದಲ್ಲಿ 18,00 0ವಕೀಲರಿದ್ದಾರೆ, ಇವರಿಗೆ ಮಹತ್ವದ ಜವಾಬ್ದಾರಿಇದೆ. ಇಂದು ನೈತಿಕ ಅದಃ ಪತನವಾಗಿದೆ. ದೇಶ ಸರ್ವನಾಶದ ಅಂಚಿನಲ್ಲಿದೆ. ವಕೀಲರು ಇದರ ಬಗ್ಗೆ ಗಮನ ಹರಿಸಬೇಕು. ಕಾನೂನು ಶಿಕ್ಷಣ ಅಧೋಗತಿಗೆ ಇಳಿದಿದೆ. ವಿದ್ಯೆ ಸುಲಭವಾಗಿ ಕಲಿಯಲು ಸಾಧ್ಯವಿಲ್ಲ. ಕಾಪಿ ಮಾಡಿ ಇಂದು ಪದವಿಗಳನ್ನುಗಳಿಸುತ್ತಿದ್ದಾರೆ. ಇದರಿಂದಾಗಿ ಶಿಕ್ಷಣ ಕ್ಷೇತ್ರ ಕುಸಿಯುತ್ತಿದೆ. ಹಣ ಸಂಪಾದಿಸಬಹುದು, ಆದರೆ ವಿದ್ಯೆ ಯನ್ನು ಶ್ರಮಪಟ್ಟು ಸಾಧನೆ ಮಾಡಬೇಕು. ಜೀವನದಲ್ಲಿ ಮುಖ್ಯವಾಗಿ ನಾಲ್ಕು ಋಣಗಳಿವೆ. ಮಾತಾಪಿತೃ ಋಣ, ಋಷಿ ಋಣ, ಮನುಷ್ಯ ಋಣ, ದೇವರ ಋಣ. ಶ್ರೀ ಕೆ.ಎನ್.ಆರ್‌ವರು ಎಲ್ಲಾ ಋಣಗಳನ್ನು ತೀರಿಸಿರುವ ವ್ಯಕ್ತಿಗಳಾಗಿದ್ದಾರೆಂದು ಅಭಿನಂದಿಸಿದರು.

## ಶ್ರೀ ಶ್ರೀ ಗಳವರ ಆಶೀರ್ವಚನ

ಈ ಸಮಾರಂಭ ನಾಡಿನ ರಾಷ್ಟ್ರದ ಸಮಸ್ಯೆಗಳನ್ನು ಪರಿಹಾರ ಮಾಡುವುದಾಗಿದೆ. ಇಂದು ಸಾಮಾಜಿಕ ಜೀವನ ಕಲುಷಿತವಾಗಿದೆ ದಾನವ ಜೀವನ ಸಾಗುತ್ತಿದೆ. ಎಲ್ಲಾ ಜನಾಂಗಕ್ಕೂ ನಮ್ಮ ಭಾರತ ಬೆಳಕು ಹರಿಸಿದೆ. ಈಕಾರ್ಯ ಸಾಧಿಸುವಲ್ಲಿ

ವಕೀಲರಪಾತ್ರ ಮುಖ್ಯ. ವೃತ್ತಿ ಗೌರವ ಘನತೆ ಉಳ್ಳವರಾಗಿ ಸೇವೆಯಲ್ಲಿ ತೊಡಗಬೇಕು. ವಿಷಯದಲ್ಲಿ ಪ್ರಭುತ್ವವಿರಬೇಕು. ಆದರೆ ಇಂದು ಪದವಿ ದೊರಕಿಸಿ ಕೊಳ್ಳುವುದರಲ್ಲೇ ಆಸಕ್ತರಾಗಿದ್ದಾರೆ. ಜ್ಞಾನ ಗಳಿಸುವಲ್ಲಿ ಅಲ್ಲ. ಒಬ್ಬ ಡಾಕ್ಟರ್ ತನ್ನ ವೃತ್ತಿಯಲ್ಲಿ ತಪ್ಪುಮಾಡಿದರೆ ಒಬ್ಬ ವ್ಯಕ್ತಿ ಸಮಾಧಿಯಾಗುತ್ತಾನೆ. ಆದರೆ ವಕೀಲ ತಪ್ಪುಮಾಡಿದರೆ ಇಡೀ ದೇಶವೇ ಸಮಾಧಿಯಾಗುತ್ತದೆ. ಕಾನೂನು ವಿದ್ಯೆ ಪರಿಷ್ಕರಣವಾಗಬೇಕು. ಶಾಸನ ಮತ್ತು ಕಾನೂನುಗಳು ದೇಶದ ರಕ್ಷಣೆಯ ಬೇಲಿಗಳಾಗ ಬೇಕೇ ಹೊರತು ಭಕ್ಷಣೆಯ ಮಳಿಗೆಗಳಾಗಬಾರದು.

ಹಳ್ಳಿಯಲ್ಲಿ ಜನ್ಮತಾಳಿ ಸಾಧಕ ಜೀವಿಯಾಗಿ ಕೆಲಸ ಮಾಡಿದ್ದಾರೆ ಕೆ.ಎನ್.ಆರ್. ನಾಡಿಗೆ ರಾಷ್ಟ್ರಕ್ಕೆ ಅವರು 2ವರ್ಷದ ಅವಧಿಯಲ್ಲಿ ಉತ್ತಮ ಸೇವೆ ಸಲ್ಲಿಸಲು ಅವರಿಗೆ ಸರ್ವಶಕ್ತಿಯನ್ನು ಪರಮಾತ್ಮ ನೀಡಲಿ ಎಂದು ಅನುಗ್ರಹಿಸಿದರು. ಕೊನೆಯಲ್ಲಿ ರೀಡರ್ ಶ್ರೀ ಹೆಚ್. ವಿ. ವೀರಭದ್ರಯ್ಯನವರು ವಂದನೆ ಸಲ್ಲಿಸಿದರು.

ಪಲ್ಲ ಕೇವಲ 365 ದಿನಗಳಲ್ಲಿ :-

ತನ್ನ ಪ್ರಜೆಗಳ ಪ್ರಗತಿ ಮತ್ತು ಮುನ್ನಡೆಗಾಗಿ ಬದ್ಧವಾಗಿರು ಸರ್ಕಾರ ...ಂದಕ್ಕೆ ಯಾವುದೇ ಪ್ರಯತ್ನವು ಕಷ್ಟವಲ್ಲ. ಯಾವುದೇ ಕೆಲಸವು ದೊಡ್ಡದಲ್ಲ. ಇಂದು ...ರ್ನಾಟಕ ಸರ್ಕಾರವು ಶ್ರೀ ಬಂಗಾರಪ್ಪನವರ ನೇತೃತ್ವದಲ್ಲಿ, ತನ್ನ ಸಾಧನೆಗಳತ್ತ ಒಮ್ಮೆ ...ತಿರುಗಿ ನೋಡ ಹೆಮ್ಮೆಪಡುತ್ತಿದೆ.

...ಪ್ರಾಥಮಿಕ ಶಿಕ್ಷಣಕ್ಕೊಂದು ಉತ್ತೇಜನ, ಬೇಸಾಯಗಾರರಿಗೊಂದು ಅಮೂಲ್ಯ ...ಮತ್ತು ನೇಕಾರರಿಗೊಂದು ಅಭೂತಪೂರ್ವ ಆದ್ಯತೆಯತ್ತ ಇಂದು ಸರ್ಕಾರ ...ವಾಗಿದೆ. ಈ ದಿಶೆಯತ್ತ ದಿಟ್ಟ ಹೆಜ್ಜೆ ಇಟ್ಟಿದೆ. ಕೋಮು ಗಲಭೆಗಳನ್ನು ಮತ್ತು ...ರಾಧಗಳನ್ನು ಹತ್ತಿಕ್ಕಲು ಸರ್ಕಾರವು ಕ್ರಮ ಕೈಗೊಂಡಿದೆ. ಗಲಭೆಗಳನ್ನು ತಡೆವ ...ಯವಾಗಿ ರಾಜ್ಯ ಏಕತಾ ಸಮಿತಿಯೊಂದನ್ನು ರಚಿಸಲಾಗಿದೆ.

## ಬಡ ಜನತೆಗಾಗಿ ಅರ್ಥಪೂರ್ಣ ಸುಧಾರಣಾ ಯೋಜನೆಗಳು

**...ಶುಶ್ರೂಷಾ :-** ಗ್ರಾಮೀಣ ಜನತೆಗೆ ಪ್ರತಿ 6 ತಿಂಗಳಿಗೊಮ್ಮೆ ಉಚಿತ ವೈದ್ಯಕೀಯ ...ಪಾಸಣೆ ಮುಬಾರಿ ಚಿಕಿತ್ಸೆ ನಡೆಸಬೇಕಾಗುವ ರೋಗಗಳ ಗುರುತಿಸುವಿಕೆ ಮತ್ತು ...ಚಿಕಿತ್ಸೆ ನೀಡುವ ಯೋಜನೆಯೇ ಈ ಶುಶ್ರೂಷಾ. ಈ ಯೋಜನೆಯಿಂದ ಬಡಜನರೂ ...ೂಡ ಬೇರಾವುದೇ ಜನರಂತೆ ಅವರ ಜೀವನ ಅಮೂಲ್ಯವೆಂಬಂತೆ ಆರೈಕೆ ಪಡೆಯಲು ...ಸಾಧ್ಯವಾಗುತ್ತದೆ.

**...ಆರಾಧನಾ :-** ಜನರಲ್ಲಿ ಧಾರ್ಮಿಕ ಭಾವನೆಯನ್ನು ಈ ಯೋಜನೆಯು ಬಲಪಡಿಸುತ್ತದೆ. ...ದುರ್ಬಲ ಜನಾಂಗಗಳ ಜನತೆಯಿರುವೆಡೆ ಅವಶ್ಯಕತೆಗಳನ್ನು ಪೂರೈಸುವ ಸದುದ್ದೇಶ ...ಂದ ಅವರು ವಾಸಿಸುವ ಸ್ಥಳಗಳಲ್ಲಿಯೇ ನಿರ್ಮಿಸಲು ಈ ಯೋಜನೆಯನ್ನು ಹಮ್ಮಿ ...ಕೊಳ್ಳಲಾಗಿದೆ.

**...ಶ್ವ :-** ಗ್ರಾಮೀಣ ಗುಡಿ ಕೈಗಾರಿಕೀಕರಣವನ್ನು ಪ್ರೋತ್ಸಾಹಿಸಲು ಸಾವಿರಾರು ಗ್ರಾಮೀಣ ...ಜನತೆಗೆ ಸತತ ಮತ್ತು ಲಾಭಯುತ ಉದ್ಯೋಗವನ್ನೀಯುವ ಉದ್ದೇಶದಿಂದ ಈ ...ಕಾರ್ಯಕ್ರಮವನ್ನು ಯೋಜಿಸಿದೆ. ಕಚ್ಚಾ ಸಾಮಗ್ರಿಗಳ ಪೂರೈಕೆ, ಉತ್ಪನ್ನಗಳ ...ಮಾರಾಟ ಮತ್ತು ಕೌಶಲ್ಯವರ್ಧನೆ ಇತ್ಯಾದಿಗಳಿಗೆ ಸರ್ಕಾರದ ಪೂರ್ಣ ಬೆಂಬಲವಿದೆ.


**...ಆಶ್ರಯ :-** ಅನಸೂಚಿತ ಜಾತಿಯ ಮತ್ತು ಕೋಮಿನವರಿಗೆ ಇದೇ ವರ್ಷ ರಾಜ್ಯದ ...ಪ್ರತಿಯೊಂದು ತಾಲ್ಲೂಕುಗಳಲ್ಲಿ 1000 ಗೃಹಗಳನ್ನು ಮತ್ತು 5 ವರ್ಷ 1 ಲಕ್ಷ ಗೃಹ ...ಗಳನ್ನೊದಗಿಸಲು ಈ ಹಿರಿದಾದ ಯೋಜನೆಯನ್ನು ಹಾಕಿಕೊಂಡಿದೆ.

**...ಅಕ್ಷಯ :-** ಸಮಾಜದ ಬರ್ಚಿನಲ್ಲಿ ಹಿಂದುಳಿದ ಬಡಮಕ್ಕಳಿಗೆ ಒಂದು ಹೊತ್ತಾದರೂ ...ಪೌಷ್ಟಿಕ ಆಹಾರವನ್ನು ನೀಡಲು ಇದೊಂದು ಮಾನವೀಯ ಕಾರ್ಯಕ್ರಮ. ಎಳೆ ...ವಯಸ್ಸಿನಲ್ಲಾದರೂ ಮಕ್ಕಳು ಶಾಲೆಗೆ ಬರಲು ಇದೊಂದು ಪ್ರೇರಣೆ.

**...ಇನ್ನು ಹೆಚ್ಚಿನದು ಮುಂಬರುವ ವರ್ಷಗಳಲ್ಲಿ :-** ಈ ದಿನದಂದು ನಾನು ಕರ್ನಾಟಕ ...ಜನತೆಗೆ ಅವರ ಪೂರ್ಣ ಹೃದಯದ ಸಹಕಾರದಿಂದಾಗಿ ಪೂರ್ಣ ಹುಂಬದಿಂದ ಸಾಧ್ಯವಾದ. ...ಸರ್ಕಾರದ ಈ ಹಿಂದಿನ ವರ್ಷದ ಪ್ರಗತಿ ಪೂರ್ಣ ಹಾದಿಯಲ್ಲಾದ ಅನೇಕ ಸುಧಾರಿತ ...ಕಾರ್ಯಗಳನ್ನು ಸಾಧ್ಯವಾಡಿದ್ದಕ್ಕಾಗಿ, ನಾನು ಅವರಿಗೆ ಆಭಾರಿಯಾಗಿದ್ದೇನೆ.

"ಕರ್ನಾಟಕ ವಾರ್ತೆ"
...: 151091.

ಶ್ರೀಯುತ ಎಸ್. ಬಂಗಾರಪ್ಪ,
ಕರ್ನಾಟಕದ ಮುಖ್ಯ ಮಂತ್ರಿಗಳು



ತುಮಕೂರಿಗೆ ಬರುವವರಿದ್ದೀರಾ? ಹಾಗಿದ್ದರೆ, ವೈವಿಧ್ಯಮಯ ಊಟ,
ವಸತಿ, ತಿಂಡಿ ತಿನಿಸುಗಳ ನಮ್ಮ ಈ ಸ್ಥಳಗಳು ಸದಾ ನಿಮ್ಮನ್ನು ಸ್ವಾಗತಿಸುತ್ತಿವೆ.
ಹೋಟೆಲ್
ಶ್ರೀ ನಂಜುಂಡೇಶ್ವರ
ಊಟ, ವಸತಿ ಮತ್ತು
ಉಪಹಾರ ಮಂದಿರ,
ಬಿ.ಹೆಚ್. ರಸ್ತೆ, ತುಮಕೂರು.
ದೂರವಾಣಿ
8597, 2373, 2577
SRI
Hotel Shree Nanjundeswara
ಶ್ರೀ ನಂಜುಂಡೇಶ್ವರ
ಬೇಕರಿ
ತುಮಕೂರು ಜಿಲ್ಲೆಯ ಪ್ರಖ್ಯಾತ
ಬೇಕರಿ
ಚಿಕ್ಕಪೇಟೆ ತುಮಕೂರು.
ದೂರವಾಣಿ : 8077
ಶ್ರೀ ನಂಜುಂಡೇಶ್ವರ ರೆಸ್ಟೋರೆಂಟ್
ತುಮಕೂರಿನಲ್ಲಿ ಉತ್ತರ ಭಾರತದ ಶೈಲಿಯ ಊಟ
ಉಪಹಾರಗಳ ಶ್ರೇಷ್ಠ ದರ್ಜೆಯ ರೆಸ್ಟೋರೆಂಟ್
ಬಿ.ಹೆಚ್. ರಸ್ತೆ, ತುಮಕೂರು.
ದೂರವಾಣಿ : 2677
ಸಿ.ವಿ. ಮಹದೇವಯ್ಯ
ಶ್ರೀ ನಂಜುಂಡೇಶ್ವರ ಸ್ವೀಟ್ಸ್
ಎಲ್ಲಾ ವಿಧವಾದ ಸಿಹಿ ಮತ್ತು ಖಾರ ತಿಂಡಿ ಹಾಗೂ
ಬೇಕರಿ ತಿನಿಸುಗಳ ನಗರದ ಏಕೈಕ ಸ್ಥಳ
ಅಶೋಕ ರಸ್ತೆ ತುಮಕೂರು.
ದೂರವಾಣಿ : 2077

# ಸಿದ್ಧಗಂಗಾ

ಸಂಪುಟ–27. ಸಂಚಿಕೆ–12 ಡಿಸೆಂಬರ್–1991.

ರಾಷ್ಟ್ರವನ್ನಾಳುವ ನಾಯಕರಿಗೆ ಹೃದಯವಂತಿಕೆ ಇರಬೇಕು. ತನ್ನ ಜನರ ಕಷ್ಟಕಾರ್ಪಣ್ಯಗಳಿಗೆ ಸ್ಪಂದಿಸುವ ಮನೋಧರ್ಮ ಮೂಡಿಬರಬೇಕು. ಮಾನವೀಯತೆಯೊಡಗೂಡಿದ ಜೀವನ ಕ್ರಮ ಅವರದಾದಾಗ ಜನಾಂಗ ಸಂಕಟದಿಂದ ದೂರವಾಗಬಲ್ಲುದು.

— ಶ್ರೀ ಶ್ರೀ ಶಿವಕುಮಾರಸ್ವಾಮಿಗಳು

ಪ್ರಕಾಶಕರು:
ಹಳೆಯ ವಿದ್ಯಾರ್ಥಿಗಳ ಸಂಘ
ಸಿದ್ಧಗಂಗಾ ಕ್ಷೇತ್ರ.



ಪರಮ ಪೂಜ್ಯ ಶ್ರೀ ಶ್ರೀ ಶಿವಕುಮಾರಮಹಾಸ್ವಾಮಿಗಳವರಿಂದ ಪದ್ಮ ಶ್ರೀ ಆರ್. ಎಂ.ಬಿ. ಆರಾಧ್ಯರ ಪ್ರತಿಷ್ಠಾನದ ಆರಂಭೋತ್ಸವ. ಪದ್ಮಶ್ರೀ ಆರ್. ಎಂ. ಬಿ. ಆರಾಧ್ಯರು, ಶ್ರೀ ಬಿ. ಎಸ್. ಮುದ್ದಪ್ಪನವರು ಶ್ರೀ ಗೊ.ರು. ಚನ್ನಬಸಪ್ಪನವರುಗಳನ್ನು ಕಾಣಬಹುದು.



ಪರಮಪೂಜ್ಯ ಶ್ರೀ ಶ್ರೀ ಶಿವಕುಮಾರಮಹಾಸ್ವಾಮಿಗಳವರ ಸಮ್ಮುಖದಲ್ಲಿ ಪದ್ಮಶ್ರೀ ಆರ್. ಎಂ. ಬಿ. ಆರಾಧ್ಯರಿಗೆ ಪ್ರತಿಷ್ಠಾನದ ಕೋಶಾಧಿಕಾರಿಗಳಾದ ಶ್ರೀ ಎಚ್. ವಿ. ನಾಗೇಂದ್ರಪ್ಪನವರಿಂದ ಬಸವಣ್ಣನವರ ನೆನಪಿನ ವಿಗ್ರಹವನ್ನು ಅರ್ಪಣೆ ಮಾಡುತ್ತಿರುವುದು.

# ಸಿದ್ಧಗಂಗಾ

ಸಂಪುಟ–27.  ಸಂಚಿಕೆ–12.  ಡಿಸಂಬರ್ 1991.

## ಶ್ರೀ ಸಿದ್ಧಗಂಗಾ ಗುರುಕರುಣ ತ್ರಿವಿಧಿ.

ಮಾನವ್ಯ ಮಹವಾಗಿ ಅರಳಿದ ಗುರುಲಿಂಗ
ಮನ ಬುದ್ಧಿ ಚಿತ್ತಗಳನರ್ಪಿಸಿ। ಪೊಡಮಡುವೆ
ಸಿದ್ಧಗಂಗಾ ಗುರುವೆ ಕೃಪೆಯಾಗು॥

ಜಗವೆಲ್ಲ ಅಳುತಿರಲು ಜಗದಕಣ್ಣೊರೆಸಲು
ಜಗಲಿಂಗವಾಗಿ ಚರಿಸಿದೆ। ನನ್ನತಂದೆ
ಸಿದ್ಧಗಂಗಾ ಗುರುವೆ ಕೃಪೆಯಾಗು॥

ಮಾವಿನೊಳು ರಸವಾಗಿ ಮಲ್ಲಿಗೆಯ ಕಂಪಾಗಿ
ಕಬ್ಬಿನೊಳು ಸಿಹಿಯಾಗಿ ಮೂಡಿರುವ। ನನ್ನತಂದೆ
ಸಿದ್ಧಗಂಗಾ ಗುರುವೆ ಕೃಪೆಯಾಗು॥

— ಹೆಚ್. ವಿ. ವೀರಭದ್ರಯ್ಯ.

| ಲೇಖನ | ಲೇಖಕರು | ಪುಟ |
|---|---|---|
| * ಶ್ರೀವಾಣಿ | | 5 |
| * ಶ್ರೀ ಸಿದ್ಧಲಿಂಗೇಶ್ವರ ವಚನ | | 7 |
| * ಸಂಪಾದಕೀಯ | | |
| * ವಿನಯುವೇ ವೈವೆತ್ತು ಮೆರೆದ ಬಸವಣ್ಣನವರು | ವಿ|| ಎಂ. ಮಾಧವಪ್ಪೈ | 11 |
| * ವಿಜ್ಞಾನ ಮತ್ತು ಆಧ್ಯಾತ್ಮ | ಎಚ್. ಎಸ್. ನರಸಿಂಹಜೀಯರ್ | 19 |
| * ಪ್ರಗತಿ (ಒಂದು ಚಿಂತನೆ) | ಎಂ. ಗೀತಾ | 22 |
| * ದೀಪಾವಳಿ | ಜೆ. ಬಿ. ಲಿಂಗರಾಜು | 29 |
| * ಇಷ್ಟಲಿಂಗ ವೈಜ್ಞಾನಿಕವೇ? | ಎಚ್. ಪಿ. ತಿಮ್ಮಪ್ಪ | 30 |
| * ಬಸವತತ್ತ್ವ ರತ್ನಾಕರ - 8 | ಮೋಟಗಿ ಮಲ್ಲಿಕಾರ್ಜುನ | 37 |
| * ವಿದ್ಯಾರ್ಥಿ ಜೀವನದ ಬೆಳಕು ಸರಣಿ - ೧೨ | ಬಿ. ಎಸ್. ಕೃಷ್ಣಮೂರ್ತಿ | 43 |
| * ಕ್ಷೇತ್ರವಾರ್ತೆ | ಹೆಚ್. ಬಿ. ಗಂಗಾಧರಯ್ಯ. | 45 |

# ಶ್ರೀವಾಣಿ

**ಪೂಜೆ**

ಪೂಜೆ ಮಾಡುವುದು ಕೃತಜ್ಞತಾ ಸಮರ್ಪಣೆಗಾಗಿ. ಚಿತ್ತ ಶುದ್ಧಿಗಾಗಿ. ಆತ್ಮಲಿಂಗವಾಗುವುದಕ್ಕಾಗಿ. ಮನುಕುಲದ ಇತಿಹಾಸವನ್ನು ಅವಲೋಕಿಸಿದಾಗ ಪೂಜೆಯ ವಿಧಿವಿಧಾನಗಳು, ವೈವಿಧ್ಯತೆ, ವೈಶಿಷ್ಟತೆ ಕಂಡು ಬರುತ್ತದೆ. ಒಂದೊಂದು ಸಮಾಜದಲ್ಲಿ ಒಂದೊಂದು ಕ್ರಮ ಅಳವಟ್ಟಿರುವುದು ಗೊತ್ತಾಗುತ್ತದೆ. ಪೂಜೆಯಲ್ಲಿ ಮೂರು ವಿಧಾನಗಳು ಕಾಣಬರುತ್ತವೆ. 1) **ಅರ್ಚನ:** ಎಂದರೆ ತನುವಿಂದಮಾಡುವುದು ಇಂಗ್ಲೀಷಿನಲ್ಲಿ Worshipping ಎನ್ನುತ್ತಾರೆ. 2. **ಪ್ರಾರ್ಥನೆ:** ಮಾತಿನಿಂದ ಮಾಡುವುದು. ಎಂದರೆ Praying. 3. **ಧ್ಯಾನ-** ಮನಸ್ಸಿನಿಂದ ಮಾಡುವುದು. ಎಂದರೆ Meditating. ಪೂಜಿಸುವಲ್ಲಿ ಆರು ವಿಶೇಷಗಳನ್ನು ಗುರುತಿಸುವುದುಂಟು. 1) **ದೇವತಾಪೂಜೆ :** ರಾಮ, ಕೃಷ್ಣ, ಶಿವ, ರುದ್ರ, ಇತ್ಯಾದಿ 2) **ಭೂತ ಪೂಜೆ :** ನೀರು, ನೆಲ, ವೃಕ್ಷ, ಇತ್ಯಾದಿ 3) **ಪ್ರಾಣಿಪೂಜೆ :** ಎತ್ತು,ಹಸು, ಆನೆ, ಇತ್ಯಾದಿ 4) **ಪಿತೃಪೂಜೆ;** ಹಿರಿಯರ ಪೂಜೆ 5) **ವಿಭೂತಿಪೂಜೆ:** ಬುದ್ಧ, ಬಸವಣ್ಣ, ಇತ್ಯಾದಿ 6) **ದೇವಪೂಜೆ :** ನಿರಾಕಾರವಾದ ಲಿಂಗಪೂಜೆ ಈ ಆರು ವಿಶೇಷಗಳಲ್ಲಿ ನಿರಾಕಾರ ವಾದ ಲಿಂಗ ಪೂಜೆಯೇ ಸರ್ವಶ್ರೇಷ್ಠವಾದುದು. ಆದರಲ್ಲಿಯೂ ಶರಣರು ಆಚರಿಸಿ ತೋರಿದ ಇಷ್ಟಲಿಂಗ ಪೂಜೆ ಸರ್ವೋತ್ಕೃಷ್ಟವಾದ ಶ್ರೀಗುರು ಶಿಷ್ಯನ ಅಂತರಂಗದ ಚಿತ್ಕಳೆಯನ್ನೇ ಇಷ್ಟಲಿಂಗದ ರೂಪದಲ್ಲಿ ಕುರುಹುಮಾಡಿ ಕರಸ್ಥಲಕ್ಕೆ ತಂದುಕೊಟ್ಟಿದನ್ನು ಪೂಜಿಸುವುದು ಉತ್ತಮವಾದುದು. ಇಷ್ಟಲಿಂಗದಪೂಜೆ ಅಹಂಗ್ರಹೋಪಾಸನೆಯೇ ಆಗಿದೆ. 'ತನ್ನ ಬಿಟ್ಟುದೇವರಿಲ್ಲ' ತಾನೇದೇವರು ಎಂಬ ಭಾವದಿಂದ ಸಾಧಕ ಮುಂದು ವರಿಯಲು ಶ್ರೀಗುರು ತೋರಿದ ಮಾರ್ಗ **"ಅಷ್ಟಾಂಗ ಯೋಗ ಬಲುಕಷ್ಟವೆಂದೆಲೊ ಮಗನೆ। ಇಷ್ಟಲಿಂಗವನು ಕರಕಿತ್ತು ಸಲಹಿದ। ಶ್ರೇಷ್ಠಸದ್ಗುರುವೆ ಕೃಪೆ ಯಾಗು"** ಎಂದಿದ್ದಾರೆ ಮೈಲಾರದ ಬಸವಲಿಂಗ ಶರಣರು. ಇಷ್ಟಲಿಂಗ ಆತ್ಮದ ಪ್ರತಿರೂಪ. ಯಾವುದು ಎಲ್ಲವನ್ನು ತುಂಬಿ ಕೊಂಡಿದೆಯೋ, ಯಾವುದು ನಿರಾಕಾರವೋ, ಯಾವುದರಿಂದ ಇಂದ್ರಿಯಗಳ ಸಂವೇದನೆಯುಂಟೋ, ಯಾವುದು ಇಂದ್ರಿಯಗಳಿಗೆ ಗೋಚರವಾಗುವುದಿಲ್ಲವೋ ಅದು ಆತ್ಮ. ಆತ್ಮದ ಪೂಜೆಯೇ ಇಷ್ಟಲಿಂಗದ ಪೂಜೆ. ಭಗವಾನ್ ಬಸವಣ್ಣನವರು ಹೇಳುವಂತೆ ಇಷ್ಟಲಿಂಗ 'ಜಗದಗಲ' ಮುಗಿಲಗಲ ಮಿಗೆಯಗಲ ನಿಮ್ಮಗಲ, ಪಾತಾಳದಿಂದತ್ತತ್ತ ನಿಮ್ಮ ಶ್ರೀ ಚರಣ ಬ್ರಹ್ಮಾಂಡದಿಂದತ್ತತ್ತ ನಿಮ್ಮ ಶ್ರೀಮುಕುಟ ಅಗಮ್ಯ ಅಗೋಚರ, ಅಪ್ರತಿಮ ಲಿಂಗವೇ ನೀವೆನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಲ್ಲಾ ಎಂಬಂತಿದೆ "ಕರಿಯುಕನ್ನಡಿಯೊಳಡಗಿದಂತೆ". ಇಷ್ಟಲಿಂಗ ದಲ್ಲಿ ವಿಶ್ವವೆಲ್ಲಾ ಅಡಗಿದೆ. ಆತ್ಮ ತತ್ವವನ್ನರಿತಾಗ ನಾವು ಮಾಡುವ ಪೂಜೆ ಬೇರೆ ಯಾದುದಲ್ಲ. ಅದು ತನ್ನ ಪೂಜೆಯೇ ಆಗಿದೆ ಎಂಬುದರ್ಥವಾಗುತ್ತದೆ.

(30-8-87 ರಂದು ಪ್ರಾರ್ಥನಾ ಸಭೆಯಲ್ಲಿ ಮಾಡಿದ ಆಶೀರ್ವಚನ)

## ಸಿದ್ಧಗಂಗಾ ಮಾಸ ಪತ್ರಿಕೆ

ಶ್ರೀ ಸಿದ್ಧಗಂಗಾ ಮಠ-572104

ತುಮಕೂರು ಜಿಲ್ಲೆ

ಪ್ರಧಾನ ಸಂಪಾದಕರು

**ಪ್ರಾ॥ ಚನ್ನಪ್ಪ ಎರೇಸೀಮೆ**

* * *

ಸಂಪಾದಕರು

**ಹೆಚ್. ವಿ. ವೀರಭದ್ರಯ್ಯ**

* * *

ಸಹ ಸಂಪಾದಕರು

**ಬಿ. ವೀರಭದ್ರಯ್ಯ**

**ಪಿ. ಎನ್. ಚಂದ್ರಶೇಖರಯ್ಯ**

* * *

ಜಾಹೀರಾತು ವಿಭಾಗ

**ಎಂ. ರೇಣುಕಾರಾಧ್ಯ**

* * *

ವಿತರಣೆ ವಿಭಾಗ

**ಆರ್. ಎಸ್. ಮಲ್ಲೇಶಪ್ಪ**

* * *

ಪ್ರಕಾಶಕರು

**ಹೆಚ್. ಬಿ. ಗಂಗಾಧರಯ್ಯ**

ಹಳೆಯ ವಿದ್ಯಾರ್ಥಿ ಸಂಘದ ಪರವಾಗಿ

* * *

ಮುದ್ರಕರು

**ಶ್ರೀ ಸಿದ್ಧಲಿಂಗೇಶ್ವರಸ್ವಾಮಿ ಮುದ್ರಣಾಲಯ**

* * *

ಪ್ರಕಟಣೆಯ ಸ್ಥಳ

ಶ್ರೀ ಸಿದ್ಧಗಂಗಾಕ್ಷೇತ್ರ


### ಚಂದಾ ವಿವರ

ವಾರ್ಷಿಕ ಚಂದಾ 25-00ರೂ

ಆಜೀವ ಸದಸ್ಯತ್ವ 300-00 ರೂ

### ಲೇಖಕರಲ್ಲಿ ಮನವಿ

'ಸಿದ್ಧಗಂಗಾ' ಶ್ರೀ ಸಿದ್ದಗಂಗಾ ಮಠದಿಂದ ಪ್ರಕಟವಾಗುತ್ತಿರುವ ಮಾಸ ಪತ್ರಿಕೆ. ಶ್ರೀ ಮಠದ ಹಳೆಯ ವಿದ್ಯಾರ್ಥಿ ಸಂಘದ ಹೆಮ್ಮೆಯ ಸೇವಾ ಪುರವಣಿ. ಮೇಲಾಗಿ ಶ್ರೀ ಮಠದ ಮುಖವಾಣಿ. ಪೂಜ್ಯ ಶ್ರೀ ಶ್ರೀ ಡಾ॥ ಶಿವಕುಮಾರ ಮಹಾಸ್ವಾಮಿಗಳವರ ದಿವ್ಯ ಮಾರ್ಗದರ್ಶನದಲ್ಲಿ ಮುನ್ನಡೆದಿರುವ ಪತ್ರಿಕೆ. ತ್ರಿವಿಧ ದಾಸೋಹ ಸೇವಾ ತತ್ಪರತೆಯಿಂದ ಹೆಜ್ಜೆ ಹಾಕುತ್ತಿದೆ. ಈ ಧ್ಯೇಯ ಸಾಧನೆಗಾಗಿ ನಾಡಿನ ಗಣ್ಯ ಲೇಖಕರಿಂದ ಸಾಹಿತ್ಯ, ಸಂಸ್ಕೃತಿ, ಧರ್ಮ, ವಿಜ್ಞಾನ, ಶಿಕ್ಷಣ. ಇತಿಹಾಸ, ವೈಚಾರಿಕ, ಚಿಂತನ ಮುಂತಾದ ಲೇಖನಗಳನ್ನು ಸ್ವಾಗತಿಸುತ್ತದೆ. ಅಸ್ವೀಕೃತ ಲೇಖನಗಳನ್ನು ಪಡೆಯಲು ಸಾಕಷ್ಟು ಅಂಚೆಸ್ಟಾಂಪುಗಳನ್ನು ಲಗತ್ತಿಸಿರಬೇಕು. ಲೇಖನಗಳಲ್ಲಿ ಸೂಕ್ತ ಬದಲಾವಣೆ ಮಾಡಿಕೊಳ್ಳುವ ಅಧಿಕಾರ ಸಂಪಾದಕರಿಗಿದೆ. ಅನುವಾದ, ರೂಪಾಂತರ ಲೇಖನಗಳಿಗೆ ಮೂಲ ಕೃತಿಕಾರರ ಅನುಮತಿ ಪಡೆದಿರಬೇಕು. ಸ್ವೀಕೃತ ಲೇಖನಗಳಿಗೆ ಸೂಕ್ತ ಸಂಭಾವನೆ ಕೊಡಲಾಗುವುದು.


**"ಸಂಪಾದಕರು"**

'ಸಿದ್ಧಗಂಗಾ' ಕನ್ನಡ ಮಾಸಪತ್ರಿಕೆ

ಶ್ರೀ ಸಿದ್ದಗಂಗಾ ಕ್ಷೇತ್ರ-572104

ತುಮಕೂರು ಜಿಲ್ಲೆ.


ಇವರಿಗೆ ಕಳುಹಿಸಿಕೊಡಬೇಕಾಗಿ ಪ್ರಾರ್ಥನೆ

# ಶ್ರೀ ಸಿದ್ಧಲಿಂಗೇಶ್ವರ ವಚನ



ಮಾರುತನ ಮುಖದ ಮಾನಿನಿ ಆರುಮಂದಿಯ ಹಡೆದಳುನೋಡಾ.
ಅವರು ಮೂರು ಲೋಕವನು ಕೊಲುವ ವೈರಿಗಳು-
ಅವರ ಜಯಿಸುವರನಾರನೂ ಕಾಣೆ !
ಅರಿಗಳಾರ ಕೊಂದಾತ ತ್ರಿಜಗದೊಡೆಯನು ಕಾಣಾ
ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೇ

ಚಂಚಲ ವ್ಯಾಪಾರ ಸ್ವರೂಪಿಣಿಯಾದ ಮಾಯೆ ಆರಿಷಡ್ವರ್ಗಗಳೆಂಬ ಆರುಜನ ಪುತ್ರರನ್ನು ಹೆತ್ತಿದ್ದಾಳೆ. ಆ ಆರು ಮಕ್ಕಳು ಮೂರು ಲೋಕವನ್ನೂ ಪ್ರಾಪಂಚಿಕ ವ್ಯವಹಾರಕ್ಕೊಳಮಾಡಿ ಹುಟ್ಟು ಸಾವುಗಳ ಮೂಲಕ ವಿನಾಶಗೈಯುತ್ತಿರುವ, ಶತ್ರುಗಳಾಗಿದ್ದಾರೆ. ಅವರನ್ನು ಕೇವಲ ಜ್ಞಾನದಿಂದ ನಷ್ಟಮಾಡ ಹೊರಟಿರುವ ದ್ವೈತಾದ್ವೈತ ಹಠಕರ್ಮಿಗಳ್ಯಾರನ್ನೂ ಕಾಣದಾಗಿದೆ. ಅರಿಷಡ್ವರ್ಗಗಳನ್ನು ನಿವೃತ್ತಿ ಮಾಡಿ ಭಕ್ತಿಯಲ್ಲಿ ಕಾಮ, ಅಧರ್ಮದಲ್ಲಿ ಕ್ರೋಧ, ಶಿವಪೂಜೆಯಲ್ಲಿ ಲೋಭ, ಭಕ್ತಜನರಲ್ಲಿ ಮೋಹ, ಕರಣಗಳಲ್ಲಿ ಮತ್ಸರ, ಅವಿದ್ಯಾ ಪರಾಭವದಲ್ಲಿ ಮದವನಳವಡಿಸಿಕೊಂಡು ಜ್ಞಾನಕ್ರಿಯೆವಿಡಿದು ಆಚರಿಸಿ ಲಿಂಗದಲ್ಲಿ ಒಡಬೆರೆದ ಶರಣರು ಮೂರು ಲೋಕದ ಸೃಷ್ಟಿ ಸ್ಥಿತಿ ಸಂಹಾರಕ್ಕೆ ಕರ್ತೃವಾದ ಪರಶಿವ ಸ್ವರೂಪಿಗಳಾದರು.

# ಸಂಪಾದಕೀಯ

**ಆತ್ಮೀಯ ಬಂಧು,**

ಈ ಸಂಚಿಕೆಯೊಂದಿಗೆ 'ಸಿದ್ಧಗಂಗಾ'ದ 27ನೆಯ ಸಂಪುಟ ಮುಗಿಯುತ್ತದೆ. ತ್ರೈಮಾಸಿಕವಾಗಿ ಪ್ರಾರಂಭವಾಗಿ ಮಾಸಿಕವಾಗಿ ನೈದಾಳಿ ನಡೆದು ಬಂದ ಪತ್ರಿಕೆ ನಿಮ್ಮೆಲ್ಲ ಸಹಕಾರದೊಂದಿಗೆ ಮುನ್ನಡೆದಿದೆ. ಈ ಸಂದರ್ಭದಲ್ಲಿ ಲೇಖಕರನ್ನು, ಜಾಹಿರಾತುದಾರರನ್ನು, ಆಜೀವಸದಸ್ಯರನ್ನು, ಚಂದಾದಾರರನ್ನು, ಅಭಿಮಾನಿ ಓದುಗರನ್ನು ಕೃತಜ್ಞತಾಪೂರ್ವಕವಾಗಿ ಸ್ಮರಿಸುವುದು ನಮ್ಮ ಕರ್ತವ್ಯ. ಸಿದ್ಧಗಂಗಾ ಪತ್ರಿಕೆಯು ಯಶಸ್ಸಿಗಾಗಿ ಸೇವೆಸಲ್ಲಿಸಿದ ಹಿಂದಿನ ಸಂಪಾದಕರನ್ನು, ಸಹ ಸಂಪಾದಕರನ್ನು, ಸಂಪಾದಕ ಮಂಡಳಿ ಸದಸ್ಯರನ್ನು ಸಲಹಾ ಮಂಡಳಿ ಬಂಧುಗಳನ್ನು ಹೃತ್ಪೂರ್ವಕವಾಗಿ ಸ್ಮರಿಸುವುದು ನಮ್ಮ ಧರ್ಮ. ಮುದ್ರಣಾಲಯದ ಗೆಳೆಯರನ್ನು ಆತ್ಮೀಯವಾಗಿ ನೆನೆಯದಿರುವಂತಿಲ್ಲ. "ಪತ್ರಿಕೆ ಬಂತೆ"? "ಕಾಲಕ್ಕೆ ಸರಿಯಾಗಿ ಚಂದಾದಾರರಿಗೆ ಹೋಗುತ್ತಿದೆಯೇ"? ಒಂದಿಬ್ಬರು ಪತ್ರ ಬರೆದು ಪತ್ರಿಕೆ ನಮಗೆ ಬರುತ್ತಿಲ್ಲ ಎಂದು ಬರೆದಿದ್ದರಲ್ಲಾ ಎಂಬುದಾಗಿ ವಿಚಾರಿಸುತ್ತ, ಪತ್ರಿಕೆಯ ಮುನ್ನಡೆಗೆ ಸದಾ ಆಶೀರ್ವದಿಸುತ್ತಿರುವ ಪರಮ ಪೂಜ್ಯ ಶ್ರೀ ಶ್ರೀ ಗಳವರ ಮಾರ್ಗದರ್ಶದನ ಬೆಳಕಿನಲ್ಲಿ 'ಸಿದ್ಧಗಂಗಾ' ಸಾಗಿದೆ. ಪತ್ರಿಕೆಯನ್ನು ಇನ್ನೂ ಆಕರ್ಷಕವಾಗಿ ವಿಚಾರಪೂರ್ಣವಾಗಿ, ಮುದ್ರಣ ದೋಷಗಳಿಲ್ಲದಂತೆ ಪ್ರಕಟಪಡಿಸಬೇಕೆಂಬುದು ನಮ್ಮ ಆಕಾಂಕ್ಷೆ. ಪತ್ರಿಕೆಯಲ್ಲಿ ನ್ಯೂನತೆಗಳಿದ್ದಾಗ್ಯೂ ಇದು ನಮ್ಮದೇ ಪತ್ರಿಕೆಎಂಬ ಅಭಿಮಾನದಿಂದ ಪ್ರೋತ್ಸಾಹಿಸುತ್ತಾ ಬಂದಿರುವ ನಿಮಗೆಲ್ಲ ಕೃತಜ್ಞತೆಗಳು. ನಿಮ್ಮ ಅಭಿಮಾನವೇ ಪತ್ರಿಕೆಗೆ ಇರುವ ದೊಡ್ಡ ಸಂಪತ್ತು. "ಕರುಣಾಳು ಬಾಬೆಳಕೆ ಕೈಹಿಡಿದು ನಡೆಸೆನ್ನನು" ಎಂದು ಪ್ರಾರ್ಥಿಸುತ್ತ ನಿಮ್ಮೆಲ್ಲರಿಗೆ ವಂದಿಸುತ್ತೇನೆ.

ಶ್ರೀ ಮಠದ ಹಳೆಯ ವಿದ್ಯಾರ್ಥಿಗಳು, ಶಿಕ್ಷಣ ಸಂಸ್ಥೆಗಳಲ್ಲಿರುವ ಉದ್ಯೋಗಿ ಬಂಧುಗಳು ಮುಂದೆ ಬಂದು ಆಜೀವ ಸದಸ್ಯರಾಗಿ ಪ್ರೋತ್ಸಾಹಿಸಬೇಕೆಂದು ಮತ್ತೊಮ್ಮೆ ವಿನಂತಿಸಿಕೊಳ್ಳುತ್ತೇನೆ. "ಸಿದ್ಧಗಂಗಾ" ಬೆಳೆದರೆ ನೀವು ಬೆಳೆದಂತೆಯಲ್ಲವೆ? ನಮಸ್ಕಾರ.

## ಸಿದ್ಧಗಂಗಾ ಓದುಗ ಬಳಗದವರಲ್ಲಿ ಒಂದು ಬಿನ್ನಹ,

ಅಭಿಮಾನಿಗಳೆ,

ತಾವು ಸಿದ್ಧಗಂಗಾ ಪತ್ರಿಕೆಗೆ ಹಿಂದಿನಿಂದಲೂ ಸದಸ್ಯರಾಗಿ, ಪೋಷಕರಾಗಿ ಅದರ ಅಭಿವೃದ್ಧಿಗೆ ಶ್ರೀರಕ್ಷೆಯಾಗಿದ್ದೀರಿ. ಇದಕ್ಕಾಗಿ ತಮಗೆ ತುಂಬು ಹೃದಯದ ಕೃತಜ್ಞತೆಗಳು.

ಜನವರಿ 1992 ರಿಂದ ಆಜೀವ ಸದಸ್ಯತ್ವವನ್ನು 300/- ರೂಗಳಿಗೆ ನಿಗದಿಪಡಿಸಲಾಗಿದೆ. ಇದಕ್ಕಾಗಿ ಎಲ್ಲರ ಸಹಕಾರ ಕೋರುತ್ತೇವೆ.

ಆಜೀವ ಸದಸ್ಯರು ತಮ್ಮ ಬದಲಾದ ವಿಳಾಸವನ್ನು ಆಗಿಂದಾಗ್ಗೆ ತಿಳಿಸಿ ಕ್ರಮವಾಗಿ "ಸಿದ್ಧಗಂಗಾ" ತಲುಪಲು ಸಹಕರಿಸಬೇಕಾಗಿ ವಿನಂತಿ.

1991 ನೇ ಡಿಸೆಂಬರ್ ತಿಂಗಳಿಗೆ ಚಂದಾ ಅವಧಿ ಮುಗಿದಿರುವ ಸದಸ್ಯರುಗಳು 1992ನೇ ಸಾಲಿಗೆ ಯಥಾರೀತಿ ತಮ್ಮ ಸದಸ್ಯತ್ವವನ್ನು ಚಂದಾಹಣ ಕಳಿಸಿಕೊಟ್ಟು ಮುಂದುವರಿಸಲು ಕೋರುತ್ತೇವೆ.

ನೀವೂ ಸದಸ್ಯತ್ವ ನವೀಕರಿಸಿರಿ ಮತ್ತು ನಿಮ್ಮ ನೆರೆಹೊರೆಯ ಅಭಿಮಾನಿಗಳನ್ನೂ "ಸಿದ್ಧಗಂಗಾ" ಪತ್ರಿಕೆಯ ಸದಸ್ಯರನ್ನಾಗಿ ಮಾಡಲು ಪ್ರೋತ್ಸಾಹ ನೀಡಬೇಕಾಗಿ ನಮ್ಮ ಕಳಕಳಿಯ ಮನವಿ.

ಪ್ರಕಾಶಕರು.

## ಡಾ|| ಜಿ. ಎಸ್. ಶಿವರುದ್ರಪ್ಪನವರಿಗೆ ಅಭಿನಂದನೆ

ಶ್ರೀ ಮಠದ ಹಳೆಯ ವಿದ್ಯಾರ್ಥಿಗಳೂ, ಸುಪ್ರಸಿದ್ಧ ಕವಿಗಳು, ವಿಮರ್ಶಕರೂ, ಪ್ರಾಧ್ಯಾಪಕರೂ ಆದ ಡಾ|| ಜಿ. ಎಸ್. ಶಿವರುದ್ರಪ್ಪನವರು ಅಖಿಲ ಭಾರತ ಕನ್ನಡ ಸಾಹಿತ್ಯ 61 ನೇ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಗೊಂಡುದುದನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತ ಅಭಿನಂದನೆಗಳನ್ನು ಸಲ್ಲಿಸಲು ಸಂತೋಷಿಸುತ್ತದೆ "ಸಿದ್ಧಗಂಗಾ".

ಡಾ|| ಜಿ.ಎಸ್. ಶಿವರುದ್ರಪ್ಪನವರು ಸಾಮಗಾನ, ಚೆಲುವು ಒಲವು, ದೇವಶಿಲ್ಪ ಅನಾವರಣ, ದೀಪದಹೆಜ್ಜೆ, ಗೋಡೆ, ನನ್ನನಿನ್ನನಡುವೆ ಕವನ ಸಂಕಲವನ್ನು ಪ್ರಕಟಿಸಿದ್ದಾರೆ. ಸೌಂದರ್ಯ ಸಮೀಕ್ಷೆ, ವಿಮರ್ಶೆಯ ಪೂರ್ವಪಶ್ಚಿಮ, ಗತಿಬಿಂಬ, ಪರಿಶೀಲನ ಮಾಸ್ಕೋದಲ್ಲಿ 22 ದಿನ, ಗಂಗೆಯ ಶಿಖರಗಳಲ್ಲಿ, ಗದ್ಯಕೃತಿಗಳನ್ನು ರಚಿಸಿದ್ದಾರೆ. ಕರ್ಮಯೋಗಿ ಕಾದಂಬರಿ ಹೊರತಂದಿದ್ದಾರೆ. ಅವರ " ಕಾವ್ಯಾರ್ಥ ಚಿಂತನ " ಕೇಂದ್ರಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಪುರಸ್ಕೃತ ಕೃತಿಯಾದರೆ 'ಸೌಂದರ್ಯ ಸಮೀಕ್ಷೆ' ಪಿಹೆಚ್‌ಡಿ ಮಹಾ ಪ್ರಬಂಧ.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅಧ್ಯಾಪಕರಾಗಿ ಸೇವಾಜೀವನವನ್ನಾರಂಭಿಸಿ ಹೈದರಾಬಾದಿನ ಉಸ್ಮಾನಿಯ ವಿಶ್ವವಿದ್ಯಾನಿಲಯದಲ್ಲಿ ಕನ್ನಡ ವಿಭಾಗದ ಮುಖ್ಯಸ್ಥರಾಗಿ, ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕರಾಗಿ ರಾಜ್ಯಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ ನಿವೃತ್ತರಾಗಿದ್ದಾರೆ.

ಪ್ರಗತಿಶೀಲ, ನವೋದಯ, ನವ್ಯ, ಬಂಡಾಯ, ದಲಿತ, ಕಾವ್ಯ ಮಾರ್ಗಗಳೆಲ್ಲದರಲ್ಲಿ ಸಮನ್ವಯತೆಯನ್ನೆ ಜೀವನ ದರ್ಶನವನ್ನಾಗಿ ಮಾಡಿ ಕೊಂಡ ಡಾ|| ಜಿ.ಎಸ್. ಶಿವರುದ್ರಪ್ಪನವರು ಜೀವನಾರಾಧಕರು, ಪ್ರವಾಸ ಪ್ರಿಯರು, ಪ್ರಕೃತಿ ಪ್ರೇಮಿಗಳು, ವಿದ್ಯಾರ್ಥಿ ವತ್ಸಲರು.

" ಕಾಯಕವೇ ಕೈಲಾಸವೆಂಬುವ ಮಾತು ಕೃತಿಯೊಳು ಮೂಡಿದೆ " ಎಂದು ಶ್ರೀ ಸಿದ್ಧಗಂಗಾಮಠದ ಯಶೋಗೀತೆಯನ್ನು ರಚಿಸಿವ ಹೃದಯವಂತ ಸುಸಂಸ್ಕೃತರು.

1991 ರ ಡಿಸಂಬರ್ ತಿಂಗಳಲ್ಲಿ ದಾವಣಗೆರೆಯಲ್ಲಿ ನಡೆಯಲಿರುವ ಅಖಿಲ ಭಾರತ ಕನ್ನಡ ಸಾಹಿತ್ಯದ 61ನೇ ಸಮ್ಮೇಳನದ ಅಧ್ಯಕ್ಷರಾಗಿರುವುದನ್ನು ತಿಳಿದು ಸಂತೋಷಿಸುತ್ತದೆ. ಅಭಿನಂದನೆಗಳನ್ನು ಸಲ್ಲಿಸುತ್ತದೆ.

# ವಿನಯವೇ ವೈವೆತ್ತು ಮೆರೆದ ಬಸವಣ್ಣನವರು.

## "ಸದುವಿನಯವೇ ಸದಾಶಿವನೊಲುಮೆಯಯ್ಯಾ"

ವಿ॥ ಎಂ. ಮಾಧವಪ್ಪೈ, ಎಂ.ಎ. ಸಾಹಿತ್ಯರತ್ನ,
ನಿವೃತ್ತ ಪ್ರಾಂಶುಪಾಲರು, ವಿನೋಬನಗರ, 1ನೇ ಹಂತ, ಶಿವಮೊಗ್ಗ - 577 201.

"ಶಶಿಧರನಟ್ಟಿದ ಮಣಿಹ ಪೂರೈಸಿತ್ತೆಂದು ನೀವು ಲಿಂಗೈಕ್ಯವಾದರೆ ನಿಮ್ಮೊಡನೆ ಭಕ್ತಿಹೋಯಿತಯ್ಯಾ" ಎಂದು ಅಕ್ಕನಾಗಮ್ಮ ಬಸವಣ್ಣನವರಿಗೂ ಭಕ್ತಿಗೂ ಇದ್ದ ಅವಿನಾಭಾವ ಸಂಬಂಧವನ್ನು ವರ್ಣಿಸಿದ್ದುಂಟು. ಲೋಕದಲ್ಲಿ ಎಲ್ಲರಿಂದಲೂ ಭಕ್ತಿ ಭಾಂಡಾರಿಯೆಂಬ ಗೌರವಕ್ಕೆ, ಹಿರಿಮೆಗೆ ಅವರು ಪಾತ್ರರಾಗಿದ್ದಾರೆ. ಇಂತಹ ಒಂದು ಗೌರವಕ್ಕೆ ಅವರು ಪಾತ್ರರಾಗಲು ಕಾರಣವಾದುದು ಭಕ್ತಿಯ ಪ್ರತಿರೂಪವಾಗಿ ಅವರಲ್ಲಿ ಬೆಳಗಿದ ವಿನಯಭಾವ ಅತ್ಯಂತ ಹಿರಿದಾದ ಸ್ಥಾನದಲ್ಲಿದ್ದರೂ ಅವರು ತಾನು ಒಬ್ಬದಾಸ ಎಂಬ ವಿನಮ್ರಭಾವದಿಂದ ವರ್ತಿಸುತ್ತಿದ್ದುದರಿಂದಲೇ ಅವರನ್ನು ಲೋಕ ಪೂಜ್ಯ ಸ್ಥಾನಕ್ಕೇರಿಸಿತು ಆ ವಿನಮ್ರಭಾವ. ಪ್ರಪಂಚದಲ್ಲಿ ಪ್ರತಿಯೊಬ್ಬನೂ ಆಶಿಸುವ ಪದವಿ, ಅಧಿಕಾರ ಗೌರವ, ಧನ, ಮಾನಮನ್ನಣೆ, ಕೀರ್ತಿ, ಯಶಸ್ಸು, ಪ್ರಖ್ಯಾತಿ, ಆದರಣೀಯತೆ ಯಾರಿಗಿಲ್ಲದಿರುವಂತಹ ರೀತಿಯಲ್ಲಿ ತನಗೆ ಅಧಿಕವಾಗಿ ದೊರಕಬೇಕು, ತಾನು ಸರ್ವಮಾನ್ಯನಾಗಬೇಕು, ನಾನೇ ಸರ್ವಶಕ್ತಿಯಾಗಬೇಕು ಎಂಬಿತ್ಯಾದಿ ಏನೆಲ್ಲ ಇದೆಯೋ ಅದೆಲ್ಲವೂ ಬಸವಣ್ಣನವರಿಗೆ ಬಯಸದೆ ಪ್ರಾಪ್ತವಾಗಿತ್ತೆಂದು ಹೇಳಿದರೆ ತಪ್ಪಾಗಲಾರದು. ಆದರೆ ಇವೆಲ್ಲವನ್ನು ಹೊಂದಿ ಮಾನವಕುಲಕ್ಕೆ ಕಿರೀಟಪ್ರಾಯರಾಗಿ ಬೆಳಗಿದ ಬಸವಣ್ಣನವರು ಬೀಗಿ ಬೆಳೆದ ಗೊನೆಬಾಳೆಯಂತೆ ಬಾಗಿಕೊಂಡಿದ್ದಡೆ ಬೇಡಿದ ಪದವನೀವ ಕೂಡಲಸಂಗಮದೇವ" ಎಂದು ಕೊಂಡು ಒಂದಿಷ್ಟು ಗರ್ವಿಸದೆ ಕುಲಾದಿಮದಂಗಳ ಬಗೆಗೊಳ್ಳ ಎಂದು ಮಹಾದೇವಿಯಕ್ಕ ಹೇಳಿದಂತೆ ಮದಿಸದೆ 'ದಾಸೋಹಂ' ತಾನೊಬ್ಬದಾಸ ಎಂಬ ವಿನೀತ ಭಾವದಿಂದ ಬಾಳಿದರು. ಅವರಲ್ಲಿದ್ದ ಮದವೆಂದರೆ ನಿರಹಂಕಾರಭಾವ "ಮದನಿರಹಂಕಾರಭಾವ" ಎಂದು ಮಡಿವಾಳ ಮಾಚಿದೇವ ಗುರುತಿಸಿದ್ದರೆ ಪನ್ನಿರ್ಛಾಸಿರ ಮಹೇಶ್ವರರ ನಡುವೆ ನತಮಸ್ತಕರಾಗಿ" ಅವರು ಬೆಳಗುತ್ತಿದ್ದರು ಎಂದು ಹರಿಹರನು ವರ್ಣಿಸಿ ಬಸವಣ್ಣನವರ ವಿನಮ್ರ ಭಾವವನ್ನು ಸಂಕೇತಿಸಿದ್ದಾನೆ. ಬಸವಣ್ಣನವರು ಸ್ವತಃ ಉಸುರಿದ ವಚನವನ್ನೇ ಆಲಿಸಿ "ಕುಲವಳಿದು, ಛಲವಳಿದು, ಮದವಳಿದು, ಮತ್ಸರವಳಿದು, ಆತ್ಮತೇಜವಳಿದು, ಸರ್ವ ಅಹಂಕಾರವಳಿದು, ಶ್ರೀಮನ್ನಿಜವುಳಿದು, ಲಿಂಗಜಂಗಮವೆಂಬ ಶಬ್ದವಿಡಿದು ಸಾಧ್ಯವಾಯಿತ್ತು ನೋಡಾ. ತಾನಳಿದು ತಾನುಳಿದು ಸಹಜ ಪದವಿಯಲ್ಲಿ ಕೂಡಲ ಸಂಗನಲ್ಲಿ ತಾನು ತಾನಾದ." ಅಷ್ಟಮದಗಳಳಿದು ಅಹಂಕಾರ ನಾರವಾಗಿ ದಾಸೋಹಂ ಎಂಬುದು ಬೆಳಗಬೇಕು. ದಾಸೋಹಂ ಎಂದು ಬಾಯಲ್ಲಿ ಉಸುರಿದರೆ ಸಾಲದು,

ಹಾಗೇ ವರ್ತಿಸಬೇಕು. ಅದ್ಹೊಂದು ವ್ರತವಾಗಿರಿಸಿಕೊಂಡು ಆಚರಿಸಬೇಕು. ಗರ್ವ ಭಾವವಿದ್ದರೆ ಅದನ್ನು ಆಚರಿಸಲಾಗುವುದಿಲ್ಲ. ಅಲ್ಲಿ ವಿನಯ ಗುಣವಿದ್ದರೆ ಮಾತ್ರ ಸಾಧ್ಯ. ವಿನಯ ಗುಣವರ್ಧಿಸಿದಷ್ಟೂ ದಾಸೋಹಂ ಎಂಬ ಭಾವ ಬಲವತ್ತರವಾಗಿ ಬದುಕು ಸಂಪನ್ನವಾಗುತ್ತದೆ. ಆದ್ದರಿಂದಲೇ ಅವರು ವಿನಯಭಾವವನ್ನು ಬೆಳಸಿ ಕೊಂಡು "ದಾಸೋಹವೆಂಬ ಸೋಹೆಗೋಡು ಹೋಗಿ ಗುರುವಕಂಡೆ, ಲಿಂಗವಕಂಡೆ, ಜಂಗಮುವಕಂಡೆ, ಪ್ರಸಾದವಗಂಡೆ, ಇಂತೀ ಚತುರ್ವಿಧ ಸಂಪನ್ನನಾದೆ ಕಾಣಾ ಕೂಡಲ ಸಂಗಮದೇವಾ" ಎಂದು ಉಸುರಲು ಸಾಧ್ಯವಾಯಿತು. 'ಇತ್ತಬಾರಯ್ಯ, ಎಂದು ಭಕ್ತರೆಲ್ಲರೂ ಕೂರ್ತುಹತ್ತೆಕರೆಯುತಿರೆ ಮತ್ತೆ ಕೆಲಕೆ ಹೋಗಿ ಶರಣೆಂದು ಹಸ್ತಬಾಯನೆ ಮುಚ್ಚಿ, ಕಿರಿದಾಗಿ, ಭೃತ್ಯಾಚಾರವನುಡಿದು, ವಿನಯವದ್ಧ್ಯಾನವುಳ್ಳಡೆ ಎತ್ತಿಕೊಂಬನಯ್ಯಾ ಕೂಡಲಸಂಗಮದೇವ ಪ್ರಮಥರ ಮುಂದೆ'' ಎಂಬೀ ವಚನಕ್ಕೆ ಅವರ ಬದುಕು ಎತ್ತಿ ಹಿಡಿದ ಕನ್ನಡಿಯಾಗಿದೆ. ಇಲ್ಲಿ ಪ್ರಯೋಗವಾಗಿರುವ ದಾಸೋಹ ವೆಂಬ ಸೋಹೆ ಹಾಗೂ ವಿನಯಧ್ಯಾನವೆಂಬೀ ಪ್ರಯೋಗಗಳನ್ನು ಗಮನಿಸಿದರೆ ಅರ್ಥವಾಗುತ್ತದೆ ಬಸವಣ್ಣನವರ ವರ್ತನೆಯಲ್ಲಿ ಅಡಕವಾಗಿರುವ ವಿನಮ್ರಭಾವ.

ರಾಜ್ಯದ ಸರ್ವಶ್ರೇಷ್ಠ ಅಧಿಕಾರ, ಸ್ಥಾನಮಾನ ಜೊತೆಗೆ ಸುತ್ತಮುತ್ತಲಿನ ವರಿಂದ ಹೊಗಳಿಕೆ ಇವುಗಳೆಲ್ಲ ಒಂದೆಡೆ ಬೆರೆತರೆ ಕಳ್ಳುಕುಡಿದ ಮಂಗನಂತೆ ನರ್ತಿ-ಸುವ ಮನೋವಿಕಾರಕ್ಕೆ ಕಾರಣವಾಗವ ಮದ ನೆತ್ತಿಗೇರುವುದು ಸ್ವಾಭಾವಿಕ ಇದನ್ನು ಲೋಕದಲ್ಲಿ ನಾವು ಕಾಣಬಹುದು, ಕಾಣುತ್ತಿದ್ದೇವೆ. ಇದನ್ನು ಪೋಷಿ ಸುವುದು ಅಹಂಭಾವ. ಅಹಂಕಾರದ ಪಿತ್ತ ನೆತ್ತಿಗೇರಿದಂತೆ ಮನೋವಿಕಾರಗಳು ಬೆಳೆಯುತ್ತಾ ಹೋಗುವುವು. ಅರಿಷಡ್ವರ್ಗಗಳು ಸುತ್ತಿಮುತ್ತಿಕೊಂಡು ಮಾನವ ನನ್ನು ಅಧೋಗತಿಗೆ ತಳ್ಳುವುವು. ಇದರಿಂದ ಭಕ್ತಿ ಸಾಧನೆಯಾಗದೆ ಮುಕ್ತಿ ಪ್ರಾಪ್ತವಾಗದೆ ನಾಯನರಕಕ್ಕೆ ಬೀಳುವ ದುಃಸ್ಥಿತಿಯುಂಟಾಗುವುದು. ಭಕ್ತನಾದ ವನಿಗೆ ಭಕ್ತನಾಗುವವನಿಗೆ ಹೃದಯ ಶುದ್ಧಿ ಇರಬೇಕಾದುದು ಅತ್ಯವಶ್ಯ.

ಕಾಮವೇಕೋ ಲಿಂಗಪ್ರೇಮಿಯೆನಿಸುವಂಗೆ ?
ಕ್ರೋಧವೇಕೋ ಶರಣವೇದ್ಯವೆನಿಸುವಂಗೆ ?
ಲೋಭವೇಕೋ ಭಕ್ತಿಯ ಲಾಭಬಯಸುವಂಗೆ ?
ಮೋಹವೇಕೋ ಪ್ರಸಾದ ವೇದ್ಯವೆನಿಸುವಂಗೆ ?
ಮದಮತ್ಸರವುಳ್ಳವಂಗೆ ಹೃದಯ ಶುದ್ಧಿವೆಲ್ಲಿಯದೋ ?
ಹದುಳಿಗರಾದಲ್ಲಿಪ್ಪ ನಮ್ಮ ಕೂಡಲ ಸಂಗಮದೇವ"

ಎಂದು ಅರಿತಿದ್ದ ಅವರು ಹದುಳಿಗರಾಗಿ ಬಾಳಿದರು. ಮದವಿದ್ದಲ್ಲಿ ಮತ್ಸರ ಇಣುಕುತ್ತದೆ. ಮತ್ಸರ ಬೆಳೆದಲ್ಲಿ ಗೌರವಿಸುವ ಭಾವ ಅಳಿಯುತ್ತದೆ, ದ್ವೇಷ ಬೆಳೆಯುತ್ತದೆ, ಇದರಿಂದ ಪ್ರೀತಿಸುವ, ಮೆಚ್ಚುವ ಗುಣ ನಾಶವಾಗುತ್ತದೆ.

ಪರಸ್ಪರ ಪ್ರೀತಿಸುವುದನ್ನು ಹೆಚ್ಚಿಸಿ ಕೊಳ್ಳದಿದ್ದರೆ ಶಾಂತಿ ಇಲ್ಲ, ಅಹಂಕಾರ ವರ್ಧಿಸುತ್ತದೆ ಅಷ್ಟೆ. ಆದರೆ ಬೀಗಿದವನು ಬಿರಿದುಹೋಗುತ್ತಾನೆ.

ಅಹಂಕಾರಿ ತಾನು ಪರಿಶುದ್ಧ, ಉಳಿದವರು ಅಶುದ್ಧರು ಎಂಬುದಾಗಿ ಭಾವಿಸಿ ಅನ್ಯರಲ್ಲಿರುವ ಹುಳುಕುಗಳನ್ನು ಹುಡುಕುವುದರಲ್ಲಿ ಸದಾ ನಿರತನಾಗಿ, ಅನ್ಯರನ್ನು ಶುದ್ಧಿಗೊಳಿಸುವವನು ತಾನು ಎಂಬೀ ಭಾವನೆ ಬೆಳೆಸಿಕೊಂಡಿದ್ದು ಅನ್ಯರನ್ನು ವೃಥಾ ತೆಗಳುತ್ತಿರುತ್ತಾನೆ. ಈ ಗುಣ ಸಲ್ಲದು. ಅದರೆ ಸ್ಥಾನಗೌರವವೇರಿದಂತೆ ಆತನಲ್ಲಿ ಆ ದುರ್ಗಣ ಅವನಿಗರಿವಿಲ್ಲದೆನೆ ಮೊಳೆತು ಬೆಳೆಯುತ್ತದೆ. ಅದಕ್ಕೆ ಕಡಿವಾಣ ಹಾಕಲೇಬೇಕು. ಹೀಗಾಗಿ ಬಸವಣ್ಣನವರು 'ಲೋಕದ ಡೊಂಕ ನೀವೇಕೆ ತಿದ್ದುವಿರಿ? ನಿಮ್ಮ - ನಿಮ್ಮ ತನುವ ಸಂತೈಸಿಕೊಳ್ಳಿ. ನಿಮ್ಮ-ನಿಮ್ಮ ಮನವ ಸಂತೈಸಿಕೊಳ್ಳಿ. ನೆರೆಮನೆಯ ದುಃಖಕ್ಕೆ ಅಳುವವರ ಮೆಚ್ಚ ಕೂಡಲಸಂಗಮದೇವ' ಎಂದು ಸಾರಿ, ತಾವೂ ಸ್ವತಃ ತಮ್ಮ ಡೊಂಕುಗಳನ್ನು ತಿದ್ದಿಕೊಂಡು ಬಾಳಿದರು. ಇದಕ್ಕೆ ಅವರಲ್ಲಿ ನೆಲೆಯೂರಿದ್ದ ವಿನಯ ಗುಣವೇ ಕಾರಣ.

ಭಕ್ತಿಯೋ ಸೇವೆಯೋ ಅಥವಾ ಇನ್ನಾವುದೇ ಕೆಲಸಗಳೋ, ಅದನ್ನು ನಾನು ಮಾಡಿದೆ,ಯೆಂಬ ಅಹಂಭಾವ ಬೆಳೆಯುದಂತೆ ನೋಡಿಕೊಳ್ಳಬೇಕು. ಅಹಂಕಾರ ಮನವನಿಂಬುಗೊಂಡಲ್ಲಿ ಲಿಂಗ ತಾನೆಲ್ಲಿ ಬಪ್ಪುದೊ, ಅಹಂಕಾರಕ್ಕೆ ಎಡೆಗೊಡದೆ ಲಿಂಗತನುವಾಗಿರಬೇಕು. ಅಹಂಕಾರ ರಹಿತವಾದಲ್ಲಿ ಸನ್ನಿಹಿತಕಾಣ ಕೂಡಲಸಂಗಮ ದೇವ." ಆದರೆ ನಾನು ಎಂಬುದು ನಮ್ಮನ್ನು ಬಿಡುವುದೇ ಇಲ್ಲ. ನಾನು ಮಾಡಿದೆ, 'ನಾನು ನೀಡಿದೆ' 'ನಾನುಗಳಿಸಿದೆ' ಎಂದು ಪ್ರತಿಯೊಂದರಲ್ಲಿಯೂ ಅದು ಇಳುಕುತ್ತಲೇ ಇರುತ್ತದೆ. ಅದನ್ನು ತ್ಯಜಿಸದ ಹೊರತು ಉದ್ಧಾರವಿಲ್ಲ ಎಂಬುದನ್ನವರು ಅರಿತಿದ್ದರು. "ಕಾಡಿ ಕಾಡಿ ಕೆಡಿಸಿಹುದೆನ್ನ ಕೂಡಲ ಸಂಗಮದೇವಾ ಅಹಮ್ಮೆಂಬ ಅಹಂಕಾರವೆನ್ನ" ಎಂದು ತನಗೆ ಅಹಂಕಾರವಂಟಕೊಳ್ಳದಂತೆ ಸದಾಶಿವನಲ್ಲಿ ಮೊರೆಹೋಗಿ ಎಚ್ಚರದಿಂದಿರುತ್ತಿದ್ದರು. ಏಕೆಂದರೆ "ಆನು ಮಾಡಿದೆನೆಂಬೀ ಕಿಚ್ಚುಸಾಲದೆ? "ಎಂಬುದನ್ನರ್ಥೈಸಿಕೊಂಡು" ಮಾಡಿದೆನೆಂಬುದು ಮನದಲ್ಲಿ ಬಂದರೆ ಏಡಿಸಿ ಕಾಡುವುದು ಶಿವನಡಂಗುರ" ಎಂಬುದನ್ನರಿತು ಆ ಅಹಂ ಹತ್ತಿರ ಸುಳಿಯದಂತೆ ಜಾಗ್ರತರಾಗಿದ್ದುಕೊಂಡು ಬಾಳಿದ್ದರ ಫಲವಾಗಿಯೇ ಅವರಲ್ಲಿ ವಿನಮ್ರತೆ ಮಡುಗಟ್ಟಿ ಮಿನುಗಿತ್ತು. ಭಕ್ತಿ ಘನವಾಯಿತು. ಭಕ್ತಿ ಭಾಂಡಾರಿಯೆಂಬ ಹಿರಿಮೆಗೆ ಪಾತ್ರರಾದರು. ಆದರೆ ಅವರು ಹೇಳಿಕೊಳ್ಳುವುದನ್ನು ಗಮನಿಸಿ - ಎನ್ನಕಾಯವ ಶುದ್ಧಮಾಡಿದಾತ ಮಡಿವಾಳ. ಎನ್ನ ಮನವ ನಿರ್ಮಲ ಮಾಡಿದಾತ ಮಡಿವಾಳ ಎನ್ನಂತರಂಗವ ಬೆಳಗಿದಾತ ಮಡಿವಾಳ, ಎನ್ನಬಹಿರಂಗವ ಬಿಡಿಸಿದಾತ ಮಡಿವಾಳ, ಕೂಡಲ ಸಂಗಮದೇವಾ, ಎನ್ನ ನಿಮಗೆ ಯೋಗ್ಯವಮಾಡಿದಾತ ಮಡಿವಾಳ ಬಸವಣ್ಣವವರ ವಿನಯ ಗುಣಕ್ಕೆ ಇದು ಮಣಿ ಮಕುಟ.

"ಇವನಾರವ, ಇವನಾರವ, ಇವನಾರವ?
ನೆಂದೆನಿಸದಿರಯ್ಯಾ ಇವನಮ್ಮವ, ಇವನಮ್ಮವ,
ಇವನಮ್ಮನೆಂದೆನಿಸಯ್ಯಾ, ಕೂಡಲಸಂಗಮದೇವಾ,
ನಿಮ್ಮ ಮನೆಯ ಮಗನೆನಿಸಯ್ಯಾ"

ಎಂದು ಸಂಗಮೇಶ್ವರನಲ್ಲಿ ಬೇಡಿದವರು ಬಸಣ್ಣನವರು. ಯಾರೇ ಆಗಲ್ಲಿ 'ನಮ್ಮವನು' ಎಂದು ಯಾರಿಗಾದರೂ ಸುಮ್ಮಸುಮ್ಮನೆ ಕರೆಯುತ್ತಾರೆಯೆ? ತನ್ನನ್ನು ಅನ್ಯರು ಹಾಗೆ ಕರೆಯಬೇಕಾದರೆ ಅದಕ್ಕೆ ತಕ್ಕ ನಡೆ ಇಲ್ಲದಿದ್ದರೆ? ಎನ್ನಲಿ ನಡೆಯಿಲ್ಲವಾಗಿ ನಾನು ಭಕ್ತಿನೆಂತಪ್ಪೆನಯ್ಯಾ "ಎಂಬುದನ್ನವರು ಮನಗಂಡಿದ್ದರು. ಅಂದರೆ ಭಕ್ತಿಗೆ ಮುಖ್ಯವಾಗಿ ನಡೆಬೇಕು. ನಡೆ ಅಂತರಂಗ ಬಹಿರಂಗಳೆರಡರಲ್ಲೂ ಪರಿಶುದ್ಧವಾಗಿರಬೇಕು. ಊಸರವಳ್ಳಿಯಂತೆ ಎನ್ನಿರವು ಬಾವುಲ ಬಾಳುವೆಯ ತೆರನಂತೆ "ಎಂಬಂತಾದರೆ ಅದು ಕೆಣ್ಣಡೆ. (ಕೆಟ್ಟ-ನಡೆ). ಇದು ಮದೋನ್ಮತ್ತತೆಯ ಸಂಕೇತ ನಡೆ ಇಲ್ಲದಿದ್ದರೆ ಶಿವ ಭಕ್ತಿಯಿಲ್ಲ ಎಡೆಯಿಲ್ಲ. ಈ ನಡೆಯಾವುದು ? ಕಳಬೇಡ, ಕೊಲ ಬೇಡ, ಹುಸಿಯನುಡಿಯಲು ಬೇಡ, ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ ತನ್ನ ಬಣ್ಣಿಸಬೇಡ, ಇದಿರಹಳಿಯಲುಬೇಡ,. ಇದೇ ಅಂತರಂಗಶುದ್ಧಿ, ಇದೇ ಬಹಿರಂಗ ಶುದ್ಧಿ. ಇದೇ ನಮ್ಮ ಕೂಡಲ ಸಂಗಮದೇರವನೊಲಿಸುವಪರಿ "ಈ ನಡೆಗಳು ಬೆಳಗಿದರೆ ಅದೇ ಸದ್ಗುಣ, ಸಚ್ಚಾರಿತ್ರ್ಯ, ಸಚ್ಚಾರಿತ್ರ್ಯದ ಬೆಳವಣಿಗೆಗೆ ಸದಾಚಾರಬೇಕು ಈ ಸದಾಚಾರದ ಪ್ರತ್ಯಕ್ಷ ಮೂರ್ತಿ ಬಸವಣನವರು. ಇದಕ್ಕೆ "ನಿಮ್ಮೊಡನೆ ಸದಾಚಾರ ಹೋಯಿತಯ್ಯಾ ....ಸಂಗನ ಬಸವಣ್ಣ" ಎಂಬೀ ಅಕ್ಕನಾಗಮ್ಮನ ವಚನವೇ ಸಾಕ್ಷಿ. ಸಾದಚಾರಕ್ಕೆ ತಳಹದಿ ವಿನಮ್ರ ನಡೆ, ದಾಸೋಹಂ ಎಂಬ ಭಾವನೆ. ಆದರೆ ಈ ಭಾವನೆ 'ಅತಿ ವಿನಯಂ ಧೂರ್ತ ಲಕ್ಷಣಂ' ಎಂಬಂತಾಗಬಾರದು. "ಒಳಗೆ ಕುಟಿಲ ಹೊರಗೆ ವಿನಯವಾಗಿ ಭಕ್ತರೆನಿಸಿಕೊಂಬವರ ನೊಲ್ಲನೊಲ್ಲನಯ್ಯಾ ಲಿಂಗವು" ಅದರಲ್ಲಿ ನೈಜ ಭಕ್ತಿ ತುಳುಕುತ್ತಿರಬೇಕು. ಸಚ್ಚಾರಿತ್ರ್ಯ ಅಡಕವಾಗಿರಬೇಕು. ಸದಾಚಾರ ಮೆರೆದಿರಬೇಕು. ಇಲ್ಲದಿದ್ದರೆ "ಏತ ತಲೆವಾಗಿದರೇನು? ಗುರುಭಕ್ತನಾಗಬಲ್ಲುದೆ? ಇಕ್ಕುಳ ಕೈ ಮುಗಿದರೇನು? ಭೃತ್ಯಾಚಾರಿಯಾಗಬಲ್ಲುದೇ? ಎಂಬಂತಾಗುವುದು. ವಿನಯಕ್ಕೆ ಕೇಡಾದ ಮದವಳಿದಾಗಲೇ ನಡೆ ಪರಿಶುದ್ಧವಾಗುವುದು. ಸತ್ಯದ ದರ್ಶವಾಗುವುದು "ಮದವಳಿದು ನಿಜವುಳಿದ ಬಳಿಕ ಅದು ಸತ್ಯ ಕಾಣ ಕೂಡಲ ಸಂಗಮದೇವಾ"

ನಿಮ್ಮ ಭೃತ್ಯನ ಮಾಡಿಯೆನ್ನನಿರಿಸಿ ಕೊಂಡಿರ್ದಿರಿ ನಿಮ್ಮ ಕಾರುಣ್ಯವ ಮಾಡಿಸಿ ಕೊಂಡಿರ್ದಿರಿ, ನಿಮ್ಮ ಲೀಲಾವಿನೋದದಿಂದಿರಿಸಿ ಕೊಂಡಿರ್ದಿರಿ, ನಿಮ್ಮ ಮನ ಪ್ರೇರಕನಾಗಲೆಂದಿರಿಸಿ ಕೊಂಡಿರ್ದಿರಿ, ನಿಮ್ಮೊಕ್ಕುದ ಮಿಕ್ಕುದಕ್ಕೆ ಯೋಗ್ಯನಾಗಲೆಂದಿರಿಸಿ ಕೊಂಡಿರ್ದಿರಿ,-ಹೀಗೆ ನೀವು ಬರಿಸಿದ ಭವಾಂತರದಲ್ಲಿ ಬರುತಿರ್ದೆನಯ್ಯಾ ಎಂದು

ಶಿವನು ತನ್ನನ್ನು ಎಂತಿಟ್ಟನೋ ಅಂತೆಯೇ ಬದುಕು ನಡೆಸಿದರು. ಶಿವನಾಜ್ಞೆ ಶಿರೋಧಾರ್ಯ, ಅವನಿಟ್ಟಂತೆ ಇರಬೇಕು. ಆ ಬದುಕು ಯಾವುದೇ ಇರಲಿ,ಮುಖ್ಯವಾಗಿ ಅವರಿಗೆ ಬೇಕಾದುದು ಶಿವಪ್ರಸಾದ. ಅದು ದೊರಕುವುದು ಮುಖ್ಯವೇ ಹೊರತು ಪ್ರಾಪ್ತವಾಗುವ ರೂಪ ಮುಖ್ಯವಲ್ಲ ಎಂಬುದು ಅವರ ಧ್ಯೇಯ. ಶ್ರೇಷ್ಠವೋ ಕನಿಷ್ಠವೋ, ಉತ್ತಮವೋ ಅಧಮವೋ ಉಚ್ಚವೋ ನೀಚವೋ ನರಜನ್ಮವೋ ಪಶುಪಕ್ಷಿಗಳದ್ದೋ, ಯಾವ ರೀತಿಯ ಬದುಕಾದರೂ ಸರಿಯೇ ಅದಕ್ಕಾಗಿ ಗೊಣಗದೆ, ಅವನು ನೀಡಿದ ಬದುಕನ್ನು "ನೀವು ಬರಿಸಿದ ಭವಾಂತರದಲ್ಲಿ ನಾನು ಬರುತ್ತಿರ್ದೆನಯ್ಯಾ" ಎಂದು ಹೇಳಿ ವಿನಮ್ರತೆಯಿಂದ ಸ್ವೀಕರಿಸಿ ಸಂತೃಪ್ತಿಯಿಂದ ಬಾಳಿದವರು ಬಸವಣ್ಣನವರು.

ಬಸವಣ್ಣನವರು ಅನುಪಮ ಭಕ್ತರು. ಅವರ ಭಕ್ತಿಯ ಶ್ರೇಷ್ಠತೆಯನ್ನು ಕೊಂಡಾಡದೆ ಇದ್ದವರಾರೂ ಇಲ್ಲ. ಆದರೆ ಇದರಿಂದ ಬಸವಣ್ಣನವರು ತನ್ನ ಸಮಾನ ಭಕ್ತರಾರೂ ಇಲ್ಲವೆಂದು ಗರ್ವಿಸದೆ "ಎನ್ನವರು ಹೊಗಳಿ ಹೊಗಳಿ ಹೊನ್ನ ಶೂಲದಲಿಕ್ಕಿದರೆನ್ನ" ಎಂದು ನೊಂದು "ಎನಗಿಂತ ಕಿರಿಯರಿಲ್ಲ,ಶಿವಭಕ್ತರಿಗಿಂತ ಹಿರಿಯರಿಲ್ಲ ಎಂದುಕೊಂಡು "ಎನ್ನಲ್ಲಿ ಭಕ್ತಿ ಸಾಧನೆಯ ಷಡ್ಭಾಗವನಿತಿಲ್ಲ, ಎನ್ನ ಭಕ್ತರೆಂಬರು ಎನ್ನ ಸಮಯಾಚಾರಿಯೆಂಬರು, ನಾನೇನು ಪಾಪವ ಮಾಡಿದೆನೊ ಬೆಳೆಯದ ಮುನ್ನವೇ ಕೊಯ್ವರೇ ? ಹೇಳಾ ಅಯ್ಯಾ "ಎಂದು ತನ್ನ ವಿನಮ್ರ ಭಾವವನ್ನು ತೋರ್ಪಡಿಸಿದ್ದನ್ನು ಮರೆಯಲಾಗದು. 'ಅಯ್ಯಾ, ನಿಮ್ಮ ವಂಶಾವಳಿಯಲ್ಲಿ ಒಬ್ಬ ತೊತ್ತಿನ ಮಗ ಹುಟ್ಟಿದಾತನ ತೊತ್ತಿನಮಗ ನಾನಯ್ಯಾ; ಬಳಿದೊತ್ತು ಬಳಗದೊತ್ತು, ವಂಶದೊತ್ತು ನಾನಯ್ಯಾ ಕೂಡಲ ಸಂಗಮದೇವಾ ನಿಮ್ಮ ಒಡೆತನಕ್ಕೆ ಕೇಡಿಲ್ಲವಾಗಿ ಎನ್ನ ತೊತ್ತು ತನಕ್ಕೆ ಕೇಡಿಲ್ಲಾ ಹಾಗೆಯೇ "ಈಶ ನಿಮ್ಮ ದಾಸರದಾಸಿಯ ದಾಸ ನಾನಯ್ಯಾ, ನಿಮ್ಮ ವೇಷಧಾರಿಯ ಮನೆಯ ಪಂಗುಳ ನಾನಯ್ಯಾ, ಸಂಗಮದೇವಾ ನಿಮ್ಮ ಲಾಂಛನವಧರಿಸಿಪ್ಪ ಉದರ ಪೋಷಕ ನಾನಯ್ಯಾ" ಎಂಬೀ ವಚನ ವಿನಯ ಗುಣದ ಮುಕುಟ ಮಣಿಗಳು.

ಶೀಲವೇ ಶೈಲಿ ಎಂಬೊಂದು ನುಡಿಯಿದೆ. ಬಸವಣ್ಣನವರ ವಚನಗಳಲ್ಲಿ ಅವರ ಶೀಲವೇ ಮೈವೆತ್ತು ನಿಂತಿದೆ. ಶೀಲದ ಪ್ರಧಾನ ಅಂಶವಾದ ವಿನಯ ಭಾವವು ಅವರ ಪ್ರತಿಯೊಂದು ನುಡಿಗಳಲ್ಲೂ, ವಚನಗಳಲ್ಲೂ ಎದ್ದು ಕಾಣುವುದನ್ನು ನಾವು ಗಮನಿಸಬಹುದು.

''ಬರಬರ ಭಕ್ತಿ ಅರೆಯಾಯಿತ್ತು ಕಾಣಿರಣ್ಣಾ"
"ನಿಮ್ಮ ಪ್ರಸಾದಕ್ಕಲ್ಲದೆ ಬಾಯ್ದೆರೆಯೆನಯ್ಯಾ"
"ನಿಮ್ಮ ಶರಣನು ಆಚರಿಸುವಾಚರಣೆಯ ಕಂಡು ಕಣ್ದೆರೆದೆನಯ್ಯಾ"

"ಅಯ್ಯಾ, ಅಯ್ಯಾ, ಎನ್ನ ಹುಯ್ಯಲ ಕೇಳಯ್ಯಾ"
"ದಿನ ಮಾಡನಯ್ಯಾ ಲಿಂಗವು, ಏನಕೊಡನಯ್ಯಾ ತಾನು"
"ಅಯ್ಯಾ, ನಿಮ್ಮ ಮನ್ನಣೆಯೇ ಮಸೆದಲಗಾಗಿ ತಾಗಿತ್ತಲ್ಲಾ
"ಸೋಹಂ ಎಂದೆನಿಸದೆ, ದಾಸೋಹಂ ಎಂದೆನಿಸಯ್ಯಾ
"ಅಯ್ಯಾ, ನಿಮ್ಮ ಅನುಭಾವದಿಂದ ಎನ್ನತನು ಹಾಳಾಯಿತ್ತಯ್ಯಾ
'ಕುಂಕುಮ ಕಸ್ತೂರಿಯ ಪೂಸಿಕೊಂಡು ಹೋದಿರೇ ಅಣ್ಣ"

ಇವುಗಳಿಂದ ಅವರು ಯಾವುದೇ ವಿಷಯವನ್ನು ಹೇಳುವಾಗ "ಅಯ್ಯಾ ಎಂದಡೆ ಸ್ವರ್ಗ ಎಲವೋ ಎಂದಡೆ ನರಕ" ಎಂದರಿತ ಅವರೊಳಗಿನ ಅವಿನಯ ಭಾವ ಅವರ ನುಡಿಗಳಲ್ಲಿ "ಅಯ್ಯಾ, ಅಯ್ಯಾ, ಎಂದೋ ಅಣ್ಣ, ಅಣ್ಣ ಎಂದೋ ಪ್ರಯೋಗವಾಗಿರುವ ಶಬ್ದಗಳ ಮೂಲಕ ಹೊರ ಹೊಮ್ಮಿರುವುದನ್ನು ನಾವು ಕಾಣಬಹುದು. ಯಾವ ಸಂದರ್ಭದಲ್ಲೂ ಯಾರಿಗೂ ಯಾವ ವಿಷಯದಲ್ಲೂ "ಕಡೆ ನುಡಿಯದೆ' ಕೆಡೆನುಡಿಯದೆ, ಅನ್ಯರ ಪ್ರತಿಪಾದಿಸದಿದ್ದರೆ ಏನ ಮಾಡನಯ್ಯಾ, ಏನ ಕೊಡನಯ್ಯಾ ತಾನು ಎಂಬುದು ಅವರ ದೃಢನಿಲುವು.

ಮಾನವನಾದವನು ವಿಶಾಲ ಮನೋಭಾವ, ವಿಧೇಯತೆಯಿಂದೊಡಗೂಡಿಕೊಂಡಿರಬೇಕು,. ಆದಕ್ಕಾಗಿ ಅವನು ತನ್ನನ್ನು ಚಾಚಿಸಿಕೊಳ್ಳಬೇಕು. ಬಾಗಿಸಿಕೊಳ್ಳಬೇಕು ಹೊರತು ಬಿಗಿಗೊಳಿಸಲಾಗದು. ಅಂದರೆ ಅವನು ಬಿದಿರಬೇಕು. ಅವನು ಯಾವ ಯಾವ ರೀತಿ ಬಿದಿರಿಕೊಳ್ಳುತ್ತಾನೋ ಅಯಾ ರೀತಿಯಲ್ಲಿ ಉಪಕಾರಿಯಾಗಿ ಶಿವನೊಲುಮೆಗೆ ಪಾತ್ರನಾಗುತ್ತಾನೆ. ಹಾಗೆ ಬಿದಿರದೆ "ಆನೆಯನೇರಿಕೊಂಡು ಹೋದರೆ ಕುದುರೆಯನೇರಿಕೊಂಡು ಹೋದರೆ, ಕುಂಕುಮ ಕಸ್ತೂರಿಯ ಪೂಸಿಕೊಂಡು ಹೋದರೆ ಏನಾದೀತಣ್ಣ! ಸತ್ಯದ ನಿಲುವನರಿಯದೆ ಸದ್ಗುಣವೆಂಬ ಫಲವಬಿತ್ತಿ ಬೆಳೆಯದೆ ಹೋಗ ಬೇಕಾಗುತ್ತದೆ. ಅಹಂಕಾರವೆಂಬ ಮದಗಜವೇರಿ ವಿಧಿಗೆ ಗುರಿಯಾಗಿ ಹೋಗಿ ನರಕಕ್ಕೆ ಭಾಜನವಾಗಬೇಕಾಗುತ್ತದೆ. ಅದೇ ಬಿದಿರಿದರೆ "ಬಿದಿರಲಂದಣವಕ್ಕೂ, ಬಿದಿರೆ ಸತ್ತಿಗೆಯಕ್ಕು, ಬಿದಿರಲ್ಲಿ ಗುಂಡಿಯ ಗೂಡಾರವಕ್ಕು, ಬಿದಿರಲ್ಲಿ ಸಕಲ ಸಂಪದವೆಲ್ಲವು ಬಿದಿರದವರ ಮೆಚ್ಚ ನಮ್ಮ ಕೂಡಲಸಂಗಮದೇವ "ಎಂದುಕೊಂಡು, ಸದಾ ಬಿದಿರಿಕೊಂಡಿದ್ದು ಶಿವನೊಲುಮೆಯನ್ನು ಪಡೆದರು ಬಸವಣ್ಣನವರು. ಸದಾ ತಾನು ಸಕಲರಿಗೆ ಬಾಗಿ ಅಂದಣವಾಗಿ, ಅರಳಿ ಕೊಡೆಯಾಗಿ, ವಿಶ್ವವಿಶಾಲ ಪ್ರೀತಿಯ ಛಾಯಾಶ್ರಯವನ್ನು ಲೋಕಕ್ಕೆ ನೀಡಿದರು.

ವಿನಮ್ರತೆಯಲ್ಲಿ ಎರಡು ಪರಿ. ಒಂದು ಅತಿಯಾದ ದಾರಿದ್ರ್ಯ, ನಿಶ್ಯಕ್ತಿ, ನಿರ್ಬಲತೆಯಿಂದ ಪ್ರಕಟವಾಗುವ ವಿನಮ್ರಭಾವ ಇದು ದೈನ್ಯತೆಯ ಪ್ರತೀಕವಾಗಿ ಹೇಡಿತನದ ಲಕ್ಷಣವಾಗಬಹುದು. ಆದೇ ಸಬಲರೂ ಸಂಪನ್ನರೂ ಆಗಿದ್ದವರು

ತೋರಿಸುವ ವಿನಮ್ರಭಾವ ಧೀರತೆಯ ಪ್ರತೀಕವಾಗಿ ಮೆರೆಯುತ್ತದೆ. ನಮ್ಮಲ್ಲಿ ಬೆಳೆಯ ಬೇಕಾದುದು ಈ ಎರಡನೆಯ ಬಗೆಯ ವಿನಮ್ರಭಾವ. ಬಸವಣ್ಣನವರಲ್ಲಿ ವ್ಯಕ್ತವಾಗುವುದು ಇದೇ ವಿನಮ್ರಭಾವ. 'ಮಾಡುವಾತ ನಾನಲ್ಲಯ್ಯಾ, ನೀಡುವಾತ ನಾನಲ್ಲಯ್ಯಾ ಬೇಡುವಾತ ನಾನಲ್ಲಯ್ಯಾ ನಿಮ್ಮ ಕಾರುಣ್ಯವಿಲ್ಲದಾಗಿ ಎಲೆದೇವ ಮನೆಯ ತೊತ್ತಳಸಿದರೆ ಒಡತಿ ಮಾಡಿಕೊಂಬಂತೆ ನಿನಗೆ ನೀ ಮಾಡಿಕೋ ಕೂಡಲಸಂಗಮದೇವ"

"ತನಗೆ ಮುನಿದವರ ತಾ ಮುನಿಯಲೇಕಯ್ಯಾ"
"ಆರು ಮುನಿದು ನಮ್ಮನೇನು ಮಾಡುವರು ?
ಊರು ಮುನಿದು ನಮ್ಮನೆಂತು ಮಾಡುವರು ?
ನಮ್ಮ ಕುನ್ನಿಗೆ ಕೂಸ ಕೊಡಬೇಡ.
ನಮ್ಮ ಸೊಣಕಂಗೆ ತಳಿಗೆಯನಿಕ್ಕಬೇಡ.
ಆನೆಯ ಮೇಲೆ ಹೋಹನ ಶ್ವಾನ ಕಚ್ಚಬಲ್ಲುದೆ,
ನಮಗೆ ನಮ್ಮ ಕೂಡಲಸಂಗಯ್ಯನುಳ್ಳನಕ"
"ಊರಮುಂದೆ ಹಾಲುಹಳ್ಳ ಹರಿಯುತ್ತಿರಲು,
ಓರೆಯಾವಿನ ಬೆನ್ನಲ್ಲಿ ಹರಿಯಲದೇಕಯ್ಯಾ ?
ಲಜ್ಜೆಗೆಡಲೇಕೆ ? ನಾಡುಗೆಡಲೇಕೆ ? ಕೂಡಲ ಸಂಗಮದೇವಯ್ಯನುಳ್ಳನ್ನಕ್ಕ
ಬಿಜ್ಜಳನಭಂಡಾರವೆನಗೇಕಯ್ಯಾ "
''ಜೋಳವಾಳಿಯಾನಾನಲ್ಲ, ವೇಳೆವಾಳಿಯುವನಾನಲ್ಲ,
ಹಾಳುಗೆಟ್ಟೋಡುವ ಆಳುನಾನಲ್ಲಯ್ಯಾ,
ಕೇಳು ಕೂಡಲಸಂಗಮದೇವ ಮರಣವೇ ಮಹಾನವಮಿ"
''ಅಯ್ಯಾ ನೀನೆಂದರೆ ಎಂಬೆನು, ನಿನ್ನ ಹಂಗೇನು ಹರಿಯೇನು ?
''ಕಾಯದ ಕಳವಳಕ್ಕಂಜಿ ಕಾಯಯ್ಯಾ ಎನ್ನೆನು,
ಜೀವನೋಪಾಯಕ್ಕಂಜಿ ಈಯಯ್ಯಾಎನ್ನೆನು''

ಎಂಬಿವೆ ಅವರ ವಚನಗಳಲ್ಲಿ ಕಂಡುಬರುವ ವಿನಯ ಭಾವದಲ್ಲಿ ಧೀರತೆಯು ಹಾಸು ಹೊಕ್ಕಾಗಿ ಮೆರೆದಿದೆ. ''ಆಯುಷ್ಯತೀರದಲ್ಲಿ ಮರಣವಿಲ್ಲ, ಅಂದವೇಲೆ ಲೋಕವಿಗುರ್ಬಣೆಗೆ ಅಂಜಲದೇಕೋ" ಎಂದು ಗರ್ಜಿಸಿದವರು ಬಸವಣ್ಣನವರು.

ಪರಮಾತ್ಮನ ಅನುಗ್ರಹ - ಲೋಕದಲ್ಲೆಲ್ಲರ ಬಯಕೆ ಇದು. ದುಃಖ ದುಮ್ಮಾನ ಗಳಿಲ್ಲದೆ ಬದುಕಿನಲ್ಲಿ ಸುಖ ಶಾಂತಿ ಪ್ರಾಪ್ತವಾಗಬೇಕು ಎಂಬುದಕ್ಕಾಗಿ ಎಲ್ಲರ ಶ್ರಮ. ಇದು ಪರಮಾತ್ಮನ ಅನುಗ್ರಹದಿಂದ ಮಾತ್ರ ದೊರಕೀತು ಎಂಬುದೆಲ್ಲರ ನಂಬಿಕೆ, ವಿಶ್ವಾಸ. ಆದಕ್ಕಾಗಿ ಹರಕೆಗಳನ್ನು ಹೊತ್ತೋ, ಪೂಜೆ ಪುನಸ್ಕಾರಗಳನ್ನು ಮಾಡಿ

ಸಿಯೋ, ಜಪವನ್ನೋ, ತಪವನ್ನೋ ಆಚರಿಸಿಯೋ ಆತನ ಅನುಗ್ರಹ ಸಂಪಾದಿಸಲು ಯತ್ನಿಸುತ್ತಿರುತ್ತಾರೆ. ತಮಗಾಗಿ ಸುಖಶಾಂತಿ ಬಯಸುವರು ಅನ್ಯರಿಗೂ ಅದು ದೊರಕಬೇಕು ಎಂಬ ಭಾವನೆಯನ್ನಿಟ್ಟುಕೊಂಡು ವರ್ತಿಸಿದರೆ ಮಾತ್ರ ಅದು ಸಿಕ್ಕೀತು. ಹಾಗೆ ಮಾಡದೆ ತಾನು ಮಹಾಭಕ್ತನೆಂದೋ ಹರಕೆಸಲ್ಲಿಸುವಾತನೆಂದೋ ಜಪ - ತಪಾದಿಗಳನ್ನು ಮಾಡಿದವನೆಂದೋ ಬೀಗಿ ನಡೆಯುತ್ತಿದ್ದರೆ ಆತ ಜಪ-ತಪಾದಿಗಳಿಗೆ ಚಿಕ್ಕಾಸು ಬೆಲೆಯೂ ಇಲ್ಲ. ಅಂತೆಯೇ ಶಿವನಾಮ ಜಪಿಸುವ ನಾಲಿಗೆಯಿಂದಲೇ ಕಠೋರ ವಚನಗಳನ್ನು ನುಡಿಯುತ್ತಿದ್ದರೆ, ಧ್ಯಾನಿಸುವ ಮನದಲ್ಲಿ ದುರ್ಭಾವನೆ ಅಡಗಿದ್ದರೆ ಅವುಗಳಿಂದ ಶಿವನನುಗ್ರಹ ಸರ್ವಥಾ ದೊರಕದು. ಯಾವ ತಪವೂ ಬೇಡ, ಯಾವ ಜಪವೂ ಬೇಡ, ಮೃದುವಚನವಿದ್ದಲ್ಲಿ ಅದೇ ಜಪ ತಪ ;- ಮೃದುವಚನವೇ ಸಕಲ ಜಪಂಗಳಯ್ಯಾ, ಮೃದುವಚನವೇ ಸಕಲ ತಪಂಗಳಯ್ಯಾ ಎಂಬೀ ಅಂಶವನ್ನು ತಮ್ಮ ನಡೆ ನುಡಿಗಳಲ್ಲಿ ಆಚರಿಸಿ ತೋರಿಸಿದರು. ತನ್ಮೂಲಕ ಸಕಲರ ಪ್ರೀತಿ ಗೌರವಕ್ಕೆ ಭಾಜನರಾದರು. "ಸದುವಿನಯವೇ ಸದಾಶಿವನೊಲುಮೆಯಯ್ಯಾ" ಎಂದು ತಿಳಿಯಪಡಿಸಿದ ಅವರು ಸ್ವತಃ ಸದ್ವಿನಯದಿಂದ ವರ್ತಿಸಿ ಶಿವನೊಲುಮೆಗೆ ಪಾತ್ರರಾದ ಮಹಾನುಭಾವರು. "ಜನ್ಮಜನ್ಮಕೆ ಹೋಗಲೀಯದೆ ಸೋಹಂ ಎಂದೆನಿಸದೆ ದಾಸೋಹಂ ಎಂದೆನಿಸಯ್ಯಾ" ಎಂದು ಶಿವನಲ್ಲಿ ಮೊರೆಯಿಟ್ಟು, ತನ್ನನ್ನು "ಬಾಗಿದ ತಲೆಯ ಮುಗಿದ ಕೈಯಾಗಿರಿಸು ಕೂಡಲ ಸಂಗಮದೇವಾ" ಎಂಬೀ ಅವರ ಬೇಡಿಕೆ ಅವರ ವಿನಯ ಗುಣದ ಪರಾಕಾಷ್ಠತೆಯ ಶಿಖರ. ಇದಕ್ಕೆ "ಸಾಕ್ಷಿ ಆಯ್ದಕ್ಕಿ ಮಾರಯ್ಯ ಮಾಡಿದ "ಹಮ್ಮಾ ಬಿಮ್ಮಳಿದ ಅನವರತ ಶಿವನೀನು ಎಂಬ ಘೋಷಣೆ ಕಾರಣ' ನಡೆ ಚೆನ್ನ, ನುಡಿಚೆನ್ನ ಎಲ್ಲಿ ನೋಡಿದಲ್ಲಿ ಚೆನ್ನ" ಎಂದು ಚೆನ್ನಯ್ಯನನ್ನು ಹೊಗಳಿದ ಈನುಡಿ ಬಸವಣ್ಣನವರಿಗೂ ಸ್ವತಃ ಅನ್ವಯವಾಗುವುದು.

ಶರಣಾಗದೆ ಹರಣೋದ್ಧಾರವಿಲ್ಲವೆಂದರಿತು "ಶರಣೆಂದೊಡೆ ಹುಟ್ಟೇಳು ಜನ್ಮದ ಪಾಪ ಬಿಟ್ಟು ಹಿಂಗುವುದು ನೋಡಾ'' ಎಂದಾಚರಿಸಿ ತೋರಿದರು. ಆದರೆ ಬರಿದೆ ಶರಣು ಎಂದೊಡೆ ಸಾಲದು, ಶರಣೆನ್ನುವ ಭಾಂಡ ಭಾಜನವೂ ಶುದ್ಧವಿರಬೇಕು. ಶುದ್ಧಿ ಇಲ್ಲದ ಭಾಂಡ ಭಾಜನವಿಟ್ಟುಕೊಂಡು ಶರಣೆಂದು ವರ್ತಿಸಿದರೆ ಅದು ಹೆಂಡದ ಮಡಿಕೆಯ ಹೊರಗೆ ತೊಳೆದಂತೆ 'ಮುಖ್ಯವಾಗಿ ಹೊಲಬಿಗನಾಗಬೇಕು. ಹೊಲಬುಗೆಡದೆ ಶರಣೆನ್ನಬೇಕು.

"ಕರ್ತನಟ್ಟಿದರೆ ಮರ್ತ್ಯದಲ್ಲಿ ಮಹಾಮನೆಯಕಟ್ಟಿದೆ. ಸತ್ಯಶರಣರಿಗೆ ತೊತ್ತು ಭೃತ್ಯನಾಗಿ ಸವೆದು ಬದುಕಿದೆನು" ಎಂದೆನ್ನುವ ಈ ವಿನಯಭಾವಕ್ಕೆ ಸರಿಗಟ್ಟುವವರು ಯಾರು".

# ವಿಜ್ಞಾನ ಮತ್ತು ಆಧ್ಯಾತ್ಮ

ಎಚ್. ಎಸ್. ನರಸಿಂಹ ಜೀಯರ್, ಶ್ರೀ ಬಸವೇಶ್ವರ ಇಂಗ್ಲಿಷ್ ಶಾಲೆ, ತುಮಕೂರು – 2

‘‘ಚಿತೆಯು ಸತ್ತ ಮನುಷ್ಯನನ್ನು ಸುಟ್ಟರೆ ಚಿಂತೆಯು ಜೀವಂತ ವ್ಯಕ್ತಿಯನ್ನು ಸುಡುತ್ತದೆ.’’....ಸಂಸ್ಕೃತ ಸುಭಾಷಿತ.

ನಮ್ಮ ಹಿರಿಯರು ತಮ್ಮ ಅನುಭವದಿಂದ ಅನೇಕ ಸುಭಾಷಿತಗಳನ್ನು ರಚಿಸಿ ನಮ್ಮ ಮಾರ್ಗದರ್ಶನಕ್ಕೆ ಬಿಟ್ಟುಹೋಗಿದ್ದಾರೆ. ಇವುಗಳನ್ನು ಕೆಲವರು ಮೂಢ ನಂಬಿಕೆಗಳ ಕಂತೆಯೆಂದೂ, ಅವೈಜ್ಞಾನಿಕವೆಂದೂ ಭಾವಿಸಿದ್ದಾರೆ. ಮೇಲಿನ ಸುಭಾಷಿತದಲ್ಲಿ ‘‘ಚಿಂತೆಯು ಜೀವಂತ ಮಾನವನನ್ನು ನಾಶಮಾಡಬಲ್ಲದು” ಎಂಬ ಬಗ್ಗೆ ಎಚ್ಚರಿಕೆ ಕೊಟ್ಟಿದ್ದಾರೆ. ಇತ್ತೀಚಿನ ವೈಜ್ಞಾನಿಕ ಸಂಶೋಧನೆಗಳಿಂದ ಇದು ಸತ್ಯವೆಂದು ವಿಜ್ಞಾನಿಗಳು ಕಂಡುಕೊಂಡಿದ್ದಾರೆ. ಮನಸ್ಸಿನಲ್ಲಿ ಮೂಡಿ ಮಾಯ ವಾಗುವ ಯೋಚನೆಗಳು, ಭಾವನೆಗಳೂ ಸಹ ನಮ್ಮ ರಕ್ತ ಪ್ರವಾಹ ಹಾಗೂ ಹೃದಯದ ಆಳಕ್ಕೂ ತಿಳಿಯ ಬಲ್ಲವು. ದುಷ್ಟಯೋಚನೆಗಳೂ ಕೆಟ್ಟ ಪರಿಣಾಮ ವನ್ನೂ, ಸದ್ಭಾವನೆ, ಸದಾಲೋಚನೆಗಳೂ ಉತ್ತಮ ಪ್ರಭಾವವನ್ನೂ ಉಂಟು ಮಾಡುತ್ತವೆ ಎಂಬುದನ್ನು ವಿಜ್ಞಾನ ಒಪ್ಪಿದೆ. ಇದು ಸಂಶೋಧನೆಯಿಂದ ಕಂಡ ಹಿಡಿದ ಸತ್ಯವಾಗಿದೆ.

ರಷ್ಯಾದೇಶದ ವಿಜ್ಞಾನಿಗಳು 1956 ರಲ್ಲಿ ಈ ದಿಶೆಯಲ್ಲಿ ಪ್ರಯೋಗವನ್ನು ಆರಂಭಿಸಿದರು. ಆರೋಗ್ಯವಾದ ಮನುಷ್ಯರ ಮನಸ್ಸಿನಲ್ಲಿ ಚಿಂತೆ, ಭಯ ಉದ್ವೇಗ ಗಳನ್ನುಂಟುಮಾಡುವ ಭಾವನೆಗಳನ್ನು ಬಿತ್ತಿದರು. ನಿರ್ದಿಷ್ಟವಾದ ಅವಧಿಯ ನಂತರ ಅವರ ಆರೋಗ್ಯವನ್ನು ಪರೀಕ್ಷಿಸಿದಾಗ ಅವರ ಶರೀರದಲ್ಲಿ ರೋಗಾಣುಗಳು ಕಾಣಿಸಿಕೊಂಡುವು. ಅವರ ರಕ್ತಪ್ರವಾಹದಲ್ಲಿ ಹಿಂದೆ ಇದ್ದುದಕ್ಕಿಂತ, ಪ್ರಯೋಗದ ನಂತರ ಒಂದುಸಾವಿರದ ಆರುನೂರು ಬಿಳಿರಕ್ತಕಣಗಳು ನಾಶವಾಗಿರುವುದು ಕಂಡು ಬಂದಿತು. ಬಿಳಿರಕ್ತಕಣಗಳಿಗೆ ನಮ್ಮ ಶರೀರದಲ್ಲಿ ಬರುವ ರೋಗಾಣುಗಳನ್ನು ನಾಶ ಮಾಡುವ ಶಕ್ತಿಇದೆ. ಸೈನಿಕರಂತೆ ಎಚ್ಚರದಿಂದ ಕಾದು ಶತ್ರುಗಳನ್ನು ನಾಶಮಾಡು ವಂತೆ ನಮ್ಮ ಆರೋಗ್ಯ ಕಾಪಾಡುವ ಈ ಬಿಳಿರಕ್ತಕಣಗಳು ನಾಶವಾದವೆಂದಮೇಲೆ ನಮ್ಮ ಆರೋಗ್ಯ ಕೆಡುವುದು ಸ್ವಾಭಾವಿಕ. ಇಂತಹ ಬಿಳಿರಕ್ತಕಣಗಳ ನಾಶ ಚಿಂತೆ, ಭಯ, ಉದ್ವೇಗಗಳು ಮನಸ್ಸಿನಲ್ಲಿನಾಟಿದಾಗ ಕಾರಣವಾಯಿತು. ನಂತರ ಈ ವಿಜ್ಞಾನಿಗಳು ಆರೋಗ್ಯವಂತರ ಮನಸ್ಸಿನಲ್ಲಿ ಉತ್ಸಾಹ. ಧೈರ್ಯ, ಹಾಗೂ ಸಂತೋಷವನ್ನುಂಟುಮಾಡುವ ಭಾವನೆಗಳನ್ನು ಮೂಡಿಸಿದರು. ನಂತರ ಪರಿ-ಶೀಲಿಸಿದಾಗ ಇಂತಹವರ ರಕ್ತಕಣಗಳಲ್ಲಿ ಒಂದುಸಾವಿರದ ಐದುನೂರರಷ್ಟು

ಬಿಳಿರಕ್ತಕಣಗಳು ವೃದ್ಧಿಯಾಗಿದ್ದುವು. ಆರೋಗ್ಯ ಇನ್ನೂ ಉತ್ತಮಗೊಂಡಿತು. ಈ ಪ್ರಯೋಗದಿಂದ ಚಿಂತೆ, ದುಷ್ಟಯೋಚನೆ, ಉದ್ವೇಗಗಳು ಕೆಟ್ಟಪರಿಣಾಮ ಉಂಟುಮಾಡುತ್ತವೆಂಬುದನ್ನೂ, ಸದ್ಭಾವನೆಗಳು, ಒಳ್ಳೆಯ ಆಲೋಚನೆಗಳು ಉತ್ತಮ ಆರೋಗ್ಯಕ್ಕೆ ಸಾಧಕವೆಂಬುದನ್ನು ಅರಿತಂತಾಯಿತು. ನಮ್ಮ ಪೂರ್ವಜರ ಸುಭಾಷಿತ ನೂರಕ್ಕೆ ನೂರರಷ್ಟು ಸತ್ಯವಾಯಿತು.

ಈ ದಿಶೆಯಲ್ಲಿ ನಡೆದ ಮತ್ತೆ ಕೆಲವು ಪ್ರಯೋಗಳನ್ನು ನೋಡೋಣ. ಮೇಯೋ ಕ್ಲಿನಿಕ್‌ನ ಡಾ|| ಅಲ್ವಾರಿಸ್ ಎಂಬುವರು ಹೊಟ್ಟೆನೋವಿನಿಂದ ನರಳುವ ಹದಿನೈದು ಸಾವಿರ ರೋಗಿಗಳನ್ನು ಪರೀಕ್ಷೆಗೆ ಒಳಪಡಿಸಿದರು. ಅವರೆಲ್ಲರಿಂದಲೂ ವಿವರಗಳನ್ನು ಕಲೆಹಾಕಿದರು. ಇದರಿಂದ ಅವರಿಗೆ ಹೇಳಿದ ಮುಖ್ಯ ಅಂಶವೆಂದರೆ ಇವರಲ್ಲಿ ಸುಮಾರು ಹನ್ನೆರಡುಸಾವಿರ ಮಂದಿಯ ನರಳಾಟಕ್ಕೆ ಕಾರಣ ಮಾನಸಿಕ ಮೂಲದ್ದೆಂದು ತಿಳಿಯಿತು. ಮನಸ್ಸಿನಲ್ಲಿ ನಾನಾ ಕಾರಣಗಳಿಂದ ಉಂಟಾದ ಭಯ, ಚಿಂತೆ, ದ್ವೇಷ, ಮತ್ಸರ ಹಾಗೂ ಸ್ವಾರ್ಥತೆಯೇ ಮುಖ್ಯ ಕಾರಣವೆಂದು ಪ್ರಯೋಗದಿಂದ ಕಂಡುಕೊಂಡರು.

ಅಮೆರಿಕಾದ ಮತ್ತೊಬ್ಬ ವೈದ್ಯರಾದ ಡಾ|| ಜಾನ್ ಎ. ಷಿಂಡ್ಲರ್ ಎಂಬುವರು ಇಪ್ಪತ್ತು ವರ್ಷಗಳ ಕಾಲ ಅಸಂಖ್ಯಾತ ರೋಗಿಗಳನ್ನು ಅಧ್ಯಯನ ಮಾಡಿ ಸುಮಾರು ನೂರರಲ್ಲಿ ಐವತ್ತರಷ್ಟು ಮಂದಿಯ ನರಳಾಟಕ್ಕೆ ಕಾರಣ ಭಯ, ಚಿಂತೆ, ಆಕ್ರೋಶ, ಉದ್ವೇಗಗಳೇ ಎಂಬುದನ್ನು ಜಾಹೀರುಪಡಿಸಿದರು.

ಬ್ರಿಟನ್ನಿನ ಪ್ರಸಿದ್ಧ ಮನೋರೋಗ ಚಿಕಿತ್ಸಾ ತಜ್ಞರಾದ ಪೀಟರ್‌ಬ್ಲೀತ್‌ರವರು ತಮ್ಮ "The Growing Plague" ಎಂಬ ಗ್ರಂಥದಲ್ಲಿ ಕೆಲವು ರೋಗಗಳನ್ನು "Stress disease" ಅಥವಾ ಮನೋದೈಹಿಕ ಬೇನೆಗಳೆಂದು ಗುರ್ತಿಸಿದ್ದಾರೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ ರಕ್ತದ ಒತ್ತಡ, ಹೃದಯಾಘಾತ, ಅಲರ್ಜಿ, ಅಜೀರ್ಣ, ಅತಿಸಾರಭೇದಿ, ಬಿಕ್ಕಳಿಕೆ, ಮುಟ್ಟುದೋಷಗಳು, ಮಧುಮೇಹ, ವಾಯು, ಕ್ಷಯ ಹಾಗೂ ಕೆಲವು ಚರ್ಮ ರೋಗಗಳು. ಇವಕ್ಕೆ ಹೆಚ್ಚಾಗಿ ಚಿಂತೆ, ಭಯ, ಉದ್ವೇಗಗಳೇ ಮುಖ್ಯ ಕಾರಣವೆಂದು ಹೇಳಿದ್ದಾರೆ.

ಇಂದು ನಾವು ನಮ್ಮ ಜೀವನದ ಹೋರಾಟದಲ್ಲಿ ಕೆಲವು ವೇಳೆ ಚಿಂತೆ, ಕೋಪ, ಭಯ, ಸ್ವಾರ್ಥತೆ, ಉದ್ವೇಗಗಳ ಜಾಲದಲ್ಲಿ ಸಿಕ್ಕಿ ಹಾಕಿಕೊಳ್ಳಬೇಕಾದ ಅನೇಕ ಸಂದರ್ಭಗಳು ಬರುತ್ತವೆ. ಚಿತ್ತ ಸ್ವಾಸ್ಥ್ಯವನ್ನೂ, ಆಂತರಿಕ ಶಾಂತಿಯನ್ನೂ ಕಳೆದುಕೊಳ್ಳಬೇಕಾದ ಅನೇಕ ಸನ್ನಿವೇಶಗಳನ್ನು ಎದುರಿಸಬೇಕಾಗುತ್ತದೆ. ಇವುಗಳ ಪರಿಣಾಮವಾಗಿ ನಾವು ನರಮಂಡಲದ ದೌರ್ಬಲ್ಯ ಹಾಗೂ ನಾನಾ ತೆರವಾದ ಮಾನಸಿಕ, ದೈಹಿಕ ವ್ಯಾಧಿಗೆ ತುತ್ತಾಗಬೇಕಾಗುತ್ತದೆ.

ಆದ್ದರಿಂದ ನಾವು ಎಂತಹ ದುರ್ಭರ ಸನ್ನಿವೇಶದಲ್ಲಿಯೂ ಚಿತ್ತ ಸ್ವಾಸ್ಥ್ಯವನ್ನು ಕಳೆದುಕೊಳ್ಳದೆ ಎಲ್ಲಾ ಸನ್ನಿವೇಶಗಳಲ್ಲಿಯೂ ಸ್ಥಿತಪ್ರಜ್ಞನಂತೆ ಏನೇ ಬಂದರೂ ಸಂತೋಷದಿಂದ ಸ್ವೀಕರಿಸುವುದನ್ನು ಕಲಿಯಬೇಕು. ಡಾ॥ ಅಲೆಕ್ಸಿಕೆರೆಲ್‌ರವರು ಈ ರೀತಿ ಹೇಳುತ್ತಾರೆ. ಚಿಂತೆಯನ್ನು ದೂರಕ್ಕೆಸೆಯಲರಿಯದ ಮಾನವ ಯೌವನದಲ್ಲೇ ಸಾವನ್ನಪ್ಪ ಬೇಕಾಗುತ್ತದೆ. ಪ್ರಯುಕ್ತ ನಾವು ಚಿಂತೆಯನ್ನು ಹತ್ತಿರ ಬರದಂತೆ ದೂರದಲ್ಲಿಟ್ಟಿರಬೇಕು. ನಮ್ಮ ಬದುಕು ಯಾವಾಗಲೂ ಉತ್ಸಾಹ, ಧೈರ್ಯ, ಆನಂದ ಇವುಗಳ ಚಿಲುಮೆಯಾಗಿರಬೇಕೆಂದು ಶ್ರೀ ಜಗದಾತ್ಮಾನಂದರು ಹೇಳುವಂತೆ ಜಾಗೃತ ರಾಗಿರಬೇಕು. ಇವರು ಹೇಳುವಂತೆ ಮಾನಸಿಕಚಿಂತೆ ನಮ್ಮ ದೇಹದಲ್ಲಿ ಮಾರಕ ರಾಸಾಯನಿಕ ಬದಲಾವಣೆ ಉಂಟುಮಾಡಿ ಆರೋಗ್ಯಕ್ಕೆ ಹಾನಿಯುಂಟು ಮಾಡುತ್ತದೆ ಎಂಬುದನ್ನು ಸದಾ ಜ್ಞಾಪಕದಲ್ಲಿಟ್ಟು ಕೊಳ್ಳಬೇಕು.

ಈ ಸಂದರ್ಭದಲ್ಲಿ, ನಮ್ಮ ಮತ್ತೊಂದು ದೌರ್ಬಲ್ಯವಾದ ಸಣ್ಣ ಸಣ್ಣ ಕಾರಣಗಳಿಗೂ ಕೋಪಿಸಿಕೊಳ್ಳುವ ಹವ್ಯಾಸವನ್ನು ದೂರಮಾಡಬೇಕು. ಯಾವ ಕಾರಣಗಳಿಗೂ ಕೋಪಿಸಿಕೊಳ್ಳಲೇ ಬಾರದು ಭಗವದ್ಗೀತೆಯಲ್ಲಿ ಹೇಳುವಂತೆ ಕ್ರೋಧದಿಂದ ನಮ್ಮ ವಿವೇಕನಾಶವಾಗಿ ಸಂಮೋಹ ಹುಟ್ಟುತ್ತದೆ. ಇದರಿಂದ ನಮ್ಮೆಲ್ಲಾ ತಿಳುವಳಿಕೆ ಹಾರಿಹೋಗಿ ಬುದ್ಧಿ ನಶಿಸುತ್ತದೆ. ಪತನದಿಂದ ನಮ್ಮ ಸರ್ವನಾಶವಾಗುತ್ತದೆ.

ಕೋಪಬಂದಾಗ ಧ್ವನಿ ಏರುತ್ತದೆ. ರಕ್ತದ ಒತ್ತದ ಅಧಿಕವಾಗುತ್ತದೆ. ತಿಳುವಳಿಕೆ ರಹಿತರಾಗಿ ಆಗ ಮಾಡಬಾರದ ಕೆಲಸ ಮಾಡುತ್ತೇವೆ. ಅಂತಹ ಸಂದರ್ಭ ಬಂದಾಗ ಕೋಪವನ್ನು ನುಂಗಿಕೊಳ್ಳಬೇಕು- ತನ್ನನ್ನು ತಾನೇ ಸೈರಿಸಿ ಕೊಳ್ಳುವುದನ್ನು ಕಲಿಯಬೇಕು. ಸಿಟ್ಟನ್ನು ನೇರವಾಗಿ ಪ್ರದರ್ಶಿಸಲು ಅಸಾಧ್ಯ ವಾದಾಗ ಕೆಲವರು ಅದನ್ನು ಇತರರ ಮೇಲೆ ಪ್ರಯೋಗಿಸುತ್ತಾರೆ. ಇದೂ ಅಪಕಾರಿ ಎಂಬುದನ್ನು ನಾವೆಲ್ಲ ಅರಿಯಬೇಕು.

ಕೋಪದ ಬಗ್ಗೆ ನಮ್ಮ ಹಿರಿಯರು ಈರೀತಿ ಹೇಳಿದ್ದಾರೆ 'ಉತ್ತಮರ ಕೋಪ ಒಂದು ಕ್ಷಣಮಾತ್ರ, ಮಧ್ಯಮರದು ಎರಡು ಘಟಿಯತನಕ, ಅಧಮರದು ದಿನವಿಡೀ ಕೋಪಗೊಂಡರೆ, ದುರಾತ್ಮರು ಜೀವಮಾನವೆಲ್ಲಾ ಕೋಪವನ್ನು ಉಳಿಸಿಕೊಳ್ಳುತ್ತಾರೆ.' ಇದನ್ನು ತಿಳಿದುಕೊಂಡರೆ, ನಮ್ಮ ಸಮಾಜದ ಅನೇಕ ಹಿಂಸೆ, ಅತ್ಯಾಚಾರ, ಅನಾಚಾರಗಳನ್ನೆಲ್ಲಾ 'ಕೋಪ ಬಿಟ್ಟರೆ ಕಡಿಮೆಮಾಡಬಹುದೆಂದು ಅರ್ಥವಾಗುತ್ತದೆ

ಇದನ್ನರಿತು ಮಾನವರು ಚಿಂತೆ, ಭಯ, ಕ್ರೋಧ, ಉದ್ವೇಗದ ಭಾವನೆಗಳನ್ನು ದೂರವಿರಿಸಿ ಆರೋಗ್ಯಕರ ಜೀವನ ನಡೆಸಿದಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ಶಾಂತಿಯಿಂದ ಬಾಳುವುದಲ್ಲದೆ ಸಮಾಜವೂ ಸ್ವಚ್ಛನಾಗಿ ಅನೇಕ ರೀತಿಯ ರೋಗ ರುಜಿನಗಳಿಂದ ದೂರವಿರಬಹುದಲ್ಲವೆ ?

# ಪ್ರಗತಿ - ಒಂದುಚಿಂತನೆ

ಎಂ. ಗೀತಾ, ನಂ' ೯೯, ೯ ನೇ ಮುಖ್ಯ ರಸ್ತೆ, ಸರಸ್ವತಿಪುರಂ, ಮೈಸೂರು – ೯

ಪ್ರಸ್ತುತ ಸಮಾಜದಲ್ಲಿ ಪ್ರತಿಕ್ಷಣದಲ್ಲಿಯೂ ನೈತಿಕ ಮೌಲ್ಯಗಳ ಅಧಃಪತನವನ್ನು ಕಾಣುತ್ತಿದ್ದೇವೆ. ಪಾರ್ಥಿವ ಶರೀರದ ಭೋಗವೇ ಪರಮಾತ್ಮನ ಪೂಜೆಯೆಂದು ತಿಳಿದು ನೀಚ ಮಟ್ಟದ ಸ್ವಾರ್ಥತೆಯಿಂದ ಮನುಷ್ಯ ಇಡೀ ಸಮಾಜವನ್ನೇ ವಿನಾಶದ ಅಂಚಿಗೆ ತಳ್ಳುತ್ತ ತಾನೂ ಬೀಳುತ್ತಿದ್ದಾನೆ. ಎಲ್ಲಿ ನೋಡಿದರೂ ಆತ್ಮ ವಿಶ್ವಾಸಹೀನತೆ ಅಶ್ರದ್ಧೆ, ಹಾಗೂ ಅಪನಂಬಿಕೆಗಳಿಗೆ ಗುರಿಯಾದ ಯುವ ಜನಾಂಗ ಉತ್ಸಾಹ, ಶಕ್ತಿ ಹಾಗೂ ಭರವಸೆಗಳನ್ನು ಕಳೆದು ಕೊಂಡು ಗೊತ್ತು ಗುರಿಯಿಲ್ಲದೆ ಜೀವನದ ಯಾತ್ರೆ-ಯನ್ನು ನೂಕುತ್ತಿರುವಂತೆ ಭಾಸವಾಗುತ್ತದೆ. ಈ ಒಂದು ವಿಷಮ ಸನ್ನಿವೇಶದಲ್ಲಿ ಯುವ ಜನಾಂಗದ ಅದಮ್ಯ ಶಕ್ತಿಯನ್ನು ನೀತಿಯ ನೆಲೆಗಟ್ಟಿನಲ್ಲಿ ಹಾಗೂ ಮಾನವ ಧರ್ಮದ ಚೌಕಟ್ಟಿನಲ್ಲಿ ಬಂಧಿಸದಿದ್ದರೆ ಉಪಕಾರ ಮಾರ್ಗದತ್ತ ಅವರ ಮನಸ್ಸನ್ನು ಹರಿಸದಿದ್ದರೆ ರಾಷ್ಟ್ರದ ಸಮಗ್ರ ಯೋಜನೆಗಳೂ ನಿಷ್ಫಲವಾಗಿ ಪ್ರಗತಿ ಪ್ರಲೋಪ ವೆನಿಸುತ್ತದೆ.

ಆದರೆ ಈ ಒಂದು ಬೃಹತ್ಕಾರ್ಯಕ್ಕೆ ಹೆಗಲು ಕೊಡಲು ಪ್ರಾಮಾಣಿಕವಾಗಿ, ನಮ್ಮ ನೇತಾರರೂ ಸಿದ್ಧರಿರುವರೇ? ಎಂಬುದನ್ನು ಪ್ರತಿಯೊಬ್ಬ ಪ್ರಜೆಯೂ ಚಿಂತಿಸುವಂತಾಗಬೇಕು. ಮತ್ತು ಅಂತಹ ನೇತಾರರನ್ನು ಹುಡುಕಿ ನಿಷ್ಪಕ್ಷಪಾತದಿಂದ ದೇಶದ ಸೇವೆಗೆ ತೊಡಗುವಂತೆ ಮಾಡುವಂತಲೂ ಯೋಚಿಸಬೇಕು. ಈ ಒಂದು ಮಹತ್ಕಾರ್ಯ ದೇಶದಲ್ಲಿ ಇಂದು ನಡೆಯಬೇಕಾಗಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ದೇಶಕ್ಕಾಗಿ ಇಡೀ ಜೀವನವನ್ನೇ ಮುಡುಪಾಗಿಟ್ಟ ಅನೇಕಮಹನೀಯರು ಭಾರತವು ಜಗತ್ತಿಗೆ ಒಂದು ಆಧ್ಯಾತ್ಮ ಸಂದೇಶವನ್ನು ನೀಡಬಲ್ಲದು ಎಂದು ಭಾವಿಸಿದ್ದರು. ಅಂತೆಯೇ ಪ್ರತಿವ್ಯಕ್ತಿಯಲ್ಲಿಯೂ ಅಡಗಿರುವ, ಮಾನವೀಯತೆ, ದಿವ್ಯತೆ, ಸರ್ವಧರ್ಮ ಸಮನ್ವಯತೆಗಳತ್ತ ಎಚ್ಚರಗೊಳ್ಳುವಂತೆ ಪ್ರೇರೇಪಿಸಿದ್ದರೂಕೂಡ, ಇಂದು ನಾವು ಯಾರಲ್ಲಿಯೂ ಈ ಒಂದು ಅಂತರಾತ್ಮವನ್ನು ಎಚ್ಚರಗೊಳಿಸಿ ಧರ್ಮದ ನೆಲಗಟ್ಟಿನಲ್ಲಿ ರಾಷ್ಟ್ರವನ್ನು ನಿಲ್ಲಿಸುವ ಶಕ್ತಿಯನ್ನು ಕಾಣುತ್ತಿಲ್ಲ. ಇದಕ್ಕೆ ಬದಲಾಗಿ ಪ್ರತಿಯೊಬ್ಬ ವ್ಯಕ್ತಿಯ ತುತ್ತು ಅನ್ನಕ್ಕೂ ಪರದೇಶಗಳತ್ತ ಕೈಚಾಚುವಂತಾಗಿದೆ ನಮ್ಮ ಸ್ಥಿತಿ.

ಇದಕ್ಕೆ ಆರ್ಥಿಕ ಕಾರಣಗಳೇನೇ ಇರಲಿ ಬಹಳ ಮುಖ್ಯವಾದ ಕಾರಣವೆಂದರೆ ಮನುಷ್ಯ ಅತ್ಯಂತ ಸ್ವಾರ್ಥಪರನಾಗಿ, ಅಂತಃ ಶಕ್ತಿಯತ್ತ ವಿಮುಖನಾಗಿ, ಆಧ್ಯಾತ್ಮಿಕ ದೃಷ್ಟಿಯನ್ನು ಕಳೆದು ಕೊಂಡು ಆಡಂಬರ ಜೀವನಕ್ಕೆಳಸಿ ಕೀರ್ತಿಯ ಕುದುರೆಯನ್ನು ಹತ್ತಿ ರಾಷ್ಟ್ರದ ಹಿತಕ್ಕಿಂತ, ರಾಜ್ಯದ ಹಿತವೇ ಮುಖ್ಯ, ರಾಜ್ಯಕ್ಕಿಂತ ಹಳ್ಳಿಯ ಹಿತವೇ ಮೇಲು, ಹಳ್ಳಿಗಿಂತಲೂ ತನ್ನ ಹಿತವೇ ಸೊಗಸು ಎಂದು ಸಂಕುಚಿತದತ್ತ

ಸಾಗುತ್ತಿರುವುದೇ ಆಗಿದೆ. ಇಂತಹ ಒಂದು ಪ್ರಜಾ ಕೋಟಿ-ಕೋಟಿಗಳು ಏನನ್ನು ತಾನೇ ಸಾಧಿಸಬಲ್ಲವು. ಮುಂದಿನ ಜನಾಂಗ ಇಂತಹವರಿಂದ ಏನನ್ನು ತಾನೆ ನಿರೀಕ್ಷಿಸಲಾದೀತು. ಈ ಒಂದು ವಿಚಾರಧಾರೆಯತ್ತ ಹೊರಟಾಗ ನಮ್ಮ ಮುಂದೆ ಬೃಹತ್ತಾಗಿ ಬಂದು ನಿಲ್ಲುತ್ತದೆ ಒಂದು ಮಹಾಶೂನ್ಯ.

ಎಂದ ಮಾತ್ರಕ್ಕೆ ಯಾರೂ ನಿರಾಶರಾಗಬೇಕಿಲ್ಲ. ನೆಲ, ಜಲ, ಆಗಸಗಳ ಸಾಮ್ರಾಜ್ಯವನ್ನು ಸರಾಗವಾಗಿ ವಶಪಡಿಸಿಕೊಂಡಿರುವ ಮನುಷ್ಯ ಜನಮನದಲ್ಲಿ ಶಾಂತಿ ಸೌಹಾರ್ದಗಳನ್ನು ಸ್ಥಾಪಿಸಲಾರನೆ ? ಎತ್ತನೋಡಿದಡತ್ತ ಅಶಾಂತಿಯ ಜ್ವಾಲೆ ತನ್ನ ನಾಲಿಗೆಯನ್ನು ಚಾಚಿ ಕಂಗೆಡಿಸುತ್ತಿರುವ ಜನಮನದ ಹೃದಯದಲ್ಲಿ ಶಾಂತಿಯ ತಂಗಾಳಿ ಬೀಸುವಂತೆ ಮಾಡಲಾರನೆ? ಪರಸ್ಪರ ದ್ವೇಷದ ದಾವಾನಲವನ್ನು ಮತ್ತೆ ಮೇಲೇಳ ಬಾರದಂತೆ ನಂದಿಸಲಾರನೆ? ರಾಷ್ಟ್ರವನ್ನೆ ಕಾಡುತ್ತಿರುವ ಈ ಒಂದು ಪ್ರಶ್ನಾರ್ಥಕ ಚಿಂತನೆಯನ್ನು ದಿನ ಬೆಳಗಾದರೆ ಪತ್ರಿಕೆಗಳಲ್ಲಿ ಕೇಳುತ್ತೇವೆ, ದೂರ-ದರ್ಶನಗಳಲ್ಲಿ ನೋಡಲು ಬಯಸುತ್ತೇವೆ. ಅಪಹರಣದವಾರ್ತೆ ಮನುಷ್ಯನು ಹೊರಗಡೆ ನಿರ್ಭೀತಿಯಿಂದ ಸಂಚರಿಸಲೂ ಆಗದಂತೆ ಮಾಡಿದೆ. ಶಾಂತಿ ಎಂಬ ಎರಡು ಪದಗಳ ವಸ್ತು ಎಂತಹ ಬೆಲೆತೆತ್ತರೂ, ಎಲ್ಲೆಲ್ಲಿ ಹುಡುಕಿದರೂ ಸಿಗದಂತಹಾ ವಸ್ತುವಾಗಿ ಪರಿಣಮಿಸಿದೆ. ಹಳ್ಳಿಯಿಂದ ದಿಲ್ಲಿಯವರೆವಿಗೂ ಒಂದೇ ವಿಧವಾದ ಪರಿಸರವನ್ನು ಕಾಣುತ್ತಿದ್ದೇವೆ.

ಈ ಒಂದು ಸ್ಥಿತಿಯಲ್ಲಿ ರಾಷ್ಟ್ರದ ಪ್ರಗತಿಯತ್ತ ಚಿಂತಿಸುವುದು ಕನಸಿನ ಮಾತೇನೋ ಎಂದು ಭಾಸವಾಗುತ್ತದೆ ಜನಸಾಮಾನ್ಯನಿಗೆ. ಆದರೆ ಇದು ಸುಲಭ ಸಾಧ್ಯ ಎನ್ನುತ್ತದೆ ಸಂತರ ಹೃದಯ. ಪ್ರಗತಿಯಗತಿ ಎರಡು ವಿಧವಾಗಿದೆ. ಒಂದು 'ಬಾಹ್ಯ' ಮತ್ತೊಂದು 'ಆಂತರಿಕ'. ಇಂದು ವಿಜ್ಞಾನಿ ಬಾಹ್ಯಪರಿಸರದ ಮೇಲೆ ನಿಯಂತ್ರಣವನ್ನು ಸಾಧಿಸಿ ಪ್ರಗತಿಯ ಉನ್ನತ ಶಿಖರವನ್ನೇ ಏರುತ್ತಿದ್ದಾನೆ. ಆದರೆ ಈ ಉನ್ನತ ಶಿಖರ ನೀತಿಯ ನೆಲಗಟ್ಟಿಲ್ಲದ ಧರ್ಮದ ಚೌಕಟ್ಟಿಲ್ಲದೆ ಪತನವಾಗುವುದೆಂಬುದನ್ನು ಚಿಂತಿಸುವಷ್ಟೆ ತಾಳ್ಮೆಯನ್ನು ಹೊಂದಲಾರದವನಾಗಿದ್ದಾನೆ. ಇದನ್ನರಿತ ಸಂತ ಹೃದಯವು ಆಂತರಿಕ ಪ್ರಕೃತಿಯ ಮಾಲಿನ್ಯವನ್ನು ಹೊರಹಾಕ ಬೇಕು ಹಾಗೂ ಆಂತರಿಕ ವಾತಾವರಣವನ್ನು ಪರಿಶುದ್ಧಗೊಳಿಸಬೇಕು ಎನ್ನುತ್ತದೆ. ಇಂದು ಬೃಹತ್ ರಾಷ್ಟ್ರಗಳೆನಿಸಿದ ಅಮೆರಿಕಾ, ರಷ್ಯಾದೇಶಗಳು ನಾಶಕಾರಕವಾದ ಕ್ಷಿಪಣಿಗಳನ್ನೋ ಅಣುಬಾಂಬನ್ನೊ ಹೊರಹಾಕುವಷ್ಟು ಅಥವ ನಿಷ್ಕ್ರಿಯಗೊಳಿಸುವಷ್ಟು ಸುಲಭವಲ್ಲ. ಈ ಆಂತರಿಕ ವಾತಾವರಣದ ಪರಿಶುದ್ಧತೆ. ವ್ಯಕ್ತಿಯ ಆಂತರಿಕ ಪರಿಸರಮಾಲಿನ್ಯದ ಭೂಮರೂಪವೇ ರಾಷ್ಟ್ರದ ಪತನಕ್ಕೆ ಕಾರಣವಾಗುತ್ತದೆ ಎಂಬುದನ್ನು ಇತಿಹಾಸ ತಜ್ಞರೂ ಒಪ್ಪುತ್ತಾರೆ. ಈ ಒಂದು ಅಂತಃ ಮಾಲಿನ್ಯವನ್ನು

ಕಳೆಯಬೇಕಾದರೆ ಮನುಷ್ಯನ ಮನಸ್ಸಿನಲ್ಲಿ ಅಲೆ ಅಲೆಯಾಗಿ ಏಳುತ್ತಿರುವ ಅಹಂಕಾರ, ಸ್ವಾರ್ಥತೆ, ದುರಾಸೆ, ಸ್ಥೈರ್ಯ ಪ್ರವೃತ್ತಿ ಇವುಗಳಿಗೆ ಕಾರಣವಾದ ಅರಿಷಡ್ವರ್ಗಗಳನ್ನು ಹೊರಹಾಕ ಬೇಕು ಇಲ್ಲವೇ ನಿಷ್ಕ್ರಿಯಗೊಳಿಸಬೇಕು. ಆರೀತಿ ಮಾಡಿದಾಗಲೇ ರಾಷ್ಟ್ರದ ಪ್ರಗತಿ ಸಾಧ್ಯ. ರಾಷ್ಟ್ರದ ಅಳಿವು, ಉಳಿವು ಈ ಒಂದು ಅಂತಃ ಶುದ್ಧತೆಯ ಮೇಲೆ ನಿಂತಿದೆ ಎಂಬುದನ್ನು ಎಲ್ಲರೂ ಅಂಗೀಕರಿಸಿದ್ದಾರೆ.

ಜಗತ್ತಿನ ಸುಮಾರು ಇಪ್ಪತ್ತೊಂದು ನಾಗರೀಕತೆಗಳಲ್ಲಿ. ಹತ್ತೊಂಬತ್ತು ನಾಗರೀಕತೆಗಳು ಅವಸಾನ ಹೊಂದಲು ಕಾರಣವಾದುದು ಕೇವಲ ಬಾಹ್ಯರೂಪದ ಆಕ್ರಮಗಳಿಂದಲ್ಲ ಆಂತರಿಕ ಹಾಗೂ ನೈತಿಕ ಕುಸಿತದಿಂದ ಎಂದು ಪ್ರಸಿದ್ಧ ಇತಿಹಾಸಕಾರ ಆರ್ನಾಲ್ಡ್ ಟೊಯಾಂಬಿಯವರು ಹೇಳಿರುವುದನ್ನು ಮರೆಯಲಾಗದು.

ಈ ಒಂದು ಆಂತರಿಕ ಪರಿಸರವನ್ನು ಸ್ವಚ್ಛವಾಗಿ ಮಾಡಿಕೊಂಡು (ನೀರಿನಿಂದ ಸಾರಿಸಿ ನಂತರ ರಂಗವಲ್ಲಿಯಿಂದ ಮನೆಯನ್ನಲಂಕರಿಸುವಂತೆ) ನಾವು ರಾಷ್ಟ್ರಪ್ರಜ್ಞೆ, ಸಮಾಜ ಪ್ರಜ್ಞೆ, ಹಾಗೂ ವ್ಯಕ್ತಿ ಪ್ರಜ್ಞೆಯತ್ತಗಮನ ಹರಿಸಿ ಬೇರೆ ಬೇರೆ ದಿಕ್ಕಿನತ್ತ ಹರಿಯುತ್ತಿರುವುದನ್ನು ಒಂದೇ ದಿಕ್ಕಿಗೆ ಎಂದರೆ ಕರ್ತವ್ಯ ಪ್ರಜ್ಞೆಯತ್ತ, ನೀತಿಪ್ರಜ್ಞೆಯತ್ತ ಮಾನವಿಕಧರ್ಮ ಪ್ರಜ್ಞೆಯತ್ತ ತಿರುಗುವಂತೆ ಮಾಡಿದಾಗ ಮಾತ್ರ ಸಮಾಜ ದೇಶ, ರಾಷ್ಟ್ರ, ಹಾಗೂ ವಿಶ್ವದಪ್ರಗತಿಯ ಚಾಲನೆಯನ್ನು ನಾವು ಕಾಣಬಹುದು. ಈ ಒಂದು ದಿಶೆಯಲ್ಲಿ ವೈಯಕ್ತಿಕ ಕರ್ತವ್ಯ, ಸಾಮಾಜಿಕ ಕರ್ತವ್ಯ, ಆರ್ಥಿಕ ಕರ್ತವ್ಯ, ರಾಷ್ಟ್ರೀಯ ಕರ್ತವ್ಯ ಇವುಗಳನ್ನು ಸಾಧಿಸುವಮೂಲಕ ಇಡೀ ಮಾನವ ಕೋಟಿಯು ವಿಶ್ವಮಾನವತೆಯತ್ತ ಹೋಗುವಂತೆ ಮಾಡಿದಾಗಲೇ ಪ್ರಗತಿಯ ಚಿಂತನೆ ಸಾರ್ಥವಾಗ ಬಲ್ಲದೆಂಬುದನ್ನೂ ಈಗ ವಿಶ್ಲೇಷಿಸೋಣ. ವ್ಯಕ್ತಿ ಹಾಗೂ ಸಮಾಜ ಪರಸ್ಪರ ಸಂಬಂಧವುಳ್ಳ ಅಂಗಗಳು. ವ್ಯಕ್ತಿ ಅಂಗವಾದರೆ ಸಮಾಜ ಅಂಗಿ ಎನಿಸುತ್ತದೆ. ಸಮಾಜದ ಅಸ್ತಿತ್ವವು ವ್ಯಕ್ತಿಯನ್ನು ಅವಲಂಬಿಸಿದೆ. ವ್ಯಕ್ತಿಯ ಆಚಾರ, ವಿಚಾರ, ಕರ್ತವ್ಯ ನಿಷ್ಠೆ ಹಾಗೂ ಸಂಸ್ಕೃತಿ ಸಮಾಜದಲ್ಲಿ ಪ್ರತಿ ಬಿಂಬಿತವಾಗುತ್ತದೆ. ವ್ಯಕ್ತಿ ಇಲ್ಲದೆ ಸಮಾಜವಿಲ್ಲ ಸಮಾಜವಿಲ್ಲದ ವ್ಯಕ್ತಿಯ ಅಸ್ತಿತ್ವವೂ ಇರುವುದಿಲ್ಲ. ಈ ಎರಡು ಒಂದು ಮತ್ತೊಂದಕ್ಕೆ ಸಹಯೋಗಿಯಾಗಿರುತ್ತದೆ. ಅಂತೆಯೇ ಸಮಾಜದ ಉತ್ಥಾನ ಪತನ ಆರೋಹ–ಅವರೋಹ, ಉನ್ನತಿ-ಅವನತಿಯನ್ನೇ ಅವಲಂಬಿಸಿದೆ. ವೃಕ್ಷವು ಹಸಿರಾಗಬೇಕಿದ್ದಲ್ಲಿ ಅದರ ಮೂಲಕ ನೀರಿನ ಸೇವನೆಯ ಅವಶ್ಯಕತೆ ಇರುವಂತೆ ಸಮಾಜವನ್ನು ವಿಕಸಿತಗೊಳಿಸಬೇಕಾದರೆ ವ್ಯಕ್ತಿಯ ಏಳಿಗೆಯು ಅವಶ್ಯಕ. ವ್ಯಕ್ತಿಯ ಉನ್ನತಿಯ ಮೂಲಮಂತ್ರ ಅವನ ಸಚ್ಚಾರಿತ್ರ್ಯದ ವಿಕಾಸವೇ ಆಗಿದೆ. ಇಂತಹ ವಿಕಸಿತ ವ್ಯಕ್ತಿಗಳಿಂದಲೇ ಸಮಾಜವು ಪ್ರಗತಿಪಥದತ್ತ ಸಾಗಲು ಸಾಧ್ಯವಾಗಬಲದು.

**ವೈಯಕ್ತಿಕ ಕರ್ತವ್ಯ** :– ವ್ಯಕ್ತಿಯು ಯಾವರೀತಿಯಲ್ಲಿ ಕರ್ಮಾಚರಣೆಯನ್ನು ಮಾಡುತ್ತಾನೆಯೋ ಹಾಗೆಯೇ ಅವನ ಜೀವನವೂ ರೂಪುಗೊಳ್ಳುತ್ತದೆ. ರೈತನು ತನ್ನ ಹೊಲವನ್ನು ಚೆನ್ನಾಗಿ ಉತ್ತಿ ಬಿತ್ತಿ ಕೃಷಿಮಾಡುವಂತೆ ವ್ಯಕ್ತಿಯು ತನ್ನ ಮನೋಭೂಮಿಯನ್ನು ಸಂಸ್ಕಾರಗೊಳಿಸಿ ಸತ್ಕರ್ಮಗಳೆಂಬ ಬೀಜವನ್ನು ಬಿತ್ತಿ ಕೃಷಿ ಮಾಡಬೇಕು. ವ್ಯಕ್ತಿಯು ತನ್ನ ಭವಿಷ್ಯವನ್ನು ತಾನೇ ರೂಪಿಸಿಕೊಳ್ಳುವಷ್ಟು ಸಮರ್ಥನಾಗಬೇಕು. ಯಾವವ್ಯಕ್ತಿಯೇ ಆಗಲಿ ಅವನು ಪ್ರತಿಕ್ಷಣದಲ್ಲಾಡುವ ಮಾತು 'ಯೋಚನೆ' ಕೆಲಸ ಇವು ಅವನ ಭವಿಷ್ಯದ ಬುತ್ತಿಯಾಗಿ ಪರಿಣಮಿಸುತ್ತದೆ. ಕೆಟ್ಟಯೋಚನೆ, ಕೆಟ್ಟ ಕರ್ಮಗಳು ದುಷ್ಟಮೃಗಗಳಂತೆ; ವ್ಯಕ್ತಿಯನಾಶಕ್ಕೆ ಕಾರಣ ವಾದರೆ ಸತ್ಕರ್ಮ ಸತ್‌ಯೋಚನೆಗಳು ದೇವತೆಗಳಂತೆ ವ್ಯಕ್ತಿಯ ರಕ್ಷಣೆಗೋಸ್ಕರ ಸದಾ ಸಿದ್ಧವಿರುತ್ತವೆ.

ಪ್ರಕೃತಿನಿಯಾಮನುಸಾರವಾಗಿ ಆಹಾರ, ನಿದ್ರಾ, ಭಯ, ಮೈಥುನ ಇವು ಗಳಲ್ಲಿ ಮನುಷ್ಯನಿಗೂ ಪಶುಗಳಿಗಳಿಗೂ ಯಾವ ಭೇದವಿಲ್ಲದೆ ಇದ್ದರೂ, ಧರ್ಮಾ ಚರಣೆಯನ್ನವಲಂಬಿಸಿ ಯುಕ್ತಾ ಯುಕ್ತ ನಡೆತೆಯ ಬಗೆಗೆ ವಿಚಾರಿಸುವ ಶಕ್ತಿಯಿರು ವುದರಿಂದಲೇ ಮನುಷ್ಯನು ಶ್ರೇಷ್ಠ ವರ್ಗದವನೆಂದು ಕರೆಯಲ್ಪಡುತ್ತಾನೆ. ಆದ್ದರಿಂದ ಪ್ರತಿಯೊಬ್ಬ ವ್ಯಕ್ತಿಯೂ ಸಮಾಜಕ್ಕೆ, ದೇಶಕ್ಕೆ, ರಾಷ್ಟ್ರಕ್ಕೆ ತಾನು ಮಾಡಬೇಕಾಗಿ ರುವ ಧರ್ಮಪಾಲನೆಯ ವಿಶೇಷತೆಯನ್ನರಿತಿರಬೇಕಾಗುತ್ತದೆ. ಅಂತಹ ಧರ್ಮಪಾಲ ನೆಯು ಮಾನವೀಯತೆಯ ಪ್ರಾಪ್ತಿಗೋಸ್ಕರವೇ ಎಂಬುದನ್ನು ಗಮನಿಸಬೇಕು. ಧರ್ಮರಹಿತವಾದ ಮಾನವೀಯತೆಯು ಪಶುವಿಗೆ ಸಮಾನವೆಂದು ಉಲ್ಲೇಖಿಸಲಾಗಿದೆ. ‹‹ಧರ್ಮೇಣ ಹೀನಾ ಪಶುಭಿಃ ಸಮಾನಃ ''.

ಮಾನವೀಯತೆಯ ರಕ್ಷೆಯಲ್ಲಿ ತೊಡಗಬೇಕಾದ ವ್ಯಕ್ತಿ ಸದಾಚಾರಿಯಾಗಿರ ಬೇಕು. ಎಂದರೆ ಅವನು ಮಾಡುವ ಪ್ರತಿಯೊಂದು ಕರ್ಮವೂ ಪರಿಶುದ್ಧ ಮನಸ್ಸಿನಿಂದ ಹಾಗೂ ನಿಸ್ವಾರ್ಥತೆಯಿಂದ ಕೂಡಿದ್ದಾಗಿರಬೇಕು. ಆಗಲೇ ಅದು ಧರ್ಮಾಚಾರವೂ ಆಗುತ್ತದೆ. ವ್ಯಕ್ತಿಯು ಸಂಪಾದಿಸಿದ ಹಣವಾಗಲಿ, ಕುಟುಂಬದ ಜನರಾಗಲೀ ಶಾಶ್ವತ ವಾಗಿ ಇವನ ಜೊತೆ ಇರಲಾರರು. ಆದರೆ ವ್ಯಕ್ತಿಯು ರಾಷ್ಟ್ರಕ್ಕೆ ಮಾಡಿದ ಸದಾಚಾರ ಧರ್ಮಾಚಾರಗಳು ಪುಣ್ಯ ಮರಣದ ನಂತರವೂ ಇವನನ್ನು ಹಿಂಬಾಲಿಸುತ್ತದೆ. ಆದ್ದ ರಿಂದ ವ್ಯಕ್ತಿ ಕೆಲವು ಕರ್ತವ್ಯಗಳನ್ನು ಮಾಡಿದಾಗ ಅವನಿಗೆ ಒದಗಬಹುದಾದ ಹಕ್ಕು ರಾಷ್ಟ್ರದಿಂದ ತನ್ನಷ್ಟಕ್ಕೆ ತಾನೇ ಬರುತ್ತದೆ. ಆದ್ದರಿಂದ ಅವನೂ ಸುಖಿ ಎನಿಸುತ್ತಾನೆ.

**ಸಾಮಾಜಿಕ ಕರ್ತವ್ಯ** : ಸಮಾಜದ ಸಂಘಟನೆಗೆ ಆಧಾರ ಏಕತೆ. ಏಕತ್ವದ ಭಾವನೆ ಎಲ್ಲ ಸಂಘಟನೆಗಳಿಗೆ ಮೂರ್ತರೂಪವನ್ನು ಕೊಡುತ್ತದೆ. ಸಮಾಜದಲ್ಲಿ ಪ್ರತ್ಯೇಕ ವ್ಯಕ್ತಿಯ ಸಮಷ್ಟಿಯ ಪ್ರತಿನಿಧಿಯಾಗಿರುತ್ತಾನೆ. ಸಮಷ್ಟಿಯೇ ಅವನ

ಶಕ್ತಿ. ಈ ಒಂದು ಸಂಘಟನೆಯಿಂದ ವ್ಯಕ್ತಿ ಹಿರಿಯರನ್ನು ಗೌರವಿಸುವುದು ಒಟ್ಟಾಗಿ ಕೆಲಸಮಾಡುವುದು. ಒಂದೇ ಲಕ್ಷ್ಯದೆಡೆಯತ್ತ ಮುಂದುವರೆಯುವುದು, ಪರಸ್ಪರ ವಿರೋಧ ಮಾಡದಿರುವುದು ಇತ್ಯಾದಿ ಸದ್ಗುಣಗಳಿಂದ ಸಮಾಜಕ್ಕೆ ಹೊರೆಯಾಗದೆ ತನ್ನ ಸುಖಕ್ಕೆ ತಾನೇ ಕಾರಣನಾಗುವುದಲ್ಲದೆ ಸಮಾಜದ ಉನ್ನತಿಗೂ ಕಾರಣ ನಾಗುತ್ತಾನೆ.

ಆದರೆ ಸಮಾಜದ ಉನ್ನತಿಗೆ ಸಾಮೂಹಿಕ ಪ್ರಯತ್ನ ತುಂಬಾ ಆಗತ್ಯವಾದು ದಾಗಿದೆ. ಏಕೆಂದರೆ ಯಾವ ಕಾರ್ಯವನ್ನು ಸಮಾಜದ ಅಥವಾ ಸಮಾಜ ಮಾಡುತ್ತ ದೆಯೋ ಆಕಾರ್ಯವನ್ನು ವ್ಯಕ್ತಿ ಎಷ್ಟೇ ಸಮರ್ಥ ನಾದಾಗ್ಯೂಮಾಡಲಾರ ಬೆಳಗಿನ ಸೂರ್ಯನ ಸಮಸ್ತ ಕಿರಣಗಳು ಒಟ್ಟಿಗೆ ಸೇರಿದಾಗಲೇ ಅಂಧಕಾರದ ನಾಶವಾಗುವುದು ಹಾಗೆಯೇ ಸಮಾಜ ಸಾಮೂಹಿಕ ಪ್ರಯತ್ನದಿಂದಲೇ ಸಮಸ್ತ ಕಾರ್ಯದ ಸಿದ್ಧಿಯ ಗುವುದೂ ಕೂಡ.

ಇಂತಹ ಸಮಾಜಕ್ಕೆ ಹಾನಿಯನ್ನುಂಟುಮಾಡುವ ತತ್ವವೆಂದರೆ 'ಅ ಕರ್ಮಣ್ಯ' ಇಲ್ಲಿ ಅ ಕರ್ಮಣ್ಯವೆಂದರೆ ಕೇವಲ ಕರ್ಮಮಾಡದೇ ಇರುವುದು ಎಂದು ಮಾತ್ರ ಅರ್ಥ ಮಾಡಬಾರದು ಜೊತೆಗೆ ಪಾಪ ಕರ್ಮವನ್ನು ಮಾಡುವುದು. ಅ ಕರ್ಮಣ್ಯ ವೆನಿಸುತ್ತದೆ. ವೇದದಲ್ಲಿ ಇಂತಹ ವ್ಯಕ್ತಿಯನ್ನು ಸಮಾಜದ ಶತ್ರುವೆಂದು ಕರೆದಿದ್ದಾರೆ. ಇಂದು ಇಂತಹ ಶತ್ರುಗಳಿಲ್ಲದ ನಿರ್ಭೀತ ಸಮಾಜ ಸೃಷ್ಟಿಯಾಗಬೇಕಾಗಿದೆ. ಸಮಾಜ ಹೀಗೆ ನಿರ್ಭೀತವಾದಾಗಲೇ ಅದು ಪ್ರಗತಿಪರ ಸಮಾಜವೆನಿಸುತ್ತದೆ. ಮಿತ್ರ, ಶತ್ರು, ಪರಿಚಿತ, ಅಪರಿಚಿತ ಎಲ್ಲರೂ ನಿರ್ಭಯದಿಂದಿರಬೇಕು. ಹಗಲಾಗಲೀ ಇರುಳಾಗಲೀ ಯಾವಾಗಲೂ ಯಾರಿಂದಲೂ ಭಯ ಉಂಟಾಗ ಬಾರದು. ಇಂತಹ ಒಂದು ಸುಖೀ ಸಮಾಜ ಸೃಷ್ಟಿಯಾದಾಗಲೇ, ರಾಷ್ಟ್ರದ ಉನ್ನತಿಯೂ ಆಗುತ್ತದೆ. ಆದರೆ ಇದು ಎಷ್ಟರ ಮಟ್ಟಿಗೆ ಸಾಧ್ಯ ಎಂಬುದನ್ನು ನಾವು ಈ ವಿಜ್ಞಾನಯುಗದಲ್ಲಿ (ಅಜ್ಞಾನ ಯುಗವೆಂದು ಕರೆದರೂ ತಪ್ಪಾಗಲಾರದೇನೋ ಎನಿಸುತ್ತಿದೆ) ಅರಿಯಬೇಕಾಗಿದೆ.

**ಆರ್ಥಿಕ ಕರ್ತವ್ಯ :–** ಎಲ್ಲ ವಿಧವಾದ ಉನ್ನತಿಗೂ ಹಣದ ಅವಶ್ಯಕತೆ ಬಹಳ ಮುಖ್ಯವಾದುದು. ಚಿಕ್ಕದಿರಲಿ, ದೊಡ್ಡದಿರಲಿ, ಧರ್ಮಕ್ಕೆ ಸಂಬಂಧಪಟ್ಟಿರಲಿ ಅಥವಾ ರಾಜನೀತಿಗೆ ಸಂಬಂಧಪಟ್ಟಿರಲಿ, ಎಲ್ಲ ಕೆಲಸಗಳಿಗೂ ಹಣದ ಅವಶ್ಯ ಕತೆ ಬೇಕೇ ಬೇಕು. ವೇದಗಳಲ್ಲಿಯೂ ಕೂಡ ಧನದ ಅವಶ್ಯಕತೆಯನ್ನು ಹೇಳಲಾಗಿದೆ. ಪುರುಷಾರ್ಥಗಳಲ್ಲಿ ಎರಡನೇ ಸ್ಥಾನವನ್ನು ಹೊಂದಿರುವುದೇ ಇದರ ಪ್ರಾಮುಖ್ಯತೆ-ಯನ್ನು ತಿಳಿಸುತ್ತದೆ.

ಇಂತಹ ಧನದ ಸಂಗ್ರಹಣೆಯನ್ನು ಹೇಗೆ ಮಾಡಬೇಕೆಂಬುದು ಬಹಳ ಮುಖ್ಯವಾಗಿ ಗಮನಿಸಬೇಕಾದ ವಿಷಯ. ಮನುಷ್ಯ ಅನುಚಿತ ಮಾರ್ಗದಿಂದ ದುಷ್ಕರ್ಮಗಳಿಂದ ಧನ ಸಂಗ್ರಹಣೆಯನ್ನು ಮಾಡಬಾರದೆಂಬುದನ್ನು ವೇದ ಮಂತ್ರಗಳು ತಿಳಿಸುತ್ತವೆ. ಹಣದ ವೃದ್ಧಿಗೆ ಜ್ಞಾನ ಹಾಗೂ ದಕ್ಷತೆ ಎರಡೂ ಅತ್ಯವಶ್ಯಕ ಗುಣಗಳೆನಿಸುತ್ತವೆ. ಏಕೆಂದರೆ ತಾನುಗಳಿಸುವುವ ಜ್ಞಾನದ ಅನುಭವವನ್ನು ಕಾರ್ಯರೂಪಕ್ಕೆ ತಂದಾಗ, ಕುಶಲಕರ್ಮಿಯೇ ಆಗಲೀ ರೈತನೇ ಆಗಲೀ ಉಪಾಧ್ಯಾಯನೇ ಆಗಲೀ ಅವನು ಆ ಕರ್ಮದಲ್ಲಿ ದಕ್ಷತೆ (Efficiency) ಯನ್ನು ಸಾಧಿಸಿ ದಕ್ಷತೆಯ ದ್ವಾರಾ ಧನದ ಪ್ರಾಪ್ತಿಯನ್ನು ಗಳಿಸಬೇಕೆಂಬುದೇ ಸನಾತನ ಧರ್ಮದ ಗುರಿ.

ಹೀಗೆ ಗಳಿಸಿದ ಧನವು ಸದುಪಯೋಗವಾಗಬೇಕು. ಆಗಲೇಧನಕ್ಕೆ ನಿಜವಾದ ಬೆಲೆ ಎಂದರೆ ಧನದಸದುಪಯೋಗದಾನವೆಂದೇ ಅರ್ಥ. ಆಕಾಶ, ಪೃಥ್ವೀ, ವೃಕ್ಷ, ನದಿ, ಇವುಗಳೆಲ್ಲವೂ ಮನಷ್ಯನಿಗೆ ಮಳೆ, ಅನ್ನ, ಫಲ, ಪುಷ್ಪ, ನೀರು ಮುಂತಾದವುಗಳನ್ನು ಯದೃಚ್ಛಾ (ಕೇಳದೇಇದ್ದರೂ) ಕೊಡುತ್ತಾ ದಾನದ ಪ್ರಾಮುಖ್ಯತೆಯನ್ನು ಸಾರುತ್ತಿವೆ. ಹೀಗಿರುವಲ್ಲಿ ಬುದ್ಧಿವಂತನಾದ ಮನುಷ್ಯನ ಪಾತ್ರ ಹೇಗಿರಬೇಕೆಂಬುದನ್ನು ಹೇಳಬೇಕಾದ ಅವಶ್ಯಕತೆಯೇ ಇರುವುದಿಲ್ಲ. ಪ್ರತಿಯೊಬ್ಬ ಮನುಷ್ಯನು ತಾನು ದುಡಿದುದರಲ್ಲಿ 1 ಭಾಗವನ್ನಾದರೂ ಸಮಾಜಕ್ಕೆ, ರಾಷ್ಟ್ರಕ್ಕೆ ನಿಯತವಾಗಿ ಅರ್ಪಿಸಲೇಬೇಕು ಆಗಲೇ ಸುಖೀರಾಷ್ಟ್ರ, ಸುಖೀ ಸಮಾಜ ಉತ್ಪನ್ನವಾಗುವುದು ಸಾಧ್ಯವಾದೀತು.

**ರಾಷ್ಟ್ರೀಯ ಕರ್ತವ್ಯ :-** ರಾಜನೀತಿಜ್ಞನಾದ ಚಾಣಕ್ಯನು ಅರ್ಥಶಾಸ್ತ್ರದಲ್ಲಿ ರಾಷ್ಟ್ರದ ವ್ಯವಸ್ಥೆ ಮತ್ತು ಪರರಾಷ್ಟ್ರದೊಡನೆ ಅನುಸರಿಸಬೇಕಾದ ಸಂಬಂಧ ಹಾಗೂ ನೀತಿಗಳನ್ನು ವಿಶ್ಲೇಷಿಸಿದ್ದಾನೆ. ಯಾವ ರಾಷ್ಟ್ರವೇ ಆಗಿರಲಿ ಅದು ತನ್ನ ಮಿತ್ರ ಹಾಗೂ ಶತ್ರುರಾಷ್ಟ್ರಗಳಲ್ಲಿ ಹೇಗೆ ವರ್ತಿಸುತ್ತದೆ ಎಂಬ ಆಧಾರದಿಂದ ಅಂತಹ ರಾಷ್ಟ್ರದ ಉನ್ನತಿ ಹಾಗೂ ವಿಕಾಸಗಳು ಅವಲಂಬಿಸಿರುತ್ತವೆಯೆಂದು ಉಲ್ಲೇಖಿಸಿದ್ದಾನೆ. ರಾಷ್ಟ್ರದ ಸಂರಕ್ಷಣೆಗೋಸ್ಕರ ಮುಖ್ಯವಾಗಿ ಮಾಡಲೇಬೇಕಾದ ಕರ್ತವ್ಯ ಎಂದರೆ ಜನಜಾಗೃತಿ ಎಂದರೆ ರಾಷ್ಟ್ರದ ನಾಗರಿಕರು ತಮ್ಮ ಕರ್ತವ್ಯದತ್ತ ಸದಾ ಜಾಗೃತರಾಗಬೇಕು. ಹೇಗೆ ಅಗ್ನಿಯು ಸದಾಜಾಗೃತವಾಗಿದ್ದು ಶತ್ರುನಾಶಕವಾಗಿರುವುದು. ಹೇಗೆ ವಾಯು ಸದಾ ತನ್ನ ಕರ್ತವ್ಯ ಪ್ರಜ್ಞೆಯನ್ನು ಮರೆಯದೆ ಇರುವುದೋ ಹಾಗೆ ಪ್ರತಿಯೊಬ್ಬ ಪ್ರಜೆಯು ದೇಶದಿಂದ ನನಗೆ ಆಗುವ ಲಾಭವೆಷ್ಟು ಎಂದು ಚಿಂತಿಸದೆ ಪ್ರಮಾದರಹಿತನಾಗಿದೇಶಕ್ಕೆ ನನ್ನ ಕೊಡುಗೆಯೇನು ಎಂದು ಚಿಂತಿಸುವಂತಾಗಬೇಕು.

ರಾಷ್ಟ್ರದ ಮತ್ತೊಂದು ಮುಖ್ಯ ಕರ್ತವ್ಯವೆಂದರೆ ಸ್ವಾತಂತ್ರ್ಯ. ಸ್ವರಾಜ್ಯವು ರಾಷ್ಟ್ರದ ರಕ್ಷೆಯಾಗಿರಬೇಕು. ಇಂತಹ ರಾಜ್ಯದಲ್ಲಿ ಪ್ರಜೆಯಾದವನು ಕರ್ತವ್ಯ ಹಕ್ಕು ಎರಡನ್ನು ಹೊಂದಿರಬೇಕಾತುತ್ತದೆ. ಆದರೆ ಅಂತಹ ರಾಷ್ಟ್ರದ ಉನ್ನತಿಗೆ ಸಮಸ್ತ ಪ್ರಜೆಗಳನ್ನು ಪ್ರತಿನಿಧಿಸುವ ನೇತಾರ ಮಾತ್ರ ಒಬ್ಬನೆ ಆಗಿರಬೇಕು. ಎಲ್ಲರೂ ಅವನ ಮಾತಿನಂತೆ ನಡೆಯಬೇಕು. ಅವನ ವ್ಯಕ್ತಿತ್ವವು ಎಷ್ಟು ಶುದ್ಧವಾಗಿರಬೇಕೆಂದರೆ ಎಲ್ಲರನ್ನೂ ತನ್ನೆಡೆಗೆ ಆಕರ್ಷಿಸಿ ತನ್ನವರಂತೆ ಕಂಡು ತನ್ನವರನ್ನಾಗಿ ಮಾಡಿಕೊಳ್ಳ ಬೇಕು.

ಹೀಗೆ ಎಲ್ಲ ಪ್ರಜ್ಞೆಗಳನ್ನು ಬೆಳೆಸಿಕೊಂಡ ಮಾನವ, ಸಮಾಜ, ರಾಷ್ಟ್ರ ವಿಶಾಲ ವಿಶ್ವದಲ್ಲಿ ತಾನು ಅವಿರ್ಭವ ಹೊಂದಬೇಕು. ರಾಷ್ಟ್ರ ವಿಶ್ವದ ಅಂಗ ಮಾತ್ರ ವಿಶ್ವ ಸಮಷ್ಟಿ. ಮನುಷ್ಯ ಸಮಾಜ ಹಾಗೂ ರಾಷ್ಟ್ರದ ಸೀಮಾ ಕ್ಷೇತ್ರವನ್ನು ಮೀರಿ ವಿಶ್ವ ಮಾನವನ ಸುಖದ ಚಿಂತೆಯನ್ನು ಮಾಡುತ್ತಾನೋ ಆಗ ಅವನು ವಿಶ್ವ ನಾಗರಿಕನ ಶ್ರೇಣಿಗೆ ಬರುತ್ತಾನೆ. ವಿಶ್ವ ಬಂಧುತ್ವ, ವಿಶ್ವ ಕಲ್ಯಾಣ, ವಿಶ್ವಶಾಂತಿಯ ಕಾಮನೆಗಳೇ ಅವನ ಉಸಿರಾಗುತ್ತದೆ. ವಿಶ್ವಪ್ರೇಮವನ್ನು ಭೂಮಿಯಲ್ಲಿ ಪ್ರತಿಷ್ಠಿತ್ತಗೊಳ್ಳುವಂತೆ ಮಾಡುತ್ತಾನೆ. ವೇದ ಮಂತ್ರಗಳಲ್ಲಿ ಬರುವ ಪರಮಾತ್ಮನು ಯಾರನ್ನೂ ತಿರಸ್ಕರಿಸು ವುದಿಲ್ಲ. ಆದುದರಿಂದ ಎಂತಹ ಸಣ್ಣ ಜನರನ್ನೂ ಉದಾಸೀನ ಭಾವದಿಂದ ನೋಡ ಬಾರದು. ಎಲ್ಲರ ಮನಸ್ಸಿನಲ್ಲಿಯೂ ಏಕಭಾವನೆಯು ಬೆಳಗಲಿ, ಐಕ್ಯಮತ್ಯವು ಸ್ಥಾಪಿತ ವಾಗಲಿ. ಆಗಲೇ ಅವನು ವಿಶ್ವಮಾನವನಾಗುತ್ತಾನೆ. ಅದೇ ನಿಜವಾದ ಪ್ರಗತಿಯ ಚಿಹ್ನೆ ಎಂಬ ಉಲ್ಲೇಖವನ್ನು ನೋಡಬಹುದಾಗಿದೆ.

ಆದುದರಿಂದ ಈ ಒಂದು ಸಂದಿಗ್ಧ ಸಮಯದಲ್ಲಿ ವಿಷಮವಾತಾವರಣದಲ್ಲಿ ಬಳ ಲುತ್ತಿರುವ ಪ್ರಜಾಕೋಟಿಗೆ ಪರಮಾತ್ಮನು ವಿಶ್ವಮಾನವತೆಯ ಬಾಳಿನ ಮಾರ್ಗ ವನ್ನು ತೋರಿಸಲಿ, ತನ್ಮೂಲಕ ರಾಷ್ಟ್ರದ ಸಮಾಜದ, ವ್ಯಕ್ತಿಯ ನಿಜವಾದ ಶಾಶ್ವತ ವಾದ ಪ್ರಗತಿಯಾಗಲಿ ಎಂದು ಆ ಚಿಚ್ಛಕ್ತಿ ಸ್ವರೂಪನಾದ ವಿಶ್ವದೇವನನ್ನು ಪ್ರಾರ್ಥಿ ಸೋಣ.

ಮಾನವನ ಮನದಲ್ಲಿ ಶಾಂತಿನೆಲಸದೆ
ಸಮಾಜದಲ್ಲಿ ಶಾಂತಿಯನ್ನು ಕಾಣಬಹುದೆ ?
ಸಮಾಜದಲ್ಲಿ ಶಾಂತಿನೆಲಸದೆ
ರಾಷ್ಟ್ರದಲ್ಲಿ ಶಾಂತಿಯನ್ನು ಕಾಣಬಹುದೆ ?
ರಾಷ್ಟ್ರ ರಾಷ್ಟ್ರಗಳಲ್ಲಿ ಶಾಂತಿನೆಲೆಸಿದಾಗಲೇ ವಿಶ್ವಶಾಂತಿ.

# ದೀಪಾವಳಿ

ಜಿ.ಬಿ. ಲಿಂಗರಾಜು, ಕಲ್ಲುಸಾದರಹಳ್ಳಿ.

ದೀಪೋತ್ಸವ ಜರುಗಿವೆ ದೀಪಾವಳಿಯಲಿ
ಬೆಳ್ಳಂ ಬೆಳಕು ನಾಡಿನಲಿ
ರಥೋತ್ಸವದಂತಿದೆ ದೇವಾಲಯದಲಿ
ಬೆಳ್ಳಂಬೆಳಕು ಬಾಗಿಲಲಿ,

ಸಾಲು ಸಾಲಿನ ಜ್ಯೋತಿಯಪ್ರಭೆಯಲಿ
ಮನೆಮನ ಬೆಳಗಿವೆ ಸಂತಸದಿ
ಹಾಲಿನ ಹೊಳೆಯ ಪ್ರೀತಿಯ ಸಭೆಯಲಿ
ತನುಮನ ನಲಿದಿವೆ ಸಂಗಮದಿ ;

ಇರುಳನು ಕಳೆದಿದೆ ಹಣತೆಯು ರಂಜಿಸಿ
ದೇವನ ಕರುಣೆಯ ತಂದಿರಿಸಿ
ಕರುಳನು ಕುಣಿಸಿದೆ ಜನತೆಯ ಬಿಂಬಿಸಿ
ದೀಪೋತ್ಸವ ಶುಭ ಸಂಭ್ರಮಿಸಿ,

ಹೆಂಗೆಳೆಯರ ಮಂಗಳ ಹಣೆಯಲಿ-
ತಿಲಕದ ತೆರನದು ಜ್ಯೋತಿಯದು,
ಕಂಗಳ ಕಾಯೆಯು ತಂದೀಯುವನಲಿ-
ನಲಿವಾಗಿಹಕಿರಣ ಖ್ಯಾತಿಯದು,

ಅವಳಿ ದೀಪಗಳ ಹಚ್ಚಿದ ಕಳೆಯಲಿ
ದೀಪಾವಳಿ ಶುಭ ಸಂಭ್ರಮವು,
ಅವಳಿ ದೀಪಗಳ ಮೆಚ್ಚಿದನೆಲೆಯಲಿ
ನೂರಾರುರಿದಿವೆ ಶುಭ ಸಂಗಮವು.

# ಇಷ್ಟಲಿಂಗ ವೈಜ್ಞಾನಿಕವೇ ?

ಎಚ್. ಪಿ. ತಿಮ್ಮಪ್ಪ, ನಿವೃತ್ತ ಉಪನ್ಯಾಸಕರು, ಹೌಸಿಂಗ್ ಬೋರ್ಡ್ ಕಾಲೋನಿ,
ಅರಸೀಕೆರೆ, ಹಾಸನ ಜಿಲ್ಲೆ.

ವೇದ ಪೂರ್ವಕಾಲದ ಶೈವಧರ್ಮವು ಸಿಂಧೂ ದೇಶದಲ್ಲಿ ಉನ್ನತಿಗೇರಿ, ಕಾಲ ಕ್ರಮದಲ್ಲಿ ಶಿಥಿಲಗೊಂಡು, ಕಾಶ್ಮೀರ, ಗುಜರಾತ್‌ಗಳಲ್ಲಿ ಚೇತನ ಹೊಂದಿ ಕರ್ನಾಟಕ ಆಂಧ್ರ, ತಮಿಳುನಾಡಿನಲ್ಲಿ ಪಲ್ಲವಿಸಿತು. ಕ್ರಿ.ಶ. ಹನ್ನೆರಡನೆಯ ಶತಮಾನ ಇತಿಹಾಸದಲ್ಲಿ ಒಂದು ಮೈಲಿಗಲ್ಲು. ಶೈವ ವೃಕ್ಷ ದಿಂದೊಡೆದ ವೀರಶೈವವೆಂಬ ಮಹಾರಂಬೆ ಉಜ್ವಲವಾಗಿ ಬೆಳೆದು ಚಿಗುರಿ ಹೂಬಿಟ್ಟು, ಕಂಗೊಳಿಸಿತು. ಬಸವಾದಿಶಿವಶರಣರು ಬಹಳಕಾಲದಿಂದ ಬೇರೂರಿದ್ದ ಪುರೋಹಿತಶಾಹಿಯನ್ನು ಬುಡಮೇಲುಮಾಡಿದರು. ಸಾಮಾಜಿಕ ಅನಿಷ್ಟವಾಗಿದ್ದ ಜಾತಿಪದ್ಧತಿಯನ್ನು ಕಿತ್ತೊಗೆದರು. ದೇವಾಲಯ ಪ್ರವೇಶ ನಿರ್ಬಂಧವಿದ್ದ ಕಾಲದಲ್ಲಿ, ದೇವಾಲಯಗಳನ್ನೇ ಬಹಿಷ್ಕರಿಸಿದರು. ಪೂಜಾ ಕ್ರಮವನ್ನು ಸರಳಗೊಳಿಸಿ ಕೀಳುಮೇಲೆಂಬ ತಾರತಮ್ಯವಿಲ್ಲದೆ ವೈಯಕ್ತಿಕ ಪೂಜಾ ಪದ್ಧತಿಯನ್ನು ರೂಢಿಗೆತಂದರು. ತಾವು ಮಾತ್ರವೇ ಪೂಜಿಸಲು ಅರ್ಹರೆಂದು ಹೇಳಿಕೊಳ್ಳುತ್ತಿದ್ದವರು ಮೂಲಭೂತಹಕ್ಕನ್ನು ಮೊಟಕುಗೊಳಿಸಿದರು. ಸಮಾಜ ದೂರವಿಟ್ಟಿದ್ದ ಜನರನ್ನು ಸಹಪಂಕ್ತಿಯಲ್ಲಿ ಸೇರಿಸಿದರು, ದನಿಯೆತ್ತಲು ಅಂಜುತ್ತಿದ್ದವರಿಗೆ ಧೈರ್ಯತುಂಬಿದರು. ತಾವು ಮಾಡುತ್ತಿದ್ದ ಕರ್ಮ (ಕಾಯಕವೇ) ಕೀಳೆಂದು ನಂಬಿದ್ದವರ ಕೀಳರಿಮೆಯನ್ನು ಹೋಗಲಾಡಿಸಿ ಶ್ರಮ ಗೌರವತ್ವವನ್ನು ತೋರಿಸಿಕೊಟ್ಟರು. ದುಡಿಮೆಯಲ್ಲಿಯೇ ದೈವತ್ವಕಾಣಬಹುದೆಂಬ ಅರಿವು ಮೂಡಿಸಿದರು. ಅಜ್ಞಾನಿಗಳೆಂದೂ, ಅಸ್ಪೃಶ್ಯರೆಂದೂ ದೂರೀಕರಿಸಿದವರಲ್ಲಿದ್ದ, ಸುಜ್ಞಾನದ ಅರಿವು ಪ್ರಕಟವಾಗಲು ಅವಕಾಶ ಮಾಡಿಕೊಟ್ಟರು. ಪ್ರತಿಯೊಬ್ಬನೂ ಶರೀರಶ್ರಮದಿಂದ ದುಡಿದು ಉಣ್ಣಬೇಕು, ದುಡಿಯದೇ ಉಣ್ಣುವುದು ಅಪಹರಣವೆಂದು ತಿಳಿದು, ತಿಳಿಸಿ, ಸ್ವಾವಲಂಬಿ ಜೀವನವನ್ನು ಆಚರಿಸಿ ತೋರಿಸಿದರು. ದುಡಿಮೆಯ ಫಲವನ್ನು ಸ್ವಯಿಚ್ಛೆಯಿಂದ ಇತರರೊಡನೆ ಹಂಚಿ ಉಣ್ಣಬೇಕೆಂಬ ಸಮಷ್ಟಿ (ದಾಸೋಹಂ) ಭಾವನೆಯನ್ನು ಬೆಳೆಸಿದರು. ಶತಮಾನಗಳಿಂದಲೂ ಯಾಂತ್ರಿಕ ಜೀವನ ಸವೆಸಿದ್ದ ಮಹಿಳೆಗೆ ಸಮಾನತೆ ತಂದು ಕೊಟ್ಟರು. ಹೀನಕುಲದ, ಧಾರ್ಮಿಕ ಗಂಧವಿಲ್ಲದ ಸಮಾಜದಿಂದ, ಮೂಡಿಬಂದ ಕಾಳವ್ವೆ, ಗೊಗ್ಗವ್ವೆಯಂತಹವರಲ್ಲಿ, ಪುರುಷ ಸಮಾಜಕ್ಕೆ ಸವಾಲು ಹಾಕುವಂತಹ, ಶರಣ ಸಮೂಹದಲ್ಲಿ ವಾದಕ್ಕಿಳಿಸುವಂತಹ, ದಿಟ್ಟತನವನ್ನು ಮೂಡಿಸಿದರು. ಪುರೋಹಿತಷಾಹಿ ಮೂಲವಾಗಿದ್ದ ಬಹುದೇವತಾರ್ಚನೆಯನ್ನು ಖಂಡಿಸಿ ! ಭಕ್ತಿಮೂಲವಾದ ಏಕದೇವೋಪಾಸನೆಯನ್ನು ರೂಢಿಯಲ್ಲಿ ತಂದರು. ಕೀಳುಮೇಲೆಂಬ ತಾರತಮ್ಯ ನಿವಾರಿಸಿ ಹೊಸ ಜೀವನ ಪದ್ಧತಿಯನ್ನು ರೂಪಿಸಿದರು. ಅನುಭವಮಂಟಪದ ಮೂಲಕ ಈರೀತಿ ಒಂದು ನೂತನ ಸಮಾಜವನ್ನೇ ನಿರ್ಮಾಣ ಮಾಡಿದರು. ಈನವ ಸಮಾಜ ನಿರ್ಮಾಣಕ್ಕೆ ಕಾರಣವಾದದ್ದು ಲಿಂಗಧಾರಣೆ.

ಲಿಂಗಧಾರಣೆ ಶರಣ ಪೂರ್ವಯುಗದಿಂದ ರೂಢಿಯಲ್ಲಿದ್ದರೂ, ಅದಕ್ಕೊಂದು ಪರಿಷ್ಕೃತ ರೂಪಕೊಟ್ಟು ಚುರುಕಾಗಿಸಿದವರು ಬಸವಾದಿ ಶಿವಶರಣರು. ಅಷ್ಟಾವರಣಗಳಲ್ಲಿ ಗುರುವಿನ ನಂತರ ಸ್ಥಾನವೆ ಲಿಂಗ. ಇಷ್ಟಲಿಂಗ, ಅನಂತರ ಜಂಗಮ. ಇಷ್ಟಲಿಂಗಾರ್ಚನೆಯನಂತರ ಇತರ ಕಾರ್ಯ. ಶರಣ ಸಮಾಜದ ಪ್ರತಿಯೊಬ್ಬರೂ ಇಷ್ಟಲಿಂಗಧರಿಸಿರಲೇಬೇಕು. ಏಕೆಂದರೆ ಪ್ರತಿಯೊಬ್ಬನೂ, ವಿಶ್ವಾತ್ಮನ ಪೂಜೆ ಮಾಡಲೇಬೇಕು. ಶರೀರ ವ್ಯಾಪಾರಗಳು ವ್ಯಕ್ತಿಗೆ ಹೇಗೆ ಸಹಜವೋ, ಪರಮಾತ್ಮನ ಪೂಜೆಯು ಅಷ್ಟೇಸಹಜವೆಂಬುದಕ್ಕೆ ಶರಣವಾಣಿಯೇ ಸಾಕ್ಷಿಯಾಗಿದೆ. "ತನ್ನಾಶ್ರಯದ ರತಿಸುಖವನು, ತಾನುಂಬಊಟವನು, ಬೇರೆ ಮತ್ತೊಬ್ಬರ ಕೈಯಲಿ ಮಾಡಿಸಬಹುದೆ" (ಬಸವಣ್ಣನವರು) ಇಂತಹ ಸ್ಪಷ್ಟ ಮಾರ್ಗದರ್ಶನವಿದ್ದರೂ **ಶರಣ ಸಮಾಜದ ಆಧುನಿಕ ಯುವಕರು ಇಷ್ಟಲಿಂಗಧಾರಣೆಗೆ ಉದಾಸೀನ ಭಾವನೆ ತಾಳುತ್ತಿರುವುದು ವಿಷಾದಕರ.**

ಮಾನವ ತನ್ನ ಅಂತಜ್ಞಾನದಿಂದಲೇ ಅನೇಕ ನಿಗೂಢವಿಷಯಗಳನ್ನು ಅರಿಯಬಲ್ಲನೆಂಬುದಕ್ಕೆ, ಮಹಾಪುರುಷರ, ಯೋಗಿಗಳ, ಋಷಿಗಳ "ಜ್ಞಾನವೆ" ಸಾಕ್ಷಿ. ಅವರ ಏಕಾಗ್ರತೆ, ಕಠಿಣ ಸಾಧನೆಯ ಫಲವೆ "ಅಂತಜ್ಞಾನ" (intutive-perception) ಅಥವ "ಪ್ರಜ್ಞಾ". ಆಧುನಿಕ ವಿಜ್ಞಾನಿಗಳೂ ಈ ಅಂತಜ್ಞಾನದ ಮಹತ್ವವನ್ನು ಒಪ್ಪಿದ್ದಾರೆ. ಆದರೂ ವೈಜ್ಞಾನಿಕ ವಿಧಾನವನ್ನು ಅಲ್ಲಗಳೆಯಲಾಗುವುದಿಲ್ಲ. ಇಂದಿನ ಯುವ ಪೀಳಿಗೆ ಯಾವುದೇ ವಿಚಾರವನ್ನು ವಿಜ್ಞಾನದ ಒರೆಗಲ್ಲಿಗೆ ಹಚ್ಚಿನೋಡುವುದು ಸಾಮಾನ್ಯ ಭಾವನೆಯಾಗಿದೆ. ಈ ಭಾವನೆಯ ಹಿನ್ನೆಲೆಯಲ್ಲಿಯೇ ಇಷ್ಟಲೀಗಧಾರಣೆ ವೈಜ್ಞಾನಿಕವಾದುದೇ ಎಂಬುದನ್ನು ತಿಳಿಯಬೇಕಾಗಿದೆ.

ಮಾನವ ಹೃದಯವೇ ಇಷ್ಟಲಿಂಗ ಕಲ್ಪನೆಯಮೂಲ. ಪಂಚ ಭೌತಿಕ ಶರೀರದ ಜ್ಞಾನ ಕರ್ಮ ಎಲ್ಲ ವ್ಯವಹಾರಗಳಿಗೂ ಹೃದಯವೇ ಆಶ್ರಯ ಸಕಲೇಂದ್ರಿಯ ಕಾರ್ಯಗಳಿಗೂ ಹೃದಯವೇ ಕೇಂದ್ರಬಿಂದು. ಹೃದಯದಲ್ಲಿ ಸ್ವಾಭಾವಿಕವಾಗಿರುವ ಚೈತನ್ಯವೇ ಪರಮಾತ್ಮ ಚೇತೋಹಾರಿಯಾದ ಪರಮಾತ್ಮನಿರುವುದೇ ಪ್ರಾಣಲಿಂಗ, ಆದುದರಿಂದ ಪರಮಾತ್ಮನು ಹೃದಯಂಗತನೆಂಬುದು ವೇದ್ಯವಾಗುತ್ತದೆ. ಈ ರೀತಿ ಹೃದ್ಗತವಾದ ಲಿಂಗವೇ ನಮ್ಮೆದುರಿಗಿರುವ ಇಷ್ಟಲಿಂಗದ ಕಲ್ಪನೆ. ನಮ್ಮಲ್ಲಿರುವ ಶಿವಸ್ಥಿತಿಯನ್ನೇ ನಾವು ಲಿಂಗದ ಮಾಧ್ಯಮದಲ್ಲಿ ಪೂಜಿಸುವ ವೈಜ್ಞಾನಿಕ ವಿಧಾನ. ನಾವು ನಮ್ಮಲ್ಲಿ ನಮ್ಮತನವನ್ನು ಗುರುವಿನ ಸಹಾಯದಿಂದ ಜಾಗೃತಗೊಳಿಸಿಕೊಂಡು ಆ ನಮ್ಮತನದ ಕುರುಹಿನಲ್ಲಿಯೇ ನಮ್ಮ ದೃಷ್ಟಿ, ಅರುಹು, ಅರ್ಚನೆಗಳನ್ನು ಕ್ರೋಢೀಕರಣಗೊಳಿಸುವುದು, ಇಷ್ಟಲಿಂಗದ ಪೂಜೆ. ನಮ್ಮ ಸತ್ಯತ್ವದ ಪ್ರತಿನಿಧಿ ಇಷ್ಟಲಿಂಗ.

ಆದರ ಪ್ರತಿಕ್ರಿಯೆ ನಾವು. ಆದುದರಿಂದ ಕಾಂತಿಧರಿಸಿದ ಇಷ್ಟಲಿಂಗವು ಕರಚರಣಯುಕ್ತವಾದ ಯಾವ ಮೂರ್ತಿಯ ಆಕಾರವನ್ನು ಹೊಂದದೆ ಹೃದಯಾಕಾರವನ್ನು ಹೋಲುವುದೇ ಇದಕ್ಕೆ ಸಾಕ್ಷಿ.

ಮಾನವನ ಭೌತಿಕ ಶರೀರ ಒಂದೇ ಎಂಬಂತೆ ತೋರಿದರೂ ಅದನ್ನು ಸ್ಥೂಲ, ಸೂಕ್ಷ್ಮ, ಕಾರಣ ಎಂದು ಗುರುತಿಸಲಾಗಿದೆ. ಮಾನವನಲ್ಲಿ ಸೂಕ್ಷ್ಮ ಶರೀರವಿದೆ ಎಂಬುದನ್ನು ರಷ್ಯನ್ ವಿಜ್ಞಾನಿಗಳು ಗುರುತಿಸಿ ಒಪ್ಪಿದ್ದಾರೆ. ಮನುಷ್ಯನ ಮನಸ್ಸಿನಲ್ಲಿ ಆಕರ್ಷಣವಿದ್ಯುತ್ಕಣಗಳಿರುವುವೆಂದೂ, ಭಾವನೆಗಳ ಭಾವಚಿತ್ರಗಳನ್ನು ಫೋಟೊ ತೆಗೆಯಬಹುದೆಂದೂ ಮತ್ತು ವಿದ್ಯುದಾವೇಗಕಣಗಳಿಂದ ಕೂಡಿದ ಮನುಷ್ಯನ ಬುದ್ಧಿಶಕ್ತಿಯನ್ನು ಬೆಳಕಿನ ಕಿರಣಗಳನ್ನಾಗಿ ಮಾರ್ಪಡಿಸಬಹುದೆಂದೂ ವಿಜ್ಞಾನಿಗಳು ಪ್ರಯೋಗಗಳ ಮುಖಾಂತರ ತೋರಿಸಿರುತ್ತಾರೆ. ಈರೀತಿ ವೈಜ್ಞಾನಿಕವಾಗಿ ಗುರುತಿಸಿರುವ ಶರೀರತ್ರಯವಿರಲು ಲಿಂಗತ್ರಯವಿರಲೇಬೇಕೆಂಬುದು ಶಿವಾನುಭಾವಿಗಳ ಸಿದ್ಧಾಂತ. ಸ್ಥೂಲ, ಸೂಕ್ಷ್ಮ, ಕಾರಣ, ತನುತ್ರಯಗಳು, ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗ, ಲಿಂಗತ್ರಯಗಳು, ಸೂಕ್ಷ್ಮತನುವಿಗೆ ಪ್ರಾಣಲಿಂಗವೂ, ಕಾರಣ ತನುವಿಗೆಭಾವ-ಲಿಂಗವೂ, ಸಂಬಂಧವಿರುವಂತೆ, ಸ್ಥೂಲ ತನುವಿಗೂ ಲಿಂಗಸಂಬಂಧ ಆಗತ್ಯ. ಎರಡಂಗ ಭಕ್ತನಾಗಿ, ಒಂದಂಗ ಭವಿಯಾಗಲು ಶರಣಸಮಾಜ ಒಪ್ಪುವುದಿಲ್ಲ. ಶಿವಭಾವದಿಂದ ಕಾರಣ ತನುವಿನಲ್ಲಿ ಭಾವಲಿಂಗ ಸಂಬಂಧವೂ, ಶಿವಧ್ಯಾನ ಶಿವಚಿಂತನೆಗಳಿಂದ ಸೂಕ್ಷ್ಮ ತನುವಿನಲ್ಲಿ ಪ್ರಾಣಲಿಂಗ ಸಂಬಂಧವೂ, ಸದ್ವಿನಯ ಸದಾಚಾರಗಳಿಂದ ಸ್ಥೂಲ ತನುವಿನಲ್ಲಿ ಇಷ್ಟಲಿಂಗ ಸಂಬಂಧವೂ ಗಟ್ಟಿಗೊಳ್ಳುತ್ತವೆ. ನಮ್ಮ ಸ್ಥೂಲ, ಸೂಕ್ಷ್ಮ ಕಾರಣ ತನುಗಳಲ್ಲಿ ಇಷ್ಟ-ಪ್ರಾಣ-ಭಾವ ಲಿಂಗಗಳ ಸಂಬಂಧವೇರ್ಪಟ್ಟು ಲಿಂಗ ಶರೀರಿಯಾಗುತ್ತಾನೆ. ಈರೀತಿಯ ಲಿಂಗ-ಅಂಗ ಸಹಯೋಗವೇ ಲಿಂಗಾಂಗಯೋಗ. ಲಿಂಗ ಅಂಗ ಸಮರಸವೇ ಲಿಂಗಾಂಗ ಸಾಮರಸ್ಯ. ಹೀಗೆ ಲಿಂಗಾಂಗ ಸಾಮರಸ್ಯಕ್ಕೆ ಕಾರಣವಾಗುವ ಇಷ್ಟಲಿಂಗವನ್ನು ಸಾಧಕನು ಗುರುವಿನಿಂದ, ಗುರುವಿನ ಹಸ್ತ-ಮಸ್ತಕ ಸಂಯೋಗದಿಂದ ಪಡೆಯಬೇಕು.

ಇಷ್ಟಲಿಂಗ ರಚನೆಗೆ ಶಿಲೆಯನ್ನು ಉಪಯೋಗಿಸುತ್ತಾರೆ. ಸ್ಪಟಿಕ, ಶೈಲಜ, ಬಾಣ, ಶ್ರೀಶೈಲ, ಚಂದ್ರಕಾಂತ ಮತ್ತು ಸೂರ್ಯಕಾಂತ ಶಿಲೆಗಳು ಉತ್ತಮವಾದವು. ಈ ಶಿಲೆಗಳು ಭೌತಿಕ ಶಾಸ್ತ್ರದ ದೃಷ್ಟಿಯಿಂದ ಮಹತ್ವದ ಶಕ್ತಿಯುಳ್ಳದ್ದಾಗಿವೆ. ಆಯಸ್ಕಾಂತದಂತೆ, ಸೂರ್ಯಕಾಂತ ಮತ್ತು ಚಂದ್ರಕಾಂತ ಶಿಲೆಗಳು ಆಕರ್ಷಣ ಮತ್ತು ಪ್ರಕಾಶನಾದಿ ಶಕ್ತಿಯನ್ನು ಸ್ವಾಭಾವಿಕವಾಗಿ ಪಡೆದಿವೆ. ಇಂತಹ ಶ್ರೇಷ್ಠನಾದ ಶಿಲೆಯನ್ನು ಪಾರಾದಿ ಪಂಚಸೂತ್ರ ಪ್ರಮಾಣಕ್ಕೆ ಅನುಗುಣವಾಗಿ ಕಡೆದು ಶಿವಲಿಂಗ

ವನ್ನು ಮಾಡುತ್ತಾರೆ. ಈ ಶಿವಲಿಂಗವು ಹೃದಯದ ಅವಯವಗಳನ್ನೇ ಹೋಲುತ್ತದೆ. ಶ್ರೀ ಗುರುಮೂರ್ತಿಯು ಇದರ ಪ್ರಾಣ ಪ್ರತಿಷ್ಠೆಯ ಸಮಯಕ್ಕೆ ಮಾಡುವ ನಾನಾ ವಿಧವಾದ ಪಂಚಾಮೃತಾದಿ ಅಭಿಷೇಕಗಳ ಸಂಸ್ಕಾರಗಳಿಂದ ಶಿಲೆಯು ಶಿಲಾತ್ವವನ್ನು ಬಿಟ್ಟು ಶಿವಭಾವವನ್ನು ಹೊಂದುತ್ತದೆ. ಎಂದರೆ ಶಿಲೆಯು ಸಂಶೋಧನೆಯಿಂದ ಅಮೃತೀಕರಣವಾಗಿ ಆದರಿಂದ ಅನೇಕ ಉತ್ತಮ ಭೌತಿಕಫಲಗಳು ದೊರೆಯುವುದಕ್ಕೆ ಕಾರಣವಾಗುತ್ತದೆ.

ತಾರಾದಿ ಪಂಚ ಆಕೃತಿಗಳನ್ನು ಹೊಂದಿದ ಶಿಲಾಮಯವಾದ ಇಷ್ಟಲಿಂಗವು ಹೃದಯ ಕೋಶದಲ್ಲಿರುವ ಅದೇ ಆಕಾರದ ಪಂಚ ಅವಯವಗಳ ಆಕಾರವನ್ನು ಹೊಂದಿದ್ದರೂ ಆದು ಸಂಪೂರ್ಣ ಹೃದಯದ ಬಾಹ್ಯ ಸ್ವರೂಪವನ್ನು ತಳೆದಂತಾಗಲಿಲ್ಲ. ಆದಕ್ಕಾಗಿ ವೀರಶೈವ ಶಾಸ್ತ್ರಕಾರರು ಇಷ್ಟಲಿಂಗವು ಹೃದಯದ ಸ್ವರೂಪವನ್ನು ತಳೆಯುವುದಕ್ಕೂ ಮತ್ತು "ಕಾಂತ" ಶಿಲಾಮಯವಾದ ಶಿವಲಿಂಗದಲ್ಲಿರುವ ವಿದ್ಯುದಾದಿ ಶಕ್ತಿಗಳನ್ನು ಪ್ರಚೋದಿಸುವುದಕ್ಕೂ ಪ್ರಯತ್ನಿಸಿದ್ದಾರೆ. "ಕಾಂತಿಪಡ್ರಸ" ಚಿದ್ರಸ, ಸದ್ರಸ, ಎಂಬ ಕಪ್ಪುಬಣ್ಣದ ರಾಸಾಯನಿಕ ದ್ರವ್ಯ ಸಂಯೋಗದಿಂದ ತಯಾರಿಸಿದ ಪದಾರ್ಥವನ್ನು ಇಷ್ಟಲಿಂಗದ ಮೇಲೆ ಧರಿಸುತ್ತಾರೆ. ಶಾಸ್ತ್ರೀಯವಾಗಿ ಕಾಂತಿಧರಿಸಿದ ಇಷ್ಟಲಿಂಗವು ಥಳ ಥಳ ಹೊಳೆಯುತ್ತಾ ಹೃದಯಕೋಶವನ್ನು ಸಂಪೂರ್ಣವಾಗಿ ಹೋಲುತ್ತದೆ. ಕಾಂತಿಯನ್ನು ಧರಿಸುವಾಗ ಚೂಪಾಗಿರುವ ಲಿಂಗಶಿರ ಮತ್ತು ಲಿಂಗ ಗೋಮುಖಗಳ ಸ್ಥಳದಲ್ಲಿ ರಂಧ್ರಬಿಟ್ಟು ಉಳಿದ ಎಲ್ಲ ಭಾಗಕ್ಕೂ ಕಾಂತಿ ಆವೃತವಾಗಿ ರುತ್ತದೆ. ಕಾಂತಿಧರಿಸಿದ ಇಷ್ಟಲಿಂಗವು ಶುಷ್ಕವಿದ್ಯುತ್‌ಕೋಶದಗುಣವನ್ನು ಹೊಂದಿರುತ್ತದೆ.

ಇಷ್ಟಲಿಂಗಕ್ಕೆ ಧರಿಸುವ ಕಾಂತಿ ನಿರ್ಮಾಣವು ಭೌತಿಕ ವಿಜ್ಞಾನದಿಂದ ಕೂಡಿದೆ. ಕಾಂತಿ ತಯಾರಿಕೆಯಲ್ಲಿ ಗೇರು (ಎಣ್ಣೆ) ಸಾರ, ಕರ್ಪೂರ ಕಾಟಿಗೆ, ಕರ್ಪೂರತೈಲ, ರಾಳ ಮತ್ತು ಮೇಣಗಳು ಸೇರಿಗುತ್ತವೆ. ಇದನ್ನು ಸಿದ್ಧಮಾಡುವವರ ಅನುಭವ ಮತ್ತು ಪದಾರ್ಥ ಸಂಯೋಜನೆಯಲ್ಲಿ ಇರುವ ಜಾಣ್ಮೆಗಳಿಂದ ಕಾಂತಿಯು ಉತ್ತಮ ಮಧ್ಯಮ, ಕನಿಷ್ಠತೆಯ ದರ್ಜೆಯನ್ನು ಪಡೆಯುತ್ತದೆ ಪ್ರಕೃತದಲ್ಲಿ ಸಿದ್ಧಮಾಡು ತ್ತಿರುವ ಕಾಂತಿಯಲ್ಲಿ ವಿದ್ಯುದುತ್ಪಾದಕಶಕ್ತಿ ಮತ್ತು ಪದಾರ್ಥಾಕರ್ಷಣ ಶಕ್ತಿ ಇರುತ್ತವೆ.

ಕಾಂತಿನಿರ್ಮಾಣದಲ್ಲಿ ಪ್ರಧಾನ ಪದಾರ್ಥವಾಗಿರುವ ಗೇರುಬೀಜವು ದೈವಿಕ ಸೃಷ್ಟಿ ಯಲ್ಲಿಯೇ ಹೃದಯಸಾದೃಶ್ಯವನ್ನು ಹೊಂದಿದೆ. ಇಂಗ್ಲೀಷಿನಲ್ಲಿ ಗೇರಿಗೂ ಮತ್ತು ಹೃದಯಕ್ಕೂ ಇರುವ ನಾಮಸಾದೃಶ್ಯವೂ ಸಮಾನವಾಗಿದೆ. ಗೇರಿಗೆ ಇಂಗ್ಲೀಷಿನಲ್ಲಿ 'ಅನಾಕಾರ್ಡಿಯಂ' (Anacardium) ಎಂಬ ಹೆಸರಿದೆ. ಹೃದಯಕ್ಕೆ 'ಪೆರಿಕಾರ್ಡಿಯಂ' (Pericardium) ಎಂಬಹೆಸರಿದೆ. ಇವೆರಡರಲ್ಲಿಯೂ ಸ್ವಾಭಾ-

ವಿಕವಾಗಿ ಶಕ್ತಿ (energy or force) ಇದೆ. ಈ ಶಕ್ತಿಯ ರಹಸ್ಯವನ್ನು ಭೇದಿಸಿಯೇ, ಗೇರುಬೀಜದ ಸಾರವನ್ನು ಇಷ್ಟಲಿಂಗಕ್ಕೆ ಧರಿಸುವ ಕಾಂತಿಯಲ್ಲಿ ಸಮನ್ವಯಗೊಳಿಸುವ ಸಂಶೋಧನೆಯನ್ನು ಯಾರೋ ಮಹಾತ್ಮ (ವಿಜ್ಞಾನಿ) ಜಗತ್ತಿಗೆ ಪ್ರಕಟಿಸಿರಬೇಕು. ಗೇರುವೃಕ್ಷಕ್ಕೆ ಸಂಸ್ಕೃತದಲ್ಲಿ 'ವೀರ ವೃಕ್ಷ' 'ಅಗ್ನಿಮುಖಿ' 'ಭಲ್ಲಾತಕೀ' ಮುಂತಾದ ಹೆಸರುಗಳಿವೆ. ಮಹತ್ಸಾಧಕರ, ಸಂಶೋಧಕರ ಸಾಧನೆಗಳನ್ನು ಅವರವರ ಹೆಸರಿನಿಂದಲೇ ಕರೆಯುವಂತೆ, "ವೀರ"ನೆಂಬ ದಿವ್ಯಜ್ಞಾನಿಯ ಹೆಸರೇ 'ವೀರವೃಕ್ಷ'ಕ್ಕೆ ಬಂದಿರುವುದು ಅಸಹಜವೇನಲ್ಲ.

ಕಾಂತಿಯಿಂದ ಆವೃತವಾಗಿ ಹೃದಯ ಆಕಾರ ತಳೆದ ಇಷ್ಟಲಿಂಗವು ಶಿವದೀಕ್ಷೆಯಲ್ಲಿ ವಿದ್ಯುಕ್ತವಾದ ಸಂಸ್ಕಾರಗಳಿಂದ ಪ್ರಾಣಪ್ರತಿಷ್ಠೆಮಾಡಲ್ಪಟ್ಟು ಮಾನವನ ಹೃದಯ, ಕಂಠ, ತೋಳು ಅಥವಾ ಶಿರಸ್ಸುಗಳಲ್ಲೊಂದುಕಡೆ ಧಾರಣೆ ಮಾಡಲ್ಪಡುತ್ತದೆ. ಸದಾಕಾಲವೂ ಶರೀರದಮೇಲೆ ಧಾರಣೆಮಾಡಿರುವ ಇಷ್ಟಲಿಂಗವನ್ನು ಶರಣವಾಣಿಯಂತೆ ಬೆಳಿಗ್ಗೆ, ಮಧ್ಯಾಹ್ನ, ಸಾಯಂಕಾಲಗಳಲ್ಲಿಯಾಗಲಿ, ದಿನಕ್ಕೆ ಎರಡುಸಲವಾಗಲಿ ಇಲ್ಲವೆ ಒಮ್ಮೆಯಾದರೂ ಶುಚಿರ್ಭೂತನಾಗಿ, ವಾಮಹಸ್ತಪೀಠದಲ್ಲಿರಿಸಿ ಷಟ್‌ಸ್ಥಲ ಪೂಜಾವಿದ್ಯುಕ್ತವಾಗಿ ಅರ್ಚಿಸಿ ಅನುಸಂಧಾನಮಾಡಬೇಕಾದುದು ಶರಣಸಮಾಜದ ಪ್ರತಿಯೊಬ್ಬರ ಕರ್ತವ್ಯವಾಗಿದೆ.

ಲಿಂಗಪೂಜೆಮಾಡುವುದಕ್ಕೆ ಎಲ್ಲ ಸ್ಥಳಗಳಿಗಿಂತಲೂ ಹಸ್ತಪೀಠವೇ ಸರ್ವೋತ್ತಮವಾದುದು. ಮಾನವಹೃದಯವು ಅವನವನ ಮುಷ್ಟಿಪ್ರಮಾಣದಷ್ಟಿದೆಯೆಂದು ವಿಜ್ಞಾನ ತಿಳಿಸುತ್ತದೆ. ಹೃದಯಕಮಲವನ್ನೂ ಹೋಲುವ ಇಷ್ಟಲಿಂಗವನ್ನು ಪೂಜಿಸುವುದಕ್ಕೆ ಹೃದಯಾಕಾರವನ್ನು ತಳೆದ ಕರಕಮಲವೇ ಶ್ರೇಷ್ಠವೆಂಬುದು ಇದರಿಂದ ವ್ಯಕ್ತವಾಗುತ್ತದೆ. ನಾವು ಎಡಹಸ್ತದ ಮಣಿಬಂಧದಿಂದ ಮಧ್ಯದ ಬೆರಳಿನವರೆಗಿರುವ ಧನರೇಖೆಯನ್ನು ನಾಲ್ಕು ಬೆರಳುಗಳ ಕೆಳಗೆ ಅಡ್ಡವಾಗಿರುವ ಆಯುಷ್ಯರೇಖೆಯಿಂದ ವಿಭಜಿಸಿದರೆ ಅಧಿಕ ಆಕಾರದ + ನಾಲ್ಕು ಭಾಗಗಳು ದೊರೆಯುತ್ತವೆ. ಮೇಲಿನ ಎರಡುಭಾಗಗಳು ಹೃದಯದ ಬಲಹೃತ್ಕರಣ ಮತ್ತು ಎಡಹೃತ್ಕಕ್ಷಿಗಳನ್ನೂ ಹೋಲುತ್ತವೆ. ಅಂಗುಷ್ಟವೇ ಅಯೋರ್ಟ್ ಶುದ್ಧರಕ್ತನಾಳ. ಉಳಿದ ಬೆರಳುಗಳು ಇತರ ರಕ್ತನಾಳಗಳು, ಹೃದಯದ ಕವಾಟಗಳು, ಈ ಎಲ್ಲ ಸಾದೃಶ್ಯಗಳು ಹೃದಯದ ಪ್ರತಿಬಿಂಬ ಹಸ್ತ.

ಇಷ್ಟಲಿಂಗವನ್ನು ಎಡಹಸ್ತ, ಹೆಬ್ಬೆರಳಿನಕಡೆಗೆ ಗೋಮುಖ ಮಾಡಿ ಉಂಗುರದ ಬೆರಳಿನಿಂದ ಲಿಂಗಶಿರ (ಚೂಪಾದಭಾಗ) ಹೆಬ್ಬೆರಳಿನಿಂದ ಲಿಂಗಗೋಮುಖಗಳನ್ನು ಸ್ಪರ್ಶಿಸಿ ಪೂಜೆಮಾಡಬೇಕು. ಶಿವಪೂಜಾವಿಧಿಯಂತೆ ಪೂಜೆಮಾಡಿದ ಮೇಲೆ ಶಾಂಭವಿ ಮುದ್ರೆಯಿಂದ ತದೇಕಚಿತ್ತದಿಂದ ನಿರೀಕ್ಷಿಸಬೇಕು. ವಾಮಹಸ್ತದಲ್ಲಿರುವ ಇಷ್ಟಲಿಂಗ

ವನ್ನು ದೃಷ್ಟಿಗೆ ಹನ್ನೆರಡರಿಂದ ಹದಿನಾರು ಅಂಗುಲ ಪರಿಮಾಣದಲ್ಲಿರಿಸಿ ನೆಟ್ಟದೃಷ್ಟಿಯಿಂದ ನಿರೀಕ್ಷಿಸುತ್ತಾ ಅನುಸಂಧಾನಪೂರ್ವಕ ಶಿವ ಪಂಚಾಕ್ಷರಿಯನ್ನು ಜಪಿಸಬೇಕು. ಈ ರೀತಿಯ ಲಿಂಗಾನುಸಂಧಾನವು ಧ್ಯಾನ ಮತ್ತು ಯೋಗಗಳಿಂದ ಕೂಡಿ ತ್ರಾಟಕ ಯೋಗವೆನಿಸುವುದು. ಈ ಯೋಗವು ಸಾಧಕನ ಸಾಧನೆ ಮತ್ತು ಸಂಸ್ಕಾರಗಳಿಂದ ಸಾಧ್ಯವಾಗುವುದು.

ಲಿಂಗಶಿಲೆಯಲ್ಲಿ ಕಾಂತತ್ವವೂ, ಲಿಂಗದಕಾಂತಿಯಲ್ಲಿ ವಿದ್ಯುದುತ್ಪಾದನಾಶಕ್ತಿಯೂ ಇರುವುದೆಂಬುದನ್ನು ಈ ಮೊದಲೇ ತಿಳಿಯಲಾಗಿದೆ. ಪೂಜಾಮಂದಿರದಲ್ಲಿ ಬೆಳಗುವ ಜ್ಯೋತಿಯಬೆಳಕು ಲಿಂಗದ ಕಾಂತಿಯ ಮೇಲೆ ಬಿದ್ದಾಗ ಕಾಣುವ ಪ್ರಕಾಶದಲ್ಲಿ, ನೆಟ್ಟದೃಷ್ಟಿಯಿಟ್ಟಾಗ ವಿದ್ಯುತ್‌ಕಣ ಪುಂಜದಿಂದ ಕೂಡಿದ ಸಾಧಕನ ದೃಷ್ಟಿಪಾತದಿಂದ ಇಷ್ಟಲಿಂಗದಲ್ಲಿ ವಿಲಕ್ಷಣ ಪರಿಣಾಮವುಂಟಾಗುವುದು. ಶುಷ್ಕವಿದ್ಯುತ್‌ಕೋಶದ ಗುಣವನ್ನು ಹೊಂದಿರುವ ಇಷ್ಟಲಿಂಗದಲ್ಲಿನ ವಿದ್ಯುತ್ ಉತ್ತೇಜನಗೊಂಡು ವಿದ್ಯುತ್ ಗುಣಪರಿಣಾಮ ಉಂಟುಮಾಡುತ್ತದೆ. ಕಾಂತಿ ಆವರಿಸದೇ ಇರುವ ಲಿಂಗದ ಗೋಮುಖ ಭಾಗವು ಧನಧ್ರುವವಾಗಿ (Positive pole) ಚೂಪಾದಶಿರಭಾಗವು ಋಣಧ್ರುವವಾಗಿ (Negativepole) ವರ್ತಿಸುತ್ತದೆ. ಆ ಎರಡು ಭಾಗಗಳಿಗೂ ಸೋಂಕಿರುವ ಹೆಬ್ಬೆರಳು ಮತ್ತು ಉಂಗುರದಬೆರಳುಗಳು ಕ್ಲಿಪ್ (clip) (ಧನ, ಋಣಧ್ರುವಗಳನ್ನು ಕೂಡಿಸುವ ಸಾಧನ) ಆಗಿ ಕೆಲಸ ಮಾಡುತ್ತವೆ. ಇಷ್ಟಲಿಂಗದಲ್ಲಿ ಉತ್ತೇಜನಗೊಂಡ ವಿದ್ಯುತ್ ನರನಾಡಿಗಳ ಮೂಲಕ ಹೃದಯ ಪ್ರವೇಶಿಸಿ ಪ್ರಾಣಲಿಂಗವನ್ನು ಚೇತನಗೊಳಿಸುತ್ತದೆ. ತನ್ಮೂಲಕ ಸಹಸ್ರಾರದಲ್ಲಿರುವ ಭಾವಲಿಂಗವನ್ನು ಪ್ರಭುದ್ಧಗೊಳಿಸಿ, ಸಾಧಕನು ಐಕ್ಯಾವಸ್ಥೆಯಲ್ಲಿ ತಲ್ಲೀನನಾಗಿ ಅತೀಂದ್ರಿಯಾನುಭವವನ್ನು ಪಡೆಯುವಂತೆ ಮಾಡುತ್ತದೆ.

ಈ ರೀತಿಯಾಗಿ, ವಿಶ್ವಾತ್ಮನನ್ನು, ಹೃದಯಾತ್ಮನನ್ನು ಅದೇ ಆಕಾರದಲ್ಲಿ ವೈಜ್ಞಾನಿಕವಾಗಿ ರೂಪಿಸಿ, ಅರ್ಚಿಸಿ, ಧ್ಯಾನಿಸಿ ಅನುಭವಾತ್ಮಕವಾದ ಆನಂದವನ್ನು ಲಿಂಗಾಂಗ ಸಾಮರಸ್ಯವನ್ನೂ ಪಡೆಯಬಹುದಾಗಿದೆ.

ಆದುದರಿಂದ ಇಷ್ಟ ಲಿಂಗಪೂಜೆಯು ಪ್ರತಿಯೊಬ್ಬ ಮಾನವನಿಗೂ ಅತ್ಯಾವಶ್ಯಕವಾಗಿದೆ. ಅಂತಹುದರಲ್ಲಿ ಶರಣ ಸಮಾಜಬಾಂಧವರು, ಅದರಲ್ಲಿಯೂ ಯುವಕರು ತಮ್ಮ ಆಲಸ್ಯಭಾವನೆಯಿಂದ ವ್ಯಕ್ತಿತ್ವ ವಿಕಾಸಕ್ಕೆ, ಸದ್ಗುಣಪ್ರಕಾಶಕ್ಕೆ ಅಂತಃಪ್ರೇರಣೆ ನೀಡುವ ಇಷ್ಟಲಿಂಗಧಾರಣೆಯನ್ನು ಕಡೆಗಣಿಸುವುದು ಅರಿವಿನ ಅಭಾವವಲ್ಲದೆಮತ್ತೇನು?

ಆಧಾರ 1. ಶ್ರೀ ಜಿ.ಟಿ. ಅಕ್ಕುಲಯ್ಯ ದೀಕ್ಷಿತರ "ಇಷ್ಟಲಿಂಗ ವಿಜ್ಞಾನ"
(ಎಂ. ಜಿ. ನಂಜುಂಡಾರಾಧ್ಯರು)

2. "ಸಿದ್ಧಗಂಗಾ ಶ್ರೀ"

# ಕಡಿಮೆ ಹಣ ಖರ್ಚು ಮಾಡಿ

# ಹೆಚ್ಚು ಬಟ್ಟೆಗಳನ್ನು ಒಗೆಯಿರಿ.

- ಇದೀಗ ನೀವು ಸಾಬೂನಿಗೆ ಕಡಿಮೆ ಹಣ ಖರ್ಚು ಮಾಡಿ ಹೆಚ್ಚು ಬಟ್ಟೆಗಳನ್ನು ಒಗೆಯಬಹುದು.
- ಕಸ್ತೂರಿ ನೀಲಂ ಹಾಗೂ ಕಸ್ತೂರಿ ಬಾರ್ ಸೋಪ್ ಉಪಯೋಗಿಸುವುದರಿಂದ ಇದು ಸಾಧ್ಯ.
- ಕಸ್ತೂರಿ ಸಾಬೂನುಗಳು ಬಹು ಉಳಿತಾಯಕರವಾದುದು ಅಲ್ಲದೆ, ಪ್ರತಿ ಬಾರ್ ಸೋಪಿನಿಂದಲೂ ಹೆಚ್ಚು ಬಾರಿ ಒಗೆಯಲು ಸಾಧ್ಯವಾಗುತ್ತದೆ.
- ಇದರಲ್ಲಿ ವಿಶೇಷ ಡಿಟರ್ಜೆಂಟುಗಳು ಮಿಶ್ರಿತವಾಗಿರುವುದರಿಂದ ನಿಮ್ಮ ಉಡುಪುಗಳು ಬಿಳುಪಿಗಿಂತಲೂ ಅತ್ಯಧಿಕ ಉಜ್ವಲವಾಗಿರುತ್ತವೆ.

**ಕಸ್ತೂರಿ ಸಾಬೂನುಗಳನ್ನು ಇಂದೇ ಉಪಯೋಗಿಸಿರಿ**

| | |
|---|---|
| **'ಕಸ್ತೂರಿ'** | **'ಕಸ್ತೂರಿ'** |
| **ಬಾರ್ ಸೋಪ್** | **ನೀಲಂ ಬಾರ್ ಸೋಪ್** |

ತಯಾರಕರು :

## ರಾಮಕೃಷ್ಣ ಆಯಿಲ್ ಮಿಲ್, ತುಮಕೂರು

# ಬಸವ ತತ್ತ್ವ ರತ್ನಾಕರ.... 8

(ವಚನಕಾವ್ಯಸುಧಾಸಾಗರ)

ಶ್ರೀ ಮೋಟಗಿ ಮಲ್ಲಿಕಾರ್ಜುನ 'ಕನ್ನಡ ಕವಿ ಕಾಳಿದಾಸ", ಅಥಣಿ, (ಬೆಳಗಾವಿಜಿಲ್ಲೆ.)

## "ರಹಸ್ಯರತ್ನ" ಮರುಳು ಶಂಕರದೇವರು. [75]

"ಸಾವಿರಕ್ಕೊಬ್ಬ ಸತ್ಯವಂತ,
ಲಕ್ಷಕ್ಕೊಬ್ಬ ಭಕ್ತ, ಕೋಟಿಗೊಬ್ಬ ಶರಣ,
ಶತಕೋಟಿಗೊಬ್ಬ 'ರಹಸ್ಯಜೀವಿ' ಮಹಾಶರಣ,
ಇಂತಪ್ಪ ಮಹಾಶರಣ ರಹಸ್ಯರತ್ನ ಮರುಳುಶಂಕರದೇವರು ನೋಡಾ.
ಭಕ್ತಿ ಭಂಡಾರಿ ಬಸವಣ್ಣನಾ ಮಹಾಮನೆಯ
ಅಂಗಳದ ಕುಳಿಯೊಳಿರ್ದ ಒಕ್ಕ ಮಿಕ್ಕ ಶರಣರಾ-
ಪ್ರಸಾದವಂ ಸವಿದು-ಹನ್ನೆರಡುವರುಷ ಪರಿಯಂತ
ರಹಸ್ಯವಾಗಿರ್ದ ಮಹಾಶರಣ ಮರುಳು ಶಂಕರದೇವರು
ನಿಜಪ್ರಸಾದಿ ಕಾಣಾ, ಶ್ರೀಶೈಲಮಲ್ಲಿಕಾರ್ಜುನ."

## ಯಾವಕಾಯಕವೂ ಕೀಳಲ್ಲ. [76]

"ಹಾರುವನಾಗಲಿ ಹೊಲೆಯನಾಗಲಿ
ಬೇಡುವ ಜಂಗಮನಾಗಲಿ ಅಭಂಗಗೀತ ಪಾಡುವನಾಗಲಿ
ಮಾದಾರನಾಗಲಿ ಮೇದಾರನಾಗಲಿ
ಕಂಬಾರನಾಗಲಿ ಕುಂಬಾರನಾಗಲಿ
ಸಿಂಪಿಗನಾಗಲಿ ಕಲ್ಲುಕುಟಿಗನಾಗಲಿ
ಗಾಣಿಗನಾಗಲಿ ಹಡಪದನಾಗಲಿ

ಬೇಡುವನಾಗಲಿ ಕನ್ನಕೊರೆಯುವನಾಗಲಿ
ಡೋಹರನಾಗಲಿ ಸಮಗಾರನಾಗಲಿ
ಅಂಬಿಗನಾಗಲಿ ಅಂಬುಧಿ ಮುಳುಗೇಳುವನಾಗಲಿ
ಅಂಬರದಿ ಚರಿಸುವನಾಗಲಿ ಅಗ್ನಿಹಾಯುವನಾಗಲಿ
ಅಖಂಡ ಪೃಥ್ವಿ ಸುತ್ತುವನಾಗಲಿ ಚೆಂಡವನಾಡುವನಾಗಲಿ
ಸರ್ಕಸ್ಸು ಗೆಯ್ಯುವನಾಗಲಿ ಜಾದುಗಾರನಾಗಲಿ

ದುಂಡಗಿನ ಮೈಮಾರುವಳಾಗಲಿ ಖಂಡ ವಿಕ್ರಯಗಾರನಾಗಲಿ
ಹೆಂಡ ಮಾರುವನಾಗಲಿ ದಂಡ ಕೇಳುವನಾಗಲಿ
ಜ್ಯೋತಿಷಿಯಾಗಲಿ ಜೋಗಿಯಾಗಲಿ
ಮಂತ್ರಿಯಾಗಲಿ ಯಂತ್ರವಾಹಕನಾಗಲಿ
ಪ್ರವಚನ ಹೇಳುವನಾಗಲಿ ಸಿನೇಮತೋರಿಸುವನಾಗಲಿ
ನ್ಯಾಯಮೂರ್ತಿಯಾಗಲಿ ವಕೀಲಿವೃತಿಯಾಗಲಿ

ಕೀರ್ತನ ಕಾರನಾಗಲಿ ಪುರಾಣ ಹೇಳುವನಾಗಲಿ
ವ್ಯಾಪಾರಿಯಾಗಲಿ ಒಕ್ಕಲಿಗನಾಗಲಿ
ನುಲಿಕೆಸುತ್ತುವನಾಗಲಿ ಓಲೆಯಕಾರನಾಗಲಿ
ಬಜಂತ್ರಿಯಾಗಲಿ ಡೊಳ್ಳು ಹೊಡೆಯುವನಾಗಲಿ
ಮಂತ್ರಗಾರನಾಗಲಿ ತಂತ್ರಗಾರನಾಗಲಿ
ಅಚ್ಚು ಹಾಕುವನಾಗಲಿ ರಜಕನಾಗಲಿ

ವೈಜ್ಞಾನಿಕನಾಗಲಿ ಸುಜ್ಞಾನ ದರ್ಶಕನಾಗಲಿ
ಕಂಚುಗಾರನಾಗಲಿ ಅಕ್ಕಸಾಲಿಗನಾಗಲಿ
ತಾಳ ಹಾಕುವನಾಗಲಿ ಹಲಗೆ-ಕರಡಿ ಬಾರಿಸುವನಾಗಲಿ
ಹಾವನಾಡಿಸುವನಾಗಲಿ ಡೊಂಬರಾಟವಾಡುವನಾಗಲಿ
ವೇಶ್ಯೆಯಾಗಲಿ ನಾಟ್ಯಗಾನ ಸುಂದರಿಯಾಗಲಿ
ನಾಟಕವಾಡುವನಾಗಲಿ ತಮಾಷಾ ಮಾಡುವನಾಗಲಿ

ಗಾಯಕನಾಗಲಿ ಗಾನಕೋಕಿಲೆಯಾಗಲಿ
ತಂಬೂರಿ ಹಿಡಿದು ಹಾಡುವನಾಗಲಿ ಕಂಬ ಕೊರೆವ ಬಡಿಗನಾಗಲಿ
ನಾದ ಮೃದಂಗ ನುಡಿಸುವನಾಗಲಿ ಕೊಳಲು ಊದುವನಾಗಲಿ
ಗುರುವಾಗಲಿ ಶಿಷ್ಯನಾಗಲಿ
ಕಲಾಕಾರನಾಗಲಿ ಕವಿಯಾಗಲಿ
ಶಿಲ್ಪಿಯಾಗಲಿ ಚಿತ್ರಕಾರನಾಗಲಿ

ಸಾಹಿತಿಯಾಗಲಿ ಸಂಶೋಧಕನಾಗಲಿ
ಗಗನಯಾಗಲಿ ಪರ್ವತಾರೋಹಿಯಾಗಲಿ
ವೈದ್ಯನಾಗಲಿ ಡಾಕ್ಟರನಾಗಲಿ
ಮಹಾತ್ಮನಾಗಲಿ ಧರ್ಮಾತ್ಮನಾಗಲಿ
ದಾನಿಯಾಗಲಿ ತ್ಯಾಗಿಯಾಗಲಿ
ದೊರೆಯಾಗಲಿ ಗೊರವನಾಗಲಿ

ಇಂತಿವರೆಲ್ಲರೂ ಶಿವಜ್ಞಾನ ಶಿವಭಕ್ತಿಯುಕ್ತ ಧರ್ಮಮಾರ್ಗದಲ್ಲಿ ನಡೆದು
ಮಾಳ್ಪ ಕಾಯಕದಲ್ಲಿ ಆವುದೂ ಕೀಳಲ್ಲ ನೋಡಾ !
ವಿವಿಧ ಕಲಾಕೌಸಲ್ಯಗಳೆಲ್ಲ ಸೃಷ್ಟಿಯಮನುಜಂಗೆ
ದೇವನಿತ್ತ ವರದಾನಗಳು ಕೇಳಾ, ಶ್ರೀಶೈಲಾಮಲ್ಲಿಕಾರ್ಜುನ !"

**ವಿಶ್ವದ ಮಹಾತ್ಮರೆಲ್ಲರ ಗುರಿಯೊಂದೆ** [77]

"ವಿಶ್ವೇತಿಹಾಸವನು ಮಗುಚಿ ನೋಡುವೊಡೆ
ಈ ಭೂವಿಗೆ ಹಲವಾರು ಮಹಾತ್ಮರುದಿಸಿ ಬಂದಿಹರಾದೊಡು
ಶ್ರೀ ಬಸವಾದಿ ಪ್ರಮಥರ ಧರ್ಮ ಕಾರ್ಯಂ ಕಲ್ಯಾಣ ಕ್ರಾಂತಿ
ರಹಸ್ಯಪೂರ್ಣ ವಿಶ್ವಕಲ್ಯಾಣಕಾರಕ ಕಂಡಯ್ಯ !
ಈ ವಿವಿಧ ಮಹಾತ್ಮರೆಂದಡೆ :
ಮನು ಮುನಿಗಳು, ಋಷಿ ಮಹರ್ಷಿಗಳು,
ಮಹಾನ್‌ದ್ರಷ್ಟಾರರು, ಮತಸ್ಥಾಪನಾಚಾರ್ಯರು,
ಶಿವಶರಣರು, ಸಾಧು-ಸಂತರು, ಮಹಾಪುರುಷರು,
ಶಿವಯೋಗಿಗಳು, ಮಹಾಕವಿಗಳು,
ಪತಿವ್ರತಾ ಶಿರೋಮಣಿಗಳು, ಸಂತ-ಸಾಧ್ವೀಮಣಿಗಳು,
ಮಹಾರಹಸ್ಯ ಜೀವಿಶರಣ-ಶರಣೆಯರ್ಕಗಳು, ವೀರರಾಣಿ ರಮಣೀಮಣಿಗಳು,
ಧರ್ಮಪರಿಪಾಲಕ ರಾಜ ಮಹಾರಾಜ ಛತ್ರಪತಿಗಳು,
ಮಹಾನ್ ಅದ್ಭುತ ಕಲಾವಿದರು, ಗಾಯನ ನಾಟ್ಯಾ ಚಾರ್ಯರು,
ಧರ್ಮಶಾಸ್ತ್ರ ಕೋವಿದರು, ಮಹಾಶಿಲ್ಪ ಅಗಾಧ-ಸುತ್ತು ಕಲ್ಯಾಣ ಚಿತ್ರ
ಭಕ್ತಿಪ್ರವೀಣರು,
ತ್ಯಾಗವೀರರು, ಸಮಾಜಸುಧಾರಕರು, ದಾನವೀರರು, ಭಕ್ತಿಸಂಪನ್ನರು,
ಧರ್ಮ ರಕ್ಷಕರು, ನ್ಯಾಯಪರಿಪಾಲಕರು, ದಾಸವರ್ಯರು, ನಾಥಪಂಥ
ಸಿದ್ಧಪುರುಷರು,
ಪ್ರಾಂಜಲ ಭಾವನೆಯಾ ಸತ್ಯಶುದ್ಧ ಚರಿತಾತ್ಮರು, ಸಿದ್ಧಪ್ರಸಿದ್ಧ ಸತ್ಪುರುಷರು.
ಮಹಿಮಾನ್ವಿತ ಮಹಂತರು,

ಇಂತೀ ವಿವಿಧ ಮಹಾತ್ಮರೆಲ್ಲರ ತತ್ತ್ವಾನುಭವಗಳು ಬೇರೆ ಬೇರೆಯಾಗಿರ್ದಡು
ಇವರ ಹೃದಯಗಹೆಯೊಳಿಪ್ಪ ಪರಮಾತ್ಮ ಶಕ್ತಿ ಒಂದೊಂದು ಬಗೆಯಾಗಿ
ಹೊರ ಹೊಮ್ಮಿಬಂದಿರಲು, ಆಯಾಯ ಶಕ್ತಿಯೊಡಗೂಡಿ ಅವರವರು-
ತಮ್ಮ ತಮ್ಮ ತೆರನಂತೆ ಆದಷ್ಟು ಲೋಕ ಕಲ್ಯಾಣಗೆಯ್ದಿಹರು ಕಂಡಯ್ಯ!
ಹಲವಾರು ಧರ್ಮನದಿಗಳು ಹರಿಯುತಿರ್ದೊಡು ಅವೆಲ್ಲ ಕೂಡುವುದು
ಶಿವಧರ್ಮಸಮುದ್ರವಲ್ತೆ ?

ಇಂತೀ ಮಹಾಪುರುಷರೆಲ್ಲರ ಅನುಭವ ಆಚರಣೆ ವಿಚಾರ ಪ್ರಣಾಲಿ
ವ್ಯಾಖ್ಯಾನಗಳು ಬೇರೆ ಬೇರೆಯಾಗಿರ್ದೊಡು,
ಇವರು ನಡೆವ ದಾರಿಗಳು ಕೊಂಚ ಕೊಂಚ ಭಿನ್ನವಾದೊಡು.
ಇವರು ಬೋಧಿಸುವ ಧರ್ಮತತ್ತ್ವಗಳಲ್ಲಿ ಒಂದಕ್ಕೊಂದು
ಸಾದೃಶ್ಯ ಸಾಮೀಪ್ಯ ತೋರದೆ ವ್ಯತ್ಯಾಸವಾಗುತಿರ್ದೊಡು,
ಇವರೆಲ್ಲರ ಧ್ಯೇಯ ಹಾಗೂ ಸಾಧನೆಯ ಗುರಿ 'ಭಗವತ್ ಸಾಕ್ಷಾತ್ಕಾರ'ವೇ
ಆಗಿಹುದೆಂಬುದನು, ವಿಶ್ವಧರ್ಮಪ್ರೇಮಿ-ವಿಶ್ವಾದರ್ಶಿ-ವಿಶ್ವಾತ್ಮಜ್ಞಾನಿ
ವಿಶ್ವಹಿತೈಷಿ-ವಿಶ್ವಹೃದಯಿ-ವಿಶ್ವಕಲ್ಯಾಣಿ-'ಧರ್ಮಜ್ಞಕವಿ'
ಮರೆಯಲಾಗದು ಕಂಡಯ್ಯ ! ಶ್ರೀಶೈಲ ಮಲ್ಲಿಕಾರ್ಜುನ !"

**ಸರ್ವ ಜೀವಿಗಳ ಆತ್ಮನೊಬ್ಬನೆ [78]**

"ಬೆಳಗುವಾ ಸೂರ್ಯನ ಕೋಟಿ ಕೋಟಿ ಪ್ರಭಾಕಿರಣಗಳು
ಬುವಿ-ಬಾನಂಗಳಲ್ಲಿ ಚಲ್ವರಿದು ಬೆಳಗುತಿರ್ಪಂತೆ
ಪರಿಪೂರ್ಣ ಪರಮಾತ್ಮನ ಅಂಶರೂಪ ಆತ್ಮಗಳೆಲ್ಲ
ಸಕಲ ಜೀವಕೋಟಿಯಲ್ಲಿ ಬೆಳಗುತಿರ್ಪವು ನೋಡಾ.
ಮಾನವ ಕುಲಕೋಟಿ ಮೊದಲಾಗಿ ಸಕಲ ಜೀವರಾಶಿಗಳಲ್ಲಿ
ಹುದುಗಿಪ್ಪ ಆತ್ಮ (ಪರಮಾತ್ಮ) ನೊಬ್ಬನೆ ನೋಡಾ.
ಇಡಿಯದರ ಬಿಡಿ, ಕಡೆಗೆ ಇಡಿಯನೆ ಕೂಡುವುದು ಕಾಣಾ, ಶ್ರೀ ಶೈಲಮಲ್ಲಿಕಾಜುನ."

**ಪ್ರಣವದುತ್ಪತ್ತಿ [79]**

"ಅನಾದಿ ಶರಣ ಬಸವಣ್ಣನಾ ಹೃತ್ಕಮಲದೊಳ್ ರಜಿಪಾ
ಪರಬ್ರಹ್ಮದಿಂದ ಓಂಕಾರ ಪ್ರಣವ ದುತ್ಪತ್ತಿಯಾಯಿತ್ತು.
ಆ ಓಂಕಾರವೇ ಮಹಾಲಿಂಗ (ಸದಾಶಿವ) ರೂಪದಳೆದಿತ್ತು ನೋಡಾ.
ಈ ಮಹಾಲಿಂಗಮಯ ಸದಾಶಿವನಿಂದ ಶಿವನಾದ.
ಈ ಶಿವನಿಂದ ರುದ್ರನಾದ, ಈ ರುದ್ರದೇವನಿಂದ.
ಸಕಲ ಬಹ್ಮಾಂಡಗಳುತ್ಪತ್ತಿಯಾದುವು ನೋಡಾ.

ಪಾದತ್ರಯಗಳಿಂದ ಪೆಸಿಶೋಭಿಸುವ ರುದ್ರದೇವನಿಂದಲೇ
ಬ್ರಹ್ಮ-ವಿಷ್ಣಾದಿಕೆಳು ಹುಟ್ಟಿದರು ನೋಡಾ.
ಅಂದಿನಿಂದಲೆ ಸೃಷ್ಟಿ-ಸ್ಥಿತಿ-ಲಯಂಗಳುಂಟಾದವು ನೋಡಾ.
ಋಗ್ವೇದ 'ಯಜರ್ವೇದ, ಸಾಮವೇದಂಗಳು
ರುದ್ರದೇವನಿಂದಲೆ ಜನಿಸಿದವು ನೋಡಾ.
'ತ್ರಿಚರಣ' ಭೂಷಣನಾದ ರುದ್ರದೇವನು
ದೇವದೇವೋತ್ತಮನೆನಿಸಿರ್ದು
ನಿಖಿಳ ವಿಶ್ವಮಂ ವ್ಯಾಪಿಸಿಹನು ನೋಡಾ
'ತ್ರಿಭುವನಂ'ಗಳು 'ತ್ರಿಕಾಲ'ದಲ್ಲಿಯೂ
ರುದ್ರಸ್ವರೂಪವಾಗಿಪ್ಪುವು ನೋಡಾ
ಇಂತಪ್ಪ ಮಹಾಲಿಂಗ (ಸ್ವಸ್ವರೂಪಾ) ಸಾಕ್ಷಾತ್ಕಾರಕ್ಕೆ
ಬಸವ ತತ್ತ್ವಾನ್ವಿತ ಈ ಶಿವತತ್ತ್ವವೇ
ಮೂಲ ಕಾರಣವೆನಿಸಿತ್ತು ನೋಡಾ.
ಅದುವೇ ಶಕ್ತಿ-ಭಕ್ತಿಯಾಗಿ ಭಕ್ತ ಹೃದಯದೊಳ್
ಬೆಸುಗೆಯಾಗಿ ರಾಜಿಸಿ ಬೆಳಗುತ್ತೆ ನಿಂದಿತ್ತು ಕೇಳಾ, ಶ್ರೀಶೈಲಮಲ್ಲಿಕಾರ್ಜುನ

**ಬಸವಣ್ಣನ ಪ್ರಸಾದ** [80]

"ಧರೆಯು ನಿರ್ಬೀಜವಾಗಿ ನಿಂದಂದು,
ಎಮ್ಮ ಬಸವಣ್ಣನಿಂದಲೆ ಬೀಜೋತ್ಪತ್ತಿಯಾಯಿತ್ತು ನೋಡಿರಯ್ಯಾ
ಇದಕ್ಕೆ ಪ್ರಣವ, ಷಟ್‌ಸ್ಥಲಜ್ಞಾನಮೂರ್ತಿ ಚನ್ನಬಸವಣ್ಣ
ಇಂತೆಂದ ದಿವ್ಯ ವಚನವಾಣಿಯನು ಕೇಳಿರಯ್ಯಾ :
'ಅಂದೊಮ್ಮೆ ಧರೆಯುಮೇಲೆ ಬೀಜವಿಲ್ಲದಂದು
ಬಸವನೆಂಬ ಗಣೇಶ್ವರನು ಭೋಂಕರಿಸಿ ಕೆಲೆದಡೆ,
ಬೀಜ ಉತ್ಪತ್ತಿಯಾಯಿತ್ತು.
ಅದನೆ ಬಿತ್ತಿ ಅದನೆ ಬೆಳೆದು, ಅದನೆ ಅಟ್ಟಟ್ಟು
ಲಿಂಗಕೆ ಬೋನವ ಮಾಡಿ,
ನಾಗಲೋಕದ ನಾಗಗಣಂಗಳಿಗೆಯೂ ಬಸವಣ್ಣನ ಪ್ರಸಾದ;
ಮರ್ತ್ಯಲೋಕದ ಮಹಾಗಣಂಗಳಿಗೆಯೂ ಬಸವಣ್ಣನ ಪ್ರಸಾದ;
ದೇವಲೋಕದ ದೇವಗಣಂಗಳಿಗೆಯೂ ಬಸವಣ್ಣನ ಪ್ರಸಾದ;
ಎಲೆ ಕೂಡಲ ಚನ್ನಸಂಗಮದೇವಾ.
ನಿಮ್ಮಾಣೆ, ನಿಮಗೂ ಎನಗೂ ಬಸವಣ್ಣನ ಪ್ರಸಾದ;
ಇಂತು ಮೂಕಂಗಳಿಗೂ ಪ್ರಸಾದವನಿತ್ತ
ಎಮ್ಮ ಬಸವಣ್ಣನಾ ಘನ ಮಹಿಮೆಯನು ನೋಡಿರಯ್ಯಾ !
ಶ್ರೀ ಶೈಲ ಮಲ್ಲಿಕಾರ್ಜುನ."

ಲಿಂಗದಾರಣ ಚಂದ್ರಿಕೆ [81]

**ಅಷ್ಟಾವರಣ :** "ಭೂಮಿಗೆ ಅನ್ನ (ಪ್ರಸಾದ) ಬೀಜವನಿತ್ತ
ಅನಾದಿ ಬಸವಣ್ಣನೆ ಅಷ್ಟಾವರಣಂಗಳುತ್ಪತ್ತಿಗೆ ಮತ್ತೆ
ಲಿಂಗಭಕ್ತಿ ಬೀಜದ ಬೆಳವಿಗೆ-ಪ್ರತೀತಿಗೆ
ಕಾರಣವೆನೆನಿಸಿಹನು ನೋಡಾ.
ಗುರು-ಲಿಂಗ-ಜಂಗಮ, ಪಾದೋದಕ, ಪ್ರಸಾದ,
ವಿಭೂತಿ, ರುದ್ರಾಕ್ಷಿ, ಮಂತ್ರಗಳೆಂಬೀ
ಅಷ್ಟಾವರಣಂಗಳು ಎಮ್ಮ ತಂದೆ ಬಸವಣ್ಣನಿಂದಲೆ
ಬೆಳಗುರ್ಪವು ಕಾಣಾ, ಶ್ರೀಶೈಲ ಮಲ್ಲಿಕಾರ್ಜುನ."

**ಪಂಚಾಚಾರ :** "ಭೂರಿ ಭಕ್ತಿ ಭಂಡಾರಿ ಬಸವಣ್ಣ
[82] ಧಾರಿಣಿಗೆ ಲಿಂಗಭಕ್ತಿಬೀಜಂಗಳಂ ಬಿತ್ತಿ
ಅಷ್ಟಾವರಣ ಪಂಚಾಚಾರಂಗಳೆಂ ತಿಳುಪಿ
ಷಟ್‌ಸ್ಥಲ ಮಹಾ ಮಹಿಮೆಯಂ ಸಾರಿದನು ನೋಡಾ.
ಲಿಂಗಾಚಾರ, ಸಮಯಾಚಾರ, ಶಿವಚಾರ,
ಗಣಾಚಾರ, ಭೃತ್ಯಾಚಾರಗಳೆಂಬೀ ಪಂಚಾಚಾರಂಗಳು
ಅಷ್ಟಾವರಣಂಗಳು ಇವು ವೀರಶೈವ (ಲಿಂಗಾಯತ)
ಷಟ್‌ಸ್ಥಲಾಚರಣೆಯ ಮುಖ್ಯ ಲಕ್ಷಣಗಳಾಗಿಪ್ಪವುನೋಡಾ
ವೀರಶೈವ ಅರ್ಥಾತ್ ಲಿಂಗಾಯತ
ಧರ್ಮವೆಂಬುವಾ ಪೆಸರ್ವಡೆದು
ಎಮ್ಮ ಬಸವಣ್ಣನಿಂದಲೆ ಲೋಕತ್ರಯದಿ
ಬೆಳಗುತಿರ್ಪುದು ಕಾಣಾ, ಶ್ರೀಶೈಲ ಮಲ್ಲಿಕಾರ್ಜುನ."

**ಷಟ್‌ಸ್ಥಲ :** "ಅನಾದಿ ಪುರಾತನಾಗಿರ್ದ ಬಸವಣ್ಣ ತಂದೆ
[83] ತಾನುಐಕ್ಯಸ್ಥಲದಿ ಸುಖಾಂತು ಚರಿಸುತಿರ್ದೊಡು
ಲೋಕಕಲ್ಯಾಣಾರ್ಥಮಾಗಿ ಭಕ್ತಸ್ಥಲದಿ ನಿಂದಿರ್ದು
ದಿವ್ಯಭಕ್ತಿ ಭಂಡಾರಿಯೆನಿಸಿ ಬೆಳಗುತಿರ್ದ ನೋಡಾ
ಭಕ್ತ-ಮಾಹೇಶ್ವರ, ಪ್ರಸಾದಿ, ಪ್ರಾಣಲಿಂಗಿ;
ಶರಣ, ಐಕ್ಯವೆಂಬೀ ಷಟ್‌ಸ್ಥಲಂಗಳು
ಶ್ರೀ ಬಸವಾದಿ ಪ್ರಮಥರಾಚರಣೆಯಿಂದೆ
ಇಳೆಗೆ ಪ್ರಸಿದ್ಧವಡೆದು ಬೆಳಗುತಿಪ್ಪವು ನೋಡಾ.
ಶ್ರೀಶೈಲಮಲ್ಲಿಕಾರ್ಜುನ."

(ಮುಂದುವರೆಯುವುದು)

# ವಿದ್ಯಾರ್ಥಿ ಜೀವನದ ಬೆಳಕು ಸರಣಿ - ೧೪

ಬಿ. ಎಸ್. ಕೃಷ್ಣಮೂರ್ತಿ, ನಂ. 5, ಸೀತಾವಿಲಾಸರಸ್ತೆ, ಮೈಸೂರು – 500 024.

**ವಿವೇಕ :**

ವಿವೇಕವೆಂಬದು ಸಮಯೋಚಿತವಾಗಿರುವ ಬುದ್ಧಿ. ಇದನ್ನು ಉಪಯುಕ್ತ ತಿಳುವಳಿಕೆಯೆಂದು ಕರೆಯಬಹುದು. ವಿವೇಕಶಾಲಿಗಳು ಯಾವಕಾರ್ಯವನ್ನೂ ಆತುರದಿಂದ ಮಾಡರು. "ಆತುರಗಾರನಿಗೆ ಬುದ್ಧಿಮಟ್ಟ" ಎಂಬ ಗಾದೆಯೇ ಇದೆ. ಆದ್ದರಿಂದ ಯಾವ ಕಾರ್ಯವನ್ನೂ ಕೂಲಂಕುಷವಾಗಿ ಯೋಚಿಸಿ ಮಾಡುತ್ತಾರೆ.

ವಿವೇಕವಂತರು ಮುಂಬರುವ ಹಾನಿ ವೃದ್ಧಿ, ಒಳ್ಳೆಯದು ಕೆಟ್ಟದ್ದು, ಮಾನ-ಅಪಮಾನ ಇವುಗಳನ್ನು ಆಳವಾಗಿ ಚಿಂತಿಸುತ್ತಾರೆ. ಯಾವುದನ್ನೂ ಮನಸ್ಸಿನಾಳದಿಂದ ತೂಗಿ ನೋಡುವರು. ವಿವೇಕವು ಜನರಿಗೆ ಆತುರದಿಂದಾಗುವ ಅಪಾಯಗಳನ್ನು ಮುನ್ನೆಚ್ಚರಿಕೆಯ ಕ್ರಮದಿಂದ ತಡೆಯುವ ನೀತಿಯಾಗಿದೆ. ವಿವೇಕಸಾಲದಿರುವ ಕೆಲವರು ಬಿಂಕದಿಂದ ತಾವು ಪಂಡಿತರೆಂದು ಬಾಯ್ಮಾತಾಡಿ ತೋರ್ಪಡಿಸಿ, ಕೊನೆಗೆ ಮಾತು ಹೊರಡದೆ ಅವಮಾನದಿಂದ ನಾಚಿ ಕಂಗೆಡುವರು, ಜನರ ನಗೆಪಾಟಲಿಗೆ ಗುರಿಯಾಗಿ ತೊಳಲುವರು.

ಅರಿಯದಿರೆ ಚತುರೋಕ್ತಿಯನು ಬಾಯ್ದೆರೆಯದಾತನು ಜಾಣ ಎಂಬಂತೆ ಅಹಂಭಾವ ಬಿಟ್ಟು ವಿವೇಕವಂತರಾಗಬೇಕು. ವಿವೇಕವೆಂಬುದು ಪುಸ್ತಕಗಳನ್ನೋದಿದರೆ ಬರುವುದಿಲ್ಲ. ಜ್ಞಾನ ದಿನನಿತ್ಯದ ಅನುಭವ, ವಿವೇಚನೆ, ಸ್ವಬುದ್ಧಿ, ದೂರದೃಷ್ಟಿಗಳಿಂದ ತಿಳಿಯಬೇಕು. ಸಾಮಾಜಿಕ ಜೀವನದಲ್ಲಿ ಜನತೆಯೊಂದಿಗೆ ಬೆರೆತು, ಜನರಿಂದ ನಡೆಸುವ ಕಾರ್ಯವಿಧಾನಗಳನ್ನೂ, ಅವುಗಳಿಂದಾಗುವ ಫಲಿತಾಂಶದ ವಿವೇಕೋದಯವಾಗುತ್ತದೆ.

ಸಭೆ, ಸನ್ಮಾನ ಸಮಾರಂಭಗಳಲ್ಲಿ ವಿವೇಕ ಸಾಲದಿರುವ ಜನರು ಉಪನ್ಯಾಸಕರಾಗಿದ್ದಾಗ ವಿಚಾರಕ್ಕೆಸಂಬಂಧಿಸಿದ ಮಾತುಗಳನ್ನಾಡಿ ಅಪಮಾನಿತರಾಗುತ್ತಾರೆ. ಅಗಿನ ಸಭೆಯಲ್ಲಿ ಏನು ಮಾತನ್ನಾಡಬೇಕೋ ಹೊಳೆಯದೆ ಪೆಚ್ಚಾಗುತ್ತಾರೆ. ಇದರಿಂದ ನಗೆಪಾಟಲಾಗುತ್ತದೆ. ಏಕೆಂದರೆ ಸಭಿಕರಿಗೆ ಮುಖ್ಯವಾಗಿ ತಿಳಸಬೇಕಾದ ಅಂಶಗಳು ಮನಸ್ಸಿಗೆ ಹೊಳೆಯುವುದಿಲ್ಲ. ಆದ್ದರಿಂದ ತಾವುಕಲಿತ ವಿದ್ಯೆಸಾರ್ಥಕವಲ್ಲದ್ದೆನಿಸುವುದು. ಸಭೆಗಳಲ್ಲಿ ಮಾತನಾಡಲು ಆ ದಿನ ಕಾರ್ಯಕ್ರಮದಲ್ಲಿ ಏನಿರಬೇಕು ಎಂಬುದನ್ನು ಮುಂದಾಗಿಯೇ ಯೋಚಿಸಿ ವಿಚಾರಗಳನ್ನು ಬರೆದಿಟ್ಟುಕೊಂಡಿರಬೇಕು. ಆಗ ಸಂದರ್ಭಕ್ಕೆ ಸರಿಹೊಂದುವ ವಿಷಯಗಳನ್ನು ಬಣ್ಣಿಸಿ ತಿಳಿಸಿದರೆ ಕೇಳುವವರ ಮನಸ್ಸಿನ ಮೇಲೆ ಸತ್ಪರಿಣಾಮ ಉಂಟಾಗುತ್ತದೆ.

ವಿವೇಕವು ಆಳವಾಗಿ ಚಿಂತಿಸದ ವಿದ್ಯೆಯಿಂದ ಲಭ್ಯವಾಗುವುದಿಲ್ಲ ಉದಾಹರಣೆಗೆ ಹೇಳಿದರೆ ತೆನಾಲಿ ರಾಮಕೃಷ್ಣನು ಭಾರೀ ವಿದ್ವಾಂಸನಲ್ಲ. ಹೀಗಿದ್ದರೂ ವಿವೇಕ ಸಮಯ ಪ್ರಜ್ಞೆಯನ್ನು ರೂಢಿಸಿ ಕೊಂಡಿದ್ದನು. ಇದರ ದೆಸೆಯಿಂದ ಚಾತುರ್ಯದಿಂದ ಸಭೆಗಳಲ್ಲಿ ಸಭಿಕರು ಕೇಳಿದ ಪ್ರಶ್ನೆಗಳಿಗೆ ಸಮಂಜಸವಾದ ಉತ್ತರ ಹೇಳಿ ಅವರಿಗೆ ಆಶ್ಚರ್ಯವಾಗುವಂತೆ ಮಾಡುತ್ತಿದ್ದ. ವಿವೇಕವು ಓದಿನಿಂದಲೂ, ಹೇಳಿಕೊಡುವುದರಿಂದಲೂ ಬರುವುದಿಲ್ಲ. ಸಭೆಗಳಲ್ಲಿ ಸಭಿಕರನ್ನು ಮಾತುಗಳಿಂದ ಮೆಚ್ಚಿಸುವುದೂ ಒಂದು ಕಲೆಯೆನ್ನಬಹುದು. ಪ್ರಸಿದ್ಧ ವಾಗ್ಮಿಗಳು ಸಭಿಕರಿಗೆ ತಮ್ಮ ಉತ್ತರಗಳನ್ನು ಯಾವ ರೀತಿಯಲ್ಲಿ ಕೊಡುವರು, ಮತ್ತು ಭಾಷಣವನ್ನು ಮುಕ್ತಾಯ ಮಾಡುವರು ಎಂಬುದನ್ನು ಆಲೈಸಿ ಅವರ ಜಾಣ್ಮೆಗೆ ಸಂತೋಷಿಸಬೇಕು ಹೀಗೆ ವಿವೇಕವು ಒಂದು ರೀತಿಯ ವರವೆನ್ನಬಹುದು.

## ಸಂತಾಪ

ನಮ್ಮ ಶಿಕ್ಷಣ ಸಂಸ್ಥೆಯ ತುಮಕೂರು ತಾಲ್ಲೂಕು ಗೂಳೂರು ಸಿದ್ಧಗಂಗಾ ಜೂನಿಯರ್ ಕಾಲೇಜಿನಲ್ಲಿ ದೈಹಿಕ ಶಿಕ್ಷಕರಾಗಿದ್ದ ಶ್ರೀಯುತ ಎ.ಪಿ. ಶಿವಮೂರ್ತಿಯವರು ನವಂಬರ್ 25ರಂದು ಸೋಮವಾರ ಆಕಸ್ಮಿಕ ಅಪಘಾತಕ್ಕೆ ಒಳಗಾಗಿ ವಿಧಿವಶರಾದುದಕ್ಕೆ " ಸಿದ್ಧಗಂಗಾ " ಸಂತಾಪ ವ್ಯಕ್ತಪಡಿಸಿದೆ.



# ಕ್ಷೇತ್ರ ವಾರ್ತೆ

..... ಹೆಚ್. ಬಿ. ಗಂಗಾಧರಯ್ಯ.

ಶ್ರೀಮಠದ ಸಂಯುಕ್ತ ವಿದ್ಯಾರ್ಥಿ ಸಂಘದವತಿಯಿಂದ ನವಂಬರ್ 27 ಬುಧವಾರ ಕನ್ನಡ ರಾಜ್ಯೋತ್ಸವ ಮತ್ತು ಮಕ್ಕಳ ದಿನಾಚರಣೆ ಆಚರಿಸಲಾಯಿತು. ಸಮಾರಂಭ ತ್ರಿವಿಧ ದಾಸೋಹ ಮೂರ್ತಿಗಳಾದ ಪರಮ ಪೂಜ್ಯ ಡಾ|| ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ದಿವ್ಯ ಸಮ್ಮುಖದಲ್ಲಿ ನೆರವೇರಿತು.

ಶ್ರೀ ಶ್ರೀಗಳು ಆಶೀರ್ವಚನನೀಡಿ ಕನ್ನಡನಾಡಿನ ಸಂಸ್ಕೃತಿ, ಸಾಹಿತ್ಯ, ಕಲೆ, ನಿಸರ್ಗ, ಪರಂಪರೆ ಜನತೆಯ ಮೇಲೆ ಉತ್ತಮ ಪ್ರಭಾವ ಬೀರಿವೆ, ರಾಜ್ಯದ ಸಂಪನ್ಮೂಲ ಎಲ್ಲರ ಬಾಳಿನ ಪ್ರಗತಿಗೆ ಬಳಕೆಯಾಗುವಂತೆ ವಿತರಣೆಯಾಗಬೇಕೆಂದರು.

ನೆಹರು ಅವರಿಗೆ ಮಕ್ಕಳನ್ನು ಕಂಡರೆ ಪ್ರೀತಿ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎಲ್ಲ ವರ್ಗ ಜನಾಂಗಗಳ ಏಳಿಗೆಯಾಗಬೇಕು ಎಂಬುದು ಅವರ ಬಯಕೆಯಾಗಿತ್ತು. ಆಯಾ ಕ್ಷೇತ್ರದಲ್ಲಿ ಪ್ರತಿಯೊಬ್ಬ ವ್ಯಕ್ತಿ ಪ್ರಾಮಾಣಿಕವಾಗಿ ಕರ್ತವ್ಯ ನಿರ್ವಹಿಸುವಂತೆ ಎಲ್ಲರೂ ಪ್ರತಿಜ್ಞೆ ಮಾಡಬೇಕೆಂದರು.

ಅಧ್ಯಕ್ಷಸ್ಥಾನದಿಂದ ರಾಜ್ಯದ ಲೋಕೋಪಯೋಗಿ ಸಚಿವರಾದ ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿಯವರು ಮಾತನಾಡಿ ಸಮೃದ್ಧಿನಾಡನ್ನಾಗಿ ಮಾಡಲು ಕೈಗಾರಿಕೆ, ವಿದ್ಯುಚ್ಛಕ್ತಿ ನೀರಾವರಿ ಸೌಲಭ್ಯಗಳು ಸುಧಾರಣೆಯಾಗಬೇಕು. ಭಾರತದ ಪ್ರಧಾನಮಂತ್ರಿಯಾಗಿ ರಾಷ್ಟ್ರದ ಸರ್ವಾಂಗೀಣ ಅಭಿವೃದ್ಧಿಗಾಗಿ ನೆಹರೂರವರು ಶ್ಲಾಘನೀಯವಾದ ಸೇವೆ ಸಲ್ಲಿಸಿದ್ದಾರೆ. ಶ್ರೀಮಠ ಮತ್ತು ಶ್ರೀ ಶ್ರೀ ಗಳವರ ಬಗ್ಗೆ ಹೇಳುತ್ತಾ, ಇಲ್ಲಿಯ ಕಾರ್ಯಚಟುವಟಿಕೆಗಳು ಜಗತ್‌ಪ್ರಸಿದ್ಧವಾಗಿವೆ. ಭಗವಂತನ ರೂಪದಲ್ಲಿ ಶ್ರೀ ಶ್ರೀಗಳವರು ಮಹಾಕಾರ್ಯ ಮಾಡುತ್ತಿದ್ದಾರೆ. ಅವರ ಸೇವೆ, ಆಶೀರ್ವಾದ ನಮ್ಮ ನಾಡಿಗೆ ಹೆಚ್ಚುಕಾಲ ದೊರಕುವಂತಾಗಲಿ ಎಂದು ಪ್ರಾರ್ಥಿಸಿದರು.

ತುಮಕೂರು ಜಿಲ್ಲಾಪರಿಷತ್ ಅಧ್ಯಕ್ಷರಾದ ಶ್ರೀ ಎಚ್. ನಿಂಗಯ್ಯನವರು ಮುಖ್ಯ ಅತಿಥಿಯಾಗಿ ಮಾತನಾಡಿ ನೆಹರೂವರ ದೃಷ್ಟಿಯಲ್ಲಿ ಮಕ್ಕಳೇ ಸಂಪತ್ತು. ಅವರ ಆದರ್ಶ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕೆಂದು ಕರೆಯಿತ್ತರು.

ಮಾಜಿ ಮಂತ್ರಿಗಳಾದ ಶ್ರೀ ಲಕ್ಷ್ಮೀನರಸಿಂಹಯ್ಯನವರು ಈ ಸಂದರ್ಭದಲ್ಲಿ ಮಾತನಾಡಿ ರಾಜ್ಯ ಇಂದು ಕಾವೇರಿ ಜಲವಿವಾದ ಸಮಸ್ಯೆಯನ್ನು ತೀವ್ರವಾಗಿ ಎದುರಿಸುತ್ತಿದೆ. ಇದರ ಪರಿಹಾರಕ್ಕಾಗಿ ಎಲ್ಲರೂ ಒಗ್ಗಟ್ಟಿನಿಂದ ಶ್ರಮಿಸಿ ಹೋರಾಡಬೇಕೆಂದರು. ಶ್ರೀ ಕೆ. ಎಂ. ರೇವಣ್ಣಸಿದ್ದಯ್ಯ, ವಿಶೇಷಾಧಿಕಾರಿಗಳು ಸ್ವಾಗತಿಸಿದರು. ಶ್ರೀ ಪಿ. ಆರ್. ಸೋಮಶೇಖರಯ್ಯ, ಶಿಕ್ಷಕರು, ಕಾರ್ಯಕ್ರಮ ನಿರೂಪಿಸಿ ವಂದನೆ ಸಲ್ಲಿಸಿದರು.

COMFORTABLE
LUXURIOUS &
PEACEFUL

**STAY**

**AT**

# KENCHAMBA LODGE




SUBEDAR CHATRAM ROAD CROSS
NEAR KAPALI THEATRE
GANDHINAGAR
BANGALORE-9

Ph. 27082 GRAM : KENCHMLODG

## "ಸಿದ್ಧಗಂಗಾ" ಚಿರಾಯುವಾಗಲೆಂದು ಹರಸಿ ಹಾರೈಸಿರುವ ಆಜೀವ ಸದಸ್ಯರ ಬಳಗ.

373 ಶ್ರೀ ಎಸ್. ಎಂ. ಮಲ್ಲಯ್ಯ, ಎನ್.ಜಿ.ಒ. ಕ್ವಾರ್ಟರ್ಸ್.
ರಾಜಾಜಿನಗರ, ಬೆಂಗಳೂರು - 10.

374 ಶ್ರೀ ಆರ್. ಗಂಗಾಧರಶರ್ಮ, ನಿವೃತ್ತ ಶಿಕ್ಷಕರು, ಕಡಬಗೆರೆ, ಬೆಂ ಜಿಲ್ಲೆ.

375 ಶ್ರೀ ಎಂ. ವೀರಣ್ಣ, ಶಿಕ್ಷಕರು, ಚಿಕ್ಕಬೆಳವಂಗಲ,
ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಜಿಲ್ಲೆ.

376 ವೀರಶೈವ ಸಂಘ, ಗುಡೇಮಾರನಹಳ್ಳಿ, ಮಾಗಡಿ ತಾ||, ಬೆಂಗಳೂರು ಜಿಲ್ಲೆ.

377 ಶ್ರೀ ಎಸ್. ನಂಜೇಗೌಡ, ಉರಳಗೆರೆ, ಗುಬ್ಬಿ ತಾ||, ತುಮಕೂರು ಜಿಲ್ಲೆ.

378 ಶ್ರೀ ಎಚ್. ಮಹಾಲಿಂಗಯ್ಯ, ಹೆಬ್ಬಾಕ, ತುಮಕೂರು ತಾಲ್ಲೂಕು.

379 ಶ್ರೀ ವಿ.ಎಸ್. ಉಮೇಶ್ S/o ಶ್ರೀ ವಿ.ವಿ. ಶ್ರೀಕಂಠಯ್ಯ,
ಸ್ವಾನ್ ಕಾಫಿ ವರ್ಕ್ಸ್, ಹಳೆತರಗುಪೇಟೆ, ಬೆಂಗಳೂರು - 53.

380 ಪೂಜ್ಯ ಶ್ರೀ ಶ್ರೀ ಮುಮ್ಮಡಿ ನಿರ್ವಾಣ ಸ್ವಾಮಿಗಳು,
ಅಧ್ಯಕ್ಷರು, ದೇಗುಲಮಠ, ಕನಕಪುರ, ಬೆಂಗಳೂರು ಜಿಲ್ಲೆ.

1381 ಶ್ರೀ ಎ. ಎನ್. ಶಿವಲಿಂಗಣ್ಣ, ಪ್ರೊ|| ಸಿದ್ಧೇಶ್ವರ ಟ್ವಿಸ್ಟಿಂಗ್ ಯೂನಿಟ್,
ಅರೇಹಳ್ಳಿ, ಅಡುಗೋಡಿ ಮಾರ್ಗ, ಬೆಂಗಳೂರು ಜಿಲ್ಲೆ.

1382 ಶ್ರೀ ಎಸ್. ಶಿವಣ್ಣ, 1ನೇ ಮುಖ್ಯರಸ್ತೆ, ವಿಜಯನಗರ, ಬೆಂಗಳೂರು-40.

1383 ಶ್ರೀ ಬಿ. ಆರ್. ಶಿವಣ್ಣ, ಪೈಪ್‌ಲೈನ್, ವಿಜಯನಗರ, ಬೆಂಗಳೂರು-40.

1384 ಶ್ರೀ ಸಿದ್ಧಲಿಂಗಯ್ಯ, ಬಿ.ಇ., ಕುಮಾರಪಾರ್ಕ್, ಬೆಂಗಳೂರು - 20.

1385 ಬಿ.ಎಂ ಚಂದ್ರಶೇಖರಯ್ಯ, ಸುಭಾಷ್‌ನಗರ, ನೆಲಮಂಗಲ, ಬೆಂ. ಜಿಲ್ಲೆ.

1386 ಶ್ರೀ ಬಿ. ಎಸ್. ಚಿಕ್ಕಣ್ಣ, ಬೈಯ್ಯಂಡಹಳ್ಳಿ, ಬೆಂಗಳೂರು-30.

1387 ಶ್ರೀ ಬಿ. ಶಾಂತರಾಜು, ಗೋವಿಂದರಾಜನಗರ, ಬೆಂಗಳೂರು - 40.

1388 ಶ್ರೀ ಡಿ. ಪಾಲನೇತ್ರಯ್ಯ, S/o ಶ್ರೀ ಚನ್ನಪ್ಪ, ಮಾಗಡಿ ರಸ್ತೆ, ಬೆಂ-40.

(ಮುಂದುವರೆಯುತ್ತದೆ)

INDUSTRIES LTD
BALLARPUR